|| ಓಂ ಓಂ ನಮೋ ನಾರಾಯಣಾಯ|| ಶ್ರೀ ವೇದವ್ಯಾಸಾಯ ನಮಃ ||

## ಶ್ರೀ ಕೃಷ್ಣದ್ವೈಪಾಯನ ವೇದವ್ಯಾಸ ವಿರಚಿತ

# ಶ್ರೀ ಮಹಾಭಾರತ



## ಮುಖ್ಯ ಕಥಾ ಪ್ರಸಂಗಗಳು (ಸಂಪುಟ ೧)

ಡಾ| ಬಿ. ಎಮ್. ರಮೇಶ್




ಬನದಕೊಪ್ಪದ ಶ್ರೀ ಲಕ್ಷ್ಮೀನಾರಾಯಣ ದೇವರು

# ಮುಖ್ಯ ಕಥಾ ಪ್ರಸಂಗಗಳು

ಆದಿ ಪರ್ವ ........................................................4

ನೈಮಿಷಾರಣ್ಯದಲ್ಲಿ ಶೌನಕನ ಸತ್ರದಲ್ಲಿ ಸೂತ ಪೌರಾಣಿಕನು ಮಹಾಭಾರತ ಕಥೆಯನ್ನು ಪ್ರಾರಂಭಿಸಿದುದು ..............................4

ಹಸ್ತಿನಾಪುರದಲ್ಲಿ ಜನಮೇಜಯನ ಸರ್ಪಸತ್ರದಲ್ಲಿ ವೈಶಂಪಾಯನನು ಮಹಾಭಾರತ ಕಥೆಯನ್ನು ಪ್ರಾರಂಭಿಸಿದುದು ............................ 28

ಅಂಶಾವತರಣ.............................................. 167

ವಂಶಾವಳಿ ................................................... 191

ಶಂತನು-ಗಂಗೆ-ಭೀಷ್ಮ-ಸತ್ಯವತಿ.............................. 223

ಚಿತ್ರಾಂಗದ-ವಿಚಿತ್ರವೀರ್ಯ..................................... 271

ಧೃತರಾಷ್ಟ್ರ-ಪಾಂಡು-ವಿದುರರ ಜನನ, ವಿವಾಹ...................... 281

ಕೌರವ-ಪಾಂಡವರ ಜನನ; ಬಾಲ್ಯ ................................. 316

ಕೌರವ-ಪಾಂಡವರ ಗುರುಗಳು; ವಿದ್ಯಾಭ್ಯಾಸ; ಪ್ರತಿಭಾ ಪ್ರದರ್ಶನ; ಗುರುದಕ್ಷಿಣೆ ................................................. 383

ಅರಗಿನ ಮನೆ.............................................. 430

ಹಿಡಿಂಬವಧ ........................................ 464
ಬಕವಧ ........................................ 492
ದ್ರೌಪದೀ ಸ್ವಯಂವರ-ವಿವಾಹ ........................................ 523
ಪಾಂಡವರಿಗೆ ರಾಜ್ಯಪ್ರಾಪ್ತಿ ........................................ 627
ಅರ್ಜುನವನವಾಸ ........................................ 657
ಖಾಂಡವದಹನ ........................................ 703
ಸಭಾ ಪರ್ವ ........................................ 733
ಸಭಾಕ್ರಿಯ ........................................ 733
ರಾಜಸೂಯದ ಕುರಿತು ಸಮಾಲೋಚನೆ; ಜರಾಸಂಧವಧೆ ........................................ 794
ಪಾಂಡವ ದಿಗ್ವಿಜಯ ........................................ 853
ರಾಜಸೂಯ: ಶಿಶುಪಾಲ ವಧೆ ........................................ 874
ಯುಧಿಷ್ಠಿರನ ವೈಭವವನ್ನು ಕಂಡ ದುರ್ಯೋಧನನ ಅಸೂಯೆ-ಸಂತಾಪ; ದ್ಯೂತದ ಸಂಚು ........................................ 929
ದ್ಯೂತ: ದ್ರೌಪದೀ ವಸ್ತ್ರಾಪಹರಣ ........................................ 972
ಅನುದ್ಯೂತ; ಪಾಂಡವರಿಗೆ ವನವಾಸ ........................................ 1043

# ಆದಿ ಪರ್ವ




## ನೈಮಿಷಾರಣ್ಯದಲ್ಲಿ ಶೌನಕನ ಸತ್ರದಲ್ಲಿ ಸೂತ ಪೌರಾಣಿಕನು ಮಹಾಭಾರತ ಕಥೆಯನ್ನು ಪ್ರಾರಂಭಿಸಿದುದು

ಒಮ್ಮೆ ನೈಮಿಷಾರಣ್ಯದಲ್ಲಿ ಕುಲಪತಿ ಶೌನಕನು ಏರ್ಪಡಿಸಿದ್ದ ಹನ್ನೆರಡು ವರ್ಷಗಳ ಸತ್ರದಲ್ಲಿ ವಿಶ್ರಾಂತಿಪಡೆಯುತ್ತಿದ್ದ ಬ್ರಹ್ಮರ್ಷಿಗಳ ಮಧ್ಯೆ ಲೋಮಹರ್ಷಣನ ಮಗ ಸೂತ ಪೌರಾಣಿಕ ಉಗ್ರಶ್ರವನು ವಿನಯಾವನತನಾಗಿ ಆಗಮಿಸಿದನು. ಅವನು



ಆಶ್ರಮವನ್ನು ತಲುಪಿದೊಡನೆಯೇ ನೈಮಿಷಾರಣ್ಯವಾಸಿ ತಪಸ್ವಿಗಳೆಲ್ಲರೂ ರೋಮಾಂಚಕ ಕಥೆಗಳನ್ನು ಕೇಳಲು ಅವನನ್ನು ಸುತ್ತುವರೆದರು. ಪರಸ್ಪರರನ್ನು ಅಭಿವಂದಿಸಿ, ಎಲ್ಲರೂ ಕುಳಿತುಕೊಂಡ ನಂತರ ಋಷಿಗಳಲ್ಲಿಯೇ ಒಬ್ಬನು ಕಥೆಗಳನ್ನು ಪ್ರಸ್ತಾವಿಸುತ್ತಾ "ಸೌತಿ! ನೀನು ಎಲ್ಲಿಂದ ಬರುತ್ತಿರುವೆ?" ಎಂದು ಪ್ರಶ್ನಿಸಿದನು. ಅವನಿಗೆ ಉತ್ತರಿಸುತ್ತ ಸೂತನು ಹೇಳಿದನು:

> "ನಾನು ರಾಜಾ ಪರೀಕ್ಷಿತನ ಮಗ ಮಹಾತ್ಮ ರಾಜರ್ಷಿ ಜನಮೇಜಯನ ಸರ್ಪಯಾಗದಲ್ಲಿ ವ್ಯಾಸ

ಕೃಷ್ಣದ್ವೈಪಾಯನನು ರಚಿಸಿದ ವಿವಿಧ ಕಥೆಗಳನ್ನೂ ವಿಚಿತ್ರಾರ್ಥಗಳನ್ನೂ ಕೂಡಿದ ಪುಣ್ಯಕಾರಕ ಮಹಾಭಾರತ ಕಥೆಯನ್ನು ವೈಶಂಪಾಯನನು ವಿಧಿವತ್ತಾಗಿ ಹೇಳಿದುದನ್ನು ಕೇಳಿದೆ. ನಂತರ ಹಲವಾರು ತೀರ್ಥಕ್ಷೇತ್ರಗಳನ್ನು ಸುತ್ತಾಡಿ, ಹಿಂದೆ ಕುರು-ಪಾಂಡವರು ಮತ್ತು ಸರ್ವ ರಾಜರು ಯುದ್ಧಮಾಡಿದ ಸಮಂತಪಂಚಕ ಎಂಬ ಹೆಸರಿನ ಪುಣ್ಯ ಪ್ರದೇಶಕ್ಕೆ ಹೋದೆ. ಅಲ್ಲಿಂದ ನಾನು ಈ ಯಜ್ಞದಲ್ಲಿ ಭಾಗವಹಿಸಿರುವ ನಿಮ್ಮೆಲ್ಲರನ್ನೂ ಕಾಣಲು ಬಂದೆ. ದ್ವಿಜರೇ! ಸ್ನಾನ-ಜಪ-ಅಗ್ನಿಹೋತ್ರಗಳನ್ನು ಮುಗಿಸಿ ಕುಳಿತಿರುವ ನಿಮಗೆ ನಾನು ಏನು ಹೇಳಲಿ? ಧರ್ಮಸಂಗತಿಗಳನ್ನೊಡಗೂಡಿದ ಪುರಾಣ ಕಥೆಗಳನ್ನು ಹೇಳಲೇ? ಅಥವಾ ಮಹಾತ್ಮ ಋಷಿ-ನರೇಂದ್ರರ ವೃತ್ತಾಂತಗಳನ್ನು ಹೇಳಲೇ?"

ಋಷಿಗಳು ಮಹಾಭಾರತ ಇತಿಹಾಸವನ್ನು ಕೇಳಲು ಬಯಸುತ್ತೇವೆ ಎನ್ನಲು ಸೂತನು ಮಹಾಭಾರತ ಕಥೆಯನ್ನು ಪ್ರಾರಂಭಿಸಿದನು. ಸೂತನು ಹೇಳಿದನು:

"ಆದ್ಯ, ಪುರುಷ, ಈಶ, ಪುರುಹೂತ, ಪುರುಷ್ಟುತ, ಋತ, ಏಕಾಕ್ಷರ, ಬ್ರಹ್ಮ, ವ್ಯಕ್ತಾವ್ಯಕ್ತ ಸನಾತನ, ಅಸಚ್ಚ ಸಚ್ಚ, ವಿಶ್ವ, ಸದಸತ, ಪರಮ, ಪರಾವರಗಳ ಸೃಷ್ಟ, ಪುರಾಣ, ಪರಮ,

ಅವ್ಯಯ, ವರೇಣ್ಯ, ಅನಘ, ಶುಚಿ ಮಂಗಲಗಳಲ್ಲಿ ಮಂಗಲಕರ, ವಿಷ್ಣು, ಚರಾಚರಗಳ ಗುರು, ಹರಿ ಹೃಷೀಕೇಶನಿಗೆ ನಮಸ್ಕರಿಸಿ ಮಹರ್ಷಿ ವ್ಯಾಸನ ಅತಿ ಶ್ರೇಷ್ಠ ಕೃತಿಯೆಂದಿನಿಸಿಕೊಂಡಿರುವ ಮಹಾಭಾರತ ಕಥೆಯನ್ನು ಹೇಳಲು ಪ್ರಾರಂಭಿಸುತ್ತೇನೆ.

ಋಷಿ ಪರಾಶರ ಮತ್ತು ಸತ್ಯವತಿಯರ ಮಗ ಕೃಷ್ಣದ್ವೈಪಾಯನನು ತಾಯಿ ಮತ್ತು ಗಂಗೆಯ ಮಗ ಧರ್ಮಾತ್ಮ ಭೀಷ್ಮನ ಸೂಚನೆಯಂತೆ ವಿಚಿತ್ರವೀರ್ಯನ ಪತ್ನಿಯರಲ್ಲಿ ಧೃತರಾಷ್ಟ್ರ, ಪಾಂಡು ಮತ್ತು ವಿದುರರೆಂಬ ಮೂರು ಪುತ್ರರಿಗೆ ಜನ್ಮವಿತ್ತು ತಪಸ್ಸಿಗೋಸ್ಕರ ತನ್ನ ಆಶ್ರಮಕ್ಕೆ ತೆರಳಿದನು. ತನ್ನ ಮಕ್ಕಳು ವೃದ್ಧರಾಗಿ ಪರಮಗತಿಯನ್ನು ಹೊಂದಿದ ಬಳಿಕ ಆ ಮಹಾನೃಷಿಯು ಭಾರತವನ್ನು ತನ್ನ ಮನಸ್ಸಿನ ಅಂತರಾಳದಲ್ಲಿಯೇ ರಚಿಸಿ ಶಿಷ್ಯರಿಗೆ ಇದನ್ನು ಹೇಗೆ ಕಲಿಸಲಿ ಎಂದು ಚಿಂತಿಸಿದನು. ಅವನ ಆ ಚಿಂತನೆಯನ್ನು ಮನಗಂಡ ಲೋಕಗುರು ಸ್ವಯಂ ಭಗವಾನ್ ಬ್ರಹ್ಮನು ಲೋಕ ಕಲ್ಯಾಣಾರ್ಥವಾಗಿ ಅವನ ಆಸೆಯನ್ನು ಈಡೇರಿಸಲು ಅಲ್ಲಿಗೆ ಆಗಮಿಸಿದನು. ಅವನನ್ನು ನೋಡಿ ವಿಸ್ಮಿತನಾದ ದ್ವೈಪಾಯನನು ಕೈಜೋಡಿಸಿ ನಮಸ್ಕರಿಸಿ, ಉತ್ತಮ ಆಸನವನ್ನು ನೀಡಿ, ಪ್ರದಕ್ಷಿಣೆಮಾಡಿ,

ಅವನ ಬಳಿ ನಿಂತುಕೊಂಡನು. ಪ್ರೀತಿಯ ಮಂದಹಾಸವನ್ನು ಬೀರುತ್ತಿದ್ದ ಬ್ರಹ್ಮನಿಂದ ಅನುಜ್ಞೆಪಡೆದ ಅವನೂ ಕೂಡ ಆಸನದಲ್ಲಿ ಕುಳಿತುಕೊಂಡು ಹೇಳಿದನು:

"ಭಗವನ್! ನಾನು ಪರಮಪೂಜಿತ ಕಾವ್ಯವೊಂದನ್ನು ರಚಿಸಿದ್ದೇನೆ. ಇದರಲ್ಲಿ ವೇದಗಳ, ವೇದಾಂಗಗಳಾದ ಉಪನಿಷತ್ತುಗಳ ಮತ್ತು ಇತರ ರಹಸ್ಯಗಳನ್ನು ವಿಸ್ತಾರವಾಗಿ ಅಳವಡಿಸಿದ್ದೇನೆ. ಇತಿಹಾಸ-ಪುರಾಣಗಳೂ ಸೇರಿರುವ ಇದರಲ್ಲಿ ಭೂತ, ವರ್ತಮಾನ ಮತ್ತು ಭವಿಷ್ಯ ಈ ಮೂರೂ ಕಾಲಗಳ ಮಿಶ್ರಣವಿದೆ. ಇದರಲ್ಲಿ ವೃದ್ಧಾಪ್ಯ, ಮೃತ್ಯು, ಭಯ, ವ್ಯಾದಿಗಳ ಭಾವಾಭಾವ ನಿಶ್ಚಯವಿದೆ ಮತ್ತು ವಿವಿಧ ಕಾಲ-ಧರ್ಮ-ಆಶ್ರಮಗಳ ಲಕ್ಷಣಗಳೂ ಇವೆ. ಇದರಲ್ಲಿ ನ್ಯಾಯ, ಶಿಕ್ಷೆ, ಚಿಕಿತ್ಸೆ, ದಾನಗಳ ವಿವರಗಳು, ಪಶುಪತಿ, ದೇವತೆಗಳು ಮತ್ತು ಮನುಷ್ಯರ ಜನ್ಮಕಾರಣಗಳೂ ಇವೆ. ಪುಣ್ಯತೀರ್ಥ ಪ್ರದೇಶಗಳ, ನದಿ-ಪರ್ವತ-ವನ-ಸಾಗರಗಳ ಕೀರ್ತನೆಯೂ ಇದರಲ್ಲಿದೆ. ದಿವ್ಯಪುರಗಳ ನಿರ್ಮಾಣ-ರಚನೆ, ಯುದ್ಧ ಕೌಶಲ,

ಲೋಕಯಾತ್ರೆಗೆ ಅನುಕೂಲವಾಗುವಂಥವುಗಳು ಮತ್ತು ಹೀಗೆ ಸರ್ವವಸ್ತುಗಳ ಪ್ರತಿಪಾದನೆಯನ್ನೂ ಇದರಲ್ಲಿ ಮಾಡಿದ್ದೇನೆ. ಆದರೆ ಭುವಿಯಲ್ಲಿ ಇದನ್ನು ಬರೆಯುವವರು ಯಾರು ಎನ್ನುವುದು ತಿಳಿಯದಾಗಿದೆ!”

ಬ್ರಹ್ಮನು ಹೇಳಿದನು:

“ಕೃಷ್ಣ! ರಹಸ್ಯಜ್ಞಾನವನ್ನು ಪಡೆದಿರುವ ನಿನ್ನನ್ನು ವಿಶಿಷ್ಟ ತಪಸ್ವಿ-ಮುನಿಸಂಚಯದಲ್ಲಿ ಶ್ರೇಷ್ಠತರನೆಂದು ಮನ್ನಿಸುತ್ತೇನೆ. ಹುಟ್ಟಿದಾಗಿನಿಂದಲೇ ಬ್ರಹ್ಮವಾದಿಯಾಗಿರುವ ನಿನಗೆ ತಿಳಿದುದೆಲ್ಲವೂ ಸತ್ಯವೇ. ನೀನು ಇದನ್ನು ಕಾವ್ಯವೆಂದು ಹೇಳಿದುದರಿಂದ ಇದು ಕಾವ್ಯವೇ ಆಗುತ್ತದೆ. ಗೃಹಸ್ಥಾಶ್ರಮದ ವಿಶೇಷತೆ ಹೇಗೆ ಇತರ ಮೂರು ಆಶ್ರಮಗಳಲ್ಲಿಲ್ಲವೋ ಹಾಗೆ ಈ ಕಾವ್ಯದ ವಿಶೇಷತೆಗೆ ಬೇರೆ ಯಾವ ಕವಿಯೂ ಅಸಮರ್ಥ. ಮುನೇ! ಕಾವ್ಯವನ್ನು ಬರೆಯುವುದಕ್ಕೋಸ್ಕರ ಗಣೇಶನನ್ನು ಸ್ಮರಿಸು!”

ಹೀಗೆ ಹೇಳಿ ಬ್ರಹ್ಮನು ತನ್ನ ಲೋಕಕ್ಕೆ ತೆರಳಿದನು. ನಂತರ ಸತ್ಯವತೀ ಸುತ ವ್ಯಾಸನು ಗಣಪತಿ ಹೇರಂಬನನ್ನು

ಸ್ಮರಿಸಿದನು. ಸ್ಮರಣಮಾತ್ರದಲ್ಲಿ ಭಕ್ತರು ಎಣಿಸಿದುದನ್ನು ಪೂರೈಸುವ ವಿಘ್ನೇಶ ಗಣೇಶನು ಅಲ್ಲಿಗೆ ಆಗಮಿಸಿದನು. ಅವನನ್ನು ಕುಳ್ಳಿರಿಸಿ ಪೂಜಿಸಿದ ನಂತರ ವ್ಯಾಸನು ಅವನಿಗೆ

> "ಗಣನಾಯಕ! ನನ್ನ ಮನಸ್ಸಿನಲ್ಲಿಯೇ
> ಕಲ್ಪಿಸಿಕೊಂಡು ಹೇಳುವ ಈ ಭಾರತದ
> ಲೇಖಕನಾಗು!"

ಎಂದು ಕೇಳಿಕೊಂಡನು. ಅದಕ್ಕೆ ವಿಘ್ನೇಶನು ಹೇಳಿದನು:

> "ಬರೆಯುವಾಗ ಒಂದು ಕ್ಷಣವೂ
> ವಿರಾಮವಿಲ್ಲದಂತಾದರೆ ಮಾತ್ರ ನಾನು ಇದರ
> ಲೇಖಕನಾಗಬಲ್ಲೆ!".

ಅದಕ್ಕೆ ವ್ಯಾಸನು

> "ಅರ್ಥಮಾಡಿಕೊಳ್ಳದೇ ಏನನ್ನೂ
> ಬರೆಯಬಾರದು!"

ಎಂದು ಉತ್ತರಿಸಲು, ಗಣೇಶನು ಓಂಕಾರದೊಂದಿಗೆ ಭಾರತದ ಲೇಖಕನಾದನು. ಆಗ ಮುನಿಯು ಕುತೂಹಲದಿಂದ ಶ್ಲೋಕಗಳ ಗಂಟು-ಗಂಟು ಹಾಕಿ ನಿಗೂಢಗಳನ್ನು ರಚಿಸಿದನು. ಸರ್ವಜ್ಞ ಗಣೇಶನೂ ಕೂಡ ಅವುಗಳನ್ನು ಅರ್ಥಮಾಡಿಕೊಳ್ಳಲು ಸ್ವಲ್ಪ ಸಮಯವನ್ನು



ತೆಗೆದುಕೊಳ್ಳುತ್ತಿದ್ದನು. ಆ ಸಮಯದಲ್ಲಿ ವ್ಯಾಸನು ಇತರ ಅನೇಕ ಶ್ಲೋಕಗಳನ್ನು ರಚಿಸುತ್ತಿದ್ದನು. ಅಂಥಹ ಸುಮಾರು ೮,೮೦೦ ಶ್ಲೋಕಕೂಟಗಳ ಗುಟ್ಟು ಇದೂವರೆಗೆ ಸುದೃಢವಾಗಿಯೇ ಇದ್ದು ಅವುಗಳ ಗೂಢಾರ್ಥಗಳನ್ನು ಭೇದಿಸಲು ಯಾರಿಗೂ ಸಾಧ್ಯವಿಲ್ಲವಾಗಿದೆ.

ದ್ವೈಪಾಯನನು ಮೊದಲು ಇದನ್ನು ಮಗ ಶುಕನಿಗೆ ಉಪದೇಶಿಸಿ, ನಂತರ ಅನುರೂಪ ಶಿಷ್ಯರಿಬ್ಬರಿಗೆ ಹೇಳಿಕೊಟ್ಟನು. ನಾರದನು ಇದನ್ನು ದೇವತೆಗಳಿಗೆ, ಅಸಿತ ದೇವಲನು ಪಿತೃಗಳಿಗೆ ಮತ್ತು ಶುಕನು ಗಂಧರ್ವ-ಯಕ್ಷ-ರಾಕ್ಷಸರಿಗೆ ಹೇಳಿದನು. ಮನುಷ್ಯಲೋಕದಲ್ಲಿ ಮೊಟ್ಟಮೊದಲನೆಯ ಬಾರಿ ಸರ್ಪಯಾಗದ ಕರ್ಮಾಂತರಗಳಲ್ಲಿ ಸೇರಿದ್ದ ಸಹಸ್ರಾರು ಬ್ರಾಹ್ಮಣರ ಜೊತೆ ಕುಳಿತಿದ್ದ ಜನಮೇಜಯನು ಪುನಃ ಪುನಃ ಕೇಳಿಕೊಂಡಾಗ ಅವನು ಸದಸ್ಯರೊಡನೆ ಕುಳಿತಿದ್ದ ಶಿಷ್ಯ ವೈಶಂಪಾಯನನಿಗೆ ಭಾರತವನ್ನು ಹೇಳಲು ಅಪ್ಪಣೆಯನ್ನಿತ್ತನು.

ತನ್ನ ಪರಾಕ್ರಮದಿಂದ ಅನೇಕ ದೇಶಗಳನ್ನು ಯುದ್ಧದಲ್ಲಿ ಗೆದ್ದು ಬೇಟೆಯಲ್ಲಿ ಆಸಕ್ತಿ ಹೊಂದಿದ್ದ ಪಾಂಡುವು ತನ್ನವರೊಂದಿಗೆ ಅರಣ್ಯದಲ್ಲಿ ವಾಸಿಸುತ್ತಿದ್ದನು. ಒಮ್ಮೆ ಬೇಟೆಯಾಡುತ್ತಿರುವಾಗ ಒಂದು ಆಪತ್ತನ್ನು ತಂದುಕೊಂಡ ನಂತರ ಅವನ ಮಕ್ಕಳ ಹುಟ್ಟು ಮತ್ತು ವಿಧಿಕರ್ಮಾಚಾರಗಳು ಕಾಡಿನಲ್ಲಿಯೇ ನಡೆಯಿತು. ಕುಂತಿ ಮತ್ತು ಮಾದ್ರಿ – ಇಬ್ಬರು ತಾಯಂದಿರೂ ಧರ್ಮೋಪನಿಷದದ ಪ್ರಕಾರ ಧರ್ಮ, ವಾಯು, ಇಂದ್ರ ಮತ್ತು ಅಶ್ವಿನೀ ದೇವತೆಗಳಿಂದ ಪುತ್ರರನ್ನು ಪಡೆದರು.

ಮಕ್ಕಳು ಆ ದಟ್ಟ ಅರಣ್ಯದಲ್ಲಿ ಪುಣ್ಯಕರ ಮಹಾ ಆಶ್ರಮಗಳಲ್ಲಿ ತಾಪಸಿಗಳ ಮಧ್ಯೆ ಬೆಳೆದರು. ಪಾಂಡುವಿನ ಮರಣಾನಂತರ ಬ್ರಹ್ಮಚಾರಿಗಳಂತೆ ಜಟಾಧಾರಿಗಳಾಗಿ ತಾಪಸಿಗಳ ರೂಪಧರಿಸಿದ್ದ ಮಕ್ಕಳನ್ನು ಸ್ವಯಂ ಋಷಿಗಳೇ ಧೃತರಾಷ್ಟ್ರನಲ್ಲಿಗೆ ಕರೆತಂದರು. "ಈ ನಮ್ಮ ಮೆಚ್ಚಿನ ಶಿಷ್ಯರು ನಿನ್ನ ತಮ್ಮ ಪಾಂಡುವಿನ ಮಕ್ಕಳು!" ಎಂದು ಹೇಳಿ ಆ ಮುನಿಗಳು ನಗರದ್ವಾರದಲ್ಲಿಯೇ ಅಂತರ್ಧಾನರಾದರು. ಅವರು ಕರೆತಂದು ಬಿಟ್ಟುಹೋದ ಪಾಂಡವರನ್ನು ಕಂಡು ಕೌರವರು ಮತ್ತು ಪೌರರು ಎಲ್ಲರೂ ಹರ್ಷಭರಿತರಾದರು. ಕೆಲವರು "ಚಿರಮೃತ ಪಾಂಡುವಿಗೆ ಮಕ್ಕಳು ಹೇಗಾದರು? ಇವರು ಅವನ ಮಕ್ಕಳಿರಲಿಕ್ಕಿಲ್ಲ!" ಎಂದು ಹೇಳಿದರೆ ಕೆಲವರು "ಇವರು ಅವನದ್ದೇ ಮಕ್ಕಳು!" ಎಂದು ಒಪ್ಪಿಕೊಂಡರು. "ಪಾಂಡುವಿನ ಸಂತತಿಯನ್ನು ನೋಡಲು ದೊರಕಿರುವ ನಾವೇ ಧನ್ಯರು. ಅವರಿಗೆ ಸರ್ವಥಾ ಸ್ವಾಗತ! ನಾವೆಲ್ಲರೂ ಅವರನ್ನು ಸ್ವಾಗತಿಸುತ್ತೇವೆ!" ಎನ್ನುವ ಮಾತುಗಳು ಎಲ್ಲ ದಿಕ್ಕುಗಳಲ್ಲಿಯೂ ಕೇಳಿಬರುತ್ತಿತ್ತು. ಈ ರೀತಿ ಎಲ್ಲ ಕಡೆ ಶಬ್ಧ-ನಿನಾದಗಳು, ಸ್ವಗದಲ್ಲಿಯೂ ಕೇಳಿಬರುವಷ್ಟು ಹೆಚ್ಚಾಗುತ್ತಿರಲು ಅಶರೀರ ವಾಣಿಯು ಆ ತುಮುಲವನ್ನು ಶಾಂತಗೊಳಿಸಿತು. ಪಾಂಡವರು ನಗರವನ್ನು ಪ್ರವೇಶಿಸುತ್ತಿದ್ದಂತೆಯೇ ಹಲವಾರು ಅಧ್ಭುತಗಳು

ನಡೆದವು: ಹೂಮಳೆಯು ಸುರಿಯಿತು. ಮಂಗಳಕರ ಸುಗಂಧಯುಕ್ತ ಗಾಳಿಯು ಬೀಸತೊಡಗಿತು. ಶಂಖ-ದುಂದುಭಿಗಳ ಸುಸ್ವರವು ಕೇಳಿಬಂದಿತು.

ಪಾಂಡವರು ಅಲ್ಲಿ ಯಾರಿಂದಲೂ ಕಡೆಗಣಿಸಲ್ಪಡದೇ, ಎಲ್ಲರಿಂದ ಪೂಜಿತರಾಗಿ ವಾಸಿಸುತ್ತಿದ್ದು ಅಖಿಲ ವೇದ ಮತ್ತು ವಿವಿಧ ಶಾಸ್ತ್ರಗಳ ಅಧ್ಯಯನ ಮಾಡಿದರು. ಯುಧಿಷ್ಠಿರನ ಪವಿತ್ರತೆ, ಭೀಮಸೇನನ ಧೈರ್ಯ, ಅರ್ಜುನನ ವಿಕ್ರಮ, ಕುಂತಿಯ ಶುಶ್ರೂಷೆ, ಅವಳಿ ಮಕ್ಕಳ ವಿನಯ ಮತ್ತು ಇವೆಲ್ಲವುಗಳನ್ನೂ ಮೀರಿದ ಅವರ ಶೌರ್ಯಗುಣಗಳಿಂದ ಎಲ್ಲ ಜನರೂ ಅಂತುಷ್ಟರಾದರು. ಸಮಯಾನಂತರದಲ್ಲಿ ಅರ್ಜುನನು ಸ್ವಯಂವರದಲ್ಲಿ ದುಷ್ಕರ ಕಾರ್ಯವೊಂದನ್ನೆಸಗಿ ರಾಜಕನ್ಯೆ ದ್ರುಪದನ ಮಗಳು ಕೃಷ್ಣೆಯನ್ನು ಪತ್ನಿಯನ್ನಾಗಿ ಪಡೆದನು. ಅಂದಿನಿಂದ ಅವನು ಸರ್ವಲೋಕದ ಧನುಷ್ಮಂತರಲ್ಲಿ ಪೂಜನೀಯ ಮತ್ತು ಸಮರದಲ್ಲಿ ಕಣ್ಣುಕುಕ್ಕುವ ಸೂರ್ಯನಂತೆ ನೋಡಲಸಾಧ್ಯ ಎನ್ನಿಸಿಕೊಂಡನು. ಅವನು ಎಲ್ಲ ರಾಜರನ್ನೂ ಅವರೆಲ್ಲರ ಮಹತ್ತರ ಸೈನ್ಯಗಳನ್ನೂ ಗೆದ್ದು ಯುಧಿಷ್ಠಿರನ ರಾಜಸೂಯ ಮಹಾಯಜ್ಞಕ್ಕೆ ಸಹಾಯಮಾಡಿದನು. ವಾಸುದೇವ ಕೃಷ್ಣನ ಸುನೀತಿ ಮತ್ತು

ಭೀಮಾರ್ಜುನರ ಬಲದಿಂದ ಬಲಗರ್ವಿತ ಜರಾಸಂಧ ಮತ್ತು ಶಿಶುಪಾಲರನ್ನು ಸಂಹರಿಸಿ ಯುಧಿಷ್ಠಿರನು ಎಲ್ಲ ಉತ್ತಮ ಗುಣಗಳಿಂದಲೂ ಕೂಡಿದ ಬಹು ವಿಜೃಂಭಿತ ರಾಜಸೂಯ ಯಾಗವನ್ನು ಪೂರೈಸಿದನು.

ಆ ಸಮಯದಲ್ಲಿ ಮಣಿ-ಕಾಂಚನ-ರತ್ನ-ಗೋವು-ಆನೆ-ಅಶ್ವಧನಗಳಿಂದ ಕೂಡಿದ್ದ ಪಾಂಡವರ ಸಮೃದ್ಧ ಸಂಪತ್ತನ್ನು ನೋಡಿದ ದುರ್ಯೋಧನನಲ್ಲಿ ಅಸೂಯೆ-ಕೋಪಗಳು ಮೂಡಿದವು. ಪಾಂಡವರಿಗೆ ಉಡುಗೊರೆಯಾಗಿ ದೊರಕಿದ್ದ ಮಯ ನಿರ್ಮಿತ ವಿಮಾನಸದೃಶ ಸಭೆಯನ್ನು ನೋಡಿ ಅವನು ಇನ್ನೂ ಹೆಚ್ಚು ಬೆಂದನು. ಅಲ್ಲಿಯೇ ಭ್ರಮೆಗೊಂಡು ಜಾರಿ ಬಿದ್ದಾಗ ಅವನು ಭೀಮಸೇನನಿಂದ ಅವಹೇಳನೆಗೊಳಪಟ್ಟನು. ವಿವಿಧ ಭುಂಜನ-ರತ್ನಗಳನ್ನು ಭೋಗಿಸುತ್ತಿದ್ದರೂ ಅವನು ವಿವರ್ಣನಾಗಿ ಕೃಶನಾಗುತ್ತಿದ್ದಾನೆ ಎಂದು ಧೃತರಾಷ್ಟ್ರನಿಗೆ ತಿಳಿಯಿತು. ಮಗನ ಮೇಲಿನ ಪ್ರೀತಿಯಿಂದ ಅವನು ದ್ಯೂತವನ್ನು ಆಜ್ಞಾಪಿಸಿದನು. ವಿದುರ, ದ್ರೋಣ, ಭೀಷ್ಮ, ಕೃಪ ಇವರ ಮಾತುಗಳನ್ನು ನಿರಾಕರಿಸಿ ಘೋರ ಯುದ್ಧದಲ್ಲಿ ಕ್ಷತ್ರಿಯರು ಪರಸ್ಪರರನ್ನು ಸಂಹರಿಸುವಂತೆ ಮಾಡಿದನು. ಪಾಂಡುಪುತ್ರರು ದುರ್ಯೋಧನ, ಕರ್ಣ ಮತ್ತು ಶಕುನಿಯರ

ಮೇಲೆ ಜಯಗಳಿಸಿದರು ಎಂಬ ಅತಿ ಅಪ್ರಿಯ ವಿಷಯವನ್ನು ಕೇಳಿದ ಧೃತರಾಷ್ಟ್ರನು ಒಂದು ಕ್ಷಣ ಯೋಚಿಸಿ ಸಂಜಯನಿಗೆ ಹೇಳಿದನು:

"ಸಂಜಯ! ನಾನು ಹೇಳುವುದೆಲ್ಲವನ್ನೂ ಕೇಳು. ಮೇಧಾವಿಯೂ, ಬುದ್ಧಿವಂತನೂ ಆಗಿರುವ ನೀನು ಇದಕ್ಕೆಲ್ಲ ನಾನೇ ಕಾರಣನೆಂದು ತಿಳಿದುಕೊಳ್ಳಬೇಡ! ಈ ಕುರುಕ್ಷಯಕ್ಕೆ ನನ್ನ ಒಪ್ಪಿಗೆ ಇರಲಿಲ್ಲ ಮತ್ತು ಇದು ನನಗೆ ಇಷ್ಟವಾಗಿಯೂ ಇರಲಿಲ್ಲ. ನನ್ನ ಪುತ್ರರಲ್ಲಿ ಮತ್ತು ಪಾಂಡುಪುತ್ರರಲ್ಲಿ ನನಗೆ ಯಾವುದೇ ವ್ಯಾತ್ಯಾಸಗಳಿರಲಿಲ್ಲ. ಕೆಟ್ಟದಾರಿ ಹಿಡಿದಿದ್ದ ನನ್ನ ಪುತ್ರರು ಈ ಕುರುದ ವೃದ್ಧ ದೀನನನ್ನು ಕೀಳಾಗಿ ಕಾಣುತ್ತಿದ್ದರು. ಆದರೆ ಪುತ್ರರ ಮೇಲಿನ ಪ್ರೀತಿಯಿಂದ ಅವೆಲ್ಲವನ್ನೂ ಸಹಿಸಿಕೊಳ್ಳುತ್ತಿದ್ದೆ. ಮೂಢ ದುರ್ಯೋಧನನು ಬೇಸರಗೊಂಡಾಗಲೆಲ್ಲಾ ನಾನೂ ಬೇಸರಗೊಳ್ಳುತ್ತಿದ್ದೆನು. ರಾಜಸೂಯದಲ್ಲಿ ಮಹಾತೇಜಸ್ವಿ ಪಾಂಡವರ ಅಪಾರ ಸಂಪತ್ತನ್ನು ನೋಡಿ ಮತ್ತು ಸಭಾದರ್ಶನದ ವೇಳೆಯಲ್ಲಿ

ಹಾಸ್ಯಕ್ಕೊಳಪಟ್ಟ ಅವನು ಪಾಂಡವರನ್ನು ರಣದಲ್ಲಿ ಗೆಲ್ಲುವುದು ನನಗೆ ಸಾಧ್ಯವಾದುದಲ್ಲ ಎಂದು ತಿಳಿದು ನಿರುತ್ಸಾಹಗೊಂಡು ಶಕುನಿಯ ಜೊತೆಗೂಡಿ ಸಂಪತ್ತನ್ನು ಪಡೆಯಲೋಸುಗ ಕ್ಷತ್ರಿಯರಿಗೆ ಶೋಭಿಸದ ದ್ಯೂತಕ್ಕೆ ಅವರನ್ನು ಆಮಂತ್ರಿಸಿದನು. ಇದರ ಮೊದಲು ಮತ್ತು ನಂತರ ಏನೆಲ್ಲ ಆಯಿತು ಎಂದು ನನಗೆ ತಿಳಿದಿದ್ದನ್ನು ಹೇಳುತ್ತೇನೆ ಕೇಳು. ನನ್ನ ಈ ಮಾತುಗಳನ್ನು ಕೇಳಿದರೆ ನನಗೂ ಪ್ರಜ್ಞೆಯ ಕಣ್ಣಿದೆ ಎನ್ನುವುದು ನಿನಗೆ ತಿಳಿಯುತ್ತದೆ!

ಎಲ್ಲ ರಾಜರ ಸಮಕ್ಷಮದಲ್ಲಿ ಅರ್ಜುನನು ಅದ್ಭುತವಾಗಿ ಧನುಸ್ಸನ್ನು ಹೂಡಿ ಲಕ್ಷ್ಯವನ್ನು ನೆಲಕ್ಕುರುಳಿಸಿ ಕೃಷ್ಣೆಯನ್ನು ಕೊಂಡೊಯ್ದಾಗ, ಅರ್ಜುನನು ದ್ವಾರಕೆಯಿಂದ ಸುಭದ್ರೆಯನ್ನು ಅಪಹರಿಸಿಸಲು ಕೃಷ್ಣ-ಬಲರಾಮರಿಬ್ಬರೂ ಇಂದ್ರಪ್ರಸ್ಥಕ್ಕೆ ಬಂದಾಗ, ಮತ್ತು ದಿವ್ಯಶರಗಳ ಮಳೆಯನ್ನು ಸುರಿಸುತ್ತಿರುವ ದೇವರಾಜ ಇಂದ್ರನನ್ನು ತಡೆದು ಅರ್ಜುನನು ಅಗ್ನಿಗೆ ಖಾಂಡವವನ್ನಿತ್ತು ತೃಪ್ತಿಪಡಿಸಿದಾಗಲೇ ನನಗೆ

ನಮ್ಮ ವಿಜಯದ ಕುರಿತು ಸಂಶಯವಿತ್ತು ಸಂಜಯ !

ಪತಿಗಳಿದ್ದರೂ ಅನಾಥಳಂತೆ ದುಃಖಿತಳಾಗಿ, ಏಕವಸ್ತ್ರಧಾರಿಯಾಗಿ, ಕಣ್ಣೀರಿನಿಂದ ಗಂಟಲು ಕಟ್ಟಿಹೋಗಿದ್ದ ರಜಸ್ವಲೆ ಅಶ್ರುಕಂಠೀ ದ್ರೌಪದಿಯನ್ನು ಸಭೆಗೆ ಎಳೆದುತಂದರು; ಶಕುನಿಯಿಂದ ಜೂಜಿನಲ್ಲಿ ಸೋತು ಯುಧಿಷ್ಠಿರನು ರಾಜ್ಯವನ್ನು ಕಳೆದುಕೊಂಡರೂ ಅವನ ಸಹೋದರರು ಅವನನ್ನು ಅನುಸರಿಸಿದರು; ವನದಲ್ಲಿ ಎಲ್ಲ ಕಷ್ಟಗಳನ್ನು ಅನುಭವಿಸಿದರು ಮತ್ತು ಅಲ್ಲಿಯೂ ಕೂಡ ಯುಧಿಷ್ಠಿರನು ಮಹಾತ್ಮ ಬ್ರಾಹ್ಮಣರಿಗೆ ಭಿಕ್ಷೆ-ಬೋಜನಗಳನ್ನಿತ್ತನೆಂದು ಕೇಳಿದಾಗಲೇ ನನಗೆ ವಿಜಯದಲ್ಲಿ ಸಂಶಯವಿತ್ತು ಸಂಜಯ !

ಅರ್ಜುನನು ಕಿರಾತರೂಪೀ ದೇವದೇವ ತ್ರಯಂಬಕ ಶಿವನನ್ನು ಯುದ್ಧದಲ್ಲಿ ತೃಪ್ತಿಗೊಳಿಸಿ ಮಹಾಸ್ತ್ರ ಪಾಶುಪತವನ್ನು ಪಡೆದನು ಮತ್ತು ದೇವಲೋಕವನ್ನು ಪ್ರವೇಶಿಸಿ ಅಲ್ಲಿ ಸಾಕ್ಷಾತ್ ಇಂದ್ರನಿಂದ ದಿವ್ಯಾಸ್ತ್ರಗಳನ್ನು ಪಡೆದ, ಮತ್ತು

ಭೀಮ ಮತ್ತು ಇತರ ಪಾರ್ಥರು ಮನುಷ್ಯರು ಮೊದಲೆಂದೂ ಹೋಗದೇ ಇದ್ದ ಪ್ರದೇಶಗಳಿಗೆ ಹೋದರೆಂದು ಯಾವಾಗ ಕೇಳಿದೆನೋ ಅಂದೇ ನಾನು ವಿಜಯದ ಆಸೆಯನ್ನು ತೊರೆದಿದ್ದೆನು.

ಕರ್ಣನನ್ನೇ ನಂಬಿ ಅವನು ಹೇಳಿದಂತೆಯೇ ನಡೆದುಕೊಳ್ಳುತ್ತಿದ್ದ ನನ್ನ ಮಗನು ಘೋಷಯಾತ್ರೆಯಲ್ಲಿ ಗಂಧರ್ವರಿಂದ ಬಂಧಿಯಾಗಿದ್ದಾಗ ಅರ್ಜುನನಿಂದ ಬಿಡುಗಡೆಗೊಳಿಸಲ್ಪಟ್ಟ; ಯಕ್ಷರೂಪದಲ್ಲಿ ಬಂದ ಧರ್ಮನು ಕೇಳಿದ ಪ್ರಶ್ನೆಗಳಿಗೆಲ್ಲ ಧರ್ಮರಾಜನು ಉತ್ತರಿಸಿ ಅವನನ್ನು ತೃಪ್ತಿಗೊಳಿದ; ಅವರು ವಿರಾಟರಾಷ್ಟ್ರದಲ್ಲಿ ವಾಸಿಸುತ್ತಿರುವಾಗ ಹಿರಿಯರಿಂದೊಡಗೂಡಿದ ನಮ್ಮ ಕಡೆಯವರೆಲ್ಲರನ್ನೂ ಏಕಾಕಿಯಾಗಿ ಅರ್ಜುನನು ಸೋಲಿಸಿದ; ಮತ್ಸ್ಯರಾಜನು ಅರ್ಜುನನನ್ನು ಸತ್ಕರಿಸಿ ತನ್ನ ಮಗಳು ಉತ್ತರೆಯನ್ನು ಕೊಟ್ಟಾಗ ಅರ್ಜುನನು ಅವಳನ್ನು ತನ್ನ ಮಗ ಅಭಿಮನ್ಯುವಿಗಾಗಿ ಸ್ವೀಕರಿಸಿದ; ಮತ್ತು ರಾಜ್ಯ ಸಂಪತ್ತುಗಳನ್ನು ಕಳೆದುಕೊಂಡು ತನ್ನವರ

ಸಂಪರ್ಕವನ್ನೇ ಕಳೆದುಕೊಂಡಿದ್ದ ಯುಧಿಷ್ಠಿರನು ಏಳು ಅಕ್ಷೋಹಿಣೀ ಸೇನೆಯನ್ನು ಒಂದುಗೂಡಿಸಿದ – ಇವೆಲ್ಲವನ್ನೂ ಕೇಳಿದಾಗಲೇ ನನಗೆ ವಿಜಯದಲ್ಲಿ ಸಂಶಯವಿತ್ತು ಸಂಜಯ!

ಕೃಷ್ಣಾರ್ಜುನರು ಬ್ರಹ್ಮಲೋಕದಲ್ಲಿ ಜೊತೆಜೊತೆಯಾಗಿ ಕಂಡುಬರುವ ನರನಾರಾಯಣರು ಎಂದು ಯಾವಾಗ ನಾರದನು ನನಗೆ ಹೇಳಿದನೋ, ಮತ್ತು ಇಡೀ ವಿಶ್ವವನ್ನೇ ಒಂದು ಪಾದದಲ್ಲಿ ಅಳೆದ ವಿಕ್ರಮಿ ಮಾಧವ ವಾಸುದೇವನ ಆತ್ಮವು ಪಾಂಡವರ ಹಿತವನ್ನೇ ಬಯಸುತ್ತದೆ ಎಂದು ಯಾವಾಗ ಕೇಳಿದೆನೋ ಅಂದೇ ನನಗೆ ವಿಜಯದಲ್ಲಿ ಸಂಶಯವಿತ್ತು ಸಂಜಯ!

ಇನ್ನೂ ಅನೇಕ ವಿಷಯಗಳನ್ನು ಕೇಳಿದಾಗಲೆಲ್ಲಾ ನಮಗೆ ಯುದ್ಧದಲ್ಲಿ ಗೆಲುವಾಗಲಿಕ್ಕಿಲ್ಲ ಎಂದು ನನಗನ್ನಿಸಿತ್ತು: ಕೇಶವನನ್ನು ಬಂಧಿಸಲು ಯೋಚಿಸುತ್ತಿದ್ದ ಕರ್ಣ-ದುರ್ಯೋಧನರಿಗೆ ಕೃಷ್ಣನು ತನ್ನ ಬಹುರೂಪಗಳನ್ನು ಕಾಣಿಸಿದುದು; ವಾಸುದೇವನು ಇಲ್ಲಿಂದ ಹಿಂದಿರುಗುವಾಗ

ಕುಂತಿಯು ಅವನ ರಥದ ಎದುರಿನಲ್ಲಿ ನಿಂತು ಶೋಕಿಸಲು ಕೇಶವನು ಅವಳನ್ನು ಸಂತವಿಸಿದುದು; “ನೀನಿರುವ ವರೆಗೆ ನಾನು ಯುದ್ಧಮಾಡುವುದಿಲ್ಲ!” ಎಂದು ಭೀಷ್ಮನಿಗೆ ಹೇಳಿ ಕರ್ಣನು ಸೇನೆಯನ್ನು ಬಿಟ್ಟು ಹೋದುದು; ದುಃಖಿತ ಅರ್ಜುನನು ರಥದ ಮೇಲೆ ಕುಸಿದು ಶೋಕಿಸುತ್ತಿರುವಾಗ ಕೃಷ್ಣನು ತನ್ನ ಶರೀರದಲ್ಲಿ ವಿಶ್ವವನ್ನೇ ತೋರಿಸಿದುದು; ಮಹಾರಥಿ ಭೀಷ್ಮನು ಪ್ರತಿದಿನ ಹತ್ತು ಸಾವಿರ ರಥಿಗಳನ್ನು ಕೊಂದರೂ ಪಾಂಡವ ಪ್ರಮುಖರಲ್ಲಿ ಯಾರೊಬ್ಬನನ್ನೂ ಕೊಲ್ಲದೇ ಇದ್ದುದು; ಶಿಖಂಡಿಯನ್ನು ರಥದಲ್ಲಿರಿಸಿಕೊಂಡು ಪಾರ್ಥನು ಅತ್ಯಂತ ಶೂರ, ಗೆಲ್ಲಲಸಾಧ್ಯ ಭೀಷ್ಮನನ್ನು ಉರುಳಿಸಿದುದು.

ಚಿತ್ರಯೋಧೀ ದ್ರೋಣನೂ ಕೂಡ ಸಮರದಲ್ಲಿ ವಿವಿಧ ಅಸ್ತ್ರಗಳ ಪ್ರದರ್ಶನ ಮಾಡಿದರೂ ಪಾಂಡವರಲ್ಲಿ ಶ್ರೇಷ್ಠನಾದ ಯಾರೊಬ್ಬನನ್ನೂ ಕೊಲ್ಲಲಿಲ್ಲ. ವೀರ ಕರ್ಣನೂ ಕೂಡ ಧನುಸ್ಸಿನ ತುದಿಯಿಂದ ಭೀಮನನ್ನು ಎಳೆಯುತ್ತಾ ತನ್ನ ವಶದಲ್ಲಿ ತೆಗೆದುಕೊಂಡಿದ್ದರೂ ಬರಿಯ

ಮೂದಲಿಕೆಯ ಮಾತುಗಳನ್ನು ಹೇಳಿ ಅವನನ್ನು ವಧಿಸದೇ ಬಿಟ್ಟನು. ದ್ರೋಣ, ಕೃತವರ್ಮ, ಕೃಪ, ಕರ್ಣ, ಅಶ್ವತ್ಥಾಮ ಮತ್ತು ಮದ್ರರಾಜ ಶಲ್ಯ ಇವರೆಲ್ಲರೂ ಸೈಂಧವನ ವಧೆಯಾಗಲು ಬಿಟ್ಟರು. ದೇವರಾಜನಿಂದ ದೊರೆತ ದಿವ್ಯ ಶಕ್ತಿಯನ್ನು ಕರ್ಣನು ಮಾಧವನ ಯೋಜನೆಯಂತೆ ಘೋರರೂಪೀ ರಾಕ್ಷಸ ಘಟೋತ್ಕಚನ ಮೇಲೆ ಉಪಯೋಗಿಸಿದನು. ಆಚಾರ್ಯ ದ್ರೋಣನು ಒಬ್ಬನೇ ರಥದಲ್ಲಿ ಕುಳಿತು ಪ್ರಾಯಗತನಾಗಿದ್ದಾಗ ಧರ್ಮವನ್ನು ಅತಿಕ್ರಮಿಸಿ ಧೃಷ್ಟದ್ಯುಮ್ನನು ಅವನನ್ನು ಸಂಹರಿಸಿದನು. ದ್ರೋಣಾವಸಾನದ ನಂತರ ಅವನ ಮಗ ಅಶ್ವತ್ಥಾಮನು ಬಿಟ್ಟ ದಿವ್ಯ ನಾರಾಯಣಾಸ್ತ್ರವೂ ಪಾಂಡವರನ್ನು ಕೊನೆಗೊಳಿಸುವಲ್ಲಿ ಅಸಫಲವಾಯಿತು. ಯುದ್ಧದಲ್ಲಿ ಗೆಲ್ಲಲಸಾಧ್ಯ ಅತಿ ಶೂರನ ಕರ್ಣನೂ ಕೂಡ ದೇವತೆಗಳಿಗೂ ಗುಹ್ಯವಾಗಿದ್ದ ಆ ಸಹೋದರರ ಸಮರದಲ್ಲಿ ಪಾರ್ಥನಿಂದ ಹತನಾದ! ಸಂಗ್ರಾಮ ಸಾರಥ್ಯದಲ್ಲಿ ಕೃಷ್ಣನೊಂದಿಗೆ ಸ್ಪರ್ಧಿಸುತ್ತಿದ್ದ ಶೂರ ಮದ್ರರಾಜನು ಧರ್ಮರಾಜನಿಂದ ಮತ್ತು

ಕಲಹದ್ಯೂತದ ಮೂಲ, ಮಹಾಮಾಯ ಪಾಪಿ ಸೌಬಲ ಶಕುನಿಯು ಸಂಗ್ರಾಮದಲ್ಲಿ ಪಾಂಡವ ಸಹದೇವನಿಂದ ಹತರಾದರು. ಭಗ್ನದರ್ಪ ದುರ್ಯೋಧನನು ವಿರಥನಾಗಿ ಸರೋವರಕ್ಕೆ ಹೋಗಿ ನೀರನ್ನು ಸ್ಥಿರಗೊಳಿಸಿ ಒಬ್ಬನೇ ಮಲಗಿ ವಿಶ್ರಾಂತಿ ಪಡೆದುಕೊಳ್ಳುತ್ತಿರುವಾಗ ವಾಸುದೇವನನ್ನೊಡಗೂಡಿದ ಪಾಂಡವರು ಅದೇ ಸರೋವರದ ದಡದಮೇಲೆ ನಿಂತು ನನ್ನ ಮಗನನ್ನು ಅಸಹ್ಯ ಮತ್ತು ಅಶ್ಲೀಲವಾಗಿ ಮೂದಲಿಸಿದರು. ಗದಾಯುದ್ಧದಲ್ಲಿ ಅತ್ಯಂತ ಕುಶಲಿಯಾಗಿದ್ದ ನನ್ನ ಮಗನನ್ನು ಕೃಷ್ಣನ ಸಲಹೆಯಂತೆ ಅನ್ಯಾಯವಾಗಿ ಹೊಡೆದುರುಳಿಸಲಾಯಿತು! ಮಲಗಿದ್ದ ಪಾಂಚಾಲ ಮತ್ತು ದ್ರೌಪದಿಯ ಮಕ್ಕಳನ್ನು ಅಶ್ವತ್ಥಾಮ ಮತ್ತು ಇತರರು ಅನಾವಶ್ಯಕವಾಗಿ ಕೊಲ್ಲುವ ಬೀಭತ್ಸ ಕರ್ಮವನ್ನೆಸಗಿದರು. ಭೀಮಸೇನನು ಬೆನ್ನಟ್ಟಿ ಹೋಗಲು ಅಶ್ವತ್ಥಾಮನು ಸಿಟ್ಟಿನಿಂದ ಹುಲ್ಲುಕಡ್ಡಿಯ ಮೂಲಕ ಮರಮಾಸ್ತ್ರವನ್ನು ಬಿಟ್ಟು ಗರ್ಭವಧೆಗೈದನು. ಅಶ್ವತ್ಥಾಮನ ಬ್ರಹ್ಮಶಿರವು ಅರ್ಜುನನು ಸ್ವಸ್ತಿ ಎಂದು ಬಿಟ್ಟ ಅಸ್ತ್ರದಿಂದ

ಶಾಂತಗೊಂಡಿತು.

ಪಾಂಡವರು ಸರಿಸಾಟಿಯಿಲ್ಲದ ರಾಜ್ಯವನ್ನು ಪುನಃ ಪಡೆಯುವ ದುಷ್ಕರ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಮಕ್ಕಳು, ಮೊಮ್ಮಕ್ಕಳು, ತಂದೆ ಮತ್ತು ಸಹೋದರರನ್ನು ಕಳೆದುಕೊಂಡ ಗಾಂಧಾರಿಯ ಕುರಿತು ಶೋಕಿಸಬೇಕು. ಈ ಸಂಗ್ರಾಮದಲ್ಲಿ ೧೮ ಅಕ್ಷೌಹಿಣೀ ಕ್ಷತ್ರಿಯರು ಹತರಾಗಿ ಕೇವಲ ೧೦ ಮಂದಿ ಮಾತ್ರ – ನಮ್ಮವರು ಮೂರು ಮತ್ತು ಪಾಂಡವರ ಕಡೆಯವರು ಏಳು – ಉಳಿದುಕೊಂಡಿದ್ದಾರೆ ಎನ್ನುವುದನ್ನು ಕೇಳಲು ಬಹಳ ಕಷ್ಟವಾಗುತ್ತಿದೆ. ಸೂತ! ನನ್ನ ಮನಸ್ಸು ವಿಹ್ವಲವಾಗಿದೆ. ಪ್ರಜ್ಞೆಯನ್ನು ಕಳೆದುಕೊಂಡವನಂತಾಗಿದ್ದೇನೆ. ಮೋಹಪರವಶನಾದ ನನ್ನನ್ನು ಕತ್ತಲೆಯು ಆವರಿಸುತ್ತಿದೆ!”

ಬಹುದುಃಖಿತ ಧೃತರಾಷ್ಟ್ರನು ಈ ರೀತಿ ವಿಲಪಿಸುತ್ತಾ ಮೂರ್ಛೆ ಹೊಂದಿ, ಪುನಃ ಎಚ್ಚೆತ್ತು ಸಂಜಯನಿಗೆ ಹೇಳಿದನು:

“ಸಂಜಯ! ಈಗಲೇ ಈ ಪ್ರಾಣವನ್ನು ತ್ಯಜಿಸಲು ಬಯಸುತ್ತೇನೆ. ಬದುಕಿರುವುದರಲ್ಲಿ ಯಾವ ಫಲವನ್ನೂ ಕಾಣುತ್ತಿಲ್ಲ!”

ಈ ರೀತಿ ಹೇಳಿ ದೀನನಾಗಿ ವಿಲಪಿಸುತ್ತಿದ್ದ ಮಹೀಪತಿಗೆ ಧೀಮಂತ ಗಾವಲ್ಗಣಿ ಸಂಜಯನು ಮಹಾರ್ಥವುಳ್ಳ ಈ ಮಾತುಗಳನ್ನಾಡಿದನು:

“ಮಹಾಬಲಶಾಲಿಗಳೂ ಮಹೋತ್ಸಾಹಿಗಳೂ ಆದ ರಾಜರ ಕುರಿತು ಧೀಮಂತ ದ್ವೈಪಾಯನ ಮತ್ತು ನಾರದರು ಹೇಳಿದ  ಮಾತುಗಳನ್ನು ಕೇಳಿದ್ದೀಯೆ. ಮಹಾರಾಜವಂಶಗಳಲ್ಲಿ ಜನಿಸಿದ ಹಲವಾರು ಉತ್ತಮ ಗುಣಶಾಲಿಗಳೂ, ದಿವ್ಯಾಸ್ತ್ರವಿದುಷರೂ, ಶಕ್ರನಂತೆ ತೇಜಸ್ವಿಗಳೂ ಆದ ಎಷ್ಟೋ ರಾಜರುಗಳು ಧರ್ಮಪೂರಕವಾಗಿ ಈ ಭೂಮಿಯನ್ನು ಆಳಿ, ಧಾರಾಳ ದಕ್ಷಿಣೆಗಳಿಂದ ಯಜ್ಞಕಾರ್ಯಗಳನ್ನೆಸಗಿ ಈ ಲೋಕದಲ್ಲಿ ಯಶವನ್ನು ಹೊಂದಿ ನಂತರದಲ್ಲಿ ಎಲ್ಲರೂ ಕಾಲವಶರಾದರು. ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಬುದ್ಧಿವಂತ ಮಹಾಬಲ ರಾಜರುಗಳು ವಿಪುಲ ಭೋಗಗಳನ್ನು ತೊರೆದು

ನಿನ್ನ ಪುತ್ರರ ಹಾಗೆ ಮಹತ್ತಮ ನಿಧನ ಹೊಂದಿದ್ದಾರೆ. ಯಾರ ದಿವ್ಯಕರ್ಮಗಳನ್ನು, ವಿಕ್ರಮ-ತ್ಯಾಗ-ಮಹಾತ್ಮೆ-ಅಸ್ತಿತ್ವ-ಸತ್ಯತೆ ಮತ್ತು ಶುದ್ಧತೆಗಳನ್ನು ಪುರಾಣಗಳು ಹೊಗಳಿದ್ದಾರೋ ಅವರೆಲ್ಲ ಗುಣಸಂಪನ್ನರೂ ಎಷ್ಟೋ ಕಾಲದ ಹಿಂದೆಯೇ ನಿಧನರಾಗಿ ಹೋಗಿದ್ದಾರೆ. ನಿನ್ನ ಮಕ್ಕಳಾದರೋ ದುರಾತ್ಮರಾಗಿದ್ದರು. ಸಿಟ್ಟು ಮತ್ತು ಲೋಭದಿಂದ ಉರಿಯುತ್ತಿದ್ದರು. ದುರ್ವೃತ್ತಿಗಳಾಗಿದ್ದರು. ಅಂಥವರಿಗಾಗಿ ನೀನು ಶೋಚಿಸುವುದು ಸರಿಯಲ್ಲ. ಭಾರತ! ನೀನು ಶೃತಿಗಳನ್ನು ಅರಿತವನೂ, ಮೇಧಾವಿಯೂ, ಬುದ್ಧಿವಂತನೂ, ಪ್ರಜ್ಞಸಮ್ಮತನೂ ಆಗಿದ್ದೇಯೆ. ಶಾಸ್ತ್ರಗಳನ್ನು ಅನುಸರಿಸುವವರು ಹೀಗೆ ಶೋಕಿಸುವುದಿಲ್ಲ. ನರಾಧಿಪ! ನೀನು ವಿಧಿಯ ನಿಗ್ರಹ-ಅನುಗ್ರಹಗಳನ್ನು ತಿಳಿದಿದ್ದೀಯೆ. ಪುತ್ರರಕ್ಷಣೆಗೆಂದು ನೀನು ಮಾಡಿದುದೆಲ್ಲವನ್ನೂ ವಿಧಿಯು ಮೊದಲೇ ನಿರ್ಧರಿಸಿತ್ತು. ಹೀಗೆಯೇ ಆಗಬೇಕೆಂದು ಇದ್ದುದಕ್ಕೆ ಶೋಕಿಸುವುದು ಸರಿಯಲ್ಲ. ಪ್ರಜ್ಞಾವಿಶೇಷದಿಂದ ಯಾರುತಾನೇ ದೈವವನ್ನು ತಡೆಗಟ್ಟಲು ಸಾಧ್ಯ? ವಿಧಾತನಿಂದ

ಹಾಕಿ ಕೊಟ್ಟ ಮಾರ್ಗವನ್ನು ಬಿಟ್ಟು ಹೋಗುವುದು ಯಾರಿಗೂ ಅಸಾಧ್ಯ. ಆಗುವಂತದ್ದು-ಆಗದಿರುವಂತದ್ದು, ಸುಖ-ದುಃಖ ಇವೆಲ್ಲವೂ ಕಾಲದಿಂದಲೇ ಹುಟ್ಟುತ್ತವೆ. ಇರುವ ಎಲ್ಲವನ್ನೂ ಕಾಲವೇ ಸೃಷ್ಟಿಸುತ್ತದೆ ಮತ್ತು ಇರುವ ಎಲ್ಲವನ್ನೂ ಅದೇ ನಾಶಪಡಿಸುತ್ತದೆ. ಹುಟ್ಟಿದ ಎಲ್ಲವನ್ನೂ ಕಾಲವು ಸುಡುತ್ತದೆ ಮತ್ತು ಕಾಲವೇ ಆ ಅಗ್ನಿಯನ್ನು ಆರಿಸುತ್ತದೆ. ಲೋಕದಲ್ಲಿರುವ ಸರ್ವ ಶುಭಾಶುಭ ಭಾವಗಳನ್ನೂ ಕಾಲವೇ ಹುಟ್ಟಿಸಿದು. ಹುಟ್ಟಿಸಿದ ಎಲ್ಲವನ್ನೂ ಕಾಲವು ನಾಶಗೊಳಿಸಿ ಪುನಃ ಸೃಷ್ಟಿಸುತ್ತದೆ. ಇರುವ ಎಲ್ಲದರಲ್ಲಿಯೂ ಕಾಲವು ಒಂದೇ ಸಮನೆ ಕೆಲಸಮಾಡುತ್ತಿರುತ್ತದೆ. ಹಿಂದೆ ನಡೆದ ಮತ್ತು ಮುಂದೆ ನಡೆಯುವ ಎಲ್ಲವೂ ಕಾಲನಿರ್ಮಿತವಾದುದು  ಎಂದು ತಿಳಿದೂ ಶೋಕಿಸಿ ಬಳಲುವುದು ಸರಿಯಲ್ಲ!”

# ಹಸ್ತಿನಾಪುರದಲ್ಲಿ ಜನಮೇಜಯನ ಸರ್ಪಸತ್ರದಲ್ಲಿ ವೈಶಂಪಾಯನನು ಮಹಾಭಾರತ ಕಥೆಯನ್ನು ಪ್ರಾರಂಭಿಸಿದುದು

## ಸರ್ವಭಕ್ಷಕನಾಗೆಂದು ಅಗ್ನಿಗೆ ಭೃಗುಋಷಿಯ ಶಾಪ

ಭೃಗುವಿಗೆ ಪುಲೋಮ ಎಂಬ ವಿಖ್ಯಾತ ಪ್ರಿಯ ಭಾರ್ಯೆಯಿದ್ದಳು. ಅವಳಲ್ಲಿ ಭೃಗುವಿನ ವೀರ್ಯಸಮುದ್ಭವ ಗರ್ಭವು ಬೆಳೆಯುತ್ತಿತ್ತು. ಧರ್ಮಪತ್ನಿ, ಯಶಸ್ವಿನಿ, ಸಮಶೀಲೆ, ಪುಲೋಮೆಯು ಗರ್ಭಿಣಿಯಾಗಿದ್ದಾಗ ಒಮ್ಮೆ ಧರ್ಮಭೃತ ಶ್ರೇಷ್ಠ ಭೃಗುವು ಸ್ನಾನಕ್ಕೆಂದು ಹೋದಾಗ ಅವನ ಆಶ್ರಮಕ್ಕೆ ರಾಕ್ಷಸ ಪುಲೋಮನು ಆಗಮಿಸಿದನು. ಆಶ್ರಮವನ್ನು ಪ್ರವೇಶಿಸಿ, ಅಲ್ಲಿ ಭೃಗುವಿನ ಅನಿಂದಿತ ಭಾರ್ಯೆಯನ್ನು ನೋಡಿ ಇಚ್ಛೆಯಿಂದ ಸಮಾವಿಷ್ಟನಾಗಿ ವಿವೇಕವೆಲ್ಲವನ್ನೂ ಕಳೆದುಕೊಂಡನು. ಚಾರುದರ್ಶಿಣಿ ಪುಲೋಮಳು ಅತಿಥಿಯಾದ ಆ ರಾಕ್ಷಸನಿಗೆ ವನದಿಂದ ತಂದ ಫಲಮೂಲಾದಿಗಳನ್ನಿತ್ತಳು. ರಾಕ್ಷಸನು ಅವಳನ್ನು ನೋಡಿ ಆಸೆಯಿಂದ ಪೀಡಿತನಾಗಿ ಆ ಅನಿಂದಿತೆಯನ್ನು ಎತ್ತಿಕೊಂಡು

ಹೋಗಲು ನಿರ್ಧರಿಸಿ ಸಂತಸಪಟ್ಟನು. ರಾಕ್ಷಸನು ಅಲ್ಲಿ ಪ್ರಜ್ವಲಿಸುತ್ತಿದ್ದ ಜಾತವೇದಸನನ್ನು ನೋಡಿ, ಅಗ್ನಿಯನ್ನು ನಮಸ್ಕರಿಸಿ, ಉರಿಯುತ್ತಿರುವ ಪಾವಕನಲ್ಲಿ ಕೇಳಿದನು:

"ಅಗ್ನಿ! ದೇವತೆಗಳ ಬಾಯಿಯೂ ಸತ್ಯವಾದಿಯೂ ಆದ ನೀನು ನಾನು ಕೇಳುವ ಪ್ರಶ್ನೆಗೆ ಸತ್ಯವಾದ ಉತ್ತರವನ್ನು ಹೇಳು. ಇವಳು ನ್ಯಾಯವಾಗಿಯೂ ಯಾರ ಪತ್ನಿ? ಹಿಂದೆ ಈ ವರವರ್ಣಿನಿಯು ನನ್ನ ಹೆಂಡತಿಯೆಂದು ನಿಶ್ಚಯವಾಗಿತ್ತು. ಆದರೆ ನಂತರ ಇವಳ ತಂದೆಯು ಇವಳನ್ನು ಅನ್ಯಾಯವಾಗಿ ಭೃಗುವಿಗೆ ಕೊಟ್ಟನು. ಹೀಗಿರುವಾಗ, ಈ ವರಾರೋಹೆಯು ಸತ್ಯವಾಗಿಯೂ ಭೃಗುವಿನ ಭಾರ್ಯೆಯಾಗುತ್ತಾಳೆಯೇ? ಇವಳನ್ನು ಆಶ್ರಮದಿಂದ ಬಲವಂತವಾಗಿ ಎತ್ತಿಕೊಂಡು ಒಯ್ಯುತ್ತೇನೆ. ಮೊದಲು ನನ್ನವಳಾಗಿದ್ದವಳನ್ನು ಭೃಗುವು ಪಡೆದನೆಂಬುವುದನ್ನು ನೆನೆಸಿಕೊಂಡಾಗಲೆಲ್ಲ ನನ್ನ ಹೃದಯವು ಸಿಟ್ಟಿನಿಂದ ಉರಿಯುತ್ತದೆ ಮತ್ತು ರೋಮಗಳು ಎದ್ದು ನಿಲ್ಲುತ್ತವೆ."

ಅವಳು ಭೃಗುವಿನ ಭಾರ್ಯೆಯೇ ಎಂದು ಶಂಕಿತನಾದ ರಾಕ್ಷಸನು ಈ ರೀತಿ ಜ್ವಲಿಸುತ್ತಿರುವ ಜಾತವೇದಸನನ್ನು ಪುನಃ ಪುನಃ ಕೇಳಿದನು:

"ಅಗ್ನಿ! ನೀನು ಸರ್ವಭೂತಗಳಲ್ಲಿ ನಿತ್ಯವೂ ಪಾಪ ಪುಣ್ಯಗಳ ಸಾಕ್ಷಿಯಾಗಿ ವಾಸಿಸುತ್ತೀಯೆ. ಈಗ ಏಕೆ

ಸತ್ಯವನ್ನು ಹೇಳುತ್ತಿಲ್ಲ? ಮೊದಲು ನನ್ನ ಹೆಂಡತಿಯೆಂದಿದ್ದವಳನ್ನು ಭೃಗುವು ಅನ್ಯಾಯವಾಗಿ ಅಪಹರಿಸಿದ್ದಾನೆ. ಹಾಗಿದ್ದಾಗ ಅವಳು ಸತ್ಯವಾಗಿಯೂ ನನ್ನ ಹೆಂಡತಿಯಾಗುವುದಿಲ್ಲವೇ ಹೇಳು. ಇವಳು ಭೃಗುವಿನ ಭಾರ್ಯೆಯೋ ಅಥವಾ ನನ್ನವಳೋ ಎಂದು ನೀನು ಹೇಳಿದ ನಂತರವೇ ನಾನು ಇವಳನ್ನು ನೀನು ನೋಡುತ್ತಿದ್ದ ಹಾಗೆ ಈ ಆಶ್ರಮದಿಂದ ಎತ್ತಿಕೊಂಡು ಹೋಗುತ್ತೇನೆ. ಆದ್ದರಿಂದ ನನಗೆ ಸತ್ಯವನ್ನು ಹೇಳು.”

ಅವನ ಈ ಮಾತುಗಳನ್ನು ಕೇಳಿದ ಸಪ್ತಾರ್ಚಿಯು ದುಃಖಿತನಾದನು. ಸುಳ್ಳುಹೇಳುವ ಭಯದಷ್ಟೇ ಭೃಗುವಿನ ಶಾಪಕ್ಕೂ ಭಯಪಟ್ಟನು. ಅಂತ್ಯದಲ್ಲಿ ಈ ರೀತಿ ಹೇಳಿದನು.

ಅಗ್ನಿಯ ಆ ಮಾತುಗಳನ್ನು ಕೇಳಿ ರಾಕ್ಷಸನು ಮುಗುಳ್ನಕ್ಕು, ವರಾಹ ರೂಪವನ್ನು ತಳೆದು ಒಂದೇ ಕ್ಷಣದಲ್ಲಿ ಮನೋವೇಗದಲ್ಲಿ ಅವಳನ್ನು ಕೊಂಡೊಯ್ದನು. ಆಗ ಅವಳ ಗರ್ಭದಲ್ಲಿ ಬೆಳೆಯುತ್ತಿದ್ದ ಭೃಗುಕುಲೋದ್ಭವ ಭ್ರೂಣವು ರೋಷಗೊಂಡು ತಾಯಿಯಿಂದ ಹೊರಬಿದ್ದಿತು. ಆ ಗರ್ಭವೇ ಮುಂದೆ ಚ್ಯವನನೆಂದು ಕರೆಯಲ್ಪಟ್ಟನು. ತಾಯಿಯ ಉದರದಿಂದ ಕೆಳಗೆ ಬೀಳುತ್ತಿದ್ದ ಆ ಆದಿತ್ಯವರ್ಚಸನನ್ನು ನೋಡಿದ ರಾಕ್ಷಸನು ಭಸ್ಮವಾಗಿ ಅವಳನ್ನು ಬಿಟ್ಟು ಕೆಳಗೆ ಬಿದ್ದನು. ಆಗ ಆ ಸುಶ್ರೋಣಿ ಪುಲೋಮೆಯು

ಭೃಗುನಂದನ ಚ್ಯವನ ಭಾರ್ಗವನನ್ನು ಹಿಡಿದು ದುಃಖಮೂರ್ಛಿತಳಾದಳು. ರೋದಿಸುತ್ತಿರುವ ಆ ಅನಿಂದಿತೆ, ಭೃಗುಭಾರ್ಯೆ, ಬಾಷ್ಪ ಪೂರ್ಣಾಕ್ಷಿಯನ್ನು ನೋಡಿ ಸರ್ವಲೋಕ ಪಿತಾಮಹ ಸ್ವಯಂ ಭಗವಾನ್ ಬ್ರಹ್ಮನೇ ಬಂದು ಪಿತಾಮಹನು ವಧುವನ್ನು ಸಂತವಿಸುವಂತೆ ಸಂತವಿಸಿದನು. ಅವಳ ಕಣ್ಣೀರಿನಿಂದ ಒಂದು ಮಹಾನದಿಯೇ ಹುಟ್ಟಿಕೊಂಡು ಆ ಯಶಸ್ವಿನೀ ಭೃಗುಪತ್ನಿಯನ್ನು ಹಿಂಬಾಲಿಸುತ್ತಾ ಹೊರಟಿತು. ತನ್ನ ಸೊಸೆಯ ದಾರಿಯಲ್ಲಿಯೇ ಹರಿಯುತ್ತಿರುವ ಆ ನದಿಯನ್ನು ನೋಡಿ ಲೋಕಪಿತಾಮಹನು ಭಗವಾನ್ ಚ್ಯವನನ ಆಶ್ರಮದ ಬಳಿ ಹರಿಯುತ್ತಿರುವ ಆ ನದಿಗೆ ವಧೂಸರ ಎಂಬ ಹೆಸರನ್ನಿತ್ತನು. ಈ ರೀತಿ ಭೃಗು ಪುತ್ರ ಪ್ರತಾಪಿ ಚ್ಯವನನು ಹುಟ್ಟಿದನು.

ಅಲ್ಲಿ ಅವನ ತಂದೆಯು ಚ್ಯವನ ಮತ್ತು ತನ್ನ ಪತ್ನಿಯನ್ನು ಕಂಡನು. ಕುಪಿತ ಭೃಗುವು ತನ್ನ ಭಾರ್ಯೆ ಪುಲೋಮೆಯನ್ನು ಪ್ರಶ್ನಿಸಿದನು:

> “ಯಾರಿಂದ ಆ ರಾಕ್ಷಸನಿಗೆ ನಿನ್ನ ಕುರಿತು ತಿಳಿಯಿತು ಮತ್ತು ಹೇಗೆ ನಿನ್ನನ್ನು ಅಪಹರಿಸಿದನು? ಚಾರುಹಾಸಿನಿ! ನೀನು ನನ್ನ ಭಾರ್ಯೆಯೆಂದು ಅವನಿಗೆ ಹೇಳಿದವನು ಯಾರು? ರೋಷದಿಂದ ಇಂದು ಅವನನ್ನು ಶಪಿಸಲು ಇಚ್ಛಿಸುತ್ತೇನೆ. ನನ್ನ ಕೋಪದಿಂದ ಹುಟ್ಟಿದ ಶಾಪದಿಂದ ಯಾರೂ ಉಳಿಯಲು ಸಾಧ್ಯವಿಲ್ಲ.”

ಪುಲೋಮೆಯು ಹೇಳಿದಳು:

> “ಭಗವನ್! ನಿನ್ನ ಕುರಿತು ರಾಕ್ಷಸನಿಗೆ ಅಗ್ನಿಯ ಮೂಲಕ ತಿಳಿಯಿತು. ನಂತರದಲ್ಲಿ ಆ ರಾಕ್ಷಸನು ಕುರಿಯಂತೆ ಕೂಗುತ್ತಿರುವ ನನ್ನನ್ನು ಎತ್ತಿಕೊಂಡು ಹೋದನು. ನಿನ್ನ ಸುತನ ಪರಮ ತೇಜಸ್ಸಿನಿಂದ ನಾನು ರಕ್ಷಿತಳಾದೆ ಮತ್ತು ಆ ರಾಕ್ಷಸನು ಭಸ್ಮೀಭೂತನಾಗಿ ನನ್ನ ಕೈಬಿಟ್ಟು ಬಿದ್ದನು.”

ಪುಲೋಮಳಿಂದ ಇದನ್ನು ಕೇಳಿದ ಭೃಗುವು ಕೃದ್ಧನಾಗಿ ಪರಮ ಕೋಪದಿಂದ ಅಗ್ನಿಯನ್ನು “ಸರ್ವಭಕ್ಷೋ ಭವ!” ಎಂದು ಶಪಿಸಿದನು. ಭೃಗುವಿನಿಂದ ಶಪಿತನಾದ ವಹ್ನಿಯು ಕೋಪದಿಂದ ಹೇಳಿದನು:

> “ಬ್ರಾಹ್ಮಣ! ನನ್ನ ವಿರುದ್ಧ ಯಾವರೀತಿಯ ಈ ಸಾಹಸ ಕಾರ್ಯವನ್ನೆಸಗಿದೆ? ಸತ್ಯವನ್ನು ಹೇಳು ಎಂದು ಕೇಳಿಕೊಂಡಾಗ ಧರ್ಮದಲ್ಲಿ ನಡೆದು ಸತ್ಯವನ್ನು ನುಡಿದ ನಾನು ಯಾವ ವ್ಯಭಿಚಾರ್ಯವನ್ನು ಮಾಡಿದ್ದೇನೆ? ಎದಿರು ಸಾಕ್ಷಿಯಾಗಿದ್ದವನು ಸಾಕ್ಷಿಯನ್ನು ಕೇಳಿದಾಗ ತಿಳಿದಿದ್ದುದನ್ನು ಬಿಟ್ಟು ಅನ್ಯಥಾ ಹೇಳಿದರೆ ಅವನು ತನ್ನ ಪೂರ್ವಜರ ಮತ್ತು ತನ್ನ ಮುಂದಿನ ಕುಲ ಎರಡನ್ನೂ ಏಳು ಪೀಳಿಗೆಗಳವರೆಗೆ ನಾಶಮಾಡುತ್ತಾನೆ. ಕೇಳಿದಾಗ ತಿಳಿದುದ್ದದನ್ನು ಹೇಳದೇ ಇದ್ದ ತತ್ವಜ್ಞನೂ ಕೂಡ  ಇದೇ

ರೀತಿಯ ಪಾಪವನ್ನು ಹೊಂದುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ನಾನೂ ಕೂಡ ನಿನ್ನನ್ನು ಶಪಿಸಬಹುದು. ಆದರೆ ನಾನು ಬ್ರಾಹ್ಮಣರನ್ನು ಆದರಿಸುತ್ತೇನೆ. ಇವೆಲ್ಲವೂ ನಿನಗೆ ಈ ಮೊದಲೇ ತಿಳಿದಿದ್ದರೂ ನಿನಗೆ ವ್ಯಕ್ತಪಡಿಸಲು ಹೇಳುತ್ತಿದ್ದೇನೆ. ಯೋಗದಿಂದ ನನ್ನನ್ನು ನಾನೇ ಬಹುದಾತ್ಮನನ್ನಾಗಿ ಮಾಡಿಕೊಂಡು ಅಗ್ನಿಹೋತ್ರ, ಸತ್ರ, ಕ್ರಿಯ ಮತ್ತು ಮಖಗಳಾಗಿದ್ದೇನೆ. ವೇದೋಕ್ತ ವಿಧಾನಗಳಿಂದ ನನ್ನಲ್ಲಿ ಹವಿಸ್ಸನ್ನು ಸುರಿದಾಗ ದೇವತೆಗಳು ಮತ್ತು ಪಿತೃಗಳು ತೃಪ್ತರಾಗುತ್ತಾರೆ. ಸರ್ವ ದೇವಗಣಗಳು ನೀರು ಮತ್ತು ಪಿತೃಗಣಗಳೂ ಕೂಡ ನೀರು. ದೇವ ಮತ್ತು ಪಿತೃಗಳು ಕ್ರಮವಾಗಿ ಪೂರ್ಣಿಮ ಮತ್ತು ಅಮವಾಸ್ಯೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ದೇವತೆಗಳೇ ಪಿತೃಗಳು ಮತ್ತು ಪಿತೃಗಳೇ ದೇವತೆಗಳು. ಒಂದಾದ ಅವರೀರ್ವರನ್ನೂ ಚಂದ್ರಮಾನ ಮಾಸದ ಪರ್ವಗಳೆರಡಲ್ಲಿ ಪೂಜಿಸುತ್ತಾರೆ. ದೇವತೆ-ಪಿತೃಗಳೀರ್ವರೂ ನನ್ನ ಮೂಲಕವೇ ತಿನ್ನುತ್ತಾರೆ. ಆದುದರಿಂದ ಮೂರೂ ಲೋಕಗಳಲ್ಲಿ ನನ್ನನ್ನು ದೇವಪಿತೃಗಳ ಬಾಯಿಯೆಂದು ಕರೆಯುತ್ತಾರೆ. ನನ್ನ ಬಾಯಿಯಲ್ಲಿ ಹವಿಸ್ಸನ್ನು ಹಾಕುವುದರ ಮೂಲಕ ಅಮವಾಸ್ಯೆಗಳಲ್ಲಿ ಪಿತೃಗಳು ಮತ್ತು ಪೂರ್ಣಿಮೆಗಳಲ್ಲಿ ದೇವತೆಗಳು ಊಟ ಮಾಡುತ್ತಾರೆ. ಅವರದ್ದು ಮಾತ್ರ

ಬಾಯಿಯಾದ ನಾನು ಹೇಗೆ ಸರ್ವಭಕ್ಷಕನಾಗಲಿ?”

ಸ್ವಲ್ಪ ಸಮಯ ಯೋಚಿಸಿ, ವಹ್ನಿಯು ದ್ವಿಜರ ಅಗ್ನಿಹೋತ್ರ, ಯಜ್ಞ, ಸತ್ರ ಮತ್ತು ಕ್ರಿಯೆಗಳೆಲ್ಲವುಗಳಿಂದ ತನ್ನನ್ನು ಹಿಂತೆಗೆದುಕೊಂಡನು. ಓಂಕಾರ, ವಷಟ್ಕಾರ, ಸ್ವಧಾ, ಸ್ವಾಹಗಳಿಲ್ಲದೇ ಕಾರ್ಯಗಳೆಲ್ಲವೂ ನಿಂತು ಹೋಗಿ ಸರ್ವ ಪ್ರಜೆಗಳೂ ದುಃಖಿತರಾದರು. ಆಗ ಉದ್ವಿಗ್ನರಾದ ಎಲ್ಲ ಋಷಿಗಳು ದೇವತೆಗಳ ಬಳಿ ಹೋಗಿ ಹೇಳಿದರು:

> “ಅನಘರೇ! ಅಗ್ನಿನಾಶದಿಂದ ಕ್ರಿಯಾಭ್ರಂಶವಾಗಿ ಮೂರೂ ಲೋಕಗಳೂ ಭ್ರಾಂತವಾಗಿವೆ. ಆದುದರಿಂದ ತಡೆಮಾಡದೇ ಉಚಿತ ಕಾರ್ಯವನ್ನು ಕೈಗೊಳ್ಳಿ.”

ಆಗ ಋಷಿಗಳು ಮತ್ತು ದೇವತೆಗಳು ಬ್ರಹ್ಮನಲ್ಲಿಗೆ ಹೋಗಿ ಅಗ್ನಿಗೆ ಬಂದ ಶಾಪ ಮತ್ತು ಅವನು ತನ್ನ ಕ್ರಿಯೆಗಳನ್ನು ನಿಲ್ಲಿಸಿದ್ದುದನ್ನು ನಿವೇದಿಸಿದರು:

> “ಮಹಾಭಾಗ! ಕಾರಣಾಂತರದಿಂದ ಭೃಗುವು ಅಗ್ನಿಯನ್ನು ಶಪಿಸಿದನು. ದೇವಮುಖನಾದ, ಯಜ್ಞಗಳಲ್ಲಿ ಅಗ್ರಭುಕ್ತನಾದ ಅಗ್ನಿಯು ಹೇಗೆ ಸರ್ವಲೋಕದಲ್ಲಿ ಸರ್ವಭಕ್ಷಕನಾಗಲು ಸಾಧ್ಯ?”

ಅವರ ಆ ಮಾತುಗಳನ್ನು ಕೇಳಿದ ಲೋಕಕೃತನು ಅಗ್ನಿಯನ್ನು ಕರೆಯಿಸಿ ಆ ಭೂತಭಾವನ ಅವ್ಯಯನಿಗೆ ಈ ಮೃದು ಮಾತುಗಳನ್ನು

ಹೇಳಿದನು:

> “ಈ ಸರ್ವ ಲೋಕಗಳ ಕರ್ತನೂ ನೀನು. ಅಂತನೂ ನೀನು. ನೀನು ಮೂರೂ ಲೋಕಗಳನ್ನೂ, ಕ್ರಿಯೆಗಳನ್ನೂ ನಡೆಸುತ್ತೀಯೆ. ಸರ್ವೇಶ್ವರ ಹುತಾಶನ! ನೀನು ಹೇಗೆ ಈ ರೀತಿ ಮೂಢನಾಗಲು ಸಾಧ್ಯ? ಲೋಕದ ಸರ್ವಭೂತಗಳಲ್ಲಿ ನೆಲಸಿರುವ ನೀನು ಪವಿತ್ರ. ನಿನ್ನ ಸರ್ವ ಶರೀರವು ಸರ್ವಭಕ್ಷಕವಾಗುವುದಿಲ್ಲ. ನಿನ್ನ ಅಧೋಮುಖ ಜ್ವಾಲೆಗಳು ಮಾತ್ರ ಸರ್ವವನ್ನೂ ಭಕ್ಷಿಸುತ್ತವೆ. ಸೂರ್ಯನ ಕಿರಣಗಳ ಸಂಪರ್ಕದಲ್ಲಿ ಬಂದ ಸರ್ವವೂ ಹೇಗೆ ಶುಚಿಯಾಗುತ್ತವೆಯೋ ಹಾಗೆ ನಿನ್ನಲ್ಲಿ ದಗ್ಧವಾದ ಎಲ್ಲವೂ ಶುಚಿಯಾಗುತ್ತವೆ. ನೀನು ನಿನ್ನದೇ ಪ್ರಭಾವದಿಂದ ಹುಟ್ಟಿದ ಮಹಾತೇಜಸ್ಸುಳ್ಳವನು. ನಿನ್ನ ಈ ತೇಜಸ್ಸಿನಿಂದ ಈ ಶಾಪವು ಸತ್ಯವಾಗುವಹಾಗೆ ಮಾಡು. ನಿನ್ನ ಮುಖದಿಂದ ನಿನ್ನ ಮತ್ತು ದೇವತೆಗಳ ಆಹುತಿಗಳನ್ನು ಸ್ವೀಕರಿಸು.”

“ಹೀಗೆಯೇ ಆಗಲಿ” ಎಂದು ಪಿತಾಮಹನಿಗೆ ಉತ್ತರಿಸಿ ವಹ್ನಿಯು ದೇವ ಪರಮೇಷ್ಠಿಯ ಆಜ್ಞೆಯನ್ನು ಪರಿಪಾಲಿಸಲು ಮುಂದಾದನು. ದೇವ ಋಷಿಗಳು ಕೂಡ ಮುದಿತರಾಗಿ ಹಿಂದಿರುಗಿದರು. ಋಷಿಗಳು ಮತ್ತು ಸರ್ವರೂ ಹಿಂದಿನಂತೆ ಕ್ರಿಯೆಗಳಲ್ಲಿ ಮಗ್ನರಾದರು. ಸ್ವರ್ಗದಲ್ಲಿ ದೇವತೆಗಳು ಮತ್ತು ಭೂಮಿಯಲ್ಲಿ ಸರ್ವ ಭೂತಗಳು

ಹರ್ಷಿತರಾದರು ಮತ್ತು ಅಗ್ನಿಯೂ ಹತಕಲ್ಮಶನಾಗಿ ಪರಮ ಸಂತಸವನ್ನು ಹೊಂದಿದನು.

## ಭಾರ್ಗವ ರುರುವು ಸರ್ಪಗಳ ವಿನಾಶದ ವ್ರತವನ್ನು ಕೈಗೊಂಡಿದುದು

ಭಾರ್ಗವ ಚ್ಯವನನು ಸುಕನ್ಯೆಯಿಂದ ಮಹಾತ್ಮ ದೀಪ್ತತೇಜಸ ಪ್ರಮತಿ ಎನ್ನುವ ಸುತನನ್ನು ಪಡೆದನು. ಪ್ರಮತಿಯು ಘೃತಾಚಿಯಲ್ಲಿ ರುರು ಎಂಬ ಹೆಸರಿನ ಮಗನನ್ನು ಪಡೆದನು. ರುರುವು ಪ್ರಮದ್ವರೆಯಲ್ಲಿ ಶುನಕನನ್ನು ಪಡೆದನು.

ಹಿಂದೆ ಮಹಾ ತಪೋವಿಧ್ಯಾಸಮನ್ವಿತ, ಸರ್ವ ಭೂತಹಿತರತ ಸ್ಥೂಲಕೇಶ ಎಂಬ ಖ್ಯಾತ ಋಷಿಯೋರ್ವನಿದ್ದನು. ಅದೇ ಸಮಯದಲ್ಲಿ ಮೇನಕೆಯು ಗಂಧರ್ವರಾಜ ವಿಶ್ವಾವಸುವಿನಿಂದ ಗರ್ಭವತಿಯಾಗಿದ್ದಳು. ಸಮಯಬಂದಾಗ ಅಪ್ಸರೆ ಮೇನಕೆಯು ಆ ಗರ್ಭವನ್ನು ಸ್ಥೂಲಕೇಶನ ಆಶ್ರಮದ ಬಳಿ ಬಿಟ್ಟಳು. ರೂಪದಲ್ಲಿ ಅಮರರ ಮಗುವಿನಂತೆ ಪ್ರಜ್ವಲಿಸುತ್ತಿರುವ ಆ ಕನ್ಯೆಯನ್ನು ನದೀತೀರದಲ್ಲಿ ಬಿಟ್ಟು ಅವಳು ಹೊರಟು ಹೋದಳು. ಮಹಾನ್ ಋಷಿ ಸ್ಥೂಲಕೇಶನು ವಿಜನ ನದೀತೀರದಲ್ಲಿ ಬಂಧುವರ್ಜಿತಳಾದ ಆ ತೇಜಸ್ವಿನಿಯನ್ನು ನೋಡಿದನು. ಮುನಿಶ್ರೇಷ್ಠ ಸ್ಥೂಲಕೇಶನು ಆ ಕನ್ಯೆಯನ್ನು ನೋಡಿ ಕೃಪಾವಿಷ್ಟನಾಗಿ ಅವಳನ್ನು ಕರೆದುಕೊಂಡು ಹೋಗಿ ಪೋಷಿಸಿದನು. ಅವನ ಆಶ್ರಮದಲ್ಲಿ ಆ ವರಾರೋಹೆ

ಶುಭೆಯು ಬೆಳೆದಳು. ಸರ್ವ ರೂಪಗುಣಗಳಲ್ಲಿ ಇತರರೆಲ್ಲರಿಗಿಂಥ ಶ್ರೇಷ್ಠಳಾಗಿದ್ದುದರಿಂದ ಆ ಮಹಾನ್ ಋಷಿಯು ಅವಳಿಗೆ ಪ್ರಮದ್ವರಾ ಎನ್ನುವ ಹೆಸರನ್ನಿತ್ತನು. ಆ ಆಶ್ರಮದ ಬಳಿಯಲ್ಲಿ ಪ್ರಮದ್ವರೆಯನ್ನು ನೋಡಿ ಧರ್ಮಾತ್ಮ ರುರುವು ಅವಳಲ್ಲಿ ಮದನಾನುಗತನಾದನು. ಮಿತ್ರರ ಮೂಲಕ ಈ ವಿಷಯವನ್ನು ತನ್ನ ತಂದೆ ಭಾರ್ಗವ ಪ್ರಮತಿಗೆ ತಿಳಿಸಿದನು ಮತ್ತು ಪ್ರಮತಿಯು ಸ್ಥೂಲಕೇಶನಲ್ಲಿ ಯಶಸ್ವಿನಿಯನ್ನು ಕೊಡುವಂತೆ ಕೇಳಿಕೊಂಡನು. ಕನ್ಯೆಯ ತಂದೆಯು ಪ್ರಮದ್ವರೆಯನ್ನು ರುರುವಿಗೆ ಕೊಡುವುದೆಂದು ನಿರ್ಧರಿಸಿ ಭಗದೇವತ (ಪೂರ್ವ ಪಾಲ್ಗುಣೀ) ನಕ್ಷತ್ರದಲ್ಲಿ ವಿವಾಹ ನಿಶ್ಚಯವಾಯಿತು.

ವಿವಾಹಕ್ಕೆ ಇನ್ನೂ ಕೆಲವು ದಿನಗಳಿರುವಾಗ ಆ ಕನ್ಯೆ ವರವರ್ಣಿನಿಯು ತನ್ನ ಸಖಿಗಳೊಂದಿಗೆ ಆಡುತ್ತಿದ್ದಳು. ಕಾಲಚೋದಿತಳಾದ ಅವಳು ಕಾಣದಹಾಗೆ ಸುರುಳಿಸುತ್ತಿ ಮಲಗಿದ್ದ ಹಾವೊಂದನ್ನು ಮೆಟ್ಟಿದಳು. ಕಾಲಧರ್ಮಕ್ಕೆ ತಕ್ಕಂತೆ ಅದು ತನ್ನ ವಿಷಭರಿತ ಹಲ್ಲುಗಳಿಂದ ಅವಳ ಕಾಲನ್ನು ಕಚ್ಚಿ ಕೆಳಗುರಿಳಿಸಿತು. ಅದರಿಂದ ಕಚ್ಚಲ್ಪಟ್ಟ ಅವಳು ತಕ್ಷಣವೇ ಮೂರ್ಛಿತಳಾಗಿ ಭೂಮಿಯಮೇಲೆ ಬಿದ್ದಳು, ಪರಿಸ್ಥಿತಿಯು ಅಪ್ರೇಕ್ಷಣೀಯವಾಗಿದ್ದರೂ ಅವಳ ಸೌಂದರ್ಯವು ಪ್ರೇಕ್ಷಣೀಯವಾಗಿಯೇ ಇತ್ತು. ಸರ್ಪವಿಷದಿಂದ ನೆಲದಮೇಲೆ ಮಲಗಿಕೊಂಡಿದ್ದ ಆ

ತನುಮಧ್ಯಮೆಯು ಇನ್ನೂ ಹೆಚ್ಚು ಮನೋಹರೆಯಾಗಿ ಕಾಣುತ್ತಿದ್ದಳು. ಪದ್ಮವರ್ಚಸಳಾದ ಅವಳು ಮೂರ್ಛಿತಳಾಗಿ ಭೂಮಿಯ ಮೇಲೆ ಬಿದ್ದುದನ್ನು ಅವಳ ತಂದೆ ಮತ್ತು ಅನ್ಯ ತಪಸ್ವಿಗಳು ನೋಡಿದರು. ಅಲ್ಲಿಗೆ ಸ್ವಸ್ತ್ಯಾತ್ರೇಯ, ಮಹಾಜಾನು, ಕುಶಿಕ, ಶಂಖಮೇಖಲ, ಭಾರದ್ವಾಜ, ಕೌಣಕುತ್ಸ, ಆರ್ಷ್ಟಿಷೇಣ, ಗೌತಮ, ಪುತ್ರ ಸಮೇತ ಪ್ರಮತಿ ಮೊದಲಾದ ವನವಾಸಿ ಕೃಪಾನ್ವಿತ ದ್ವಿಜವರರೆಲ್ಲರೂ ಬಂದರು. ಹಾವಿನ ವಿಷದಿಂದ ನೆಲದಮೇಲೆ ಮಲಗಿದ್ದ ಕನ್ಯೆಯನ್ನು ನೋಡಿ, ಕೃಪಾವಿಷ್ಟರಾಗಿ ಎಲ್ಲರೂ ರೋದಿಸಿದರು. ಬಹು ಆರ್ತನಾದ ರುರುವು ಅಲ್ಲಿಂದ ಹೊರಟು ಹೋದನು.

ಅಲ್ಲಿ ಎಲ್ಲ ಬ್ರಾಹ್ಮಣರೂ ಸೇರಿರುವಾಗ ದುಃಖಿತ ರುರುವು ದಟ್ಟ ವನವನ್ನು ಸೇರಿ ಜೋರಾಗಿ ರೋದಿಸಿದನು. ಶೋಕಪೀಡಿತನಾದ ಅವನು ಕರುಣದಾಯಕವಾಗಿ ಬಹಳಷ್ಟು ವಿಲಪಿಸಿದನು. ಪ್ರಿಯೆ ಪ್ರಮದ್ವರೆಯ ಕುರಿತು ಚಿಂತಿಸುತ್ತಾ ಶೋಕಭರಿತನಾಗಿ ಹೇಳಿದನು:

> “ಭೂಮಿಯ ಮೇಲೆ ಮಲಗಿರುವ ಆ ತನ್ವಂಗಿಯು ನನ್ನ ಶೋಕವನ್ನು ಹೆಚ್ಚಿಸುತ್ತಿದ್ದಾಳೆ. ಸರ್ವ ಬಾಂಧವರಿಗೆ ಇದಕ್ಕಿಂತ ಹೆಚ್ಚಿನ ದುಃಖವು ಯಾವುದಿರಬಹುದು? ನಾನು ಎಂದಾದರೂ ದಾನವನ್ನಿತ್ತಿದ್ದರೆ, ತಪಸ್ಸನ್ನು ತಪಿಸಿದ್ದರೆ, ಗುರುಗಳನ್ನು ಆರಾಧಿಸಿದ್ದರೆ, ಇವುಗಳೆಲ್ಲವುಗಳ ಪುಣ್ಯವು ನನ್ನ ಪ್ರಿಯೆಯನ್ನು ಪುನಃ ಬದುಕಿಸಲಿ. ಜನ್ಮ ಪ್ರಭೃತಿ ನಾನು

ನನ್ನನ್ನು ಧೃಢವ್ರತನನ್ನಾಗಿರಿಸಿ ಕೊಂಡಿದ್ದರೆ ಭಾಮಿನಿ ಪ್ರಮದ್ವರೆಯು ಈಗಲೇ ಎದ್ದು ನಿಲ್ಲಲಿ.”

ಆಗ ದೇವದೂತನು ಹೇಳಿದನು:

“ರುರು ! ದುಃಖದಿಂದ ಹೇಳುತ್ತಿರುವ ನಿನ್ನ ಈ ಮಾತುಗಳು ಎಂದೂ ಸತ್ಯವಾಗಲಾರವು. ಆಯುಷ್ಯ ಕಳೆದ ಮರ್ತ್ಯರ್ಯಾರೂ ಪುನಃ ಜೀವಿತರಾಗುವುದಿಲ್ಲ. ಗಂಧರ್ವ-ಅಪ್ಸರೆಯರ ಈ ಮಗಳ ಆಯುಷ್ಯರೇಖೆಯು ಮುಗಿದುಹೋಗಿದೆ. ಆದುದರಿಂದ ನಿನ್ನ ಮನಸ್ಸನ್ನು ಶೋಕಸಾಗರದಲ್ಲಿ ಮುಳುಗಿಸಬೇಡ. ಆದರೆ ಹಿಂದೆ ಮಹಾತ್ಮ ದೇವತೆಗಳ ವಿಹಿತ ಉಪಾಯವೊಂದಿದೆ. ಅದನ್ನು ಮಾಡಲು ನಿನಗೆ ಇಷ್ಟವಿದ್ದರೆ ನೀನು ಪ್ರಮದ್ವರೆಯನ್ನು ಮರಳಿ ಪಡೆಯಬಹುದು.”

ರುರುವು ಹೇಳಿದನು:

“ಖೇಚರ ! ದೇವರು ಮಾಡಿಟ್ಟಿರುವ ಉಪಾಯವು ಯಾವುದು ಹೇಳು. ನಿನ್ನಿಂದ ಕೇಳಿ ಅದನ್ನೇ ಮಾಡುತ್ತೇನೆ.”

ದೇವದೂತನು ಹೇಳಿದನು:

“ಭೃಗುನಂದನ ರುರು ! ನಿನ್ನ ಆಯುಷ್ಯದ ಅರ್ಧವನ್ನು ಈ ಕನ್ಯೆಗೆ ನೀಡಿದರೆ ನಿನ್ನ ಭಾರ್ಯೆ ಪ್ರಮದ್ವರೆಯು ಎದ್ದು

ನಿಲ್ಲುವಳು.”

ರುರುವು ಹೇಳಿದನು:

“ಖೇಚರರೋತ್ತಮ! ನನ್ನ ಆಯಸ್ಸಿನಲ್ಲಿ ಅರ್ಧವನ್ನು ಈ ಕನ್ಯೆಗೆ ಕೊಡುತ್ತೇನೆ. ಶೃಂಗಾರರೂಪಾಭರಣೆ ನನ್ನ ಪ್ರಿಯೆಯು ಏಳಲಿ.”

ನಂತರ ಸತ್ತಮ ಗಂಧರ್ವ ರಾಜ ಮತ್ತು ದೇವದೂತರೀರ್ವರೂ ಧರ್ಮರಾಜನ ಬಳಿ ಹೋಗಿ ಹೇಳಿದರು:

“ಧರ್ಮರಾಜ! ನೀನು ಬಯಸಿದರೆ ಮೃತಳಾದ ರುರುವಿನ ಭಾರ್ಯೆ ಕಲ್ಯಾಣಿ ಪ್ರಮದ್ವರೆಯು ಅವನ ಅರ್ಧ ಆಯುಸ್ಸನ್ನು ಪಡೆದು ಎದ್ದು ನಿಲ್ಲಲಿ.”

ಧರ್ಮರಾಜನು ಹೇಳಿದನು:

“ದೇವದೂತರೇ! ನಿಮ್ಮ ಇಚ್ಛೆಯಂತೆ ರುರುವಿನ ಅರ್ಧ ಆಯುಸ್ಸನ್ನು ಪಡೆದು ರುರು ಭಾರ್ಯೆ ಪ್ರಮದ್ವರೆಯು ಎದ್ದು ನಿಲ್ಲಲಿ.”

ಹೀಗೆ ಹೇಳಿದ ನಂತರ ವರವರ್ಣಿನಿ ಕನ್ಯೆ ಪ್ರಮದ್ವರೆಯು ರುರುವಿನ ಅರ್ಧ ಆಯುಸ್ಸನ್ನು ಪಡೆದು ನಿದ್ದೆಯಿಂದ ಎದ್ದವಳಂತೆ ಎಚ್ಚೆತ್ತಳು. ಉತ್ತಮತೇಜಸ ರುರುವು ಅರ್ಧವನ್ನು ಭಾರ್ಯೆಗೆ ಕೊಟ್ಟು ತನ್ನ ದೀರ್ಘ ಆಯುಸ್ಸನ್ನು ಕಡಿಮೆಮಾಡಿಕೊಂಡಿದ್ದುದು ಮುಂದೆ

ಕಾಣಿಸಿಕೊಂಡಿತು. ನಂತರ ಒಳ್ಳೆಯ ದಿನದಲ್ಲಿ ಅವರೀರ್ವರ ತಂದೆಯಂದಿರು ಸಂತೋಷದಿಂದ ಅವರ ವಿವಾಹವನ್ನು ನೆರವೇರಿಸಿದರು. ಅವರೀರ್ವರೂ ಪರಸ್ಪರರ ಹಿತೈಷಿಗಳಾಗಿ ರಮಿಸಿದರು.

ಪದ್ಮದ ಎಸಳುಗಳಂತೆ ಹೊಳೆಯುತ್ತಿದ್ದ ಭಾರ್ಯೆಯನ್ನು ಬಹಳ ಕಷ್ಟದಿಂದ ಪಡೆದ ಧೃತವ್ರತನು ಸರ್ಪಗಳ ವಿನಾಶದ ವ್ರತವನ್ನು ಕೈಗೊಂಡನು. ಎಲ್ಲಿ ಯಾವಾಗ ಸರ್ಪಗಳನ್ನು ನೋಡಿದರೂ ಅತೀವ ಕೋಪಸಮನ್ವಿತನಾಗಿ ಕೈಗೆ ದೊರಕಿದ ಆಯುಧವನ್ನು ಹಿಡಿದು ಕೊಲ್ಲ ತೊಡಗಿದನು. ಒಮ್ಮೆ ವಿಪ್ರ ರುರುವು ಒಂದು ಮಹಾರಣ್ಯಕ್ಕೆ ಬಂದಾಗ ಅಲ್ಲಿ ಮಲಗಿರುವ ವೃದ್ಧ ಡುಂಡುಭವೊಂದನ್ನು ನೋಡಿದನು. ರೋಷಗೊಂಡ ವಿಪ್ರನು ಅದನ್ನು ಕೊಲ್ಲಲು ಕಾಲದಂಡದಂತಿರುವ ತನ್ನ ದಂಡವನ್ನು ಮೇಲೆತ್ತಿದಾಗ, ಡುಂಡುಭವು ಹೇಳಿತು:

> “ತಪೋಧನ! ನಾನು ನಿನಗೆ ಯಾವ ಅಪರಾಧವನ್ನೂ ಎಸಗಿಲ್ಲ. ಸಿಟ್ಟಿನಿಂದ ಏಕೆ ನನ್ನನ್ನು ಕೊಲ್ಲಲು ತೊಡಗಿರುವೆ?”

ರುರುವು ಹೇಳಿದನು:

> “ನನ್ನ ಪ್ರಾಣಸಮ ಪತ್ನಿಯನ್ನು ಹಿಂದೆ ಒಂದು ಸರ್ಪವು ಕಚ್ಚಿತ್ತು. ಆ ಸಮಯದಲ್ಲಿ ನಾನು ನೋಡಿದ ಸರ್ಪಗಳನ್ನೆಲ್ಲ

ಕೊಲ್ಲುತ್ತೇನೆಂಬ ಘೋರ ನಿಶ್ಚಯವೊಂದನ್ನು ಕೈಗೊಂಡಿದ್ದೆ. ಆದುದರಿಂದ ನಿನ್ನನ್ನು ಕೊಂದು ಜೀವನ ಮುಕ್ತಿಯನ್ನು ಕೊಡುತ್ತಿದ್ದೇನೆ."

ಡುಂಡುಭವು ಹೇಳಿತು:

"ವಿಪ್ರ! ಮಾನವರನ್ನು ಕಚ್ಚುವ ಸರ್ಪಗಳೇ ಬೇರೆ. ಆದುದರಿಂದ ನೀನು ಡುಂಡುಭಗಳನ್ನು ಹಿಂಸಿಸುವುದು ಸರಿಯಲ್ಲ. ಡುಂಡುಭ ಮತ್ತು ಹಾವುಗಳು ಒಂದೇ ಎಂದು ಭಾವಿಸಿದರೂ ಸುಖವನ್ನು ಅನುಭವಿಸುವಾಗ ಅವುಗಳು ಬೇರೆ ಬೇರೆಯೇ. ಡುಂಡುಭ ಮತ್ತು ಹಾವುಗಳು ಸ್ವಭಾವದಲ್ಲಿ ಬೇರೆ ಬೇರೆಯಾಗಿದ್ದರೂ ದುಃಖವನ್ನು ಅನುಭವಿಸುವಾಗ ಒಂದೇ ಎಂದು ಪರಿಗಣಿಸಲ್ಪಡುತ್ತವೆ. ನೀನು ಧರ್ಮವನ್ನು ತಿಳಿದಿದ್ದೀಯೆ. ಡುಂಡುಭಗಳನ್ನು ಹಿಂಸಿಸುವುದು ನಿನಗೆ ಸರಿಯಲ್ಲ."

ಸರ್ಪದ ಈ ಮಾತುಗಳನ್ನು ಕೇಳಿ ಋಷಿ ರುರುವು ಭಯಸಂವಿಘ್ನನಾದ ಡುಂಡುಭನನ್ನು ಕೊಲ್ಲಲಿಲ್ಲ. ಅವನನ್ನು ಶಾಂತಗೊಳಿಸುತ್ತಾ ಭಗವಾನ್ ರುರುವು ಕೇಳಿದನು:

"ಭುಜಗ! ನೀನು ಯಾರು ಮತ್ತು ಹೇಗೆ ಈ ರೂಪವನ್ನು ಹೊಂದಿದೆ ಎನ್ನುವುದನ್ನು ನನಗೆ ಹೇಳು."



ಡುಂಡುಭವು ಹೇಳಿತು:

“ರುರು! ಹಿಂದೆ ನಾನು ಸಹಸ್ರಪಾದ ಎಂಬ ಹೆಸರಿನ ಋಷಿಯಾಗಿದ್ದೆ. ಒಬ್ಬ ವಿಪ್ರನ ಶಾಪದಿಂದ ಭುಜಗತ್ವವನ್ನು ಹೊಂದಿದೆನು.”

ರುರುವು ಹೇಳಿದನು:

“ಭುಜಗೋತ್ತಮ! ಯಾವ ಕಾರಣಕ್ಕಾಗಿ ಕೃದ್ಧ ದ್ವಿಜನಿಂದ ನೀನು ಶಪಿಸಲ್ಪಟ್ಟೆ? ಎಷ್ಟು ಕಾಲದವರೆಗೆ ನೀನು ಈ ರೀತಿ ಇರಬೇಕಾಗುತ್ತದೆ?”

ಡುಂಡುಭವು ಹೇಳಿತು:

“ಹಿಂದೆ ಖಗಮ ಎಂಬ ಹೆಸರಿನ, ಸದಾ ಸತ್ಯವನ್ನೇ ನುಡಿಯುವ ತಪೋಬಲಸಮನ್ವಿತ ದ್ವಿಜನೋರ್ವನು ನನ್ನ ಸಖನಾಗಿದ್ದನು. ಬಾಲ್ಯದಲ್ಲಿ ಆಡುತ್ತಿರುವಾಗ ನಾನು ಒಂದು ಹುಲ್ಲುಕಡ್ಡಿಯನ್ನು ಹಾವನ್ನಾಗಿ ಮಾಡಿ ಅಗ್ನಿಹೋತ್ರದಲ್ಲಿ ಪ್ರಸಕ್ತನಾಗಿದ್ದ ಅವನನ್ನು ಹೆದರಿಸಿದಾಗ ಅದನ್ನು ನೋಡಿದ ಅವನು ಮೂರ್ಛಿತನಾದನು. ಪುನಃ ಪ್ರಜ್ಞೆಬಂದ ನಂತರ ಆ ಸತ್ಯವಾದಿ ಸಂಶಿತವ್ರತ ತಪೋಧನನು ಕೋಪದಿಂದ ನಿಹೃದಯಿಯಾಗಿ ಹೇಳಿದನು:

“ಜೀವವಿಲ್ಲದ ಸರ್ಪದಿಂದ ನನ್ನನು ಹೇಗೆ

ಹೆದರಿಸಿದೆಯೋ ಹಾಗೆ ನೀನು ನನ್ನ
ಕೋಪದಿಂದಾಗಿ ಹಾನಿಕಾರಕವಲ್ಲದ
ಸರ್ಪವಾಗುತ್ತೀಯೆ!"

ಆ ತಪೋಧನನ ತಪಃಶಕ್ತಿಯನ್ನು ಅರಿತ ನಾನು ಉದ್ವಿಗ್ನ ಹೃದಯನಾಗಿ ದುಃಖದಿಂದ ತಲೆಬಾಗಿ ಪ್ರಾಂಜಲೀ ಬದ್ಧನಾಗಿ ನಮಸ್ಕರಿಸಿ ಹೇಳಿದೆನು:

"ಸಖನನ್ನು ಮೋಡಿಮಾಡಲೆಂದು ನಾನು ಹೀಗೆಲ್ಲ
ಮಾಡಿದೆ. ಬ್ರಾಹ್ಮಣ! ಆದ್ದರಿಂದ ನನ್ನನ್ನು ಕ್ಷಮಿಸಿ
ಈ ಶಾಪವನ್ನು ಹಿಂತೆಗೆದುಕೊಳ್ಳಬೇಕು."

ದುಃಖಿತ ಮತ್ತು ಉದ್ವಿಗ್ನಚೇತಸ ನನ್ನನ್ನು ನೋಡಿದ ಆ ತಪೋಧನನು ಅನುಕಂಪಗೊಂಡು ಬಿಸಿಯುಸಿರು ಬಿಡುತ್ತಾ ಹೇಳಿದನು:

"ನಾನು ಹೇಳಿದ್ದುದು ಸುಳ್ಳಾಗುವುದಿಲ್ಲ.
ಹೇಗಾದರೂ ಅದು ನಡೆದೇ ನಡೆಯುತ್ತದೆ. ಈಗ
ನಾನಾಡುವ ಮಾತನ್ನು ಸರಿಯಾಗಿ ಕೇಳಿ ಇದನ್ನು
ನಿನ್ನ ಹೃದಯದಲ್ಲಿ ಇರಿಸಿಕೋ. ರುರು ಎಂಬ
ಹೆಸರಿನ ಪ್ರಮತಿಯ ಮಗನನ್ನು ನೀನು
ನೋಡಿದಾಗ ಶಾಪವಿಮುಕ್ತನಾಗುತ್ತೀಯೆ."

ಆ ಖ್ಯಾತ ಪ್ರಮತಿಯ ಮಗನಾದ ರುರುವೇ ನೀನು. ಈಗ ನಾನು ನನ್ನ ಮೊದಲಿನ ರೂಪವನ್ನು ಪಡೆದಿದ್ದೇನೆಯಾದ್ದರಿಂದ ನಿನ್ನ ಹಿತಕ್ಕಾಗಿ ನಾನು ಹೇಳುತ್ತಿದ್ದೇನೆ. ಅಹಿಂಸೆಯೇ ಪರಮ ಧರ್ಮ. ಯಾವುದೇ ಜೀವಿಯ ಪ್ರಾಣಾಪಹರಣ ಮಾಡಬಾರದು. ಆದ್ದರಿಂದ ಬ್ರಾಹ್ಮಣನಾದವನು ಎಂದೂ ಇತರರ ಪ್ರಾಣವನ್ನು ಕೊನೆಗೊಳಿಸಬಾರದು ಮತ್ತು ಹಿಂಸಿಸಬಾರದು ಎನ್ನುತ್ತಾರೆ. ಒಂದು ಶ್ರುತಿಯ ಪ್ರಕಾರ ಬ್ರಾಹ್ಮಣನು ಸದಾ ಸೌಮ್ಯನಾಗಿರಬೇಕು ವೇದವೇದಾಂಗಗಳನ್ನು ತಿಳಿದವನಾದ ಅವನು ಸರ್ವಭೂತಗಳಿಗೆ ಅಭಯವನ್ನು ನೀಡುವಂಥವನಾಗಿರಬೇಕು. ಅಹಿಂಸೆ, ಸತ್ಯ ವಚನ, ಕ್ಷಮೆ ಮತ್ತು ವೇದಗಳನ್ನು ಅನುಸರಿಸುವುದು ಇವೆಲ್ಲವೂ ನಿಶ್ಚಯವಾಗಿ ಬ್ರಾಹ್ಮಣನ ಪರಮ ಧರ್ಮ. ನೀನು ಈಗ ಅನುಸರಿಸುತ್ತಿರುವ ಧರ್ಮವು ನಿನ್ನದಲ್ಲ. ಕ್ಷತ್ರಿಯನ ಧರ್ಮ. ದಂಡಧಾರಣ ಮಾಡುವುದು, ಕ್ರೂರಿಯಾಗಿರುವುದು ಮತ್ತು ಪ್ರಜೆಗಳನ್ನು ಪರಿಪಾಲಿಸುವುದು ಇವೆಲ್ಲವೂ ಕ್ಷತ್ರಿಯನ ಕರ್ಮಗಳು. ಹಿಂದೆ ಧರ್ಮಾತ್ಮ ಜನಮೇಜಯನು ಸರ್ಪಗಳನ್ನು ಹಿಂಸಿಸಿದುದರ ಕುರಿತು ನನ್ನನ್ನು ಕೇಳು. ಸರ್ಪಸತ್ರದಲ್ಲಿ ಭೀತಿಗೊಂಡ ಸರ್ಪಗಳನ್ನು ತಪೋವೀರ್ಯಬಲೋಪೇತ, ವೇದವೇದಾಂಗ ಪಾರಂಗತ,

ದ್ವಿಜಮುಖ್ಯ ಆಸ್ತೀಕನೆಂಬ ಬ್ರಾಹ್ಮಣನು ರಕ್ಷಿಸಿದನು.”

ರುರುವು ಹೇಳಿದನು:

“ದ್ವಿಜಸತ್ತಮ! ಕ್ಷತ್ರಿಯ ಜನಮೇಜಯನು ಸರ್ಪಗಳನ್ನು ಹೇಗೆ ಮತ್ತು ಯಾವ ಕಾರಣಕ್ಕಾಗಿ ಹಿಂಸಿಸಿದನು? ಆ ಪನ್ನಗಗಳು ಏಕೆ ಆಸ್ತೀಕನಿಂದ ರಕ್ಷಿಸಲ್ಪಟ್ಟವು ವಿವರಿಸು. ಏನನ್ನೂ ಬಿಡದೇ ಕೇಳಲು ಇಚ್ಛಿಸುತ್ತೇನೆ.”

ಋಷಿಯು ಹೇಳಿದನು:

“ರುರು! ಬ್ರಾಹ್ಮಣರು ಕಥೆಯನ್ನು ಹೇಳುವಾಗ ನೀನು ಮಹತ್ತರ ಆಸ್ತೀಕಚರಿತವನ್ನು ಸಂಪೂರ್ಣವಾಗಿ ಕೇಳುತ್ತೀಯೆ”

ಎಂದು ಹೇಳಿ ಅವನು ಅಂತರ್ಧಾನನಾದನು.

ರುರುವು ಆ ಋಷಿಗಾಗಿ ವನವನ್ನೆಲ್ಲಾ ಹುಡುಕಿದನು. ಹುಡುಕಾಡಿ ಬಳಲಿದ ಅವನು ಮೂರ್ಛಿತನಾಗಿ ನೆಲದ ಮೇಲೆ ಬಿದ್ದನು. ಎಚ್ಚೆತ್ತ ರುರುವು ತನ್ನ ತಂದೆಗೆ ಆ ಕಥೆಯನ್ನು ಹೇಳಲು ಕೇಳಿಕೊಂಡನು. ಆಗ ಅವನ ತಂದೆಯು ಆ ಕಥೆಯನ್ನು ಸಂಪೂರ್ಣವಾಗಿ ಹೇಳಿದನು.

## ಜನಮೇಜಯನ ಯಜ್ಞದಲ್ಲಿ ಸುಟ್ಟುಹೋಗಿ ಎಂದು ಸರ್ಪಗಳಿಗೆ ತಾಯಿ ಕದ್ರುವಿನ ಶಾಪ

ಹಿಂದೆ ದೇವಯುಗದಲ್ಲಿ ಪ್ರಜಾಪತಿ ಬ್ರಹ್ಮನಿಗೆ ಈರ್ವರು ರೂಪವತಿ ಶುಭರೂ ಅನಘರೂ ಆದ ಸುತೆಯರಿದ್ದರು. ಅವರೇ ಕಶ್ಯಪನ ಭಾರ್ಯೆಯರಾದ ಕದ್ರು ಮತ್ತು ವಿನತ. ಕದ್ರುವಿನ ಮಕ್ಕಳು ಸಾವಿರ ನಾಗಗಳು ಮತ್ತು ವಿನತೆಯ ಮಕ್ಕಳು ಅರುಣ ಮತ್ತು ಗರುಡ. ಒಮ್ಮೆ ಭಗಿನಿಯರೀರ್ವರು ಸಮುದ್ರ ಮಥನದ ಸಮಯದಲ್ಲಿ ಹುಟ್ಟಿದ ಸರ್ವದೇವಗಣ ಪೂಜಿತ, ಹೃಷ್ಟರೂಪೀ, ಅನುತ್ತಮ, ದಿವ್ಯ, ಸರ್ವಲಕ್ಷಣ ಲಕ್ಷಿತ, ಶ್ರೀಮಂತ, ಸದಾ ಯೌವನಿ, ಅಶ್ವಗಳಲ್ಲಿಯೇ ಉತ್ತಮ, ಶ್ರೇಷ್ಠ, ಮಹಾಘಬಲಶಾಲೀ ಅಶ್ವರತ್ನಉಚ್ಛೈಶ್ರವಸುವು ತಮ್ಮ ಕಡೆ ಬರುತ್ತಿರುವುದನ್ನು ಕಂಡರು. ಅದನ್ನು ವೀಕ್ಷಿಸುತ್ತಾ ಕದ್ರುವು ವಿನತೆಯನ್ನು

> "ಭದ್ರೇ! ಆ ಉಚ್ಛೈಶ್ರವಸ್ಸು ಯಾವ ವರ್ಣದ್ದು ಬೇಗ ಹೇಳು"

ಎಂದು ಕೇಳಿದಳು. ಅದಕ್ಕೆ ವಿನತೆಯು

> "ಈ ಅಶ್ವರಾಜನು ಬಿಳಿಯಾಗಿದ್ದಾನೆ. ಶುಭೇ! ನಿನ್ನ ಅಭಿಪ್ರಾಯವೇನು? ಇದರ ಬಣ್ಣವು ಯಾವುದು ಎಂದು ನೀನು ಹೇಳು. ಅದರ ಮೇಲೆ ಪಣವಿಡೋಣ!"

ಎಂದಳು. ಆಗ ಕದ್ರುವು

> "ಶುಚಿಸ್ಮಿತೇ! ಈ ಕುದುರೆಯ ಬಾಲವು ಕಪ್ಪು ಬಣ್ಣದ್ದು ಎಂದು ನನ್ನ ಅನಿಸಿಕೆ. ಇದರಲ್ಲಿ ಸೋತವರು ಇನ್ನೊಬ್ಬರ ದಾಸಿಯಾಗಬೇಕು!"



ಎಂದು ಪಣವನ್ನಿಟ್ಟಳು. ಈ ರೀತಿ ಒಬ್ಬರಿಗೊಬ್ಬರು ದಾಸಿಯಾಗುವ ಪಣವನ್ನು ತೊಟ್ಟು

"ನಾಳೆ ಬಂದು ಕುದುರೆಯನ್ನು ನೋಡೋಣ!" ಎಂದು ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಮೋಸಮಾಡುವ ಉದ್ದೇಶದಿಂದ ಕದ್ರುವು ತನ್ನ ಸಹಸ್ರ ಪುತ್ರರಿಗೆ

"ನಾನು ದಾಸಿಯಾಗಬಾರದೆಂದಾದರೆ ತಕ್ಷಣವೇ ಹೋಗಿ ಆ ಅಶ್ವದ ಬಾಲಕ್ಕೆ ಸುತ್ತಿಕೊಂಡು ಅದು ಕಪ್ಪಾಗಿ ಕಾಣುವಂತೆ ಮಾಡಿ!"

ಎಂದು ಆಜ್ಞಾಪಿಸಿದಳು. ಅವಳ ಮಾತನ್ನು ಪರಿಪಾಲಿಸಲು ಇಚ್ಛೆ ತೋರಿಸದೇ ಇದ್ದ ಆ ಭುಜಂಗಗಳಿಗೆ ಅವಳು

"ಧೀಮಂತ ಪಾಂಡವೇಯ ರಾಜರ್ಷಿ ಜನಮೇಜಯನು ನಡೆಸುವ ಸರ್ಪಸತ್ರದಲ್ಲಿ ನಿಮ್ಮೆಲ್ಲರನ್ನೂ ಪಾವಕನು ಸುಟ್ಟು ಭಸ್ಮಮಾಡುವನು!"

ಎಂದು ಶಾಪವನ್ನಿತ್ತಳು. ದೈವಾಧೀನ ಕದ್ರುವಿನಿಂದ ಹೊರಬಂದ ಈ ಅತಿ ಕ್ರೂರ ಶಾಪವನ್ನು ಸ್ವಯಂ ಪಿತಾಮಹನೂ ಕೇಳಿದನು. ಆದರೆ ಸರ್ಪಗಳು ವೃದ್ಧಿಯಾಗುತ್ತಿರುವುದನ್ನು ನೋಡಿ ಪ್ರಜೆಗಳ ಹಿತಕ್ಕಾಗಿ ಅವನು ಎಲ್ಲ ದೇವಗಣಗಳ ಸಹಿತ ಆ ಶಾಪವನ್ನು

ಅನುಮೋದಿಸಿದನು. ಅತ್ಯಂತ ಪರಿಣಾಮಕಾರಿಯಾದ ಅವರ ವಿಷ, ಅವರ ಮಹಾ ಶಕ್ತಿ, ಕಚ್ಚುವ ಸ್ವಭಾವಗಳನ್ನು ಪರಿಗಣಿಸಿದರೆ ಪ್ರಜೆಗಳ ಹಿತಕ್ಕೆ ಇದು ಒಳ್ಳೆಯದೇ ಆಯಿತು ಎಂದು ಅವನು ಮಹಾತ್ಮ ಕಾಶ್ಯಪನಿಗೆ ವಿಷಹರಣೀ ವಿದ್ಯೆಯನ್ನು ಪ್ರದಾನಿಸಿದನು.

## ನಾಗಗಳ ಸಮಾಲೋಚನೆ

ತಾಯಿಯ ಶಾಪವನ್ನು ಕೇಳಿದ ತಕ್ಷಣವೇ ಪನ್ನಗ ಸತ್ತಮ ವಾಸುಕಿಯು ಈ ಶಾಪವು ಘಟಿಸದ ಹಾಗೆ ಏನು ಮಾಡಬೇಕು ಎಂದು ಚಿಂತಿಸತೊಡಗಿದನು. ಆಗ ಅವನು ಧರ್ಮಪರಾಯಣ ಐರಾವತನೇ ಮೊದಲಾದ ತನ್ನ ಸರ್ವ ಸಹೋದರರೊಡನೆ ಮಂತ್ರಾಲೋಚನೆ ಮಾಡಿದನು:

> "ಅನಘರೇ! ನಮ್ಮ ಮೇಲಿರುವ ಶಾಪದ ಕುರಿತು ನಿಮಗೆಲ್ಲ ತಿಳಿದೇ ಇದೆ. ಈ ಶಾಪದಿಂದ ಮೋಕ್ಷವನ್ನು ಹೊಂದಲು ಪ್ರಯತ್ನವನ್ನೇನಾದರೂ ಮಾಡಬೇಕು. ಎಲ್ಲ ರೀತಿಯ ಶಾಪಗಳಿಗೆ ವಿಮೋಚನೆ ಎನ್ನುವುದು ಇದೆ ಎಂದು ತಿಳಿದಿದ್ದೇವೆ. ಆದರೆ ತಾಯಿಯ ಅಭಿಶಾಪಕ್ಕೆ ಮೋಕ್ಷವೇ ಇಲ್ಲವೆಂದು ಹೇಳುತ್ತಾರೆ. ಅವ್ಯಯ, ಅಪ್ರಮೇಯ, ಮತ್ತು ಸತ್ಯನ ಮುಂದೆಯೇ ಈ ಶಾಪವನ್ನು ಉಚ್ಛರಿಸಲಾಯಿತು ಎಂದು ತಿಳಿದು ನನ್ನ ಹೃದಯವು ನಡುಗುತ್ತಿದೆ. ನಮ್ಮೆಲ್ಲರ ವಿನಾಶವು ಹತ್ತಿರವಾಗುತ್ತಿರಬೇಕು. ಇಲ್ಲವಾದರೆ ಆ

ಅವ್ಯಯ ದೇವನು ಈ ರೀತಿ ಶಪಿಸುವುವವಳನ್ನು ತಡೆಯುತ್ತಿದ್ದ. ಆದ್ದರಿಂದ ಹೆಚ್ಚು ಕಾಲ ಹರಣ ಮಾಡದೇ ಸರ್ವ ನಾಗಗಳ ಒಳಿತಿನ ಕುರಿತು ಮಂತ್ರಾಲೋಚನೆ ಮಾಡೋಣ. ಸರ್ಪಗಳ ವಿನಾಶಹೇತುವಾಗುವ ಜನಮೇಜಯನ ಆ ಯಜ್ಞವೇ ನಡೆಯದಂತೆ ಏನನ್ನಾದರೂ ಮಾಡಬೇಕು."

ಈ ಮಾತುಗಳನ್ನು ಕೇಳಿ ಅಲ್ಲಿ ನೆರೆದಿದ್ದ ಕದ್ರುವಿನ ಮಂತ್ರಬುದ್ಧಿವಿಶಾರದ ಮಕ್ಕಳು ತಮ್ಮ ತಮ್ಮ ಸೂಚನೆಗಳನ್ನಿತ್ತರು. ಅವರಲ್ಲಿ ಒಬ್ಬ ನಾಗನು ಹೇಳಿದನುಃ

"ನಾವು ಬ್ರಾಹ್ಮಣ ವೇಷ ಧರಿಸಿ ಜನಮೇಜಯನಲ್ಲಿ ಹೋಗಿ ಈ ಯಜ್ಞವನ್ನು ಕೈಗೊಳ್ಳಬೇಡ ಎಂದು ಬೇಡಿಕೊಳ್ಳೋಣ."

ಇತರ ನಾಗಗಳು, ತಮ್ಮನ್ನು ತಾವೇ ಪಂಡಿತರೆಂದು ಪರಿಗಣಿಸಿ ಹೇಳಿದರುಃ

"ನಾವೆಲ್ಲರೂ ಅವನ ಸುಸಮ್ಮತಿಗಳನ್ನೀಯುವ ಮಂತ್ರಿಗಳಾಗೋಣ. ಆಗ ಅವನು ಸರ್ವ ಕಾರ್ಯ ವಿಷಯಗಳಲ್ಲಿ ನಮ್ಮ ಸಲಹೆಗಳನ್ನು ಕೇಳುತ್ತಾನೆ. ಆಗ ಬುದ್ಧಿಯನ್ನು ಬಳಸಿ ಈ ಯಜ್ಞವು ನಡೆಯದಂತೆ ನೋಡಿಕೊಳ್ಳಬಹುದು. ಬುದ್ಧಿವಂತರಲ್ಲಿ ಶ್ರೇಷ್ಠ ಆ ರಾಜನು ಯಜ್ಞದ ವಿಷಯದಲ್ಲಿ ನಮ್ಮ ಅಭಿಪ್ರಾಯಗಳನ್ನು ಕೇಳಿಯೇ

ಕೇಳುತ್ತಾನೆ. ಆಗ ಅದನ್ನು ಮಾಡಬೇಡ ಎಂದು ಹೇಳೋಣ. ಇಹದಲ್ಲಿಯೂ ಪರದಲ್ಲಿಯೂ ಅದರಿಂದುಂಟಾಗುವ ದಾರುಣ ದೋಷಗಳನ್ನು ತೋರಿಸಿಕೊಡೋಣ. ಇದರ ಕಾರಣ-ಪರಿಣಾಮಗಳೆರಡನ್ನೂ ತಿಳಿಸಿ ಹೇಳಿ ಯಜ್ಞವು ನಡೆಯದಂತೆ ಮಾಡೋಣ. ಅಥವಾ ನಮ್ಮಲ್ಲೊಬ್ಬ ನಾಗನು ರಾಜಕಾರ್ಯಹಿತರತ ಸರ್ಪಸತ್ರದ ವಿಧಾನವನ್ನು ತಿಳಿದಿರುವ, ಕ್ರತುವಿನ ಉಪಾಧ್ಯಾಯನೊಬ್ಬನನ್ನು ಕಚ್ಚಿ ಸಾಯಿಸಲಿ. ಯಜ್ಞಕರ್ತೃವಾದ ಅವನು ತೀರಿಕೊಂಡಾಗ ಯಜ್ಞವು ಮುಂದುವರೆಯಲಾರದು. ಇಲ್ಲವಾದರೆ ಸರ್ಪಸತ್ರವನ್ನು ತಿಳಿದಿರುವ ಮತ್ತು ಮುಂದೆ ಅದರ ಋತ್ವಿಜರಾಗಬಲ್ಲ ಎಲ್ಲರನ್ನೂ ಕಚ್ಚಿ ಸಾಯಿಸೋಣ. ಈ ರೀತಿ ನಮ್ಮ ಉದ್ದೇಶವನ್ನು ಪೂರೈಸಿಕೊಳ್ಳಬಹುದು."

ಅಲ್ಲಿಯೇ ಮಂತ್ರಾಲೋಚನೆಯಲ್ಲಿ ಕುಳಿತಿದ್ದ ಒಬ್ಬ ಧರ್ಮಾತ್ಮ ನಾಗನು ಹೇಳಿದನು:

"ನಿನ್ನ ಈ ಮಾತುಗಳು ಅಬುದ್ಧಿಯವು. ಬ್ರಹ್ಮ ಹತ್ಯೆ ಒಳ್ಳೆಯದಲ್ಲ. ಸಮ್ಯಕ್ ಸದ್ಧರ್ಮವೇ ವ್ಯಸನದಲ್ಲಿರುವವರಿಗೆ ಉತ್ತಮ ಶಾಂತಿಯ ಮೂಲ. ಅಧರ್ಮವು ಇಡೀ ಜಗತ್ತನ್ನೇ ನಾಶಪಡಿಸುತ್ತದೆ."

ಇತರ ನಾಗಗಳು ಹೇಳಿದವು:

“ನಾವೆಲ್ಲರೂ ಮಿಂಚಿನಿಂದ ಕೂಡಿದ ಕಪ್ಪು ಮೋಡಗಳಾಗಿ ಜೋರಾಗಿ ಮಳೆಸುರಿಸಿ ಯಜ್ಞೇಶ್ವರನನ್ನು ಆರಿಸಿಬಿಡೋಣ.”

ಇನ್ನೊಬ್ಬ ಭುಜಗೋತ್ತಮನು ಹೇಳಿದನು:

“ರಾತ್ರಿಯಲ್ಲಿ ಹೋಗಿ ಯಜ್ಞದ ಆಹುತಿಗಳನ್ನು ತುಂಬಿಟ್ಟಿದ್ದ ಪಾತ್ರೆಗಳನ್ನು ಕದ್ದು ತರೋಣ. ಈ ರೀತಿ ಅದಕ್ಕೆ ವಿಘ್ನವುಂಟಾಗುತ್ತದೆ. ಅಥವಾ, ನೂರಾರು ಸಹಸ್ರಾರು ನಾಗಗಳು ಅಲ್ಲಿಗೆ ಹೋಗಿ ನೆರೆದಿದ್ದ ಜನರೆಲ್ಲರನ್ನೂ ಕಚ್ಚಿ ಭಯೋತ್ಪಾದನೆ ಮಾಡೋಣ. ಅಥವಾ ಮಡಿಯಾಗಿದ್ದ ಆಹಾರವನ್ನು ನಾಗಗಳ ಮೂತ್ರ ಮಲಗಳಿಂದ ಮೈಲಿಗೆ ಮಾಡಿ ಆಹಾರವೆಲ್ಲವನ್ನೂ ನಾಶಮಾಡೋಣ.”

ಇನ್ನು ಕೆಲವರು ಹೇಳಿದರು:

“ನಾವೆಲ್ಲರೂ ಋತ್ವಿಜರಾಗಿ ಅವನ ಬಳಿ ಹೋಗೋಣ. ದಕ್ಷಿಣೆಯನ್ನು ಕೊಡು ಎಂದು ಯಜ್ಞದಲ್ಲಿ ವಿಘ್ನವನ್ನು ಉಂಟುಮಾಡೋಣ. ಅವನು ನಮ್ಮ ವಶದಲ್ಲಿರುವುದರಿಂದ ನಾವು ಕೇಳಿದುದೆಲ್ಲವನ್ನೂ ಅವನು ಮಾಡುವನು.”

ಅಲ್ಲಿದ್ದವರಲ್ಲಿ ಇನ್ನೊಬ್ಬನು ಹೇಳಿದನು:

“ಜಲಕ್ರೀಡೆಯಲ್ಲಿ ತೊಡಗಿರುವಾಗ ರಾಜನನ್ನು ನಮ್ಮ

ಮನೆಗೆ ಕರೆದುಕೊಂಡು ಹೋಗಿ ಬಂಧನದಲ್ಲಿ ಇಡೋಣ.
ಹೀಗೆ ಯಜ್ಞವೇ ನಡೆಯುವುದಿಲ್ಲ."

ಅಲ್ಲಿ ಕೆಲವು ಸುಕೃತಕಾರಿ ನಾಗಗಳಿದ್ದರು. ಅವರು ಹೇಳಿದರು:

"ತಕ್ಷಣವೇ ಹೋಗಿ ಅವನನ್ನು ಹಿಡಿದು
ಕಚ್ಚಿಬಿಡುವುದರಿಂದ ಎಲ್ಲವೂ ಮುಕ್ತಾಯವಾಗುತ್ತದೆ.
ಒಮ್ಮೆ ಅವನು ಸತ್ತನೆಂದಾದರೆ ನಮ್ಮೆಲ್ಲರ ಕಷ್ಟಗಳ
ಮೂಲವೇ ಕಡಿದು ಹೋದಂತೆ. ಇದೇ ನಮ್ಮ ಅಂತಿಮ
ಸೂಚನೆ ಮತ್ತು ಇದಕ್ಕೆ ನಮ್ಮೆಲ್ಲರ ಸಮ್ಮತಿಯಿದೆ. ನಿನ್ನ
ಒಪ್ಪಿಗೆಯಿದ್ದರೆ ಕೂಡಲೇ ಇದನ್ನು
ಕಾರ್ಯಗತಗೊಳಿಸೋಣ."

ಹೀಗೆ ಹೇಳಿ ಅವರೆಲ್ಲರೂ ಪನ್ನಗೇಶ್ವರ ವಾಸುಕಿಯತ್ತ ನೋಡಿದರು.
ವಾಸುಕಿಯಾದರೂ ಸ್ವಲ್ಪ ಹೊತ್ತು ಯೋಚಿಸಿ ಆ ಭುಜಂಗರಿಗೆ
ಹೇಳಿದನು:

"ಭುಜಂಗಮರೇ! ನಿಮ್ಮ ಅಂತಿಮ ಸಲಹೆಯು
ಕಾರ್ಯಗತಗೊಳಿಸಲು ಯೋಗ್ಯವಾದುದಲ್ಲ. ಪನ್ನಗಗಳಲ್ಲಿ
ಯಾರ ಉಪಾಯವೂ ನನಗೆ ಇಷ್ಟವಾಗಲಿಲ್ಲ. ನಿಮ್ಮೆಲ್ಲರ
ಒಳಿತಿಗಾಗಿ ಈಗ ಮಾಡಲಿಕ್ಕಾದರೂ ಏನಿದೆ? ಇದೇ
ನನ್ನನ್ನು ಚಿಂತೆಗೊಳಪಡಿಸುತ್ತಿದೆ. ಒಳ್ಳೆಯದಾದರೂ
ನನ್ನದೇ ಕೆಟ್ಟದ್ದಾದರೂ ನನ್ನದೇ."

ಎಲ್ಲ ನಾಗಗಳು ಅವರವರ ಮಾತುಗಳನ್ನು ಹೇಳಿದುದನ್ನು ಮತ್ತು ವಾಸುಕಿಯ ಈ ಮಾತುಗಳನ್ನು ಕೇಳಿದ ಏಲಾಪತ್ರನು ಅವರನ್ನುದ್ದೇಶಿಸಿ ಹೇಳಿದನು:

"ವಿಧಿವಿಹಿತವಾದ ಈ ಯಜ್ಞವನ್ನಾಗಲೀ ಅಥವಾ ನಮ್ಮೆಲ್ಲರ ಈ ಮಹಾಭಯಕ್ಕೆ ಕಾರಣವಾಗಬಲ್ಲ ಪಾಂಡವೇಯ ಜನಮೇಜಯನನ್ನಾಗಲೀ ತಡೆಯಲು ಸಾಧ್ಯವಿಲ್ಲ. ರಾಜನ್! ದೈವ ಪೀಡಿತ ಪುರುಷನು ದೈವವನ್ನು ಮಾತ್ರ ಮೊರೆಹೊಗಬೇಕೇ ವಿನಃ ಬೇರೆ ಯಾವುದೂ ಅವನ ರಕ್ಷಣೆಗೆ ಬರುವುದಿಲ್ಲ. ನಮ್ಮೆಲ್ಲರ ಈ ಭಯವೂ ಕೂಡ ದೈವದತ್ತವಾದದ್ದು. ದೈವದ ಆಶ್ರಯವು ಮಾತ್ರ ನಮಗಿರುವ ದಾರಿ. ನನ್ನ ಈ ಮಾತುಗಳನ್ನು ಕೇಳಿ. ನಮ್ಮ ಕುರಿತು ಶಾಪವನ್ನು ಉಚ್ಛರಿಸಿದಾಗ ನಾನು ಭಯದಿಂದ ತಾಯಿಯ ತೊಡೆಯಮೇಲೇರಿ ಕುಳಿತುಕೊಂಡೆ. ಆಗ ನಾನು ದೇವಪ್ರಭುವು 'ಇದು ಬಹಳ ತೀಕ್ಷ್ಣವಾದದ್ದು! ತೀಕ್ಷ್ಣವಾದದ್ದು!' ಎಂದು ಹೇಳುವುದನ್ನು ಕೇಳಿದೆ. ಆಗ ಆ ಮಹಾದ್ಯುತಿ ದೇವತೆಗಳು ದುಃಖಾರ್ತರಾಗಿ ಪಿತಾಮಹನ ಬಳಿ ಹೋಗಿ ಹೇಳಿದರು: 'ಪಿತಾಮಹ! ದೇವದೇವ! ಕದ್ರುವನ್ನು ಬಿಟ್ಟು ಇನ್ನು ಯಾವ ತಾಯಿಯು ಪ್ರಿಯ ಪುತ್ರರನ್ನು ಹಡೆದು ಅವರನ್ನೇ ಈ ರೀತಿ ತೀಕ್ಷ್ಣವಾಗಿ ನಿನ್ನ

ಮುಂದೆಯೇ ಶಪಿಸಬಹುದು? ನೀನೂ ಕೂಡ ಹಾಗೆಯೇ ಆಗಲಿ ಎಂದು ಹೇಳಿದ್ದುದನ್ನು ಕೇಳಿದೆವು. ನೀನು ಅದನ್ನು ತಡೆಹಿಡಿಯದೇ ಇರಲು ಕಾರಣವನ್ನು ತಿಳಿಯ ಬಯಸುತ್ತೇವೆ.” ಆಗ ಬ್ರಹ್ಮನು ಅವರಿಗೆ ಹೇಳಿದನು: ‘ತೀಕ್ಷ್ಣರೂ ಭೀಮವೀರ್ಯರೂ ಆದ ವಿಷಭರಿತ ನಾಗಗಳು ಬಹಳವಾಗಿದ್ದಾರೆ. ಪ್ರಜೆಗಳೆಲ್ಲರ ಹಿತಾಸಕ್ತಿಯಿಂದ ನಾನು ಅವಳನ್ನು ತಡೆಯಲಿಲ್ಲ. ಯಾರು ಸದಾ ಕಚ್ಚುವ ಪ್ರವೃತ್ತಿಯನ್ನು ಹೊಂದಿದ್ದಾರೋ, ಸಣ್ಣ ಸಣ್ಣ ವಿಷಯಕ್ಕೂ ಕಚ್ಚುತ್ತಾರೋ, ಹೆಚ್ಚಿನ ವಿಷವನ್ನು ಹೊಂದಿರುವರೋ ಅಂಥಹ ಪಾಪಚಾರಿಗಳು ಮಾತ್ರ ವಿನಾಶ ಹೊಂದುತ್ತಾರೆ. ಧರ್ಮಚಾರಿಗಳಲ್ಲ. ಆ ಕಾಲವು ಬಂದಾಗ ನಾಗಗಳು ತಮ್ಮ ಈ ಮಹಾಭಯದಿಂದ ಹೇಗೆ ಮೋಕ್ಷವನ್ನು ಹೊಂದುತ್ತಾರೆ ಎನ್ನುವುದನ್ನು ಕೇಳಿ. ಯಾಯಾವರ ಕುಲದಲ್ಲಿ ಜರತ್ಕಾರುವೆಂದು ಖ್ಯಾತಿಗೊಳ್ಳುವ ತೇಜಸ್ವಿಯೂ ನಿಯತೇಂದ್ರಿಯನೂ ಧೀಮಂತನೂ ಆದ ಮಹಾನ್ ಋಷಿಯೊಬ್ಬನು ಹುಟ್ಟುತ್ತಾನೆ. ಜರತ್ಕಾರುವಿನಲ್ಲಿ ಜನಿಸುವ ಅವನ ಪುತ್ರ ಆಸ್ತೀಕನೆಂಬ ಹೆಸರಿನ ಮಹಾತಪಸ್ವಿಯು ಈ ಯಜ್ಞವನ್ನು ನಿಲ್ಲಿಸಿ ಧಾರ್ಮಿಕ ನಾಗಗಳ ಬಿಡುಗಡೆಮಾಡುತ್ತಾನೆ.” ಅದಕ್ಕೆ ದೇವತೆಗಳು ಕೇಳಿದರು: ‘ದೇವ! ಆ ಮುನಿಪ್ರವರ ಮಹಾತಪಸ್ವಿ ಜರತ್ಕಾರುವಿನ

ಮಹಾತ್ಮ ವೀರ್ಯವಂತ ಪುತ್ರನು ಯಾರಲ್ಲಿ ಜನಿಸುತ್ತಾನೆ?'
ಬ್ರಹ್ಮನು ಹೇಳಿದನು: 'ದೇವತೆಗಳೇ! ಆ ವೀರ್ಯವಂತ
ದ್ವಿಜಸತ್ತಮನು ತನ್ನ ಹೆಸರನ್ನೇ ಹೊಂದಿರುವ ಪತ್ನಿಯಲ್ಲಿ
ತನ್ನ ಹಾಗೆಯೇ ವೀರ್ಯವಂತ ಮಗನನ್ನು ಪಡೆಯುತ್ತಾನೆ.'
ದೇವತೆಗಳು ಪಿತಾಮಹನಿಗೆ 'ಹಾಗೆಯೇ ಆಗಲಿ' ಎಂದು
ಹೇಳಲು ದೇವತೆಗಳಿಗೆ ಇದನ್ನೆಲ್ಲ ಹೇಳಿದ ದೇವ
ಪಿತಾಮಹನು ಹೊರಟುಹೋದನು. ವಾಸುಕಿ!
ಜರತ್ಕಾರುವೆಂದು ಖ್ಯಾತಳಾಗಿರುವ ನಿನ್ನ ತಂಗಿಯನ್ನು
ನೋಡುತ್ತಿದ್ದೇನೆ. ನಾಗಗಳ ಭಯವನ್ನು ನಿವಾರಿಸಲೋಸುಗ
ಅವಳನ್ನು ಪತ್ನಿಗಾಗಿ ಭಿಕ್ಷೆಬೇಡುತ್ತಾ ತಿರುಗುತ್ತಿರುವ ಆ
ಸುವ್ರತ ಮುನಿಗೆ ಕೊಡು. ಅದೇ ನಮಗೆ
ಮೋಕ್ಷದಾಯಕವೆಂದು ಕೇಳಿದ್ದೇನೆ."

ಏಲಾಪತ್ರನ ಈ ಮಾತುಗಳನ್ನು ಕೇಳಿದ ನಾಗಗಳೆಲ್ಲರೂ ಪ್ರಹೃಷ್ಟರಾಗಿ "ಸಾಧು! ಸಾಧು!" ಎಂದು ಉದ್ಗಾರಗೈದರು. ಅಂದಿನಿಂದ ವಾಸುಕಿಯು ಆ ಕನ್ಯೆ ಜರತ್ಕಾರುವನ್ನು ರಕ್ಷಿಸುತ್ತಾ ಅವಳ ಪಾಲನೆ-ಪೋಷಣೆಯಲ್ಲಿ ತುಂಬಾ ಸಂತೋಷವನ್ನು ಹೊಂದಿದನು. ದೇವಾಸುರರೆಲ್ಲರೂ ಸೇರಿ ಸಮುದ್ರವನ್ನು ಮಥಿಸಿ ಹೆಚ್ಚು ಸಮಯವು ಕಳೆದಿರಲಿಲ್ಲ. ಆಗ ಬಲಶಾಲಿಗಳಲ್ಲಿ ಶ್ರೇಷ್ಠ ನಾಗ ವಾಸುಕಿಯು ಕಡೆಯುವ ಹಗ್ಗವಾಗಿದ್ದನು. ಆ ಕಾರ್ಯವನ್ನು ಮುಗಿಸಿದ ಅವನು

ಪಿತಾಮಹನ ಬಳಿ ಹೋದನು. ವಾಸುಕಿಯ ಜೊತೆಗಿದ್ದ ದೇವತೆಗಳು ಪಿತಾಮಹನಲ್ಲಿ ವಿನಂತಿಸಿಕೊಂಡರು:

> “ಭಗವನ್! ಈ ಶಾಪಭೀತ ವಾಸುಕಿಯು ತುಂಬಾ ನೋವನ್ನು ಅನುಭವಿಸುತ್ತಿದ್ದಾನೆ. ಜನನಿಯ ಶಾಪದಿಂದ ತನ್ನ ಜಾತಿಯವರ ಹಿತಾಕಾಂಕ್ಷಿಯಾದ ಇವನಲ್ಲಿ ಉದ್ಭವವಾಗಿರುವ ಈ ಶಲಾಕೆಯನ್ನು ಅವನ ಮನಸ್ಸಿನಿಂದ ಕಿತ್ತೊಗೆಯಬೇಕಾಗಿದೆ. ಈ ನಾಗರಾಜನು ಸದಾ ನಮ್ಮ ಹಿತೈಷಿಯೂ ಪ್ರಿಯಕಾರಿಯೂ ಆಗಿದ್ದಾನೆ. ಇವನ ಮನೋಜ್ವರವನ್ನು ಹೋಗಲಾಡಿಸುವ ಪ್ರಸಾದವನ್ನು ನೀಡು.”

ಬ್ರಹ್ಮನು ಹೇಳಿದನು:

> “ಅಮರರೇ! ನಿಮ್ಮ ಈ ಮಾತುಗಳನ್ನು ನಾನು ಮನಸ್ಸಿನಲ್ಲಿ ಯೋಚಿಸಿದ್ದೇನೆ. ನಾಗೇಂದ್ರನು ಸಮಯ ಬಂದಾಗ ಜರತ್ಕಾರುವಿನ ಕುರಿತು ನಾಗ ಏಲಾಪತ್ರನು ಮೊದಲು ಹೇಳಿದ ಹಾಗೆಯೇ ಮಾಡಲಿ. ಇದರಿಂದ ಧರ್ಮಚಾರಿಗಳನ್ನು ಬಿಟ್ಟು ಕೇವಲ ಪಾಪಿಗಳು ಮಾತ್ರ ವಿನಾಶಹೊಂದುತ್ತಾರೆ. ಜರತ್ಕಾರುವು ಈಗಾಗಲೇ ಹುಟ್ಟಿದ್ದಾನೆ ಮತ್ತು ಆ ದ್ವಿಜನು ಉಗ್ರ ತಪಸ್ಸಿನಲ್ಲಿ ನಿರತನಾಗಿದ್ದಾನೆ. ಸರಿಯಾದ ಸಮಯದಲ್ಲಿ ಅವನಿಗೆ ತನ್ನ

ತಂಗಿಯನ್ನು ಕೊಡಲಿ. ನಾಗ ಏಲಾಪತ್ರನು ಹೇಳಿದುದರಲ್ಲಿಯೇ ಪನ್ನಗಗಳ ಹಿತವಿದೆ. ಬೇರೆ ಯಾವ ರೀತಿಯಲ್ಲಿಯೂ ಇಲ್ಲ."

ಪಿತಾಮಹನ ಈ ಮಾತುಗಳನ್ನು ಕೇಳಿದ ನಾಗೇಂದ್ರನು ಜರತ್ಕಾರುವನ್ನು ಹುಡುಕಲು ಎಲ್ಲ ಸರ್ಪಗಳಿಗೂ ಆಜ್ಞೆಯನ್ನಿತ್ತನು:

"ಯಾವಾಗ ಜರತ್ಕಾರುವು ಪತ್ನಿಗಾಗಿ ಕೇಳುತ್ತಾನೋ ಆಗ ತಕ್ಷಣವೇ ನನ್ನಲ್ಲಿ ಬಂದು ಹೇಳಿ. ನಮ್ಮೆಲ್ಲರ ಶ್ರೇಯಸ್ಸು ಇದರ ಮೇಲೆಯೇ ನಿರ್ಭರವಾಗಿದೆ."

## ಆಸ್ತೀಕನ ಜನನ

'ಜರ' ಎಂದರೆ ಕ್ಷಯವಾಗುವುದು ಮತ್ತು 'ಕಾರು' ಎಂದರೆ ಅತಿ ದೊಡ್ಡ ದೇಹ. ಆ ಧೀಮಂತನು ತೀವ್ರ ತಪಸ್ಸಿನಿಂದ ಸ್ವಲ್ಪ ಸ್ವಲ್ಪವೇ ತನ್ನ ಅತಿ ಸ್ಥೂಲ ಕಾಯವನ್ನು ಬಡಕಲು ಮಾಡಿಕೊಂಡ. ಇದೇ ಕಾರಣಕ್ಕಾಗಿ ವಾಸುಕಿಯ ತಂಗಿಯೂ ಜರತ್ಕಾರುವೆಂದು ಕರೆಯಲ್ಪಟ್ಟಳು.

ಇದೇ ಸಮಯದಲ್ಲಿ ಮಹಾತಪಸ್ವಿ ಜರತ್ಕಾರುವು ಸಾಯಂಕಾಲ ಎಲ್ಲಿರುತ್ತಾನೋ ಅಲ್ಲಿಯೇ ತಂಗುತ್ತಾ ಇಡೀ ಪೃಥ್ವಿಯನ್ನು ತಿರುಗುತ್ತಿದ್ದನು. ಮಹಾತೇಜಸ್ವಿಗಳಿಗೂ ಅಸಾಧ್ಯವೆನಿಸುವ ಕಾರ್ಯಪಾಲನೆ ಮಾಡುತ್ತಾ ಪುಣ್ಯಕ್ಷೇತ್ರಗಳಲ್ಲಿ ತೀರ್ಥಸ್ನಾನಗಳನ್ನು

ಮಾಡುತ್ತಾ ಸಂಚರಿಸುತ್ತಿದ್ದನು. ನಿರಾಹಾರನಾಗಿ ಕೇವಲ ಗಾಳಿಯನ್ನೇ ಸೇವಿಸುತ್ತಾ ದಿನ ದಿನವೂ ತನ್ನ ದೇಹವನ್ನು ಒಣಗಿಸುತ್ತಿದ್ದನು. ಒಮ್ಮೆ ಅವನು ಒಂದು ಬಾವಿಯಲ್ಲಿ ತಲೆಕೆಳಗಾಗಿ ನೇಲುತ್ತಿದ್ದ ತನ್ನ ಪಿತೃಗಳನ್ನು ಕಂಡನು. ಆ ಬಿಲದಲ್ಲಿಯೇ ವಾಸಿಸುತ್ತಿದ್ದ ಇಲಿಗಳು ತಿಂದು ಜೀರ್ಣವಾದ ಒಂದೇ ಒಂದು ವೀರಣದ ಬೇರನ್ನು ಹಿಡಿದು ನೇತಾಡುತ್ತಿದ್ದರು. ಆಹಾರವಿಲ್ಲದೇ ಬಡಕಲು ಬಿದ್ದು, ಮೇಲೆ ಬರಲು ಸ್ವಲ್ಪವೂ ಶಕ್ತಿಯಿಲ್ಲದೇ ದೀನ ಅರ್ತ ದೀನರೂಪಿಗಳಾದ ದೀನರ ಬಳಿಬಂದು ಅವನು ಹೇಳಿದನು:

> “ಇದೇ ಬಿಲದಲ್ಲಿ ವಾಸಿಸುತ್ತಿರುವ ಇಲಿಯಿಂದ ತಿನ್ನಲ್ಪಟ್ಟು ದುರ್ಬಲವಾಗಿರುವ ಈ ವೀರಣದ ಬೇರನ್ನು ಹಿಡಿದು ನೇತಾಡುತ್ತಿರುವ ನೀವು ಯಾರು? ನೀವು ಹಿಡಿದು ನಿಂತಿರುವ ಈ ವೀರಣ ಬೇರಿನ ದಾರವು ಇಲಿಯಿಂದ ತಿನ್ನಲ್ಪಟ್ಟು ನಿಧಾನವಾಗಿ ಹರಿದುಹೋಗುತ್ತಿದೆ. ತಲೆಕೆಳಗಾಗಿ ಈ ಆಳವಾದ ಬಾವಿಯಲ್ಲಿ ನೀವು ಬೀಳುತ್ತೀರಿ ಎನ್ನುವುದಲ್ಲಿ ಸಂಶಯವೇ ಇಲ್ಲ. ಅಧೋಮುಖರಾಗಿರುವ ನಿಮ್ಮನ್ನು ನೋಡಿ ನನಗೆ ಅತೀವ ದುಃಖವಾಗುತ್ತಿದೆ. ನಿಮಗೆ ಪ್ರಿಯವಾದ ಯಾವ ಕಾರ್ಯವನ್ನು ಮಾಡಲಿ ಹೇಳಿ. ನನ್ನ ತಪಸ್ಸಿನ ಬಲದ ಕಾಲುಭಾಗದಿಂದ ಅಥವಾ ಮೂರರಲ್ಲಿ ಒಂದು ಭಾಗ ಅಥವಾ ಅರ್ಧಭಾಗದಿಂದ ನಿಮ್ಮ ಈ

ಆಪತ್ತನ್ನು ನಿವಾರಿಸಬಹುದಾದರೆ ಬೇಗ ಹೇಳಿ. ಅಥವಾ, ನನ್ನ ಸಮಗ್ರ ತಪಸ್ಸಿನ ಬಲದಿಂದ ನಿಮ್ಮ ಎಲ್ಲ ಈ ಕಷ್ಟಗಳು ದೂರಾಗುವವೆಂದರೆ ಹೇಳಿ. ಅದಕ್ಕೂ ನಾನು ಸಿದ್ಧನಿದ್ದೇನೆ."

ಪಿತೃಗಳು ಹೇಳಿದರು:

"ಬ್ರಹ್ಮಚಾರಿ! ನಮ್ಮನ್ನು ಉದ್ಧರಿಸಲು ಬಯಸುತ್ತಿದ್ದೀಯೆ. ಆದರೆ ನಿನ್ನ ತಪಸ್ಸಿನಿಂದ ನಮ್ಮನ್ನು ಉಳಿಸಲು ಶಕ್ಯವಿಲ್ಲ. ನಮ್ಮಲ್ಲಿ ಕೂಡ ತಮ್ಮ ತಪಸ್ಸಿನ ಶ್ರೇಷ್ಠ ಫಲಗಳಿವೆ. ಆದರೆ ಸಂತಾನದ ಕೊರತೆಯಿಂದಾಗಿ ನಾವು ಈ ನರಕದಲ್ಲಿ ಬೀಳುತ್ತಿದ್ದೇವೆ. ಇಲ್ಲಿ ನೇತಾಡುತ್ತಿರುವ ನಮ್ಮ ಜ್ಞಾನ ಪ್ರತಿಭೆಯು ಕುಂದುತ್ತಿದೆ. ಆದುದರಿಂದ ನೀನು ಪೌರುಷದಲ್ಲಿ ಲೋಕದಲ್ಲೆಲ್ಲಾ ವಿಖ್ಯಾತನಾಗಿದ್ದರೂ ನಮಗೆ ನಿನ್ನನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಮಹಾಭಾಗ ನೀನು ಪೂಜಿಸಲರ್ಹ. ಶೋಚಿಸುತ್ತಿರುವ ನಮ್ಮ ಸಮದುಃಖಿಯಾಗಿದ್ದೀಯೆ. ನಾವು ಯಾರು ಮತ್ತು ಯಾವ ಕಾರಣಕ್ಕಾಗಿ ಶೋಚಿಸುತ್ತಿದ್ದೇವೆ ಎನ್ನುವುದನ್ನು ಕೇಳು. ನಾವು ಸಂಶಿತವ್ರತ ಯಾಯಾವರಾ ಎಂಬ ಹೆಸರಿನ ಋಷಿಗಳು. ಸಂತಾನವಿಲ್ಲದಿರುವ ಕಾರಣದಿಂದ ನಾವು ಪುಣ್ಯಲೋಕದಿಂದ ಭ್ರಷ್ಟರಾಗಿದ್ದೇವೆ. ನಮ್ಮ ತಪಸ್ಸಿನ

ಪುಣ್ಯಗಳೆಲ್ಲ ಇನ್ನೂ ನಶಿಸಿಹೋಗಿಲ್ಲ. ಆದುದರಿಂದ ನಮಗೆ ಈ ದಾರವಾದರೂ ಆಧಾರವಾಗಿದೆ. ಆದರೆ ಇದು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ಮಂದಭಾಗ್ಯರಾದ ನಮ್ಮ ಕುಲದ ಏಕತ್ರ ಬಂಧುವಿನಲ್ಲಿ ನಮ್ಮ ಉಳಿದ ಅಲ್ಪಭಾಗ್ಯವಿದೆ. ಅವನು ಜರತ್ಕಾರುವೆಂದು ಖ್ಯಾತ ವೇದವೇದಾಂಗಪಾರಂಗತ, ನಿಯತಾತ್ಮ, ಸುವ್ರತ, ಸುಮಹಾತಪಸ್ವಿ ಮಹಾತ್ಮನು. ಆದರೆ ಅವನಿಗೆ ತಪಸ್ಸಿನ ಲೋಭದಿಂದಾಗಿ ನಾವು ಈ ಪರಿಸ್ಥಿತಿಯಲ್ಲಿದ್ದೇವೆ. ಅವನಿಗೆ ಹೆಂಡತಿ, ಪುತ್ರ ಅಥವಾ ಬಾಂಧವರ್ಯಾರೂ ಇಲ್ಲ. ಅದರಿಂದಾಗಿ ನಾವು ಹೀಗೆ ನಷ್ಟಸಂಜ್ಞರಾಗಿ ಅನಾಥರಂತೆ ಈ ಬಾವಿಯಲ್ಲಿ ನೇತಾಡುತ್ತಿದ್ದೇವೆ. ನೀನು ಅವನನ್ನು ಕಂಡರೆ ನಮ್ಮ ಮೇಲಿನ ಕರುಣೆಯಿಂದ ಅವನಿಗೆ ಈ ರೀತಿ ತಿಳಿಸು: 'ನಿನ್ನ ಪಿತೃಗಳು ಒಂದು ಬಾವಿಯಲ್ಲಿ ದೀನರಾಗಿ ಅಧೋಮುಖರಾಗಿ ನೇತಾಡುತ್ತಿದ್ದಾರೆ. ಪತ್ನಿಯನ್ನು ಹೊಂದಿ, ಮಕ್ಕಳನ್ನು ಪಡೆ. ನೀನೊಬ್ಬನೇ ಅವರಿಗಿರುವ ಒಂದೇ ಒಂದು ಕುಲತಂತು.' ಬ್ರಾಹ್ಮಣ! ನಾವು ಹಿಡಿದಿರುವ ಈ ವೀರಣದ ಬೇರು ನಮ್ಮ ಕುಲವನ್ನು ಮುಂದುವರಿಸಬಹುದಾಗಿರುವ ಒಂದೇ ಒಂದು ಕುಲಸ್ತಂಭ. ನಿನಗೆ ಕಾಣುವ ಜೀರ್ಣವಾಗಿರುವ ಈ ವೀರವದ ಬೇರನ್ನು ತಿನ್ನುತ್ತಿರುವವನೇ ಕಾಲ. ನಾವು ಹಿಡಿದು ನೇತಾಡುತ್ತಿರುವ

ಅರ್ಧ ತಿಂದು ಜೀರ್ಣವಾಗಿರುವ ಈ ಬೇರೇ ತಪಸ್ಸಿನಲ್ಲಿರುವ ಅವನು. ನೀನು ನೋಡುವ ಇಲಿಯೇ ಆ ಬಹಾಬಲಿ ಕಾಲ. ಅವನು ಮಂದಾತ್ಮ, ಅಚೇತಸ, ತಪೋಲುಬ್ಧ. ತಪೋನಿರತ ಜರತ್ಕಾರುವನ್ನು ನಿಧಾನವಾಗಿ ಭಕ್ಷಿಸುತ್ತಿದ್ದಾನೆ. ಅವನ ತಪಸ್ಸು ನಮ್ಮನ್ನು ಪಾರುಮಾಡುವುದಿಲ್ಲ. ನಮ್ಮ ಮೂಲವೇ ತುಂಡಾಗಿದೆ, ಮತ್ತು ಕಾಲಾಂತರದಿಂದ ನಮ್ಮ ಮನಸ್ಸು ಘಾಯಗೊಂಡಿದೆ. ನಾವು ಹೇಗೆ ಈ ನರಕದಲ್ಲಿ ಪಾಪಿಗಳಂತೆ ಅಧೋಗತಿಗಿಳಿದಿದ್ದೀವೆ ನೋಡು! ನಮ್ಮ ಪೂರ್ವ ಪಿತಾಮಹರೊಂದಿಗೆ ನಾವು ಎಂದು ಈ ಆಳದಲ್ಲಿ ಮುಳುಗುತ್ತೇವೋ ಆಗ ಅವನೂ ಕೂಡ ಕಾಲನಿಂದ ಛಿದ್ರಛಿದ್ರನಾಗಿ ನಮ್ಮೊಂದಿಗೆ ನರಕವನ್ನು ಸೇರುತ್ತಾನೆ. ತಪಸ್ಸಾಗಲೀ, ಯಜ್ಞವಾಗಲೀ ಅಥವಾ ಬೇರೆ ಯಾವುದೇ ಮಹಾ ಪುಣ್ಯಕಾರ್ಯವಾಗಲೀ ಅವೆಲ್ಲವೂ ಸಂತತಿಗೆ ಸಮಾನವಲ್ಲ ಎನ್ನುವುದು ಸತ್ಯವಂತರ ಮತ. ತಪಸ್ವಿ ಜರತ್ಕಾರುವನ್ನು ಕಂಡರೆ ಅವನಿಗೆ ನೀನು ಇಲ್ಲಿ ನೋಡಿದುದೆಲ್ಲವನ್ನೂ ಮತ್ತು ನಮ್ಮ ಈ ಮಾತುಗಳನ್ನೂ ಯಥಾವತ್ತಾಗಿ ಹೇಳು. ಅವನು ಪತ್ನಿಯನ್ನು ಮಾಡಿಕೊಂಡು ಪುತ್ರನನ್ನು ಪಡೆದು ನಮ್ಮನ್ನು ರಕ್ಷಿಸಬೇಕೆಂದರೆ ನೀನು ಇದನ್ನು ಅವನಿಗೆ ತಿಳಿಸಬೇಕು.”

ಇದನ್ನೆಲ್ಲ ಕೇಳಿದ ಜರತ್ಕಾರುವು ದುಃಖಶೋಕಪರಾಯಣನಾಗಿ, ದುಃಖದಿಂದ ಬಾಷ್ಪಸಂದಿಗ್ಧ ಸ್ವರದಲ್ಲಿ ತನ್ನ ಪಿತೃಗಳಿಗೆ ಹೇಳಿದನು:

> "ನಾನೇ ಆ ತಪ್ಪಿತಸ್ಥ ನಿಮ್ಮ ಸುತ ಜರತ್ಕಾರು. ನಾನು ಓರ್ವ ಪಾಪಿ. ಪಾಪಾತ್ಮನಾದ ನನಗೆ ಶಿಕ್ಷೆಯನ್ನು ವಿಧಿಸಿ."

ಪಿತೃಗಳು ಹೇಳಿದರು:

> "ಇದೇ ಸ್ಥಳಕ್ಕೆ ನೀನು ತಿರುಗಾಡುತ್ತಾ ಬಂದಿದ್ದೀಯೆ ಎಂದರೆ ಅದೃಷ್ಟವೇ ಸರಿ. ನೀನು ಇದೂವರೆಗೂ ಪತ್ನಿಯನ್ನು ಪಡೆಯದೇ ಇರಲು ಕಾರಣವೇನು?"

ಜರತ್ಕಾರುವು ಹೇಳಿದನು:

> "ಪಿತೃಗಳೇ! ನನ್ನ ವೀರ್ಯವನ್ನು ಹಿಡಿದಿಟ್ಟುಕೊಂಡು ಇದೇ ಶರೀರವನ್ನು ಹೊತ್ತು ಅಪರ ಲೋಕವನ್ನು ಸೇರಬೇಕೆಂಬುದು ಸದಾ ನನ್ನ ಹೃದಯದಲ್ಲಿ ಇದ್ದ ಬಯಕೆ. ಆದರೆ ಶಕುಂತ ಪಕ್ಷಿಗಳಂತೆ ನೇತಾಡುತ್ತಿರುವ ನಿಮ್ಮನ್ನು ನೋಡಿ ನನ್ನ ಬುದ್ಧಿಯು ಬ್ರಹ್ಮಚರ್ಯದಿಂದ ಹಿಂದಿರುಗಿದೆ. ನಿಮಗೆ ಪ್ರಿಯ ಕಾರ್ಯವನ್ನು ನಿಸ್ಸಂಶಯವಾಗಿಯೂ ಮಾಡುತ್ತೇನೆ: ನನ್ನ ಹೆಸರನ್ನೇ ಹೊಂದಿರುವ ಕನ್ಯೆ ಯಾರಾದರೂ ನನಗೆ ದೊರೆತರೆ, ಯಾರಾದರೂ ಅವಳನ್ನು ನನಗೆ ಸ್ವಯಂ ಬಂದು ಭಿಕ್ಷಾರೂಪದಲ್ಲಿ ಕೊಟ್ಟರೆ, ಮತ್ತು

> ನಾನು ಪಾಲನೆ ಮಾಡಬೇಕಾಗಿಲ್ಲದವಳು ಸಿಕ್ಕರೆ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸುತ್ತೇನೆ. ಈ ವಿಧದಲ್ಲಿ ಮಾತ್ರ ನಾನು ಮದುವೆಯಾಗುತ್ತೇನೆ. ಅನ್ಯಥಾ ನಾನು ಮದುವೆ ಮಾಡಿಕೊಳ್ಳುವುದಿಲ್ಲ. ನಾನು ಸತ್ಯವನ್ನೇ ನುಡಿಯುತ್ತಿದ್ದೇನೆ."

ತನ್ನ ಪಿತೃಗಳಿಗೆ ಹೀಗೆ ಹೇಳಿದ ಮುನಿಯು ಇಡೀ ಪೃಥ್ವಿಯನ್ನು ಸಂಚರಿಸಿದನು. ಮುದುಕನಾಗಿದ್ದಾನೆಂದು ಅವನಿಗೆ ಪತ್ನಿಯೇ ದೊರೆಯಲಿಲ್ಲ. ಒಮ್ಮೆ ಅವನು ತನ್ನ ಪಿತೃಗಳ ಕಾರ್ಯವನ್ನು ನೆರವೇರಿಸಲು ಅಸಮರ್ಥನಾದೆನೆಂದು ನಿರಾಶೆಗೊಂಡು, ಒಂದು ಮಹದಾರಣ್ಯವನ್ನು ಹೊಕ್ಕು ದುಃಖದಿಂದ ಪೀಡಿತನಾಗಿ ಜೋರಾಗಿ ಕೂಗಿಕೊಂಡನು:

> "ಇಲ್ಲಿರುವ ಚಲಿಸುವ ಮತ್ತು ಚಲಿಸದೇ ಇರುವ, ಕಾಣುವ ಮತ್ತು ಕಾಣದೇ ಇರುವ ಎಲ್ಲರೂ ನನ್ನ ಈ ಮಾತುಗಳನ್ನು ಕೇಳಿ. ಉಗ್ರತಪಸ್ಸಿನಲ್ಲಿ ನಿರತನಾದ ನಾನು ನನ್ನ ದುಃಖಾರ್ತ ಪಿತೃಗಳ ಅಪ್ಪಣೆಯಂತೆ ಅವರಿಗೆ ಪ್ರಿಯಕಾರ್ಯವನ್ನು ಮಾಡಲು ಹೊರಟಿದ್ದೇನೆ. ಪಿತೃಗಳ ಸೂಚನೆಯಂತೆ ದರಿದ್ರ ಮತ್ತು ದುಃಖಶೀಲನಾದ ನಾನು ಇಡೀ ಭೂಮಿಯನ್ನು ಕನ್ಯಾಭಿಕ್ಷಾರ್ಚನೆ ಮಡುತ್ತಾ ತಿರುಗುತ್ತಿದ್ದೇನೆ. ಇಲ್ಲಿ ನನ್ನ ಕೂಗು ಕೇಳುತ್ತಿರುವ ಯಾರಲ್ಲಿಯಾದರೂ ಓರ್ವ ಕನ್ಯೆಯಿದ್ದರೆ ಸರ್ವ ದಿಶೆಯಲ್ಲಿ

ತಿರುಗುತ್ತಿರುವ ನನಗೆ ಅವಳನ್ನು ನೀಡಿ. ನನ್ನ ಹೆಸರನ್ನೇ ಹೊಂದಿರುವ ಕನ್ಯೆಯನ್ನು ಭಿಕ್ಷೆಯಾಗಿ ಕೊಡಿ. ನಾನು ಪಾಲಿಸಬೇಕಾಗಿದಂಥ ಕನ್ಯೆಯನ್ನು ನೀಡಿ.”

ಆಗ ಜರತ್ಕಾರುವಿನ ಮೇಲೆ ಕಣ್ಣಿಟ್ಟಿದ್ದ ಪನ್ನಗಗಳು ಅವನ ಪ್ರವೃತ್ತಿಯನ್ನು ವಾಸುಕಿಗೆ ಬಂದು ವರದಿಮಾಡಿದರು. ಅವರನ್ನು ಕೇಳಿದ ಆ ಪನ್ನಗ ನಾಗೇಂದ್ರನು ಸಮಲಂಕೃತ ಕನ್ಯೆಯನ್ನು ಕರೆದುಕೊಂಡು ಆ ಅರಣ್ಯದಲ್ಲಿ ಅವನ ಸಮೀಪ ಬಂದನು. ನಾಗೇಂದ್ರ ವಾಸುಕಿಯು ಅ ಕನ್ಯೆಯನ್ನು ಮಹಾತ್ಮನಿಗೆ ಭಿಕ್ಷವಾಗಿತ್ತರೂ ಅವನು ಅವಳನ್ನು ತಕ್ಷಣವೇ ಸ್ವೀಕರಿಸಲಿಲ್ಲ. ತನ್ನ ಹೆಸರನ್ನೇ ಅವಳು ಹೊಂದಿರಲಿಕ್ಕಿಲ್ಲ ಮತ್ತು ಅವಳನ್ನು ಪಾಲಿಸುವವರು ಯಾರು ಎಂದು ಅನುಮಾನಿಸಿ ದ್ವಂದ್ವೀಭೂತನಾಗಿ ಅವಳನ್ನು ಸ್ವೀಕರಿಸಲು ಹಿಂಜರಿದನು. ಅವನು ವಾಸುಕಿಗೆ ಆ ಕನ್ಯೆಯ ಹೆಸರೇನೆಂದು ಕೇಳಿ ನಾನು ಅವಳ ಜೀವನವನ್ನು ನೋಡಿಕೊಳ್ಳುವುದಿಲ್ಲ ಎಂದನು. ಆಗ ವಾಸುಕಿಯು ಋಷಿ ಜರತ್ಕಾರುವಿಗೆ ಹೇಳಿದನು:

“ನನ್ನ ಈ ತಪಸ್ವಿನಿ ತಂಗಿಯು ನಿನ್ನ ಹೆಸರನ್ನೇ ಹೊಂದಿದ್ದಾಳೆ. ದ್ವಿಜೋತ್ತಮ! ಇವಳನ್ನು ನಿನ್ನ ಭಾರ್ಯೆಯಾಗಿ ಸ್ವೀಕರಿಸು. ನಾನೇ ಅವಳ ಜೀವನವನ್ನು ನೋಡಿಕೊಳ್ಳುತ್ತೇನೆ. ನನ್ನ ಸರ್ವ ಶಕ್ತಿಗಳನ್ನೂ

ಉಪಯೋಗಿಸಿ ಅವಳ ರಕ್ಷಣೆಯನ್ನು ಮಾಡುತ್ತೇನೆ.”

ತನ್ನ ತಂಗಿಯನ್ನು ತಾನೇ ನೋಡಿಕೊಳ್ಳುತ್ತೇನೆ ಎಂದು ನಾಗನಿಂದ ಅಶ್ವಾಸನೆಯನ್ನು ಪಡೆದ ನಂತರ ಜರತ್ಕಾರುವು ಆ ನಾಗನ ಮನೆಗೆ ಹೋದನು. ಅಲ್ಲಿ ಮಂತ್ರವಿಧ್ವಾಂಸಿ, ಶ್ರೇಷ್ಠ ತಪೋವೃದ್ಧ, ಮಹಾವ್ರತ ಧರ್ಮಾತ್ಮನು ವಿಧಿಮಂತ್ರಪೂರಕವಾಗಿ ಅವಳ ಕೈ ಹಿಡಿದನು. ಪನ್ನಗೇಂದ್ರನ ಸಮ್ಮತಿಯಂತೆ ಪತ್ನಿಯನ್ನು ಪಡೆದು ಮಹರ್ಷಿಗಳೆಲ್ಲರೂ ಸ್ತುತಿಸುತ್ತಿರಲು ಶುಭ್ರ ವಾಸಗೃಹವನ್ನು ತೆರಳಿದನು. ಆಲ್ಲಿ ಜರತ್ಕಾರುವು ಅಮೂಲ್ಯ ರತ್ನಗಳಿಂದ ಸಜ್ಜಿತ ಹಾಸಿಗೆಯ ಮೇಲೆ ತನ್ನ ಭಾರ್ಯೆಯೊಡನೆ ಮಲಗುತ್ತಿದ್ದನು. ಆ ಸತ್ತಮನು ತನ್ನ ಪತ್ನಿಯೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡನು:

> “ಎಂದೂ ನನಗೆ ಅಪ್ರಿಯ ಕಾರ್ಯವನ್ನಾಗಲೀ ಮಾತನ್ನಾಗಲೀ ಮಾಡಬಾರದು ಆಡಬಾರದು. ಹಾಗೇನಾದರೂ ಮಾಡಿದರೆ ನಾನು ನಿನ್ನನ್ನು ಬಿಟ್ಟು ಹೋಗುತ್ತೇನೆ ಮತ್ತು ನಿನ್ನ ಈ ಮನೆಯಲ್ಲಿ ಎಂದೂ ವಾಸಿಸುವುದಿಲ್ಲ. ನನ್ನ ಈ ಮಾತುಗಳನ್ನು ಯಾವಾಗಲೂ ನಿನ್ನ ಮನಸ್ಸಿನಲ್ಲಿಟ್ಟಿಕೋ.”

ಅವನ ಮಾತುಗಳಿಂದ ಪರಮ ಸಂವಿಗ್ನಳಾದ ನಾಗಪತಿಯ ತಂಗಿಯು ಅತಿ ದುಃಖಸಮನ್ವಿತಳಾಗಿ “ಹಾಗೆಯೇ ಆಗಲಿ” ಎಂದು

ವಚನವನ್ನಿತ್ತಳು. ಆ ಯಶಸ್ವಿನಿಯಾದರೂ ಶ್ವೇತಕಾಕೀಯ ಉಪಾಯಗಳಿಂದ ಎಷ್ಟೇ ಕಷ್ಟವಾದರೂ ತನ್ನ ಪತಿಗೆ ಪ್ರಿಯಕರವಾದುದನ್ನೇ ಮಾಡುತ್ತಿದ್ದಳು.

ಒಮ್ಮೆ ವಾಸುಕಿಯ ತಂಗಿಯು ಋತುಕಾಲದ ನಂತರ ಸ್ನಾನಮಾಡಿ ನ್ಯಾಯದಂತೆ ಮಹಾಮುನಿ ಪತಿಯ ಬಳಿ ಹೋದಳು. ಆಗ ಅವಳು ಗರ್ಭವತಿಯಾದಳು. ಅತ್ಯಂತ ತಪೋಬಲವನ್ನು ಹೊಂದಿ ಪ್ರಜ್ವಲ ಪ್ರಭೆಯಿಂದ ಕೂಡಿದ್ದ ಆ ಗರ್ಭವು ವೈಶ್ವಾನರನ ಸಮಾನ ಕಾಂತಿಯನ್ನು ಹೊಂದಿದ್ದು ಶುಕ್ಲಪಕ್ಷದ ಚಂದ್ರನಂತೆ ಬೆಳೆಯತೊಡಗಿತು.

ಕೆಲವು ದಿನಗಳ ನಂತರ ಮಹಾತಪಸ್ವಿ ಜರತ್ಕಾರುವು ಆಯಾಸಗೊಂಡು ತನ್ನ ಪತ್ನಿಯ ತೊಡೆಯಮೇಲೆ ತಲೆಯನ್ನಿಟ್ಟು ನಿದ್ರಿಸುತ್ತಿದ್ದನು. ಈ ರೀತಿ ಆ ವಿಪ್ರೇಂದ್ರನು ಮಲಗಿರುವಾಗ ಸೂರ್ಯನು ಗಿರಿಗಳಲ್ಲಿ ಅಸ್ತಮನಾಗತೊಡಗಿದನು. ಹಗಲು ಕಳೆಯುತ್ತಾ ಬಂದಿರುವುದರಿಂದ ವಾಸುಕಿಯ ತಂಗಿ ಮನಸ್ವಿನಿಯು ಬ್ರಾಹ್ಮಣನ ಧರ್ಮಲೋಪವಾಗುವುದೆಂದು ಭೀತಳಾದಳು:

> “ಈಗ ನಾನು ಏನು ಮಾಡಲಿ? ನನ್ನ ಪತಿಯನ್ನು ಎಚ್ಚರಿಸಲೇ ಅಥವಾ ಬೇಡವೇ? ಈ ಧರ್ಮಾತ್ಮನಿಗೆ ಅಪರಾಧವಾಗದ ರೀತಿಯಲ್ಲಿ ದುಃಖಶೀಲಳಾದ ನಾನು ಏನು ಮಾಡಲಿ? ಅವನು ಕುಪಿತನಾಗುತ್ತಾನೆ ಅಥವಾ ಆ

ಧರ್ಮಶೀಲನು ಧರ್ಮಲೋಪನಾಗುತ್ತಾನೆ. ಆದರೆ ನನ್ನ ಪ್ರಕಾರ ಈ ಎರಡರಲ್ಲಿ ಧರ್ಮಲೋಪವೇ ದೊಡ್ಡ ಅಪರಾಧ. ಅವನನ್ನು ನಾನು ಎಬ್ಬಿಸಿದರೆ ನಿಶ್ಚಿತವಾಗಿಯೂ ಅವನು ಕೋಪಗೊಳ್ಳುತ್ತಾನೆ. ಇಲ್ಲವಾದರೆ ಸಂಧ್ಯಾವಂದನೆಯ ಸಮಯವು ಕಳೆದುಹೋದಮೇಲೆ ಅವನ ಧರ್ಮಲೋಪವಾಗುವುದೂ ನಿಶ್ಚಯವೇ.”

ಈ ರೀತಿ ಯೋಚಿಸಿದ ನಾಗಕನ್ಯೆ ಜರತ್ಕಾರುವು ದೀಪ್ತತಪಸ್ವಿ ಅಗ್ನಿಯಂತೆ ಮಲಗಿರುವ ಋಷಿಗೆ ಮಧುರ ಮತ್ತು ಶ್ಲಾಘನೀಯ ಮಾತುಗಳನ್ನಾಡಿದಳು:

“ಮಹಾಭಾಗ! ಎದ್ದೇಳು! ಸೂರ್ಯಾಸ್ತವಾಗುತ್ತಿದೆ. ನಿನ್ನ ವ್ರತನಿಯಮದಂತೆ ನೀರನ್ನು ಮುಟ್ಟಿ ಸಂಧ್ಯಾ ಉಪಾಸನೆಯನ್ನು ಮಾಡು. ಸಾಯಂಕಾಲದ ಅಗ್ನಿಹೋತ್ರದ ಮುಹೂರ್ತವು ಬಂದಿದೆ. ಪಶ್ಚಿಮ ದಿಕ್ಕಿನಲ್ಲಿ ರಮ್ಯ ಮತ್ತು ದಾರುಣ ಸಂಧ್ಯೆಯು ಆವರಿಸುತ್ತಿದೆ.”

ಹೀಗೆ ಕರೆಯಲ್ಪಟ್ಟ ಮಹಾತಪಸ್ವಿ ಭಗವಾನ್ ಜರತ್ಕಾರುವು ಕೋಪದಿಂದ ತುಟಿಗಳನ್ನು ನಡುಗಿಸುತ್ತಾ ತನ್ನ ಭಾರ್ಯೆಗೆ ಹೇಳಿದನು:

“ನಾಗಕನ್ಯೆ! ನಿನ್ನಿಂದ ನನ್ನ ಅಪಮಾನವಾಗಿದೆ. ನಿನ್ನೊಡನೆ ನಾನಿನ್ನು ವಾಸಿಸಲಾರೆ. ನಾನು ಎಲ್ಲಿಂದ ಬಂದಿದ್ದೆನೋ

> ಅಲ್ಲಿಗೆ ಹೋಗುತ್ತಿದ್ದೇನೆ. ನಾನು ಮಲಗಿರುವಾಗ ನಿರ್ದಿಷ್ಟ ವೇಳೆಯಲ್ಲಿಯೇ ಅಸ್ತವಾಗಲು ಸೂರ್ಯನಿಗೂ ಧೈರ್ಯವಿಲ್ಲ ಎಂದು ನನಗೆ ನಿಶ್ಚಯವಾಗಿಯೂ ತಿಳಿದಿದೆ. ಅಪಮಾನವನ್ನು ಹೊಂದಿದ ಯಾರೂ ಇರಲು ಬಯಸುವುದಿಲ್ಲ. ಹಾಗಿದ್ದಾಗ ಇನ್ನು ಧರ್ಮಶೀಲನಾದ ನನ್ನಂಥವನು ಹೇಗೆ ಇದ್ದಾನು?”

ತನ್ನ ಮನೆಯಲ್ಲಿ ಪತಿಯ ಈ ಹೃದಯಕಂಪನ ಮಾತುಗಳನ್ನು ಕೇಳಿದ ವಾಸುಕಿಯ ತಂಗಿ ಜರತ್ಕಾರುವು ಹೇಳಿದಳು:

> “ನಿನಗೆ ಅವಮಾನಿಸಲು ನಿನ್ನನ್ನು ಎಬ್ಬಿಸಲಿಲ್ಲ. ವಿಪ್ರ! ನೀನು ಧರ್ಮಲೋಪನಾಗಬಾರದೆಂದು ನಾನು ಈ ರೀತಿ ಮಾಡಿದೆ.”

ಪತ್ನಿಯು ಹೀಗೆ ಹೇಳಲಾಗಿ ಮಹಾತಪಸ್ವಿ ಋಷಿ ಜರತ್ಕಾರುವು ಆ ನಾಗಕನ್ಯೆಯನ್ನು ತೊರೆಯುವ ಉದ್ದೇಶದಿಂದ ಕೋಪಸಮಾವಿಷ್ಟನಾಗಿ ಹೇಳಿದನು:

> “ಭುಜಂಗಮೇ! ನಾನು ಎಂದೂ ಅಸತ್ಯವನ್ನು ನುಡಿದಿಲ್ಲ. ಆದುದರಿಂದ ನಾನು ಹೋಗುತ್ತಿದ್ದೇನೆ. ನಾವಿಬ್ಬರೂ ಮೊದಲೇ ಈ ಒಪ್ಪಂದವನ್ನು ಮಾಡಿಕೊಂಡಿದ್ದೆವು. ನಿನ್ನ ಜೊತೆ ನನ್ನ ಜೀವನವು ಸುಖಕರವಾಗಿತ್ತು. ನಾನು ಹೋದ ಬಳಿಕ ನಿನ್ನ ಅಣ್ಣನಿಗೆ ಭಗವಾನನು ಹೊರಟುಹೋದನೆಂದು

ಹೇಳು. ನಾನು ಹೊರಟು ಹೋದ ಮೇಲೆ ನೀನು ನನಗಾಗಿ ಶೋಕಿಸಬಾರದು.”

ಇದನ್ನು ಕೇಳಿದ ಆ ಅನವಧ್ಯಾಂಗಿ ವರಾರೋಹೆ ಜರತ್ಕಾರುವು ಚಿಂತಶೋಕಪರಾಯಣಳಾಗಿ, ಬಾಷ್ಪಗದ್ಗದಳಾಗಿ, ಮುಖದ ಬಣ್ಣವನ್ನೇ ಕಳೆದುಕೊಂಡು ಕಣ್ಣಲ್ಲಿ ಕಣ್ಣೀರನ್ನು ತುಂಬಿಕೊಂಡು, ಅಂಜಲೀ ಬದ್ಧಳಾಗಿ, ಹೃದಯವು ಢವಢವಿಸುತ್ತಿದ್ದರೂ ಧೈರ್ಯತಾಳಿ ಜರತ್ಕಾರುವಿಗೆ ಹೇಳಿದಳು:

“ಧರ್ಮಜ್ಞ! ತಪ್ಪನ್ನೇನೂ ಮಾಡದಿದ್ದ ನನ್ನನ್ನು ಈ ರೀತಿ ಬಿಟ್ಟು ಹೋಗುವುದು ಸರಿಯಲ್ಲ. ಧರ್ಮದಲ್ಲಿ ನೆಲಸಿರುವ ನೀನು ಸದಾ ನಿನ್ನ ಪ್ರಿಯಹಿತ ನಿರತಳಾಗಿ ಧರ್ಮದಲ್ಲಿಯೇ ಇರುವ ನನ್ನನ್ನು ಬಿಟ್ಟುಹೋಗಬೇಡ. ಯಾವ ಕಾರಣಕ್ಕಾಗಿ ನನ್ನನ್ನು ನಿನಗೆ ಕೊಡಲಾಗಿತ್ತೋ ಅದು ಇನ್ನೂ ಪೂರ್ತಿಯಾಗಿಲ್ಲ. ನನ್ನನ್ನು ಮೂಢಳೆಂದು ತಿಳಿಯುವ ವಾಸುಕಿಗೆ ಏನು ಹೇಳಲಿ? ಮಾತೃಶಾಪಕ್ಕೊಳಗಾದ ನನ್ನ ಬಾಂಧವರು ಬಯಸುತ್ತಿರುವ ನಿನ್ನಿಂದ ನನ್ನಲ್ಲಿ ಹುಟ್ಟುವ ಮಗನು ಇನ್ನೂ ಕಾಣುತ್ತಿಲ್ಲ. ನಿನ್ನಿಂದ ಹುಟ್ಟುವ ಈ ಸಂತತಿಯಿಂದಲೇ ನನ್ನ ಬಾಂಧವರಿಗೆ ಮಂಗಳವಾಗುತ್ತದೆ. ಇದೇ ಉದ್ದೇಶದಿಂದ ನಿನ್ನೊಡನೆ ಕೂಡಿದುದನ್ನು ನಿಷ್ಫಲಗೊಳಿಸಬೇಡ. ಬಾಂಧವರ ಹಿತವನ್ನು ಬಯಸುವ

ನನಗೆ ಕರುಣಿಸು. ನನಗೆ ಗರ್ಭವನ್ನು ನೀಡಿ ಇನ್ನೂ ಅದು ತೋರಿಸಿಕೊಳ್ಳದಿರುವಾಗಲೇ ಅನಪರಾಧಿಯಾದ ನನ್ನನ್ನು ಬಿಟ್ಟು ಹೇಗೆ ಹೋಗುತ್ತಿದ್ದೀಯೆ?"

ಇದನ್ನು ಕೇಳಿದ ತಪೋಧನ ಮುನಿ ಜರತ್ಕಾರುವು ಭಾರ್ಯೆಗೆ ಈ ಅನುರೂಪ ಮಾತನ್ನು ಹೇಳಿದನು:

"ಸುಭಗೇ! ನಿನ್ನ ಗರ್ಭದಲ್ಲಿ ವೈಶ್ವಾನರನಂತಿರುವ ವೇದವೇದಾಂಗ ಪಾರಂಗತ ಪರಮಧರ್ಮಾತ್ಮ ಋಷಿಯಿರುವನು." ಹೀಗೆ ಹೇಳಿ ಆ ಧರ್ಮಾತ್ಮ ಮಹಾನ್ ಋಷಿ ಜರತ್ಕಾರುವು ಉಗ್ರ ತಪಸ್ಸನ್ನು ಕೈಗೊಳ್ಳಲು ನಿರ್ಧರಿಸಿ ಹೊರಟುಹೋದನು.

ಪತಿಯು ಹೊರಟುಹೋದ ನಂತರ ಜರತ್ಕಾರುವು ತಕ್ಷಣವೇ ತನ್ನ ಅಣ್ಣನಲ್ಲಿಗೆ ಹೋಗಿ ನಡೆದದೆಲ್ಲವನ್ನೂ ವರದಿಮಾಡಿದಳು. ಈ ಮಹದಪ್ರಿಯ ಮಾತುಗಳನ್ನು ಕೇಳಿದ ಭುಜಗಶ್ರೇಷ್ಠನು ಸ್ವಯಂ ದೀನತರನಾಗಿ ದೀನಳಾಗಿದ್ದ ತಂಗಿಗೆ ಹೇಳಿದನು:

"ಭದ್ರೇ! ನಿನ್ನನ್ನು ಅವನಿಗೆ ಯಾವ ಕಾರಣಕ್ಕಾಗಿ ಕೊಟ್ಟಿದ್ದೆವೆಂದು ನಿನಗೆ ತಿಳಿದಿದೆ. ನಾಗಗಳ ಹಿತಕ್ಕೋಸ್ಕರವಾಗಿ ಅವನಿಂದ ನಿನ್ನಲ್ಲಿ ಪುತ್ರನಾಗಬೇಕಿತ್ತು. ಆ ವೀರ್ಯವಂತನು ಸರ್ಪಸತ್ರದಿಂದ ನಮ್ಮನ್ನೆಲ್ಲ ಮೋಕ್ಷಗೊಳಿಸುವನು ಎಂದು ಹಿಂದೆ ನಾನು

ಸುರರೊಂದಿಗಿದ್ದಾಗ ಪಿತಾಮಹನು ಹೇಳಿದ್ದನು. ಆ ಮುನಿಸತ್ತಮನಿಂದ ನೀನು ಗರ್ಭವನ್ನು ಧರಿಸಿದ್ದೀಯಾ? ನಿನ್ನ ಈ ಮದುವೆಯು ನಿಷ್ಫಲವಾಗಬಾರದು ಎನ್ನುವುದೇ ನನ್ನ ಇಚ್ಛೆ. ಈ ವಿಷಯದ ಕುರಿತು ಈ ರೀತಿ ನಿನ್ನನ್ನು ಪ್ರಶ್ನಿಸುವುದು ನಿಜವಾಗಿಯೂ ಸರಿಯಲ್ಲ. ಆದರೂ ವಿಷಯವು ಮಹತ್ತರವಾದುರಿಂದ ನಿನ್ನಲ್ಲಿ ಈ ರೀತಿ ಕೇಳಬೇಕಾಗಿದೆ. ನಿನ್ನ ಅತಿತಪಸ್ವಿ ಪತಿಯು ಬೇಗ ಸಿಟ್ಟಿಗೇಳುತ್ತಾನೆ ಎನ್ನುವುದನ್ನು ನಾನು ತಿಳಿದಿದ್ದೇನೆ. ಆದುದರಿಂದ ಅವನ ಹಿಂದೆ ಹೋಗಲು ಆಗುವುದಿಲ್ಲ. ಅವನು ನನಗೆ ಶಾಪವನ್ನೂ ಕೊಡಬಲ್ಲ. ನಿನ್ನ ಮತ್ತು ನಿನ್ನ ಪತಿಯ ನಡುವೆ ನಡೆದುದೆಲ್ಲವನ್ನೂ ಹೇಳಿ ನನ್ನ ಹೃದಯದಲ್ಲಿ ಬಹಳ ಕಾಲದಿಂದ ಹುದುಗಿರುವ ಘೋರ ಶೂಲವನ್ನು ಕಿತ್ತೊಗೆ."

ಈ ಮಾತುಗಳನ್ನು ಕೇಳಿದ ಜರತ್ಕಾರುವು ಸಂತಪ್ತ ಪನ್ನಗೇಶ್ವರ ವಾಸುಕಿಯನ್ನು ಸಂತವಿಸುತ್ತಾ ಉತ್ತರಿಸಿದಳು:

"ಮಗುವಿನ ಕುರಿತು ನಾನು ಕೇಳಿದಾಗ ಆ ಮಹಾತಪಸ್ವಿ ಮಹಾತ್ಮನು ನನ್ನ ಉದರವನ್ನು ತೋರಿಸಿ, 'ಅಲ್ಲಿ ಇದೆ!' ಎಂದು ಹೇಳಿ ಹೊರಟು ಹೋದನು. ತಮಾಷೆಯಲ್ಲಿಯೂ ಅವನು ಹುಸಿಮಾತನ್ನಾಡಿದ್ದುದು

ನೆನಪಿಲ್ಲ. ಹಾಗಿದ್ದಾಗ ಈ ಮಹತ್ತರ ವಿಷಯದ ಕುರಿತು ಅವನು ಏಕೆ ಸುಳ್ಳಾಡುತ್ತಾನೆ? ಅವನು 'ಭುಜಂಗಮೇ! ನಿನ್ನ ಕಾರ್ಯದ ಕುರಿತು ಸಂತಾಪಪಡಬೇಡ. ಅಗ್ನಿ-ಸೂರ್ಯರ ಸಮಾನ ಪ್ರಭೆಯನ್ನುಳ್ಳ ಪುತ್ರನೋರ್ವನು ನಿನ್ನಲ್ಲಿ ಜನಿಸುತ್ತಾನೆ.' ಅಣ್ಣ! ಹೀಗೆ ಹೇಳಿ ನನ್ನ ಪತಿಯು ತಪೋವನಕ್ಕೆ ಹೊರಟುಹೋದನು. ಆದುದರಿಂದ ನಿನ್ನ ಮನಸ್ಸಿನಲ್ಲಿರುವ ಪರಮ ದುಃಖ ವೇದನೆಯನ್ನು ತೆಗೆದುಹಾಕು."

ಇದನ್ನು ಕೇಳಿದ ನಾಗೇಂದ್ರ ವಾಸುಕಿಯು ಪರಮ ಹರ್ಷಿತನಾಗಿ "ಹಾಗೆಯೇ ಆಗಲಿ" ಎಂದು ತಂಗಿಯ ಮಾತುಗಳನ್ನು ಸ್ವೀಕರಿಸಿದನು. ಆ ಪನ್ನಗೋತ್ತಮನು ತನ್ನ ಸೋದರಿಯನ್ನು ಸಂತವಿಸಿ, ಗೌರವಿಸಿ, ಉಡುಗೊರೆ, ಮತ್ತು ಇನ್ನೂ ಇತರ ಪೂಜಾ ವಸ್ತುಗಳಿಂದ ಸತ್ಕರಿಸಿದನು. ಅವಳಲ್ಲಿರುವ ರವಿಪ್ರಭ ಮಹಾತೇಜಸ್ವಿ ದ್ವಿಜಶ್ರೇಷ್ಠನು ಆಕಾಶದಲ್ಲಿ ಶುಕ್ಲಪಕ್ಷದ ಚಂದ್ರನಂತೆ ಬೆಳೆಯತೊಡಗಿದನು. ಸಮಯ ಪ್ರಾಪ್ತಿಯಾದಾಗ ನಾಗನ ಸಹೋದರಿಯು ದೇವಗರ್ಭದಂತೆ ಹೊಳೆಯುತ್ತಿದ್ದ ಪಿತೃ ಮತ್ತು ಮಾತೃ ಭಯಾಪಹ ಬ್ರಾಹ್ಮಣ ಕುಮಾರನಿಗೆ ಜನ್ಮವಿತ್ತಳು. ನಾಗರಾಜನ ಮನೆಯಲ್ಲಿಯೇ ಅವನು ಬೆಳೆದನು ಮತ್ತು ಚ್ಯವನಾತ್ಮಜ ಭಾರ್ಗವನಿಂದ ವೇದ-ವೇದಾಂಗಗಳನ್ನು ಕಲಿತನು.

ಬಾಲಕನಾಗಿದ್ದರೂ ವ್ರತಗಳನ್ನು ಅನುಸರಿಸುತ್ತಿದ್ದ ಆ ಬುದ್ಧಿವಂತ ಸತ್ವಗುಣಾನ್ವಿತನು ಆಸ್ತೀಕ ಎನ್ನುವ ಹೆಸರಿನಿಂದ ಲೋಕಗಳಲ್ಲೆಲ್ಲಾ ಖ್ಯಾತನಾದನು. ಅವನು ಇನ್ನೂ ಗರ್ಭದಲ್ಲಿರುವಾಗ ಅವನ ತಂದೆಯು "ಅಸ್ತಿ" ಎಂದು ಹೇಳಿ ಹೊರಟು ಹೋಗಿದ್ದನು. ಆದುದರಿಂದಲೇ ಅವನು ಆಸ್ತೀಕ ಎಂಬ ಹೆಸರಿನಿಂದ ಕರೆಯಲ್ಪಟ್ಟನು. ಬಾಲಕನಾಗಿದ್ದರೂ ಧೃಢನಾಗಿದ್ದ ಅತಿ ಬುದ್ಧಿವಂತನಾಗಿದ್ದ ಅವನು ಪನ್ನಗರಾಜನ ಮನೆಯಲ್ಲಿ ಅತ್ಯಂತ ಜಾಗರೂಕತೆಯಿಂದ ರಕ್ಷಣೆ ಪಡೆದಿದ್ದನು. ಅವನು ಶೂಲಪಾಣಿ ಹಿರಣ್ಯ ದೇವೇಶ ಭಗವಂತನಂತೆ ತೋರುತ್ತಿದ್ದು ಆ ನಾಗಗಳಿಗೆಲ್ಲ ಸಂತಸವನ್ನು ನೀಡುತ್ತಾ ಬೆಳೆದನು.

## ಪರಿಕ್ಷಿತ

ಬಹಳಷ್ಟು ಸಮಯವು ಕಳೆದನಂತರ, ಕಾಲ ಪ್ರಾಪ್ತವಾದ ಹಾಗೆ, ಕೌರವ ವಂಶದಲ್ಲಿ ಪರಿಕ್ಷಿತನೆಂದು ಖ್ಯಾತ ರಾಜನು ಜನಿಸಿದನು. ತನ್ನ ಪುರಾತನ ಪ್ರಪಿತಾಮಹ ಅರ್ಜುನನಂತೆ ಅವನು ಮಹಾಬಾಹುವೂ, ಭೂಮಂಡಲದ ಧನುರ್ಧರರಲ್ಲಿ ಶ್ರೇಷ್ಠನೂ ಮತ್ತು ಮೃಗಯಾಶೀಲನೂ ಆಗಿದ್ದನು. ಆ ಪೃಥಿವೀಪತಿಯು ಜಿಂಕೆ, ವರಾಹ, ಹಯೀನ, ಕಾಡೆಮ್ಮೆಗಳು ಮತ್ತು ಇತರ ಹಲವಾರು ವನ್ಯ ಮೃಗಗಳನ್ನು ಬೇಟೆಯಾಡುತ್ತಾ ಸಂಚರಿಸುತ್ತಿದ್ದನು. ಒಮ್ಮೆ ಒಂದು ಜಿಂಕೆಯನ್ನು ಬಾಣದಿಂದ ಹೊಡೆದ ಅವನು ತನ್ನ ಧನುಸ್ಸನ್ನು

ಭುಜದ ಮೇಲೇರಿಸಿ ಅದರ ಹಿಂದೆ ಹೋಗುತ್ತಾ ದಟ್ಟ ವನವನ್ನು ಪ್ರವೇಶಿಸಿದನು. ಭಗವಾನ್ ರುದ್ರನು ಸ್ವರ್ಗಲೋಕದಲ್ಲಿ ಯಜ್ಞಮೃಗವನ್ನು ಅರಸಿದಂತೆ ಆ ಧನುಷ್ಪಾಣಿಯು ಅದನ್ನು ಅಲ್ಲಿ ಇಲ್ಲಿ ಅರಸ ತೊಡಗಿದನು. ಇದರ ಹಿಂದೆ ಅವನು ಹೊಡೆದ ಯಾವ ಮೃಗವೂ ಜೀವಂತವಾಗಿ ಹೋಗಿರಲಿಲ್ಲ. ಈಗ ಕಳೆದುಹೋದ ಆ ಮೃಗವು ರಾಜ ಪರೀಕ್ಷಿತನ ಸಾವನ್ನು ಸೂಚಿಸುವಂತಿತ್ತು. ಜಿಂಕೆಯನ್ನು ಹಿಂಬಾಲಿಸುತ್ತಾ ಬಹುದೂರ ಹೋದ ಮಹೀಪತಿಯು ಆಯಾಸಗೊಂಡು ಬಾಯಾರಿಕೆಯಿಂದ ಬಳಲಿ ಆ ವನದಲ್ಲಿ ಒಂದು ಗೋಶಾಲೆಯಲ್ಲಿ ಕರುಗಳು ಹಾಲು ಕುಡಿಯುವಾಗ ಅವರ ಬಾಯಿಯಿಂದ ಹೊರಚೆಲ್ಲುತ್ತಿದ್ದ ಹಾಲಿನ ನೊರೆಯನ್ನೇ ಕುಡಿಯುತ್ತಿದ್ದ ಓರ್ವ ಮುನಿಯನ್ನು ಕಂಡನು. ವೇಗದಿಂದ ಅವನ ಬಳಿ ಬಂದು, ಧನುಸ್ಸನ್ನು ಮೇಲೇರಿಸಿ, ಹಸಿವು ಬಾಯಾರಿಕೆಗಳಿಂದ ಬಳಲುತ್ತಿದ್ದ ರಾಜನು ಆ ಸಂಶಿತವ್ರತ ಮುನಿಯನ್ನು ಕೇಳಿದನು:

> "ಬ್ರಾಹ್ಮಣ! ನಾನು ಅಭಿಮನ್ಯುವಿನ ಮಗ ರಾಜ ಪರಿಕ್ಷಿತ. ನನ್ನಿಂದ ಹೊಡೆಯಲ್ಪಟ್ಟ ಜಿಂಕೆಯೊಂದು ಕಳೆದು ಹೋಗಿದೆ. ನೀನು ಅದು ಎಲ್ಲಿ ಹೋಯಿತೆಂದು ಕಂಡಿದ್ದೀಯಾ?"

ಮೌನವ್ರತ ಪಾಲಿಸುತ್ತಿದ್ದ ಆ ಮುನಿಯು ಅವನಿಗೆ ಯಾವುದೇ ಉತ್ತರವನ್ನೂ ಕೊಡಲಿಲ್ಲ. ಇದರಿಂದ ಕ್ರೋಧಿತನಾದ ರಾಜನು ತನ್ನ ಧನುಸ್ಸಿನ ಕೊನೆಯಿಂದ ಸತ್ತ ಸರ್ಪವೊಂದನ್ನು ಎತ್ತಿ ಅವನ ಕೊರಳಲ್ಲಿ ಹಾಕಿದನು. ಆಗಲೂ ಕೂಡ ಅವನು ಒಳ್ಳೆಯ ಅಥವಾ



ಕೆಟ್ಟ ಯಾವ ಮಾತನ್ನೂ ಆಡಲಿಲ್ಲ. ಋಷಿಯನ್ನು ಆ ಅವಸ್ಥೆಯಲ್ಲಿ ನೋಡಿದ ರಾಜನು ಕೋಪವನ್ನು ಬಿಟ್ಟು ಬೇಸರದಿಂದ ತನ್ನ ನಗರಕ್ಕೆ ತೆರಳಿದನು.

ಆ ಮುನಿಗೆ ಮಹಾ ತೇಜಸ್ವಿ, ಮಹಾತಪಸ್ವಿ, ಮಹಾ ಕ್ರೋಧಿ, ಮಹಾವ್ರತ ಮತ್ತು ಒಲಿಸಲು ದುಷ್ಕರ ಶೃಂಗಿ ಎಂಬ ಹೆಸರಿನ ತರುಣ ಮಗನಿದ್ದನು. ಆ ಸರ್ವಭೂತಹಿತರತನು ಕಾಲ ಕಾಲದಲ್ಲಿ ಸುಸಂಯಮನಾಗಿ ತನ್ನ ಆಸನದಲ್ಲಿ ಕುಳಿತುಕೊಂಡು ಪರಮೇಷ್ಠಿ ಬ್ರಹ್ಮದೇವನನ್ನು ಉಪಾಸಿಸುತ್ತಿದ್ದನು. ಬ್ರಹ್ಮನ ಅಪ್ಪಣೆಯಂತೆ ಅವನು ತನ್ನ ಮನೆಗೆ ಬಂದನು. ವಿಷಸಮಾನ ಅತಿಕೋಪವನ್ನು ಹೊಂದಿದ್ದ ಆ ಋಷಿಸುತನಿಗೆ ಇನ್ನೊಬ್ಬ ಋಷಿಯ ಮಗ ಕೃಶ ಎನ್ನುವ ಸಖನು ನಗುನಗುತ್ತಾ ಹಾಸ್ಯದಲ್ಲಿ ಹೇಳಿದನು:

> "ಶೃಂಗಿ! ನಿನ್ನ ಗರ್ವವನ್ನು ಬಿಡು. ನೀನು ತಪಸ್ವಿಯೂ ತೇಜಸ್ವಿಯೂ ಆಗಿರಬಹುದು. ಆದರೆ ನಿನ್ನ ತಂದೆಯು ತನ್ನ ಹೆಗಲಮೇಲೆ ಒಂದು ಶವವನ್ನು ಹೊತ್ತಿದ್ದಾನೆ. ತಪಸ್ವಿಗಳೂ, ಸಿದ್ಧರೂ, ಬ್ರಹ್ಮವಿದರೂ ಆದ ನಮ್ಮಂತಹ ಋಷಿಪುತ್ರರಲ್ಲಿ ನೀನು ಯಾವ ವ್ಯವಹಾರವನ್ನೂ ಮಾಡಬೇಕಾಗಿಲ್ಲ. ನಿನ್ನ ತಂದೆಯು ಒಂದು ಶವವನ್ನು ಹೊತ್ತಿರುವುದನ್ನು ನೋಡಿದಾಗ ನಿನ್ನ ಪುರುಷಮಾನಿತ್ವ ಎಲ್ಲಿದೆ ಮತ್ತು ನಿನ್ನ ದರ್ಪದ ಮಾತುಗಳು ಎಲ್ಲಿ ಹೋಗುತ್ತವೆ?"

ಆ ತೇಜಸ್ವಿ ಶೃಂಗಿಯು ತನ್ನ ಗುರುವು ಒಂದು ಮೃತಶರೀರವನ್ನು ಧರಿಸಿದ್ದಾನೆ ಎಂದು ಕೇಳಿ ಕೋಪಸಮನ್ವಿತನಾಗಿ ಸಿಟ್ಟಿನಲ್ಲಿ ಉರಿದೆದ್ದನು. ಆಗ ಅವನು ಎಲ್ಲ ಮೃದು ಮಾತುಗಳನ್ನು ಬದಿಗೊತ್ತಿ ಕೃಶನಲ್ಲಿ

> "ನನ್ನ ತಂದೆಯು ಇಂದು ಯಾವ ಕಾರಣಕ್ಕಾಗಿ ಮೃತಶರೀರವನ್ನು ಹೊತ್ತಿದ್ದಾನೆ?"

ಎಂದು ಕೇಳಿದನು. ಕೃಶನು ಹೇಳಿದನು:

> "ಬೇಟೆಯಾಡುತ್ತಾ ಬಂದ ರಾಜಾ ಪರೀಕ್ಷಿತನು ಸತ್ತ ಒಂದು ಸರ್ಪವನ್ನು ನಿನ್ನ ತಂದೆಯ ಭುಜದ ಮೇಲೇರಿಸಿದನು."

ಆಗ ಶೃಂಗಿಯು ಹೇಳಿದನು:

> "ಆ ದುರಾತ್ಮ ರಾಜನಿಗೆ ನನ್ನ ತಂದೆಯು ಯಾವ ಅನಿಷ್ಟ ಕಾರ್ಯವನ್ನು ಮಾಡಿದನು? ಕೃಶ! ಅದನ್ನು ನನಗೆ ಹೇಳು ಮತ್ತು ನಂತರ ನನ್ನ ತಪೋಬಲವನ್ನು ನೋಡು."

ಕೃಶನು ಹೇಳಿದನು:

> "ಅಭಿಮನ್ಯುವಿನ ಮಗ ರಾಜಾ ಪರೀಕ್ಷಿತನು ತನ್ನ ಬಾಣದ ಹೊಡೆತ ತಿಂದು ಪಲಾಯನಗೈದ ಜಿಂಕೆಯೊಂದನ್ನು ಏಕಾಕಿಯಾಗಿ ಅರಸುತ್ತಾ ಬಂದನು. ಈ ಮಹಾವನದಲ್ಲಿ ಆ ಜಿಂಕೆಯನ್ನು ಕಾಣದೇ ಅದನ್ನು ಹುಡುಕುತ್ತಾ

ಬರುತ್ತಿರುವಾಗ ನಿನ್ನ ತಂದೆಯನ್ನು ಕಂಡು ಅವನಲ್ಲಿ ಕೇಳಿದನು. ಹಸಿವು, ಬಾಯರಿಕೆ ಮತ್ತು ಆಯಾಸಗಳಿಂದ ಬಳಲಿದ ಅವನು ತನ್ನ ಸ್ಥಾನದಲ್ಲಿಯೇ ನಿಂತಿದ್ದ ನಿನ್ನ ತಂದೆಯನ್ನು ಕಳೆದುಹೋದ ಜಿಂಕೆಯ ಕುರಿತು ಮೇಲಿಂದ ಮೇಲೆ ಕೇಳಿದನು. ಆದರೆ ಮೌನವ್ರತ ಪಾಲಿಸುತ್ತಿದ್ದ ಅವನು ಉತ್ತರವನ್ನು ಕೊಡದೇ ಇದ್ದಾಗ ರಾಜನು ತನ್ನ ಧನುಸ್ಸಿನ ತುದಿಯಿಂದ ಸರ್ಪವೊಂದನ್ನು ಅವನ ಭುಜದ ಮೇಲೇರಿಸಿದನು. ಶೃಂಗಿ! ವ್ರತನಿರತ ನಿನ್ನ ತಂದೆಯು ಈಗಲೂ ಅದೇ ಅವಸ್ಥೆಯಲ್ಲಿ ಇದ್ದಾನೆ. ರಾಜನು ತನ್ನ ನಗರ ಹಸ್ತಿನಾಪುರಕ್ಕೆ ತೆರಳಿದ್ದಾನೆ.”

ಇದನ್ನು ಕೇಳಿದ ಋಷಿಪುತ್ರನು ಆಕಾಶದ ಕಂಬದಂತೆ ಸ್ತಬ್ಧನಾಗಿ ನಿಂತನು. ಕೋಪದಿಂದ ಅವನ ಕಣ್ಣುಗಳು ಕೆಂಪಾದವು ಮತ್ತು ಸಿಟ್ಟಿನಿಂದ ಭುಗಿಲೆಂದು ಉರಿದೆದ್ದನು. ಕೋಪಾವಿಷ್ಟನಾಗಿ ಕ್ರೋಧದ ವೇಗ ಬಲಗಳಿಂದ ಚೋದಿತನಾಗಿ ಆ ತೇಜಸ್ವಿಯು ನೀರನ್ನು ಮುಟ್ಟಿ ಆ ನೃಪತಿಗೆ ಶಾಪವನ್ನಿತ್ತನು:

“ವೃದ್ಧನೂ, ಕೃಶನೂ ಆದ ನನ್ನ ತಂದೆಯ ಭುಜಗಳ ಮೇಲೆ ಮೃತ ಸರ್ಪವನ್ನು ಹಾಕಿ ದ್ವಿಜನನ್ನು ಅಪಮಾನಿಸಿ ಕುರುಗಳ ಯಶಸ್ಸನ್ನು ಹಾಳುಮಾಡಿದ ಆ ರಾಜಕಿಲ್ಬಿಷಿ, ಪಾಪ ಮತಿಯು ಇಂದಿನಿಂದ ಏಳು ರಾತ್ರಿಯೊಳಗೆ ನನ್ನ

ವಾಕ್ಬಲದಿಂದ ಪ್ರೇರಿತ ಅತಿವಿಷಸಮಾವಿತ ತಿಗ್ಮತೀಜಸ್ವಿ ಪನ್ನಗೋತ್ತಮ ತಕ್ಷಕನಿಂದ ಯಮಸದನಕ್ಕೆ ಒಯ್ಯಲ್ಪಡುತ್ತಾನೆ."

ಸಿಟ್ಟಿನಲ್ಲಿ ಈ ರೀತಿ ರಾಜನನ್ನು ಶಪಿಸಿದ ಶೃಂಗಿಯು ಹಿಂದಿರುಗಿ ಸರ್ಪಶವವನ್ನು ಹೊತ್ತು ಗೋಶಾಲೆಯಲ್ಲಿ ಕುಳಿತಿದ್ದ ತನ್ನ ತಂದೆಯನ್ನು ನೋಡಿದನು. ತಂದೆಯ ಭುಜಗಳ ಮೇಲೆ ಇನ್ನೂ ಸರ್ಪದ ಶವವು ಇರುವುದನ್ನು ನೋಡಿ ಪುನಃ ಅವನು ಕ್ರೋಧದಿಂದ ಉರಿದೆದ್ದನು. ದುಃಖದಿಂದ ಕಣ್ಣೀರಿಡುತ್ತಾ ತಂದೆಗೆ ಹೇಳಿದನು:

"ತಂದೇ! ಆ ದುರಾತ್ಮನಿಂದ ನಿನಗಾದ ಅಪಮಾನವನ್ನು ಕೇಳಿದ ನಾನು ಕೋಪಗೊಂಡು ಆ ರಾಜ ಪರಿಕ್ಷಿತನಿಗೆ ಶಾಪವನ್ನು ಕೊಟ್ಟಿದ್ದೇನೆ. ಆ ಕುರುಕುಲಾಧಮ ನೃಪನು ನನ್ನ ಈ ಉಗ್ರ ಶಾಪಕ್ಕೆ ಅರ್ಹನಾಗಿದ್ದಾನೆ. ಇಂದಿನಿಂದ ಏಳು ದಿನಗಳಲ್ಲಿ ಪನ್ನಗೋತ್ತಮ ತಕ್ಷಕನು ಆ ಪಾಪಿಯನ್ನು ವೈವಸ್ವತನ ಪರಮದಾರುಣ ಭವನಕ್ಕೆ ಕರೆದೊಯ್ಯುತ್ತಾನೆ."

ಆಗ ಆ ಕೋಪಸಮನ್ವಿತ ಬ್ರಾಹ್ಮಣನಿಗೆ ಅವನ ತಂದೆಯು ಹೇಳಿದನು:

"ನನ್ನ ಮಗನೇ! ನೀನು ಮಾಡಿದ ಕೆಲಸ ನನಗೆ ಇಷ್ಟವಾಗಲಿಲ್ಲ. ಧರ್ಮತಪಸ್ವಿಗಳಿಗೆ ಇದು ತಕ್ಕುದಲ್ಲ. ನಾವು ಆ ನರೇಂದ್ರನ ಗಡಿಯೊಳಗೇ ವಾಸಿಸುತ್ತಿದ್ದೇವೆ.

ಅವನು ನ್ಯಾಯದಿಂದ ನಮ್ಮನ್ನು ರಕ್ಷಿಸುತ್ತಿದ್ದಾನೆ, ನಾವು ಅವನಿಗೆ ಕೆಟ್ಟದ್ದನ್ನು ಯೋಚಿಸಬಾರದಿತ್ತು. ವರ್ತಮಾನದಲ್ಲಿರುವ ರಾಜನನ್ನು ನಮ್ಮಂಥವರು ಸರ್ವಥಾ ಕ್ಷಮಿಸಬೇಕು. ಧರ್ಮವನ್ನು ನಾಶಪಡಿಸಿದರೆ ಧರ್ಮವೇ ನಮ್ಮನ್ನು ನಾಶಪಡಿಸುತ್ತದೆ. ಒಂದುವೇಳೆ ರಾಜನು ನಮ್ಮನ್ನು ರಕ್ಷಿಸುವುದಿಲ್ಲವಾದರೆ ನಾವು ಹಲವಾರು ಮಹತ್ತರ ಪೀಡೆಗಳನ್ನು ಅನುಭವಿಸಬೇಕಾಗುತ್ತದೆ. ಇಷ್ಟೊಂದು ಸುಖದಿಂದ ನಾವು ಧರ್ಮದಲ್ಲಿ ನಡೆಯಲು ಶಕ್ಯವಾಗುತ್ತಿರಲಿಲ್ಲ. ರಾಜನಿಂದ ರಕ್ಷಣೆಯನ್ನು ಪಡೆದ ನಾವು ಶಾಸ್ತ್ರದೃಷ್ಟಿಯಲ್ಲಿ ಜೀವಿಸಿ ವಿಪುಲ ಧರ್ಮವನ್ನು ಗಳಿಸುತ್ತೇವೆ ಮತ್ತು ಅದರಲ್ಲಿನ ಒಂದು ಅಂಶವು ಅವನಿಗೂ ಸೇರುತ್ತದೆ. ವಿಶೇಷವಾಗಿ ಪರಿಕ್ಷಿತನು ತನ್ನ ಪ್ರಪಿತಾಮಹನಂತೆ ರಾಜನಾದವನು ತನ್ನ ಪ್ರಜೆಗಳನ್ನು ಹೇಗೆ ರಕ್ಷಿಸಬೇಕೋ ಹಾಗೆ ನಮ್ಮನ್ನೂ ರಕ್ಷಿಸುತ್ತಿದ್ದಾನೆ. ಬಾಯಾರಿಕೆ ಆಯಾಸಗಳಿಂದ ಬಳಲಿದ ಆ ತಪಸ್ವಿ ರಾಜನಿಗೆ ನಾನು ಈ ವ್ರತವನ್ನು ಮಾಡುತ್ತಿದ್ದೇನೆ ಎಂದು ಗೊತ್ತಾಗಲಿಲ್ಲ ಎನ್ನುವುದು ಅಸಂಶಯವೇ ಸರಿ. ಆದುದರಿಂದ ಬಾಲಕನಾದ ನೀನು ಆತುರದಲ್ಲಿ ಮಾಡಿದ ಈ ಕೆಲಸವು ದುಷ್ಕೃತವಾದದ್ದು. ಆ ನೃಪನು ನಮ್ಮಿಂದ ಸರ್ವಥಾ ಈ ಶಾಪವನ್ನು ಪಡೆಯಲು ಅರ್ಹನಲ್ಲ."

ಶೃಂಗಿಯು ಹೇಳಿದನು:

"ತಂದೆ! ನಾನು ಮಾಡಿದ ಕೆಲಸವು ಆತುರದಲ್ಲಿದ್ದಿರಬಹುದು ಅಥವಾ ಕೆಟ್ಟದ್ದಾಗಿರಬಹುದು. ಅದು ಪ್ರಿಯವಾಗಿರಲಿ ಅಥವಾ ಅಪ್ರಿಯವಾಗಿರಲಿ ನಾನು ಆಡಿದ ಮಾತು ಸುಳ್ಳಾಗಲಾರದು. ನಾನು ನಿನಗೆ ಹೇಳುತ್ತೇನೆ, ಇದು ಅನ್ಯಥಾ ಅಗುವುದಿಲ್ಲ. ಶಾಪ ಕೊಡುವಾಗ ಬಿಡು, ಹಾಸ್ಯದಲ್ಲಿಯೂ ನಾನು ಸುಳ್ಳನ್ನು ಹೇಳುವುದಿಲ್ಲ."

ಶಮೀಕನು ಹೇಳಿದನು:

"ಪುತ್ರ! ನೀನು ಉಗ್ರಪ್ರಭಾವಿ ಮತ್ತು ಸತ್ಯವಾದಿ ಎನ್ನುವುದನ್ನು ನಾನು ತಿಳಿದಿದ್ದೇನೆ. ಈ ಹಿಂದೆ ನೀನು ಅಸತ್ಯವನ್ನು ನುಡಿಯಲೇ ಇಲ್ಲ ಮತ್ತು ಇದು ಸುಳ್ಳಾಗುವುದೇ ಇಲ್ಲ. ಆದರೆ ವಯಸ್ಕನಾದರೂ ಸದ್ಗುಣಸಂಯುಕ್ತನಾಗಿ ಮಹಾ ಯಶಸ್ಸನ್ನು ಹೊಂದಬೇಕೆಂದು ಮಗನಿಗೆ ತಂದೆಯು ಸತತ ಸಲಹೆಗಳನ್ನು ಕೊಡುತ್ತಿರಬೇಕು. ನೀನಾದರೂ ಇನ್ನೂ ಬಾಲಕ. ನಿನಗಿಷ್ಟು ಬೇಕಾಗಿರಲಿಕ್ಕಿಲ್ಲ. ನೀನು ನಿನ್ನ ತಪಸ್ಸಿನಿಂದ ಪ್ರಭಾವಿತನಾಗಿದ್ದೀಯೆ. ತೇಜಸ್ಸು ವೃದ್ಧಿಯಾದಂತೆ ಕೋಪವೂ ಅತೀವವಾಗುತ್ತದೆ. ನೀನು

ನನ್ನ ಮಗ ಮತ್ತು ಇನ್ನೂ ಬಾಲಕನೆಂದು ತಿಳಿದು, ನೀನು ದುಡುಕುವುದನ್ನು ಕಂಡು ನಿನಗೆ ಸಲಹೆ ನೀಡಬೇಕೆಂದು ತೋರುತ್ತಿದೆ. ನೀನು ಶಮಯುತನಾಗಿ ವನದಲ್ಲಿರುವ ಆಹಾರಗಳನ್ನು ಸೇವಿಸು. ಈ ಕ್ರೋಧವನ್ನು ತೊರೆದು ಧರ್ಮವನ್ನು ತೊರೆಯದೇ ನಡೆದುಕೋ. ಯತಿಗಳು ಬಹು ಕಷ್ಟ ಪಟ್ಟು ಪಡೆದ ಧರ್ಮವನ್ನು ಕ್ರೋಧವು ನಾಶಮಾಡುತ್ತದೆ. ಧರ್ಮವಿಹೀನರಿಗೆ ಅವರ ಮಾರ್ಗದ ಗುರಿಯೇ ತಿಳಿಯುವುದಿಲ್ಲ. ಕ್ಷಮಿಸುವ ಯತಿಗಳಿಗೆ ಶಾಂತಿಯೇ ಸಿದ್ಧಕಾರಕವು. ಕ್ಷಮಾವಂತರಿಗೆ ಈ ಲೋಕ ಮತ್ತು ಪರಲೋಕ ಎರಡರಲ್ಲಿಯೂ ಒಳ್ಳೆಯದಾಗುತ್ತದೆ. ಆದುದರಿಂದ ನೀನು ಸತತವೂ ಕ್ಷಮಾಶೀಲನಾಗಿ ಮತ್ತು ಜಿತೇಂದ್ರಿಯನಾಗಿ ನಡೆದುಕೊಳ್ಳಬೇಕು. ಬ್ರಾಹ್ಮಣರೂ ಪಡೆಯಲಸಾಧ್ಯವಾದ ಲೋಕವನ್ನು ಕ್ಷಮೆಯಿಂದಲೇ ಪಡೆಯುತ್ತೀಯೆ. ಶಾಂತಿಮಾರ್ಗವನ್ನು ಆರಿಸಿದ ನಾನು ನನಗೆ ಶಕ್ಯವಾದುದನ್ನು ಮಾಡುತ್ತೇನೆ. ನೃಪನಿಗೆ ನಾನು ಈ ಸಂದೇಶವನ್ನು ಕಳುಹಿಸುತ್ತೇನೆ: 'ರಾಜನ್! ನೀನು ನನಗೆ ಮಾಡಿದ ಅಪಮಾನವನ್ನು ನೋಡಿ ಕೋಪಗೊಂಡ, ಬುದ್ಧಿಯು ಇನ್ನೂ ಬೆಳೆಯದ ಬಾಲಕ ನನ್ನ ಪುತ್ರನಿಂದ ನೀನು ಶಪಿಸಲ್ಪಟ್ಟಿದ್ದೀಯೆ.'"

ಆ ಸುವ್ರತ ದಯಾವಂತ ಮಹಾತಪಸ್ವಿಯು ತನ್ನ ಶಿಷ್ಯನೊಬ್ಬನಿಗೆ ಈ ರೀತಿಯ ಆದೇಶವನ್ನಿತ್ತು ನೃಪತಿ ಪರಿಕ್ಷಿತನ ಬಳಿ ಕಳುಹಿಸಿದನು. ಕುಶಲಪ್ರಶ್ನೆ ಮತ್ತು ಕಾರ್ಯ ವೃತ್ತಾಂತಗಳನ್ನೊಳಗೊಂಡ ಸಂದೇಶದೊಂದಿಗೆ ಶೀಲವಂತನಾದ ಗೌರಮುಖ ಎಂಬ ಹೆಸರಿನ ಶಿಷ್ಯನನ್ನು ಕಳುಹಿಸಿದನು. ಅವನು ಹೊರಟು ಶೀಘ್ರವಾಗಿ ಕುರುವರ್ಧಕ ನರೇಂದ್ರನ ಭವನವನ್ನು ಪ್ರವೇಶಿಸಿ ದ್ವಾರಪಾಲಕರ ಮೂಲಕ ಪೂರ್ವ ಸಂದೇಶವನ್ನು ಕಳುಹಿಸಿದನು. ನರೇಂದ್ರನಿಂದ ಸತ್ಕರಿಸಲ್ಪಟ್ಟ ದ್ವಿಜ ಗೌರಮುಖನು ಸ್ವಲ್ಪ ವಿಶ್ರಾಂತಿಯನ್ನು ಪಡೆದು ಶಮೀಕನ ಆ ಘೋರ ಮಾತುಗಳನ್ನು ಇದ್ದ ಹಾಗೆ ಏನನ್ನೂ ಬಿಡದೇ ಸರ್ವವನ್ನು ಮಂತ್ರಿಗಳ ಸನ್ನಿಧಿಯಲ್ಲಿ ರಾಜನಿಗೆ ಹೇಳಿದನು:

> “ರಾಜೇಂದ್ರ! ನಿನ್ನ ರಾಜ್ಯದಲ್ಲಿ ಶಮೀಕ ಎಂಬ ಹೆಸರಿನ ಪರಮ ಧರ್ಮಾತ್ಮ, ತನ್ನ ಭಾವೋದ್ವೇಗಗಳನ್ನು ಹಿಡಿತದಲ್ಲಿಟ್ಟುಕೊಂಡ, ಶಾಂತ ಮಹಾ ತಪಸ್ವಿ ಋಷಿಯು ವಾಸಿಸುತ್ತಿದ್ದಾನೆ. ಅವನ ಭುಜಗಳ ಮೇಲೆ ನೀನು ಧನುಸ್ಸಿನ ತುದಿಯಿಂದ ಸತ್ತುಹೋಗಿದ್ದ ಒಂದು ಸರ್ಪವನ್ನು ಏರಿಸಿದ್ದೆ. ಅವನು ಈ ಕಾರ್ಯಗೈದ ನಿನ್ನನ್ನು ಕ್ಷಮಿಸಿದ್ದರೂ ಅವನ ಮಗನು ನಿನ್ನನ್ನು ಕ್ಷಮಿಸಲಿಲ್ಲ. ಅವನ ತಂದೆಗೆ ತಿಳಿಸದೆಯೇ ಅವನು ಮುಂದಿನ ಏಳು ರಾತ್ರಿಗಳಲ್ಲಿ ತಕ್ಷಕನಿಂದ ನಿನ್ನ ಮೃತ್ಯುವಾಗುತ್ತದೆ ಎಂದು ಶಪಿಸಿದ್ದಾನೆ. ನಿನ್ನ ರಕ್ಷಣೆಯನ್ನು

ಮಾಡು ಎಂದು ಪುನಃ ಪುನಃ ಕೇಳಿಕೊಂಡರೂ ಅವನ ಈ ಮಾತುಗಳನ್ನು ಯಾರಿಂದಲೂ ಸುಳ್ಳಾಗಿಸಲು ಸಾಧ್ಯವಿಲ್ಲ. ತನ್ನ ಕೋಪಸಮನ್ವಿತ ಪುತ್ರನನ್ನು ಸಂಯಮಿಸಲು ಅಶಕ್ತನಾದ ಅವನು ನಿನ್ನ ಹಿತವನ್ನೇ ಬಯಸಿ ನನ್ನನ್ನು ನಿನ್ನಲ್ಲಿಗೆ ಕಳುಹಿಸಿದ್ದಾನೆ."

ಈ ರೀತಿಯ ಘೋರ ಮಾತುಗಳನ್ನು ಕೇಳಿದ ಕುರುನಂದನ ಮಹಾತಪಸ್ವಿ ರಾಜನು ತಾನು ಮಾಡಿದ ಕೆಲಸಕ್ಕಾಗಿ ಬಹಳಷ್ಟು ನೊಂದನು. ಅಂದು ಮುನಿವರನು ಮೌನವ್ರತವನ್ನು ಪಾಲಿಸುತ್ತಿದ್ದನೆಂದು ಕೇಳಿ ರಾಜನು ಇನ್ನೂ ಹೆಚ್ಚು ಶೋಕಸಂತಪ್ತನಾದನು. ತನ್ನ ಮೇಲೆ ಶಮೀಕನು ತೋರಿದ ಅನುಕಂಪವನ್ನು ಮತ್ತು ಅಂದು ತಾನು ಆ ಮುನಿಗೆ ಮಾಡಿದ ಪಾಪ ಕೃತ್ಯವನ್ನು ನೆನೆಸಿಕೊಂಡು ರಾಜನು ಪರಿತಾಪಗೊಂಡನು. ಅಮರನಂತೆ ತೋರುತ್ತಿದ್ದ ಆ ರಾಜನು ತಾನು ಗೈದ ಕರ್ಮದ ಕುರಿತು ದುಃಖಿಸುವಷ್ಟು ತನ್ನ ಮೃತ್ಯುವಿನ ಕುರಿತು ಕೇಳಿದುದಕ್ಕೆ ಶೋಕಿಸಲಿಲ್ಲ.

"ಭಗವಾನ್ ಮುನಿಯು ನನಗೆ ತೋರಿಸಿದ ದಯೆಯು ನನಗೆ ಪ್ರಸಾದವಾಗಲಿ"

ಎಂದು ಹೇಳಿ ರಾಜನು ಗೌರಮುಖನನ್ನು ಕಳುಹಿಸಿಕೊಟ್ಟನು. ಗೌರಮುಖನು ಹೊರಟುಹೋದೊಡನೆಯೇ ರಾಜನು ಸಂವಿಗ್ನ

ಮನಸ್ಕನಾಗಿ ಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿದನು. ಮಂತ್ರಿಗಳೊಂದಿಗೆ ಸಮಾಲೋಚಿಸಿ ಒಂದು ಸ್ತಂಭದಮೇಲೆ ಸುರಕ್ಷಿತ ಭವನವನ್ನು ಕಟ್ಟಲು ನಿಶ್ಚಯಿಸಿದನು. ತನ್ನ ರಕ್ಷಣೆಗೆಂದು ಸುತ್ತಲೂ ವೈದ್ಯರು, ಔಷಧಗಳು, ಬ್ರಾಹ್ಮಣರು ಮತ್ತು ಸಿದ್ಧಮಂತ್ರಿಗಳನ್ನು ಇರಿಸಿದನು. ಈ ರೀತಿ ಎಲ್ಲ ಕಡೆಯಿಂದಲೂ ರಕ್ಷಣೆಯನ್ನು ಪಡೆದು ಅವನು ಅಲ್ಲಿಯೇ ಎಲ್ಲ ಮಂತ್ರಿಗಳು ಮತ್ತು ಧರ್ಮಜ್ಞರಿಂದ ಸುತ್ತುವರೆಯಲ್ಪಟ್ಟು ರಾಜಕಾರ್ಯಗಳನ್ನು ನೆರವೇರಿಸುತ್ತಿದ್ದನು.

ಆ ಏಳನೆಯ ದಿನವು ಪ್ರಾಪ್ತವಾದಾಗ ದ್ವಿಜಸತ್ತಮನೂ ವಿದ್ವಾಂಸನೂ ಆದ ಕಾಶ್ಯಪನೋರ್ವನು ರಾಜನಿಗೆ ಚಿಕಿತ್ಸೆಕೊಡುವ ಉದ್ದೇಶದಿಂದ ಬರುತ್ತಿದ್ದನು. ಪನ್ನಗಶ್ರೇಷ್ಠ ತಕ್ಷಕನು ಆ ರಾಜಸತ್ತಮನನ್ನು ಯಮಸಾದನಕ್ಕೆ ಒಯ್ಯುತ್ತಾನೆ ಎನ್ನುವುದನ್ನು ಮತ್ತು ಅಲ್ಲಿಯವರೆಗೆ ನಡೆದುದೆಲ್ಲವನ್ನೂ ಅವನು ಕೇಳಿದ್ದನು. ಪನ್ನಗೇಂದ್ರನು ಕಚ್ಚಿದಾಗ ಅವನನ್ನು ನಾನು ಗುಣಪಡಿಸುತ್ತೇನೆ ಮತ್ತು ಇದರಿಂದ ನಾನು ಧರ್ಮ ಮತ್ತು ಅರ್ಥ ಇವೆರಡನ್ನೂ ಗಳಿಸಬಲ್ಲೆ ಎಂದು ಅವನು ಯೋಚಿಸಿದ್ದನು. ಏಕಮನಸ್ಕನಾಗಿ ಹೋಗುತ್ತಿದ್ದ ಕಾಶ್ಯಪನನ್ನು ನೋಡಿದ ನಾಗೇಂದ್ರ ತಕ್ಷಕನು ಓರ್ವ ಬ್ರಾಹ್ಮಣನ ರೂಪತಾಳಿ ಅವನ ಎದುರು ಬಂದನು. ಪನ್ನಗೇಂದ್ರನು ಮುನಿಪುಂಗವ ಕಾಶ್ಯಪನಿಗೆ ಕೇಳಿದನು:

“ಇಷ್ಟೊಂದು ವೇಗದಲ್ಲಿ ಎಲ್ಲಿಗೆ ಹೋಗುತ್ತಿರುವೆ ಮತ್ತು

ಅಲ್ಲಿ ಹೋಗಿ ಏನು ಮಾಡುತ್ತೀಯೆ?”

ಆಗ ಕಾಶ್ಯಪನು ಹೇಳಿದನು:

“ಕುರುಕುಲೋತ್ಪನ್ನ ಅರಿಂದಮ ನೃಪ ಪರಿಕ್ಷಿತನನ್ನು ಇಂದು ಪನ್ನಗಶ್ರೇಷ್ಠ ತಕ್ಷಕನು ಕಚ್ಚಲಿದ್ದಾನೆ. ಸೌಮ್ಯ! ಅಗ್ನಿಸಮಾನ ತೇಜಸ್ಸನ್ನುಳ್ಳ ಪನ್ನಗೇಂದ್ರನಿಂದ ಕಚ್ಚಲ್ಪಡುವ ಪಾಂಡವರ ಕುಲಕರ, ಅಮಿತತೇಜಸ ರಾಜನನ್ನು ಉಳಿಸಲೋಸುಗ ನಾನು ಈಗ ಅವಸರದಲ್ಲಿ ಹೋಗುತ್ತಿದ್ದೇನೆ.”

ತಕ್ಷಕನು ಹೇಳಿದನು:

“ಬ್ರಾಹ್ಮಣ! ಆ ಮಹೀಪತಿಯನ್ನು ಸಾಯಿಸುವ ತಕ್ಷಕನೇ ನಾನು. ಹಿಂದಿರುಗು. ನನ್ನಿಂದ ಕಚ್ಚಲ್ಪಟ್ಟವರಿಗೆ ನೀನು ಚಿಕಿತ್ಸೆ ನೀಡಲಾರೆ.”

ಕಾಶ್ಯಪನು ಹೇಳಿದನು:

“ನಾಗ! ವಿದ್ಯಾಬಲನಾದ ನಾನು ನೀನು ಕಚ್ಚುವ ಆ ನೃಪತಿಗೆ ಉಪಚಾರ ನೀಡಬಲ್ಲೆ ಎಂದು ನನ್ನ ಧೃಢ ನಂಬಿಕೆ.”

ತಕ್ಷಕನು ಹೇಳಿದನು:

“ಕಾಶ್ಯಪ! ನನ್ನಿಂದ ಕಚ್ಚಲ್ಪಟ್ಟ ಯಾರನ್ನೂ ನೀನು

ಗುಣಪಡಿಸಬಲ್ಲೆಯೆಂದಾದರೆ ನಾನು ಕಚ್ಚುವ ಈ ವೃಕ್ಷವನ್ನು ಪುನರ್ಜೀವಗೊಳಿಸು. ನಿನ್ನ ಕಣ್ಣೆದಿರೇ ಈ ಆಲದ ಮರವನ್ನು ಸುಟ್ಟು ಭಸ್ಮಮಾಡುತ್ತೇನೆ. ಆಗ ನಿನ್ನ ವಿಶೇಷ ಮಂತ್ರಬಲವನ್ನು ತೋರಿಸು."

ಕಾಶ್ಯಪನು ಹೇಳಿದನು:

"ನಾಗೇಂದ್ರ! ನಿನಗೆ ಇಷ್ಟವಾದರೆ ಈ ವೃಕ್ಷವನ್ನು ಕಚ್ಚು. ಭುಜಂಗಮ! ನೀನು ನೋಡುತ್ತಿದ್ದ ಹಾಗೆಯೇ ಅದನ್ನು ನಾನು ಬದುಕಿಸುತ್ತೇನೆ."

ಮಹಾತ್ಮ ಕಾಶ್ಯಪನಿಂದ ಹೀಗೆ ಹೇಳಲ್ಪಟ್ಟ ನಾಗೇಂದ್ರ ಪನ್ನಗೋತ್ತಮನು ಅಲ್ಲಿದ್ದ ನ್ಯಗ್ರೋಧ ವೃಕ್ಷವನ್ನು ಕಚ್ಚಿದನು. ಆ ಮಹಾದ್ಯುತಿಯಿಂದ ಕಚ್ಚಲ್ಪಟ್ಟ ವೃಕ್ಷವು ವಿಷವನ್ನುಂಡು ಎಲ್ಲಾ ಕಡೆಯಿಂದಲೂ ಸುಟ್ಟು ಉರಿಯತೊಡಗಿತು. ಆ ಮರವನ್ನು ಸುಟ್ಟುಹಾಕಿದ ನಾಗನು ಕಾಶ್ಯಪನಿಗೆ ಪುನಃ ಹೇಳಿದನು:

"ದ್ವಿಜಶ್ರೇಷ್ಠ! ಈ ವನಸ್ಪತಿಯನ್ನು ಜೀವಗೊಳಿಸಲು ನಿನ್ನ ಪ್ರಯತ್ನ ಮಾಡು."

ಪನ್ನಗೇಂದ್ರನ ತೇಜಸ್ಸಿನಿಂದ ಭಸ್ಮೀಭೂತ ಆ ವೃಕ್ಷದ ಎಲ್ಲ ಭಸ್ಮವನ್ನು ತೆಗೆದುಕೊಂಡು ಕಾಶ್ಯಪನು ಈ ವಾಕ್ಯಗಳನ್ನು ಹೇಳಿದನು:

"ಪನ್ನಗೇಂದ್ರ! ನೋಡು! ನನ್ನ ವಿದ್ಯಾಬಲದಿಂದ ಈ

ವನಸ್ಪತಿಯನ್ನು ಈಗ ಸಜೀವಗೊಳಿಸುತ್ತೇನೆ. ನೋಡುತ್ತಿರು ಭುಜಂಗಮ !"

ಆಗ ಆ ಭಗವಾನ್ ವಿದ್ವಾನ್ ದ್ವಿಜಸತ್ತಮ ಕಾಶ್ಯಪನು ಭಸ್ಮದ ರಾಶಿಯಾಗಿದ್ದ ವೃಕ್ಷವನ್ನು ತನ್ನ ವಿದ್ಯೆಯಿಂದ ಸಜೀವಗೊಳಿಸಿದನು. ಮೊದಲು ಅವನು ಅಂಕುರವನ್ನು ಮಾಡಿದನು, ಅದಕ್ಕೆ ಎರಡು ಎಲೆಗಳನ್ನಿತ್ತನು, ಮತ್ತು ಪಲಾಶ ರೆಂಬೆಗಳನ್ನಿತ್ತು ಪುನಃ ಅದನ್ನು ಮೊದಲಿನ ಮರದಂತೆಯೇ ಮಾಡಿದನು. ಮಹಾತ್ಮ ಕಾಶ್ಯಪನಿಂದ ಜೀವಿತಗೊಂಡ ಆ ವೃಕ್ಷವನ್ನು ನೋಡಿದ ತಕ್ಷಕನು ಹೇಳಿದನು:

"ಬ್ರಾಹ್ಮಣ ! ನಿನ್ನ ಈ ಕೃತಿಯು ಅತ್ಯದ್ಭುತವೇ ಸರಿ. ನೀನು ನನ್ನ ಈ ವಿಷ ಅಥವಾ ಇನ್ನ್ಯಾವುದೂ ವಿಷವನ್ನು ನಾಶಪಡಿಸಬಲ್ಲೆ. ನೀನು ಹೋಗುತ್ತಿರುವಲ್ಲಿ ಎಷ್ಟು ಸಂಪತ್ತನ್ನು ಅಪೇಕ್ಷಿಸುತ್ತಿದ್ದೀಯೆ? ನೃಪೋತ್ತಮನಿಂದ ನೀನು ಬಯಸುವ ಪರಿಹಾರವನ್ನು ಎಷ್ಟು ಕಷ್ಟವಾದರೂ ನಾನೇ ನಿನಗೆ ಕೊಡುತ್ತೇನೆ. ಬ್ರಾಹ್ಮಣನ ಶಾಪಕ್ಕೊಳಗಾದ ಕ್ಷೀಣಾಯುಷಿ ಆ ನರಾಧಿಪನನ್ನು ಉಳಿಸುವ ನಿನ್ನ ಪ್ರಯತ್ನ ಯಶಸ್ವಿಯಾಗುವುದು ಸಂಶಯವೇ. ಅದರಿಂದ ಮೂರೂ ಲೋಕಗಳಲ್ಲಿ ವಿಶೃತ ದೇದೀಪ್ಯಮಾನ ನಿನ್ನ ಈ ಯಶಸ್ಸು ಸೂರ್ಯನಕಿರಣಗಳನ್ನು ಕಿತ್ತುಕೊಂಡರೆ ಹೇಗೋ ಹಾಗೆ ನಂದಿಹೋಗುತ್ತದೆ."

ಕಾಶ್ಯಪನು ಹೇಳಿದನು:

> “ಹಣಕ್ಕೋಸ್ಕರವೇ ನಾನು ಅಲ್ಲಿಗೆ ಹೋಗುತ್ತಿದ್ದೇನೆ.
> ಭುಜಂಗಮ! ನೀನು ನನಗೆ ಅದನ್ನೇ ನೀಡುವುದಾದರೆ
> ನಿನ್ನಿಂದ ಅದನ್ನು ಸ್ವೀಕರಿಸಿ ಮನೆಗೆ ಹಿಂದಿರುಗುತ್ತೇನೆ.”

ತಕ್ಷಕನು ಹೇಳಿದನು:

> “ರಾಜನಿಂದ ಎಷ್ಟು ಧನವನ್ನು ಕೇಳಬಯಸುತ್ತೀಯೋ
> ಅದಕ್ಕೂ ಅಧಿಕ ಧನವನ್ನು ನಾನು ನಿನಗೆ ಕೊಡುತ್ತೇನೆ.
> ದ್ವಿಜೋತ್ತಮ! ಹಿಂದಿರುಗು.”

ತಕ್ಷಕನ ಮಾತುಗಳನ್ನು ಕೇಳಿದ ಮಹಾತೇಜಸ್ವಿ ಬುದ್ಧಿವಂತ ದ್ವಿಜಸತ್ತಮ ಕಾಶ್ಯಪನು ರಾಜನ ಕುರಿತು ಯೋಚಿಸಿ ತನ್ನ ದಿವ್ಯಜ್ಞಾನದಿಂದ ಪಾಂಡವ ಕುಲದಲ್ಲಿ ಜನಿಸಿದ ಆ ನೃಪತಿಯು ಕ್ಷೀಣಾಯುಷಿಯೆಂದು ತಿಳಿದನು. ಆಗ ಆ ಮುನಿವರನು ತಕ್ಷಕನಿಂದ ತನಗಿಷ್ಟವೆನಿಸಿದಷ್ಟು ವಿತ್ತವನ್ನು ಪಡೆದು ಹಿಂದಿರುಗಿದನು. ಒಪ್ಪಂದದಂತೆ ಆ ಮಹಾತ್ಮ ಕಾಶ್ಯಪನು ಅಲ್ಲಿಂದ ಮರಳಲಾಗಿ ತಕ್ಷಕನು ಅವಸರದಲ್ಲಿ ನಾಗಸಾಹ್ವಯ ನಗರಕ್ಕೆ ಬಂದನು. ಹೋಗುತ್ತಿರುವಾಗ ತಕ್ಷಕನು ಆ ಜಗತ್ಪತಿಯು ವಿಷಹರ ಮಂತ್ರೌಷಧಿಗಳಿಂದ ಬಹು ಜಾಗರೂಕನಾಗಿ ರಕ್ಷಿಸಲ್ಪಟ್ಟಿದ್ದಾನೆ ಎಂದು ಕೇಳಿದನು. ಅವನು

“ರಾಜನನ್ನು ಮಾಯ ಯೋಗದಿಂದ ವಂಚಿಸಬೇಕು. ಅದರ ಉಪಾಯವಾದರೂ ಏನು?”

ಎಂದು ಚಿಂತಿಸತೊಡಗಿದನು. ಆಗ ನಾಗ ತಕ್ಷಕನು ಕೆಲವು ಸರ್ಪಗಳನ್ನು ತಾಪಸರ ರೂಪದಲ್ಲಿ ರಾಜನಿಗೆ ಫಲ ಪತ್ರ ಉದಕಗಳನ್ನು ಕೊಟ್ಟು ಕಳುಹಿಸಿದನು. ತಕ್ಷಕನು ಹೇಳಿದನು:

“ರಾಜನಲ್ಲಿ ಒಂದು ಮುಖ್ಯ ಕಾರ್ಯವಿದೆಯೆಂದು ನೀವೆಲ್ಲರೂ ಅವನಲ್ಲಿ ಹೋಗಿ ರಾಜನು ಫಲಪತ್ರೋದಕಗಳನ್ನು ಸ್ವೀಕರಿಸುವಂತೆ ಒತ್ತಾಯಿಸಿ.”

ತಕ್ಷಕನ ಮಾತಿನಂತೆ ಆ ಸರ್ಪಗಳು ರಾಜನಿಗೆ ದರ್ಭೆ, ನೀರು ಮತ್ತು ಫಲಗಳನ್ನು ಹಿಡಿದು ಹೊರಟವು. ವೀರ್ಯವಾನ್ ರಾಜೇಂದ್ರನು ಅವರು ತಂದ ಸರ್ವವನ್ನೂ ಸ್ವೀಕರಿಸಿ ಅವರ ಕೆಲಸವು ಮುಗಿದ ಬಳಿಕ ಅವರಿಗೆ ಹಿಂದಿರುಗಲು ಹೇಳಿದನು. ತಾಪಸರ ರೂಪ ತಳೆದಿದ್ದ ಆ ನಾಗಗಳು ಹೋದ ಬಳಿಕ ತನ್ನ ಅಮಾತ್ಯರು ಮತ್ತು ಸುಹೃದಯರಿಗೆ ಹೇಳಿದನು:

“ತಾಪಸರು ತಂದಿರುವ ಈ ಸ್ವಾಧಿಷ್ಟ ಫಲಗಳನ್ನು ನೀವೆಲ್ಲರೂ ನನ್ನ ಜೊತೆ ಸೇರಿ ಸೇವಿಸಿರಿ.”

ರಾಜನು ತನ್ನ ಸಚಿವರೊಂದಿಗೆ ಹಣ್ಣುಗಳನ್ನು ತಿನ್ನಲು ಬಯಸಿದಾಗ, ರಾಜನು ಹಿಡಿದ ಫಲದಿಂದ ಅಣುವಿನಷ್ಟು ಚಿಕ್ಕ, ಕಪ್ಪು ಕಣ್ಣುಗಳ

ತಾಮ್ರ ವರ್ಣದ ಕ್ರಿಮಿಯೊಂದು ಕಾಣಿಸಿಕೊಂಡಿತು. ಅದನ್ನು ಹಿಡಿದ ನೃಪಶ್ರೇಷ್ಠನು ತನ್ನ ಸಚಿವರನ್ನುದ್ದೇಶಿಸಿ ಹೇಳಿದನು:

> "ಸೂರ್ಯಾಸ್ತವಾಗುತ್ತಿದೆ. ಇನ್ನು ನನಗೆ ವಿಷದ ಭಯವಿಲ್ಲ. ಆ ಮುನಿಯ ಮಾತನ್ನು ಸತ್ಯವನ್ನಾಗಿಸಲೋಸುಗ ಈ ಕ್ರಿಮಿಯು ತಕ್ಷಕನಾಗಿ ನನ್ನನ್ನು ಕಚ್ಚಲಿ. ಈ ರೀತಿ ಸತ್ಯವನ್ನು ಸುಳ್ಳಾಗದಂತೆ ತಡೆಗಟ್ಟಲಿ!"

ಕಾಲಚೋದಿತ ಮಂತ್ರಿಗಳು ಅವನ ಈ ಮಾತನ್ನು ಪ್ರಶಂಸಿಸಿದರು. ಹೀಗೆ ಹೇಳಿದ ರಾಜೇಂದ್ರನು ಜೋರಾಗಿ ನಗುತ್ತಾ ಆ ಕ್ರಿಮಿಯನ್ನು ತನ್ನ ಕುತ್ತಿಗೆಯ ಮೇಲೆ ಇಟ್ಟಾಕ್ಷಣವೇ ತನ್ನ ಚೇತನವನ್ನು ಕಳೆದುಕೊಂಡು ಮೂರ್ಛಿತನಾದನು. ರಾಜನು ನಗುತ್ತಿರುವಾಗ ಆ ಫಲದಿಂದ ಹೊರಬಂದ ತಕ್ಷಕನು ಅವನನ್ನು ಸುತ್ತಿಹಾಕಿಕೊಂಡಿದ್ದನು.

ಸರ್ಪವು ಸುತ್ತಿಹಾಕಿಕೊಂಡ ಅವನನ್ನು ನೋಡಿದ ಮಂತ್ರಿಗಳೆಲ್ಲರೂ ವಿವರ್ಣವದನರಾಗಿ ದುಃಖಪೀಡಿತರಾಗಿ ರೋದಿಸಿದರು. ಅವನ ಅಟ್ಟಹಾಸವನ್ನು ಕೇಳಿದ ಮಂತ್ರಿಗಳು ಎಲ್ಲಕಡೆ ಪಲಾಯನ ಮಾಡತೊಡಗಿದರು. ಶೋಕಪರಾಯಣರಾಗಿ ಓಡುತ್ತಿರುವಾಗ ಆ ಅದ್ಭುತ ನಾಗ ಪನ್ನಗಶ್ರೇಷ್ಠ ತಕ್ಷಕನು ಆಕಾಶವನ್ನು ಸೀಳುತ್ತಿರುವಂತೆ ಪದ್ಮವರ್ಚಸ ಗೆರೆಯನ್ನುಂಟುಮಾಡುತ್ತಾ ಹೋಗುವುದನ್ನು ಕಂಡರು. ಆ ಗೃಹವು ಸರ್ಪದ ವಿಷಾಗ್ನಿಯಿಂದ ಹತ್ತಿ ಉರಿಯತೊಡಗಿತು. ಮಿಂಚು ಹೊಡೆದವನಂತೆ ಕೆಳಗುರುಳಿದ ರಾಜನನ್ನು ಅಲ್ಲಿಯೇ ಬಿಟ್ಟು

ಭಯದಿಂದ ಅವರೆಲ್ಲರೂ ದಿಕ್ಕುಪಾಲಾದರು. ಈ ರೀತಿ ರಾಜನು ತಕ್ಷಕನ ತೇಜಸ್ಸಿನಿಂದ ಹತನಾದ ನಂತರ ಆ ನೃಪನ ಮಂತ್ರಿಗಳು ಪುಣ್ಯ ದ್ವಿಜರು ಮತ್ತು ರಾಜಪುರೋಹಿತರೊಂದಿಗೆ ಅವನ ಎಲ್ಲ ಪರಲೋಕಸತ್ಕ್ರಿಯೆಗಳನ್ನೂ ನೆರವೇರಿಸಿದರು. ಸರ್ವ ಪುರವಾಸಿ ಜನರೂ ಸೇರಿ ನೃಪನ ಬಾಲಕ ಮಗನನ್ನು ಪ್ರತಿಷ್ಠಾಪಿಸಿದರು. ಶತ್ರುಘಾತಿ ಕುರುಪ್ರವೀರ ನೃಪನನ್ನು ಜನರು ಜನಮೇಜಯನೆಂದು ಕರೆದರು.

ಬಾಲಕನಾಗಿದ್ದರೂ ಆ ನೃಪೋತ್ತಮನು ವಿವೇಕಿಯೂ ಬುದ್ಧಿವಂತನೂ ಆಗಿದ್ದನು. ಅವನ ಮಂತ್ರಿ ಮತ್ತು ಪುರೋಹಿತರೊಡನೆ ಕುರುಪುಂಗವಾಗ್ರಜನು ತನ್ನ ವೀರ ಪ್ರಪಿತಾಮಹನಂತೆ ರಾಜ್ಯವನ್ನು ಆಳಿದನು. ರಾಜನು ತನ್ನ ಶತ್ರುಗಳನ್ನು ತಡೆಗಟ್ಟಬಲ್ಲ ಎನ್ನುವುದನ್ನು ನೋಡಿದ ನೃಪನ ಮಂತ್ರಿಗಳು ಕಾಶೀರಾಜ ಸುವರ್ಣವರ್ಮನಲ್ಲಿ ಅವನ ಮಗಳು ವಪುಷ್ಠಮೆಯನ್ನು ಅವನಿಗೆ ವಧುವಾಗಿ ಕೇಳಿದರು. ಧಾರ್ಮಿಕವಾಗಿ ಅವನನ್ನು ಪರೀಕ್ಷಿಸಿ ರಾಜನು ಕುರುಪ್ರವೀರನಿಗೆ ವಪುಷ್ಟಮೆಯನ್ನು ಕೊಟ್ಟನು. ಅವಳನ್ನು ಪಡೆದ ಅವನೂ ಕೂಡ ಸಂತಸಗೊಂಡನು. ಇದಕ್ಕೂ ಮೊದಲು ಅವನು ತನ್ನ ಮನಸ್ಸನ್ನು ಯಾರಿಗೂ ಕೊಟ್ಟಿರಲಿಲ್ಲ. ಆ ವೀರ್ಯವಂತನು ಸರೋವರ ಮತ್ತು ಪುಷ್ಪಭರಿತ ವನಗಳಲ್ಲಿ ಪ್ರಸನ್ನ ಮನಸ್ಕನಾಗಿ ವಿಹರಿಸಿದನು. ಹಿಂದೆ

ಪುರೂರವನು ಊರ್ವಶಿಯನ್ನು ಹೊಂದಿ ಹೇಗೆ ಆನಂದವನ್ನು ಅನುಭವಿಸಿದನೋ ಹಾಗೆ ಅವನೂ ಸುಖವನ್ನು ಅನುಭವಿಸಿದನು. ಅತೀವ ಸುಂದರಿ ವಪುಷ್ಟಮೆಯಾದರೂ ತನ್ನ ಹಾಗೆಯೇ ರೂಪವಂತನಾದ ಭೂಮಿಪ ಶ್ರೇಷ್ಠ ಪತಿಯನ್ನು ಪಡೆದು ಅಧಿಕ ಪ್ರೇಮದಿಂದ ಅವನನ್ನು ಸಂತೋಷಗೊಳಿಸಿದಳು.

## ಜನಮೇಜಯನಿಗೆ ಸರಮೆಯ ಶಾಪ



ಪಾರಿಕ್ಷಿತ ಜನಮೇಜಯನು ಕುರುಕ್ಷೇತ್ರದಲ್ಲಿ ಸಹೋದರರೊಡನೆ ಒಂದು ದೀರ್ಘಯಾಗದಲ್ಲಿ ತೊಡಗಿದ್ದನು. ಶ್ರುತಸೇನ, ಉಗ್ರಸೇನ ಮತ್ತು ಭೀಮಸೇನ ಎನ್ನುವವರು ಅವನ ಮೂವರು ಸಹೋದರರು. ಅವರು ಆ ಸತ್ರದಲ್ಲಿ ಉಪಸ್ಥಿತರಿರಲು ಅಲ್ಲಿಗೆ ಶ್ವಾನ ಸಾರಮೇಯನು ಆಗಮಿಸಿದನು. ಜನಮೇಜಯನ ತಮ್ಮಂದಿರಿಂದ ಪೆಟ್ಟುತಿಂದ

ಅವನು ರೋಧಿಸುತ್ತಾ ತನ್ನ ತಾಯಿಯ ಬಳಿ ಹೋದನು.
ರೋಧಿಸುತ್ತಿರುವ ಮಗನನ್ನುದ್ದೇಶಿಸಿ ತಾಯಿ ಸರಮೆಯು ಕೇಳಿದಳು:

“ಏಕೆ ರೋಧಿಸುತ್ತಿರುವೆ? ನಿನಗೆ ಹೊಡೆದರು?”

ತಾಯಿಯು ಹೀಗೆ ಕೇಳಲು ಅವನು ಉತ್ತರಿಸಿದನು:

“ಜನಮೇಜಯನ ತಮ್ಮಂದಿರು ನನ್ನನ್ನು ಹೊಡೆದರು.”

ತಾಯಿಯು ಅವನಿಗೆ ಪುನಃ ಹೇಳಿದಳು:

“ನೀನು ನಿಜಯಾಗಿಯೂ ಏನೋ ಅಪರಾಧವನ್ನು ಮಾಡಿರುವುದರಂದಲೇ ಅವರು ನಿನಗೆ ಹೊಡೆದಿರಬಹುದು.”

ಅವನು ಅವಳಿಗೆ ಪುನಃ ಹೇಳಿದನು:

“ನಾನೇನೂ ಅಪರಾಧವನ್ನು ಮಾಡಿಲ್ಲ. ನಾನು ಅವಿಸ್ಸಿನ ಕಡೆಗೂ ನೋಡಲಿಲ್ಲ, ಅದನ್ನು ನೆಕ್ಕಲೂ ಇಲ್ಲ.”

ಅದನ್ನು ಕೇಳಿದ ಸರಮೆಯು ಪುತ್ರಶೋಕಾರ್ತಳಾಗಿ ತಮ್ಮಂದಿರೊಂದಿಗೆ ದೀರ್ಘಸತ್ರದಲ್ಲಿ ತೊಡಗಿದ್ದ ಜನಮೇಜಯನಲ್ಲಿಗ ಆಗಮಿಸಿದಳು. ಕೃದ್ಧಳಾದ ಅವಳು ಅವನಿಗೆ ಹೇಳಿದಳು:

“ಈ ನನ್ನ ಪುತ್ರನು ಯಾವ ಅಪರಾಧವನ್ನೂ ಮಾಡಿಲ್ಲ. ಆದರೂ ಅವನನ್ನು ಏಕೆ ಹೊಡೆದಿರಿ? ಏನೂ ತಪ್ಪು ಮಾಡದ ಇವನನ್ನು ಹೇಗೆ ಹೊಡೆದಿರೋ ಹಾಗೆ ಭವಿಷ್ಯದಲ್ಲಿ ನೀವೂ ಕೂಡ ನಿರೀಕ್ಷೆಪಟ್ಟಿರದ ಭಯವನ್ನು

ಅನುಭವಿಸುತ್ತೀರಿ !”

ದೇವತೆಗಳ ನಾಯಿ ಸರಮೆಯು ಹೀಗೆ ಹೇಳಲು ಜನಮೇಜಯನು ಅತೀವ ವಿಷಣ್ಣನಾಗಿ ಯೋಚನೆಗೊಳಗಾದನು. ಆ ಸತ್ರವನ್ನು ಸಮಾಪ್ತಿಗೊಳಿಸಿ ಅವನು ಹಸ್ತಿನಾಪುರಕ್ಕೆ ಮರಳಿ, ತನ್ನ ಪಾಪಕೃತ್ಯಗಳನ್ನು ಶಾಂತಗೊಳಿಸಿ ಶಾಪದಿಂದ ಮುಕ್ತಿ ದೊರಕಿಸುವ ಅನುರೂಪ ಪುರೋಹಿತನನ್ನು ಪಡೆಯುವ ಪರಮ ಯತ್ನವನ್ನು ಮಾಡಿದನು.

ಒಮ್ಮೆ ಬೇಟೆಗೆಂದು ಹೋಗಿದ್ದ ಜನಮೇಜಯನು ತನ್ನ ರಾಜ್ಯದ ಗಡಿಯ ಒಳಗೇ ಇದ್ದ ಒಂದು ಆಶ್ರಮವನ್ನು ಕಂಡನು. ಅಲ್ಲಿ ಶೃತಶ್ರವ ಎಂಬ ಹೆಸರಿನ ಓರ್ವ ಋಷಿಯೊಬ್ಬನು ಸೋಮಶ್ರವ ಎಂಬ ಪುತ್ರನೊಂದಿಗೆ ವಾಸಿಸುತ್ತಿದ್ದನು. ಅವನ ಆ ಮಗನನ್ನು ಜನಮೇಜಯನು ಪೌರೋಹಿತ್ಯಕ್ಕಾಗಿ ಕೇಳಿದನು. ಆ ಋಷಿಯನ್ನು ನಮಸ್ಕರಿಸಿ ಹೇಳಿದನು:

“ಭಗವನ್ ! ನಿನ್ನ ಪುತ್ರನು ನನ್ನ ಪುರೋಹಿತನಾಗಲಿ !”

ಈ ಕೇಳಿಕೆಗೆ ಶೃತಶ್ರವನು ಉತ್ತರಿಸಿದನು:

“ಜನಮೇಜಯ ! ನನ್ನ ತಪೋವೀರ್ಯದಿಂದ ಹುಟ್ಟಿದ, ನನ್ನ ವೀರ್ಯವನ್ನು ಕುಡಿದ ಸರ್ಪವೊಂದರ ಗರ್ಭದಲ್ಲಿ ಜನಿಸಿದ ನನ್ನ ಈ ಮಗನು ಮಹಾತಪಸ್ವಿ ಮತ್ತು ಸ್ವಾಧ್ಯಾಯಸಂಪನ್ನನಾಗಿದ್ದಾನೆ. ಮಹಾದೇವನ ವಿರುದ್ಧ

ಕರ್ಮಗಳನ್ನು ಬಿಟ್ಟು ಉಳಿದೆಲ್ಲ ಪಾಪಕೃತ್ಯಗಳನ್ನೂ ಶಾಂತಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಆದರೆ ಅವನು ಒಂದೇ ಒಂದು ವ್ರತವನ್ನು ಕಟ್ಟುನಿಟ್ಟಾಗಿ ಪರಿಪಾಲಿಸುತ್ತಾನೆ. ಬ್ರಾಹ್ಮಣ ಯಾರೇ ಆಗಿರಲಿ, ಯಾವಾಗ ಏನು ಕೇಳಿದರೂ ಅದನ್ನು ಕೊಟ್ಟುಬಿಡುತ್ತಾನೆ. ಅವನು ಈ ನಿಯಮವನ್ನು ಪಲಿಸಲು ನಿನಗೆ ಅಡ್ಡಿಯಿಲ್ಲವಾದರೆ ಅವನನ್ನ ಕರೆದುಕೊಂಡು ಹೋಗು !"

ಜನಮೇಜಯನು "ನೀನು ಹೇಳಿದ ಹಾಗೆಯೇ ಆಗಲಿ" ಎಂದು ಉತ್ತರಿಸಿ, ಸೋಮಶ್ರವನನ್ನು ತನ್ನ ಪುರೋಹಿತನನ್ನಾಗಿ ಸ್ವೀಕರಿಸಿ ಹಿಂದಿರುಗಿ ಬಂದು

"ಇವನನ್ನು ನಮ್ಮ ಉಪಾಧ್ಯಾಯನನ್ನಾಗಿ ಆರಿಸಿದ್ದೇನೆ. ಅವನು ಹೇಳಿದುದೆಲ್ಲವನ್ನೂ ವಿಚಾರಮಾಡದೇ ನಡೆಸಿಕೊಡಬೇಕು !"

ಎಂದು ತನ್ನ ತಮ್ಮಂದಿರಿಗೆ ಆದೇಶವನ್ನಿತ್ತನು. ಅವನ ಸಹೋದರರು ಹೇಳಿದ ಹಾಗೆಯೇ ನಡೆದುಕೊಂಡರು. ಈ ರೀತಿ ತಮ್ಮಂದಿರಿಗೆ ಆದೇಶವನ್ನಿತ್ತು ಅವನು ತಕ್ಷಶಿಲೆಗೆ ಆ ದೇಶದಲ್ಲಿ ತನ್ನ ಆಡಳಿತವನ್ನು ಸ್ಥಾಪಿಸಲು ಹೊರಟು ಹೋದನು.

## ಉತ್ತಂಕನು ತಕ್ಷಕನ ಮೇಲಿನ ಕೋಪದಿಂದ ಜನಮೇಜಯನನ್ನು ಸರ್ಪಸತ್ರಕ್ಕೆ ಉತ್ತೇಜಿಸಿದುದು

ಈ ಮದ್ಯದಲ್ಲಿ ಧೌಮ್ಯ ಎನ್ನುವ ಹೆಸರಿನ ಋಷಿಯೋರ್ವನು ಉಪಮನ್ಯು, ಆರುಣಿ ಮತ್ತು ವೇದ ಎಂಬ ಹೆಸರಿನ ಮೂವರು ಶಿಷ್ಯರೊಂದಿಗಿದ್ದನು. ಅಯೋದ ಧೌಮ್ಯನ ತನ್ನ ಶಿಷ್ಯ ವೇದನಿಗೆ ಈ ರೀತಿ ಆದೇಶಿಸಿದನು:

> "ವತ್ಸ! ವೇದ! ಇಲ್ಲಿ ಬಾ. ನೀನು ನನ್ನ ಮನೆಯಲ್ಲಿ ಕೆಲವು ಕಾಲ ಶುಶ್ರೂಷೆ ಮಾಡಬೇಕಾಗುತ್ತದೆ. ನಿನಗೆ ಶ್ರೇಯಸ್ಸಾಗುತ್ತದೆ."

ಇದನ್ನು ಕೇಳಿದ ಅವನು ದೀರ್ಘಕಾಲ ಗುರುಕುಲದಲ್ಲಿ ಗುರು ಶುಶ್ರೂಷಣೆಯಲ್ಲಿ ನಿರತನಾದನು. ನಿತ್ಯವೂ, ಏನೂ ದೂರಿಲ್ಲದೇ, ಭಾರದ ಹೊರೆಯನ್ನು ಹೊರಲು ಕಟ್ಟಿದ್ದ ಎತ್ತಿನ ಹಾಗೆ ಶೀತ-ಉಷ್ಣ, ಹಸಿವು-ಬಾಯಾರಿಕೆಗಳ ದುಃಖವನ್ನು ಸಹಿಸಿದನು. ಬಹಳ ಕಾಲವು ಕಳೆದನಂತರ ಅವನ ಗುರುವು ಸಂತೃಪ್ತನಾದನು. ಅವನ ತೃಪ್ತಿಯಿಂದಾಗಿ ಶ್ರೇಯಸ್ಸು ಮತ್ತು ಸರ್ವ ಜ್ಞಾನವನ್ನು ಹೊಂದಿದನು.

ಗುರುಕುಲವಾಸವನ್ನು ಪೂರೈಸಿ ಉಪಾಧ್ಯಾಯನಿಂದ ಅನುಮತಿಯನ್ನು ಪಡೆದು ಅವನು ಗೃಹಸ್ಥಾಶ್ರಮವನ್ನು ಪ್ರವೇಶಿಸಿದನು. ಅವನ ಮನೆಯಲ್ಲಿಯೂ ಕೂಡ ಮೂವರು ಶಿಷ್ಯರು ವಾಸಿಸುತ್ತಿದ್ದರು. ಅವನು ಒಮ್ಮೆಯೂ ತನ್ನ ಶಿಷ್ಯರಿಗೆ ಕೆಲಸವನ್ನು

ಮಾಡು ಅಥವಾ ಗುರುಶುಶ್ರೂಷೆಯನ್ನು ಮಾಡು ಎಂದು ಹೇಳಲಿಲ್ಲ. ಗುರುಕುಲವಾಸದ ದುಃಖಗಳನ್ನು ತಿಳಿದಿದ್ದ ಅವನು ತನ್ನ ಶಿಷ್ಯರಿಗೆ ಕಷ್ಟ ಕೊಡಲು ಬಯಸುತ್ತಿರಲಿಲ್ಲ. ಒಮ್ಮೊಮ್ಮೆ ಕ್ಷತ್ರಿಯ ಜನಮೇಜಯ ಮತ್ತು ಪೌಷ್ಯರು ಬಂದು ವೇದನನ್ನು ಉಪಾಧ್ಯಾಯನನ್ನಾಗಿ ನಿಯುಕ್ತಿಸುತ್ತಿದ್ದರು. ಒಂದು ದಿನ ಯಜ್ಞಕಾರ್ಯಕ್ಕೆಂದು ಹೊರಡುವಾಗ ಉತ್ತಂಕ ಎಂಬ ಹೆಸರಿನ ಶಿಷ್ಯನನ್ನು ಕರೆದು

> "ಉತ್ತಂಕ! ನನ್ನ ಮನೆಯಲ್ಲಿ ಏನೆಲ್ಲ ಮಾಡಬೇಕಾದ್ದುದು ಇವೆಯೋ ಅವೆಲ್ಲವನ್ನೂ ನೀನು ಕಡೆಗಣಿಸದೇ ಮಾಡು"

ಎಂದು ನಿಯೋಜಿಸಿದನು. ಗುರುಶುಶ್ರೂಷೆ ಮತ್ತು ಗುರುನಿಯೋಗದಲ್ಲಿ ಮನಸ್ಸನ್ನಿಟ್ಟಿದ್ದ ಉತ್ತಂಕನು ಗುರುಕುಲದಲ್ಲಿ ವಾಸಿಸುತ್ತಿದ್ದನು. ಅವನು ಅಲ್ಲಿ ವಾಸಿಸುತ್ತಿರುವಾಗ ಒಂದು ದಿನ ಉಪಾಧ್ಯಾಯನ ಮನೆಯ ಸ್ತ್ರೀಯರು ಬಂದು ಹೇಳಿದರು:

> "ನಿನ್ನ ಉಪಾಧ್ಯಾಯನಿಯು ಋತುಮತಿಯಾಗಿದ್ದಾಳೆ. ಉಪಾಧ್ಯಾಯನು ಇಲ್ಲ. ಅವಳ ಋತುಕಾಲವು ನಿಷ್ಪ್ರಯೋಜಕವಾಗದ ಹಾಗೆ ಮಾಡು."

ಹೀಗೆ ಹೇಳಿದ ಸ್ತ್ರೀಯರಿಗೆ ಅವನು ಉತ್ತರಿಸಿದನು:

> "ಸ್ತ್ರೀಯರ ಮಾತನ್ನು ಕೇಳಿ ಕಾರ್ಯಗೈಯುವುದು ನನಗೆ ಸೂಕ್ತವಲ್ಲ. ಯಾವ ಅಕಾರ್ಯವೂ ನಿನ್ನಿಂದ

> ನಡೆಯಬಾರದು ಎಂದು ಉಪಾಧ್ಯಾಯನು ನನಗೆ ಸಂದೇಶವನ್ನಿತ್ತಿದ್ದಾನೆ."

ಕಾಲಾನಂತರದಲ್ಲಿ ತನ್ನ ಪ್ರವಾಸದಿಂದ ಅವನ ಉಪಾಧ್ಯಾಯನು ಮನೆಗೆ ಹಿಂದಿರುಗಿದನು. ನಡೆದುದೆಲ್ಲವನ್ನೂ ಕೇಳಿ ಸಂತೋಷಪಟ್ಟು ಹೇಳಿದನು:

> "ವತ್ಸ ಉತ್ತಂಕ! ನಿನಗೆ ಇಷ್ಟವಾದ ಏನನ್ನು ಮಾಡಲಿ? ನೀನು ನನ್ನನ್ನು ಧರ್ಮದಿಂದ ಶುಶ್ರೂಷೆ ಮಾಡುತ್ತಿರುವೆ. ಇದರಿಂದ ಪರಸ್ಪರರ ಪ್ರೀತಿಯು ಹೆಚ್ಚಾಗಿದೆ. ನಿನಗೆ ಹೋಗಲು ಅನುಮತಿಯಿದೆ. ನಿನಗೆ ಎಲ್ಲವೂ ಸಿದ್ಧಿಯಾಗಲಿ. ಹೋಗು."

ಇದನ್ನು ಕೇಳಿದ ಅವನು ಉತ್ತರಿಸಿದನು:

> "ಅಧರ್ಮದಿಂದ ಏನನ್ನು ಕೊಟ್ಟರೂ ಅಥವಾ ಅಧರ್ಮದಿಂದ ಏನನ್ನು ಗೆದ್ದುಕೊಂಡರೂ ಅವರೀರ್ವರ ನಡುವೆ ದ್ವೇಷ ಉಂಟಾಗುತ್ತದೆ ಅಥವಾ ಅವರಲ್ಲಿ ಒಬ್ಬನು ಸಾಯುತ್ತಾನೆ ಎಂಬ ಮಾತಿದೆ. ಆದುದರಿಂದ ನಿನ್ನ ಅನುಜ್ಞೆಯನ್ನು ಪಡೆದು ನಿನಗೆ ಇಷ್ಟವಾದ ಗುರುದಕ್ಷಿಣೆಯನ್ನು ಕೊಡಲು ಬಯಸುತ್ತೇನೆ. ನಿನಗೆ ಇಷ್ಟವಾದ ಏನನ್ನು ಮಾಡಲಿ?"

ಉಪಾಧ್ಯಾಯನು ಹೇಳಿದನು:

"ವತ್ಸ ಉತ್ತಂಕ! ಹಾಗಾದರೆ ಇನ್ನೂ ಸ್ವಲ್ಪ ಸಮಯ ನಿಲ್ಲು."

ಕೆಲವು ಸಮಯದ ನಂತರ ಉತ್ತಂಕನು ಪುನಃ ಕೇಳಿದನು:

"ನಿಮ್ಮ ದಕ್ಷಿಣೆಗಾಗಿ ನಿಮಗೆ ಪ್ರಿಯವಾದ ಏನನ್ನು ಮಾಡಲಿ? ಅಜ್ಞಾಪಿಸಿ."

ಉಪಾಧ್ಯಾಯನು ಉತ್ತರಿಸಿದನು:

"ವತ್ಸ ಉತ್ತಂಕ! ಗುರುದಕ್ಷಿಣೆಯ ಕುರಿತು ನೀನು ಬಹಳಷ್ಟು ಬಾರಿ ನನ್ನಲ್ಲಿ ಕೇಳಿದ್ದೀಯೆ. ಹಾಗಾದರೆ ಹೋಗು. ನಿನ್ನ ಉಪಾಧ್ಯಾಯನಿಯಲ್ಲಿ ಗುರುದಕ್ಷಿಣೆಯಾಗಿ ಏನನ್ನು ಅವಳು ಬಯಸುತ್ತಾಳೆ ಎಂದು ಕೇಳಿ, ಅವಳು ಹೇಳಿದುದನ್ನು ತೆಗೆದುಕೊಂಡು ಬಾ."

ಉಪಾಧ್ಯಾಯನ ಈ ಮಾತುಗಳನ್ನು ಕೇಳಿ ಅವನು ಉಪಾಧ್ಯಾನಿಯಲ್ಲಿಗೆ ಹೋಗಿ ಕೇಳಿದನು:

"ನನ್ನ ಉಪಾಧ್ಯಾಯರು ಮನೆಗೆ ಹೋಗಿ ನಿಮ್ಮಲ್ಲಿ ಗುರುದಕ್ಷಿಣೆಯಾಗಿ ಏನನ್ನು ಬಯಸುತ್ತೀರೆಂದು ಕೇಳಲು ಕಳುಹಿಸಿದ್ದಾರೆ. ಗುರುದಕ್ಷಿಣೆಯಾಗಿ ಏನನ್ನು ಬಯಸುತ್ತೀರಿ ಹೇಳಿ."

ಇದನ್ನು ಕೇಳಿದ ಉಪಾಧ್ಯಾಯಿನಿಯು ಉತ್ತಂಕನಿಗೆ ಉತ್ತರಿಸಿದಳು:

> "ಪೌಷ್ಯರಾಜನಲ್ಲಿಗೆ ಹೋಗಿ ಅವನ ಕ್ಷಾತ್ರಿಣಿಯ ಕರ್ಣಕುಂಡಲಗಳನ್ನು ಕೇಳಿ ಅವುಗಳನ್ನು ತೆಗೆದುಕೊಂಡು ಬಾ. ಇಂದಿನಿಂದ ನಾಲ್ಕನೆಯ ದಿನ ಪುಣ್ಯಕ ವ್ರತದ ದಿನ. ಆದಿನ ನಾನು ಆ ಕುಂಡಲಗಳನ್ನು ಧರಿಸಿ ಬ್ರಾಹ್ಮಣರಿಗೆ ಭೋಜನವನ್ನು ನೀಡಲು ಬಯಸುತ್ತೇನೆ. ನಿನಗೆ ಶ್ರೇಯಸ್ಸಾಗಲಿ. ತ್ವರೆ ಮಾಡು."

ಉಪಾಧ್ಯಾಯನಿಯು ಈ ರೀತಿ ಹೇಳಲು ಉತ್ತಂಕನು ಹೊರಟನು. ದಾರಿಯಲ್ಲಿ ಅವನು ಬೃಹದಾಕರದ ಪುರುಷನೊಬ್ಬನು ಬೃಹದಾಕಾರದ ಹೋರಿಯನ್ನೇರಿ ಹೋಗುತ್ತಿರುವ ದೃಶ್ಯವನ್ನು ಕಂಡನು. ಆ ಪುರುಷನು ಉತ್ತಂಕನಿಗೆ ಹೇಳಿದನು:

> "ಉತ್ತಂಕ! ಈ ಹೋರಿಯ ಸಗಣಿಯನ್ನು ತಿನ್ನು."

ಅವನು ನಿರಾಕರಿಸಿದಾಗ, ಆ ಪುರುಷನು ಪುನಃ ಹೇಳಿದನು:

> "ಉತ್ತಂಕ! ಇದನ್ನು ತಿನ್ನು. ವಿಚಾರ ಮಾಡಬೇಡ. ಈ ಹಿಂದೆ ನಿನ್ನ ಉಪಾಧ್ಯಾಯನೂ ಇದನ್ನು ತಿಂದಿದ್ದಾನೆ."

ಇದನ್ನು ಕೇಳಿದ ಉತ್ತಂಕನು "ಆಯಿತು" ಎಂದು ಆ ಹೋರಿಯ ಸಗಣಿ ಮತ್ತು ಮೂತ್ರವನ್ನು ಸೇವಿಸಿ ಕ್ಷತ್ರಿಯ ಪೌಷ್ಯನಲ್ಲಿಗೆ ಮುಂದುವರೆದನು.

ಅವನು ಕುಳಿತಿರುವುದನ್ನು ನೋಡಿದ ಉತ್ತಂಕನು ಅವನಿಗೆ ಆಶೀರ್ವಚನಗಳಿಂದ ಅಭಿನಂದಿಸಿ ಹೇಳಿದನು:

"ನಿನ್ನಲ್ಲಿ ಏನೋ ಒಂದನ್ನು ಕೇಳಲು ಬಂದಿದ್ದೇನೆ."

ಆಗ ಅವನನ್ನು ಅಭಿನಂದಿಸಿ

"ಭಗವನ್! ನಾನು ಪೌಷ್ಯ. ಏನನ್ನು ಮಾಡಲಿ?"

ಎಂದು ಕೇಳಿದನು. ಉತ್ತಂಕನು ಹೇಳಿದನು:

"ಗುರುದಕ್ಷಿಣೆಯಾಗಿ ಕುಂಡಲಗಳನ್ನು ತೆಗೆದುಕೊಂಡು ಹೋಗಲು ಇಲ್ಲಿಗೆ ಬಂದಿದ್ದೇನೆ. ನೀನು ನಿನ್ನ ಕ್ಷತ್ರಿಣಿಯ ಕರ್ಣಕುಂಡಲಗಳನ್ನು ಕೊಡಬೇಕು."

ಪೌಷ್ಯನು ಅವನಿಗೆ ಉತ್ತರಿಸಿದನು:

"ಅಂತಃಪುರವನ್ನು ಪ್ರವೇಶಿಸಿ ನನ್ನ ಕ್ಷತ್ರಿಣಿಯನ್ನು ಕೇಳು."

ಹೀಗೆ ಕೇಳಿದ ಅವನು ಅಂತಃಪುರವನ್ನು ಪ್ರವೇಶಿಸಿದನು. ಆದರೆ ಅಲ್ಲಿ ಅವನಿಗೆ ಕ್ಷತ್ರಾಣಿಯು ಕಾಣಲಿಲ್ಲ. ಅವನು ಪೌಷ್ಯನಿಗೆ ಪುನಃ ಹೇಳಿದನು:

"ನೀನು ಈ ರೀತಿ ನನ್ನಲ್ಲಿ ಸುಳ್ಳಾಡುವುದು ಸರಿಯಲ್ಲ. ಅಂತಃಪುರಕ್ಕೆ ಹೋದರೂ ಅಲ್ಲಿ ನಿನ್ನ ಕ್ಷತ್ರಾಣಿಯು ಕಾಣಲಿಲ್ಲ."

ಆಗ ಪೌಷ್ಯನು ಉತ್ತರಿಸಿದನು:

> "ನಿನಗೆ ಮೈಲಿಗೆಯಾಗಿರಬಹುದು. ನೆನಪುಮಾಡಿಕೋ. ಉಚ್ಛಿಷ್ಟರಾದವರು ಅಥವಾ ಅಶುಚಿಯಾದವರು ಆ ಕ್ಷಾತ್ರಣಿಯನ್ನು ನೋಡಲು ಸಾಧ್ಯವಿಲ್ಲ. ಅವಳ ಪಾತಿವ್ರತ್ಯದಿಂದ ಅವಳು ಅಶುಚಿಯಾದವರಿಗೆ ಕಂಡು ಬರುವುದಿಲ್ಲ."

ಸ್ವಲ್ಪಹೊತ್ತು ಯೋಚಿಸಿ ಉತ್ತಂಕನು ಹೇಳಿದನು:

> "ಬರುವ ಅವಸರದಲ್ಲಿ ನಿಂತೇ ಮೂತ್ರ ಮಾಡಿರುವುದರಿಂದ ಉಚ್ಛಿಷ್ಟನಾಗಿರಬಹುದು."

ಅದಕ್ಕೆ ಪೌಷ್ಯನು ಉತ್ತರಿಸಿದನು:

> "ನಡೆಯುವಾಗ ಅಥವಾ ನಿಂತು ಮೂತ್ರಮಾಡುವುದು ಸರಿಯಲ್ಲ."

ಆಗ ಉತ್ತಂಕನು ಪೂರ್ವಾಭಿಮುಖವಾಗಿ ಕುಳಿತು, ಕೈಕಾಲು ಮುಖಗಳನ್ನು ಸರಿಯಾಗಿ ತೊಳೆದು ಶಬ್ಧಮಾಡದೇ ಹೃದಯವನ್ನು ತಲುಪುವಷ್ಟು ಮಾತ್ರ ನೀರನ್ನು ಮೂರು ಸಾರಿ ಕುಡಿದು, ಎರಡು ಸಾರಿ ಮುಖ, ಕಣ್ಣು, ಕಿವಿ ಮತ್ತು ಮೂಗುಗಳನ್ನು ನೀರಿನಿಂದ ಮುಟ್ಟಿ, ಅಂತಃಪುರವನ್ನು ಪ್ರವೇಶಿಸಿದನು. ಆಗ ಕ್ಷಾತ್ರಣಿಯು ಕಾಣಿಸಿಕೊಂಡಳು. ಉತ್ತಂಕನನ್ನು ನೋಡಿ ಅವಳು ಎದ್ದುನಿಂತು



ನಮಸ್ಕರಿಸಿ

> “ಭಗವನ್! ನಿನಗೆ ಸ್ವಾಗತ. ನನ್ನಿಂದ ಏನಾಗಬೇಕು ಅಜ್ಞಾಪಿಸು”

ಎಂದಳು. ಆಗ ಅವನು ಹೇಳಿದನು:

> “ನಿನ್ನ ಈ ಕುಂಡಲಗಳನ್ನು ಗುರುದಕ್ಷಿಣೆಗಾಗಿ ಬೇಡುತ್ತಿದ್ದೇನೆ. ಕೊಡಬೇಕು.”

ಅವನ ಸದ್ಭಾವದಿಂದ ಪ್ರೀತಳಾಗಿ, ಇವನು ಪಾತ್ರನಾಗಿರುವುದರಿಂದ ನಿರಾಕರಿಸಲು ಸಾಧ್ಯವಿಲ್ಲ ಎಂದು ತಿಳಿದು ಕುಂಡಲಗಳನ್ನು ಬಿಚ್ಚಿ ಅವನಿಗೆ ಕೊಟ್ಟ ಅವಳು ಹೇಳಿದಳು:

> “ಈ ಕುಂಡಲಗಳನ್ನು ನಾಗರಾಜ ತಕ್ಷಕನೂ ಕೂಡ ಕೇಳಿದ್ದಾನೆ. ಅದ್ದರಿಂದ ಇವುಗಳನ್ನು ಜಾಗ್ರತೆಯಲ್ಲಿ ಕೊಂಡೊಯ್ಯಿ.”

ಕ್ಷಾತ್ರಣಿಯಿಂದ ಈ ರೀತಿ ಕೇಳಿದ ಅವನು ಉತ್ತರಿಸಿದನು:

> “ಇದರ ಕುರಿತು ಯೋಚಿಸಬೇಡ. ನಾಗರಾಜ ತಕ್ಷಕನಿಗೆ ನನ್ನನ್ನು ಸೋಲಿಸಲು ಸಾಧ್ಯವಿಲ್ಲ.”

ಕ್ಷಾತ್ರಿಣಿಗೆ ಹೀಗೆ ಹೇಳಿ, ಅವನು ಪೌಷ್ಯನಲ್ಲಿಗೆ ಬಂದನು. ಅವನನ್ನು ನೋಡಿ ಹೇಳಿದನು: “ಪೌಷ್ಯ! ನಾನು ಪ್ರೀತನಾಗಿದ್ದೇನೆ.” ಪೌಷ್ಯನು

ಉತ್ತರಿಸಿದನು:

> "ನಿನ್ನಂಥಹ ಪಾತ್ರವುಳ್ಳವನಿಗೆ ದಾನ ಕೊಡುವ ಅವಕಾಶವು ದುರ್ಲಭ. ನೀನೊಬ್ಬ ಗುಣವಂತ ಅತಿಥಿ. ಆದ್ದರಿಂದ ಶ್ರಾದ್ಧ ಮಾಡಲು ಬಯಸುತ್ತೇನೆ. ಸ್ವಲ್ಪ ಹೊತ್ತು ನಿಲ್ಲು."

ಅವನಿಗೆ ಉತ್ತಂಕನು ಉತ್ತರಿಸಿದನು:

> "ಅವಸರದಲ್ಲಿದ್ದೇನೆ. ಆದ್ದರಿಂದ ಬೇಕಾಗುವ ಅನ್ನ ಮುಂತಾದವುಗಳು ಶೀಘ್ರವಾಗಿ ಬರಲಿ ಎಂದು ಬಯಸುತ್ತೇನೆ."

ಇದಕ್ಕೆ ಒಪ್ಪಿಕೊಂಡು ಅವನಿಗೆ ಅನುಕೂಲವಾದ ಆಹಾರದಿಂದ ಭೋಜನವನ್ನು ನೀಡಿದನು. ತಂಗಳ ಅನ್ನದಲ್ಲಿ ಕೂದಲನ್ನು ಕಂಡ ಉತ್ತಂಕನು ಅಶುಚಿಯಾದೆನೆಂದು ತಿಳಿದು ಪೌಷ್ಯನಿಗೆ ಹೇಳಿದನು: "ನನಗೆ ಅಶುಚಿ ಅನ್ನವನ್ನು ಉಣಿಸಿರುವುದರಿಂದ ನೀನು ಭವಿಷ್ಯದಲ್ಲಿ ಅಂಧನಾಗುವೆ." ಅದಕ್ಕೆ ಪೌಷ್ಯನು ಉತ್ತರಿಸಿದನು:

> "ಶುದ್ಧ ಅನ್ನವನ್ನು ದೂಷಿಸಿರುವುದರಿಂದ ನಿನಗೆ ಮಕ್ಕಳೇ ಆಗುವುದಿಲ್ಲ."

ನಂತರ ನೀಡಿದ ಅನ್ನವನ್ನು ಪರೀಕ್ಷಿಸಿ ಅದು ನಿಜವಾಗಿಯೂ ತಣ್ಣಗಿದೆ ಮತ್ತು ಆ ಅನ್ನವನ್ನು ಮುಕ್ತಕೇಶ ಸ್ತ್ರೀಯೊಬ್ಬಳು ತಯಾರಿಸಿದುದರಿಂದ ಅದರಲ್ಲಿ ಕೂದಲಿದೆ ಎಂದು ಖಾತ್ರಿಮಾಡಿಕೊಂಡ ಪೌಷ್ಯನು:

“ಭಗವನ್! ಅಜ್ಞಾನದಿಂದ ನಿನಗೆ ಕೂದಲಿದ್ದ ತಂಗಳನ್ನವನ್ನು ನೀಡಿದೆ. ಕ್ಷಮಿಸಬೇಕು. ನಾನು ಅಂಧನಾಗದಂತೆ ಮಾಡು.”

ಆಗ ಉತ್ತಂಕನು ಹೇಳಿದನು:

“ನಾನು ಹೇಳಿದ್ದುದು ಸುಳ್ಳಾಗುವುದಿಲ್ಲ. ನೀನು ಅಂಧನಾದ ಸ್ವಲ್ಪ ಸಮಯದಲ್ಲಿ ಅನಂಧನಾಗುತ್ತೀಯೆ. ನೀನು ನನಗೆ ಕೊಟ್ಟ ಶಾಪವೂ ನಡೆಯದಂತೆ ಮಾಡು.”

ಆಗ ಪೌಷ್ಯನು ಹೇಳಿದನು:

“ಶಾಪವನ್ನು ಹಿಂದೆ ತೆಗೆದುಕೊಳ್ಳಲು ನನಗೆ ಸಾಧ್ಯವಿಲ್ಲ. ನನ್ನ ಸಿಟ್ಟು ಇನ್ನೂ ಕಡಿಮೆಯಾಗಲಿಲ್ಲ. ನಿನಗೆ ಇದು ತಿಳಿದಿಲ್ಲವೇ? ಬ್ರಾಹ್ಮಣನ ಹೃದಯವು ಬೆಣ್ಣೆಯಂತೆ ಆದರೆ ಮಾತು ಒಂದು ಹರಿತ ಖಡ್ಗದಂತೆ. ತದ್ವಿರುದ್ಧವಾಗಿ ಒಬ್ಬ ಕ್ಷತ್ರಿಯನ ಮಾತು ಬೆಣ್ಣೆಯ ಹಾಗೆ ಮತ್ತು ಹೃದಯ ತೀಕ್ಷ್ಣ ಖಡ್ಗದ ಹಾಗೆ. ನನ್ನ ಹೃದಯವು ಇನ್ನೂ ಹರಿತಾಗಿರುವುದರಿಂದ ಶಾಪವನ್ನು ಹಿಂದೆ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ನೀನು ಈಗ ಹೋಗಬಹುದು.”

ಉತ್ತಂಕನು ಹೇಳಿದನು:

“ನನಗೆ ನೀಡಿದ್ದ ಅನ್ನವು ಅಶುಚಿಯಾದದ್ದು ಎಂದು ನೀನೇ

ನೋಡಿದ್ದೀಯೆ. ಆದುದರಿಂದ ಅದುಷ್ಟ ಅನ್ನವನ್ನು ದೂಷಿಸಿರುವುದರಿಂದ ಅನಪತ್ಯನಾಗುತ್ತೀಯೆ ಎಂದು ನೀನು ನನಗಿತ್ತ ಶಾಪವು ಪರಿಣಾಮಕಾರಿಯಾಗುವುದಿಲ್ಲ."

ಹೀಗೆ ಹೇಳಿ ಉತ್ತಂಕನು ಕುಂಡಲಗಳನ್ನು ತೆಗೆದುಕೊಂಡು ಹೋದನು.

ದಾರಿಯಲ್ಲಿ ಒಬ್ಬ ನಗ್ನ ಭಿಕ್ಷುಕನು ಅವನ ಕಡೆ ಬರುತ್ತಿರುವುದನ್ನು, ಮತ್ತು ಅವನು ಒಂದು ಕ್ಷಣ ಕಂಡರೆ ಮತ್ತೊಂದು ಕ್ಷಣ ಮರೆಯಾಗುತ್ತಿರುವುದನ್ನು ನೋಡಿದನು. ಆಗ ಉತ್ತಂಕನು ಕುಂಡಲಗಳನ್ನು ಭೂಮಿಯಮೇಲೆ ಇಟ್ಟು ನೀರಿಗೆ ಹೋದನು. ಈ ಮಧ್ಯ ಆ ಭಿಕ್ಷುಕನು ಬೇಗ ಬಂದು ಕುಂಡಲಗಳನ್ನು ಎತ್ತಿಕೊಂಡು ಓಡಿಹೋದನು. ಇದನ್ನು ನೋಡಿ ಉತ್ತಂಕನೂ ಕೂಡ ಅವನನ್ನು ಬೆನ್ನಟ್ಟಿ ಓಡಿದನು. ಆಗ ಅವನು ತನ್ನ ರೂಪವನ್ನು ಬಿಟ್ಟು ತಕ್ಷಕನ ರೂಪವನ್ನು ತಾಳಿ ತಕ್ಷಣವೇ ನೆಲದಲ್ಲಿಯ ಒಂದು ದೊಡ್ಡ ಬಿಲವನ್ನು ಹೊಕ್ಕನು. ಬಿಲವನ್ನು ಪ್ರವೇಶಿಸಿ ನಾಗಲೋಕದಲ್ಲಿರುವ ತನ್ನ ಮನೆಗೆ ಹೋದನು. ಉತ್ತಂಕನೂ ಅದೇ ಬಿಲವನ್ನು ಪ್ರವೇಶಿಸಿದನು. ನಾಗಲೋಗವನ್ನು ಪ್ರವೇಶಿಸಿ ಈ ಶ್ಲೋಕಗಳಿಂದ ನಾಗಗಳನ್ನು ಪ್ರಾರ್ಥಿಸತೊಡಗಿದನು.

"ಮಿಂಚಿನಿಂದೊಡಗೂಡಿದ ಮೋಡಗಳು ಗಾಳಿಯಿಂದ ತಳ್ಳಲ್ಪಟ್ಟು ಮಳೆಸುರಿಸುವಂತೆ ಯುದ್ಧದಲ್ಲಿ ಶೋಭಿಸುವ

ಐರಾವತ ರಾಜನ ಸರ್ಪಗಳೇ! ಸುಂದರ ರೂಪವುಳ್ಳವರೇ! ಬೇರೆ ಬೇರೆ ರೂಪಗಳನ್ನು ಧರಿಸಬಲ್ಲವರೇ! ಬಣ್ಣ ಬಣ್ಣದ ಕುಂಡಲಗಳನ್ನು ಧರಿಸಿದವರೇ! ಆಕಾಶದಲ್ಲಿ ಆದಿತ್ಯನಂತೆ ಹೊಳೆಯುತ್ತಿರುವವರೇ! ಐರಾವತನ ಮಕ್ಕಳೇ! ಗಂಗಾತೀರದ ಉತ್ತರದಲ್ಲಿ ಬಹಳ ಸಾಲುಗಳಲ್ಲಿರುವ ನಾಗಗಳೇ! ಐರಾವತನನ್ನು ಬಿಟ್ಟು ಯಾರು ಸುಡುತ್ತಿರುವ ಸೂರ್ಯನ ಕಿರಣಗಳಡಿಯಲ್ಲಿ ಸಂಚರಿಸಲು ಇಚ್ಛಿಸುವರು? ದೃತರಾಷ್ಟ್ರನು ಹೊರಟರೆ ಅವನ ಹಿಂದೆ ೨೮,೦೦೦ ನಾಗಗಳೂ ಹೋಗುತ್ತವೆ. ಹತ್ತಿರದಲ್ಲಿರಲಿ ಅಥವಾ ದೂರವಿರಲಿ, ಐರಾವತವನ್ನು ತಮ್ಮ ಅಣ್ಣನನ್ನಾಗಿ ಹೊಂದಿರುವ ಎಲ್ಲ ನಾಗಗಳಿಗೂ ನನ್ನ ನಮನಗಳು. ಮೊದಲು ಕುರುಕ್ಷೇತ್ರ ಮತ್ತು ಖಾಂಡವಗಳಲ್ಲಿ ವಾಸಿಸಿದ ನಾಗರಾಜ ತಕ್ಷಕನು ನನಗೆ ನನ್ನ ಕುಂಡಲಗಳನ್ನು ಹಿಂದಿರುಗಿಸಲು ಪ್ರಾರ್ಥಿಸುತ್ತೇನೆ. ತಕ್ಷಕ ಮತ್ತು ಅಶ್ವಸೇನರು ಕುರುಕ್ಷೇತ್ರದಲ್ಲಿ ನದಿ ಇಕ್ಷುಮತಿಯ ತಟದಲ್ಲಿ ವಾಸಿಸುತ್ತಿರುವಾಗ ನಿತ್ಯವೂ ಸಹಚರರಿದ್ದರು. ತಕ್ಷಕನ ಜಘನ್ಯಜ ಶೃತಸೇನನೆಂದು ಕರೆಯಲ್ಪಡುವ, ಮಹಾದ್ಯುಮ್ನಿ ಎಂಬಲ್ಲಿ ನಾಗಮುಖ್ಯನಾಗಲು ಪ್ರಾರ್ಥಿಸುತ್ತ ವಾಸಿಸುತ್ತಿದ್ದ ಆ ಮಹಾತ್ಮನಿಗೂ ನಾನು ನಮಸ್ಕರಿಸುತ್ತಿದ್ದೇನೆ.”

ಈ ರೀತಿ ನಾಗಗಳ ಸ್ತುತಿಗೈದರೂ ಕುಂಡಲಗಳು ದೊರೆಯದೇ ಇದ್ದಾಗ ಅವನು ಒಂದು ಮಗ್ಗವನ್ನೇರಿ ವಸ್ತ್ರವೊಂದನ್ನು ನೇಯುತ್ತಿರುವ ಇಬ್ಬರು ಸ್ತ್ರೀಯರನ್ನು ಕಂಡನು. ಅದರ ಮೇಲೆ ಕಪ್ಪು ಮತ್ತು ಬಿಳುಪಿನ ನೂಲುಗಳಿದ್ದವು. ಅಲ್ಲಿ ಅವನು ಆರು ಕುಮಾರರು ಒಂದು ಚಕ್ರವನ್ನು ತಿರುಗಿಸುತ್ತಿರುವುದನ್ನೂ ಮತ್ತು ಕುದುರೆಯನ್ನೇರಿದ ಪುರುಷನೊಬ್ಬನನ್ನೂ ನೋಡಿದನು. ಆಗ ಅವರೆಲ್ಲರನ್ನೂ ಸಂತುಷ್ಟಿಗೊಳಿಸಲೋಸುಗ ಮಂತ್ರಶ್ಲೋಕಗಳಿಂದ ಈ ರೀತಿ ಸ್ತುತಿಸಿದನು:

> “ಅವಿರತವಾಗಿ ನಿರ್ದಿಷ್ಟವಾಗಿ ಆರು ಕುಮಾರರಿಂದ ತಿರುಗಿಸಲ್ಪಡುತ್ತಿರುವ ಈ ಚಕ್ರದ ಪರಿಧಿಯು ಪರ್ವಯೋಗಗಳನ್ನು ಸೂಚಿಸುವ ೨೪ ಗುರುತುಗಳನ್ನು ಹೊಂದಿದೆ ಮತ್ತು ಮಧ್ಯದಲ್ಲಿ ೩೦೦ ಹಲ್ಲುಗಳಿಂದ ಕೂಡಿದೆ. ವಿಶ್ವರೂಪಿ ಈ ಯುವತಿಯರೀರ್ವರು ಕಪ್ಪು ಮತ್ತು ಬಿಳುಪಿನ ನೂಲುಗಳಿಂದ ವಸ್ತ್ರವನ್ನು ಸತತವಾಗಿ ನೇಯುವುದರ ಮೂಲಕ ಅಸಂಖ್ಯ ವಿಶ್ವಗಳನ್ನು ಅಸಂಖ್ಯ ಜೀವಿಗಳನ್ನು ಸೃಷ್ಟಿಸುತ್ತಿದ್ದಾರೆ. ವಜ್ರದ ಒಡೆಯ! ಭುವನ ರಕ್ಷಕ! ವೃತ್ರ ಹಂತಕ! ನಮೂಚಿ ಹಂತಕ! ಕಪ್ಪು ವಸ್ತ್ರವನ್ನು ಧರಿಸಿದ ಮಹಾತ್ಮ! ಲೋಕದಲ್ಲಿ ಸತ್ಯ ಮತ್ತು ಅಸತ್ಯಗಳನ್ನು ತೋರಿಸಿಕೊಡುವವನೇ! ಹಿಂದೆ ಸಮುದ್ರದ

ಗರ್ಭದಿಂದ ತೆಗೆದ, ವೈಶ್ವಾನರನಂತಿರುವ ಅಶ್ವವನ್ನು
ವಾಹನವನ್ನಾಗಿ ಬಳಸಿದ, ಲೋಕತ್ರಯಗಳ ಈಶ!
ಪುರಂದರ! ಜಗದೀಶ್ವರ! ನಿನಗೆ ನನ್ನ ನಮನಗಳು."

ಆಗ ಆ ಪುರುಷನು ಅವನಿಗೆ ಹೇಳಿದನು:

“ನಿನ್ನ ಸ್ತೋತ್ರಗಳಿಂದ ನಾನು ಪ್ರೀತನಾಗಿದ್ದೇನೆ. ನಿನಗೆ
ಪ್ರಿಯವಾದ ಏನನ್ನು ಮಾಡಲಿ?”

ಅವನು ಹೇಳಿದನು:

“ನಾಗಗಳು ನನ್ನ ವಶದಲ್ಲಿ ಬರುವಂತಾಗಲಿ.”

ಪುರುಷನು ಹೇಳಿದನು:

“ಈ ಕುದುರೆಯ ಗುದದ್ವಾರದಲ್ಲಿ ಊದು.”

ಅವನು ಕುದುರೆಯ ಗುದದ್ವಾರದಲ್ಲಿ ಊದಿದನು. ಕುದುರೆಯ ಎಲ್ಲ ರಂಧ್ರಗಳಿಂದಲೂ ಹೊಗೆಯಿಂದೊಡಗೂಡಿದ ಬೆಂಕಿಯ ಜ್ವಾಲೆಗಳು ಹೊರಹೊಮ್ಮಿದವು. ಇಡೀ ನಾಗಲೋಕವೇ ಸುಟ್ಟು ಭಸ್ಮವಾಗುವುದರಲ್ಲಿತ್ತು. ಆಗ ಅಗ್ನಿತೇಜೋಭಯದಿಂದ ಸಂಭ್ರಾಂತಿಹೊಂದಿ ವಿಷಣ್ಣನಾದ ತಕ್ಷಕನು ಅವಸರದಲ್ಲಿ ಕುಂಡಲಗಳನ್ನು ಹಿಡಿದು ಸ್ವಭವನದಿಂದ ಹೊರಬಿದ್ದು ಉತ್ತಂಕನಿಗೆ

“ನಿನ್ನ ಈ ಕುಂಡಲಗಳನ್ನು ಪ್ರತಿಗ್ರಹಿಸಬೇಕು”

ಎಂದನು. ಉತ್ತಂಕನು ಆ ಕುಂಡಲಗಳನ್ನು ಸ್ವೀಕರಿಸಿ ಯೋಚಿಸಿದನು:

> "ಇಂದು ಉಪಾಧ್ಯಾಯಿನಿಯು ಹೇಳಿದ ಪುಣ್ಯದಿನ. ಆದರೆ ನಾನು ತುಂಬಾ ದೂರ ಬಂದುಬಿಟ್ಟಿದ್ದೇನೆ. ಇವುಗಳನ್ನು ಅವಳಿಗೆ ತೆಗೆದುಕೊಂಡುಹೋಗಲು ಹೇಗೆ ಸಾಧ್ಯ?"

ಈ ರೀತಿ ಚಿಂತಿಸುತ್ತಿದ್ದಾಗ ಆ ಪುರುಷನು ಹೇಳಿದನು:

> "ಉತ್ತಂಕ! ಈ ಅಶ್ವವನ್ನೇರು. ಇದು ನಿನ್ನನ್ನು ಕ್ಷಣಮಾತ್ರದಲ್ಲಿ ಉಪಾಧ್ಯಾಯನ ಮನೆಗೆ ತಲುಪಿಸುತ್ತದೆ."

ಇದನ್ನು ಕೇಳಿ ಅವನು ಆ ಕುದುರೆಯನ್ನೇರಿ ಉಪಾಧ್ಯಾಯನ ಮನೆಯನ್ನು ತಲುಪಿದನು.

ಸ್ನಾನ ಮಾಡಿ ತಲೆಗೂದಲನ್ನು ಸಿಂಗರಿಸಿಕೊಳ್ಳುತ್ತಿದ್ದ ಉಪಾಧ್ಯಾಯನಿಯು "ಉತ್ತಂಕನು ಇನ್ನೂ ಬಂದಿಲ್ಲವಲ್ಲ" ಎಂದು ಅವನನ್ನು ಶಪಿಸುವವಳಿದ್ದಳು. ಅದೇ ವೇಳೆಗೆ ಉತ್ತಂಕನು ಪ್ರವೇಶಿಸಿ ಉಪಾಧ್ಯಾಯಿನಿಯನ್ನು ನಮಸ್ಕರಿಸಿ ಹೇಳಿದನು: "ನೀವು ಕೇಳಿದ ಕುಂಡಲಗಳಿವು." ಅವಳು ಉತ್ತರಿಸಿದಳು:

> "ಉತ್ತಂಕ! ನೀನು ಸರಿಯಾದ ಹೊತ್ತಿಗೆ ಇಲ್ಲಿಗೆ ಬಂದಿದ್ದೀಯೆ. ನಿನಗೆ ಸ್ವಾಗತ. ಒಳ್ಳೆಯದಾಯಿತು ನಾನು ನಿನ್ನನ್ನು ಶಪಿಸಲಿಲ್ಲ. ನಿನಗೆ ಶ್ರೇಯಸ್ಸಾಗುತ್ತದೆ. ನಿನ್ನ ಆಸೆಗಳು ಸಿದ್ಧಿಯಾಗಲಿ."



ತರುವಾಯ ಉತ್ತಂಕನು ಉಪಾಧ್ಯಾಯನಲ್ಲಿಗೆ ಹೋಗಿ ನಮಸ್ಕರಿಸಿದನು. ಉಪಾಧ್ಯಾಯನು ಕೇಳಿದನು:

> "ವತ್ಸ ಉತ್ತಂಕ! ಸ್ವಾಗತವು ನಿನಗೆ. ನಿನ್ನ ಕೆಲಸವು ಏಕೆ ತಡವಾಯಿತು?"

ಉತ್ತಂಕನು ಉಪಾಧ್ಯಾಯನಿಗೆ ಉತ್ತರಿಸಿದನು:

> "ಸ್ವಾಮಿ! ನನ್ನ ಕಾರ್ಯದಲ್ಲಿ ವಿಘ್ನವನ್ನು ತಂದೊಡ್ಡಿದ ನಾಗರಾಜ ತಕ್ಷಕನಿಂದ ನಾನು ನಾಗಲೋಕದವರೆಗೆ ಎಳೆದೊಯ್ಯಲ್ಪಟ್ಟೆ. ಅಲ್ಲಿ ನಾನು ಸ್ತ್ರೀಯರೀರ್ವರು ಕಪ್ಪು ಮತ್ತು ಬಿಳಿ ನೂಲುಗಳಿಂದ ಬಟ್ಟೆಯನ್ನು ನೇಯುತ್ತಿರುವುದನ್ನು ನೋಡಿದೆ. ಅವರ್ಯಾರಿದ್ದರು? ಮತ್ತು ಅಲ್ಲಿ ಹನ್ನೆರಡು ಅರಗಳಿರುವ ಚಕ್ರವನ್ನು ಆರು ಕುಮಾರರು ತಿರುಗಿಸುತ್ತಿರುವುದನ್ನೂ ನೋಡಿದೆ. ಅವರು ಯಾರಿದ್ದರು? ಅಶ್ವವನ್ನೇರಿದ್ದ ಪುರುಷನೋರ್ವನನ್ನೂ ನೋಡಿದೆ. ಅವನು ಯಾರಿದ್ದನು? ಕುದುರೆಯು ಬಹಳ ದೊಡ್ಡದಾಗಿತ್ತು. ಅದು ಏನಿತ್ತು? ಹೋಗುವಾಗ ದಾರಿಯಲ್ಲಿ ಒಂದು ಹೋರಿಯನ್ನು ನೋಡಿದೆ. ಅದನ್ನು ಒಬ್ಬ ಪುರುಷನು ಸವಾರಿಮಾಡುತ್ತಿದ್ದನು. ಅವನು ನನಗೆ ಪ್ರೀತಿಯಿಂದ ಉತ್ತಂಕ! ಹೋರಿಯ ಸಗಣಿಯನ್ನು ತಿನ್ನು ಎಂದನು. ಅದೂ ಕೂಡ ಏನೆಂದು ನಿನ್ನಿಂದ ತಿಳಿಯಲು ಬಯಸುತ್ತೇನೆ."

ಉಪಾಧ್ಯಾಯನು ಉತ್ತರಿಸಿದನು:

> “ಆ ಸ್ತ್ರೀಯರು ಧಾತಾ ಮತ್ತು ವಿಧಾತರು. ಆ ಕಪ್ಪು ಮತ್ತು ಬಿಳಿ ತಂತುಗಳು ರಾತ್ರಿ ಹಗಲುಗಳು. ಆರು ಕುಮಾರರಿಂದ ತಿರುಗಿಸಲ್ಪಡುತ್ತಿದ್ದ ಹನ್ನೆರಡು ಅರಗಳ ಆ ಚಕ್ರವು ವರ್ಷ ಮತ್ತು ಆರು ಋತುಗಳು. ಆ ಪುರುಷನು ಪರ್ಜನ್ಯ ಮತ್ತು ಕುದುರೆಯು ಅಗ್ನಿ. ಹೋಗುವಾಗ ದಾರಿಯಲ್ಲಿ ನೀನು ನೋಡಿದ ಹೋರಿಯು ಆನೆಗಳ ರಾಜ ಐರಾವತ. ಅದರ ಮೇಲೆ ಸವಾರಿಮಾಡುತ್ತಿದ್ದವನು ಇಂದ್ರ. ಮತ್ತು ನೀನು ಭಕ್ಷಿಸಿದ ಆ ಹೋರಿಯ ಸಗಣಿ ಅಮೃತ. ನನ್ನ ಸಖ ಇಂದ್ರನ ಸಹಾಯದಿಂದ ನೀನು ನಾಗಭವನದಲ್ಲಿ ಏನೂ ತೊಂದರೆಯನ್ನು ಅನುಭವಿಸಲಿಲ್ಲ. ಅವನ ಅನುಗ್ರಹದಿಂದಲೇ ನೀನು ಕುಂಡಲಗಳನ್ನು ತೆಗೆದುಕೊಂಡು ಹಿಂದಿರುಗಿರುವೆ. ಇನ್ನು ನೀನು ಹೋಗಬಹುದು. ನಿನಗೆ ನನ್ನ ಅನುಮತಿ ಇದೆ. ನಿನಗೆ ಶ್ರೇಯಸ್ಸಾಗುತ್ತದೆ.”

ಉಪಾಧ್ಯಾಯನನ್ನು ಬೀಳ್ಕೊಂಡು, ತಕ್ಷಕನ ಮೇಲೆ ಸಿಟ್ಟಿಗೆದ್ದ ಉತ್ತಂಕನು ಅವನ ಮೇಲೆ ಸೇಡು ತೀರಿಸುವ ಉದ್ದೇಶದಿಂದ ಹಸ್ತಿನಾಪುರಕ್ಕೆ ಹೊರಟನು. ಹಸ್ತಿನಾಪುರವನ್ನು ತಲುಪಿದ ತಕ್ಷಣವೇ ಆ ದ್ವಿಜಸತ್ತಮ ಉತ್ತಂಕನು ರಾಜ ಜನಮೇಜಯನ ಬಳಿ ಹೋದನು. ತಕ್ಷಶಿಲೆಯನ್ನು ಗೆದ್ದು ಹಿಂದಿರುಗಿ, ಸಾಮಂತರು ಮತ್ತು

ಮಂತ್ರಿಗಳಿಂದ ಸುತ್ತುವರೆದಿದ್ದ ಆ ವಿಜಯಿಯನ್ನು ಕಂಡು ಸರಿಯಾದ ಸಮಯವನ್ನು ನೋಡಿ ಶಬ್ಧ ಸಂಪನ್ನ ವಾಣಿಯಲ್ಲಿ ಹೇಳಿದನು:

> "ಪಾರ್ಥಿವಸತ್ತಮ! ಮಾಡಬೇಕಾದ ಮುಖ್ಯ ಕಾರ್ಯವನ್ನು ಬಿಟ್ಟು ಬಾಲಕನಂತೆ ಬೇರೆ ಏನನ್ನೋ ಮಾಡುತ್ತ ಸುಮ್ಮನೆ ಕಾಲಹರಣ ಮಾಡುತ್ತಿರುವೆ."

ಆ ವಿಪ್ರನು ಈ ರೀತಿ ಹೇಳಲು ಪ್ರಸನ್ನಾತ್ಮ ರಾಜ ಜನಮೇಜಯನು ಮುನಿಯನ್ನು ಸರಿಯಾದ ರೀತಿಯಲ್ಲಿ ಪೂಜಿಸಿ ಉತ್ತರಿಸಿದನು:

> "ಪ್ರಜೆಗಳನ್ನು ಪರಿಪಾಲಿಸುವ ನನ್ನ ಕ್ಷಾತ್ರಧರ್ಮವನ್ನು ಪರಿಪಾಲಿಸುತ್ತಿದ್ದೇನೆ. ದ್ವಿಜೇಂದ್ರ! ನೀನು ಯಾವ ಕಾರ್ಯದ ಕುರಿತು ಹೇಳುತ್ತಿರುವೆ ಎನ್ನುವುದನ್ನು ವಿವರಿಸಿ ಹೇಳು"

ನೃಪೋತ್ತಮನ ಈ ಮಾತುಗಳನ್ನು ಕೇಳಿ ಪುಣ್ಯಕೃತರಲ್ಲಿ ವರಿಷ್ಠ ದ್ವಿಜೋತ್ತಮನು ರಾಜನಿಗೆ ಹೇಳಿದನು:

> "ನೃಪತಿ! ನಿನ್ನದೇ ಆದ ಒಂದು ಕಾರ್ಯವಿದೆ. ನಿನ್ನ ತಂದೆಯು ಯಾವ ನಾಗೇಂದ್ರ ತಕ್ಷಕನಿಂದ ಹಿಂಸೆಗೊಳಗಾಗಿದ್ದನೋ ಆ ದುರಾತ್ಮ ಪನ್ನಗನ ಮೇಲೆ ನೀನು ಪ್ರತೀಕಾರ ಮಾಡಬೇಕು. ನನ್ನ ವಿಚಾರದಲ್ಲಿ ನಿನ್ನ ಮಹಾತ್ಮ ತಂದೆಯ ಮರಣದ ಸೇಡನ್ನು ತೀರಿಸಿಕೊಳ್ಳುವ ಕಾಲವು ಬಂದಿದೆ. ಅನಪರಾಧಿಯಾದ ಆ ರಾಜನು

ದುಷ್ಟಾಂತರಾತ್ಮನಿಂದ ಕಡಿಯಲ್ಪಟ್ಟ ಮಿಂಚಿನಿಂದ ಹೊಡೆಯಲ್ಪಟ್ಟ ವೃಕ್ಷದಂತೆ ಪಂಚಭೂತಗಳಲ್ಲಿ ಒಂದಾದನು. ತನ್ನ ಬಲದರ್ಪದಿಂದ ಉನ್ಮತ್ತನಾದ ಆ ಪನ್ನಗಾಧಮ ತಕ್ಷಕನು ನಿನ್ನ ತಂದೆಯನ್ನು ಕಚ್ಚುವ ಪಾಪ ಕಾರ್ಯವನ್ನು ಮಾಡಿದ್ದಾನೆ. ರಾಜರ್ಷಿಗಳ ವಂಶೋದ್ಧಾರಕ ಅಮರಪ್ರತಿಮ ನೃಪನನ್ನು ರಕ್ಷಿಸಲು ಬರುತ್ತಿದ್ದ ಕಾಶ್ಯಪನನ್ನು ಕೂಡ ಹಿಂದೆ ಕಳುಹಿಸಿದನು. ನಿನ್ನಿಂದ ನೆರವೇರಿಸಲ್ಪಡುವ ಸರ್ಪಸತ್ರದಲ್ಲಿ ಆ ಪಾಪಿಯನ್ನು ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಸುಟ್ಟುಹಾಕಬೇಕು. ಇದರಿಂದ ನಿನ್ನ ತಂದೆಯ ಮರಣದ ಸೇಡು ತೀರುತ್ತದೆ ಮತ್ತು ನನಗೆ ಪ್ರಿಯವಾದ ಒಂದು ದೊಡ್ಡ ಕೆಲಸವನ್ನು ಮಾಡಿಕೊಟ್ಟಹಾಗೂ ಆಗುತ್ತದೆ. ಒಮ್ಮೆ ನಾನು ಗುರುದಕ್ಷಿಣೆಯನ್ನು ತರುವಾಗ ಆ ದುರಾತ್ಮನು ವಿಘ್ನವನ್ನು ತಂದೊಡ್ಡಿದ್ದನು.”

ಉತ್ತಂಕನ ಈ ಮಾತುಗಳನ್ನು ಕೇಳಿದ ನೃಪತಿಯು ಅಗ್ನಿಯಲ್ಲಿ ತುಪ್ಪವನ್ನು ಹವಿಸ್ಸನ್ನಾಗಿ ಹಾಕಿದಾಗ ಅದು ಹೇಗೆ ಪ್ರಜ್ವಲಿಸುತ್ತದೆಯೋ ಹಾಗೆ ತಕ್ಷಕನ ಮೇಲೆ ಸಿಟ್ಟಿಗೆದ್ದನು. ಬಹು ದುಃಖಿತನಾದ ರಾಜನು ಉತ್ತಂಕನ ಸನ್ನಿಧಿಯಲ್ಲಿಯೇ ತನ್ನ ತಂದೆಯು ಸ್ವರ್ಗಗತಿಯನ್ನು ಪಡೆದುದರ ಕುರಿತು ತನ್ನ ಮಂತ್ರಿಗಳಲ್ಲಿ ಕೇಳಿದನು.

ಉತ್ತಂಕನಿಂದ ತನ್ನ ತಂದೆಯ ವೃತ್ತಾಂತವನ್ನು ಕೇಳಿದ ರಾಜೇಂದ್ರನು ದುಃಖಶೋಕದಲ್ಲಿ ಮುಳುಗಿದನು.

## ಜನಮೇಜಯನಿಗೆ ಅವನ ತಂದೆಯ ಸ್ವರ್ಗಗತಿಯ ಬಗ್ಗೆ ತಿಳಿದುದು

ಪರಿಕ್ಷಿತನ ನಿಧನದ ಕುರಿತು ನೃಪತಿಯು ಮಂತ್ರಿಗಳಲ್ಲಿ ಏನನ್ನು ಕೇಳಿದನು:

> "ನನ್ನ ತಂದೆ ಮಹಾಯಶಸ್ವಿಯು ಹೇಗಿದ್ದ ಮತ್ತು ಅವನು ಹೇಗೆ ಸಾವನ್ನಪ್ಪಿದ ಎನ್ನುವುದನ್ನು ನೀವು ಯಥವತ್ತಾಗಿ ತಿಳಿದಿದ್ದೀರಿ. ತಂದೆಯ ಕುರಿತು ಎಲ್ಲವನ್ನೂ ನಿಮ್ಮಿಂದ ಕೇಳಿದ ನಂತರವೇ ಯಾವುದು ಕಲ್ಯಾಣಕರವಾದುದೋ ಅದನ್ನು ಮಾಡುತ್ತೇನೆ. ಅನ್ಯಥಾ ಇಲ್ಲ."

ಆ ಮಾಹಾತ್ಮ ರಾಜ ಜನಮೇಜಯನ ಮಾತುಗಳನ್ನು ಕೇಳಿದ ಸರ್ವ ಧರ್ಮವಿದ ಪ್ರಾಜ್ಞ ಮಂತ್ರಿಗಳು ಹೇಳಿದರು:

> "ನಿನ್ನ ತಂದೆಯು ಧರ್ಮಾತ್ಮನೂ, ಮಹಾತ್ಮನೂ, ಪ್ರಜಾಪಾಲಕನೂ ಆಗಿದ್ದನು. ಆ ಮಹಾತ್ಮನು ಹೇಗೆ ನಡೆದುಕೊಳ್ಳುತ್ತಿದ್ದನು ಎನ್ನುವುದನ್ನು ಕೇಳು. ಸ್ವಧರ್ಮದಲ್ಲಿ ನಿಷ್ಠನಾಗಿದ್ದು ನಾಲ್ಕೂ ವರ್ಣದವರನ್ನು ರಕ್ಷಿಸುತ್ತಿದ್ದನು. ಧರ್ಮನಂತೆಯೇ ರಾಜನು ಧರ್ಮವತ್ತಾಗಿ ಧಾರ್ಮಿಕನಾಗಿದ್ದನು. ಶ್ರೀಮಂತನೂ ಅತುಲ ವಿಕ್ರಮಿಯೂ

ಆದ ಅವನು ಪೃಥ್ವೀ ದೇವಿಯನ್ನು ರಕ್ಷಿಸುತ್ತಿದ್ದನು. ಅವನಿಗೆ ಯಾರ ಮೇಲೂ ದ್ವೇಷವಿರಲಿಲ್ಲ ಮತ್ತು ಯಾರೂ ಅವನನ್ನು ದ್ವೇಷಿಸುತ್ತಿರಲಿಲ್ಲ. ಪ್ರಜಾಪತಿಯಂತೆ ಸರ್ವರನ್ನೂ ಒಂದೇಸಮನಾಗಿ ಕಾಣುತ್ತಿದ್ದನು. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರೆಲ್ಲರೂ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿದ್ದು, ಸುಖಮನಸ್ಕರಾಗಿ, ರಾಜನ ರಾಜ್ಯಭಾರದಿಂದ ಸುರಕ್ಷಿತರಾಗಿದ್ದರು. ವಿಧವೆಯರ, ಅನಾಥರ ಮತ್ತು ಬಡವರ ಜೀವನ ಜವಾಬ್ದಾರಿಯನ್ನು ಹೊತ್ತ ಆ ಸುಂದರನು ಸರ್ವರಿಗೂ ಚಂದ್ರನಂತಿದ್ದನು. ಜನರೆಲ್ಲರೂ ತುಷ್ಟಪುಷ್ಟರೂ, ಶ್ರೀಮಂತರೂ, ಸತ್ಯವಂತರೂ, ದೃಢವಿಕ್ರಮಿಗಳೂ ಆಗಿದ್ದರು. ಧನುರ್ವೇದದ ಶಿಷ್ಯನಾದ ನೃಪನು ಶಾರದ್ವತನಂತಿದ್ದನು. ಜನಮೇಜಯ ! ಗೋವಿಂದನ ಪ್ರಿಯಕರನಾಗಿದ್ದ ನಿನ್ನ ತಂದೆಯು ಲೋಕದಲ್ಲಿ ಸರ್ವರ ಪ್ರಿಯಕರನಾಗಿ ಮಹಾ ಯಶಸ್ವಿಯಾಗಿದ್ದನು. ಕುರುಗಳ ಪರಿಕ್ಷೀಣವಾದಾಗ ಉತ್ತರೆಯಲ್ಲಿ ಹುಟ್ಟಿದ ಆ ಅಭಿಮನ್ಯುವಿನ ಬಲಶಾಲಿ ಮಗನನ್ನು ಪರಿಕ್ಷಿತ ಎಂದು ಕರೆದರು. ರಾಜಧರ್ಮಾರ್ಥ ಕುಶಲನಾಗಿದ್ದ ಆ ರಾಜನು ಸರ್ವಗುಣ ಸಂಪನ್ನನೂ. ಸ್ವತಃ ಜಿತೇಂದ್ರಿಯನೂ, ಮೇಧಾವಿಯೂ, ವೃದ್ಧರ ಸೇವನಿರತನೂ ಆಗಿದ್ದನು. ಷಡ್ವರ್ಗಗುಣಯುಕ್ತನಾದ

ಮಹಾಬುದ್ಧಿಶಾಲಿಯೂ, ನೀತಿಧರ್ಮ ವಿದುತ್ತಮನೂ ಆದ ನಿನ್ನ ತಂದೆಯು ಅರವತ್ತು ವರ್ಷಗಳ ಕಾಲ ಪ್ರಜಾಪಾಲನೆಯನ್ನು ಮಾಡಿದನು. ನಂತರ ಅವನಿಗೆ ಒಂದು ಸರ್ಪದಿಂದ ತಡೆಗಟ್ಟಲಾಗದಂಥಹ ಆಪತ್ತು ಸಂಭವಿಸಿತು. ಅವನ ನಂತರ ಪುರುಷಶ್ರೇಷ್ಠನಾದ ನೀನು ಸಹಸ್ರಾರು ವರ್ಷಗಳಿಂದ ಕುರುಕುಲಾಗತವಾಗಿದ್ದ ಈ ರಾಜ್ಯವನ್ನು ದರ್ಮಪೂರ್ವಕವಾಗಿ ಪಡೆದೆ. ಸರ್ವಭೂತಾನುಪಾಲಕ! ನೀನು ಬಾಲಕನಾಗಿರುವಾಗಲೇ ನಿನ್ನನ್ನು ಅಭಿಷಿಕ್ತನನ್ನಾಗಿ ಮಾಡಲಾಗಿತ್ತು."

ಜನಮೇಜಯನು ಹೇಳಿದನು:

"ಪ್ರಜೆಗಳ ಹಿತವನ್ನಾಗಲೀ ಅವರಿಗೆ ಬೇಕಾಗಿದ್ದುದನ್ನಾಗಲೀ ಮಾಡದೇ ಇದ್ದ ರಾಜರು ಯಾರೂ ನನ್ನ ಈ ಕುಲದಲ್ಲಿ ಹುಟ್ಟಲಿಲ್ಲ. ವಿಶೇಷವಾಗಿ ನನ್ನ ಪಿತಾಮಹರು ಮಹಾ ಕಾರ್ಯಗಳನ್ನೆಸಗಿದವರು. ಹೀಗಿರುವಾಗ ನನ್ನ ತಂದೆಯಾದರೂ ಹೇಗೆ ಸಾವೆಂಬ ಆಪತ್ತಿಗೆ ಒಳಗಾದನು? ನನಗೆ ವಿವರಿಸಿ. ಯಥಾವತ್ತಾಗಿ ಕೇಳಲು ಬಯಸುತ್ತೇನೆ."

ಈ ರೀತಿ ರಾಜನಿಂದ ಆಜ್ಞೆಯಾದಾಗ ಮಂತ್ರಿಗಳು ಪ್ರಿಯಹಿತ ನಿರತ ರಾಜ ನರಾಧಿಪನಿಗೆ ಎಲ್ಲವನ್ನೂ ವರದಿಮಾಡಿದರು:

“ರಾಜನ್! ಯುದ್ಧದಲ್ಲಿ ಮಹಾಭಾಗ ಪಾಂಡುವಿನಂತೆ ಶ್ರೇಷ್ಠ ಧನುರ್ಧರನಾದ ನಿನ್ನ ತಂದೆಯು ಸದಾ ಮೃಗಯಾಶೀಲನಾಗಿ ರಾಜಕಾರ್ಯಗಳೊಂದನ್ನೂ ಬಿಡದೇ ಎಲ್ಲವನ್ನು ನಮಗೊಪ್ಪಿಸಿದ್ದನು. ಒಮ್ಮೆ ಅವನು ವನದಲ್ಲಿ ಸಂಚರಿಸುತ್ತಿದ್ದ ಮೃಗವೊಂದನ್ನು ಬಾಣದಿಂದ ಹೊಡೆದು, ಖಡ್ಗ ಮತ್ತು ಧನುಸ್ಸು ಭತ್ತಳಿಗೆಗಳನ್ನು ಹಿಡಿದು ಕಾಲ್ನಡುಗೆಯಲ್ಲಿಯೇ ಹೊಡೆತ ತಿಂದ ಮೃಗವನ್ನು ಆ ದಟ್ಟಡವಿಯಲ್ಲಿ ಹಿಂಬಾಲಿಸುತ್ತಾ ಹೋದನು. ಆದರೆ ನಿನ್ನ ತಂದೆಗೆ ಆ ಮೃಗವು ದೊರೆಯಲೇ ಇಲ್ಲ. ಅರವತ್ತು ವರ್ಷ ವಯಸ್ಸಿನ ವೃದ್ಧನಾಗಿದ್ದ ಅವನು ಆಯಾಸಗೊಂಡು ಹಸಿವು ಬಾಯಾರಿಕೆಗಳಿಂದ ಬಳಲಿ, ಆ ಮಹಾರಣ್ಯದಲ್ಲಿ ಓರ್ವ ಮುನಿಯನ್ನು ಕಂಡನು. ಆ ಸಮಯದಲ್ಲಿ ಮೌನವ್ರತವನ್ನಾಚರಿಸುತ್ತಿದ್ದ ಆ ಮುನಿಯನ್ನು ರಾಜೇಂದ್ರನು ಕೇಳಿದನು. ಪುನಃ ಪುನಃ ಕೇಳಿದರೂ ಆ ಮುನಿಯು ಯಾವ ಉತ್ತರವನ್ನೂ ನೀಡಲಿಲ್ಲ. ಹಸಿವು ಬಾಯಾರಿಕೆಗಳಿಂದ ಬಳಲಿದ್ದ ರಾಜನು ಮೌನವ್ರತಧರನಾಗಿ ಶಾಂತವಾಗಿ ಅಲುಗಾಡದೇ ಕುಳಿತಿದ್ದ ಮುನಿಯನ್ನು ಕಂಡು ಸಿಟ್ಟಿಗೆದ್ದನು. ಮುನಿಯು ಮೌನವ್ರತವನ್ನು ಪಾಲಿಸುತ್ತಿದ್ದಾನೆಂದು ತಿಳಿಯದೇ ನಿನ್ನ ತಂದೆ ರಾಜನು ಸಿಟ್ಟಿನ ಆವೇಶದಲ್ಲಿ ಅವನನ್ನು ಅಪಮಾನಿಸಿದನು. ಭರತಸತ್ತಮನು ತನ್ನ

ಧನುಸ್ಸಿನ ತುದಿಯಿಂದ ನೆಲದ ಮೇಲೆ ಸತ್ತು ಬಿದ್ದಿದ್ದ ಸರ್ಪವನ್ನು ಮೇಲೆತ್ತಿ ಆ ಶುದ್ಧಾತ್ಮನ ಭುಜಗಳ ಮೇಲೆ ಹಾಕಿದನು. ಆದರೂ ಆ ಮೇಧಾವಿಯು ಒಳ್ಳೆಯದಾಗಲೀ ಕೆಟ್ಟುದಾಗಲೀ ಒಂದು ಮಾತನ್ನೂ ಆಡಲಿಲ್ಲ. ಸರ್ಪವನ್ನು ತನ್ನ ಭುಜದ ಮೇಲೆ ಹೊತ್ತು ಹಾಗೆಯೇ ನಿಂತುಕೊಂಡಿದ್ದನು. ಹಸಿದು ಆಯಾಸಗೊಂಡಿದ್ದ ರಾಜೇಂದ್ರನು ಆ ಮುನಿಯ ಭುಜದ ಮೇಲೆ ಸರ್ಪವನ್ನು ಏರಿಸಿ ತನ್ನ ನಗರಿಗೆ ಮರಳಿದನು. ಆ ಋಷಿಗೆ ಹಸುವಿನಲ್ಲಿ ಹುಟ್ಟಿದ್ದ ಮಹಾಯಶಸ್ವಿ, ಮಹಾತೇಜಸ್ವಿ, ತಿಗ್ಮವೀರ್ಯ, ಮತ್ತು ಅತಿಕೋಪಿ ಶೃಂಗಿ ಎಂಬ ಹೆಸರಿನ ಮಗನಿದ್ದನು. ಆ ಮುನಿಯು ಬ್ರಹ್ಮನಲ್ಲಿಗೆ ಹೋಗಿ ಅವನ ಪೂಜೆಯನ್ನು ಮಾಡುತ್ತಿದ್ದನು. ಒಮ್ಮೆ ಅವನು ಮರಳಿ ಬರುತ್ತಿರುವಾಗ ಅವನ ಗೆಳೆಯನು ನಿನ್ನ ತಂದೆಯು ಮೃತ ಸರ್ಪವೊಂದನ್ನು ಭುಜಗಳ ಮೇಲಿರಿಸಿಕೊಂಡಿದ್ದಾನೆ ಎಂದು ಅವನ ತಂದೆಗೆ ಆದ ಅಪಮಾನದ ಕುರಿತು ಹೇಳಿದನು. ನಿನ್ನ ತಂದೆಯು ಓರ್ವ ಮುನಿಪ್ರವರ, ಜಿತೇಂದ್ರಿಯ, ವಿಶುದ್ಧ, ಅದ್ಭುತಕರ್ಮನಿರತ, ತಪಸ್ಸಿನಿಂದ ಆತ್ಮ ಮತ್ತು ಅಂಗಗಳು ಕಾಂತಿಯುಕ್ತವಾಗಿರುವ, ಶುಭಾಚಾರಿ, ಶುಭವಾಚಕ, ಸುಸ್ಥಿರ, ತಮಲೋಲುಪ, ಅಕ್ಷುದ್ರ, ಅನಸೂಯ, ವೃದ್ಧ, ಮೌನವ್ರತದಲ್ಲಿದ್ದ, ಸರ್ವಭೂತಗಳ ಶರಣ್ಯನಾದ ಆ

ಉಗ್ರತಪಸ್ವಿಯನ್ನು ಅಪಮಾನಿಸಿದ್ದನು. ಇದನ್ನು ಕೇಳಿ ರೋಷಾನ್ವಿತನಾಗಿ ಬಾಲಕನಾಗಿದ್ದರೂ ಶ್ರೇಷ್ಠನಾಗಿದ್ದ ಮಹಾತೇಜಸ್ವಿ ಋಷಿಪುತ್ರನು ನಿನ್ನ ತಂದೆಯನ್ನು ಶಪಿಸಿದನು. ತಕ್ಷಣವೇ ಅವನು ನೀರನ್ನು ಸ್ಪರ್ಶಿಸಿ ರೋಷದಿಂದ ಪ್ರಜ್ವಲಿಸುವ ತೇಜಸ್ಸುಳ್ಳವನಾಗಿ ನಿನ್ನ ತಂದೆಯನ್ನುದ್ದೇಶಿಸಿ ಹೇಳಿದನು: 'ಮೃತಸರ್ಪವನ್ನು ಯಾವ ಪಾಪಿಯು ನನ್ನ ಗುರುವಿಗೆ ತೊಡಿಸಿದ್ದಾನೆಯೋ ಅವನನ್ನು ನಾಗ ತಕ್ಷಕನು ಇಂದಿನಿಂದ ಏಳು ರಾತ್ರಿಗಳೊಳಗೆ ತನ್ನ ವಿಷದಿಂದ ಸುಟ್ಟುಹಾಕುತ್ತಾನೆ. ನನ್ನ ತಪೋಬಲವನ್ನು ಆ ಪಾಪಿಯು ನೋಡಲಿ.' ಹೀಗೆ ಹೇಳಿ ಅವನು ತನ್ನ ತಂದೆಯಿದ್ದಲ್ಲಿಗೆ ಬಂದು ಅವನನ್ನು ಕಂಡು ಶಾಪದ ಕುರಿತು ವರದಿ ಮಾಡಿದನು. ಆಗ ಆ ಮುನಿಶಾರ್ದೂಲನು ನಿನ್ನ ತಂದೆಗೆ ಒಂದು ಸಂದೇಶವನ್ನು ಕಳುಹಿಸಿದನು: 'ಮಹೀಪತೇ! ನೀನು ನನ್ನ ಪುತ್ರನಿಂದ ಶಪಿಸಲ್ಪಟ್ಟಿದ್ದೀಯೆ. ತಕ್ಷಕನು ತನ್ನ ತೇಜಸ್ಸಿನಿಂದ ನಿನ್ನನ್ನು ಸುಡಲಿದ್ದಾನೆ.' ಆ ಘೋರ ವಚನಗಳನ್ನು ಕೇಳಿದ ನಿನ್ನ ತಂದೆಯು ಪನ್ನಗೋತ್ತಮ ತಕ್ಷಕನಿಂದ ತಪ್ಪಿಸಿಕೊಳ್ಳಲು ಎಲ್ಲಾ ತರಹದ ಮುಂಜಾಗರೂಕತೆಯನ್ನೂ ತೆಗೆದುಕೊಂಡನು. ಏಳನೆಯ ದಿವಸವು ಬಂದಾಗ ರಾಜನ ಬಳಿಗೆ ಬ್ರಹ್ಮರ್ಷಿ ಕಾಶ್ಯಪನು ಬರಲು ಉತ್ಸುಕನಾಗಿದ್ದನು. ಆಗ ನಾಗೇಂದ್ರ ತಕ್ಷಕನು

ಕಾಶ್ಯಪನನ್ನು ನೋಡಿದನು. ಅವಸರದಲ್ಲಿ ಬರುತ್ತಿದ್ದ ಕಾಶ್ಯಪನಲ್ಲಿ ಪನ್ನಗೇಂದ್ರನು ಕೇಳಿದನು: 'ಇಷ್ಟೊಂದು ಅವಸರದಲ್ಲಿ ನೀನು ಎಲ್ಲಿಗೆ ಹೋಗುತ್ತಿರುವೆ ಮತ್ತು ಅಲ್ಲಿ ಏನು ಕೆಲಸವಿದೆ?' ಕಾಶ್ಯಪನು ಹೇಳಿದನು: 'ದ್ವಿಜನೇ! ನಾಗ ತಕ್ಷಕನು ಕಚ್ಚಲಿರುವ ಪರಿಕ್ಷಿತನೆಂಬ ಹೆಸರಿನ ಕುರುಶ್ರೇಷ್ಠ ರಾಜನಲ್ಲಿಗೆ ಅವನು ಆ ಸರ್ಪದ ಕಡಿತದಿಂದ ಸಾಯದ ಹಾಗೆ ಚಿಕಿತ್ಸೆಯನ್ನು ನೀಡಲು ಅವಸರದಲ್ಲಿ ಹೋಗುತ್ತಿದ್ದೇನೆ.' ತಕ್ಷಕನು ಹೇಳಿದನು: 'ನಾನು ಕಚ್ಚುವವನನ್ನು ನೀನು ಬದುಕಿಸಲು ಏಕೆ ಬಯಸುತ್ತೀಯೆ? ನಿನ್ನ ಆಸೆಯೇನೆಂಬುದನ್ನು ಹೇಳು. ನೀನು ಅಲ್ಲಿಗೆ ಯಾವುದರ ಆಸೆಯಿಂದ ಹೋಗುತ್ತಿದ್ದೀಯೋ ಅದನ್ನು ನಾನೇ ಕೊಡುತ್ತೇನೆ.' 'ಹಣದ ಆಸೆಯಿಂದ ಅಲ್ಲಿಗೆ ಹೋಗುತ್ತಿದ್ದೇನೆ' ಎಂದು ಹೇಳಲು ಅವನು ಆ ಮಹಾತ್ಮನಿಗೆ ಗೌರವಯುಕ್ತ ಶ್ಲಾಘನೀಯ ಮಾತುಗಳನ್ನಾಡಿದನು: 'ಅನಘ! ನೀನು ರಾಜನಿಂದ ಎಷ್ಟು ಧನವನ್ನು ಕೇಳ ಬಯಸುತ್ತೀಯೋ ಅದಕ್ಕೂ ಅಧಿಕವಾದ ಧನವನ್ನು ನನ್ನಿಂದ ಸ್ವೀಕರಿಸಿ ಹಿಂದಿರುಗು.' ನಾಗೇಂದ್ರನ ಈ ಮಾತುಗಳನ್ನು ಕೇಳಿ ದ್ವಿಜಶ್ರೇಷ್ಠ ಕಾಶ್ಯಪನು ತನಗೆ ಬೇಕಾದ್ದಷ್ಟು ಧನವನ್ನು ತಕ್ಷಕನಿಂದ ಪಡೆದು ಹಿಂದಿರುಗಿದನು. ಆ ವಿಪ್ರನು ಹೊರಟುಹೋದ ನಂತರ

ತಕ್ಷಕನು ಅರಮನೆಯಲ್ಲಿದ್ದ ನಿನ್ನ ತಂದೆ ನೃಪತಿಶ್ರೇಷ್ಠ ಧಾರ್ಮಿಕ ನೃಪನಲ್ಲಿಗೆ ರೂಪ ಬದಲಾಯಿಸಿಕೊಂಡು ಹೋಗಿ, ಅವನನ್ನು ತನ್ನ ವಿಷಾಗ್ನಿಯಿಂದ ಸುಟ್ಟುಹಾಕಿದನು. ಇದರ ನಂತರ ನಿನಗೆ ರಾಜಾಭಿಷೇಕವನ್ನು ಮಾಡಲಾಯಿತು. ನಾವು ನೋಡಿದ್ದುದನ್ನು ಮತ್ತು ಕೇಳಿದ್ದುದೆಲ್ಲವನ್ನೂ ದಾರುಣವಾಗಿದ್ದರೂ ಯಥಾವತ್ತಾಗಿ ನಿನಗೆ ತಿಳಿಸಿದ್ದೇವೆ. ಪಾರ್ಥಿವನ ಮತ್ತು ನಂತರ ಋಷಿ ಉತ್ತಂಕನ ಪರಾಭವಗಳ ಕುರಿತು ಕೇಳಿದ್ದೀಯೆ. ನಿನಗೆ ಯುಕ್ತವೆನಿಸಿದ್ದುದನ್ನು ಮಾಡು."

ಜನಮೇಜಯನು ಹೇಳಿದನು:

"ನೀವು ಈಗತಾನೆ ವರದಿ ಮಾಡಿದ ಅಡವಿಯ ನಿರ್ಜನ ವನದಲ್ಲಿ ಪನ್ನಗೇಂದ್ರ ಮತ್ತು ಕಾಶ್ಯಪನ ನಡುವಿನ ಸಂವಾದವನ್ನು ಯಾರು ನೋಡಿದ್ದರು ಅಥವಾ ಕೇಳಿದ್ದರು ಎನ್ನುವುದನ್ನು ಕೇಳಲು ಬಯಸುತ್ತೇನೆ. ಅದನ್ನು ಕೇಳಿದ ನಂತರ ನಾಗಗಳ ವಿನಾಶದ ಕುರಿತು ನನ್ನ ನಿರ್ಧಾರವನ್ನು ತಿಳಿಸುತ್ತೇನೆ."

ಮಂತ್ರಿಗಳು ಹೇಳಿದರು:

"ರಾಜನ್! ಈ ಹಿಂದೆ ದ್ವಿಜೇಂದ್ರ ಮತ್ತು ಪನ್ನಗೇಂದ್ರನ ಮಧ್ಯೆ ನಡೆದ ಸಂವಾದವನ್ನು ನಾವು ಯಾರಿಂದ

ಕೇಳಿದೆವೆನ್ನುವುದನ್ನು ಕೇಳು. ಇಂಧನಾರ್ಥವಾಗಿ ಯಾವನೋ ಒಬ್ಬನು ಒಂದು ವೃಕ್ಷವನ್ನು ಹತ್ತಿ ವೃಕ್ಷದಲ್ಲಿರುವ ಒಣರೆಂಬೆಗಳನ್ನು ಕಟ್ಟಿಗೆಗಳನ್ನಾಗಿ ಕಡಿಯುತ್ತಿದ್ದನು. ಆದರೆ ಆ ವೃಕ್ಷದಲ್ಲಿದ್ದ ಅವನನ್ನು ಪನ್ನಗನಾಗಲೀ ದ್ವಿಜನಾಗಲೀ ನೋಡಲಿಲ್ಲ. ಆ ವೃಕ್ಷದ ಜೊತೆಗೆ ಅವನೂ ಕೂಡ ಭಸ್ಮೀಭೂತನಾಗಿದ್ದ ಮತ್ತು ಅದೇ ಮರದ ಜೊತೆಗೆ ಆ ದ್ವಿಜನ ಪ್ರಭಾವದಿಂದ ಪುನಃ ಜೀವಿತಗೊಂಡಿದ್ದ. ಅವನೇ ಈ ನಗರಕ್ಕೆ ಬಂದು ತಕ್ಷಕ ಮತ್ತು ದ್ವಿಜನ ಕುರಿತು ಎಲ್ಲವನ್ನೂ ಯಥಾವತ್ತಾಗಿ ವರದಿ ಮಾಡಿದನು. ಹೀಗೆ ನಾವು ನಡೆದುದ್ದನ್ನು ಮತ್ತು ಕೇಳಿದ್ದುದನ್ನು ವರದಿಮಾಡಿದ್ದೇವೆ. ಇದನ್ನು ಕೇಳಿದ ನೀನು ಬಯಸಿದ ಹಾಗೆ ಮಾಡು.”

ಮಂತ್ರಿಗಳ ಆ ಮಾತನ್ನು ಕೇಳಿದ ರಾಜ ಜನಮೇಜಯನು ಕೈ ಹಿಂಡಿಕೊಳ್ಳುತ್ತಾ ದುಃಖಾರ್ತನಾಗಿ ರೋದಿಸಿದನು. ಆ ರಾಜೀವಲೋಚನ ರಾಜ ಮಹೀಪಾಲನು ದೀರ್ಘವಾದ ಬಿಸಿ ನಿಟ್ಟುಸಿರು ಬಿಟ್ಟು ಕಣ್ಣುಗಳಿಂದ ಕಣ್ಣೀರು ಸುರಿಸುತ್ತಾ, ದುಃಖಶೋಕಸಮನ್ವಿತನಾಗಿ ಹೇಳಿದನು:

“ನನ್ನ ತಂದೆಯು ಸ್ವರ್ಗಗತಿಯನ್ನು ಹೇಗೆ ಪಡೆದ ಎನ್ನುವುದನ್ನು ನಿಮ್ಮಿಂದ ಕೇಳಿದೆ. ಈಗ ನನ್ನ ಮನಸ್ಸಿನ

ಧೃಢ ನಿಶ್ಚಯವನ್ನು ತಿಳಿಯಿರಿ. ನನ್ನ ತಂದೆಗೆ ಹಿಂಸೆಕೊಟ್ಟ ದುರಾತ್ಮ ತಕ್ಷಕನಿಗೆ ಪ್ರತೀಕಾರವನ್ನೆಸಗುವ ಕಾರ್ಯದಲ್ಲಿ ವಿಳಂಬಮಾಡಬಾರದು. ಅವನೇ ಋಷಿ ಶೃಂಗಿಯ ಮಾತುಗಳು ನಿಜವಾಗುವಂತೆ ಮಾಡಿದನು ಮತ್ತು ನನ್ನ ತಂದೆಯನ್ನು ಸುಟ್ಟುಹಾಕಿದನು. ಈ ಪಾಪಿಯು ಹೊರಟು ಹೋಗಿದ್ದರೆ ನನ್ನ ತಂದೆಯು ಬದುಕಿರುತ್ತಿದ್ದನು. ಕಾಶ್ಯಪನ ಅನುಗ್ರಹದಿಂದ ಮತ್ತು ಮಂತ್ರಿಗಳ ಕಾಳಜಿಯಂತೆ ಪಾರ್ಥಿವನು ಬದುಕಿದ್ದರೆ ಅವನು ಏನನ್ನು ಕಳೆದುಕೊಳ್ಳುತ್ತಿದ್ದ? ಅಪರಾಜಿತ ರಾಜನಿಗೆ ಪುನರ್ಜೀವನವನ್ನು ಕೊಡಲು ಬರುತ್ತಿದ್ದ ದ್ವಿಜಸತ್ತಮ ಕಾಶ್ಯಪನನ್ನು ಅವನೇ ಮೋಹದಿಂದ ತಡೆಗಟ್ಟಿದನು. ನೃಪನನ್ನು ಬದುಕಿಸಬಾರದೆಂದು ಆ ದ್ವಿಜನಿಗೆ ಸಂಪತ್ತನ್ನಿತ್ತ ದುರಾತ್ಮ ತಕ್ಷಕನ ದುಷ್ಕರ್ಮವು ಮಹತ್ತರವಾದದ್ದು. ಉತ್ತಂಕನಿಗೆ ಪ್ರಿಯವಾದದನ್ನು ಮಾಡಲು, ನಿಮ್ಮನ್ನೆಲ್ಲ ಮತ್ತು ನನ್ನನ್ನು ಸಂತಸಗೊಳಿಸಲೋಸುಗ ನಾನು ನನ್ನ ತಂದೆಯ ಸೇಡನ್ನು ತೀರಿಸಿಕೊಳ್ಳುತ್ತೇನೆ.”

ಹೀಗೆ ಹೇಳಿ ಮಂತ್ರಿಗಳಿಂದ ಅನುಮೋದಿಸಲ್ಪಟ್ಟ ಶ್ರೀಮಾನ್ ಪಾರ್ಥಿವನು ಸರ್ಪಸತ್ರದ ಪ್ರತಿಜ್ಞೆಯನ್ನು ಕೈಗೊಂಡನು. ಭರತಶಾರ್ದೂಲ ಪರಿಕ್ಷಿತನ ಮಗ ವಸುಧಾಧಿಪ ರಾಜನು

ಪುರೋಹಿತರನ್ನೂ ಮತ್ತು ಯಾಗ ಪ್ರವೀಣ ಋತ್ವಿಜರನ್ನೂ ಕರೆಯಿಸಿ ಈ ಸಂಪನ್ನ ಮಾತುಗಳನ್ನು ಹೇಳಿದನು:

> "ನನ್ನ ತಂದೆಗೆ ಹಿಂಸೆಯನ್ನಿತ್ತ ದುರಾತ್ಮ ತಕ್ಷಕನ ಸೇಡನ್ನು ತೀರಿಸಿಕೊಳ್ಳಲು ಏನು ಮಾಡಬೇಕು ಎನ್ನುವುದನ್ನು ನೀವು ನನಗೆ ಹೇಳಿ. ಬಂಧುಗಳ ಸಮೇತ ಪನ್ನಗ ತಕ್ಷಕನನ್ನು ಹಿಂದೆ ತನ್ನ ವಿಷಾಗ್ನಿಯಲ್ಲಿ ನನ್ನ ತಂದೆಯನ್ನು ಹೇಗೆ ಸುಟ್ಟನೋ ಹಾಗೆಯೇ ಉರಿಯುತ್ತಿರುವ ಅಗ್ನಿಯಲ್ಲಿ ಎಳೆದು ತಂದು ಹಾಕಬಲ್ಲ ಯೋಜನೆಯನ್ನು ಹೇಳಿ. ಆ ಪಾಪಿ ಪನ್ನಗನನ್ನು ನಾನೂ ಕೂಡ ಭಸ್ಮಮಾಡಲು ಬಯಸುತ್ತೇನೆ."

ಋತ್ವಿಜರು ಹೇಳಿದರು:

> "ನಿನಗಾಗಿಯೇ ದೇವನಿರ್ಮಿತ ಮಹಾಸತ್ರವೊಂದಿದೆ ರಾಜನ್! ಇದು ಸರ್ಪಸತ್ರವೆಂದು ಪುರಾಣಗಳಲ್ಲಿ ವರ್ಣಿತಗೊಂಡಿದೆ. ನಿನ್ನನ್ನು ಬಿಟ್ಟು ಬೇರೆ ಯಾರೂ ಈ ಸತ್ರವನ್ನು ಕೈಗೊಳ್ಳಲು ಅಸಮರ್ಥರು ಎಂದು ಪೌರಾಣಿಕರು ಹೇಳುತ್ತಾರೆ ಮತ್ತು ಇದನ್ನು ನಡೆಸುವ ಕ್ರಮವು ನಮ್ಮಲ್ಲಿದೆ."

ಇದನ್ನು ಕೇಳಿದ ರಾಜರ್ಷಿ ಸತ್ತಮನು ಆ ಸರ್ಪ ತಕ್ಷಕನು ಉರಿಯುತ್ತಿರುವ ಅಗ್ನಿಯಲ್ಲಿ ಬೀಳುತ್ತಿರುವುದನ್ನು ಕಲ್ಪಿಸಿಕೊಂಡನು. ಆಗ ಮಂತ್ರವಿದ್ವಾಂಸಿ ಬ್ರಾಹ್ಮಣರನ್ನುದ್ದೇಶಿಸಿ ರಾಜನು ಹೇಳಿದನು:

“ಆ ಸತ್ರವನ್ನು ನಾನು ಕೈಗೊಳ್ಳುತ್ತೇನೆ. ಅದಕ್ಕೆ ಬೇಕಾದ ಸಲಕರಣೆಗಳನ್ನು ಸಂಗ್ರಹಿಸಿರಿ.”

## ಜನಮೇಜಯನ ಸರ್ಪಸತ್ರ

ಅನಂತರ ವಿಧಿ ವಿಧಾನಗಳನ್ನು ತಿಳಿದಿದ್ದ ದ್ವಿಜಸತ್ತಮ ಋತ್ವಿಜರು ಉತ್ಸಾಹದಿಂದ ಯಜ್ಞಾರ್ಥವಾಗಿ ಒಂದು ಆಯತ ಪ್ರದೇಶವನ್ನು ಶಾಸ್ತ್ರೋಕ್ತವಾಗಿ ಅಳೆದರು. ಅತ್ಯುತ್ತಮವಾಗಿ ಸಿಂಗರಿಸಲ್ಪಟ್ಟ ಆ ಪುಣ್ಯ ಪ್ರದೇಶವು ದ್ವಿಜಗಣಗಳಿಂದ ತುಂಬಿಕೊಂಡಿದ್ದು ಧನ-ದಾನ್ಯಗಳಿಂದ ಸುಂದರವಾಗಿ ರಚಿಸಲ್ಪಟ್ಟಿತ್ತು. ಈ ರೀತಿ ವಿಧಿವತ್ತಾಗಿ ಯಜ್ಞಶಾಲೆಯನ್ನು ನಿರ್ಮಿಸಿ ಅಲ್ಲಿ ರಾಜನಿಗೆ ಸರ್ಪಸತ್ರದ ದೀಕ್ಷೆಯನ್ನು ಕೊಡಿಸಿದರು. ಆದರೆ ಸರ್ಪಸತ್ರವು ನಡೆಯುವುದರ ಮೊದಲೇ ಯಜ್ಞಕ್ಕೆ ವಿಘ್ನವನ್ನು ಸೂಚಿಸುವ ಮಹತ್ತರ ಶಕುನವು ಕಾಣಿಸಿಕೊಂಡಿತು. ಯಜ್ಞಶಾಲೆಯನ್ನು ಅಳೆಯುತ್ತಿರುವಾಗ ಅಲ್ಲಿಯೇ ನಿಂತಿದ್ದ ಓರ್ವ ಬುದ್ಧಿಸಂಪನ್ನ ವಾಸ್ತುವಿಧ್ಯಾವಿಶಾರದ ಸೂತ್ರಧಾರ ಸೂತ ಪೌರಾಣಿಕನು ಹೇಳಿದನು:

“ಯಾವ ಕಾಲ ಪ್ರದೇಶದಲ್ಲಿ ಅಳತೆಯನ್ನು ತೆಗೆದುಕೊಳ್ಳಲಾಗುತ್ತಿದೆಯೋ ಅಲ್ಲಿ ಓರ್ವ ಬ್ರಾಹ್ಮಣನ ಕಾರಣದಿಂದಾಗಿ ಸರ್ಪಸತ್ರವು ಸಂಪೂರ್ಣವಾಗುವುದಿಲ್ಲ.”

ಇದನ್ನು ಕೇಳಿದ ರಾಜನು ದೀಕ್ಷೆ ತೆಗೆದುಕೊಳ್ಳುವ ಮೊದಲೇ

“ನನಗೆ ಅನುಜ್ಞೆಯಿಲ್ಲದೇ ಯಾರಿಗೂ ಈ ಸ್ಥಳಕ್ಕೆ

ಪ್ರವೇಷವಿಲ್ಲ !”ಎಂದು ಹೇಳಿದನು.

ಅನಂತರ ವಿಧಿವತ್ತಾಗಿ ಸರ್ಪಸತ್ರದ ಕರ್ಮಗಳು ಪ್ರಾರಂಭವಾದವು. ಪ್ರತಿಯೊಬ್ಬ ಯಾಜಕನೂ ತನ್ನ ತನ್ನ ಕರ್ಮಾಂಗಗಳನ್ನು ವಿಧಿವತ್ತಾಗಿ ಮಾಡತೊಡಗಿದನು. ಎಲ್ಲರೂ ಕಪ್ಪು ಬಟ್ಟೆಗಳನ್ನು ಉಟ್ಟಿದ್ದರು ಮತ್ತು ಹೊಗೆಯಿಂದ ಅವರ ಕಣ್ಣುಗಳು ಕೆಂಪಾಗಿದ್ದವು. ಅವರು ಮಂತ್ರೋಚ್ಛಾರಣೆ ಮಾಡುತ್ತಾ ಸಮಿತ್ತನ್ನು ಜಾತವೇದಸನಲ್ಲಿ ಹಾಕುತ್ತಿದ್ದರು. ಸರ್ಪಗಳನ್ನೆಲ್ಲವನ್ನೂ ಅಗ್ನಿಯ ಬಾಯಿಯಲ್ಲಿ ಆಹುತಿಯನ್ನಾಗಿ ಹಾಕುತ್ತಾ ಸರ್ವ ಸರ್ಪಗಳ ಮನಸ್ಸಿನಲ್ಲಿ ಆತಂಕವನ್ನು ಹುಟ್ಟಿಸಿದರು. ಆರ್ತರಾಗಿ ಪರಸ್ಪರರನ್ನು ಕೂಗಿ ಕರೆಯುತ್ತಾ, ಒಬ್ಬರಿಗೊಬ್ಬರು ಸುತ್ತಿಕೊಂಡ ಸರ್ಪಗಳು ಒಂದೊಂದೇ ಉರಿಯುತ್ತಿರುವ ಹವ್ಯವಾಹನನಲ್ಲಿ ಬಂದು ಬೀಳತೊಡಗಿದವು. ಭುಸಗುಟ್ಟುತ್ತಾ, ಉಬ್ಬಿಕೊಂಡು, ತಲೆಗಳಿಂದ ಅಥವಾ ಬಾಲಗಳಿಂದ ಒಬ್ಬರನ್ನೊಬ್ಬರು ಸುತ್ತಿಕೊಳ್ಳುತ್ತಾ, ತಲೆ ಮುಂದಾಗಿ ಅಥವಾ ಬಾಲ ಮುಂದಾಗಿ ಉರಿಯುತ್ತಿರುವ ಬೆಂಕಿಗೆ ಬಂದು ಬೀಳತೊಡಗಿದವು. ಬಿಳಿದಾದ, ಕಪ್ಪಾದ, ನೀಲವರ್ಣದ, ಮುದಿಯಾದ, ಹರಯದ ಸರ್ಪಗಳು ರೋದಿಸುತ್ತಾ ಭೈರವ ನಿನಾದಗೈಯುತ್ತಾ, ಭುಗಿಲೆನ್ನುತ್ತಿರುವ ಬೆಂಕಿಗೆ ಬಂದು ಬೀಳತೊಡಗಿದರು. ಈ ರೀತಿ ಲಕ್ಷಗಟ್ಟಲೆ ಕೋಟಿಗಟ್ಟಲೆ ಸರ್ಪಗಳು ನಿಶ್ಯಕ್ತರಾಗಿ ವಿನಾಶಹೊಂದಿದರು. ಕೆಲವು ಇಲಿಗಳಂತೆ ಸಣ್ಣವಾಗಿದ್ದರೆ ಕೆಲವು



ಆನೆಗಳಷ್ಟು ದೊಡ್ಡವಾಗಿದ್ದವು, ಮಾತಂಗಗಳಂತೆ ಉನ್ಮತ್ತರಾಗಿ ಮಹಾಬಲಶಾಲಿಗಳೂ ಮಹಾಕಾಯರೂ ಆಗಿದ್ದರು. ನಾನಾ ಬಣ್ಣದ, ಕಡುವಿಷಗಳಿಂದ ಘೋರ, ಕಬ್ಬಿಣದ ಹಲ್ಲುಗಳನ್ನು ಹೊಂದಿ ಪರಿಘಗಳಂತಿರುವ, ತಾಯಿಯ ಶಾಪದಿಂದ ಪೀಡಿತ ಬಹಳಷ್ಟು ಮಹಾಬಲಶಾಲೀ ಸರ್ಪಗಳು ಸುಟ್ಟು ಭಸ್ಮವಾದವು.

ಆ ನೃಪತಿಗೆ ಋತ್ವಿಜರು ಮತ್ತು ಸದಸ್ಯರಾಗಿದ್ದವರ ಹೆಸರುಗಳು ಈ ರೀತಿಯಿದ್ದವು: ಚ್ಯವನನ ಕುಲದಲ್ಲಿ ಹುಟ್ಟಿ ವೇದವಿದರಲ್ಲಿ ಶ್ರೇಷ್ಠನಾದ, ಖ್ಯಾತ ಬ್ರಾಹ್ಮಣ ಚಂಡಭಾರ್ಗವನು ಅಲ್ಲಿದ್ದನು. ವೃದ್ಧನೂ ವಿದ್ವಾಂಸನೂ ಆದ ಬ್ರಾಹ್ಮಣ ಕೌತ್ಸರ್ಯ ಜೈಮಿನಿಯು ಉದ್ಗಾತನಾಗಿದ್ದನು. ಸೃಂಗಾರವನು ಬ್ರಾಹ್ಮಣನೂ ಮತ್ತು ಬೋಧಪಿಂಗಲನು ಅಧ್ವರ್ಯಿಯೂ ಆಗಿದ್ದರು. ಪುತ್ರ ಮತ್ತು ಶಿಷ್ಯರಿಂದೊಡಗೂಡಿದ ವ್ಯಾಸನು ಸದಸ್ಯನಾಗಿದ್ದನು. ಉದ್ದಾಲಕ, ಶಮಟಕ, ಶ್ವೇತಕೇತು, ಪಂಚಮ, ಆಸ್ತೀಕ ದೇವಲ, ನಾರದ, ಪರ್ವತ, ಆತ್ರೇಯ, ಕುಂಡಜಠರ, ದ್ವಿಜ ಕುಟಿಘಟ, ವಾತ್ಸ್ಯ, ವೃದ್ಧ ತಪಸ್ವಿ ಸ್ವಾಧ್ಯಾಯಶೀಲ ಶೃತಶ್ರವ, ಕಹೋಡ, ದೇವಶರ್ಮ, ಮೌದ್ಗಲ್ಯ, ಶಮಸೌಭರ, ಮತ್ತು ಇನ್ನೂ ಇತರ ಬಹಳಷ್ಟು ಸಂಶಿತವ್ರತ ಬ್ರಾಹ್ಮಣರು ಪಾರಿಕ್ಷಿತನ ಆ ಸತ್ರದಲ್ಲಿ ಸದಸ್ಯರಾಗಿದ್ದರು. ಋತ್ವಿಜರು ಆ ಮಹಾಕ್ರತು ಸರ್ಪ ಸತ್ರದಲ್ಲಿ ಆಹುತಿಗಳನ್ನು ಹಾಕುತ್ತಿದ್ದಂತೆ, ಪ್ರಾಣಿಗಳಿಗೆ ಭಯಕಾರಕ ಘೋರ

ಸರ್ಪಗಳು ಉರಿಯುತ್ತಿರುವ ಬೆಂಕಿಯಲ್ಲಿ ಬಂದು ಬೀಳುತ್ತಿದ್ದವು. ನಾಗಗಳ ಕೊಬ್ಬು-ಮಾಂಸಗಳ ಹೊಳೆಯೇ ಹರಿದಿತ್ತು ಮತ್ತು ಒಂದೇ ಸಮನೆ ಸುಡುತ್ತಿದ್ದ ಅವುಗಳ ದುರ್ಗಂಧವು ಎಲ್ಲೆಡೆಯೂ ಹರಡಿ ತಡೆಯಲಸಾಧ್ಯವಾಗಿತ್ತು. ಬೀಳುತ್ತಿರುವ, ಆಕಾಶದಲ್ಲಿಯೇ ನಿಂತಿದ್ದ ಮತ್ತು ಅಗ್ನಿಯಲ್ಲಿ ಬೇಯುತ್ತಿದ್ದ ನಾಗಗಳ ಆಕ್ರೋಶವು ಎಲ್ಲೆಡೆಯೂ ಕೇಳಿಬರುತ್ತಿತ್ತು.

ರಾಜ ಜನಮೇಜಯನು ದೀಕ್ಷೆಗೊಂಡಿರುವನೆಂದು ತಿಳಿದಾಕ್ಷಣವೇ ನಾಗೇಂದ್ರ ತಕ್ಷಕನು ಪುರಂದರನ ಅರಮನೆಯನ್ನು ಸೇರಿಕೊಂಡನು. ಭೀತ ಭುಜಗೋತ್ತಮನು ಪುರಂದರನಿಗೆ ಶರಣುಬಂದು ಅವನಿಗೆ ಸರ್ವವನ್ನೂ ಯಥಾವತ್ತಾಗಿ ವರದಿ ಮಾಡಿದನು. ಸುಪ್ರೀತ ಇಂದ್ರನು ಅವನಿಗೆ ಹೇಳಿದನು:

> “ನಾಗೇಂದ್ರ ತಕ್ಷಕ! ಇಲ್ಲಿ ನೀನು ಸರ್ಪಸತ್ರದಿಂದ ಯಾವುದೇ ರೀತಿಯ ಭಯಪಟ್ಟುಕೊಳ್ಳುವ ಅವಶ್ಯಕತೆಯಿಲ್ಲ. ಪೂರ್ವದಲ್ಲಿ ನಿನ್ನ ಪರವಾಗಿ ನಾನು ಪಿತಾಮಹನನ್ನು ಬೇಡಿಕೊಂಡಿದ್ದೆ. ಆದುದರಿಂದ ನೀನು ಭಯಪಡಬೇಕಾದ್ದೇನೂ ಇಲ್ಲ. ನಿನ್ನ ಮನಸ್ಸಿನಿಂದ ಈ ಜ್ವರವನ್ನು ತೆಗೆದುಹಾಕು.”

ಅವನಿಂದ ಈ ರೀತಿಯ ಆಶ್ವಾಸನೆಯನ್ನು ಪಡೆದ ಆ ಭುಜಗೋತ್ತಮನು ಶಕ್ರನ ಭವನದಲ್ಲಿಯೇ ಸುಖ-ಸಂತೋಷದಿಂದ

ವಾಸಿಸಿದನು.

ಆದರೆ ಅಗ್ನಿಯಲ್ಲಿ ಸತತವಾಗಿ ನಾಗಗಳು ಬೀಳುತ್ತಿರಲು ವಾಸುಕಿಯು ಕ್ಷೀಣವಾಗುತ್ತಿರುವ ತನ್ನ ವಂಶವನ್ನು ನೋಡಿ ದುಃಖದಿಂದ ನೊಂದು ಪರಿತಪಿಸಿದನು. ಪನ್ನಗೇಶ್ವರ ವಾಸುಕಿಯಲ್ಲಿ ಒಂದು ಕೀಳು ವಿಚಾರವು ಬಂದಿತು. ಕಂಪಿಸುತ್ತಿರುವ ಹೃದಯದಿಂದ ಅವನು ತನ್ನ ತಂಗಿಯಲ್ಲಿ ಹೇಳಿದನು:

> "ಭದ್ರೇ! ನನ್ನ ಅಂಗಾಂಗಗಳು ಸುಡುತ್ತಿವೆ ಮತ್ತು ದಿಕ್ಕೇ ತೋಚದಂತಾಗಿದೆ. ಮೂರ್ಛೆಗೊಂಡಂತೆ ಕುಸಿಯುತ್ತಿದ್ದೇನೆ ಮತ್ತು ನನ್ನ ಮನಸ್ಸು ಭ್ರಮಿಸುತ್ತಿದೆ. ನನ್ನ ದೃಷ್ಟಿಯು ಭ್ರಮಿಸುತ್ತಿದೆ, ಹೃದಯವು ಒಡೆದುಹೋಗುತ್ತಿದೆ. ಯಾವುದೇ ರೀತಿಯ ಪ್ರತಿಭಟನೆಯನ್ನೂ ಮಾಡದೇ ನಾನು ಆ ಉರಿಯುತ್ತಿರುವ ಬೆಂಕಿಯಲ್ಲಿ ಬೀಳುವವನಿದ್ದೇನೆ. ನಮ್ಮ ಕುಲದ ವಿನಾಶಕ್ಕಾಗಿ ಪಾರಿಕ್ಷಿತನ ಯಜ್ಞವು ಪ್ರಾರಂಭವಾಗಿದೆ. ನಾನೂ ಕೂಡ ಪಿತೃರಾಜನ ಮನೆಗೆ ಹೋಗುತ್ತೇನೆನ್ನುವುದು ಖಚಿತವಾಗಿದೆ. ತಂಗಿ! ನಿನ್ನನ್ನು ಯಾವ ಕಾರಣಕ್ಕಾಗಿ ಹಿಂದೆ ಜರತ್ಕಾರುವಿಗೆ ಕೊಟ್ಟಿದ್ದೆನೋ ಅದರ ಕಾಲ ಸಂಪ್ರಾಪ್ತಿಯಾಗಿದೆ. ಬಾಂಧವರೆಲ್ಲರೊಡನೆ ನಮ್ಮನ್ನು ರಕ್ಷಿಸು. ಪೂರ್ವದಲ್ಲಿ ಪಿತಾಮಹನು ಸ್ವಯಂ ನನಗೆ ಆಸ್ತೀಕನೊಬ್ಬನೇ ನಡೆಯುತ್ತಿರುವ ಈ ಯಜ್ಞವನ್ನು

ನಿಲ್ಲಿಸಬಲ್ಲನೆಂದು ಹೇಳಿದ್ದನು. ಆದುದರಿಂದ ವೃದ್ಧರಿಂದಲೂ ಗೌರವಿಸಲ್ಪಡುತ್ತಿರುವ ನಿನ್ನ ಪ್ರೀತಿಯ ವೇದವಿತ್ತಮ ಮಗನಿಗೆ ಅವನನ್ನೇ ಅವಲಂಬಿಸಿರುವ ನಮ್ಮೆಲ್ಲರನ್ನೂ ಇಂದು ಬಿಡುಗಡೆಮಾಡಲು ಹೇಳು."

ಆಗ ಭುಜಂಗಮೆ ಜರತ್ಕಾರುವು ತನ್ನ ಪುತ್ರನನ್ನು ಕರೆದು ನಾಗರಾಜ ವಾಸುಕಿಯ ಈ ಮಾತುಗಳನ್ನು ತಿಳಿಸಿದಳು:

"ಯಾವ ಉದ್ದೇಶಕ್ಕಾಗಿ ನನ್ನ ಅಣ್ಣನು ನನ್ನನ್ನು ನಿನ್ನ ತಂದೆಗೆ ಕೊಟ್ಟಿದ್ದನೋ ಅದನ್ನು ಪೂರೈಸುವ ಕಾಲವು ಪ್ರಾಪ್ತವಾಗಿದೆ. ಆದುದರಿಂದ ಏನಾಗಬೇಕೋ ಅದನ್ನು ಮಾಡಬೇಕಾಗಿದೆ."

ಆಸ್ತೀಕನು ಹೇಳಿದನು:

"ನನ್ನ ಸೋದರ ಮಾವನು ಯಾವ ಕಾರಣಕ್ಕಾಗಿ ನಿನ್ನನ್ನು ನನ್ನ ತಂದೆಗೆ ಕೊಟ್ಟ? ಅದನ್ನೆಲ್ಲ ನನಗೆ ಹೇಳು. ಅದನ್ನು ಕೇಳಿ ನಾನು ಬೇಕಾದುದನ್ನು ಮಾಡಬಲ್ಲೆ."

ಬಾಂಧವಹಿತೈಷಿಣಿ ನಾಗರಾಜನ ತಂಗಿ ಜರತ್ಕಾರುವು ಅವರಿಗಿದ್ದ ಆತಂಕದಿಂದ ಪ್ರಚೋದಿತಳಾಗಿ ಹೇಳಿದಳು:

"ಮಗನೇ! ಎಲ್ಲಾ ನಾಗಗಳ ತಾಯಿ ಕದ್ರುವೆಂದು ಕೇಳಿದ್ದೇವೆ. ಅವಳು ರೋಷಗೊಂಡು ತನ್ನ ಮಕ್ಕಳಿಗೆ

ಶಾಪವನ್ನಿತ್ತಳು. ಅದಕ್ಕೆ ಕಾರಣವನ್ನು ಕೇಳು. "ಮಕ್ಕಳೇ! ನಾನು ವಿನತಳೊಟ್ಟಿಗೆ ದಾಸತ್ವದ ಪಣತೊಟ್ಟಾಗ ನೀವು ಅಶ್ವರಾಜ ಉಚ್ಛೈಃಶ್ರವನನ್ನು ಸುಳ್ಳುಮಾಡಲು ಒಪ್ಪಲಿಲ್ಲ. ಆದುದರಿಂದ ಜನಮೇಜಯನ ಯಜ್ಞದಲ್ಲಿ ಅನಿಲಸಾರಥಿಯು ನಿಮ್ಮನ್ನು ಸುಟ್ಟುಹಾಕುತ್ತಾನೆ. ಈ ರೀತಿ ನೀವು ಪಂಚಭೂತಗಳಲ್ಲಿ ಒಂದಾಗಿ ಪ್ರೇತಲೋಕವನ್ನು ಸೇರುವಿರಿ." ಹೀಗೆ ಅವಳು ಶಪಿಸುತ್ತಿರುವಾಗ ಸಾಕ್ಷಾತ್ ಲೋಕಪಿತಾಮಹನೂ 'ಹಾಗೆಯೇ ಆಗಲಿ!' ಎಂದು ಆ ವಾಖ್ಯಗಳನ್ನು ಅನುಮೋದಿಸಿದನು. ಇದನ್ನು ಮತ್ತು ಪಿತಾಮಹನ ಮಾತುಗಳನ್ನು ಕೇಳಿದ ವಾಸುಕಿಯು ಅಮೃತ ಮಂಥನದ ನಂತರ ದೇವತೆಗಳಲ್ಲಿ ಶರಣುಹೋದನು. ಆಗ ಅನುತ್ತಮ ಅಮೃತವನ್ನು ಪಡೆದ ಸರ್ವ ಸುರರೂ ನನ್ನ ಅಣ್ಣನನ್ನು ಪುರಸ್ಕರಿಸಿ ಪ್ರಜಾಪತಿಯ ಬಳಿ ಬಂದರು. ಅವನು ಮತ್ತು ಎಲ್ಲ ದೇವತೆಗಳು ಪಿತಾಮಹನಲ್ಲಿ ಕೇಳಿಕೊಂಡರು: 'ಈ ಶಾಪವು ರಾಜ ವಾಸುಕಿಗೆ ತಗುಲದೇ ಇರಲಿ. ನಾಗರಾಜ ಈ ವಾಸುಕಿಯು ತನ್ನ ಜಾತಿಗೋಸ್ಕರವಾಗಿ ದುಃಖಿತನಾಗಿದ್ದಾನೆ. ಭಗವನ್! ಹೇಗೆ ಆ ತಾಯಿಯ ಶಾಪವು ಸುಳ್ಳಾಗುವಂತೆ ಮಾಡಬಹುದು?' ಆಗ ಬ್ರಹ್ಮನು ಹೇಳಿದನು: 'ಜರತ್ಕಾರುವು ಜರತ್ಕಾರುವೆನ್ನುವವಳನ್ನು ಪತ್ನಿಯನ್ನಾಗಿ ಸ್ವೀಕರಿಸುವನು.

> ಅವರಲ್ಲಿ ಹುಟ್ಟಿದ ದ್ವಿಜನು ನಾಗಗಳನ್ನು ಶಾಪದಿಂದ ಮುಕ್ತಿಗೊಳಿಸುವನು.’ ಈ ಮಾತುಗಳನ್ನು ಕೇಳಿದ ಪನ್ನಗೇಶ್ವರ ವಾಸುಕಿಯು ನನ್ನನ್ನು ನಿನ್ನ ತಂದೆ ಮಹಾತ್ಮನಿಗೆ ಕೊಟ್ಟನು ಮತ್ತು ಸಮಯಾನುಸಾರವಾಗಿ ನೀನು ನನ್ನಲ್ಲಿ ಜನಿಸಿದೆ. ಈಗ ಸಮಯವು ಪ್ರಾಪ್ತವಾಗಿದೆ. ನಮ್ಮನ್ನು ಈ ಭಯದಿಂದ ರಕ್ಷಿಸು! ನನ್ನ ಅಣ್ಣನನ್ನು ಪಾವಕನಿಂದ ರಕ್ಷಿಸು! ನನ್ನನ್ನು ನಿನ್ನ ತಂದೆಗೆ ಕೊಟ್ಟಿದ್ದುದು ನಿಷ್ಫಲವಾಗುವಂತೆ ಮಾಡಬೇಡ. ಅಥವಾ ನಿನ್ನ ಯೋಚನೆ ಬೇರೆ ಏನಾದರೂ ಇದೆಯೇ?”

ಇದನ್ನು ಕೇಳಿದ ಆಸ್ತೀಕನು “ಹಾಗೆಯೇ ಆಗಲಿ” ಎಂದು ತನ್ನ ತಾಯಿಗೆ ಹೇಳಿ, ದುಃಖಸಂತಪ್ತ ವಾಸುಕಿಗೆ ಪುನರ್ಜೀವವನ್ನು ನೀಡುವಂತಹ ಈ ಮಾತುಗಳನ್ನು ಹೇಳಿದನು:

> “ಪನ್ನಗೋತ್ತಮ ವಾಸುಕಿ! ನಾನು ನಿನ್ನನ್ನು ಆ ಶಾಪದಿಂದ ವಿಮುಕ್ತಗೊಳಿಸುತ್ತೇನೆ. ನಾನು ಸತ್ಯವನ್ನು ಹೇಳುತ್ತಿದ್ದೇನೆ. ಸ್ವಸ್ಥಮಾನನಾಗಿರು. ನಿನಗೆ ಯಾವ ಭಯವೂ ಇಲ್ಲ. ನಿನ್ನ ಶ್ರೇಯಸ್ಸಿಗೇ ಪ್ರಯತ್ನಿಸುತ್ತೇನೆ. ಚೇಷ್ಟೆಯಲ್ಲಿಯೂ ಕೂಡ ಎಂದೂ ನನ್ನ ಮಾತು ಸುಳ್ಳಾಗಲಾರದು. ದೀಕ್ಷೆಯಲ್ಲಿರುವ ಆ ನೃಪವರ ಜನಮೇಜಯನಲ್ಲಿ ಹೋಗಿ ಮಂಗಲಯುಕ್ತ ಮಾತುಗಳಿಂದ ಅವನನ್ನು ತೃಪ್ತಿಗೊಳಿಸಿ ನೃಪತಿಯ

ಯಜ್ಞವು ಕೊನೆಗೊಳ್ಳುವಹಾಗೆ ಮಾಡುತ್ತೇನೆ. ನಿನ್ನ ಎಲ್ಲ ವಿಶ್ವಾಸವನ್ನೂ ನನ್ನಲ್ಲಿ ಇಡು ಮತ್ತು ನನ್ನಲ್ಲಿ ನೀನಿಟ್ಟ ವಿಶ್ವಾಸವು ಎಂದೂ ಸುಳ್ಳಾಗುವುದಿಲ್ಲ."

ವಾಸುಕಿಯು ಹೇಳಿದನು:

"ಆಸ್ತೀಕ! ಈ ಬ್ರಹ್ಮದಂಡ ಪೀಡಿತನಾದ ನಾನು ನಡುಗುತ್ತಿದ್ದೇನೆ ಮತ್ತು ನನ್ನ ಹೃದಯವು ಒಡೆಯುತ್ತಿದೆ. ನನಗೆ ದಿಕ್ಕೇ ತೋಚದಂತಾಗಿದೆ."

ಆಸ್ತೀಕನು ಹೇಳಿದನು:

"ಪನ್ನಗೋತ್ತಮ! ನೀನು ಯಾವುದಕ್ಕೂ ಭಯ ಪಡಬೇಡ. ಉರಿಯುತ್ತಿರುವ ಅಗ್ನಿಯಿಂದ ನಿನಗುಂಟಾಗಿರುವ ಈ ಭಯವನ್ನು ನಾಶಪಡಿಸುತ್ತೇನೆ. ಕಾಲಾಗ್ನಿಯಂತೆ ಉರಿಯುತ್ತಿರುವ ಈ ಮಹಾಘೋರ ಬ್ರಹ್ಮದಂಡವನ್ನು ನಾಶಪಡಿಸುತ್ತೇನೆ. ಯಾವುದೇ ರೀತಿಯ ಭಯಪಡಬೇಡ."

ನಂತರ, ವಾಸುಕಿಯ ಘೋರ ಮನೋಜ್ವರವನ್ನು ಕಿತ್ತು ತನ್ನ ಭುಜದಮೇಲಿತ್ತಿಕೊಂಡು ಆ ದ್ವಿಜಸತ್ತಮ ಆಸ್ತೀಕನು ತ್ವರೆಯಲ್ಲಿ ಹೊರಟು ಭುಜಗೇಂದ್ರರ ಮೋಕ್ಷಾರ್ಥವಾಗಿ ಸರ್ವಗುಣ ಸುಮುದಿತ ಆ ಜನಮೇಜಯನ ಯಜ್ಞದಲ್ಲಿಗೆ ಅವಸರದಲ್ಲಿ ಧಾವಿಸಿದನು.

ಅಲ್ಲಿ ಹೋಗಿ ಆಸ್ತೀಕನು ಅನೇಕ ಸೂರ್ಯವಹ್ನಿಸಮಪ್ರಭ

ಸದಸ್ಯರಿಂದ ಆವೃತಗೊಂಡ ಉತ್ತಮ ಯಜ್ಞಾಯತವನ್ನು ಕಂಡನು. ಆ ದ್ವಿಜಸತ್ತಮನು ಅಲ್ಲಿಗೆ ಪ್ರವೇಶಿಸುತ್ತಿರಲು ದ್ವಾರಪಾಲಕರು ಅವನನ್ನು ತಡೆಗಟ್ಟಿದರು. ಆದರೆ ಆ ಪ್ರವೇಶಾರ್ಥಿ ದ್ವಿಜೋತ್ತಮನು ಉಚ್ಛ ಧ್ವನಿಯಲ್ಲಿ ಆ ಯಜ್ಞವನ್ನು ಪ್ರಶಂಸಿಸತೊಡಗಿದನುಃ

> "ಪಾರಿಕ್ಷಿತ ! ನಿನಗೆ ಮತ್ತು ನಿನ್ನ ಮಿತ್ರರಿಗೆ ಮಂಗಳವಾಗಲಿ. ನಿನ್ನ ಈ ಯಜ್ಞವು ಸೋಮನ ಯಜ್ಞ, ವರುಣನ ಯಜ್ಞ, ಮತ್ತು ಪ್ರಯಾಗದಲ್ಲಿ ಪ್ರಜಾಪತಿಯು ನಡೆಸಿದ ಯಜ್ಞಗಳ ಹಾಗೆಯೇ ಇದೆ. ನಿನಗೆ ಮತ್ತು ನಿನ್ನ ಮಿತ್ರರಿಗೆ ಮಂಗಳವಾಗಲಿ. ಶಕ್ರನ ಯಜ್ಞಗಳು ನೂರೆಂದು ಹೇಳುತ್ತಾರೆ. ನಿನ್ನ ಈ ಯಜ್ಞವು ಸಂಖ್ಯೆಯಲ್ಲಿ ನೂರಕ್ಕಿಂತಲೂ ಹೆಚ್ಚಿನಂತಿದೆ. ನಿನಗೆ ಮತ್ತು ನಿನ್ನ ಮಿತ್ರರಿಗೆ ಮಂಗಳವಾಗಲಿ. ನಿನ್ನ ಈ ಯಜ್ಞವು ಯಮನ ಮತ್ತು ಹರಿಮೇಧನ ಯಜ್ಞಗಳಂತೆ ಮತ್ತು ರಾಜ ರಂತಿದೇವನ ಯಜ್ಞದಂತಿದೆ. ನಿನಗೆ ಮತ್ತು ನಿನ್ನ ಮಿತ್ರರಿಗೆ ಮಂಗಳವಾಗಲಿ. ನಿನ್ನ ಈ ಯಜ್ಞವು ಗಯ ಮತ್ತು ರಾಜ ಶಶಬಿಂದುವಿನ ಯಜ್ಞ ಮತ್ತು ರಾಜ ವೈಶ್ರವಣನ ಯಜ್ಞಗಳಂತಿದೆ. ನಿನಗೆ ಮತ್ತು ನಿನ್ನ ಮಿತ್ರರಿಗೆ ಮಂಗಳವಾಗಲಿ. ನಿನ್ನ ಈ ಯಜ್ಞವು ನೃಗ ಮತ್ತು ಅಜಮೀಡನ ಯಜ್ಞಗಳಂತೆ ಮತ್ತು ರಾಜ ದಾಶರಥಿಯ

ಯಜ್ಞಗಳಂತಿದೆ. ನಿನಗೆ ಮತ್ತು ನಿನ್ನ ಮಿತ್ರರಿಗೆ ಮಂಗಳವಾಗಲಿ. ನಿನ್ನ ಈ ಯಜ್ಞವು ಸ್ವರ್ಗದಲ್ಲಿಯೂ ಪ್ರಸಿದ್ಧ ದೇವಸೂನು, ಅಜಮೀಡನ ವಂಶದಲ್ಲಿದ್ದ ರಾಜ ಯುಧಿಷ್ಠಿರನ ಯಜ್ಞದಂತಿದೆ. ನಿನಗೆ ಮತ್ತು ನಿನ್ನ ಮಿತ್ರರಿಗೆ ಮಂಗಳವಾಗಲಿ. ನಿನ್ನ ಈ ಯಜ್ಞವು ಸ್ವಯಂ ತಾನೇ ಕರ್ಮಚಾರಿಯಾಗಿದ್ದ ಸತ್ಯವತೀಸುತ ಕೃಷ್ಣನ ಯಜ್ಞದಂತಿದೆ. ಸೂರ್ಯಾಗ್ನಿ ವರ್ಚಸ್ಸಿನ ಇಲ್ಲಿ ಸೇರಿರುವವರು ದೇವೇಂದ್ರನ ಕ್ರತುವಲ್ಲಿ ಸೇರಿರುವರಹಾಗಿದ್ದಾರೆ. ಅವರಿಗೆ ತಿಳಿಯದೇ ಇದ್ದ ಜ್ಞಾನವೇ ಇಲ್ಲ. ಅವರಿಗೆ ಕೊಟ್ಟ ಏನೂ ನಿಷ್ಫಲವಾಗುವುದಿಲ್ಲ. ಋತ್ವಿಜ ದ್ವೈಪಾಯನನ ಸಮನಾಗಿರುವವರು ಲೋಕಗಳಲ್ಲೆಲ್ಲೂ ಇಲ್ಲ ಎಂದು ನನ್ನ ನಿಶ್ಚಯ. ಸ್ವಕರ್ಮ ದಕ್ಷರಾದ ಅವನ ಶಿಷ್ಯರು ಇಡೀ ಭೂಮಿಯನ್ನು ಸಂಚರಿಸುತ್ತಾರೆ. ಮಹಾತ್ಮ ವಿಭಾವಸು ಚಿತ್ರಭಾನು ಹಿರಣ್ಯರೇತ, ವಿಶ್ವಭುಕ್, ಮತ್ತು ಯಾರ ದಾರಿ ಕಪ್ಪಾಗಿದೆಯೋ ಆ ಪ್ರದೀಪ್ತಮಾನ ಅಗ್ನಿ ದೇವನು ಆಹುತಿಯನ್ನು ಭಕ್ಷಿಸಲು ಕಾತರಿಸಿದ್ದಾನೆ. ಈ ಜೀವಲೋಕ ಪ್ರಜೆಗಳನ್ನು ಪಾಲಿಸುವ ನಿನ್ನ ಸಮನಾದ ಇನ್ನೊಬ್ಬ ನೃಪನಿಲ್ಲ. ರಾಜ! ಧೃಢತೆಯಲ್ಲಿ ಧರ್ಮರಾಜ ಅಥವಾ ಯಮನನ್ನು ಹೋಲುವ ನಿನ್ನಿಂದ ಸಂತಸಗೊಂಡಿದ್ದೇನೆ.

ನೀನು ಲೋಕದ ಎಲ್ಲ ಪ್ರಜೆಗಳನ್ನು ಪಾಲಿಸುವ ಸಾಕ್ಷಾತ್ ವಜ್ರಪಾಣಿ ಶಕ್ರನಂತಿದ್ದೀಯೆ. ನಿನ್ನಂತಹ ಪುರುಷೇಂದ್ರನು ಈ ಲೋಕದಲ್ಲಿ ಇನ್ನೊಬ್ಬನಿಲ್ಲ, ಹಾಗೆಯೇ ನಿನ್ನಂತಹ ಯಜ್ಞ ಗೃಹಪತಿಯು ಇನ್ನೊಬ್ಬನ್ನಿಲ್ಲ. ಖಟ್ವಾಂಗ, ನಾಭಾಗ ಅಥವಾ ದಿಲೀಪನಂತಿರುವ, ಪ್ರಭಾವದಲ್ಲಿ ಯಯಾತಿ ಮತ್ತು ಮಾಂಧಾತರ ಸಮಾನನಾದ, ಆದಿತ್ಯನ ತೇಜಸ್ಸಿನ ಸಮಾನ ತೇಜಸ್ಸನ್ನುಳ್ಳ ನೀನು ಭೀಷ್ಮನ ಹಾಗೆ ಬೆಳಗುತ್ತಿದ್ದೀಯೆ. ನನ್ನ ಮತದಲ್ಲಿ ವಾಲ್ಮೀಕಿಯಂತೆ ನಿನ್ನ ಸುಧೈರ್ಯವು ನಿಭೃತವಾದದ್ದು, ವಸಿಷ್ಠನಂತೆ ನಿನ್ನ ಕೋಪವು ನಿಯತವಾದದ್ದು. ನಿನ್ನ ಪ್ರಭುತ್ವವು ಇಂದ್ರನಂತಿದೆ ಮತ್ತು ದ್ಯುತಿಯು ನಾರಾಯಣನಂತಿದೆ. ಯಮನ ಹಾಗೆ ನೀನು ಧರ್ಮವಿನಿಶ್ಚಯಜ್ಞನಾಗಿದ್ದೀಯೆ. ಕೃಷ್ಣನ ಹಾಗೆ ಸರ್ವಗುಣೋಪಪನ್ನನಾಗಿದ್ದೀಯೆ. ವಸುಗಳ ನಿವಾಸದಲ್ಲಿರುವ ಹಾಗೆ ಸಂಪತ್ತು ನಿನ್ನಲ್ಲಿದೆ. ಮತ್ತು ಎಲ್ಲ ಕ್ರತುಗಳು ನಿನ್ನಿಂದಲೇ ನಡೆಯಲ್ಪಡುತ್ತಿವೆ. ಬಲದಲ್ಲಿ ನೀನು ದಂಭೋದ್ಭವ ಸಮನಾಗಿದ್ದೀಯೆ, ಶಸ್ತ್ರಾಸ್ತ್ರ ಜ್ಞಾನದಲ್ಲಿ ರಾಮನ ಸಮನಾಗಿದ್ದೀಯೆ, ತೇಜಸ್ಸಿನಲ್ಲಿ ಔರ್ವ ಮತ್ತು ತ್ರಿತರ ಸಮಾನನಾಗಿದ್ದೀಯೆ, ಮತ್ತು ಭಗೀರಥನಂತೆ ದುಷ್ಪ್ರೇಕ್ಷಣೀಯನಾಗಿದ್ದೀಯೆ.”

ಹೀಗೆ ಸ್ತುತಿಸಲ್ಪಟ್ಟ ರಾಜ, ಸದಸ್ಯರು, ಋತ್ವಿಜರು ಮತ್ತು ಹವ್ಯವಾಹನ ಸರ್ವರೂ ಪ್ರಸನ್ನರಾದರು. ಅವರೆಲ್ಲರೂ ಹೊರತೋರಿಸಿದ ಇಂಗಿತವನ್ನು ಗಮನಿಸಿದ ರಾಜ ಜನಮೇಜಯನು ಹೇಳಿದನು:

> "ಬಾಲಕನಾಗಿದ್ದರೂ ಅವನು ಹಿರಿಯವರಂತೆ ಮಾತನಾಡುತ್ತಿದ್ದಾನೆ. ನನ್ನ ಮತದಲ್ಲಿ ಇವನು ಬಾಲಕನಲ್ಲ. ಇವನೋರ್ವ ಸ್ಥಾವಿರ. ಇವನಿಗೆ ಒಂದು ವರವನ್ನು ಕೊಡಲು ಬಯಸುತ್ತೇನೆ. ವಿಪ್ರರೇ! ನನಗೆ ನಿಮ್ಮ ಸಮ್ಮತಿಯನ್ನು ನೀಡಿ."

ಸದಸ್ಯರು ಹೇಳಿದರು:

> "ಬಾಲಕನಾಗಿದ್ದರೂ ವಿಪ್ರನು ರಾಜನ ಮಾನ್ಯತೆಗೆ ಅರ್ಹನು. ವಿದ್ವಾಂಸನಾಗಿದ್ದರೆ ಇನ್ನೂ ಹೆಚ್ಚು. ಅವನ ಎಲ್ಲ ಬಯಕೆಗಳೂ ಪೂರೈಸಲು ಅರ್ಹವೇ ಸರಿ. ಆದರೆ ತಕ್ಷಕನು ಇಲ್ಲಿಗೆ ಬಂದ ಕೂಡಲೇ."

ಆ ದ್ವಿಜನಿಗೆ ವರವನ್ನು ನೀಡಲು ಬಯಸಿದ ರಾಜನು "ವರವನ್ನು ಕೇಳು" ಎಂದಾಗ ಹೋತನು ಅಸಂತೋಷದಿಂದ "ತಕ್ಷಕನು ಇನ್ನೂ ಯಜ್ಞಕುಂಡಕ್ಕೆ ಬಂದಿಲ್ಲ" ಎಂದನು. ಜನಮೇಜಯನು ಹೇಳಿದನು:

> "ತಕ್ಷಕನು ಶೀಘ್ರವಾಗಿ ಬಂದು ನನ್ನ ಈ ಕರ್ಮವು

ಸಮಾಪ್ತಿಯಾಗುವಂತೆ ಪ್ರಯತ್ನಿಸು. ನಿನ್ನ ಎಲ್ಲ ಶಕ್ತಿಯನ್ನೂ ಸೇರಿಸಿ ನನ್ನ ಆ ಶತ್ರುವು ತಡಮಾಡದೇ ಇಲ್ಲಿಗೆ ಬರುವ ಹಾಗೆ ಮಾಡು."

ಋತ್ವಿಜರು ಹೇಳಿದರು:

"ಭಯಪೀಡಿತ ರಾಜ ತಕ್ಷಕನು ಇಂದ್ರನ ಭವನದಲ್ಲಿದ್ದಾನೆ ಎಂದು ಶಾಸ್ತ್ರಗಳು ಹೇಳುತ್ತಿವೆ ಮತ್ತು ಪಾವಕನು ತೋರಿಸುತ್ತಿದ್ದಾನೆ."

ರಾಜನು ಈ ರೀತಿ ಹೇಳಿದಾಗ ಎಲ್ಲವನ್ನೂ ಮೊದಲೇ ತಿಳಿದಿದ್ದ ಪೌರಾಣಿಕ ಮಹಾತ್ಮ ಸೂತ ಲೋಹಿತಾಕ್ಷನು ಹೇಳಿದನು:

"ದೇವ! ವಿಪ್ರನು ಹೇಳಿದ್ದುದು ಸರಿ. ಪುರಾಣಗಳನ್ನು ಅಧ್ಯಯನ ಮಾಡಿದ್ದೇನಾದುದರಿಂದ ನಾನು ನಿನಗೆ ಹೇಳುತ್ತಿದ್ದೇನೆ. ಇಂದ್ರನು 'ನನ್ನ ಪಕ್ಕದಲ್ಲಿಯೇ ನೀನು ಅಡಗಿ ವಾಸಿಸು. ಇಲ್ಲಿ ಅಗ್ನಿಯು ನಿನ್ನನ್ನು ಸುಡುವುದಿಲ್ಲ' ಎಂದು ಅವನಿಗೆ ಒಂದು ವರವನ್ನು ಕೊಟ್ಟಿದ್ದಾನೆ."

ಇದನ್ನು ಕೇಳಿದ ದೀಕ್ಷಿತನು ಉರಿದೆದ್ದು ಅಲ್ಲಿರುವ ಹೋತಾರನನ್ನು ಆ ಕಾಲಕ್ಕೆ ತಕ್ಕ ಕರ್ಮಗಳನ್ನು ಮಾಡಲು ಚೋದಿಸಿದನು. ಹೋತಾರನು ಮಂತ್ರಗಳನ್ನು ಉಚ್ಛರಿಸುತ್ತಾ ಹವಿಸ್ಸನ್ನು ಹಾಕಿದಾಗ ಸ್ವಯಂ ಇಂದ್ರನೇ ಅಲ್ಲಿಗೆ ಬಂದನು. ವಿಮಾನಾರೂಢನಾಗಿದ್ದ ಆ

ಮಹಾನುಭಾವನನ್ನು ಸರ್ವದೇವತೆಗಳೂ ಸುತ್ತುವರೆದಿದ್ದರು; ಮಹತ್ತರವಾದ ಮೋಡಗಳು ಹಿಂಬಾಲಿಸುತ್ತಿದ್ದವು; ವಿಧ್ಯಾಧರ ಮತ್ತು ಅಪ್ಸರೆಯರ ಗಣಗಳು ಜೊತೆಗೂಡಿದ್ದವು. ಅವನ ಉತ್ತರೀಯದಲ್ಲಿ ಬೇರೆಲ್ಲು ಹೋಗಲು ಸ್ಥಳವಿಲ್ಲದೇ ಭಯೋದ್ವಿಗ್ನ ನಾಗನು ಅಡಗಿದ್ದನು. ಆಗ ತಕ್ಷಕನ ಅಂತ್ಯವನ್ನು ಇಚ್ಛಿಸುತ್ತಿದ್ದ ರಾಜನು ಪುನಃ ಮಂತ್ರವಿದರಲ್ಲಿ ಈ ಕೋಪದ ಮಾತುಗಳನ್ನು ಹೇಳಿದನು:

> “ವಿಪ್ರರೇ! ನಾಗ ತಕ್ಷಕನು ಇಂದ್ರನ ಭವನದಲ್ಲಿದ್ದರೆ ಇಂದ್ರನ ಸಮೇತ ಅವನನ್ನು ಅಗ್ನಿಯಲ್ಲಿ ಬೀಳಿಸಿರಿ.”

ಋತ್ವಿಜರು ಹೇಳಿದರು:

> “ರಾಜ! ತಕ್ಷಕನು ನಮ್ಮ ವಶದಲ್ಲಿ ಬಂದಂತೆ ತೋರುತ್ತಿದೆ. ಭಯದಿಂದ ಕೂಗುತ್ತಿರುವ ಅವನ ಭೈರವ ಮಹಾನಾದವು ಕೇಳಿಬರುತ್ತಿದೆ. ವಜ್ರಧಾರಿಯು ಆ ನಾಗನನ್ನು ಬಿಟ್ಟುಹಾಕಿದ್ದಾನೆ. ಮಂತ್ರಪ್ರಭಾವದಿಂದ ಅವನು ಶಂಕಭ್ರಷ್ಠನೂ ವಿಸ್ರಸ್ತಕಾಯನೂ ಆಗಿದ್ದಾನೆ. ಮೂರ್ಛೆಹೋಗಿ, ತೀವ್ರ ನಿಟ್ಟಿಸುರುಗಳನ್ನು ಬಿಡುತ್ತಾ ಪನ್ನಗೇಂದ್ರನು ಆಕಾಶದಲ್ಲಿ ಮೂರ್ಛೆತಪ್ಪಿ ಬರುತ್ತಿದ್ದಾನೆ. ನಿನ್ನ ಈ ಕರ್ಮವು ವಿಧಿವತ್ತಾಗಿ ಕೊನೆಗೊಳ್ಳುತ್ತಿದೆ. ಇನ್ನು ನೀನು ಆ ದ್ವಿಜಮುಖ್ಯನಿಗೆ ವರವನ್ನು ನೀಡಬಹುದು.”

ಜನಮೇಜಯನು ಹೇಳಿದನು:

> “ಬಾಲಕರೂಪಿ ಶ್ರೇಷ್ಠನೇ! ನಿನಗೆ ಅನುರೂಪ ವರವೊಂದನ್ನು ನೀಡಲು ಬಯಸುತ್ತೇನೆ. ನಿನ್ನ ಹೃದಯದಲ್ಲಿ ನೆಲೆಸಿರುವ ಅಭಿಮತವೇನಿದ್ದರೂ ಕೇಳು. ಅದೇಯವಾಗಿದ್ದರೂ ನಾನು ಅದನ್ನು ನಿನಗೆ ಪ್ರದಾನಿಸುತ್ತೇನೆ.”

ನಾಗೇಂದ್ರ ತಕ್ಷಕನು ಇನ್ನೇನು ಅಗ್ನಿಯಲ್ಲಿ ಬೀಳುತ್ತಿದ್ದಾನೆ ಎನ್ನುವಾಗ, ಆ ಒಂದು ಅಂತರದಲ್ಲಿಯೇ ಆಸ್ತೀಕನು ಹೇಳಿದನು:

> “ಜನಮೇಜಯ! ನನಗೆ ವರವನ್ನು ಕೊಡಲು ಬಯಸುವೆಯಾದರೆ ಈ ಸತ್ರವನ್ನು ನಿಲ್ಲಿಸು ಮತ್ತು ಇನ್ನು ಯಾವ ನಾಗಗಳೂ ಈ ಅಗ್ನಿಯಲ್ಲಿ ಬೀಳದಿರಲಿ.”

ಈ ಮಾತುಗಳನ್ನು ಕೇಳಿದ ರಾಜ ಪಾರಿಕ್ಷಿತನು ಸ್ವಲ್ಪವೂ ಸಂತಸಗೊಳ್ಳದೇ ಆಸ್ತೀಕನಿಗೆ ಹೇಳಿದನು:

> “ವಿಪ್ರ! ಸುವರ್ಣ, ರಜತ, ಗೋವುಗಳು, ಅಥವಾ ಇನ್ನೇನನ್ನಾದರೂ ನಿನಗಿಷ್ಟವಾದದ್ದನ್ನು ಕೇಳು. ಈ ಕ್ರತುವನ್ನು ನಿಲ್ಲಿಸಬೇಡ.”

ಆಸ್ತೀಕನು ಹೇಳಿದನು:

> “ರಾಜನ್! ಸುವರ್ಣ, ರಜತ ಅಥವಾ ಗೋವುಗಳು

ಇವ್ಯಾವುವೂ ನನಗೆ ಬೇಡ. ನಿನ್ನ ಈ ಸತ್ರವನ್ನು ನಿಲ್ಲಿಸಿ ನನ್ನ ಮಾತೃಕುಲಕ್ಕೆ ಮಂಗಳವನ್ನುಂಟುಮಾಡು."

ಆಸ್ತೀಕನು ಹೀಗೆ ಹೇಳಲು ರಾಜ ಪಾರಿಕ್ಷಿತನು ಪುನಃ ಪುನಃ ಮಾತುಗಾರರಲ್ಲಿ ಶ್ರೇಷ್ಠ ಆಸ್ತೀಕನಲ್ಲಿ ಕೇಳಿಕೊಂಡನು.

"ದ್ವಿಜವರೋತ್ತಮ! ಅನ್ಯ ಯಾವುದಾದರೂ ಒಳ್ಳೆಯ ವರವನ್ನು ಕೇಳಿಕೋ."

ಆದರೆ ಅವನು ಬೇರೆ ಯಾವ ವರವನ್ನೂ ಕೇಳಲಿಲ್ಲ. ಆಗ ಅಲ್ಲಿರುವ ಎಲ್ಲ ವೇದವಿದಿತ ಸದಸ್ಯರೂ ಸೇರಿ

"ಬ್ರಾಹ್ಮಣನಿಗೆ ವರವನ್ನು ನೀಡು!"

ಎಂದು ಕೇಳಿಕೊಂಡರು. ರಾಜ ಪಾರಿಕ್ಷಿತನು ಆಸ್ತೀಕನಿಗೆ ವರವನ್ನು ಕೊಡುತ್ತಾನೆನ್ನುವಾಗ ಇಂದ್ರನ ಕೈಯಿಂದ ಜಾರಿದ ನಾಗ ತಕ್ಷಕನು ಕೆಳಗೆ ಬೀಳದೆಯೇ ಆಕಾಶದಲ್ಲಿಯೇ ನಿಂತಾಗ ರಾಜ ಜನಮೇಜಯನು ಚಿಂತಾಪರನಾದನು. ಉರಿಯುತ್ತಿರುವ ಅಗ್ನಿಯಲ್ಲಿ ವಿಧಿವತ್ತಾಗಿ ಹವಿಸ್ಸುಗಳು ಬೀಳುತ್ತಿದ್ದರೂ ಭಯಪೀಡಿತನಾಗಿ ಮೂರ್ಛಿತ ತಕ್ಷಕನು ವಹ್ನಿಯಲ್ಲಿ ಬೀಳಲಿಲ್ಲ. ಇಂದ್ರನ ಕೈಯಿಂದ ಜಾರಿ ಮೂರ್ಛಿತನಾಗಿ ಬೀಳುತ್ತಿದ್ದ ಪನ್ನಗೋತ್ತಮನಿಗೆ ಆಸ್ತೀಕನು "ನಿಲ್ಲು! ನಿಲ್ಲು!" ಎಂದು ಮೂರು ಬಾರಿ ಕೂಗಿ ಹೇಳಿದನು. ಹೃದಯದಲ್ಲಿ ನೋವನ್ನು ಅನುಭವಿಸುತ್ತಿದ್ದ ಅವನು ಸ್ವರ್ಗ ಮತ್ತು



ಭೂಮಿಯ ನಡುವೆ ನೇತಾಡುತ್ತಿರುವ ವ್ಯಕ್ತಿಯಂತೆ ಅಲ್ಲಿಯೇ ಅಂತರಕ್ಷದಲ್ಲಿ ನಿಂತುಬಿಟ್ಟನು. ಮೇಲಿಂದ ಮೇಲೆ ಸದಸ್ಯರಿಂದ ಒತ್ತಡಬಂದಾಗ ರಾಜನು

"ಅಸ್ತೀಕನ ಬಯಕೆಯಲ್ಲಿದ್ದುದು ನಡೆಯಲಿ"

ಎಂದನು.

"ಈ ಕಾರ್ಯವು ನಿಲ್ಲಲಿ. ನಾಗಗಳು ಬದುಕಲಿ. ಆಸ್ತೀಕನು ಬಯಸಿದಂತೆಯೇ ಆಗಲಿ ಮತ್ತು ಸೂತನ ಮಾತು ಸತ್ಯವಾಗಲಿ."

ಆಸ್ತೀಕನ ವರವನ್ನಿತ್ತಾಕ್ಷಣ ಎಲ್ಲಕಡೆಯಿಂದಲೂ ಸಂತೋಷದ ಹಲಹಲ ಶಬ್ಧವು ಕೇಳಿಬಂದಿತು. ಪಾಂಡವೇಯ ರಾಜ ಪಾರಿಕ್ಷಿತನ ಯಜ್ಞವು ಸಮಾಪ್ತಿಯಾಯಿತು ಮತ್ತು ಭಾರತ ರಾಜ ಜನಮೇಜಯನು ತನ್ನ ಕುರಿತು ಸಂತಸಗೊಂಡನು. ಅಲ್ಲಿ ಸಮಾಗತ ಋತ್ವಿಜ ಮತ್ತು ಸದಸ್ಯರಿಗೆ ನೂರು ನೂರು ಮತ್ತು ಸಹಸ್ರಾರು ಸಂಖ್ಯೆಗಳಲ್ಲಿ ಸಂಪತ್ತನ್ನು ನೀಡಿಲಾಯಿತು. ವಾಸ್ತುಶಾಸ್ತ್ರವನ್ನು ತಿಳಿದಿದ್ದ ಮತ್ತು ಸತ್ರದ ಪ್ರಾರಂಭದಲ್ಲಿಯೇ ಈ ಯಜ್ಞವು ಓರ್ವ ಬ್ರಾಹ್ಮಣನ ಕಾರಣದಿಂದ ನಿಲ್ಲುತ್ತದೆ ಎಂದು ಹೇಳಿದ್ದ ಸೂತ ಲೋಹಿತಾಕ್ಷನಿಗೂ ಬಹಳಷ್ಟು ಸಂಪತ್ತನ್ನು ದಾನವಾಗಿ ನೀಡಲಾಯಿತು. ನಂತರ ವಿಧಿಪೂರ್ವಕ ಅವಭೃತ ಕಾರ್ಯವೂ ನಡೆಯಿತು. ಈ ಒಳ್ಳೆಯ ಕಾರ್ಯವು ಕೃತಕೃತ್ಯವಾಯಿತೆಂದು

ಸಂತೋಷಗೊಂಡ ರಾಜನು ಆಸ್ತೀಕನನ್ನು ಸತ್ಕರಿಸಿ ಮನೆಗೆ ಕಳುಹಿಸಿಕೊಟ್ಟನು.

> “ಪುನಃ ಬಂದು ನನ್ನ ಮುಂದಿನ ಕಾರ್ಯ ಮಹಾಕ್ರತು ಅಶ್ವಮೇಧದಲ್ಲಿ ಸದಸ್ಯನಾಗಬೇಕು”

ಎಂದನು. “ಹಾಗೆಯೇ ಆಗಲಿ” ಎಂದು ತನ್ನ ಕಾರ್ಯದಿಂದಾಗಿ ಮಾತುಲ ಪಾರ್ಥಿವನಿಗೆ ಅತೀವ ಸಂತೋಷವಾಯಿತಲ್ಲ ಎಂದು ಸಂತುಷ್ಟಗೊಂಡು ಆಸ್ತೀಕನು ಮರಳಿದನು.

ಪರಮ ಸಂತಸಗೊಂಡು ತನ್ನ ತಾಯಿ ಮತ್ತು ಮಾವನ ಬಳಿ ಹೋಗಿ ಅವರಿಗೆ ಅಭಿನಂದಿಸಿ ನಡೆದುದೆಲ್ಲವನ್ನೂ ನಿವೇದಿಸಿದನು. ಇದನ್ನೆಲ್ಲಾ ಕೇಳಿ ಅಲ್ಲಿ ಸೇರಿದ್ದ ಪನ್ನಗಗಳೆಲ್ಲರೂ ತಮ್ಮ ತಮ್ಮ ಭಯವನ್ನು ಕಳೆದುಕೊಂದು ಸಂತಸಗೊಂಡರು. ಆಸ್ತೀಕನಿಂದ ಬಹಳ ಸಂತಸಗೊಂಡ ಅವರು “ನಿನಗಿಷ್ಟವಾದ ವರವನ್ನು ಕೇಳಿಕೋ!” ಎಂದರು. ಅಲ್ಲಿದ್ದ ಎಲ್ಲರೂ ಮೇಲಿಂದ ಮೇಲೆ

> “ವಿದ್ವನ್! ನಿನಗೇನು ಇಷ್ಟವಿದೆ? ನಾವೇನು ಮಾಡಬೇಕು? ವತ್ಸ! ನಮ್ಮೆಲ್ಲರನ್ನು ನೀನು ರಕ್ಷಿಸಿದುದಕ್ಕಾಗಿ ನಾವು ಸಂತಸಗೊಂಡಿದ್ದೇವೆ. ಇಂದು ನಾವು ನಿನಗಾಗಿ ಏನನ್ನು ಮಾಡಬೇಕು ಎಂದು ಕೇಳು.”

ಆಸ್ತೀಕನು ಹೇಳಿದನು:

“ಈ ಲೋಕದಲ್ಲಿ ಯಾವ ವಿಪ್ರ ಅಥವಾ ಅನ್ಯ ಮಾನವನು ಸುಪ್ರಸನ್ನನಾಗಿ ಆತ್ಮರೂಪನಾಗಿ ಸಾಯಂಕಾಲ ಅಥವಾ ಪ್ರಾತಃಕಾಲದಲ್ಲಿ ಈ ಧರ್ಮಾಖ್ಯಾನವನ್ನು ಕೇಳುತ್ತಾನೋ ಅವನಿಗೆ ನಿಮ್ಮಿಂದ ಯಾವ ರೀತಿಯ ಭಯವೂ ಬಾರದಿರಲಿ.”

ಅವರೂ ಕೂಡ ಸಂತೋಷದಿಂದ ಹೇಳಿದರು:

“ತಂಗಿಯ ಮಗನೇ! ನೀನು ಕೇಳಿಕೊಂಡ ಈ ಕೆಲಸವನ್ನು ಸತ್ಯವಾಗಿಯೂ ನಡೆಸಿಕೊಡುತ್ತೇವೆ. ನಿನಗಿಷ್ಟವಾದ ಎಲ್ಲವನ್ನೂ ನಾವು ಸಂತಸದಿಂದ ಮಾಡಿಕೊಡುತ್ತೇವೆ. ಜರತ್ಕಾರುವಿನಿಂದ ಜರತ್ಕಾರುವಿನಲ್ಲಿ ಹುಟ್ಟಿ ನಾಗಗಳನ್ನು ರಕ್ಷಿಸಿದ ಆ ಮಹಾಯಶ ಸತ್ಯಸಂಧ ಆಸ್ತೀಕನನ್ನು ಯಾರು ಅಸಿತ, ಆರ್ತಿಮಂತ ಮತ್ತು ಸುನೀಥನೆಂದು ಹಗಲು ಅಥವಾ ರಾತ್ರಿಯಲ್ಲಿ ಸ್ಮರಿಸುತ್ತಾರೋ ಅವರಿಗೆ ಸರ್ಪಭಯವೇ ಇರುವುದಿಲ್ಲ.”

ನಾಗಗಳನ್ನು ಸರ್ಪಸತ್ರದಿಂದ ರಕ್ಷಿಸಿದ ಆ ಧರ್ಮಾತ್ಮನು ಕಾಲಕ್ರಮೇಣವಾಗಿ ತನ್ನ ಪುತ್ರಪೌತ್ರರನ್ನು ತೊರೆದು ಕಾಲವಶನಾದನು.

ಕರ್ಮಾಂಗಗಳಿಂದ ಬಿಡುವ ದೊರೆತಾಗ ದ್ವಿಜರು ವೇದಗಳನ್ನು ಆಧಾರಿಸಿದ ಕಥೆಗಳನ್ನು ಹೇಳುತ್ತಿದ್ದರು. ವ್ಯಾಸನು ಮಹಾಭಾರತದ

ಕಥೆಯನ್ನು ನಿತ್ಯವೂ ಹೇಳುತ್ತಿದ್ದನು.

## ಜನಮೇಜಯನ ಸರ್ಪಸತ್ರದಲ್ಲಿ ವ್ಯಾಸನ ಆಗಮನ

ಸರ್ಪಸತ್ರಕ್ಕೆ ಜನಮೇಜಯನು ದೀಕ್ಷಿತನಾಗಿದ್ದಾನೆಂದು ಕೇಳಿದ ಋಷಿವಿದ್ವಾಂಸ ಕೃಷ್ಣದ್ವೈಪಾಯನನು ಅಲ್ಲಿಗೆ ಬಂದನು. ಪಾಂಡವ ಪಿತಾಮಹನು ಯಮುನಾನದಿಯ ಒಂದು ದ್ವೀಪದಲ್ಲಿ ಗುಪ್ತವಾಗಿ ಶಕ್ತಿಪುತ್ರ ಪರಾಶರನಿಗೆ ಓರ್ವ ಕನ್ಯೆಯಲ್ಲಿ ಜನಿಸಿದ್ದನು. ಹುಟ್ಟಿದ ತಕ್ಷಣವೇ ತನ್ನ ಇಷ್ಟಮಾತ್ರದಿಂದ ದೇಹವನ್ನು ಬೆಳೆಯಿಸಿಕೊಂಡ ಆ ಮಹಾಯಶನು ವೇದ-ವೇದಾಂಗಗಳನ್ನು ಮತ್ತು ಇತಿಹಾಸಗಳನ್ನು ಗೆದ್ದಿದ್ದನು. ತಪಸ್ಸಿನಲ್ಲಿ, ವೇದಾಧ್ಯಯನದಲ್ಲಿ, ವ್ರತೋಪವಾಸಗಳಲ್ಲಿ, ಸಂತಾನದಲ್ಲಿ ಅಥವಾ ಸಿಟ್ಟಿನಲ್ಲಿ ಅವನನ್ನು ಮೀರಿದವರ್ಯಾರೂ ಇರಲಿಲ್ಲ. ಶುಚಿಯೂ, ಸತ್ಯವ್ರತನೂ, ಕವಿಯೂ, ಬ್ರಹ್ಮರ್ಷಿಯೂ, ಪರಾವರಜ್ಞನೂ, ವೇದವಿದರಲ್ಲಿ ಶ್ರೇಷ್ಠನೂ ಆದ ಅವನು ವೇದವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದನು. ಪಾಂಡು, ಧೃತರಾಷ್ಟ್ರ, ಮತ್ತು ವಿದುರರಿಗೆ ಜನ್ಮವಿತ್ತು ಅವನು ಮಹಾಯಶಸ್ವಿ ಪುಣ್ಯಕೀರ್ತಿಮಯ ಶಂತನು ಸಂತತಿಯನ್ನು ಮುಂದುವರಿಸಿದನು. ತನ್ನ ವೇದವೇದಾಂಗಪಾರಂಗತ ಶಿಷ್ಯರೊಂದಿಗೆ ಅವನು ರಾಜರ್ಷಿ ಜನಮೇಜಯನ ಯಜ್ಞಶಾಲೆಯನ್ನು ಪ್ರವೇಶಿಸಿದನು. ಅಲ್ಲಿ ದೇವತೆಗಳಿಂದ ಸುತ್ತುವರಿದ ಪುರಂದರನಂತೆ ಅನೇಕ ಸದಸ್ಯರಿಂದ, ಮೂರ್ಧಾವಸಿಕ್ತ ನಾನಾ ಜನಪದೇಶ್ವರರಿಂದ, ಮತ್ತು ಯಜ್ಞಕಾರ್ಯ

ಕುಶಲ ದೇವಕಲ್ಪ ಋತ್ವಿಜರಿಂದ ಆವೃತನಾಗಿ ಕುಳಿತಿದ್ದ ರಾಜ ಜನಮೇಜಯನನ್ನು ಕಂಡನು. ಭರತಸತ್ತಮ ರಾಜರ್ಷಿ ಜನಮೇಜಯನು ಆಗಮಿಸುತ್ತಿದ್ದ ಋಷಿಯನ್ನು ಕಂಡು ಅತ್ಯಂತ ಹರ್ಷಿತನಾಗಿ ತನ್ನ ಸಂಗಾತಿಗಳೊಂದಿಗೆ ಮುಂದೆಬಂದು ಬರಮಾಡಿಕೊಂಡನು. ಸದಸ್ಯರ ಅನುಮತಿಯಂತೆ ಶಕ್ರನು ಬೃಹಸ್ಪತಿಗೆ ನೀಡುವ ಹಾಗೆ ಪ್ರಭುವು ಅವನಿಗೆ ಕಾಂಚನ ಆಸನವನ್ನಿತ್ತನು. ಅಲ್ಲಿ ಕುಳಿತುಕೊಂಡ ದೇವರ್ಷಿಗಣಪೂಜಿತ ವರದನನ್ನು ರಾಜೇಂದ್ರನು ಶಾಸ್ತ್ರೋಕ್ತ ಕರ್ಮಗಳಿಂದ ಪೂಜಿಸಿದನು. ಪಿತಾಮಹ ಕೃಷ್ಣನಿಗೆ ವಿಧಿವತ್ತಾಗಿ ಪಾದ್ಯ, ಆಚಮನೀಯ, ಅರ್ಘ್ಯ ಮತ್ತು ಗೋವುಗಳನ್ನು ನಿವೇದಿಸಿದನು. ಸುಪ್ರೀತ ವ್ಯಾಸನು ಪಾಂಡವ್ಯ ಜನಮೇಜಯನ ಪೂಜೆ-ಗೋವುಗಳನ್ನು ಪ್ರತಿಗ್ರಹಿಸಿದನು. ಪ್ರಪಿತಾಮಹನನ್ನು ಈ ರೀತಿಯಾಗಿ ಪೂಜಿಸಿ, ಅವನ ಕೆಳಗಿನ ಸ್ಥಾನದಲ್ಲಿ ಕುಳಿತುಕೊಂಡು ಅನಾಮಯನ ಕುಶಲವನ್ನು ವಿಚಾರಿಸಿದನು. ಆ ಭಗವಾನನೂ ಕೂಡ ಅವನನ್ನು ನೋಡಿ ಕುಶಲವನ್ನು ವಿಚಾರಿಸಿ, ತನ್ನನ್ನು ಪೂಜಿಸಿದ ಸರ್ವ ಸದಸ್ಯರುಗಳಿಗೆ ನಮಸ್ಕರಿಸಿದನು. ಎಲ್ಲ ಸದಸ್ಯರುಗಳು ದ್ವಿಜಶ್ರೇಷ್ಠನನ್ನು ಸತ್ಕರಿಸಿದ ನಂತರ ಜನಮೇಜಯನು ಅಂಜಲೀಬದ್ಧನಾಗಿ ಕೇಳಿಕೊಂಡನು:

> “ಕುರುಗಳನ್ನೂ ಪಾಂಡವರನ್ನೂ ನೀನು ಪ್ರತ್ಯಕ್ಷವಾಗಿ ನೋಡಿದ್ದೀಯೆ. ದ್ವಿಜ! ನಿನ್ನಿಂದ ಅವರ ಚರಿತ್ರೆಯನ್ನು ಕೇಳಲು ಬಯಸುತ್ತೇನೆ. ಆ ಅಕ್ಲಿಷ್ಟಕರ್ಮಿಗಳಲ್ಲಿ ಭೇದವು

ಹೇಗೆ ಉಂಟಾಯಿತು? ಸರ್ವ ಭೂತಾಂತಕಾರಕ ಆ ಮಹಾಯುದ್ಧವು ನನ್ನ ದೈವಪ್ರೇರಿತ ಚೇತನ ಪಿತಾಮಹರ ಮಧ್ಯೆ ಹೇಗೆ ನಡೆಯುಮತಾಯಿತು? ಅವೆಲ್ಲವನ್ನೂ ನನಗೆ ಹೇಳು. ಯಾಕೆಂದರೆ ನಿನಗೊಬ್ಬನಿಗೇ ಇವೆಲ್ಲ ಚೆನ್ನಾಗಿ ತಿಳಿದಿವೆ."

ಅವನ ಆ ಮಾತುಗಳನ್ನು ಕೇಳಿದ ಕೃಷ್ಣದ್ವೈಪಾಯನನು ಅಲ್ಲಿಯೇ ಕುಳಿತಿದ್ದ ಶಿಷ್ಯ ವೈಶಂಪಾಯನನಿಗೆ ಆದೇಶವನ್ನಿತ್ತನು:

"ಹಿಂದೆ ಕುರು-ಪಾಂಡವರಲ್ಲಿ ಹೇಗೆ ಭೇದವುಂಟಾಯಿತು ಎನ್ನುವುದೆಲ್ಲವನ್ನೂ ನಾನು ನಿನಗೆ ಹೇಗೆ ಹೇಳಿದ್ದೆನೋ ಹಾಗೆಯೇ ಹೇಳು."

ಗುರುವಿನ ವಚನವನ್ನು ಸ್ವೀಕರಿಸಿದ ಆ ವಿಪ್ರರ್ಷಭನು ಕುರು-ಪಾಂಡವರಲ್ಲಾದ ಭೇದ ಮತ್ತು ನಂತರದ ರಾಜ್ಯವಿನಾಶದ ಸಹಿತ ಆ ಪುರಾತನ ಇತಿಹಾಸ ಸರ್ವವನ್ನೂ ಅಲ್ಲಿ ನೆರೆದಿದ್ದ ಸದಸ್ಯರು ಮತ್ತು ಕ್ಷತ್ರಿಯ ರಾಜರೆಲ್ಲರಿಗೆ ಹೇಳತೊಡಗಿದನು.

## ವೈಶಂಪಾಯನನಿಂದ ಮಹಾಭಾರತ ಕಥಾರಂಭ

ವೈಶಂಪಾಯನನು ಹೇಳಿದನು:

"ಮನಸ್ಸು, ಬುದ್ಧಿ ಮತ್ತು ಸಮಾಧಿ ಪೂರ್ವಕ ಗುರುವಿಗೆ ನಮಸ್ಕರಿಸಿ ಇಲ್ಲಿರುವ ಸರ್ವ ದ್ವಿಜ-ವಿದುಷಿಗಳನ್ನು

ಸಂಪೂಜಿಸಿ, ಸರ್ವಲೋಕವಿಶ್ರುತ ಧೀಮಂತ ಅಮಿತತೇಜಸ ಮಹರ್ಷಿ ವ್ಯಾಸನಿಂದ ಕೇಳಿದುದೆಲ್ಲವನ್ನೂ ಸಂಪೂರ್ಣವಾಗಿ ಹೇಳುತ್ತೇನೆ. ರಾಜ! ಈ ಭಾರತದ ಕಥೆಯನ್ನು ಕೇಳಲು ಪಾತ್ರನಾಗಿರುವ ನಿನಗೆ ಗುರುವಿನ ಆದೇಶ ಮತ್ತು ಪ್ರೋತ್ಸಾಹಗಳಿಂದ ಇದನ್ನು ಹೇಳಲು ತುಂಬಾ ಉತ್ಸುಕನಾಗಿದ್ದೇನೆ. ಕುರುಪಾಂಡವರ ಮಧ್ಯೆ ಭೇದವು ಹೇಗೆ ಉಂಟಾಯಿತು ಮತ್ತು ಹೇಗೆ ರಾಜ್ಯಕ್ಕೋಸ್ಕರ ದ್ಯೂತ-ವನವಾಸಗಳಾದವು ಎನ್ನುವುದನ್ನು ಕೇಳು. ನೀನು ಕೇಳಿದಂತೆ ಪೃಥ್ವಿಕ್ಷಯಕಾರಕ ಯುದ್ಧವು ಹೇಗೆ ನಡೆಯಿತು ಎನ್ನುವುದನ್ನು ಹೇಳುತ್ತೇನೆ. ತಂದೆಯ ಮರಣದ ಬಳಿಕ ಆ ವೀರರು ವನದಿಂದ ತಮ್ಮ ಅರಮನೆಗೆ ಆಗಮಿಸಿ ಸ್ವಲ್ಪವೇ ಸಮಯದಲ್ಲಿ ವೇದ-ಧನುರ್ವಿಧ್ಯಾ ವಿದ್ವಾಂಸರಾದರು. ಶ್ರೀಯಶೋಭೃತ, ರೂಪವೀರ್ಯಜ, ಸಂಪನ್ನ, ಮತ್ತು ಪೌರಸಮ್ಮತ ಪಾಂಡವರನ್ನು ನೋಡಿ ಕೌರವರು ಅಸೂಯೆಗೊಂಡರು. ಕ್ರೂರ ದುರ್ಯೋಧನನು ಕರ್ಣ-ಸೌಬಲರೊಡಗೂಡಿ ಅವರನ್ನು ನಿಗ್ರಹಿಸಲು ಮತ್ತು ನಿರ್ವಾಸರನ್ನಾಗಿ ಮಾಡಲು ವಿವಿಧ ಯೋಜನೆಗಳನ್ನು ನಡೆಸಿದರು. ಧೃತರಾಷ್ಟ್ರನ ಪಾಪಿಷ್ಟ ಮಕ್ಕಳು ಭೀಮನಿಗೆ ವಿಷವನ್ನಿತ್ತರು. ಆದರೆ ಆ ವೀರ ವೃಕೋದರನು ಅದನ್ನು ಜೀರ್ಣಿಸಿ ಸಹಿಸಿಕೊಂಡನು.

ಗಂಗಾತಟದಲ್ಲಿ ಮಲಗಿದ್ದ ಭೀಮನನ್ನು ಕಟ್ಟಿ ನೀರಿನಲ್ಲಿ ಹಾಕಿ ಪುರಕ್ಕೆ ತೆರಳಿದರು. ಪ್ರಬುದ್ಧ ಕೌಂತೇಯ ಭೀಮಸೇನನು ಕಟ್ಟನ್ನು ಹರಿದು ತನ್ನನ್ನು ತಾನೇ ಬಿಡುಗಡೆಮಾಡಿಕೊಂಡನು.  ನಿದ್ದೆಯಲ್ಲಿದ್ದಾಗ ಸರ್ವ ದೇಹಾಂಗಗಳನ್ನು ಮಹಾವಿಷಭರಿತ ಕೃಷ್ಣಸರ್ಪಗಳು ಕಚ್ಚಿದ್ದರೂ ಆ ಶತ್ರುಹನು ಸಾಯಲಿಲ್ಲ. ಮಹಾಮತಿ ವಿದುರನು ಅವರು ಕಷ್ಟದಲ್ಲಿದ್ದಾಗಲೆಲ್ಲಾ ಅವರ ಹಿತವನ್ನೇ ಬಯಸಿ ಅವರನ್ನು ಉಳಿಸುವ ಯೋಜನೆಗಳನ್ನು ಮಾಡುತ್ತಿದ್ದನು. ಸ್ವರ್ಗದಲ್ಲಿ ಇಂದ್ರನು ಜೀವಲೋಕಗಳಿಗೆ ಸುಖವನ್ನು ತರುವ ಹಾಗೆ ವಿದುರನು ನಿತ್ಯವೂ ಪಾಂಡವರ ಸುಖವನ್ನು ಬಯಸುತ್ತಿದ್ದನು. ವಿವಿಧ ಗೌಪ್ಯ ಅಥವಾ ಬಾಹ್ಯ ಉಪಾಯಗಳಿಂದಲೂ ಆ ದೈವಭಾವ್ಯ ರಕ್ಷಿತರನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಆಗ ವೃಷ ದುಃಶಾಸನ ಮೊದಲಾದ ಸಚಿವರು ಸಮಾಲೋಚಿಸಿ ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದು ಒಂದು ಜಾತುಗೃಹವನ್ನು ನಿರ್ಮಿಸಿದರು. ಅಮಿತೌಜಸ ಪಾಂಡವರು ಅಲ್ಲಿ ವಾಸಿಸುವಂತೆ ಏರ್ಪಡಿಸಿದರು ಮತ್ತು ಅವರಿಗೆ ಸ್ವಲ್ಪವೂ ಅನುಮಾನಬಾರದ ಹಾಗೆ ಅವರೊಂದಿಗೆ ಆ ಮನೆಯನ್ನು ಬೆಂಕಿಹಚ್ಚಿ ಸುಟ್ಟುಹಾಕಿದರು. ವಿದುರನ ಮಾತಿನಂತೆ ಅಲ್ಲಿ ಒಂದು ಕಣಿವೆಯನ್ನು ಅಗೆಯಲಾಗಿತ್ತು ಮತ್ತು ಅದರ

ಸಹಾಯದಿಂದ ಅವರು ಅದೃಷ್ಟವಶಾತ್ ಆ ಭಯದಿಂದ ಮುಕ್ತರಾದರು. ನಂತರ ಆ ಮಹಾವನದಲ್ಲಿ ಭುವಿಯಲ್ಲೇ ಭೀಮಪರಾಕ್ರಮಿ ಕೃದ್ಧ ಭೀಮಸೇನನು ಹಿಡಿಂಬ ಎಂಬ ಹೆಸರಿನ ಘೋರ ರಾಕ್ಷಸನನ್ನು ಸಂಹರಿಸಿದನು. ಆ ಪರಂತಪ ವೀರರು ಎಲ್ಲರ ಒಪ್ಪಿಗೆಯಂತೆ ಏಕಚಕ್ರ ನಗರಿಗೆ ಹೋಗಿ ಅಲ್ಲಿ ಬ್ರಾಹ್ಮಣ ರೂಪ ಧರಿಸಿ ತಾಯಿಯೊಂದಿಗಿದ್ದರು. ಅಲ್ಲಿ ಆ ಬ್ರಾಹ್ಮಣನಿಗೋಸ್ಕರ ಮಹಾಬಲ ಬಕನನ್ನು ಸಂಹರಿಸಿ ಬ್ರಾಹ್ಮಣರ ಸಹಿತ ಪಾಂಚಾಲನಗರಿಗೆ ಹೋದರು. ಅಲ್ಲಿ ಅವರು ದ್ರೌಪದಿಯನ್ನು ಪಡೆದು ಒಂದು ವರ್ಷಪರ್ಯಂತ ಅಲ್ಲಿಯೇ ವಾಸಿಸಿದರು. ಆ ಅರಿಂದಮರ ಕುರಿತು ತಿಳಿದ ನಂತರ ಅವರು ಹಸ್ತಿನಾಪುರಕ್ಕೆ ಹಿಂದಿರುಗಿದರು. ಅಲ್ಲಿ ಅವರಿಗೆ ರಾಜ ಧೃತರಾಷ್ಟ್ರ ಮತ್ತು ಶಾಂತನವ ಹೇಳಿದರು: “ಮಕ್ಕಳೇ! ನೀವು ಮತ್ತು ನಿಮ್ಮ ಭ್ರಾತೃಗಳ ಮಧ್ಯೆ ಯಾವುದೇ ರೀತಿಯ ಒಡಕು ಉಂಟಾಗಬಾರದೆಂದು ನಾವು ಖಾಂಡವಪ್ರಸ್ಥವು ನಿಮಗಿರಲಿ ಎಂದು ಯೋಚಿಸಿದ್ದೇವೆ. ಆದುದರಿಂದ ಹಿಂದಿನ ಅಸೂಯೆಗಳನ್ನೆಲ್ಲ ತ್ಯಜಿಸಿ ಹಲವಾರು ಜನಪದ ಮಹಾಪಥಗಳಿಂದ ಕೂಡಿದ ಖಾಂಡವಪ್ರಸ್ಥದಲ್ಲಿ ವಾಸಮಾಡಿ.” ಈ ವಚನದಂತೆ ಅವರು ಎಲ್ಲ ಸುಹೃಜ್ಜನರೊಡಗೂಡಿ ಹಲವಾರು

ರತ್ನಗಳೊಂದಿಗೆ ಖಾಂಡವಪ್ರಸ್ಥ ನಗರಿಗೆ ಹೋದರು. ಅಲ್ಲಿ ಅವರು ಹಲವಾರು ವರ್ಷಗಳು ವಾಸಿಸಿದರು ಮತ್ತು ತಮ್ಮ ಶಸ್ತ್ರಪ್ರತಾಪದಿಂದ ಅನ್ಯ ಮಹೀಕ್ಷಿತರನ್ನು ವಶಪಡಿಸಿಕೊಂಡರು. ಈ ರೀತಿ ಆ ಸತ್ಯವ್ರತಪರಾಯಣರು ಧರ್ಮಪ್ರಧಾನರಾಗಿದ್ದು, ಸಿಟ್ಟಿಗೇಳದೇ, ಶಾಂತರಾಗಿ ಅಹಿತಗಳನ್ನು ತುಳಿದು ರಾಜ್ಯವಾಳಿದರು. ಮಹಾಬಲ ಭೀಮಸೇನನು ಪಶ್ಚಿಮ ದಿಕ್ಕನ್ನು ಜಯಿಸಿದನು. ವೀರ ಅರ್ಜುನನು ಉತ್ತರ ದಿಕ್ಕನ್ನು, ನಕುಲನು ಪಶ್ಚಿಮವನ್ನು, ಮತ್ತು ಸಹದೇವನು ದಕ್ಷಿಣವನ್ನು ಜಯಿಸಿ, ಆ ಪರವೀರರು ಈ ವಸುಂಧರೆಯಲ್ಲಿ ಸರ್ವರನ್ನೂ ತಮ್ಮ ವಶಮಾಡಿಕೊಂಡರು. ಸೂರ್ಯನೊಂದಿಗೆ ಸೂರ್ಯಸಂಕಾಶ ಐವರು ಪಾಂಡವರೂ ಸೇರಿ ಆರು ಸತ್ಯವಿಕ್ರಮಿ ಸೂರ್ಯರನ್ನು ಪೃಥ್ವಿಯು ಹೊಂದಿದಂತೆ ತೋರುತ್ತಿತ್ತು. ನಂತರ ಯಾವುದೋ ಒಂದು ಕಾರಣದಿಂದ ಧರ್ಮರಾಜ ಯುಧಿಷ್ಠಿರನು ಸಹೋದರ ಧನಂಜಯನನ್ನು ವನಕ್ಕೆ ಕಳುಹಿಸಬೇಕಾಗಿ ಬಂದಿತು. ವನದಲ್ಲಿ ಒಂದು ವರ್ಷ ಒಂದು ತಿಂಗಳು ಇದ್ದು ಅವನು ಹೃಷೀಕೇಶಕ್ಕೆ ಹೋಗಿ ಅಲ್ಲಿಂದ ಒಮ್ಮೆ ದ್ವಾರವತಿಗೂ ಹೋದನು. ಅಲ್ಲಿ ಬೀಭತ್ಸುವು ವಾಸುದೇವನ ಅನುಜೆ ರಾಜೀವಲೋಚನೆ, ಭದ್ರಭಾಷಿಣೀ ಸುಭದ್ರೆಯನ್ನು ಪತ್ನಿಯಾಗಿ ಪಡೆದನು.

ಶಚಿಯು ಮಹೇಂದ್ರನೊಂದಿಗೆ ಮತ್ತು ಶ್ರೀಯು ಕೃಷ್ಣನೊಂದಿಗೆ ಹೇಗೋ ಹಾಗೆ ಸುಭದ್ರೆಯು ಪಾಂಡವ ಅರ್ಜುನನನ್ನು ಸೇರಿ ಸಂತೋಷಗೊಂಡಳು. ನಂತರ ಕೌಂತೇಯ ಬೀಭತ್ಸುವು ವಾಸುದೇವನ ಸಹಿತ ಖಾಂಡವವನ್ನು ಹವ್ಯವಾಹನನಿಗಿತ್ತು ಅವನನ್ನು ಸಂತೃಪ್ತಿಗೊಳಿಸಿದನು. ಕೇಶವನ ಸಹಾಯದಿಂದ ಪಾರ್ಥನಿಗೆ ಈ ಕೆಲಸವು ಅತಿಭಾರವೆನ್ನಿಸಲಿಲ್ಲ. ಯಾಕೆಂದರೆ ವಿಷ್ಣುವಿಗೆ ಶತ್ರುವಧೆಯು ಮಹಾಕಾರ್ಯವೇನಲ್ಲ. ಅಗ್ನಿಯು ಪಾರ್ಥನಿಗೆ ಉತ್ತಮ ಗಾಂಡೀವ ಧನಸ್ಸು, ಅಕ್ಷಯ ಬಾಣಗಳುಳ್ಳ ಬತ್ತಳಿಕೆ ಮತ್ತು ಕಪಿಲಕ್ಷಣ ರಥವನ್ನು ನೀಡಿದನು. ಆ ಸಮಯದಲ್ಲಿ ಬೀಭತ್ಸುವು ಮಹಾಸುರ ಮಯನನ್ನು ರಕ್ಷಿಸಿದನು ಮತ್ತು ಅವನು ಸರ್ವರತ್ನಸಮಾಚಿತ ದಿವ್ಯ ಸಭೆಯೊಂದನ್ನು ನಿರ್ಮಿಸಿದನು. ಮಂದ ಮತ್ತು ದುರ್ಮತಿ ದುರ್ಯೋಧನನು ಅದನ್ನು ಪಡೆಯಲು ಬಯಸಿದನು. ಮತ್ತು ಸೌಬಲನ ಸಹಾಯದಿಂದ ದ್ಯೂತದಲ್ಲಿ ಯುಧಿಷ್ಠಿರನನ್ನು ಗೆದ್ದು ಒಟ್ಟು ಹದಿಮೂರು ವರ್ಷ ವನಕ್ಕೆ ಹೋಗುವಂತೆ - ಹನ್ನೆರಡು ವರ್ಷ ವನದಲ್ಲಿ ಮತ್ತು ಒಂದು ವರ್ಷ ಯಾವುದಾದರೂ ರಾಷ್ಟ್ರದಲ್ಲಿ ಅಜ್ಞಾತವಾಸ ಮಾಡುವಂತೆ ಮಾಡಿದನು. ಹದಿನಾಲ್ಕನೆಯ ವರ್ಷ ತಮ್ಮ ಆಸ್ತಿಯನ್ನು ಹಿಂದೆ

ಕೇಳಿದಾಗಲೂ ದೊರೆಯದಿದ್ದಾಗ, ಯುದ್ಧವು ನಡೆಯಿತು. ಆಗ ಪಾಂಡವರು ನೃಪ ದುರ್ಯೋಧನನನ್ನು ಕೊಂದು ರಾಜ್ಯವನ್ನು ಹಿಂದೆ ಪಡೆದರು. ಇದೇ ಹಿಂದೆ ಆ ಅಕ್ಲಿಷ್ಟಕರ್ಮಿಗಳ ನಡುವೆ ನಡೆದ ಭೇದ, ರಾಜ್ಯವಿನಾಶ ಮತ್ತು ವಿಜಯಿಗಳಲ್ಲಿ ಶ್ರೇಷ್ಠರಾದವರ ಜಯ."

ಜನಮೇಜಯನು ಹೇಳಿದನುಃ

"ದ್ವಿಜೋತ್ತಮ! ಕುರುಗಳ ಮಹಾ ಚರಿತ್ರೆ ಮಹಾಭಾರತ ಆಖ್ಯಾನವನ್ನು ಸಂಕ್ಷಿಪ್ತರೂಪದಲ್ಲಿ ನೀನು ಹೇಳಿದ್ದೀಯೆ. ಚಿತ್ರಾರ್ಥಗಳನ್ನುಳ್ಳ ಈ ಕಥೆಯನ್ನು ನಿನ್ನಿಂದ ವಿಸ್ತಾರವಾಗಿ ಕೇಳುವ ಅತೀವ ಕುತೂಹಲವು ನನ್ನಲ್ಲಿ ಉಂಟಾಗಿದೆ. ನೀನು ಪುನಃ ಇದನ್ನು ವಿಸ್ತಾರವಾಗಿ ಹೇಳಬೇಕು. ಈಗ ಹೇಳಿದ ಮಹಾ ಚರಿತ್ರೆಯನ್ನು ಕೇಳಿ ನಾನು ತೃಪ್ತಿ ಹೊಂದಲಿಲ್ಲ. ಧರ್ಮಜ್ಞ ಪಾಂಡವರು ಆ ಅಲ್ಪ ಕಾರಣಕ್ಕಾಗಿ ವಧೆಗೆ ಅರ್ಹರಲ್ಲದ ಸರ್ವರನ್ನೂ ಸಂಹರಿಸಿದರು. ಆದರೂ ಜನರ ಪ್ರಶಂಸೆಗೆ ಪಾತ್ರರಾದರು. ಸಂತರೂ, ಶಕ್ತರೂ, ತಪ್ಪಿಲ್ಲದವರೂ ಆದ ಆ ನರವ್ಯಾಘ್ರರು ದುರಾತ್ಮರಿಂದ ತಮಗೊದಗಿದ ಸಂಕ್ಲೇಷಗಳನ್ನು ಏಕೆ ವಿರೋಧಿಸಿದೇ ಸಹಿಸಿದರು? ಆನೆಗಳ ಬಲವುಳ್ಳ ಬಾಹುಶಾಲಿ ವೃಕೋದರನು ಪರಿಕ್ಲಿಷ್ಟಗಳೊದಗಿದರೂ ಹೇಗೆ ತನ್ನ

ಕ್ರೋಧವನ್ನು ಸಹಿಸಿಕೊಂಡನು? ದುರಾತ್ಮರಿಂದ ಕಷ್ಟಕ್ಕೊಳಗಾದ ದ್ರೌಪದಿ ಕೃಷ್ಣೆಯು ಶಕ್ತಳಾಗಿದ್ದರೂ ಏಕೆ ತನ್ನ ಘೋರ ಕಣ್ಣುಗಳಿಂದ ಆ ಧಾರ್ತರಾಷ್ಟ್ರರನ್ನು ಸುಟ್ಟು ಭಸ್ಮಮಾಡಲಿಲ್ಲ? ಈರ್ವರು ಪಾರ್ಥರು ಮತ್ತು ಈರ್ವರು ಮಾದ್ರೀಸುತರು ದ್ಯೂತದಲ್ಲಿ ದುರಾತ್ಮರಿಂದ ವಂಚನೆಗೊಳಗಾಗುತ್ತಿದ್ದಾಗಲೂ ಆ ನರವ್ಯಾಘ್ರನನ್ನು ಹೇಗೆ ಅನುಸರಿಸಿದರು? ಧರ್ಮಸುತ ಧರ್ಮಭೃತರಲ್ಲಿ ಶ್ರೇಷ್ಠ ಧರ್ಮವಿತ್ ಯುಧಿಷ್ಠಿರನು ಏಕೆ ಅನರ್ಹನಾಗಿದ್ದರೂ ಆ ಪರಮ ಕ್ಲೇಷವನ್ನು ಅನುಭವಿಸಿದನು? ಬಹುಸಂಖ್ಯೆಯಲ್ಲಿ ಸರ್ವ ಸೇನೆಗಳನ್ನೂ ಒಬ್ಬನೇ ಪಿತೃಲೋಕಕ್ಕೆ ಕಳುಹಿಸಬಲ್ಲ ಕೃಷ್ಣಸಾರಥಿ ಪಾಂಡವ ಧನಂಜಯನು ಕೂಡ ಹೇಗೆ ಸಹಿಸಿದನು? ಇವೆಲ್ಲವನ್ನೂ ಹೇಗೆ ನಡೆಯಿತೋ ಹಾಗೆ ಹೇಳು - ಪ್ರತಿಯೊಂದು ಕ್ಷಣದಲ್ಲೂ ಆ ಮಹಾರಥಿಗಳು ನಿರ್ವಹಿಸಿದ ಕಾರ್ಯಗಳನ್ನು ಹೇಳು."

ಆಗ ವೈಶಂಪಾಯನನು ಹೇಳಿದನು:

"ಸರ್ವಲೋಕಪೂಜಿತ ಮಹಾತ್ಮ ಅಮಿತತೇಜಸ ಮಹರ್ಷಿ ವ್ಯಾಸನ ಕೃತಿಯನ್ನು ಸಂಪೂರ್ಣವಾಗಿ ಹೇಳುತ್ತೇನೆ. ಅಮಿತೌಜಸ ಸತ್ಯವತಿಯ ಆತ್ಮಜನು ಆಖ್ಯಾಯಿಸಿದ ಈ ಪುಣ್ಯಕೃತಿಯು ನೂರುಸಾವಿರ

ಶ್ಲೋಕಗಳನ್ನು ಹೊಂದಿದೆ. ಇದನ್ನು ಓದುವ ವಿದ್ವಾಂಸ ಮತ್ತು ಕೇಳುವ ನರನು ದೇವಮಾನ ಬ್ರಹ್ಮಸ್ಥಾನವನ್ನು ಪಡೆಯುತ್ತಾರೆ. ವೇದಗಳಷ್ಟೇ ಪವಿತ್ರ, ಋಷಿಸಂಸ್ತುತ ಈ ಪುರಾಣವು ಕೇಳಬೇಕಾಗಿದ್ದುದರಲ್ಲೆಲ್ಲಾ ಉತ್ತಮವಾದದ್ದು. ಇದರಲ್ಲಿ ಅರ್ಥ-ಧರ್ಮಗಳನ್ನು ಸಂಪೂರ್ಣವಾಗಿ ಉಪದೇಶಿಸಲಾಗಿದೆ ಮತ್ತು ಈ ಮಹಾಪುಣ್ಯಕರ ಇತಿಹಾಸವು ಮೋಕ್ಷವನ್ನು ಬಯಸುವ ಬುದ್ಧಿಯನ್ನು ನೀಡುತ್ತದೆ. ಕೃಷ್ಣನ ಈ ವೇದವನ್ನು ಅಕ್ಷುದ್ರರಿಗೆ, ದಾನಶೀಲರಿಗೆ, ಸತ್ಯಶೀಲರಿಗೆ ಮತ್ತು ಆಸ್ತಿಕರಿಗೆ ಓದಿ ಹೇಳಿದ ವಿದ್ವಾಂಸನು ಸಂಪತ್ತನ್ನು ಪಡೆಯುವನು. ಈ ಇತಿಹಾಸವನ್ನು ಕೇಳಿ ಪುರುಷನು ಸುದಾರುಣ ಭ್ರೂಣಹತ್ಯಾ ಪಾಪವನ್ನೂ ಕೂಡ ನಿಸ್ಸಂಶಯವಾಗಿ ಕಳೆದುಕೊಳ್ಳಬಹುದು. ವಿಜಯಾಕಾಂಕ್ಷಿಗಳು ಜಯ ನಾಮದ ಈ ಇತಿಹಾಸವನ್ನು ಕೇಳಬೇಕು; ಅಂಥವನು ಸರ್ವ ಶತ್ರುಗಳನ್ನೂ ಪರಾಜಯಗೊಳಿಸಿ ಮಹಿಯನ್ನೇ ಜಯಿಸಬಹುದು. ರಾಣಿ ಯುವರಾಜರೀರ್ವರೂ ಇದನ್ನು ಬಹುಬಾರಿ ಕೇಳಿದರೆ ಶ್ರೇಷ್ಠ ಸಂತಾನವನ್ನು ಪಡೆದು ಮಹತ್ತರ ಕಲ್ಯಾಣವನ್ನು ಹೊಂದುತ್ತಾರೆ. ಇದು ಪುಣ್ಯಕರ ಅರ್ಥಶಾಸ್ತ್ರ ಮತ್ತು ಶ್ರೇಷ್ಠ ಧರ್ಮಶಾಸ್ತ್ರ. ಅಮಿತಬುದ್ಧಿಶಾಲಿ ವ್ಯಾಸನು ಹೇಳಿದಹಾಗೆ ಇದು ಮೋಕ್ಷಶಾಸ್ತ್ರವೂ ಹೌದು.

ಈಗ ಇದನ್ನು ಹೇಳಲಾಗುತ್ತಿದೆ ಮತ್ತು ಇದರ ನಂತರವೂ ಕಥಿಸಲಾಗುತ್ತದೆ. ಮಾತನ್ನು ಕೇಳುವ ಪುತ್ರರು ಜನಿಸುತ್ತಾರೆ ಮತ್ತು ಪ್ರಿಯಕಾರ್ಯಗಳನ್ನು ಮಾಡುವ ಸೇವಕರು ದೊರೆಯುತ್ತಾರೆ. ಇದನ್ನು ಸದಾ ಕೇಳುವ ನರನನ್ನು ಅವನು ವಾಚಾ, ಮನಸಾ ಅಥವಾ ಶರೀರದಿಂದ ಮಾಡಿದ ಪಾಪಗಳೆಲ್ಲವೂ ತಕ್ಷಣವೇ ತ್ಯಜಿಸಿಬಿಡುತ್ತವೆ. ದೂಷಿಸದೇ ಯಾರು ಭಾರತರ ಮಹಾಜನ್ಮದ ಕುರಿತು ಕೇಳುತ್ತಾರೋ ಅವರಿಗೆ ಯಾವುದೇ ವ್ಯಾಧಿಭಯವೂ ಇರುವುದಿಲ್ಲ, ಪರಲೋಕದ ಭಯವು ಎಲ್ಲಿಂದ? ಒಳ್ಳೆಯದನ್ನು ಮಾಡಲೋಸುಗ ಕೃಷ್ಣದ್ವೈಪಾಯನನು ಧನ್ಯತೆ, ಯಶಸ್ಸು, ಆಯಷ್ಯ, ಸ್ವರ್ಗ ಮತ್ತು ಪುಣ್ಯಗಳನ್ನು ತರುವಂಥಹ ಇದನ್ನು ರಚಿಸಿ, ಭೂರಿದ್ರವಿಣತೇಜಸ ಮಹಾತ್ಮ ಪಾಂಡವರ ಮತ್ತು ಇನ್ನೂ ಇತರ ಕ್ಷತ್ರಿಯರ ಕೀರ್ತಿಯನ್ನು ಲೋಕಗಳಲ್ಲಿ ಪ್ರಸರಿಸಿದನು. ಭಗವಾನ್ ಸಮುದ್ರ ಮತ್ತು ಹಿಮವತ್ಪರ್ವತಗಳು ರತ್ನನಿಧಿಗಳೆಂದು ಹೇಗೆ ಖ್ಯಾತರಾಗಿದ್ದಾರೋ ಹಾಗೆ ಭಾರತವೂ ಖ್ಯಾತಿಗೊಂಡಿದೆ. ಇಲ್ಲಿ ಇದನ್ನು ಹುಣ್ಣಿಮೆಯಲ್ಲಿ ಬ್ರಾಹ್ಮಣರಿಗೆ ಹೇಳಿದ ವಿದ್ವಾಂಸನು ಪರಲೋಕದಲ್ಲಿ ಸ್ವರ್ಗವನ್ನು ಗೆದ್ದು ಬ್ರಹ್ಮಲೋಕವನ್ನೂ ಸೇರುತ್ತಾರೆ. ಶ್ರಾದ್ಧದಲ್ಲಿ ಇದರ ಒಂದು ಶ್ಲೋಕವನ್ನಾದರೂ ಬ್ರಾಹ್ಮಣರಿಗೆ ಕೇಳಿಸುವಂತೆ ಹೇಳಿದರೆ

ಅವನ ಶ್ರಾದ್ಧವು ಅಕ್ಷಯವಾಗುತ್ತದೆ ಮತ್ತು ಪಿತೃಗಳೂ ಕೂಡ ಸಂತೃಪ್ತರಾಗುತ್ತಾರೆ. ಅಜ್ಞಾನದಿಂದ ದಿನದಲ್ಲಿ ನರನು ಮಾಡಿದ ಪಾಪವು ಭಾರತದ ಆಖ್ಯಾನವನ್ನು ಕೇಳುತ್ತಿದ್ದಂತೆ ನಶಿಸಿಹೋಗುತ್ತದೆ. ಭಾರತರ ಮಹಾಜನ್ಮವೇ ಮಹಾಭಾರತವೆಂದು ಕರೆಯಲ್ಪಟ್ಟಿದೆ. ಈ ನಿರುಕ್ತವನ್ನು ತಿಳಿದವನು ಸರ್ವಪಾಪಗಳಿಂದ ವಿಮುಕ್ತನಾಗುತ್ತಾನೆ. ಮೂರುವರ್ಷಗಳು ಪ್ರತಿದಿನವೂ ಎದ್ದು ಮುನಿ ಕೃಷ್ಣದ್ವೈಪಾಯನನು ಈ ಅನುತ್ತಮ ಮಹಾಭಾರತ ಆಖ್ಯಾನವನ್ನು ರಚಿಸಿದನು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ಕುರಿತು ಇದರಲ್ಲಿ ಏನಿವೆಯೋ ಅವು ಎಲ್ಲೆಡೆಯಲ್ಲಿಯೂ ಇವೆ. ಆದರೆ ಇಲ್ಲಿ ಇಲ್ಲದಿದ್ದದ್ದು ಎಲ್ಲಿಯೂ ಇಲ್ಲ.” ಹೀಗೆ ಹೇಳಿ ವೈಶಂಪಾಯನನು ಜನಮೇಜಯನಿಗೆ ಮಹಾಭಾರತ ಇತಿಹಾಸ ಕಥನವನ್ನು ಪ್ರಾರಂಭಿಸಿದನು.

# ಅಂಶಾವತರಣ

ಹಿಂದೆ ಜಾಮದಗ್ನಿಯು ಇಪ್ಪತ್ತೊಂದು ಬಾರಿ ಪೃಥ್ವಿಯನ್ನು ನಿಃಕ್ಷತ್ರಿಯರನ್ನಾಗಿ ಮಾಡಿ ಪರ್ವತೋತ್ತಮ ಮಹೇಂದ್ರದ ಮೇಲೆ ತಪಸ್ಸು ಮಾಡುತ್ತಿದ್ದನು. ಭಾರ್ಗವನಿಂದ ಲೋಕಗಳಲ್ಲಿ ಕ್ಷತ್ರಿಯರೇ ಇಲ್ಲದಂತಾದಾಗ ಕ್ಷಾತ್ರಿಣಿಯರು ಬ್ರಾಹ್ಮಣರಲ್ಲಿ ಗರ್ಭವನ್ನು ಬೇಡಿದರು. ಆಗ ಸಂಶಿತವ್ರತ ಬ್ರಾಹ್ಮಣರು ಋತುಮತಿಯರಾಗಿದ್ದಾಗ ಮಾತ್ರ ಸಂಭೋಗ ಮಾಡಿದರು. ಕಾಮಕ್ಕಾಗಿ ಎಂದೂ ಕೂಡಲಿಲ್ಲ. ಈ ರೀತಿಯ ಸಂಬಂಧದಿಂದ ಕ್ಷಾತ್ರಿಣಿಯರು ಸಹಸ್ರಾರು ಸಂಖ್ಯೆಯಲ್ಲಿ ಗರ್ಭಧರಿಸಿದರು ಮತ್ತು ಕ್ಷತ್ರಿಯ ವೀರಸಮನ್ವಿತ ಕುಮಾರ ಕುಮಾರಿಯರಿಗೆ ಜನ್ಮವಿತ್ತು ಪುನಃ ಕ್ಷತ್ರಿಯರ ಅಭಿವೃದ್ಧಿಯಾಯಿತು. ಈ ರೀತಿ ಸುತಪಸ್ವಿ ಬ್ರಾಹ್ಮಣರು ಮತ್ತು ಕ್ಷಾತ್ರಿಣಿಯರಿಂದ ಕ್ಷತ್ರಿಯಕುಲವು ವೃದ್ಧಿಯಾಯಿತು. ಹೊಸ ಪೀಳಿಗೆಯು ಧರ್ಮ, ಸುದೀರ್ಘಾಯಸ್ಸುಗಳನ್ನು ಹೊಂದಿದ್ದು ಬ್ರಾಹ್ಮಣರೇ ಮೊದಲಾದ ನಾಲ್ಕು ವರ್ಣಗಳ ಪುನಃಸ್ಥಾಪನೆಯಾಯಿತು. ನಾರಿಯರು ಋತುಮತಿಯರಾಗಿದ್ದಾಗ ಮಾತ್ರ ಹೋಗುತ್ತಿದ್ದರೇ ಹೊರತು ಋತುಮತಿಯಾಗಿರದಿದ್ದಾಗ ಅಥವಾ ಕಾಮಕ್ಕೋಸ್ಕರ ಹೋಗುತ್ತಿರಲಿಲ್ಲ. ಈ ರೀತಿ ಧರ್ಮಪ್ರಕಾರ ಸಹಸ್ರಶತ ಸಂಖ್ಯೆಗಳಲ್ಲಿ ಧರ್ಮವ್ರತಪರಾಯಣ ಪೃಥ್ವೀಪಾಲರು

ಜನಿಸಿದರು ಮತ್ತು ವೃದ್ಧಿಸಿದರು. ಸರ್ವ ನರರೂ ದುಃಖ ಮತ್ತು ಅನಾರೋಗ್ಯದಿಂದ ವಿಮುಕ್ತರಾಗಿದ್ದರು. ಗಜೇಂದ್ರನ ನಡೆಯ ಸಾಗರಗಳನ್ನು ಗಡಿಯಾಗಿ ಹೊಂದಿದ ಪೃಥ್ವಿಯು ಮತ್ತೊಮ್ಮೆ ಗಿರಿವನಕಾನನಗಳ ಸಮೇತ ಎದ್ದುನಿಂತಂತೆ ಆಯಿತು. ಪುನಃ ಕ್ಷತ್ರಿಯರಿಂದ ಧರ್ಮಪೂರ್ವಕವಾಗಿ ಆಳಲ್ಪಟ್ಟ ವಸುಂಧರೆಯಲ್ಲಿ ಬ್ರಾಹ್ಮಣರೇ ಮೊದಲಾದ ಅನ್ಯ ವರ್ಣದವರೂ ಉತ್ತಮ ಸಂತೋಷವನ್ನು ಹೊಂದಿದ್ದರು. ನರಾಧಿಪರೆಲ್ಲರೂ ಕಾಮ-ಕ್ರೋಧಗಳಿಂದ ಉಂಟಾಗಬಹುದಾದ ದೋಷಗಳನ್ನೆಲ್ಲ ತೊರೆದು, ದಂಡಿಸಬೇಕಾದವರಿಗೆ ದಂಡಿಸುತ್ತಾ ಧರ್ಮದಿಂದ ಬೂಮಿಯನ್ನು ಪಾಲಿಸಿದರು. ಈ ರೀತಿ ಕ್ಷತ್ರಿಯರೆಲ್ಲರೂ ಧರ್ಮಪರರಾಗಿರುವಾಗ ಸಹಸ್ರಾಕ್ಷ ಶತಕ್ರತುವು ಕಾಲಕ್ಕೆ ಸರಿಯಾಗಿ ಮಳೆಯನ್ನು ಸುರಿಸಿ ದೇಶದ ಪ್ರಜೆಗಳನ್ನೆಲ್ಲಾ ಸುಖದಿಂದ ಇರಿಸುತ್ತಿದ್ದನು. ಯಾವ ಬಾಲಕನೂ ಮರಣಹೊಂದುತ್ತಿರಲಿಲ್ಲ, ಮತ್ತು ಯೌವನ ಪ್ರಾಪ್ತವಾಗದೇ ಯಾವ ಸ್ತ್ರೀಯೂ ಮಗುವಿನ ತಾಯಿಯಾಗುತ್ತಿರಲಿಲ್ಲ. ಈ ರೀತಿ ಸಾಗರಪರ್ಯಂತವೂ ಈ ಮೇದಿನಿಯು ದೀರ್ಘಾಯುಷಿ ಪ್ರಜೆಗಳಿಂದ ತುಂಬಿತ್ತು. ಕ್ಷತ್ರಿಯರು ಬಹುದಕ್ಷಿಣೆಗಳನ್ನಿತ್ತು ಮಹಾ ಯಜ್ಞಗಳನ್ನು ನಡೆಸಿದರು ಮತ್ತು ವಿಪ್ರರು ಉಪನಿಷತ್ ಮೊದಲಾದ ಅಂಗಗಳನ್ನೊಡಗೂಡಿದ ವೇದಗಳನ್ನು ಅಭ್ಯಾಸ ಮಾಡಿದರು. ಆಗ ಯಾವ ಬ್ರಾಹ್ಮಣನೂ ಬ್ರಹ್ಮವಿದ್ಯೆಯನ್ನು ಮಾರಾಟಮಾಡುತ್ತಿರಲಿಲ್ಲ ಮತ್ತು ಶೂದ್ರರ ಎದುರಿನಲ್ಲಿ ವೇದೋಚ್ಛಾರ ಮಾಡುತ್ತಿರಲಿಲ್ಲ.

ವೈಶ್ಯರು ಈ ಕ್ಷಿತಿಯಲ್ಲಿ ಗೋವುಗಳ ಮೂಲಕ ಕೃಷಿ ಮಾಡಿದರು. ಆದರೆ ಬಡಕಲು ಗೋವುಗಳನ್ನು ಕಟ್ಟುತ್ತಿರಲಿಲ್ಲ ಮತ್ತು ಕೃಶಗೋವುಗಳಿಗೆ ಸಾಕಷ್ಟು ಆಹಾರವನ್ನು ಕೊಡುತ್ತಿದ್ದರು. ಕರುಗಳು ತಾಯಿಯ ಹಾಲನ್ನು ಮಾತ್ರ ಕುಡಿದು ಜೀವಿಸುವವರೆಗೆ ನರರು ಹಾಲನ್ನು ಕರೆಯುತ್ತಿರಲಿಲ್ಲ. ಯಾವ ವರ್ತಕನೂ ಸುಳ್ಳು ತಕ್ಕಡಿಯನ್ನು ಬಳಸಿ ಮಾರುತ್ತಿರಲಿಲ್ಲ. ಮಾನವರು ಧರ್ಮದಮೇಲೇ ದೃಷ್ಟಿಯನ್ನಿಟ್ಟುಕೊಂಡು ಧರ್ಮಪರಾಯಣರಾಗಿ ಧರ್ಮೋಪೇತ ಕರ್ಮಗಳಲ್ಲಿ ನಿರತರಾಗಿದ್ದರು. ಸರ್ವ ವರ್ಣದವರು ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿದ್ದರು. ಈ ರೀತಿ ಧರ್ಮವು ಎಂದೂ ಕುಂದಲಿಲ್ಲ. ಗೋವು ಮತ್ತು ನಾರಿಯರು ಸಕಾಲದಲ್ಲಿ ಜನ್ಮನೀಡುತ್ತಿದ್ದರು. ಮತ್ತು ವೃಕ್ಷಗಳು ಋತುವಿಗೆ ತಕ್ಕಂತೆ ಪುಷ್ಪ-ಫಲಗಳನ್ನು ನೀಡುತ್ತಿದ್ದವು. ಈ ರೀತಿ ಕೃತಯುಗವು ನಡೆಯುತ್ತಿರುವಾಗ ಈ ಭೂಮಿಯು ಬಹಳಷ್ಟು ಶ್ರೇಷ್ಠ ಪ್ರಾಣಿಗಳಿಂದ ತುಂಬಿಕೊಂಡಿತ್ತು.

ಮನುಷ್ಯಲೋಕವು ಸಮೃದ್ಧವಾಗಿರುವಾಗ ಅಸುರರು ರಾಜ ಕ್ಷತ್ರಿಯರಲ್ಲಿ ಜನಿಸತೊಡಗಿದರು. ಆದಿತ್ಯರಿಂದ ಬಹಳಷ್ಟು ಬಾರಿ ಯುದ್ಧದಲ್ಲಿ ಸೋತು ಐಶ್ವರ್ಯ ವಂಚಿತ ದೈತ್ಯರು ಕ್ಷಿತಿಯಲ್ಲಿ ಅವತರಿಸಿದರು. ಮನಸ್ವಿ ಮನುಷ್ಯರಲ್ಲಿ ದೇವತ್ವವನ್ನು ಬಯಸಿ ಆ ಅಸುರರು ಭೂಮಿಯ ಹಲವಷ್ಟು ಜೀವಿಗಳಲ್ಲಿ - ಗೋವುಗಳಲ್ಲಿ,

ಕುದುರೆಗಳಲ್ಲಿ, ಕತ್ತೆಗಳಲ್ಲಿ, ಒಂಟೆಗಳಲ್ಲಿ, ಎಮ್ಮೆಗಳಲ್ಲಿ, ಆನೆಗಳಲ್ಲಿ, ಜಿಂಕೆಗಳಲ್ಲಿ ಮತ್ತು ಅನ್ಯ ಜೀವಿಗಳಲ್ಲಿ ಜನಿಸತೊಡಗಿದರು. ಇದಾಗಲೇ ಹುಟ್ಟಿದ್ದ ಮತ್ತು ಇನ್ನೂ ಹುಟ್ಟುತ್ತಿದ್ದವರೆಲ್ಲರನ್ನೂ ಹೊತ್ತು ತನ್ನನ್ನು ತಾನು ಪೋಷಿಸಿಕೊಳ್ಳಲು ಮಹೀಧರೆಯು ಅಸಮರ್ಥಳಾದಳು. ಅವರ ಲೋಕದಿಂದ ಚ್ಯುತರಾದ ಹಲವು ದಿತಿಯ ಪುತ್ರರು ಇಲ್ಲಿ ಬಲಸಮನ್ವಿತ ಮಹೀಪಾಲರಾಗಿ ಜನಿಸಿದರು. ಆ ವೀರ್ಯವಂತರು ನಾನಾರೂಪಗಳನ್ನು ಧರಿಸಿ ಮಹಿಯಲ್ಲೆಲ್ಲಾ ತುಂಬಿಕೊಂಡರು. ಆ ಅರಿಮರ್ದನರು ಸಾಗರ ಪರ್ಯಂತ ಭೂಮಿಯಲ್ಲಿ ತುಂಬಿಕೊಂಡರು. ಅವರು ಬ್ರಾಹ್ಮಣರನ್ನು, ಕ್ಷತ್ರಿಯರನ್ನು, ವೈಶ್ಯರನ್ನು ಮತ್ತು ಶೂದ್ರರನ್ನು ಪೀಡಿಸ ತೊಡಗಿದರು ಮತ್ತು ತಮ್ಮ ಅಸುರೀ ಶಕ್ತಿಯಿಂದ ಇನ್ನೂ ಅನ್ಯ ಜೀವಿಗಳನ್ನು ಪೀಡಿಸತೊಡಗಿದರು. ಭೂತಗಣಗಳಿಗೆ ಕಷ್ಟಗಳನ್ನೀಯುತ್ತಾ, ಅವರನ್ನು ಕೊಲ್ಲುತ್ತಾ ಲಕ್ಷ ಲಕ್ಷ ಸಂಖ್ಯೆಗಳಲ್ಲಿ ಮಹಿಯ ಎಲ್ಲೆಲ್ಲೂ ಸಂಚರಿಸುತ್ತಿದ್ದರು. ವೀರ್ಯಮದ ಮತ್ತು ಮದಬಲದಿಂದ ಮತ್ತರಾದ ಆ ಅಬ್ರಾಹ್ಮಣರು ಆಶ್ರಮವಾಸಿ ಮಹರ್ಷಿಗಳನ್ನೂ ಕೂಡ ಕಾಡತೊಡಗಿದರು. ಈ ರೀತಿ ವೀರ್ಯಬಲಗಳನ್ನು ಹೊಂದಿದ ಮಹಾಸುರರಿಂದ ತುಳಿಯಲ್ಪಟ್ಟ ಭೂಮಿಯು ಬ್ರಹ್ಮನ ಬಳಿ ಹೊರಟಳು. ದಾನವರ ಬಲದಿಂದಾಗಿ ಮಹಿಯನ್ನು ಹೊರುತ್ತಿದ್ದ ನಾಗ ಮತ್ತು ಗಜಗಳು ಅವಳನ್ನು ಹೊರಲು ಅಸಮರ್ಥರಾಗಿ ರೋದಿಸುತ್ತಿದ್ದರು. ಆಗ ಮಹಿಯು ಭಾರದಿಂದ ಭಯಪೀಡಿತಳಾಗಿ

ಸರ್ವಭೂತಪಿತಾಮಹ ದೇವನನ್ನು ಶರಣು ಹೊಕ್ಕಳು.

ದೇವದ್ವಿಜಮಹರ್ಷಿಗಳಿಂದ ಆವೃತ, ಗಂಧರ್ವ ಮತ್ತು ಅಪ್ಸರೆಯರಿಂದ ನಮಸ್ಕರಿಸಿಕೊಳ್ಳುತ್ತಿರುವ, ಲೋಕಕರ್ತಾರನೂ, ಅವ್ಯಯನೂ ಆದ ಮಹಾಭಾಗ ಬ್ರಹ್ಮದೇವನನ್ನು ಕಂಡಳು. ಶರಣಾರ್ಥಿನಿಯಾದ ಭೂಮಿಯು ಲೋಕಪಾಲಕರೆಲ್ಲರ ಸನ್ನಿಧಿಯಲ್ಲಿ ಅವನಲ್ಲಿ ವಿಜ್ಞಾಪಿಸಿಕೊಂಡಳು. ಭೂಮಿಯು ಯಾವ ಕಾರಣಕ್ಕಾಗಿ ಅಲ್ಲಿಗೆ ಬಂದಿದ್ದಾಳೆ ಎನ್ನುವುದು ಪರಮೇಷ್ಠಿ ಸ್ವಯಂಭುವಿಗೆ ಮೊದಲೇ ತಿಳಿದಿತ್ತು. ಜಗತ್ತಿನ ಸೃಷ್ಟಿಯನ್ನೇ ಮಾಡುತ್ತಿರುವ ಅವನಿಗೆ ಸುರಾಸುರರ ಮತ್ತು ಉಳಿದ ಲೋಕಗಳ ಮನೋಗತವು ಹೇಗೆ ತಾನೆ ತಿಳಿದಿರುವುದಿಲ್ಲ? ಭೂಮಿಪತಿಗಳ ವಿಭು, ಸರ್ವಭೂತಗಳ ಈಶ, ಶಂಭು, ಪ್ರಜಾಪತಿಯು ಭೂಮಿಗೆ ಹೇಳಿದನು:

> “ವಸುಂಧರೆ! ನನ್ನ ಸನ್ನಿಧಿಯಲ್ಲಿ ಯಾವ ಕಾರಣಕ್ಕಾಗಿ ಬಂದಿರುವೆಯೋ ಅ ಕೆಲಸಕ್ಕೆ ಸರ್ವ ದಿವೌಕಸರನ್ನೂ ನಿಯೋಜಿಸುತ್ತೇನೆ.”

ಈ ರೀತಿ ಹೇಳಿ ದೇವನು ಮಹಿಯನ್ನು ಕಳುಹಿಸಿಕೊಟ್ಟ ನಂತರ ಸರ್ವ ದೇವತೆಗಳಿಗೆ ಈ ರೀತಿ ಆದೇಶವನ್ನಿತ್ತನು:

> “ಭೂಮಿಯ ಭಾರವನ್ನು ಕಡಿಮೆಮಾಡಲೋಸುಗ ನೀವೆಲ್ಲರು ನಿಮ್ಮ ನಿಮ್ಮ ಅಂಶಗಳನ್ನು ಅಲ್ಲಿ ಅವರಿಗೆ ವಿರೋಧಿಗಳಾಗಿ ಹುಟ್ಟಿಸಿ.”

ಹಾಗೆಯೇ ಗಂಧರ್ವ ಮತ್ತು ಅಪ್ಸರೆಯರ ಎಲ್ಲ ಗಣಗಳನ್ನೂ ಕರೆದು ಭಗವಂತನು

> "ನಿಮ್ಮ ನಿಮ್ಮ ಅಂಶಗಳಲ್ಲಿ ಮನುಷ್ಯರಲ್ಲಿ ಯಥೇಚ್ಛವಾಗಿ ಜನ್ಮತಾಳಿ"

ಎಂದು ಉತ್ತಮ ಮಾತುಗಳನ್ನಾಡಿದನು. ಶಕ್ರಾದಿ ಸರ್ವರೂ ಸುರಗುರುವಿನ ಈ ತತ್ವಯುತ, ಅರ್ಥಯುತ ಒಳ್ಳೆಯ ಮಾತುಗಳನ್ನು ಕೇಳಿ ಅದನ್ನು ಸ್ವೀಕರಿಸಿದರು.

ಅದರಂತೆ ತಮ್ಮ ತಮ್ಮ ಅಂಶಗಳಲ್ಲಿ ಭೂಮಿಗೆ ಹೋಗಿ ಜನಿಸುವ ನಿಶ್ಚಯವನ್ನು ಕೈಗೊಂಡ ಸರ್ವರೂ ವೈಕುಂಠದಲ್ಲಿರುವ ಅಮಿತ್ರಘ್ನ ನಾರಯಣನಲ್ಲಿಗೆ ಹೋದರು. ಅಲ್ಲಿ ಅವರು ಚಕ್ರಗದಾಪಾಣಿ, ಪೀತವಸ್ತ್ರದಲ್ಲಿ ಅಸಿತಪ್ರಭನಾಗಿ ಶೋಭಿಸುತ್ತಿರುವ ಸುರಾರಿಘ್ನ, ತನ್ನ ವಿಶಾಲ ಎದೆಯನ್ನೇ ನೋಡುತ್ತಿದ್ದ, ಪದ್ಮನಾಭನನ್ನು ಕಂಡರು. ಪುರುಷೋತ್ತಮನಿಗೆ ಇಂದ್ರನು "ಭೂಮಿಯಲ್ಲಿ ಅವತರಿಸು" ಎನ್ನಲಾಗಿ ಹರಿಯು "ಹಾಗೆಯೇ ಆಗಲಿ" ಎಂದನು.

ಆಗ ಇಂದ್ರನು ನಾರಾಯಣನಲ್ಲಿ ಸುರರೊಂದಿಗೆ ಸ್ವರ್ಗದಿಂದ ಭೂಮಿಗಿಳಿದು ನಮ್ಮ ನಮ್ಮ ಅಂಶಗಳಿಂದ ಅವತರಿಸಿತೋಣ ಎಂದು ಒಪ್ಪಂದ ಮಾಡಿಕೊಂಡನು. ಸ್ವಯಂ ಶಕ್ರನೇ ಸರ್ವ ದಿವೌಕಸರಿಗೆ ಆದೇಶವನ್ನಿತ್ತು ನಾರಾಯಣನ ನಿವಾಸದಿಂದ ಹಿಂದಿರುಗಿದನು. ಅಮರ ಶತ್ರುಗಳ ವಿನಾಶಕ್ಕಾಗಿ ಮತ್ತು



ಸರ್ವಲೋಕಹಿತಕ್ಕಾಗಿ ದಿವೌಕಸರು ಕ್ರಮೇಣವಾಗಿ ಸ್ವರ್ಗದಿಂದ ಭೂಮಿಗಿಳಿದರು. ದಿವೌಕಸರು ಅವರಿಗಿಷ್ಟವಾದಂತೆ ಬ್ರಹ್ಮರ್ಷಿ ವಂಶಗಳಲ್ಲಿ ಮತ್ತು ರಾಜರ್ಷಿ ಕುಲಗಳಲ್ಲಿ ಜನ್ಮತಾಳಿದರು. ಅವರು ಅನೇಕ ಸಂಖ್ಯೆಗಳಲ್ಲಿ ದಾನವ, ರಾಕ್ಷಸ, ಗಂಧರ್ವ, ನಾಗ ಮತ್ತು ಇತರ ನರಭಕ್ಷಕರನ್ನು ಸಂಹರಿಸಿದರು. ದಾನವರಿಗಾಗಲೀ ರಾಕ್ಷಸರಿಗಾಗಲೀ ಗಂಧರ್ವರಿಗಾಗಲೀ ಅಥವಾ ನಾಗಗಳಿಗಾಗಲೀ ಬಲಶಾಲಿಗಳಾದ ಅವರನ್ನು ಬಾಲ್ಯದಲ್ಲಿಯೂ ಕೊಲ್ಲಲಿಕ್ಕಾಗಲಿಲ್ಲ.

ವಿಪ್ರಚಿತ್ತಿ ಎಂಬ ಖ್ಯಾತ ದಾನವರ್ಷಭನಿದ್ದನು. ಅವನು ಮನುಜರ್ಷಭ ಜರಾಸಂಧನೆಂದು ವಿಖ್ಯಾತನಾದನು. ದಿತಿಯ ಪುತ್ರ ಹಿರಣ್ಯಕಶಿಪುವು ಮನುಷ್ಯಲೋಕದಲ್ಲಿ ನರರ್ಷಭ ಶಿಶುಪಾಲನಾಗಿ

ಜನಿಸಿದನು. ಸಂಹ್ಲಾದನೆಂದು ವಿಖ್ಯಾತ ಪ್ರಹ್ಲಾದನ ಅನುಜನು ಬಾಹ್ಲೀಕಪುಂಗವ ಶಲ್ಯನಾಗಿ ಜನಿಸಿದನು. ಸಹೋದರರಲ್ಲಿ ಕಿರಿಯವ ತೇಜಸ್ವಿ ಅನುಹ್ಲಾದನು ಮನುಜೇಶ್ವರ ಧೃಷ್ಟಕೇತುವೆಂದು ಖ್ಯಾತನಾದನು. ರಾಜ ಶಿಬಿ ಎಂಬ ಹೆಸರಿನಿಂದ ಕರೆಯಲ್ಪಟ್ಟ ದಿತಿಯ ಮಗನು ಭೂಮಿಯ ಮೇಲೆ ದ್ರುಮ ಎಂಬ ಪಾರ್ಥಿವನಾಗಿ ವಿಖ್ಯಾತನಾದನು. ಬಾಷ್ಕಲ ಎಂಬ ಹೆಸರಿನ ಅಸುರಸತ್ತಮನು ಭಗದತ್ತನೆಂಬ ಮನುಜೇಶ್ವರನಾಗಿ ಖ್ಯಾತಿ ಹೊಂದಿದನು. ಅಯಃಶಿರ, ಅಶ್ವಶಿರ, ವೀರ್ಯವಾನ್ ಅಯಃಶಂಕು, ಗಗನಮೂರ್ಧಾ ಮತ್ತು ಐದನೆಯವನು ವೇಗವಾನ್ ಈ ಐವರು ವೀರ್ಯವಂತ ಮಹಾಸುರರು ಕೇಕಯರಲ್ಲಿ ಮಹಾತ್ಮ ಪಾರ್ಥಿವರ್ಷಭಸತ್ತಮರಾಗಿ ಜನಿಸಿದರು. ಇನ್ನೊಬ್ಬ ಪ್ರತಾಪವಾನ್ ಕೇತುಮಾನನೆಂದು ವಿಖ್ಯಾತ ಅಸುರನು ಪೃಥ್ವಿಯಲ್ಲಿ ಅಮಿತೌಜನೆಂಬ ರಾಜನಾಗಿ ಖ್ಯಾತನಾದನು. ಶ್ರೀಮಾನ್ ಸ್ವರ್ಭಾನುವೆಂದು ವಿಖ್ಯಾತ ಮಹಾಸುರನು ಉಗ್ರಕರ್ಮಿ ಉಗ್ರಸೇನನೆಂಬ ನರಾಧಿಪನಾಗಿ ಖ್ಯಾತನಾದನು. ಅಶ್ವ ಎಂದು ವಿಖ್ಯಾತ ಶ್ರೀಮಾನ್ ಮಹಾಸುರನು ಮಹಾ ವೀರ್ಯಪರಾಕ್ರಮಿ ಅಶೋಕ ಎಂಬ ಹೆಸರಿನ ರಾಜನಾದನು. ಆ ದೈತ್ಯನ ತಮ್ಮ ರಾಜ ಅಶ್ವಪತಿಯು ಮನುಜರ್ಷಭ ಹಾರ್ದಿಕ್ಯ ರಾಜನಾದನು. ವೃಶಪರ್ವನೆಂದು ವಿಖ್ಯಾತ ಶ್ರೀಮಾನ್ ಮಹಾಸುರನು ಪೃಥ್ವಿಯಲ್ಲಿ ದೀರ್ಘಪ್ರಜ್ಞನೆಂಬ ರಾಜನಾಗಿ ಖ್ಯಾತಿಗೊಂಡನು. ವೃಷಪರ್ವನ ಅನುಜ ಅಜಕನು ಪೃಥ್ವಿಯಲ್ಲಿ ನೃಪ ಮಲ್ಲನಾಗಿ ವಿಖ್ಯಾತನಾದನು.

ಅಶ್ವಗ್ರೀವನೆಂದು ಖ್ಯಾತ ಸತ್ವವಾನ್ ಮಹಾಸುರನು ಪೃಥ್ವಿಯಲ್ಲಿ ನೃಪ ರೋಚಮಾನನಾಗಿ ಖ್ಯಾತಿ ಹೊಂದಿದನು. ಮತಿವಂತನೂ ಕೀರ್ತಿವಂತನೂ ಆದ ಸೂಕ್ಷ್ಮನು ಬೃಹಂತ ಎನ್ನುವ ಪಾರ್ಥಿವನಾಗಿ ವಿಖ್ಯಾತನಾದನು. ತುಹುಂಡನೆಂದು ವಿಖ್ಯಾತ ಅಸುರೋತ್ತಮನು ನರಾಧಿಪ ಸೇನಾಬಿಂದುವೆಂದು ಖ್ಯಾತನಾದನು. ಇಸೃಪಾ ಎಂಬ ಅಧಿಕ ಬಲಶಾಲಿ ಅಸುರನು ಭೂಮಿಯಲ್ಲಿ ಅತಿವಿಕ್ರಮ ಪಾಪಜಿ ಎಂಬ ಹೆಸರಿನ ರಾಜನಾಗಿ ವಿಖ್ಯಾತನಾದನು. ಏಕಚಕ್ರ ಎಂದು ಖ್ಯಾತ ಮಹಾಸುರನು ಕ್ಷಿತಿಯಲ್ಲಿ ಪ್ರತಿವಿಂದ್ಯ ಎಂಬ ಹೆಸರಿನಲ್ಲಿ ಖ್ಯಾತನಾದನು. ದೈತ್ಯ ಚಿತ್ರಯೋಧಿ ಮಹಾಸುರ ವಿರೂಪಾಕ್ಷನು ಭೂಮಿಯಲ್ಲಿ ಪಾರ್ಥಿವ ಚಿತ್ರವರ್ಮನೆಂದು ವಿಖ್ಯಾತನಾದನು. ಅರಿಹರನೂ ವೀರನೂ ದಾನವೋತ್ತಮನೂ ಆದ ಹರನು ಮನುಜರ್ಷಭ ಸುವಾಸ್ತುವಾಗಿ ಜನಿಸಿ ವಿಖ್ಯಾತನಾದನು. ಶತ್ರುಪಕ್ಷಕ್ಷಯಂಕರನೂ ಮಹಾತೇಜಸ್ವಿಯೂ ಆದ ಅಹರನು ಭೂಮಿಯಲ್ಲಿ ಬಾಹ್ಲೀಕ ಎಂಬ ಹೆಸರಿನ ರಾಜನಾದನು. ಅಸುರೋತ್ತಮ ಚಂದ್ರವಕ್ಷಸ ನಿಚಂದ್ರನು ಮುಂಜಕೇಶನೆಂಬ ಶ್ರೀಮಾನ ಪಾರ್ಥಿವನಾಗಿ ಖ್ಯಾತಿಹೊಂದಿದ್ದನು.  ಯುದ್ಧದಲ್ಲಿ ಅಜೇಯನಾದ ನಿಕುಂಭನು ಭೂಮಿಯಲ್ಲಿ ಮಹಾಮತಿ, ಶ್ರೇಷ್ಠ ಭೂಮಿಪತಿ ದೇವಾಧಿಪನೆಂದು ಹುಟ್ಟಿ ವಿಶ್ರುತನಾದನು. ದೈತ್ಯರಲ್ಲಿ ಶರಭ ಎಂಬ ಹೆಸರಿನ ಮಹಾಸುರನು ನರರಲ್ಲಿ ಪೌರವ ಎಂಬ ಹೆಸರಿನ ರಾಜರ್ಷಿಯಾದನು.  ಅಸುರರಲ್ಲಿ ಎರಡನೆಯ ಶಲಭನು

ಪ್ರಹ್ರಾದ ಎಂಬ ಹೆಸರಿನಲ್ಲಿ ಬಾಹ್ಲೀಕ ನರಾಧಿಪನಾದನು. ಲೋಕಗಳಲ್ಲಿ ದಿತಿಜಶ್ರೇಷ್ಠ ತಾರಾಧಿಪನಂತಿದ್ದ ಚಂದ್ರನು ನೃಪಸತ್ತಮ ರಾಜರ್ಷಿ ಋಷಿಕ ಎಂಬ ಹೆಸರನ್ನು ಪಡೆದನು. ಮೃತಪ ಎಂದು ವಿಖ್ಯಾತ ಅಸುರೋತ್ತಮನು ನೃಪಸತ್ತಮ ನೃಪ ಪಶ್ಚಿಮಾನೂಪಕನು. ಮಹಾಸುರರಲ್ಲಿ ಪ್ರಖ್ಯಾತ ಮಹಾತೇಜಸ್ವಿ ಗವಿಷ್ಠನು ಪೃಥ್ವಿಯಲ್ಲಿ ದ್ರುಮಸೇನನೆಂಬ ನೃಪನಾಗಿ ಖ್ಯಾತಿಹೊಂದಿದನು. ಮಹಾಸುರರಲ್ಲಿ ವಿಖ್ಯಾತ ಶ್ರಿಮಾನ್ ಮಯೂರನು ಪೃಥ್ವಿವೀಪತಿ ವಿಶ್ವ ಎಂದು ವಿಖ್ಯಾತನಾದನು. ಸುಪರ್ಣನೆಂದು ವಿಖ್ಯಾತ ಅವನ ತಮ್ಮನು ಪೃಥ್ವಿಯಲ್ಲಿ ಕಾಲಕೀರ್ತಿ ಎಂಬ ರಾಜನಾಗಿ ಖ್ಯಾತನಾದನು. ಅಸುರಪ್ರವರರಲ್ಲಿ ಚಂದ್ರಹಂತನೆಂದು ಕೀರ್ತಿತನಾದವನು ಶುನಕ ಎಂಬ ಹೆಸರಿನ ನರಾಧಿಪ ರಾಜರ್ಷಿಯಾದನು. ಚಂದ್ರವಿನಾಶನನೆಂದು ಖ್ಯಾತಿಹೊಂದಿದ್ದ ಮಹಾಸುರನು ಜಾನಕಿ ಎಂಬ ಹೆಸರಿನ ನರಾಧಿಪ ರಾಜರ್ಷಿಯಾದನು. ದಾನವರ್ಷಭನೆಂದು ಕರೆಯಲ್ಪಟ್ಟ ದೀರ್ಘಜಿಹ್ವನು ಪೃಥ್ವಿಯಲ್ಲಿ ಪೃಥ್ವೀಪತಿ ಕಾಶಿರಾಜನೆಂದು ಖ್ಯಾತನಾದನು. ಸಿಂಹಿಕೆಯಲ್ಲಿ ಹುಟ್ಟಿ ಸೂರ್ಯಚಂದ್ರರ ಮರ್ದನಮಾಡಿದ ಗ್ರಹವು ಮನುಜಾಧಿಪ ಕ್ರಾಥ ಎಂದು ವಿಖ್ಯಾತನಾದನು. ಅನಾಯುವಿನ ನಾಲ್ವರು ಮಕ್ಕಳಲ್ಲಿ ಹಿರಿಯವನಾದ ವಸುಮಿತ್ರನು ವಿಕ್ಷರನೆಂಬ ಹೆಸರಿನ ತೇಜಸ್ವಿ ನೃಪನಾದನು. ವಿಕ್ಷರ ಮಹಾಸುರನ ಎರಡನೆಯ ತಮ್ಮನು ನೃಪ

ಪಾಂಸುರಾಷ್ಟ್ರಾಧಿಪನಾಗಿ ವಿಶ್ರುತನಾದನು. ಬಲವೀರನೆಂದು ಖ್ಯಾತ ಅಸುರೋತ್ತಮನು ಪೌಂಡ್ರಮತ್ಸ್ಯಕನೆಂಬ ನರಾಧಿಪನಾದನು. ವೃತ್ರ ಎಂದು ವಿಖ್ಯಾತ ಮಹಾಸುರನು ಮಣಿಮಾನ್ ಎಂಬ ಹೆಸರಿನ ರಾಜರ್ಷಿ ನರಾಧಿಪನಾದನು. ಅವನ ತಮ್ಮ ಕ್ರೋಧಹಂತನು ಭೂಮಿಯಲ್ಲಿ ನೃಪತಿ ದಂಡನೆಂದು ಅಭಿವಿಖ್ಯಾತನಾದನು. ಕ್ರೋಧವರ್ಧನನೆನ್ನುವವನು ದಂಡಧಾರನೆಂಬ ಮನುಜೇಶ್ವರನಾಗಿ ಖ್ಯಾತನಾದನು. ಕಾಲಕಾಯನ ಎಂಟು ಪುತ್ರರು ಶಾರ್ದೂಲಸಮವಿಕ್ರಮ ನರಾಧಿಪ ರಾಜಶಾರ್ದೂಲರಾಗಿ ಜನಿಸಿದರು. ಈ ಎಂಟು ಕಾಲಕೇಯ ಮಹಾಸುರರಲ್ಲಿ ಮೊದಲನೆಯವನು ಮಗಧದ ಶ್ರೀಮಾನ್ ರಾಜ ಜಯತ್ಸೇನನಾದನು. ಅವರಲ್ಲಿ ಎರಡನೆಯವನು ಶ್ರೀಮಾನ್ ಇಂದ್ರನ ಸಮ ನರಾಧಿಪ ಅಪರಾಜಿತನಾದನು. ಮಹಾಬಾಹುವಾದ ಮೂರನೆಯ ಮಹಾಸುರನು ಭುವಿಯಲ್ಲಿ ಭೀಮಪರಾಕ್ರಮಿ ನಿಷಾದಾಧಿಪತಿಯಾಗಿ ಜನಿಸಿದನು. ಅವರಲ್ಲಿ ಇನ್ನೊಬ್ಬ ನಾಲ್ಕನೆಯವನು ಭೂಮಿಯಲ್ಲಿ ರಾಜರ್ಷಿಸತ್ತಮ ಶ್ರೇಣಿಮಾನ್ ಎಂದು ವಿಖ್ಯಾತನಾಗಿದ್ದಾನೆ. ಇವರಲ್ಲಿ ಐದನೆಯ ಮಹಾಸುರನು ಪರಂತಪ ಮಹೌಜ ಎಂದು ವಿಖ್ಯಾತನಾದನು. ಆರನೆಯ ಮತಿವಂತ ಮಹಾಸುರನು ಭೂಮಿಯಲ್ಲಿ ರಾಜರ್ಷಿಸತ್ತಮ ಅಭೀರು ಎಂದು ವಿಖ್ಯಾತನಾದನು.

ಅದೇ ಗಣದಲ್ಲಿದ್ದ ಒಬ್ಬನು ಭೂಮಿಯಲ್ಲಿ ಸಾಗರ ಪರ್ಯಂತವೂ ಪ್ರಸಿದ್ಧ ಧರ್ಮಾರ್ಥತತ್ವವನ್ನು ತಿಳಿದಿದ್ದ ನೃಪತಿ ಸಮುದ್ರಸೇನನಾದನು. ಆ ಕಾಲೇಯರಲ್ಲಿ ಎಂಟನೆಯ ಪರಂತಪ ಬೃಹನನು ಸರ್ವಭೂತಹಿತೋರತ ಧರ್ಮಾತ್ಮ ರಾಜನಾದನು. ಕ್ರೋಧವಶ ಎಂಬ ಹೆಸರಿನಿಂದ ಕರೆಯಲ್ಪಟ್ಟ ಗಣದಿಂದ ಈ ಕ್ಷಿತಿಯಲ್ಲಿ ಬಹಳಷ್ಟು ವೀರರು ನರಾಧಿಪರಾಗಿ ಜನ್ಮತಾಳಿದರು. ಅವರ ಹೆಸರುಗಳು ಇಂತಿವೆ: ನಂದಿಕ, ಕರ್ಣವೇಷ್ಟ, ಸಿದ್ಧಾರ್ಥ, ಕೀಟಕ, ಸುವೀರ, ಸುಬಾಹು, ಮಹಾವೀರ, ಬಾಹ್ಲೀಕ, ಕ್ರೋಧ, ವಿಚಿತ್ಯ, ಸುರಸ, ಭೂಮಿಪ ಶ್ರೀಮಾನ್ ನೀಲ, ಮತ್ತು ವೀರಧಾಮ. ಇನ್ನೂ ಇತರರು ಭೂಮಿಪಾಲ, ದಂತವಕ್ತ್ರ, ದುರ್ಜಯ, ನೃಪಶಾರ್ದೂಲ ರಾಜಾ ರುಕ್ಮಿ, ಆಶಾಢ, ವಾಯುವೇಗ, ಭೂರಿತೇಜ, ಏಕಲವ್ಯ, ಸುಮಿತ್ರ, ವಾಟದಾನ, ಗೋಮುಖ, ಕಾರೂಷಕ, ರಾಜ ಕ್ಷೇಮಧೂರ್ತಿ, ಶೃತಾಯು, ಉದ್ಧವ, ಬೃಹತ್ಸೇನ, ಕ್ಷೇಮ, ಉಗ್ರತೀರ್ಥ, ಕುಹರ, ಕಲಿಂಗ ನರಾಧಿಪ, ಮತಿಮಾನ್, ಈಶ್ವರನೆಂದು ಪ್ರಸಿದ್ಧನಾದ ಮನುಷ್ಯೇಂದ್ರ, ಇವರೆಲ್ಲರೂ ಕ್ರೋಧವಶ ಗಣಕ್ಕೆ ಸೇರಿದ್ದು ಭೂಮಿಯಲ್ಲಿ ಮಹಾಕೀರ್ತಿವಂತರಾದ ಮಹಾಬಲಶಾಲಿಗಳಾದ ರಾಜರಾಗಿ ಹುಟ್ಟಿದರು.

ದೇವರಾಜಸಮದ್ಯುತಿ ದೇವಕ ಎಂಬ ಹೆಸರಿನವನು ಭೂಮಿಯಲ್ಲಿ ಗಂಧರ್ವಪತಿ ಮುಖ್ಯನಾಗಿ ಜನಿಸಿದನು. ಅಯೋನಿಜ ಭರದ್ವಾಜನ

ಮಗ ದ್ರೋಣನು ಮಹಾ ಕೀರ್ತಿವಂತ ದೇವರ್ಷಿ ಬೃಹಸ್ಪತಿಯ ಒಂದು ಅಂಶದಿಂದ ಉತ್ಪನ್ನನಾದನು. ಅವನು ಧನ್ವಿಗಳಲ್ಲೆಲ್ಲ ಶ್ರೇಷ್ಠನಾಗಿದ್ದು ಸರ್ವಾಸ್ತ್ರ ವಿತ್ತಮನೂ ಮಹಾಕೀರ್ತಿವಂತನೂ ಮಹಾತೇಸ್ವಿಯೂ ಆಗಿ ಇಲ್ಲಿ ಮನುಷ್ಯರಲ್ಲಿ ಜನಿಸಿದನು. ಧನುರ್ವೇದದಲ್ಲಿಯೂ ವೇದಗಳಲ್ಲಿಯೂ ಪಂಡಿತನೆಂದು ತಿಳಿಯಲ್ಪಟ್ಟಿದ್ದ ಆ ದ್ರೋಣನು ಮಹಾ ಅದ್ಭುತ ಕಾರ್ಯಗಳನ್ನೆಸಗಿ ತನ್ನ ಕುಲದ ಕೀರ್ತಿಯನ್ನು ವೃದ್ಧಿಸಿದನು. ಮಹಾದೇವ, ಅಂತಕ ಯಮ, ಕಾಮ ಮತ್ತು ಕ್ರೋಧಗಳ ಏಕತ್ವದಿಂದ ಶೂರನೂ ಪರಂತಪನು ಮಹಾವೀರ್ಯನೂ ಶತ್ರುಪಕ್ಷ ಕ್ಷಯಂಕರನೂ ಕಮಲಪತ್ರಾಕ್ಷನೂ ವೀರನೂ ಆದ ಅಶ್ವತ್ಥಾಮನು ಭೂಮಿಯಲ್ಲಿ ಜನಿಸಿದನು. ವಸಿಷ್ಠನ ಶಾಪ ಮತ್ತು ವಾಸವನ ನಿರ್ದೇಶನದಂತೆ ಅಷ್ಟ ವಸುಗಳು ಗಂಗೆಯಲ್ಲಿ ಶಂತನುವಿನ ಸುತರಾಗಿ ಜನಿಸಿದರು. ಅವರಲ್ಲಿ ಕಿರಿಯವನೇ ಕುರುಗಳಿಗೆ ಅಭಯಕಾರಕ, ಮತಿವಂತ, ವೇದವಿದು, ವಾಗ್ಮಿ, ಶತ್ರುಪಕ್ಷ ಕ್ಷಯಂಕರ ಭೀಷ್ಮ. ಆ ಸರ್ವವಿದರಲ್ಲಿ ಶ್ರೇಷ್ಠನು ಮಹಾತೇಜಸ್ವಿ, ಮಹಾತ್ಮ ಭಾರ್ಗವ ಜಮದಗ್ನಿಯ ಮಗ ರಾಮನೊಂದಿಗೆ ಯುದ್ಧಗೈದನು.

ಕ್ಷಿತಿಯಲ್ಲಿ ಹುಟ್ಟಿದ ಅತಿಪೌರುಷನಾದ ಕೃಪ ಎಂಬ ಹೆಸರಿನ ಬ್ರಹ್ಮರ್ಷಿಯು ರುದ್ರರ ಗಣಗಳಿಂದ ಹುಟ್ಟಿದನು. ಲೋಕದಲ್ಲಿ ಮಹಾರಥಿ ಶಕುನಿ ಎಂಬ ಹೆಸರಿನ ಯಾವ ರಾಜನಿದ್ದನೋ ಅವನು

ಅರಿಮರ್ದನಾದ ದ್ವಾಪರನಿಂದ ಸಂಭವಿಸಿದನು. ವೃಷ್ಣಿಕುಲೋದ್ವಹ, ಸತ್ಯಸಂಧ ಅರಿಮರ್ದನ ಸಾತ್ಯಕಿಯು ದೇವತೆಗಳಾದ ಮರುತರ ಅಂಶದಿಂದ ಹುಟ್ಟಿದನು. ಈ ಮನುಷ್ಯ ಲೋಕದಲ್ಲಿ ಸರ್ವ ಶಸ್ತ್ರಭೃತರಲ್ಲಿ ಶ್ರೇಷ್ಠ ರಾಜರ್ಷಿ ದ್ರುಪದನೂ ಕೂಡ ಅದೇ ಗಣಗಳ ಅಂಶದಿಂದ ಸಂಭವಿಸಿದನು. ಅಪ್ರತಿಮ ಕರ್ಮಣಿ, ಕ್ಷತ್ರಿಯರ್ಷಭ, ಸತ್ತಮ, ಜನಾಧಿಪ ಕೃತವರ್ಮನೂ ಮತ್ತು ಅರಿಮರ್ದನ, ಪರರಾಷ್ಟ್ರಪ್ರತಾಪಿ, ವಿರಾಟನೆಂಬ ಹೆಸರಿನ ರಾಜರ್ಷಿಯೂ ಆ ಮರುತ ಗಣಗಳಿಂದಲೇ ಸಂಭವಿಸಿದರು. ಹಂಸನೆಂದು ವಿಖ್ಯಾತ ಗಂಧರ್ವಪತಿ ಅರಿಷ್ಟನ ಪುತ್ರನು ಕೃಷ್ಣದ್ವೈಪಾಯನನಿಂದ ಧೃತರಾಷ್ಟ್ರನೆಂದು ಖ್ಯಾತ ಕುರುವಂಶ ವಿವರ್ಧನನಾಗಿ ಜನಿಸಿದನು. ತಾಯಿಯ ದೋಷ ಮತ್ತು ಋಷಿಯ ಕೋಪದಿಂದ ಆ ದೀರ್ಘಬಾಹು ಮಹಾತೇಜಸ್ವಿ ಪ್ರಜ್ಞಾಚಕ್ಷು ನರಾಧಿಪನು ಕುರುಡನಾಗಿ ಹುಟ್ಟಿದನು. ಈ ಲೋಕದಲ್ಲಿ ಹುಟ್ಟಿದ ಬದ್ಧಿವಂತರಲ್ಲೆಲ್ಲಾ ಶ್ರೇಷ್ಠ ವಿದುರನು ಪುತ್ರವಂತರಲ್ಲೆಲ್ಲಾ ಶ್ರೇಷ್ಠ ಅತ್ರಿಯ ಸುಮಹಾಭಾಗ ಪುತ್ರನು. ದುರ್ಬುದ್ಧಿಯೂ ದುರ್ಮತಿಯೂ, ಕುರುಗಳನ್ನು ಅಪಕೀರ್ತಿಗೊಳಿಸಿದ ನೃಪ ದುರ್ಯೋಧನನು ಭುವಿಯಲ್ಲಿ ಕಲಿಯ ಅಂಶದಿಂದ ಜನಿಸಿದನು. ಜಗತ್ತಿನ ಸರ್ವಸ್ವವನ್ನು ನಾಶಪಡಿಸಿದ ಆ ಕಲಿಪುರುಷ ಪುರುಷಾಧಮನು ಪೃಥ್ವಿಯ ಸರ್ವವನ್ನೂ ಸಂಹರಿಸಿದನು. ಅವನಿಂದ ಕಿಚ್ಚೆಬ್ಬಿಸಿದ ವೈರದ ಮಹಾ ಬೆಂಕಿಯು ಸರ್ವ ಭೂತಗಳ ಅಂತ್ಯಕ್ಕೆ ಕಾರಣವಾಯಿತು.

ಪುಲಸ್ತ್ಯನ ಪುತ್ರರೆಲ್ಲರೂ ಇಲ್ಲಿ ಮನುಷ್ಯರೊಡನೆ ದುಃಶಾಸನನೇ ಮೊದಲಾಗಿ ದುರ್ಮುಖ, ದುಃಸಹ ಮತ್ತು ಇಲ್ಲಿ ಹೆಸರಿಸದೇ ಇದ್ದ ಅವನ ಇತರ ನೂರು ಸಹೋದರರಾಗಿ ಜನಿಸಿದರು. ಎಲ್ಲರೂ ಕ್ರೂರಕರ್ಮಿಗಳಾಗಿದ್ದು ದುರ್ಯೋಧನನ ಸಹಾಯಕ್ಕೆಂದು ಜನಿಸಿದ್ದ ಪೌಲಸ್ತ್ಯರು.

ರಾಜ ಯುಧಿಷ್ಠಿರನು ಧರ್ಮ, ಭೀಮಸೇನನು ವಾಯು ಮತ್ತು ಅರ್ಜುನನು ದೇವರಾಜನ ಅಂಶಗಳು. ಹಾಗೆಯೇ ಭೂಮಿಯಲ್ಲಿ ರೂಪದಲ್ಲಿ ಅಪ್ರತಿಮ, ಸರ್ವಲೋಕಮನೋಹರ ನಕುಲ ಸಹದೇವರು ಅಶ್ವಿನೀ ದೇವತೆಗಳ ಅಂಶಗಳು. ಪ್ರತಾಪವಾನ್, ಸುವರ್ಚನೆಂದು ಖ್ಯಾತ ಸೋಮಪುತ್ರನು ಅರ್ಜುನನ ಬೃಹತ್ಕೀರ್ತಿವಂತ ಮಗನಾಗಿ ಜನಿಸಿದನು. ಮಹಾರಥಿ ದೃಷ್ಟದ್ಯುಮ್ನನು ಅಗ್ನಿಯ ಅಂಶ. ಮೊದಲು ಸ್ತ್ರೀಯಾಗಿ ಹುಟ್ಟಿದ್ದ ಶಿಖಂಡಿಯು ರಾಕ್ಷಸನ ಅಂಶ. ದ್ರೌಪದಿಯ ಐವರು ಮಕ್ಕಳು ವಿಶ್ವೇದೇವ ಗಣಗಳಿಂದ. ಆಮುಕ್ತಕವಚ ಮತ್ತು ಕುಂಡಲಗಳೊಂದಿಗೆ ಜನಿಸಿದ ಮಹಾರಥಿಯು ದೇವತೆ ದಿವಾಕರನ ಅನುತ್ತಮ ಅಂಶದಿಂದ.

ನಾರಾಯಣನೆಂಬ ಹೆಸರಿನ ಯಾವ ಸನಾತನ ದೇವದೇವನಿದ್ದಾನೋ ಅವನ ಅಂಶವೇ ಮನುಷ್ಯರಲ್ಲಿ ಹುಟ್ಟಿದ ಪ್ರತಾಪಿ ವಾಸುದೇವ. ಮಹಾಬಲಿ ಬಲದೇವನು ನಾಗ ಶೇಷನ ಅಂಶ ಮತ್ತು ಮಹೌಜಸ

ಪ್ರದ್ಯುಮ್ನನು ಸನತ್ಕುಮಾರ. ಈ ರೀತಿ ದಿವೌಕಸರ ಬಹಳಷ್ಟು ಅಂಶಗಳು ವಾಸುದೇವನ ಕುಲದಲ್ಲಿ ಅನ್ಯ ಕುಲವಿವರ್ಧನ ಮನುಷ್ಯೇಂದ್ರರಾಗಿ ಜನಿಸಿದರು. ವಾಸವನ ನಿಯೋಗದಂತೆ ಅಪ್ಸರಗಣಗಳ ಅಂಶಗಳೂ ಕ್ಷಿತಿಯಲ್ಲಿ ಜನ್ಮತಾಳಿದವು. ಅವರೆಲ್ಲರೂ ಹದಿನಾರು ಸಾವಿರ ದೇವಿಯರಾಗಿ ಮನುಷ್ಯಲೋಕದಲ್ಲಿ ನಾರಾಯಣನ ಪತ್ನಿಯರಾಗಿ ಜನಿಸಿದರು. ಅನಿಂದಿತಾ ಶ್ರೀಯ ಒಂದಂಶವು ಭೂಮಿಯಮೇಲೆ ಆಡಲೋಸುಗ ದ್ರುಪದನ ಕುಲದಲ್ಲಿ ಮಗಳಾಗಿ ವೇದಿಮಧ್ಯದಿಂದ ಜನಿಸಿದಳು. ಅವಳು ಸಣ್ಣವಳಾಗಿಯೂ ಇರಲಿಲ್ಲ. ದೊಡ್ಡವಳಾಗಿಯೂ ಇರಲಿಲ್ಲ. ನೀಲಿಯ ಕಮಲದ ಸುಗಂಧವನ್ನು ಹೊಂದಿದ್ದಳು. ಪದ್ಮಾಯತಾಕ್ಷಿಯಾದ, ಸುಂದರ ಕೂದಲುಗಳನ್ನು ಹೊಂದಿದ್ದ, ದುಂಡಾಗಿರುವ ಸುಂದರ ತೊಡೆಗಳನ್ನುಳ್ಳ, ವೈಡೂರ್ಯ ಮಣಿಸನ್ನಿಭಳಾದ, ಸರ್ವಲಕ್ಷಣಸಂಪನ್ನಳಾದ ಅವಳು ಐದೂ ಪುರುಷೇಂದ್ರರ ಚಿತ್ತಗಳನ್ನು ಕಡೆಯುವಂತಿದ್ದಳು. ಸಿದ್ಧಿ ಮತ್ತು ಧೃತಿ ದೇವಿಯರು ಆ ಐವರುಗಳ ತಾಯಿಯರಾದ ಕುಂತಿ ಮತ್ತು ಮಾದ್ರಿಯರಾಗಿ ಜನಿಸಿದರು. ದೇವಿ ಮತಿಯು ಸುಬಲನ ಮಗಳಾಗಿ ಜನಿಸಿದಳು. ಈ ರೀತಿ ದೇವಾಸುರರು ಮತ್ತು ಗಂಧರ್ವ ಅಪ್ಸರೆಯರು ಹಾಗೂ ರಾಕ್ಷಸರು ಅಂಶಾವತರಣವನ್ನು ತಾಳಿದರು.

ನಂತರ ಶಾಂತನವನಿಂದ ಗಂಗೆಯಲ್ಲಿ ಅಮಿತದ್ಯುತಿ ಮಹಾವೀರ

ಮಹಾಯಶಸ್ವಿ ಭೀಷ್ಮನು ವಸುವೀರ್ಯದಿಂದ ಹುಟ್ಟಿದನು.

## ಮಾಂಡವ್ಯನ ಶಾಪದಿಂದ ಧರ್ಮನು ವಿದುರನಾಗಿ ಹುಟ್ಟಿದುದು

ಹಿಂದೆ ಮಾಂಡವ್ಯ ಎಂದು ವಿಶ್ರುತ ಬ್ರಾಹ್ಮಣನೊಬ್ಬನಿದ್ದನು. ಆ ಧೃತಿವಂತ ಸರ್ವಧರ್ಮಜ್ಞನು ಸತ್ಯ ಮತ್ತು ತಪಸ್ಸಿನಲ್ಲಿ ನಿರತನಾಗಿದ್ದನು. ಆ ಮಹಾತಪಸ್ವಿ ಮಹಾಯೋಗಿಯು ತನ್ನ ಆಶ್ರಮದ ಬಳಿಯ ಒಂದು ವೃಕ್ಷದ ಕೆಳಗೆ ಬಾಹುಗಳನ್ನು ಮೇಲೆತ್ತಿ ನಿಂತು ಮೌನವ್ರತ ತಾಳಿ ತಪಸ್ಸನ್ನು ಮಾಡುತ್ತಿದ್ದನು. ಅವನು ಬಹಳ ಕಾಲದಿಂದ ಹಾಗೆ ತಪಸ್ಸಿನಲ್ಲಿ ನಿರತನಾಗಿದ್ದನು. ಒಮ್ಮೆ ಬೆನ್ನಟ್ಟಿ ಬರುತ್ತಿದ್ದ ಬಹಳ ಸೈನಿಕರಿಂದ ಪಲಾಯನಮಾಡುತ್ತಿದ್ದ ದಸ್ಯುಗಳು ತಾವು ಕದ್ದಿದ್ದ ಸಂಪತ್ತನ್ನು ಹೊತ್ತುಕೊಂಡು ಆ ಆಶ್ರಮವನ್ನು ತಲುಪಿದರು. ಅವರು ಆ ದ್ರವ್ಯಗಳನ್ನು ಅವನ ಮನೆಯಲ್ಲಿಯೇ ಹುಗಿದಿಟ್ಟು, ಸೇನೆಯು ಬರುತ್ತಿದ್ದಂತೆಯೇ ಭಯಪಟ್ಟು ಅಲ್ಲಿಂದ ಪುನಃ ಪಲಾಯನಗೈದರು. ಅವರು ಹೊರಟು ಹೋದ ತಕ್ಷಣವೇ ಕಳ್ಳರನ್ನು ಓಡಿಸಿಕೊಂಡು ಬಂದ ಸೈನಿಕರ ಬಲವು ಅಲ್ಲಿಗೆ ಬಂದು ಋಷಿಯನ್ನು ನೋಡಿತು. ಅದೇ ರೀತಿ ನಿಂತಿದ್ದ ಆ ತಪೋಧನನನ್ನು ಅವರು ಪ್ರಶ್ನಿಸಿದರು:

“ದ್ವಿಜಸತ್ತಮ! ದಸ್ಯುಗಳು ಯಾವ ಕಡೆ ಹೋದರು?
ಬ್ರಹ್ಮನ್! ನಾವೂ ಕೂಡ ಅವರು ಹೋದ ಕಡೆ ಬೇಗ

ಹೋಗುತ್ತೇವೆ."

ಆ ತಪೋಧನನು ಕಾವಲುಗಾರರೊಂದಿಗೆ ಒಳ್ಳೆಯದಾಗಲೀ ಕೆಟ್ಟದ್ದಾಗಲೀ ಏನನ್ನೂ ಮಾತನಾಡಲಿಲ್ಲ. ಆಗ ಆ ರಾಜಪುರುಷರು ಅವನ ಆಶ್ರಮವನ್ನೆಲ್ಲಾ ಹುಡುಕಾಡಿ ಅಲ್ಲಿ ಅಡಗಿದ್ದ ಕಳ್ಳರನ್ನೂ ಮತ್ತು ಅವರು ಅಡಗಿಸಿಟ್ಟಿದ್ದ ದ್ರವ್ಯವನ್ನೂ ಕಂಡರು. ಆಗ ಕಾವಲುಗಾರರಲ್ಲಿ ಆ ಮುನಿಯ ಕುರಿತು ಅನುಮಾನವುಂಟಾಯಿತು. ಅವನನ್ನೂ ದಸ್ಯುಗಳನ್ನೂ ಹಿಡಿದು ರಾಜನಲ್ಲಿಗೆ ಕರೆತಂದರು. ರಾಜನು ಕಳ್ಳರೊಡನೆ ಅವನಿಗೂ "ಇವರನ್ನು ಕೊಲ್ಲಿರಿ!""ಎಂದು ತೀರ್ಮಾನವಿತ್ತನು. ಮುಗ್ಧ ಕೊಲೆಗಾರರು ಆ ಮಹಾತಪಸ್ವಿಯನ್ನು ಶೂಲಕ್ಕೇರಿಸಿದರು. ಆ ಮುನಿಯನ್ನು ಶೂಲಕ್ಕೇರಿಸಿ ಕಾವಲುಗಾರರು ಕದ್ದಿದ್ದ ಧನವನ್ನು ರಾಜನಿಗೆ ತಂದೊಪ್ಪಿಸಿದರು. ಆ ಧರ್ಮಾತ್ಮ ವಿಪ್ರರ್ಷಿಯು ನಿರಾಹಾರಿಯಾಗಿ ಆ ಶೂಲದ ಮೇಲೆ ಬಹಳ ಕಾಲದವರೆಗೆ ಇದ್ದರೂ ಸಾಯಲಿಲ್ಲ. ತನ್ನ ಪ್ರಾಣವನ್ನು ಹಿಡಿದುಕೊಂಡೇ ಇದ್ದ ಅವನು ಇತರ ಋಷಿಗಳನ್ನು ಕರೆಯಿಸಿಕೊಂಡನು. ಶೂಲದ ಮೇಲೆಯೇ ತಪಸ್ಸನ್ನು ಮಾಡುತ್ತಿದ್ದ ಆ ಮಹಾತ್ಮನನ್ನು ನೋಡಿದ ಅವರು ಪರಮ ಸಂತಪ್ತರಾಗಿ ಹಿಂದಿರುಗಿದರು. ಅವರೆಲ್ಲರೂ ರಾತ್ರಿ ಬಾವಲಿಗಳಾಗಿ ಎಲ್ಲ ಕಡೆಯಿಂದಲೂ ಬಂದು ಯಥಾಶಕ್ತಿ ತಮ್ಮ ಬಲವನ್ನು ತೋರಿಸಿ ಆ ದ್ವಿಜೋತ್ತಮನನ್ನು ಪ್ರಶ್ನಿಸಿದರು:

"ಬ್ರಾಹ್ಮಣ! ನೀನು ಯಾವ ಪಾಪವನ್ನು ಮಾಡಿದ್ದೀಯೆ

ಎಂದು ಕೇಳ ಬಯಸುತ್ತೇವೆ."

ಆಗ ಆ ಮುನಿಶಾರ್ದೂಲನು ತಪೋಧನರಿಗೆ ಹೇಳಿದನು:

"ನಾನು ಯಾರನ್ನು ದೋಷಿತರೆಂದು ಹೇಳಲಿ? ಇದು ನನ್ನದೇ ಅಪರಾಧ."

ಅವನು ಋಷಿಯೆಂದು ಕೇಳಿದ ರಾಜನು ಮಂತ್ರಿಗಳನ್ನೊಡಗೂಡಿ ಶೂಲದ ಮೇಲಿದ್ದ ಆ ಋಷಿಸತ್ತಮನ ಬಳಿ ಬಂದನು.

"ಋಷಿಸತ್ತಮ! ನನ್ನ ಅಜ್ಞಾನ ಮತ್ತು ಮೋಹದಿಂದ ಈ ಅಪಕೃತವು ನಡೆದುಹೋಯಿತು. ನನ್ನ ಮೇಲೆ ಸಿಟ್ಟಾಗಬೇಡ. ನನ್ನನ್ನು ಅನುಗ್ರಹಿಸು."

ರಾಜನು ಹೀಗೆ ಹೇಳಿದಾಗ ಮುನಿಯು ಶಾಂತನಾದನು. ಅನುಗ್ರಹಿತ ರಾಜನು ಅವನನ್ನು ಕೆಳಕ್ಕಿಳಿಯಿಸಿದನು. ಅವನನ್ನು ಶೂಲದ ಮೇಲಿನಿಂದ ಕೆಳಗಿಳಿಸಿ ಅವನಿಂದ ಆ ಶೂಲವನ್ನು ಕೀಳಲು ಪ್ರಯತ್ನಿಸಿದಾಗ ಅದು ಬರಲೇ ಇಲ್ಲ. ಆಗ ಆ ಶೂಲವನ್ನು ಬುಡದಲ್ಲಿಯೇ ಕತ್ತರಿಸಿದನು. ಹೀಗೆ ಆ ಮುನಿಯು ತನ್ನ ಒಳಗೆ ಶೂಲವನ್ನು ಇಟ್ಟುಕೊಂಡೇ ಓಡಾಡುತ್ತಿದ್ದನು. ಮತ್ತು ತನ್ನ ತಪಸ್ಸಿನ ಮೂಲಕ ದುರ್ಲಭ ಪರ ಲೋಕವನ್ನು ಜಯಿಸಿದನು. ಅವನನ್ನು ಅಣೀಮಾಂಡವ್ಯನೆಂದು ಲೋಕಗಳಲ್ಲಿ ಕರೆಯುತ್ತಾರೆ. ಆ ಪರಮಾರ್ಥವಿದುಷಿ ವಿಪ್ರನು ಧರ್ಮಸದನವನ್ನು ಸೇರಿ ಆಸನಸ್ಥ



ಪ್ರಭು ಧರ್ಮನನ್ನು ಕಂಡು ಪ್ರಶ್ನಿಸಿದನು:

"ನನಗೆ ತಿಳಿಯದ ಯಾವ ದುಷ್ಕೃತ್ಯವನ್ನು ನಾನು ಮಾಡಿದ್ದೆನೆಂದು ನನಗೆ ಅಂಥಹ ಫಲವನ್ನು ಅನುಭವಿಸಬೇಕಾಯಿತು? ಶೀಘ್ರದಲ್ಲಿಯೇ ಇದಕ್ಕೆ ಉತ್ತರವನ್ನು ನೀಡಿ ನನ್ನ ತಪೋಬಲವನ್ನು ನೋಡು."

ಧರ್ಮನು ಹೇಳಿದನು:

"ತಪೋಧನ! ನೀನು ಚಿಟ್ಟೆಗಳ ಬಾಲಗಳಿಗೆ ಹುಲ್ಲಿನ ಕಡ್ಡಿಗಳನ್ನು ಸುಚ್ಚಿದ್ದೆ. ಆ ಕರ್ಮಕ್ಕೆ ಈ ಫಲವು ಪ್ರಾಪ್ತಿಯಾಗಿದೆ."

ಮಾಂಡವ್ಯನು ಹೇಳಿದನು:

"ಧರ್ಮ! ಆ ಅಲ್ಪ ಅಪರಾಧಕ್ಕೆ ಇಷ್ಟೊಂದು ವಿಪುಲ ದಂಡವನ್ನಿತ್ತಿದ್ದೀಯೆ. ಆದುದರಿಂದ ನೀನು ಶೂದ್ರಯೋನಿಯಲ್ಲಿ ಮನುಷ್ಯನಾಗಿ ಜನಿಸುತ್ತೀಯೆ. ಇಂದು ನಾನು ಧರ್ಮಫಲಗಳ ಕುರಿತು ಒಂದು ನಿಯಮವನ್ನು ಹಾಕುತ್ತೇನೆ. ಹದಿನಾಲ್ಕು ವರ್ಷಗಳ ಪರ್ಯಂತ ಮಾಡಿದುದು ಪಾತಕವೆನಿಸುವುದಿಲ್ಲ. ಆದರೆ ಅದರ ನಂತರ ಮಾಡಿದುದೆಲ್ಲವೂ ದೋಷವೆಂದು ಪರಿಗಣಿಸಲ್ಪಡುತ್ತದೆ."

ಈ ಅಪರಾಧಕಾಗಿ ಮಹಾತ್ಮನಿಂದ ಶಪಿತ ಧರ್ಮನು ವಿದುರನ

ರೂಪದಲ್ಲಿ ಶೂದ್ರಯೋನಿಯಲ್ಲಿ ಜನಿಸಿದನು. ಅವನು ಧರ್ಮಾರ್ಥಗಳಲ್ಲಿ ಕುಶಲನಾಗಿದ್ದು ಲೋಭಕ್ರೋಧಗಳಿಂದ ವಿವರ್ಜಿತನಾಗಿದ್ದನು. ದೀರ್ಘದರ್ಶಿಯೂ, ಶಮಪರನೂ ಆದ ಅವನು ಕುರುಗಳ ಹಿತದಲ್ಲಿಯೇ ನಿರತನಾಗಿದ್ದನು.

ಮುನಿಸಮಾನ ಸಂಜಯನು ಗಾವಲ್ಗಣನಲ್ಲಿ ಸೂತನಾಗಿ ಜನಿಸಿದನು. ಮಹಾರಥಿ ಕರ್ಣನು ಹುಟ್ಟುವಾಗಲೇ ಸಹಜ ಕವಚ ಮತ್ತು ಮುಖವನ್ನು ಬೆಳಗಿಸುತ್ತಿದ್ದ ಹೊಳೆಯುವ ಕುಂಡಲಗಳನ್ನು ಧರಿಸಿ ಸೂರ್ಯನಿಂದ ಕನ್ಯೆ ಕುಂತಿಯಲ್ಲಿ ಜನಿಸಿದನು. ಲೋಕನಮಸ್ಕೃತ ವಿಷ್ಣುವು ಲೋಕ ಅನುಗ್ರಹಾರ್ಥವಾಗಿ ಮಹಾಯಶ ವಸುದೇವ ದೇವಕಿಯರಲ್ಲಿ ಜನಿಸಿದನು. ಆ ಅನಾದಿನಿಧನ, ದೇವ, ಕರ್ತಾ, ಜಗತ್ ಪ್ರಭು, ಅವ್ಯಕ್ತ, ಅಕ್ಷರ, ಬ್ರಹ್ಮ, ಪ್ರಧಾನ, ನಿರ್ಗುಣಾತ್ಮಕ, ಆತ್ಮ, ಅವ್ಯಯ, ಪ್ರಕೃತಿಯ ಪರಮ ಪ್ರಭಾವಿ, ಪುರುಷ, ವಿಶ್ವಕರ್ಮ, ಸತ್ವಯೋಗಿ, ಧೃವಾಕ್ಷರ, ಅನಂತ, ಅಚಲ, ದೇವ, ಹಂಸ ನಾರಾಯಣ ಪ್ರಭು, ಧಾತಾರ, ಅಜರ, ನಿತ್ಯ, ತಮಾಹು, ಪರಮವ್ಯಯ, ಪುರುಷ, ವಿಭು, ಕರ್ತ, ಸರ್ವಭೂತಪಿತಾಮಹನು ಧರ್ಮಸಂವರ್ಧನಕ್ಕಾಗಿ ಅಂಧಕ-ವೃಷ್ಣಿಗಳಲ್ಲಿ ಜನಿಸಿದನು. ನಾರಾಯಣನ ಅನುವ್ರತ ಅಸ್ತ್ರಜ್ಞರೂ, ಮಹಾವೀರ್ಯರೂ, ಸರ್ವಶಾಸ್ತ್ರವಿಶಾರದರೂ ಅಸ್ತ್ರವಿಶಾರದರೂ ಆದ ಸಾತ್ಯಕಿ-ಕೃತವರ್ಮರು ಸತ್ಯಕ ಮತ್ತು ಹೃದೀಕರಲ್ಲಿ ಜನಿಸಿದರು.

ಭರದ್ವಾಜನ ಸ್ಖಲಿತ ವೀರ್ಯವು ದ್ರೋಣಿಯಲ್ಲಿ ಬೆಳೆಯತೊಡಗಿತು. ಅದರಿಂದ ಮಹರ್ಷಿ, ಉಗ್ರತಪಸ್ವಿಯಿಂದ ದ್ರೋಣನು ಜನಿಸಿದನು. ಶರದ್ವತ ಗೌತಮನಿಂದ, ಹುಲ್ಲಿನ ರಾಶಿಯಲ್ಲಿ ಅವಳಿಗಳು ಜನಿಸಿದರು - ಅಶ್ವತ್ಥಾಮನ ಜನನಿ ಮತ್ತು ಮಹಾಬಲಿ ಕೃಪ. ಅಸ್ತ್ರಭೃತರಲ್ಲಿ ಶ್ರೇಷ್ಠ ಅಶ್ವತ್ಥಾಮನು ದ್ರೋಣನಿಂದ ಜನಿಸಿದನು. ಸಾಕ್ಷಾತ್ ಅಗ್ನಿಸಮದ್ಯುತಿ ವೀರ ವೀರ್ಯವಾನ್ ಧೃಷ್ಟದ್ಯುಮ್ನನೂ ಕೂಡ ದ್ರೋಣವಿನಾಶಕ್ಕಾಗಿ ಧನುಸ್ಸನ್ನು ಹಿಡಿದೇ ಯಜ್ಞವು ನಡೆಯುತ್ತಿರುವಾಗ ಉರಿಯುತ್ತಿರುವ ಬೆಂಕಿಯಲ್ಲಿ ಜನಿಸಿದನು. ಅದೇ ಯಜ್ಞಕುಂಡದಲ್ಲಿ ತೇಜಸ್ವಿನಿ, ಶುಭೆ, ಉತ್ತಮ ರೂಪಿಣಿ, ತನ್ನ ರೂಪದಿಂದ ವಿಭ್ರಾಜಮಾನ ಕೃಷ್ಣೆಯೂ ಜನಿಸಿದಳು. ಪ್ರಹ್ಲಾದ ಶಿಷ್ಯರಾದ ನಗ್ನಜಿತ್ ಮತ್ತು ಸುಬಲರು ಹುಟ್ಟಿದರು. ಅವನಿಗೆ ಅರ್ಥವಿದ ದೇವಪ್ರಕೋಪನದಿಂದ ಪ್ರಜೆಗಳ ಧರ್ಮಹಾನಿಮಾಡುವಂಥ ಗಾಂಧಾರ ರಾಜಪುತ್ರ ಸೌಬಲ ಶಕುನಿ ಮತ್ತು ದುರ್ಯೋಧನನ ಮಾತೆ ಹುಟ್ಟಿದರು. ಕೃಷ್ಣದ್ವೈಪಾಯನನಿಂದ ವಿಚಿತ್ರವೀರ್ಯನ ಕ್ಷೇತ್ರದಲ್ಲಿ ಜನೇಶ್ವರ ಧೃತರಾಷ್ಟ್ರ ಮತ್ತು ಮಹಾಬಲಿ ಪಾಂಡುವು ಜನಿಸಿದರು. ಪಾಂಡುವಿಗೆ ಅವನ ಈರ್ವರು ಪತ್ನಿಯರಲ್ಲಿ ದೇವಸಮಾನ ಐವರು ಪುತ್ರರು ಜನಿಸಿದರು. ಅವರಲ್ಲಿ ಜ್ಯೇಷ್ಠನು ಗುಣವಂತ ಯುಧಿಷ್ಠಿರ. ಧರ್ಮನಿಂದ ಯುಧಿಷ್ಠಿರ, ಮಾರುತನಿಂದ ವೃಕೋದರ, ಇಂದ್ರನಿಂದ ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ ಶ್ರೀಮಾನ್ ಧನಂಜಯನು ಜನಿಸಿದರು. ರೂಪ ಸಂಪನ್ನರೂ

ಗುರುಶುಶ್ರೂಷಣಾ ನಿರತರೂ ಆದ ಅವಳಿ ನಕುಲ ಮತ್ತು ಸಹದೇವರು ಅಶ್ವಿನಿಯರಿಂದ ಜನಿಸಿದರು. ಧೀಮಂತ ಧೃತರಾಷ್ಟ್ರನಿಗೆ ದುರ್ಯೋಧನನೂ ಸೇರಿ ನೂರು ಪುತ್ರರು ಮತ್ತು ಯುಯುತ್ಸುವೂ ಜನಿಸಿದರು. ಅರ್ಜುನನಿಂದ ಸುಭದ್ರೆಯಲ್ಲಿ ವಾಸುದೇವನ ಅಳಿಯ ಮತ್ತು ಮಹಾತ್ಮ ಪಾಂಡುವಿನ ಮೊಮ್ಮಗ ಅಭಿಮನ್ಯುವು ಜನಿಸಿದನು. ಪಂಚ ಪಾಂಡವರಿಗೆ ಕೃಷ್ಣೆಯಲ್ಲಿಯೂ ಸಹ ಐವರು ರೂಪಸಂಪನ್ನ ಸರ್ವಶಸ್ತ್ರವಿಶಾರದ ಕುಮಾರರು ಜನಿಸಿದರು. ಯುಧಿಷ್ಠಿರನಿಂದ ಪ್ರತಿವಿಂದ್ಯ, ವೃಕೋದರನಿಂದ ಸುತಸೋಮ, ಅರ್ಜುನನಿಂದ ಚಾರುಕೀರ್ತಿ, ಮತ್ತು ನಕುಲನಿಂದ ಶತಾನೀಕ. ಮತ್ತು ಸಹದೇವನಿಂದ ಪ್ರತಾಪವಂತ ಶೃತಸೇನ. ಹಿಡಿಂಬೆಯಲ್ಲಿ ಭೀಮನಿಂದ ಘಟೋತ್ಕಚನು ವನದಲ್ಲಿ ಹುಟ್ಟಿದನು. ಶಿಖಂಡಿಯು ದ್ರುಪದನಲ್ಲಿ ಕನ್ಯೆಯಾಗಿ ಹುಟ್ಟಿ ಪುತ್ರತ್ವವನ್ನು ಪಡೆದಳು. ಅವಳಿಗೆ ಪ್ರಿಯವಾದುದನ್ನು ಮಾಡಲೋಸುಗ ಯಕ್ಷ ಸ್ಥೂಲನು ಪುರುಷತ್ವವನ್ನು ನೀಡಿದನು. ಎಲ್ಲ ಕುರು ರಾಜರೂ ಮತ್ತು ಸೇನೆಗಳೂ ಆ ಬೃಹತ್ ಯುದ್ಧದಲ್ಲಿ ಪರಸ್ಪರರೊಡನೆ ಹೋರಾಡಲು ಸೇರಿದ್ದರು. ಆ ಅಪರಿಮೇಯರೆಲ್ಲರ ಹೆಸರುಗಳನ್ನು ಒಂದು ವರ್ಷದಲ್ಲಿಯೂ ಹೇಳಲು ಶಕ್ಯವಿಲ್ಲ.

# ವಂಶಾವಳಿ

## ಆದಿ ವಂಶಾವಳಿ

ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ ಮತ್ತು ಕ್ರತು ಈ ಆರು ಮಹರ್ಷಿಗಳು ಬ್ರಹ್ಮನ ಮಾನಸಪುತ್ರರು. ಮರೀಚಿಯ ಪುತ್ರ ಕಶ್ಯಪ. ಕಶ್ಯಪನಿಂದ ಮಹಾಭಾಗ ದಕ್ಷನ ಹದಿಮೂರು ಕನ್ಯೆಯರಲ್ಲಿ ಎಲ್ಲ ಪ್ರಜೆಗಳೂ ಹುಟ್ಟಿದರು. ಅದಿತಿ, ದಿತಿ, ದನು, ಕಾಲಾ, ಅನಾಯು, ಸಿಂಹಿಕಾ, ಮುನಿ, ಕ್ರೋಧಾ, ಪ್ರಾವಾ, ಅರಿಷ್ಟಾ, ವಿನತಾ, ಕಪಿಲ, ಮತ್ತು ಕದ್ರು ಇವರು ದಕ್ಷಕನ್ಯೆಯರು. ಇವರಲ್ಲಿ ಅನಂತ ಸಂಖ್ಯೆಗಳಲ್ಲಿ ವೀರ್ಯಸಂಪನ್ನ ಪುತ್ರ ಪೌತ್ರರಾದರು.

ಹನ್ನೆರಡು ಭುವನೇಶ್ವರ ಆದಿತ್ಯರು ಅದಿತಿಯಲ್ಲಿ ಜನಿಸಿದರು. ಮೊದಲ ಹತ್ತು ಮಂದಿ - ಧಾತ, ಮಿತ್ರ, ಯಮ, ಶಕ್ರ, ವರುಣ, ಅಂಶ, ಭಗ, ವಿವಸ್ವತ, ಪೂಷ ಮತ್ತು ಸವಿತ. ಹನ್ನೊಂದನೆಯವನು ತ್ವಷ್ಟ ಮತ್ತು ಹನ್ನೆರಡನೆಯವನು ವಿಷ್ಣು. ಕೊನೆಯವನು ಸರ್ವ ಆದಿತ್ಯರಲ್ಲಿ ಅಧಿಕ ಗುಣವಂತನು.

ದಿತಿಗೆ ಹಿರಣ್ಯಕಶಿಪುವೆಂಬ ಹೆಸರಿನಿಂದ ಖ್ಯಾತ ಒಬ್ಬನೇ ಮಗನಿದ್ದನು. ಆ ಮಹಾತ್ಮನಿಗೆ ಐವರು ಪುತ್ರರಿದ್ದರು. ಅವರಲ್ಲಿ ಮೊದಲನೆಯವನು ಪ್ರಹ್ಲಾದ, ಅವನ ನಂತರ ಸಂಹ್ಲಾದ,

ಮೂರನೆಯವನು ಅನುಹ್ಲಾದ, ಮತ್ತು ನಂತರ ಶಿಬಿ ಮತ್ತು ಬಾಷ್ಕಲ. ಪ್ರಹ್ಲಾದನ ಮೂರೂ ಪುತ್ರರೂ ಖ್ಯಾತರಾಗಿದ್ದರುಃ ವಿರೋಚನ, ಕುಂಭ, ನಿಕುಂಭರೆಂದು ವಿಶ್ರುತರಾಗಿದ್ದರು. ಪ್ರತಾಪಿ ಬಲಿಯೊಬ್ಬನೇ ವಿರೋಚನನ ಪುತ್ರ. ಬಾಣ ಎಂಬ ಹೆಸರಿನ ಮಹಾಸುರನು ಬಲಿಯ ಪುತ್ರ.

ದನುವಿನ ನಲವತ್ತು ಪುತ್ರರೂ ಸರ್ವತ್ರ ಖ್ಯಾತರಾಗಿದ್ದರು. ಅವರಲ್ಲಿ ಮೊದಲು ಹುಟ್ಟಿದವನು ಮಹಾಯಶಸ್ವಿ ರಾಜಾ ವಿಪ್ರಚಿತ್ತಿ. ಶಂಬರ, ನಮುಚಿ, ಪುಲೋಮ, ಅಸಿಲೋಮ. ಕೇಶಿ, ದುರ್ಜಯ, ಅಯಃಶಿರ, ಅಶ್ವಶಿರ, ಅಯಃಶಂಕು, ಗಗನಮೂರ್ಧಾ, ವೇಗವಾನ, ಕೇತುಮಾನ್, ಸ್ವರ್ಭಾನು, ಅಶ್ವ, ಅಶ್ವಪತಿ, ವೃಶಪರ್ವ, ಅಜಕ, ಅಶ್ವಗ್ರೀವ, ಸೂಕ್ಷ್ಮ, ತುಹುಂಡ, ಇಸೃಪ, ಏಕಚಕ್ರ, ವಿರೂಪಾಕ್ಷ, ಹರ, ಹರಿ, ನಿಚಂದ್ರ, ನಿಕುಂಭ, ಕೃಪಥ, ಕಾಪಥ, ಶರಭ, ಶಲಭ, ಸೂರ್ಯ, ಚಂದ್ರ, ಇವರೆಲ್ಲರೂ ದಾನವ ವಂಶದಲ್ಲಿ ಖ್ಯಾತರು. ದೇವತೆಗಳಾದ ಸೂರ್ಯ ಮತ್ತು ಚಂದ್ರರೇ ಬೇರೆ ಎಂದೂ ಕೇಳಿದ್ದೇವೆ. ಇವರನ್ನೂ ಬಿಟ್ಟು ಇನ್ನೂ ಹತ್ತು ಸತ್ಯವಂತ ಮಹಾಬಲಿ ದಾನವ ಪುಂಗವರು ದನುವಿನ ಪುತ್ರರು. ಏಕಾಕ್ಷ, ವೀರ ಮೃತಪ, ಪ್ರಲಂಬ, ನರಕ, ವಾತಾಪಿ, ಶತ್ರುತಪನ, ಮಹಾಸುರ ಶಠ, ಗವಿಷ್ಠ, ದನಾಯು, ದಾನವ ದೀರ್ಘಜಿಹ್ವ, ಮತ್ತು ಇವರ ಅಸಂಖ್ಯ ಪುತ್ರರೂ ಮತ್ತು ಪೌತ್ರರು.

ಸಿಂಹಿಕೆಯು ಚಂದ್ರ ಮತ್ತು ಸೂರ್ಯರ ವೈರಿ ರಾಹುವೆಂಬ ಪುತ್ರನಿಗೆ

ಮತ್ತು ಸುಚಂದ್ರ, ಚಂದ್ರಹಂತಾರ ಹಾಗೂ ಚಂದ್ರವಿಮರ್ದನರಿಗೆ ಜನ್ಮವಿತ್ತಳು.

ಅಸಂಖ್ಯ ಕ್ರೂರರಳ ಪುತ್ರ ಪೌತ್ರರು ಕ್ರೂರ ಸ್ವಭಾವದವರಾಗಿದ್ದರು. ಆ ಕ್ರೂರ ಕರ್ಮಿ ಅರಿಮರ್ದನ ಗುಂಪಿಗೆ ಕ್ರೋಧವಶ ಎನ್ನುವ ಹೆಸರಿದೆ. ಅವಳಿಗೆ ಇನ್ನೂ ನಾಲ್ವರು ಅಸುರಪುಂಗವರು ಪುತ್ರರಾದರು: ವಿಕ್ಷರ, ಬಲ, ವೀರ, ಮತ್ತು ಮಹಾಸುರ ವೃತ್ರ.

ಕಾಲಾಳ ಪುತ್ರರು ಕಾಲದಂತೆ ಪ್ರಹಾರಿಗಳಿದ್ದರು. ಅವರು ಭೂಮಿಯಲ್ಲಿ ದಾನವರಲ್ಲಿಯೇ ಮಹಾವೀರರೂ ಪರಂತಪಸ್ವಿಗಳೂ ಎಂದು ಖ್ಯಾತರಾದರು. ವಿನಾಶನ, ಕ್ರೋಧ, ಹಂತ, ಕ್ರೋಧಶತ್ರು ಮೊದಲಾದವರು ಕಾಲಳ ಮಕ್ಕಳೆಂದು ವಿಶ್ರುತರಾಗಿದ್ದಾರೆ. ಅಸುರರ ಉಪಾಧ್ಯಾಯ ಶುಕ್ರನು ಋಷಿಪುತ್ರನಾಗಿದ್ದನು. ಉಶಾಸನನ ನಾಲ್ವರು ಪುತ್ರರೂ ಅಸುರ ಯಾಜಕರಾಗಿ ವಿಖ್ಯಾತರಾಗಿದ್ದರು. ತ್ವಷ್ಟಾವರ ಮತ್ತು ಅತ್ರಿ ಇಬ್ಬರೂ ಮಂತ್ರಕರ್ಮಿ, ತೇಜದಲ್ಲಿ ಸೂರ್ಯಸಂಕಾಶರೂ ಆಗಿದ್ದು ಬ್ರಹ್ಮಲೋಕ ಪ್ರಭಾವನರಾಗಿದ್ದರು. ಇವರಲ್ಲಿ ಜನಿಸಿದ ಪೀಳಿಗೆಗಳೆಲ್ಲವನ್ನೂ ಎಣಿಸುವುದು ಅಶಕ್ಯ. ಅವರ ಸಂಖ್ಯೆ ಅನಂತ.

ತಾರ್ಕ್ಷ್ಯ, ಅರಿಷ್ಟನೇಮಿ, ಗರುಡ, ಅರುಣ, ಆರುಣಿ ಮತ್ತು ವಾರುಣಿಯರು ವಿನತೆಯ ಮಕ್ಕಳು.

ಶೇಷ, ಅನಂತ, ವಾಸುಕಿ, ತಕ್ಷಕ, ಕೂರ್ಮ, ಕುಲಿಕ ಈ ಎಲ್ಲ ಮಹಾ

ಬಲಶಾಲಿ ನಾಗಗಳು ಕದ್ರುವಿನ ಮಕ್ಕಳು.

ಭೀಮಸೇನ, ಉಗ್ರಸೇನ, ಸುಪರ್ಣ, ವರುಣ, ಗೋಪತಿ, ಧೃತರಾಷ್ಟ್ರ, ಮತ್ತು ಏಳನೆಯವನು ಸೂರ್ಯವರ್ಚ; ಪತ್ರವಾನ, ಅರ್ಕಪರ್ಣ, ಪ್ರಖ್ಯಾತ ಪ್ರಯುತ, ವಿಖ್ಯಾತ ಮತ್ತು ಸರ್ವವನ್ನು ತಿಳಿದ ಭೀಮ ಮತ್ತು ಚಿತ್ರರಥರು; ಶಾಲಿಶಿರ ಮತ್ತು ಹದಿಲ್ಕನೆಯವನು ಪ್ರದ್ಯುಮ್ನ, ಹದಿನೈದನೆಯವನು ಕಲಿ, ಹದಿನಾರನೆಯವನು ನಾರದ, ಇವರೆಲ್ಲ ದೇವ ಗಂಧರ್ವರೂ ಮುನಿಯ ಮಕ್ಕಳು.

ಅನವದ್ಯ, ಅನುವಾಸ, ಪ್ರಿಯಾ, ಅನೂಪ, ಸುಭಗ, ಮತ್ತು ಭಾಸ ಇವರೆಲ್ಲರೂ ಪ್ರಾವಳಲ್ಲಿ ಜನಿಸಿದರು. ಸಿದ್ಧರಾದ ಪೂರ್ಣ, ಬರ್ಹಿ, ಮಹಾಯಶ ಪೂರ್ಣಾಶ, ಬ್ರಹ್ಮಚಾರೀ, ರತಿಗುಣ, ಏಳನೆಯವನು ಸುಪರ್ಣ, ವಿಶ್ವಾವಸು, ಭಾನು, ಮತ್ತು ಹತ್ತನೆಯವನು ಸುಚಂದ್ರ ಈ ಎಲ್ಲ ದೇವ ಗಂಧರ್ವರೂ ಪ್ರಾವಳ ಮಕ್ಕಳು. ಈ ಮಹಾಭಾಗೆ ದೇವಿಯಿಂದ ಹಿಂದೆ ದೇವರ್ಷಿಯಿಂದ ಪುಣ್ಯಲಕ್ಷಣಗಳಿಂದೊಡಗೂಡಿದ ಅಪ್ಸರೆಯರ ವಂಶವು ಉತ್ಪನ್ನವಾಯಿತು. ಅಲಂಬುಸಾ, ಮಿಶ್ರಕೇಶೀ, ವಿದ್ಯುತ್ಪರ್ಣಾ, ಅನಘೆ ತುಲಾ, ಅರುಣಾ, ರಕ್ಷಿತಾ, ರಂಭಾ, ಮನೋರಮಾ, ಅಸಿತ, ಸುಬಾಹು, ಸುವ್ರತಾ, ಸುಭುಜಾ, ಸುಪ್ರಿಯಾ; ಅತಿಬಾಹು, ವಿಖ್ಯಾತರಾದ ಹಾಹಾ, ಹುಹು, ತುಂಬುರು ಈ ನಾಲ್ವರು ಗಂಧರ್ವಸತ್ತಮರು.

ಅಮೃತ, ಬ್ರಾಹ್ಮಣ, ಗೋವು, ಗಂಧರ್ವರು ಮತ್ತು ಅಪ್ಸರೆಯರು ಕಪಿಲಳ ಮಕ್ಕಳು.

ಸ್ಥಾಣುವಿಗೆ ಹನ್ನೊಂದು ವಿಖ್ಯಾತ, ಪರಮ ಮನಸ್ಕ ಮಕ್ಕಳಿದ್ದರು. ಮಹಾಯಶ ಮೃಗವ್ಯಾಧ, ಶರ್ವ, ನಿಋತಿ, ಅಜೈಕಪಾದ, ಅಹಿರ್ಬುಂಧ್ಯ, ಪರಂತಪ ಪಿನಾಕೀ, ದಹನ, ಈಶ್ವರ, ಮಹಾದ್ಯುತಿ ಕಪಾಲೀ, ಸ್ಥಾಣು, ಮತ್ತು ಭಗವಾನ ಭಾವ ಇವರೆಲ್ಲರೂ ಏಕಾದಶ ರುದ್ರರೆಂದು ಕರೆಯಲ್ಪಟ್ಟಿದ್ದಾರೆ.

ಅಂಗಿರಸನಿಗೆ ಮೂರು ಧೃತವ್ರತ ಮೂರು ಪುತ್ರರು: ಬೃಹಸ್ಪತಿ, ಉತಥ್ಯ, ಮತ್ತು ಸಂವರ್ತ.

ಅತ್ರಿಯ ಮಕ್ಕಳು ಬಹಳ ಎಂದು ಕೇಳಿದ್ದೇವೆ. ಅವರೆಲ್ಲರೂ ವೇದವಿದರೂ, ಸಿದ್ಧರೂ, ಶಾಂತಾತ್ಮರೂ ಆದ ಮಹರ್ಷಿಗಳು.

ರಾಕ್ಷಸ, ವಾನರ ಮತ್ತು ಕಿನ್ನರರು ಪುಲಸ್ತ್ಯನ ಮಕ್ಕಳು.

ಮೃಗ, ಸಿಂಹ, ವ್ಯಾಘ್ರ, ಮತ್ತು ಕಿಂಪುರುಷರು ಪುಲಹನ ಮಕ್ಕಳು.

ಕ್ರತು ಸಮರಾದ, ಮೂರೂ ಲೋಕಗಳಲ್ಲಿ ವಿಶ್ರುತ ಸತ್ಯವ್ರತಪರಾಯಣ ಸೂರ್ಯನ ಸಹಚಾರಿ ಪುತ್ರರು ಕ್ರತುವಿಗೆ ಜನಿಸಿದರು.

ಪುತ್ರರಲ್ಲಿ ಮತ್ತು ಪುತ್ರವಂತರಲ್ಲಿ ಶ್ರೇಷ್ಠ ಭಗವಾನ್ ಋಷಿ ದಕ್ಷನು ಬ್ರಹ್ಮನ ಎಡ ಅಂಗುಷ್ಠದಿಂದ ಜನಿಸಿದನು. ಆ ಮಹಾತ್ಮನ

ಭಾರ್ಯೆಯು ಬಲ ಅಂಗುಷ್ಠದಿಂದ ಹುಟ್ಟಿದಳು. ಆ ಮುನಿಯು ಅವಳಿಂದ ಐವತ್ತು ಕನ್ಯೆಯರನ್ನು ಪಡೆದನು. ಆ ಎಲ್ಲ ಕನ್ಯೆಯರೂ ಅನವದ್ಯಾಂಗಿಯರೂ, ಕಮಲಲೋಚನೆಯರೂ ಆಗಿದ್ದರು. ಪುತ್ರಹೀನನಾಗಿದ್ದ ಪ್ರಜಾಪತಿಯು ಅವರನ್ನೇ ಪುತ್ರಿಕರನ್ನಾಗಿರಿಸಿಕೊಂಡನು. ಅವರಲ್ಲಿ ಹತ್ತನ್ನು ಧರ್ಮನಿಗೆ, ಇಪ್ಪತ್ತೇಳನ್ನು ಚಂದ್ರನಿಗೆ ಮತ್ತು ಹದಿಮೂರನ್ನು ಕಶ್ಯಪನಿಗೆ ದೇವ ವಿಧಿಯಂತೆ ಕೊಟ್ಟನು.

ಧರ್ಮನ ಪತ್ನಿಗಳು: ಕೀರ್ತಿ, ಲಕ್ಷ್ಮಿ, ಧೃತಿ, ಮೇಧಾ, ಪುಷ್ಟಿ, ಶ್ರದ್ಧಾ, ಕ್ರಿಯಾ, ಬುದ್ಧಿ, ಲಜ್ಜಾ, ಮತಿ.

ಸೋಮನ ಇಪ್ಪತ್ತೇಳು ಪತ್ನಿಯರು ಲೋಕಪರಿಶ್ರುತರಾಗಿದ್ದಾರೆ. ಆ ಶುಭವ್ರತೆ ಸೋಮಪತ್ನಿಯರು ಎಲ್ಲರೂ ಕಾಲದ ಕಣ್ಣುಗಳಾಗಿದ್ದು ನಕ್ಷತ್ರ ಯೋಗಿನಿಯರಾಗಿ ಲೋಕಯಾತ್ರೆಯಲ್ಲಿ ನಿರತರಾಗಿದ್ದಾರೆ.

ಮುನಿಗಳ ದೇವ ಪಿತಾಮಹ. ಅವನ ಪುತ್ರ ಪ್ರಜಾಪತಿ. ಅವನ ಪುತ್ರರು ಅಷ್ಟ ವಸುಗಳು. ಧರ, ಧ್ರುವ, ಸೋಮ, ಆಹ, ಅನಿಲ, ಅನಲ, ಪ್ರತ್ಯೂಷ, ಮತ್ತು ಪ್ರಭಾಸ ಇವರುಗಳು ಅಷ್ಟ ವಸುಗಳೆಂದು ಕರೆಯಲ್ಪಟ್ಟಿದ್ದಾರೆ. ಧರ ಮತ್ತು ಬ್ರಹ್ಮವಿದ ಧ್ರುವ ಧೂಮ್ರಾಯಳ ಮಕ್ಕಳು. ಚಂದ್ರನು ಮನಸ್ವಿನಿಯಲ್ಲಿ ಮತ್ತು ಶ್ವಸನನು (ಅನಿಲನು) ಶ್ವಸಳಲ್ಲಿ ಜನಿಸಿದರು. ಅಹನು ರತಳ ಪುತ್ರ, ಹುತಾಶನನು ಶಂಡಿಲ್ಯಳ ಪುತ್ರ, ಪ್ರತ್ಯೂಷ ಮತ್ತು ಪ್ರಭಾತರು ಪ್ರಭಾಸನ

ಪುತ್ರರೆಂದು ಹೇಳುತ್ತಾರೆ. ದ್ರವಿಣ ಮತ್ತು ಹುತಹವ್ಯಹಾ ಧರನ ಪುತ್ರರು. ಲೋಕಪ್ರಕಾಲನ ಭಗವಾನ್ ಕಾಲನು ಧ್ರುವನ ಪುತ್ರ. ಸೋಮನ ಸುತನು ವರ್ಚಸ್ವಿ ವರ್ಚಾ. ಅವನಿಗೆ ಮನೋಹರೆಯಲ್ಲಿ ಶಿಶಿರ, ಪ್ರಾಣ ಮತ್ತು ರಮಣರು ಜನಿಸಿದರು. ಅಹನ ಸುತರು ಜ್ಯೋತಿ, ಶ್ರಮ, ಶಾಂತ ಮತ್ತು ಮುನಿ. ಶರವಣಾಲಯ ಶ್ರೀಮಾನ್ ಕುಮಾರನು ಅಗ್ನಿಯ ಪುತ್ರ. ಅವನಿಗೆ ಶಾಖ, ವಿಶಾಖ ಮತ್ತು ಕೊನೆಯವ ನೈಗಮೇಷ. ಕೃತ್ತಿಕೆಯರಿಂದ ಪೋಷಿಸಲ್ಪಟ್ಟ ಅವನು ಕಾರ್ತಿಕೇಯನೆಂದು ಕರೆಯಲ್ಪಟ್ಟಿದ್ದಾನೆ. ಅನಿಲನ ಭಾರ್ಯೆ ಶಿವಾ; ಅವಳ ಮತ್ತು ಅನಿಲರ ಈರ್ವರು ಮಕ್ಕಳು ಪುರೋಜವ ಮತ್ತು ಅವಿಜ್ಞಾತಿ. ಪ್ರತ್ಯೂಷನ ಋಷಿಪುತ್ರನ ಹೆಸರು ದೇವಲ. ದೇವಲನಿಗೆ ಕ್ಷಮಾವಂತರೂ ವಿಧ್ವಾಂಸರೂ ಆದ ಈರ್ವರು ಪುತ್ರರು. ವರಸ್ತ್ರೀ, ಬ್ರಹ್ಮಚಾರಿಣೀ, ಯೋಗಸಿದ್ಧೆ, ಮತ್ತು ನಿರಾಸಕ್ತಳಾಗಿ ಸರ್ವ ಜಗತ್ತನ್ನೂ ಸಂಚರಿಸಿದ ಬೃಹಸ್ಪತಿಯ ತಂಗಿಯು ಎಂಟನೆಯ ವಸುವಾದ ಪ್ರಭಾಸನ ಭಾರ್ಯೆಯು. ಅವರಲ್ಲಿ ಶಿಲ್ಪಪ್ರಜಾಪತಿ, ಸಹಸ್ರ ಶಿಲ್ಪಗಳ ಕರ್ತೃ, ಮೂವತ್ತು ದೇವತೆಗಳ ಶಿಲ್ಪಿ, ಸರ್ವ ಭೂಷಣಗಳ ಕರ್ತ, ಶಿಲ್ಪವಂತರಲ್ಲಿಯೇ ಶ್ರೇಷ್ಠ, ದೇವತೆಗಳ ದಿವ್ಯ ವಿಮಾನಗಳನ್ನು ರಚಿಸಿದ ಮಹಾಭಾಗ ವಿಶ್ವಕರ್ಮನು ಜನಿಸಿದನು. ಈ ಮಹಾತ್ಮನ ಶಿಲ್ಪದಿಂದ ಉಪಜೀವಿಸುವ ಮನುಷ್ಯರು ನಿತ್ಯನೂ ಅವ್ಯಯನೂ ಆದ ಈ ವಿಶ್ವಕರ್ಮನನ್ನು ಪೂಜಿಸುತ್ತಾರೆ.

ಸರ್ವಲೋಕಸುಖಕಾರಕ ಭಗವಾನ್ ಧರ್ಮನು ನರರೂಪವನ್ನು ಧರಿಸಿ ಬ್ರಹ್ಮನ ಎಡ ಸ್ತನವನ್ನು ಒಡೆದು ಹೊರಬಂದನು. ಅವನಿಗೆ ಸರ್ವಭೂತಮನೋಹರ, ತಮ್ಮ ತೇಜಸ್ಸಿನಿಂದ ಲೋಕವನ್ನೆಲ್ಲ ಪರಿಪಾಲಿಸುತ್ತಿರುವ ಮೂವರು ಪುತ್ರರು: ಶಮ, ಕಾಮ ಮತ್ತು ಹರ್ಷ. ಕಾಮನ ಭಾರ್ಯೆ ರತಿ, ಶಮನ ಅಂಗನೆ ಪ್ರಾಪ್ತಿ, ಮತ್ತು ಹರ್ಷನ ಭಾರ್ಯೆ ಲೋಕಗಳೇ ಯಾರ ಮೇಲೆ ನಿಂತಿವೆಯೋ ಆ ನಂದೀ.

ಕಶ್ಯಪನು ಮರೀಚಿಯ ಪುತ್ರ ಮತ್ತು ಕಶ್ಯಪನಿಂದ ಸುರಾಸುರರೂ ಮತ್ತು ಲೋಕ ಪ್ರಜೆಗಳೂ ಜನಿಸಿದರು. ಹೆಣ್ಣು ಕುದುರೆಯ ರೂಪಧಾರಿಣಿ ತ್ವಷ್ಟ್ರೀಯು ಸವಿತುವಿನ ಭಾರ್ಯೆ ಮತ್ತು ಈ ಮಹಾಭಾಗೆಯು ಅಂತರಿಕ್ಷದಲ್ಲಿ ಅವಳಿ ಅಶ್ವಿನಿಯರಿಗೆ ಜನ್ಮವಿತ್ತಳು. ಶಕ್ರನ ನಾಯಕತ್ವದಲ್ಲಿರುವ ಹನ್ನೆರಡು ಆದಿತ್ಯರಲ್ಲಿ ಯಾರಲ್ಲಿ ಮತ್ತು ಯಾರ ಮೇಲೆ ಲೋಕಗಳೆಲ್ಲವೂ ನಿಂತಿವೆಯೋ ಆ ವಿಷ್ಣುವೇ ಕಿರಿಯವನು.

ರುದ್ರ, ಸಾಧ್ಯ, ಮರುತ, ವಸು, ಭಾರ್ಗವ, ವಿದ್ಯ, ವಿಶ್ವೇದೇವ ಇವರೆಲ್ಲರದ್ದೂ ಒಂದೊಂದು ಪಕ್ಷ. ವೈನತೇಯ ಗರುಡ, ಬಲವಾನ್ ಅರುಣ, ಮತ್ತು ಭಗವಾನ್ ಬೃಹಸ್ಪತಿ ಇವರುಗಳನ್ನು ಆದಿತ್ಯರೆಂದು ಪರಿಗಣಿಸುತ್ತಾರೆ. ಈರ್ವರು ಅಶ್ವಿನಿಯರು, ಸರ್ವ ಔಷಧಿಗಳು ಮತ್ತು ಪಶುಗಳನ್ನು ಗುಹ್ಯಕರೆಂದು ತಿಳಿಯುತ್ತಾರೆ. ಈ ರೀತಿ

ದೇವಗಣಗಳನ್ನು ಕ್ರಮಬದ್ಧವಾಗಿ ಹೇಳಲಾಗಿದೆ.

ಭಗವಾನ್ ಭೃಗುವು ಬ್ರಹ್ಮನ ಹೃದಯವನ್ನು ಸೀಳಿ ಹೊರಬಂದನು. ಭೃಗುವಿನ ಪುತ್ರ ಕವಿ, ಮತ್ತು ವಿದ್ವಾನ್ ಶುಕ್ರಗ್ರಹನು ಕವಿಸುತನು. ಸ್ವಯಂಭುವಿನಿಂದ ತ್ರೈಲೋಕ್ಯಪ್ರಾಣಾಧಾರವಾದ ವರ್ಷಾವರ್ಷ ಮತ್ತು ಭಯಾಭಯಗಳ ಒಡೆಯನಾಗಿ ನಿಯುಕ್ತಗೊಂಡ ಅವನು ಎಲ್ಲ ಭುವನವನ್ನೂ ಪರಿಭ್ರಮಿಸುತ್ತಾನೆ. ಯೋಗಾಚಾರ್ಯ, ಮಹಾಬುದ್ಧಿವಂತ, ಮೇಧವೀ, ಬ್ರಹ್ಮಚಾರಿ, ಮತ್ತು  ಯತವ್ರತನಾದ ಅವನು ದೈತ್ಯ ಮತ್ತು ಸುರರ ಗುರುವಾದನು. ಈ ರೀತಿ ಯೋಗಕ್ಷೇಮಕ್ಕೆಂದು ವಿಭುವಿನಿಂದ ನಿಯುಕ್ತಗೊಂಡ ಭಾರ್ಗವನು ಇನ್ನೊಬ್ಬ ಪುತ್ರ ಅನಿಂದಿತ ದೀಪ್ತತಪಸ್ಕ, ಧರ್ಮಾತ್ಮ ಮನೀಷಿಣಿ ಚ್ಯವನನನ್ನು ಪಡೆದನು. ಅವನು ತಾಯಿಯನ್ನು ಬಿಡುಗಡೆಗೊಳಿಸಲು ರೋಷಗೊಂಡಾಗ ಅವಳ ಗರ್ಭದಿಂದ ಚ್ಯುತನಾಗಿದ್ದನು. ಮನುವಿನ ಕನ್ಯೆ ಆರುಷಿಯು ಆ ಮನೀಷಿಣಿಯ ಪತ್ನಿ. ಅವಳ ತೊಡೆಯನ್ನು ಸೀಳಿ ಮಹಾತಪಸ್ವಿ, ಮಹಾತೇಜಸ್ವಿ ಬಾಲ್ಯದಲ್ಲಿಯೇ ಗುಣಯುಕ್ತ ಔರ್ವನು ಜನಿಸಿದನು. ಅವನ ಪುತ್ರ ಋಚೀಕ, ಅವನ ಮಗ ಜಮದಗ್ನಿ. ಮಹಾತ್ಮ ಜಮದಗ್ನಿಗೆ ನಾಲ್ವರು ಪುತ್ರರಿದ್ದರು. ಅವರಲ್ಲಿ ಕಿರಿಯವನು ರಾಮ. ಆದರೆ ಅವನು ಗುಣಗಳಲ್ಲಿ ಕಿರಿಯವನಿರಲಿಲ್ಲ. ಆ ಸರ್ವಶಾಸ್ತ್ರಾಸ್ತ್ರ ಕುಶಲನು ಕ್ಷತ್ರಿಯವಂಶವನ್ನೇ ಅಂತ್ಯಗೊಳಿಸಿದನು. ಔರ್ವನ ನೂರು ಪುತ್ರರಲ್ಲಿ ಜಮದಗ್ನಿಯು

ಹಿರಿಯವನಾಗಿದ್ದನು. ಅವರಿಗೆ ಸಹಸ್ರಾರು ಪುತ್ರರಿದ್ದು ಭೃಗುಕುಲವು ವಿಸ್ತಾರವಾಯಿತು. ಬ್ರಹ್ಮನಿಗೆ ಅನ್ಯ ಎರಡು ಪುತ್ರರಿದ್ದರು - ಧಾತಾ ಮತ್ತು ವಿಧಾತ - ಅವರ ಚಿಹ್ನೆ ಜಗತ್ತಿನಲ್ಲೆಲ್ಲಾ ಉಳಿದಿದೆ ಮತ್ತು ಅವರು ಮನುವಿನ ಸಂಗಡ ಇರುತ್ತಾರೆ. ಅವರ ತಂಗಿಯೇ ದೇವಿ ಪದ್ಮಗೃಹೆ, ಶುಭೆ ಲಕ್ಷ್ಮಿ. ಅವಳ ಮಾನಸ ಪುತ್ರರು ಆಕಾಶಚಾರಿಣಿ ತುರಗಗಳು. ಶುಕ್ರನಲ್ಲಿ ಜನಿಸಿದ ದೇವಿಯು ವರುಣನ ಹಿರಿಯ ಹೆಂಡತಿ. ಅವಳು ಬಲ ಎನ್ನುವ ಪುತ್ರನಿಗೂ ಮತ್ತು ಸುರನಂದಿನಿಯಾದ ಸುರಾ ಎನ್ನುವ ಮಗಳಿಗೂ ಜನ್ಮವಿತ್ತಳು.

ಅನ್ನಕಾಮಿ ಪ್ರಜೆಗಳು ಅನ್ಯೋನ್ಯರನ್ನು ಭಕ್ಷಿಸುವ ಸಮಯದಲ್ಲಿ ಸರ್ವ ಭೂತವಿನಾಶಕ ಅಧರ್ಮನ ಜನ್ಮವಾಯಿತು. ಅವನ ಭಾರ್ಯೆಯು ನಿರೃತಿ ಮತ್ತು ಅವಳಲ್ಲಿ ನೈರೃತರೆಂಬ ರಾಕ್ಷಸರು ಹುಟ್ಟಿದರು. ಅವಳಿಗೆ ಸದಾ ಪಾಪಕರ್ಮರತ ಮೂವರು ಘೋರ ಪುತ್ರರಿದ್ದರು: ಭಯ, ಮಹಾಭಯ, ಮತ್ತು ಭೂತಾಂತಕ ಮೃತ್ಯು. ದೇವೀ ತಾಮ್ರಾ ಐದು ಲೋಕವಿಶ್ರುತ ಕನ್ಯೆಯರಿಗೆ ಜನ್ಮವಿತ್ತಳು: ಕಾಕೀ, ಶ್ಯೇನೀ, ಭಾಸೀ, ಧೃತರಾಷ್ಟ್ರೀ ಮತ್ತು ಶುಕೀ. ಕಾಕಿಯು ಉಲೂಕಗಳಿಗೆ (ಗೂಬೆಗಳಿಗೆ) ಜನ್ಮವಿತ್ತಳು, ಶ್ಯೇನಿಯು ಗಿಡುಗಗಳಿಗೆ ಜನ್ಮವಿತ್ತಳು, ಮತ್ತು ಬಾಸಿಯು ಹದ್ದುಗಳೇ ಮೊದಲಾದ ಪಕ್ಷಿಗಳಿಗೆ ಜನ್ಮವಿತ್ತಳು. ಭಾಮಿನಿ ಧೃತರಾಷ್ಟ್ರಿಯು ಸರ್ವ ಹಂಸ, ಕೊಕ್ಕರೆಗಳು ಮತ್ತು ಚಕ್ರವಾಕಗಳಿಗೆ ಜನ್ಮವಿತ್ತಳು. ಮನಸ್ವಿನಿ, ಕಲ್ಯಾಣಗುಣಸಂಪನ್ನೆ

ಸರ್ವಲಕ್ಷಣಪೂಜಿತೆ ಶುಕಿಯು ಗಿಳಿಗಳಿಗೆ ಜನ್ಮವಿತ್ತಳು. ಅವಳಲ್ಲಿ ಒಂಭತ್ತು ಆತ್ಮಸಂಭ್ಭವ ಕ್ರೋಧವಶ ನಾರಿಯರು ಹುಟ್ಟಿದರು: ಮೃಗೀ, ಮೃಗಮಂದಾ, ಹರಿ, ಭದ್ರಮನಾ, ಮಾತಂಗೀ, ಶಾರ್ದೂಲೀ, ಶ್ವೇತಾ, ಮತ್ತು ಸುರಭಿ. ಸರ್ವಲಕ್ಷಣಸಂಪನ್ನೆ ಯಶಸ್ವಿನಿ ಮೃಗಳ ಮಗಳೇ ಸರ್ವ ಜಿಂಕೆಗಳ ಮೂಲ. ಕರಡಿ, ಸೃಮರ, ಮತ್ತು ಚಮರಗಳು ಮೃಗಮಂದಳ ಮಕ್ಕಳು. ಆನೆ ಐರಾವತವು ಭದ್ರಮನಾಳ ಮಗನಾಗಿ ಹುಟ್ಟಿದನು. ಮಹಾಗಜ, ದೇವನಾಗ ಐರಾವತನು ಅವಳ ಮಗ. ಹರಿಯಲ್ಲಿ ಕುದುರೆಗಳು ಮತ್ತು ತರಸ್ವಿಗಳಾದ ವಾನರರು ಜನಿಸಿದರು. ಗೋಲಾಂಗೂಲಗಳೂ ಹರಿಯ ಪುತ್ರರೆಂದೇ ತಿಳಿ. ಶಾರ್ದೂಲಿಯಲ್ಲಿ ಸಿಂಹ, ವ್ಯಾಘ್ರ ಮತ್ತು ಸರ್ವ ಚಿರತೆಗಳೂ ಜನಿಸಿದರು. ಆನೆಗಳೆಲ್ಲವೂ ಮಾತಂಗಿಯ ಮಕ್ಕಳು. ವೇಗವಂತನಾದ ದಿಗ್ಗಜ ಶ್ವೇತನು ಶ್ವೇತಳ ಮಗ. ಸುರಭಿಗೆ ಈರ್ವರು ಪುತ್ರಿಯರು ಜನಿಸಿದರು: ರೋಹಿಣೀ ಮತ್ತು ಯಶಸ್ವಿನಿ ಗಂಧರ್ವೀ. ರೋಹಿಣಿಯಲ್ಲಿ ಗೋವುಗಳು ಹುಟ್ಟಿದವು ಮತ್ತು ಕುದುರೆಗಳು ಗಂಧರ್ವಿಯ ಮಕ್ಕಳು. ರಾಜನ್! ಸುರಸೆಯಲ್ಲಿ ನಾಗಗಳು ಮತ್ತು ಕದ್ರುವಿನಲ್ಲಿ ಪನ್ನಗಗಳು ಜನಿಸಿದರು. ಅನಲಳು ಏಳು ರೀತಿಯ ಪಿಂಡಫಲಗಳನ್ನು ನೀಡುವ ವೃಕ್ಷಗಳಿಗೆ ಜನ್ಮವಿತ್ತಳು. ಶುಕಿಯು ಅನಲೆಯ ಮಗಳು ಮತ್ತು ಸುರಸೆಯು ಕದ್ರುವಿನ ಸುತೆ. ಅರುಣನ ಭಾರ್ಯೆ ಶ್ಯೇನಿಯು ವೀರ್ಯವಂತರೂ ಮಹಾಬಲಿಗಳೂ ಆದ ಸಂಪಾತಿ ಮತ್ತು ಜಟಾಯುಗಳಿಗೆ ಜನ್ಮವಿತ್ತಳು. ವಿನತೆಯ

ಮಕ್ಕಳಾದ ಗರುಡ ಮತ್ತು ಅರುಣ ಈರ್ವರೂ ವಿಖ್ಯಾತರು.

## ಭರತ ವಂಶಾವಳಿ

ಪ್ರಚೇತಸನಿಗೆ ಹತ್ತು ಪುತ್ರರಿದ್ದರು; ಎಲ್ಲರೂ ಅತೀವ ತೇಜಸ್ಸು ಮತ್ತು ಕಾಂತಿಯನ್ನು ಹೊಂದಿದ್ದರು. ತೇಜಸ್ಸಿನಲ್ಲಿ ಮಹರ್ಷಿಗಳ ಸಮನಾಗಿದ್ದರು. ಸಂತರ ಪ್ರಕಾರ ಅವರು ಮಾನವರ ಪೂರ್ವಜರು. ಹಿಂದೆ ಇವರೆಲ್ಲರೂ ಮಿಂಚಿನಲ್ಲಿ ಸುಟ್ಟು ಭಸ್ಮರಾದರು. ಈ ಪ್ರಾಚೇತಸರಿಂದ ದಕ್ಷನು ಹುಟ್ಟಿದನು. ಲೋಕಪಿತಾಮಹ ದಕ್ಷನಿಂದ ಪ್ರಜೆಗಳೆಲ್ಲರೂ ಹುಟ್ಟಿದರು. ಮುನಿ ದಕ್ಷ ಪ್ರಾಚೇತಸನು ವೀರಿಣ್ಯಳ ಜೊತೆ ಕೂಡಿ ತನ್ನಂಥಹ ಸಹಸ್ರ ಸಂಶಿತವ್ರತ ಪುತ್ರರನ್ನು ಪಡೆದನು. ದಕ್ಷನ ಈ ಸಾವಿರ ಸುತರ ಸಮಿತಿಗೆ ನಾರದನು ಮೋಕ್ಷವನ್ನು ನೀಡುವ ಉತ್ತಮ ಸಾಂಖ್ಯ ಜ್ಞಾನವನ್ನು ನೀಡಿದನು. ಪ್ರಜಾಪತಿ ದಕ್ಷನು ತನ್ನ ಐವತ್ತು ಪುತ್ರಿಯರನ್ನು ಪ್ರಜೋತ್ಪತ್ತಿಗೆ ತೊಡಗಿಸಿದನು. ಪುತ್ರಿಯರಲ್ಲಿ ಹತ್ತನ್ನು ಧರ್ಮನಿಗೆ, ಹದಿಮೂರನ್ನು ಕಶ್ಯಪನಿಗೆ, ಒಂಭತ್ತನ್ನು ಕಾಲನಿಗೆ ಮತ್ತು ಇಪ್ಪತ್ತೇಳನ್ನು ಚಂದ್ರನಿಗೆ ಕೊಟ್ಟನು. ಮಾರೀಚಿ ಕಶ್ಯಪನು ತನ್ನ ಹದಿಮೂರು ದಾಕ್ಷಾಯಣಿ ಪತ್ನಿಯರಲ್ಲಿ ವಿವಸ್ವತ ಮತ್ತು ಇಂದ್ರನೇ ಮೊದಲಾದ ವೀರ್ಯಸಂಪನ್ನ ಆದಿತ್ಯರನ್ನು ಪಡೆದನು. ವಿವಸ್ವತನಿಗೆ ಪ್ರಭು ವೈವಸ್ವತ ಯಮನು ಮಗನಾಗಿ ಜನಿಸಿದನು. ಮತ್ತು ಮಾರ್ತಂಡನು ಯಮನ ಪುತ್ರನಾಗಿ ಜನಿಸಿದನು. ಪ್ರಭು ಮಾರ್ತಂಡನಿಗೆ ಧೀಮಂತ ಮನುವು ಸುತನಾಗಿ

ಜನಿಸಿದನು. ಮನುವಿನ ವಂಶದಲ್ಲಿ ಜನಿಸಿದವರನ್ನು ಮಾನವರು. ಬ್ರಾಹ್ಮಣ, ಕ್ಷತ್ರಿಯ ಮತ್ತು ಇತರ ಎಲ್ಲ ಮಾನವರೂ ಮನುವಿನಿಂದಲೇ ಜನಿಸಿದರು. ಅಲ್ಲಿಂದ ಬ್ರಾಹ್ಮಣತ್ವ ಮತ್ತು ಕ್ಷಾತ್ರತ್ವದ ಸಮಾಗಮವಾಯಿತು. ಮನುವಿನಲ್ಲಿ ಜನಿಸಿದ ಬ್ರಾಹ್ಮಣರು ವೇದಾಧ್ಯಯನದಲ್ಲಿ ತೊಡಗಿದರು. ಮನುವಿಗೆ ಹತ್ತು ಕ್ಷತ್ರಧರ್ಮ ಪರಾಯಣ ಮಹಾಬಲಶಾಲಿ ಮಕ್ಕಳಿದ್ದರು: ವೇನ, ಧೃಷ್ಣು, ನರಿಷಂತ, ನಾಭಾಗ, ಇಕ್ಷ್ವಾಕು, ಕರೂಷ್ಮಥ, ಶರ್ಯಾತಿ, ಎಂಟನೆಯವಳು ಮಗಳು ಇಲಾ, ಒಂಭತ್ತನೆಯವನು ಪೃಷಘ್ನ, ಮತ್ತು ಹತ್ತನೆಯವನು ನಾಭಾಗಾರಿಷ್ಠ. ಇವರಲ್ಲದೆ ಮನುವಿಗೆ ಐವತ್ತು ಪುತ್ರರು ಭೂಮಿಯಲ್ಲಿದ್ದರು ಮತ್ತು ಅವರೆಲ್ಲರೂ ಅನ್ಯೋನ್ಯರೊಡನೆ ಜಗಳವಾಡಿ ವಿನಾಶರಾದರು. ಇಲೆಯಿಂದ ವಿದ್ವಾನ್ ಪುರೂರವನು ಜನಿಸಿದನು. ಅವನ ತಾಯಿ ಮತ್ತು ತಂದೆ ಇಬ್ಬರೂ ಅವಳೇ. ಪುರೂರವನು ಹದಿಮೂರು ಸಮುದ್ರ ದ್ವೀಪಗಳನ್ನು ಆಳಿದನು. ಆ ಮಹಾಯಶನು ಮನುಷ್ಯನಾಗಿದ್ದರೂ ಸದಾ ಅಮಾನುಷರ ಸಂಗದಲ್ಲಿಯೇ ಇರುತ್ತಿದ್ದನು. ವೀರ್ಯೋನ್ಮತ್ತ ಪುರೂರವನು ಅವರ ಕ್ರೋಧವನ್ನು ಅಲ್ಲಗಳೆದು ವಿಪ್ರರೊಂದಿಗೆ ಜಗಳವಾಡಿ ವಿಪ್ರರ ಸಂಪತ್ತನ್ನು ಅಪಹರಿಸಿದನು. ಇದನ್ನು ನೋಡಿದ ಸನತ್ಕುಮಾರನು ಬ್ರಹ್ಮಲೋಕದಿಂದ ಬಂದು ರಾಜನಿಗೆ ಉತ್ತಮ ಸಲಹೆಗಳನ್ನು ನೀಡಿದರೂ ಅವನು ಅವುಗಳನ್ನು ಸ್ವೀಕರಿಸಲಿಲ್ಲ. ಆಗ ಕೃದ್ಧ ಮಹರ್ಷಿಗಳು ಇತ್ತ ಶಾಪವು ಮದಬಲದಿಂದ

ಬುದ್ಧಿಕಳೆದುಕೊಂಡಿದ್ದ ಲೋಭಾನ್ವಿತ ನರಾಧಿಪನನ್ನು ನಾಶಪಡಿಸಿತು. ಊರ್ವಶಿಯೊಡನೆ ಗಂಧರ್ವ ಲೋಕದಲ್ಲಿ ವಾಸಿಸುತ್ತಿದ್ದ ಈ ವಿರಾಟನೇ ಕ್ರಿಯಾವಿಧಿಗಳಲ್ಲಿ ಬಳಸುವ ಮೂರು ವಿಧದ ಅಗ್ನಿಗಳನ್ನು ತಂದವನು. ಅವನು ಊರ್ವಶಿಯಲ್ಲಿ ಆರು ಮಕ್ಕಳನ್ನು ಪಡೆದನು: ಆಯುಸ್, ಧೀಮಾನ್, ದೃಢಾಯುಷ್, ಅಮಾವಸು, ವನಾಯುಶ್ ಮತ್ತು ಶೃತಾಯುಶ್.

ಆಯುಸನು ಸ್ವರ್ಭಾನುವಿನ ಮಗಳಿನಿಂದ ನಾಲ್ಕು ಪುತ್ರರನ್ನು ಪಡೆದನು: ನಹುಷ, ವೃದ್ಧಶರ್ಮ, ರಜಿಂರಂಭ ಮತ್ತು ಅನೇನಸ. ಆಯುಸನ ಪುತ್ರರಲ್ಲಿ ನಹುಷನು ಧೀಮಂತ ಮತ್ತು ಸತ್ಯಪರಾಕ್ರಮಿಯಾಗಿದ್ದು ಆ ಪೃಥಿವೀಪತಿಯು ಸುಮಹತ್ತರ ಧರ್ಮದಿಂದ ರಾಜ್ಯವನ್ನಾಳಿದನು. ನಹುಷನು ಪಿತೃ, ದೇವತೆ, ಋಷಿ, ವಿಪ್ರ, ಗಂಧರ್ವ, ಉರಗ, ರಾಕ್ಷಸ ಇವರೆಲ್ಲರನ್ನೂ ಮತ್ತು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಲ್ಲರನ್ನೂ ಪರಿಪಾಲಿಸಿದನು. ಆ ವೀರ್ಯವಂತನು ದಸ್ಯುಗಳ ಗುಂಪುಗಳನ್ನು ನಾಶಪಡಿಸಿ ಅವರು ಋಷಿಗಳಿಗೆ ಕರವನ್ನು ಕೊಡುವಂತೆ ಮಾಡಿದನು; ಮತ್ತು ಅವರು ಪಶುಗಳ ರೀತಿ ಭಾರವನ್ನು ಹೊರುವಂತೆ ಮಾಡಿದನು. ತನ್ನ ತೇಜಸ್ಸು, ತಪಸ್ಸು, ವಿಕ್ರಮ ಮತ್ತು ಓಜಸ್ಸಿನಿಂದ ದಿವೌಕಸರನ್ನು ಮೀರಿ ಇಂದ್ರನಂತೆ ರಾಜ್ಯವಾಳಿದನು. ನಹುಷನು ಆರು ಪ್ರಿಯವಾಸ ಪುತ್ರರಿಗೆ ಜನ್ಮವಿತ್ತನು: ಯತಿ, ಯಯಾತಿ, ಸಂಯಾತಿ, ಆಯಾತಿ,

ಪಾಂಚ ಮತ್ತು ಉದ್ಧವ.

ನಾಹುಷ ಯಯಾತಿಯು ಸತ್ಯಪರಾಕ್ರಮಿ ಸಾಮ್ರಾಟನಾಗಿ ಮಹಿಯನ್ನು ಪಾಲಿಸಿದನು. ತನ್ನ ಅತಿ ಶಕ್ತಿಯಿಂದ ಪಿತೃಗಳನ್ನು ಮತ್ತು ದೇವತೆಗಳನ್ನು ಸದಾ ಅರ್ಚಿಸುತ್ತಾ ಅಪರಾಜಿತ ಯಯಾತಿಯು ಸರ್ವ ಪ್ರಜೆಗಳನ್ನೂ ಪ್ರೀತಿಯಿಂದ ಪಾಲಿಸಿದನು. ದೇವಯಾನಿ ಮತ್ತು ಶರ್ಮಿಷ್ಠೆಯರಲ್ಲಿ ಹುಟ್ಟಿದ ಅವನ ಪುತ್ರರೆಲ್ಲರೂ ಮಹೇಷ್ವಾಸರೂ ಸುಗುಣರೂ ಆಗಿದ್ದರು. ಯದು ಮತ್ತು ತುರ್ವಾಸು ದೇವಯಾನಿಯಲ್ಲಿ ಜನಿಸಿದರು. ಶರ್ಮಿಷ್ಠೆಯಲ್ಲಿ ದ್ರುಹು, ಅನು ಮತ್ತು ಪುರು ಜನಿಸಿದರು. ಬಹಳ ಕಾಲ ಧರ್ಮದಿಂದ ಪ್ರಜೆಗಳನ್ನು ಪಾಲಿಸಿದ ನಾಹುಷನು ರೂಪನಾಶಿನಿ ಮಹಾಘೋರ ವೃದ್ಧತ್ವವನ್ನು ಪಡೆದನು. ವೃದ್ಧಾಪ್ಯವನ್ನು ಹೊಂದಿದ ರಾಜನು ತನ್ನ ಪುತ್ರರಾದ ಯದು, ಪುರು, ತುರ್ವಸು, ದ್ರುಹು ಮತ್ತು ಅನುರಲ್ಲಿ ಕೇಳಿಕೊಂಡನು:

> "ಪುತ್ರರೇ! ಯೌವನವನ್ನು ಪಡೆದು ಯುವ
> ಯುವತಿಯರೊಂದಿಗೆ ಕಾಮದಿಂದ ವಿಹರಿಸಲು
> ಬಯಸುತ್ತೇನೆ. ಇದರಲ್ಲಿ ನನಗೆ ಸಹಾಯ ಮಾಡಿ."

ಆಗ ದೇವಯಾನಿಯ ಹಿರಿಯ ಮಗ ಯದುವು ಹೇಳಿದನು:

> "ನಮ್ಮ ಯೌವನವನ್ನು ಪಡೆದು ನೀನೇನು ಮಾಡುತ್ತೀಯೆ?"

ಯಯಾತಿಯು ಹೇಳಿದನು:

> “ನನ್ನ ವೃದ್ಧಾಪ್ಯವನ್ನು ಸ್ವೀಕರಿಸು. ನೀನು ನೀಡುವ ಯೌವನದಿಂದ ನಾನು ವಿಷಯ ಸುಖವನ್ನು ಹೊಂದುತ್ತೇನೆ. ಒಂದು ದೀರ್ಘ ಯಜ್ನವನ್ನು ಯಜಿಸುತ್ತಿರುವಾಗ ಮುನಿ ಉಶಾಸನನಿಂದ ಶಾಪವನ್ನು ಪಡೆದು ಕಾಮಸುಖವನ್ನು ಅನುಭವಿಸುವ ಎಲ್ಲ ಸಾಮರ್ಥ್ಯವನ್ನೂ ಕಳೆದುಕೊಂಡೆನು. ಪುತ್ರರೇ ಈಗ ನಿಮ್ಮ ಯೌವನದಿಂದ ನಾನು ಸುಖವನ್ನು ಹೊಂದಬಲ್ಲೆ. ನನ್ನವರಾದ ನಿಮ್ಮಲ್ಲಿ ಯಾರಾದರೂ ಒಬ್ಬರು ನನ್ನ ಈ ವೃದ್ಧಾಪ್ಯ ಮತ್ತು ದೇಹವನ್ನು ಪಡೆದು ರಾಜ್ಯವನ್ನು ಆಳಿ. ಹೊಸ ಯೌವನವನ್ನು ಹೊಂದಿದ ನಾನು ನನ್ನ ಕಾಮಸುಖವನ್ನು ಪಡೆಯುತ್ತೇನೆ.”

ಯದು ಮೊದಲಾದವರು ಯಾರೂ ಅವನ ಈ ಮಾತುಗಳನ್ನು ಸ್ವೀಕರಿಸದೇ ಇರುವಾಗ ಕಿರಿಯ ಸತ್ಯಪರಾಕ್ರಮಿ ಪುರುವು ಹೇಳಿದನು:

> “ರಾಜನ್! ಹೊಸ ಯೌವನ ಮತ್ತು ದೇಹವನ್ನು ಸ್ವೀಕರಿಸು. ನಾನು ನಿನ್ನ ವೃದ್ಧಾಪ್ಯವನ್ನು ಪಡೆದು ನಿನ್ನ ಆಜ್ಞೆಯಂತೆ ರಾಜ್ಯವನ್ನು ಆಳುತ್ತೇನೆ.”

ಆಗ ಆ ರಾಜರ್ಷಿಯು ತನ್ನ ತಪೋವೀರ್ಯ ಬಲದಿಂದ ತನ್ನ ವೃದ್ಧಾಪ್ಯವು ಮಹಾತ್ಮ ಪುತ್ರನಿಗೆ ತಗಲುವಂತೆ ಮಾಡಿದನು. ಪುರುವಿನ ವಯಸ್ಸನ್ನು ಪಡೆದು ರಾಜನು ಯುವಕನಾದನು ಮತ್ತು

ಯಯಾತಿಯ ವಯಸ್ಸನ್ನು ಪಡೆದ ಪುರುವು ರಾಜ್ಯವನ್ನಾಳಿದನು. ಒಂದು ಸಾವಿರ ವರ್ಷಗಳು ಕಳೆದನಂತರ ಇನ್ನೂ ಅತೃಪ್ತ ಕಾಮಿಯಾಗಿದ್ದ ಅಪರಾಜಿತ ಯಯಾತಿಯು ಪುತ್ರ ಪುರುವನ್ನುದ್ದೇಶಿಸಿ ಹೇಳಿದನು: "ಮಗನೇ! ನೀನೇ ನನ್ನ ನಿಜವಾದ ವಾರಸು, ನಿನ್ನಿಂದಲೇ ನನ್ನ ವಂಶವು ಮುಂದುವರೆಯುತ್ತದೆ. ಇದು ಪೌರವವಂಶವೆಂದು ಲೋಕಗಳಲ್ಲೆಲ್ಲಾ ಖ್ಯಾತಿಯಾಗುತ್ತದೆ."

ನಂತರ ಆ ನೃಪಶಾರ್ದೂಲನು ಪುರುವಿಗೆ ರಾಜ್ಯಾಭಿಷೇಕವನ್ನು ಮಾಡಿ ಹಲವು ವರ್ಷಗಳ ನಂತರ ಕಾಲಧರ್ಮಕ್ಕೊಳಗಾದನು.

## ಪೌರವ ವಂಶಾವಳಿ

ಪುರುವು ಪೌಷ್ಟಿಯಲ್ಲಿ ಮೂವರು ಮಹಾರಥಿ ಪುತ್ರರನ್ನು ಪಡೆದನು: ಪ್ರವೀರ, ಈಶ್ವರ, ಮತ್ತು ರೌದ್ರಾಶ್ವ. ಅವರಲ್ಲಿ ಪ್ರವೀರನು ವಂಶವನ್ನು ಮುಂದುವರಿಸಿದನು. ರಾಜನು ಶೇನಿಯಲ್ಲಿ ಮನಸ್ಯು ಎಂಬ ಶೂರ ಮಗನನ್ನು ಪಡೆದನು. ಆ ರಾಜೀವಲೋಚನನು ಭೂಮಿಯ ನಾಲ್ಕೂ ದಿಕ್ಕುಗಳನ್ನು ಆಳಿದನು. ಮನಸ್ಯುವು ಸೌವೀರಿಯಲ್ಲಿ ಮೂರು ಮಕ್ಕಳನ್ನು ಪಡೆದನು: ಸುಭ್ರು, ಸಂಹನನ, ಮತ್ತು ವಾಗ್ಮಿ. ಈ ಎಲ್ಲ ಪುತ್ರರೂ ಮಹಾರಥಿಗಳೂ ಶೂರರೂ ಆಗಿದ್ದರು. ರೌದ್ರಾಶ್ವನು ಅಪ್ಸರೆಯಿಂದ ಯಜ್ಞಾದಿಗಳನ್ನು ಮಾಡಿದ, ಮಹೇಶ್ವಾಸ, ಶೂರ. ಪ್ರಜಾವಂತ, ಬಹುಶ್ರುತ ಹತ್ತು ಮಕ್ಕಳನ್ನು ಪಡೆದನು. ಸರ್ವರೂ ಸರ್ವಾಸ್ತ್ರವಿದ್ವಾಂಸರಾಗಿದ್ದರು. ಸರ್ವರೂ

ಧರ್ಮಪರಾಯಣರಾಗಿದ್ದರು. ಋಚೇಪು, ಕಕ್ಷೇಪು, ಕುಕಣೇಪು, ಸ್ಥಂಡಿಲೇಪು, ವನೇಪು, ಮಹಾರಥಿ ಸ್ಥಲೇಪು, ತೇಜೇಪು, ಸತ್ಯೇಪು, ಧರ್ಮೇಪು, ಮತ್ತು ಹತ್ತನೆಯವನು ದೇವವಿಕ್ರಮಿ ಸಂನತೇಪು. ಅನಾಧೃಷ್ಟಿಯಲ್ಲಿ ಜನಿಸಿದ ಇವರೆಲ್ಲರೂ ರಾಜಸೂಯ-ಅಶ್ವಮೇಧಗಳನ್ನು ನೆರವೇರಿಸಿದರು. ರಾಜ ಋಚೇಪುವು ಮತಿನಾರನೆಂಬ ವಿದ್ವಾಂಸ ಪುತ್ರನನ್ನು ಪಡೆದನು. ರಾಜ ಮತಿನಾರನು ನಾಲ್ಕು ಅಮಿತವಿಕ್ರಮಿ ಪುತ್ರರನ್ನು ಪಡೆದನು: ತಂಸು, ಮಹತ್, ಅತಿರಥ ಮತ್ತು ಅಪ್ರತಿಮದ್ಯುತಿ ದ್ರುಹ್ಯು. ಅವರಲ್ಲಿ ಮಹಾವೀರ ತಂಸುವು ಪೌರವ ವಂಶವನ್ನು ಮುಂದುವರೆಸಿ, ದೇದೀಪ್ಯಮಾನ ಕೀರ್ತಿಯನ್ನು ಹೊಂದಿ ಭೂಮಿಯನ್ನು ಗೆದ್ದನು.

ತಂಸುವಿಗೆ ಇಲಿನ ಎನ್ನುವ ವೀರ್ಯವಂತ ಮಗನು ಹುಟ್ಟಿದನು. ಆ ವಿಜಯಿಗಳಲ್ಲಿ ಶ್ರೇಷ್ಠನು ಇಡೀ ಭೂಮಿಯ ಮೇಲೆ ವಿಜಯ ಗಳಿಸಿದನು. ನೃಪ ಇಲಿನನು ರಥಂತರಿಯಲ್ಲಿ ಪಂಚಭೂತಗಳಿಗೆ ಸಮ ದುಃಷಂತನೇ ಮೊದಲಾದ ಐದು ಮಕ್ಕಳನ್ನು ಪಡೆದನು: ದುಃಷಂತ, ಶೂರ, ಭೀಮ, ಪ್ರವಸು ಮತ್ತು ವಸು. ಅವರಲ್ಲಿ ಹಿರಿಯವನು ರಾಜ ದುಃಷಂತ. ನೃಪ ದುಃಷಂತನಿಂದ ಶಕುಂತಲೆಯಲ್ಲಿ ಭರತನು ಹುಟ್ಟಿದನು. ಅವನಿಂದ ಮಹಾಯಶಸ್ವಿ ಭರತವಂಶವು ಪ್ರಾರಂಭವಾಯಿತು.

ಭರತನು ತನ್ನ ಮೂವರು ಪತ್ನಿಯರಲ್ಲಿ ಒಂಭತ್ತು ಪುತ್ರರನ್ನು

ಪಡೆದನು. ನನ್ನ ಅನುರೂಪರಾದವರು ಯಾರೂ ಇಲ್ಲ ಎಂದು ಅವರಲ್ಲಿ ಯಾರನ್ನೂ ರಾಜನು ಒಪ್ಪಿಕೊಳ್ಳಲಿಲ್ಲ. ಆಗ ಭರತನು ಒಂದು ಮಹಾ ಕ್ರತುವನ್ನು ನಡೆಸಿ ಅದರಿಂದ ಭರದ್ವಾಜನಿಂದ ಭುಮನ್ಯು ಎಂಬ ಹೆಸರಿನ ಪುತ್ರನನ್ನು ಪಡೆದನು. ಆ ಪೌರವನಂದನನು ಭುಮನ್ಯುವನ್ನು ತನ್ನ ಪುತ್ರನೆಂದೇ ಸ್ವೀಕರಿಸಿ ಅವನನ್ನು ಯುವರಾಜನನ್ನಾಗಿ ಅಭಿಷೇಕಿಸಿದನು. ಆಗ ಆ ಮಹೀಂದ್ರನಿಗೆ ವಿತಥನೆಂಬ ಪುತ್ರನು ಜನಿಸಿದನು. ನಂತರ ಆ ವಿತಥನಿಗೆ ಭುಮನ್ಯು ಎಂಬ ಹೆಸರಿನ ಸುತನು ಜನಿಸಿದನು.

ಋಚೀಕ ಭುಮನ್ಯುವು ಪುಷ್ಕರಣಿಯಲ್ಲಿ ಸುಹೋತ್ರ, ಸುಹೋತ, ಸುಹವಿ ಮತ್ತು ಸುಯಜು ಎಂಬ ಮಕ್ಕಳನ್ನು ಪಡೆದನು. ಅವರಲ್ಲಿ ಹಿರಿಯವ ಸುಹೋತ್ರನು ಇಡೀ ಭೂಮಿಯನ್ನೇ ರಾಜ್ಯವಾಗಿ ಪಡೆದು, ರಾಜಸೂಯ-ಅಶ್ವಮೇಧ ಯಜ್ನಗಳಿಂದ ಬಹಳ ರಾಜರನ್ನು ಜಯಿಸಿದನು. ಸುಹೋತ್ರನು ಸಾಗರ ಮತ್ತು ಅಂಬರಗಳ ನಡುವಿನ ಈ ಭೂಮಿಯಲ್ಲಿಯ ಆನೆ, ಗೋವು, ಕುದುರೆ ಮತ್ತು ಬಹು ರತ್ನ ಸಮಾಕುಲ ಸರ್ವವನ್ನೂ ಪರಿಪೂರ್ಣವಾಗಿ ಅನುಭವಿಸಿದನು. ಅವನು ಹೇರಿಸಿದ ಆನೆಗಳ, ಕುದುರೆಗಳ, ರಥಗಳ ಮತ್ತು ಬಹುಸಂಖ್ಯೆಯ ಜನರ ಭಾರಿ ವಜೆಯಿಂದ ಭೂಮಿಯು ಕೆಳಗೆ ಕುಸಿದಂತೆ ತೋರುತ್ತಿತ್ತು. ರಾಜ ಸುಹೋತ್ರನು ಧರ್ಮದಲ್ಲಿ ಪ್ರಜೆಗಳನ್ನು ಆಳುತ್ತಿರುವಾಗ ಭೂಮಿಯು ನೂರಾರು ಸಹಸ್ರಾರು

ಚೈತ್ಯಗಳಿಂದಲೂ ಯಾಗ ಧ್ವಜಗಳಿಂದಲೂ ತುಂಬಿತ್ತು. ಭೂಮಿಯ ಮೇಲೆ ಫಸಲು ಮತ್ತು ಜನರು ಸಂವೃದ್ಧರಾಗಿದ್ದರು, ಮತ್ತು ದೇವತೆಗಳೊಂದಿಗೆ ಭೂಮಿಯೂ ಸಂತಸಗೊಂಡಿತ್ತು. ಈ ಪೃಥಿವೀಪತಿ ಸುಹೋತ್ರನಿಗೆ ಐಕ್ಷ್ವಾಕಿಯಲ್ಲಿ ಅಜಮೀಢ, ಸುಮೀಢ, ಮತ್ತು ಪುರುಮೀಢ ಎನ್ನುವ ಮಕ್ಕಳು ಜನಿಸಿದರು. ಅವರಲ್ಲಿ ಶ್ರೇಷ್ಠ ಅಜಮೀಢನಲ್ಲಿ ವಂಶವು ಮುಂದುವರೆಯಿತು.

ಅವನ ಮೂವರು ಪತ್ನಿಯರಲ್ಲಿ ಆರು ಪುತ್ರರು ಜನಿಸಿದರುಃ ಧೂಮ್ನಿಯಲ್ಲಿ ಋಕ್ಷ, ನೀಲಿಯಲ್ಲಿ ದುಃಷಂತ ಮತ್ತು ಪರಮೇಷ್ಠಿ, ಮತ್ತು ಕೇಶಿನಿಯಲ್ಲಿ ಜಹ್ನು, ಜನ ಮತ್ತು ರೂಪಿನರು ಜನಿಸಿದರು. ದುಃಷಂತ ಮತ್ತು ಪರಮೇಷ್ಠಿಯರಿಂದ ಸರ್ವ ಪಾಂಚಾಲರೂ ಮತ್ತು ಅಮಿತತೇಜಸ ಜಹ್ನುವುನಿಂದ ಕುಶಿಕರೂ ಜನಿಸಿದರು. ಜನ ಮತ್ತು ರೂಪಿನರಿಗಿಂತಲೂ ಹಿರಿಯವ ಋಕ್ಷನು ರಾಜನಾದನು, ಮತ್ತು ಋಕ್ಷನಿಂದ ಹುಟ್ಟಿದ ಸಂವರಣನಿಂದ ಕೌರವ ವಂಶವು ಪ್ರಾರಂಭವಾಯಿತು.

ಆರ್ಕ್ಷ ಸಂವರಣನು ಭೂಮಿಯ ಮೇಲೆ ಪ್ರಶಾಸನ ಮಾಡುತ್ತಿದ್ದಾಗ ಜನರಿಗೆ ಒಂದು ಮಹತ್ತರ ದುಷ್ಕಾಲ ಒದಗಿತು. ಆಗ ರಾಷ್ಟ್ರವು ನಾನಾ ವಿಧದ ಕ್ಷಯಗಳಿಂದಲೂ, ಅಕಾಲ ಮೃತ್ಯು, ಅನಾವೃಷ್ಠಿ, ವ್ಯಾಧಿಗಳಿಂದ ಪೀಡಿತಗೊಂಡಿತ್ತು.  ಪಾಂಚಾಲರು ತಮ್ಮ ಅಕ್ಷೌಹಿಣೀ ಚತುರಂಗ ಬಲದಿಂದ ಭಾರತರನ್ನು ಆಕ್ರಮಿಸಿ, ಇಡೀ

ಭೂಮಿಯನ್ನೇ ನಡುಗಿಸುತ್ತಾ ಯುದ್ಧದಲ್ಲಿ ಅವರನ್ನು ಗೆದ್ದರು. ಆಗ ರಾಜ ಸಂವರಣನು ತನ್ನ ಪತ್ನಿ, ಅಮಾತ್ಯ, ಪುತ್ರ ಮತ್ತು ಸುಹೃಜ್ಜನರೊಂದಿಗೆ ಮಹಾ ಭಯದಿಂದ ಪಲಾಯನಗೈದನು. ಸಿಂಧೂ ನದಿಯ ತೀರದಲ್ಲಿ ಪರ್ವತದ ಸಮೀಪದಲ್ಲಿಯ ಮಹಾ ನಿಕುಂಜದಲ್ಲಿ ವಾಸಿಸಿದನು. ಕಷ್ಟಕ್ಕೀಡಾದ ಭರತರು ಅಲ್ಲಿ ಬಹಳಕಾಲ ವಾಸಿಸಿದರು - ಅಲ್ಲಿರುವವರಿಗೆ ಒಂದು ಸಹಸ್ರವರ್ಷಗಳೋ ಎಂಬಂತೆ ತೋರಿದವು. ಆಗ ಭಗವಾನ್ ವಸಿಷ್ಠ ಋಷಿಯು ಭರತರಲ್ಲಿಗೆ ಬಂದನು. ಅವನು ಬರುತ್ತಿದ್ದಂತೆ ಅವರೆಲ್ಲರೂ ಧಾರ್ಮಿಕವಾಗಿ ಎದ್ದು ನಿಂತು ಅಭಿವಂದಿಸಿ ಸ್ವಾಗತಿಸಿದರು. ಸರ್ವ ಭಾರತರೂ ಅರ್ಘ್ಯ, ಅಭ್ಯಾಹಾರಗಳಿಂದ, ನೈವೇದ್ಯ, ಮತ್ತು ಸರ್ವ ಸತ್ಕಾರಗಳಿಂದ ಆ ಋಷಿಯನ್ನು ಪೂಜಿಸಿದರು. ಅವನು ಅಲ್ಲಿ ಅವರೊಡನೆ ಎಂಟು ವರ್ಷಗಳಿದ್ದನು. ಆಗ ಸ್ವಯಂ ರಾಜನು “ನಮ್ಮ ಪುರೋಹಿತರಾಗಿದ್ದು ನಮಗೆ ನಮ್ಮ ರಾಜ್ಯವನ್ನು ಹಿಂದೆ ದೊರಕಿಸಿಕೊಡಿ!” ಎಂದು ಕೇಳಿದಾಗ, ವಸಿಷ್ಠನು ಓಂ ಎಂದು ಹೇಳಿ ಭಾರತರಿಗೆ ಒಪ್ಪಿಕೊಂಡನು.

ಆಗ ಅವನು ಪೌರವನನ್ನು ಸರ್ವಕ್ಷತ್ರಿಯರ ಸಾಮ್ರಾಜ್ಯನೆಂದು ಅಭೀಷೇಕಿಸಿ, ಇಡೀ ಪೃಥ್ವಿಯ ನಾಯಕನಾಗಿ ನಿಯೋಜಿಸಿದನು. ಹಿಂದೆ ಭರತರು ನೆಲೆಸಿದ್ದ ಉತ್ತಮ ಪುರದಲ್ಲಿ ಪುನಃ ರಾಜನು ನೆಲೆಸಿ, ಪುನಃ ಸರ್ವ ಮಹೀಕ್ಷಿತರೂ ಕಪ್ಪವನ್ನು ಕೊಡುವಂತೆ

ಮಾಡಿಸಿದನು. ಪೃಥ್ವಿಯನ್ನು ಪುನಃ ಪಡೆದ ಮಹಾಬಲಿ ಅಜಮೀಢನು ಭಾರೀ ಭೂರಿದಕ್ಷಿಣೆಗಳನ್ನಿತ್ತು ಮಹಾ ಯಜ್ಞಗಳನ್ನು ನೆರವೇರಿಸಿದನು. ನಂತರ ಸಂವರಣನು ಸೂರ್ಯನ ಪುತ್ರಿ ತಪತಿಯಲ್ಲಿ ಕುರುವನ್ನು ಪಡೆದನು. ಅವನು ಧರ್ಮಜ್ಞನೆಂದು ಸರ್ವ ಪ್ರಜೆಗಳೂ ಅವನನ್ನು ರಾಜನನ್ನಾಗಿ ಆರಿಸಿದರು. ಅವನ ಹೆಸರಿನಿಂದಲೇ ಈ ಕುರುಜಂಗಲವು ಭೂಮಿಯಲ್ಲೆಲ್ಲಾ ವಿಖ್ಯಾತವಾಯಿತು; ಆ ಮಹಾತಪಸ್ವಿಯ ತಪಸ್ಸಿನಿಂದಲೇ ಕುರುಕ್ಷೇತ್ರವು ಪುಣ್ಯಕ್ಷೇತ್ರವಾಯಿತು. ಅವನಿಗೆ ಅಶ್ವವಂತ, ಅಭಿಶ್ವಂತ, ಚಿತ್ರರಥ, ಮುನಿ ಮತ್ತು ವಿಖ್ಯಾತ ಜನಮೇಜಯ ಈ ಐವರು ಪುತ್ರರು ಮನಸ್ವಿನೀ ವಾಹಿನಿಯಲ್ಲಿ ಜನಿಸಿದರು. ಅಭಿಶ್ವಂತನ ಮಕ್ಕಳು ಪರಿಕ್ಷಿತ, ಶಬಲಾಶ್ವ, ಅಭಿರಾಜ, ವಿರಾಜ, ಶಲ್ಮಲ, ಉಚ್ಛೈಶ್ರವ, ಭದ್ರಕಾರ ಮತ್ತು ಎಂಟನೆಯವನು ಜಿತಾರಿ. ಇವರೆಲ್ಲರೂ ತಮ್ಮ ತಮ್ಮ ಕರ್ಮ ಗುಣಗಳಿಂದ ವಿಖ್ಯಾತರಾಗಿದ್ದರು. ಅವರ ವಂಶದಲ್ಲಿ ಜನಮೇಜಯನೇ ಮೊದಲಾದ ಇನ್ನೂ ಏಳು ಬಲಶಾಲಿ ಪುತ್ರರು ಆದರು. ಕಕ್ಷಸೇನ, ಉಗ್ರಸೇನ, ಚಿತ್ರಸೇನ, ಇಂದ್ರಸೇನ, ಸುಷೇಣ, ಮತ್ತು ಭೀಮಸೇನ ಎಂಬ ಹೆಸರಿನ ಪರಿಕ್ಷಿತನ ಪುತ್ರರೆಲ್ಲರೂ ಧರ್ಮಾರ್ಥಕೋವಿದರಾಗಿದ್ದರು.

ಜನಮೇಜಯನ ಮಹಾಬಲಶಾಲಿ ಪುತ್ರರು ಭೂಮಿಯಲ್ಲಿ

ವಿಖ್ಯಾತರಾದರು - ಹಿರಿಯವನು ಧೃತರಾಷ್ಟ್ರ, ಪಾಂಡು, ಬಾಹ್ಲೀಕ, ಮಹಾತೇಜಸ್ವಿ ನಿಷಧ, ಬಲಶಾಲಿ ಜಾಂಬೂನದ, ಕುಂಡೋದರ, ಪದಾತಿ, ಮತ್ತು ಎಂಟನೆಯವನು ವಸಾತಿ. ಇವರೆಲ್ಲರೂ ಧರ್ಮಾರ್ಥಕುಶಲರಾಗಿ ಸರ್ವ ಭೂತಹಿತದಲ್ಲಿ ನಿರತರಾಗಿದ್ದರು. ಧೃತರಾಷ್ಟ್ರನು ರಾಜನಾದನು. ಅವನ ಪುತ್ರರು ಕುಂಡಿಕ, ಹಸ್ತಿ, ವಿತರ್ಕ, ಕ್ರಾಥ, ಐದನೆಯವನು ಕುಂಡಲ, ಹವಿಃಶ್ರವ, ಇಂದ್ರಾಭ ಮತ್ತು ಅಪರಾಜಿತ ಸುಮನ್ಯು. ಪ್ರತೀಪನು ಮೂರು ಮಕ್ಕಳನ್ನು ಪಡೆದನು: ದೇವಾಪಿ, ಶಂತನು, ಮತ್ತು ಮಹಾರಥಿ ಬಾಹ್ಲೀಕ. ಧರ್ಮಮಾರ್ಗವನ್ನು ಅರಸಿ ದೇವಾಪಿಯು ಪರಿವ್ರಾಜನಾದನು. ಮಹಾರಥಿ ಬಾಹ್ಲೀಕ ಮತ್ತು ಶಂತನು ರಾಜ್ಯವನ್ನು ಪಡೆದರು. ಭರತಾನ್ವಯದಲ್ಲಿ ಇನ್ನೂ ಅನೇಕ ಸತ್ವವಂತರೂ, ಮಹಾರಥಿಗಳು, ದೇವರ್ಷಿಸಮಾನರೂ ಆದ ಬಹಳಷ್ಟು ರಾಜಸತ್ತಮರು ಜನಿಸಿದರು. ಇದೇ ರೀತಿಯಲ್ಲಿ ಮನುವಿನ ಅನ್ವಯದಲ್ಲಿ ಇತರ ದೇವಕಲ್ಪ ಮಹಾರಥಿಗಳು ಹುಟ್ಟಿ, ಇಲನಿಂದ ಪ್ರಾರಂಭವಾದ ವಂಶವನ್ನು ಮುಂದುವರೆಸಿದರು.

## ಸಂಪೂರ್ಣ ವಂಶಾವಳಿ

ದಕ್ಷನಿಂದ ಅದಿತಿ. ಅದಿತಿಯಿಂದ ವಿವಸ್ವತ. ವಿವಸ್ವತನಿಂದ ಮನು. ಮನುವಿನಿಂದ ಇಲ. ಇಲನಿಂದ ಪುರೂರವ. ಪುರೂರವನಿಂದ ಆಯುಸ್. ಆಯುಸನಿಂದ ನಹುಷ. ನಹುಷನಿಂದ ಯಯಾತಿ.

ಯಯಾತಿಗೆ ಈರ್ವರು ಪತ್ನಿಯರು. ಉಶನಸನ ಪುತ್ರಿ ದೇವಯಾನಿ ಮತ್ತು ವೃಷಪರ್ವನ ಮಗಳು ಶರ್ಮಿಷ್ಠೆ. ಯದು ಮತ್ತು ತುರ್ವಸು ದೇವಯಾನಿಯಲ್ಲಿ ಮತ್ತು ದ್ರುಹ್ಯು, ಅನು ಮತ್ತು ಪುರು ವಾರ್ಷಪರ್ವಣೀ ಶರ್ಮಿಷ್ಠೆಯಲ್ಲಿ ಜನಿಸಿದರು. ಯದುವಿನಿಂದ ಯಾದವರಾದರು. ಪುರುವಿಂದ ಪೌರವರಾದರು. ಪುರುವಿನ ಪತ್ನಿ ಕೌಸಲ್ಯಾ. ಅವಳಲ್ಲಿ ಅವನು ಜನಮೇಜಯನನ್ನು ಪಡೆದನು. ಅವನು ಮೂರು ಅಶ್ವಮೇಧ ಯಜ್ಞಗಳನ್ನು ಮಾಡಿದನು. ವಿಶ್ವಜಿತ್ ಯಜ್ಞವನ್ನು ಮಾಡಿ ಅವನು ವನವನ್ನು ಪ್ರವೇಶಿಸಿದನು. ಜನಮೇಜಯನು ಮಾಧವೀ ಅನಂತಾ ಎನ್ನುವವಳನ್ನು ಮದುವೆಯಾದನು. ಅವರಲ್ಲಿ ಪ್ರಾಚಿನ್ವತನು ಜನಿಸಿದನು. ಅವನು ಸೂರ್ಯೋದಯವಾಗುವ ವರೆಗೆ ಪೂರ್ವದಿಶೆಯನ್ನು ಗೆದ್ದನು. ಆದುದರಿಂದ ಅವನ ಹೆಸರು ಪ್ರಾಚಿನ್ವತ. ಪ್ರಾಚಿನ್ವತನು ಅಶ್ಮಕಿಯನ್ನು ವಿವಾಹವಾದನು. ಅವಳಲ್ಲಿ ಸಂಯಾತಿಯು ಜನಿಸಿದನು. ಸಂಯಾತಿಯು ದೃಶದ್ವತನ ಮಗಳು ವರಾಂಗೀ ಎನ್ನುವವಳನ್ನು ವಿವಾಹವಾದನು. ಅವರಲ್ಲಿ ಅಹಂಪತಿಯು ಜನಿಸಿದನು. ಅಹಂಪತಿಯು ಕೃತವೀರ್ಯನ ಮಗಳು ಭಾನುಮತಿಯನ್ನು ವಿವಾಹವಾದನು. ಅವಳಲ್ಲಿ ಸಾರ್ವಭೌಮನು ಜನಿಸಿದನು. ಸಾರ್ವಭೌಮನು ಕೈಕೇಯೀ ಸುನಂದಾ ಎನ್ನುವವಳನ್ನು ಗೆದ್ದು ಅಪಹರಿಸಿ ಮದುವೆಯಾದನು. ಅವರಲ್ಲಿ ಜಯತ್ಸೇನನು ಜನಿಸಿದನು. ಜಯತ್ಸೇನನು ವಿದರ್ಭದ ಸುಶ್ರವಳನ್ನು

ವಿವಾಹವಾದನು. ಅವಳಲ್ಲಿ ಅರ್ಚಿನನು ಜನಿಸಿದನು. ಅರ್ಚಿನನು ವಿದರ್ಭದ ಇನ್ನೊಬ್ಬ ಸ್ತ್ರೀ ಮರ್ಯಾದಳನ್ನು ವಿವಾಹವಾದನು. ಅವರಲ್ಲಿ ಮಹಾಭೌಮನು ಜನಿಸಿದನು. ಮಹಾಭೌಮನು ಪ್ರಸೇನಜಿತನ ಮಗಳು ಸುಜ್ಞಳನ್ನು ಮದುವೆಯಾದನು. ಅವಳಲ್ಲಿ ಅಯುತನಾಯಿಯು ಜನಿಸಿದನು. ಅವನು ಅಯುತ ಮನುಷ್ಯಮೇಧ ಯಾಗವನ್ನು ನಡೆಸಿದನು. ಆದುದರಿಂದ ಅವನ ಹೆಸರು ಅಯುತನಾಯಿಯೆಂದಾಯಿತು. ಅಯುತನಾಯಿಯು ಪೃತುಶ್ರವನ ಮಗಳು ಭಾಸಳನ್ನು ವಿವಾಹವಾದನು. ಅವಳಲ್ಲಿ ಅಕ್ರೋಧನನು ಜನಿಸಿದನು. ಅಕ್ರೋಧನನು ಕಳಿಂಗದ ಕರಂದುವನ್ನು ಮದುವೆಯಾಗಿ ಅವಳಲ್ಲಿ ದೇವತಿಥಿಯನ್ನು ಪಡೆದನು. ದೇವತಿಥಿಯು ವಿದೇಹದ ಮರ್ಯಾದಳನ್ನು ಮದುವೆಯಾದನು, ಮತ್ತು ಅವಳಲ್ಲಿ ಋಚನು ಜನಿಸಿದನು. ಋಚನು ಅಂಗದೇಶದ ಸುದೇವಳನ್ನು ವಿವಾಹವಾದನು. ಅವಳಲ್ಲಿ ಋಕ್ಷನು ಜನಿಸಿದನು. ಋಕ್ಷನು ತಕ್ಷಕನ ಮಗಳು ಜ್ವಾಲಾಳನ್ನು ಮದುವೆಯಾಗಿ, ಅವಳಲ್ಲಿ ಮತಿನಾರ ಎನ್ನುವವನ ತಂದೆಯಾದನು. ಸರಸ್ವತೀ ತೀರದಲ್ಲಿ ಮತಿನಾರನು ಹನ್ನೆರಡು ವರ್ಷಗಳ ದೀರ್ಘ ಸತ್ರವನ್ನು ನಡೆಸಿದನು. ಸತ್ರವು ಮುಗಿದಾಗ, ಸರಸ್ವತಿಯು ಬಂದು ಅವನನ್ನು ತನ್ನ ಪತಿಯನ್ನಾಗಿ ವರಿಸಿದಳು. ಅವಳಲ್ಲಿ ತಂಸುವು ಜನಿಸಿದನು.

ಇಲ್ಲಿ ಮತ್ತೆ ಅನುವಂಶವಾಯಿತು. ಮತಿನಾರನಿಂದ ಸರಸ್ವತಿಯಲ್ಲಿ

ತಂಸುವು ಜನಿಸಿದನು. ತಂಸುವು ಕಾಲಿಂದಿಯಲ್ಲಿ ಇಲಿನನೆನ್ನುವ ಪುತ್ರನನ್ನು ಪಡೆದನು. ಇಲಿನನು ರಥಂತರಿಯಲ್ಲಿ ದುಃಷಂತನೇ ಮೊದಲಾದ ಐವರು ಪುತ್ರರನ್ನು ಪಡೆದನು. ದುಃಷಂತನು ವಿಶ್ವಾಮಿತ್ರನ ಮಗಳು ಶಕುಂತಲೆಯನ್ನು ವಿವಾಹವಾದನು. ಅವರಲ್ಲಿ ಭರತನು ಹುಟ್ಟಿದನು. ಭರತನು ಕಾಶಿಯ ಸಾರ್ವಸೇನನ ಮಗಳು ಸುನಂದಳನ್ನು ವಿವಾಹವಾದನು. ಅವಳಲ್ಲಿ ಭುಮನ್ಯುವು ಜನಿಸಿದನು. ಭುಮನ್ಯುವು ದಾಶಾರ್ಹರ ಜಯಾ ಎನ್ನುವವಳನ್ನು ಮದುವೆಯಾದನು. ಅವಳಲ್ಲಿ ಸುಹೋತ್ರನು ಜನಿಸಿದನು. ಸುಹೋತ್ರನು ಇಕ್ಷ್ವಾಕುವಂಶದ ಸುವರ್ಣಾ ಎನ್ನುವವಳನ್ನು ವಿವಾಹವಾದನು. ಅವಳಲ್ಲಿ ಹಸ್ತಿಯು ಜನಿಸಿದನು. ಅವನೇ ಈ ಹಸ್ತಿನಾಪುರವನ್ನು ಕಟ್ಟಿದನು. ಹಸ್ತಿಯು ತ್ರಿಗರ್ತೀ ಯಶೋಧರೆಯನ್ನು ವಿವಾಹವಾದನು. ಅವಳಲ್ಲಿ ವಿಕುಂಠನನು ಜನಿಸಿದನು. ವಿಕುಂಠನನು ದಾಶಾರ್ಹಿ ಸುದೇವಳನ್ನು ಮದುವೆಯಾದನು. ಅವಳಲ್ಲಿ ಅಜಮೀಢನು ಜನಿಸಿದನು. ಅಜಮೀಢನು ೨೪ ಸಾವಿರ ಪುತ್ರರನ್ನು ಕೈಕೇಯಿ, ನಾಗ, ಗಂಧರ್ವಿ, ವಿಮಲಾ ಮತ್ತು ಋಕ್ಷರಿಂದ ಪಡೆದನು. ಅವರಲ್ಲಿ ಪ್ರತಿಯೊಬ್ಬರೂ ರಾಜರಾದರು. ಅವರಲ್ಲಿ ಸಂವರಣನು ವಂಶವನ್ನು ಮುಂದುವರೆಸಿದನು.

ಸಂವರಣನು ವಿವಸ್ವತನ ಮಗಳು ತಪತಿಯನ್ನು ವಿವಾಹವಾದನು. ಅವಳಲ್ಲಿ ಕುರುವು ಜನಿಸಿದನು. ಕುರುವು ದಾಶಾರ್ಹಿ

ಶುಭಾಂಗಿಯನ್ನು ಮದುವೆಯಾದನು. ಅವಳಲ್ಲಿ ವಿದುರಥನನ್ನು ಪಡೆದನು. ವಿದುರಥನು ಮಾಧವಿ ಸಂಪ್ರಿಯಳನ್ನು ಮದುವೆಯಾಗಿ ಅವಳಲ್ಲಿ ಅರುಗ್ವತನನ್ನು ಪಡೆದನು. ಅರುಗ್ವತನು ಮಗಧ ದೇಶದ ಅಮೃತಾಳನ್ನು ವಿವಾಹವಾದನು. ಅವಳಲ್ಲಿ ಭೀಮಸೇನನು ಜನಿಸಿದನು. ಭೀಮಸೇನನು ಕೇಕಯದ ಸುಕುಮಾರಿಯನ್ನು ಮದುವೆಯಾಗಿ ಅವಳಲ್ಲಿ ಪರ್ಯಶ್ರವಸನನ್ನು ಪಡೆದನು. ಅವನನ್ನು ಪ್ರತೀಪ ಎಂದೂ ಕರೆಯುತ್ತಾರೆ. ಪ್ರತೀಪನು ಶಿಬಿ ದೇಶದ ಸುನಂದಳನ್ನು ವಿವಾಹವಾದನು. ಅವಳಲ್ಲಿ ದೇವಾಪಿ, ಶಂತನು ಮತ್ತು ಬಾಹ್ಲೀಕರನ್ನು ಪಡೆದನು. ದೇವಾಪಿಯು ಬಾಲ್ಯದಲ್ಲಿಯೇ ಅರಣ್ಯವನ್ನು ಸೇರಿದನು. ಶಂತನುವು ರಾಜನಾದನು. ಇದಕ್ಕೆ ಒಂದು ಶ್ಲೋಕವಿದೆ: “ಅವನು ತನ್ನ ಕೈಯಿಂದ ಮುಟ್ಟಿದ ಪ್ರತಿಯೊಬ್ಬ ವೃದ್ಧನೂ ಸುಖವನ್ನು ಅನುಭವಿಸಿದನು ಮತ್ತು ಪುನಃ ಯುವಕನಾದನು. ಆದುದರಿಂದ ಅವನನ್ನು ಶಂತನು ಎಂದು ಕರೆದರು.”

ಶಂತನುವು ಗಂಗೆ ಭಾಗೀರಥಿಯನ್ನು ವಿವಾಹವಾದನು. ಅವಳಲ್ಲಿ ದೇವವ್ರತನು ಜನಿಸಿದನು. ಅವನನ್ನು ಭೀಷ್ಮ ಎಂದು ಕರೆದರು. ತನ್ನ ತಂದೆಗೆ ಪ್ರಿಯವಾದದ್ದನ್ನು ಮಾಡಲೋಸುಗ ಭೀಷ್ಮನು ತಾಯಿ ಸತ್ಯವತಿಯನ್ನು ಕರೆತಂದು ಅವನಿಗೆ ಮದುವೆಮಾಡಿಸಿದನು. ಅವಳನ್ನು ಗಂಧಕಾಲೀ ಎಂದೂ ಕರೆಯುತ್ತಿದ್ದರು. ಅವಳು

ಕನ್ಯೆಯಾಗಿರುವಾಗಲೇ ಪರಾಶರನಿಂದ ದ್ವೈಪಾಯನನಿಗೆ ಜನ್ಮವಿತ್ತಿದ್ದಳು. ಅವಳು ಶಂತನುವಿನಿಂದ ಈರ್ವರು ಪುತ್ರರನ್ನು ಪಡೆದಳು: ಚಿತ್ರಾಂಗದ ಮತ್ತು ವಿಚಿತ್ರವೀರ್ಯ. ಅವರಲ್ಲಿ ಚಿತ್ರಾಂಗದನು ಯೌವನ ಪ್ರಾಪ್ತಿಯಾಗುವುದರೊಳಗೇ ಗಂಧರ್ವನೋರ್ವನಿಂದ ಹತನಾದನು. ನಂತರ ವಿಚಿತ್ರವೀರ್ಯನು ರಾಜನಾದನು. ವಿಚಿತ್ರವೀರ್ಯನು ಕಾಶಿರಾಜ ಮತ್ತು ಅವನ ಪತ್ನಿ ಕೌಶಲ್ಯಳ ಪುತ್ರಿಯರೀರ್ವರನ್ನು ವಿವಾಹವಾದನು: ಅಂಬಿಕಾ ಮತ್ತು ಅಂಬಾಲಿಕಾ. ವಿಚಿತ್ರವೀರ್ಯನು ಮಕ್ಕಳಿಲ್ಲದೆಯೇ ತೀರಿಕೊಂಡನು. ದೌಃಷಂತನ ಈ ವಂಶಾವಳಿಯು ನಿಂತುಹೋಗುತ್ತದೆಯೋ ಎಂದು ಸತ್ಯವತಿಯು ಚಿಂತಿಸತೊಡಗಿದಳು. ಅವಳು ಋಷಿ ದ್ವೈಪಾಯನನನ್ನು ನೆನಪಿಸಿಕೊಂಡಳು. ಅವನು ಅವಳ ಎದುರು ಬಂದು "ಏನು ಮಾಡಲಿ?" ಎಂದನು. "ನಿನ್ನ ತಮ್ಮ ವಿಚಿತ್ರವೀರ್ಯನು ಮಕ್ಕಳಿಲ್ಲದೆಯೇ ತೀರಿಕೊಂಡಿದ್ದಾನೆ. ಅವನ ಪತ್ನಿಯರಲ್ಲಿ ಅವನ ಮಕ್ಕಳ ತಂದೆಯಾಗು!". "ಹಾಗೆಯೇ ಆಗಲಿ!" ಎಂದು ಅವನು ಮೂವರು ಮಕ್ಕಳ ತಂದೆಯಾದನು: ಧೃತರಾಷ್ಟ್ರ, ಪಾಂಡು ಮತ್ತು ವಿದುರ.

ಅವರಲ್ಲಿ ಧೃತರಾಷ್ಟ್ರನು ದ್ವೈಪಾಯನನ ವರದಾನದಿಂದ ಗಾಂಧಾರಿಯಲ್ಲಿ ನೂರು ಪುತ್ರರನ್ನು ಪಡೆದನು. ಧೃತರಾಷ್ಟ್ರನ ಆ ಪುತ್ರರಲ್ಲಿ ನಾಲ್ವರು ಪ್ರಧಾನರಾಗಿದ್ದರು: ದುರ್ಯೋಧನ,

ದುಃಶಾಶನ, ವಿಕರ್ಣ ಮತ್ತು ಚಿತ್ರಸೇನ. ಪಾಡುವಿಗೆ ಇಬ್ಬರು ಪತ್ರಿಯರಿದ್ದರುಃ ಸ್ತ್ರೀ ರತ್ನರಾದ ಕುಂತೀ ಮತ್ತು ಮಾದ್ರೀ. ಒಮ್ಮೆ ಪಾಂಡುವು ಮೃಗಬೇಟೆಗೆಂದು ಹೋದಾಗ ಅಲ್ಲಿ ಜಿಂಕೆಗಳ ರೂಪದಲ್ಲಿ ಸಂಭೋಗಮಾಡುತ್ತಿದ್ದ ಋಷಿಯರನ್ನು ಕಂಡನು. ಗಂಡು ಜಿಂಕೆಯು ಹೆಣ್ಣು ಜಿಂಕೆಯ ಮೇಲೆ ಹಾರಿ ತನ್ನ ಕಾಮ ಸುಖವನ್ನು ತೀರಿಸಿಕೊಳ್ಳುತ್ತಿರುವಾಗಲೇ ಅವನು ಬಾಣವನ್ನು ಬಿಟ್ಟನು. ಬಾಣದಿಂದ ಗಾಯಗೊಂಡ ಅವನು ಪಾಂಡುವಿಗೆ ಹೇಳಿದನುಃ

> “ಧರ್ಮದಲ್ಲಿ ನಡೆಯುತ್ತಿದ್ದ ಕಾಮರಸವನ್ನು ಅರಿತಿದ್ದವನಾದ ನೀನು ನಾನು ಕಾಮರಸವನ್ನು ಹೊಂದಿ ತೃಪ್ತನಾಗುವುದರೊಳಗೇ ನನ್ನನ್ನು ಹೊಡೆದ ಕಾರಣ ನೀನು ಕೂಡ ನನ್ನ ಪರಿಸ್ಥಿತಿಯಲ್ಲಿರುವಾಗ ತಕ್ಷಣವೇ ಕಾಮರಸವನ್ನು ಹೊಂದುವುದರೊಳಗೇ ಪಂಚಭೂತಗಳ ವಶನಾಗುತ್ತೀಯೆ!”

ವಿವರ್ಣರೂಪಿ ಪಾಂಡುವು ಶಾಪ ಪರಿಹಾರಾರ್ಥವಾಗಿ ತನ್ನ ಪತ್ನಿಯರನ್ನು ಕೂಡಲಿಲ್ಲ. ಅವನು ಹೇಳಿದನುಃ

> “ನನ್ನ ಚಾಪಲ್ಯದಿಂದಲೇ ಇದನ್ನು ಪಡೆದಿದ್ದೇನೆ. ಮತ್ತು ಮಕ್ಕಳಿಲ್ಲದವನಿಗೆ ಯಾವ ಲೋಕವೂ ದೊರೆಯುವುದಿಲ್ಲ ಎಂದು ಕೇಳಿದ್ದೇನೆ. ನನಗೋಸ್ಕರ ಮಕ್ಕಳನ್ನು ಪಡೆ!”

ಎಂದು ಅವನು ಕುಂತಿಗೆ ಹೇಳಿದನು. ಆಗ ಅವಳು ಅಲ್ಲಿ ಪುತ್ರರನ್ನು

ಪಡೆದಳು: ಧರ್ಮನಿಂದ ಯುಧಿಷ್ಠಿರ, ವಾಯುವಿನಿಂದ ಭೀಮಸೇನ, ಮತ್ತು ಶಕ್ರನಿಂದ ಅರ್ಜುನ. ಸಂತೋಷಗೊಂಡ ಪಾಂಡುವು ಹೇಳಿದನು: "ನಿನ್ನ ಸಪತ್ನಿಗೆ ಮಕ್ಕಳಿಲ್ಲ. ಆ ಸಾಧ್ವಿಯಲ್ಲಿಯೂ ಮಕ್ಕಳಾಗಲಿ!" "ಹಾಗೆಯೇ ಆಗಲಿ!" ಎಂದು ಕುಂತಿಯು ಹೇಳಿದಳು. ನಂತರ ಮಾದ್ರಿಯಲ್ಲಿ ಅಶ್ವಿನಿಯರಿಂದ ನಕುಲ ಸಹದೇವರು ಹುಟ್ಟಿದರು.

ಒಳ್ಳೆ ಅಲಂಕೃತಳಾದ ಮಾದ್ರಿಯನ್ನು ನೋಡಿದ ಪಾಂಡುವು ಭಾವುಕನಾಗಿ ಅವಳನ್ನು ಮುಟ್ಟುತ್ತಿದ್ದಂತೆಯೇ ವಿದೇಹತ್ವವನ್ನು ಹೊಂದಿದನು. ಮಾದ್ರಿಯು ಅವನ ಚಿತೆಯನ್ನೇರಿದಳು. ಅವಳು ಕುಂತಿಗೆ ಹೇಳಿದಳು:

> "ಆರ್ಯೆಯಾದ ನೀನು ಈ ಅವಳಿ ಮಕ್ಕಳನ್ನು ಸರಿಯಾದ ನೋಡಿಕೋ!"

ನಂತರ ತಾಪಸಿಗಳು ಕುಂತಿಯ ಸಹಿತ ಪಂಚಪಾಂಡವರನ್ನು ಹಸ್ತಿನಾಪುರಕ್ಕೆ ಕರೆತಂದು ಭೀಷ್ಮ ಮತ್ತು ವಿದುರರಿಗೆ ಒಪ್ಪಿಸಿದರು. ಅವರು ಅರಗಿನಮನೆಯಲ್ಲಿ ಸುಟ್ಟು ಹೋಗುತ್ತಾರೆಂದಿದ್ದಾಗ ವಿದುರನ ಸೂಚನೆಯಿಂದ ಹಾಗೆ ಆಗಲಿಲ್ಲ. ನಂತರ ಹಿಡಿಂಬನನ್ನು ಸಂಹರಿಸಿ ಏಕಚಕ್ರಕ್ಕೆ ಹೋದರು. ಏಕಚಕ್ರದಲ್ಲಿ ಬಕ ಎನ್ನುವ ರಾಕ್ಷಸನನ್ನು ಕೊಂದು ಅಲ್ಲಿಂದ ಪಾಂಚಾಲನಗರಿಗೆ ಬಂದರು. ಅಲ್ಲಿ ದ್ರೌಪದಿಯನ್ನು ಭಾರ್ಯೆಯನ್ನಾಗಿ ಗೆದ್ದು ಕುಶಲರಾಗಿ ತಮ್ಮ ನಗರಿಗೆ

ಹಿಂದಿರುಗಿದರು. ಅವಳಲ್ಲಿ ಪುತ್ರರಾದರು: ಯುಧಿಷ್ಠಿರನಿಂದ ಪ್ರತಿವಿಂಧ್ಯ, ವೃಕೋದರನಿಂದ ಸುತಸೋಮ, ಅರ್ಜುನನಿಂದ ಶೃತಕೀರ್ತಿ, ನಕುಲನಿಂದ ಶತಾನೀಕ, ಮತ್ತು ಸಹದೇವನಿಂದ ಶೃತಕರ್ಮ.

ಯುಧಿಷ್ಠಿರನು ಶೈಬ್ಯ ಗೋವಾಸನನ ದೇವಕಿ ಎಂಬ ಹೆಸರಿನ ಕನ್ಯೆಯನ್ನು ಸ್ವಯಂವರದಲ್ಲಿ ಗೆದ್ದನು. ಅವಳಲ್ಲಿ ಯೌಧೇಯ ಎಂಬ ಹೆಸರಿನ ಪುತ್ರನನ್ನು ಪಡೆದನು. ಭೀಮಸೇನನು ಕಾಶಿಯ ಬಲಧರಾ ಎಂಬ ಹೆಸರಿನವಳನ್ನು ವೀರ್ಯಶುಲ್ಕವಾಗಿ ಪಡೆದು ಮದುವೆಯಾದನು. ಅವಳಲ್ಲಿ ಸರ್ವಗ ಎಂಬ ಹೆಸರಿನ ಪುತ್ರನನ್ನು ಪಡೆದನು. ಅರ್ಜುನನು ದ್ವಾರವತಿಗೆ ಹೋಗಿ ವಾಸುದೇವನ ಭಗಿನಿ ಸುಭದ್ರೆಯನ್ನು ವಿವಾಹವಾದನು. ಅವಳಲ್ಲಿ ಅಭಿಮನ್ಯು ಎನ್ನುವ ಪುತ್ರನನ್ನು ಪಡೆದನು. ನಕುಲನು ಚೈದ್ಯದೇಶದ ಕರೇಣುವತಿ ಎನ್ನುವವಳನ್ನು ಮದುವೆಯಾದನು. ಅವಳಲ್ಲಿ ನಿರಮಿತ್ರ ಎನ್ನುವ ಮಗನನ್ನು ಪಡೆದನು. ಸಹದೇವನು ಮಾದ್ರಿ ವಿಜಯಳನ್ನು ಸ್ವಯಂವರದಲ್ಲಿ ಗೆದ್ದು ಮದುವೆಯಾದನು. ಅವಳಲ್ಲಿ ಸುಹೋತ್ರ ಎನ್ನುವ ಪುತ್ರನನ್ನು ಪಡೆದನು. ಭೀಮಸೇನನು ಮೊದಲೇ ರಾಕ್ಷಸಿ ಹಿಡಿಂಬಿಯಲ್ಲಿ ಘಟೋತ್ಕಚ ಎಂಬ ಪುತ್ರನ್ನನ್ನು ಪಡೆದಿದ್ದನು. ಇವರೆಲ್ಲರೂ ಪಾಂಡವರ ಹನ್ನೊಂದು ಪುತ್ರರು.

ಅಭಿಮನ್ಯುವು ವಿರಾಟನ ಮಗಳು ಉತ್ತರೆಯನ್ನು ವಿವಾಹವಾದನು.

ಅವಳಲ್ಲಿ ಅವನು ಸತ್ತಿದ್ದ ಮಗನನ್ನು ಪಡೆದನು. ಪುರುಷೋತ್ತಮ ವಾಸುದೇವನು

> "ಈ ಆರುತಿಂಗಳ ಗರ್ಭವನ್ನು ನಾನು ಬದುಕಿಸುತ್ತೇನೆ
> ಪೃಥಾಳು ಅವನನ್ನು ತನ್ನ ಬಾಹುಗಳಲ್ಲಿ ತೆಗೆದುಕೊಳ್ಳಲಿ!"

ಎಂದು ಹೇಳಿದನು. ಅವನನ್ನು ಬದುಕಿಸಿ ಹೇಳಿದನು:

> "ಪರಿಕ್ಷೀಣವಾಗುತ್ತಿದ್ದ ಕುಲದಲ್ಲಿ ಹುಟ್ಟಿದುದರಿಂದ ಇವನು
> ಪರಿಕ್ಷಿತನೆಂದಾಗಲಿ!"

ಎಂದನು. ಪರಿಕ್ಷಿತನು ಮಾದ್ರವತಿ ಎನ್ನುವವಳನ್ನು ವಿವಾಹವಾದನು. ಅವಳಲ್ಲಿ ಜನಮೇಜಯನನ್ನು ಪಡೆದನು. ಜನಮೇಜಯನಿಗೆ ವಪುಷ್ಟಮೆಯಲ್ಲಿ ಈರ್ವರು ಪುತ್ರರು ಜನಿಸಿದರು: ಶತಾನೀಕ ಮತ್ತು ಶಂಕು. ಶತಾನೀಕನು ವೈದೇಹಿಯನ್ನು ಮದುವೆಯಾದನು. ಅವಳಲ್ಲಿ ಪುತ್ರ ಅಶ್ವಮೇಧದತ್ತನು ಜನಿಸಿದನು. ಈ ರೀತಿ ಪುರುವಂಶ ಮತ್ತು ಪಾಂಡವ ವಂಶಗಳ ಕೀರ್ತನೆಯಿದೆ. ಈ ಪುರುವಂಶಾವಳಿಯನ್ನು ಕೇಳಿದವರು ಸರ್ವಪಾಪಗಳಿಂದಲೂ ವಿಮುಕ್ತರಾಗುತ್ತಾರೆ.

# ಶಂತನು-ಗಂಗೆ-ಭೀಷ್ಮ-ಸತ್ಯವತಿ

## ವಸು ಉಪರಿಚರ

ಒಂದು ಕಾಲದಲ್ಲಿ ಬೇಟೆಯಾಡುವುದರಲ್ಲಿ ಆಸಕ್ತಿಯನ್ನಿಟ್ಟಿದ್ದ ಧರ್ಮನಿತ್ಯ, ಸತ್ಯವ್ರತ, ಮಹೀಪತಿ, ಉಪರಿಚರ ಎಂಬ ಹೆಸರಿನ ರಾಜನಿದ್ದನು. ಆ ಪೌರವನಂದನ ಮಹೀಪತಿಯು ಇಂದ್ರನ ಉಪದೇಶದಂತೆ ರಮ್ಯ ಸಂಪದ್ಭರಿತ ಚೇದಿರಾಜ್ಯವನ್ನು ತನ್ನದಾಗಿಸಿಕೊಂಡನು. ಶಸ್ತ್ರಗಳನ್ನು ಪರಿತ್ಯಜಿಸಿ ಆಶ್ರಮದಲ್ಲಿ ವಾಸಿಸುತ್ತಾ ತಪೋನಿರತನಾಗಿರಲು ಆ ಮಹೀಪತಿಯ ಬಳಿ ಸಾಕ್ಷಾತ್ ದೇವ ವಜ್ರಿಯೇ ಸ್ವಯಂ ಬಂದನು. ತನ್ನ ತಪಸ್ಸಿನ ಮೂಲಕ ರಾಜನು ಇಂದ್ರತ್ವಕ್ಕೆ ಅರ್ಹನಾಗಬಲ್ಲನೆಂದು ಚಿಂತಿಸಿ ಅವನು ನೃಪನಿಗೆ ತಪಸ್ಸನ್ನು ತೊರೆಯಲು ಸಲಹೆಯನ್ನಿತ್ತನು:

> “ಪೃಥ್ವೀಪತೇ! ಪೃಥ್ವಿಯಲ್ಲಿ ಧರ್ಮ ಸಂಕರವು ನಡೆಯದಿರಲಿ. ಧರ್ಮವನ್ನು ರಕ್ಷಿಸು, ಯಾಕೆಂದರೆ ಧೃತ ಧರ್ಮವು ಇಡೀ ಜಗತ್ತನ್ನೇ ಎತ್ತಿ ಹಿಡಿಯುತ್ತದೆ. ನಿತ್ಯಯುಕ್ತನೂ ಸಮಾಹಿತನೂ ಆಗಿ ಲೋಕಧರ್ಮವನ್ನು ಪಾಲಿಸು. ಧರ್ಮಯುಕ್ತನಾಗಿದ್ದರೆ ಲೋಕಗಳಲ್ಲಿ ಶಾಶ್ವತ ಪುಣ್ಯಗಳನ್ನು ಸಂಪಾದಿಸುವೆ. ನಾನು ದಿವಿ ಮತ್ತು ನೀನು ಭುವಿಗೆ ಸೇರಿದ್ದರೂ ನೀನು ನನ್ನ ಪ್ರಿಯ ಸಖನಾಗಿರು.

ಪೃಥ್ವಿಯಲ್ಲಿ ಪಶುಭರಿತ, ಪುಣ್ಯ, ಸುಸ್ಥಿರ, ಧನಧಾನ್ಯಗಳಿಂದ ತುಂಬಿದ, ಸುರಕ್ಷ, ಸೌಮ್ಯ, ಸುಗುಣಗಳನ್ನು ಹೊಂದಿದ್ದ ಭೋಗ್ಯಭೂಮಿಯನ್ನು ನಿನ್ನ ದೇಶವನ್ನಾಗಿಸಿ ಆಳು. ಈ ವಸುಧೆಯಲ್ಲಿ ಚೇದಿಯೇ ಧನರತ್ನಭರಿತ, ಸಂಪೂರ್ಣ ಸಂಪತ್ತನ್ನು ಹೊಂದಿದ ದೇಶ. ಅಲ್ಲಿ ವಾಸಿಸು. ನಾಗರಿಕರೆಲ್ಲ ಧರ್ಮಶೀಲರೂ, ಸುಸಂತುಷ್ಠರೂ, ಸಾಧುಗಳೂ ಇದ್ದು ಅಲ್ಲಿ ನಿಜವಾಗಿ ಬಿಡು, ಚೇಷ್ಟೆಗೂ ಕೂಡ ಸುಳ್ಳನ್ನಾಡುವುದಿಲ್ಲ. ಅಲ್ಲಿಯ ಜನರು ಗುರುಹಿತರತರಾಗಿರುತ್ತಾರೆ, ತಂದೆಯಿಂದ ಬೇರೆಯಾಗುವುದಿಲ್ಲ. ನೇಗಿಲಿಗೆ ಅಥವಾ ಬಂಡಿಗಳಿಗೆ ಹಸುಗಳನ್ನು ಕಟ್ಟುವುದಿಲ್ಲ, ಮತ್ತು ಬಡಕಲು ಗೋವುಗಳೂ ಕೂಡ ಸಮೃದ್ಧ ಹಾಲನ್ನು ಕೊಡುತ್ತವೆ. ಚೇದಿಯಲ್ಲಿ ಸರ್ವ ವರ್ಣದವರೂ ಸದಾ ಸ್ವಧರ್ಮ ನಿರತರಾಗಿದ್ದಾರೆ. ಈ ಮೂರೂ ಲೋಕಗಳಲ್ಲಿ ನಿನಗೆ ತಿಳಿಯದೇ ಇರುವಂಥಹದು ಯಾವುದೂ ನಡೆಯುವುದಿಲ್ಲ. ದೇವೋಪಭೋಗ್ಯ ದಿವ್ಯ, ಆಕಾಶದಲ್ಲಿರುವ ಮಹಾ ಸ್ಫಟಿಕದ ಈ ಆಕಾಶಗ ವಿಮಾನವನ್ನು ನಿನಗೆ ನಾನು ಉಡುಗೊರೆಯಾಗಿ ಕೊಡುತ್ತಿದ್ದೇನೆ. ಸರ್ವ ಮರ್ತ್ಯರಲ್ಲಿ ನೀನೊಬ್ಬನೇ ವಿಮಾನದಲ್ಲಿ ಕುಳಿತು ದೇವ ವಿಗ್ರಹನಂತೆ ಸಂಚರಿಸಬಲ್ಲವನಾಗುತ್ತೀಯೆ. ಬಾಡದೇ ಇರುವ ಕಮಲಗಳಿಂದ ರಚಿಸಿದ ಈ ವೈಜಯಂತಿ ಮಾಲೆಯನ್ನು

ಕೊಡುತ್ತಿದ್ದೇನೆ. ಇದನ್ನು ಧರಿಸಿದರೆ ಸಂಗ್ರಾಮದಲ್ಲಿ ನಿನಗೆ ಶಸ್ತ್ರಗಳಿಂದ ರಕ್ಷಣೆ ದೊರೆಯುತ್ತದೆ. ಇಂದ್ರಮಾಲಾ ಎಂದು ವಿಖ್ಯಾತ ಈ ಧನ್ಯ, ಅಪ್ರತಿಮ ಮಹತ್ತರ ಮಾಲೆಯು ನಿನಗೆ ದೇವತೆಗಳಿತ್ತ ಗುರುತಾಗಿರುತ್ತದೆ.”

ವೃತ್ರನಿಶೂದನನು ಅವನಿಗೆ ಇಷ್ಟಪ್ರದಾನ ಮತ್ತು ಶಿಷ್ಟ ಪರಿಪಾಲನೆಗೋಸ್ಕರ ಒಂದು ಬಿದುರಿನ ಕಂಬವನ್ನೂ ಕೊಟ್ಟನು. ಒಂದು ಸಂವತ್ಸರವು ಕಳೆದ ನಂತರ ಭೂಮಿಪತಿಯು ಶಕ್ರನ ಪೂಜಾರ್ಥವಾಗಿ ಅದನ್ನು ಭೂಮಿಯಲ್ಲಿ ಹುಗಿಸಿದನು. ಅಂದಿನಿಂದ ಯಾವೆಲ್ಲ ಕ್ಷಿತಿಪತಿಸತ್ತಮರಾದರೋ ಅವರೆಲ್ಲರೂ ಅವನು ಮಾಡಿದ ರೀತಿಯಲ್ಲಿ ಬಿದಿರಿನ ಕಂಬವನ್ನು ಭೂಮಿಯಲ್ಲಿ ಹುಗಿಯುತ್ತಿದ್ದರು. ನಂತರ ನೃಪನು ಅದನ್ನು ನೇರವಾಗಿ ನಿಲ್ಲಿಸಿ ಅದನ್ನು ಪಿಟಕ, ಗಂಧ ಮತ್ತು ಮಾಲೆ ಭೂಷಣಗಳಿಂದ ಅಲಂಕರಿಸಿ ಮಾಲೆಗಳಿಂದ ಸುತ್ತಿ ವಿಧಿವತ್ತಾಗಿ ಪೂಜಿಸುತ್ತಿದ್ದರು. ಈ ರೀತಿ ಪೂಜಿಸಿಕೊಂಡ ಭಗವಾನ್ ಶಂಕರನು ಸ್ವಯಂ ತಾನೇ ಹಂಸರೂಪದಲ್ಲಿ ಬಂದು ಮಹಾತ್ಮ ವಸುವಿನ ಪೂಜೆಯನ್ನು ಸ್ವೀಕರಿಸಿದನು. ವಿಭು ಮಹೇಂದ್ರನಾದರೋ ಈ ಮಂಗಳಕರ ಪೂಜೆಯನ್ನು ನೋಡಿ ಸಂತೃಪ್ತನಾಗಿ ರಾಜಮುಖ್ಯ ವಸುವಿಗೆ ಹೇಳಿದನು:

“ಚೇದಿಪತಿ ನೃಪನ ಹಾಗೆ ಸಂತಸದಿಂದ ಯಾವ ನರ ಅಥವಾ ರಾಜನು ನನ್ನ ಈ ಮಹಾ ಪೂಜೆಯನ್ನು

ಮಾಡುತ್ತಾನೋ ಅವನಿಗೆ ಸಂಪತ್ತು, ವಿಜಯ ಮತ್ತು ರಾಜ್ಯಗಳು ದೊರೆಯುತ್ತವೆ. ಅವನ ಜನಪದವೂ ವಿಸ್ತಾರಗೊಳ್ಳುತ್ತದೆ ಮತ್ತು ಸದಾ ಸಂತಸದಲ್ಲಿರುತ್ತದೆ.”

ಈ ರೀತಿ ನರಾಧಿಪ ಮಹಾರಾಜ ವಸುವು ಸಂಪ್ರೀತ ಮಹಾತ್ಮ ಮಹೇಂದ್ರ ಮಘವತನಿಂದ ಹರಸಲ್ಪಟ್ಟನು. ಯಾವ ಮಾನವರು ಸದಾ ಭೂಮಿದಾನ ಮತ್ತು ಇತರ ದಾನಗಳೊಂದಿಗೆ ಈ ಶಕ್ರನ ಉತ್ಸವವನ್ನು ನಡೆಸುತ್ತಾರೋ ಅವರು ಪವಿತ್ರರಾಗುತ್ತಾರೆ. ವರದಾನ ಮಹಾಯಜ್ಞಗಳೊಡಗೂಡಿದ ಈ ಶಕ್ರೋತ್ಸವದಿಂದ ಅವರು ಚೇದಿಪತಿ ವಸುವಿನಂತೆ ಮಘವತನಿಂದ ಸಂಪೂಜಿತರಾಗುತ್ತಾರೆ. ಭೂಮಿಪತಿ ವಸುವು ಚೇದಿಯಲ್ಲಿದ್ದುಕೊಂಡು ಇಡೀ ಪೃಥ್ವಿಯನ್ನು ಧರ್ಮದಿಂದ ಪಾಲಿಸಿದನು ಮತ್ತು ಇಂದ್ರನ ಪ್ರೀತಿಗೋಸ್ಕರ ಇಂದ್ರಮಹವನ್ನು ರಚಿಸಿದನು.

ಅವನಿಗೆ ಐದು ಅಮಿತೌಜಸ ಮಹಾವೀರ್ಯವಂತ ಪುತ್ರರಾದರು ಮತ್ತು ತನ್ನ ಮಕ್ಕಳನ್ನು ನಾನಾ ರಾಜ್ಯಗಳಲ್ಲಿ ಸಾಮ್ರಾಟರನ್ನಾಗಿ ನಿಯೋಜಿಸಿದನು. ಮಹಾರಥಿಯೆಂದು ವಿಶ್ರುತ ಮಗಧರಾಜ ಬೃಹದ್ರಥ, ಪ್ರತ್ಯಗ್ರಹ, ಮಣಿವಾಹನನೆಂದೂ ಕರೆಯಲ್ಪಟ್ಟ ಕುಶಾಂಬ, ಮಚ್ಛಿಲ ಮತ್ತು ಯದು - ಎಲ್ಲರೂ ಅಪರಾಜಿತ ರಾಜರುಗಳು. ಭೂರಿತೇಜಸ ರಾಜರ್ಷಿ ರಾಜನ ಈ ಮಕ್ಕಳು ತಮ್ಮ ಹೆಸರುಗಳನ್ನೇ ಹೊಂದಿದ ದೇಶ ಮತ್ತು ಪುರಗಳನ್ನು ಸ್ಥಾಪಿಸಿದರು;

ಈ ಐದು ವಾಸವ ರಾಜರು ಮುಂದೆ ತಮ್ಮ ಶಾಶ್ವತ ವಂಶಗಳನ್ನು ಸ್ಥಾಪಿಸಿದರು. ಇಂದ್ರನು ನೀಡಿದ ಸ್ಫಟಿಕ ವಿಮಾನದಲ್ಲಿ ಆಕಾಶದಲ್ಲಿ ಹೋಗುತ್ತಿರುವಾಗ ಮಹಾತ್ಮ ನೃಪ ವಸುವನ್ನು ಗಂಧರ್ವ ಅಪ್ಸರೆಯರು ಉಪಚರಿಸುತ್ತಿದ್ದರು. ಆದುದರಿಂದ ಅವನಿಗೆ ರಾಜ ಉಪರಿಚರ ಎಂಬ ಹೆಸರು ಬಂದಿತು.

ಒಮ್ಮೆ ಪುರದ ಬಳಿಯಲ್ಲಿ ಹರಿಯುತ್ತಿದ್ದ ಶುಕ್ತಿಮತಿ ನದಿಯನ್ನು ಕೋಲಾಹಲವೆಂಬ ಕಾಮಪೀಡಿತ ಗಿರಿಯು ಬಲತ್ಕಾರಮಾಡಿತು. ಆಗ ವಸುವು ಕೋಲಾಹಲ ಪರ್ವತವನ್ನು ತನ್ನ ಕಾಲಿನಿಂದ ಒದ್ದಾಗ ಅವನ ಈ ಒದೆತದಿಂದ ಉಂಟಾದ ಕಣಿವೆಯಲ್ಲಿ ನದಿಯು ಹರಿಯಲು ಪ್ರಾರಂಭಿಸಿತು. ಸ್ವಯಂ ಪರ್ವತನೊಂದಿಗೆ ಕೂಡಿದ ನದಿಯಲ್ಲಿ ಅವಳಿ ಮಕ್ಕಳು ಜನಿಸಿದರು; ಮತ್ತು ತನಗೆ ಮೋಕ್ಷವನ್ನು ನೀಡಿದ ರಾಜನಿಗೆ ನದಿಯು ಅವರನ್ನು ಸಂತೋಷದಿಂದ ರಾಜನಿಗೆ ಕೊಟ್ಟಳು. ಅವರಲ್ಲಿ ಓರ್ವನು ಹುಡುಗನಾಗಿದ್ದನು. ಆ ಅರಿಂದಮನನ್ನು ರಾಜರ್ಷಿಸತ್ತಮ ವಸುವು ತನ್ನ ಸೇನಾಪತಿಯನಾಗಿ ನಿಯುಕ್ತಿಸಿ ಕೊಂಡನು. ಮಗಳು ಗಿರಿಕೆಯನ್ನು ನೃಪನು ತನ್ನ ಪತ್ನಿಯನ್ನಾಗಿ ಮಾಡಿಕೊಂಡನು. ಒಮ್ಮೆ ವಸುವಿನ ಪತ್ನಿ ಗಿರಿಕೆಯು ತಾನು ಕಾಮಕಾಲದಲ್ಲಿದ್ದೇನೆಂದು ತಿಳಿಸಿ ಋತುಕಾಲವನ್ನು ಮುಗಿಸಿ ಸ್ನಾನಮಾಡಿ ಶುಚಿಭೂರ್ತಳಾಗಿ ಪುಂಸವನಳಾದಳು. ಆದರೆ ಅದೇ ದಿವಸ ಅವನ ಪ್ರೀತ ಪಿತೃಗಳು ಮತಿವಂತರಲ್ಲಿ ಶ್ರೇಷ್ಠ ಆ

ರಾಜಸತ್ತಮನಿಗೆ "ಜಿಂಕೆಯನ್ನು ಹೊಡೆದು ತಾ!" ಎಂದರು. ತನ್ನ ಪಿತೃಗಳ ನಿಯೋಗವನ್ನು ಅತಿಕ್ರಮಿಸಲಾಗದೆ ಆ ಪಾರ್ಥಿವನು ಕಾಮದಲ್ಲಿದ್ದ ಸಾಕ್ಷಾತ್ ಶ್ರೀಯನ್ನು ಮೀರಿದ ಅತೀವ ರೂಪಸಂಪನ್ನ ಗರಿಕೆಯನ್ನೇ ನೆನೆಯುತ್ತಾ ಜಿಂಕೆಯನ್ನು ಬೇಟೆಯಾಡಲು ಹೋದನು. ಆ ಸುಂದರ ವನದಲ್ಲಿ ತಿರುಗುತ್ತಿರುವಾಗ ಅವನ ವೀರ್ಯ ಸ್ಖಲನವಾಯಿತು. ಸ್ಖಲನವಾದ ಕೂಡಲೇ ಭೂಮಿಪನು ಆ ವೀರ್ಯವನ್ನು ಒಂದು ಮರದ ಎಲೆಯಲ್ಲಿ ಹಿಡಿದನು. ಹಿಡಿದು

> "ನನ್ನ ಈ ಸ್ಖಲಿತ ವೀರ್ಯವು ಹಾಳಾಗಬಾರದು ಮತ್ತು
> ನನ್ನ ಪತ್ನಿಯ ಋತುಕಾಲವೂ ವ್ಯರ್ಥವಾಗಬಾರದು"

ಎಂದು ಪ್ರಭುವು ಯೋಚಿಸಿದನು. ಈ ಯೋಚನೆ ಬಂದಕೂಡಲೇ ರಾಜನು ಪುನಃ ಪುನಃ ವಿಚಾರಮಾಡಿದನು. ರಾಜಸತ್ತಮನು ವೀರ್ಯವು ಬೀಳುವ ವೇಳೆಯಲ್ಲಿ ರಾಣಿಯು ಋತುಮತಿಯಾಗಿದ್ದಾಳೆ ಎಂದು ತಿಳಿದು ತನ್ನ ವೀರ್ಯವು ನಷ್ಟವಾಗಕೂಡದೆಂದು ನಿಶ್ಚಯಿಸಿದನು. ಧರ್ಮಾರ್ಥಗಳ ಸೂಕ್ಷ್ಮತೆಯನ್ನು ತಿಳಿದಿದ್ದ ಅವನು ವೀರ್ಯವನ್ನು ಅಭಿಮಂತ್ರಿಸಿ ಹತ್ತಿರದಲ್ಲಿಯೇ ಕುಳಿತಿದ್ದ ಒಂದು ವೇಗವಾಹಿನಿ ಗಿಡುಗವನ್ನುದ್ದೇಶಿಸಿ ಹೇಳಿದನು:

> "ಸೌಮ್ಯ! ನನ್ನ ಪ್ರಿಯೆಯ ಸಲುವಾಗಿ ಈ ವೀರ್ಯವನ್ನು
> ತೆಗೆದುಕೊಂಡು ನನ್ನ ಮನೆಗೆ ಹೋಗಿ ಗಿರಿಕೆಗೆ ಕೊಡು.
> ಇಂದು ಅವಳು ಋತುಮತಿಯಾಗಿದ್ದಾಳೆ."

ಗಿಡುಗವು ಅದನ್ನು ಹಿಡಿದು ತಕ್ಷಣವೇ ಮೇಲೆ ಹಾರಿತು. ಆ ಪಕ್ಷಿಯು ತಕ್ಷಣವೇ ಅತ್ಯಂತ ವೇಗದಲ್ಲಿ ಹಾರತೊಡಗಿತು. ಬರುತ್ತಿದ್ದ ಗಿಡುಗವನ್ನು ಇನ್ನೊಂದು ಗಿಡುಗವು ನೋಡಿ, ನೋಡಿದಾಕ್ಷಣವೇ, ಅದು ಹಿಡಿದಿದ್ದುದು ಮಾಂಸದ ತುಂಡೆಂದು ಶಂಕಿಸಿ ಅದನ್ನು ಬೆನ್ನಟ್ಟಿತು ಮತ್ತು ಅವೆರಡೂ ಆಕಾಶದಲ್ಲಿ ಕಿತ್ತಾಡ ತೊಡಗಿದವು. ಹೀಗೆ ಕಿತ್ತಾಡುತ್ತಿರುವಾಗ ಆ ವೀರ್ಯವು ಯಮುನಾ ನದಿಯಲ್ಲಿ ಬಿದ್ದಿತು. ಅಲ್ಲಿ ಆದ್ರಿಕ ಎಂಬ ವಿಖ್ಯಾತ ಅಪ್ಸರ ಶ್ರೇಷ್ಠಳು ಬ್ರಹ್ಮಶಾಪದಿಂದಾಗಿ ಮೀನಿನ ರೂಪವನ್ನು ಹೊಂದಿ ಯಮುನೆಯಲ್ಲಿ ಈಸುತ್ತಿದ್ದಳು. ಗಿಡುಗನ ಕಾಲಿನಿಂದ ಬಿದ್ದ ವಾಸವನ ವೀರ್ಯವನ್ನು ತಕ್ಷಣವೇ ಮತ್ಸ್ಯರೂಪಿಣಿಯಾಗಿ ಈಸುತ್ತಿದ್ದ ಆದ್ರಿಕೆಯು ನುಂಗಿದಳು. ಹತ್ತು ತಿಂಗಳುಗಳು ಕಳೆದ ನಂತರ ಒಮ್ಮೆ ಬೆಸ್ತರು ಆ ಮತ್ಸ್ಯೆಯನ್ನು ಹಿಡಿದರು, ಮತ್ತು ಅದರ ಹೊಟ್ಟೆಯಲ್ಲಿ ಒಂದು ಹೆಣ್ಣು ಮತ್ತು ಗಂಡು ಅವಳಿ ನರರನ್ನು ಕಂಡರು. ಆಶ್ಚರ್ಯಗೊಂಡ ಅವರು ರಾಜನಲ್ಲಿಗೆ ಹೋಗಿ ನಿವೇದಿಸಿದರು:

> “ರಾಜನ್! ಈ ಮನುಷ್ಯ ಅವಳಿಗಳು ಮತ್ಸ್ಯೆಯ
> ದೇಹದಿಂದ ಜನಿಸಿದರು.”

ಅವರೀರ್ವರಲ್ಲಿ ಗಂಡುಮಗುವನ್ನು ರಾಜ ಉಪರಿಚರನು ತೆಗೆದುಕೊಂಡನು, ಮತ್ತು ಅವನು ಧಾರ್ಮಿಕ ಸತ್ಯಸಂಗರ ಮತ್ಸ್ಯ ಎಂಬ ಹೆಸರಿನ ರಾಜನಾದನು.

"ಶುಭೇ ! ನೀನು ಪ್ರಾಣಿಯೋನಿಯಲ್ಲಿರುವಾಗ ನೀನು ಈರ್ವರು ನರಪುತ್ರರಿಗೆ ಜನ್ಮವಿತ್ತಾಗ ಶಾಪದಿಂದ ವಿಮುಕ್ತಳಾಗುತ್ತೀಯೆ !"

ಎಂದು ಹಿಂದೆ ಭಗವಂತನು ಹೇಳಿದ ಹಾಗೆಯೇ ಆ ಅಪ್ಸರೆಯು ಕ್ಷಣದಲ್ಲಿಯೇ ಶಾಪ ವಿಮುಕ್ತಳಾದಳು. ಅವರೀರ್ವರಿಗೆ ಜನ್ಮವಿತ್ತು ಬೆಸ್ತರಿಂದ ಕೊಲ್ಲಲ್ಪಟ್ಟ ಆ ಅಪ್ಸರ ಶ್ರೇಷ್ಠೆಯು ಮತ್ಸ್ಯರೂಪವನ್ನು ತ್ಯಜಿಸಿ ತನ್ನ ದಿವ್ಯ ರೂಪವನ್ನು ಹೊಂದಿ ಸಿದ್ಧ ಋಷಿ ಚರಣರ ದಾರಿಯಲ್ಲಿ ಹೊರಟು ಹೋದಳು. ಮೀನಿನ ವಾಸನೆಯನ್ನು ಹೊಂದಿದ್ದ ಆ ಮೀನಿನ ಮಗಳು ರೂಪಸತ್ವ ಸಮಾಯುಕ್ತಳಾಗಿದ್ದಳು. ಸರ್ವ ಸುಮದಿತ ಗುಣಗಳಿಂದ ಕೂಡಿದ ಆ ಕನ್ಯೆಯನ್ನು ರಾಜನು ದಾಶನಿಗೆ "ಇವಳು ನಿನ್ನ ಮಗಳಾಗಿರಲಿ !" ಎಂದು ಕೊಟ್ಟನು. ಸತ್ಯವತೀ ಎಂಬ ಹೆಸರಿನ ಆ ಶುಚಿಸ್ಮಿತೆಯು ಬೆಸ್ತರೊಂದಿಗೆ ವಾಸಿಸುತ್ತಿದ್ದುದರಿಂದ ಕೆಲವು ಕಾಲದವರೆಗೆ ಮೀನಿನ ವಾಸನೆಯನ್ನು ಹೊಂದಿದ್ದಳು. ತಂದೆಯ ಶುಶ್ರೂಷೆ ಮಾಡಲೋಸುಗ ನದಿಯಲ್ಲಿ ದೋಣಿಯನ್ನು ನಡೆಸುತ್ತಿದ್ದ ಅವಳನ್ನು ಒಮ್ಮೆ ತೀರ್ಥಯಾತ್ರೆ ಮಾಡುತ್ತಾ ತಿರುಗುತ್ತಿದ್ದ ಪರಾಶರನು ನೋಡಿದನು. ಸಿದ್ಧರ ಮನವನ್ನೂ ಸೆಳೆಯುವ ಆ ಅತೀವ ರೂಪಸಂಪನ್ನೆಯನ್ನು ನೋಡಿದ ಆ ಧೀಮಂತ ವಿದ್ವಾಂಸ ಮುನಿಪುಂಗವನು ಅವಳ ಸೌಂದರ್ಯವನ್ನು ಬಯಸಿ ವಾಸವಿ ಕನ್ಯೆಯೊಡನೆ ಕಾರ್ಯನಿರತನಾದನು. ಅವಳು



ಹೇಳಿದಳು:

“ಭಗವನ್! ನೋಡು! ದಂಡೆಗಳಲ್ಲಿ ಋಷಿಗಳು ನಿಂತಿದ್ದಾರೆ. ಅವರು ನಮ್ಮನ್ನು ನೋಡುತ್ತಿದ್ದಂತೆ ನಾವು ಹೇಗೆ ಪರಸ್ಪರ ಸಮಾಗಮ ಹೊಂದೋಣ?”

ಇದನ್ನು ಕೇಳಿದ ಭಗವಾನ್ ಪ್ರಭುವು ಆ ಸ್ಥಳವನ್ನು ಕತ್ತಲೆ

ಕವಿಯುವಂತೆ ಮಂಜನ್ನು ನಿರ್ಮಿಸಿದನು. ಪರಮಋಷಿಯು ತಕ್ಷಣವೇ ಸೃಷ್ಟಿಸಿದ ಕತ್ತಲೆಯ ಆವರಣವನ್ನು ಕಂಡು ವಿಸ್ಮಿತ ಮನಸ್ವಿನಿಯು ನಾಚುತ್ತಾ ಹೇಳಿದಳು:

> "ಭಗವನ್! ಸದಾ ಪಿತೃವಶದಲ್ಲಿದ್ದು ಅವನನ್ನೇ ಅನುಸರಿಸುತ್ತಿರುವ ಕನ್ಯೆಯೆಂದು ನನ್ನನ್ನು ತಿಳಿ. ನಿನ್ನೊಡನೆ ಸೇರುವುದರಿಂದ ನನ್ನ ಕನ್ಯಾಭಾವದಲ್ಲಿ ದೋಷವುಂಟಾಗುವುದಲ್ಲವೇ? ಕನ್ಯತ್ವ ದೂಷಿತ ನಾನು ಹೇಗೆ ಮನೆಗೆ ಹಿಂದಿರುಗಲಿ? ಆಗ ನಾನು ಮನೆಯಲ್ಲಿ ವಾಸಿಸಲು ಉತ್ಸುಕಳಾಗುವುದಿಲ್ಲ. ಇವೆಲ್ಲವನ್ನೂ ಯೋಚಿಸಿ, ನಂತರ ನಿನಗೆ ತಿಳಿದದ್ದನ್ನು ಮಾಡು."

ಹೀಗೆ ಹೇಳಿದ ಅವಳಲ್ಲಿ ಬಹಳ ಸಂತಸಗೊಂಡ ಆ ಋಷಿಸತ್ತಮನು

> "ನನ್ನ ಪ್ರಿಯ ಕಾರ್ಯವನ್ನು ಮಾಡಿದ ನಂತರವೂ ನೀನು ಕನ್ಯೆಯಾಗಿಯೇ ಉಳಿಯುವೆ"

ಎಂದನು. "

> ಭಾಮಿನಿ! ನಿನಗಿಷ್ಟವಾದ ವರವನ್ನು ಕೇಳು. ನನ್ನ ಪ್ರಸಾದವು ಈ ಹಿಂದೆ ಎಂದೂ ವೃಥವಾಗಿಲ್ಲ."

ಇದನ್ನು ಕೇಳಿದ ಅವಳು ತನ್ನ ದೇಹವು ಉತ್ತಮ ಸುಗಂಧವನ್ನು ಹೊಂದಲಿ ಎಂದು ವರವನ್ನು ಕೇಳಲು ಅವಳ ಮನಸ್ಸಿನ

ಆಕಾಂಕ್ಷೆಯನ್ನು ಭಗವಾನ್ ಪ್ರಭುವು ನೀಡಿದನು. ಈ ವರವನ್ನು ಪಡೆದು ಪ್ರೀತಳಾದ ಅವಳು ಸ್ತ್ರೀಭಾವಗುಣ ಭೂಷಿತಳಾಗಿ ಆ ಅದ್ಭುತ ಕರ್ಮಣಿ ಋಷಿಯ ಬಳಿ ಸಾಗಿ ಕೂಡಿದಳು.  ಅಂದಿನಿಂದ ಅವಳು ಗಂಧವತೀ ಎಂಬ ಹೆಸರಿನಿಂದ ಭುವಿಯಲ್ಲಿ ಪ್ರಥಿತಗೊಂಡಳು. ಭುವಿಯಲ್ಲಿ ನರರಿಗೆ ಅವಳ ಸುಗಂಧವು ಒಂದು ಯೋಜನ ದೂರದಿಂದಲೂ ಸೂಸುವಂತಿತ್ತು. ಆದುದರಿಂದ ಅವಳು ಯೋಜನಗಂಧಿ ಎಂಬ ಹೆಸರಿನಿಂದಲೂ ಕರೆಯಲ್ಪಡುತ್ತಾಳೆ. ಭಗವಾನ್ ಪರಾಶರನು ತನ್ನ ನಿವೇಶನಕ್ಕೆ ತೆರಳಿದನು.

ಈ ರೀತಿ ಅನುತ್ತಮ ವರವನ್ನು ಪಡೆದ ಸತ್ಯವತಿಯು ಹರ್ಷಿತಳಾದಳು. ಪರಾಶರನನ್ನು ಸೇರಿದ ದಿನವೇ ಅವಳು ಆ ಯಮುನಾ ದ್ವೀಪದಲ್ಲಿ ವೀರ್ಯವಂತ ಪಾರಶರ್ಯನಿಗೆ ಜನ್ಮವಿತ್ತಳು. ತಪಸ್ಸನ್ನೇ ಮನದಲ್ಲಿಟ್ಟುಕೊಂಡಿದ್ದ ಅವನು ತಾಯಿಯ ಎದುರು ನಿಂತು

> “ನೀನು ಎಂದು ನನ್ನನ್ನು ನೆನೆದುಕೊಳ್ಳುತ್ತೀಯೋ ಆಗ ನಿನಗೆ ಕಾಣಿಸಿಕೊಳ್ಳುತ್ತೇನೆ ಮತ್ತು ಬೇಕಾದ ಕಾರ್ಯವನ್ನು ನಡೆಸಿಕೊಡುತ್ತೇನೆ”

ಎಂದು ಹೇಳಿದನು.

ಈ ರೀತಿ ದ್ವೈಪಾಯನನು ಪರಾಶರನಿಂದ ಸತ್ಯವತಿಯಲ್ಲಿ ಜನಿಸಿದನು. ದ್ವೀಪದಲ್ಲಿ ಅವನ ಜನ್ಮವಾದುದರಿಂದ ಅವನು

ದ್ವೈಪಾಯನನಾದನು. ಯುಗಯುಗದಲ್ಲಿಯೂ ಧರ್ಮದ ಒಂದೊಂದು ಕಾಲು ಕುಂಟಾಗುವುದೆಂದೂ ಮತ್ತು ಮನುಷ್ಯರ ಆಯಸ್ಸು ಮತ್ತು ಶಕ್ತಿಯು ಯುಗನಿಯಮಗಳನ್ನು ಅನುಸರಿಸಿದೆ ಎಂದು ತಿಳಿದ ಅವನು ಬ್ರಹ್ಮ ಮತ್ತು ಬ್ರಾಹ್ಮಣರಿಗೆ ಅನುಗ್ರಹಕಾರ್ಯ ಮಾಡಬೇಕೆಂದು ಬಯಸಿ ವೇದಗಳನ್ನು ವಿಂಗಡಿಸಿದನು, ಮತ್ತು ಇದರಿಂದಲೇ ಅವನು ವ್ಯಾಸನೆಂದು ಪ್ರಸಿದ್ಧನಾದನು. ಆ ವರಿಷ್ಠ ವರದ ಪ್ರಭುವು ವೇದಗಳನ್ನು ಮತ್ತು ಐದನೆಯದಾದ ಮಹಾಭಾರತವನ್ನು ಸುಮಂತ, ಜೈಮಿನಿ, ಪೈಲ, ತನ್ನ ಮಗ ಶುಕ ಮತ್ತು ವೈಶಂಪಾಯನನಿಗೆ ಹೇಳಿಕೊಟ್ಟನು. ಇವರು ತಮ್ಮ ತಮ್ಮ ಶೈಲಿಗಳಲ್ಲಿ ಭಾರತವನ್ನು ಪ್ರಕಾಶಿಸಿದರು.

## ಮಹಾಭಿಷ

ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ಮಹಾಭಿಷನೆಂದು ಖ್ಯಾತ ಸತ್ಯವಿಕ್ರಮಿ, ಸತ್ಯವಾಕ್ಯ ಪೃಥ್ವೀಪತಿ ರಾಜನಿದ್ದನು. ಸಾವಿರ ಅಶ್ವಮೇಧ ಮತ್ತು ನೂರು ವಾಜಪೇಯಗಳಿಂದ ಪ್ರಭು ದೇವೇಂದ್ರನನ್ನು ತೃಪ್ತಿಗೊಳಿಸಿ ಅವನು ಸ್ವರ್ಗವನ್ನು ಸೇರಿದನು. ಅಲ್ಲಿ ಒಮ್ಮೆ ಸುರರೆಲ್ಲರೂ ಬ್ರಹ್ಮನ ಉಪಾಸನೆಯಲ್ಲಿ ತೊಡಗಿದ್ದಾಗ ಮಹಾಭಿಷನೂ ಕೂಡಿ ರಾಜರ್ಷಿಗಳು ಆಸೀನರಾಗಿದ್ದರು. ಆಗ ನದಿಗಳಲ್ಲೆಲ್ಲ ಶ್ರೇಷ್ಠ ಗಂಗೆಯು ಪಿತಾಮಹನಿಗೆ ಗೌರವಿಸಲು ಬಂದಳು. ಚಂದ್ರನ ಕಾಂತಿಯನ್ನು ಹೊಂದಿದ್ದ ಅವಳ ವಸ್ತ್ರವು

ಗಾಳಿಯಲ್ಲಿ ಹಾರಿಹೋಯಿತು. ಅಲ್ಲಿ ನೆರೆದಿದ್ದ ಸುರಗಣವು ತಕ್ಷಣವೇ ಮುಖಗಳನ್ನು ಕೆಳಗೆ ಮಾಡಿತು. ಆದರೆ ರಾಜರ್ಷಿ ಮಹಾಭಿಷನು ನಿಃಶಂಕೆಯಿಂದ ಅವಳನ್ನೇ ನೋಡುತ್ತಿದ್ದನು. ಭಗವಾನ್ ಬ್ರಹ್ಮನು ಮಹಾಭಿಷನನ್ನು ಅವಹೇಳನ ಮಾಡುತ್ತಾ

> "ಮರ್ತ್ಯನಾಗಿ ಹುಟ್ಟಿ ಪುನಃ ಲೋಕಗಳನ್ನು
> ಹೊಂದುತ್ತೀಯೆ!"

ಎಂದನು. ಆ ನೃಪತಿಯು ಎಲ್ಲಾ ರಾಜರು ಮತ್ತು ತಪೋಧನರನ್ನು ಯೋಚಿಸಿ ಭೂರಿವರ್ಚಸ ಪ್ರತೀಪನನ್ನು ತಂದೆಯನ್ನಾಗಿ ಆರಿಸಿಕೊಂಡನು. ಮಹಾಭಿಷನು ಈ ರೀತಿ ಧೈರ್ಯವನ್ನು ಕಳೆದುಕೊಂಡಿದ್ದುದನ್ನು ನೋಡಿ ಸರಿದ್ವರೆ ನದಿಯು ಆ ನೃಪನನ್ನೇ ಮನಸ್ಸಿನಲ್ಲಿ ನೆನೆಯುತ್ತಾ ಹೋದಳು. ಹೋಗುತ್ತಿರುವ ದಾರಿಯಲ್ಲಿ ಅವಳು ತಮ್ಮ ಕಾಂತಿಯನ್ನು ಕಳೆದುಕೊಂಡು ದುಃಖಿಸುತ್ತಿರುವ ದಿವೌಕಸ ವಪುಷ ವಸು ದೇವತೆಗಳನ್ನು ಕಂಡಳು. ಆ ಪರಿಸ್ಥಿತಿಯಲ್ಲಿ ಅವರನ್ನು ನೋಡಿದ ಗಂಗೆಯು ಕೇಳಿದಳು:

> "ಹೀಗೇಕೆ ಏನನ್ನೋ ಕಳೆದುಕೊಂಡವರಂತೆ ಕಾಣುತ್ತಿದ್ದೀರಿ?
> ದಿವೌಕಸರಿಗೆ ಕ್ಷೇಮವಿಲ್ಲವೇ?"

ಆಗ ವಸು ದೇವತೆಗಳು ಹೇಳಿದರು:

> "ಮಹಾನದೀ! ನಮ್ಮ ಒಂದು ಸಣ್ಣ ಅಪರಾಧಕ್ಕಾಗಿ ನಾವು

> ಮಹಾತ್ಮ ವಸಿಷ್ಠನಿಂದ ಶಪ್ತರಾಗಿದ್ದೇವೆ. ನಾವೆಲ್ಲ ವಿಮೂಢರೂ ಸಂಧ್ಯಾವಂದನೆಗೆಂದು ಕುಳಿತಿದ್ದ ಋಷಿಸತ್ತಮ ವಸಿಷ್ಠನನ್ನು ನೋಡದೆಯೇ ಅವನನ್ನು ಉಲ್ಲಂಘಿಸಿದೆವು. ಅದರಿಂದ ಕೋಪಗೊಂಡ ಅವನು 'ಯೋನಿಯಲ್ಲಿ ಹುಟ್ಟಿರಿ!' ಎಂದು ಶಾಪವನ್ನಿತ್ತನು. ಬ್ರಹ್ಮವಾದಿಯ ಮಾತನ್ನು ಬದಲಾಯಿಸಲು ಸಾದ್ಯವಿಲ್ಲ. ಆದುದರಿಂದ ನೀನು ಮಾನುಷಿಯಾಗಿ ಭೂಮಿಯಲ್ಲಿ ವಸುಗಳನ್ನು ಪುತ್ರರನ್ನಾಗಿ ಜನಿಸು. ಮಾನುಷಿಯ ಜಠರವನ್ನು ಪ್ರವೇಶಿಸುವುದು ನಮಗೆ ಅಶುಭ."

"ಹಾಗೆಯೇ ಆಗಲಿ!" ಎಂದು ವಚನವನ್ನಿತ್ತ ಗಂಗೆಯು ಆ ವಸುಗಳನ್ನುದ್ದೇಶಿಸಿ ಹೇಳಿದಳು:

> "ಮರ್ತ್ಯರಲ್ಲಿ ಯಾವ ಪುರುಷಶ್ರೇಷ್ಠನು ನಿಮ್ಮ ಕರ್ತನಾಗುತ್ತಾನೆ?"

ವಸುಗಳು ಹೇಳಿದರು:

> "ಶಾಂತನು ಎಂಬ ಹೆಸರಿನ ಧಾರ್ಮಿಕ ರಾಜನೊಬ್ಬನು ಪ್ರತೀಪನ ಮಗನಾಗಿ ಮನುಷ್ಯ ಲೋಕದಲ್ಲಿ ಜನ್ಮವೆತ್ತಲಿದ್ದಾನೆ. ಅವನೇ ನಮ್ಮ ಕರ್ತನಾಗುತ್ತಾನೆ."

ಗಂಗೆಯು ಹೇಳಿದಳು:

“ಮಾನಘ ದೇವತೆಗಳೇ! ನನ್ನ ಮನಸ್ಸಿನಲ್ಲಿಯೂ ನೀವು ಹೇಳಿದ ಮಾತೇ ಇತ್ತು. ಅವನಿಗೆ ಪ್ರಿಯವಾದುದನ್ನು ಮಾಡುವುದರ ಜೊತೆಗೆ ನಿಮ್ಮ ಇಚ್ಛೆಯನ್ನೂ ನೆರವೇರಿಸುತ್ತೇನೆ.”

ವಸುಗಳು ಹೇಳಿದರು:

“ತ್ರಿಲೋಕಸಂಚಾರಿಣೀ! ಈ ನಿಷ್ಕೃತಿಯನ್ನು ದೀರ್ಘಕಾಲ ಅನುಭವಿಸಲು ಅವಕಾಶಕೊಡದ ರೀತಿಯಲ್ಲಿ ಹುಟ್ಟಿದ ಕೂಡಲೇ ಮಕ್ಕಳನ್ನು ನೀರಿನಲ್ಲಿ ಹಾಕಿಬಿಡು.”

ಗಂಗೆಯು ಹೇಳಿದಳು:

“ಹಾಗೆಯೇ ಮಾಡುತ್ತೇನೆ. ಆದರೆ ಪುತ್ರಾಕಾಂಕ್ಷಿಯಾಗಿ ನನ್ನೊಡನೆ ಸೇರುವ ಅವನ ಯತ್ನವು ನಿಷ್ಫಲವಾಗದ ಹಾಗೆ ಅವನಿಗೆ ಒಬ್ಬನಾದರೂ ಮಗನನ್ನು ಕೊಡಬೇಕು.”

ವಸುಗಳು ಹೇಳಿದರು:

“ನಾವು ಪ್ರತಿಯೊಬ್ಬರೂ ನಮ್ಮ ನಮ್ಮ ವೀರ್ಯಗಳ ಎಂಟರಲ್ಲಿ ಒಂದು ಅಂಶವನ್ನು ಬಿಟ್ಟುಕೊಡುತ್ತೇವೆ. ಆ ವೀರ್ಯದಿಂದ ನಿನಗೆ ಮತ್ತು ಅವನಿಗೆ ಇಷ್ಟವಾದ ಮಗನು ಜನಿಸುತ್ತಾನೆ. ಆದರೆ ಅವನು ಮರ್ತ್ಯರಲ್ಲಿ ಪುನಃ ಯಾವ

ಸಂತತಿಯನ್ನೂ ಪಡೆಯಲಾರ. ಹೀಗೆ ನಿನ್ನ ವೀರ್ಯವಾನ್ ಪುತ್ರನು ಅಪುತ್ರನಾಗಿಯೇ ಇರುತ್ತಾನೆ.”

ಈ ರೀತಿ ಗಂಗೆಯೊಡನೆ ಒಪ್ಪಂದ ಮಾಡಿಕೊಂಡ ವಸುಗಳು ಸಂತುಷ್ಟರಾಗಿ ತಮಗಿಷ್ಟಬಂದಲ್ಲಿ ತೆರಳಿದರು.

## ಪ್ರತೀಪ-ಶಂತನು-ಗಂಗೆ

ಸರ್ವಭೂತಹಿತರತ ಪ್ರತೀಪನೆಂಬ ರಾಜನು ಗಂಗಾನದೀತೀರದಲ್ಲಿ ಅಸಾದ್ಯ ವರ್ಷಗಳ ಪರ್ಯಂತ ಜಪಿಸುತ್ತಿದ್ದನು. ಆಗ ಶ್ರೀಯಂತೆ ರೂಪಿಣಿ ಗುಣೋಪೇತ ಗಂಗೆಯು ಅವನ ಮನಸೆಳೆಯುವ ರೂಪವನ್ನು ಧರಿಸಿ ನೀರಿನಿಂದ ಮೇಲೆದ್ದಳು. ಆ ದಿವ್ಯರೂಪಿ ಮನಸ್ವಿನಿ ಶುಭಾನನೆಯು ಅಧ್ಯಯನ ಮಾಡುತ್ತಿದ್ದ ರಾಜರ್ಷಿಯ ಶಾಲದ ರೆಂಬೆಯಂತಿದ್ದ ಬಲ ತೊಡೆಯಮೇಲೆ ಕುಳಿತುಕೊಂಡಳು. ಮಹೀಪಾಲ ಪ್ರತೀಪನು ಆ ಮನಸ್ವಿನಿಯನ್ನುದ್ದೇಶಿಸಿ ಹೇಳಿದನು:

“ಕಲ್ಯಾಣಿ! ನಿನಗಾಗಿ ನಾನು ಏನು ಮಾಡಲಿ? ನಿನ್ನ ಆಕಾಂಕ್ಷೆಯಂತೆ ಯಾವ ಪ್ರಿಯ ಕಾರ್ಯವನ್ನು ಮಾಡಲಿ?”

ಸ್ತ್ರೀಯು ಹೇಳಿದಳು:

“ರಾಜನ್! ನೀನು ನನ್ನನ್ನು ಕಾಮಿಸಬೇಕೆಂಬುದೇ ನನ್ನ ಬಯಕೆ. ಕಾಮವತಿ ಸ್ತ್ರೀಯನ್ನು ತಿರಸ್ಕರಿಸುವುದು ಸರಿಯಲ್ಲ.”

ಪ್ರತೀಪನು ಹೇಳಿದನು:

“ವರವರ್ಣಿನೀ! ನಾನು ಜಾತಿಯವಳಲ್ಲದ ಪರಸ್ತ್ರೀಯನ್ನು ಕಾಮದಲ್ಲಿ ಹೊಂದುವುದಿಲ್ಲ ಎನ್ನುವ ವ್ರತವನ್ನು ಧರ್ಮವಿದಿವತ್ತಾಗಿ ಆಚರಿಸುತ್ತಿದ್ದೇನೆ ಎನ್ನುವುದು ನಿನಗೆ ತಿಳಿದಿಲ್ಲವೇ?”

ಸ್ತ್ರೀಯು ಹೇಳಿದಳು:

“ರಾಜ! ನಾನೇನು ಅಶ್ರೇಯಸ್ಸಳಲ್ಲ. ಹೊಂದಬಾರದಂಥವಳೂ ಅಲ್ಲ. ಅಥವಾ ಕುಪ್ರಸಿದ್ಧಳೂ ಅಲ್ಲ. ವರಸ್ತ್ರೀ ಕನ್ಯೆ ನಾನು ನಿನ್ನನ್ನು ಕಾಮಿಸುವಂತೆ ನೀನೂ ನನ್ನನ್ನು ಕಾಮಿಸು.”

ಪ್ರತೀಪನು ಹೇಳಿದನು:

“ನಿನಗೆ ಪ್ರಿಯವಾದುದನ್ನು ನಾನು ಮಾಡಬೇಕೆಂಬ ಈ ನಿನ್ನ ಒತ್ತಾಯವನ್ನು ನಾನು ನಿರಾಕರಿಸುತ್ತೇನೆ. ಇಲ್ಲವಾದರೆ ಈ ಅಧರ್ಮವು ನನ್ನನ್ನು ನಾಶಮಾಡಿಬಿಡುತ್ತದೆ. ವರಾಂಗನೇ! ನೀನು ನನ್ನ ಬಲ ತೊಡೆಯ ಮೇಲೆ ಕುಳಿತು ನನ್ನನ್ನು ವರಿಸಿದ್ದೀಯೆ. ಈ ಸ್ಥಳವು ಮಕ್ಕಳು ಅಥವಾ ಸೊಸೆಯಂದಿರು ಕುಳಿತುಕೊಳ್ಳುವ ಸ್ಥಳ. ಎಡಗಡೆಯದ್ದು ಕಾಮಿನಿಯ ಜಾಗ. ಆದರೆ ನೀನು ಅದನ್ನು ತಿರಸ್ಕರಿಸಿದ್ದೀಯೆ. ಆದುದರಿಂದ ನಾನು ನಿನ್ನಲ್ಲಿ ಕಾಮಿಯ ಹಾಗೆ ವರ್ತಿಸುವುದಿಲ್ಲ. ನನ್ನ ಸೊಸೆಯಾಗು. ನಿನ್ನನ್ನು ನನ್ನ ಮಗನಿಗೆ ಆರಿಸುವೆ. ನೀನಾದರೂ ಸೊಸೆಯ ಸ್ಥಳವನ್ನೇ

ಆರಿಸಿಕೊಂಡಿದ್ದೀಯೆ.”

ಸ್ತ್ರೀಯು ಹೇಳಿದಳು:

“ಧರ್ಮಜ್ಞ! ಹಾಗೆಯೇ ಆಗಲಿ. ನಿನ್ನ ಮಗನನ್ನು ಕೊಡುವೆ. ಆದರೆ ನನಗೆ ನಿನ್ನ ಮೇಲಿರುವ ಪ್ರೀತಿಯಿಂದಾಗಿಯೇ ನಾನು ಪ್ರಖ್ಯಾತ ಭರತಕುಲವನ್ನು ಪ್ರೀತಿಸುತ್ತೇನೆ. ಈ ಪೃಥ್ವಿಯಲ್ಲಿ ಎಷ್ಟು ಮಂದಿ ಪಾರ್ಥಿವರಿದ್ದರೂ ನಿನ್ನ ವಂಶವು ಪರಾಯಣೀಯವಾದದ್ದು. ನಿನ್ನ ಈ ಅನುತ್ತಮ, ಸಾಧು, ಮತ್ತು ಪ್ರಸಿದ್ಧ ಕುಲದ ಗುಣಗಳನ್ನು ಸಾರಲು ನನಗೆ ನೂರು ವರ್ಷಗಳೂ ಸಾಲದು. ನಾನು ಉಚ್ಛ ಜನ್ಮದವಳೆಂದು ಅವನಿಗೆ ಗೊತ್ತಿರಬಾರದು ಮತ್ತು ನಾನು ಮಾಡಿದ ಯಾವ ಕಾರ್ಯವನ್ನೂ ನಿನ್ನ ಮಗನು ಪ್ರಶ್ನಿಸಬಾರದು. ಈ ರೀತಿ ನಿನ್ನ ಪುತ್ರನೊಂದಿಗೆ ವಾಸಿಸುತ್ತಾ ಅವನ ಸಂತಸವನ್ನು ವರ್ಧಿಸುವೆ ಮತ್ತು ಪ್ರಿಯ ಪುತ್ರರ ಪುಣ್ಯಗಳಿಂದ ನಿನ್ನ ಮಗನು ಸ್ವರ್ಗವನ್ನು ಹೊಂದುವನು.”

“ಹಾಗೆಯೇ ಆಗಲಿ” ಎಂದು ರಾಜನು ಹೇಳಿದಾಗ ಅವಳು ಅಂತರ್ಧಾನಳಾದಳು.

ಪುತ್ರನ ಜನ್ಮವನ್ನು ಪ್ರತೀಕ್ಷೆ ಮಾಡುತ್ತಾ ರಾಜನು ಆ ವಿಷಯವನ್ನು ನೆನಪಿನಲ್ಲಿಟ್ಟುಕೊಂಡಿದ್ದನು. ಇದೇ ಸಮಯದಲ್ಲಿ ಕ್ಷತ್ರಿಯರ್ಷಭ ಪ್ರತೀಪನು ಪುತ್ರನಿಗೋಸ್ಕರ ಭಾರ್ಯೆಯ ಸಹಿತ ತಪಸ್ಸನ್ನು

ಮಾಡುತ್ತಿದ್ದನು. ವೃದ್ಧರಾಗಿದ್ದರೂ ಕೂಡ ಅವರಲ್ಲಿ ಮಹಾಭಿಷನು ಪುತ್ರನಾಗಿ ಜನಿಸಿದನು. ಹುಟ್ಟಿನಿಂದಲೇ ಶಾಂತ ಸ್ವಭಾವನಾಗಿದ್ದ ಅವನಿಗೆ ಶಂತನುವೆಂಬ ಹೆಸರಾಯಿತು. ಸ್ವಂತ ಕರ್ಮಗಳಿಂದ ಅಕ್ಷಯ ಲೋಕಗಳನ್ನು ಜಯಿಸಿದ್ದುದರ ಸಂಸ್ಕರಣದಿಂದಾಗಿ ಆ ಕುರುಸತ್ತಮ ಶಂತನುವು ಪುಣ್ಯಕರ್ಮಿಯಾಗಿಯೇ ಬೆಳೆದನು. ಪುತ್ರ ಶಂತನುವು ಯೌವನಾವಸ್ಥೆಯನ್ನು ಹೊಂದಿದಾಗ ಪ್ರತೀಪನು ಒಂದು ನಿರ್ದೇಶನವನ್ನಿತ್ತನು:

> "ಶಂತನು! ಹಿಂದೆ ಓರ್ವ ಸ್ತ್ರೀಯು ನಿನಗೋಸ್ಕರ ನನ್ನ ಬಳಿ ಬಂದಿದ್ದಳು. ಒಂದು ವೇಳೆ ಕಾಮವನ್ನು ಹುಟ್ಟಿಸುವ ವರವರ್ಣಿನಿ ಆ ದೇವ ಸ್ತ್ರೀಯು ಪುತ್ರಕಾಮಿಯಾಗಿ ಗುಪ್ತವಾಗಿ ನಿನ್ನ ಬಳಿ ಬಂದರೆ ನೀನು ಅವಳು ಯಾರು ಅಥವಾ ಯಾರವಳು ಎಂದು ಪ್ರಶ್ನಿಸಬಾರದು. ಅವಳು ಏನು ಕಾರ್ಯವನ್ನೆಸಗಿದರೂ ನೀನು ಅವಳನ್ನು ಪ್ರಶ್ನಿಸಬಾರದು. ಅವಳು ನಿನ್ನನ್ನು ಹೇಗೆ ಬಯಸುತ್ತಾಳೋ ಹಾಗೆ ನೀನು ಅವಳನ್ನು ಪ್ರೀತಿಸು. ಇದು ನನ್ನ ಕೇಳಿಕೆ."

ಈ ರೀತಿ ಸಂದೇಶವನ್ನಿತ್ತು ಪ್ರತೀಪನು ತನಯ ಶಂತನುವಿಗೆ ತನ್ನ ರಾಜ್ಯದ ರಾಜಾಭಿಷೇಕವನ್ನು ಮಾಡಿ ವನವನ್ನು ಸೇರಿದನು. ಈ ಧೀಮಂತ ರಾಜ ಶಂತನುವು ಧನುರ್ಧರನಾಗಿ ಪೃಥ್ವಿಯಲ್ಲಿಯೇ ಖ್ಯಾತನಾದನು ಮತ್ತು ಮೃಗಯಾಶೀಲನಾಗಿ ಸತತ ವನಗಳಲ್ಲಿ



ಅಲೆಯುತ್ತಿದ್ದನು. ಒಮ್ಮೆ ಜಿಂಕೆ ಮತ್ತು ಕಾಡೆಮ್ಮೆಗಳನ್ನು ಕೆಳಗುರುಳಿಸಿದ ರಾಜ ಸತ್ತಮನು ಒಬ್ಬನೇ ಸಿದ್ಧ ಚಾರಣರಿಂದ ಸೇವಿಸಲ್ಪಟ್ಟ ಗಂಗೆಯನ್ನು ಅನುಸರಿಸುತ್ತಾ ಹೊರಟನು. ಅಲ್ಲಿ ಮಹಾರಾಜನು ಸಾಕ್ಷಾತ್ ಪದ್ಮಿನಿ ಲಕ್ಷ್ಮಿಯಂತೆ ರೂಪದಲ್ಲಿ ಪ್ರಜ್ವಲಿಸುತ್ತಿರುವ ಪರಮ ಸ್ತ್ರೀ ಓರ್ವಳನ್ನು ಕಂಡನು. ಸರ್ವಾನವಧ್ಯ, ಸುದಂತಿ, ಸರ್ವಾಭರಣ ಭೂಷಿತೆ, ಕಮಲದ ಒಡಲಿನಂತೆ ಕಾಂತಿಯುಕ್ತೆ, ತೆಳು ವಸ್ತ್ರವನ್ನು ಧರಿಸಿದ್ದ ಅವಳು ಏಕಾಂಗಿಯಾಗಿದ್ದಳು. ಆ ರೂಪಸಂಪದವನ್ನು ನೋಡಿದ ನರಾಧಿಪನು ವಿಸ್ಮಿತನೂ ರೋಮಹರ್ಷಿತನೂ ಆಗಿ ಒಂದೇ ಸಮನೆ ಅವಳನ್ನು ಕಣ್ಣುಗಳಿಂದಲೇ ಕುಡಿಯ ತೊಡಗಿದನು. ಆ ವಿಲಾಸಿನಿಯಾದರೂ ಸ್ನೇಹದಿಂದ ಅವಳಲ್ಲುಂಟಾದ ಸೌಹಾರ್ದತೆಯಿಂದ ಸಂಚರಿಸುತ್ತಿರುವ ಆ ಮಹಾದ್ಯುತಿ ರಾಜನನ್ನು ಎಷ್ಟು ನೋಡಿದರೂ ಅತೃಪ್ತಳಾಗೇ ಇದ್ದಳು. ಆಗ ಆ ರಾಜನು ಸಾಂತ್ವನ ಶ್ಲಾಘನೀಯ ಮಾತುಗಳಿಂದ ಅವಳನ್ನುದ್ದೇಶಿಸಿ ಹೇಳಿದನು:

> "ನೀನು ಓರ್ವ ದೇವಿಯೋ, ದಾನವಿಯೋ, ಗಂಧರ್ವಿಯೋ ಅಥವಾ ಅಪ್ಸರೆಯೋ? ಸುಮಧ್ಯಮೇ! ನೀನು ಯಕ್ಷಿಯೋ ಅಥವಾ ಪನ್ನಗಿಯೋ ಅಥವಾ ಮಾನುಷಿಯೋ? ನೀನು ಯಾರೇ ಆಗಿರಲಿ, ಸುರಕನ್ಯೆಯಂತಿರುವ ನೀನು ನನ್ನ ಪತ್ನಿಯಾಗು."

ಮುಗುಳ್ನಗೆಯಂತೆ ಮೃದುಸಿಹಿಯಾದ ರಾಜನ ಈ ಮಾತುಗಳನ್ನು ಕೇಳಿದ ಆ ಅನಿಂದಿತೆಯು ವಸುಗಳೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ನೆನಪಿಸಿಕೊಂಡು ಅವನ ಬಳಿ ಬಂದಳು. ರಾಜನ ಮನಸ್ಸನ್ನು ಆಹ್ಲಾದಿಸುತ್ತಿರುವ ಮಾತುಗಳಿಂದ ಹೇಳಿದಳು:

> "ಮಹೀಪಾಲ! ನಿನ್ನ ವಶದಲ್ಲಿಯೇ ಇರುವ ನಿನ್ನ ಮಹಿಷಿಯಾಗುತ್ತೇನೆ. ಆದರೆ ನನ್ನಿಂದ ಯಾವುದೇ ಶುಭ ಅಥವಾ ಅಶುಭ ಕಾರ್ಯವಾದರೂ ಕೂಡ ನನ್ನನ್ನು ತಡೆಯಬಾರದು ಮತ್ತು ನನ್ನಲ್ಲಿ ಅಪ್ರಿಯ ಮಾತುಗಳನ್ನಾಡಬಾರದು. ನೀನು ಈ ರೀತಿ ವರ್ತಿಸುವೆಯಾದರೆ ನಾನು ನಿನ್ನೊಡನೆ ವಾಸಿಸಬಲ್ಲೆ. ಆದರೆ ನೀನು ನನ್ನನ್ನು ತಡೆದರೆ ಅಥವಾ ನನ್ನೊಡನೆ ಅಪ್ರಿಯ ಮಾತುಗಳನ್ನಾಡಿದರೆ ನಿಸ್ಸಂಶಯವಾಗಿಯೂ ನಾನು ನಿನ್ನನ್ನು ತ್ಯಜಿಸುತ್ತೇನೆ."

ಆ ರಾಜ ಭರತಸತ್ತಮನು "ಹಾಗೆಯೇ ಆಗಲಿ" ಎಂದು ಹೇಳಿದನು.

ಅವಳನ್ನು ಪಡೆದ ಆ ಪಾರ್ಥಿವೋತ್ತಮನು ಅತುಲ ಹರ್ಷವನ್ನು ಹೊಂದಿದನು. ಅವಳನ್ನು ಪಡೆದ ಶಂತನುವು ಮನ ಬಂದಂತೆ ಅವಳನ್ನು ಕಾಮಿಸಿದನು. ಆದರೆ ಅವಳನ್ನು ಪ್ರಶ್ನಿಸಬಾರದೆಂಬುದನ್ನು ನೆನಪಿನಲ್ಲಿಟ್ಟುಕೊಂಡಿದ್ದನು. ಅವಳ ಶೀಲವೃತ್ತಿ, ರೂಪ, ಔದಾರ್ಯಗುಣ, ಉಪಚಾರ, ಮತ್ತು ರಹಸ್ಯಗಳಿಂದ ಆ



ಜಗತ್ಪತಿಯು ಸಂತುಷ್ಠನಾಗಿದ್ದನು. ದಿವ್ಯರೂಪಿ, ತ್ರಿಪತಗೆ, ದೇವಿ ಗಂಗಾ ನದಿಯು ವರವರ್ಣಿನಿ ಶ್ರೀಯಂತೆ ಮನುಷ್ಯರೂಪವನ್ನು ತಾಳಿ, ದೇವರಾಜಸಮದ್ಯುತಿ, ರಾಜಸಿಂಹ ಶಂತನುವಿನ ಭಾರ್ಯೆಯಾಗಿ ಅವನ ಭಾಗ್ಯ ಮತ್ತು ಕಾಮಗಳೆರಡನ್ನೂ ವೃದ್ಧಿಸಿದಳು. ಸಂಭೋಗ ಸ್ನೇಹ ಚಾತುರ್ಯದಿಂದ ಮತ್ತು ಮನೋಹರ ಹಾವ ಲಾಸ್ಯಗಳಿಂದ ರಾಜನು ತನ್ನನ್ನು ರಮಿಸುವಂತೆ ಮಾಡಿದಳು ಮತ್ತು ಅವನೂ ಸಹ ಅವಳನ್ನು ರಮಿಸಿದನು. ಆ ಉತ್ತಮ ಸ್ತ್ರೀಯ ಗುಣಗಳಿಂದ ಅಪಹರಿಸಲ್ಪಟ್ಟು ಅವಳಲ್ಲಿಯೇ ರತಿಸಕ್ತನಾದ ರಾಜನಿಗೆ ಎಷ್ಟು ಸಂವತ್ಸರಗಳು, ಋತುಗಳು ಮತ್ತು ಮಾಸಗಳು ಕಳೆದವು ಎಂದೇ ತಿಳಿಯಲಿಲ್ಲ. ಆ ಜನೇಶ್ವರನು ಅವಳನ್ನು ಈ ರೀತಿ ಕಾಮಿಸುತ್ತಿರುವಾಗ ಆ ಅಮರವರ್ಣಿನಿಯಿಂದ ಎಂಟು ಪುತ್ರರನ್ನು ಪಡೆದನು. ಪುತ್ರರು ಹುಟ್ಟುತ್ತಿದ್ದ ಹಾಗೆಯೇ ಅವಳು ಅವರನ್ನು "ನಿಮಗೆ ಒಳ್ಳೆಯದನ್ನೇ ಮಾಡುತ್ತಿದ್ದೇನೆ!" ಎಂದು ಹೇಳುತ್ತಾ ಗಂಗಾನದಿಯಲ್ಲಿ ಹಾಕಿ ಅವರನ್ನು ಮುಳುಗಿಸುತ್ತಿದ್ದಳು. ಅವಳ ಈ ಕಾರ್ಯವು ರಾಜ ಶಂತನುವಿಗೆ ಇಷ್ಟವಾಗಲಿಲ್ಲ. ಆದರೂ ಅವಳು ತನ್ನನ್ನು ಬಿಟ್ಟು ಹೋಗುತ್ತಾಳೆ ಎಂಬ ಭೀತಿಯಿಂದ ಮಹೀಪಾಲನು ಅವಳಿಗೆ ಏನನ್ನೂ ಹೇಳಲಿಲ್ಲ. ಎಂಟನೆಯ ಪುತ್ರನು ಜನಿಸಿದಾಗ ಅವಳು ಮುಗುಳ್ನಗುತ್ತಿರುವುದನ್ನು ಕಂಡು ತನ್ನ ಪುತ್ರನಿಗೋಸ್ಕರ ಹಂಬಲಿಸುತ್ತಾ ದುಃಖಾರ್ತನಾಗಿ ಹೇಳಿದನು:

“ಇವನನ್ನು ಕೊಲ್ಲಬೇಡ! ನೀನು ಯಾರು ಮತ್ತು ಯಾರವಳು? ಈ ರೀತಿ ನನ್ನ ಮಕ್ಕಳನ್ನು ಏಕೆ ಕೊಲ್ಲುತ್ತಿರುವೆ? ಪುತ್ರಹತ್ಯೆಯ ಮಹತ್ತರ ಪಾಪ ಮಾಡಬೇಡ. ಗರ್ವಿತೇ! ನಿಲ್ಲು!”

ಸ್ತ್ರೀ ಹೇಳಿದಳು:

“ಪುತ್ರವಂತರಲ್ಲಿ ಶ್ರೇಷ್ಠ! ಪುತ್ರನನ್ನು ಬಯಸುತ್ತಿರುವವನೇ! ನಿನ್ನ ಈ ಪುತ್ರನನ್ನು ಕೊಲ್ಲುವುದಿಲ್ಲ. ಆದರೆ ನಾವು ಮಾಡಿಕೊಂಡ ಒಪ್ಪಂದದಂತೆ ನಿನ್ನೊಡನೆ ನನ್ನ ವಾಸವು ಕೊನೆಯಾಯಿತು. ನಾನು ಮಹರ್ಷಿಗಣಸೇವಿತೆ ಜಹ್ನುಸುತೆ ಗಂಗೆ. ದೇವಕಾರ್ಯವೊಂದನ್ನು ಸಿದ್ಧಿಗೊಳಿಸಲು ನಿನ್ನೊಡನೆ ಬಾಳ್ವೆ ಮಾಡಿದೆ. ಅವರು ಮಹೌಜಸರಾದ ಎಂಟು ವಸುದೇವತೆಗಳು. ವಸಿಷ್ಠನ ಶಾಪದೋಶದಿಂದಾಗಿ ಮನುಷ್ಯತ್ವವನ್ನು ಪಡೆದಿದ್ದರು. ಈ ಭುವಿಯಲ್ಲಿ ಅವರನ್ನು ಹುಟ್ಟಿಸುವವರು ನಿನ್ನ ಹೊರತು ಯಾರೂ ಇಲ್ಲ ಮತ್ತು ನನ್ನಂಥಹ ಮಾನುಷಿಯು ಈ ಧರಿತ್ರಿಯಲ್ಲಿಯೇ ಇಲ್ಲ. ಆದುದರಿಂದ ಅವರ ಜನನಿಯಾಗಲೋಸುಗವೇ ನಾನು ಮಾನುಷಿಯಾಗಿ ಬಂದಿದ್ದೇನೆ. ಈ ಎಂಟು ವಸುಗಳ ಜನ್ಮವಿತ್ತು ನೀನು ಅಕ್ಷಯ ಲೋಕಗಳನ್ನು ಗೆದ್ದಿದ್ದೀಯೆ. ಪ್ರತಿಯೊಬ್ಬರನ್ನೂ ಹುಟ್ಟುತ್ತಿದ್ದಾಗಲೇ ಮಾನುಷ

ಜನ್ಮದಿಂದ ಬಿಡುಗಡೆ ಮಾಡಬೇಕೆಂದು ನನ್ನ ಮತ್ತು ಈ ವಸುದೇವತೆಗಳ ನಡುವಿನ ಒಪ್ಪಂದವಾಗಿತ್ತು. ಈ ರೀತಿ ಅವರು ಮಹಾತ್ಮ ಆಪವನ ಶಾಪದಿಂದ ವಿಮುಕ್ತರಾಗಿದ್ದಾರೆ. ನಿನಗೆ ಮಂಗಳವಾಗಲಿ. ನಾನು ಹೋಗುತ್ತಿದ್ದೇನೆ. ಈ ಮಹಾವ್ರತ ಪುತ್ರನನ್ನು ಪಾಲಿಸು. ವಸುಗಳ ಸನ್ನಿಧಿಯಲ್ಲಿ ಮಾಡಿದ ನನ್ನ ಈ ವಾಸವು ತಾತ್ಕಾಲಿಕವಾದದ್ದು. ನನ್ನ ಈ ಮಗನನ್ನು ಗಂಗಾದತ್ತನೆಂದು ತಿಳಿ."

## ಧ್ಯಾ-ದೇವವ್ರತ

ಶಂತನುವು ಹೇಳಿದನು:

"ಈ ಆಪವನೆಂಬ ಹೆಸರಿನವನು ಯಾರು? ವಸುಗಳು ಮಾಡಿದ ದುಷ್ಕೃತವಾದರೂ ಏನಿತ್ತು? ಮತ್ತು ಈ ಕುಮಾರ ಗಂಗಾದತ್ತನು ಏನು ಮಾಡಿದ್ದಾನೆಂದು ಈಗ ಮನುಷ್ಯರಲ್ಲಿ ಬದುಕಬೇಕು? ವಸುಗಳು ಸರ್ವಲೋಕಗಳ ಒಡೆಯರು. ಅಂಥವರು ಏಕೆ ಮನುಷ್ಯರಾಗಿ ಹುಟ್ಟಿದರು ಎನ್ನುವುದನ್ನು ನನಗೆ ಹೇಳು ಜಾಹ್ನವಿ!"

ರಾಜನ ಈ ಮಾತುಗಳಿಗೆ ಉತ್ತರವಾಗಿ ದೇವಿ ಜಹ್ನುಪುತ್ರಿ ಗಂಗೆಯು ಪತಿ ಪುರುಷರ್ಷಭ ಶಂತನುವನ್ನುದ್ದೇಶಿಸಿ ಹೇಳಿದಳು:

“ಭರತಸತ್ತಮ! ಹಿಂದೆ ವರುಣನು ಪುತ್ರನೋರ್ವನನ್ನು ಪಡೆದನು. ಅವನು ವಸಿಷ್ಠನೆಂಬ ಹೆಸರಿನ ಮುನಿ. ಅವನು ಆಪವನೆಂದೂ ಖ್ಯಾತ. ಅವನ ಪುಣ್ಯ ಆಶ್ರಮ ಸಂಕುಲವು ನಗೇಂದ್ರ ಮೇರುವಿನ ಪಾರ್ಶ್ವದಲ್ಲಿತ್ತು ಮತ್ತು ಅದು ಮೃಗಪಕ್ಷಿಗಣಗಳಿಂದ ಹಾಗೂ ಸದಾಕಾಲ ಕುಸುಮಗಳಿಂದ ತುಂಬಿಕೊಂಡಿತ್ತು. ಸ್ವಾದಿಷ್ಟವಾದ ಫಲ-ಮೂಲ-ಜಲಗಳಿಂದೊಡಗೂಡಿದ ಆ ವನದಲ್ಲಿ ಪುಣ್ಯಕೃತರಲ್ಲಿ ಶ್ರೇಷ್ಠ ವಾರುಣಿಯು ತಪಸ್ಸಿನಲ್ಲಿ ನಿರತನಾಗಿದ್ದನು. ದಕ್ಷನಿಗೆ ಸುರಭಿ ಎನ್ನುವ ಅತಿಗರ್ವಿತೆ ಮಗಳೊಬ್ಬಳಿದ್ದಳು. ಈ ದೇವಿಯು ಜಗತ್ತಿನ ಅನುಗ್ರಹಾರ್ಥಕ್ಕಾಗಿ ಕಶ್ಯಪನಿಂದ ಸರ್ವಕಾಮಗಳನ್ನೂ ಪೂರೈಸುವ ಹಾಲುಳ್ಳ ಶ್ರೇಷ್ಠ ಗೋವೊಂದಕ್ಕೆ ಜನ್ಮವಿತ್ತಳು. ಆ ಹಸುವನ್ನು ತನ್ನ ಹೋಮಧೇನುವಾಗಿ ಧರ್ಮಾತ್ಮ ವಾರುಣಿಯು ಪಡೆದನು. ಆ ಹಸುವು ತಪಸ್ವಿಗಳ ಆ ಅರಣ್ಯದಲ್ಲಿ ಮುನಿಗಳಿಂದ ಸೇವಿಸಲ್ಪಡುತ್ತಾ, ರಮ್ಯ ಹುಲ್ಲುಗಾವಲಿನಲ್ಲಿ ನಿರ್ಭಯಳಾಗಿ ಮೇಯುತ್ತಾ ವಾಸಿಸುತ್ತಿದ್ದಳು. ಒಮ್ಮೆ ದೇವದೇವರ್ಷಿಸೇವಿತ ಸರ್ವ ವಸುಗಳೂ ಪೃಥುವಿನ ನಾಯಕತ್ವದಲ್ಲಿ ಆ ವನಕ್ಕೆ ಆಗಮಿಸಿದರು. ತಮ್ಮ ತಮ್ಮ ಪತ್ನಿಗಳೊಂದಿಗೆ ಆ ವನವನ್ನೆಲ್ಲಾ ಸುತ್ತಿದರು ಮತ್ತು ಆ ರಮಣೀಯ ಪರ್ವತ-ವನಗಳಲ್ಲಿ ರಮಿಸಿದರು. ಅವರಲ್ಲಿ

ಓರ್ವ ವಸುವಿನ ಪತ್ನಿಯು ವನದಲ್ಲಿ ಸಂಚರಿಸುತ್ತಿದ್ದಾಗ ಮುನಿ ವಸಿಷ್ಠನ ಸರ್ವಕಾಮಗಳನ್ನು ಪೂರೈಸಬಲ್ಲ, ಆ ಉತ್ತಮ ಸುಂದರ ಗೋವನ್ನು ಕಂಡಳು. ಆ ಗೋವಿನ ಶೀಲತೆ ಮತ್ತು ದ್ರವಿಣಸಂಪತ್ತನ್ನು ನೋಡಿ ವಿಸ್ಮಿತಳಾದ ಅವಳು ಆ ಉತ್ತಮ, ಶೀಲವಂತ, ಸರ್ವಗುಣೋಪೇತ, ಸುಂದರ, ಸುಂದರ ಬಾಲ ಮತ್ತು ಮುಖಗಳನ್ನು ಹೊಂದಿದ, ಒಳ್ಳೆಯ ಹಾಲನ್ನು ನೀಡುವ ಹಸುವನ್ನು ದ್ಯೌವಿಗೆ ತೋರಿಸಿದಳು. ಈ ರೀತಿ ಗುಣಸಮಾಯುಕ್ತ ಹಸುವನ್ನು ವಸುನಂದಿನಿಯು ವಸುವಿಗೆ ತೋರಿಸಿದಳು. ಆ ಹಸುವನ್ನು ನೋಡಿದೊಡನೆಯೇ ಧ್ಯೌ ಅದರ ರೂಪಗುಣಗಳನ್ನು ಹೊಗಳುತ್ತಾ ತನ್ನ ದೇವಿಗೆ ಹೇಳಿದನು: ‘ವರಾರೋಹೇ! ಈ ಕಪ್ಪು ಕಣ್ಣುಗಳುಳ್ಳ ಉತ್ತಮ ಗೋವು ಈ ಉತ್ತಮ ವನಗಳ ಒಡೆಯ ವಾರುಣಿಗೆ ಸೇರಿದ್ದುದು. ಇದರ ಸ್ವಾದಿಷ್ಟ ಹಾಲನ್ನು ಕುಡಿದ ಮರ್ತ್ಯನು ಹತ್ತು ಸಾವಿರ ವರ್ಷಗಳ ಪರ್ಯಂತ ಸ್ಥಿರಯೌವನಿಯಾಗಿ ಜೀವಿಸಬಲ್ಲ.’ ಆ ಸುಮಧ್ಯಮೆ ಅನವದ್ಯಾಂಗಿಯು ಈ ಮಾತನ್ನು ಕೇಳಿ ತನ್ನ ದೀಪ್ತತೇಜಸ ಪತಿಯನ್ನುದ್ದೇಶಿಸಿ ಹೇಳಿದಳು: ‘ನನಗೆ ಮನುಷ್ಯಲೋಕದಲ್ಲಿ ರೂಪಯೌವನಶಾಲಿ ನರದೇವಾತ್ಮಜೆ ಜಿನವತಿ ಎಂಬ ಹೆಸರಿನ ಸಖಿಯೊಬ್ಬಳಿದ್ದಾಳೆ. ಧೀಮಂತ, ಸತ್ಯಸಂಧ, ರಾಜರ್ಷಿ ಉಶೀನರರನ ಮಗಳಾದ ಅವಳು ತನ್ನ

ರೂಪ ಸಂಪತ್ತಿನಿಂದ ಮಾನುಷ ಲೋಕದಲ್ಲಿಯೇ ಪ್ರಸಿದ್ಧಳಾಗಿದ್ದಾಳೆ. ಅವಳಿಗೋಸ್ಕರ ಈ ಗೋವು ಮತ್ತು ಅದರ ಕರು ನನಗೆ ಬೇಕು. ಬೇಗನೆ ಅದನ್ನು ತೆಗೆದುಕೊಂಡು ಬಾ. ಅದರ ಹಾಲನ್ನು ಕುಡಿದು ನನ್ನ ಸಖಿಯು ಮನುಷ್ಯಲೋಕದಲ್ಲಿ ವೃದ್ಧಾಪ್ಯ ಮತ್ತು ರೋಗ ವರ್ಜಿತಳಾದ ಒಬ್ಬಳೇ ಒಬ್ಬಳೆಂದು ಎನಿಸಿಕೊಳ್ಳುತ್ತಾಳೆ. ನನಗಾಗಿ ಇದನ್ನೊಂದನ್ನು ನೀನು ಮಾಡಬೇಕು. ಇದನ್ನು ಬಿಟ್ಟು ಬೇರೆ ಏನೂ ನನಗೆ ಸಂತೋಷವನ್ನು ಕೊಡುವುದಿಲ್ಲ.’ ದೇವಿಯ ಈ ವಚನಗಳನ್ನು ಕೇಳಿದ ಧ್ಯೌ ಅವಳಿಗೆ ಪ್ರಿಯವಾದದ್ದನ್ನು ಮಾಡಲೋಸುಗ ಪೃಥುವಿನ ನಾಯಕತ್ವದಲ್ಲಿ ತನ್ನ ಸಹೋದರರನ್ನು ಸೇರಿ ಆ ಹಸುವನ್ನು ಅಪಹರಿಸಿ ತಂದನು. ಆ ಕಮಲಪತ್ರಾಕ್ಷಿಯಿಂದ ನಿಯುಕ್ತಗೊಂಡ ಧ್ಯೌ ಆ ಋಷಿಯ ತೀವ್ರ ತಪಸ್ಸನ್ನು ನಿರೀಕ್ಷಿಸಲು ಅಸಮರ್ಥನಾದನು ಮತ್ತು ಆ ಹಸುವನ್ನು ಅಪಹರಿಸುವುದರಿಂದಾಗಬಹುದಾದ ತನ್ನ ಅಧೋಗತಿಯ ಕುರಿತು ಯೋಚಿಸಲಿಲ್ಲ. ಫಲಗಳನ್ನು ತೆಗೆದುಕೊಂಡು ಆಶ್ರಮಪದವನ್ನು ಸೇರಿದ ವಾರುಣಿಯು ಆ ಉತ್ತಮ ಕಾನನದಲ್ಲಿ ಕರುವಿನ ಸಹಿತ ಗೋವನ್ನು ಕಾಣಲಿಲ್ಲ. ಆ ತಪೋಧನನು ಆಗ ವನವಿಡೀ ಅದನ್ನು ಹುಡುಕಿದನು. ಎಷ್ಟು ಹುಡುಕಿದರೂ ಆ ಉದಾರ ಮನಸ್ಸಿನ ಮುನಿಗೆ ಗೋ

ಕಾಣಲಿಲ್ಲ. ತನ್ನ ದಿವ್ಯ ದೃಷ್ಟಿಯಿಂದ ಹಸುವು ವಸುಗಳಿಂದ ಅಪಹರಣವಾಗಿದೆ ಎಂದು ತಿಳಿದ ಅವನು ತಕ್ಷಣವೇ ಕ್ರೋಧವಶನಾಗಿ ವಸುಗಳಿಗೆ ಶಾಪವನ್ನಿತ್ತನು: 'ವಸುಗಳು ನನ್ನ ಸುಂದರ ಬಾಲವನ್ನುಳ್ಳ ಹಾಲನ್ನೀಯುವ ಹಸುವನ್ನು ಕದ್ದಿರುವುದರಿಂದ ಅವರೆಲ್ಲರೂ ನಿಸ್ಸಂಶಯವಾಗಿ ಮಾನುಷರಲ್ಲಿ ಜನಿಸುತ್ತಾರೆ!' ಈ ರೀತಿ ಮುನಿಸತ್ತಮ ಭಗವಾನ್ ಆಪವನು ಕೋಪವಶನಾಗಿ ವಸುಗಳನ್ನು ಶಪಿಸಿದನು. ಅವರನ್ನು ಶಪಿಸಿ ಆ ಮಹಾಭಾಗನು ತಪಸ್ಸಿನಲ್ಲಿಯೇ ತನ್ನ ಮನವನ್ನಿತ್ತನು. ಈ ರೀತಿ ಆ ಎಂಟು ವಸುಗಳು ರೋಷಸಮನ್ವಿತ ತಪೋಧನ, ಮಹಾಪ್ರಭಾವೀ, ಬ್ರಹ್ಮರ್ಷಿ ದೇವನಿಂದ ಶಪಿಸಲ್ಪಟ್ಟರು. ಶಪಿಸಲ್ಪಟ್ಟಿದ್ದೇವೆ ಎಂದು ತಿಳಿದ ಮಹಾತ್ಮರುಗಳು ಆಶ್ರಮಪದವನ್ನು ತಲುಪಿ ಋಷಿಯ ಬಳಿ ಬಂದರು. ವಸುಗಳು ಆ ಋಷಿಯನ್ನು ಶಾಂತಗೊಳಿಸಲು ಪ್ರಯತ್ನಿಸಿದರು. ಆದರೂ ಸರ್ವಧರ್ಮ ವಿಶಾರದ ಋಷಿಸತ್ತಮ ಆಪವನಿಂದ ಆಶೀರ್ವಾದವು ದೊರೆಯಲಿಲ್ಲ.  ಧರ್ಮಾತ್ಮನು ಹೇಳಿದನು: 'ನಿಮ್ಮಲ್ಲಿ ಧರ ಮೊದಲಾದ ಏಳು ಜನರು ಇಂದಿನಿಂದ ಒಂದು ವರ್ಷದೊಳಗೆ ಶಾಪದಿಂದ ವಿಮುಕ್ತರಾಗುತ್ತೀರಿ. ಯಾರ ಕೆಲಸದಿಂದ ನೀವೆಲ್ಲರೂ ನನ್ನಿಂದ ಶಪಿಸಲ್ಪಟ್ಟಿದ್ದೀರೋ ಆ ಧ್ಯೌ ಮಾತ್ರ ತನ್ನ ಕರ್ಮದಿಂದಾಗಿ ಮನುಷ್ಯ ಲೋಕದಲ್ಲಿ

ದೀರ್ಘಕಾಲ ವಾಸಿಸುತ್ತಾನೆ. ನಿಮ್ಮ ಮೇಲಿನ ಕ್ರೋಧದಿಂದಾಗಲೀ ಅಥವಾ ಸುಳ್ಳನ್ನು ಹೇಳಲೋಸುಗ ಈ ಮಾತನ್ನು ಹೇಳುತ್ತಿಲ್ಲ. ಆ ಮಹಾತ್ಮನು ಮನುಷ್ಯ ಲೋಕದಲ್ಲಿ ಸಂತತಿಯನ್ನು ಪಡೆಯುವುದಿಲ್ಲ. ಅವನೊಬ್ಬ ಧರ್ಮಾತ್ಮನೂ, ಸರ್ವಶಾಸ್ತ್ರವಿಶಾರದನೂ, ಪಿತನ ಪ್ರಿಯಕಾರ್ಯ ನಿರತನೂ, ಆಗಿ ಸ್ತ್ರೀಭೋಗವನ್ನು ವರ್ಜಿಸುತ್ತಾನೆ.' ಎಲ್ಲ ವಸುಗಳಿಗೂ ಈ ರೀತಿ ಹೇಳಿದ ಭಗವಾನ್ ಋಷಿಯು ತೆರಳಿದನು. ಆನಂತರ, ಸಮಸ್ತ ವಸುಗಳೂ ನನ್ನ ಬಳಿ ಬಂದಾಗ ನಾನು ಅವರಿಗೆ ಒಂದು ವರವನ್ನು ಇತ್ತೆ. ಆಗ ಅವರು 'ಗಂಗೇ! ನಾವು ಹುಟ್ಟಿದಾಕ್ಷಣವೇ ಸ್ವಯಂ ನೀನು ನೀರಿನಲ್ಲಿ ಹಾಕಿಬಿಡು!' ಎಂದು ಯಾಚಿಸಿದರು. ಶಪಿತ ಆ ದೇವತೆಗಳನ್ನು ಮನುಷ್ಯ ಲೋಕದಿಂದ ಮುಕ್ತಿ ನೀಡಲೋಸುಗವೇ ನಾನು ಇದನ್ನೆಲ್ಲ ಮಾಡಿದೆ. ಆದರೆ ಈ ಧ್ಯೌ ಒಬ್ಬನು ಮಾತ್ರ ಋಷಿಯ ಶಾಪದಂತೆ ಮನುಷ್ಯ ಲೋಕದಲ್ಲಿ ದೀರ್ಘಕಾಲ ವಾಸಿಸುತ್ತಾನೆ."

ಈ ರೀತಿ ಕಥೆಯನ್ನು ಹೇಳಿದ ದೇವಿಯು ಅಲ್ಲಿಯೇ ಅಂತರ್ಧಾನಳಾದಳು. ಹೋಗುವಾಗ ಆ ಕುಮಾರನನ್ನೂ ಕರೆದುಕೊಂಡು ಹೋದಳು. ಗುಣಗಳಲ್ಲಿ ಶಂತನುವನ್ನೂ ಮೀರಿದ

ಶಂತನು ಪುತ್ರನು ಎರಡು ಹೆಸರುಗಳಿಂದ ಕರೆಯಲ್ಪಟ್ಟನು: ದೇವವ್ರತ ಮತ್ತು ಗಾಂಗೇಯ. ಶಂತನವು ಶೋಕಾರ್ತನಾಗಿ ತನ್ನ ಪುರಕ್ಕೆ ತೆರಳಿದನು.

## ದೇವವ್ರತ-ಭೀಷ್ಮ

ದೇವರಾಜರ್ಷಿಸತ್ಕೃತ ದೀಮಾನ್ ಧರ್ಮಾತ್ಮ ಶಂತನುವು ಸರ್ವಲೋಕಗಳಲ್ಲಿ ಸತ್ಯವಾದಿಯೆಂದು ವಿಶ್ರುತನಾಗಿದ್ದನು. ದಮ, ದಾನ, ಕ್ಷಮೆ, ಬುದ್ಧಿ, ಧೃತಿ, ತೇಜಸ್ಸು ಮುಂತಾದ ಉತ್ತಮ ಮಹಾಸತ್ವಗಳು ಪುರುಷರ್ಷಭ ಶಂತನುವಿನಲ್ಲಿ ನಿತ್ಯವೂ ವಾಸಿಸಿದ್ದವು. ಈ ರೀತಿ ಗುಣಸಂಪನ್ನನಾದ, ಧರ್ಮಾರ್ಥಕುಶಲನಾದ ನೃಪನು ಭರತವಂಶದ ಮತ್ತು ಸಾಧುಜನರ ನಾಯಕನಾಗಿದ್ದನು. ಶಂಖದಂತ ಕುತ್ತಿಗೆ, ವಿಸ್ತಾರವಾದ ಹೆಗಲು, ಮದಿಸಿದ ಆನೆಯ ಪರಾಕ್ರಮ, ಕಾಮ ಮತ್ತು ಅರ್ಥಕ್ಕಿಂತಲೂ ಧರ್ಮವೇ ಶ್ರೇಷ್ಠವೆಂಬ ನಿಲುವು, ಈ ಎಲ್ಲ ಮಹಾಸತ್ವಗಳನ್ನೊಳಗೊಂಡ ಭರತರ್ಷಭ ಧರ್ಮಿ ಶಂತನುವಿನ ಸದೃಶ ಬೇರೊಬ್ಬ  ಕ್ಷತ್ರಿಯನು ಎಲ್ಲಿಯೂ ಇರಲಿಲ್ಲ. ಸ್ವಯಂ ಧರ್ಮದಲ್ಲಿ ನಡೆಯುತ್ತಿದ್ದು ಸರ್ವಧರ್ಮವಿದ್ವಾಂಸರಲ್ಲಿ ಶ್ರೇಷ್ಠನೆಂದೆನಿಸಿಕೊಂಡ ಆ ಮಹೀಪಾಲನನ್ನು ಭೂಮಿಯ ರಾಜರೆಲ್ಲರೂ ರಾಜ ರಾಜನೆಂದು ಅಭಿಷೇಕಿಸಿದ್ದರು. ಆ ಭಾರತನನ್ನು ನಾಯಕನನ್ನಾಗಿ ಪಡೆದ ಭೂಮಿಪರೆಲ್ಲರೂ

ವೀತಶೋಕಭಯಾಬಾಧರಾಗಿ, ಸುಖಸ್ವಪ್ನದೊಂದಿಗೆ ಏಳುತ್ತಿದ್ದರು. ಲೋಕದ ನೃಪತಿಯರೆಲ್ಲರಿಗೂ ಶಂತನುವು ಪ್ರಮುಖನಾಗಿದ್ದಾಗ ಸರ್ವ ವರ್ಣಗಳನ್ನೂ ಹಿಡಿತದಲ್ಲಿಟ್ಟಿದ್ದ ಬ್ರಾಹ್ಮಣತ್ವವು ಉನ್ನತ ಸ್ಥಾನವನ್ನು ಪಡೆದಿತ್ತು. ಕ್ಷತ್ರಿಯರು ಬ್ರಾಹ್ಮಣರ ಪರಿಚಾರಕರಾಗಿದ್ದರು, ವೈಶ್ಯರು ಕ್ಷತ್ರಿಯರನ್ನು ಅನುಸರಿಸುತ್ತಿದ್ದರು ಮತ್ತು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರನ್ನು ಶೂದ್ರರು ಪರಿಚರಿಸುತ್ತಿದ್ದರು. ಕುರುಗಳ ಕೇಂದ್ರಬಿಂದು ರಮ್ಯ ಹಸ್ತಿನಾಪುರದಲ್ಲಿ ವಾಸಿಸುತ್ತಾ, ಅವನು ಸಾಗರಪರ್ಯಂತ ಇಡೀ ಭೂಮಿಯನ್ನು ಆಳಿದನು. ಧರ್ಮಜ್ಞನೂ, ಸತ್ಯವಾಗ್ಮಿಯೂ, ಋಜುವೂ ಆಗಿದ್ದ ಅವನು ದೇವರಾಜಸದೃಶನಾಗಿದ್ದನು. ಅವನ ದಾನ-ಧರ್ಮ-ತಪೋಯೋಗಗಳಿಂದ ಅತ್ಯುತ್ತಮ ಸಂಪತ್ತೂ ಅವನದ್ದಾಗಿತ್ತು. ರಾಗದ್ವೇಷಗಳಿಲ್ಲದ, ಚಂದ್ರನಂತೆ ಪ್ರಿಯದರ್ಶನನಾದ, ತೇಜಸ್ಸಿನಲ್ಲಿ ಸೂರ್ಯಸಂಕಾಶನಾದ, ವಾಯುವೇಗಸಮನಾದ, ಅವನು ಕೋಪದಲ್ಲಿ ಯಮನ ಸಮನಾಗಿದ್ದನು ಮತ್ತು ಕ್ಷಮೆಯಲ್ಲಿ ಪೃಥ್ವಿಯ ಸಮನಾಗಿದ್ದನು. ಶಂತನುವು ಪೃಥಿವೀಪಾಲನಾಗಿದ್ದಾಗ ಯಾವುದೇ ಪಶುವಾಗಲೀ ವರಾಹವಾಗಲೀ, ಮೃಗಪಕ್ಷಿಗಳಾಗಲೀ ವೃಥಾ ಸಾಯುತ್ತಿರಲಿಲ್ಲ. ಧರ್ಮ ಮತ್ತು ಬ್ರಾಹ್ಮಣತ್ವಕ್ಕೆ ಪ್ರಾಮುಖ್ಯತೆಯಿದ್ದ ರಾಜ್ಯದಲ್ಲಿ ಶಂತನುವು ಸರ್ವ ಜೀವಿಗಳನ್ನು ಕಾಮರಾಗವಿವರ್ಜಿತನಾಗಿ ತನ್ನ ಸಮಾನರೆಂದು ತಿಳಿದು ಆಳಿದನು. ಅವನ ಕಾಲದಲ್ಲಿ ದೇವರ್ಷಿ, ಪಿತೃಗಳ ಯಜ್ಞವು ಸಮಯಕ್ಕೆ

ಸರಿಯಾಗಿ ನಡೆಯುತ್ತಿದ್ದವು. ಉಸಿರಾಡುವ ಯಾವ ಪ್ರಾಣಿಗಳೂ ಅಧರ್ಮದಿಂದ ಸಾಯುತ್ತಿರಲಿಲ್ಲ. ಅಸುಖಿಗಳಿಗೆ, ಅನಾಥರಿಗೆ, ಮತ್ತು ಪ್ರಾಣಿಯೋನಿಯಲ್ಲಿ ಜನಿಸಿದ ಎಲ್ಲವಕ್ಕೂ ಎಲ್ಲ ಜೀವಿಗಳಿಗೂ ರಾಜನೇ ತಂದೆಯಂತಿದ್ದನು. ಆ ಕುರುಪತಿಶ್ರೇಷ್ಠ ರಾಜರಾಜೇಶ್ವರನ ಕಾಲದಲ್ಲಿ ಮಾತು ಸತ್ಯಕ್ಕೇ ಹೊಂದಿಕೊಂಡಿತ್ತು ಮತ್ತು ಮನಸ್ಸು ದಾನ-ಧರ್ಮಗಳಲ್ಲಿ ನೆಲಸಿತ್ತು. ಅವನು ಒಬ್ಬೊಬ್ಬರಲ್ಲಿ ಎಂಟುವರ್ಷಗಳಂತೆ ೩೬ ವರ್ಷಗಳು ಸ್ತ್ರೀಯರಲ್ಲಿ ರತಿಸುಖವನ್ನು ಹೊಂದಿ ವನವನ್ನು ತೆರಳಿದನು.

ಅವನ ಮಗ ಗಾಂಗೇಯ, ದೇವವ್ರತನೆಂಬ ಹೆಸರು ಪಡೆದ ವಸುವು ರೂಪ, ಆಚಾರ, ಶ್ರೇಷ್ಠತೆ, ವಿದ್ಯೆಗಳಲ್ಲಿ ಅವನಂತೆಯೇ ಇದ್ದನು. ಸರ್ವಾಸ್ತ್ರ ನಿಷ್ಣಾತನಾಗಿ ಇತರ ಎಲ್ಲ ಪಾರ್ಥಿವರಿಗಿಂಥ ಮಹಾಬಲಶಾಲಿಯೂ, ಮಹಾಸತ್ವನೂ, ಮಹಾವೀರನೂ, ಮಹಾರಥಿಯೂ ಆಗಿದ್ದನು. ಒಮ್ಮೆ ಒಂದು ಜಿಂಕೆಯನ್ನು ಹೊಡೆದು ಅದನ್ನು ಅನುಸರಿಸುತ್ತಾ ಗಂಗಾನದೀತೀರದಲ್ಲಿ ಹೋಗುತ್ತಿರುವಾಗ ನೃಪ ಶಾಂತನುವು ಭಾಗಿರಥಿಯಲ್ಲಿನ ನೀರು ತುಂಬಾ ಕಡಿಮೆಯಾದದ್ದನ್ನು ಗಮನಿಸಿದನು. ಅದನ್ನು ನೋಡಿ ಪುರುಷರ್ಷಭ ಶಂತನುವು 'ಯಾವ ಕಾರಣದಿಂದಾಗಿ ನದಿಗಳಲ್ಲೆಲ್ಲ ಶ್ರೇಷ್ಠ ನದಿಯು ಮೊದಲಿನ ಹಾಗೆ ಹರಿಯುತ್ತಿಲ್ಲ?' ಎಂದು ಚಿಂತಿಸಿದನು. ಇದರ ಕಾರಣವೇನಿರಬಹುದೆಂದು ಹುಡುಕುತ್ತಿದ್ದ ಆ ಮಹಾಮನನು

ಅತಿಗಾತ್ರಿ, ರೂಪಸಂಪನ್ನ, ನೋಡಲು ಸುಂದರನಾದ ಕುಮಾರನೋರ್ವನು ದಿವ್ಯ ಬಿಲ್ಲನ್ನು ಹಿಡಿದು ದೇವ ಪುರಂದರನಂತೆ ತೀಕ್ಷ್ಣ ಶರಗಳಿಂದ ಇಡೀ ಗಂಗೆಯನ್ನೇ ತಡೆಹಿಡಿದಿದ್ದುದನ್ನು ಕಂಡನು. ಬಾಣಗಳಿಂದ ಆವೃತಗೊಂಡು ತಡೆಹಿಡಿಯಲ್ಪಟ್ಟ ಗಂಗಾನದಿಯನ್ನು ಮತ್ತು ಆ ಅತಿ ಮಾನುಷ ಕರ್ಮವನ್ನು ಕಂಡ ರಾಜನು ವಿಸ್ಮಿತನಾದನು. ಹಿಂದೆ ಹುಟ್ಟಿದಾಗ ಮಾತ್ರ ನೋಡಿದ್ದ ತನ್ನ ಪುತ್ರನನ್ನು ಧೀಮಂತ ಶಂತನುವು ತನ್ನದೇ ಪುತ್ರನೆಂದು ನೆನಪಿಸಿ ಗುರುತಿಸಲು ಅಶಕ್ಯನಾದನು. ಆದರೆ ಅವನ ಮಗನು ತನ್ನ ತಂದೆಯನ್ನು ಕಂಡು ಮಾಯೆಯಿಂದ ಅವನನ್ನು ಮೋಹಿಸಿ ಸಂಮೋಹನನ್ನಾಗಿ ಮಾಡಿ ತಕ್ಷಣವೇ ಅಲ್ಲಿಂದ ಅಂತರ್ಧಾನನಾದನು. ಆ ಅದ್ಭುತವನ್ನು ಕಂಡ ರಾಜ ಶಂತನುವು ಅನುಮಾನಗೊಂಡು “ಮಗನನ್ನು ತೋರಿಸು!””ಎಂದು ಗಂಗೆಗೆ ಹೇಳಿದನು. ಉತ್ತಮ ರೂಪದಿಂದ ಹೊಳೆಯುತ್ತಾ ಅಲಂಕೃತ ಕುಮಾರನ ಕೈಗಳನ್ನು ತನ್ನ ಬಲಗೈಯಲ್ಲಿ ಹಿಡಿದು ಗಂಗೆಯು ಕಾಣಿಸಿಕೊಂಡಳು. ಆಭರಣಗಳಿಂದ ಅಲಂಕೃತಳಾದ, ಧೂಳೀ ಇಲ್ಲದ ವಸ್ತ್ರಗಳನ್ನು ಧರಿಸಿದ ಸತಿಯನ್ನು ಹಿಂದೆ ನೋಡಿದ್ದರೂ ಸಹ ಶಂತನುವಿಗೆ ಗುರುತಿಸಲಾಗಲಿಲ್ಲ.



ಗಂಗೆಯು ಹೇಳಿದಳು:

> “ಪುರುಷವ್ಯಾಘ್ರ ರಾಜನ್! ನನ್ನಲ್ಲಿ ಹಿಂದೆ ಜನಿಸಿದ ನಿನ್ನ ಅಷ್ಟಮ ಪುತ್ರನನ್ನು ನಿನ್ನ ಮನೆಗೆ ಕರೆದುಕೊಂಡು ಹೋಗು. ಇವನು ವಸಿಷ್ಠನಿಂದ ಶಾಖೆಗಳ ಸಹಿತ ವೇದಗಳನ್ನು ಕಲಿತಿದ್ದಾನೆ ಮತ್ತು ಯುದ್ಧದಲ್ಲಿ ದೇವರಾಜನಿಗೆ ಸಮನಾದ ಕೃತಾಸ್ತ್ರನೂ ಪರಮೇಷ್ವಾಸನೂ ಆಗಿದ್ದಾನೆ. ಸುರ-ಅಸುರರಿಂದ ನಿತ್ಯವೂ ಗೌರವಿಸಲ್ಪಟ್ಟ ಉಶಾನನಲ್ಲಿದ್ದ ಸರ್ವ ವೇದ ಶಾಸ್ತ್ರಗಳೂ ಇವನಲ್ಲಿವೆ. ಮಹಾಬಾಹುವೂ ಮಹಾತ್ಮನೂ ಆದ ನಿನ್ನ ಈ ಪುತ್ರನಲ್ಲಿ ಸುರಾಸುರನಮಸ್ಕೃತ ಆಂಗಿರಸ ಪುತ್ರನು ತಿಳಿದಿರುವ ವೇದ ಶಾಸ್ತ್ರಗಳೆಲ್ಲವನ್ನೂ ಸಹ ಇವೆ. ಯಾರಿಂದಲೂ ಅಪರಾಜಿತನಾಗದೇ ಇದ್ದ ಪ್ರತಾಪವಾನ್ ಜಮದಗ್ನಿಯ ಮಗ ಋಷಿ ರಾಮನಿಗೆ ತಿಳಿದಿದ್ದ ಎಲ್ಲ ಅಸ್ತ್ರಗಳೂ ಇವನಲ್ಲಿವೆ. ರಾಜಧರ್ಮಾರ್ಥಕೋವಿದ ಈ ಮಹೇಷ್ವಾಸನು ನಾನು ನಿನಗಿತ್ತ ನಿಜ ಪುತ್ರ. ಈ ವೀರನನ್ನು ಮನೆಗೆ ಕರೆದುಕೊಂಡು ಹೋಗು.”

ಈ ರೀತಿ ಅವಳಿಂದ ಅನುಜ್ಞೆಯನ್ನು ಪಡೆದ ಶಂತನುವು ಆದಿತ್ಯನಂತೆ ಬೆಳಗುತ್ತಿರುವ ತನ್ನ ಪುತ್ರನನ್ನು ಕರೆದುಕೊಂಡು ತನ್ನ ನಗರವನ್ನು ಸೇರಿದನು. ಪುರಂದರಪುರದಂತಿದ್ದ ತನ್ನ ನಗರವನ್ನು

ಸೇರಿದ ಪೌರವನು ತನ್ನ ಸರ್ವಕಾಮಗಳೂ ಪೂರೈಸಿದವೆಂದು ತನ್ನಲ್ಲಿಯೇ ಯೋಚಿಸಿದನು. ನಂತರ ತನ್ನ ಪುತ್ರನಿಗೆ ಪೌರವರ ಯುವರಾಜನನ್ನಾಗಿ ಅಭಿಷೇಕವನ್ನು ನೆರವೇರಿಸಿದನು. ಆ ಪೌರವ ಶಂತನುವಿನ ಮಹಾಯಶಸ್ವಿ ಪುತ್ರನು ತನ್ನ ತಂದೆ, ರಾಷ್ಟ್ರ ಮತ್ತು ಪುರಜನರೆಲ್ಲರನ್ನೂ ರಂಜಿಸಿದನು. ಹೀಗೆ ಅಮಿತವಿಕ್ರಮಿ ಮಹೀಪತಿಯು ತನ್ನ ಪುತ್ರನೊಂದಿಗೆ ಸಂತೋಷದಿಂದ ನಾಲ್ಕು ವರ್ಷಗಳನ್ನು ಕಳೆದನು.

ಒಮ್ಮೆ ಮಹೀಪತಿಯು ಯಮುನಾನದಿಯ ಬಳಿಯ ವನಕ್ಕೆ ಹೋದಾಗ ಒಂದು ಅನಿರ್ದಿಷ್ಟ ಉತ್ತಮ ಸುಗಂಧವನ್ನು ಆಘ್ರಾಣಿಸಿದನು. ಅದರ ಮೂಲವನ್ನು ಅರಸುತ್ತಾ ಎಲ್ಲೆಡೆಯೂ ಅಲೆದಾಡಿ ದೇವರೂಪಿಣಿ ದಾಶ ಕನ್ಯೆಯೋರ್ವಳನ್ನು ಕಂಡನು. ಆ ಅಸಿತಲೋಚನೆ ಕನ್ಯೆಯನ್ನು ನೋಡಿದಾಕ್ಷಣವೇ ಅವಳಲ್ಲಿ ಕೇಳಿದನು:

> “ಭೀರು! ನೀನು ಯಾರವಳು ಮತ್ತು ನೀನು ಇಲ್ಲಿ ಏನು ಮಾಡುತ್ತಿರುವೆ?”

ಅವಳು ಹೇಳಿದಳು:

> “ನಾನು ಓರ್ವ ದಾಶಕನ್ಯೆ. ನನ್ನ ತಂದೆ ಮಹಾತ್ಮ ದಾಶರಾಜನ ಆದೇಶದಂತೆ ಧರ್ಮಾರ್ಥ ದೋಣಿಯನ್ನು ನಡೆಸುತ್ತಿದ್ದೇನೆ. ನಿನಗೆ ಮಂಗಳವಾಗಲಿ.”



ರೂಪ, ಮಾಧುರ್ಯ, ಮತ್ತು ಸುಗಂಧ ಸಂಯುಕ್ತೆ ಆ ದೇವರೂಪಿಣಿ ದಾಶೇಯಿಯನ್ನು ನೋಡಿದ ರಾಜ ಶಂತನುವು ಅವಳನ್ನು ಬಯಸಿದನು. ಅವಳ ತಂದೆಯಲ್ಲಿಗೆ ಹೋಗಿ ಅವಳನ್ನು ತನಗಾಗಿ ಅವಳ ತಂದೆಯಿಂದ ಕೇಳಿದನು. ಆಗ ದಾಶರಾಜನು ಮಹೀಪತಿಗೆ ಹೇಳಿದನು:

> "ಜನೇಶ್ವರ! ಇವಳು ಹುಟ್ಟಿದಾಗಲೇ ಈ ವರವರ್ಣಿನಿಯನ್ನು ವರನೋರ್ವನಿಗೆ ಕೊಡಲೇ ಬೇಕು ಎನ್ನುವುದನ್ನು ತಿಳಿದಿದ್ದೆ. ಆದರೆ ಆಗಲೇ ನನ್ನ ಹೃದಯದಲ್ಲಿ ಯಾರಿಗೂ ಹೇಳದ ಆಸೆಯೊಂದಿತ್ತು. ಅದನ್ನು ಕೇಳು. ಒಂದುವೇಳೆ ನೀನು ಇವಳನ್ನು ನಿನ್ನ ಧರ್ಮಪತ್ನಿಯಾಗಿ ಕೇಳುತ್ತಿರುವೆಯಾದರೆ ಸತ್ಯವಂತನಾಗಿ ನನ್ನಲ್ಲಿ ನಿಜವಾದ ಒಪ್ಪಂದವೊಂದನ್ನು ಮಾಡಿಕೋ. ಈ ಒಪ್ಪಂದವಾದರೆ ಈ ಕನ್ಯೆಯನ್ನು ನಿನಗೆ ಕೊಡುತ್ತೇನೆ. ನನಗೆ ನಿನ್ನಂಥ ವರನು ಎಂದೂ ದೊರೆಯಲಿಕ್ಕಿಲ್ಲ."

ಶಂತನು ಹೇಳಿದನು:

> "ದಾಶ! ನೀನು ಕೇಳುವ ವರವನ್ನು ಕೇಳಿದ ನಂತರವೇ ಅದರ ಪರವಾಗಿ ಅಥವಾ ವಿರುದ್ಧವಾಗಿ ನಿಶ್ಚಯಿಸುತ್ತೇನೆ. ಕೊಡುವಂಥದ್ದಾಗಿದ್ದರೆ ಕೊಡುತ್ತೇನೆ. ಕೊಡುವಂಥದಲ್ಲದಿದ್ದರೆ ಖಂಡಿತವಾಗಿಯೂ

ಕೊಡುವುದಿಲ್ಲ."

ದಾಶನು ಹೇಳಿದನು:

"ಪೃಥಿವೀಪತಿ! ಇವಳಲ್ಲಿ ಯಾರು ಪುತ್ರನಾಗಿ ಹುಟ್ಟುತ್ತಾನೋ ಅವನನ್ನೇ ನಿನ್ನ ನಂತರದ ರಾಜನನ್ನಾಗಿ ಅಭಿಷೇಕಿಸಬೇಕು. ಬೇರೆ ಯಾರೂ ಎಂದೂ ರಾಜನಾಗಬಾರದು."

ಶರೀರಜ್ವರದಿಂದ ತೀವ್ರವಾಗಿ ಸುಡುತ್ತಿದ್ದರೂ ಶಂತನುವು ದಾಶನಿಗೆ ಆ ವರವನ್ನು ಕೊಡಲು ಇಷ್ಟಪಡಲಿಲ್ಲ. ದಾಶಕನ್ಯೆಯ ಕುರಿತೇ ಯೋಚಿಸುತ್ತಾ ಶೋಕದಿಂದ ಹತಚೇತನನಾಗಿ ಮಹೀಪತಿಯು ಹಸ್ತಿನಾಪುರಕ್ಕೆ ಹಿಂದಿರುಗಿದನು.

ಒಮ್ಮೆ ಪುತ್ರ ದೇವವ್ರತನು ಚಿಂತೆ-ಶೋಕಗಳಿಂದ ಯೋಚನಾ ಮಗ್ನನಾಗಿದ್ದ ಶಂತನುವಿನ ಬಳಿಬಂದು ತಂದೆಯನ್ನುದ್ದೇಶಿಸಿ ಹೇಳಿದನು:

"ಎಲ್ಲ ಕಡೆಯಿಂದಲೂ ನೀನು ಕ್ಷೇಮದಿಂದಿದ್ದೀಯೆ. ಸರ್ವ ಪಾರ್ಥಿವರೂ ನಿನಗೆ ವಿಧೇಯರಾಗಿದ್ದಾರೆ. ಹೀಗಿರುವಾಗ ಯಾವ ಕಾರಣದಿಂದ ನೀನು ಈ ರೀತಿ ತುಂಬಾ ನೋವಿನಿಂದಿರುವಂತೆ ದುಃಖಿತನಾಗಿ ಚಿಂತಿಸುತ್ತಿರುವೆ? ಏನೂ ಮಾತನಾಡದೇ ಯಾವುದರ ಧ್ಯಾನದಲ್ಲಿ

ತೊಡಗಿದ್ದೀಯೆ?"

ಈ ರೀತಿ ಕೇಳಿದ ಪುತ್ರನಿಗೆ ಶಂತನುವು ಉತ್ತರಿಸಿದನು:

"ನೀನು ಹೇಳಿದ ಹಾಗೆ ನಿಸ್ಸಂಶಯವಾಗಿಯೂ ನಾನು ಏನನ್ನೋ ಯೋಚಿಸುತ್ತಿದ್ದೇನೆ. ಈ ಮಹಾಕುಲದಲ್ಲಿ ನೀನೊಬ್ಬನೇ ನನ್ನ ಮಗ. ಪುತ್ರಕ! ನಮ್ಮಂಥಹ ಮರ್ತ್ಯರ ಅನಿತ್ಯತೆಯ ಕುರಿತು ಶೋಕಿಸುತ್ತಿದ್ದೇನೆ. ನಿನಗೇನಾದರೂ ವಿಪತ್ತು ಬಂದರೆ ಈ ಕುಲವೇ ಇಲ್ಲವಾಗುತ್ತದೆ. ನಿಸ್ಸಂಶಯವಾಗಿಯೂ ನೀನೊಬ್ಬನೇ ನೂರು ಪುತ್ರರಿಗಿಂತಲೂ ಶ್ರೇಷ್ಠ. ನಾನೂ ಕೂಡ ವೃಥಾ ಇನ್ನೊಬ್ಬಳು ಪತ್ನಿಯನ್ನು ಮಾಡಿಕೊಳ್ಳಲು ಉತ್ಸುಕನಾಗಿಲ್ಲ. ಆದರೂ ನಾನು ಸಂತಾನವು ವಿನಾಶವಾಗಬಾರದೆಂದು ಬಯಸುತ್ತೇನೆ. ನಿನಗೆ ಮಂಗಳವಾಗಲಿ. ಒಂದೇ ಮಗನನ್ನು ಹೊಂದಿರುವುದು ಮತ್ತು ಮಕ್ಕಳನ್ನೇ ಪಡೆಯದಿರುವುದು ಇವೆರಡೂ ಒಂದೇ ಎಂದು ಧರ್ಮವಾದಿಗಳು ಹೇಳುತ್ತಾರೆ. ಅಗ್ನಿಹೋತ್ರ, ಮೂರು ವೇದಗಳು, ಮತ್ತು ದಕ್ಷಿಣಯುಕ್ತ ಯಜ್ಞ ಇವುಗಳೆಲ್ಲವನ್ನೂ ಸೇರಿಸಿದರೂ ಮಗನ ಹದಿನಾರರ ಒಂದಂಶದ ಯೋಗ್ಯತೆಯನ್ನು ಪಡೆಯುವುದಿಲ್ಲ. ಪುತ್ರನನ್ನು ಹೊಂದುವುದು ಸರ್ವ ಪ್ರಜೆಗಳಲ್ಲಿದ್ದಂತೆ ಮನುಷ್ಯನಲ್ಲಿಯೂ ಕೂಡ ಇದೆ ಎನ್ನುವುದರಲ್ಲಿ ನನಗೆ

ಸ್ವಲ್ಪವೂ ಸಂಶಯವಿಲ್ಲ. ಇದು ಪುರಾಣಗಳಲ್ಲಿರುವ ಅನುತ್ತಮ ಶಾಶ್ವತ ವಿಚಾರ. ನೀನಾದರೂ ಶೂರ, ಸದಾಮರ್ಷಿ ಮತ್ತು ಶಸ್ತ್ರನಿತ್ಯ. ಶಸ್ತ್ರದ ಹೊರತು ಬೇರೆ ಯಾವುದರಿಂದಲೂ ನಿನಗೆ ಸಾವಾಗಲಾರದು. ನಿನಗೇನಾದರೂ ಆಪತ್ತಾಗಬಹುದೆಂಬ ಸಂಶವಿದ್ದಾಗ ನಾನು ಹೇಗೆ ತಾನೆ ಶಾಂತನಾಗಿರಲಿ? ಮಗೂ ಇದೇ ನನ್ನ ದುಃಖದ ಸಂಪೂರ್ಣ ಕಾರಣ."

ಇದೇ ಸಂಪೂರ್ಣಕಾರಣವೆಂದು ತಿಳಿದ ಮಹಾಬುದ್ಧಿ ದೇವವ್ರತನು ಪುನರಾಲೋಚನೆಯನ್ನು ಮಾಡುತ್ತಾ ಹಿಂದಿರುಗಿದನು. ತಕ್ಷಣವೇ ತನ್ನ ತಂದೆಯ ಹಿತೈಷಿ ವೃದ್ಧ ಅಮಾತ್ಯನೋರ್ವನ ಬಳಿಬಂದು ಅವನಲ್ಲಿ ತಂದೆಯ ಶೋಕಕ್ಕೆ ಕಾರಣವನ್ನು ಕೇಳಿದನು. ಈ ರೀತಿ ಕೇಳಿದಾಗ ಅವನು ಕುರುಮುಖ್ಯನಿಗೆ ಕನ್ಯೆಯು ಕೇಳಿದ ವರದ ಕುರಿತು ಎಲ್ಲವನ್ನೂ ಹೇಳಿದನು. ನಂತರ ದೇವವ್ರತನು ಆ ವೃದ್ಧ ಕತ್ರಿಯನ ಜೊತೆಗೂಡಿ ದಾಶರಾಜನಲ್ಲಿಗೆ ಹೋಗಿ ತಾನೇ ತನ್ನ ತಂದೆಗೆ ಆ ಕನ್ಯೆಯನ್ನು ಕೇಳಿದನು. ದಾಶನು ಅವನನ್ನು ಸ್ವಾಗತಿಸಿ ವಿಧಿವತ್ತಾಗಿ ಪೂಜಿಸಿ, ರಾಜಸಂಸದಿಯಲ್ಲಿ ಕುಳಿತಿದ್ದಾಗ ಹೇಳಿದನು:

"ಪುರುಷರ್ಷಭ! ನೀನು ಶಂತನುವಿಗೆ ಪರ್ಯಾಪ್ತ ನಾಥ. ಪುತ್ರವಂತರಲ್ಲಿ ಶ್ರೇಷ್ಠನಾದವನ ಪುತ್ರ. ನಿನ್ನ ಮಾತನ್ನು ನಾನು ಹೇಗೆ ವಿರೋಧಿಸಲಿ? ಯಾರುತಾನೇ ಸಾಕ್ಷಾತ್

ಶತಕ್ರತುವಿನಂತಿರುವ, ಶ್ಲಾಘನೀಯ, ಬಯಸಿದ್ದ ಕುಲದೊಂದಿಗೆ ಸಂಬಂಧವನ್ನು ಅತಿಕ್ರಮಿಸಿ ಪಶ್ಚಾತ್ತಾಪ ಹೊಂದುವುದಿಲ್ಲ? ಗುಣಗಳಲ್ಲಿ ನಿಮ್ಮಂಥಹ ಆರ್ಯನ ಮಗಳಿವಳು. ಅವನ ವೀರ್ಯದಿಂದ ಈ ಯಶಸ್ವಿನೀ ಸತ್ಯವತಿಯು ಜನಿಸಿದಳು. ಅವನು ನನಗೆ ಅನೇಕ ಬಾರಿ ಸರ್ವರಾಜರುಗಳಲ್ಲಿ 'ಅವನೇ ಸತ್ಯವತಿಯನ್ನು ವಿವಾಹವಾಗಲು ಅರ್ಹ!' ಎಂದು ನಿನ್ನ ತಂದೆಯನ್ನು ಪ್ರಶಂಸಿಸುತ್ತಿದ್ದನು. ಹಿಂದೆ ಋಷಿಸತ್ತಮ ದೇವರ್ಷಿ ಅಸಿತನೂ ಕೂಡ ಸತ್ಯವತಿಯನ್ನು ತುಂಬಾ ಕೇಳಿಕೊಂಡು ಬಂದಿದ್ದ. ಆದರೆ ಅವನನ್ನೂ ನಾನು ತಿರಸ್ಕರಿಸಿದ್ದೆ. ಕನ್ಯೆಯ ತಂದೆಯಾಗಿ ನಾನು ನಿನ್ನಲ್ಲಿ ಕೆಲವನ್ನು ಹೇಳಬೇಕು. ಇಲ್ಲಿ ನಾನು ಕೇವಲ ಸಪತ್ನತ್ವದ (ದಾಯವಾದಿತ್ವದ ಅಥವಾ ಸ್ಪರ್ಧೆಯ) ದೋಷವನ್ನು ಮಾತ್ರ ಕಾಣುತ್ತಿದ್ದೇನೆ. ನಿನಗೆ ಎದುರಾದವನು ಗಂಧರ್ವ ಅಸುರ ಯಾರೇ ಇರಲಿ, ನೀನು ಸಿಟ್ಟಾದೆಯೆಂದರೆ ಅವನು ಎಂದೂ ಸುಖದಿಂದಿರಲು ಸಾಧ್ಯವಿಲ್ಲ. ಇಷ್ಟೇ ದೋಷವು ನನಗೆ ತೋರುತ್ತಿದೆ. ಬೇರೆ ಏನೂ ಇಲ್ಲ. ಕೊಡುವುದು ತೆಗೆದುಕೊಳ್ಳುವುದರಲ್ಲಿ ನಿನಗೆ ಮಂಗಳವಾಗಲಿ."

ಈ ಮಾತುಗಳಿಗೆ ಗಾಂಗೇಯನು ತನ್ನ ತಂದೆಗೋಸ್ಕರವಾಗಿ,

ಭೂಮಿಪಾಲರೆಲ್ಲರೂ ಕೇಳುತ್ತಿದಂತೆ, ಯಥೋಕ್ತ ಉತ್ತರವನ್ನಿತ್ತನು.

> "ಸತ್ಯವಂತರಲ್ಲಿ ಶ್ರೇಷ್ಠ! ನನ್ನ ಮನಸ್ಸಿನ ಈ ಸತ್ಯವನ್ನು ಕೇಳು. ಇದೇ ರೀತಿ ಉತ್ಸಾಹದಿಂದ ಹೇಳುವ ಇನ್ನೊಬ್ಬನು ಹುಟ್ಟಿಲ್ಲ ಮುಂದೆ ಹುಟ್ಟುವುದೂ ಇಲ್ಲ. ನೀನು ಹೇಳುವ ಹಾಗೆಯೇ ಮಾಡುತ್ತೇನೆ. ಇವಳಲ್ಲಿ ಹುಟ್ಟಿದ ಪುತ್ರನೇ ರಾಜನಾಗುತ್ತಾನೆ."

ಇದನ್ನು ಕೇಳಿದ ದಾಶನು ಪುನಃ ಉತ್ತರಿಸಿದನು:

> "ಭರತರ್ಷಭ! ರಾಜ್ಯಕ್ಕಾಗಿ ದುಷ್ಕರ ಕರ್ಮವನ್ನೇ ಮಾಡಿದ್ದೀಯೆ. ಅಮಿತದ್ಯುತಿ ಶಂತನುವಿಗೆ ಪರ್ಯಾಪ್ತ ನಾಥನೇ ನೀನು. ಕನ್ಯೆಯ ಪ್ರಭುವೂ ಮತ್ತು ಕೊಡುವವನ ಈಶ್ವರನೂ ನೀನೆ. ಮಗಳನ್ನು ಪ್ರೀತಿಸುವವನಂತೆ ಇನ್ನೂ ಮಾಡಬೇಕಾದುದರ ಕುರಿತಾದ ನನ್ನ ಒಂದು ಮಾತನ್ನು ಕೇಳು. ಈ ರಾಜರ ಮಧ್ಯದಲ್ಲಿ ಸತ್ಯಧರ್ಮಪರಾಯಣನಾದ ನೀನು ಸತ್ಯವತಿಗಾಗಿ ಮಾಡಿದ ಪ್ರತಿಜ್ಞೆಯು ನಿನಗೆ ಅನುರೂಪವಾಗಿಯೇ ಇದೆ. ಅದರಂತೆಯೇ ಆಗುತ್ತದೆ ಎನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಆದರೆ ನಿನ್ನಲ್ಲಿ ಆಗುವ ಮಕ್ಕಳಲ್ಲಿ ಮಹಾ ಸಂಶಯವಿದೆ."

ಅವನ ಮತವೇನೆಂದು ತಿಳಿದ ಆ ಸತ್ಯಧರ್ಮಪರಾಯಣನು ತನ್ನ ತಂದೆಗೆ ಪ್ರಿಯವಾದುದನ್ನು ಮಾಡಲೋಸುಗ ಈ



ಭರವಸೆಯನ್ನಿತ್ತನು:

> “ದಾಶರಾಜ! ನನ್ನ ತಂದೆಗೋಸ್ಕರ ಈ ಭೂಮಿಪಾಲರು ಕೇಳುವಂತೆ ಹೇಳುವ ಈ ಮಾತುಗಳನ್ನು ಆಲಿಸು. ರಾಜ್ಯವನ್ನು ನಾನು ಮೊದಲೇ ಪರಿತ್ಯಜಿಸಿದ್ದೇನೆ. ಈಗ ನಾನು ನನ್ನ ಮಕ್ಕಳ ಕುರಿತೂ ನಿಶ್ಚಯಿಸುತ್ತೇನೆ. ಈ ದಿನದಿಂದ ನಾನು ಬ್ರಹ್ಮಚಾರಿಯಾಗಿಯೇ ಇರುತ್ತೇನೆ. ಮಕ್ಕಳಿಲ್ಲದಿದ್ದರೂ ನನಗೆ ಅಕ್ಷಯ ದೇವಲೋಕವು ದೊರೆಯುತ್ತದೆ.”

ಅವನ ಈ ಮಾತುಗಳನ್ನು ಕೇಳಿ ಹರ್ಷದಿಂದ ನಡುಗುತ್ತಿದ್ದ ಧರ್ಮಾತ್ಮ ದಾಶನು “ಕೊಡುತ್ತೇನೆ!” ಎಂದು ಉತ್ತರಿಸಿದನು.

ಆಗ ಅಂತರಿಕ್ಷದಲ್ಲಿ ಅಪ್ಸರೆಯರು, ದೇವತೆಗಳು, ಋಷಿಗಣಗಳು “ಭೀಷ್ಮ! ಭೀಷ್ಮ!” ಎನ್ನುತ್ತಾ ಹೂಮಳೆಯನ್ನು ಸುರಿಸಿದರು. ಅನಂತರ ತನ್ನ ತಂದೆಗೋಸ್ಕರಳಾದ ಆ ಯಶಸ್ವಿನಿಗೆ ಹೇಳಿದನು:

> “ಮಾತೆ! ರಥವನ್ನೇರು! ನಮ್ಮ ಮನೆಗೆ ಹೋಗೋಣ.”

ಹೀಗೆ ಹೇಳಿದ ಭೀಷ್ಮನು ಆ ಭಾಮಿನಿಯನ್ನು ರಥದಲ್ಲಿ ಕುಳಿಸಿ ಹಸ್ತಿನಾಪುರಕ್ಕೆ ಬಂದು ಶಂತನುವಿಗೆ ಒಪ್ಪಿಸಿದನು. ಅವನ ಈ ದುಷ್ಕರ ಕರ್ಮವನ್ನು ಪ್ರಶಂಸಿಸುತ್ತಾ ನರಾಧಿಪರು ಒಟ್ಟಾಗಿ ಒಂದೇ ವಾಖ್ಯದಲ್ಲಿ ಪುನಃ ಪುನಃ “ಇವನು ಭೀಷ್ಮ!” ಎಂದು



ಉದ್ಗರಿಸಿದರು. ಭೀಷ್ಮನು ಮಾಡಿದ ಈ ದುಷ್ಕರ ಕೃತ್ಯವನ್ನು ಸ್ವಯಂ ನೋಡಿ ಸಂತುಷ್ಟನಾದ ತಂದೆ ಶಂತನುವು "ನಿನಗೆ ಸ್ವಚ್ಛಂದಮರಣವಿರಲಿ!" ಎಂದು ವರವನ್ನಿತ್ತನು.

# ಚಿತ್ರಾಂಗದ-ವಿಚಿತ್ರವೀರ್ಯ

ವಿವಾಹಕಾರ್ಯಗಳು ಮುಗಿದ ನಂತರ ನೃಪ ಶಂತನು ರಾಜನು ಆ ರೂಪಸಂಪನ್ನ ಕನ್ಯೆಯೊಂದಿಗೆ ಕೂಡಿ ತನ್ನ ಮನೆಯಲ್ಲಿ ವಾಸಿಸತೊಡಗಿದನು. ಶಂತನುವಿಗೆ ಸತ್ಯವತಿಯು ವೀರತೆಯಲ್ಲಿ ಮನುಷ್ಯರೆಲ್ಲರನ್ನೂ ಮೀರಿದ ಚಿತ್ರಾಂಗದ ಎನ್ನುವ ಧೀಮಂತ ವೀರ ಪುತ್ರನಿಗೆ ಜನ್ಮವಿತ್ತಳು. ನಂತರ ಪುನಃ ಆ ಮಹೇಷ್ವಾಸ ಪ್ರಭುವು ಸತ್ಯವತಿಯಲ್ಲಿ ವಿಚಿತ್ರವೀರ್ಯನೆನ್ನುವ ವೀರ್ಯವಂತ ರಾಜಪುತ್ರನನ್ನು ಪಡೆದನು. ಅವರು ಯೌವನವನ್ನು ಹೊಂದುವುದರೊಳಗೇ ಆ ಧೀಮಾನ್ ರಾಜ ಶಂತನುವು ಕಾಲಧರ್ಮಕ್ಕೊಳಗಾದನು. ಶಂತನುವು ಸ್ವರ್ಗವಾಸಿಯಾದ ನಂತರ ಭೀಷ್ಮನು, ಸತ್ಯವತಿಯ ಇಚ್ಛೆಯಂತೆ, ಅರಿಂದಮ ಚಿತ್ರಾಂಗದನನ್ನು ರಾಜಸಿಂಹಾಸನದಲ್ಲಿ ಕೂರಿಸಿದನು. ಚಿತ್ರಾಂಗದನಾದರೂ ತನ್ನ ಶೌರ್ಯದಿಂದ ಪೃಥ್ವಿಯ ಸರ್ವ ಪಾರ್ಥಿವರನ್ನೂ ಮನುಷ್ಯರಲ್ಲಿ ತನ್ನ ಸದೃಶ ಯಾರೂ ಇಲ್ಲವೇನೋ ಎನ್ನುವಂತೆ ಗೆದ್ದನು. ಈ ರೀತಿ ಅವನು ಎಲ್ಲ ಸುರರು, ಮನುಷ್ಯರು, ಅಸುರರೆಲ್ಲರನ್ನೂ ಗೆದ್ದಾಗ,

ಅದೇ ಹೆಸರನ್ನು ಪಡೆದಿದ್ದ, ಬಲವಂತ ಗಂಧರ್ವರಾಜನು ಅವನನ್ನು ಎದುರಿಸಿದನು. ಅವರೀರ್ವರ ಮಧ್ಯೆ ಕುರುಕ್ಷೇತ್ರದಲ್ಲಿ ಮಹಾ ಯುದ್ಧವೇ ನಡೆಯಿತು. ಆ ಬಲವಂತ ಗಂಧರ್ವ-ಕುರುಮುಖ್ಯರ ನಡುವೆ ಹಿರಣ್ವತೀ ನದೀತೀರದಲ್ಲಿ ಮೂರು ವರ್ಷಗಳ ಕಾಲ ಯುದ್ಧ ನಡೆಯಿತು. ಒಂದೇ ಸಮನೆ ಶಸ್ತ್ರವೃಷ್ಠಿಯಾಗುತ್ತಿದ್ದ ಆ ಘೋರ ಯುದ್ಧದಲ್ಲಿ ಅಧಿಕ ಮಾಯೆಯ ವೀರ ಗಂಧರ್ವನು ಕುರುಸತ್ತಮನನ್ನು ವಧಿಸಿದನು. ವಿಚಿತ್ರ ಶರಕಾರ್ಮುಕ ಕುರುಶ್ರೇಷ್ಠ ಚಿತ್ರಾಂಗದನನ್ನು ಕೊನೆಗೊಳಿಸಿ ಗಂಧರ್ವನು ದೇವಲೋಕವನ್ನು ಸೇರಿದನು. ಆ ಭೂರಿವರ್ಚಸ ನೃಪತಿಶಾರ್ದೂಲನು ತೀರಿಕೊಂಡ ನಂತರ ಬೀಷ್ಮ ಶಾಂತನವನು ಅವನ ಪ್ರೇತಕಾರ್ಯಗಳನ್ನು ನೆರವೇರಿಸಿದನು. ಆ ಮಹಾಬಾಹುವು ಇನ್ನೂ ಯೌವನವನ್ನು ಪಡೆಯದಿದ್ದ ಬಾಲಕ ವಿಚಿತ್ರವೀರ್ಯನನ್ನು ಕುರುರಾಜನನ್ನಾಗಿ ಅಭಿಷೇಕಿಸಿದನು. ವಿಚಿತ್ರವೀರ್ಯನಾದರೂ ಭೀಷ್ಮನ ವಚನವನ್ನು ಪರಿಪಾಲಿಸುತ್ತಾ ತನ್ನ ಪಿತ ಪಿತಾಮಹರ ರಾಜ್ಯವನ್ನು ಆಳಿದನು. ಆ ಧರ್ಮಶಾಸ್ತ್ರಕುಶಲ ನೃಪನು ಭೀಷ್ಮ ಶಾಂತನವನನ್ನು ಪೂಜಿಸುತ್ತಾ ಧರ್ಮದಿಂದ ರಾಜ್ಯವಾಳಿದನು.

ಚಿತ್ರಾಂಗದನು ಹತನಾದ ನಂತರ ಅನಘ ಭೀಷ್ಮನು, ಸತ್ಯವತಿಯ ಮತದಂತೆ, ತನ್ನ ಬಾಲಕ ತಮ್ಮನ ಮೂಲಕ ಆ ರಾಜ್ಯವನ್ನು ಪಾಲಿಸಿದನು. ತನ್ನ ತಮ್ಮನಿಗೆ ಯೌವನಪ್ರಾಪ್ತಿಯಾದುದನ್ನು ಕಂಡ

ಧೀಮಂತರಲ್ಲಿ ಶ್ರೇಷ್ಠ ಭೀಷ್ಮನು ವಿಚಿತ್ರವೀರ್ಯನ ವಿವಾಹಮಾಡಬೇಕೆಂದು ನಿರ್ಧರಿಸಿದನು. ಆಗ ಭೀಷ್ಮನು ಕಾಶಿಪತಿಗೆ ಮೂವರು ಅಪ್ಸರಸಮ ಕನ್ಯೆಯರಿದ್ದಾರೆ ಮತ್ತು ಅವರು ಒಟ್ಟಿಗೇ ಸ್ವಯಂವರದಲ್ಲಿ ವರರನ್ನು ಆರಿಸುವವರಿದ್ದಾರೆ ಎಂದು ಕೇಳಿದನು. ಅವನ ತಾಯಿಯ ಅನುಮತಿಯನ್ನು ಪಡೆದು, ಆ ರಥಿಗಳಲ್ಲಿ ಶ್ರೇಷ್ಠನು, ಆಯುಧ-ಕವಚಗಳನ್ನು ಧರಿಸಿ, ರಥವನ್ನೇರಿ ಒಬ್ಬನೇ ವಾರಣಾಸೀ ಪುರಕ್ಕೆ ಹೋದನು. ಅಲ್ಲಿ ಶಂತನುನಂದನ ಭೀಷ್ಮನು ಎಲ್ಲಕಡೆಯಿಂದಲೂ ಬಂದು ಸೇರಿದ್ದ ಶ್ರೀಮಂತ ರಾಜಕುಮಾರರ ಮಧ್ಯೆ ಮೂವರು ಕನ್ಯೆಯರನ್ನು ನೋಡಿದನು. ಸಹಸ್ರಾರು ಸಂಖ್ಯೆಯಲ್ಲಿ ಬಂದಿದ್ದ ರಾಜರುಗಳ ಹೆಸರುಗಳನ್ನು ಹೇಳುತ್ತಿದ್ದ ಹಾಗೆಯೇ ಆ ಪ್ರಭು ಭೀಷ್ಮನು ಅವರನ್ನು ವರಿಸಿದನು. ಖಡ್ಗಧಾರಿಗಳಲ್ಲಿ ಶ್ರೇಷ್ಠ ಭೀಷ್ಮನು ಆ ಕನ್ಯೆಯರನ್ನು ರಥದ ಮೇಲೇರಿಸುತ್ತಾ ಮಹೀಪಾಲರನ್ನುದ್ದೇಷಿಸಿ ಗುಡುಗಿನ ಸ್ವರದಲ್ಲಿ ಕೂಗಿ ಹೇಳಿದನು:

> "ಗುಣವಂತರನ್ನು ಆಮಂತ್ರಿಸಿ ಕನ್ಯೆಯನ್ನು ದಾನವಾಗಿ ಕೊಡಬೇಕು ಎಂದು ತಿಳಿದವರು ಹೇಳುತ್ತಾರೆ. ಅಥವಾ ಅವರನ್ನು ಯಥಾಶಕ್ತಿ ಅಲಂಕರಿಸಿ ಧನವನ್ನಿತ್ತು ಕೊಡಬೇಕು ಎನ್ನುತ್ತಾರೆ. ಕೆಲವರು ತಮ್ಮ ಕನ್ಯೆಯರನ್ನು ಗೋವಿನ ಜೋಡಿಗೂ ಮದುವೆ ಮಾಡಿ ಕೊಡುತ್ತಾರೆ. ಅನ್ಯರು ವಿತ್ತದ

> ಕುರಿತು ಮಾತನಾಡಿ ಒಯ್ಯುತ್ತಾರಾದರೆ ಇನ್ನು ಕೆಲವರು ಬಲವಂತದಿಂದ ಕರೆದೊಯ್ಯುತ್ತಾರೆ. ಕೆಲವರು ಪ್ರಮತ್ತರಾದಾಗ ಮದುವೆಯಾಗುತ್ತಾರೆ, ಇನ್ನು ಕೆಲವರು ಸ್ವಯಂ ಹುಡುಕಿ ಮದುವೆಯಾಗುತ್ತಾರೆ. ಕವಿಗಳು ಹೇಳಿದ, ರಾಜರಲ್ಲಿ ಪ್ರಶಂಸನೀಯ ರೂಢಿಯಲ್ಲಿರುವ ಸ್ವಯಂವರವು ಎಂಟನೆಯ ವಿವಾಹ ವಿಧಿಯೆಂದು ತಿಳಿಯಿರಿ. ಆದರೆ ಧರ್ಮವಾದಿಗಳು ಅಪಹರಿಸಿ ಮದುವೆಯಾಗುವುದೇ ಶ್ರೇಷ್ಠವೆಂದು ಹೇಳುತ್ತಾರೆ. ಇಲ್ಲಿರುವ ಪೃಥಿವೀಪಾಲರೇ! ನಾನು ಇವರನ್ನು ಬಲತ್ಕಾರವಾಗಿ ಕೊಂಡೊಯ್ಯುತ್ತಿದ್ದೇನೆ. ಯಾರಿಗಾದರೂ ಪರಮ ಶಕ್ತಿಯಿದ್ದರೆ ಬನ್ನಿ. ನನ್ನನ್ನು ಸೋಲಿಸಿ ಅಥವಾ ನನ್ನಿಂದ ಸೋಲನ್ನು ಹೊಂದಿ. ಪೃಥಿವೀಪಾಲರೇ! ಯುದ್ಧದ ನಿಶ್ಚಯಮಾಡಿಯೇ ನಾನಿಲ್ಲಿ ಬಂದಿದ್ದೇನೆ.”

ಈ ರೀತಿ ಕಾಶಿರಾಜ ಮತ್ತು ಮಹೀಪಾಲರಿಗೆ ಹೇಳಿ ಎಲ್ಲ ಕನ್ಯೆಯರನ್ನೂ ಸ್ವತಃ ತಾನೇ ರಥವನ್ನೇರಿಸಿ, ಅವರೆಲ್ಲರನ್ನೂ ಆಮಂತ್ರಿಸುತ್ತಾ ಆ ಕೌರವ್ಯನು ಕನ್ಯೆಯರನ್ನು ಎತ್ತಿಕೊಂಡು ಶೀಘ್ರವಾಗಿ ರಥವನ್ನೋಡಿಸಿದನು. ಆಗ ಸರ್ವ ಪಾರ್ಥಿವರೂ ರೋಷಗೊಂಡು, ತಮ್ಮ ಬಾಹುಗಳನ್ನು ಉಬ್ಬಿಸಿ ಹಲ್ಲು ಕಡೆಯುತ್ತಾ ಮೇಲೆದ್ದರು. ಅವರವರ ಆಭರಣಗಳನ್ನು ಎಸೆದು ಅಸ್ತ್ರ

ಕವಚಗಳನ್ನು ಧರಿಸುವಾಗ ಎಲ್ಲೆಡೆಯೂ ಅತಿ ಸಂಭ್ರಮದ ಗದ್ದಲವಾಯಿತು. ಶುಭ್ರ ಭೂಷಣ-ಕವಚಗಳು ಎಲ್ಲೆಡೆಯಿಂದ ತಾರೆಗಳಂತೆ ಬಿದ್ದವು. ಆ ವೀರರೆಲ್ಲರೂ ಆಭರಣ ಭೂಷಣ ಮತ್ತು ಮುತ್ತು-ರತ್ನಗಳನ್ನು ಉದುರಿಸುತ್ತಾ, ರೋಷದಿಂದ ಹುಬ್ಬು ಕಟ್ಟಿ, ಮುಖ ಕೆಂಪುಮಾಡಿಕೊಂಡು, ಸಾರಥಿಗಳು ಸರ್ವ ಅಸ್ತ್ರಗಳನ್ನೂ ಹೇರಿಸಿ ತಯಾರುಮಾಡಿ ನಿಲ್ಲಿಸಿದ್ದ ರಥಗಳಲ್ಲಿ ಏರಿದರು. ಆಯುಧಗಳನ್ನು ಮೇಲೆತ್ತಿ ಅವರೆಲ್ಲರೂ ಏಕಾಂಗಿ ಕೌರವ್ಯನನ್ನು ಬೆನ್ನುಹತ್ತಿದರು. ಆಗ ಆ ಏಕಾಂಗಿ ಮತ್ತು ಬಹುಸಂಖ್ಯೆಯಲ್ಲಿದ್ದ ಅವರ ನಡುವೆ ಘೋರ ಲೋಮಹರ್ಷಣ ತುಮುಲ ಯುದ್ಧವು ನಡೆಯಿತು. ಅವರು ದಶಸಹಸ್ರ ಬಾಣಗಳನ್ನು ಒಂದೇ ಕ್ಷಣದಲ್ಲಿ ಬಿಟ್ಟರೆ ಅವು ತನ್ನನ್ನು ಹೊಡೆಯುವುದರೊಳಗೇ ಭೀಷ್ಮನು ತುಂಡುಮಾಡಿದನು. ಆಗ ಸರ್ವ ಪಾರ್ಥಿವರೂ ಅವನನ್ನು ಎಲ್ಲಾ ಕಡೆಯಿಂದಲೂ ಸುತ್ತುವರೆದು ಮೋಡಗಳು ಪರ್ವತದ ಮೇಲೆ ಮಳೆಸುರಿಸುವಂತೆ ಬಾಣಗಳ ಮಳೆಯನ್ನೇ ಸುರಿಸಿದರು. ಅವನಾದರೂ ಆ ಬಾಣಗಳ ಮಳೆಯನ್ನು ತನ್ನದೇ ಬಾಣದಿಂದ ನಿವಾರಿಸಿದನು ಮತ್ತು ಎಲ್ಲಕಡೆಗೂ ಎಲ್ಲ ಮಹೀಪಾಲರಿಗೂ ಅವರವರ ಒಂದೊಂದು ಬಾಣಕ್ಕೂ ಮೂರುಬಾಣಗಳನ್ನು ಬಿಟ್ಟನು. ಅನ್ಯ ರಥಚಾರಿಗಳಿಗೆ ಹೋಲಿಸಿದರೆ ಆ ಪುರುಷನಲ್ಲಿ ಲಘುತ್ವವಿತ್ತು. ಅವನು ತನ್ನನ್ನು ತಾನು ರಕ್ಷಣೆಮಾಡಿ ಕೊಳ್ಳುತ್ತಿರುವ ರೀತಿಯನ್ನು ನೋಡಿದ ಬಹಳಷ್ಟು ಶತ್ರುಗಳೂ ಅವನನ್ನು ಹೊಗಳತೊಡಗಿದರು.



ಅವರೆಲ್ಲರನ್ನೂ ರಣದಲ್ಲಿ ಸೋಲಿಸಿದ ಆ ಸರ್ವಶಸ್ತ್ರವಿಶಾರದ ಭರತನು ಕನ್ಯೆಗಳ ಸಹಿತ ಭಾರತನಗರದ ಕಡೆ ಹೊರಟನು.

ಅದೇ ಸಮಯದಲ್ಲಿ ಮಹಾರಥಿ ರಾಜ ಶಾಲ್ವರಾಜನು ಕಾವಿನಲ್ಲಿರುವ ಗಂಡು ಆನೆಯು ತನ್ನ ಪ್ರೇಯಸಿಯ ಮೇಲೆ ಹತ್ತುತ್ತಿದ್ದ ಪ್ರತಿಸ್ಪರ್ಧಿಯನ್ನು ಹಿಂದಿನಿಂದ ತನ್ನ ದಾಡೆಗಳಿಂದ ಆಕ್ರಮಿಸುವಂತೆ ಭೀಷ್ಮ ಶಾಂತನವನನ್ನು ಆಕ್ರಮಣಿಸಿದನು. "ಸ್ತ್ರೀ ಕಾಮಿ ಭೀಷ್ಮ ! ನಿಲ್ಲು ! ನಿಲ್ಲು !" ಎಂದು ಮಹಾಬಾಹು ಪಾರ್ಥಿವ ಶಾಲ್ವರಾಜನು ಸಿಟ್ಟಿನಿಂದ ಜೋರಾಗಿ ಕೂಗಿದನು. ಆ ಪುರುಷವ್ಯಾಘ್ರ ಪರಬಲಾರ್ದನ ಭೀಷ್ಮನು ಈ ಮಾತುಗಳನ್ನು ಕೇಳಿ ಕ್ರೋಧದಿಂದ ಹೊಗೆಯಿಲ್ಲದ ಅಗ್ನಿಯಂತೆ ಉರಿಯುತ್ತಾ, ಕ್ಷತ್ರಧರ್ಮವನ್ನು ಅನುಸರಿಸಿ, ಸ್ವಲ್ಪವೂ ಭಯ ಉದ್ವೇಗಳಿಲ್ಲದೇ ತನ್ನ ರಥವನ್ನು ಮಹಾರಥಿ ಶಾಲ್ವನ ಕಡೆ ತಿರುಗಿಸಿದನು. ಹಿಂದಿರುಗಿ ಬರುತ್ತಿದ್ದ ಅವನನ್ನು ನೋಡಿದ ಸರ್ವ ರಾಜರೂ ಕೂಡ ಭೀಷ್ಮ-ಶಾಲ್ವರ ಎದುರಾಟವನ್ನು ನೋಡಲು ಪ್ರೇಕ್ಷಕರಾಗಿ ನಿಂತರು. ಕಾವಿನಲ್ಲಿದ್ದ ಹಸುವಿನ ಮುಂದೆ ಬಡಿದಾಡುವ ಎರಡು ಬಲಶಾಲಿ ಹೋರಿಗಳಂತೆ ಅವರಿಬ್ಬರೂ ಬಲವಿಕ್ರಮಶಾಲಿಗಳು ಪರಸ್ಪರರ ಮೇಲೆ ಎರಗಿದರು. ನರಶ್ರೇಷ್ಠ ಶಾಲ್ವರಾಜನು ಭೀಷ್ಮ ಶಾಂತನವನ ಮೇಲೆ ಅತಿವೇಗದ ನೂರಾರು ಸಹಸ್ರಾರು ಬಾಣಗಳನ್ನು ಸುರಿಸಿದನು. ಮೊದಲೇ ಭೀಷ್ಮನನ್ನು ಸುತ್ತುವರೆದ ಶಾಲ್ವನನ್ನು ನೋಡಿ ಆ ನೃಪರೆಲ್ಲರು

ವಿಸ್ಮಿತರಾಗಿ “ಸಾಧು! ಸಾಧು!” ಎಂದು ಉದ್ಗರಿಸಿ, ಪ್ರಶಂಸಿದರು. ಅವನ ಲಘುತ್ವವನ್ನು ನೋಡಿ, ಅಲ್ಲಿ ಸೇರಿದ್ದ ಸರ್ವ ಪಾರ್ಥಿವರೂ ಹರ್ಷಗೊಂಡು ನರಾಧಿಪ ಶಾಲ್ವನನ್ನು ಹೊಗಳಿ ಪ್ರೋತ್ಸಾಹಿಸಿದರು. ಕ್ಷತ್ರಿಯರ ಈ ಕೂಗುಗಗಳನ್ನು ಕೇಳಿ ಕೃದ್ಧನಾದ ಪರಪುರಂಜಯ ಶಾಂತನವ ಭೀಷ್ಮನು “ನಿಲ್ಲು! ನಿಲ್ಲು!” ಎಂದು ಕೂಗಿದನು. ಕೃದ್ಧನಾಗಿ ತನ್ನ ಸಾರಥಿಗೆ ಹೇಳಿದನು: “ಪಕ್ಷಿರಾಜನು ಭುಜಂಗಗಳನ್ನು  ಕೊಲ್ಲುವಂತೆ ಅವನನ್ನು ಕೊಲ್ಲುತ್ತೇನೆ. ಆ ಪಾರ್ಥಿವನಿದ್ದಲ್ಲಿಗೆ ರಥವನ್ನು ಕೊಂಡೊಯ್ಯಿ!” ಆಗ ಆ ಕೌರವನು ವಾರುಣಾಸ್ತ್ರವನ್ನು ಹೂಡಿ ಶಾಲ್ವರಾಜನ ನಾಲ್ಕೂ ಕುದುರೆಗಳನ್ನೂ ಸಂಹರಿಸಿದನು. ನಂತರ ಆ ಕೌರವ ನೃಪತಿಶಾರ್ದೂಲ ಭೀಷ್ಮನು ಅಸ್ತ್ರದ ಮೇಲೆ ಅಸ್ತ್ರಗಳನ್ನು ಬಿಟ್ಟು ಶಾಲ್ವರಾಜನ ಸಾರಥಿಯನ್ನು ಕೆಳಗುರುಳಿಸಿದನು. ಮತ್ತು ಒಂದೇ ಒಂದು ಅಸ್ತ್ರದಿಂದ ಅವನ ಉತ್ತಮ ತುರಗಗಳನ್ನೂ ಕೆಳಗುರುಳಿಸಿದನು. ನರಶ್ರೇಷ್ಠ ಶಾಂತನವ ಭೀಷ್ಮನು ಕನ್ಯೆಯರಿಗಾಗಿ ಆ ನೃಪಸತ್ತಮನನ್ನು ಗೆದ್ದು ಜೀವಂತ ಉಳಿಸಿ ಕಳುಹಿಸಿದನು. ನಂತರ ಶಾಲ್ವನು ತನ್ನ ನಗರಕ್ಕೆ ಹಿಂದಿರುಗಿದನು. ಸ್ವಯಂವರವನ್ನು ನೋಡಲು ಬಂದಿದ್ದ ರಾಜರೂ ಕೂಡ ತಮ್ಮ ತಮ್ಮ ನಗರಗಳಿಗೆ ತೆರಳಿದರು.

ಖಡ್ಗಪ್ರಹರಿಗಳಲ್ಲಿ ಶ್ರೇಷ್ಠ ಭೀಷ್ಮನು ಕನ್ಯೆಯರನ್ನು ಗೆದ್ದು ರಾಜ ಕೌರವನಿರುವ ಹಸ್ತಿನಾಪುರದ ಕಡೆ ತಿರುಗಿದನು. ತನ್ನ ಅಕ್ಷಯ್ಯ

ಬಲದಿಂದ ಸಂಖ್ಯೆಯಿಲ್ಲದಷ್ಟು ವೈರಿಗಳನ್ನು ಸೋಲಿಸಿ, ಸ್ವಲ್ಪವೇ ಸಮಯದಲ್ಲಿ ವನ, ನದಿ, ಗಿರಿ ಮತ್ತು ವಿವಿಧ ದ್ರುಮಗಳನ್ನು ಅತಿಕ್ರಮಿಸಿ ಆ ಸಾಗರಗೆಯ ಸುತ ಧರ್ಮಾತ್ಮನು ಕಾಶಿಯ ಕನ್ಯೆಯರೊಡನೆ ತನ್ನ ಸೊಸೆಗಳಂತೆ ಅಥವಾ ತಂಗಿಯರಂತೆ ಅಥವಾ ಮಕ್ಕಳಂತೆ ವ್ಯವಹರಿಸುತ್ತಾ ಅವರನ್ನು ಕರೆದುಕೊಂಡು ಕುರುವಂಶದ ಮನೆಗೆ ಕರೆತಂದನು. ಬಲವಂತವಾಗಿ ಕರೆತಂದ ಆ ಸರ್ವ ಗುಣಸಂಪನ್ನರನ್ನೂ ಅಣ್ಣ ಭೀಷ್ಮನು ತನ್ನ ತಮ್ಮ ವಿಚಿತ್ರವೀರ್ಯನಿಗೆ ಕೊಡಲು ನಿರ್ಧರಿಸಿದನು. ಅಮಾನುಷ ಕೃತ್ಯವನ್ನೆಸಿಗಿದ ಆ ಧರ್ಮಜ್ಞ, ದೃಢನಿಶ್ಚಯಿ ಧರ್ಮನಿರತನು ಸತ್ಯವತಿಯೊಡನೆ ಸಮಾಲೋಚಿಸಿ ತಮ್ಮ ವಿಚಿತ್ರವೀರ್ಯನ ವಿವಾಹ ತಯಾರಿಯನ್ನು ನಡೆಸಿದನು. ವಿವಾಹದ ತಯಾರಿ ನಡೆಯುತ್ತಿರುವಾಗ ಕಾಶೀಪತಿಯ ಮಕ್ಕಳಲ್ಲಿ ಜ್ಯೇಷ್ಠ ಸತಿಯು ಭೀಷ್ಮನನ್ನು ಉದ್ದೇಶಿಸಿ ಈ ಮಾತುಗಳನ್ನಾಡಿದಳು:

> "ಈ ಹಿಂದೆಯೇ ನಾನು ಸೌಭಪತಿಯನ್ನು ಮನಸಾ ಪತಿಯನ್ನಾಗಿ ವರಿಸಿದ್ದೇನೆ. ಅವನೂ ನನ್ನನ್ನು ವರಿಸಿದ್ದಾನೆ. ಮತ್ತು ಇದು ನನ್ನ ತಂದೆಯ ಬಯಕೆಯೂ ಆಗಿತ್ತು. ಆ ಸ್ವಯಂವರದಲ್ಲಿ ನಾನು ಶಾಲ್ವನನ್ನು ವರಿಸುವವಳಿದ್ದೆ. ಧರ್ಮಜ್ಞ! ಇದನ್ನು ತಿಳಿದು ಧರ್ಮದ ಪ್ರಕಾರ ಏನು ಮಾಡಬೇಕೋ ಮಾಡು."

ವಿಪ್ರಸಂಸದಿಯಲ್ಲಿ ಹೇಳಿದ ಕನ್ಯೆಯ ಈ ಮಾತುಗಳನ್ನು ಕೇಳಿ ವೀರ ಭೀಷ್ಮನು ಇದಕ್ಕೆ ತಕ್ಕುದಾಗಿ ಏನು ಮಾಡಬೇಕೆಂದು ಯೋಚಿಸಿದನು. ಬ್ರಾಹ್ಮಣ ವೇದಪಾರಂಗತರೊಡಗೂಡಿ ನಿಶ್ಚಯಿಸಿದ ಆ ಧರ್ಮಜ್ಞನು ಕಾಶಿಪತಿಯ ಜ್ಯೇಷ್ಠ ಪುತ್ರಿ ಅಂಬೆಗೆ ಹೋಗಲು ಅನುಮತಿಯನ್ನಿತ್ತನು.

ನಂತರ ಭೀಷ್ಮನು ತನ್ನ ತಮ್ಮ ವಿಚಿತ್ರವೀರ್ಯನಿಗೆ ಅಂಬಿಕೆ ಮತ್ತು ಅಂಬಾಲಿಕೆಯರನ್ನು ಪತ್ನಿಯರನ್ನಾಗಿತ್ತು ವಿಧಿಪೂರ್ವಕ ವಿವಾಹ ಕಾರ್ಯವನ್ನು ನೆರವೇರಿಸಿದನು. ಅವರ ಪಾಣಿಗ್ರಹಣ ಮಾಡಿಕೊಂಡ ರೂಪಯೌವನ ದರ್ಪಿತ ಧರ್ಮಾತ್ಮ ವಿಚಿತ್ರವೀರ್ಯನು ಕಾಮಸುಖದಲ್ಲಿಯೇ ತೊಡಗಿದನು. ಎತ್ತರವಾಗಿದ್ದ, ಶ್ಯಾಮವರ್ಣದ, ನೀಲಿ ಗುಂಗುರು ಕೂದಲುಗಳನ್ನು ಹೊಂದಿದ್ದ, ಮೊನಚಾದ ಕೆಂಪು ಉಗುರುಗಳನ್ನು ಹೊಂದಿದ್ದ, ಪೀನಶ್ರೋಣಿ ಪಯೋಧರೆಯರಾದರೂ ತಮಗೆ ಪ್ರತಿರೂಪ ಪತಿಯು ದೊರಕಿದನೆಂದು ತಿಳಿದು ಕಲ್ಯಾಣ ವಿಚಿತ್ರವೀರ್ಯನನ್ನು ಪೂಜಿಸತೊಡಗಿದರು. ರೂಪದಲ್ಲಿ ಅಶ್ವಿನಿಯರನ್ನು ಹೋಲುತ್ತಿದ್ದ ಆ ದೇವಸತ್ವಪರಾಕ್ರಮಿಯು ಸರ್ವ ನಾರಿಯರ ಚಿತ್ತಗಳನ್ನು ಕಡೆಯುವಂತಿದ್ದನು. ಆ ತರುಣ ಪೃಥಿವೀಪತಿ ವಿಚಿತ್ರವೀರ್ಯನು ಏಳು ವರ್ಷಗಳ ಪರ್ಯಂತ ಅವರೊಡನೆ ವಿಹರಿಸುತ್ತಿದ್ದು, ರೋಗಕ್ಕೆ ಬಲಿಯಾದನು. ಸುಹೃದಯರು ಮತ್ತು ಆಪ್ತ ಚಿಕಿತ್ಸಕರು ಎಷ್ಟು ಪ್ರಯತ್ನಿಸಿದರೂ

ಮುಳುಗುತ್ತಿರುವ ಸೂರ್ಯನಂತೆ ಕೌರವ್ಯನು ಯಮಸಾದನವನ್ನು ಸೇರಿದನು. ಸತ್ಯವತಿಯ ಸೂಚನೆಗಳಂತೆ, ಕುರುಪುಂಗವ ಬೀಷ್ಮನು ಸರ್ವ ಋತ್ವಿಗರೊಡಗೂಡಿ ರಾಜ ವಿಚಿತ್ರವೀರ್ಯನ ಪ್ರೇತಕಾರ್ಯಗಳೆಲ್ಲವನ್ನೂ ನೆರವೇರಿಸಿದನು.

# ಧೃತರಾಷ್ಟ್ರ-ಪಾಂಡು-ವಿದುರರ ಜನನ, ವಿವಾಹ

## ಕುರುವಂಶಾಭಿವೃದ್ಧಿಯ ಕುರಿತು ಸತ್ಯವತಿ-ಭೀಷ್ಮರ ಸಂವಾದ

ಮೊಮ್ಮಕ್ಕಳನ್ನು ಬೇಡುತ್ತಿದ್ದ ದೀನ, ಕೃಪಣ ಸತ್ಯವತಿಯು ತನ್ನ ಸೊಸೆಯರನ್ನು ಕೂಡಿ ಮಗನ ಕರ್ಮಗಳನ್ನು ನೆರವೇರಿಸಿದಳು. ಧರ್ಮ, ಪಿತೃವಂಶ ಮತ್ತು ಮಾತೃವಂಶಗಳ ಕುರಿತು ಯೋಚಿಸಿದ ಆ ಮಾನಿನಿಯು ಮಹಾಭಾಗ ಗಾಂಗೇಯನಿಗೆ ಹೇಳಿದಳು:

> “ಧರ್ಮನಿತ್ಯ ಶಂತನು ಮತ್ತು ಯಶಸ್ವಿ ಕೌರವ್ಯನ ಪಿಂಡ, ಕೀರ್ತಿ ಮತ್ತು ಸಂತಾನವು ನಿನ್ನನ್ನವಲಂಬಿಸಿದೆ. ಶುಭಕರ್ಮವನ್ನು ಮಾಡುವುದರಿಂದ ಸ್ವರ್ಗೋಪಗಮನವು ಎಷ್ಟು ಖಂಡಿತವೋ, ಸತ್ಯದಿಂದ ದೀರ್ಘಾಯುಸ್ಸು ಎಷ್ಟು

ಖಂಡಿತವೋ ಅಷ್ಟೇ ನಿನ್ನಿಂದ ಧರ್ಮವೂ ಕೂಡ ಖಂಡಿತ. ಧರ್ಮಜ್ನ! ನೀನು ಧರ್ಮವನ್ನು ಪೂರ್ತಿಯಾಗಿ ಮತ್ತು ಬಿಡಿಬಿಡಿಯಾಗಿ ಅರಿತಿರುವೆ. ವಿವಿಧ ಶೃತಿ-ವೇದಗಳೆಲ್ಲವನ್ನೂ ತಿಳಿದಿರುವೆ. ನಿನ್ನಲ್ಲಿ ನಾನು ಶುಕ್ರ ಆಂಗಿರಸರಲ್ಲಿರುವ ಧಾರ್ಮಿಕ ನಡವಳಿಕೆ, ಕುಲಾಚಾರ ದೃಷ್ಠಿ, ಮತ್ತು ಕಷ್ಟದಲ್ಲಿ ಪರಿಹಾರ ಇವೆಲ್ಲವನ್ನೂ ಕಂಡಿದ್ದೇನೆ. ನೀನು ನನ್ನ ದುಃಖಗಳನ್ನು ಹೋಗಲಾಡಿಸಬಲ್ಲೆ ಎನ್ನುವ ನಂಬಿಕೆಯಿಂದ ಧರ್ಮವಾದಿಗಳಲ್ಲಿ ಶ್ರೇಷ್ಠ ನಿನ್ನಲ್ಲಿ ನಾನು ಒಂದು ಕಾರ್ಯವನ್ನು ವಹಿಸುತ್ತೇನೆ. ಅದನ್ನು ಕೇಳಿ ಮಾಡಿಕೊಡು. ನನ್ನ ಮಗ ನಿನ್ನ ಭ್ರಾತ ವೀರ್ಯವಂತನು ನಿನಗೆ ಬಹು ಪ್ರಿಯನಾಗಿದ್ದನು. ಮಕ್ಕಳಿಲ್ಲದೆ ಬಾಲ್ಯದಲ್ಲಿಯೇ ಅವನು ಸ್ವರ್ಗವನ್ನು ಸೇರಿದನು. ರೂಪಯೌವನಸಂಪನ್ನ ಶುಭಾಂಗಿ ನಿನ್ನ ತಮ್ಮನ ರಾಣಿಯರಾದ ಕಾಶಿರಾಜಸುತೆಯರು ಪುತ್ರರನ್ನು ಬಯಸುತ್ತಾರೆ. ಕುಲಸಂತಾನಕ್ಕಾಗಿ ಅವರಲ್ಲಿ ಮಕ್ಕಳನ್ನು ಪಡೆ. ಇದನ್ನು ನನ್ನ ಹೇಳಿಕೆಯಂತೆ ಧರ್ಮವೆಂದು ತಿಳಿದು ಮಾಡಿಕೊಡಬೇಕು. ರಾಜ್ಯಾಭಿಷೇಕವನ್ನು ಮಾಡಿಕೊಂಡು ಭಾರತದೇಶವನ್ನು ಆಳು. ಧರ್ಮಪೂರ್ವಕ ಮದುವೆಯಾಗು. ನಿನ್ನ ಪಿತಾಮಹರು ಮುಳುಗಿಹೋಗದಂತೆ ನೋಡಿಕೋ.”

ತನ್ನ ತಾಯಿ ಸಹೃದಯಿಯಿಂದ ಈ ಮಾತುಗಳನ್ನು ಕೇಳಿದ ಪರಂತಪ ಧರ್ಮಾತ್ಮನು ಈ ಧಾರ್ಮಿಕ ಉತ್ತರವನ್ನಿತ್ತನು:

> “ತಾಯಿ! ನೀನು ಹೇಳಿದ್ದುದು ಪರಮ ಧರ್ಮ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೂ ನಾನು ಮಕ್ಕಳನ್ನು ಪಡೆಯುವುದಿಲ್ಲ ಎಂದು ಕೈಗೊಂಡ ಪರಮ ಪ್ರತಿಜ್ಞೆಯೂ ನಿನಗೆ ತಿಳಿದಿದೆ. ನಿನ್ನ ವಧುಶುಲ್ಕವನ್ನು ಕೊಡುವ ಸಮಯದಲ್ಲಿ ನಡೆದುದೆಲ್ಲವೂ ನಿನಗೆ ತಿಳಿದೇ ಇದೆ. ಅಂದಿನ ಸತ್ಯವನ್ನೇ ಇಂದು ನಾನು ಪುನಃ ಹೇಳುತ್ತೇನೆ. ನಾನು ತ್ರೈಲೋಕ್ಯವನ್ನು, ರಾಜ್ಯವನ್ನು, ದೇವತೆಗಳನ್ನು, ಅಥವಾ ಇವೆಲ್ಲಕ್ಕೂ ಅಧಿಕವಾದದ್ದನ್ನು ಪರಿತ್ಯಜಿಸಿಯೇನು. ಆದರೆ ಸತ್ಯವನ್ನು ಎಂದೂ ಪರಿತ್ಯಜಿಸುವುದಿಲ್ಲ. ಪೃಥ್ವಿಯು ತನ್ನ ಸುಗಂಧವನ್ನು, ನೀರು ತನ್ನ ರುಚಿಯನ್ನು ತ್ಯಜಿಸಬಹುದು. ಜ್ಯೋತಿಯು ತನ್ನ ರೂಪವನ್ನು ತ್ಯಜಿಸಬಹುದು ಅಥವಾ ವಾಯುವು ಸ್ಪರ್ಷಗುಣವನ್ನು ತ್ಯಜಿಸಬಹುದು. ಸೂರ್ಯನು ತನ್ನ ಪ್ರಭೆಯನ್ನು ಅಥವಾ ದೂಮಕೇತು ತನ್ನ ಉಷ್ಣತೆಯನ್ನು ತ್ಯಜಿಸಬಹುದು. ಆಕಾಶವು ಶಬ್ಧವನ್ನು ತ್ಯಜಿಸಬಹುದು, ಅಥವಾ ಚಂದ್ರನು ತನ್ನ ಶೀತಗುಣವನ್ನು ತ್ಯಜಿಸಬಹುದು. ಇಂದ್ರನು ತನ್ನ ಪರಾಕ್ರಮವನ್ನು ಮತ್ತು ಧರ್ಮರಾಜನು

ತನ್ನ ಧರ್ಮವನ್ನೇ ತ್ಯಜಿಸಬಹುದು. ಆದರೆ ನಾನು ಎಂದೂ ನನ್ನ ಸತ್ಯವನ್ನು ತ್ಯಜಿಸುವುದಿಲ್ಲ ಎನ್ನುವುದು ನನ್ನ ದೃಢ ನಿಶ್ಚಯ.”

ತನ್ನ ಭೂರಿದ್ರವಿಣತೇಜಸ ಮಗನು ಈ ರೀತಿ ಹೇಳಿದಾಗ, ಮಾತಾ ಸತ್ಯವತಿಯು ಭೀಷ್ಮನಿಗೆ ಹೇಳಿದಳು:

“ಪರಮ ಸತ್ಯಪರಾಕ್ರಮಿ! ನೀನು ಸತ್ಯದಲ್ಲಿಯೇ ನಿರತನಾಗಿದ್ದೀಯೆಂದು ನಾನು ತಿಳಿದಿದ್ದೇನೆ. ನೀನು ಇಚ್ಛಿಸಿದರೆ ನಿನ್ನ ಈ ತೇಜಸ್ಸಿನಿಂದ ಬೇರೆಯೇ ಮೂರು ಲೋಕಗಳನ್ನು ಸೃಷ್ಟಿಸಬಲ್ಲೆ. ನನಗೋಸ್ಕರ ನೀನು ಆ ಭಾಷೆಗಳನ್ನು ಕೊಟ್ಟಿದ್ದೀಯೆ ಎಂದೂ ನಾನು ತಿಳಿದಿದ್ದೇನೆ. ಆದರೆ ಪಿತಾಮಹರಿಗೊದಗಿರುವ ಈ ಆಪದ್ಧರ್ಮವನ್ನೂ ನೋಡು. ಕುಲತಂತು ಮತ್ತು ಧರ್ಮದ ಪರಾಭವವಾಗದ ಹಾಗೆ, ಸುಹೃದಯರಿಗೆ ಸಂತೋಷವನ್ನು ತರುವ ಹಾಗೆ ನಡೆದುಕೋ.”

ಈ ರೀತಿ ಪುತ್ರರು ಬೇಕೆಂಬ ಹಸಿವಿನಿಂದ ಬೇಡಿ ಹಲುಬಿ ಧರ್ಮದ ಹೊರತಾಗಿ ಮಾತನಾಡುತ್ತಿದ್ದ ಅವಳಿಗೆ ಭೀಷ್ಮನು ಪುನಃ ಹೇಳಿದನು:

“ರಾಜ್ಞಿ! ಧರ್ಮದ ಕುರಿತು ಯೋಚಿಸು. ಇಲ್ಲವಾದರೆ ಸರ್ವವೂ ವಿನಾಶವಾಗುತ್ತದೆ. ಸತ್ಯಕ್ಕೆ ಚ್ಯುತಿಯನ್ನು ತರುವುದು ಕ್ಷತಿಯರ ಧರ್ಮವಲ್ಲ. ಶಂತನುವಿನ

ಸಂತಾನವು ಭೂಮಿಯಲ್ಲಿ ಅಕ್ಷಯವಾಗಿಸಬಲ್ಲ, ಸನಾತನ ಕ್ಷಾತ್ರಧರ್ಮದ ಕುರಿತು ಹೇಳುತ್ತೇನೆ. ಇದನ್ನು ಕೇಳಿದ ನೀನು ನಿನ್ನ ಪ್ರಾಜ್ಞ ಪುರೋಹಿತರೊಂದಿಗೆ ತ್ರೈಲೋಕ್ಯಗಳಿಗೂ ಕುಶಲವನ್ನುಂಟುಮಾಡುವ ಈ ಆಪದ್ಧರ್ಮವನ್ನು ಸ್ವೀಕರಿಸಬಹುದು. ತನ್ನ ತಂದೆಯ ವಧೆಯಿಂದ ಕೃದ್ಧನಾದ ಜಾಮದಗ್ನಿ ರಾಮನು ಹೈಹಯಾಧಿಪತಿ ಅರ್ಜುನನ ಹತ್ತು ಸಾವಿರ ಬಾಹುಗಳನ್ನೂ ಕತ್ತರಿಸಿ ಕೊಂದನು. ಧನುಸ್ಸನ್ನು ಹಿಡಿದು ರಥವನ್ನೇರಿ ಮಹಾಸ್ತ್ರಗಳನ್ನು ಬಿಡುತ್ತಾ ಮೇಲಿಂದ ಮೇಲೆ ಕ್ಷತ್ರಿಯ ಕುಲವನ್ನು ಸುಟ್ಟುಹಾಕಿದನು. ಈ ರೀತಿ ಮಹಾತ್ಮ ಭಾರ್ಗವನು ಹಿಂದೆ ವಿವಿಧಾಸ್ತ್ರಗಳಿಂದ ಇಪ್ಪತ್ತೊಂದು ಬಾರಿ ಪೃಥ್ವಿಯನ್ನು ನಿಃಕ್ಷತ್ರಿಯವನ್ನಾಗಿ ಮಾಡಿದನು. ಆದರೆ ಎಲ್ಲಕಡೆಯೂ ಎಲ್ಲ ಕ್ಷತ್ರಿಯರೂ ನಿಯತಾತ್ಮ ಬ್ರಾಹ್ಮಣರ ಮೂಲಕ ಮಕ್ಕಳನ್ನು ಪಡೆದರು. ಪಾಣಿಗ್ರಹಣ ಮಾಡಿದವನೇ ತನಯ ಎಂದು ವೇದಗಳಲ್ಲಿ ನಿಶ್ಚಿತವಾಗಿದೆ. ಕ್ಷಾತ್ರಿಣಿಯರು ಧರ್ಮವನ್ನೇ ಮನಸ್ಸಿನಲ್ಲಿಟ್ಟುಕೊಂಡು ಬ್ರಾಹ್ಮಣರನ್ನು ಕೂಡಿದರು. ಹೀಗಾಗಿ ಕ್ಷತ್ರಿಯರ ಪುನರ್ಭವವು ಕಂಡುಬಂದಿತು. ಹಿಂದೆ ಉತಥ್ಯ ಎಂದು ಖ್ಯಾತ ಧೀಮಂತ ಋಷಿಯಿದ್ದನು. ಅವನಿಗೆ ಮಮತಾ ಎಂಬ ಹೆಸರಿನ ಪರಮಸಮ್ಮತ ಪತ್ನಿಯಿದ್ದಳು. ಒಮ್ಮೆ ಉತಥ್ಯನ ತಮ್ಮ, ತ್ರಿದಿವೌಕಸರ

ಪುರೋಹಿತ, ಮಹಾ ತೇಜಸ್ವಿ ಬೃಹಸ್ಪತಿಯು ಮಮತಳನ್ನು ಬಯಸಿದನು. ತನ್ನ ಶ್ರೇಷ್ಠ ಬಾವನಿಗೆ ಮಮತೆಯು ಹೇಳಿದಳು: "ನಿನ್ನ ಅಣ್ಣನಿಂದ ನಾನು ಗರ್ಭವತಿಯಾಗಿದ್ದೇನೆ. ನಿಲ್ಲು. ಮಹಾಭಾಗ ಬೃಹಸ್ಪತಿ! ಉತಥ್ಯನ ಈ ಮಗುವು ನನ್ನ ಹೊಟ್ಟೆಯಲ್ಲಿಯೇ ವೇದ ಮತ್ತು ಅದರ ಆರೂ ಅಂಗಗಳನ್ನೂ ಕಲಿತಿದ್ದಾನೆ. ಈಗ ನೀನು ನಿನ್ನ ವೀರ್ಯವನ್ನು ನನ್ನಲ್ಲಿಟ್ಟರೆ ಅದು ವ್ಯರ್ಥವಾಗುವುದು. ಆದುದರಿಂದ ನೀನು ಈಗ ತಡೆಹಿಡಿದುಕೋ." ಅವಳು ಈ ರೀತಿ ಹೇಳುತ್ತಿದ್ದರೂ ಮಹಾ ತೇಜಸ್ವಿ ಬೃಹಸ್ಪತಿಯು ತನ್ನ ಕಾಮಾತ್ಮವನ್ನು ನಿಯಂತ್ರಿಸಿಕೊಳ್ಳಲಾಗದೇ ಅವಳು ಬಯಸದಿದ್ದರೂ ಅವಳನ್ನು ಸೇರಿ ಅವಳಲ್ಲಿ ತನ್ನ ವೀರ್ಯವನ್ನು ಬಿಟ್ಟನು. ಆಗ ಅಲ್ಲಿದ್ದ ಗರ್ಭವು ಹೇಳಿತು: "ಚಿಕ್ಕಪ್ಪ! ಇಲ್ಲಿ ಇಬ್ಬರಿಗೆ ಸ್ಥಳವಿಲ್ಲ. ನಾನು ಇಲ್ಲಿ ಮೊದಲೇ ಇದ್ದೆ. ನಿನ್ನ ವೀರ್ಯವು ಸುಮ್ಮನೇ ವ್ಯರ್ಥವಾಯಿತು!" ಇದನ್ನು ಕೇಳಿದ ಭಗವಾನ್ ಋಷಿ ಬೃಹಸ್ಪತಿಯು ಕೃದ್ಧನಾಗಿ ತನ್ನನ್ನು ಅವಹೇಳನಮಾಡಿದ ಉತಥ್ಯಪುತ್ರನಿಗೆ ಶಾಪವನ್ನಿತ್ತನು: "ಸರ್ವಭೂತಗಳೂ ಆನಂದಿಸಲು ಬಯಸುವ ಕಾಲಸ್ಥಿತಿಯಲ್ಲಿ ನಾನಿರುವಾಗ ಈ ರೀತಿ ಮಾತನಾಡಿದ್ದುದಕ್ಕಾಗಿ ನೀನು ದೀರ್ಘಕಾಲದವರೆಗೂ

ಕತ್ತಲೆಯಲ್ಲಿಯೇ ಇರುತ್ತೀಯೆ!" ಈ ರೀತಿ ಬಹುಕೀರ್ತಿವಂತ ಬೃಹಸ್ಪತಿಯ ಶಾಪದಿಂದ ದೀರ್ಘತಮ ಎಂಬ ಹೆಸರಿನ ಋಷಿಯು ಹುಟ್ಟಿದನು. ಅವನು ಗೌತಮರೇ ಮೊದಲಾದ ಮಹಾಯಶಸ್ವಿ ಪುತ್ರರನ್ನು ಹುಟ್ಟಿಸಿ, ಋಷಿ ಉತಥ್ಯನ ಸಂತಾನ ಕುಲವೃದ್ಧಿಯಾಗುವಂತೆ ಮಾಡಿದನು. ಲೋಭಮೋಹಿ ಗೌತಮರೇ ಮೊದಲಾದ ಪುತ್ರರು 'ಕುರುಡನೂ ವೃದ್ಧನೂ ಆದ ಇವನನ್ನು ನಾವು ನೋಡಿಕೊಳ್ಳುವ ಅವಶ್ಯಕತೆಯಿಲ್ಲ' ಎಂದು ಯೋಚಿಸಿ ಅವನನ್ನು ಒಂದು ಒಣಗಿದ ಮರಕ್ಕೆ ಕಟ್ಟಿ ವಿಶಾಲ ಗಂಗೆಯಲ್ಲಿ ಎಸೆದು ತಮ್ಮ ಮನೆಗೆ ಹೊರಟು ಹೋದರು. ಆ ಕುರುಡ ಋಷಿಯು ತೇಲುತ್ತಾ ಬಹು ದೇಶಗಳನ್ನು ದಾಟಿ ಒಂದು ರಾಜನಿದ್ದಲ್ಲಿಗೆ ಬಂದನು. ಬಲಿಯೆಂಬ ಹೆಸರಿನ ಸರ್ವಧರ್ಮ ವಿಶಾರದ ರಾಜನು ಸ್ನಾನಮಾಡುತ್ತಿರಲು ನದಿಯಲ್ಲಿ ತೇಲಿಕೊಂಡು ಬರುತ್ತಿದ್ದ ಅವನನ್ನು ನೋಡಿದನು. ಸತ್ಯಪರಾಕ್ರಮಿ ಧರ್ಮಾತ್ಮ ಮನುಜರ್ಷಭ ಬಲಿಯು ಅವನನ್ನು ಗುರುತಿಸಿ ಮೇಲಿತ್ತಿದನು ಮತ್ತು ಮಕ್ಕಳನ್ನು ಪಡೆಯುವುದಕ್ಕೋಸ್ಕರ ಅವನನ್ನು ತನ್ನಲ್ಲಿಯೇ ಇಟ್ಟುಕೊಂಡನು. "ಮಹಾಭಾಗ! ಮಾನದ! ನನ್ನ ಭಾರ್ಯೆಯರಲ್ಲಿ ನನ್ನ ಸಂತಾನವಾಗಿ ಧರ್ಮಾರ್ಥಕುಶಲ ಮಕ್ಕಳನ್ನು ಪಡೆಯಬೇಕು" ಎಂದು ಕೇಳಿಕೊಂಡನು.

“ಹಾಗೆಯೇ ಆಗಲಿ” ಎಂದು ಹೇಳಿದ ಆ ತೇಜಸ್ವಿ ಋಷಿಯು ರಾಜನ ಭಾರ್ಯೆ ಸುದೇಷ್ಣೆಯನ್ನು ಬರುವಂತೆ ಕೇಳಿಕೊಂಡನು. ಅವನು ವೃದ್ಧನೂ ಕುರುಡನೂ ಆಗಿದ್ದಾನೆಂದು ತಿಳಿದ ದೇವಿಯು ಅವನಲ್ಲಿಗೆ ಹೋಗಲಿಲ್ಲ. ತನ್ನ ಧಾತ್ರೇಯಿಕರಲ್ಲಿ ಓರ್ವಳನ್ನು ಆ ವೃದ್ಧನ ಬಳಿ ಕಳುಹಿಸಿದಳು. ಶೂದ್ರಯೋನಿಯಲ್ಲಿ ಜನಿಸಿದ್ದ ಅವಳಲ್ಲಿ ಆ ಧರ್ಮಾತ್ಮನು ಕಾಕ್ಷೀವತನೇ ಮೊದಲಾದ ಹನ್ನೊಂದು ಪುತ್ರರಿಗೆ ಜನ್ಮವಿತ್ತನು. ಕಾಕ್ಷೀವತ ಮೊದರಾದವನ್ನು ನೋಡಿದ ವೀರ್ಯವಾನ್ ರಾಜನು “ಇವರೆಲ್ಲರೂ ನನ್ನ ಮಕ್ಕಳು!” ಎಂದು ಆ ಋಷಿಗೆ ಹೇಳಿದನು. “ಅಲ್ಲ! ಇವರೆಲ್ಲರೂ ನನ್ನವರು! ಕಾಕ್ಷೀವತನೇ ಮೊದಲಾದವರು ನನ್ನಿಂದ ಶೂದ್ರಯೋನಿಯಲ್ಲಿ ಹುಟ್ಟಿದವರು” ಎಂದು ಆ ಮಹರ್ಷಿಯು ಹೇಳಿದನು. “ನಿನ್ನ ರಾಣಿ ಸುದೇಷ್ಣಳು ನಾನು ಅಂಧನೂ ವೃದ್ಧನೂ ಇದ್ದೇನೆಂದು ತಿಳಿದು ಮೂಢಳಾಗಿ ತನ್ನ ಧಾತ್ರೇಯಿಕೆ ಶೂದ್ರಳೋರ್ವಳನ್ನು ನನ್ನ ಕಡೆ ಕಳುಹಿಸಿದ್ದಳು.” ಆಗ ಬಲಿಯು ಪುನಃ ಆ ಋಷಿಸತ್ತಮನನ್ನು ಸಂತೋಷಗೊಳಿಸಿ ತನ್ನ ಭಾರ್ಯೆ ಸುದೇಷ್ಣೆಯನ್ನು ಅವನಲ್ಲಿಗೆ ಪುನಃ ಕಳುಹಿಸಿದನು. ದೀರ್ಘತಮನು ಆ ದೇವಿಯ ಅಂಗಗಳನ್ನು ಸ್ಪರ್ಷಿಸಿ “ನಿನಗೆ ಸತ್ಯವಾಗ್ಮಿಯೂ ತೇಜಸ್ವಿಯೂ ಆದ ಮಗನಾಗುತ್ತಾನೆ” ಎಂದನು. ಹೀಗೆ

ಸುದೇಷ್ಣೆಯಲ್ಲಿ ಅಂಗ ಎಂಬ ಹೆಸರಿನ ರಾಜರ್ಷಿಯು ಜನಿಸಿದನು. ಇದೇ ರೀತಿ ಭೂಮಿಯಲ್ಲಿ ಮಹೇಷ್ವಾಸ ಕ್ಷತ್ರಿಯರು ಬ್ರಾಹ್ಮಣರಿಂದ ಪರಮಧರ್ಮಜ್ಞ, ವೀರ್ಯವಂತ, ಮಹಾಬಲಶಾಲಿ ಮಕ್ಕಳನ್ನು ಪಡೆದರು. ಮಾತೆ! ಇದನ್ನು ಕೇಳಿದ ನೀನು ಕೂಡ ನಿನಗಿಷ್ಟವಾದುದ್ದನ್ನು ಮಾಡು. ಭರತವಂಶದ ಪುನಃ ಸಂತಾನ ವೃದ್ಧಿಯನ್ನು ಹೇಗೆ ಮುಂದುವರೆಸಿಕೊಂಡು ಹೋಗಬಹುದೆಂದು ಹೇಳುತ್ತೇನೆ. ಕೇಳು. ಯಾರಾದರೂ ಗುಣವಂತ ಬ್ರಾಹ್ಮಣನಿಗೆ ಧನವನ್ನಿತ್ತು, ವಿಚಿತ್ರವೀರ್ಯನ ಪತ್ನಿಯರಲ್ಲಿ ಮಕ್ಕಳನ್ನು ಪಡೆಯಲು ಕರೆಯಿಸು."

ಆಗ ಸತ್ಯವತಿಯು ನಾಚಿಕೊಂಡು ಮುಗುಳ್ನಗುತ್ತಾ ನಡುಗುತ್ತಿರುವ ದನಿಯಲ್ಲಿ ಭೀಷ್ಮನಿಗೆ ಹೇಳಿದಳು:

"ಮಹಾಬಾಹು ಭಾರತ! ನೀನು ಸತ್ಯವನ್ನೇ ಹೇಳಿದ್ದೀಯೆ. ನಿನ್ನ ಮೇಲೆ ನನಗೆ ವಿಶ್ವಾಸವಿದೆ. ಕುಲದ ಸಂತಾನಕ್ಕಾಗಿ ನಾನು ಹೇಳುತ್ತೇನೆ. ಈ ಆಪತ್ತಿನ ಸಮಯದಲ್ಲಿ ಈ ವಿಧಿಯನ್ನು ನಿನಗೆ ಹೇಳಲು ನನಗೆ ಯಾವುದೇ ರೀತಿಯ ಶಂಕೆಯೂ ಆಗುತ್ತಿಲ್ಲ. ನೀನೇ ಈ ಕುಲದ ಧರ್ಮ, ಸತ್ಯ ಮತ್ತು ಪರಮ ಗತಿ. ಆದುದರಿಂದ ನನ್ನ ಈ ಮಾತುಗಳನ್ನು ಕೇಳಿದ ನಂತರ ನಿನಗೆ ಸರಿಯೆನಿಸಿದುದನ್ನು ಮಾಡು.

ಧರ್ಮಯುಕ್ತ ಧರ್ಮಾತ್ಮ ನನ್ನ ತಂದೆಯು ಒಂದು ದೋಣಿಯನ್ನು ಹೊಂದಿದ್ದನು. ನಾನು ಯೌವನವನ್ನು ಪಡೆದ ಮೊದಲ ದಿನಗಳಲ್ಲಿ ಒಮ್ಮೆ ಅದನ್ನು ನಡೆಸಲು ಹೋಗಿದ್ದೆ. ಆಗ ಧರ್ಮಭೃತರಲ್ಲಿ ಶ್ರೇಷ್ಠ ಪರಮರ್ಷಿ ಧೀಮಾನ್ ಪರಾಶರನು ಯಮುನಾ ನದಿಯನ್ನು ದಾಟಲು ಬಯಸಿ ನನ್ನ ದೋಣಿಯ ಬಳಿ ಬಂದನು. ಯಮುನಾ ನದಿಯನ್ನು ದಾಟಿಸುತ್ತಿರುವಾಗ ಆ ಕಾಮಾರ್ತ ಮುನಿಶ್ರೇಷ್ಠನು ನನ್ನಲ್ಲಿ ಬಂದು ಸಾಂತ್ವನದ ಮಧುರ ಮಾತುಗಳನ್ನಾಡಿದನು. ಅವನ ಶಾಪದ ಭೀತಿಯಿಂದ, ನನ್ನ ತಂದೆಯ ಭೀತಿಯಿಂದ ಮತ್ತು ಸುಲಭವಾಗಿ ದೊರೆಯದಿರುವ ವರಗಳಿಗೋಸ್ಕರ ನಾನು ಅವನನ್ನು ತಿರಸ್ಕರಿಸಲಾರದೇ ಹೋದೆ. ತನ್ನ ತೇಜಸ್ಸಿನಿಂದ ಸುತ್ತಲೂ ಕತ್ತಲೆಯು ಆವರಿಸುವಂತೆ ಮಾಡಿ ಬಾಲಕಿ ನನ್ನನ್ನು ಆ ನೌಕೆಯಲ್ಲಿಯೇ ವಶೀಕರಿಸಿ ತನ್ನವಳನ್ನಾಗಿ ಮಾಡಿಕೊಂಡನು. ಅದರ ಹಿಂದೆ ನನಗೆ ಜಿಗುಪ್ಸೆಯನ್ನು ತರುತ್ತಿದ್ದ ಅತಿ ತೀಕ್ಷ್ಣ ಮೀನಿನ ವಾಸನೆಯಿತ್ತು. ಅದನ್ನು ಹಿಂತೆಗೆದುಕೊಂಡು ಆ ಮುನಿಯು ನನಗೆ ಈ ಶುಭ ಸುಗಂಧವನ್ನಿತ್ತನು. ಅವನ ಮಗುವನ್ನು ನಾನು ನದಿಯ ಮದ್ಯದ ಒಂದು ದ್ವೀಪದಲ್ಲಿ ಹೆತ್ತ ನಂತರವೂ ನಾನು ಕನ್ಯೆಯಾಗಿಯೇ ಉಳಿಯುತ್ತೇನೆ ಎಂದೂ ಆ ಮುನಿಯು ಹೇಳಿದನು. ಈ ರೀತಿ

ಮಹಾಯೋಗಿ ಮಹಾನ್ ಋಷಿ ಪಾರಶರ್ಯನು ನನ್ನ ಕನ್ಯಾಪುತ್ರನಾಗಿ ಹುಟ್ಟಿದನು ಮತ್ತು ದ್ವೈಪಾಯನನೆಂದು ಖ್ಯಾತನಾದನು. ತನ್ನ ತಪಸ್ಸಿನಿಂದ ಆ ಭಗವಾನ್ ಋಷಿಯು ನಾಲ್ಕೂ ವೇದಗಳನ್ನು ವಿಂಗಡಿಸಿದನು. ಇದರಿಂದ ಅವನಿಗೆ ವ್ಯಾಸನೆಂಬ ಹೆಸರು ಬಂದಿತು. ಕಪ್ಪಾದ ಅವನಿಗೆ ಕೃಷ್ಣ ಎಂದೂ ಕರೆಯುತ್ತಾರೆ. ಸತ್ಯವಾದಿಯೂ, ಶಮಪರ ತಪಸ್ವಿಯೂ, ದಗ್ಧಕಿಲ್ಬಿಷನೂ ಅಮಿತದ್ಯುತಿಯೂ ಆದ ಅವನು, ನಾನು ಮತ್ತು ನೀನು ಕೇಳಿಕೊಂಡರೆ, ನಿನ್ನ ತಮ್ಮನ ಪತ್ನಿಯರಲ್ಲಿ ಕಲ್ಯಾಣವನ್ನು ತರುವ ಮಕ್ಕಳನ್ನು ಪಡೆಯಬಹುದು. 'ಏನಾದರೂ ಆಗಬೇಕೆಂದಿದ್ದಾಗ ನನ್ನನ್ನು ನೆನಪಿಸಿಕೋ. ಬರುತ್ತೇನೆ''ಎಂದು ಅವನು ಮಾತುಕೊಟ್ಟಿದ್ದಾನೆ. ಭೀಷ್ಮ ! ನೀನು ಬೇಕೆಂದರೆ ಈಗಲೇ ನಾನು ಅವನನ್ನು ಸ್ಮರಿಸುತ್ತೇನೆ. ನಿನ್ನ ಅನುಮತಿಯ ನಂತರವೇ ಆ ಮಹಾತಪಸ್ವಿಯು ವಿಚಿತ್ರವೀರ್ಯನ ಪತ್ನಿಯರಲ್ಲಿ ಪುತ್ರರನ್ನು ಪಡೆಯಬಹುದು."

ಮಹರ್ಷಿಯ ಕುರಿತು ಹೇಳಿದ್ದುದನ್ನು ಕೇಳಿದ ಭೀಷ್ಮನು ಕೈಮುಗಿದು ಹೇಳಿದನು:

"ಧರ್ಮ, ಅರ್ಥ, ಕಾಮ ಈ ಮೂರನ್ನೂ ಯಾರು

ನೋಡಿಕೊಳ್ಳುತ್ತಾನೋ, ಅರ್ಥ-ಅರ್ಥಾನುಬಂಧಗಳನ್ನೂ, ಧರ್ಮ-ಧರ್ಮಾನುಬಂಧಗಳನ್ನೂ, ಕಾಮ-ಕಾಮಾನುಬಂಧಗಳನ್ನೂ ಮತ್ತು ಇವುಗಳ ವಿಪರೀತಗಳ ಕುರಿತು ಪುನಃ ಪುನಃ ಬುದ್ಧಿಪೂರ್ವಕವಾಗಿ ಚಿಂತಿಸಿ ಒಳ್ಳೆಯ ನಿರ್ಧಾರಗಳನ್ನು ಯಾರು ತೆಗೆದುಕೊಳ್ಳುತ್ತಾನೋ ಅವನು ಬುದ್ಧಿವಂತನೇ ಸರಿ. ನೀನು ಹೇಳಿದ್ದುದು ಧರ್ಮಯುಕ್ತವೂ ಹೌದು ಮತ್ತು ನಮ್ಮ ಕುಲಕ್ಕೆ ಹಿತಕಾರಿಯೂ ಹೌದು. ಇದು ಶ್ರೇಯಕಾರಕವಾದುದು. ನನಗೆ ಇದು ತುಂಬಾ ಇಷ್ಟವಾಯಿತು.”

## ಧೃತರಾಷ್ಟ್ರ, ಪಾಂಡು ಮತ್ತು ವಿದುರರ ಜನನ; ವಿವಾಹ

ಕುರುನಂದನ ಭೀಷ್ಮನ ಒಪ್ಪಿಗೆಯನ್ನು ಪಡೆದ ಆ ಕಪ್ಪುವರ್ಣದವಳು ಮುನಿ ಕೃಷ್ಣದ್ವೈಪಾಯನನನ್ನು ಸ್ಮರಿಸಿದಳು. ವೇದಾಧ್ಯಯನಮಾಡುತ್ತಿದ್ದ ಆ ಧೀಮಂತನು ತಾಯಿಯು ಸ್ಮರಿಸುತ್ತಿರುವುದನ್ನು ತಿಳಿದು ಅದೇ ಕ್ಷಣದಲ್ಲಿ ಯಾರಿಗೂ ತಿಳಿಯದ ರೀತಿಯಲ್ಲಿ ಅವಳ ಎದುರು ಕಾಣಿಸಿಕೊಂಡನು. ಸುತನಿಗೆ ವಿಧಿಪೂರ್ವಕ ಪೂಜೆಯನ್ನಿತ್ತು, ಬಾಹುಗಳಿಂದ ಬಿಗಿದಪ್ಪಿ, ಕಣ್ಣೀರಿನಿಂದ ತೋಯಿಸಿದಳು. ಬಹಳ ಕಾಲದ ನಂತರ ಪುತ್ರನನ್ನು ಕಂಡ ಆ ದಾಶೇಯಿಯು ಕಣ್ಣೀರು ಸುರಿಸಿದಳು. ಹಿರಿಯ ಪುತ್ರ ಮಹರ್ಷಿ ವ್ಯಾಸನು ತನ್ನ ಆರ್ತ ತಾಯಿಯನ್ನು ನೀರಿನಿಂದ



ಪರಿಶಿಂಚಿಸಿ ನಮಸ್ಕರಿಸಿ, ಈ ಮಾತುಗಳನ್ನಾಡಿದನು:

"ನಿನ್ನ ಮನಸ್ಸಿನಲ್ಲಿರುವುದನ್ನು ನಡೆಸಿಕೊಡಲು ಇಲ್ಲಿಗೆ ಬಂದಿದ್ದೇನೆ. ಧರ್ಮತತ್ವಜ್ಞಳಾಗಿದ್ದೀಯೆ. ನಿನಗೆ ಪ್ರಿಯವಾದ ಏನನ್ನು ಮಾಡಬೇಕು. ಅಪ್ಪಣೆ ಕೊಡು."

ಕುಲ ಪುರೋಹಿತರು ಆ ಪರಮ ಋಷಿಯನ್ನು ಬರಮಾಡಿಕೊಂಡು ವಿಧಿವತ್ತಾಗಿ ಮಂತ್ರಪೂರಕ ಪೂಜೆ ಸತ್ಕಾರಗಳನ್ನು ಸಲ್ಲಿಸಿದರು. ಅವನು ಆಸನವನ್ನು ಸ್ವೀಕರಿಸಿದ ನಂತರ ತಾಯಿಯು ಅವನ ಅವ್ಯಯ ಕುಶಲತೆಯ ಕುರಿತು ಪ್ರಶ್ನಿಸಿದಳು. ನಂತರ ಸತ್ಯವತಿಯು ಅವನನ್ನೇ ನೋಡುತ್ತಾ ಹೇಳಿದಳು:

"ಕವಿಯೇ! ಪುತ್ರರು ತಂದೆ ಮತ್ತು ತಾಯಿ ಇಬ್ಬರದ್ದೂ ಆಗಿ ಹುಟ್ಟಿರುತ್ತಾರೆ. ಅವರ ಮೇಲೆ ತಂದೆಗೆ ಎಷ್ಟು ಅಧಿಕಾರವಿದೆಯೋ ಅಷ್ಟೇ ತಾಯಿಗೂ ಇದೆ ಎನ್ನುವುದರಲ್ಲಿ ಸಂಶಯವಿಲ್ಲ. ನೀನು ಹೇಗೆ ನನ್ನ ವಿಧಾತವಿಹಿತ ಪ್ರಥಮ ಸುತನೋ ಹಾಗೆಯೇ ವಿಚಿತ್ರವೀರ್ಯನು ನನ್ನ ಕೊನೆಯ ಮಗ. ನೀನು ಒಪ್ಪಿಕೊಳ್ಳುವೆಯಾದರೆ, ತಂದೆಯ ಕಡೆಯಿಂದ ಅವನಿಗೆ ಭೀಷ್ಮನು ಹೇಗೆ ಅಣ್ಣನಾಗುತ್ತಾನೋ ಹಾಗೆ ನೀನು ಅವನಿಗೆ ತಾಯಿಯ ಕಡೆಯಿಂದ ಅಣ್ಣನಾಗುತ್ತೀಯೆ. ಸತ್ಯವಿಕ್ರಮ ಈ ಶಾಂತನುವು ಸತ್ಯವನ್ನು ಪರಿಪಾಲಿಸಿ ರಾಜ್ಯಾನುಶಾಸನಕ್ಕಾಗಿ ಮಕ್ಕಳನ್ನು ಪಡೆಯುವ ಮನಸ್ಸನ್ನು ಮಾಡುತ್ತಿಲ್ಲ. ಈಗ ನೀನು ನಿನ್ನ ತಮ್ಮನ ಮೇಲಿನ

ಗೌರವದಿಂದ, ಕುಲಸಂತಾನಕ್ಕಾಗಿ, ನನ್ನ ಮತ್ತು ಭೀಷ್ಮನ ವಚನ ನಿಯೋಗದಂತೆ, ಜೀವಿಗಳ ಮೇಲಿನ ಅನುಕಂಪದಿಂದ, ಸರ್ವರ ರಕ್ಷಣೆಗೋಸ್ಕರ, ಯಾವುದೇ ರೀತಿಯ ಬೇಸರವಿಲ್ಲದೆ ನಾನು ಹೇಳುವುದನ್ನು ಮಾಡಬೇಕು. ನಿನ್ನ ತಮ್ಮನ ಸುರಸುತೆಯರಂತಿರುವ ರೂಪಯೌವನಸಂಪನ್ನ ಭಾರ್ಯೆಯರು ಧರ್ಮಪೂರ್ವಕವಾಗಿ ಪುತ್ರರನ್ನು ಪಡೆಯಲು ಬಯಸುತ್ತಿದ್ದಾರೆ. ಪುತ್ರಕ! ಅವರಲ್ಲಿ ನೀನು ಈ ಕುಲಕ್ಕೆ ಅನುರೂಪರಾದ ಈ ಸಂತತಿಯನ್ನು ಮುಂದುವರೆಸಿಕೊಂಡು ಹೋಗಬಲ್ಲ ಮಕ್ಕಳನ್ನು ಪಡೆ. ಇದಕ್ಕೆ ನೀನು ಸಮರ್ಥನಾಗಿದ್ದೀಯೆ.”

ವ್ಯಾಸನು ಹೇಳಿದನು:

“ಸತ್ಯವತಿ! ನೀನು ಪರ ಮತ್ತು ಅಪರ ಧರ್ಮಗಳೆರಡನ್ನೂ ತಿಳಿದಿರುವೆ. ಧರ್ಮಜ್ಞಳಾದ ನಿನ್ನ ಮನಸ್ಸು ಸದಾ ಧರ್ಮದಲ್ಲಿಯೇ ನಿರತವಾಗಿದೆ. ಆದುದರಿಂದ ನಿನ್ನ ನಿಯೋಗದಂತೆ, ಧರ್ಮವನ್ನು ಗೌರವಿಸುವ ಕಾರಣದಿಂದ, ನಿನ್ನ ಇಷ್ಟದಂತೆ ಮಾಡುತ್ತೇನೆ. ಇದು ಒಂದು ಪುರಾತನ ಪದ್ಧತಿಯಾಗಿದೆ. ನನ್ನ ತಮ್ಮನಿಗೆ ಮಿತ್ರ ವರುಣರ ಸಮಾನ ಪುತ್ರರನ್ನು ನೀಡುತ್ತೇನೆ. ಆ ದೇವಿಯರೀರ್ವರೂ ಒಂದು

ಸಂವತ್ಸರ ಪರ್ಯಂತ ನಾನು ಹೇಳಿದ ನಿರ್ದಿಷ್ಟ ವ್ರತವನ್ನು ಪಾಲಿಸಿ ಶುದ್ಧರಾಗಬೇಕು. ಯಾಕೆಂದರೆ ಆ ವ್ರತವನ್ನು ಮಾಡದ ಯಾವ ಸ್ತ್ರೀಗೂ ನನ್ನೊಡನೆ ಕೂಡಲಿಕ್ಕಾಗದು.”

ಸತ್ಯವತಿಯು ಹೇಳಿದಳು:

“ಈಗ ಸದ್ಯದಲ್ಲಿಯೇ ದೇವಿಯು ಗರ್ಭವತಿಯಾಗುವ ಹಾಗೆ ಮಾಡು. ಯಾಕೆಂದರೆ, ರಾಜನಿಲ್ಲದ ರಾಷ್ಟ್ರದಲ್ಲಿ ಮಳೆಯೂ ದೇವತೆಗಳೂ ಬರುವುದಿಲ್ಲ. ರಾಜನಿಲ್ಲದ ರಾಷ್ಟ್ರವನ್ನು ಹೇಗೆ ತಾನೇ ಕಾಪಾಡಿಕೊಂಡು ಬರಲು ಸಾದ್ಯ? ಆದುದರಿಂದ ಗರ್ಭವನ್ನು ನೀಡು. ಅದರ ಬೆಳವಣಿಗೆಯನ್ನು ಭೀಷ್ಮನು ನೋಡಿಕೊಳ್ಳುತ್ತಾನೆ.”

ವ್ಯಾಸನು ಹೇಳಿದನು:

“ತಕ್ಷಣವೇ ಕಾಲಬರುವ ಮೊದಲೇ ಪುತ್ರರನ್ನು ನೀಡಬೇಕಾದರೆ ನನ್ನ ವಿರೂಪವನ್ನು ಸಹಿಸುವುದೇ ಅವಳಿಗೆ ಒಂದು ಪರಮ ವ್ರತ. ಒಂದುವೇಳೆ ಅವಳು ನನ್ನ ಈ ವಾಸನೆ, ರೂಪ, ವೇಷ, ಮತ್ತು ದೇಹವನ್ನು ಸಹಿಸುತ್ತಾಳಾದರೆ, ಕೌಸಲ್ಯೆಗೆ ಇಂದೇ ವಿಶಿಷ್ಠ ಗರ್ಭವನ್ನು ನೀಡುತ್ತೇನೆ.”

“ಸಮಾಗಮಕ್ಕೆ ಕಾಯುತ್ತಿರಲಿ” ಎಂದು ಹೇಳಿ ಆ ಮುನಿಯು

ಅಂತರ್ಗತನಾದನು. ನಂತರ ಆ ದೇವಿಯು ತನ್ನ ಸೊಸೆಯನ್ನು ಗೌಪ್ಯವಾಗಿ ಭೆಟ್ಟಿಯಾಗಿ ಧರ್ಮಾರ್ಥಸಮಾಯುಕ್ತ ಈ ಹಿತನುಡಿಗಳನ್ನಾಡಿದಳು:

> "ಕೌಸಲ್ಯಾ! ನಾನು ಹೇಳುವ ಈ ಧರ್ಮತಂತ್ರವನ್ನು ಕೇಳು. ಭರತ ಕುಲವು ನಿಂತುಹೋಗಿರುವುದು ನನ್ನ ದುರ್ಭಾಗ್ಯ. ಭೀಷ್ಮನು ನನ್ನ ಈ ವ್ಯಥೆಯನ್ನು ಮತ್ತು ಅವನ ಪಿತೃವಂಶದ ಪೀಡನೆಯನ್ನು ಗಮನಿಸಿ, ಧರ್ಮವನ್ನು ವೃದ್ಧಿಸುವ ಬುದ್ಧಿವಂತ ಮಾರ್ಗವನ್ನು ತೋರಿಸಿದ್ದಾನೆ. ಆದರೆ ಇದು ನಿನ್ನ ಮನಸ್ಸನ್ನು ಅವಲಂಬಿಸಿದೆ ಎಂದು ನನಗೆ ತಿಳಿದಿದೆ. ನಷ್ಟವಾಗುತ್ತಿರುವ ಭರತ ವಂಶವನ್ನು ಪುನಃ ಉದ್ಧರಿಸು. ದೇವರಾಜಸಮಪ್ರಭ ಪುತ್ರನಿಗೆ ಜನ್ಮನೀಡು. ಅವನೇ ಈ ಕುಲ ಮತ್ತು ರಾಜ್ಯಭಾರಗಳೆರಡರ ಭಾರವನ್ನೂ ಹೊರುತ್ತಾನೆ."

ಆ ಧರ್ಮಚಾರಿಣಿಯನ್ನು ಹೇಗಾದರೂ ಮಾಡಿ ಧರ್ಮದೆಡೆಗೆ ಕೊಂಡೊಯ್ಯುವುದರಲ್ಲಿ ಯಶಸ್ವಿಯಾದ ಅವಳು ವಿಪ್ರರಿಗೂ ದೇವರ್ಷಿಗಳಿಗೂ ಅತಿಥಿಗಳಿಗೂ ಭೋಜನವನ್ನು ನೀಡಿದಳು. ಸೊಸೆಯು ಋತುಮತಿಯಾಗಿ ಸ್ನಾನಮುಗಿಸಿದ ನಂತರ ಸತ್ಯವತಿಯು ಅವಳನ್ನು ಹಾಸಿಗೆಯಲ್ಲಿ ಮಲಗಿಸಿ ಮೆಲ್ಲನೆ ಈ ಮಾತುಗಳನ್ನಾಡಿದಳು:

“ಕೌಸಲ್ಯೆ! ನಿನಗೊಬ್ಬ ಬಾವನಿದ್ದಾನೆ. ಅವನು ಈ ರಾತ್ರಿ ನಿನ್ನಲ್ಲಿಗೆ ಬರುತ್ತಾನೆ. ಎಚ್ಚರವಿದ್ದು ಅವನಿಗೆ ಕಾಯಿ. ಅವನು ದಟ್ಟ ರಾತ್ರಿಯಲ್ಲಿ ಬರುತ್ತಾನೆ.”

ಅತ್ತೆಯು ಹೇಳಿದ ಮಾತುಗಳನ್ನು ಕೇಳಿದ ಶುಭೆಯು ಹಾಸಿಗೆಯಲ್ಲಿ ಮಲಗಿಕೊಂಡೇ ಅವನು ಕುರುಪುಂಗವ ಭೀಷ್ಮನೇ ಇರಬೇಕೆಂದು ಯೋಚಿಸತೊಡಗಿದಳು. ಮೊದಲು ಅಂಬಿಕೆಯ ಬಳಿ ಹೋಗಲು ಸತ್ಯವಾನ್ ಋಷಿಯು ದೀಪಗಳು ಇನ್ನೂ ಉರಿಯುತ್ತಿರುವಾಗಲೇ ಶಯನವನ್ನು ಪ್ರವೇಶಿಸಿದನು. ಆ ಕೃಷ್ಣನ ಕಪಿಲ ಜಟೆ, ಪ್ರಜ್ವಲಿಸುತ್ತಿರುವ ಕಣ್ಣುಗಳು ಮತ್ತು ಕೆಂಪು ಗಡ್ಡವನ್ನು ನೋಡಿದ ಆ ದೇವಿಯು ಕಣ್ಣುಗಳನ್ನು ಮುಚ್ಚಿಬಿಟ್ಟಳು. ತಾಯಿಯು ಬಯಸಿದ್ದುದನ್ನು ನೆರವೇರಿಸಲು ಬಂದಿದ್ದ ಅವನು ಅವಳೊಂದಿಗೆ ಇಡೀ ರಾತ್ರಿಯನ್ನು ಕಳೆದರೂ ಹೆದರಿಕೆಯಿಂದ ಅವಳು ಅವನ ಕಡೆ ನೋಡಲೇ ಇಲ್ಲ. ಅವನು ಹೊರಬಂದಾಗ ಭೆಟ್ಟಿಯಾದ ತಾಯಿಯು ಮಗನಲ್ಲಿ ಕೇಳಿದಳು:

“ಮಗನೇ! ಅವಳಲ್ಲಿ ಗುಣವಂತ ರಾಜಪುತ್ರನಾಗುತ್ತಾನೆಯೇ?”

ತಾಯಿಯ ಈ ಪ್ರಶ್ನೆಯನ್ನು ಕೇಳಿ ಪರಮಬುದ್ಧಿಶಾಲಿ ಅತೀಂದ್ರಿಯ ಜ್ಞಾನಿ ವ್ಯಾಸನು ಸ್ವಲ್ಪ ಯೋಚಿಸಿ ವಿಧಿ ಪ್ರಚೋದಿತನಾಗಿ ಹೇಳಿದನು:

“ಎರಡು ಆನೆಗಳಷ್ಟು ಶಕ್ತಿಯುತ, ವಿದ್ವಾಂಸ,

ರಾಜರ್ಷಿಸತ್ತಮ, ಮಹಾಭಾಗ, ಮಹಾವೀರ್ಯವಂತ, ಮಹಾಬುದ್ಧಿಶಾಲಿಯು ಜನಿಸುತ್ತಾನೆ. ಅವನಿಗೆ ನೂರು ಮಹಾಬಲಶಾಲಿ ಪುತ್ರರು ಜನಿಸುತ್ತಾರೆ. ಆದರೆ ತನ್ನ ತಾಯಿಯ ಗುಣದೋಷದಿಂದ ಕುರುಡನಾಗಿ ಜನಿಸುತ್ತಾನೆ."

ಅವನ ಆ ಮಾತುಗಳನ್ನು ಕೇಳಿದ ಮಾತೆಯು ಪುತ್ರನಿಗೆ ಹೇಳಿದಳು:

"ತಪೋಧನ! ಅಂಧ ನೃಪತಿಯು ಕುರುಗಳಿಗೆ ಅನುರೂಪನಲ್ಲ! ನಿನ್ನ ಜ್ಞಾತಿವಂಶ ಗೋಪ್ತಾರನಾಗುವ, ಪಿತೃವಂಶವರ್ಧನ ಕುರುವಂಶದ ಎರಡನೆಯ ರಾಜನನ್ನು ಕೊಡಬೇಕು."

"ಹಾಗೆಯೇ ಆಗಲಿ" ಎಂದು ಭರವಸೆಯನ್ನಿತ್ತ ಆ ಮಹಾತಪಸ್ವಿಯು ಹಿಂತೆರಳಿದನು. ಸಮಯ ಕಳೆದನಂತರ ಕೌಸಲ್ಯೆಯು ಕುರುಡು ಮಗನಿಗೆ ಜನ್ಮವಿತ್ತಳು.

ದೇವಿ ಅನಿಂದಿತೆ ಸತ್ಯವತಿಯು ತನ್ನ ಇನ್ನೊಬ್ಬ ಸೊಸೆಯನ್ನು ಮನವೊಲಿಸಿ ಹಿಂದಿನಂತೆಯೇ ಋಷಿಯನ್ನು ಬರಮಾಡಿಕೊಂಡಳು. ಅದೇರೀತಿಯಲ್ಲಿ ಮಹರ್ಷಿಯು ಅವಳ ಬಳಿ ಹೋದನು. ಅಂಬಾಲಿಕೆಯೂ ಕೂಡ ಬಂದೊಡನೆ ಋಷಿಯನ್ನು ನೋಡಿ ವಿಷಣ್ಣಳಾಗಿ ಪಾಂಡುವರ್ಣವನ್ನು ತಾಳಿದಳು. ಭೀತಳಾಗಿ ಪಾಂಡುವರ್ಣವನ್ನು ತಾಳಿ ವಿಷಣ್ಣಳಾದ ಅವಳನ್ನು ನೋಡಿದ ಸತ್ಯವತೀ ಪುತ್ರ ವ್ಯಾಸನು ಹೇಳಿದನು:

“ನನ್ನ ಈ ವಿರೂಪವನ್ನು ನೋಡಿ ಪಾಂಡುತ್ವವನ್ನು ಪಡೆದ ನಿನ್ನ ಈ ದೋಷದಿಂದ ನಿನ್ನ ಮಗನು ಪಾಂಡುವೇ ಆಗುತ್ತಾನೆ. ಶುಭಾನನೆ! ಅವನ ಹೆಸರೂ ಕೂಡ ಅದೇ ಆಗುತ್ತದೆ.”

ಹೀಗೆ ಹೇಳಿ ಭಗವಾನ್ ಋಷಿಸತ್ತಮನು ಹೊರ ಬಂದನು. ಅವನು ಹೊರಬರುವುದನ್ನು ನೋಡಿದ ಸತ್ಯವತಿಯು ಪುತ್ರನಲ್ಲಿ ಕೇಳಿದಾಗ, ಅವನು ಬಾಲಕನ ಪಾಂಡುತ್ವದ ಕುರಿತು ಹೇಳಿದನು. ಅವನ ತಾಯಿಯು ಪುನಃ ಇನ್ನೊಬ್ಬ ಪುತ್ರನನ್ನು ಕೇಳಿದಾಗ ಮಹರ್ಷಿಯು ತನ್ನ ತಾಯಿಗೆ ಹಾಗೆಯೇ ಆಗಲಿ ಎಂದು ಉತ್ತರಿಸಿದನು. ಕಾಲವು ಬಂದಾಗ ಆ ದೇವಿಯು ಪಾಂಡುವರ್ಣದ, ಶ್ರೀಯಂತೆ ಬೆಳಗುತ್ತಿರುವ ಲಕ್ಷಣಸಂಪನ್ನ ಕುಮಾರನಿಗೆ ಜನ್ಮವಿತ್ತಳು. ಅವನಿಗೆ ಮಹೇಷ್ವಾಸ ಪಂಚ ಪಾಂಡವರು ಪುತ್ರರಾಗಿ ಜನಿಸಿದರು.

ಹಿರಿಯ ಸೊಸೆಯು ಪುನಃ ಋತುಕಾಲವನ್ನು ಹೊಂದಿದಾಗ ಪುನಃ ಅವನನ್ನು ಸೇರುವಂತೆ ಹೇಳಿದಳು. ಸುರಸುತೆಯಂತಿದ್ದ ಅವಳಾದರೂ ಮಹರ್ಷಿಯ ರೂಪ ಮತ್ತು ವಾಸನೆಯನ್ನು ನೆನಪಿಸಿಕೊಂಡು ಭಯದಿಂದ ದೇವಿಯ ವಚನದಂತೆ ನಡೆದುಕೊಳ್ಳಲಿಲ್ಲ. ಆ ಕಾಶಿಪತಿಯ ಮಗಳು ತನ್ನ ದಾಸಿಯೊಬ್ಬಳನ್ನು ಸರ್ವಭೂಷಣಗಳಿಂದ ಅಪ್ಸರೆಯಂತೆ ಸಿಂಗರಿಸಿ ಕೃಷ್ಣನಲ್ಲಿಗೆ ಕಳುಹಿಸಿದಳು. ಋಷಿಯು ಬಂದಕೂಡಲೇ ಆ ದಾಸಿಯು ಮೇಲೆದ್ದು

ಅಭಿನಂದಿಸಿ, ಅನುಜ್ಞೆಯಂತೆ ಅವನ ಸತ್ಕಾರ ಉಪಚಾರಗಳನ್ನು ಮಾಡಿದಳು. ಕಾಮಭೋಗದಿಂದ ಅವಳಲ್ಲಿ ಋಷಿಯು ಸಂತುಷ್ಟನಾದನು. ಆ ಮಹರ್ಷಿಯು ಸಂತೋಷಗೊಂಡು ಅವಳೊಂದಿಗೆ ಪ್ರೀತಿಯಿಂದ ಇಡೀ ರಾತ್ರಿಯನ್ನು ಕಳೆದನು. ಮೇಲೆದ್ದಾಗ ಅವನು ಅವಳಿಗೆ ಹೇಳಿದನು:

> "ನಿನ್ನ ದಾಸಿತ್ವವು ಇಂದಿಗೆ ಮುಗಿಯಿತು. ಶುಭೇ! ಇಂದು ಓರ್ವ ಶ್ರೀಮಂತನು ನಿನ್ನ ಉದರ ಗರ್ಭದಲ್ಲಿ ಬಂದಿದ್ದಾನೆ. ಅವನು ಲೋಕದಲ್ಲಿಯೇ ಶ್ರೇಷ್ಠನೂ ಧರ್ಮಾತ್ಮನೂ ಸರ್ವ ಬುದ್ಧಿವಂತನೂ ಆಗುತ್ತಾನೆ."

ಹೀಗೆ ಧೃತರಾಷ್ಟ್ರ ಮತ್ತು ಪಾಂಡುಗಳ ತಮ್ಮ ಅಮಿತ ಬುದ್ಧಿವಂತ ವಿದುರನೆಂಬ ಹೆಸರಿನ ಕೃಷ್ಣದ್ವೈಪಾಯನನ ಮಗನು ಜನಿಸಿದನು. ಮಹಾತ್ಮ ಮಾಂಡವ್ಯನ ಶಾಪದಿಂದಾಗಿ ಧರ್ಮನೇ ಕಾಮಕ್ರೋಧವಿವರ್ಜಿತ ಅರ್ಥತತ್ವಜ್ಞ ವಿದುರನ ರೂಪದಲ್ಲಿ ಜನಿಸಿದನು. ಈ ರೀತಿ ಧರ್ಮನ ಋಣವನ್ನು ತೀರಿಸಿದ ಅವನು ತನ್ನ ತಾಯಿಯನ್ನು ಭೇಟಿಯಾಗಿ "ಅವಳು ಗರ್ಭವತಿಯಾಗಿದ್ದಾಳೆ" ಎಂದು ಹೇಳಿ ಅಂತರ್ಧಾನನಾದನು. ಈ ರೀತಿ ವಿಚಿತ್ರವೀರ್ಯನ ಪತ್ನಿಯರಲ್ಲಿ ದ್ವೈಪಾಯನನಿಂದ ದೇವಗರ್ಭಗಳಂತೆ ಬೆಳಗುತ್ತಿರುವ ಕುರುವಂಶವಿವರ್ಧನರು ಜನಿಸಿದರು.

ಆ ಮೂವರು ಕುಮಾರರ ಜನ್ಮದಿಂದ ಕುರುಜಂಗಲ, ಕುರುಕ್ಷೇತ್ರ,

ಮತ್ತು ಕುರುವಂಶ ಇವು ಮೂರೂ ಅಭಿವೃದ್ಧಿ ಹೊಂದಿದವು. ಬೆಳೆಗಳು ಎತ್ತರವಾಗಿ ಬೆಳೆದವು. ಭೂಮಿಯು ಸಸ್ಯ-ಫಲಗಳಿಂದ ಭರಿತವಾಯಿತು. ಪರ್ಜನ್ಯನು ಕಾಲಕ್ಕೆ ಸರಿಯಾಗಿ ಮಳೆಸುರಿಸಿದನು. ದ್ರುಮಗಳು ಪುಷ್ಪ-ಫಲಗಳಿಂದ ತುಂಬಿಕೊಂಡವು. ಮೃಗಪಕ್ಷಿಗಳೂ ವಾಹನಗಳೂ ಮುದಿತರಾಗಿ ಸಂತಸದಿಂದಿದ್ದರು. ಮಾಲೆಗಳು ಸುಗಂಧವನ್ನು ಸೂಸುತ್ತಿದ್ದವು, ಫಲಗಳು ರಸಭರಿತವಾಗಿದ್ದವು. ನಗರಗಳು ವರ್ತಕ-ಶಿಲ್ಪಿಗಳಿಂದ ತುಂಬಿತ್ತು. ಜನರು ಶೂರರೂ, ವಿದ್ಯಾವಂತರೂ, ಸಂತರೂ ಮತ್ತು ಸುಖಿಗಳೂ ಆಗಿದ್ದರು. ದಸ್ಯುಗಳೇ ಇರಲಿಲ್ಲ. ಅಪರಾಧ ಅಧರ್ಮಗಳಲ್ಲಿ ಅಭಿರುಚಿಯಿದ್ದ ಜನರೇ ಇರಲಿಲ್ಲ. ರಾಷ್ಟ್ರದ ಎಲ್ಲ ಪ್ರದೇಶಗಳೂ ಕೃತಯುಗವೋ ಎಂಬಂತೆ ತೋರುತ್ತಿದ್ದವು. ದಾನಕ್ರಿಯೆ ಮತ್ತು ಧರ್ಮಶೀಲ, ಯಜ್ಞವ್ರತಪರಾಯಣ, ಅನ್ಯೋನ್ಯ ಪ್ರೀತಿಸಂಯುಕ್ತ ಪ್ರಜೆಗಳು ವೃದ್ಧಿಸಿದರು. ಮಾನ-ಕ್ರೋಧ ವಿಹೀನ, ಲೋಭವಿವರ್ಜಿತ ಜನರು ಅನ್ಯೋನ್ಯರ ವಿಕಾಸವನ್ನು ಬಯಸುತ್ತಿದ್ದರು. ಧರ್ಮವು ಅತ್ಯುತ್ತಮ ಸ್ಥಾನವನ್ನು ಪಡೆದಿತ್ತು. ತುಂಬಿಹೋಗಿದ್ದ ನಗರವು ಮಹಾ ಸಾಗರದಂತೆ ತೋರುತ್ತಿತ್ತು. ದ್ವಾರ, ತೋರಣ, ಮೋಡಗಳನ್ನು ಮುಟ್ಟುತ್ತಿವೆಯೋ ಎಂದು ತೋರುವ ನೂರಾರು ಮಹಡಿಗಳ ಎತ್ತರ ಕಟ್ಟಡಗಳಿಂದ ಅದು ಮಹೇಂದ್ರಪುರವನ್ನು ಹೋಲುತ್ತಿತ್ತು. ನದಿಗಳಲ್ಲಿ, ವನಖಂಡಗಳಲ್ಲಿ, ಕೊಳ-ಸರೋವರಗಳಲ್ಲಿ, ಗಿರಿಶಿಖರಗಳ ಮೇಲೆ, ಮತ್ತು ರಮ್ಯ ಕಾನನಗಳಲ್ಲಿ ಜನರು

ಮುದಿತರಾಗಿ ವಿಹರಿಸುತ್ತಿದ್ದರು. ಆಗಿನ ಕಾಲದಲ್ಲಿ ದಕ್ಷಿಣ ಕುರುಗಳು ಉತ್ತರ ಕುರುಗಳೊಂದಿಗೆ ಸ್ಪರ್ಧಿಸುತ್ತಿರುವವರೋ ಎನ್ನುವಂತೆ ಸಿದ್ಧ, ಋಷಿ, ಚರಣರೊಂದಿಗೆ ವ್ಯವಹರಿಸುತ್ತಿದ್ದರು. ಯಾರೂ ಬಡವರಿರಲಿಲ್ಲ, ಯಾವ ಸ್ತ್ರೀಯೂ ವಿಧವೆಯಾಗಿರಲಿಲ್ಲ. ರಮ್ಯ ಗ್ರಾಮೀಣಪ್ರದೇಶಗಳಲ್ಲಿ ಕುರುಗಳು ಬಹಳಷ್ಟು ಬಾವಿಗಳನ್ನು, ಸಭೆಗಳನ್ನು, ಕೆರೆಗಳನ್ನು, ಬ್ರಾಹ್ಮಣರಿಗೆ ಮನೆಗಳನ್ನೂ ಕಟ್ಟಿಸಿದರು. ಭೀಷ್ಮನಿಂದ ಆಳಲ್ಪಟ್ಟ ಆ ರಾಜ್ಯವು ಎಲ್ಲೆಡೆಯಿಂದ ಸುರಕ್ಷಿತವಾಗಿತ್ತು. ರಮಣೀಯ ಚೈತ್ಯ ಯೂಪಷಗಳಿಂದ ಕೂಡಿದ್ದ ಆ ದೇಶವು ಪರರಾಷ್ಟ್ರಗಳನ್ನೂ ಸೇರಿಸಿಕೊಳ್ಳುತ್ತಾ ಬೆಳೆಯುತ್ತಿತ್ತು. ಭೀಷ್ಮನಿಂದ ಆಳಲ್ಪಟ್ಟ ಆ ರಾಷ್ಟ್ರವು ಧರ್ಮಚಕ್ರದ ಮೇಲೆಯೇ ನಡೆಯುತ್ತಿತ್ತು. ಮಹಾತ್ಮ ಕುಮಾರರು ತಮ್ಮ ತಮ್ಮ ಕೃತ್ಯದಲ್ಲಿ ತೊಡಗಿರುವಾಗ ನಗರ ಮತ್ತು ಗ್ರಾಮೀಣ ಜನರೆಲ್ಲರೂ ಸದಾ ಉತ್ಸವವನ್ನಾಚರಿಸುತ್ತಿದ್ದರು. ಕುರುಮುಖ್ಯರ ಮತ್ತು ಪೌರರ ಮನೆಗಳಲ್ಲಿ ಕೊಡೋಣ, ಭೋಜನವನ್ನು ನೀಡೋಣ ಎಂಬ ಮಾತುಗಳು ಎಲ್ಲೆಡೆಯೂ ಎಲ್ಲರಿಂದಲೂ ಕೇಳಿಬರುತ್ತಿದ್ದವು. ಧೃತರಾಷ್ಟ್ರ, ಪಾಂಡು ಮತ್ತು ಮಹಾಮತಿ ವಿದುರರನ್ನು ಹುಟ್ಟಿದಾಗಿನಿಂದ ಭೀಷ್ಮನು ತನ್ನದೇ ಮಕ್ಕಳಂತೆ ಪರಿಪಾಲಿಸಿದನು. ಸಂಸ್ಕಾರಗಳಿಂದ ಸಂಸ್ಕೃತ, ವ್ರತಾಧ್ಯಯನ ಸಂಯುತ, ಮತ್ತು ಶ್ರಮ ವ್ಯಾಯಾಮ ಕುಶಲರಾದ ಅವರು ಯೌವನವನ್ನು ಪ್ರವೇಶಿಸಿದರು. ಧನುರ್ವೇದ, ಕುದುರೆ ಸವಾರಿ, ಗದಾಯುದ್ಧ, ಖಡ್ಗ ಯುದ್ಧ,

ರಾಜಶಿಕ್ಷಣ ಮತ್ತು ನೀತಿ ಶಾಸ್ತ್ರಗಳಲ್ಲಿ ಪಾರಂಗತರಾದರು. ಇತಿಹಾಸ ಪುರಾಣಗಳು, ನಾನಾ ಶಿಕ್ಷಣಗಳು, ವೇದವೇದಾಂಗ ತತ್ವಜ್ಞಾನ ಎಲ್ಲವನ್ನೂ ಶ್ರಮಿಸಿ ಕಲಿತುಕೊಂಡರು. ವಿಕ್ರಾಂತ ಪಾಂಡುವು ಧನುರ್ವಿದ್ಯೆಯಲ್ಲಿ ಎಲ್ಲರನ್ನೂ ಮೀರಿಸಿದನು. ಮಹೀಪತಿ ಧೃತರಾಷ್ಟ್ರನು ಬೇರೆ ಎಲ್ಲರಿಗಿಂತ ಬಲಶಾಲಿಯಾಗಿದ್ದನು. ಧರ್ಮನಿತ್ಯತೆ, ರಾಜಧರ್ಮ, ಮತ್ತು ಪರಮ ಗತಿಯಲ್ಲಿ ವಿದುರನ ಸರಿಸಮಾನರಾದವರು ಮೂರೂ ಲೋಕಗಳಲ್ಲಿ ಯಾರೂ ಇರಲಿಲ್ಲ. ನಷ್ಟವಾಗುತ್ತಿದ್ದ ಶಂತನುವಿನ ವಂಶವು ಪುನರುತ್ಥಾನವಾದದ್ದನ್ನು ನೋಡಿದ ಸರ್ವರಾಷ್ಟ್ರಗಳ ಜನರಲ್ಲಿ ಒಂದು ಮಾತು ಕೇಳಿಬರುತ್ತಿತ್ತು. “ಕಾಶಿಸುತೆಯರ ಮಕ್ಕಳೇ ವೀರರು! ದೇಶಗಳಲ್ಲಿಯೇ ಕುರುಜಂಗಲ! ಸರ್ವಧರ್ಮವಿದರಲ್ಲಿ ಭೀಷ್ಮ ಮತ್ತು ನಗರಗಳಲ್ಲಿ ಗಜಸಾಹ್ವಯ!” ತನ್ನ ಕುರುಡತ್ವದಿಂದಾಗಿ ಧೃತರಾಷ್ಟ್ರನು, ಮತ್ತು ಜಾತಿಸಂಕರದಿಂದ ಜನಿಸಿದ ವಿದುರನು ರಾಜ್ಯವನ್ನು ಪಡೆಯಲಿಲ್ಲ. ಪಾಂಡುವು ಮಹೀಪತಿಯಾದನು.

## ಗಾಂಧಾರಿ

ಭೀಷ್ಮನು ಹೇಳಿದನು:

> “ಸುಗುಣಗಳಿಂದ ಸಮುದಿತ ಈ ಪ್ರಖ್ಯಾತ ಕುಲವು ಭೂಮಿಯಲ್ಲಿನ ಅನ್ಯ ಎಲ್ಲ ಪೃಥ್ವೀಪಾಲರಮೇಲೆ ಪ್ರಭುತ್ವವನ್ನು ಸ್ಥಾಪಿಸಿದೆ. ಪೂರ್ವದಲ್ಲಿ ಮಹಾತ್ಮ

ಧರ್ಮವಿಧ್ವಾಂಸ ರಾಜರಿಂದ ರಕ್ಷಿಸಿಕೊಂಡು ಬಂದ ಈ ಕುಲವು ಎಂದೂ ಅಧೋಗತಿಯನ್ನು ಹೊಂದಿಲ್ಲ. ಇದನ್ನು ಕುಲತಂತುಗಳಾದ ನಿಮ್ಮ ಮೇಲೆ ಸತ್ಯವತಿ, ಮಹಾತ್ಮ ಕೃಷ್ಣ ಮತ್ತು ನಾನು ಹೊರಿಸಿದ್ದೇವೆ. ಪುತ್ರ! ಈ ಕುಲವು ಸಾಗರದಂತೆ ವರ್ಧಿಸಲು, ನನಗಿಂಥ ಹೆಚ್ಚು, ನೀನು ವಿಶೇಷವಾದ ಕಾಳಜಿಯನ್ನು ತೆಗೆದುಕೊಳ್ಳಬೇಕು. ನಮ್ಮ ಕುಲಕ್ಕೆ ಅನುರೂಪ ಯಾದವೀ ಕನ್ಯೆಯೊಬ್ಬಳು, ಸುಬಲನ ಮಗಳು ಮತ್ತು ಮದ್ರೇಶ್ವರನ ಮಗಳ ಕುರಿತು ಕೇಳಿದ್ದೇನೆ. ಇವರೆಲ್ಲರೂ ಕುಲೀನರೂ, ರೂಪವತಿಯರೂ, ರಕ್ಷಣೆಯಲ್ಲಿದ್ದವರೂ ಆಗಿದ್ದು ಆ ಎಲ್ಲ ಕ್ಷತ್ರಿಯರ್ಷಭರೂ ನಮ್ಮೊಡನೆ ಸಂಬಂಧವನ್ನು ಕಲ್ಪಿಸಿಕೊಳ್ಳಲು ಸರಿಯಾದವರೇ ಆಗಿದ್ದಾರೆ. ಈ ಕುಲದ ಸಂತಾನಾರ್ಥವಾಗಿ ಇವರನ್ನು ವರಿಸಬೇಕೆಂದು ನನ್ನ ಮತ. ಧೀಮಂತರಲ್ಲಿ ಶ್ರೇಷ್ಠ ವಿದುರ, ಇದರ ಕುರಿತು ನಿನ್ನ ಮತವೇನು?”

ವಿದುರನು ಹೇಳಿದನು:

“ನೀನು ನಮ್ಮೆಲ್ಲರ ಪಿತ, ಮಾತ ಮತ್ತು ಪರಮ ಗುರು. ನಮ್ಮ ಈ ಕುಲಕ್ಕೆ ಹಿತವಾದದ್ದನ್ನು ನೀನೇ ಸ್ವಯಂ ವಿಚಾರಿಸಿ ನೆರವೇರಿಸಿಕೊಡು.”



ಆಗ ಸುಬಲಾತ್ಮಜೆ ಶುಭೆ ಗಾಂಧಾರಿಯು ವರದ ದೇವ ಭಗನೇತ್ರಹರ ಹರನನ್ನು ಆರಾಧಿಸಿ ನೂರು ಮಕ್ಕಳ ವರವನ್ನು ಪಡೆದಿದ್ದಾಳೆ ಎಂದು ವಿಪ್ರರ ಮೂಲಕ ಕೇಳಿದನು. ಇದನ್ನು ಕೇಳಿದ ಕುರುಪಿತಾಮಹ ಭೀಷ್ಮನು ದೂತನೋರ್ವನನ್ನು ಗಾಂಧಾರರಾಜನಲ್ಲಿಗೆ ಕಳುಹಿಸಿದನು. ಕುರುಡನೆಂದು ಚಿಂತಿಸಿ ಸುಬಲನು ಹಿಂಜರಿದನು. ಆದರೂ ಕುಲ, ಖ್ಯಾತಿ, ಇತಿಹಾಸವನ್ನು ಬುದ್ಧಿಪೂರ್ವಕ ಸಮೀಕ್ಷಿಸಿ ಅವನು ಧರ್ಮಚಾರಿಣಿ ಗಾಂಧಾರಿಯನ್ನು ಧೃತರಾಷ್ಟ್ರನಿಗೆ ಕೊಟ್ಟನು. ಗಾಂಧಾರಿಯಾದರೂ ಧೃತರಾಷ್ಟ್ರನು ಕುರುಡ ಮತ್ತು ತಂದೆ ತಾಯಿಯರು ತನ್ನನ್ನು ಅವನಿಗೆ ಕೊಡಲು

ಬಯಸುತ್ತಿದ್ದಾರೆಂದು ಕೇಳಿದಳು. ಆಗ ಆ ಪತಿವ್ರತಾಪರಾಯಣೆ ಶುಭೆಯು ಒಂದು ಪಟ್ಟಿಯನ್ನು ತೆಗೆದುಕೊಂಡು ಅದರಲ್ಲಿ ಹಲವು ಮಡಿಕೆಗಳನ್ನು ಮಾಡಿ ತನ್ನ ಕಣ್ಣುಗಳನ್ನು ಕಟ್ಟಿಕೊಂಡು ತನ್ನ ಪತಿಗಿಂಥ ಅಧಿಕ ಅನುಭವವು ತನಗೆ ಬೇಡ ಎಂಬ ದೃಢನಿಶ್ಚಯ ಮಾಡಿದಳು. ನಂತರ ಗಾಂಧಾರರಾಜ ಪುತ್ರ ಶಕುನಿಯು ಅತ್ಯಂತ ಸಂಪತ್ತಿನೊಡನೆ ತನ್ನ ಅಕ್ಕನನ್ನು ಕೌರವನಿಗೋಸ್ಕರ ಕರೆತಂದನು. ತಕ್ಕುದಾದ ಬಳುವಳಿಗಳೊಂದಿಗೆ ತನ್ನ ಅಕ್ಕನನ್ನಿತ್ತು ಭೀಷ್ಮನಿಂದ ಸತ್ಕರಿಸಲ್ಪಟ್ಟು ಆ ವೀರನು ತನ್ನ ನಗರಕ್ಕೆ ಹಿಂದಿರುಗಿದನು. ವರಾರೋಹೆ ಗಾಂಧಾರಿಯು ಶೀಲಾಚಾರ ವಿಚೇಷ್ಠೆಗಳಿಂದ ಕುರುಗಳೆಲ್ಲರನ್ನೂ ಸಂತುಷ್ಟಗೊಳಿಸಿದಳು. ಅವರೆಲ್ಲರನ್ನೂ ತನ್ನ ನಡವಳಿಕೆಯಲ್ಲಿ ಆರಾಧಿಸಿದಳು. ಅವಳು ಎಷ್ಟು ಪತಿವ್ರತೆಯಾಗಿದ್ದಳೆಂದರೆ ಆ ಸುವ್ರತೆಯು ಅನ್ಯ ಪುರುಷರ ಕುರಿತು ಮಾತನ್ನೂ ಆಡುತ್ತಿರಲಿಲ್ಲ.

## ಕುಂತಿ-ಕರ್ಣ

ವಸುದೇವನ ತಂದೆ ಶೂರ ಎಂಬ ಹೆಸರಿನ ಯದುಶ್ರೇಷ್ಠನಿದ್ದನು. ಅವನಿಗೆ ಭುವಿಯಲ್ಲಿಯೆ ರೂಪದಲ್ಲಿ ಅಸದೃಶ ಪೃಥಾ ಎಂಬ ಹೆಸರಿನ ಮಗಳಿದ್ದಳು. ಆ ವೀರ್ಯವಂತನು ಮಕ್ಕಳನ್ನು ಹೊಂದಿರದಿದ್ದ ತಂದೆಯ ತಂಗಿಯ ಮಗನಿಗೆ ತನ್ನ ಮೊದಲ ಮಗುವನ್ನು ಕೊಡುತ್ತೇನೆಂದು ಪ್ರತಿಜ್ಞೆ ಮಾಡಿಕೊಂಡಿದ್ದನು. ಆ

ಹಿರಿಯ ಮಗಳನ್ನು ಪಡೆಯಲು ಬಯಸಿದ ಸಖ ಮಹಾತ್ಮ ಕುಂತಿಭೋಜನಿಗೆ ಕೊಟ್ಟನು. ಹೊಸ ತಂದೆಯ ಮನೆಯಲ್ಲಿ ಅವಳು ದೇವತೆ ಮತ್ತು ಅತಿಥಿಪೂಜನೆಯಲ್ಲಿ ನಿರತಳಾಗಿದ್ದಳು. ಹೀಗಿರುವಾಗ ಒಮ್ಮೆ ಅವಳು ಪರ್ಯಟಿಸುತ್ತಾ ಬಂದ ಸಂಶಿತವ್ರತ, ನಿಗೂಢ ಧರ್ಮನಿಶ್ಚಯಿ, ಉಗ್ರ, ಘೋರ ಬ್ರಾಹ್ಮಣ ದುರ್ವಾಸನನ್ನು ಸತ್ಕರಿಸುವ ಅವಕಾಶವನ್ನು ಪಡೆದುಕೊಂಡಳು. ಆ ಉಗ್ರ ಸಂಶಿತಾತ್ಮನನ್ನು ಸರ್ವಯತ್ನಗಳಿಂದ ತೃಪ್ತಿಗೊಳಿಸಿದಳು. ಮುಂದೆ ಬರಬಹುದಾದ ಆಪತ್ತನ್ನು ಕಂಡ ಆ ಮುನಿಯು ಅವಳಿಗೆ ಅಭಿಚಾರ ಸಂಯುಕ್ತ ಮಂತ್ರಗಳನ್ನಿತ್ತು ಹೇಳಿದನು:

> “ಈ ಮಂತ್ರಗಳಿಂದ ನೀನು ಯಾವ ಯಾವ ದೇವತೆಯನ್ನು ಆಹ್ವಾನಿಸುತ್ತೀಯೋ ಆಯಾ ದೇವತೆಗಳ ಪ್ರಸಾದದಿಂದ ನಿನಗೆ ಪುತ್ರರಾಗುತ್ತಾರೆ.”

ವಿಪ್ರನ ಈ ಮಾತುಗಳನ್ನು ಕೇಳಿ ಕುತೂಹಲಗೊಂಡ ಆ ಯಶಸ್ವಿನೀ ಸತಿ ಕನ್ಯೆಯು ಅರ್ಕದೇವನನ್ನು ಅಹ್ವಾನಿಸಿದಳು. ಆಗ ಅಲ್ಲಿ ಅವಳು ಲೋಕಭಾವನ ಭಾಸ್ಕರನು ಬರುತ್ತಿರುವುದನ್ನು ನೋಡಿದಳು. ಆ ಮಹದದ್ಭುತವನ್ನು ನೋಡಿದ ಆ ಅನವದ್ಯಾಂಗಿಯು ವಿಸ್ಮಿತಳಾದಳು. ಆ ಪ್ರಕಾಶಕರ್ಮಿ ತಪನನು ಅವಳಿಗೆ ಗರ್ಭವನ್ನಿತ್ತನು. ಅವನಿಂದ ಸರ್ವಶಸ್ತ್ರಿಗಳಲ್ಲಿ ಶ್ರೇಷ್ಠ, ಕವಚಧಾರಿ, ಶ್ರಿಯಾವೃತ, ಶ್ರೀಮಾನ್ ದೇವಗರ್ಭ ವೀರನನ್ನು ಪಡೆದಳು. ಸರ್ವ



ಲೋಕಗಳಲ್ಲಿ ಕರ್ಣನೆಂದು ವಿಶ್ರುತ ಈ ಮಗನು ಸಹಜ ಕವಚ ಮತ್ತು ಮುಖವನ್ನು ಬೆಳಗಿಸುತ್ತಿದ್ದ ಹೊಳೆಯುವ ಕುಂಡಲಗಳನ್ನು ಧರಿಸಿಯೇ ಹುಟ್ಟಿದನು. ಆ ಪರಮದ್ಯುತಿಯು ಕೊಡುವುದರಲ್ಲೆಲ್ಲಾ ಶ್ರೇಷ್ಠ ಕೊಡುಗೆಯನ್ನಿತ್ತು ಅವಳ ಕನ್ಯತ್ವವನ್ನು ಪುನಃ ಹಿಂದಿರುಗಿಸಿ ಆಕಾಶವನ್ನು ಸೇರಿದನು. ಬಂಧುಪಕ್ಷಗಳ ಭಯದಿಂದ ಮತ್ತು ಅಪಚಾರವನ್ನು ಮುಚ್ಚಿಡುವುದಕ್ಕಾಗಿ ಕುಂತಿಯು ಆ ಸಲಕ್ಷಣ ಕುಮಾರನನ್ನು ನೀರಿನಲ್ಲಿ ಬಿಟ್ಟಳು. ಬಿಸುಟಲ್ಪಟ್ಟ ಆ ಮಗುವನ್ನು ಮಹಾಯಶಸ್ವಿ ರಾಧೆಯ ಪತಿಯು ತನ್ನ ಪತ್ನಿಯೊಂದಿಗೆ ತಮ್ಮದೇ ಮಗುವೆಂದು ಸ್ವೀಕರಿಸಿದನು. ಹೀಗೆ ಅವನು ಸೂತನಂದನನೆಂದು ತಿಳಿಯಲ್ಪಟ್ಟನು. ವಸುವಿನ ಸಹಿತ ಹುಟ್ಟಿದ ಇವನು ವಸುಷೇಣನೆಂದಾಗಲಿ ಎಂದು ಅವರು ಆ ಬಾಲಕನಿಗೆ ಹೆಸರನ್ನಿಟ್ಟರು. ದೊಡ್ಡವನಾಗುತ್ತಿದ್ದಂತೆ ಅವನು ಸರ್ವಶಸ್ತ್ರಗಳಿಂದಲೂ ಹೋರಾಡುವ ಬಲಶಾಲಿಯಾದನು. ಆ ವೀರ್ಯವಂತನು ತನ್ನ ಬೆನ್ನು ಸುಡುವವರೆಗೂ ಆದಿತ್ಯನನ್ನು ಉಪಾಸಿಸುತ್ತಿದ್ದನು. ಜಪವನ್ನಾಚರಿಸುತ್ತಿದ್ದ ಸಮಯದಲ್ಲಿ ಆ ಸತ್ಯಸಂಗರ ಮಹಾತ್ಮ ವೀರನು ಬ್ರಾಹ್ಮಣರಿಗೆ ಏನನ್ನೂ ನಿರಾಕರಿಸುತ್ತಿರಲಿಲ್ಲ. ಒಮ್ಮೆ ಭೂತಭಾವನ ಇಂದ್ರನು ಬ್ರಾಹ್ಮಣನಾಗಿ ಬಂದು ಭಿಕ್ಷೆಯಾಗಿ ಆ ಮಹಾದ್ಯುತಿಯ ಕವಚ ಕುಂಡಲಗಳನ್ನು ಪ್ರಾರ್ಥಿಸಿದನು. ಏನನ್ನೂ ಯೋಚಿಸದೇ ಖಡ್ಗದಿಂದ ರಕ್ತಸುರಿಯುತ್ತಿರುವ ಕವಚವನ್ನು ಕಡಿದು, ಕರ್ಣಗಳಿಂದ

ಕುಂಡಲಗಳನ್ನು ಕಿತ್ತು ಅವನಿಗೆ ಅಂಜಲೀ ಬದ್ಧನಾಗಿ ಕೊಟ್ಟನು. ವಿಸ್ಮಿತ ಶಕ್ರನು ಅವನಿಗೆ ಶಕ್ತಿಯನ್ನಿತ್ತು ಹೇಳಿದನು:

> "ದೇವ, ಅಸುರ, ಮನುಷ್ಯ ಅಥವಾ ಗಂಧರ್ವ ಉರಗ ರಾಕ್ಷರು ಯಾರ ಮೇಲೆ ನೀನು ಇದನ್ನು ಎಸೆಯುತ್ತೀಯೋ ಅವರು ಗಾಯಗೊಂಡು ಸಾಯುತ್ತಾರೆ."

ಅವನ ಮೊದಲನೆಯ ಹೆಸರು ವಸುಷೇಣ ಎಂದು ಇತ್ತು. ಆದರೆ ಅವನ ಕರ್ಮದಿಂದ ಅವನು ವೈಕರ್ತನ ಕರ್ಣನಾದನು.

## ಕುಂತಿ-ಪಾಂಡು-ಮಾದ್ರಿ

ಕುಂತಿಭೋಜನ ಮಗಳು ರೂಪಸತ್ವಗುಣೋಪೇತಳಾಗಿದ್ದಳು. ಧರ್ಮನಿರತಳೂ ಮಹಾ ವ್ರತನಿರತಳೂ ಆಗಿದ್ದಳು. ಅವಳ ತಂದೆಯು ಅವಳ ಸ್ವಯಂವರವನ್ನು ಏರ್ಪಡಿಸಿದನು. ಸಹಸ್ರಾರು ಭೂಮಿಪಾಲರ ಮಧ್ಯೆ ಸಿಂಹದಂಷ್ಟ್ರ, ಗಜಸ್ಕಂಧ, ಋಷಭಾಕ್ಷ, ಮಹಾಬಲಶಾಲಿ ಪಾಂಡುವನ್ನು ನೋಡಿ ಮೆಚ್ಚಿದಳು. ಆ ಅಮಿತಸೌಭಾಗ್ಯಶಾಲಿ ಕುರುನಂದನನು ಕುಂತಿಭೋಜನ ಮಗಳನ್ನು ಇಂದ್ರನು ಪೌಲೋಮಿಯನ್ನು ಸೇರಿದಂತೆ ಸೇರಿದನು. ನಂತರ ದೇವವ್ರತ ಭೀಷ್ಮನು ಮದ್ರರ ರಾಜಧಾನಿಗೆ ಹೋಗಿ ಅಲ್ಲಿಂದ ಮೂರೂ ಲೋಕಗಳಲ್ಲಿ ವಿಶ್ರುತ, ರೂಪದಲ್ಲಿ ಭುವಿಯಲ್ಲಿಯೇ ಅಸದೃಶಳೆಂದು ಸರ್ವರಾಜರುಗಳಲ್ಲಿ ವಿಖ್ಯಾತ, ಮದ್ರಪತಿಯ

ಮಗಳು ಮಾದ್ರಿಯನ್ನು ಪಾಂಡುವಿಗೋಸ್ಕರ ಬಹಳಷ್ಟು ಧನವನ್ನಿತ್ತು ಖರೀದಿಸಿ ತಂದು ಮಹಾತ್ಮ ಪಾಂಡುವಿನೊಡನೆ ಅವಳ ವಿವಾಹವನ್ನು ನೆರವೇರಿಸಿದನು. ಸಿಂಹೋರಸ್ಕ, ಗಜಸ್ಕಂಧ, ಋಷಭಾಕ್ಷ ಮನಸ್ವಿ ನರವ್ಯಾಘ್ರ ಪಾಂಡುವನ್ನು ನೋಡಿ ಭೂಮಿಯ ನರರೆಲ್ಲರೂ ವಿಸ್ಮಿತರಾಗಿದ್ದರು. ವಿವಾಹಿತ ಪಾಂಡುವು ಬಲೋತ್ಸಾಹ ಸಮನ್ವಿತನಾಗಿ ಇಡೀ ಭೂಮಿಯನ್ನೇ ಗೆಲ್ಲುವ ಉದ್ದೇಶದಿಂದ ಅನೇಕ ಶತ್ರುಗಳನ್ನು ಎದುರಿಸಿ ಹೋದನು. ಮೊದಲು ಅಗಸ್ಕೃತ ದಶಾರ್ಣರ ಬಳಿ ಹೋದ ಆ ಕೌರವರ ಯಶಸ್ಸನ್ನು ವೃದ್ಧಿಸುವ ನರಸಿಂಹ ಪಾಂಡುವು ಅವರನ್ನು ಸಮರದಲ್ಲಿ ಜಯಿಸಿದನು. ಅನಂತರ ಪಾಂಡುವು ನಾನಾ ವಿಧದ ಧ್ವಜಗಳನ್ನೂ, ಹಸ್ತಿ, ಅಶ್ವರಥಗಳನ್ನೂ, ಕಾಲಾಳುಗಳ ಗಣಸಂಕುಲಗಳನ್ನೂ ಕೂಡಿದ ಸೇನೆಯನ್ನು ತೆಗೆದುಕೊಂಡು ಹೊರಟನು. ಸರ್ವ ವೀರರ, ಸರ್ವ ರಾಜರ ವೈರಿ ಮಗಧರಾಷ್ಟ್ರದ ದುಷ್ಟ ರಾಜ ದಾರ್ವನನ್ನು ರಾಜಗೃಹದಲ್ಲಿ ಸಂಹರಿಸಿದನು. ಅಲ್ಲಿಯ ಕೋಶ, ವಾಹನಗಳು, ಮತ್ತು ಸೇನೆಗಳನ್ನು ತೆಗೆದುಕೊಂಡು ಪಾಂಡುವು ಮಿಥಿಲೆಗೆ ಹೋಗಿ ಅಲ್ಲಿ ವಿದೇಹರನ್ನು ಸಮರದಲ್ಲಿ ಜಯಿಸಿದನು. ಈ ರೀತಿ ಕುರುಗಳ ಯಶಸ್ಸನ್ನು ತನ್ನ ಬಾಹುಬಲವೀರ್ಯದಿಂದ ಆ ಭರತರ್ಷಭ ಪಾಂಡುವು ಕಾಶಿ ಮತ್ತು ಸುಹ್ಮರಲ್ಲಿ ಪಸರಿಸಿದನು. ಆ ಪಾವಕ ಸದೃಶ ಅರಿಂದಮ ಪಾಂಡುವಿನ ಮಹಾಜ್ವಾಲೆಯಂತೆ ಉರಿಯುತ್ತಿರುವ ಶರ ಮತ್ತು ಅಸ್ತ್ರಗಳಿಗೆ ಸಿಲುಕಿದ ನರಾಧಿಪರೆಲ್ಲರೂ

ಸುಟ್ಟು ಭಸ್ಮವಾದರು. ಆ ನೃಪರು ಪಾಂಡು ಮತ್ತು ಅವನ ಸೇನೆಯಿಂದ ವಿಧ್ವಂಸಗೊಂಡು ಅಬಲರಾಗಿ ವಶಪಡಿಸಲ್ಪಟ್ಟು ಕಪ್ಪ ಕಾಣಿಕೆಗಳನ್ನು ಕೊಡುವಂತಾದರು. ಅವನಿಂದ ಜಯಿಸಲ್ಪಟ್ಟ ಇಡೀ ಪೃಥ್ವಿಯ ಸರ್ವ ಪಾರ್ಥಿವರೂ ದೇವತೆಗಳಲ್ಲಿ ಪುರಂದರನು ಹೇಗೋ ಹಾಗೆ ಅವನೊಬ್ಬನೇ ಶೂರನೆಂದು ಮನ್ನಿಸಿದರು. ಸರ್ವ ವಸುಧಾಧಿಪರೂ ಅಂಜಲೀ ಬದ್ಧರಾಗಿ ಅವನನ್ನು ನಮಸ್ಕರಿಸಲು ಧನ, ವಿವಿಧ ರತ್ನಗಳು, ಮಣಿ, ಮುಕ್ತಾ ಪ್ರವಾಲ, ಸುವರ್ಣ, ರಜತ, ಗೋರತ್ನ, ಅನ್ಯ ರತ್ನಗಳು, ರಥ ರತ್ನಗಳು, ಕುಂಜರಗಳು, ಕತ್ತೆಗಳು, ಎಮ್ಮೆಗಳು, ಕುದುರೆಗಳು, ಮತ್ತು ಇನ್ನೂ ಅನೇಕ ಪ್ರಾಣಿಗಳು ಇವೆಲ್ಲವನ್ನೂ ತೆಗೆದುಕೊಂಡು ನಾಗಪುರಾಧಿಪ ರಾಜನಲ್ಲಿಗೆ ಬಂದರು. ಇವೆಲ್ಲವುಗಳನ್ನು ತೆಗೆದುಕೊಂಡು ತನ್ನ ಸೇನೆಯನ್ನೊಡಗೂಡಿ ತನ್ನ ರಾಷ್ಟ್ರಕ್ಕೆ ಹರ್ಷವನ್ನೀಯುತ್ತಾ ತನ್ನ ಪುರ ಗಜಸಾಹ್ವಯವನ್ನು ಪ್ರವೇಶಿಸಿದನು. ಕಳೆದುಹೋಗಿದ್ದ ರಾಜಸಿಂಹ ಶಂತನು ಮತ್ತು ಧೀಮಂತ ಭರತನ ವಿಜಯ ದುಂದುಭಿಯನ್ನು ಪಾಂಡುವು ಪುನಃ ಕೇಳಿಬರುವಂತೆ ಮಾಡಿದನು. ಹಿಂದೆ ಕುರು ರಾಷ್ಟ್ರಗಳನ್ನು ಮತ್ತು ಕುರು ಸಂಪತ್ತನ್ನು ತೆಗೆದುಕೊಂಡಿದ್ದವರೆಲ್ಲರನ್ನೂ ನಾಗಪುರಸಿಂಹ ಪಾಂಡುವು ಕರವನ್ನು ಕೊಡುವವರಂತೆ ಮಾಡಿದನು. ಅಲ್ಲಿ ಸೇರಿದ್ದ ರಾಜರು ಮತ್ತು ರಾಜ ಅಮಾತ್ಯರು, ಪ್ರತೀತಮನಸ ಹೃಷ್ಟ ನಗರ ಮತ್ತು ಗ್ರಾಮೀಣ ಜನರು ಎಲ್ಲರೂ ಸೇರಿ ಇದೇ ರೀತಿಯ ಮಾತುಗಳನ್ನಾಡುತ್ತಿದ್ದರು.

ಅವನು ಹಿಂದಿರುಗಿದಾಗ ಭೀಷ್ಮನ ಮುಂದಾಳತ್ವದಲ್ಲಿ ಎಲ್ಲರೂ ಅವನನ್ನು ಭೆಟ್ಟಿಯಾಗಲು ಹೊರ ಬಂದರು. ನಾಗಪುರದ್ವಾರಗಳು ಇನ್ನೂ ಸ್ವಲ್ಪದೂರದಲ್ಲಿದೆ ಎನ್ನುತ್ತಿರುವಂತೆಯೇ ಅಲ್ಲಿ ಸೇರಿದ್ದ ಜನರು ಹರ್ಷಿತರಾಗಿ ಮಹಾ ಸಾಗರದಂತೆ ರತ್ನಗಳನ್ನು ನಾನಾ ವಾಹನಗಳಲ್ಲಿರಿಸಿಕೊಂಡು. ಅತ್ಯುತ್ತಮ ಆನೆ, ಕುದುರೆಗಳು, ರಥರತ್ನಗಳು, ಹಸುಗಳು, ಒಂಟೆಗಳು, ಮತ್ತು ಕುರಿಗಳನ್ನೂ ಕರೆದುಕೊಂಡು ಬರುತ್ತಿರುವ ನಾನಾ ಪ್ರದೇಶಗಳ ಜನರನ್ನು ನೋಡಿ ಹರ್ಷಿತರಾದರು. ಭೀಷ್ಮನೊಂದಿಗೆ ಬಂದಿದ್ದ ಕೌರವರು ಅಂತ್ಯವೇ ಕಾಣದಂಥಹ ಈ ಅಸಾಧ್ಯ ಪಡೆಯನ್ನು ನೋಡಿದರು. ಅವನು ತಂದೆಯ ಪಾದಗಳಿಗೆ ನಮಸ್ಕರಿಸಿ ಕೌಸಲ್ಯೆಯ ಖುಷಿಯನ್ನು ಹೆಚ್ಚಿಸಿದನು. ಪೌರಜನರನ್ನೂ ಕೂಡ ಯಥಾರ್ಹವಾಗಿ ಮನ್ನಿಸಿದನು. ಪರರಾಷ್ಟ್ರಗಳನ್ನು ಸೋಲಿಸಿ ಕೃತಾರ್ಥನಾಗಿ ಹಿಂದಿರುಗಿದ ಪುತ್ರನನ್ನು ಪಡೆದ ಭೀಷ್ಮನಾದರೂ ಹರ್ಷದಿಂದ ಕಣ್ಣೀರು ಸುರಿಸಿದನು. ನೂರಾರು ತೂರ್ಯ ಭೇರಿಗಳ ಮಹಾನಾದದೊಂದಿಗೆ ಸರ್ವ ಪೌರರನ್ನೂ ಸಂತೋಷಗೊಳಿಸುತ್ತಾ ಅವನು ಗಜಸಾಹ್ವಯವನ್ನು ಪ್ರವೇಶಿಸಿದನು.

ಧೃತರಾಷ್ಟ್ರನ ಅನುಜ್ಞೆಯಂತೆ ತನ್ನ ಬಾಹುಬಲದಿಂದ ಗೆದ್ದಿದ್ದ ಧನವನ್ನು ಭೀಷ್ಮ, ಸತ್ಯವತಿ ಮತ್ತು ತಾಯಂದಿರಿಗೆ ಸಮರ್ಪಿಸಿದನು. ಪಾಂಡುವು ಆ ಧನವನ್ನು ವಿದುರನಿಗೂ ಕೂಡ ಕಳುಹಿಸಿಕೊಟ್ಟನು. ಆ

ಧರ್ಮಾತ್ಮನು ತನ್ನ ಸುಹೃದಯರನ್ನೂ ಧನವನ್ನಿತ್ತು ತೃಪ್ತಿಗೊಳಿಸಿದನು. ನಂತರ ಭೀಷ್ಮನು ಪಾಂಡುವು ಗೆದ್ದು ತಂದಿದ್ದ ರತ್ನಗಳಿಂದ ಸತ್ಯವತಿ ಮತ್ತು ಯಶಸ್ವಿನಿ ಶುಭೆ ಕೌಸಲ್ಯೆಯರನ್ನೂ ಸಂತುಷ್ಟಗೊಳಿಸಿದನು. ಆನಂದಿತ ತಾಯಿ ಕೌಸಲ್ಯೆಯು ಆ ನರರ್ಷಭ ಅಪ್ರತಿಮ ತೇಜಸ್ವಿಯನ್ನು ಪೌಲೋಮಿಯು ಜಯಂತನನ್ನು ಹೇಗೋ ಹಾಗೆ ಆಲಂಗಿಸಿದಳು. ಆ ವೀರ ವಿಕ್ರಾಂತನು ಗೆದ್ದು ಬಂದಿದ್ದ ಧನದಿಂದ ಧೃತರಾಷ್ಟ್ರನು ನೂರು ಸಾವಿರ ದಕ್ಷಿಣೆಗಳನ್ನೊಡಗೂಡಿದ, ನೂರು ಅಶ್ವಮೇಧ ಯಜ್ಞಗಳಿಗೆ ಸರಿಸಾಟಿ ಮಹಾ ಯಜ್ಞಗಳನ್ನು ನೆರವೇರಿಸಿದನು. ಬಿಡುವಿನ ವೇಳೆಯನ್ನು ಗಳಿಸಿದ್ದ ಭರತರ್ಷಭ ಪಾಂಡುವು ಕುಂತಿ ಮತ್ತು ಮಾದ್ರಿಗಳ ಜೊತೆ ವನವಿಹಾರಕ್ಕೆಂದು ಹೋದನು. ಬೇಟೆಯಲ್ಲಿ ಆಸಕ್ತಿಯನ್ನು ಹೊಂದಿದ್ದ ಅವನು ಅರಮನೆ ಮತ್ತು ಸುಂದರ ಶಯನಗಳನ್ನು ಪರಿತ್ಯಜಿಸಿ, ಅರಣ್ಯದಲ್ಲಿಯೇ ವಾಸಿಸಿ ನಿತ್ಯವೂ ಬೇಟೆಯಾಡುತ್ತಿದ್ದನು. ಅವನು ರಮ್ಯ ಹಿಮಾಲಯ ಗಿರಿಯ ದಕ್ಷಿಣ ಇಳುಕಲಿನಲ್ಲಿ, ಗಿರಿಪೃಷ್ಟಗಳಲ್ಲಿ, ಮಹಾಶಾಲಗಳ ವನಗಳಲ್ಲಿ ವಾಸಿಸತೊಡಗಿದನು. ಆ ವನದಲ್ಲಿ ಕುಂತಿ ಮತ್ತು ಮಾದ್ರಿಗಳೊಡನೆ ವಾಸಿಸುತ್ತಿದ್ದ ಪಾಂಡುವು ಎರಡು ಹೆಣ್ಣಾನೆಗಳ ಮದ್ಯೆ ಇರುವ ಶ್ರೀಮಾನ್ ಗಜೇಂದ್ರನಂತೆ ರಂಜಿಸಿದನು. ಬಾಣಖಡ್ಗಧನುರ್ಧರನಾಗಿ, ವಿಚಿತ್ರಕವಚಧಾರಿಯಾಗಿ ದೇವನಂತೆ ತನ್ನ ಪತ್ನಿಯರೊಂದಿಗೆ ಚಲಿಸುತ್ತಿರುವ ಆ ವೀರ,

ಪರಮಾಸ್ತ್ರಕೋವಿದ ನೃಪ ಭಾರತನನ್ನು ವನವಾಸಿಗಳು ಕಂಡರು. ಅವನ ಕಾಮ-ಭೋಗಗಳಿಗೆ ಬೇಕಾದುದೆಲ್ಲವನ್ನೂ, ಧೃತರಾಷ್ಟ್ರನ ಹೇಳಿಕೆಯಂತೆ, ಸ್ವಲ್ಪವೂ ಆಯಾಸ ಹೊಂದದ ಜನರು ನಿತ್ಯವೂ ಆ ವನಪ್ರದೇಶಕ್ಕೆ ತಂದು ಕೊಡುತ್ತಿದ್ದರು. ಆಗ ಆಪಗಸುತ ಭೀಷ್ಮನು ಮಹೀಪತಿ ದೇವಕನಿಗೆ ಬೇರೆಯವಳಲ್ಲಿ ಹುಟ್ಟಿದ್ದ ರೂಪಯೌವನಸಂಪನ್ನ ಕನ್ಯೆಯ ಕುರಿತು ಕೇಳಿದನು. ಆ ಪುರುಷರ್ಷಭನು ಅವಳನ್ನು ವರಿಸಿ ಕರೆದುಕೊಂಡು ಬಂದು ಮಹಾಮತಿ ವಿದುರನಿಗೆ ವಿವಾಹ ಮಾಡಿಸಿದನು. ಕುರುನಂದನ ವಿದುರನು ಅವಳಲ್ಲಿ, ಗುಣಗಳಲ್ಲಿ ತನ್ನ ಹಾಗೆಯೇ ಇದ್ದ, ವಿನಯಸಂಪನ್ನ ಪುತ್ರರಿಗೆ ಜನ್ಮವಿತ್ತನು.

# ಕೌರವ-ಪಾಂಡವರ ಜನನ; ಬಾಲ್ಯ

## ದುರ್ಯೋಧನಾದಿ ಕೌರವರ ಜನನ

ನಂತರ ಗಾಂಧಾರಿಯಲ್ಲಿ ಧೃತರಾಷ್ಟ್ರನ ನೂರು ಪುತ್ರರು ಮತ್ತು ನೂರಾ ಒಂದನೆಯವನು ವೈಶ್ಯೆಯೊಬ್ಬಳಲ್ಲಿ ಜನಿಸಿದರು. ಪಾಂಡುವಿಗೆ ಕುಂತಿ ಮತ್ತು ಮಾದ್ರಿಯರಲ್ಲಿ ಕುಲಸಂತಾನಾರ್ಥವಾಗಿ ದೇವತೆಗಳಿಂದ ಐವರು ಮಹಾರಥಿ ಪುತ್ರರು ಜನಿಸಿದರು.

ಒಮ್ಮೆ ಹಸಿದು ಬಳಲಿ ಬಂದಿದ್ದ ದ್ವೈಪಾಯನನನ್ನು ಗಾಂಧಾರಿಯು

ತೃಪ್ತಿಗೊಳಿಸಿದಳು. ವ್ಯಾಸನು ಅವಳಿಗೆ ವರವನ್ನಿತ್ತನು. ಅವಳು ತನಗಾಗಿ ತನ್ನ ಪತಿ ಸಮಾನ ನೂರು ಪುತ್ರರನ್ನು ಕೇಳಿದಳು. ಸ್ವಲ್ಪ ಸಮಯದ ನಂತರ ಅವಳು ಧೃತರಾಷ್ಟ್ರನಿಂದ ಗರ್ಭವತಿಯಾದಳು. ಎರಡು ವರ್ಷಗಳ ಪರ್ಯಂತ ಮಕ್ಕಳನ್ನು ಹಡೆಯದೆ ಗಾಂಧಾರಿಯು ಗರ್ಭವತಿಯಾಗಿಯೇ ಇದ್ದಳು. ಇದರಿಂದ ಅವಳು ದುಃಖಿತಳಾದಳು. ಕುಂತಿಗೆ ಬಾಲಾರ್ಕಸಮತೇಜಸ್ವಿ ಸುತನು ಜನಿಸಿದನೆಂದು ಕೇಳಿದ ಅವಳು ತನ್ನ ಹೊಟ್ಟೆಯು ಇನ್ನೂ ಗಟ್ಟಿಯಾಗಿಯೇ ಇರುವುದನ್ನು ನೋಡಿ ಚಿಂತಿಸಿದಳು. ಧೃತರಾಷ್ಟ್ರನಿಗೆ ತಿಳಿಯದಂತೆ ಸಾಕಷ್ಟು ಪ್ರಯತ್ನಪಟ್ಟು ತನ್ನ ಗರ್ಭಪಾತ ಮಾಡಿಕೊಂಡು ದುಃಖದಿಂದ ಮೂರ್ಛಿತಳಾದಳು. ಹೆಪ್ಪುಗಟ್ಟಿದ ರಕ್ತದ ಹಾಗಿನ ಒಂದು ಮಾಂಸದ ಮುದ್ದೆಯು ಹೊರಬಂದಿತು. ಎರಡು ವರ್ಷಗಳು ತನ್ನ ಹೊಟ್ಟೆಯಲ್ಲಿ ಹೊತ್ತು ಬಂದಿದ್ದ ಅದನ್ನು ಬಿಸಾಡಲು ಮುಂದಾದಳು. ಇದನ್ನು ತಿಳಿದ ಜಪಿಗಳಲ್ಲಿ ಶ್ರೇಷ್ಠ ದ್ವೈಪಾಯನನು ತಕ್ಷಣವೇ ಅಲ್ಲಿಗೆ ಬಂದು ಆ ಮಾಂಸದ ಮುದ್ದೆಯನ್ನು ನೋಡಿದನು.

“ಏಕೆ ಹೀಗೆ ಮಾಡಿದೆ?” ಎಂದು ಅವನು ಸೌಬಲಿಯಲ್ಲಿ ಕೇಳಿದನು. ಅವಳು ತನ್ನ ಮನಸ್ಸಿನಲ್ಲಿದ್ದ ಸತ್ಯವನ್ನು ಆ ಪರಮ ಋಷಿಗೆ ತಿಳಿಸಿದಳು:

> “ರವಿಸಮಪ್ರಭ ಜ್ಯೇಷ್ಠ ಕುಂತೀಸುತನು ಜನಿಸಿದ್ದುದನ್ನು
> ಕೇಳಿ ಪರಮ ದುಃಖಗೊಂಡು ನನ್ನ ಗರ್ಭವನ್ನು

ಕೆಳಗುರುಳಿಸಿದೆ. ಹಿಂದೆ ನೀನು ನನಗೆ ನೂರು ಪುತ್ರರನ್ನು ವರವಾಗಿ ಕೊಟ್ಟಿದ್ದೆ. ಆದರೆ ಆ ಪುತ್ರಶತರ ಬದಲಾಗಿ ಈ ಮಾಂಸದ ಪಿಂಡಿಯು ಹುಟ್ಟಿದೆ!"

ವ್ಯಾಸನು ಹೇಳಿದನು:

"ಗಾಂಧಾರಿ! ಅದು ಹಾಗೆಯೇ ಆಗುತ್ತದೆ. ಬೇರೆ ಯಾವರೀತಿಯೂ ಆಗುವುದಿಲ್ಲ. ಈ ಹಿಂದೆ ತಮಾಷೆಯಾಗಿಯೂ ನಾನು ಸುಳ್ಳನ್ನು ಹೇಳಲಿಲ್ಲ. ಈಗ ತಾನೇ ಹೇಗೆ ಸುಳ್ಳನ್ನು ಹೇಳಲಿ? ತಕ್ಷಣವೇ ತುಪ್ಪದಿಂದ ತುಂಬಿದ ನೂರು ಕುಂಡಗಳನ್ನು ತರಿಸು. ಮತ್ತು ಈ ಪಿಂಡದ ಮೇಲೆ ತಣ್ಣೀರನ್ನು ಚುಮುಕಿಸು."

ಈ ರೀತಿ ನೀರಿನಿಂದ ತೋಯಿಸಿದಾಗ ಆ ಪಿಂಡವು ಒಂದೊಂದೂ ಒಂದು ಬೆರಳಿನ ಗಾತ್ರದ ಒಂದು ನೂರು ಭ್ರೂಣಗಳಾಗಿ ಒಡೆಯಿತು. ಹೀಗೆ ಒಂದರ ನಂತರ ಇನ್ನೊಂದರಂತೆ ಒಂದುನೂರಾ ಒಂದು ಪೂರ್ಣ ಗರ್ಭಗಳಾದವು. ಅವನು ಆ ಗರ್ಭಪಿಂಡಗಳನ್ನು ಪ್ರತ್ಯೇಕ ಕುಂಡಗಳಲ್ಲಿರಿಸಿ ಅವುಗಳನ್ನು ಗುಪ್ತ ಸ್ಥಳಗಳಲ್ಲಿ ಇಟ್ಟು ಕಾವಲಿರಿಸಿದನು. ಆ ಭಗವಾನನು ಸೌಬಲಿಗೆ ಎಷ್ಟು ಸಮಯದ ನಂತರ ಪುನಃ ಆ ಕುಂಡಗಳನ್ನು ಒಡೆಯ ಬೇಕು ಎನ್ನುವುದನ್ನು ಹೇಳಿ ಕೊಟ್ಟನು. ಈ ರೀತಿ ಸೂಚನೆಗಳನ್ನಿತ್ತು ಧೀಮಾನ್ ಭಗವಾನ್ ವ್ಯಾಸನು ಶಿಲೋಚ್ಛಯ ಹಿಮಾಲಯಕ್ಕೆ ತಪಸ್ಸಿಗೆಂದು ಹೋದನು.

ಕ್ರಮೇಣ ಅವುಗಳಿಂದ ನೃಪ ದುರ್ಯೋಧನನು ಜನಿಸಿದನು. ಆದರೆ ಮೊದಲೇ ಹುಟ್ಟಿದ್ದ ಜ್ಯೇಷ್ಠ ಯುಧಿಷ್ಠಿರನು ರಾಜನಾದನು. ಆ ಪುತ್ರನು ಜನಿಸಿದಾಕ್ಷಣ ಧೃತರಾಷ್ಟ್ರನು ಬಹಳ ವಿಪ್ರರು ಮತ್ತು ಭೀಷ್ಮ ವಿದುರರನ್ನು ಕರೆಯಿಸಿ ಹೇಳಿದನು:

> "ಕುಲವರ್ಧನ ಯುಧಿಷ್ಠಿರನು ಜ್ಯೇಷ್ಠ ರಾಜಪುತ್ರನು. ತನ್ನ ಗುಣಗಳಿಂದಾಗಿ ಅವನು ರಾಜ್ಯವನ್ನು ಪಡೆದರೆ ಅದರಲ್ಲಿ ನಾವು ಏನನ್ನೂ ಹೇಳುವಂತಿಲ್ಲ. ಆದರೆ ಅವನ ನಂತರ ಇವನು ರಾಜನಾಗುತ್ತಾನಲ್ಲವೇ? ಈ ವಿಷಯದಲ್ಲಿ ನಿಮ್ಮ ಸತ್ಯ ನಿರ್ಧಾರವೇನೆಂಬುದನ್ನು ಹೇಳಿ."

ಈ ಮಾತುಗಳನ್ನಾಡಿ ನಿಲ್ಲಿಸುತ್ತಿದ್ದಂತೆಯೇ ಎಲ್ಲ ದಿಕ್ಕುಗಳಲ್ಲಿಯೂ ಹದ್ದು ತೋಳಗಳ ಅಶುಭ ಘೋರ ಆಕ್ರಂದನಗಳು ಕೇಳಿಬಂದವು. ಎಲ್ಲೆಡೆಯೂ ಕಂಡು ಬರುತ್ತಿರುವ ಆ ಘೋರ ನಿಮಿತ್ತಗಳನ್ನು ವೀಕ್ಷಿಸಿದ ಬ್ರಾಹ್ಮಣರು ಮತ್ತು ಮಹಾಮತಿ ವಿದುರನು ಹೇಳಿದರು:

> "ನಿನ್ನ ಈ ಮಗನು ಕುಲದ ಅಂತ್ಯಕ್ಕೆ ಕಾರಣವಾಗುತ್ತಾನೆ ಎಂದು ವ್ಯಕ್ತವಾಗುತ್ತಿದೆ. ಅವನನ್ನು ಪರಿತ್ಯಜಿಸುವುದರಲ್ಲಿ ಶಾಂತಿ ಮತ್ತು ಪಾಲಿಸುವುದರಲ್ಲಿ ಮಹಾ ಆಪತ್ತು ಕಂಡುಬರುತ್ತಿದೆ. ತೊಂಬತ್ತೊಂಭತ್ತು ಪುತ್ರರನ್ನು ನಿನ್ನ ಹತ್ತಿರವೇ ಇಟ್ಟುಕೊಂಡು ಕುರು ಕುಲ ಮತ್ತು ಲೋಕಗಳ ಕ್ಷೇಮಾರ್ಥಕ್ಕಾಗಿ ಇದೊಂದು ಕೆಲಸವನ್ನು ಮಾಡು.

ಕುಲಕ್ಕಾಗಿ ಒಂದು ಪುತ್ರನನ್ನು ತ್ಯಜಿಸು. ಗ್ರಾಮಕ್ಕಾಗಿ ಒಂದು ಕುಲವನ್ನು ತ್ಯಜಿಸು. ಜನಪದಕ್ಕಾಗಿ ಒಂದು ಗ್ರಾಮವನ್ನು ತ್ಯಜಿಸು. ಮತ್ತು ಆತ್ಮದ ಸಲುವಾಗಿ ಪೃಥ್ವಿಯನ್ನೇ ತ್ಯಜಿಸು."

ಈ ರೀತಿ ವಿದುರ ಮತ್ತು ಸರ್ವ ದ್ವಿಜೋತ್ತಮರೂ ಹೇಳಿದರು. ಆದರೆ ಪುತ್ರಸ್ನೇಹಸಮನ್ವಿತ ರಾಜನು ಏನನ್ನೂ ಮಾಡಲಿಲ್ಲ. ಒಂದು ತಿಂಗಳಿನಲ್ಲಿಯೇ ಧೃತರಾಷ್ಟ್ರನ ಎಲ್ಲ ನೂರು ಪುತ್ರರೂ ಮತ್ತು ನೂರಾ ಒಂದನೆಯ ಕನ್ಯೆಯೂ ಜನಿಸಿದರು.

ಗಾಂಧಾರಿಯ ಹೊಟ್ಟೆಯು ಬೆಳೆಯುತ್ತಿದ್ದು ಕಷ್ಟದಲ್ಲಿದ್ದಾಗ ವೈಶ್ಯೆಯೋರ್ವಳು ಮಹಾಬಾಹು ಧೃತರಾಷ್ಟ್ರನ ಸೇವೆಗೈಯುತ್ತಿದ್ದಳು. ಅದೇ ವರ್ಷದಲ್ಲಿ ಮಹಾಯಶಸ್ವಿ ನೃಪ ಧೃತರಾಷ್ಟ್ರನಿಗೆ ಆ ಕರಣಿಯಲ್ಲಿ ಧೀಮಂತ ಯುಯುತ್ಸುವು ಜನಿಸಿದನು. ಈ ಪ್ರಕಾರ ಧೀಮಂತ ಧೃತರಾಷ್ಟ್ರನಿಗೆ ನೂರು ಮಹಾರಥಿ ವೀರ ಪುತ್ರರು ಮತ್ತು ಓರ್ವ ಕನ್ಯೆ ದುಃಶಲಾ ಜನಿಸಿದರು.

## ದುರ್ಯೋಧನಾದಿ ಕೌರವರ ಹೆಸರುಗಳು

೧. ದುರ್ಯೋಧನ ೨. ಯುಯುತ್ಸು ೩. ದುಃಶಾಸನ ೪. ದುಃಶಲ ೫. ಜಲಸಂಧ ೬. ಸಮ ೭. ಸಹ ೮. ವಿಂದ ೯. ಅನುವಿಂದ ೧೦.

ದುರ್ದರ್ಶ ೧೧. ಸುಬಾಹು ೧೨. ದುಷ್ಪ್ರದರ್ಶನ ೧೩. ದುರ್ಮರ್ಶನ ೧೪. ದುರ್ಮುಖ ೧೫. ದುಷ್ಕರ್ಮ ೧೬. ಕರ್ಣ ೧೭. ವಿವಿಂಶತಿ ೧೮. ವಿಕರ್ಣ ೧೯. ಸುಲೋಚನ ೨೦. ಚಿತ್ರ ೨೧. ಉಪಚಿತ್ರ ೨೨. ಚಿತ್ರಾಕ್ಷ ೨೩. ಚಾರುಚಿತ್ರ ೨೪. ಶರಾಸನ ೨೫. ದುರ್ಮದ ೨೬. ದುಷ್ಪ್ರಗಹ ೨೭. ವಿವಿತ್ಸು ೨೮. ವಿಕಟ ೨೯. ಊರ್ಣನಾಭ ೩೦. ಸುನಭ ೩೧. ನಂದ ೩೨. ಉಪನಂದಕ ೩೩. ಸೇನಾಪತಿ ೩೪. ಸುಷೇಣ ೩೫. ಕುಂದೋದರ ೩೬. ಮಹೋದರ ೩೭. ಚಿತ್ರಬಾಣ ೩೮. ಚಿತ್ರವರ್ಮ ೩೯. ಸುವರ್ಮ ೪೦. ದುರ್ವಿಮೋಚನ ೪೧. ಅಯೋಬಾಹು ೪೨. ಮಹಾಬಾಹು ೪೩. ಚಿತ್ರಾಂಗ ೪೪. ಚಿತ್ರಕುಂಡಲ ೪೫. ಭೀಮವೇಗ ೪೬. ಭೀಮಬಲ ೪೭. ಬಲಕಿ ೪೮. ಬಲವರ್ಧನ ೪೯. ಉಗ್ರಾಯುಧ ೫೦. ಭೀಮಕರ್ಮ ೫೧. ಕನಕಾಯು ೫೨. ದೃಢಾಯುಧ ೫೩. ದೃಢವರ್ಮ ೫೪. ದೃಢಕ್ಷತ್ರ ೫೫. ಸೋಮಕೀರ್ತಿ ೫೬. ಅನುದಾರ ೫೭. ದೃಢಸಂಧ ೫೮. ಜರಾಸಂಧ ೫೯. ಸತ್ಯಸಂಧ ೬೦. ಸದಾಃಸುವಕ್ ೬೧. ಉಗ್ರಶ್ರವ ೬೨. ಅಶ್ವಸೇನ ೬೩. ಸೇನಾನಿ ೬೪. ದುಃಷ್ಪರಾಜಯ ೬೫. ಅಪರಾಜಿತ ೬೬. ಪಂದೀತಕ ೬೭. ವಿಶಾಲಾಕ್ಷ ೬೮. ದುರಾವರ ೬೯. ದೃಢಹಸ್ತ ೭೦. ಸುಹಸ್ತ ೭೧. ವಾತವೇಗ ೭೨. ಸುವರ್ಚಸ ೭೩. ಆದಿತ್ಯಕೇತು ೭೪. ಬಹ್ವಾಸಿ ೭೫. ನಾಗದಂತ ೭೬. ಉಗ್ರಯಾಯಿ ೭೭. ಕವಚಿ ೭೮. ನಿಶಾಂಗಿ ೭೯. ಪಾಸಿ ೮೦. ದಂಡಾಧರ ೮೧. ಧನುಗ್ರಹ ೮೨. ಉಗ್ರ ೮೩.

ಭೀಮರಥ ೮೪. ವೀರ ೮೫. ವೀರಬಾಹು ೮೬. ಅಲುಲೋಪ ೮೭. ಅಭಯ ೮೮. ರುದ್ರಕರ್ಮ ೮೯. ದೃಢರಥ ೯೦. ಅನಾದೃಷ್ಯ ೯೧. ಕುಂಡಬೇಧಿ ೯೨. ವೀರಾವಿ ೯೩. ದೀರ್ಘಲೋಚನ ೯೪. ದೀರ್ಘಬಾಹು ೯೫. ಮಹಾಬಾಹು ೯೬. ವ್ಯಧೋರು ೯೭. ಕನಕಧ್ವಜ ೯೮. ಕುಂಡಸಿ ೯೯. ವಿರಾಜ ೧೦೦. ದುಃಶಳ. ಇವೇ ಜನ್ಮಕ್ರಮದಂತೆ ಒಬ್ಬೊಬ್ಬ ಆ ಎಲ್ಲ ಅತಿರಥ ಶೂರ ಯುದ್ಧವಿಶಾರದರ ಹೆಸರುಗಳೆಂದು ತಿಳಿ. ಅವರೆಲ್ಲರೂ ಎಲ್ಲ ಸಂಸರ್ಗ ಮತ್ತು ಜನಶೋಭಿನ ವಿದ್ಯೆಗಳಲ್ಲಿ ಪರಿಣಿತರಿದ್ದು ವೇದವಿದರೂ ರಾಜಶಾಸ್ತ್ರಗಳಲ್ಲಿ ಕೋವಿದರೂ ಆಗಿದ್ದರು. ಧೃತರಾಷ್ಟ್ರನು ಅವರೆಲ್ಲರಿಗೂ ಸರಿ ಸಮಯಗಳಲ್ಲಿ ಅನುರೂಪ ಪತ್ನಿಯರನ್ನು ಹುಡುಕಿ ವಿಧಿವತ್ತಾಗಿ ವಿವಾಹಗಳನ್ನು ನೆರವೇರಿಸಿದನು. ಸರಿ ಸಮಯದಲ್ಲಿ ರಾಜನು ಸೌಬಲೆಯ ಅನುಮತಿಯಂತೆ ದುಃಶಲೆಯನ್ನು ಸಿಂಧುರಾಜ ಜಯದ್ರಥನಿಗೆ ವಿವಾಹ ಮಾಡಿ ಕೊಟ್ಟನು.

## ಪಾಂಡು ಮೃಗಶಾಪ

ಒಮ್ಮೆ ರಾಜ ಪಾಂಡುವು ಜಿಂಕೆ ಮತ್ತು ಕ್ರೂರ ಮೃಗಗಳಿಂದೊಡಗೂಡಿದ ಮಹಾರಣ್ಯದಲ್ಲಿ ಸಂಭೋಗ ನಿರತ ಜಿಂಕೆಯ ಜೋಡಿಯನ್ನು ಕಂಡನು. ಆಗ ಪಾಂಡುವು ಗಂಡು ಮತ್ತು ಹೆಣ್ಣುಜಿಂಕೆಗಳೆರಡನ್ನೂ ಅತಿವೇಗದಲ್ಲಿ ಚಲಿಸುತ್ತಿದ್ದ, ಬಂಗಾರದ

ಬಣ್ಣದ, ಐದು ಸುಂದರ ತೀಕ್ಷ್ಣಬಾಣಗಳಿಂದ ಹೊಡೆದನು. ಅವನು ತಪೋಧನ ಋಷಿಯೋರ್ವನ ಪುತ್ರನಾಗಿದ್ದು ಮಹಾತೇಜಸ್ವಿಯಾಗಿದ್ದನು. ಆ ತೇಜಸ್ವಿಯು ಜಿಂಕೆಯ ರೂಪದಲ್ಲಿ ತನ್ನ ಪತ್ನಿಯೊಡನೆ ಕೂಡುತ್ತಿದ್ದನು. ಹೆಣ್ಣು ಜಿಂಕೆಯೊಡನೆ ಕೂಡಿಕೊಂಡಿದ್ದ ಅವನು ತಕ್ಷಣವೇ ಭೂಮಿಯ ಮೇಲೆ ಬಿದ್ದು ಶಕ್ತಿಯು ಕ್ಷೀಣಿಸುತ್ತಿದ್ದಂತೆಯೇ ಮಾನವ ಧ್ವನಿಯಲ್ಲಿ ವಿಲಪಿಸಿದನು:

> "ಪಾಪದಲ್ಲಿಯೇ ರುಚಿಹೊಂದಿದ ನರರು ಬುದ್ಧಿರಹಿತರಾದರೂ ಕೂಡ ಕಾಮ-ಕ್ರೋಧಗಳಿಂದ ಆವೃತರಾದವರನ್ನು ಕೊಲ್ಲುವುದಿಲ್ಲ. ಪ್ರಜ್ಞೆಯು ವಿಧಿಯನ್ನು ಹಿಡಿತದಲ್ಲಿಟ್ಟುಕೊಳ್ಳುವುದಿಲ್ಲ. ವಿಧಿಯೇ ಪ್ರಜ್ಞೆಯನ್ನು ಹಿಡಿತದಲ್ಲಿಟ್ಟುಕೊಂಡಿರುತ್ತದೆ. ವಿಧಿ ನಿಶ್ಚೇಧಿಸಿದ ಏನನ್ನೂ ಪ್ರಜ್ಞೆಯು ಪಡೆಯಲು ಸಾಧ್ಯವಿಲ್ಲ. ನೀನು ಸದ್ಧರ್ಮಾತ್ಮರ ಮುಖ್ಯ ಕುಲದಲ್ಲಿ ಜನಿಸಿದರೂ ಕೂಡ ಹೇಗೆ ನಿನ್ನ ಬುದ್ಧಿಯನ್ನು ಕಾಮಲೋಭದಲ್ಲಿ ತೊಡಗಿಸಿದೆ?"

ಆಗ ಪಾಂಡುವು ಹೇಳಿದನು:

> "ಶತ್ರುಗಳನ್ನು ವಧಿಸುವಂತೆ ಮೃಗಗಳನ್ನೂ ವಧಿಸುವುದು ರಾಜ ಪ್ರವೃತ್ತಿಯೆಂದೇ ಹೇಳುತ್ತಾರೆ. ಜಿಂಕೆಯೇ! ಮೋಹದಲ್ಲಿದ್ದ ನೀನು ನನ್ನನ್ನು ದೂರುವುದು ಸರಿಯಲ್ಲ. ಮರೆಯಲ್ಲಿದ್ದುಕೊಂಡು ಅಥವಾ ಮಾಯೆಯಿಂದ

ಮೃಗಗಳನ್ನು ಕೊಲ್ಲಬಾರದು ಎನ್ನುವುದು ರಾಜರ ಧರ್ಮ. ಇದು ನಿನಗೆ ತಿಳಿದಿದೆ. ಆದರೂ ನನ್ನನ್ನು ಏಕೆ ದೂರುತ್ತಿರುವೆ? ಸತ್ರನಿರತ ಋಷಿ ಅಗಸ್ತ್ಯನು ಬೇಟೆಯಾಡಲು ಅರಣ್ಯಕ್ಕೆ ಹೋದನು. ಆ ಮಹಾವನದಲ್ಲಿ ಅವನು ದೇವತೆಗಳಿಗಾಗಿ ಎಲ್ಲೆಡೆಯಲ್ಲಿಯೂ ಜಿಂಕೆಗಳ ಪ್ರೋಕ್ಷಣೆಯನ್ನೇ ಮಾಡಿದನು. ಪ್ರಮಾಣದೃಷ್ಟಧರ್ಮದ ಪ್ರಕಾರ ನನ್ನನ್ನು ಹೇಗೆ ದೂರುತ್ತೀಯೆ? ಅಗಸ್ತ್ಯನ ಅಭಿಚಾರಣೆಯಿಂದ ನೀವೆಲ್ಲರೂ ಈಗಾಗಲೇ ಆಹುತಿಗಳಾಗಿಬಿಟ್ಟಿದ್ದೀರಿ.”

ಮೃಗವು ಹೇಳಿತು:

“ಬಾಣಗಳನ್ನು ಬಿಡುವುದರ ಮೊದಲು ನಿನ್ನ ಶತ್ರುವಿನ ಕುರಿತು ಸ್ವಲ್ಪ ಯೋಚಿಸಬೇಕಿತ್ತು. ಅವರ ಶಕ್ತಿ ಕ್ಷೀಣಿಸುತ್ತಿರುವಾಗ ಕೊಲ್ಲುವುದು ವಿಶೇಷ ಕಾಲವೆಂದು ಹೇಳುತ್ತಾರೆ.”

ಪಾಂಡುವು ಹೇಳಿದನು:

“ಪ್ರಮತ್ತನಾಗಿರಲಿ ಅಥವಾ ಅಪ್ರಮತ್ತನಾಗಿರಲಿ, ಹೊರಗೆ ಕಂಡಾಗ ಅವನನ್ನು ಬಲ-ಉಪಾಯಗಳೊಂದಿಗೆ ತೀಕ್ಷ್ಣ ಬಾಣಗಳಿಂದ ಕೊಲ್ಲುತ್ತಾರೆ. ಜಿಂಕೆಯೇ! ಹೀಗಿದ್ದಾಗ

ನನ್ನನ್ನೇಕೆ ದೂರುತ್ತಿದ್ದೀಯೆ?”

ಮೃಗವು ಹೇಳಿತು:

“ರಾಜನ್! ನೀನು ಮೃಗವನ್ನು ಕೊಂದದ್ದಕ್ಕೆ ನನ್ನನ್ನೇ ಕಾರಣವನ್ನಾಗಿಟ್ಟುಕೊಂಡು ದೂರುತ್ತಿಲ್ಲ. ಸಂಭೋಗದಲ್ಲಿ ತೊಡಗಿದ್ದ ನಾನು ಮುಗಿಸುವವರೆಗೆ ಕಾದು ನಂತರ ಹೊಡೆಯಬಹುದಿತ್ತಲ್ಲ! ಸರ್ವ ಜೀವಿಗಳಿಗೂ ಹಿತಕರವಾದ ಮತ್ತು ಸರ್ವ ಜೀವಿಗಳೂ ಬಯಸುವ ಮೈಥುನ ಕಾಲದಲ್ಲಿರುವ ವನ್ಯ ಮೃಗಗಳನ್ನು ತಿಳಿದ ಯಾರು ತಾನೆ ಕೊಂದಾರು? ಅಕ್ಲಿಷ್ಟಕರ್ಮಿ ಋಷಿ ಪೌರವರ ವಂಶದಲ್ಲಿ ಹುಟ್ಟಿದ ಕೌರವ್ಯ! ಓರ್ವನು ಬಯಸಿದ ಪುರುಷಾರ್ಥಫಲವು ದೊರೆಯದಂತೆ ಮಾಡಿದ ನಿನ್ನ ಈ ಕೃತ್ಯವು ನಿನಗೆ ಅನುರೂಪವಲ್ಲ. ಈ ಅಸ್ವರ್ಗ್ಯ, ಅಯಶಸ್ವಿ, ಅಧರ್ಮಿಷ್ಠ ಕ್ರೂರ ಕರ್ಮವನ್ನು ಸರ್ವಲೋಕವೂ ಅಲ್ಲಗಳೆಯುತ್ತದೆ. ಸ್ತ್ರೀಭೋಗಗಳ ಕುರಿತು ವಿಶೇಷವಾಗಿ ತಿಳಿದ, ಶಾಸ್ತ್ರ-ಧರ್ಮಾರ್ಥಗಳ ತತ್ವಗಳನ್ನು ತಿಳಿದ, ಸುರಸಂಕಾಶ ನೀನು ಈ ರೀತಿ ಅಸ್ವರ್ಗ್ಯ ಕೃತ್ಯವನ್ನು ಮಾಡಬಾರದಾಗಿತ್ತು. ನೀನೇ ಕ್ರೂರಕರ್ಮಿ, ಪಾಪಾಚಾರಿ ಮತ್ತು ತ್ರಿವರ್ಗಪರಿವರ್ಜಿತ ಮನುಷ್ಯರನ್ನು ನಿಗ್ರಹಿಸುವವನು. ಗಡ್ಡೆ-ಫಲಗಳನ್ನು ತಿಂದು ನಿತ್ಯವೂ

ಶಮಪರಾಯಣನಾಗಿ ಅರಣ್ಯದಲ್ಲಿ ವಾಸಿಸುವ, ಮೃಗವೇಷಧರ, ಅನಾಗಸ ಮುನಿ ನನ್ನನ್ನು ಕೊಂದು ನಿನಗೆ ಏನು ದೊರೆಯಿತು? ಮೋಹಪರವಶರಾದ ಈ ನಮ್ಮ ಜೋಡಿಯನ್ನು ಹೇಗೆ ಹಿಂಸಿಸಿದ್ದೀಯೋ ಹಾಗೆ ನೀನೂ ಕೂಡ ಕಾಮ ಮೋಹಿತನಾದಾಗ ನಿನ್ನ ಜೀವವು ಕೊನೆಗೊಳ್ಳುತ್ತದೆ. ನಿಸ್ಸಂಶಯವಾಗಿಯೂ ಹೀಗೆಯೇ ಆಗುತ್ತದೆ. ನಾನು ಕಿಂದಮ ಎಂಬ ಹೆಸರಿನ ಅಪ್ರತಿಮ ತಪಸ್ವಿ ಮುನಿ. ಮನುಷ್ಯರಿಂದ ನಾಚಿಕೊಂಡು ನಾನು ಮೃಗರೂಪದಲ್ಲಿ ಮೈಥುನದಲ್ಲಿ ತೊಡಗಿದ್ದೆ. ಜಿಂಕೆಯಾಗಿ ಜಿಂಕೆಯೊಡನೆ ಈ ದಟ್ಟ ವನದಲ್ಲಿ ಸಂಚರಿಸುತ್ತೇನೆ. ಜಿಂಕೆಯ ರೂಪವನ್ನು ಧರಿಸಿ ಕಾಮಮೋಹಿತನಾದ ನನ್ನನ್ನು ತಿಳಿಯದೆಯೇ ನೀನು ಕೊಂದಿದ್ದುದರಿಂದ ನಿನಗೆ ಬ್ರಹ್ಮಹತ್ಯಾ ದೋಷವು ತಗಲುವುದಿಲ್ಲ. ಆದರೆ ನೀನೂ ಕೂಡ ಇದೇ ಫಲವನ್ನು ಪಡೆಯುತ್ತೀಯೆ. ಕಾಮವಿಮೋಹಿತನಾಗಿ ಪ್ರಿಯೆಯ ಜೊತೆ ಸಂಭೋಗ ಮಾಡುವಾಗ ನೀನೂ ಕೂಡ ಇದೇ ಅವಸ್ಥೆಯಲ್ಲಿ ಪ್ರೇತಲೋಕವನ್ನು ಸೇರುತ್ತೀಯೆ. ಅಂತ್ಯಕಾಲದಲ್ಲಿ ಯಾವ ಕಾಂತೆಯೊಡನೆ ಸಂಭೋಗದಲ್ಲಿ ತೊಡಗಿರುತ್ತೀಯೋ ಅವಳೂ ಕೂಡ ನಿನ್ನ ಮೇಲಿನ ಭಕ್ತಿಯಿಂದಾಗಿ ನಿನ್ನನ್ನೇ ಅನುಸರಿಸಿ ಸರ್ವಭೂತ ದುರತ ಪ್ರೇತರಾಜನ ವಶವನ್ನು

ಹೊಂದುತ್ತಾಳೆ. ಸುಖವನ್ನು ಅನುಭವಿಸುತ್ತಿರುವಾಗ ನಿನ್ನಿಂದ ಹೇಗೆ ದುಃಖವನ್ನು ಹೊಂದಿದೆನೋ ಅದೇ ರೀತಿ ನೀನು ಸುಖವನ್ನು ಹೊಂದಿದಾಗ ಇದೇ ದುಃಖವು ನಿನಗೂ ದೊರೆಯುತ್ತದೆ.”

ದುಃಖಾರ್ತನಾಗಿ ಹೀಗೆ ಹೇಳಿದ ಆ ಮೃಗವು ತನ್ನ ಜೀವವನ್ನು ತ್ಯಜಿಸಿತು. ಪಾಂಡುವಾದರೂ ಶೋಕಾರ್ತನಾಗಿ ಒಂದು ಕ್ಷಣ ಹಾಗೆಯೇ ನಿಂತುಕೊಂಡನು.

## ಪಾಂಡುವು ರಾಜ್ಯವನ್ನು ತ್ಯಜಿಸಿದುದು

ತಮ್ಮ ಬಾಂಧವನ ಸಾವೋ ಎನ್ನುವಂಥ ಆ ಜಿಂಕೆಯ ಸಾವಿನಿಂದ ಶೋಕಾರ್ತ ರಾಜ ಮತ್ತು ಅವನ ಪತ್ನಿಯರು ರೋದಿಸಿದರು. ಪಾಂಡುವು ಹೇಳಿದನು:

“ಸತ್ಯವಂತರ ಕುಲದಲ್ಲಿ ಹುಟ್ಟಿದವರೂ ಕೂಡ ಕಾಮಜಾಲವಿಮೋಹಿತರಾಗಿ ದುರ್ಗತಿಯನ್ನು ತರುವಂಥಹ ಕೃತ್ಯಗಳನ್ನು ಮಾಡಿ ತಮ್ಮ ಅಂತ್ಯವನ್ನು ತಾವೇ ತಂದುಕೊಳ್ಳುತ್ತಾರೆ. ಹುಟ್ಟಿನಿಂದ ಸದಾ ಧರ್ಮಾತ್ಮನಾಗಿದ್ದ ನನ್ನ ತಂದೆಯು ಕಾಮಾತ್ಮನಾಗಿದ್ದುದರಿಂದಲೇ ಬಾಲ್ಯದಲ್ಲಿಯೇ ಜೀವಿತಾಂತವನ್ನು ಪಡೆದನು ಎಂದು ಕೇಳಿದ್ದೇನೆ. ಆ ಕಾಮಾತ್ಮ ರಾಜನ ಕ್ಷೇತ್ರದಲ್ಲಿಯೇ ಸತ್ಯವಾಗ್ಮಿ ಸಾಕ್ಷಾತ್

ಭಗವಾನ್ ಋಷಿ ಕೃಷ್ಣದ್ವೈಪಾಯನನು ನನ್ನನ್ನು ಹುಟ್ಟಿಸಿದನು. ಅಂಥಹ ಜನ್ಮವನ್ನು ಪಡೆದವನಾಗಿದ್ದರೂ ನಾನು ಇಂದು ಬುದ್ಧಿವ್ಯಸನಗೊಂಡು ಅಧಮನಾಗಿ ದೇವತ್ವವನ್ನು ತ್ಯಜಿಸಿ ದುರಾತ್ಮನಾಗಿ ಬೇಟೆಯಲ್ಲಿ ತೊಡಗಿದ್ದೇನೆ. ನನ್ನ ಆ ಅವ್ಯಯ ತಂದೆಯಂತೆ ನಾನೂ ಕೂಡ ಬಂಧನವೇ ಮಹಾ ವ್ಯಸನವೆಂದು ತಿಳಿದು ಮೋಕ್ಷವನ್ನು ಅರಸುತ್ತೇನೆ. ಸುವೃತ್ತಿಯನ್ನೇ ಅನುಸರಿಸುತ್ತೇನೆ. ನನ್ನನ್ನು ನಾನು ಅತೀವ ತಪಸ್ಸಿನಲ್ಲಿ ಒಳಗೂಡಿಸಿಕೊಂಡು ನಿಸ್ಸಂಶಯವಾಗಿಯೂ ನನ್ನನ್ನು ತ್ಯಜಿಸುತ್ತೇನೆ. ನಾನು ಈ ಭೂಮಿಯಲ್ಲಿ ಏಕಾಂಗಿಯಾಗಿ, ಒಂದೊಂದು ದಿನವೂ ಒಂದೊಂದು ಮರದಡಿಯಲ್ಲಿ, ಮುನಿಗಳಂತೆ ಮುಂಡನ ಮಾಡಿಕೊಂಡು, ಭಿಕ್ಷೆ ಬೇಡುತ್ತಾ ಅಲೆಯುತ್ತೇನೆ. ಧೂಳಿನಿಂದ ತುಂಬಿಕೊಂಡು, ಯಾರೂ ವಾಸಿಸದಿದ್ದ ಮನೆಗಳಲ್ಲಿ ಅಥವಾ ಮರದಡಿಯನ್ನೇ ಹಾಸಿಗೆಯನ್ನಾಗಿ ಮಾಡಿ ವಾಸಿಸುತ್ತೇನೆ. ಪ್ರಿಯ-ಅಪ್ರಿಯವಾದುದೆಲ್ಲವನ್ನೂ ತ್ಯಜಿಸುತ್ತೇನೆ. ಶೋಚಿಸುವುದೂ ಇಲ್ಲ, ಸಂತೋಷಪಡುವುದೂ ಇಲ್ಲ. ನಿಂದೆ ಮತ್ತು ಆತ್ಮಸಂಸ್ತುತಿಗಳೆರಡನ್ನೂ ಒಂದೇ ಸಮಾನವಾಗಿ ಕಾಣುತ್ತೇನೆ. ಯಾರಿಗೂ ಆಶೀರ್ವದಿಸುವುದಿಲ್ಲ, ಯಾರಿಗೂ ನಮಸ್ಕರಿಸುವುದಿಲ್ಲ. ನನಗೆ ಯಾವ ಆಯ್ಕೆಗಳನ್ನೂ

ಇಟ್ಟುಕೊಳ್ಳುವುದಿಲ್ಲ, ನನ್ನದೆನ್ನುವುದು ಯಾವುದೂ ಇರುವುದಿಲ್ಲ. ನಾನು ಯಾರನ್ನೂ ಕೀಳುಭಾವದಿಂದ ನೋಡುವುದಿಲ್ಲ, ಮತ್ತು ಯಾರ ಮೇಲೂ ಸಿಟ್ಟಾಗುವುದಿಲ್ಲ. ಸರ್ವಭೂತ ಹಿತದಲ್ಲಿ ನಿರತನಾಗಿ ನಿತ್ಯವೂ ಪ್ರಸನ್ನವದನನಾಗಿರುತ್ತೇನೆ. ಚಲಿಸುವ ಮತ್ತು ಚಲಿಸದೇ ಇರುವ ನಾಲ್ಕೂ ಪ್ರಕಾರದ ಭೂತಗಳ್ಯಾವುವನ್ನೂ ಕಡೆಗಾಣಿಸದೇ, ಉಸಿರಾಡುವ ಎಲ್ಲ ಜೀವಿಗಳೂ ನನ್ನದೇ ಮಕ್ಕಳೆಂದು ತಿಳಿದು ಸಮನಾಗಿ ಕಾಣುತ್ತೇನೆ. ನಾನು ಒಮ್ಮೆ ಏಳೇ ಏಳು ಕುಟುಂಬಗಳಿಗೆ ಭಿಕ್ಷೆಗೆಂದು ಹೋಗುತ್ತೇನೆ. ಅಲ್ಲಿ ಭಿಕ್ಷೆ ದೊರಕದಿದ್ದರೂ, ಅಥವಾ ನನಗೆ ಹಸಿವೆಯಾಗಿದ್ದರೂ ಹೆಚ್ಚಿನ ಮನೆಗಳಿಗೆ ಹೋಗುವುದಿಲ್ಲ. ಸ್ವಲ್ಪವಾದರೂ ಸರಿ, ಮೊದಲ ಬಾರಿ ಅವರು ಎಷ್ಟು ಕೊಡುತ್ತಾರೋ ಅಷ್ಟನ್ನೇ ಸ್ವೀಕರಿಸುತ್ತೇನೆ. ಪ್ರತಿನಿತ್ಯವೂ ಭಿಕ್ಷೆ ಸಿಕ್ಕಿದರೂ ಸಿಕ್ಕದಿದ್ದರೂ ಏಳು ಮನೆಗಳಿಗಿಂಥ ಹೆಚ್ಚು ಮನೆಗಳಿಂದ ಭಿಕ್ಷೆ ಬೇಡುವುದಿಲ್ಲ. ಒಬ್ಬನು ನನ್ನ ಭುಜವನ್ನು ಖಡ್ಗದಿಂದ ಕತ್ತರಿಸಿದರೆ ಮತ್ತು ಇನ್ನೊಬ್ಬನು ನನ್ನ ಭುಜಕ್ಕೆ ಚಂದನವನ್ನು ಲೇಪಿಸಿದರೆ, ಅವರಿಬ್ಬರಲ್ಲಿ ಯಾರನ್ನೂ ನಾನು ಒಳ್ಳೆಯವನು ಅಥವಾ ಕೆಟ್ಟವನೆಂದು ಪರಿಗಣಿಸುವುದಿಲ್ಲ. ನಾನು ಜೀವಂತವಾಗಿರುವುದಕ್ಕಾಗಲೀ ಅಥವಾ ಸಾಯುವುದಕ್ಕಾಗಲೀ ಏನನ್ನೂ ಮಾಡುವುದಿಲ್ಲ.

ಹಾಗೆಯೇ ಮರಣವಾಗಲೀ ಜೀವನವಾಗಲೀ ಯಾವುದನ್ನೂ ದೂರವಿಡುವುದಿಲ್ಲ ಅಥವಾ ಬರಮಾಡಿಕೊಳ್ಳುವುದಿಲ್ಲ. ಜೀವಿಸಿರುವವರು ತಮ್ಮ ಅಭ್ಯುದಯಕ್ಕಾಗಿ ಮಾಡುವ ಎಲ್ಲ ಕರ್ಮಗಳನ್ನೂ ದಾಟಿ ಪ್ರತಿ ಕ್ಷಣಗಳಲ್ಲಿಯೂ ನಿಲ್ಲುತ್ತೇನೆ. ಆ ಎಲ್ಲ ಅವಸ್ಥೆಗಳಲ್ಲಿಯೂ ಸರ್ವ ಇಂದ್ರಿಯಕ್ರಿಯೆಗಳನ್ನು ಪರಿತ್ಯಜಿಸುತ್ತೇನೆ. ಎಲ್ಲವನ್ನು ಪರಿತ್ಯಜಿಸಿ ಧರ್ಮಾತ್ಮನಾಗಿ ಆತ್ಮ ಕಲ್ಮಶವನ್ನು ತೊಳೆದುಕೊಳ್ಳುತ್ತೇನೆ. ಸರ್ವ ಪಾಪ ನಿರ್ಮುಕ್ತನಾಗಿ ಸರ್ವ ಅನುರಾಗ ವ್ಯತೀತನಾಗಿ, ಯಾವುದರ ವಶಕ್ಕೂ ಸಿಗದವನಾಗಿ, ಎಲ್ಲಿಯೂ ನಿಲ್ಲದವನಾಗಿ, ಗಾಳಿಯ ಧರ್ಮವನ್ನೇ ನನ್ನ ಧರ್ಮವನ್ನಾಗಿಸುತ್ತೇನೆ. ಈ ರೀತಿ ಸತತವಾಗಿ ವರ್ತಿಸುತ್ತಾ ಇದೇ ಪ್ರಕಾರದಲ್ಲಿ ನಡೆದುಕೊಂಡು ನಿರ್ಭಯ ಮಾರ್ಗದಲ್ಲಿದ್ದು ದೇಹವನ್ನು ಧರಿಸಿಕೊಂಡಿರುತ್ತೇನೆ. ವೀರ್ಯವನ್ನು ಕಳೆದುಕೊಂಡ ನಾನು ವೀರ್ಯವರ್ಜಿತನಾಗಿ, ಸ್ವಧರ್ಮದಿಂದ ಯಾವಾಗಲೂ ಕಾಡಲ್ಪಟ್ಟು ಕಾಮ ಸುಖವನ್ನು ಹೊಂದುವ ನಾಯಿಯ ಮಾರ್ಗದಲ್ಲಿ ಚಲಿಸುವುದಿಲ್ಲ. ಸತ್ಕೃತನಾಗಿರಲಿ ಅಥವಾ ಅಸತ್ಕೃತನಾಗಿರಲಿ, ಹಸಿವಿನ ಕಣ್ಣುಗಳಿಂದ ಬೇರೆ ದಾರಿಯನ್ನು ಯಾರು ಅನುಸರಿಸುತ್ತಾನೋ ಆ ಕಾಮಾತ್ಮನು

ನಾಯಿಗಳು ನಡೆದುಹೋಗುವ ಮಾರ್ಗದಲ್ಲಿ ನಡೆದಂತಾಗುತ್ತದೆ.”

ದುಃಖಾರ್ತನಾಗಿ ಹೀಗೆ ಹೇಳಿದ ನೃಪನು ನಿಟ್ಟುಸಿರು ಬಿಡುತ್ತಾ ಕುಂತಿ ಮತ್ತು ಮಾದ್ರಿಯರನ್ನು ನೋಡಿ ಹೇಳಿದನುಃ

“ಕೌಸಲ್ಯೆ, ಕ್ಷತ್ತ ವಿದುರ, ರಾಜ ಮತ್ತು ಎಲ್ಲ ಬಂಧುಗಳಿಗೂ, ಆರ್ಯಾ ಸತ್ಯವತೀ, ಭೀಷ್ಮ, ಮತ್ತು ರಾಜ ಪುರೋಹಿತರಿಗೂ, ಮಹಾತ್ಮ, ಸೋಮರಸ ಸೇವಿಸಿದ, ಸಂಶಿತವ್ರತ ಬ್ರಾಹ್ಮಣರಿಗೂ, ನಮ್ಮ ಆಶ್ರಯದಲ್ಲಿ ವಾಸಿಸುತ್ತಿರುವ ಪೌರವೃದ್ಧರಿಗೂ, ಎಲ್ಲರಿಗೂ ಪಾಂಡುವು ವನವನ್ನು ಸೇರಿದನು ಎಂದು ತಿಳಿಸಿ ಹೇಳಿ.”

ವನವಾಸದಲ್ಲಿ ಧೃಢಮನಸ್ಸನ್ನಿಟ್ಟಿದ್ದ ಪತಿಯ ಈ ಮಾತುಗಳನ್ನು ಕೇಳಿದ ಕುಂತಿ ಮತ್ತು ಮಾದ್ರಿ ಈರ್ವರೂ ಒಂದೇ ಉತ್ತರವನ್ನಿತ್ತರುಃ

“ಭರತರ್ಷಭ! ನಿನ್ನ ಧರ್ಮಪತ್ನಿಯರಾದ ನಮ್ಮಿಬ್ಬರ ಜೊತೆಗೂಡಿ ಇದನ್ನು ಶಕ್ಯಮಾಡಿಸಿಕೊಡುವಂಥ ಇನ್ನೂ ಬೇರೆ ಆಶ್ರಮಗಳು ಇವೆ. ಇದರಿಂದಲೂ ನೀನು ಮಹಾ ತಪಸ್ಸನ್ನು ಮಾಡಿ ನಿಸ್ಸಂಶಯವಾಗಿಯೂ ಸ್ವರ್ಗವನ್ನು ಪಡೆಯಲು ಸಾರ್ಥಕನಾಗುತ್ತೀಯೆ. ನಮ್ಮ ಎಲ್ಲ ಇಂದ್ರಿಯಗಳನ್ನೂ ಹಿಡಿತದಲ್ಲಿಟ್ಟುಕೊಂಡು, ಪತಿಯ ಲೋಕದಲ್ಲಿಯೇ ಪರಾಯಣರಾಗಿರುತ್ತೇವೆ. ಕಾಮ

ಸುಖವನ್ನು ತ್ಯಜಿಸಿ ನಾವೂ ಕೂಡ ಕಠಿಣ ತಪಸ್ಸನ್ನು ಕೈಕೊಳ್ಳುತ್ತೇವೆ. ನೀನು ನಮ್ಮನ್ನು ತ್ಯಜಿಸಿದರೆ ನಾವು ಇಂದೇ ನಮ್ಮ ಜೀವನವನ್ನು ಕೊನೆಗೊಳಿಸುತ್ತೇವೆ ಎನ್ನುವುದರಲ್ಲಿ ಸಂಶಯವೇ ಇಲ್ಲ."

ಪಾಂಡುವು ಹೇಳಿದನು:

"ಧರ್ಮಸಂಹಿತಗಳಲ್ಲಿ ಹೇಳಿದಂತೆ ನೀವು ಇದರಲ್ಲಿಯೇ ಹಠವನ್ನಿಟ್ಟಿದ್ದರೆ, ನನ್ನ ತಂದೆಯ ಅವ್ಯಯ ನಡತೆಯನ್ನೇ ನನ್ನದಾಗಿಸಿಕೊಂಡು ಅನುಸರಿಸುತ್ತೇನೆ. ಗ್ರಾಮದ ಸುಖಾಚಾರಗಳನ್ನು ತ್ಯಜಿಸಿ, ಮಹಾ ತಪಸ್ಸನ್ನು ತಪಿಸುತ್ತೇನೆ; ವಲ್ಕಲವನ್ನು ಧರಿಸಿ, ಫಲಮೂಲಗಳನ್ನು ತಿಂದು ಮಹಾವನದಲ್ಲಿ ಸಂಚರಿಸುತ್ತೇನೆ. ಬೆಳಿಗ್ಗೆ-ಸಾಯಂಕಾಲ ಎರಡೂ ಹೊತ್ತು ಅಗ್ನಿಯಲ್ಲಿ ಆಹುತಿ ನೀಡುತ್ತೇನೆ; ಕೃಶನಾಗಿದ್ದು, ಮಿತ ಆಹಾರವನ್ನು ಸೇವಿಸಿಕೊಂಡು, ಚರ್ಮವನ್ನು ಧರಿಸಿ, ಜಟಾಧರನಾಗಿ ಇರುತ್ತೇನೆ. ಛಳಿ, ಗಾಳಿ, ಬಿಸಿಗಳನ್ನು ಸಹಿಸಿಕೊಂಡು, ಹಸಿವು, ಬಾಯಾರಿಕೆ, ಮತ್ತು ಆಯಾಸಗಳನ್ನು ಪರಿಗಣಿಸದೇ, ದುಷ್ಕರ ತಪಸ್ಸನ್ನು ಮಾಡಿ ಈ ಶರೀರವನ್ನು ಶೋಷಿಸುತ್ತೇನೆ; ಏಕಾಂತಶೀಲನಾಗಿ, ಹಣ್ಣು ಮತ್ತು ಕಾಯಿಗಳನ್ನು ಸೇವಿಸುತ್ತಾ, ಪಿತೃಗಳಿಗೆ, ದೇವತೆಗಳಿಗೆ,

ವನದಲ್ಲಿರುವವುಗಳಿಗೆ, ಶಬ್ಧಗಳಿಗೆ ಮತ್ತು ನೀರಿಗೆ ತರ್ಪಣೆಗಳನ್ನು ನೀಡುತ್ತೇನೆ. ವಾನಪ್ರಸ್ಥ ಸ್ವೀಕರಿಸಿದ ಜನರ ದರ್ಶನವು ಕುಲವಾಸಿಗಳ್ಯಾರನ್ನೂ ದುಃಖಕ್ಕೊಳಮಾಡುವುದಿಲ್ಲ. ಇನ್ನು ಗ್ರಾಮವಾಸಿಗಳು ಹೇಗೆ ದುಃಖಕ್ಕೊಳಗಾಗುತ್ತಾರೆ? ಈ ರೀತಿ ನಾನು ಅರಣ್ಯಶಾಸ್ತ್ರದಲ್ಲಿ ಹೇಳಿದಂಥ ಉಗ್ರಾನುಗ್ರತರ ವಿಧಿಗಳನ್ನು ಸ್ವೀಕರಿಸಿ, ಅವುಗಳಿಂದ ನನ್ನ ಈ ದೇಹವನ್ನು ಕೊನೆಗೊಳ್ಳಿಸುವುದನ್ನು ಆಕಾಂಕ್ಷಿಸುತ್ತಿದ್ದೇನೆ."

ಈ ರೀತಿ ತನ್ನ ಬಾರ್ಯೆಯರಿಗೆ ಹೇಳಿದ ಆ ಕೌರವ ವಂಶಜ ರಾಜನು ತನ್ನ ಚೂಡಾಮಣಿ, ಅಂಗದ, ಕುಂಡಲ, ಬೆಲೆಬಾಳುವ ವಸ್ತ್ರ, ಮತ್ತು ಸ್ತ್ರೀಯರ ಆಭರಣಗಳನ್ನು ತೆಗೆದಿಟ್ಟನು. ಎಲ್ಲವನ್ನು ವಿಪ್ರರಿಗಿತ್ತು ಪಾಂಡುವು ಹೇಳಿದನು: "ನಾಗಪುರಕ್ಕೆ ಹೋಗಿ ಪಾಂಡುವು ವನವನ್ನು ಸೇರಿದನು ಎಂದು ಹೇಳಿ. ಅರ್ಥ, ಕಾಮ, ಮತ್ತು ರತಿಸುಖವನ್ನು ತ್ಯಜಿಸಿ ಎಲ್ಲವನ್ನೂ ಬಿಟ್ಟು ತನ್ನ ಪತ್ನಿಯರೊಂದಿಗೆ ಕುರುಪುಂಗವನು ವನವನ್ನು ಸೇರಿದನೆಂದು ಹೇಳಿ." ಆ ಭರತಸಿಂಹನ ಅನುಯಾತ್ರಿ ಮತ್ತು ಪರಿಚಾರಕರು ಈ ಮಾತುಗಳನ್ನು ಕೇಳಿ ಬೇರೆ ಬೇರೆ ಕರುಣಾಜನಕ ಮಾತುಗಳಿಂದ ಘೋರ ಆರ್ತಸ್ವರಗಳಲ್ಲಿ "ಹಾ! ಹಾ!" ಎಂದು ರೋದಿಸಿದರು. ಬಿಸಿ ಕಣ್ಣೀರು ಸುರಿಸುತ್ತಾ, ಆ ಮಹೀಪತಿಯನ್ನು ಬೀಳ್ಕೊಂಡು, ಆದಷ್ಟು


D.K. Mitra

ಬೇಗನೇ ನಾಗಪುರಕ್ಕೆ ಅವನ ಸಂದೇಶವನ್ನು ಕೊಂಡೊಯ್ದರು. ಮಹಾವನದಲ್ಲಿ ನಡೆದುದೆಲ್ಲವನ್ನೂ ಯಥಾವತ್ತಾಗಿ ಕೇಳಿದ ನರಶ್ರೇಷ್ಠ ಧೃತರಾಷ್ಟ್ರನು ಪಾಂಡುವನ್ನು ಕುರಿತು ಶೋಚಿಸಿದನು.

ಕೌರವ ರಾಜಪುತ್ರ ಪಾಂಡುವಾದರೋ ಫಲಮೂಲಗಳನ್ನು ಸೇವಿಸುತ್ತಾ ತನ್ನ ಭಾರ್ಯೆಯರನ್ನೊಡಗೂಡಿ ನಾಗಸಭಗಿರಿಗೆ ಹೋದನು. ಅವನು ಚೈತ್ರರಥವನ್ನು ಸೇರಿ, ವಾರಿಶೇಣಿಯನ್ನು ದಾಟಿ, ಹಿಮಾಲಯವನ್ನೂ ದಾಟಿ, ಗಂಧಮಾದನವನ್ನು ಸೇರಿದನು. ಮಹಾ ಭೂತ ಸಿದ್ಧರು ಮತ್ತು ಪರಮ ಋಷಿಗಳಿಂದ ರಕ್ಷಿತ ಆ ಸಮ ವಿಷಮ ಪ್ರದೇಶದಲ್ಲಿ ರಾಜನು ವಾಸಿಸಿದನು. ಇಂದ್ರಧ್ಯುಮ್ನ ಸರೋವರವನ್ನು ಸೇರಿ, ಹಂಸಕೂಟವನ್ನು ದಾಟಿ, ಶತಶೃಂಗದಲ್ಲಿ ಮಹಾರಾಜನು ತಪಸ್ಸಿನಲ್ಲಿ ತೊಡಗಿದನು.

ಅಲ್ಲಿಯೂ ಕೂಡ ಶ್ರೇಷ್ಠ ತಪೋನಿರತ ಆ ವೀರನು ಅಲ್ಲಿರುವ ಸಿದ್ಧ ಚಾರಣಗಣಗಳ ಪ್ರಿಯದರ್ಶನನಾದನು. ವಿಧೇಯ, ಅಹಂವಾದಿಯಲ್ಲದ, ಸಂಯತಾತ್ಮ, ಜಿತೇಂದ್ರಿಯ ಭಾರತನು ತನ್ನದೇ ವೀರ್ಯದಿಂದ ಸ್ವರ್ಗದ ದಾರಿಯನ್ನು ಗಳಿಸಿದನು. ಕೆಲವರಿಗೆ ಸಹೋದರನಾಗಿದ್ದನು; ಇನ್ನು ಕೆಲವರಿಗೆ ಸಖನಾಗಿದ್ದನು. ಇನ್ನು ಕೆಲವು ಋಷಿಗಳು ಅವನನ್ನು ಪುತ್ರನಂತೆ ಪರಿಪಾಲಿಸುತ್ತಿದ್ದರು. ಆ ಭರತರ್ಷಭ ಪಾಂಡುವು ಬಹಳ ಕಾಲದ ನಂತರ ತನ್ನ ನಿಷ್ಕಲ್ಮಶ ತಪಸ್ಸಿನಿಂದ ಬ್ರಹ್ಮರ್ಷಿ ಸದೃಶ್ಯತೆಯನ್ನು ಹೊಂದಿದನು. ಸ್ವರ್ಗದ

ತೀರವನ್ನು ಸೇರಲಿಚ್ಛಿಸಿದ ಅವನು ಪತ್ನಿಯರನ್ನೊಡಗೊಂಡು ಶತಶೃಂಗವನ್ನು ಮೇಲೇರಿ ಉತ್ತರಾಭಿಮುಖನಾಗಿ ಹೊರಟನು. ಆಗ ಅಲ್ಲಿದ್ದ ತಾಪಸಿಗಳು ಅವನಿಗೆ ಹೇಳಿದರು:

"ಈ ಪರ್ವತ ರಾಜನ ಮೇಲೆ ಹತ್ತಿ ಹೋಗುತ್ತಿದ್ದಂತೆ ನಾವು ದೇವತೆಗಳು, ಗಂಧರ್ವರು ಮತ್ತು ಅಪ್ಸರೆಯರು ಕ್ರೀಡಿಸುವ ಅಸಾದ್ಯ ಗಿರಿ-ತಪ್ಪಲುಗಳನ್ನೂ, ಏರು ಪೇರುಗಳ ಕುಬೇರನ ಉದ್ಯಾನಗಳನ್ನು, ಧುಮುಕುತ್ತಿರುವ ಮಹಾನದಿಗಳು, ದುರ್ಗ-ಗಿರಿಗಳು ಮತ್ತು ಗುಹೆಗಳನ್ನು ನೋಡಿದ್ದೇವೆ. ಅಲ್ಲಿ ಮರ, ಮೃಗ. ಪಕ್ಷಿಗಳ್ಯಾವುವೂ ವಾಸಿಸದಂಥಹ ನಿತ್ಯವೂ ಹಿಮದಿಂದ ಕೂಡಿದ ಪ್ರದೇಶಗಳಿವೆ. ಮತ್ತು ಅಲ್ಲಿ ಕಷ್ಟಕರ ಮಾರ್ಗಗಳನ್ನು ಹೊಂದಿದ ವಿಶಾಲ ಪ್ರದೇಶಗಳೂ ಇವೆ. ಪಕ್ಷಿಗಳು ಕೂಡ ಅದನ್ನು ದಾಟಿ ಹಾರಲು ಶಕ್ಯವಿಲ್ಲ, ಇನ್ನು ಪ್ರಾಣಿಗಳಾದರೂ ಹೇಗೆ? ವಾಯು ಮಾತ್ರ ಹೋಗಬಲ್ಲ ಅಲ್ಲಿಗೆ ಸಿದ್ಧರು ಮತ್ತು ಪರಮ ಋಷಿಗಳು ಹೋಗಬಲ್ಲರು. ಹಾಗಿರುವಾಗ, ಈ ಈರ್ವರು ರಾಜಪುತ್ರಿಯರು ಹೇಗೆ ತಾನೆ ಈ ಪರ್ವತವನ್ನು ಪಾರು ಮಾಡಿಯಾರು? ಅವರು ಈ ಕಷ್ಟಗಳಿಗೆ ಅರ್ಹರಲ್ಲ. ಹೋಗಬೇಡ!"

ಪಾಂಡುವು ಹೇಳಿದನು:

"ಮಹಾಭಾಗರೇ! ಮಕ್ಕಳಿಲ್ಲದವನಿಗೆ ಸ್ವರ್ಗದ ಬಾಗಿಲು

ತೆರೆಯುವುದಿಲ್ಲವೆಂದು ಹೇಳುತ್ತಾರೆ. ಆದುದರಿಂದ ಮಕ್ಕಳಿಲ್ಲದ ನಾನು ತುಂಬಾ ಚಿಂತೆಗೊಳಗಾಗಿದ್ದೆನೆ. ನಿಮಗೆ ಹೇಳುತ್ತಿದ್ದೇನೆ. ಭೂಮಿಯಲ್ಲಿ ಪಿತೃ, ದೇವ, ಋಷಿ ಮತ್ತು ಮನುಷ್ಯ ಈ ನಾಲ್ವರ ನೂರಾರು ಸಹಸ್ರಾರು ಋಣಗಳನ್ನು ತೀರಿಸಲು ಮನುಷ್ಯನಿಗೆ ಮಕ್ಕಳು ಹುಟ್ಟುತ್ತಾರೆ. ಇವುಗಳನ್ನು ಯಥಾಕಾಲದಲ್ಲಿ ಯಾರು ನಡೆಸಿಕೊಳ್ಳುವುದಿಲ್ಲವೋ ಅವನಿಗೆ ಲೋಕಗಳು ದೊರೆಯುವುದಿಲ್ಲ ಎಂದು ಧರ್ಮವನ್ನು ತಿಳಿದವರು ನಿರೂಪಿಸಿದ್ದಾರೆ. ಯಜ್ಞಗಳಿಂದ ದೇವತೆಗಳು, ಸ್ವಾಧ್ಯಾಯ ಮತ್ತು ತಪಸ್ಸುಗಳಿಂದ ಮುನಿಗಳು, ಪುತ್ರರು ಮತ್ತು ಶ್ರಾದ್ಧಗಳಿಂದ ಪಿತೃಗಳು, ಮತ್ತು ಅನುಕಂಪದಿಂದ ಮಾನವರು ಸಂತುಷ್ಟಗೊಳ್ಳುತ್ತಾರೆ. ಧರ್ಮದ ಪ್ರಕಾರ ನಾನು ಋಷಿ, ದೇವ ಮತ್ತು ಮನುಷ್ಯರ ಋಣಗಳಿಂದ ಪರಿಮುಕ್ತನಾಗಿದ್ದೇನೆ. ನಾನಿನ್ನೂ ಪಿತೃಗಳ ಋಣದಿಂದ ಮುಕ್ತನಾಗಿಲ್ಲ ಎಂದು ಬೇಯುತ್ತಿದ್ದೇನೆ. ನನ್ನ ದೇಹನಾಶದಿಂದ ಪಿತೃಗಳೂ ಕೂಡ ನಾಶಹೊಂದುತ್ತಾರೆ ಎಂದು ನಿಶ್ಚಯ. ಮಕ್ಕಳನ್ನು ಪಡೆಯಲೋಸುಗವೇ ನರೋತ್ತಮರು ಜನ್ಮತಾಳುತ್ತಾರೆ. ನನ್ನ ತಂದೆಯ ಕ್ಷೇತ್ರದಲ್ಲಿ ನಾನು ಹೇಗೆ ಮಹಾತ್ಮನಿಂದ ಹುಟ್ಟಿದೆನೋ ಅದೇ ರೀತಿ ನನ್ನ ಕ್ಷೇತ್ರದಲ್ಲಿಯೂ ಮಕ್ಕಳನ್ನು ಹೇಗೆ ಪಡೆಯಬಹುದು?”

ತಾಪಸರು ಹೇಳಿದರು:

> "ಧರ್ಮಾತ್ಮ ! ನಿನಗೆ ದೇವೋಪಮ ಸುಂದರ ಮಕ್ಕಳಾಗುತ್ತಾರೆಂದು ನಮ್ಮ ದಿವ್ಯ ದೃಷ್ಟಿಯಿಂದ ತಿಳಿದಿದ್ದೇವೆ. ತನ್ನ ಕರ್ಮಗಳಿಂದ ತಂದುಕೊಂಡ ದೈವಾದಿಷ್ಟ ಕಷ್ಟದಲ್ಲಿಯೂ ಬುದ್ಧಿವಂತ ಮನುಷ್ಯನು ಉತ್ತಮ ಫಲವನ್ನು ಹುಡುಕುತ್ತಾನೆ. ಕಾಣುತ್ತಿರುವ ಆ ಫಲಕ್ಕಾಗಿ ನೀನು ಪ್ರಯತ್ನ ಮಾಡಲೇ ಬೇಕು. ಗುಣಸಂಪನ್ನ ಮಕ್ಕಳನ್ನು ಪಡೆದು ನೀನು ಸಂತೋಷವನ್ನು ಹೊಂದುತ್ತೀಯೆ."

## ಪಾಂಡು-ಪೃಥೆಯರ ಸಂವಾದ

ತಪಸ್ವಿಗಳ ಆ ಮಾತುಗಳನ್ನು ಕೇಳಿ, ಜಿಂಕೆಯ ಶಾಪದಿಂದ ತಾನು ಆ ಕೆಲಸವನ್ನು ಮಾಡಲಿಕ್ಕಾಗುವುದಿಲ್ಲ ಎಂದು ತಿಳಿದಿದ್ದ ಪಾಂಡುವು ಚಿಂತಾಪರನಾದನು. ಅವನು ಏಕಾಂತದಲ್ಲಿ ತನ್ನ ಧರ್ಮಪತ್ನಿ, ಯಶಸ್ವಿನೀ ಕುಂತಿಯಲ್ಲಿ ಹೇಳಿದನು:

> "ಮಕ್ಕಳನ್ನು ಪಡೆಯುವ ಹಲವಾರು ರೀತಿಗಳನ್ನು ಹೇಳಲಾಗಿದೆ. ಅಪತ್ಯ ಎಂಬ ಹೆಸರೇ ಧರ್ಮಸಂಹಿತಗಳಲ್ಲಿ ಲೋಕಗಳಲ್ಲಿ ನಡೆದುಕೊಂಡು ಬರುತ್ತಿದೆ. ಕುಂತಿ ! ಹೀಗೆ ಮೊದಲಿನಿಂದರೂ ಶಾಶ್ವತ ಧರ್ಮವನ್ನು ತಿಳಿದ ಧೀರರು ತಿಳಿದಿದ್ದಾರೆ. ತಾನಾಗಿಯೇ ದಾನವಾಗಿ ಕೊಟ್ಟಿದ್ದುದು,

ತಪಿಸಿದ ತಪಸ್ಸು, ತಾನಾಗಿಯೇ ಅನುಷ್ಠಾನಗೊಳಿಸಿಕೊಂಡ ನಿಯಮಗಳು, ಇವೆಲ್ಲವೂ ಮಕ್ಕಳಿಲ್ಲದವನನ್ನು ಪಾವನಗೊಳಿಸುವುದಿಲ್ಲ. ಇವೆಲ್ಲವನ್ನೂ ತಿಳಿದಿದ್ದ ನಾನು ಮುಂದಿನದನ್ನು ಯೋಚಿಸುತ್ತಿದ್ದೇನೆ. ಮಕ್ಕಳಿಲ್ಲದವನು ಶುಭ ಲೋಕಗಳನ್ನು ಹೊಂದುವುದಿಲ್ಲ ಎಂದು ಚಿಂತಿಸುತ್ತಿದ್ದೇನೆ. ನಾನೇ ಮಾಡಿದ ಕರ್ಮದಿಂದ ಜಿಂಕೆಯ ಶಾಪಕ್ಕೊಳಗಾಗಿ ಮಕ್ಕಳನ್ನು ಪಡೆಯುವ ಶಕ್ತಿಯನ್ನು ಕಳೆದುಕೊಂಡಿದ್ದೇನೆ. ಈ ರೀತಿ ಕ್ರೂರ ಕರ್ಮದಿಂದ ನಾನು ಹತನಾಗಿದ್ದೇನೆ. ಧರ್ಮದರ್ಶನದ ಪ್ರಕಾರ ಒಟ್ಟು ಆರು ಪ್ರಕಾರದ ಪುತ್ರರು ಬಂಧು-ದಾಯಾದಿಗಳು ಆಗಬಲ್ಲರು ಮತ್ತು ಇನ್ನು ಆರು ಪ್ರಕಾರದ ಪುತ್ರರು ಬಂಧು ದಯಾದಿಗಳು ಎನ್ನಿಸಿಕೊಳ್ಳಲಾರರು. ಅವುಗಳ ಕುರಿತು ಹೇಳುತ್ತೇನೆ ಕೇಳು. ತನಗೇ ಹುಟ್ಟಿದ, ಬೇರೆಯವರು ಕೊಟ್ಟ, ಕ್ರಯಕ್ಕೆ ಖರೀದಿಸಿದ, ತನ್ನ ವಿಧವೆಯಲ್ಲಿ ಹುಟ್ಟಿದ, ವಿವಾಹಕ್ಕೆ ಮೊದಲೇ ಪತ್ನಿಯಲ್ಲಿ ಹುಟ್ಟಿದ ಮತ್ತು ವೇಶ್ಯೆಯಲ್ಲಿ ಹುಟ್ಟಿದ ಮಗನು ಬಂಧು ದಾಯಾದಿಯಾಗಬಲ್ಲನು. ಬೇರೆಯವರಿಗೆ ಕೊಟ್ಟ, ಮಾರಿದ, ಕೃತ್ರಿಮವಾಗಿ ಹುಟ್ಟಿದ, ತಾನಾಗಿಯೇ ಹುಟ್ಟಿದ, ಗೊತ್ತಿಲ್ಲದವನಿಗೆ ಹುಟ್ಟಿದ, ಹೀನಯೋನಿಯಲ್ಲಿ ಹುಟ್ಟಿದ ಮಗನು ಬಂಧು ದಾಯಾದಿ ಎನ್ನಿಸಿಕೊಳ್ಳಲಾರ. ಮೊದಲಿನಿಂದ ಪ್ರಾರಂಭಿಸಿ ಕೊನೆಯವರೆಗೆ ಮಕ್ಕಳನ್ನು

ಪಡೆಯಲು ಪ್ರಯತ್ನಿಸಬೇಕು. ಪುತ್ರರನ್ನು ಪಡೆಯಲು ಬಯಸಿದವರು ಉತ್ತಮ ಮತ್ತು ಶ್ರೇಷ್ಠರಿಂದ ಪುತ್ರರನ್ನು ಪಡೆಯಬೇಕು. ಸ್ವಾಯಂಭು ಮನುವು ಹೇಳಿದಂತೆ ಸಾಧುಗಳು ತಮ್ಮ ವೀರ್ಯದಿಂದ ಹುಟ್ಟದಿದ್ದರೂ ಮಕ್ಕಳನ್ನು ಧರ್ಮಫಲದಾಯಕರೆಂದೂ ಶ್ರೇಷ್ಠರೆಂದೂ ತಿಳಿಯುತ್ತಾರೆ. ಆದುದರಿಂದ ಸ್ವಯಂ ಮಕ್ಕಳನ್ನು ಪಡೆಯಲು ಅಶಕ್ಯನಾದ ನಾನು ನನ್ನ ಯಶಸ್ವಿನಿ ಪತ್ನಿಯಾದ ನಿನ್ನನ್ನು ಇಂದು ಕಳುಹಿಸುತ್ತಿದ್ದೇನೆ. ನನ್ನ ಸರಿಸಮನಾದ ಅಥವಾ ನನಗಿಂಥಲೂ ಶ್ರೇಷ್ಠನಾದ ಯಾರಿಂದಲಾದರೂ ನನಗೆ ಒಂದು ಮಗುವನ್ನು ಪಡೆದುಕೊಂಡು ಬಾ. ಹಿರಿಯರಿಂದ ಮಕ್ಕಳನ್ನು ಪಡೆಯಲು ನಿಯುಕ್ತಗೊಂಡ ಆ ವೀರಪತ್ನಿ ಶಾರದಂಡಾಯನಿಯ ಕಥೆಯನ್ನು ಕೇಳು. ಅವಳು ಸ್ನಾತಳಾಗಿ ರಾತ್ರಿಯಲ್ಲಿ ನಾಲ್ಕು ರಸ್ತೆಗಳು ಕೂಡುವಲ್ಲಿ ಒಂದು ಹೂವನ್ನಿತ್ತು ಓರ್ವ ಸಿದ್ಧ ದ್ವಿಜನನ್ನು ವರಿಸಿದಳು. ಮಗನಿಗಾಗಿ ಅಗ್ನಿಯಲ್ಲಿ ಆಹುತಿ ಕರ್ಮಗಳನ್ನು ಪೂರೈಸಿ ಅವಳು ಅವನ ಜೊತೆ ವಾಸಿಸಿದಳು. ಅವನು ಅವಳಲ್ಲಿ ದುರ್ಜಯನೇ ಮೊದಲಾದ ಮೂರು ಮಹಾರಥಿಗಳನ್ನು ಪಡೆದನು. ನೀನೂ ಕೂಡ ಹಾಗೆ ನನ್ನ ಅಪ್ಪಣೆಯಂತೆ ತಪಸ್ಸಿನಲ್ಲಿ ಅತ್ಯುತ್ತಮ ಬ್ರಾಹ್ಮಣನಿಂದ ಇಂದು ಬೇಗನೇ ಮಗನನ್ನು ಪಡೆಯಬೇಕು.”

ಇದನ್ನು ಕೇಳಿದ ಕುಂತಿಯು ಕುರು ಋಷಭ ವೀರ ಭೂಮಿಪತಿ ತನ್ನ ಪತಿ ಪಾಂಡುವಿಗೆ ಹೇಳಿದಳು:

"ಧರ್ಮಜ್ಞ! ನೀನು ನನ್ನಲ್ಲಿ ಈ ರೀತಿ ಮಾತನಾಡುವುದು ಯಾವಕಾರಣಕ್ಕೂ ಸರಿಯಲ್ಲ. ನಿನ್ನಲ್ಲಿಯೇ ಅಭಿರತ ಧರ್ಮಪತ್ನಿ ನಾನು. ಧಾರ್ಮಿಕವಾಗಿ ನೀನೇ ನನ್ನಲ್ಲಿ ವೀರ ಪುತ್ರರನ್ನು ಪಡೆಯುತ್ತೀಯೆ. ನಾನು ನಿನ್ನೊಡನೆಯೇ ಸ್ವರ್ಗವನ್ನು ಸೇರುತ್ತೇನೆ. ಮಕ್ಕಳಿಗೋಸ್ಕರ ನೀನೇ ನನ್ನಲ್ಲಿ ಬರಬೇಕು. ನಿನ್ನನ್ನು ಬಿಟ್ಟು ಬೇರೆಯವರೊಂದಿಗೆ ನಾನು ನನ್ನ ಯೋಚನೆಯಲ್ಲಿಯೂ ಹೋಗಲಾರೆ. ಈ ಭೂಮಿಯಲ್ಲಿ ನಿನಗಿಂಥ ಶ್ರೇಷ್ಠ ಬೇರೆ ಯಾವ ಮಾನವನಿದ್ದಾನೆ? ಪುರಾಣಗಳಲ್ಲಿ ಕೇಳಿದ ಈ ಧಾರ್ಮಿಕ ಕಥೆಯನ್ನು ಹೇಳುತ್ತೇನೆ ಕೇಳು. ಹಿಂದೆ ಪುರುವಂಶವಿವರ್ಧನ ಪರಮ ಧರ್ಮಿಷ್ಠ ವ್ಯುಷಿತಾಶ್ವ ಎಂಬ ವಿಖ್ಯಾತ ರಾಜನಿದ್ದನೆಂದು ಹೇಳುತ್ತಾರೆ. ಆ ಧರ್ಮಾತ್ಮ ಮಹಾತ್ಮನು ಯಜ್ಞವನ್ನು ನಡೆಸಿದಾಗ ಇಂದ್ರನೊಡಗೂಡಿ ದೇವತೆಗಳೂ ಮಹರ್ಷಿಗಳೂ ಅಲ್ಲಿಗೆ ಆಗಮಿಸಿದ್ದರು. ರಾಜರ್ಷಿ ಮಹಾತ್ಮ ವ್ಯುಷಿತಾಶ್ವನ ಆ ಯಜ್ಞದಲ್ಲಿ ಇಂದ್ರನು ಸೋಮವನ್ನು ಕುಡಿದು ಮತ್ತು ದ್ವಿಜರು ದಕ್ಷಿಣೆಗಳಿಂದ ಸಂತೃಪ್ತರಾದರು. ಛಳಿಗಾಲ ಕಳೆದ ನಂತರ ಸೂರ್ಯನು

ಹೇಗೆ ಸರ್ವಭೂತಗಳನ್ನೂ ಬೆಳಗುತ್ತಾನೋ ಹಾಗೆ ರಾಜ ವ್ಯುಷಿತಾಶ್ವನು ಮಾನವರಲ್ಲಿ ಬೆಳಗತೊಡಗಿದನು. ಆ ರಾಜಸತ್ತಮನು ಪೂರ್ವ, ಉತ್ತರ, ಮಧ್ಯ ಮತ್ತು ದಕ್ಷಿಣ ದಿಕ್ಕುಗಳ ನೃಪತಿಗಳನ್ನು ಜಯಿಸಿ, ಸೆರೆಹಿಡಿದು, ತನ್ನ ಮುಂದೆ ಮೆರವಣಿಗೆ ಮಾಡಿಸಿದನು. ಪ್ರತಾಪಿ ದಶನಾಗಬಲಾನ್ವಿತ ವ್ಯುಷಿತಾಶ್ವನು ಮಹಾಯಜ್ಞ ಅಶ್ವಮೇಧದ ನಂತರ ರಾಜೇಂದ್ರನೆನಿಸಿಕೊಂಡನು. ಪುರಾಣಗಳನ್ನು ತಿಳಿದ ಜನರು ಈಗಲೂ ಅವನ ಬಗ್ಗೆ ಗಾಥೆಯನ್ನು ಹಾಡುತ್ತಾರೆ. ವ್ಯುಷಿತಾಶ್ವನು ಸಮುದ್ರದ ತುದಿಯವರೆಗೂ ವಸುಂಧರೆಯನ್ನು ಗೆದ್ದನು, ಮತ್ತು ತಂದೆಯು ತನ್ನ ಮಕ್ಕಳನ್ನು ಹೇಗೋ ಹಾಗೆ ಎಲ್ಲ ವರ್ಣದವರನ್ನೂ ಪರಿಪಾಲಿಸಿದನು. ಮಹಾಯಜ್ಞದ ಯಜಮಾನನಾಗಿ ಬ್ರಾಹ್ಮಣರಿಗೆ ಅನಂತ ರತ್ನ-ಧನಗಳನ್ನಿತ್ತು ಆ ಮಹಾಕ್ರತುವನ್ನು ನೆರವೇರಿಸಿದನು. ಬಹಳ ಸಮಯ ಅವನು ಸೋಮರಸವನ್ನು ಹಿಂಡಿ ಸೋಮ ಯಜ್ಞಗಳನ್ನು ನೆರವೇರಿಸಿದನು. ಅವನಿಗೆ ಪರಮಸಮ್ಮತ, ರೂಪದಲ್ಲಿ ಭುವಿಯಲ್ಲಿಯೇ ಅಸದೃಶಿ ಭದ್ರಾ ಕಾಕ್ಷಿವತೀ ಎಂಬ ಹೆಸರಿನ ಪತ್ನಿಯಿದ್ದಳು. ಅವರು ಪರಸ್ಪರರನ್ನು ಕಾಮಿಸಿದರು ಎಂದು ಕೇಳುತ್ತೇವೆ. ಅವನು ಅವಳಲ್ಲಿ ಕಾಮಸಮ್ಮತ್ತನಾಗಿ ಯಕ್ಷ್ಮಾಣವನ್ನು ಹೊಂದಿದನು.

ಸ್ವಲ್ಪವೇ ಕಾಲದಲ್ಲಿ ಮುಳುಗುವ ಸೂರ್ಯನಂತೆ ಅವನು ಹೊರಟುಹೋದನು. ಆ ಮನುಷ್ಯೇಂದ್ರನು ತೀರಿಕೊಂಡನಂತರ ಅವನ ಪತ್ನಿಯು ಶೋಕಸಂತಪ್ತಳಾದಳು. ಮಕ್ಕಳಿಲ್ಲದ ಆ ಭದ್ರೆಯು ಪರಮ ದುಃಖಾರ್ತಳಾಗಿ ವಿಲಪಿಸಿದಳೆಂದು ಹೇಳುತ್ತಾರೆ. ಅದನ್ನು ಹೇಳುತ್ತೇನೆ ಕೇಳು. 'ಪರಮಧರ್ಮಜ್ಞ! ಯಾವುದೇ ನಾರಿಯು ಪುತ್ರಳಿಲ್ಲದವಳಂತೆ ಮಾಡಿದ ಪತಿಯನ್ನು ಬಿಟ್ಟು ಜೀವಿಸಲಾರಳು; ಅವಳು ಜೀವಿಸಿದರೂ ದುಃಖಿತಳಾಗಿಯೇ ಇರುತ್ತಾಳೆ. ಪತಿಯಿಲ್ಲದ ನಾರಿಯ ಶ್ರೇಯಸ್ಸು ಕೂಡ ಮೃತಗೊಂಡಂತೆ. ನೀನು ಹೋದಲ್ಲಿಗೆ ಬರಲು ಇಚ್ಛಿಸುತ್ತೇನೆ. ನನ್ನನ್ನೂ ನಿನ್ನ ಜೊತೆ ಕರೆದುಕೊಂಡು ಹೋಗುವ ಕೃಪೆ ಮಾಡು. ನನಗೆ ನಿನ್ನನ್ನು ಬಿಟ್ಟು ಒಂದು ಕ್ಷಣವೂ ಜೀವಿಸುವ ಉತ್ಸಾಹವಿಲ್ಲ. ಇಲ್ಲಿಂದ ನನ್ನನ್ನು ಬೇಗನೆ ಕರೆದುಕೊಂಡು ಹೋಗುವ ಕೃಪೆ ಮಾಡು. ಸಮ ವಿಷಮ ಪರಿಸ್ಥಿತಿಗಳೆರಡರಲ್ಲೂ ನಾನು ನಿನ್ನನ್ನು ಹಿಂಬಾಲಿಸುತ್ತೇನೆ. ನಿನ್ನನ್ನು ಹಿಂಬಾಲಿಸಿದ ನಾನು ಪುನಃ ಹಿಂತಿರುಗಿಯೂ ನೋಡಲಾರೆ. ನೆರಳಿನಂತೆ ನಿನ್ನನ್ನು ಹಿಂಬಾಲಿಸುವೆ, ಸತತ ನಿನ್ನ ವಶದಲ್ಲಿಯೇ ಇರುವೆ. ನಿತ್ಯವೂ ನಿನ್ನ ಪ್ರಿಯಹಿತ ನಿರತಳಾಗಿರುವೆ. ನಿನ್ನನ್ನು ಕಳೆದುಕೊಂಡಾಗಿನಿಂದ ನನ್ನನ್ನು ಹೃದಯ ಬತ್ತಿಸುವ

ಕಷ್ಟವು ಆವರಿಸಿದೆ. ಅಭಾಗ್ಯೆ ನಾನು ನನ್ನ ಹಿಂದಿನ ಜನ್ಮಗಳಲ್ಲಿ ಸಹಚಾರಿಣಿಗಳನ್ನು ಅಲಗಿಸಿರಬಹುದು ಅಥವಾ ಕೂಡಿದವರನ್ನು ಬೇರೆ ಮಾಡಿರಬಹುದು. ಪೂರ್ವ ಜನ್ಮಗಳಿಂದ ಸಂಚಿತಗೊಂಡ ಈ ಪಾಪ ಕರ್ಮಗಳಿಂದಲೇ ನಾನು ನಿನ್ನಿಂದ ಅಲಗಿ ಈ ದುಃಖವನ್ನು ಪಡೆದುಕೊಂಡಿದ್ದೇನೆ. ಇಂದಿನಿಂದ ನಾನು ನಿನ್ನ ದರ್ಶನವನ್ನೇ ಕಾಯುತ್ತಾ ದುಃಖಾವಿಷ್ಠಳಾಗಿ ದರ್ಭಾಸನದ ಮೇಲೆ ಮಲಗುತ್ತೇನೆ. ನನಗೆ ಕಾಣುವಂತವನಾಗು. ಈ ದುಃಖಾನ್ವಿತ ದೀನ, ಅನಾಥ, ಕೃಪಣ, ವಿಲಪಿಸುತ್ತಿರುವ ನನ್ನನ್ನು ಸಂತವಿಸು.' ಈ ರೀತಿ ಬಹುವಿಧವಾಗಿ ಅವಳು ಪುನಃ ಪುನಃ ಆ ಶವವನ್ನು ಅಪ್ಪಿಕೊಳ್ಳುತ್ತಾ ವಿಲಪಿಸುತ್ತಿರುವಾಗ ಒಂದು ಅಂತರಿಕ್ಷವಾಣಿಯು ನುಡಿಯಿತುಃ 'ಭದ್ರೇ! ಮೇಲೇಳು! ನಿನಗೊಂದು ವರವನ್ನು ಕೊಡುತ್ತೇನೆ. ಹೋಗು. ನಿನ್ನಲ್ಲಿ ನಾನು ಮಕ್ಕಳನ್ನು ಹುಟ್ಟಿಸುತ್ತೇನೆ. ಶುಕ್ಲಪಕ್ಷದ ಎಂಟನೆಯ ಅಥವಾ ಹದಿನಾಲ್ಕನೆಯ ದಿನ ಋತುಸ್ನಾತಳಾಗಿ ನೀನು ನಿನ್ನ ಹಾಸಿಗೆಯ ಮೇಲೆ ನನ್ನೊಡನೆ ಮಲಗಿಕೋ.' ಆ ಪುತ್ರಾರ್ಥಿನಿ ದೇವಿ ಪತಿವ್ರತೆಯು ಇದನ್ನು ಕೇಳಿ ಆ ವಾಕ್ಯದಲ್ಲಿ ಹೇಳಿದ ಹಾಗೆಯೇ ನಡೆದುಕೊಂಡಳು. ಆ ಶವದಿಂದ ದೇವಿಯು ಮೂವರು ಶಾಲ್ವರನ್ನು ಮತ್ತು

ನಾಲ್ವರು ಮದ್ರರನ್ನು ಮಕ್ಕಳಾಗಿ ಪಡೆದಳು. ನೀನೂ ಕೂಡ ಹೀಗೆ ನಿನ್ನ ತಪಸ್ಸು ಮತ್ತು ಯೋಗಬಲದಿಂದ ನನ್ನಲ್ಲಿ ನಿನ್ನ ಮನಸ್ಸಿನಿಂದಲೇ ಮಕ್ಕಳನ್ನು ಹುಟ್ಟಿಸಲು ಶಕ್ತನಾಗಿದ್ದೀಯೆ."

ಈ ಮಾತುಗಳನ್ನು ಕೇಳಿದ ರಾಜನು ಆ ದೇವಿಗೆ ಧರ್ಮವಿದ್ಧರ್ಮಸಂಯುಕ್ತ ಈ ಉತ್ತಮ ನುಡಿಗಳಿಂದ ಉತ್ತರಿಸಿದನು:

"ಕುಂತಿ! ಹಿಂದೆ ವ್ಯುಷಿತಾಶ್ವನು ನೀನು ಹೇಳಿದ ಹಾಗೆಯೇ ಮಾಡಿದನು. ಅವನು ದೇವ ಸಮನಾಗಿದ್ದನು. ಈಗ ನಾನು ನಿನಗೆ ಪುರಾಣಗಳಲ್ಲಿ ಋಷಿಗಳು ಕಂಡ, ಮಹಾತ್ಮರು ಧರ್ಮದ ಕುರಿತು ತಿಳಿದುಕೊಂಡಿದ್ದ ಧರ್ಮವನ್ನು ಹೇಳುತ್ತೇನೆ. ನಾನು ಹೇಳುವುದನ್ನು ಕೇಳು. ಹಿಂದೆ ಸ್ತ್ರೀಯರು ಕಾಮಚಾರ ವಿಹಾರಗಳಲ್ಲಿ ಸ್ವತಂತ್ರರಾಗಿದ್ದು ಯಾವುದೇ ಕಟ್ಟುಪಾಡುಗಳಿಲ್ಲದೇ ಇರುತ್ತಿದ್ದರು. ಕೌಮಾರ್ಯದಿಂದಲೇ ಅವರು ತಮ್ಮ ಪತಿಗಳಿಗೆ ನಡೆದುಕೊಳ್ಳುತ್ತಿರಲಿಲ್ಲ ಮತ್ತು ಸಾಕಷ್ಟು ಅಧರ್ಮಿಗಳಾಗಿದ್ದರು. ಯಾಕೆಂದರೆ ಹಿಂದಿನ ಆ ಕಾಲದಲ್ಲಿ ಅದೇ ಧರ್ಮವಾಗಿತ್ತು. ಈಗಲೂ ಕೂಡ ಹಳೆಯ ಈ ಧರ್ಮವನ್ನು ಕೀಳು ಯೋನಿಗಳಲ್ಲಿ ಹುಟ್ಟಿದವುಗಳು ಕಾಮ ದ್ವೇಷ ವಿವರ್ಜಿತರಾಗಿ ಪರಿಪಾಲಿಸುತ್ತಿವೆ. ಹಿಂದೆ ನೋಡಿದ್ದ ಈ ಧರ್ಮವನ್ನು ಮಹರ್ಷಿಗಳೂ

ಗೌರವಿಸುತ್ತಾರೆ. ಉತ್ತರ ಕುರುಗಳಲ್ಲಿ ಇದು ಇಂದೂ ನಡೆಯುತ್ತದೆ. ಸ್ತ್ರೀಯರಿಗೆ ಇದೇ ಅನುಗ್ರಹಕಾರಕ ಸನಾತನ ಧರ್ಮ. ಆದರೆ ಸ್ವಲ್ಪವೇ ಸಮಯದಲ್ಲಿ ಈಗಿನ ಲೋಕದಲ್ಲಿರುವ ಈ ಕಟ್ಟುಪಾಡುಗಳನ್ನು ರಚಿಸಲಾಯಿತು. ಈ ಕಟ್ಟುಪಾಡುಗಳನ್ನು ಯಾರು ಸ್ಥಾಪಿಸಿದರು ಮತ್ತು ಏಕೆ ಎನ್ನುವುದನ್ನು ವಿಸ್ತಾರವಾಗಿ ಕೇಳು. ಉದ್ದಾಲಕ ಎಂಬ ಹೆಸರಿನ ಮಹರ್ಷಿಯಿದ್ದ ಎಂದು ಕೇಳಿದ್ದೇವೆ. ಆ ಮುನಿಗೆ ಶ್ವೇತಕೇತು ಎಂದು ವಿಖ್ಯಾತ ಮಗನಿದ್ದನು. ಇವನೇ ಕೋಪದಲ್ಲಿ ಮನುಷ್ಯರಲ್ಲಿ ಈ ಕಟ್ಟುಪಾಡನ್ನು ಮಾಡಿದನು ಎಂದು ಕೇಳಿದ್ದೇವೆ. ಯಾಕೆ ಎನ್ನುವುದನ್ನು ಹೇಳುತ್ತೇನೆ ಕೇಳು. ಒಮ್ಮೆ ಶ್ವೇತಕೇತು ಮತ್ತು ಅವನ ತಂದೆಯ ಎದುರಿನಲ್ಲಿಯೇ ಓರ್ವ ಬ್ರಾಹ್ಮಣನು ಅವನ ತಾಯಿಯ ಕೈ ಹಿಡಿದು 'ಹೋಗೋಣ!''ಎಂದು ಹೇಳಿದನು. ಬಲವಂತವೋ ಎನ್ನುವಂತೆ ತನ್ನ ತಾಯಿಯನ್ನು ಕರೆದುಕೊಂಡು ಹೋಗುತ್ತಿರುವುದನ್ನು ನೋಡಿದ ಋಷಿಪುತ್ರನು ಉದ್ವಿಗ್ನನಾಗಿ ಕೋಪಗೊಂಡನು. ಕೃದ್ಧನಾದ ಅವನನ್ನು ನೋಡಿದ ಅವನ ತಂದೆಯು ಶ್ವೇತಕೇತುವಿಗೆ 'ಮಗು! ಸಿಟ್ಟಾಗಬೇಡ. ಇದೇ ಸನಾತನ ಧರ್ಮ!' ಎಂದನು. 'ಎಲ್ಲ ವರ್ಣದ ಅಂಗನೆಯರೂ ಈ ಭೂಮಿಯಲ್ಲಿ ಗೋವುಗಳಂತೆ ಅನಾವೃತರಾಗಿದ್ದಾರೆ. ಹೀಗೆ ಅವರವರ

ವರ್ಣದ ಪ್ರಜೆಗಳು ನಡೆದುಕೊಳ್ಳುತ್ತಾರೆ.’ ಋಷಿಪುತ್ರ ಶ್ವೇತಕೇತುವು ಆಗ ಇರುವ ಧರ್ಮವನ್ನು ನಿರ್ಲಕ್ಷಿಸಲಿಲ್ಲ. ಆದರೆ ಈ ಭುವಿಯ ಸ್ತ್ರೀ-ಪುರುಷರಿಗೆ ಮಾತ್ರ ಈ ಕಟ್ಟುನಿಟ್ಟನ್ನು ಮಾಡಿದನು. ಇದು ಮನುಷ್ಯರಿಗೆ ಮಾತ್ರ. ಇತರ ಜಂತುಗಳಿಗೆ ಅನ್ವಯಿಸುವುದಿಲ್ಲ. ಅಂದಿನಿಂದ ಈ ಕಟ್ಟುನಿಟ್ಟು ಜಾರಿಯಲ್ಲಿದೆ ಎಂದು ಕೇಳುತ್ತೇವೆ. ‘ಇಂದಿನಿಂದ ನಾರಿಯು ತನ್ನ ಪತಿಯನ್ನು ಬಿಟ್ಟು ಬೇರೆಯವರೊಡನೆ ಹೋಗುವುದು ಭ್ರೂಣಹತ್ಯೆಯನ್ನು ಮಾಡುವುದರಿಂದಾಗುವ ಪಾಪಕ್ಕೆ ಸಮನಾಗುತ್ತದೆ. ಇದು ಅತ್ಯಂತ ದುಃಖವನ್ನು ತರುತ್ತದೆ. ಕೌಮಾರಿ ಬ್ರಹ್ಮಚಾರಿಣಿ ಪತಿವ್ರತಾ ಪತ್ನಿಯನ್ನು ಬಯಸುವುದೂ ಕೂಡ ಈ ಭುವಿಯಲ್ಲಿ ಪಾತಕವೆನಿಸಿಕೊಳ್ಳುತ್ತದೆ. ಮಕ್ಕಳನ್ನು ಪಡೆಯುವ ಉದ್ದೇಶದಿಂದ ಪತಿಯು ಕೂಡಲಿಚ್ಛಿಸಿದಾಗ ಪತ್ನಿಯು ನಿರಾಕರಿಸಿದರೂ ಇದೇ ರೀತಿಯ ಪಾಪವೆನಿಸಿಕೊಳ್ಳುತ್ತದೆ.’ ಈ ರೀತಿ ಹಿಂದೆ ಉದ್ದಾಲಕ ಪುತ್ರ ಶ್ವೇತಕೇತುವು ಬಲವಂತವಾಗಿ ಧರ್ಮವನ್ನು ಹೊಂದಿಕೊಂಡೇ ಈ ಕಟ್ಟುನಿಟ್ಟನ್ನು ಸ್ಥಾಪಿಸಿದನು. ಸೌದಾಸನು ತನ್ನ ಪತ್ನಿ ಮದಯಂತಿಯನ್ನು ಸಂತಾನಕ್ಕಾಗಿ ನಿಯುಕ್ತಗೊಳಿಸಿದಾಗ, ಅವಳು ಮಹರ್ಷಿ ವಸಿಷ್ಠನ ಬಳಿ ಹೋದಳು ಎಂದು ಕೇಳಿಲ್ಲವೇ? ಅವನಿಂದ ಕಲ್ಮಾಷಪಾದನ

ಭಾರ್ಯೆಯು ಅಶ್ಮಕ ಎಂಬ ಹೆಸರಿನ ಪುತ್ರನನ್ನು ಪಡೆದು ತನ್ನ ಪತಿಯನ್ನು ಸಂತೋಷಗೊಳಿಸಿದಳು. ನಮ್ಮ ಜನ್ಮವೂ ಕೂಡ ಕುರು ವಂಶವೃದ್ಧಿಗೋಸ್ಕರ ಕೃಷ್ಣದ್ವೈಪಾಯನನಿಂದ ಆಯಿತೆಂದು ತಿಳಿದಿದೆ. ಈ ಎಲ್ಲ ಕಾರಣಗಳನ್ನು ಸಮೀಕ್ಷಿಸಿ ನೀನು ಕೂಡ ಧರ್ಮಕ್ಕೆ ಹೊಂದಿಕೊಂಡೇ ಇರುವ ನನ್ನ ಈ ಮಾತುಗಳಂತೆ ಮಾಡುವುದು ಸರಿ. ಕಟ್ಟುನಿಟ್ಟು ವ್ರತಾದಿಗಳನ್ನು ಮಾಡುತ್ತಿರುವ ರಾಜಪುತ್ರಿ! ಧರ್ಮವನ್ನು ತಿಳಿದ ಪತಿವ್ರತೆಯರಾದ ಸ್ತ್ರೀಯರು ಪತಿಯ ಮಾತನ್ನು ಉಲ್ಲಂಘಿಸದೇ ಇರುವುದೇ ಧರ್ಮವೆಂದು ತಿಳಿಯುತ್ತಾರೆ. ಬೇರೆ ಎಲ್ಲ ಕಾಲದಲ್ಲಿಯೂ ಸ್ತ್ರೀಯು ಸ್ವತಂತ್ರಳಾಗಿದ್ದಾಳೆ ಸರಿ. ಸಂತ ಜನರು ಮತ್ತು ಪುರಾಣಗಳು ಇದನ್ನೇ ಧರ್ಮವೆಂದು ಪರಿಗಣಿಸುತ್ತಾರೆ. ಭಾರ್ಯೆಯು ತನ್ನ ಪತಿಯು ಏನು ಹೇಳುತ್ತಾನೋ - ಧರ್ಮವಾಗಿರಲಿ ಅಥವಾ ಅಧರ್ಮವಾಗಿರಲಿ - ಹಾಗೆಯೇ ನಡೆದುಕೊಳ್ಳಬೇಕು ಎಂದು ಧರ್ಮವಿದರು ತಿಳಿದಿದ್ದಾರೆ. ಈ ರೀತಿ ನಾನು ರಕ್ತಾಂಗುಲಿಗಳಡಿಯಲ್ಲಿ ಪದ್ಮಪತ್ರವನ್ನು ಹಿಡಿದಿರುವಂತೆ ನನ್ನ ತಲೆಯ ಮೇಲೆ ಕೈಜೋಡಿಸಿ ನಿನ್ನಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ನನ್ನ ನಿಯೋಗದಂತೆ ಅಧಿಕ ತಪಸ್ವಿ ದ್ವಿಜನಿಂದ ಗುಣಸಂಪನ್ನ ಯುಕ್ತ ಪುತ್ರರನ್ನು ಪಡೆಯಬೇಕು. ನಿನ್ನ ಈ ಸಹಾಯದಿಂದ ನಾನು

ಮಕ್ಕಳಿರುವವರ ಗತಿಯನ್ನು ಸೇರಬಲ್ಲೆ.”

ಇದನ್ನು ಕೇಳಿದ ಪ್ರಿಯಹಿತರತೆ ವರಾರೋಹೆ ಕುಂತಿಯು ಪರಪುರಂಜಯ ಪಾಂಡುವಿಗೆ ಈ ರೀತಿ ಉತ್ತರಿಸಿದಳು:

“ನನ್ನ ತಂದೆಯ ಮನೆಯಲ್ಲಿ ಬಾಲಕಿಯಾಗಿದ್ದಾಗ ಅತಿಥಿ ಪೂಜೆಯಲ್ಲಿ ನಿಯುಕ್ತಗೊಂಡಿದ್ದೆನು. ಆಗ ಅಲ್ಲಿಗೆ ಸಂಶಿತವ್ರತ, ಉಗ್ರ, ಪರ್ಯಚರ, ಧರ್ಮದ ವಿಷಯದಲ್ಲಿ ನಿಗೂಢ ನಿಶ್ಚಯಗಳನ್ನೀಡುವ, ವಿದ್ವಾಂಸ ಬ್ರಾಹ್ಮಣ ದುರ್ವಾಸನು ಬಂದನು. ನಾನು ಆ ಸಂಶಿತಾತ್ಮನನ್ನು ಸರ್ವ ಯತ್ನಗಳಿಂದ ತೃಪ್ತಿಗೊಳಿಸಿದೆನು. ಸುಲಭವಾಗಿ ತೃಪ್ತಿಗೊಳ್ಳದ ಆ ಶ್ರೇಷ್ಠ ಭಗವಾನನನ್ನು ನನ್ನ ಎಲ್ಲ ಪ್ರಯತ್ನಗಳಿಂದ ಸಂತುಷ್ಟಗೊಳಿಸಿದೆನು. ಅದಕ್ಕೆ ಅವನು ನನಗೆ ಒಂದು ಮಂತ್ರಗ್ರಾಮವನ್ನು ನೀಡಿ ಈ ಮಾತುಗಳನ್ನಾಡಿದನು: ‘ಈ ಮಂತ್ರಗಳಿಂದ ನೀನು ಯಾವ ಯಾವ ದೇವತೆಯನ್ನು ಅಹ್ವಾನಿಸುತ್ತೀಯೋ ಅವನು ಇಷ್ಟವಿರಲಿ ಅಥವಾ ಇಷ್ಟವಿಲ್ಲದಿರಲ್ಲಿ ನಿನ್ನ ವಶನಾಗುತ್ತಾನೆ.’ ನನ್ನ ತಂದೆಯ ಮನೆಯಲ್ಲಿ ಅವನು ನನಗೆ ಈ ರೀತಿ ಹೇಳಿದನು. ಬ್ರಾಹ್ಮಣನು ನೀಡಿದ ವಚನವು ಸತ್ಯ ಮತ್ತು ಅದರ ಸಮಯವು ಈಗ ಬಂದೊದಗಿದೆ. ನಿನ್ನ ಅನುಜ್ಞೆಯಂತೆ ಆ ಮಂತ್ರದಿಂದ ನಾನು ಓರ್ವ

ದೇವತೆಯನ್ನು ಕರೆಯುತ್ತೇನೆ. ಇದರಿಂದ ನಮಗೆ ಮಕ್ಕಳಾಗಬಹುದು. ಯಾವ ದೇವತೆಯನ್ನು ಆವಾಹಿಸಲಿ ಹೇಳು. ನಿನ್ನ ಅನುಜ್ಞೆಯಿದೆಯೆಂದಾದರೆ ನಾನು ಇದಕ್ಕೆ ಸಿದ್ಧಳಿದ್ದೇನೆ.”

ಪಾಂಡುವು ಹೇಳಿದನು:

“ವರಾರೋಹೆ! ಇಂದೇ ನೀನು ಯಥಾವಿಧಿಯಾಗಿ ಇದನ್ನು ಪ್ರಯತ್ನಿಸು. ದೇವತೆಗಳ ಪುಣ್ಯಭಾಗಿ ಧರ್ಮನನ್ನು ಆವಾಹಿಸು. ಇದು ಅಧರ್ಮವೆನಿಸಿದರೆ ಧರ್ಮನು ಎಂದೂ ಇದರಲ್ಲಿ ಪಾಲ್ಗೊಳ್ಳುವುದಿಲ್ಲ. ಜನರು ಇದನ್ನೇ ಧರ್ಮವೆಂದು ಮನ್ನಿಸುತ್ತಾರೆ. ಅವನು ನಿಸ್ಸಂಶಯವಾಗಿಯೂ ಕುರುಗಳಿಗೆ ಧರ್ಮದ ದಾರಿದೀಪನಾಗುತ್ತಾನೆ. ಧರ್ಮನಿಂದ ಕೊಡಲ್ಪಟ್ಟ ಅವನ ಮನಸ್ಸು ಅಧರ್ಮದ ಕಡೆ ಹೋಗಲು ಸಾಧ್ಯವೇ ಇಲ್ಲ. ಆದುದರಿಂದ ಧರ್ಮನನ್ನು ಪುರಸ್ಕರಿಸು. ನಿಯತ್ತು ಮತ್ತು ಉಪಚಾರ ಅಭಿಚಾರಗಳಿಂದ ಧರ್ಮನನ್ನು ಆರಾಧಿಸು.”
“ಹಾಗೆಯೇ ಆಗಲಿ” ಎಂದು ತನ್ನ ಪತಿಗೆ ಹೇಳಿದ ಆ ವರಾಂಗನೆಯು ಅವನಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿ ಅಪ್ಪಣೆಯನ್ನು ಪಡೆದಳು.

## ಕುಂತೀಪುತ್ರರ ಜನನ

ಗಾಂಧಾರಿಯು ಒಂದು ವರ್ಷದ ಗರ್ಭಿಣಿಯಾಗಿರುವಾಗ ಕುಂತಿಯು ಗರ್ಭಕ್ಕಾಗಿ ಅಚ್ಯುತ ಧರ್ಮನನ್ನು ಆಹ್ವಾನಿಸಿದಳು. ಆ ದೇವಿಯು ಕೂಡಲೇ ಬಲಿಗಳನ್ನಿತ್ತು ಧರ್ಮನನ್ನು ಪೂಜಿಸಿ ಹಿಂದೆ ದುರ್ವಾಸನು ಕೊಟ್ಟಿದ್ದ ಜಪವನ್ನು ವಿಧಿವತ್ತಾಗಿ ಜಪಿಸಿದಳು. ಯೋಗಮೂರ್ತಿಧರ ಧರ್ಮನನ್ನು ಸೇರಿ ಆ ವರಾರೋಹೆಯು ಪುಣ್ಯೋಭಿಪೂಜಿತ ಶುಕ್ಲಪಕ್ಷ ಅಷ್ಟಮಿ ತಿಥಿಯಲ್ಲಿ ಆಕಾಶದಲ್ಲಿ ಸೂರ್ಯನು ಮಧ್ಯಗತಿಯ ಅಭಿಜಿತ್ ಮುಹೂರ್ತದಲ್ಲಿರುವಾಗ ಇಂದ್ರನ ದಿನದಂದು ಉಸಿರಾಡುವ ಎಲ್ಲ ಜೀವಿಗಳಲ್ಲಿಯೂ ಶ್ರೇಷ್ಠ ಪುತ್ರನನ್ನು ಪಡೆದಳು. ಕುಂತಿಯು ಸಮೃದ್ಧ ಯಶಸ್ವಿ ಪುತ್ರನಿಗೆ ಜನ್ಮವಿತ್ತ ವೇಳೆಯಲ್ಲಿ ಮಗನು ಹುಟ್ಟಿದಾಕ್ಷಣವೇ ಅಶರೀರ ವಾಣಿಯೊಂದು ಹೇಳಿತು:

> "ಇವನು ಧರ್ಮಭೃತರಲ್ಲಿಯೇ ಶ್ರೇಷ್ಠನಾಗುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಪಾಂಡುವಿನ ಪ್ರಥಮ ಸುತನು ಯುಧಿಷ್ಠಿರ ಎಂದು ವಿಖ್ಯಾತನಾಗುತ್ತಾನೆ. ಮೂರೂ ಲೋಕಗಳಲ್ಲಿ ವಿಶ್ರುತ ಯಶಸ್ಸು, ತೇಜಸ್ಸು ಮತ್ತು ಉತ್ತಮ ನಡವಳಿಕೆಗಳನ್ನು ಹೊಂದಿದ ರಾಜನೆಂದು ಪ್ರಥಿತನಾಗುತ್ತಾನೆ."

ಧಾರ್ಮಿಕ ಸುತನನ್ನು ಪಡೆದ ಪಾಂಡುವು ಪುನಃ ಹೇಳಿದನು:

> "ಕ್ಷತ್ರಿಯನಿಗೆ ಬಲವೇ ಶ್ರೇಷ್ಠವೆಂದು ಹೇಳುತ್ತಾರೆ.

ಬಲಜ್ಯೇಷ್ಠ ಪುತ್ರನನ್ನು ಕೇಳು."

ಪತಿಯ ಮಾತುಗಳಂತೆ ಅವಳು ವಾಯುವನ್ನು ಆಹ್ವಾನಿಸಿದಳು ಮತ್ತು ಅವನಿಂದ ಭೀಮ ಪರಾಕ್ರಮಿ, ಮಹಾಬಾಹು ಭೀಮನು ಜನಿಸಿದನು. ಆ ಅತಿಬಲಶಾಲಿಯು ಹುಟ್ಟಿದಾಗ ಅಶರೀರವಾಣಿಯೊಂದು

"ಇವನು ಎಲ್ಲ ಬಲಶಾಲಿಗಳಿಗಿಂಥ ಬಲಶಾಲಿಯಾಗಲು ಜನಿಸಿದ್ದಾನೆ!"

ಎಂದು ಹೇಳಿತು. ವೃಕೋದರನು ಹುಟ್ಟಿದಾಕ್ಷಣವೇ ಒಂದು ಅಧ್ಭುತವು ನಡೆಯಿತು. ಅವನು ತಾಯಿಯ ತೊಡೆಯಿಂದ ಉರುಳಿ ಬಿದ್ದಾಗ ದೊಡ್ಡ ಗಾತ್ರದ ಶಿಲೆಯೇ ಪುಡಿಪುಡಿಯಾಯಿತು. ಒಂದು ಹುಲಿಯ ಭಯದಿಂದ ಕುಂತಿಯು ಅವಸರದಲ್ಲಿ ತನ್ನ ತೊಡೆಯ ಮೇಲೆ ಮಲಗಿದ್ದ ವೃಕೋದರನನ್ನು ಮರೆತು ಎದ್ದು ನಿಂತಳು. ಆ ವಜ್ರಸಂಘಾತ ಕುಮಾರನು ಗಿರಿಯ ಮೇಲೆ ಬಿದ್ದನು. ಅವನು ಬೀಳುವಾಗ ಕೆಳಗಿದ್ದ ಶಿಲೆಯು ನೂರಾರು ಚೂರುಗಳಾಗಿ ಒಡೆಯಿತು. ಈ ರೀತಿ ಪುಡಿಯಾದ ಶಿಲೆಯನ್ನು ನೋಡಿದ ಪಾಂಡುವು ವಿಸ್ಮಿತನಾದನು. ಯಾವ ದಿನದಂದು ಭೀಮನು ಹುಟ್ಟಿದನೋ ಅದೇ ದಿನದಲ್ಲಿ ವಸುಧಾಧಿಪ ದುರ್ಯೋಧನನೂ ಹುಟ್ಟಿದನು.

ವೃಕೋದರನು ಹುಟ್ಟಿದ ನಂತರದಲ್ಲಿ ಪಾಂಡುವು "ನಾನು ಹೇಗೆ ಉತ್ತಮ, ಲೋಕಶ್ರೇಷ್ಠ ಪುತ್ರನನ್ನು ಪಡೆಯಲಿ?" ಎಂದು ಪುನಃ



ಚಿಂತಿಸತೊಡಗಿದನು.

> “ಯಾಕೆಂದರೆ ಈ ಲೋಕವು ದೈವ ಮತ್ತು ಪುರುಷಕರ್ಮ ಇವೆರಡರ ಮೇಲೂ ನಡೆಯುತ್ತದೆ. ಆ ದೈವ ಎನ್ನುವುದು ವಿಧಿ ಮತ್ತು ಕಾಲಗಳು ಸೇರಿ ಬಂದಾಗ ದೊರೆಯುತ್ತದೆ. ದೇವತೆಗಳಿಗಳೆಲ್ಲ ಪ್ರಧಾನನಾದವನು ಅಪ್ರಮೇಯ ಬಲೋತ್ಸಾಹಿ, ವೀರ್ಯವಾನ, ಅಮಿತದ್ಯುತಿ ರಾಜ ಇಂದ್ರನೆಂದು ಕೇಳಿಲ್ಲವೇ?  ಅವನನ್ನು ತಪಸ್ಸಿನಿಂದ ತೃಪ್ತಿಗೊಳಿಸಿ ಮಹಾಬಲಶಾಲಿ ಪುತ್ರನನ್ನು ಪಡೆಯುತ್ತೇನೆ. ನನಗೆ ಅವನು ಕೊಡುವ ಪುತ್ರನು ಶ್ರೇಷ್ಠನಾಗುತ್ತಾನೆ. ಆದುದರಿಂದ ನನ್ನ ಕರ್ಮ, ಮನಸ್ಸು ಮತ್ತು ಮಾತುಗಳಿಂದ ಮಹಾತಪಸ್ಸನ್ನು ತಪಿಸುತ್ತೇನೆ.”

ನಂತರ ಮಹಾತೇಜಸ್ವಿ ಕೌರವ್ಯ ಪಾಂಡುವು ಮಹರ್ಷಿಗಳೊಂದಿಗೆ ಸಮಾಲೋಚಿಸಿ, ಕುಂತಿಗೆ ಒಂದು ವರ್ಷಪರ್ಯಂತದ ಶುಭ ವ್ರತವನ್ನನುಸರಿಸಲು ನಿರ್ದೇಶಿಸಿದನು. ಆ ಮಹಾಬಾಹುವು ಸ್ವತಃ ಒಂದೇ ಕಾಲಮೇಲೆ ನಿಂತು ಹೆಚ್ಚಿನ ಏಕಾಗ್ರತೆಯಿಂದ ಉಗ್ರ ತಪಸ್ಸನ್ನು ಕೈಗೊಂಡನು. ಆ ಧರ್ಮಾತ್ಮನು ತ್ರಿದಶರ ಈಶ್ವರ ದೇವನನ್ನು ಸೂರ್ಯನನ್ನೇ ಹಿಂಬಾಲಿಸಿ ಆರಾಧಿಸಿದನು. ಬಹಳ ಕಾಲದ ನಂತರ ವಾಸವನು ಉತ್ತರಿಸಿದನು:

> “ಮೂರೂ ಲೋಕಗಳಲ್ಲಿ ವಿಶ್ರುತ ಪುತ್ರನನ್ನು ನಿನಗೆ

ಕೊಡುತ್ತೇನೆ. ದೇವತೆಗಳ, ಬ್ರಾಹ್ಮಣರ ಮತ್ತು ಸುಹೃದಯರ ಉದ್ದೇಶಗಳನ್ನು ಸಾಧಿಸುವ, ತನ್ನ ಎಲ್ಲ ಶತ್ರುಗಳನ್ನೂ ನಾಶಪಡಿಸುವ ಶ್ರೇಷ್ಠ ಸುತನನ್ನು ನೀಡುತ್ತೇನೆ."

ರಾಜ ಕೌರವನಿಗೆ ಮಹಾತ್ಮ ವಾಸವನು ಈ ರೀತಿ ಹೇಳಿದ ನಂತರ ದೇವರಾಜನ ಮಾತನ್ನು ಸ್ಮರಿಸುತ್ತಾ ಆ ಧರ್ಮಾತ್ಮನು ಕುಂತಿಗೆ ಹೇಳಿದನು:

"ನೀತಿಮಂತನೂ, ಮಹಾತ್ಮನೂ, ಆದಿತ್ಯಸಮತೇಜಸ್ವಿಯೂ, ದುರಾಧರ್ಷನೂ, ಕ್ರಿಯಾವಂತನೂ, ಅತೀವ ಅದ್ಭುತ ದರ್ಶನನೂ ಆದ ಕ್ಷತ್ರಿಯ ತೇಜಸ್ವಿಗಳ ಧಾಮ ಪುತ್ರನನ್ನು ಪಡೆ ಸುಶ್ರೋಣಿ! ದೇವೇಂದ್ರನ ಪ್ರಸಾದವಾಗಿದೆ, ಅವನನ್ನು ಆಹ್ವಾನಿಸು."

ಇದನ್ನು ಕೇಳಿದ ಆ ಯಶಸ್ವಿನಿಯು ಶಕ್ರನನ್ನು ಕರೆದಳು. ಆಗ ದೇವೇಂದ್ರನು ಆಗಮಿಸಿ ಅರ್ಜುನನನ್ನು ಹುಟ್ಟಿಸಿದನು. ಆ ಕುಮಾರನು ಹುಟ್ಟುತ್ತಿದ್ದಂತೆಯೇ ಅಶರೀರ ವಾಣಿಯೊಂದು ನಭದಲ್ಲೆಲ್ಲಾ ಪ್ರತಿಧ್ವನಿಸಿದ ಮಹಾಗಂಭೀರ ಸ್ವರದಲ್ಲಿ ಈ ರೀತಿ ಘೋಷಿಸಿತು:

"ಕುಂತಿ! ವೀರ್ಯದಲ್ಲಿ ಕಾರ್ತವೀರ್ಯನ ಸಮ, ಪ್ರರಾಕ್ರಮದಲ್ಲಿ ಶಿಬಿಯನ್ನು ಹೋಲುವ, ಶಕ್ರನಂತೆ

ಅಜೇಯನಾಗಿರುವ ಇವನು ನಿನ್ನ ಯಶಸ್ಸನ್ನು ಪಸರಿಸುತ್ತಾನೆ. ವಿಷ್ಣುವಿನಿಂದ ಅದಿತಿಯ ಸಂತೋಷವು ಹೇಗೆ ವೃದ್ಧಿಯಾಗಿತ್ತೋ ಹಾಗೆ ವಿಷ್ಣುಸಮನಾದ ಈ ಅರ್ಜುನನು ನಿನ್ನ ಸಂತೋಷವನ್ನೂ ವರ್ಧಿಸುತ್ತಾನೆ. ಇವನು ಮದ್ರ, ಕೇಕಯ, ಕಾಶಿ, ಕರೂಷ, ಇವರೆಲ್ಲರನ್ನೂ ಗೆದ್ದು, ಕುರು ರಾಜ್ಯಕ್ಕೆ ಸೇರಿಸುತ್ತಾನೆ, ಮತ್ತು ಕುರುಗಳ ಸಂಪತ್ತನ್ನು ವೃದ್ಧಿಸುತ್ತಾನೆ. ತನ್ನ ಭುಜಬಲದಿಂದ ಖಾಂಡವ ವನದಲ್ಲಿರುವ ಸರ್ವಭೂತಗಳ ಕೊಬ್ಬಿನಿಂದ ಹವ್ಯವಾಹನನಿಗೆ ಪರಮ ತೃಪ್ತಿಯನ್ನು ತರುತ್ತಾನೆ. ಈ ಮಹಾಬಲಶಾಲಿಯು ಮಹೀಪಾಲರನ್ನೆಲ್ಲ ಗೆದ್ದು ಭ್ರಾತೃಗಳ ಸಮೇತ ಮೂರು ಯಜ್ಞಗಳನ್ನು ನೆರವೇರಿಸುತ್ತಾನೆ. ಜಾಮದಗ್ನಿಯ ಸಮನಾದ, ಪರಾಕ್ರಮದಲ್ಲಿ ವಿಷ್ಣುವನ್ನು ಹೋಲುವ ಈ ವೀರ್ಯವಂತ ಶ್ರೇಷ್ಠನು ಅಪರಾಜಿತನಾಗುತ್ತಾನೆ. ಅವನಿಗೆ ಎಲ್ಲ ದಿವ್ಯಾಸ್ತ್ರಗಳು ದೊರೆಯುತ್ತವೆ ಮತ್ತು ಈ ಪುರುಷರ್ಷಭನು ಕಳೆದು ಹೋದ ಸಂಪತ್ತನ್ನು ಪುನಃ ಪಡೆಯುತ್ತಾನೆ.”

ಕುಂತೀಪುತ್ರನ ಜನನ ಸಮಯದಲ್ಲಿ ಈ ಅದ್ಭುತ ಮಾತುಗಳು ಆಕಾಶದಲ್ಲಿ ವಾಯುವಿನಿಂದ ಕೇಳಿಬಂದಿತು. ಕುಂತಿಯು ಈ ಮಾತುಗಳನ್ನು ಅವನಿಂದಲೇ ಕೇಳಿದಳು. ಆ ಉಚ್ಛಸ್ವರದಲ್ಲಿ ಹೇಳಿದ

ಮಾತುಗಳನ್ನು ಶತಶೃಂಗದಲ್ಲಿ ವಾಸಿಸುತ್ತಿದ್ದ ತಪಸ್ವಿಗಳೆಲ್ಲರೂ ಕೇಳಿ ಪರಮ ಹರ್ಷಿತರಾದರು. ಆಗ ಆಕಾಶದಲ್ಲಿ ದೇವಋಷಿಗಳ, ಇಂದ್ರರ ಮತ್ತು ದಿವೌಕಸರ ದುಂದುಭಿಗಳ ತುಮುಲವು ಕೇಳಿಬಂದಿತು. ದೇವಗಣಗಳು ಪಾರ್ಥನನ್ನು ಗೌರವಿಸಲು ನೆರೆದಾಗ ಪುಷ್ಪವೃಷ್ಠಿಗಳಿಂದೊಡಗೂಡಿದ ಮಹಾಘೋಷವು ಕೇಳಿಬಂದಿತು. ಕದ್ರುವಿನ ಮಕ್ಕಳು, ವಿನತೆಯ ಮಕ್ಕಳು, ಗಂಧರ್ವರು, ಅಪ್ಸರೆಯರು, ಸರ್ವ ಪ್ರಜೆಗಳ ನಾಯಕರು, ಮತ್ತು ಸಪ್ತ ಮಹರ್ಷಿಗಳು - ಭರದ್ವಾಜ, ಕಶ್ಯಪ, ಗೌತಮ, ವಿಶ್ವಾಮಿತ್ರ, ಜಮದಗ್ನಿ, ವಸಿಷ್ಠ, ಮತ್ತು ಭಾಸ್ಕರನ ಉದಯದೊಂದಿಗೆ ಕಾಣಿಸಿಕೊಳ್ಳುವ ಮತ್ತು ಅವನ ಅಸ್ತದೊಂದಿಗೆ ಮರೆಯಾಗುವ ಭಗವಾನ ಅತ್ರಿ --ಎಲ್ಲರೂ ಬಂದು ಸೇರಿದರು. ದಿವ್ಯ ಮಾಲಾಂಬರಗಳನ್ನು ಧರಿಸಿ ಸರ್ವಾಲಂಕಾರ ಭೂಷಿತೆ ಅಪ್ಸರೆಯರು ಬೀಭತ್ಸುವನ್ನು ಸುತ್ತುವರೆದು ಹಾಡುತ್ತಾ ನೃತ್ಯಮಾಡಿದರು. ಗಂಧರ್ವರನ್ನೊಡಗೊಂಡು ಶ್ರೀಮಾನ್ ತುಂಬುರುವು ಹಾಡಿದನು. ಈ ಎಲ್ಲ ಗಂಧರ್ವರು ಆ ನರರ್ಷಭನನ್ನು ಹಾಡಿ ಹೊಗಳಿದರು: ಭೀಮಸೇನ, ಉಗ್ರಸೇನ, ಊರ್ಣಾಯು, ಅನಘ, ಗೋಪತಿ, ಧೃತರಾಷ್ಟ್ರ, ಏಳನೆಯ ಸೂರ್ಯವರ್ಚಾಕ್ಷ, ಯುಗಪ, ತೃಣಪ, ಕಾರ್ಷ್ಣಿ, ನಂದಿ, ಚಿತ್ರರಥ, ಹದಿಮೂರನೆಯವನು ಶಾಲಿಶಿರ, ಹದಿನಾಲ್ಕನೆಯವನು ಪರ್ಜ್ಯನ್ಯ, ಹದಿನೈದನೆಯ ಕಲಿ, ಹದಿನಾರನೆಯ ನಾರದ, ಮಹಾಯಶಸ್ವಿ ಸದ್ವಾ, ಬೃಹದಾ, ಬೃಹಕ, ಕರಾಲ, ಬ್ರಹ್ಮಚಾರಿ, ಬಹುಗುಣ, ವಿಶ್ರುತ

ಸುಪರ್ಣ, ವಿಶ್ವಾವಸು, ಭುಮನ್ಯು, ಹತ್ತನೆಯ ಸುಚಂದ್ರ, ಮತ್ತು ಗೀತಮಾಧುರ್ಯ ಸಂಪನ್ನ ವಿಖ್ಯಾತ ಹಹ ಮತ್ತು ಆಹುಃ. ಆಯತಲೋಚನೆ ಮಹಾಭಾಗೆ ಅಪ್ಸರೆಯರೂ ಕೂಡ ಸಹರ್ಷದಿಂದ ಸರ್ವಾಲಂಕಾರ ಭೂಷಿತೆಯರಾಗಿ ಹಾಡಿ ಕುಣಿದರು. ಅನುನ, ಅನವದ್ಯ, ಪ್ರಿಯಮುಖ್ಯ, ಗುಣವರ, ಅದ್ರಿಕ, ಶಚಿ, ಮಿಶ್ರಕೇಶಿ, ಅಲಂಬುಷ, ಮರೀಚಿ, ಶಿಚುಕ, ವಿದ್ಯುತ್ಪರ್ಣ, ತಿಲೋತ್ತಮ, ಅಗ್ನಿಕ, ಲಕ್ಷಣಾ, ಕ್ಷೇಮ, ದೇವಿ ರಂಭಾ, ಮನೋರಮಾ, ಅಸಿತಾ, ಸುಬಾಹು, ಸುಪ್ರಿಯ, ಸುವಪು, ಪುಂಡರೀಕಾ, ಸುಗಂಧಾ, ಸುರಥಾ, ಪ್ರಮಥಿನೀ, ಕಾಮ್ಯ, ಶರದ್ವತೀ, ಇವರೆಲ್ಲರೂ ಅಲ್ಲಿ ನೃತ್ಯಗೈದರು. ಮೇನಕಾ, ಸಹಜನ್ಯ, ಪರ್ಣಿಕಾ, ಪುಂಜಿಕಸ್ಥಲಾ, ಕ್ರತುಸ್ಥಲಾ, ಘೃತಾಚೀ, ವಿಶ್ವಾಚೀ, ಪೂರ್ವಚಿತ್ತಾ, ಉಮ್ಲೋಚಾ, ಹತ್ತನೆಯ ಪ್ರಮ್ಲೋಚಾ, ಹನ್ನೊಂದನೆಯ ಉರ್ವಶಿ, ಈ ಎಲ್ಲ ಆಯತಲೋಚನೆಯರೂ ಹಾಡಿ ಕುಣಿದರು. ಪಾಂಡವನ ಮಹಿಮೆಯನ್ನು ವರ್ಧಿಸಲೋಸುಗ ಅಂಬರದಲ್ಲಿ ಪಾವಕನನ್ನೂ ಕೂಡಿ ಧಾತಾರ, ಯಮ, ಮಿತ್ರ, ವರುಣ, ಅಂಶ, ಭಗ, ಇಂದ್ರ, ವಿವಸ್ವಾನ್, ಪೂಷ, ತ್ವಷ್ಟ, ಸವಿತ, ಪರ್ಜನ್ಯ, ವಿಷ್ಣು ಮೊದರಾದ ಆದಿತ್ಯರು ನೆರೆದಿದ್ದರು. ಅಲ್ಲಿ ಮೃಗವ್ಯಾಧ, ಶರ್ವ, ನಿರೃತ್ತಿ, ಮಹಾಯಶಸ್ವಿ ಅಜ, ಏಕಪಾದ, ಬುಧ್ನ್ಯ, ಪರಂತಪಿ ಪಿನಾಕೀ, ದಹನ, ಈಶ್ವರ, ಕಪಾಲೀ, ಸ್ಥಾಣು, ಭಗವನ್ ಭಾವ, ಮೊದಲಾದ ರುದ್ರರೂ ನೆರೆದಿದ್ದರು. ಅಶ್ವಿನಿ ದೇವತೆಗಳು, ಅಷ್ಟ ವಸುಗಳು, ಮಹಾಬಲಶಾಲಿ ಮರುತರು, ವಿಶ್ವೇದೇವರು,

ಮತ್ತು ಸಾದ್ಯರು ಅಲ್ಲಿ ಸುತ್ತುವರೆದಿದ್ದರು. ಮಹಾಬಲಶಾಲಿ, ಮಹಾಕ್ರೋಧಿ, ತಮ್ಮ ತೇಜಸ್ಸಿನಿಂದ ಸುಡುತ್ತಿದ್ದ ಕಾರ್ಕೋಟಕ, ಶೇಷ, ಭುಜಂಗಮ ವಾಸುಕಿ, ಕಚ್ಛಪ, ಅಪಕುಂಡ, ಮಹೋರಗ ತಕ್ಷಕ ಮೊದಲಾದ ಬಹಳಷ್ಟು ನಾಗಗಳು ಅಲ್ಲಿ ಸೇರಿದ್ದರು. ಅಲ್ಲಿ ವಿನತೆಯ ಮಕ್ಕಳಾದ ತಾರ್ಕ್ಷ್ಯ, ಅರಿಷ್ಠನೇಮಿ, ಗರುಡ, ಅಸಿತಧ್ವಜ, ಅರುಣ ಮತ್ತು ಅರುಣಿಯರೂ ಸೇರಿದ್ದರು. ಆ ಮಹದಾಶ್ಚರ್ಯವನ್ನು ನೋಡಿ ವಿಸ್ಮಿತರಾದ ಮುನಿಸತ್ತಮರು ಆ ಪಾಂಡವನ ಕುರಿತು ಇನ್ನೂ ಅಧಿಕ ಗೌರವವನ್ನು ತೋರಿಸಿದರು.

ಆದರೆ ಮಹಾಯಶಸ್ವಿ ಪುತ್ರರನ್ನು ಪಡೆಯುವ ಆಸೆಯಿಂದ ಪಾಂಡುವು ಪುನಃ ದರ್ಶನೀಯ ಪತ್ನಿ ಕುಂತಿಯನ್ನು ಕೇಳಿದನು. ಆಗ ಅವಳು ಅವನಿಗೆ ಹೇಳಿದಳು:

> "ಆಪತ್ತಿನಲ್ಲಿಯೂ ನಾಲ್ಕನೆಯ ಮಗನ ಕುರಿತು ಮಾತನಾಡುವುದಿಲ್ಲ. ಮೂರು ಮಕ್ಕಳ ನಂತರ ಅವಳು ಚಾರಿಣಿ ಮತ್ತು ನಾಲ್ಕರ ನಂತರ ಬಂಧಕೀ ಎಂದು ಎನ್ನಿಸಿಕೊಳ್ಳುತ್ತಾಳೆ. ಈ ಧರ್ಮವನ್ನು ತಿಳಿದಿರುವ ನೀನು ಅದನ್ನು ಅತಿಕ್ರಮಿಸಿ ಬುದ್ಧಿಗಮ್ಯನಾಗಿ ನನಗೆ ಇನ್ನೂ ಮಕ್ಕಳನ್ನು ಪಡೆಯಲು ಹೇಗೆ ಹೇಳುತ್ತೀಯೆ?"

## ಮಾದ್ರೀಪುತ್ರರ ಜನನ

ಕುಂತೀ ಪುತ್ರರು ಮತ್ತು ಧೃತರಾಷ್ಟ್ರಾತ್ಮಜರು ಹುಟ್ಟಿದ ನಂತರ ಮದ್ರರಾಜ ಸುತೆಯು ಏಕಾಂತದಲ್ಲಿ ಪಾಂಡುವಿಗೆ ಈ ಮಾತುಗಳನ್ನು ಹೇಳಿದಳು:

"ಪರಂತಪ! ನೀನು ನನ್ನೊಡನೆ ಒಳ್ಳೆಯದಾಗಿ ನಡೆದುಕೊಳ್ಳುತ್ತಿಲ್ಲ ಎಂದಾಗಲೀ ಅಥವಾ ನಾನು ನಿತ್ಯವೂ ನಿನ್ನ ಮೊದಲನೆಯ ಪತ್ನಿಯ ಕೆಳಸ್ಥಾನವನ್ನು ಹೊಂದಿದ್ದೇನೆ ಎಂದಾಗಲೀ ದುಃಖಿಸುತ್ತಿಲ್ಲ. ಗಾಂಧಾರಿಯೂ ಕೂಡ ನೂರು ಪುತ್ರರನ್ನು ಪಡೆದಳೆಂದು ಕೇಳಿಯೂ ನನಗೆ ದುಃಖವಾಗುತ್ತಿಲ್ಲ. ಆದರೆ ನಾನು ಮತ್ತು ಕುಂತಿ ಇಬ್ಬರಿಗೂ ಮಕ್ಕಳಾಗದಂತಿದ್ದರೂ ನೀನು ಅವಳೊಬ್ಬಳಿಂದ ಮಾತ್ರ ಮಕ್ಕಳನ್ನು ಪಡೆಯುವ ಹಾಗೆ ಆಯಿತಲ್ಲ ಎಂದು ಬಹಳ ದುಃಖವಾಗುತ್ತಿದೆ. ಕುಂತಿರಾಜಸುತೆಯು ನಾನು ಕೂಡ ಮಕ್ಕಳನ್ನು ಪಡೆಯುವಂತೆ ಮಾಡಿದರೆ ನನಗೆ ಅನುಗ್ರಹವಾದಂತಾಗುತ್ತದೆ ಮತ್ತು ನಿನಗೂ ಹಿತವಾಗುತ್ತದೆ. ಅವಳ ಸಪತ್ನಿಯಾದ ನನಗೆ ಕುಂತಿಸುತೆಯಲ್ಲಿ ಈ ಮಾತುಗಳನ್ನು ಹೇಳಲು ಕಷ್ಟವಾಗುತ್ತಿದೆ. ಆದರೆ ನೀನು ನನ್ನ ಮೇಲೆ ಪ್ರಸನ್ನನಾಗಿದ್ದೀಯಾದರೆ ನೀನೇ ಅವಳಿಗೆ ಹೇಳಿ ತಯಾರಿಸು."

ಪಾಂಡುವು ಹೇಳಿದನು:

> “ಮಾದ್ರಿ! ನಾನೂ ಕೂಡ ಈ ವಿಷಯವನ್ನು ಸದಾ ನನ್ನ ಹೃದಯದಲ್ಲಿ ಇಟ್ಟುಕೊಂಡಿದ್ದೆ. ನಿನಗೆ ಬೇಸರವಾಗಬಹುದೆಂದು ನಾನು ನಿನ್ನಲ್ಲಿ ಹೇಳಿಕೊಳ್ಳಲಾಗಲಿಲ್ಲ. ಈಗ ನಿನ್ನ ಮನಸ್ಸಿನಲ್ಲಿರುವುದು ನನಗೆ ತಿಳಿದಿದೆಯಾದುದರಿಂದ ಈಗಲೇ ನಾನು ಕಾರ್ಯಗತನಾಗುತ್ತೇನೆ. ನನ್ನ ಮಾತಿನಂತೆಯೇ ಅವಳು ನಡೆಯುತ್ತಾಳೆ ಎಂದು ನನಗೆ ವಿಶ್ವಾಸವಿದೆ.”

ನಂತರ ಪಾಂಡುವು ಏಕಾಂತದಲ್ಲಿದ್ದಾಗ ಕುಂತಿಯಲ್ಲಿ ಹೇಳಿದನು:

> “ನನ್ನ ಕುಲಕ್ಕೆ ಸಂತಾನವನ್ನೂ ಮತ್ತು ಲೋಕಕ್ಕೆ ಪ್ರಿಯವಾದುದನ್ನೂ ಮಾಡು. ಕಲ್ಯಾಣಿ! ನಾನು ಮತ್ತು ನನ್ನ ಪೂರ್ವಜರು ಅಪಿಂಡರಾಗಬಾರದೆಂದು, ನನ್ನ ಪ್ರೀತಿಗೋಸ್ಕರ ಈ ಉತ್ತಮ ಕಲ್ಯಾಣ ಕಾರ್ಯವನ್ನು ಮಾಡು. ನಿನ್ನ ಯಶಸ್ಸಿಗೋಸ್ಕರವೂ ಒಂದು ದುಷ್ಕರ ಕೆಲಸವನ್ನು ಮಾಡು. ಒಡೆತನವನ್ನು ಪಡೆದ ಇಂದ್ರನೂ ಕೂಡ ತನ್ನ ಯಶಸ್ಸಿಗೋಸ್ಕರ ಯಜ್ಞಗಳನ್ನು ಕೈಗೊಳ್ಳುತ್ತಾನೆ. ಹೀಗೆ ಮಂತ್ರಗಳನ್ನು ತಿಳಿದ ದುಷ್ಕರ ತಪಸ್ಸುಗಳನ್ನು ಗೈದ ವಿಪ್ರರೂ ಕೂಡ ತಮ್ಮ ಯಶಸ್ಸಿಗೋಸ್ಕರ ಹೊಸ ಗುರುಗಳನ್ನು ಅರಸಿ ಹೋಗುತ್ತಾರೆ. ಹಾಗೆಯೇ ಸರ್ವ

ರಾಜರ್ಷಿಗಳೂ, ಬ್ರಾಹ್ಮಣರೂ, ತಪೋಧನರೂ ತಮ್ಮ ಯಶಸ್ಸಿಗೋಸ್ಕರ ಹೆಚ್ಚು ಹೆಚ್ಚು ಮೇಲ್ಮಟ್ಟದ ದುಷ್ಕರ ಕರ್ಮಗಳನ್ನು ಎಸಗುತ್ತಾರೆ. ಅನಿಂದಿತೇ! ನೀನು ಮಾದ್ರಿಯನ್ನು ನಮ್ಮ ಈ ಹಡಗಿನಿಂದ ಪಾರುಮಾಡಿಸಬೇಕು. ಅವಳಿಗೆ ಮಕ್ಕಳನ್ನು ನೀಡುವುದರಿಂದ ನೀನು ಅತ್ಯಂತ ಕೀರ್ತಿಯನ್ನು ಪಡೆಯುತ್ತೀಯೆ."

ತಕ್ಷಣವೇ ಅವಳು ಮಾದ್ರಿಯನ್ನು ಕರೆದು ಹೇಳಿದಳು:

"ಮಾದ್ರಿ! ಯಾರಾದರೂ ದೇವತೆಯನ್ನು ಒಮ್ಮೆ ಮಾತ್ರ ಯೋಚಿಸು. ಅವನಿಂದ ಅನುರೂಪ ಪುತ್ರನನ್ನು ಪಡೆಯುತ್ತೀಯೆ. ಸಂಶಯವೇ ಇಲ್ಲ."

ನಂತರ ಮಾದ್ರಿಯು ವಿಚಾರಮಾಡಿ ಮನಸಾ ಅಶ್ವಿನಿಯರಲ್ಲಿ ಹೋದಳು. ಅವರು ಬಂದು ಅವಳಲ್ಲಿ ರೂಪದಲ್ಲಿ ಭೂಮಿಯಲ್ಲಿಯೇ ಅಪ್ರತಿಮ ನಕುಲ-ಸಹದೇವರೆಂಬ ಅವಳಿ ಮಕ್ಕಳನ್ನು ಹುಟ್ಟಿಸಿದರು. ಈ ಅವಳಿ ಮಕ್ಕಳು ಹುಟ್ಟಿದಾಗಲೂ ಅಶರೀರವಾಣಿಯೊಂದು ಹೇಳಿತು:

"ಅನ್ಯ ಜನರಿಗಿಂತ ಅಧಿಕ ರೂಪ ಸತ್ವ ಗುಣೋಪೇತರಾದ ಇವರು ಅವರ ತೇಜಸ್ಸು, ರೂಪ ಮತ್ತು ದ್ರವಿಣ ಸಂಪತ್ತಿನಿಂದ ಬೆಳಗುತ್ತಾರೆ!"

ಶತಶೃಂಗವಾಸಿಗಳು ಅವರಿಗೆ ಹೆಸರುಗಳನ್ನಿತ್ತರು ಮತ್ತು ಭಕ್ತಿ ಕರ್ಮಗಳಿಂದ ಅಶೀರ್ವದಿಸಿದರು. ಜ್ಯೇಷ್ಠನನ್ನು ಯುಧಿಷ್ಠಿರನೆಂದು ಕರೆದರು, ಮಧ್ಯಮನನ್ನು ಭೀಮಸೇನ ಎಂದು, ತೃತೀಯನನ್ನು ಅರ್ಜುನನೆಂದೂ ಹೀಗೆ ಕುಂತೀ ಪುತ್ರರಿಗೆ ಹೆಸರುಗಳನ್ನಿಟ್ಟರು. ಪ್ರೀತಮನಸ್ಕ ವಿಪ್ರರು ಮಾದ್ರೀಪುತ್ರರಿಗೂ ಹೆಸರುಗಳನ್ನಿಟ್ಟರು: ಹಿರಿಯವನನ್ನು ನಕುಲನೆಂದೂ ಮತ್ತು ಕಿರಿಯವನನ್ನು ಸಹದೇವನೆಂದೂ ಕರೆದರು. ಈ ಕುರುಸತ್ತಮರು ಒಂದೊಂದು ವರ್ಷದ ಅಂತರದಲ್ಲಿ ಹುಟ್ಟಿದ್ದರು.

ಪಾಂಡುವು ಮಾದ್ರಿಯ ಪರವಾಗಿ ಏಕಾಂತದಲ್ಲಿ ರಹಸ್ಯದಲ್ಲಿ ಕುಂತಿಯಲ್ಲಿ ಪುನಃ ಕೇಳಿಕೊಂಡನು. ಆದರೆ ಪೃಥಾಳು ರಾಜನಿಗೆ ಈ ರೀತಿ ಉತ್ತರಿಸಿದಳು:

> "ನಾನು ಅವಳಿಗೆ ಒಂದೇ ಬಾರಿ ಕೊಡುತ್ತೇನೆ ಎಂದರೂ ಅವಳು ಈರ್ವರನ್ನು ಪಡೆದು ನನಗೆ ವಂಚನೆ ಮಾಡಿದಳು. ನನ್ನನ್ನು ಹಿಂದೆಹಾಕುವಳು ಎಂಬ ಭಯವಿದೆ. ನಾರಿಯರ ಸ್ವಭಾವವೇ ಇದು. ಎರಡು ದೇವತೆಗಳನ್ನು ಕರೆದು ಎರಡು ಮಕ್ಕಳನ್ನು ಪಡೆಯಬಹುದೆಂದು ಮೂಢಳಾದ ನಾನು ತಿಳಿದಿರಲಿಲ್ಲ. ಆದುದರಿಂದ ಇದರ ಕುರಿತು ನನಗೆ ಪುನಃ ಅಪ್ಪಣೆಮಾಡಬೇಡ. ಇದೇ ನಿನ್ನಿಂದ ನನಗೆ ಬೇಕಾದ ವರ."

ಈ ರೀತಿ ಮಹಾಬಲಶಾಲಿ, ಕುರುವಂಶವಿವರ್ಧನ, ಕೀರ್ತಿವಂತ,

ದೇವದತ್ತ ಆ ಐವರು ಸುತರು ಪಾಂಡುವಿಗೆ ಜನಿಸಿದರು. ಆ ಶುಭಲಕ್ಷಣಸಂಪನ್ನ, ಚಂದ್ರನಂತೆ ಸುಂದರ, ಸಿಂಹದರ್ಪ, ಮಹೇಷ್ವಾಸ, ಸಿಂಹವಿಕ್ರಾಂತಗಾಮಿ, ಸಿಂಹಗ್ರೀವ ಮನುಷ್ಯೇಂದ್ರರು ದೇವ ವಿಕ್ರಮಿಗಳಾಗಿ ಬೆಳೆದರು. ಆ ಪುಣ್ಯಕರ ಹಿಮಾಲಯ ಪರ್ವತದಲ್ಲಿ ಬೆಳೆಯುತ್ತಿರುವ ಅವರು ಅಲ್ಲಿ ಸೇರಿದ್ದ ಮಹರ್ಷಿಗಳಿಗೆ ವಿಸ್ಮಯವನ್ನುಂಟುಮಾಡಿದರು. ಈ ಐವರು ಮತ್ತು ಇತರ ನೂರು ಗುರುವಂಶವಿವರ್ಧನ ಸರ್ವರೂ ಸರೋವರದಲ್ಲಿದ್ದ ಕಮಲಗಳಂತೆ ಸ್ವಲ್ಪ ಕಾಲದಲ್ಲಿಯೇ ಬೆಳೆದು ದೊಡ್ಡವರಾದರು.

## ಪಾಂಡುವಿನ ಮರಣ

ತನ್ನ ಐವರು ಸುಂದರ ಪುತ್ರರು ಆ ಪರ್ವತದ ಮಹಾವನದಲ್ಲಿ ಬಾಹುಬಲದಿಂದ ರಕ್ಷಿತರಾಗಿ ಬೆಳೆಯುತ್ತಿರುವುದನ್ನು ನೋಡಿದ ಪಾಂಡುವು ಅತ್ಯಂತ ಹರ್ಷಿತನಾದನು. ಒಮ್ಮೆ ಎಲ್ಲ ಜೀವಿಗಳೂ ಸಮ್ಮೋಹನಗೊಂಡಿರುವ, ವನವೆಲ್ಲ ಪುಷ್ಪಭರಿತ ಕಾಲ ಮಧುಮಾಸದಲ್ಲಿ ರಾಜನು ತನ್ನ ಪತ್ನಿಯರೊಂದಿಗೆ ವನದಲ್ಲಿ ಸಂಚರಿಸುತ್ತಿದ್ದನು. ಪಲಾಶ, ತಿಲಕ, ಚೂತ, ಚಂಪಕ, ಪಾರಿಭದ್ರಕ ಮತ್ತು ಇತರ ಬಹು ವೃಕ್ಷಗಳಿಂದ ಫಲಪುಷ್ಪಸಮೃದ್ಧವಾದ, ವಿವಿಧ ಜಲಸ್ಥಾನಗಳಿಂದೊಡಗೂಡಿದ, ಶೋಭನೀಯ ಪದ್ಮಿನಿಗಳಿಂದೊಡಗೂಡಿದ ಆ ವನವನ್ನು ಕಂಡ ಪಾಂಡುವಿನ

ಹೃದಯದಲ್ಲಿ ಕಾಮವು ಬೆಳೆಯಿತು. ಅಮರನಂತೆ ಪ್ರಹೃಷ್ಟಮನಸ್ಕನಾಗಿ ಅಲ್ಲಿ ವಿಹರಿಸುತ್ತಿರುವ ಅವನನ್ನು ಒಂದೇ ಒಂದು ತುಂಡು ಬಟ್ಟೆಯನ್ನು ಉಟ್ಟ ಸುಂದರಿ ಮಾದ್ರಿಯು ಹಿಂಬಾಲಿಸಿದಳು. ತನ್ನ ಆ ಸುಂದರ ದೇಹವನ್ನು ಚಿಕ್ಕ ವಸ್ತ್ರದಿಂದ ಮುಚ್ಚಿಕೊಂಡಿದ್ದ ಅವಳನ್ನು ನೋಡಿ ಅವನಲ್ಲಿ ದಟ್ಟ ಅಗ್ನಿಯಂತೆ ಕಾಮವು ಭುಗಿಲೆದ್ದಿತು. ತನ್ನಹಾಗಿನ ಯೋಚನೆಯಲ್ಲಿಯೇ ಇದ್ದ ಆ ರಾಜೀವಲೋಚನೆಯನ್ನು ನೋಡಿದ ರಾಜನು ತನ್ನ ಕಾಮವನ್ನು ನಿಯಂತ್ರಿಸಲು ಅಸಮರ್ಥನಾಗಲು ಕಾಮ ಬಲವು ಅವನನ್ನು ಆವರಿಸಿತು. ಆ ನಿರ್ಜನ ವನದಲ್ಲಿ ರಾಜನು ತನ್ನ ಪತ್ನಿಯನ್ನು ಬಲವಂತವಾಗಿ ಹಿಡಿದು, ಆ ದೇವಿಯು ತನ್ನ ಶಕ್ತಿಯನ್ನು ಬಳಸಿ ಬಿಡಿಸಿಕೊಂಡು ನುಣುಚಿ ಹೋಗಲು ಪ್ರಯತ್ನಿಸಿದರೂ, ಸೇರಿದನು. ಆ ಕಾಮಪರೀತಾತ್ಮನು ತನ್ನ ಮೇಲಿದ್ದ ಶಾಪವನ್ನು ಮರೆತು ಬಲವಂತವಾಗಿ ಮಾದ್ರಿಯನ್ನು ಸೇರಲು ಹೋದನು. ಶಾಪದಿಂದುಂಟಾದ ಭಯವನ್ನು ಕಿತ್ತು ಬಿಸುಟು, ಮನ್ಮಥನ ವಶನಾಗಿ ತನ್ನ ಜೀವನವನ್ನೇ ಅಂತ್ಯಗೊಳಿಸಿಕೊಳ್ಳುವ ಕೌರವ್ಯನು ತನ್ನ ಪ್ರೇಮಿಕೆಯಲ್ಲಿ ಬಲವಂತವಾಗಿ ಹೋದನು. ಆ ಕಾಮಾತ್ಮನ ಬುದ್ಧಿಯು ಸಾಕ್ಷಾತ್ ಕಾಲದಿಂದ ಮೋಹಿತವಾಗಿತ್ತು. ಇಂದ್ರಿಯಗಳಿಂದ ಕಡೆಯಲ್ಪಟ್ಟ ಅವನ ಚೇತನವು ಅಲ್ಲಿಯೇ ನಷ್ಟವಾಯಿತು. ಪರಮ ಧರ್ಮಾತ್ಮ ಕುರುನಂದನ ಪಾಂಡುವು ತನ್ನ ಭಾರ್ಯೆಯನ್ನು ಕೂಡಿ ಕಾಲಧರ್ಮಕ್ಕೊಳಗಾದನು.

ತೀರಿಕೊಂಡ ರಾಜನ ದೇಹವನ್ನು ಆಲಿಂಗಿಸಿ ಮಾದ್ರಿಯು ಪುನಃ ಪುನಃ ದುಃಖಪೂರ್ಣ ಕೂಗನ್ನು ಕೂಗಿದಳು. ತಕ್ಷಣವೇ ಕುಂತಿಯು ತನ್ನ ಪುತ್ರ ಪಾಂಡವರು ಮತ್ತು ಮಾದ್ರಿಯ ಎರಡು ಮಕ್ಕಳನ್ನೊಡಗೂಡಿ ರಾಜನು ತೀರಿಕೊಂಡಿದ್ದ ಸ್ಥಳಕ್ಕೆ ಧಾವಿಸಿದಳು. ಆಗ ಆರ್ತ ಮಾದ್ರಿಯು ಕುಂತಿಗೆ ಕೂಗಿ ಹೇಳಿದಳು:

> "ಮಕ್ಕಳನ್ನು ಅಲ್ಲಿಯೇ ನಿಲ್ಲಿಸಿ ನೀನೊಬ್ಬಳೇ ಇಲ್ಲಿಗೆ ಬಾ!"

ಈ ಮಾತುಗಳನ್ನು ಕೇಳಿದ ಅವಳು ಮಕ್ಕಳನ್ನು ಅಲ್ಲಿಯೇ ಬಿಟ್ಟು "ಹತಳಾದೆ!""ಎಂದು ತೀವ್ರವಾಗಿ ಕೂಗುತ್ತಾ ಹತ್ತಿರಕ್ಕೆ ಓಡಿ ಬಂದಳು. ಧರಣೀತಲದಲ್ಲಿ ಮಲಗಿದ್ದ ಪಾಂಡು ಮತ್ತು ಮಾದ್ರಿಯನ್ನು ನೋಡಿದ ಕುಂತಿಯು ಶೋಕಪರೀತಾಂಗಿಯಾಗಿ ದುಃಖಿತಳಾಗಿ ವಿಲಪಿಸಿದಳು:

> "ನಾನು ನಿತ್ಯವೂ ಈ ವೀರನನ್ನು ರಕ್ಷಿಸುತ್ತಿದ್ದೆ ಮತ್ತು ಅವನೂ ಕೂಡ ಸತತವೂ ತನ್ನನ್ನು ತಾನೇ ನಿಯಂತ್ರಣದಲ್ಲಿಟ್ಟುಕೊಳ್ಳುತ್ತಿದ್ದ. ಹಾಗಿರುವಾಗ, ವನವಾಸಿಯ ಶಾಪವನ್ನು ತಿಳಿದೂ ಕೂಡ ನೀನು ಹೇಗೆ ಅವನನ್ನು ಅತಿಕ್ರಮಿಸಿದೆ? ಮಾದ್ರಿ! ಜನಾಧಿಪನನ್ನು ರಕ್ಷಿಸುವುದು ನಿನ್ನ ಕರ್ತವ್ಯವೂ ಆಗಿರಲಿಲ್ಲವೇ? ಹಾಗಿರುವಾಗ ನೀನು ಹೇಗೆ ಈ ನಿರ್ಜನವನದಲ್ಲಿ ನರಾಧಿಪನನ್ನು ಲೋಭಗೊಳಿಸಿದೆ? ಜನಾಧಿಪನನ್ನು

ರಕ್ಷಿಸುವುದು ನಿನ್ನ ಕರ್ತವ್ಯವೂ ಆಗಿರಲಿಲ್ಲವೇ? ಹಾಗಿರುವಾಗ ನೀನು ಹೇಗೆ ಈ ನಿರ್ಜನವನದಲ್ಲಿ ನರಾಧಿಪನನ್ನು ಲೋಭಗೊಳಿಸಿದೆ? ನೀನೇ ಧನ್ಯೆ ಮತ್ತು ನನಗಿಂತಲೂ ಭಾಗ್ಯವಂತೆ. ಮಹೀಪತಿಯ ಪ್ರಹೃಷ್ಟ ಮುಖವನ್ನು ನೋಡಿಯಾದರೂ ಸಂತಸಗೊಂಡೆ."

ಮಾದ್ರಿಯು ಹೇಳಿದಳು:

"ಅವನೇ ನನ್ನನ್ನು ಪ್ರಚೋದಿಸಿದನು. ನಾನು ಅವನನ್ನು ತಡೆಯಲು ಪುನಃ ಪುನಃ ಪ್ರಯತ್ನಿಸಿದೆ. ಆದರೆ ನಾನು ಅವನಿಂದ ದೂರವಾಗಿರಲು ಸಾದ್ಯವಾಗಲಿಲ್ಲ. ಅವನು ತನಗಿರುವ ಗಂಡಾಂತರವನ್ನು ಸತ್ಯಮಾಡಿಸಲೇ ತೊಡಗಿದ್ದನಂತಿದ್ದನು."

ಕುಂತಿಯು ಹೇಳಿದಳು:

"ನಾನು ಜ್ಯೇಷ್ಠ ಧರ್ಮಪತ್ನಿ ಮತ್ತು ನನಗೇ ಹೆಚ್ಚಿನ ದರ್ಮಫಲವು ದೊರೆಯಬೇಕು. ಅವಶ್ಯವಾಗಿ ಆಗಬೇಕಾದುದು ಆಗಲಿ. ಮಾದ್ರಿ! ನನ್ನನ್ನು ನೀನು ತಡೆಯಬೇಡ! ನನ್ನ ಪ್ರೇತವಶ ಪತಿಯನ್ನು ಇಲ್ಲಿಯೇ ಹಿಂಬಾಲಿಸುತ್ತೇನೆ. ಅವನನ್ನು ಬಿಟ್ಟು ಮೇಲೇಳು. ಈ ಮಕ್ಕಳನ್ನು ನೋಡಿಕೋ."

ಮಾದ್ರಿಯು ಹೇಳಿದಳು:

“ಇಲ್ಲ. ಅವನು ಹೋಗುವುದರೊಳಗಾಗಿ ನಾನೇ ನನ್ನ ಪತಿಯನ್ನು ಹಿಂಬಾಲಿಸುತ್ತೇನೆ. ಯಾಕೆಂದರೆ ನನ್ನ ಆಸೆಗಳು ಇನ್ನೂ ತೃಪ್ತವಾಗಿಲ್ಲ. ಹಿರಿಯವಳಾದ ನೀನು ನನಗೆ ಅನುಮತಿ ನೀಡಬೇಕು. ನನ್ನೊಡನೆ ಮಲಗಿರುವಾಗ ಈ ಭರತಸತ್ತಮನ ಕಾಮಕ್ಷೀಣವಾಯಿತು. ಹಾಗಿರುವಾಗ ಯಮಸದನದಲ್ಲಿ ಅವನ ಕಾಮವನ್ನು ನಾನು ಹೇಗೆ ತಾನೆ ಪೂರೈಸದೇ ಇರಲಿ? ನಾನು ಜೀವಂತವಿದ್ದರೂ ನನ್ನ ಮತ್ತು ನಿನ್ನ ಮಕ್ಕಳನ್ನು ಒಂದೇ ಸಮನಾಗಿ ನೋಡಿಕೊಳ್ಳಲಾರೆ. ಅದರಿಂದಲೂ ನನಗೆ ಪಾಪವು ಬಾರದೇ ಇರುವುದಿಲ್ಲ. ಆದುದರಿಂದ ಕುಂತಿ! ನನ್ನ ಪುತ್ರರನ್ನು ನಿನ್ನ ಮಕ್ಕಳಂತೆಯೇ ನೋಡಿಕೋ. ನನ್ನನ್ನು ಬಯಸುತ್ತಲೇ ರಾಜನು ಪ್ರೇತವಶನಾದನು. ನನ್ನನ್ನು ಇಷ್ಟೊಂದು ಚೆನ್ನಾಗಿ ಆವರಿಸಿರುವ ರಾಜನ ಶರೀರದ ಜೊತೆ ನನ್ನ ಈ ಶರೀರವನ್ನು ಸುಟ್ಟುಹಾಕಿ ನನಗೊಂದು ಒಳ್ಳೆಯ ಕಾರ್ಯವನ್ನು ಮಾಡಿಕೊಡು. ಮಕ್ಕಳನ್ನು ಸರಿಯಾಗಿ ನೋಡಿಕೋ. ನನ್ನ ಹಿತವನ್ನೇ ಚಿಂತಿಸು. ನಿನ್ನನ್ನು ನಿಂದಿಸುವ ಕಾರಣವೇನೂ ನನಗೆ ತೋರುತ್ತಿಲ್ಲ.”

ಹೀಗೆ ಹೇಳಿ ನರರ್ಷಭನ ಆ ಧರ್ಮಪತ್ನಿ, ಮದ್ರರಾಜನ ಮಗಳು

ಯಶಸ್ವಿನಿಯು ಕೂಡಲೇ ಅವನ ಚಿತಾಗ್ನಿಯನ್ನು ಏರಿದಳು.

## ಋಷಿಗಳು ಪಾಂಡವರನ್ನು ಹಸ್ತಿನಾಪುರಕ್ಕೆ ಕರೆತಂದುದು

ದೇವಕಲ್ಪಿ ಮಹರ್ಷಿಗಳು ಪಾಂಡುವಿನ ಅಂತ್ಯಕ್ರಿಯೆಗಳನ್ನು ನೆರವೇರಿಸಿದರು. ನಂತರ ತಪಸ್ವಿಗಳು ಒಂದುಗೂಡಿ ಸಮಾಲೋಚಿಸಿದರು: “ಆ ಮಹಾತ್ಮ ಮಹಾತಪಸ್ವಿಯು ರಾಜ್ಯ ಮತ್ತು ರಾಷ್ಟ್ರಗಳನ್ನು ತ್ಯಜಿಸಿ ಈ ಸ್ಥಾನದಲ್ಲಿ ತಪಸ್ಸನ್ನು ತಪಿಸಲು ತಾಪಸರ ಶರಣಾಗಿ ಬಂದಿದ್ದನು. ಈಗಷ್ಟೇ ಜನಿಸಿದ ಮಕ್ಕಳನ್ನು ಮತ್ತು ಪತ್ನಿಯನ್ನು ನಮ್ಮ ರಕ್ಷಣೆಯಲ್ಲಿಟ್ಟು ರಾಜ ಪಾಂಡುವು ಸ್ವರ್ಗವನ್ನು ಸೇರಿದ್ದಾನೆ.” ಸರ್ವ ಜೀವಿಗಳ ಹಿತೋರತ, ಉದಾರ ಮನಸ್ಕ, ಮನಸ್ಸಿನಲ್ಲಿಯೇ ಪ್ರಯಾಣಿಸುವ, ಆ ಸಿದ್ಧರು ಪರಸ್ಪರರಲ್ಲಿ ಸಮಾಲೋಚನೆಗೈದು ಪಾಂಡುವಿನ ಪುತ್ರರನ್ನು ಮುಂದಿಟ್ಟುಕೊಂಡು, ಪಾಂಡವರನ್ನು ಭೀಷ್ಮ ಮತ್ತು ಧೃತರಾಷ್ಟ್ರನಿಗೆ ಒಪ್ಪಿಸಲೋಸುಗ ನಾಗಸಾಹ್ವಯ ನಗರಕ್ಕೆ ಹೊರಟರು. ಅದೇ ಕ್ಷಣದಲ್ಲಿ ಸರ್ವ ತಾಪಸರೂ ಪಾಂಡುವಿನ ಪತ್ನಿ, ಮಕ್ಕಳು ಮತ್ತು ಶರೀರವನ್ನು ತೆಗೆದುಕೊಂಡು ಹೊರಟರು. ಹಿಂದೆ ಸುಖವನ್ನೇ ಕಂಡಿದ್ದ ಕುಂತಿಯು ಸತತವೂ ಪುತ್ರವತ್ಸಳಲಾಗಿದ್ದು ದೀರ್ಘ ಪ್ರಯಾಣವನ್ನು ಸಂಕ್ಷಿಪ್ತವಾದಂತೆ ಕಂಡಳು. ಹೆಚ್ಚು ಸಮಯವನ್ನು ತೆಗೆದುಕೊಳ್ಳದೇ ಆ ಯಶಸ್ವಿನಿಯು ಕುರುಜಂಗಲವನ್ನು ಸೇರಿ ವರ್ಧಮಾನ ಪುರದ್ವಾರವನ್ನು ತಲುಪಿದಳು. ನಾಗಪುರವಾಸಿಗಳು

ಸಹಸ್ರಾರು ಚಾರಣ-ಮುನಿಗಳು ಆಗಮಿಸಿದ್ದಾರೆ ಎಂದು ಕೇಳಿ ವಿಸ್ಮಿತರಾದರು. ಸೂರ್ಯೋದಯ ಮುಹೂರ್ತದಲ್ಲಿಯೇ ಎಲ್ಲ ಧರ್ಮ ಪುರಸ್ಕೃತ ಪುರವಾಸಿಗಳು ತಮ್ಮ ಪತ್ನಿಯರನ್ನೊಡಗೂಡಿ ತಾಪಸಿಗಳನ್ನು ನೋಡಲು ಹೊರಬಂದರು. ಸ್ತ್ರೀಯರ ಗುಂಪುಗಳು, ಕ್ಷತ್ರಿಯರ ಗುಂಪುಗಳು, ಬಂಡಿಗಳ ಸಾಲುಗಳು, ಬ್ರಾಹ್ಮಣರು ಮತ್ತು ಬ್ರಾಹ್ಮಣ ಪತ್ನಿಯರು ಎಲ್ಲರೂ ಹೊರಬಂದರು. ಅಲ್ಲಿ ಶೂದ್ರರ ಮತ್ತು ವೈಶ್ಯರ ಬಹುದೊಡ್ಡ ಗುಂಪೇ ಇತ್ತು. ಯಾರಲ್ಲಿಯೂ ಅಸೂಯೆಭಾವನೆಯಿರಲಿಲ್ಲ. ಎಲ್ಲರ ಮನಸ್ಸೂ ಧರ್ಮದಮೇಲೆಯೇ ಇತ್ತು. ಭೀಷ್ಮ ಶಾಂತನವ, ಬಾಹ್ಲೀಕ ಸೋಮದತ್ತ, ಪ್ರಜ್ಞಾಚಕ್ಷುಷಿ ರಾಜರ್ಷಿ, ಸ್ವಯಂ ಕ್ಷತ್ತ ವಿದುರ, ದೇವಿ ಸತ್ಯವತೀ, ಯಶಸ್ವಿನೀ ಕೌಸಲ್ಯಾ, ರಾಜಕುಮಾರರಿಂದ ಸುತ್ತುವರೆಯಲ್ಪಟ್ಟ ಗಾಂಧಾರೀ ಇವರೆಲ್ಲರೂ ಹೊರಬಂದರು. ದುರ್ಯೋಧನನ ಮುಂದಾಳುತನದಲ್ಲಿದ್ದ ಧೃತರಾಷ್ಟ್ರನ ಮಕ್ಕಳು, ಸುಂದರ ಭೂಷಣಗಳಿಂದ ಭೂಷಿತರಾಗಿ ನೂರು ಸಂಖ್ಯೆಯಲ್ಲಿ ಹೊರಬಂದರು. ಆ ಸರ್ವ ಮಹರ್ಷಿಗಣಕ್ಕೆ ಶಿರಬಾಗಿ ನಮಸ್ಕರಿಸಿದ ಸರ್ವ ಕೌರವರೂ ಸಪುರೋಹಿತರಾಗಿ ಅವರಿಗಿಂಥ ಕೆಳಸ್ಥಾನದಲ್ಲಿ ಕುಳಿತುಕೊಂಡರು. ಹಾಗೆಯೇ ಭೂಮಿಗೆ ತಲೆಬಾಗಿಸಿ ನಮಸ್ಕರಿಸಿದ ಸರ್ವ ಪೌರಜರನೂ ಕೂಡ ಕುಳಿತುಕೊಂಡರು. ಅಲ್ಲಿ ನೆರೆದಿರುವ ಸರ್ವ ಜನಸಂದಣಿಯೂ ಮೌನಗೊಂಡಾಗ, ಭೀಷ್ಮನು ರಾಜ್ಯ ಮತ್ತು ರಾಷ್ಟ್ರವನ್ನು ಆ ಮಹರ್ಷಿಗಳಿಗೆ ಅರ್ಪಿಸಿದನು. ಆಗ ಅವರಲ್ಲಿಯೇ

ಹಿರಿಯವನಾದ, ಇತರ ಮಹರ್ಷಿಗಳ ಮನಸ್ಸನ್ನು ಅರಿತಿದ್ದ, ಜಟಾಜಿನಿಧಾರಿಣಿ ವೃದ್ಧ ಮಹರ್ಷಿಯೊಬ್ಬನು ಎದ್ದು ನಿಂತು ಹೇಳಿದನು:

> "ಕೌರವ್ಯದಾಯಾದಿ ಪಾಂಡುವೆನ್ನುವ ನರಾಧಿಪನು ಕಾಮಭೋಗಗಳನ್ನು ಪರಿತ್ಯಜಿಸಿ ಶತಶೃಂಗವನ್ನು ಸೇರಿದನು. ಆ ಬ್ರಹ್ಮಚರ್ಯವ್ರತಸ್ಥನಿಗೆ ದಿವ್ಯ ಕಾರಣ ಸಾಕ್ಷಾತ್ ದರ್ಮನಿಂದ ಈ ಪುತ್ರ ಯುಧಿಷ್ಠಿರನು ಜನಿಸಿದನು. ಇದೇ ರೀತಿ ಆ ಶ್ರೇಷ್ಠ ಮಹಾತ್ಮ ರಾಜನಿಗೆ ವಾಯುದೇವನು ಭೀಮ ಎಂಬ ಹೆಸರಿನ ಮಹಾಬಲಶಾಲಿ ಪುತ್ರನನ್ನು ಕೊಟ್ಟನು. ಪುರುಹೂತನಿಂದ ಕುಂತಿಯಲ್ಲಿ ಸತ್ಯಪರಾಕ್ರಮಿ, ಮಹೇಷ್ವಾಸರಲ್ಲಿ ಶ್ರೇಷ್ಠನೆನಿಸಿಕೊಳ್ಳುವ ಈ ಕಿರೀಟಿಯು ಜನಿಸಿದನು. ಅಶ್ವಿನಿಯರಿಂದ ಮಾದ್ರಿಯಲ್ಲಿ ಜನಿಸಿದ ಮಹೇಷ್ವಾಸ ಕುರುಸತ್ತಮ ಅವಳಿ ಪುತ್ರರೂ ಇಲ್ಲಿ ನಿಂತಿದ್ದಾರೆ. ನಿತ್ಯವೂ ಧರ್ಮಚರಿತನಾಗಿದ್ದ ಆ ವನವಾಸಿ ಯಶಸ್ವಿ ಪಾಂಡುವಿನಿಂದ ಅವನ ಪಿತಾಮಹನ ವಂಶವು ಪುನರುತ್ಥಾನವಾಗಿದೆ. ಪುತ್ರರ ಜನನ, ವೃದ್ಧಿ, ವೈದಿಕ, ಅದ್ಯಯನ ಇವುಗಳನ್ನೆಲ್ಲ ನೋಡಿದ ಪಾಂಡುವು ಸತತವಾಗಿಯೂ ಸಂತೋಷದಿಂದಿರುತ್ತಿದ್ದನು. ಸತ್ಯ ನಡವಳಿಕೆಯಲ್ಲಿಯೇ ನಿರತನಾಗಿದ್ದು ಪುತ್ರಲಾಭವನ್ನು ಪಡೆದ ಆ ಪಾಂಡುವು ಹದಿನೇಳು ದಿವಸಗಳ ಹಿಂದೆ

ಪಿತೃಲೋಕವನ್ನು ಸೇರಿದನು. ವೈಶ್ವಾನಮುಖದಲ್ಲಿ ಹುತನಾಗುತ್ತಿದ್ದ ಅವನನ್ನು ನೋಡಿದ ಮಾದ್ರಿಯು ತನ್ನ ಜೀವನವನ್ನೂ ತ್ಯಜಿಸಿ ಪಾವಕವನ್ನು ಪ್ರವೇಶಿಸಿದಳು. ಅವನ ಹಿಂದೆಯೇ ಅವಳು ತನ್ನ ಪತಿಲೋಕವನ್ನು ಅನುಸರಿಸಿದಳು. ಅವನ ಮತ್ತು ಅವಳ ಅಂತ್ಯಕಾರ್ಯವನ್ನು ನೆರವೇರಿಸಿ. ಇದೋ ಅವರೀರ್ವರ ಶರೀರ ಮತ್ತು ಅವರ ಶ್ರೇಷ್ಠ ಮಕ್ಕಳು. ಈ ಪರಂತಪರನ್ನು ಮತ್ತು ಅವರ ತಾಯಿಯನ್ನು ಸ್ವೀಕರಿಸಿ. ಸರ್ವಧರ್ಮಜ್ಞ ಕುರುಕುಲೋದ್ವಹ ಪಾಂಡುವಿಗೆ ಪ್ರೇತಕಾರ್ಯದ ನಂತರ ಮಹಾಯಶಸ್ಸನ್ನು ನೀಡುವ ಪಿತೃಮೇಧವೂ ದೊರೆಯಲಿ."

ಈ ರೀತಿ ಅಲ್ಲಿ ಸೇರಿರುವ ಕುರುಗಳೆಲ್ಲರಿಗೂ ಹೇಳಿ ಕುರುಗಳು ನೋಡುತ್ತಿದ್ದಂತೆಯೇ ಕ್ಷಣಮಾತ್ರದಲ್ಲಿ ಸರ್ವ ಚಾರಣ-ಗುಹ್ಯಕರೂ ಒಟ್ಟಿಗೇ ಅಂತರ್ಧಾನರಾದರು. ಗಂಧರ್ವನಗರದಂತೆ ಅಲ್ಲಿಯೇ ಅಂತರ್ಧಾನರಾದ ಆ ಋಷಿ-ಸಿದ್ಧಗಣಗಳನ್ನು ನೋಡಿದ ಪುರಜನರು ಪುನಃ ಪರಮ ವಿಸ್ಮಿತರಾದರು.

ಧೃತರಾಷ್ಟ್ರನು ಹೇಳಿದನು:

"ವಿದುರ! ಪಾಂಡು ಮತ್ತು ಮಾದ್ರಿಯರಿಗೆ ರಾಜಸಿಂಹನಿಗೆ ತಕ್ಕುದಾದ ರಾಜರೀತಿಯ ಸರ್ವ ಪ್ರೇತಕಾರ್ಯಗಳನ್ನೂ ಮಾಡಿಸು. ಪಾಂಡು ಮತ್ತು ಮಾದ್ರಿಯರ ಕಡೆಯಿಂದ

ಯಾರ್ಯಾರು ಎಷ್ಟೆಷ್ಟು ಕೇಳುತ್ತಾರೋ ಅಷ್ಟು ವಿವಿಧ ಪಶು, ವಸ್ತ್ರ, ರತ್ನ ಮತ್ತು ಸಂಪತ್ತುಗಳನ್ನು ಕೊಡು. ಕುಂತಿಯು ಮಾದ್ರಿಗೆ ಹೇಗೆ ಸತ್ಕಾರ ಮಾಡುವವಳೋ ಹಾಗೆಯೇ ನಡೆಯಲಿ. ವಾಯುವಾಗಲೀ ಆದಿತ್ಯನಾಗಲೀ ನೋಡಲಾರದಂತೆ ಅವಳ ಅಲಂಕಾರವಾಗಲಿ. ಅನಘ ಪಾಂಡುವಿಗಾಗಿ ಯಾರೂ ಶೋಕಿಸಬಾರದು. ಸುರಸುತೋಪಮ ವೀರ ಐವರು ಮಕ್ಕಳನ್ನು ಪಡೆದ ಆ ನರಾಧಿಪನಿಗೆ ಪ್ರಶಂಸೆಯೇ ಇರಲಿ.”

ಹೇಳಿದುದೆಲ್ಲವನ್ನೂ ವಿದುರನು ಭೀಷ್ಮನ ಸಹಾಯದಿಂದ ನೆರವೇರಿಸಿದನು. ಎಲ್ಲಕಡೆಯಿಂದಲೂ ರಕ್ಷಿಸಲ್ಪಟ್ಟ ಪ್ರದೇಶದಲ್ಲಿ ಪಾಂಡುವಿಗೆ ಸಂಸ್ಕಾರ ಕಾರ್ಯಗಳನ್ನು ನೆರವೇರಿಸಿದನು. ನಂತರ ರಾಜಪುರೋಹಿತರು ಪಾಂಡುವಿಗೆ ನಗರದಿಂದ ಆಜ್ಯಹೋಮಪುರಸ್ಕೃತ ಉರಿಯುತ್ತಿರುವ ಬೆಂಕಿಯನ್ನು ತಂದರು. ನಂತರ ಅವನನ್ನು ಕಟ್ಟಿಗೆ ರಾಶಿಯ ಮೇಲೆ ಮಲಗಿಸಿ ಎಲ್ಲ ಕಡೆಯಿಂದಲೂ ಬಟ್ಟೆಯನ್ನು ಸುತ್ತಿ, ವಿವಿಧ ಶ್ರೇಷ್ಠ ಗಂಧ-ಮಾಲೆಗಳಿಂದ ಸಿಂಗರಿಸಿದರು. ಈ ರೀತಿ ಮಾಲೆಗಳಿಂದ ಮತ್ತು ಅಮೂಲ್ಯ ವಸ್ತ್ರಗಳಿಂದ ಸಿಂಗರಿಸಿದ ನಂತರ ಅಮಾತ್ಯರು, ನೆಂಟರಿಷ್ಟರು ಮತ್ತು ಸ್ನೇಹಿತರು ಮಾದ್ರಿಯ ಸಮೇತ ಆ ನರಸಿಂಹನನ್ನು ಸುಂದರವಾಗಿ ಅಲಂಕರಿಸಿದ, ನರರಿಂದ

ಎಳೆಯಲ್ಪಟ್ಟ, ಎಲ್ಲಕಡೆಯಿಂದಲೂ ಸುರಕ್ಷಿತವಾದ ಯಾನದಲ್ಲಿರಿಸಿ ಹೊರಟರು. ಬಿಳಿ ಛತ್ರ ಮತ್ತು ಚಾಮರಗಳನ್ನು ಅದಕ್ಕೆ ಕಟ್ಟಿದ್ದರು. ಎಲ್ಲ ರೀತಿಯ ವಾದ್ಯಗಳ ನಾದದೊಂದಿಗೆ ಮೆರವಣಿಗೆಯಲ್ಲಿ ಹೊರಟರು. ಪಾಂಡುವಿನ ದೇಹವನ್ನು ತೆಗೆದು ಕೊಂಡೊಯ್ಯುತ್ತಿರುವಾಗ ಜನರು ನೂರಾರು ಸಂಖ್ಯೆಗಳಲ್ಲಿ ರತ್ನಗಳನ್ನು ಹಿಡಿದು ಬೇಡುವವರಿಗೆ ಕೊಟ್ಟರು. ಕೌರವನ ಪರವಾಗಿ ಶುಭ್ರ ಶ್ವೇತ ವರ್ಣದ ಛತ್ರಗಳನ್ನು ಮತ್ತು ಸುಂದರ ವಸ್ತ್ರಗಳನ್ನು ಹಂಚಿದರು. ಶ್ವೇತವರ್ಣದ ಬಟ್ಟೆಗಳನ್ನು ಧರಿಸಿದ್ದ ಯಾಜಕರು ಸ್ವಲಂಕೃತ ಶರೀರವನ್ನು ಹಾಕುವುದರ ಮೊದಲು ಉರಿಯುತ್ತಿರುವ ಹುತಾಶನನಲ್ಲಿ ಆಹುತಿಯನ್ನು ಹಾಕಿದರು. ಶೋಕಸಂತಪ್ತರಾಗಿ ರೋದಿಸುತ್ತಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಸಹಸ್ರಾರು ಸಂಖ್ಯೆಗಳಲ್ಲಿ ನರಾಧಿಪನನ್ನು ಹಿಂಬಾಲಿಸಿದರು. “ನಮ್ಮೆಲ್ಲರ ಪರೋನಾಥ ನರಾಧಿಪನು ನಮ್ಮೆಲ್ಲರನ್ನೂ ಬಿಟ್ಟು, ಈ ಶಾಶ್ವತ ದುಃಖದಲ್ಲಿ ಮುಳುಗಿಸಿ, ಅನಾಥರನ್ನಾಗಿ ಮಾಡಿ ಎಲ್ಲಿಗೆ ಹೋದನು?” ಕ್ರೋಶಾಂತ ಪಾಂಡವರು, ಭೀಷ್ಮ, ವಿದುರ ಮೊದಲಾದ ಸರ್ವರೂ ಆ ಸತ್ಯವಾದಿ, ಅಕ್ಲಿಷ್ಟಕರ್ಮಿ, ನರಸಿಂಹನ ಮತ್ತು ಅವನ ಪತ್ನಿಯ ಶಿಬಿಕೆಗಳನ್ನು ಶುಭ ಗಂಗಾತೀರದ ರಮಣೀಯ ಸಮತಟ್ಟು ವನಪ್ರದೇಶದಲ್ಲಿ ತಂದಿರಿಸಿದರು. ನಂತರ ಅವನ ಶರೀರವನ್ನು ಸರ್ವ ಸುಗಂಧಗಳಿಂದ ಬಳಿದು ಶುಚಿಯಾದ ಕಾಲೀಯಕವನ್ನು ಸವರಿ, ಶ್ರೇಷ್ಠ ತೈಲಗಳನ್ನು ಹಚ್ಚಿ, ಬಂಗಾರದ

ಕೊಡಗಳಿಂದ ಶುದ್ಧ ನೀರನ್ನು ಸುರಿಸಿದರು. ಶ್ರೇಷ್ಠ ಬಿಳಿ ಚಂದನ, ಕಾಲಾಗುರು ಮತ್ತು ತುಂಗರಸಗಳ ಮಿಶ್ರಣವನ್ನು ಲೇಪಿಸಿದರು. ನಂತರ ಅವನನ್ನು ಬಿಳಿ ಹತ್ತಿಯ ವಸ್ತ್ರದಿಂದ ಸುತ್ತಿದರು. ವಸ್ತ್ರದಿಂದ ಸುತ್ತಲ್ಪಟ್ಟ ಅ ನರರ್ಷಭ ಪುರುಷವ್ಯಾಘ್ರನು ಅಮೂಲ್ಯ ಶಯನಕ್ಕೆ ಅರ್ಹನಾಗಿ ಜೀವಂತವಿದ್ದವನಂತೆ ಕಂಡನು. ಪ್ರೇತಕರ್ಮ ನಿರತ ಯಾಜಕರು ಅಪ್ಪಣೆಕೊಟ್ಟ ನಂತರ ತುಂಗ-ಪದ್ಮಕ ಮಿಶ್ರಣ, ಮತ್ತು ಸುಗಂಧಯುಕ್ತ ಚಂದನದಿಂದ ಮತ್ತು ಇತರ ವಿವಿಧ ಗಂಧಗಳಿಂದ ಸ್ವಲಂಕೃತರಾದ ಮಾದ್ರಿ ಸಹಿತ ರಾಜನ ಮೇಲೆ ತುಪ್ಪವನ್ನು ಸುರಿದು ಅಗ್ನಿಯನ್ನಿಟ್ಟರು. ಅವರೀರ್ವರ ಶರೀರಗಳನ್ನು ನೋಡಿ ಕೌಸಲ್ಯೆಯು "ಹಾಹಾ ಪುತ್ರ!""ಎಂದು ಮೂರ್ಛಿತಳಾಗಿ ಕೆಳಗೆ ಬಿದ್ದಳು. ಕೆಳಗೆ ಬಿದ್ದ ತಾಯಿಯನ್ನು ನೋಡಿದ ನಗರ ಗ್ರಾಮೀಣಪ್ರದೇಶದ ಜನರೆಲ್ಲರೂ ರಾಜಭಕ್ತಿಯಲ್ಲಿ ಕೃಪಾನ್ವಿತರಾಗಿ ಒಂದೇ ಸ್ವರದಲ್ಲಿ ರೋದಿಸಿದರು. ಮನುಷ್ಯರ ಈ ಆರ್ತನಾದದ ಜೊತೆಗೆ ವನ್ಯಮೃಗಗಳನ್ನೂ ಸೇರಿ ಸರ್ವ ಭೂತಗಳೂ ರೋದಿಸಿದವು. ಹಾಗೆಯೇ ಶಾಂತನವ ಭೀಷ್ಮನೂ ಮಹಾಮತಿ ವಿದುರನೂ ಮತ್ತು ಸರ್ವ ಕೌರವರೂ ದುಃಖಿತರಾಗಿ ರೋದಿಸಿದರು. ನಂತರ ಭೀಷ್ಮ, ವಿದುರ ಮತ್ತು ರಾಜರು ಎಲ್ಲ ಕುರು ಸ್ತ್ರೀಯರು ಮತ್ತು ಇತರ ಬಂಧುಗಳನ್ನೊಡಗೂಡಿ ಉದಕವನ್ನಿತ್ತರು. ಪಾಂಡವನಿಗಾಗಿ ಶೋಕಕರ್ಶಿತರಾದ ಸರ್ವ ಪ್ರಜೆಗಳೂ ಶೋಚಿಸುತ್ತಾ ಉದಕ ಕೊಡುವವರನ್ನು ಆವರಿಸಿದರು. ಪಾಂಡವರು ತಮ್ಮ ಬಂಧುಗಳ

ಸಮೇತ ನೆಲದ ಮೇಲೆಯೇ ಮಲಗಿದರು ಮತ್ತು ಅವರಂತೆ ಬ್ರಾಹ್ಮಣರೇ ಮೊದರಾದ ಇತರ ನಾಗರೀಕರೂ ಅಲ್ಲಿಯೇ ಮಲಗಿದರು. ಹನ್ನೆರಡು ರಾತ್ರಿಗಳ ವರೆಗೆ ನಗರದ ಸಣ್ಣ ಬಾಲಕನವರೆಗೆ ಎಲ್ಲರೂ ದುಃಖ ಸಂತಪ್ತರಾಗಿ ಅಸ್ವಸ್ತರಾಗಿದ್ದರು.

ಅನಂತರ ಕ್ಷತ್ತ, ರಾಜ ಮತ್ತು ಭೀಷ್ಮರು ತಮ್ಮ ಬಂಧು ಸಹಿತ ಪಾಂಡುವಿಗೆ ಸ್ವಾಧಾಮೃತಮಯ ಶ್ರಾದ್ಧವನ್ನು ನೀಡಿದರು. ಸಹಸ್ರಾರು ಕುರುಗಳಿಗೆ ಮತ್ತು ವಿಪ್ರಮುಖ್ಯರಿಗೆ ಭೋಜನಗಳನ್ನಿತ್ತರು. ಶ್ರೇಷ್ಠ ಗ್ರಾಮಗಳನ್ನು ರತ್ನದ ರಾಶಿಗಳನ್ನು ದ್ವಿಜಪ್ರಮುಖರಿಗೆ ದಾನವಿತ್ತರು. ಪೌರಜನರು ಶುಚಿರ್ಭೂತ ಭರತರ್ಷಭ ಪಾಂಡವರನ್ನು ಕರೆದುಕೊಂಡು ವಾರಣಸಾಹ್ವಯ ಪುರವನ್ನು ಪ್ರವೇಶಿಸಿದರು. ನಗರ ಮತ್ತು ಗ್ರಾಮೀಣ ಪ್ರದೇಶದ ಜನರೆಲ್ಲರೂ ಆ ಭರತರ್ಷಭನಿಗಾಗಿ ಮೃತನಾದವನು ತಮ್ಮದೇ ಬಂಧುವೇನೋ ಎನ್ನುವಂತೆ ಸತತ ಶೋಕಿಸಿದರು. ಶ್ರಾದ್ಧ ಕರ್ಮಗಳು ಸಮಾಪ್ತಿಯಾದ ನಂತರ ದುಃಖಿತ ಜನರನ್ನು ನೋಡಿದ ವ್ಯಾಸನು ಸಮ್ಮೂಢಳಾಗಿದ್ದ ದುಃಖಶೋಕಾರ್ತ ತಾಯಿಗೆ ಹೇಳಿದನು:

> "ಸುಖದ ಕಾಲಗಳು ಕಳೆದುಹೋದವು. ದಾರುಣ ಕಾಲಗಳು ಮುಂದೆ ಬರಲಿವೆ. ಯೌವನವನ್ನು ಕಳೆದುಕೊಳ್ಳುತ್ತಿರುವ ಈ ಪೃಥ್ವಿಯಲ್ಲಿ ಮುಂದಿನ ಒಂದೊಂದು ದಿನವೂ ಹಿಂದಿನ ದಿನಕ್ಕಿಂಥ ಪಾಪಿಯಾಗಿರುತ್ತದೆ. ಬಹುಮಾಯೆಯಿಂದ

ಸಮಾಕೀರ್ಣಗೊಂಡು ನಾನಾತರಹದ ದೋಷಗಳನ್ನೊಡಗೂಡಿ ಧರ್ಮಕ್ರಿಯಾಚಾರಗಳನ್ನು ಕಳೆದುಕೊಂಡ ಘೋರ ಕಾಲವು ಬರುತ್ತದೆ. ಇವೆಲ್ಲವನ್ನೂ ತ್ಯಜಿಸಿ ಹೊರಟುಹೋಗು. ತಪೋವನದಲ್ಲಿ ವಾಸಿಸು. ಈ ಕುಲದ ಘೋರ ಸಂಕ್ಷಯವನ್ನು ನೀನು ನೋಡುವುದು ಸರಿಯಲ್ಲ.”

“ಹಾಗೆಯೇ ಆಗಲಿ” ಎಂದು ಒಪ್ಪಿಕೊಂಡು ಅವಳು ಸೊಸೆಯ ಅಂತಃಪುರವನ್ನು ಪ್ರವೇಶಿಸಿ ಹೇಳಿದಳು:

“ಅಂಬಿಕಾ! ನಿನ್ನ ಪುತ್ರನ ದುರ್ನೀತಿಯಿಂದ ಭಾರತರೆಲ್ಲರೂ ಅವರ ಮೊಮ್ಮಕ್ಕಳು ಮತ್ತು ಅನುಯಾಯಿಗಳ ಸಹಿತ ವಿನಾಶಹೊಂದುತ್ತಾರೆ ಎಂದು ಕೇಳಿದ್ದೇನೆ. ಆದುದರಿಂದ, ನಿನ್ನ ಒಪ್ಪಿಗೆಯಿದ್ದರೆ, ನಾನು ಪುತ್ರಶೋಕ ಪೀಡಿತೆ ಕೌಸಲ್ಯೆಯನ್ನು ಕರೆದುಕೊಂಡು ವನವನ್ನು ಸೇರುತ್ತೇನೆ. ನಿನಗೆ ಮಂಗಳವಾಗಲಿ.”

ಅಂಬಿಕೆಯು ಅನುಮೋದಿಸಲು ಭೀಷ್ಮನನ್ನು ಬೀಳ್ಕೊಂಡು ಆ ಸುವ್ರತೆ ಸತ್ಯವತಿಯು ತನ್ನ ಇಬ್ಬರೂ ಸೊಸೆಯರೊಂದಿಗೆ ವನವನ್ನು ಸೇರಿದಳು. ಆ ದೇವಿಯರು ಅತಿಘೋರ ತಪಸ್ಸು ಮಾಡಿ ದೇವವನ್ನು ತ್ಯಜಿಸಿ ಮಹಾಯಾತ್ರೆಯನ್ನು ಕೈಗೊಂಡರು.

## ಪಾಂಡವ-ಕೌರವರ ಬಾಲ್ಯ

ಪಾಂಡವರು ವೇದೋಕ್ತ ಸಂಸ್ಕಾರಗಳನ್ನು ಪಡೆದು ತಂದೆಯ ಮನೆಯಲ್ಲಿ ಸುಖವನ್ನು ಅನುಭವಿಸುತ್ತಾ ಬೆಳೆದರು. ತಮ್ಮ ತಂದೆಯ ಮನೆಯಲ್ಲಿ ಒಟ್ಟಿಗೆ ಅಡುತ್ತಿರುವಾಗ ಎಲ್ಲ ಬಾಲಕ್ರೀಡೆಗಳಲ್ಲಿಯೂ ಪಾಂಡವರು ಧೃತರಾಷ್ಟ್ರನ ಮಕ್ಕಳಿಗಿಂತ ವಿಶಿಷ್ಟರಾಗಿದ್ದರು. ಓಡುವುದರಲ್ಲಿ, ಗುರಿಯನ್ನು ಹೊಡೆಯುವುದರಲ್ಲಿ, ಊಟಮಾಡುವುದರಲ್ಲಿ ಮತ್ತು ಎಳೆದಾಡುವುದರಲ್ಲಿ ಭೀಮಸೇನನು ಧೃತರಾಷ್ಟ್ರನ ಎಲ್ಲ ಮಕ್ಕಳನ್ನೂ ಮೀರಿಸಿದನು. ಪಾಂಡವನು ಆಡುತ್ತಿರುವಾಗ ಖುಶಿಯಲ್ಲಿ ಅವರ ಕೂದಲನ್ನು ಹಿಡಿದು ಮೇಲೆತ್ತಿ ಪರಸ್ಪರರ ತಲೆಗಳು ಹೊಡೆದಾಡುವಂತೆ ಮಾಡುತ್ತಿದ್ದನು. ನೂರಾ ಒಂದು ಮಹೌಜಸ ಕುಮಾರರನ್ನೂ ವೃಕೋದರನು ಒಬ್ಬನೇ ಸ್ವಲ್ಪವೂ ಕಷ್ಟವಿಲ್ಲದೇ ಕಾಡುತ್ತಿದ್ದನು. ಅವರ ಕಾಲುಗಳನ್ನು ಹಿಡಿದು ಜೋರಾಗಿ ನೆಲದ ಧೂಳಿನಲ್ಲಿ ಬೀಳಿಸಿ ಅವರ ತಲೆ ತೊಡೆಗಳು ನೋವಾಗಿ ಕೂಗುವವರೆಗೆ ಆ ಬಲಿಯು ಅವರ ಮೇಲೆ ಬಿದ್ದು ಉರುಳುತ್ತಿದ್ದನು. ನೀರಿನಲ್ಲಿ ಆಡುತ್ತಿರುವಾಗ ತನ್ನ ಭುಜದಿಂದ ಹತ್ತು ಬಾಲಕರನ್ನು ಹಿಡಿದು ನೀರಿನಲ್ಲಿ ಮುಳುಗಿಸಿ ಅವರು ಇನ್ನೇನು ಮುಳುಗಿಹೋಗುತ್ತಾರೆ ಎನ್ನುವಾಗ ಮೇಲೆ ಎತ್ತುತ್ತಿದ್ದನು. ಅವರು ಹಣ್ಣುಗಳನ್ನು ಕೀಳಲು ಮರ ಏರಿರುವಾಗ ಭೀಮನು ಕಾಲಿನಿಂದ ಮರವನ್ನು ಒದೆದು ಅಲುಗಾಡಿಸಿಸುತ್ತಿದ್ದನು. ಹೊಡೆತದ ಬಲಕ್ಕೆ ಅಲುಗಾಡಿದ ಮರದಿಂದ ಹಣ್ಣುಗಳ ಜೊತೆಗೆ ಕುಮಾರರೂ ಕೆಳಗೆ

ಬೀಳುತ್ತಿದ್ದರು. ಹೊಡೆದಾಟದಲ್ಲಿಯಾಗಲೀ ಓಟದಲ್ಲಿಯಾಗಲೀ ಅಥವಾ ಯೋಗದಲ್ಲಿಯಾಗಲೀ ಸ್ಪರ್ಧಿಸುತ್ತಿರುವ ಕುಮಾರರು ವೃಕೋದರನನ್ನು ಎಂದೂ ಮೀರಿಸಲಿಕ್ಕಾಗುತ್ತಿರಲಿಲ್ಲ. ಈ ರೀತಿ ಸ್ಪರ್ಧಿಸುತ್ತಿರುವ - ಬಾಲ್ಯತನದಿಂದ ದ್ರೋಹಭಾವದಿಂದಲ್ಲ - ವೃಕೋದರನು ಧಾರ್ತರಾಷ್ಟ್ರರಿಗೆ ಬಹಳ ಅಪ್ರಿಯನಾದನು.

ಭೀಮಸೇನನ ಅತಿಖ್ಯಾತ ಬಲವನ್ನು ತಿಳಿದ ಪ್ರತಾಪಿ ಧಾರ್ತರಾಷ್ಟ್ರನು ತನ್ನ ದುಷ್ಟಭಾವವನ್ನು ತೋರಿಸತೊಡಗಿದನು. ಧರ್ಮವನ್ನು ನಿರ್ಲಕ್ಷಿಸಿ ಪಾಪ ಮಾಡುವುದನ್ನೇ ನೋಡುತ್ತಿದ್ದ ಆ ಐಶ್ವರ್ಯ ಲೋಭ ಮೋಹಿತನ ಮನಸ್ಸಿನಲ್ಲಿ ಕೆಟ್ಟ ವಿಚಾರಗಳು ಹುಟ್ಟಿದವು:

> "ಬಲವಂತರಲ್ಲಿ ಶ್ರೇಷ್ಠ, ಪಾಂಡುಪುತ್ರರ ಮಧ್ಯಮ ಈ ಕುಂತಿಪುತ್ರ ವೃಕೋದರನ್ನು ಮೋಸದಿಂದ ಮಾತ್ರ ಕೊಲ್ಲಬಹುದು. ನಂತರ ಅವನ ತಮ್ಮಂದಿರನ್ನು ಮತ್ತು ಜ್ಯೇಷ್ಠ ಯುಧಿಷ್ಠಿರನನ್ನು ಬಂಧನದಲ್ಲಿ ಬಂಧಿಸಿ ಈ ವಸುಂಧರೆಯ ಪ್ರಶಾಸನ ಮಾಡುತ್ತೇನೆ."

ಈ ರೀತಿ ಪಾಪ ನಿಶ್ಚಯ ಮಾಡಿದ ದುರ್ಯೋಧನನು ಮಹಾತ್ಮ ಭೀಮನನ್ನು ಪಡೆಯಲು ನಿತ್ಯವೂ ಕಾಯುತ್ತಿದ್ದನು. ಜಲವಿಹಾರಾರ್ಥವಾಗಿ ಪ್ರಮಾಣಕೋಟಿಯ ಬಳಿ ನೀರಿನ ಬಳಿಯಲ್ಲಿಯೇ ಬಣ್ಣ ಬಣ್ಣದ ಕಂಬಳಿಯ ಅತಿ ದೊಡ್ಡ ಡೇರೆಯನ್ನು

ನಿರ್ಮಿಸಿದನು. ಆಟವಾಡಿ ಎಲ್ಲರೂ ಶುಭ್ರವಸ್ತ್ರಗಳನ್ನು ಧರಿಸಿ ಅಲಂಕೃತರಾಗಿ ಸರ್ವಕಾಮ ಸಮೃದ್ಧ ಭೋಜನವನ್ನು ಸವಿಯುತ್ತಿದ್ದರು. ರಾತ್ರಿಯಾಗುತ್ತಿದ್ದಂತೆ ಪರಿಶ್ರಾಂತ ವೀರ ಕುರುಕುಮಾರರು ಡೇರೆಯ ಹೊರಗೆ ಮಲಗಲು ಬಯಸಿದರು. ಕುಮಾರರನ್ನು ನೀರಿನಲ್ಲಿ ಹೊತ್ತು ಆಡಿಸಿದುದರ ಅಧಿಕ ವ್ಯಾಯಾಮದಿಂದ ಬಳಲಿದ ಬಲವಾನ್ ಭೀಮನು ಪುಣ್ಯಕೋಟಿಯ ದಡವನ್ನು ಸೇರಿ, ಮಲಗಲು ಒಂದು ಸ್ಥಳವನ್ನು ಆರಿಸಿ ಅಲ್ಲಿಯೇ ನಿದ್ರಿಸಿದನು. ಬಿಳಿಯ ವಸ್ತ್ರವನ್ನು ಹೊದೆದು ಬಳಲಿದ್ದ ಆ ಪಾಂಡವನು ಸ್ವಲ್ಪವೂ ಅಲುಗಾಡದೇ ಮೃತಶರೀರದಂತೆ ಮಲಗಿದ್ದನು. ಆಗ ದುರ್ಯೋಧನನು ಅವನನ್ನು ಬಳ್ಳಿಗಳಿಂದ ಮಾಡಿದ ಹಗ್ಗದಿಂದ ನಿಧಾನವಾಗಿ ಕಟ್ಟಿ ದಡದಿಂದ ವೇಗ ಮತ್ತು ಗಂಭೀರವಾಗಿ ಹರಿಯುತ್ತಿದ್ದ ನೀರಿಗೆ ಮೆಲ್ಲನೆ ಉರುಳಿಸಿದನು. ಹೋರಾಟಗಾರರಲ್ಲೇ ಶ್ರೇಷ್ಠ ಕೌಂತೇಯ ಭೀಮನು ಎಲ್ಲ ಕಟ್ಟುಗಳನ್ನೂ ಹರಿದು ನೀರಿನಿಂದ ಮೇಲೆದ್ದು ಬಂದನು.

ಇನ್ನೊಮ್ಮೆ ಮಲಗಿದ್ದಾಗ ಮಹಾ ವಿಷದ ತೀಕ್ಷ ಹಲ್ಲುಗಳ ಸರ್ಪಗಳಿಂದ ಅವನ ಮರ್ಮಾಂಗಗಳಲ್ಲಿ ಕಚ್ಚಿಸಿದನು. ಆದರೆ ಆ ಸರ್ಪಗಳ ತೀಕ್ಷ್ಣ ದಂಷ್ಟ್ರಗಳು ಅವನ ಮರ್ಮಸ್ಥಾನಗಳನ್ನು ಕಚ್ಚುತ್ತಿದ್ದರೂ ಆ ಪೃಥುವಕ್ಷಸನ ಚರ್ಮವನ್ನೂ ಹರಿದು ಒಳಗೆ ಹೋಗಲು ಆಗಲಿಲ್ಲ. ಎಚ್ಚರವಾದಾಗ ಭೀಮನು ಸರ್ಪ


2012/03/25

ಸರ್ಪಗಳನ್ನೂ ಅರೆದು ಕೊಂದನು ಮತ್ತು ತನ್ನ ಪ್ರಿಯ ಸಾರಥಿಯ ಬೆನ್ನಮೇಲೆ ತನ್ನ ಕೈಯಿಂದ ಹೊಡೆದನು. ಪುನಃ ಭೀಮಸೇನನ ಭೋಜನದಲ್ಲಿ ನಿವಿರೇಳಿಸುವ ತೀಕ್ಷ್ಣ ಕಾಲಕೂಟ ವಿಷವನ್ನು ಸೇರಿಸಿದ್ದನು. ಪಾರ್ಥರ ಹಿತಕಾಮಿ ವೈಶ್ಯಾಪುತ್ರನು ಅವರಿಗೆ ಹೇಳಿದನು. ಆದರೂ ವೃಕೋದರನು ಅದನ್ನು ತಿಂದು ಏನೂ ಕೆಟ್ಟಪರಿಣಾಮವಿಲ್ಲದೆ ಜೀರ್ಣಿಸಿಕೊಂಡನು. ಆ ವಿಷವು ಭೀಮಸಂಹನ ಭೀಮನಲ್ಲಿ ಸ್ವಲ್ಪವೂ ವಿಕಾರಗಳನ್ನುಂಟುಮಾಡಲಿಲ್ಲ; ಅದನ್ನು ಸುಮ್ಮನೇ ಜೀರ್ಣಿಸಿಬಿಟ್ಟನು. ಈ ರೀತಿ ದುರ್ಯೋಧನ, ಕರ್ಣ ಮತ್ತು ಸೌಬಲ ಶಕುನಿಯರು ಪಾಂಡವರನ್ನು ಕೊಲ್ಲಲು ಅನೇಕ ಪ್ರಯತ್ನಗಳನ್ನು ಮಾಡಿದರು. ಅರಿಂದಮ ಪಾಂಡವರಾದರೂ ಅವೆಲ್ಲವನ್ನೂ ತಿಳಿದಿದ್ದರೂ ವಿದುರನ ಅನುಮತಿಯಂತೆ ಅವುಗಳನ್ನು ಬಹಿರಂಗ ಪಡಿಸಲಿಲ್ಲ.

# ಕೌರವ-ಪಾಂಡವರ ಗುರುಗಳು; ವಿದ್ಯಾಭ್ಯಾಸ; ಪ್ರತಿಭಾ ಪ್ರದರ್ಶನ; ಗುರುದಕ್ಷಿಣೆ

## ಕೃಪ ಶಾರದ್ವತ

ಮಹರ್ಷಿ ಗೌತಮನಿಗೆ ಶರದ್ವತ ಎನ್ನುವ ಹೆಸರಿನ ಮಗನಿದ್ದನು. ಆ ಮಗನು ಶರಗಳನ್ನು ಪಡೆದೇ ಹುಟ್ಟಿದ್ದನು. ಆ ಪರಂತಪನಿಗೆ ಧನುರ್ವೇದದಲ್ಲಿ ಎಷ್ಟು ಬುದ್ಧಿಯಿತ್ತೋ ಅಷ್ಟು ಬುದ್ಧಿ ವೇದಾಧ್ಯಯನದಲ್ಲಿ ಇರಲಿಲ್ಲ. ಬ್ರಹ್ಮವಾದಿಗಳು ಹೇಗೆ ತಪಸ್ಸಿನಿಂದ ಪರಿಶ್ರಮಿಸಿ ವೇದಗಳನ್ನು ಪಡೆಯುತ್ತಾರೋ ಹಾಗೆ ಅವನೂ ಕೂಡ ತಪಸ್ಸಿನಿಂದಲೇ ಸರ್ವ ಅಸ್ತ್ರಗಳನ್ನೂ ಪಡೆದನು. ಶರದ್ವತನ ವಿಪುಲ ತಪಸ್ಸು ಮತ್ತು ಧನುರ್ವೇದ ಪಾಂಡಿತ್ಯವು ದೇವರಾಜನನ್ನು ಸಾಕಷ್ಟು ಕಾಡಿತು. ಆಗ ಸುರೇಶ್ವರನು ಜಾಲಪದೀ ಎಂಬ ದೇವಕನ್ಯೆಯನ್ನು ಕರೆದು

“ಅವನ ತಪಸ್ಸಿಗೆ ವಿಘ್ನವನ್ನುಂಟುಮಾಡು!”

ಎಂದು ಕಳುಹಿಸಿದನು. ಆ ಬಾಲೆಯು ಶರದ್ವತನ ರಮಣೀಯ ಆಶ್ರಮಪದವನ್ನು ಸೇರಿ, ಆ ಧನುರ್ಬಾಣಧರನಲ್ಲಿ ಆಸೆಹುಟ್ಟಿಸಲು ಪ್ರಯತ್ನಿಸಿದಳು. ಆ ವನದಲ್ಲಿ ಒಂದೇ ಒಂದು ವಸ್ತ್ರವನ್ನು ಉಟ್ಟು

ಲೋಕದಲ್ಲಿಯೇ ಅಪ್ರತಿಮ ನಿಲುವನ್ನು ಹೊಂದಿದ್ದ ಅಪ್ಸರೆಯನ್ನು ಶರದ್ವತನು ತೆರೆದ ಕಣ್ಣುಗಳಿಂದ ನೋಡಿದನು. ಧನುಸ್ಸು ಮತ್ತು ಬಾಣಗಳು ಅವನ ಕೈಗಳಿಂದ ನೆಲಕ್ಕೆ ಬಿದ್ದವು ಮತ್ತು ಅವಳನ್ನು ನೋಡಿ ಅವನ ಶರೀರದಲ್ಲಿ ಕಂಪನವುಂಟಾಯಿತು. ಆದರೂ ಅವನ ಜ್ಞಾನ ಎಷ್ಟು ಮೇಲ್ಮಟ್ಟದ್ದಿತ್ತು ಮತ್ತು ತಪಸ್ಸು ಎಷ್ಟಿತ್ತೆಂದರೆ ಆ ಮಹಾಪ್ರಾಜ್ಞನು ಪರಮ ಧೈರ್ಯದಿಂದ ತನ್ನನ್ನು ತಾನೇ ಗಟ್ಟಿಯಿರಿಸಿಕೊಂಡನು. ಆದರೂ ಅವನಲ್ಲಿ ಒಮ್ಮಿಂದೊಮ್ಮಲೇ ವಿಕಾರವುಂಟಾಗಿ ಅವನಿಗೆ ತಿಳಿಯದೆಯೇ ಅವನ ರೇತವು ಹೊರಬಿದ್ದಿತು. ಆಗ ಆ ಮುನಿಯು ಆ ಆಶ್ರಮವನ್ನೂ ಅಪ್ಸರೆಯನ್ನೂ ಬಿಟ್ಟು ಹೊರಟುಹೋದನು. ಅವನ ರೇತವು ದರ್ಬೆಗಳ ಮೇಲೆ ಬಿದ್ದಿತು. ದರ್ಬೆಗಳ ಮೇಲೆ ಬಿದ್ದ ತಕ್ಷಣವೇ ಅದು ಎರಡಾಗಿ ಒಡೆಯಿತು ಮತ್ತು ಅವುಗಳಿಂದ ಗೌತಮ ಶರದ್ವತನಿಗೆ ಇಬ್ಬರು ಅವಳಿ ಮಕ್ಕಳು ಜನಿಸಿದರು.

ರಾಜ ಶಂತನುವು ಬೇಟೆಯಾಡಲು ಅಲ್ಲಿಗೆ ಹೋದಾಗ ಅವನ ಓರ್ವ ಸೇನಾಚರನು ಅರಣ್ಯದಲ್ಲಿ ಈ ಅವಳಿ ಮಕ್ಕಳನ್ನು ನೋಡಿದನು. ಅವರ ಪಕ್ಕದಲ್ಲಿ ಧನುರ್ಬಾಣಗಳನ್ನು ಮತ್ತು ಕೃಷ್ಣಾಜಿನಗಳನ್ನು ನೋಡಿ ಅವರು ಧನುರ್ವೇದಾಂತಗ ಓರ್ವ ಬ್ರಾಹ್ಮಣನ ಮಕ್ಕಳಿರಬೇಕೆಂದು ಯೋಚಿಸಿದನು. ಅವನು ಬಾಣಗಳೊಂದಿಗೆ ಆ ಅವಳಿ ಮಕ್ಕಳನ್ನು ರಾಜನಿಗೆ ತೋರಿಸಿದನು. ಕೃಪಯಾನ್ವಿತ ರಾಜನು

ಆ ಅವಳಿ ಮಕ್ಕಳನ್ನು

> “ಇವರು ನನ್ನ ಪುತ್ರರು. ಮನೆಗೆ ಕೊಂಡೊಯ್ಯುತ್ತೇನೆ”

ಎಂದು ತನ್ನದಾಗಿ ಸ್ವೀಕರಿಸಿದನು. ಅವರಿಗೆ ಸಂಸ್ಕಾರಗಳನ್ನೆಲ್ಲ ನೆರವೇರಿಸಿ ಬೆಳೆಸಿದನು.

> “ಈ ಬಾಲಕರೀರ್ವರನ್ನೂ ನಾನು ಕೃಪೆಯಿಂದ ಬೆಳೆಸಿದ್ದೇನೆ
> ಆದುದರಿಂದ ಅವರ ಹೆಸರೂ ಅದೇ ಆಗಲಿ!”

ಎಂದನು. ತನ್ನ ತಪೋಬಲದಿಂದ ಗೌತಮ ಶರದ್ವತನು ಅವರು ಎಲ್ಲಿದ್ದಾರೆಂದು ತಿಳಿದುಕೊಂಡು ಅಲ್ಲಿಗೆ ಬಂದು ರಾಜನಿಗೆ ಅವರ ಗೋತ್ರ ಮೊದಲಾದ ಎಲ್ಲವನ್ನೂ ತಿಳಿಸಿದನು. ಅವನು ಕೃಪನಿಗೆ ಚತುರ್ವಿಧ ಧನುರ್ವೇದ ಮತ್ತು ವಿವಿಧ ಅಸ್ತ್ರಗಳ ಕುರಿತು ಎಲ್ಲವನ್ನೂ ಮತ್ತು ಅದರ ಗುಟ್ಟುಗಳೆಲ್ಲವನ್ನೂ ಹೇಳಿಕೊಟ್ಟನು. ಸ್ವಲ್ಪವೇ ಸಮಯದಲ್ಲಿ ಅವನು ಪರಮಾಚಾರ್ಯನೆನಿಸಿಕೊಂಡನು. ಎಲ್ಲ ಮಹಾರಥಿಗಳೂ-ಧೃತರಾಷ್ಟ್ರನ ಮಕ್ಕಳು, ಪಾಂಡವರು, ಮಹಾಬಲಶಾಲಿ ವೃಷ್ಣಿಗಳು ಮತ್ತು ಅನ್ಯ ನಾನಾ ದೇಶಗಳಿಂದ ಬಂದವರೆಲ್ಲರೂ ಧನುರ್ವೇದವನ್ನು ಅವನಿಂದಲೇ ಕಲಿತುಕೊಂಡರು.

# ದ್ರೋಣ

ಮೊಮ್ಮಕ್ಕಳಲ್ಲಿ ವಿಶೇಷತೆ ಮತ್ತು ವಿನಯತೆಯನ್ನು ಬಯಸಿದ ಭೀಷ್ಮನು ವೀರ್ಯವಂತ ಪ್ರಸಿದ್ಧ ಅಸ್ತ್ರಜ್ಞರ ಕುರಿತು ವಿಚಾರಿಸಿದನು. ಯಾಕೆಂದರೆ ಅಲ್ಪ ಜ್ಞಾನ, ಹಿರಿತನ ಮತ್ತು ಅಸ್ತ್ರಕೋವಿದರಿಂದ ಅಥವಾ ಅಲ್ಪ ದೇವಸತ್ವವುಳ್ಳವರಿಂದ ಮಹಾಬಲಶಾಲಿ ಕುರುಗಳನ್ನು ವಿಧೇಯರನ್ನಾಗಿ ಮಾಡಲಾಗುತ್ತಿರಲಿಲ್ಲ.

ಹಿಂದೆ ಹವಿರ್ಧಾನದಲ್ಲಿ ಇರುತ್ತಿದ್ದ ಮಹರ್ಷಿ ಋಷಿ ಭರದ್ವಾಜನು ಸ್ನಾನ ಮಾಡಿ ಕೆಳಗಿಳಿಯುತ್ತಿರುವ ಅಪ್ಸರೆ ಸಾಕ್ಷಾತ್ ಘೃತಾಚಿಯನ್ನು ಕಂಡನು. ಒಮ್ಮೆಲೇ ಗಾಳಿಯು ಅವಳ ವಸ್ತ್ರವನ್ನು ಹಾರಿಸಿಕೊಂಡು ಹೋಯಿತು. ಅದನ್ನು ನೋಡಿದ ಋಷಿಯ ರೇತಸ್ಖಲನವಾಯಿತು ಮತ್ತು ಅವನು ಅದನ್ನು ಒಂದು ದ್ರೋಣದಲ್ಲಿ ಇರಿಸಿದನು. ಆ ಕಲಶದಲ್ಲಿಯೇ ಅವನಿಗೆ ದ್ರೋಣ ಎಂಬ ಧೀಮಂತ ಮಗನು ಜನಿಸಿದನು ಮತ್ತು ಅವನು ಎಲ್ಲ ವೇದ ವೇದಾಂಗಗಳನ್ನೂ ಕಲಿತುಕೊಂಡನು. ಧರ್ಮಭೃತರಲ್ಲಿ ಶ್ರೇಷ್ಠ ಪ್ರತಾಪಿ ಭರದ್ವಾಜನು ಮಹಾಭಾಗ ಅಗ್ನಿವೇಶನಿಗೆ ಆಗ್ನೇಯಾಸ್ತ್ರವನ್ನು ನೀಡಿದನು. ಅಗ್ನಿಷ್ಟಜಾತ ಆ ಮುನಿಯು ಮಹಾಸ್ತ್ರ ಆಗ್ನೇಯವನ್ನು ಭರದ್ವಾಜನ ಮಗನಿಗೆ ನೀಡಿದನು.

ಭರದ್ವಾಜನಿಗೆ ಪೃಷತ ಎಂಬ ಹೆಸರಿನ ರಾಜನು ಸಖನಾಗಿದ್ದನು. ಅವನಿಗೆ ದ್ರುಪದ ಎಂಬ ಹೆಸರಿನ ಮಗನಿದ್ದನು. ಆ ಕ್ಷತ್ರಿಯರ್ಷಭ

ಪಾರ್ಷತನು ನಿತ್ಯವೂ ಅವನ ಆಶ್ರಮಕ್ಕೆ ಹೋಗಿ ದ್ರೋಣನೊಂದಿಗೆ ಆಟ-ಅಧ್ಯಯನಗಳನ್ನು ಮಾಡುತ್ತಿದ್ದನು. ಪೃಷತನ ಅವಸಾನದ ನಂತರ ನರೇಶ್ವರ ಮಹಾಬಾಹು ದ್ರುಪದನು ಉತ್ತರ ಪಾಂಚಾಲದ ರಾಜನಾದನು. ಭಗವಾನ್ ಭರದ್ವಾಜನೂ ಸ್ವರ್ಗವಾಸಿಯಾದನು. ತನ್ನ ತಂದೆಯ ಹೇಳಿಕೆಯಂತೆ ಮತ್ತು ಮಹಾಯಶಸ್ವೀ ಪುತ್ರನನ್ನು ಪಡೆಯಲೋಸುಗ ದ್ರೋಣನು ಶಾರದ್ವತೀ ಕೃಪಿಯನ್ನು ಪತ್ನಿಯನ್ನಾಗಿ ಸ್ವೀಕರಿಸಿದನು. ಅಗ್ನಿಹೋತ್ರಿಯೂ ಸತತವೂ ಧರ್ಮ ಮತ್ತು ದಮದಲ್ಲಿ ನಿರತಳಾಗಿದ್ದ ಗೌತಮಿಯು ಅಶ್ವತ್ಥಾಮ ಎಂಬ ಹೆಸರಿನ ಪುತ್ರನನ್ನು ಪಡೆದಳು. ಅವನು ಹುಟ್ಟಿದಾಕ್ಷಣವೇ ಉಚ್ಛೈಶ್ರವ ಕುದುರೆಯಂತೆ ರೋದಿಸಿದನು. ಇದನ್ನು ಕೇಳಿದ ಅಂತರಿಕ್ಷದಿಂದ ಅಂತರ್ಹಿತ ಭೂತವೊಂದು ಹೇಳಿತು:

> "ಇವನ ಅಳುವಿನ ನಾದವು ಅಶ್ವದ ನಾದದಂತೆ ಎಲ್ಲಕಡೆಯೂ ಪಸರಿಸಿದ್ದುದರಿಂದ ಈ ಬಾಲಕನ ಹೆಸರು ಅಶ್ವತ್ಥಾಮ ಎಂದೇ ಆಗಲಿ."

ಧೀಮಂತ ಭಾರದ್ವಾಜನು ತನ್ನ ಮಗನಿಂದ ಸುಪ್ರೀತನಾದನು ಮತ್ತು ಅಲ್ಲಿಯೇ ಇದ್ದುಕೊಂಡು ಧನುರ್ವೇದಪಾರಂಗತನಾದನು.

ಅವನು ಮಹಾತ್ಮ ಪರಂತಪಸ್ವಿ ಜಾಮದಗ್ನ್ಯನು ತನ್ನ ಎಲ್ಲ ಸಂಪತ್ತನ್ನೂ ಬ್ರಾಹ್ಮಣರಿಗೆ ಕೊಡುತ್ತಿದ್ದಾನೆ ಎಂದು ಕೇಳಿದನು. ವನವನ್ನು ಸೇರಿದ್ದ ರಾಮನಿಗೆ ಭಾರದ್ವಾಜನು ಹೇಳಿದನು:

“ದ್ವಿಜರ್ಷಭ! ನಾನು ದ್ರೋಣ. ಸಂಪತ್ತನ್ನು ಬಯಸಿ ನಿನ್ನಲ್ಲಿಗೆ ಬಂದಿದ್ದೇನೆ.”

ರಾಮನು ಹೇಳಿದನು:

“ತಪೋಧನ! ನನ್ನಲ್ಲಿರುವ ಹಿರಣ್ಯ ಮತ್ತು ಇತರ ಸಂಪತ್ತು ಎಲ್ಲವನ್ನೂ ಬ್ರಾಹ್ಮಣರಿಗೆ ಕೊಟ್ಟುಬಿಟ್ಟಿದ್ದೇನೆ. ಇದೇ ರೀತಿ ಸಾಗರಗಳಿಂದ ಸುತ್ತುವರೆಯಲ್ಪಟ್ಟ ಈ ನಗರಮಾಲಿನೀ ದೇವಿ ಧರಿತ್ರಿ ಸರ್ವವನ್ನೂ ಕಶ್ಯಪನಿಗೆ ಕೊಟ್ಟುಬಿಟ್ಟಿದ್ದೇನೆ. ಈಗ ನನ್ನಲ್ಲಿ ಈ ಶರೀರ, ಮಹಾ ಅಸ್ತ್ರಗಳು, ವಿವಿಧ ಶಸ್ತ್ರಗಳು ಮಾತ್ರ ನನ್ನದಾಗಿ ಉಳಿದುಕೊಂಡಿವೆ. ದ್ರೋಣ! ಇವುಗಳಲ್ಲಿ ಯಾವುದನ್ನು ನೀನು ಕೇಳುತ್ತೀಯೆ, ತಕ್ಷಣ ಕೇಳು.”

ದ್ರೋಣನು ಹೇಳಿದನು:

“ಭಾರ್ಗವ! ನಿನ್ನಲ್ಲಿರುವ ಎಲ್ಲ ಅಸ್ತ್ರ ಶಸ್ತ್ರಗಳನ್ನೂ ಅವುಗಳನ್ನು ಬಳಸುವ ರಹಸ್ಯಗಳ ಜೊತೆ ಒಂದನ್ನೂ ಬಿಡದ ಹಾಗೆ ನನಗೆ ಕೊಡು.”

ಹಾಗೆಯೇ ಆಗಲೆಂದು ಭಾರ್ಗವನು ಅವನಿಗೆ ಅವುಗಳನ್ನು ಬಳಸುವ ರಹಸ್ಯಗಳ ಜೊತೆಗೆ ಅಸ್ತ್ರಗಳನ್ನು ಮತ್ತು ಸಂಪೂರ್ಣ ಧನುರ್ವೇದವನ್ನು ಇತ್ತನು. ಅವೆಲ್ಲವನ್ನೂ ಸ್ವೀಕರಿಸಿ ಕೃತಾಸ್ತ್ರನಾದ

ದ್ವಿಜಸತ್ತಮನು ಸುಪ್ರೀತನಾಗಿ ತನ್ನ ಪ್ರಿಯ ಸಖ ದ್ರುಪದನಲ್ಲಿಗೆ ಹೋದನು.

## ದ್ರೋಣ-ದ್ರುಪದ

ಪ್ರತಾಪವಾನ್ ಭಾರದ್ವಾಜನು ದ್ರುಪದನಲ್ಲಿಗೆ ಬಂದು

> "ನನ್ನನ್ನು ನಿನ್ನ ಸಖನೆಂದು ತಿಳಿ!"

ಎಂದು ಪಾರ್ಷತನಿಗೆ ಹೇಳಿದನು. ಆಗ ದ್ರುಪದನು ಹೇಳಿದನು:

> "ತಕ್ಷಣವೇ ನಾನು ನಿನ್ನ ಸಖ ಎಂದು ನನಗೆ ಹೇಳುತ್ತಿದ್ದೀಯಲ್ಲ! ದ್ವಿಜ! ನಿನ್ನ ಪ್ರಜ್ಞೆಯು ಸರಿಯಿಲ್ಲ ಅಥವಾ ನಿನಗೆ ಸಾಕಷ್ಟು ತಿಳುವಳಿಕೆಯಿಲ್ಲ! ಉದೀರ್ಣನಾಗಿರುವ ಯಾವ ರಾಜನೂ ನಿನ್ನಂತಹ ಮಂದಾತ್ಮ, ಅಶ್ರಿಯ ಮತ್ತು ಧನರಹಿತನೊಂದಿಗೆ ಸಖ್ಯವನ್ನು ಮಾಡುವುದಿಲ್ಲ. ಕಾಲವು ಹೇಗೆ ಮನುಷ್ಯನನ್ನು ಮುದಿಗೊಳಿಸುತ್ತದೆಯೋ ಹಾಗೆಯೇ ಸೌಹಾರ್ದತೆಯನ್ನೂ ಕುಂಠಿತಗೊಳಿಸುತ್ತದೆ. ಹಿಂದೆ ನಿನ್ನೊಡನೆ ನನಗೆ ಸೌಹಾರ್ದತೆಯಿತ್ತು. ಆದರೆ ಅದು ಸಾಮರ್ಥ್ಯ ಬಂಧನವಾಗಿತ್ತು. ಲೋಕದಲ್ಲಿ ಅಜರವಲ್ಲದ ಯಾವ ಸಖ್ಯವೂ ನೋಡಲು ದೊರೆಯುವುದಿಲ್ಲ. ಕಾಮವು ಇದನ್ನು ದೂರಮಾಡುತ್ತದೆ ಮತ್ತು ಕ್ರೋಧವು ಕುಂಠಿತಗೊಳಿಸುತ್ತದೆ. ಜೀರ್ಣವಾದ ಈ ಸಖ್ಯವನ್ನು ಉಪಾಸನೆಮಾಡಬೇಡ.

ಹೊಸ ಸಖ್ಯವನ್ನು ಮಾಡು. ನನಗೆ ನಿನ್ನಲ್ಲಿ ಸಖ್ಯವಿತ್ತು. ಯಾಕೆಂದರೆ ಅದು ನನ್ನ ಉದ್ದೇಶಗಳ ಸಾಧಕವಾಗಿತ್ತು. ದರಿದ್ರನು ವಸುಮತಿಯ, ಅವಿದ್ಯಾವಂತನು ವಿದುಷಿಯ ಅಥವಾ ಹೇಡಿಯು ಶೂರನ ಸಖನಾಗಲಾರ. ಹಳೆಯ ಸಖ್ಯವು ಯಾರಿಗೆ ಬೇಕು? ಸರಿಸಮ ಸಂಪತ್ತನ್ನು ಹೊಂದಿದ ಮತ್ತು ಸರಿಸಮ ಕುಲದವರಾದ ಇಬ್ಬರ ನಡುವೆ ಸಖ್ಯ ಮತ್ತು ವಿವಾಹಗಳು ನಡೆಯುತ್ತವೆ. ಶ್ರೀಮಂತ ಮತ್ತು ಬಡವನ ಮಧ್ಯೆಯಲ್ಲ. ಅಶ್ರೋತ್ರಿಯು ಶ್ರೋತ್ರಿಯೊಡನೆ ಸಖ್ಯವನ್ನು ಮಾಡುವುದಿಲ್ಲ. ಹಾಗೆಯೇ ರಥಿಯು ಅರಥಿಯೊಡನೆ ಅಥವಾ ರಾಜನು ಅರಾಜನೊಂದಿಗೆ ಸಖ್ಯವನ್ನು ಮಾಡುವುದಿಲ್ಲ. ಹಳೆಯ ಸಖ್ಯವು ಯಾರಿಗೆ ಬೇಕು?”

ದ್ರುಪದನ ಈ ಮಾತುಗಳಿಂದ ಪ್ರತಾಪವಾನ್ ಭಾರದ್ವಾಜನಿಗೆ ಸಿಟ್ಟು ಉಕ್ಕಿ ಬಂದು ಒಂದು ಕ್ಷಣ ಯೋಚನೆಗೊಳಗಾದನು. ಆ ಬುದ್ಧಿವಂತನು ಪಾಂಚಾಲರ ವಿರುದ್ಧ ಮನಸ್ಸಿನಲ್ಲಿಯೇ ನಿಶ್ಚಯವನ್ನು ಮಾಡಿ ಕುರುಮುಖ್ಯರ ನಗರಿ ನಾಗಸಾಹ್ವಯಕ್ಕೆ ಹೋದನು.

ಅದೇ ಸಮಯದಲ್ಲಿ ವೀರ ಕೌರವ-ಪಾಂಡವ ಕುಮಾರರು ಎಲ್ಲರೂ ಕೂಡಿ ಗಜಸಾಹ್ವಯದ ಹೊರಗೆ ಸಂತೋಷದಿಂದ ಅಲೆದಾಡುತ್ತಾ ವೀಟಿಯೊಂದಿಗೆ ಆಡುತ್ತಿದ್ದರು. ಅವರು ಆಡುತ್ತಿರುವಾಗ ವೀಟಿಯು

ಒಂದು ಬಾವಿಯಲ್ಲಿ ಬಿದ್ದಿತು. ಆ ವೀಟೆಯನ್ನು ಹೇಗೆ ತೆಗೆಯಬೇಕೆಂದು ಅವರಿಗೆ ತೋಚದಾಯಿತು. ವೀರ್ಯವಾನ್ ದ್ರೋಣನು ಕುಮಾರರನ್ನು ಮತ್ತು ಅವರ ಕಷ್ಟವನ್ನು ನೋಡಿ ನಕ್ಕು ಅವರೊಂದಿಗೆ ಮೆಲ್ಲನೆ ಮೃದುವಾಗಿ ಮಾತನಾಡಿದನು:

> "ಇದೇನಾಯಿತು? ಭರತ ಕುಲದಲ್ಲಿ ಜನಿಸಿದ ನಿಮಗೆ ಈ ವೀಟೆಯನ್ನು ತೆಗೆಯಲಿಕ್ಕಾಗುವುದಿಲ್ಲವೆಂದರೆ ಕ್ಷತ್ರಿಯಬಲಕ್ಕೇ ಧಿಕ್ಕಾರ. ಅವರಿಗೆ ಅಸ್ತ್ರಗಳ ಕುರಿತಿದ್ದ ಜ್ಞಾನಕ್ಕೆ ಧಿಕ್ಕಾರ. ಈ ಒಂದು ಮುಷ್ಟಿ ಹುಲ್ಲನ್ನು ನಾನು ಅಸ್ತ್ರಗಳನ್ನಾಗಿ ಅಭಿಮಂತ್ರಿಸುತ್ತೇನೆ. ಸರಿಸಾಟಿಯಿಲ್ಲದ ಅದರ ಶಕ್ತಿಯನ್ನು ನಿರೀಕ್ಷಿಸಿ. ನಾನು ವೀಟೆಯನ್ನು ಒಂದು ಹುಲ್ಲುಕಡ್ಡಿಯಿಂದ ಹೊಡೆಯುತ್ತೇನೆ, ಮತ್ತು ಆ ಕಡ್ಡಿಯನ್ನು ಇನ್ನೊಂದು ಕಡ್ಡಿಯಿಂದ ಹೊಡೆಯುತ್ತೇನೆ, ಅದಕ್ಕೆ ಮತ್ತೊಂದನ್ನು ಸೇರಿಸುತ್ತೇನೆ. ಈ ರೀತಿ ಒಂದಕ್ಕೆ ಇನ್ನೊಂದನ್ನು ಸೇರಿಸಿ ವೀಟೆಯನ್ನು ಮೇಲೆತ್ತುತ್ತೇನೆ."

ವಿಸ್ಮಿತ ಕುಮಾರರು ತೆರೆದ ಕಣ್ಣುಗಳಿಂದ ಅವನು ವೀಟೆಯನ್ನು ಹೊರ ತೆಗೆದುದನ್ನು ನೋಡಿ, ವೀಟೆಯನ್ನು ಹೊರತೆಗೆದವನಿಗೆ ಹೇಳಿದರು:

> "ಬ್ರಾಹ್ಮಣ! ನಾವು ನಿನಗೆ ನಮಸ್ಕರಿಸುತ್ತೇವೆ. ಬೇರೆ ಯಾರಿಗೂ ಇದು ತಿಳಿಯದು. ನೀನು ಯಾರು? ನಿನ್ನನ್ನು

ನಾವು ಯಾರೆಂದು ತಿಳಿಯಬೇಕು? ಮತ್ತು ನಾವು ನಿನಗೆ ಏನು ಮಾಡಬಹುದು?"

ದ್ರೋಣನು ಹೇಳಿದನು:

"ಹಾಗಿದ್ದರೆ ನನ್ನ ರೂಪ-ಗುಣಗಳನ್ನು ಭೀಷ್ಮನಿಗೆ ಹೇಳಿ. ಆ ಮಹಾಬುದ್ಧಿವಂತನಿಗೆ ಏನು ಮಾಡಬೇಕೆಂದು ತಿಳಿಯುತ್ತದೆ."

ಹಾಗೆಯೇ ಆಗಲಿ ಎಂದು ಅವರೆಲ್ಲರೂ ಪಿತಾಮಹ ಭೀಷ್ಮನಿಗೆ ಬ್ರಾಹ್ಮಣನ ಕರ್ಮವಿಶೇಷತೆಯನ್ನು ಯಥಾವತ್ತಾಗಿ ವರದಿ ಮಾಡಿದರು. ಕುಮಾರರನ್ನು ಕೇಳಿದ ಭೀಷ್ಮನು ಅವನು ದ್ರೋಣನೆಂದು ಗುರುತಿಸಿದನು. ಅವನು ಗುರುವಿಗೆ ಯುಕ್ತರೂಪ ಎಂದು ಯೋಚಿಸಿದನು. ಸ್ವಯಂ ತಾನೇ ಅವನನ್ನು ಬರಮಾಡಿಸಿಕೊಂಡು ಸತ್ಕರಿಸಿ ಶಸ್ತ್ರಭೃತರಲ್ಲಿ ಶ್ರೇಷ್ಠ ನಿಪುಣ ಭೀಷ್ಮನು ವಿವರವಾಗಿ ಪ್ರಶ್ನಿಸಿದನು.

ದ್ರೋಣನು ಅವನು ಅಲ್ಲಿಗೆ ಬರುವುದರ ಕಾರಣ ಸರ್ವವನ್ನೂ ನಿವೇದಿಸಿದನು:

"ಹಿಂದೆ ನಾನು ಅಸ್ತ್ರಾರ್ಥ ಆಗಮ ಮತ್ತು ಧನುರ್ವೇದವನ್ನು ಕಲಿಯಲು ಮಹರ್ಷಿ ಅಗ್ನಿವೇಶ್ಯನಲ್ಲಿಗೆ ಹೋಗುತ್ತಿದ್ದೆನು. ಧನುರ್ವೇದವನ್ನು ನನ್ನದಾಗಿಸಿಕೊಳ್ಳಲು

ನಾನು ಅಲ್ಲಿ ಬ್ರಹ್ಮಚಾರಿಯಾಗಿ ವಿನೀತಾತ್ಮನಾಗಿ ಜಟೆಧರಿಸಿ ಬಹಳ ವರ್ಷಗಳು ವಾಸಿಸಿದೆ. ಪಾಂಚಾಲರಾಜಪುತ್ರ ಮಹಾಬಲಿ ಯಜ್ಞಸೇನನೂ ನನ್ನ ಜೊತೆಯಲ್ಲಿಯೇ ಅದೇ ಗುರುವಡಿಯಲ್ಲಿ ಬಹಳ ಶ್ರಮಪಟ್ಟು ವಿದ್ಯೆಯನ್ನು ಕಲಿಯುತ್ತಿದ್ದನು. ಅಲ್ಲಿ ಅವನು ನನ್ನ ಸಖನಾಗಿದ್ದನು. ನನ್ನ ಉಪಕಾರಿ ಮತ್ತು ಪ್ರಿಯನಾಗಿದ್ದನು. ನಾನು ಅವನ ಸಾಂಗತ್ಯವನ್ನು ಬಯಸುತ್ತಿದ್ದೆ. ಬಾಲ್ಯದಿಂದ ಬಹಳಷ್ಟು ಕಾಲ ನಾವು ಒಟ್ಟಿಗೇ ಅಧ್ಯಯನ ಮಾಡಿದೆವು. ಅವನು ನನ್ನ ಬಳಿ ಬಂದು ನನಗೆ ಪ್ರಿಯವಾದುದನ್ನು ಮಾಡುತ್ತಿದ್ದನು ಮತ್ತು ನನಗೆ ಪ್ರಿಯವಾದುದನ್ನು ಹೇಳುತ್ತಿದ್ದನು. ನನಗೆ ಅವನಲ್ಲಿ ಪ್ರಿತಿಯನ್ನು ಬೆಳೆಸುವಂತಹ ಈ ಮಾತುಗಳನ್ನು ಆಡುತ್ತಿದ್ದನು: “ದ್ರೋಣ! ನಾನು ನನ್ನ ಮಹಾತ್ಮ ತಂದೆಯ ಪ್ರೀತಿಯ ಮಗ. ಯಾವಾಗ ಪಾಂಚಾಲನು ನನ್ನನ್ನು ರಾಜ್ಯದ ರಾಜನನ್ನಾಗಿ ಮಾಡುತ್ತಾನೋ ಆಗ ನನ್ನ ರಾಜ್ಯವು ಅನುಭವಿಸಲು ನಿನ್ನದಾಗುತ್ತದೆ. ನಾನು ಸತ್ಯವನ್ನು ಹೇಳುತ್ತಿದ್ದೇನೆ. ನನ್ನ ಭೋಗ-ಸುಖ ಮತ್ತು ಸಂಪತ್ತು ಎಲ್ಲವೂ ನಿನ್ನ ಅಧೀನವಾಗುತ್ತವೆ.” ಆಗ ಅವನು ನನಗೆ ಈ ರೀತಿ ಹೇಳಿದ್ದನು. ಕೃತಾಸ್ತ್ರನಾದ ಬಳಿಕ ಧನವನ್ನು ಅರಸುತ್ತಾ ನಾನು ಹೊರಟೆ. ಅವನು ಅಭಿಷಿಕ್ತನಾಗಿದ್ದಾನೆ ಎಂದು ಕೇಳಿ

ಕೃತಾರ್ಥನಾದೆ ಎಂದು ಯೋಚಿಸಿದೆ. ನಮ್ಮ ಒಗ್ಗಟ್ಟು ಮತ್ತು ಅವನ ಮಾತುಗಳನ್ನು ನೆನಪಿಸಿಕೊಳ್ಳುತ್ತಾ ಸುಪ್ರೀತನಾಗಿ ಪ್ರಿಯ ಸಖನ ರಾಜ್ಯಕ್ಕೆ ಹೋದೆ. ನನ್ನ ಹಳೆಯ ಸಖ ದ್ರುಪದನಲ್ಲಿಗೆ ಹೋಗಿ ಹೇಳಿದೆ: "ಪುರುಷವ್ಯಾಘ್ರ! ನನ್ನನ್ನು ನಿನ್ನ ಸಖನೆಂದು ತಿಳಿ." ಈ ರೀತಿ ನಾನು ಸಖನೆಂದು ಹೇಳಿ ಅವನ ಎದುರು ಹೋದಾಗ ದ್ರುಪದನು ನನ್ನನ್ನು ನಿರಾಕರಿಸುವಂತೆ ನಗುತ್ತಾ ಹೇಳಿದನು: "ತಕ್ಷಣವೇ ನಾನು ನಿನ್ನ ಸಖ ಎಂದು ನನಗೆ ಹೇಳುತ್ತಿದ್ದೀಯಲ್ಲ! ದ್ವಿಜ! ನಿನ್ನ ಪ್ರಜ್ಞೆಯು ಸರಿಯಿಲ್ಲ ಅಥವಾ ನಿನಗೆ ತಿಳುವಳಿಕೆಯು ಅಷ್ಟಿಲ್ಲ. ಯಾವ ಉದೀರ್ಣ ರಾಜನೂ ನಿನ್ನಂತಹ ಮಂದಾತ್ಮ, ಅಶ್ರಿಯ ಮತ್ತು ಧನರಹಿತನೊಡನೆ ಸಖ್ಯ ಮಾಡುವುದಿಲ್ಲ. ಅಶ್ರೋತ್ರಿಯು ಶ್ರೋತ್ರಿಯೊಡನೆ ಸಖ್ಯವನ್ನು ಮಾಡುವುದಿಲ್ಲ. ಹಾಗೆಯೇ ರಥಿಯು ಅರಥಿಯೊಡನೆ ಅಥವಾ ರಾಜನು ಅರಾಜನೊಂದಿಗೆ ಸಖ್ಯವನ್ನು ಮಾಡುವುದಿಲ್ಲ. ಹಳೆಯ ಸಖ್ಯವು ಯಾರಿಗೆ ಬೇಕು?" ದ್ರುಪದನ ಈ ಮಾತುಗಳಿಂದ ನನಗೆ ಸಿಟ್ಟು ಉಕ್ಕಿ ಬಂದಿತು. ಭೀಷ್ಮ! ಗುಣಾನ್ವಿತ ಶಿಷ್ಯರನ್ನು ಹುಡುಕಿಕೊಂಡು ನಾನು ಕುರುಗಳಲ್ಲಿಗೆ ಬಂದೆ."

ಭೀಷ್ಮ ಮತ್ತು ಪಾಂಡುಪುತ್ರರೂ ಸೇರಿ ಅವನನ್ನು ಗುರುವೆಂದು

ಸ್ವೀಕರಿಸಿದರು. ತನ್ನ ಸರ್ವ ಮೊಮ್ಮಕ್ಕಳನ್ನೂ ವಿವಿಧ ಸಂಪತ್ತುಗಳನ್ನೂ ಅವನಲ್ಲಿತ್ತು "ಇಕೋ ನಿನ್ನ ಶಿಷ್ಯರು!" ಎಂದು ದ್ರೋಣನಿಗೆ ವಿಧಿಪೂರ್ವಕ ಅರ್ಪಿಸಿದನು. ಆ ಮಹೇಷ್ವಾಸನು ಕೌರವರನ್ನು ಶಿಷ್ಯರನ್ನಾಗಿ ಸ್ವೀಕರಿಸಿದನು. ಅವರೆಲ್ಲರನ್ನೂ ಸ್ವೀಕರಿಸಿದ ದ್ರೋಣನು ಅವರೆಲ್ಲರೂ ಏಕಾಂತದಲ್ಲಿ ಅವನ ಪದತಳದಲ್ಲಿ ಕುಳಿತಿರುವಾಗ ರಹಸ್ಯದ ಈ ಮಾತುಗಳನ್ನಾಡಿದನು:

> "ನನ್ನ ಯಾವುದೋ ಒಂದು ಕಾರ್ಯವು ಆಗಬೇಕೆಂಬ ಆಕಾಂಕ್ಷೆಯು ನನ್ನ ಹೃದಯದಲ್ಲಿ ಅಡಗಿದೆ. ಅನಘರೇ! ನೀವು ಕೃತಾಸ್ತ್ರರಾದಾಗ ಅದನ್ನು ನನಗೆ ಮಾಡಿಕೊಡುತ್ತೀರಿ ಎಂದು ವಚನವನ್ನು ಕೊಡಿ."

ಅದನ್ನು ಕೇಳಿದ ಕೌರವರು ಸುಮ್ಮನಿದ್ದರು. ಆದರೆ ಅರ್ಜುನನು ಮಾತ್ರ ಅವನಿಗೆ ಪೂರ್ಣ ಭರವಸೆಯನ್ನಿತ್ತನು. ಆಗ ಅವನು ಅರ್ಜುನನನ್ನು ಬಿಗಿದಪ್ಪಿ ಪುನಃ ಪುನಃ ಅವನ ನೆತ್ತಿಯನ್ನು ಆಘ್ರಾಣಿಸಿದನು ಮತ್ತು ಪ್ರೀತಿಪೂರ್ವಕ ಸಂತೋಷ ಕಣ್ಣೀರನ್ನು ಸುರಿಸಿದನು.

ನಂತರ ವೀರ್ಯವಾನ್ ದ್ರೋಣನು ಪಾಂಡುಪುತ್ರರಿಗೆ ದೇವತೆಗಳ ಮತ್ತು ಮನುಷ್ಯರ ವಿವಿಧ ಅಸ್ತ್ರಗಳನ್ನು ನೀಡಿದನು. ಅನ್ಯ ರಾಜಪುತ್ರರೂ ಅಲ್ಲಿ ಸೇರಿದ್ದರು. ವೃಷ್ಣಿಗಳು, ಅಂಧಕರು, ಮತ್ತು ನಾನಾ ದೇಶಗಳ ರಾಜರುಗಳು ಎಲ್ಲರೂ ದ್ವಿಜಸತ್ತಮ ದ್ರೋಣನಿಂದ

ಅಸ್ತ್ರಗಳನ್ನು ಪಡೆಯಲು ಬಂದಿದ್ದರು. ಸೂತಪುತ್ರ ರಾಧೇಯನೂ ಗುರು ದ್ರೋಣನಲ್ಲಿಗೆ ಬಂದನು. ಅಸೂಯಾಪರ ಸೂತಪುತ್ರನು ಪಾರ್ಥನೊಂದಿಗೆ ಸ್ಪರ್ಧಿಸುತ್ತಿದ್ದನು. ದುರ್ಯೋಧನನ ಬೆಂಬಲವನ್ನು ಪಡೆದು ಪಾಂಡವರನ್ನು ಕೀಳಾಗಿ ಕಾಣುತ್ತಿದ್ದನು.

## ಗುರು ದ್ರೋಣ - ಶಿಷ್ಯ ಅರ್ಜುನ

ಅರ್ಜುನನಾದರೂ ತನ್ನ ಪರಮ ಯತ್ನದಿಂದ ಗುರುಪೂಜನೆಯಲ್ಲಿ ನಿರತನಾಗಿದ್ದನು. ಅಸ್ತ್ರಗಳಲ್ಲಿರುವ ತನ್ನ ಪರಮ ಯೋಗದ ಮೂಲಕ ದ್ರೋಣನ ಪ್ರೀತಿಪಾತ್ರನಾದನು. ದ್ರೋಣನು ಅನ್ನಸಾಧಕನನ್ನು ರಹಸ್ಯದಲ್ಲಿ ಕರೆದು

> “ಕತ್ತಲೆಯಲ್ಲಿ ಎಂದೂ ಅರ್ಜುನನಿಗೆ ಏನನ್ನೂ ತಿನ್ನಲು ಕೊಡಬೇಡ !”

ಎಂದು ಹೇಳಿದನು. ನಂತರ ಒಂದು ದಿನ ಅರ್ಜುನನು ಊಟ ಮಾಡುತ್ತಿರುವಾಗ ಗಾಳಿ ಬೀಸಿ ಅವನು ಯಾವುದರ ಬೆಳಕಿನಲ್ಲಿ ಊಟಮಾಡುತ್ತಿದ್ದನೋ ಆ ದೀಪವು ಆರಿತು. ಅರ್ಜುನನು ಊಟವನ್ನು ಮುಂದುವರಿಸಿದನು ಮತ್ತು ಅವನ ಕೈಯು ನಿತ್ಯವೂ ಅನ್ನವನ್ನು ಹಿಡಿದು ಊಟಮಾಡುವ ಅಭ್ಯಾಸಬಲದಿಂದ ತಾನಾಗಿಯೇ ಬಾಯಿಯನ್ನು ಸೇರುತ್ತಿತ್ತು. ಅಭ್ಯಾಸದಿಂದ ಏನೆಲ್ಲ ಮಾಡಬಹುದು ಎಂದು ತಿಳಿದು ಆ ಪಾಂಡವನು ರಾತ್ರಿಯಲ್ಲಿಯೂ ಅಭ್ಯಾಸಮಾಡಲು ಪ್ರಾರಂಭಿಸಿದನು. ದ್ರೋಣನು ಅವನು ಬಿಲ್ಲು

ಮೀಟುವ ಶಬ್ಧವನ್ನು ಕೇಳಿ, ಮೇಲೆದ್ದು ಅವನಲ್ಲಿಗೆ ಬಂದು ಬಿಗಿದಪ್ಪಿ ಹೇಳಿದನು:

> “ನಿನ್ನ ಸರಿಸಮ ಧನುರ್ಧರ ಅನ್ಯ ಯಾರೂ ಈ ಲೋಕದಲ್ಲಿ ಇಲ್ಲದಿರುವಂತೆ ಮಾಡಲು ಎಲ್ಲವನ್ನೂ ನಾನು ಮಾಡುತ್ತೇನೆ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ.”

ನಂತರ ದ್ರೋಣನು ಅರ್ಜುನನಿಗೆ ರಥದಮೇಲೆ, ಆನೆಯ ಮೇಲೆ, ಕುದುರೆಯ ಮೇಲೆ ಮತ್ತು ಭೂಮಿಯ ಮೇಲೂ ನಿಂತು ಯುದ್ಧಮಾಡುವುದನ್ನು ಕಲಿಸಿಕೊಟ್ಟನು. ದ್ರೋಣನು ಆ ಪಾಂಡವನಿಗೆ ಗದಾಯುದ್ಧದಲ್ಲಿ, ಖಡ್ಗಧಾರಣೆಯಲ್ಲಿ, ಕೈಯಿಂದ ಬಿಸಾಡುವ ತೋಮರ, ಪ್ರಾಸ, ಶಕ್ತಿ ಮುಂತಾದವುಗಳನ್ನು ಬಳಸುವುದರಲ್ಲಿ ಮತ್ತು ಮಿಶ್ರ ಆಯುಧಗಳಿಂದ ಯುದ್ಧಮಾಡುವುದನ್ನೂ ಕಲಿಸಿಕೊಟ್ಟನು. ಅವನ ಆ ಕೌಶಲತೆಯನ್ನು ನೋಡಿ ಸಹಸ್ರಾರು ರಾಜರು-ರಾಜಪುತ್ರರು ಧನುರ್ವೇದವನ್ನು ವಶೀಕರಿಸಿಕೊಳ್ಳಲು ಬಂದು ಸೇರಿದರು. ಹಾಗೆಯೇ ನಿಷಾದರಾಜ ಹಿರಣ್ಯಧನುಷನ ಮಗ ಏಕಲವ್ಯನೂ ದ್ರೋಣನಲ್ಲಿಗೆ ಬಂದನು. ಆದರೆ ಆ ಧರ್ಮಜ್ಞನು ಬೇರೆಯವರ ಆಸಕ್ತಿಯನ್ನು ನೋಡಿ ನೈಷಾದನೆಂದು ಯೋಚಿಸಿ ಅವನನ್ನು ಧನುರ್ವಿದ್ಯೆಗೆ ಶಿಷ್ಯನನ್ನಾಗಿ ಸ್ವೀಕರಿಸಲಿಲ್ಲ. ಆ ಪರಂತಪ ಏಕಲವ್ಯನು ದ್ರೋಣನ ಪಾದಗಳಿಗೆ ಶಿರಬಾಗಿ ನಮಸ್ಕರಿಸಿ ಅರಣ್ಯವನ್ನು ಸೇರಿದನು. ಅಲ್ಲಿ ಮಣ್ಣಿನಿಂದ

ದ್ರೋಣನನ್ನೇ ಹೋಲುವ ವಿಗ್ರಹವೊಂದನ್ನು ಮಾಡಿ, ಅದನ್ನೇ ಆಚಾರ್ಯನೆಂದು ಪರಿಗಣಿಸಿ ಪರಮ ನಿಯಮ ಮತ್ತು ಯೋಗಗಳಿಂದ ಧನುರ್ವಿದ್ಯೆಯ ಅಭ್ಯಾಸ ಮಾಡತೊಡಗಿದನು. ಪರಮ ಶ್ರದ್ಧೆ ಮತ್ತು ಪರಮ ಯೋಗಗಳಿಂದ ಅವನು ಬಾಣಗಳ ಆದಾನ, ಅನುಸಂಧಾನ, ಮತ್ತು ವಿಮೋಕ್ಷಗಳಲ್ಲಿ ಪರಮ ಲಘುತ್ವವನ್ನು  ಪಡೆದನು.

ಒಮ್ಮೆ ದ್ರೋಣನ ಅಪ್ಪಣೆಯನ್ನು ಪಡೆದು ಅರಿಮರ್ದನ ಕುರುಪಾಂಡವರು ಎಲ್ಲರೂ ರಥಗಳನ್ನೇರಿ ಬೇಟೆಗೆಂದು ಹೊರಟರು. ಅಲ್ಲಿ ಪಾಂಡವರನ್ನು ಹಿಂಬಾಲಿಸಿಕೊಂಡು ಬರುತ್ತಿದ್ದ ನರನೊಬ್ಬನು ತನ್ನ ನಾಯಿಯನ್ನೂ ಕರೆದುಕೊಂಡು ಬಂದಿದ್ದನು. ಅವರೆಲ್ಲರೂ ಅಲ್ಲಿ ತಮ್ಮ ತಮ್ಮ ಉಪಾಯಗಳಂತೆ ತಿರುಗಾಡುತ್ತಿದ್ದಾಗ ಆ ನಾಯಿಯು ವನವನ್ನು ಸೇರಿ ದಾರಿತಪ್ಪಿ ನಿಷಾದನಿದ್ದಲ್ಲಿಗೆ ಬಂದಿತು. ಆ ವನದಲ್ಲಿ ಮಲಿನಾಂಗಿ, ಕೃಷ್ಣಾಜಿನಧರ ಕಪ್ಪು ನೈಷಧನನ್ನು ನೋಡಿದ ಆ ನಾಯಿಯು ಒಂದೇ ಸಮನೆ ಬೊಗಳ ತೊಡಗಿತು. ಆಗ ಆ ನರನು ಬೊಗಳುತ್ತಿರುವ ನಾಯಿಯ ಬಾಯಿಯಲ್ಲಿ ಒಂದೇ ವೇಳೆಯಲ್ಲಿ ಏಳು ಬಾಣಗಳನ್ನು ಬಿಟ್ಟು ತನ್ನ ಕೌಶಲ್ಯತೆಯನ್ನು ತೋರಿಸಿದನು. ಆ ನಾಯಿಯು ಬಾಯಿಯಲ್ಲಿ ಬಾಣಗಳು ತುಂಬಿಕೊಂಡಿದ್ದಂತೆ ಪಾಂಡವರಿದ್ದಲ್ಲಿಗೆ ಹೋಯಿತು. ಅದನ್ನು ನೋಡಿದ ವೀರ ಪಾಂಡವರು ಪರಮ ವಿಸ್ಮಿತರಾದರು. ಶಬ್ದವೇಧಿಯಲ್ಲಿದ್ದ ಆ ಪರಮ

ಕುಶಲತೆಯನ್ನು ನೋಡಿ ಎಲ್ಲರೂ ವಿನೀತರಾಗಿ ಆ ಕೃತ್ಯವನ್ನೆಸಗಿದವನ್ನು ಪ್ರಶಂಸಿಸಿದರು. ಪಾಂಡವರು ವನದಲ್ಲಿ ಅವನನ್ನು ಅನ್ವೇಷಿಸುತ್ತಾ ಒಂದೇ ಸಮನೆ ಬಾಣಗಳನ್ನು ಬಿಡುತ್ತಿದ್ದ ಆ ವನವಾಸಿಯನ್ನು ಕಂಡರು. ವಿಕೃತವಾಗಿ ಕಾಣುತ್ತಿರುವ ಅವನನ್ನು ಗುರುತಿಸಲಾಗದೇ ಅವನನ್ನು ಕೇಳಿದರು:

> "ನೀನು ಯಾರು ಮತ್ತು ಯಾರವನು?"

ಏಕಲವ್ಯನು ಹೇಳಿದನು:

> "ನಿಷಾದಾಧಿಪತಿ ವೀರ ಹಿರಣ್ಯಧನುಷನ ಮಗನೆಂದು, ದ್ರೋಣಶಿಷ್ಯನೆಂದು, ಧನುರ್ವೇದವನ್ನು ಕಲಿಯಲು ಶ್ರಮಿಸುತ್ತಿರುವವನೆಂದೂ ನನ್ನನ್ನು ತಿಳಿಯಿರಿ."

ಆಗ ಪಾಂಡವರು ಅವನನ್ನು ಗುರುತಿಸಿದರು. ಮತ್ತು ಅವರು ಹಿಂದಿರುಗಿ ಬಂದು ಆ ಅದ್ಭುತ ಎಲ್ಲವನ್ನೂ ಯಥಾವತ್ತಾಗಿ ದ್ರೋಣನಿಗೆ ವರದಿ ಮಾಡಿದರು. ಆದರೆ ಕೌಂತೇಯ ಅರ್ಜುನನು ಏಕಲವ್ಯನ ಕುರಿತು ಚಿಂತಿಸತೊಡಗಿದನು. ಏಕಾಂತದಲ್ಲಿ ದ್ರೋಣನನ್ನು ಭೆಟ್ಟಿಯಾಗಿ ಪ್ರೇಮಾಭಾವದಿಂದ ಹೇಳಿದನು:

> "ಒಮ್ಮೆ ನಾನು ಒಬ್ಬನೇ ಇರುವಾಗ ನನ್ನನ್ನು ಬಿಗಿದಪ್ಪಿ ಪ್ರೀತಿಪೂರ್ವಕ ನನ್ನ ಯಾವ ಶಿಷ್ಯರೂ ಎಂದೂ ನಿನ್ನನ್ನು ಹಿಂದೆಹಾಕುವುದಿಲ್ಲ ಎಂದು ಹೇಳಿರಲಿಲ್ಲವೇ? ಹಾಗಿದ್ದಾಗ

ಈಗ ಹೇಗೆ ನನಗಿಂಥಲೂ ವಿಶಿಷ್ಠ ವೀರ್ಯವಾನ್
ನಿಷಧಾಧಿಪತಿಯ ಮಗನು ನಿನ್ನ ಶಿಷ್ಯನಾಗಿದ್ದಾನೆ?"

ಸ್ವಲ್ಪ ಸಮಯ ಯೋಚಿಸಿದ ದ್ರೋಣನು ಒಂದು ನಿಶ್ಚಯ ಮಾಡಿ ಸವ್ಯಸಾಚಿಯನ್ನೂ ಕರೆದುಕೊಂಡು ನೈಷಾಧಿಯಿದ್ದಲ್ಲಿಗೆ ಬಂದನು. ಅಲ್ಲಿ ಮಲದಿಗ್ದಾಂಗ, ಜಟಿಲ, ಹರಕು ಬಟ್ಟೆಗಳನ್ನು ಧರಿಸಿದ್ದ, ಧನುಷ್ಪಾಣಿ ನಿರಂತರವಾಗಿ ಬಾಣಗಳನ್ನು ಬಿಡುತ್ತಿದ್ದ ಏಕಲವ್ಯನನ್ನು ಕಂಡನು. ಏಕಲವ್ಯನೂ ಕೂಡ ಬರುತ್ತಿದ್ದ ದ್ರೋಣನನ್ನು ನೋಡಿ ಅವನಲ್ಲಿಗೆ ಹೋಗಿ ಅವನ ಕಾಲುಗಳನ್ನು ಹಿಡಿದು ತನ್ನ ತಲೆಯಿಂದ ಭೂಮಿಯನ್ನು ಸ್ಪರ್ಶಿಸಿದನು. ಆ ನಿಷಾಧಜನು ದ್ರೋಣನನ್ನು ವಿಧಿವತ್ತಾಗಿ ಪೂಜಿಸಿ ತಾನು ಶಿಷ್ಯನೆಂದು ನಿವೇದಿಸಿ ಅವನ ಎದುರು ಅಂಜಲೀ ಬದ್ಧನಾಗಿ ನಿಂತುಕೊಂಡನು. ಆಗ ದ್ರೋಣನು ಎಕಲವ್ಯನಿಗೆ ಹೇಳಿದನು:

"ನೀನು ನನ್ನ ಶಿಷ್ಯನೇ ಆಗಿದ್ದರೆ ತಕ್ಷಣವೇ ನನಗೆ
ವೇತನವನ್ನು ನೀಡಬೇಕು."

ಇದನ್ನು ಕೇಳಿ ಏಕಲವ್ಯನು ಸಂತಸದಿಂದ ಹೇಳಿದನು:

"ಭಗವನ್! ಏನನ್ನು ಕೊಡಲಿ? ನನ್ನ ಗುರುವು ಆಜ್ಞಾಪಿಸಲಿ.
ನನ್ನ ಬ್ರಹ್ಮವಿತ್ತಮ ಗುರುವಿಗೆ ಕೊಡದೇ ಇರುವಂಥಹುದು
ಏನೂ ಇಲ್ಲ."



ಆಗ ಅವನು

“ನನಗೆ ನಿನ್ನ ಬಲಗೈಯ ಅಂಗುಷ್ಠವನ್ನು ಕೊಡು !”

ಎಂದನು. ದ್ರೋಣನ ಆ ದಾರುಣ ಮಾತುಗಳನ್ನು ಕೇಳಿದ ಸದಾ ಸತ್ಯದಲ್ಲಿ ನಿರತ ಏಕಲವ್ಯನಾದರೂ ಸಂತೋಷದ ಮುಖದಿಂದ, ಮನಸ್ಸಿನಲ್ಲಿ ಸ್ವಲ್ಪವೂ ದೀನತೆಯಿಲ್ಲದೇ ಸ್ವಲ್ಪವೂ ಯೋಚನೆಯಿಲ್ಲದೇ ತನ್ನ ಅಂಗುಷ್ಠವನ್ನು ಕತ್ತರಿಸಿ ದ್ರೋಣನಿಗಿತ್ತು ತನ್ನ ಪ್ರತಿಜ್ಞೆಯನ್ನು ಪೂರೈಸಿದನು. ತನ್ನ ಅಂಗುಲಿಯನ್ನು ಕತ್ತರಿಸಿಕೊಟ್ಟ ನೈಷಾಧನು ಮೊದಲಿನ ಹಾಗೆ ಶಿಘ್ರವಾಗಿರಲಿಲ್ಲ. ಅರ್ಜುನನ ಜ್ವರವು ಬಿಟ್ಟು ಅವನು ಪ್ರೀತಮನಸ್ಕನಾದನು. ದ್ರೋಣನ ಮಾತೂ ಸತ್ಯವಾಗಿ ಉಳಿಯಿತು. ಬೇರೆ ಯಾರೂ ಅರ್ಜುನನನ್ನು ಹಿಂದೆ ಹಾಕಲಿಲ್ಲ.

ದ್ರೋಣನಲ್ಲಿ ಕಲಿಯುತ್ತಿದ್ದ ಕುರು ಶಿಷ್ಯರಲ್ಲಿ ದುರ್ಯೋಧನ ಮತ್ತು ಭೀಮ ಇಬ್ಬರೂ ಗದಾಯುದ್ಧದಲ್ಲಿ ವಿಶೇಷತೆಯನ್ನು ಪಡೆದರು. ಅಶ್ವತ್ಥಾಮನು ರಹಸ್ಯಾಸ್ತ್ರಗಳಲ್ಲಿ ಎಲ್ಲರಿಗಿಂಥಲೂ ಮುಂದುವರಿದಿದ್ದನು. ಹಾಗೆಯೇ ಅವಳಿ ಮಕ್ಕಳು ಖಡ್ಗವನ್ನು ಹಿಡಿಯುವುದರಲ್ಲಿ, ಯುಧಿಷ್ಠಿರನು ರಥಯುದ್ಧದಲ್ಲಿ, ಮತ್ತು ಧನಂಜಯನು ಎಲ್ಲ ಆಯುಧಗಳಲ್ಲಿ ಅನ್ಯ ಪುರುಷರಿಗಿಂಥ ಮುಂದುವರೆದಿದ್ದರು. ರಥಯೂಥಪಯೂಥಪ ಆ ಪಾಂಡವನು ಬುದ್ಧಿಯೋಗಬಲೋತ್ಸಾಹಗಳಲ್ಲಿ ಸರ್ವಾಸ್ತ್ರಗಳಲ್ಲಿ

ಸಾಗರಪರ್ಯಂತವೂ ಪ್ರತಿಥನಾಗಿದ್ದನು. ಅಸ್ತ್ರಗಳಲ್ಲಿ ಮತ್ತು ಗುರುವಿನ ಮೇಲಿನ ಅನುರಾಗದಲ್ಲಿ ಅರ್ಜುನನು ವಿಶಿಷ್ಠನಾಗಿದ್ದನು. ವೀರರೆಲ್ಲರಿಗೂ ಅಸ್ತ್ರೋಪದೇಶ ಒಂದೇ ಆಗಿದ್ದರೂ ಸರ್ವ ಕುಮಾರರಲ್ಲಿ ಅರ್ಜುನನು ಎದ್ದು ಕಾಣುತ್ತಿದ್ದನು. ಬಲದಲ್ಲಿ ಅಧಿಕ ಭೀಮಸೇನ ಮತ್ತು ಕೃತವಿದ್ಯ ಧನಂಜಯನನನ್ನು ನೋಡಿ ದುರಾತ್ಮ ಧಾರ್ತರಾಷ್ಟ್ರರು ಅಸೂಯಾಪರರಾಗಿದ್ದರು.

ಅವರ ಎಲ್ಲ ಶಿಕ್ಷಣವೂ ಸಮಾಪ್ತಿಯಾದ ನಂತರ ದ್ರೋಣನು ಅವರ ಪ್ರಹರಣ ಜ್ಞಾನವನ್ನು ತಿಳಿಯಲೋಸುಗ ಎಲ್ಲರನ್ನೂ ಕರೆದು ಒಂದೆಡೆ ಸೇರಿಸಿದನು. ಶಿಲ್ಪಿಗಳಿಂದ ಮಾಡಿಸಿದ ಒಂದು ಪಕ್ಷಿಯ ಕೃತ್ರಿಮವನ್ನು ವೃಕ್ಷದ ಮೇಲೆ ಇರಿಸಿ ಆ ಲಕ್ಷ್ಯವನ್ನು ತೋರಿಸುತ್ತಾ ಕುಮಾರರಿಗೆ ಹೇಳಿದನು:

> “ಎಲ್ಲರೂ ತ್ವರೆ ಮಾಡಿ. ಬೇಗನೆ ನಿಮ್ಮ ನಿಮ್ಮ ಧನುಸ್ಸನ್ನು ತೆಗೆದುಕೊಳ್ಳಿ, ಬಾಣವನ್ನು ಬಿಲ್ಲಿಗೆ ಹೂಡಿ ಆ ಪಕ್ಷಿಯನ್ನು ಗುರಿಮಾಡಿ ನಿಂತುಕೊಳ್ಳಿ. ನಾನು ಹೇಳಿದ ಕೂಡಲೇ ಅದರ ತಲೆಯನ್ನು ಹೊಡೆದು ಬೀಳಿಸಿರಿ. ಮಕ್ಕಳೇ! ನಾನು ಒಬ್ಬೊಬ್ಬರಿಗೇ ಹೇಳುತ್ತೇನೆ. ಹಾಗೆಯೆ ಮಾಡಿರಿ.”

ಶ್ರೇಷ್ಠ ಆಂಗಿರಸನು ಮೊಟ್ಟ ಮೊದಲು ಯುಧಿಷ್ಠಿರನ ಕುರಿತು ಹೇಳಿದನು:

> “ದುರ್ಧರ್ಷ! ಬಾಣವನ್ನು ಹೂಡು. ನನ್ನ ಮಾತು

ಮುಗಿದಕೂಡಲೇ ಅದನ್ನು ಬಿಡು."

ಆಗ ಯುಧಿಷ್ಠಿರನು ಗುರುವಿನ ಮಾತಿನಂತೆ ಮಹಾಧ್ವನಿ ಧನುವನ್ನು ಹಿಡಿದು ಪಕ್ಷಿಯನ್ನು ಗುರಿಯನ್ನಾಗಿಟ್ಟು ನಿಂತುಕೊಂಡನು. ಈ ರೀತಿ ಧನುವನ್ನೆಳೆದು ನಿಂತಿದ್ದ ಕುರುನಂದನನಿಗೆ ಒಂದು ಮುಹೂರ್ತದ ನಂತರ ದ್ರೋಣನು ಕೇಳಿದನು:

"ನರವರಾತ್ಮಜ! ಮರದಮೇಲಿನ ಪಕ್ಷಿಯು ನಿನಗೆ ಕಾಣುತ್ತಿದೆಯೇ?"

"ಕಾಣುತ್ತಿದೆ" ಎಂದು ಯುಧಿಷ್ಠಿರನು ಆಚಾರ್ಯನಿಗೆ ಉತ್ತರಿಸಿದನು. ಸ್ವಲ್ಪ ಹೊತ್ತಿನ ನಂತರ ದ್ರೋಣನು ಪುನಃ ಕೇಳಿದನು:

"ಈಗ ನಿನಗೆ ಏನು ಕಾಣುತ್ತಿದೆ? ನಾನು ಕಾಣುತ್ತಿದ್ದೇನೋ ಅಥವಾ ಈ ಮರವೋ ಅಥವಾ ನಿನ್ನ ಸಹೋದರರೋ?"

ಅದಕ್ಕೆ ಕೌಂತೇಯನು ಹೇಳಿದನು:

"ಈ ಮರ ಕಾಣುತ್ತಿದೆ, ನೀವೂ ಕಾಣುತ್ತಿದ್ದೀರಿ, ಸಹೋದರರೂ ಕಾಣುತ್ತಿದ್ದಾರೆ ಮತ್ತು ಪಕ್ಷಿಯೂ ಕಾಣುತ್ತಿದೆ."

ಆಗ ಅಪ್ರೀತ ದ್ರೋಣನು

"ಆಚೆ ಸರಿ. ನಿನಗೆ ಗುರಿಯನ್ನು ಹೊಡೆಯಲು ಸಾದ್ಯವಿಲ್ಲ"



ಎಂದು ಬೈದನು. ನಂತರ ಆ ಮಹಾಯಶನು ದುರ್ಯೋಧನನೇ ಮೊದಲಾದ ಧಾರ್ತರಾಷ್ಟ್ರರನ್ನು ಕ್ರಮವಾಗಿ ಇದೇ ರೀತಿ ಪ್ರಶ್ನಿಸಿ, ಪರೀಕ್ಷಿಸಿದನು. ಭೀಮನೇ ಮೊದಲಾದ ಅನ್ಯ ಶಿಷ್ಯರನ್ನೂ ಅನ್ಯ ದೇಶದ ರಾಜರನ್ನೂ ಪರೀಕ್ಷಿಸಿದನು. ಅವರೆಲ್ಲರೂ ಇವೆಲ್ಲವೂ ಕಾಣುತ್ತಿವೆ ಎಂದಾಗ ಸಿಟ್ಟಿಗೆದ್ದು ಬೈದನು.

ಆಗ ದ್ರೋಣನು ಮುಗುಳ್ನಗುತ್ತಾ ಧನಂಜಯನಿಗೆ ಹೇಳಿದನು:

> "ಈಗ ನೀನು ಈ ಲಕ್ಷ್ಯವನ್ನು ಹೊಡೆದುರುಳಿಸಬೇಕು. ಕೇಳು. ನಾನು ಹೇಳಿದ ತಕ್ಷಣವೇ ಬಾಣವನ್ನು ಬಿಡಬೇಕು. ಮಗು! ಮೊದಲು ಬಿಲ್ಲಿನಲ್ಲಿ ಬಾಣವನ್ನು ಹೂಡಿ ಒಂದು ಕ್ಷಣ ಹಾಗೆಯೇ ನಿಂತುಕೋ."

ಇದನ್ನು ಕೇಳಿದ ಸವ್ಯಸಾಚಿಯು ಬಿಲ್ಲನ್ನು ವೃತ್ತಾಕಾರದಲ್ಲಿ ಬಗ್ಗಿಸಿ ಲಕ್ಷ್ಯಕ್ಕೇ ಗುರಿಯಿಟ್ಟು ಗುರುವು ಹೇಳಿದಂತೆ ನಿಂತುಕೊಂಡನು. ಸ್ವಲ್ಪ ಸಮಯದ ನಂತರ ಅವನಿಗೆ ದ್ರೋಣನು ಹೇಳಿದನು:

> "ನಿನಗೆ ಅಲ್ಲಿ ಕುಳಿತಿರುವ ಪಕ್ಷಿಯು ಕಾಣುತ್ತಿದೆಯೇ? ಮತ್ತು ಆ ಮರ ಮತ್ತು ನಾನು?"

ಪಾರ್ಥನು ದ್ರೋಣನಿಗೆ ಉತ್ತರಿಸಿದನು:

> "ಪಕ್ಷಿಯು ಕಾಣುತ್ತಿದೆ. ಆದರೆ ವೃಕ್ಷವಾಗಲೀ ನೀವಾಗಲೀ ಕಾಣುತ್ತಿಲ್ಲ."

ಸಂತೋಷಗೊಂಡ ದ್ರೋಣನು ಒಂದು ಕ್ಷಣ ತಡೆದು ಪುನಃ ಆ ರಥರ್ಷಭ ದುರ್ಧರ್ಷ ಪಾಂಡವನಿಗೆ ಹೇಳಿದನು:

> “ಪಕ್ಷಿಯನ್ನು ನೋಡುತ್ತಿದ್ದೀಯಾದರೆ ಅದನ್ನು ನನಗೆ ವರ್ಣಿಸು.”

ಅದಕ್ಕೆ ಅವನು ಹೇಳಿದನು:

> “ಪಕ್ಷಿಯ ತಲೆ ಮಾತ್ರ ಕಾಣುತ್ತಿದೆ. ದೇಹವು ಕಾಣುತ್ತಿಲ್ಲ.”

ಅರ್ಜುನನ ಈ ಮಾತುಗಳನ್ನು ಕೇಳಿದ ದ್ರೋಣನ ದೇಹವು ಸಂತೋಷದಿಂದ ಪುಳಕಿತಗೊಂಡಿತು. “ಬಾಣವನ್ನು ಬಿಡು !” ಎಂದು ಹೇಳಿದನು. ಪಾಂಡವ ಪಾರ್ಥನು ಸ್ವಲ್ಪವೂ ಹಿಂಜರಿಯದೇ ಬಾಣವನ್ನು ಬಿಟ್ಟು ತನ್ನ ತೀಕ್ಷ್ಣ ಬಾಣದಿಂದ ಮರದ ಮೇಲೆ ಕುಳಿತಿದ್ದ ಪಕ್ಷಿಯ ತಲೆಯನ್ನು ಕತ್ತರಿಸಿ, ಕೆಳಗೆ ಬೀಳಿಸಿದನು. ಫಲ್ಗುಣನು ಈ ಕೃತ್ಯದಲ್ಲಿ ಯಶಸ್ವಿಯಾಗಿದ್ದುದನ್ನು ನೋಡಿದ ದ್ರೋಣನು ಅವನನ್ನು ಬಿಗಿದಪ್ಪಿ, ದ್ರುಪದ ಮತ್ತು ಅವನ ಬಂಧುಗಳು ಪರಾಜಿತಗೊಂಡರಂತೆಯೇ ಎಂದು ಯೋಚಿಸಿದನು.

ಸ್ವಲ್ಪ ದಿನಗಳ ನಂತರ ಶ್ರೇಷ್ಠ ಆಂಗಿರಸನು ತನ್ನ ಶಿಷ್ಯರಿಂದೊಡಗೂಡಿ ಸ್ನಾನಕ್ಕೆಂದು ಗಂಗಾನದಿಗೆ ಹೋದನು. ದ್ರೋಣನು ನೀರಿಗಿಳಿದಾಗ ನದಿಯಲ್ಲಿ ವಾಸಿಸುತ್ತಿದ್ದ ಬಲಶಾಲಿ ಮೊಸಳೆಯೊಂದು ಕಾಲಚೋದಿತಗೊಂಡು ಅವನ ಕಾಲನ್ನು

ಹಿಡಿಯಿತು. ತನ್ನನ್ನು ಬಿಡಿಸಿಕೊಳ್ಳಲು ಸಮರ್ಥನಾಗಿದ್ದರೂ ಅವನು ತನ್ನ ಎಲ್ಲ ಶಿಷ್ಯರಿಗೂ ಆದೇಶವನ್ನಿತ್ತನು:

> “ಬೇಗನೆ ಈ ಮೊಸಳೆಯನ್ನು ಕೊಂದು ನನ್ನನ್ನು ಬಿಡಿಸಿ.”

ಅವನು ಹೇಳುವುದನ್ನು ಮುಗಿಸುವುದರೊಳಗೇ ಇತರರು ಸಮ್ಮೂಢರಾಗಿ ಎಲ್ಲೆಲ್ಲಿಂದಲೂ ಓಡಿ ಬರುತ್ತಿರುವಾಗ ಬೀಭತ್ಸುವು ಐದು ಬಾಣಗಳನ್ನು ಬಿಟ್ಟು ನೀರಿನೊಳಗಿದ್ದ ಮೊಸಳೆಯನ್ನು ಕೊಂದನು. ಕ್ರಿಯೋಪೇತ ಪಾಂಡವನನ್ನು ನೋಡಿದ ದ್ರೋಣನು ಅವನು ಸರ್ವ ಶಿಷ್ಯರಲ್ಲಿ ವಿಶಿಷ್ಠನೆಂದು ಮನ್ನಿಸಿದನು ಮತ್ತು ತುಂಬಾ ಸಂತೋಷಗೊಂಡನು. ಪಾರ್ಥನ ಬಾಣಗಳಿಂದ ಕಡಿದು ತುಂಡಾದ ಮೊಸಳೆಯು ಆ ಮಹಾತ್ಮನ ಕಾಲನ್ನು ಬಿಟ್ಟು ಪಂಚಭೂತಗಳಲ್ಲಿ ಸೇರಿಕೊಂಡಿತು. ಆಗ ಮಹಾತ್ಮ ಭಾರದ್ವಾಜನು ಮಹಾರಥಿಗೆ ಹೇಳಿದನು:

> “ಮಹಾಬಾಹು! ನನ್ನಿಂದ ಈ ವಿಶಿಷ್ಠ ಅತಿದುರ್ಧರ ಬ್ರಹ್ಮಶಿರ ಎಂಬ ಹೆಸರಿನ ಅಸ್ತ್ರವನ್ನು, ಬಳಸುವ ಮತ್ತು ಹಿಂದೆ ತೆಗೆದುಕೊಳ್ಳುವ ವಿಧಾನಗಳ ಜೊತೆಗೆ ಸ್ವೀಕರಿಸು. ಇದನ್ನು ಮನುಷ್ಯರ ಮೇಲೆ ಎಂದೂ ಬಳಸಬಾರದು. ಅಲ್ಪತೇಜಸ್ವಿಯ ಮೇಲೆ ಇದನ್ನು ಬಿಟ್ಟರೆ ಇದು ಇಡೀ ಜಗತ್ತನ್ನೇ ಸುಟ್ಟುಬಿಡಬಹುದು. ಈ ರೀತಿಯ ಇನ್ನೊಂದು ಅಸ್ತ್ರವು ಈ ಮೂರೂ ಲೋಕಗಳಲ್ಲಿಯೂ ಇಲ್ಲ.

ಆದುದರಿಂದ ಇದನ್ನು ನೀನು ತುಂಬಾ ಜಾಗ್ರತೆಯಲ್ಲಿ ಧರಿಸಬೇಕು. ನನ್ನ ಈ ಮಾತುಗಳನ್ನು ಕೇಳು. ಎಂದಾದರೂ ಅಮಾನುಷ ಶತ್ರುವು ನಿನ್ನನ್ನು ಎದುರಿಸಿದಾಗ ಈ ಅಸ್ತ್ರವನ್ನು ಬಳಸಿ ಅವನನ್ನು ಯುದ್ಧದಲ್ಲಿ ಕೊಲ್ಲು."

"ಹಾಗೆಯೇ ಆಗಲಿ!" ಎಂದು ಉತ್ತರಿಸಿದ ಬೀಭತ್ಸುವು ಅಂಜಲೀ ಬದ್ಧನಾಗಿ ಆ ಪರಮಾಸ್ತ್ರವನ್ನು ಸ್ವೀಕರಿಸಿದನು. ಗುರುವು ಪುನಃ ಹೇಳಿದನು:

"ಇಡೀ ಲೋಕದಲ್ಲಿ ನಿನ್ನ ಸಮ ಧನುರ್ಧರನು ಬೇರೆ ಯಾರೂ ಇರುವುದಿಲ್ಲ."

## ಪಾಂಡವ-ಕೌರವ ಪ್ರತಿಭಾ ಪ್ರದರ್ಶನ

ಧಾರ್ತರಾಷ್ಟ್ರರೂ ಪಾಂಡುಪುತ್ರರೂ ಕೃತಾಸ್ತ್ರರಾದುದನ್ನು ಕಂಡ ದ್ರೋಣನು ಜನೇಶ್ವರ ರಾಜ ಧೃತರಾಷ್ಟ್ರನಿಗೆ, ಕೃಪ, ಸೋಮದತ್ತ, ಬಾಹ್ಲೀಕ, ದೀಮಂತ ಗಾಂಗೇಯ, ವ್ಯಾಸ ಮತ್ತು ವಿದುರರ ಸನ್ನಿಧಿಯಲ್ಲಿ ಹೇಳಿದನು:

"ಕುರುಸತ್ತಮ! ನಿನ್ನ ಕುಮಾರರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ್ದಾರೆ. ನಿನ್ನ ಅನುಮತಿಯಿದ್ದರೆ ಅವರು ತಾವು ಪಡೆದಿರುವ ಶಿಕ್ಷಣವನ್ನು ಪ್ರದರ್ಶಿಸಬಹುದು."

ಆಗ ಪ್ರಹೃಷ್ಟ ಮನಸ್ಕ ಮಹಾರಾಜನು ಹೇಳಿದನು:

“ದ್ವಿಜಸತ್ತಮ ಭಾರದ್ವಾಜ! ನೀನು ಒಂದು ಮಹತ್ತರ ಕಾರ್ಯವನ್ನೇ ಮುಗಿಸಿದ್ದೀಯೆ. ನೀನೇ ನಮಗೆ ಯಾವಾಗ, ಎಲ್ಲಿ, ಮತ್ತು ಯಾವ ರೀತಿಯಲ್ಲಿ ಇದನ್ನು ನಡೆಸಬೇಕೆಂದು ಅಪ್ಪಣೆ ಕೊಡಬೇಕು. ಇಂಥಹ ದಿನದಲ್ಲಿ ನಾನು ವೇದನೆಯಿಂದ ದೃಷ್ಟಿಯನ್ನು ಪಡೆದಿರುವ, ನನ್ನ ಈ ಪುತ್ರರ ಅಸ್ತ್ರಜ್ಞಾನ ಮತ್ತು ಪರಾಕ್ರಮವನ್ನು ನೋಡಬಲ್ಲಂಥಹ ಇತರ ಪುರುಷರ ಕುರಿತು ಅಸೂಯೆಪಡುತ್ತೇನೆ. ವಿದುರ! ಗುರು ಆಚಾರ್ಯನು ಹೇಳಿದಂತೆಯೇ ಮಾಡು. ಇದಕ್ಕಿಂತಲೂ ಸಂತೋಷವನ್ನು ತರುವಂಥಹುದು ಬೇರೆಯಾವುದೂ ಇಲ್ಲ ಎಂದು ನನ್ನ ಭಾವನೆ.”

ನಂತರ ರಾಜನ ಅನುಮತಿಯನ್ನು ಪಡೆದು ದ್ರೋಣನೂ ಮತ್ತು ಅವನ ಹಿಂದೆ ವಿದುರನೂ ಹೋದರು.

ಮಹಾಪ್ರಾಜ್ಞ ಭಾರದ್ವಾಜನು ಮರಗಳಿಲ್ಲದ, ಗಿಡಗಂಟಿಗಳಿಲ್ಲದ, ನದಿಯ ಪಕ್ಕದಲ್ಲಿ ಸಮಪ್ರದೇಶದ ಭೂಮಿಯನ್ನು ಅಳೆಸಿದನು. ಪೂಜನೀಯ ನಕ್ಷತ್ರ ತಿಥಿಗಳಲ್ಲಿ ಆ ಭೂಮಿಗೆ ಬಲಿಯನ್ನು ಹಾಕಿಸಿದನು. ಆ ಜಾಗವು ಯಾವ ಉದ್ದೇಶಕ್ಕಿದೆಯೆಂದು ಪುರದಲ್ಲೆಲ್ಲಾ ಘೋಷಿಸಲಾಯಿತು. ಈ ರಂಗಭೂಮಿಯಲ್ಲಿ ಶಿಲ್ಪಿಗಳು ಸುವಿಪುಲ ಶಾಸ್ತ್ರಗಳಲ್ಲಿ ಹೇಳಿದಂತೆ ಯಥಾವಿಧಿ ಸುವಿಹಿತ

ಸರ್ವಾಯುಧೋಪೇತ ಪ್ರೇಕ್ಷಾಗಾರವನ್ನು ರಾಜನಿಗೆ ಮತ್ತು ಸ್ತ್ರೀಯರಿಗೆ ನಿರ್ಮಿಸಿದರು. ಜಾನಪದ ಜನರಿಗೆ ಅಗಲ-ಎತ್ತರ ವಿಪುಲ ನೆರಳನ್ನು ನೀಡುವಂತೆ ಹೊದಿಕೆಗಳನ್ನು ಹೊಂದಿದ್ದ ಮಂಚಗಳನ್ನೂ ರಚಿಸಲಾಯಿತು. ಆ ದಿನವು ಬಂದಾಗ ರಾಜನು ತನ್ನ ಸಚಿವರಿಂದೊಡಗೂಡಿ, ಭೀಷ್ಮ, ಕೃಪ ಮತ್ತು ಆಚಾರ್ಯರನ್ನು ಮುಂದೆ ಮಾಡಿಕೊಂಡು, ತೆಳು ಪರದೆಯಿಂದ ಆವೃತ, ವೈಡೂರ್ಯಮಣಿಭೂಷಿತ ಶಾತಕುಂಭಗಳನ್ನು ಹೊಂದಿದ್ದ ದಿವ್ಯ ಪ್ರೇಕ್ಷಾಗಾರಕ್ಕೆ ಆಗಮಿಸಿದನು. ಆಗ ಮಹಾಭಾಗೆ ಗಾಂಧಾರಿ, ಕುಂತಿ ಮೊದಲಾದ ರಾಜನ ಸರ್ವ ಸ್ತ್ರೀಯರೂ ತಮ್ಮ ತಮ್ಮ ಪರಿಚಾರಿಕೆಯರೊಂದಿಗೆ ದೇವಸ್ತ್ರೀಯರು ಮೇರುಪರ್ವತವನ್ನು ಹೇಗೋ ಹಾಗೆ ಹರ್ಷದಿಂದ ಮಂಚಗಳನ್ನು ಏರಿದರು. ಪುರದಿಂದ ಬ್ರಾಹ್ಮಣ ಕ್ಷತ್ರಿಯರೇ ಮೊದಲಾದ ನಾಲ್ಕು ವರ್ಣದವರೂ ಕೃತಾಸ್ತ್ರ ಕುಮಾರರನ್ನು ನೋಡಲು ಬಂದು ಸೇರಿದರು. ವಾದ್ಯಘೋಷಗಳ ಅಲೆಯಲ್ಲಿ ತೇಲುತ್ತಿದ್ದ ಆ ಕುತೂಹಲ ಜನಸಂದಣಿಯು ಒಂದು ಕ್ಷುಬ್ಧ ಮಹಾಸಾಗರದಂತೆ ತೋರುತ್ತಿತ್ತು. ಆಗ ಶುಕ್ಲಾಂಬರಧಾರಿ, ಶುಕ್ಲಯಜ್ಞೋಪವೀತ ಧಾರಿಣಿ, ಬಿಳಿಕೂದಲಿನ ಬಿಳಿಗಡ್ಡದ ಶುಕ್ಲಮಾಲ್ಯಾನುಲೇಪಿತ ಆಚಾರ್ಯನು ತನ್ನ ಪುತ್ರನನ್ನೊಡಗೂಡಿ ಮಳೆ-ಮೇಘಗಳಿಲ್ಲದ ನಭದಲ್ಲಿ ಅಂಗಾರಕನೊಂದಿಗೆ ಚಂದ್ರನು ಹೇಗೋ ಹಾಗೆ ರಂಗಮಧ್ಯವನ್ನು ಪ್ರವೇಶಿಸಿದನು. ಆ ಬಲವಂತರಲ್ಲಿ ಶ್ರೇಷ್ಠ ಮಂತ್ರಜ್ಞ ಬಲಿ ಬ್ರಾಹ್ಮಣನು ಆ ಸಮಯಕ್ಕೆ ತಕ್ಕುದಾದ

ಮಂಗಲಾಚರಣೆಯನ್ನು ಹೇಳಿದನು. ಪುಣ್ಯಾಹ ಘೋಷ ಪುಣ್ಯದ ನಂತರ ವಿವಿಧ ಶಸ್ತ್ರೋಪಕರಣಗಳನ್ನು ಹಿಡಿದು ಜನರು ಪ್ರವೇಶಿಸಿದರು.

ಆಗ ಸೊಂಟಕ್ಕೆ ಬಿಗಿಯಾಗಿ ಬಿಗಿದ, ಕವಚಗಳನ್ನು ಧರಿಸಿದ ಮಹಾಬಲ ಭರತರ್ಷಭರು ಧನುಸ್ಸುಗಳನ್ನು ಹಿಡಿದು ಪ್ರವೇಶಿಸಿದರು. ಯುಧಿಷ್ಠಿರನ ಮುಂದಾಳತ್ವದಲ್ಲಿ ಹಿರಿಯವನನ್ನು ಕ್ರಮವಾಗಿ ಹಿಂಬಾಲಿಸಿ ಪ್ರತಿಯೊಬ್ಬ ಮಹಾವೀರ ಕುಮಾರನೂ ತನ್ನ ತನ್ನ ಪರಮಾದ್ಭುತ ಅಸ್ತ್ರಗಳನ್ನು ಪ್ರದರ್ಶಿಸಿದರು. ದರ್ಶಕರಲ್ಲಿ ಕೆಲವರು ಬಾಣಗಳು ತಮ್ಮ ಮೇಲೆ ಬಂದು ಬೀಳುತ್ತಿವೆಯೋ ಎಂಬ ಭಯದಿಂದ ತಲೆಗಳನ್ನು ತಗ್ಗಿಸುತ್ತಿದ್ದರೆ ಇನ್ನು ಕೆಲವು ಜನರು ವಿಸ್ಮಿತರಾಗಿ ನೋಡುತ್ತಲೇ ಇದ್ದರು. ವೇಗವಾಗಿ ಕುದುರೆಗಳ ಮೇಲೆ ಹೋಗುತ್ತಿದ್ದ ಅವರು ಬಾಣಗಳಿಂದ ಗುರಿಗಳಿಗೆ ಸರಿಯಾಗಿ ಹೊಡೆದು ತಮ್ಮ ತಮ್ಮ ವಿವಿಧ ಕೌಶಲ್ಯತೆಗಳನ್ನು ತೋರಿಸಿಕೊಟ್ಟರು. ಬಿಲ್ಲು ಬಾಣಗಳನ್ನು ಹಿಡಿಯುವುದರಲ್ಲಿ ಆ ಕುಮಾರರ ಗುಂಪಿಗಿದ್ದ ಕೌಶಲತೆಯನ್ನು ನೋಡಿದ ಜನರು ಗಂಧರ್ವನಗರವನ್ನು ನೋಡಿದವರಂತೆ ವಿಸ್ಮಿತರಾದರು. ಅಲ್ಲಿ ಕಣ್ಣುಬಿಟ್ಟು ವಿಸ್ಮಿತರಾಗಿ ನೋಡುತ್ತಿದ್ದ ನೂರಾರು ಸಹಸ್ರಾರು ಜನರು "ಸಾಧು! ಸಾಧು!" ಎಂದು ಕೂಗುತ್ತಿದ್ದರು.

ಆ ಮಹಾಬಲಶಾಲಿಗಳು ಒಮ್ಮೆ ರಥದಮೇಲೆ, ನಂತರ ಆನೆಯ

ಮೇಲೆ, ಕುದುರೆಯ ಮೇಲೆ ಮತ್ತು ಒಮ್ಮೆ ದ್ವಂದ್ವ ಯುದ್ಧದಲ್ಲಿ ಧನುಸ್ಸನ್ನು ಹಿಡಿದು ಪ್ರದರ್ಶಿಸಿದರು. ಖಡ್ಗ ಮತ್ತು ಚರ್ಮಾಣಗಳನ್ನು ಹಿಡಿದು ಬಾಹುಗಳಿಂದ ಬೀಸುತ್ತಾ ಆ ಮೈದಾನದಲ್ಲೆಲ್ಲಾ ಓಡಾಡಿ ಖಡ್ಗಯುದ್ಧದಲ್ಲಿ ತಮಗಿದ್ದ ಕೌಶಲ್ಯತೆಯನ್ನು ತೋರಿಸಿದರು. ಖಡ್ಗ ಚರ್ಮಣಗಳ ಪ್ರಯೋಗದಲ್ಲಿ ಅವರಿಗಿದ್ದ ಲಾಘವ, ಸೌಷ್ಠವ, ಶೋಭೆ, ಸ್ಥಿರತ್ವ ಮತ್ತು ದೃಡಮುಷ್ಠಿಯನ್ನು ಅಲ್ಲಿ ಸರ್ವರೂ ನೋಡಿದರು. ಆಗ ನಿತ್ಯಸಹೃಷ್ಠ ಸುಯೋಧನ-ವೃಕೋದರರು ಕೈಯಲ್ಲಿ ಗದೆಯನ್ನು ಹಿಡಿದು ಒಂದೇ ಶಿಖರಗಳನ್ನು ಹೊಂದಿದ ಪರ್ವತಗಳಂತೆ ಅಲ್ಲಿ ಇಳಿದರು. ಸೊಂಟವನ್ನು ಬಿಗಿದು ಪೌರುಷವನ್ನು ತೋರಿಸುತ್ತಾ ಅಲ್ಲಿ ನಿಂತಿದ್ದ ಮಹಾಬಾಹುಗಳು ಒಂದೇ ಹೆಣ್ಣು ಆನೆಗಾಗಿ ಹೊಡೆದಾಡಲು ನಿಂತಿದ್ದ ಮದಿಸಿದ ಗಂಡಾನೆಗಳಂತೆ ತೋರುತ್ತಿದ್ದರು. ಆ ಮಹಾಬಲಿಗಳು ಹೊಳೆಯುತ್ತಿರುವ ಗದೆಗಳನ್ನು ಹಿಡಿದು ಸೂರ್ಯನಂತೆ ಮಂಡಲಗಳಲ್ಲಿ ಕಾವಿಗೆ ಬಂದ ಹೋರಿಗಳಂತೆ ಪ್ರದಕ್ಷಿಣೆಮಾಡುತ್ತಿದ್ದರು. ಕುಮಾರರ ಈ ಎಲ್ಲ ವಿಚೇಷ್ಟಿತೆಗಳನ್ನೂ ವಿದುರನು ಧೃತರಾಷ್ಟ್ರ, ಗಾಂಧಾರಿ ಮತ್ತು ಕುಂತಿಗೆ ವರದಿಮಾಡುತ್ತಿದ್ದನು.

ರಂಗಸ್ಥ ಕುರುರಾಜ ಮತ್ತು ಬಲಿಗಳಲ್ಲಿಯೇ ಶ್ರೇಷ್ಠ ಭೀಮನನ್ನು ನೋಡಿದ ಜನರಲ್ಲಿ ತಮಗಿಷ್ಟವಿದ್ದವರ ಮೇಲೆ ಪಕ್ಷಪಾತ ಮಾಡುವ

ಎರಡು ಪಂಗಡಗಳಾಯಿತು. “ಹಾ ವೀರ ಕುರುರಾಜ ! ಹಾ ಭೀಮ !” ಎಂದು ಕೂಗುತ್ತಿರುವ ಜನರ ಕೂಗು ತಕ್ಷಣವೇ ಮೊಳಗಿಬಂದಿತು. ಈ ರೀತಿ ಕ್ಷುಬ್ಧ ಸಾಗರದಂತೆ ತೋರುತ್ತಿದ್ದ ರಂಗವನ್ನು ನೋಡಿದ ಬುದ್ಧಿವಂತ ಭಾರದ್ವಾಜನು ತನ್ನ ಪ್ರಿಯ ಪುತ್ರ ಅಶ್ವತ್ಥಾಮನಿಗೆ ಹೇಳಿದನು: “ಚೆನ್ನಾಗಿಯೇ ತರಬೇತಿಯನ್ನು ಹೊಂದಿದ ಈ ಮಹಾವೀರರಿಬ್ಬರನ್ನೂ ನಿಲ್ಲಿಸು. ಇಲ್ಲವಾದರೆ ಭೀಮ-ದುರ್ಯೋಧನರನ್ನು ಕುರಿತು ರಂಗದಲ್ಲಿ ದಂಗೆಯುಂಟಾಗಬಹುದು.” ಆಗ ಯುಗಾಂತಕಾಲದ ಭಿರುಗಾಳಿಯಿಂದ ಮಹಾ ಕ್ಷೋಭಣೆಗೊಳಗಾದ ಎರಡು ಸಮುದ್ರಗಳಂತೆ ಪರಸ್ಪರರನ್ನು ಎದುರಿಸಿ ನಿಂತಿರುವ ಅವರೀರ್ವರನ್ನು ಗುರುಪುತ್ರನು ನಿಲ್ಲಿಸಿದನು.

ರಂಗಾಂಗಣದಲ್ಲಿ ಇಳಿದು ದ್ರೋಣನು ಮಹಾಮೇಘನಿಭಸ್ವನವನ್ನುಂಟುಮಾಡುತ್ತಿದ್ದ ವಾದ್ಯವೃಂದವನ್ನು ನಿಲ್ಲಿಸಿ ಹೇಳಿದನು:

> “ಈಗ ಸರ್ವಾಸ್ತ್ರವಿದುಷರಲ್ಲಿಯೇ ಶ್ರೇಷ್ಠ ಇಂದ್ರಾನುಜಸಮ, ನನಗೆ ನನ್ನ ಪುತ್ರನಿಗಿಂತಲೂ ಪ್ರಿಯಕರನಾದ ಐಂದ್ರಿ ಪಾರ್ಥನನ್ನು ನೋಡಿ !”

ಆಚಾರ್ಯನ ವಚನಗಳಿಂದ ಬರಮಾಡಿಕೊಂಡ ಆ ಯುವಕ ಫಲ್ಗುನನು ಗೋಧಾಂಗುಲಿತ್ರಾಣಗಳನ್ನು ಕಟ್ಟಿಕೊಂಡು, ಪೂರ್ಣ ತೂರ್ಣನಾಗಿ ಹೊಳೆಯುತ್ತಿರುವ ಕಾಂಚನದ ಕವಚವನ್ನು ಧರಿಸಿ,

ಮಳೆಯನ್ನು ತರುವ ಮಿಂಚುಗಳಿಂದೊಡಗೂಡಿದ ಮೋಡದೊಂದಿಗೆ ಬೆಳಗುತ್ತಿರುವ ಬಂಗಾರದ ಬಣ್ಣದ ಸೂರ್ಯನಂತೆ ತೋರುತ್ತಾ ಪ್ರವೇಶಿಸಿದನು. ಆಗ ರಂಗದಲ್ಲಿ ಎಲ್ಲೆಡೆಯಲ್ಲಿಯೂ ಮಹಾ ಗದ್ದಲವಾಯಿತು ಮತ್ತು ಶಂಖಗಳೊಂದಿಗೆ ವಾದ್ಯಗಳು ಎಲ್ಲೆಡೆಯೂ ಮೊಳಗತೊಡಗಿದವು.

> "ಇವನೇ ಕುಂತೀಸುತ! ಇವನೇ ಶ್ರೀಮಾನ್ ಪಾಂಡುವಿನ ಮಧ್ಯಮ! ಇವನೇ ಕುರುಗಳನ್ನು ರಕ್ಷಿಸುವವವನು! ಮಹೇಂದ್ರನ ಪುತ್ರ! ಇವನೇ ಅಸ್ತ್ರವಿದುಷರಲ್ಲಿ ಶ್ರೇಷ್ಠನಾದವನು! ಇವನೇ ಧರ್ಮಭೃತರಲ್ಲಿ ಶ್ರೇಷ್ಠನಾದವನು! ಇವನು ಶೀಲವಂತನೂ ಶೀಲಜ್ಞಾನನಿಧಿಯೂ, ಶ್ರೇಷ್ಠನೂ ಆಗಿದ್ದಾನೆ."

ಪ್ರೇಕ್ಷಕರಿಂದ ಈ ರೀತಿ ಅತುಲ ಮಾತುಗಳು ಕೇಳಿಬರುತ್ತಿರುವಾಗ ಕುಂತಿಯ ಸ್ತನಗಳು ಕಣ್ಣೀರು ಮತ್ತು ಹಾಲು ಇವೆರಡರ ಮಿಶ್ರಣದಿಂದ ತೋಯ್ದವು. ಈ ಮಾತುಗಳು ಅವನ ಕಿವಿಗಳನ್ನು ತುಂಬಲಾಗಿ ಹೃಷ್ಟಮನಸ್ಕ ನರಶ್ರೇಷ್ಠ ಧೃತರಾಷ್ಟ್ರನು ವಿದುರನಲ್ಲಿ ಕೇಳಿದನು:

> "ಕ್ಷತ್ತ! ಕ್ಷುಬ್ಧ ಸಾಗರದಂತೆ, ನಭಸ್ತಲವನ್ನೇ ಸೀಳುವಂತೆ ರಂಗದಿಂದ ಕೇಳಿಬರುತ್ತಿರುವ ಆ ಸುಮಹಾಸ್ವನವೇನು?"

ವಿದುರನು ಹೇಳಿದನು:

“ಮಹಾರಾಜ! ಪಾಂಡುನಂದನ ಪಲ್ಗುನ ಪಾರ್ಥನು ಕವಚವನ್ನು ಧರಿಸಿ ರಂಗಕ್ಕಿಳಿದಿದ್ದಾನೆ. ಅದರ ಕುರಿತಾಗಿ ಈ ಸುಮಹಾಸ್ವನ ಕೇಳಿ ಬರುತ್ತಿದೆ.”

ಧೃತರಾಷ್ಟ್ರನು ಹೇಳಿದನು:

“ಮಹಾಮತೇ! ಪೃಥಳಂಥಹ ಅರಣಿಯಿಂದ ಪಾಂಡವನಂಥಹ ವಹ್ನಿಯಲ್ಲಿ ಉದ್ಭವವಾದ ಈ ಮೂವರಿಂದ ನಾನು ಧನ್ಯನಾಗಿದ್ದೇನೆ! ನಾನು ಅನುಗೃಹೀತನಾಗಿದ್ದೇನೆ! ರಕ್ಷಿತನಾಗಿದ್ದೇನೆ!”

ಉಲ್ಬಣಗೊಂಡ ಆ ರಂಗವು ಹೇಗೋ ಶಾಂತವಾಗುತ್ತಿದ್ದಂತೆಯೇ ಬೀಭತ್ಸುವು ಆಚಾರ್ಯನಿಂದ ಕಲಿತ ತನ್ನ ಅಸ್ತ್ರ ಕುಶಲತೆಯನ್ನು ತೋರಿಸತೊಡಗಿದನು. ಅಗ್ನೇಯದಿಂದ ವಹ್ನಿಯನ್ನು ಸೃಷ್ಟಿದನು. ವಾರುಣದಿಂದ ನೀರನ್ನು ಸೃಷ್ಟಿಸಿದನು. ವಾಯುವ್ಯದಿಂದ ವಾಯುವನ್ನು ಸೃಷ್ಟಿಸಿದನು. ಪಾರ್ಜನ್ಯದಿಂದ ಮೋಡಗಳನ್ನು ಸೃಷ್ಟಿಸಿದನು. ಭೌಮದಿಂದ ಭೂಮಿಯನ್ನು ಪ್ರವೇಶಿಸಿದನು. ಪಾರ್ವತದಿಂದ ಗಿರಿಗಳನ್ನು ಸೃಷ್ಟಿಸಿದನು. ಅಂತರ್ಧಾನಾಸ್ತ್ರದಿಂದ ಅವೆಲ್ಲವನ್ನೂ ಅಂತರ್ಧಾನಗೊಳಿಸಿದನು. ಒಂದು ಕ್ಷಣದಲ್ಲಿ ಎತ್ತರವಾಗಿ ನಿಂತನು. ಇನ್ನೊಂದು ಕ್ಷಣದಲ್ಲಿ ಸಣ್ಣವನಾಗಿ ಕಂಡನು. ಒಂದು ಕ್ಷಣ ರಥದ ಮುಂದೆ ಕಾಣಿಸಿಕೊಂಡರೆ ಮತ್ತೊಂದು ಕ್ಷಣದಲ್ಲಿ ರಥದ ಮಧ್ಯದಲ್ಲಿ ಕುಳಿತಿದ್ದನು ಮತ್ತು ಇನ್ನೊಂದು ಕ್ಷಣದಲ್ಲಿ ನೆಲದ

ಮೇಲೆ ಹಾರಿ ನಿಂತಿದ್ದನು. ಆ ಗುರುಪ್ರಿಯ ಸುಕುಮಾರನು ವಿವಿಧ ಶರಗಳಿಂದ ಸೂಕ್ಷ್ಮವಾದ ದೊಡ್ಡದಾದ ಗುರಿಗಳನ್ನು ಅತ್ಯಂತ ಕೌಶಲ್ಯದಿಂದ ಹೊಡೆದನು. ಲೋಹದ ಒಂದು ವರಾಹವನ್ನು ಎದುರಿಗೆ ತಂದಾಗ ಅದರ ಬಾಯಿಯಲ್ಲಿ ಐದು ಬಾಣಗಳನ್ನು ಒಂದೇ ಬಾಣವನ್ನೇ ಬಿಟ್ಟಿದ್ದಾನೋ ಎಂದು ಭ್ರಮಿಸುವ ಹಾಗೆ ಅತಿವೇಗದಲ್ಲಿ ಬಿಟ್ಟು ತುಂಬಿಸಿದನು. ಒಂದು ಹಗ್ಗದಿಂದ ನೇತಾಡುತ್ತಿರುವ ಗೋವಿನ ಕೊಂಬಿನೊಳಗೆ ಇಪ್ಪತ್ತೊಂದು ಬಾಣಗಳನ್ನು ತುಂಬಿಸಿದನು. ಇದೇ ರೀತಿ ಮತ್ತು ಇನ್ನೂ ಹಲವಾರು ರೀತಿಗಳಲ್ಲಿ ಅವನು ಬಿಲ್ಲುಬಾಣಗಳಲ್ಲಿ, ಖಡ್ಗದಲ್ಲಿ ಮತ್ತು ಗದೆಯಲ್ಲಿ ತನ್ನಲ್ಲಿದ್ದ ಕೌಶಲ್ಯತೆಯನ್ನು ಪ್ರದರ್ಶಿಸಿದನು.

ಆ ಪ್ರದರ್ಶನವು ಮುಗಿಯುತ್ತಾ ಬಂದಂತೆ ಮತ್ತು ಜನಸಂದಣಿಯು ಕಡಿಮೆಯಾಗುತ್ತಾ ಬಂದಂತೆ ದ್ವಾರದಲ್ಲಿ ವಜ್ರವೇ ಬಿದ್ದಹಾಗೆ, ಅದನ್ನುಂಟುಮಾಡಿದವನ ಮಹಾತ್ಮತೆ ಮತ್ತು ಬಲದ ಸೂಚಕವಾದ ಮಹಾ ಸ್ವರವೊಂದು ಕೇಳಿಬಂದಿತು. ಗಿರಿಗಳು ಕೆಳಗುರುಳುತ್ತಿವೆಯೇ? ಭೂಮಿಯು ಬಿರಿಯುತ್ತಿದೆಯೇ? ಜಲಭಾರಗೊಂಡ ಮೋಡಗಳಿಂದ ಆಕಾಶವು ತುಂಬಿಕೊಂಡಿದೆಯೇ? ಈ ರೀತಿ ರಂಗದಲ್ಲಿರುವವರು ಒಂದು ಕ್ಷಣ ಯೋಚಿಸಿದರು. ಪ್ರೇಕ್ಷಕರೆಲ್ಲರೂ ದ್ವಾರದ ಕಡೆ ನೋಡತೊಡಗಿದರು. ಐವರು ಪಾರ್ಥ ಭ್ರಾತೃಗಳಿಂದ ಪರಿವೃತ ದ್ರೋಣನು ಐದು ತಾರೆಗಳಿಂದ ಕೂಡಿದ ಸಾವಿತ್ರಿಯಲ್ಲಿದ್ದ

ಚಂದ್ರಮನಂತೆ ಕಂಗೊಳಿಸಿದನು. ಅಶ್ವತ್ಥಾಮನನ್ನೂ ಸೇರಿ ಒಂದು ನೂರು ಭ್ರಾತೃಗಳು ಎದ್ದು ನಿಂತ ಅಮಿತ್ರಘ್ನ ದುರ್ಯೋಧನನನ್ನು ಸುತ್ತುವರೆದಿದ್ದರು. ಗದಾಪಾಣಿಯಾದ ಅವನು ಹಿಂದೆ ದಾನವರ ನಾಶಕಾಲದಲ್ಲಿ ಪುರಂದರನು ದೇವಗಳಿಂದ ಹೇಗೋ ಹಾಗೆ ಆಯುಧಗಳನ್ನು ಹಿಡಿದು ತಯಾರಾಗಿದ್ದ ಭ್ರಾತೃಗಳಿಂದ ಸುತ್ತುವರೆಯಲ್ಪಟ್ಟಿದ್ದನು.

ವಿಸ್ಮಿತರಾಗಿ ತೆರೆದ ಕಣ್ಣುಗಳಿಂದ ಪ್ರೇಕ್ಷಕರು ದಾರಿ ಮಾಡಿ ಕೊಡುತ್ತಿದ್ದಂತೆ ಆ ವಿಸ್ತೀರ್ಣ ರಂಗಭೂಮಿಯನ್ನು ಹೊಳೆಯುತ್ತಿರುವ ಸಹಜ ಕವಚ ಮತ್ತು ಕುಂಡಲಗಳಿಂದ ಪ್ರಕಾಶಿತಗೊಂಡ ಮುಖವುಳ್ಳ, ಮಹಾ ಕೀರ್ತಿವಂತ, ವಿಶಾಲ ಕಣ್ಣುಗಳನ್ನು ಹೊಂದಿದ್ದ, ಪೃಥಾಳಿಗೆ ಕನ್ಯೆಯಾಗಿದ್ದಾಗಲೇ ಹುಟ್ಟಿದ್ದ, ಸೂರ್ಯನ ಅಂಶದಿಂದ ಹುಟ್ಟಿದ, ಸೂರ್ಯನಂತೆಯೇ ತೀಕ್ಷ್ಣ ಶೋಭೆಯನ್ನು ಹೊಂದಿದ್ದ, ಅರಿಗಣ ಸೂದನ, ಪರಪುರಂಜಯ ಕರ್ಣನು ಧನಸ್ಸು ಮತ್ತು ಕಟ್ಟಿಕೊಂಡ ಖಡ್ಗದೊಂದಿಗೆ ಪರ್ವತವೇ ನಡೆದು ಬರುತ್ತಿದೆಯೋ ಎನ್ನುವಂತೆ ಪ್ರವೇಶಿಸಿದನು. ವೀರ್ಯ ಮತ್ತು ಪರಾಕ್ರಮದಲ್ಲಿ ಅವನು ಸಿಂಹ, ವೃಷಭ, ಮತ್ತು ಗಜೇಂದ್ರರ ಸಮಾನನಾಗಿದ್ದನು. ಪ್ರಕಾಶ, ಕಾಂತಿ ಮತ್ತು ಹೊಳಪಿನಲ್ಲಿ ಸೂರ್ಯ, ಚಂದ್ರಮ ಮತ್ತು ಅಗ್ನಿಯಂತಿದ್ದನು. ಸಿಂಹದಂತೆ ಗಟ್ಟಿ ದೇಹದ ಆ ಯುವಕನು ಬಂಗಾರದ ತಾಳವೃಕ್ಷದಂತೆ ಎತ್ತರನಾಗಿದ್ದನು. ಭಾಸ್ಕರನ

ಆತ್ಮಸಂಜಾತನಾದ ಅವನು ಅಸಂಖ್ಯ ಗುಣಗಳಿಂದ ಶ್ರೀಮಂತನಾಗಿದ್ದನು. ಆ ಮಹಾಬಾಹುವು ಸುತ್ತಲೂ ರಂಗಮಂಡಲವನ್ನು ನಿರೀಕ್ಷಿಸಿ, ಹೌದೋ ಅಲ್ಲವೋ ಎಂಬಂತೆ ದ್ರೋಣ-ಕೃಪರಿಗೆ ಪ್ರಣಾಮ ಮಾಡಿದನು. ಸಮಾಜದ ಜನರೆಲ್ಲರೂ ಅವನನ್ನೇ ನೋಡುತ್ತಾ ನಿಶ್ಚಲರಾದರು ಮತ್ತು "ಇಲ್ಲಿಗೆ ಆಗಮಿಸಿದ ಈ ಭಿರುಗಾಳಿ ಯಾರು?" ಎಂದು ಕುತೂಹಲಪರರಾದರು.

ಮಾತಿನಲ್ಲಿ ಶ್ರೇಷ್ಠ ಭ್ರಾತ ಸಾವಿತ್ರನು ಭ್ರಾತನೆಂದು ತಿಳಿಯದೇ ಇದ್ದ ಪಾಕಶಾಸನಿಯನ್ನುದ್ದೇಶಿಸಿ ಗುಡುಗಿನ ಸ್ವರದಲ್ಲಿ ಹೇಳಿದನು:

> "ಪಾರ್ಥ ! ನೀನು ಮಾಡಿದುದೆಲ್ಲಕ್ಕಿಂತಲೂ ವಿಶೇಷವಾದವುಗಳನ್ನು ಈ ಜನರು ನೋಡುತ್ತಿದ್ದಂತೆಯೇ ಮಾಡುತ್ತೇನೆ. ನಿನ್ನ ಮೇಲೆ ನೀನೇ ವಿಸ್ಮಿತನಾಗಬೇಡ !"

ಆ ಮಾತಿನಲ್ಲಿ ಶ್ರೇಷ್ಠನು ತನ್ನ ಮಾತುಗಳನ್ನು ಮುಗಿಸುವುದರೊಳಗೇ ಅಲ್ಲಿದ್ದ ಸರ್ವ ಜನರೂ ಬಾವಿಯಿಂದ ನೀರಿನ ಯಂತ್ರವು ಮೇಲೇಳುವಂತೆ ಒಂದೇ ವೇಳೆಯಲ್ಲಿ ಎದ್ದು ನಿಂತರು. ಪುರುಷವ್ಯಾಘ್ರ ದುರ್ಯೋಧನನಿಗೆ ಪ್ರೀತಿ ಉಕ್ಕಿ ಬಂದಿತು. ಆದರೆ ಬೀಭತ್ಸುವಿಗೆ ತಕ್ಷಣವೇ ಹೇಸಿಗೆ ಮತ್ತು ಸಿಟ್ಟು ಎರಡೂ ಉಕ್ಕಿ ಬಂದವು. ದ್ರೋಣನು ಅಪ್ಪಣೆಯನ್ನು ನೀಡಲಾಗಿ ಸದಾ ರಣಪ್ರಿಯ ಬಹಾಬಲಿ ಕರ್ಣನು ಪಾರ್ಥನು ಮಾಡಿ ತೋರಿಸಿದ ಎಲ್ಲವನ್ನೂ ಹಾಗೆಯೇ ಮಾಡಿ ತೋರಿಸಿದನು. ಆಗ ದುರ್ಯೋಧನನು ತನ್ನ

ಸಹೋದರರೊಡಗೂಡಿ ಕರ್ಣನನ್ನು ಬಿಗಿದಪ್ಪಿ ಸಂತೋಷದಿಂದ ಹೇಳಿದನು:

> “ಮಹಾಬಾಹು! ನಿನಗೆ ಸ್ವಾಗತ. ಸೌಭಾಗ್ಯವೇ ನಿನ್ನನ್ನು ಇಲ್ಲಿ ಕರೆ ತಂದಿದೆ. ನನ್ನನ್ನೂ ಈ ಕುರುರಾಜ್ಯವನ್ನೂ ಯಥೇಷ್ಟವಾಗಿ ಭೋಗಿಸು.”

ಕರ್ಣನು ಹೇಳಿದನು:

> “ನಿನ್ನ ಸ್ನೇಹವೊಂದಿದ್ದರೆ ಬೇರೆ ಎಲ್ಲವೂ ಬಂದಹಾಗೆಯೇ. ಅದನ್ನೆ ಬಯಸುತ್ತೇನೆ. ಭಾರತ! ಪಾರ್ಥನೊಡನೆ ದ್ವಂದ್ವಯುದ್ಧ ಮಾಡಲು ಬಯಸುತ್ತೇನೆ.”

ದುರ್ಯೋಧನನು ಹೇಳಿದನು:

> “ನನ್ನೊಡನೆ ಎಲ್ಲ ಭೋಗಗಳನ್ನು ಭೋಗಿಸು. ನಿನ್ನ ಬಂಧುಗಳ ಪ್ರಿಯಕರನಾಗು. ಅರಿಂದಮ! ನಿನಗೆ ಕೆಟ್ಟದನ್ನು ಬಯಸುವ ಎಲ್ಲರ ನೆತ್ತಿಯನ್ನು ತುಳಿ!”

ಆಗ ತನಗೆ ಅವಹೇಳನವಾಗುತ್ತಿದೆಯೆಂದು ತಿಳಿದ ಪಾರ್ಥನು ಭ್ರಾತೃಗಳ ಸಮೂಹದಲ್ಲಿ ಪರ್ವತದಂತೆ ನಿಂತಿದ್ದ ಕರ್ಣನಿಗೆ ಹೇಳಿದನು:

> “ಕರ್ಣ! ನಾನು ನಿನ್ನನ್ನು ಕೊಂದು ಮುಗಿಸಿದೆನೆಂದರೆ ನೀನು ಅಹ್ವಾಸಿಸದೇ ಬಂದವರಿಗೆ ಮತ್ತು ಅಹ್ವಾಸಿಸದೇ

ಮಾತನಾಡುವವರಿಗೆ ಮೀಸಲಾಗಿಟ್ಟಿರುವ ಲೋಕವನ್ನು ಹೊಂದುತ್ತೀಯೆ!”

ಕರ್ಣನು ಹೇಳಿದನು:

“ಫಲ್ಗುನ! ಸರ್ವ ಸಾಮಾನ್ಯವಾದ ಈ ರಂಗವು ನಿನ್ನದೇನು? ಬಲಶಾಲಿ ಮತ್ತು ವೀರ್ಯಶ್ರೇಷ್ಠ ರಾಜರನ್ನು ಧರ್ಮವು ಅನುಸರಿಸುತ್ತದೆ. ದುರ್ಬಲರ ಶ್ವಾಸವೆನ್ನಿಸಿಕೊಂಡ ಅವಹೇಳನೆ ಏಕೆ? ಗುರುವಿನ ಸಮಕ್ಷಮದಲ್ಲಿಯೇ ಶರಗಳಿಂದ ನಿನ್ನ ಶಿರವನ್ನು ಅಪಹರಿಸುತ್ತೇನೆ.”

ಆಗ ದ್ರೋಣನು ಅನುಜ್ಞೆಯನ್ನು ನೀಡಲಾಗಿ ಪರಪುರಂಜಯ ಪಾರ್ಥನು ಭ್ರಾತೃಗಳನ್ನು ಆಲಂಗಿಸಿ ರಣದಲ್ಲಿ ನುಗ್ಗಿದನು. ಭ್ರಾತೃಗಳೊಡನಿದ್ದ ದುರ್ಯೋಧನನಿಂದ ತಬ್ಬಿಕೊಳ್ಳಲ್ಪಟ್ಟ ಕರ್ಣನು ಧನುರ್ಬಾಣಗಳನ್ನು ಹಿಡಿದು ಸಮರ ಸಿದ್ಧನಾದನು. ಆಗ ಗಗನವು ಗುಡುಗು ಮಿಂಚುಗಳಿಂದೊಡಗೂಡಿದ ಬಲಾಕ ಮತ್ತು ಹಂಸ ಪಕ್ಷಿಗಳ ಸಾಲಿನಿಂದೊಡಗೂಡಿದ ಮೇಘಗಳಿಂದ ಆವೃತಗೊಂಡಿತು. ಸ್ನೇಹಭಾವದಿಂದ ರಂಗವನ್ನು ಅವಲೋಕಿಸುತ್ತಿರುವ ಹರಿಹಯನನ್ನು ನೋಡಿದ ಭಾಸ್ಕರನು ಸಮೀಪದಲ್ಲಿ ಬರುತ್ತಿರುವ ಮೋಡಗಳನ್ನು ನಾಶಪಡಿಸಿದನು. ಪಾಂಡವನು ಮೇಘಗಳಿಂದ ಮುಸುಕಲ್ಪಟ್ಟಿದ್ದಾನೋ ಎಂದು ಕಂಡನು. ಕರ್ಣನು ಸೂರ್ಯನ

ಕಡುಬೆಳಕಿನಿಂದ ಆವರಿಸಿಕೊಂಡಿದ್ದಾನೋ ಎಂದು ತೋರಿದನು. ಕರ್ಣನಿದ್ದ ಸ್ಥಳದಲ್ಲಿ ಧಾರ್ತರಾಷ್ಟ್ರರು ನಿಂತಿದ್ದರು. ಭಾರದ್ವಾಜ, ಕೃಪ ಮತ್ತುಭೀಷ್ಮರು ಪಾರ್ಥನಿದ್ದಲ್ಲಿ ನಿಂತಿದ್ದರು. ರಂಗವು ಎರಡು ಭಾಗವಾಯಿತು; ಸ್ತ್ರೀಯರಲ್ಲಿ ಎರಡು ಪಂಗಡಗಳಾದವು. ಇದರ ಅರ್ಥವನ್ನು ಸರಿಯಾಗಿ ತಿಳಿದುಕೊಂಡಿದ್ದ ಕುಂತಿಭೋಜಸುತೆಯು ಮೂರ್ಛಿತಳಾದಳು. ಸರ್ವಧರ್ಮವಿದ ವಿದುರನು ಚಂದನಮಿಶ್ರಿತ ನೀರನ್ನು ಚುಮುಕಿಸಿ ಮೋಹಸಂಪನ್ನ ಕುಂತಿಯನ್ನು ಎಚ್ಚರಿಸಿದನು. ಎಚ್ಚೆತ್ತ ಅವಳು ವೈರಿಗಳಾಗಿ ನಿಂತಿದ್ದ ತನ್ನ ಎರಡು ಪುತ್ರರನ್ನೇ ದಿಟ್ಟಾಗಿ ನೋಡುತ್ತಿದ್ದಳೇ ಹೊರತು ಎಷ್ಟೇ ದುಃಖವಾದರೂ ಅವರನ್ನು ತಡೆಯಲೋಸುಗ ಏನನ್ನೂ ಮಾಡಲಿಲ್ಲ.

ಅವರೀರ್ವರೂ ಮಹಾ ಧನುಸ್ಸುಗಳನ್ನು ಮೇಲೆತ್ತುತ್ತಿರುವಾಗ ದ್ವಂದ್ವಯುದ್ಧ ಕುಶಲ ಸರ್ವಧರ್ಮವಿದ ಶಾರದ್ವತ ಕೃಪನು ಹೇಳಿದನು:

> "ನಿನ್ನೊಡನೆ ದ್ವಂದ್ವಯುದ್ಧವನ್ನು ಮಾಡುವ ಇವನು ಪೃಥೆಯ ತನಯ, ಕಿರಿಯ ಪಾಂಡುನಂದನ ಕೌರವ. ಮಹಾಬಾಹೋ! ಈಗ ನೀನು ಕೂಡ ನಿನ್ನ ತಾಯಿ, ತಂದೆ, ಕುಲ, ಮತ್ತು ನೀನು ಯಾವ ನರೇಂದ್ರಕುಲವರ್ಧನ ಎನ್ನುವುದನ್ನು ಹೇಳಬೇಕು. ಅದನ್ನು ತಿಳಿದ ಪಾರ್ಥನು ನಿನ್ನೊಡನೆ ಯುದ್ಧಮಾಡಬಹುದು ಅಥವಾ

ಮಾಡದಿರಬಹುದು.”

ಹೀಗೆ ಕೇಳಿದ ಕರ್ಣನು ನಾಚಿಕೊಂಡು ತನ್ನ ತಲೆ ತಗ್ಗಿಸಿದನು ಮತ್ತು ಅವನ ಮುಖವು ಮಳೆನೀರಿನಿಂದ ತೋಯ್ದ ಕಮಲದಂತೆ ಬಾಡಿತು.

ದುರ್ಯೋಧನನು ಹೇಳಿದನು:

“ಆಚಾರ್ಯ! ಮೂರು ರೀತಿಯಲ್ಲಿ ರಾಜನಾಗಬಹುದು ಎಂದು ಶಾಸ್ತ್ರವಿನಿಶ್ಚಯವಿದೆ: ರಾಜನಾಗಿ ಹುಟ್ಟುವುದರಿಂದ, ಶೂರನಾಗಿರುವುದರಿಂದ ಮತ್ತು ಸೇನೆಯನ್ನು ನಡೆಸುವುದರಿಂದ. ಫಲ್ಗುಣನು ರಾಜನಲ್ಲದವನೊಡನೆ ಯುದ್ಧಮಾಡಲು ಬಯಸದಿದ್ದರೆ ನಾನು ಇವನನ್ನು ಅಂಗದೇಶದ ರಾಜನನ್ನಾಗಿ ರಾಜ್ಯಾಭಿಷೇಕವನ್ನು ಮಾಡುತ್ತೇನೆ.”

ಅದೇ ಕ್ಷಣದಲ್ಲಿ ಲಾಜಕುಸುಮ ಘಟ ಮತ್ತು ಕಾಂಚನಗಳಿಂದ ಕಾಂಚನ ಪೀಠದಲ್ಲಿ ಮಂತ್ರವಿತ್ತಾಗಿ ಮಹಾಬಲಿ, ಮಹಾರಥಿ ಕರ್ಣನು ಅಂಗರಾಜನೆಂದು ಅಭಿಷಿಕ್ತನಾದನು ಮತ್ತು ಸಂಪತ್ತನ್ನು ಪಡೆದನು. ಛತ್ರ ಚಾಮರಗಳನ್ನು ಪಡೆದ ಆ ರಾಜನು ವಿಜಯ ಶಬ್ಧಘೋಷಗಳು ನಿಲ್ಲುತ್ತಿದ್ದಂತೆಯೇ ರಾಜರ್ಷಭ ಕೌರವನಿಗೆ ಹೇಳಿದನು:

“ರಾಜಶಾರ್ದೂಲ! ಈ ರಾಜ್ಯದ ಉಡುಗೊರೆಯ

ಸದೃಶವಾದ ಏನನ್ನು ನಿನಗೆ ಕೊಡಲಿ ಹೇಳು! ಅದನ್ನು ನಾನು ಮಾಡಿಕೊಡುತ್ತೇನೆ."

ಅದಕ್ಕೆ ಸುಯೋಧನನು

"ಅತ್ಯಂತ ಸಖ್ಯವನ್ನು ಬಯಸುತ್ತೇನೆ"

ಎಂದು ಉತ್ತರಿಸಿದನು. ಅವನ ಈ ಮಾತುಗಳಿಗೆ ಕರ್ಣನು "ಹಾಗೆಯೇ ಆಗಲಿ" ಎಂದು ಉತ್ತರಿಸಿದನು. ಹರ್ಷದಿಂದ ಇಬ್ಬರೂ ಅಪ್ಪಿಕೊಂಡು ಅತ್ಯಂತ ಆನಂದಿತರಾದರು.

ಆಗ ಉತ್ತರಪಟವನ್ನು ಕೆಳಗೆ ಬೀಳಿಸುತ್ತಾ ಬೆವರಿ ನಡಗುತ್ತಾ ಕೋಲನ್ನು ಹಿಡಿದು ದುರ್ಬಲ ಕಾಲುಗಳನ್ನೆಳೆಯುತ್ತಾ ಅಧಿರಥನು ರಂಗವನ್ನು ಪ್ರವೇಶಿಸಿದನು. ಅವನನ್ನು ನೋಡಿ, ಧನುಸ್ಸನ್ನು ಕೆಳಗಿಟ್ಟು, ಪಿತೃಗೌರವಾನ್ವಿತ ಕರ್ಣನು ಅಭಿಷೇಕದಿಂದ ಇನ್ನೂ ಒದ್ದೆಯಾಗಿಯೇ ಇದ್ದ ಶಿರದಿಂದ ಅವನನ್ನು ವಂದಿಸಿದನು. ವಿಭ್ರಾಂತಿಗೊಂಡ ಆ ರಥಸಾರಥಿಯು ತನ್ನ ಪಂಚೆಯ ಅಂಚಿನಿಂದ ಕಾಲುಗಳನ್ನು ಮುಚ್ಚಿಕೊಳ್ಳುತ್ತಾ ಪರಿಪೂರ್ಣಾರ್ಥನಾದವನಿಗೆ "ಹಾ ಪುತ್ರ!" ಎಂದನು. ಸ್ನೇಹಭಾವದಿಂದ ಕಂಪಿತನಾಗಿ ಅವನನ್ನು ಬಿಗಿದಪ್ಪಿ ನೆತ್ತಿಗೆ ಮುತ್ತನ್ನಿಟ್ಟನು, ಮತ್ತು ಅಂಗರಾಜ್ಯಾಭಿಷೇಕದಿಂದ ಇನ್ನೂ ಒದ್ದೆಯಾಗಿದ್ದ ಅವನ ತಲೆಗೆ ತನ್ನ ಕಣ್ಣೀರಿನಿಂದ ಪುನಃ ಸಿಂಚಿಸಿದನು. ಅವನನ್ನು ನೋಡಿದ ಪಾಂಡವ ಭೀಮನು ಇವನು ಸೂತಪುತ್ರನೆಂದು ನಿಶ್ಚಯಿಸಿ ನಗುತ್ತಾ ಹೇಳಿದನು:

“ಸೂತಪುತ್ರ! ರಣದಲ್ಲಿ ನೀನು ಪಾರ್ಥನಿಂದ ವಧಿಸಲ್ಪಡಲು ಅರ್ಹನಲ್ಲ. ನಿನ್ನ ಕುಲಕ್ಕೆ ಸದೃಶವಾದ ಬಾರಿಕೋಲನ್ನೇ ಹಿಡಿಯುವುದು ಸರಿ! ಹೇಗೆ ನಾಯಿಗೆ ಅಧ್ವರದಲ್ಲಿ ಹುತಾಶನನ ಸಮೀಪದ ಹವಿಸ್ಸಿನ ಅರ್ಹತೆ ಇಲ್ಲವೋ ಹಾಗೆ ಅಂಗರಾಜ್ಯವನ್ನು ಉಪಭೋಗಿಸುವ ಅರ್ಹತೆ ನಿನಗಿಲ್ಲ.”

ಇದನ್ನು ಕೇಳಿದ ಕರ್ಣನ ಕೆಳತುಟಿಯು ನಡುಗತೊಡಗಿತು. ನಿಟ್ಟುಸಿರು ಬಿಡುತ್ತಾ ಆಕಾಶದಲ್ಲಿರುವ ಸೂರ್ಯನನ್ನು ತಲೆಯೆತ್ತಿ ನೋಡಿದನು. ಆಗ ಮಹಾಬಲಿ ದುರ್ಯೋಧನನು ಕೋಪಗೊಂಡು ಕಮಲದ ಸರೋವರದಿಂದ ಮತ್ತಗಜವೊಂದು ಮೇಲೇಳುವಂತೆ ತನ್ನ ಸಹೋದರರ ಮಧ್ಯದಿಂದ ಮೇಲೆದ್ದು ಭೀಮಕರ್ಮಣಿ ಭೀಮಸೇನನಿಗೆ ಹೇಳಿದನು:

“ವೃಕೋದರ! ಈ ರೀತಿ ಮಾತನಾಡುವುದು ನಿನಗೆ ಯುಕ್ತವಲ್ಲ. ಕ್ಷತ್ರಿಯರಿಗೆ ಬಲವೇ ದೊಡ್ಡದು. ಕ್ಷತ್ರಬಂಧುವಿನೊಂದಿಗೆ ಯುದ್ಧ ಮಾಡಲೇ ಬೇಕು. ಶೂರರ ಮತ್ತು ನದಿಗಳ ಹುಟ್ಟು ನಿಜವಾಗಿಯೂ ತಿಳಿಯದಂಥಾದ್ದು. ಚರಾಚರಗಳನ್ನು ವ್ಯಾಪಿಸಿರುವ ವಹ್ನಿಯು ನೀರಿನಿಂದ ಹುಟ್ಟಿದ್ದುದು. ದಾನವರನ್ನು ಸಂಹರಿಸುವ ವಜ್ರವು ದಧೀಚಿಯ ಅಸ್ತಿಗಳಿಂದ ಮಾಡಲ್ಪಟ್ಟಿದೆ. ಭಗವಾನ್ ದೇವ

ಗುಹನು ಸಂಪೂರ್ಣವಾಗಿ ಗುಹ್ಯ ಎಂದು ಕೇಳಿದ್ದೇವೆ; ಅವನು ಆಗ್ನೇಯನಿರಬಹುದು, ಕೃತ್ತಿಕಾ ಪುತ್ರನಿರಬಹುದು, ರುದ್ರನ ಮಗನಿರಬಹುದು ಅಥವಾ ಗಂಗೆಯ ಮಗನಿರಬಹುದು. ಕ್ಷತ್ರಿಯರಲ್ಲಿ ಹುಟ್ಟಿದವರು ಬ್ರಾಹ್ಮಣರಾದರೆಂದೂ ಕೇಳಿದ್ದೇವೆ. ಆಚಾರ್ಯನು ಕಲಶದಲ್ಲಿ ಮತ್ತು ಗುರು ಕೃಪನು ಶರಸ್ತಂಭದಲ್ಲಿ ಜನಿಸಿದರು. ನಿಮ್ಮೆಲ್ಲರ ಜನ್ಮವೂ ಹೇಗಾಯಿತೆಂದು ಎಲ್ಲ ನೃಪರಿಗೂ ತಿಳಿದಿದ್ದುದೇ. ಕುಂಡಲಗಳನ್ನೂ ಕವಚವನ್ನೂ ಧರಿಸಿದ್ದ ದಿವ್ಯ ಲಕ್ಷಣ ಲಕ್ಷಿತ, ಆದಿತ್ಯ ಸಂಕಾಶ ಈ ಹುಲಿಗೆ ಹೇಗೆ ತಾನೆ ಒಂದು ಜಿಂಕೆಯು ಜನ್ಮ ನೀಡಬಲ್ಲದು? ತನ್ನ ಈ ಬಾಹುವೀರ್ಯದಿಂದ ಮತ್ತು ಅವನ ಅನುಜ್ಞೆಯಂತೆ ನಡೆದುಕೊಳ್ಳುವ ನನ್ನಿಂದ ಈ ನರೇಶ್ವರನು ಕೇವಲ ಅಂಗರಾಜ್ಯ ಮಾತ್ರವಲ್ಲ ಇಡೀ ಪೃಥ್ವಿಯನ್ನೇ ಆಳುವ ಅರ್ಹತೆಯನ್ನು ಹೊಂದಿದ್ದಾನೆ. ನಾನು ಮಾಡಿದುದು ಯಾರಿಗೆ ಒಪ್ಪಿಗೆಯಿಲ್ಲವೋ ಆ ಮನುಷ್ಯನು ರಥವನ್ನೇರಿಯಾಗಲೀ ಅಥವಾ ಕಾಲಮೇಲಾಗಲೀ ಇದನ್ನು ಪ್ರತಿಭಟಿಸಬೇಕು.”

ರಂಗದ ಎಲ್ಲೆಡೆಯಲ್ಲಿಯೂ ಜೋರಾಗಿ “ಸಾಧು! ಸಾಧು!” ಎಂಬ ಹಾಹಾಕಾರವೆದ್ದಿತು. ಅಷ್ಟರಲ್ಲಿ ಸೂರ್ಯನು ಮುಳುಗಿದನು. ಆಗ

ದುರ್ಯೋಧನನು ನೃಪ ಕರ್ಣನ ಕೈಯನ್ನು ಹಿಡಿದುಕೊಂಡು ದೀವಟಿಕೆಗಳ ಬೆಂಕಿಯ ಬೆಳಕಿನಲ್ಲಿ ಆ ರಂಗದಿಂದ ನಿರ್ಗಮಿಸಿದನು. ಪಾಂಡವರು ದ್ರೋಣ, ಕೃಪ ಮತ್ತು ಭೀಷ್ಮರೊಂದಿಗೆ ಮತ್ತು ಎಲ್ಲರೂ ತಮ್ಮ ತಮ್ಮ ನಿವೇಶನಗಳಿಗೆ ತೆರಳಿದರು. ದಾರಿಯಲ್ಲಿ ಕೆಲವು ಜನರು "ಅರ್ಜುನ!"ಎಂದೂ ಕೆಲವರು "ಕರ್ಣ !" ಎಂದೂ ಇನ್ನು ಕೆಲವರು "ದುರ್ಯೋಧನ!" ಎಂದೂ ಘೋಷಿಸುತ್ತಿದ್ದರು. ಕುಂತಿಯು ಅಂಗೇಶ್ವರನ ದಿವ್ಯಲಕ್ಷಣಗಳನ್ನು ನೋಡಿ ಅವನು ತನ್ನ ಪುತ್ರನೆಂದು ಗುರುತಿಸಿದಳು ಮತ್ತು ಅವನ ಕುರಿತು ಅಡಗಿಸಿಟ್ಟಿದ್ದ ಸ್ನೇಹ ಪ್ರೀತಿ ಭಾವಗಳು ಅವಳಲ್ಲಿ ಹೆಚ್ಚಾದವು. ಕರ್ಣನನ್ನು ಪಡೆದ ದುರ್ಯೋಧನನು ಅರ್ಜುನನಿಂದ ತನ್ನಲ್ಲುಂಟಾಗಿದ್ದ ಭಯವನ್ನು ಕಳೆದುಕೊಂಡನು. ತನ್ನ ಶ್ರಮದಿಂದ ಅಸ್ತ್ರಗಳನ್ನು ತನ್ನದಾಗಿಸಿಕೊಂಡ ಆ ವೀರನಾದರೂ ಸುಯೋಧನನನ್ನು ಅತ್ಯಂತ ಒಳ್ಳೆಯ ಮಾತುಗಳಿಂದ ಹೊಗಳಿದನು. ಆ ವೇಳೆಯಲ್ಲಿ ಯುಧಿಷ್ಠಿರನೂ ಕೂಡ "ಕರ್ಣನಿಗೆ ಸಮಾನ ಧನುರ್ಧರನು ಭೂಮಿಯಲ್ಲೇ ಯಾರೂ ಇಲ್ಲ!" ಎಂದು ಯೋಚಿಸಿದನು.

## ಕುರು-ಪಾಂಡವರ ಗುರುದಕ್ಷಿಣೆ

ಆಚಾರ್ಯ ದ್ರೋಣನು ಶಿಷ್ಯರೆಲ್ಲರನ್ನೂ ಸೇರಿಸಿ ಯಾರನ್ನೂ ಬಿಡದೇ ಎಲ್ಲರಲ್ಲಿಯೂ ಗುರುದಕ್ಷಿಣೆಗಾಗಿ ಪ್ರಚೋದಿಸಿದನು:

"ಪಾಂಚಾಲರಾಜ ದ್ರುಪದದನ್ನು ರಣಭೂಮಿಯಿಂದ

ಹಿಡಿದು ತನ್ನಿ. ಅದೇ ಪರಮ ದಕ್ಷಿಣೆ. ನಿಮಗೆ ಮಂಗಳವಾಗಲಿ."

"ಹಾಗೆಯೇ ಆಗಲಿ" ಎಂದು ಅವರೆಲ್ಲರೂ ಆಯುಧಗಳನ್ನು ಹಿಡಿದು ರಥಗಳನ್ನೇರಿ ಗುರುದಕ್ಷಿಣೆಯನ್ನು ತರಲು ದ್ರೋಣನನ್ನೊಡಗೂಡಿ ಹೊರಟರು. ಆ ನರರ್ಷಭರು ಪಾಂಚಾಲರ ಮೇಲೆ ಧಾಳಿಯಿಕ್ಕಿ, ಅವರನ್ನು ಹದೆಬಡಿದು, ಮಹೌಜಸ ದ್ರುಪದನ ನಗರವನ್ನು ಪುಡಿಮಾಡಿದರು. ಆ ಭರತರ್ಷಭರು ರಣಭೂಮಿಯಲ್ಲಿ ಯಜ್ಞಸೇನ ದ್ರುಪದನನ್ನು ಅವನ ಅಮಾತ್ಯರೊಂದಿಗೆ ಸೆರೆಹಿಡಿದು ದ್ರೋಣನ ಬಳಿ ಕರೆತಂದರು. ವೈರವನ್ನು ಮನಸ್ಸಿನಲ್ಲಿಯೇ ನೆನಪಿಸಿಕೊಂಡು ದ್ರೋಣನು ಸೆರೆಹಿಡಿಯಲ್ಪಟ್ಟ ಭಗ್ನದರ್ಪ ಹೃತಧನ ದ್ರುಪದನಿಗೆ ಇಂತೆಂದನು:

"ಸೇಡಿನಿಂದ ನಿನ್ನ ರಾಷ್ಟ್ರ ಮತ್ತು ಪುರವನ್ನು ನಾನು ಗಳಿಸಿದ್ದೇನೆ. ಜೀವಂತವಿದ್ದರೂ ರಿಪುವಶದಲ್ಲಿರುವ ಹಳೆಯ ಸ್ನೇಹಿತನು ಯಾರಿಗೆ ಬೇಕು?"

ಹೀಗೆ ಹೇಳಿ ಜೋರಾಗಿ ನಕ್ಕ ಅವನು ಒಂದು ನಿಶ್ಚಯಕ್ಕೆ ಬಂದು ಪುನಃ ಹೇಳಿದನು:

"ರಾಜನ್! ನನ್ನಲ್ಲಿ ನಿನ್ನ ಪ್ರಾಣಕ್ಕೆ ಭಯಪಡಬೇಡ. ನಾವು ಬ್ರಾಹ್ಮಣರು ಕ್ಷಮಾವಂತರು. ಬಾಲ್ಯದಲ್ಲಿ ಆಶ್ರಮದಲ್ಲಿ ನನ್ನೊಡನೆ ಆಡುತ್ತಿದ್ದಾಗ ನನಗೆ ನಿನ್ನಲ್ಲಿ ಸ್ನೇಹವು ಬೆಳೆಯಿತು. ಪುನಃ ಇನ್ನೊಮ್ಮೆ ನಿನ್ನ ಸಖ್ಯವನ್ನು

> ಪ್ರಾರ್ಥಿಸುತ್ತಿದ್ದೇನೆ. ನಿನಗೆ ಅರ್ಧರಾಜ್ಯದ ವರವನ್ನು ನೀಡುತ್ತಿದ್ದೇನೆ. ತೆಗೆದುಕೋ. ರಾಜ್ಯವಿದ್ದವನು ರಾಜ್ಯವಿಲ್ಲದವನ ಸಖನಾದರೂ ಹೇಗೆ ಆಗಬಲ್ಲನು? ಆದುದರಿಂದ ನಿನ್ನ ರಾಜ್ಯವನ್ನು ನಾನು ಗಳಿಸಿದ್ದೇನೆ. ಭಾಗೀರಥಿಯ ದಕ್ಷಿಣಕ್ಕೆ ನೀನು ಮತ್ತು ಅದರ ಉತ್ತರಕ್ಕೆ ನಾನು ರಾಜರಾಗೋಣ. ನಿನಗೆ ಒಪ್ಪಿಗೆಯಾದರೆ ನಾನು ನಿನ್ನನ್ನು ಸಖನೆಂದು ಪರಿಗಣಿಸುತ್ತೇನೆ."

ದ್ರುಪದನು ಹೇಳಿದನು:

> "ಬ್ರಹ್ಮನ್! ಈ ಮಹಾತ್ಮ ವಿಕ್ರಾಂತರಿಂದಾದ ಇದು ಆಶ್ಚರ್ಯಕರವಾದುದೇನೂ ಅಲ್ಲ. ನಾನು ನಿನ್ನ ಮಿತ್ರನಾಗುತ್ತೇನೆ. ನಾನು ನಿನ್ನಿಂದ ಶಾಶ್ವತ ಪ್ರೀತಿಯನ್ನು ಬಯಸುತ್ತೇನೆ."

ಇದನ್ನು ಕೇಳಿದ ದ್ರೋಣನು ಅವನನ್ನು ಸತ್ಕರಿಸಿ ಸಂತೋಷದಿಂದ ಅರ್ಧ ರಾಜ್ಯವನ್ನು ನೀಡಿ ಬಿಡುಗಡೆ ಮಾಡಿದನು. ದೀನಮನಸ್ಕನಾದ ದ್ರುಪದನು ಗಂಗಾತೀರದಲ್ಲಿರುವ ಮಾಕಂದಿಯ ಜನಪದ ಕಾಂಪಿಲ್ಯವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ದಕ್ಷಿಣ ಪಾಂಚಾಲವನ್ನು ಚರ್ಮಣ್ವತೀ ನದಿಯವರೆಗೂ ಆಳತೊಡಗಿದನು. ದ್ರೋಣನೊಂದಿಗಿದ್ದ ವೈರತ್ವವನ್ನು ನೆನಪಿಸಿಕೊಳ್ಳುತ್ತಿದ್ದ ದ್ರುಪದನಿಗೆ ಶಾಂತಿಯೇ ದೊರೆಯಲಿಲ್ಲ. ತನ್ನ

ಕ್ಷತ್ರಿಯ ಬಲದಿಂದ ಅವನನ್ನು ಪರಾಜಯಗೊಳಿಸುವ ದಾರಿಯನ್ನೇ ಕಾಣಲಿಲ್ಲ. ಬ್ರಾಹ್ಮಣನ ಬಲಕ್ಕಿಂತ ತನ್ನ ಬಲವು ಹೀನವಾದದ್ದು ಎಂದು ತಿಳಿದನು. ಅದನ್ನು ಸಹಿಸಿಕೊಂಡ ರಾಜನು ಪುತ್ರನ ಜನ್ಮಕ್ಕಾಗಿ ಕಾಯುತ್ತಿದ್ದನು. ಅಹಿಚ್ಛತ್ರದಲ್ಲಿ ದ್ರೋಣನು ನೆಲೆಸಿದನು. ಈ ರೀತಿ ಪಾರ್ಥನು ಜನಪದಗಳಿಂದ ಆವೃತ ಅಹಿಚ್ಛತ್ರ ಪುರಿಯನ್ನು ಯುದ್ಧದಲ್ಲಿ ಗೆದ್ದು ದ್ರೋಣನಿಗೆ ದಕ್ಷಿಣೆಯನ್ನಾಗಿತ್ತನು.

# ಅರಗಿನ ಮನೆ

ಭೀಮಸೇನನ ಅಧಿಕ ಶಕ್ತಿಯನ್ನೂ ಧನಂಜಯನ ಕೃತವಿದ್ಯೆಯನ್ನೂ ನೋಡಿದ ದುರ್ಮತಿ ದುರ್ಯೋಧನನು ಪರಿತಪಿಸಿದನು. ವೈಕರ್ತನ ಕರ್ಣ ಮತ್ತು ಸೌಬಲ ಶಕುನಿಯರು ಪಾಂಡವರನ್ನು ಕೊಲ್ಲಲು ಅನೇಕ ಉಪಾಯಗಳನ್ನು ಹೂಡಿದರು. ಆದರೆ ಆ ಅರಿಂದಮ ಪಾಂಡವರು ಅವೆಲ್ಲವನ್ನೂ ಮೊದಲೇ ತಿಳಿದುಕೊಂಡಿದ್ದರೂ ವಿದುರನ ಸಲಹೆಯಂತೆ ಅವನ್ನು ಸಹಿಸಿಕೊಂಡು ಬಹಿರಂಗಗೊಳಿಸದೇ ಇದ್ದರು. ಪಾಂಡುಸುತರು ಸುಗುಣಗಳಿಂದ ಬೆಳೆಯುತ್ತಿರುವುದನ್ನು ನೋಡಿದ ಪೌರರು ಚೌಕಗಳಲ್ಲಿ ಸೇರಿದಾಗಲೆಲ್ಲೆಲ್ಲಾ ಅವರ ಕುರಿತೇ ಮಾತನಾಡುತ್ತಿದ್ದರು.

“ಮೊದಲು ಪ್ರಜ್ಞಾಚಕ್ಷು ಜನೇಶ್ವರ ಧೃತರಾಷ್ಟ್ರನಿಗೆ

ಕುರುಡನಾಗಿದ್ದಾನೆಂದು ರಾಜ್ಯವು ದೊರೆಯಲಿಲ್ಲ. ಈಗ ಹೇಗೆ ರಾಜನಾಗಿದ್ದಾನೆ? ಹಿಂದೆ ರಾಜ್ಯವನ್ನು ತಿರಸ್ಕರಿಸಿದ ಸತ್ಯಸಂಧ ಮಹಾವ್ರತ ಶಾಂತನವ ಭೀಷ್ಮನು ಮುಂದೆ ಎಂದೂ ಅದನ್ನು ಸ್ವೀಕರಿಸುವುದಿಲ್ಲ. ಹಾಗಿದ್ದಾಗ ಈಗ ತರುಣನಾಗಿದ್ದರೂ ವೃದ್ಧರಂತೆ ಶೀಲವಂತ, ಸತ್ಯನೂ ಕರುಣವೇದಿಯೂ ಆದ ಜ್ಯೇಷ್ಠ ಪಾಂಡವನನ್ನು ನಾವು ಅಭಿಷೇಕಿಸಬೇಕು. ಆ ಧರ್ಮವಿದನೇ ಶಾಂತನವ ಭೀಷ್ಮ, ಪುತ್ರರಿಂದೊಡಗೂಡಿದ ಧೃತರಾಷ್ಟ್ರ ಇವರನ್ನು ಪೂಜಿಸಿ ವಿವಿಧ ಭೋಗಗಳಿಗೆ ಏರ್ಪಾಡುಮಾಡಿಕೊಡುತ್ತಾನೆ.”

ದುರ್ಮತಿ ದುರ್ಯೋಧನನು ಯುಧಿಷ್ಠಿರನ ಅನುರಕ್ತರು ಮಾತನಾಡಿಕೊಳ್ಳುತ್ತಿದ್ದ ಈ ವಾಕ್ಯಗಳನ್ನು ಕೇಳಿ ಪರಿತಪಿಸಿದನು. ಆ ದುಷ್ಟಾತ್ಮನು ಅವರ ಈ ಮಾತುಗಳಿಂದ ಬೆಂದು, ಅವನ್ನು ಕ್ಷಮಿಸಲಾಗದೇ, ಈರ್ಷೆಯಿಂದ ಸಂತಪ್ತನಾಗಿ ಧೃತರಾಷ್ಟ್ರನಲ್ಲಿಗೆ ಬಂದನು. ಅವನು ಒಬ್ಬನೇ ಇದ್ದುದನ್ನು ನೋಡಿ ತನ್ನ ತಂದೆಗೆ ನಮಸ್ಕರಿಸಿ, ಪೌರರ ಬಯಕೆಗಳಿಂದ ಸಂತಪ್ತನಾಗಿ, ಈ ಮಾತುಗಳನ್ನಾಡಿದನು:

“ತಂದೇ! ಪೌರರ ಅಶುಭ ತೊದಲಿಕೆಯ ಮಾತುಗಳನ್ನು ಕೇಳಿದ್ದೇನೆ. ನಿನ್ನನ್ನು ಮತ್ತು ಭೀಷ್ಮನನ್ನು ಅನಾದರಿಸಿ ಅವರು ಪಾಂಡವನನ್ನು ತಮ್ಮ ರಾಜನನ್ನಾಗಿ ಬಯಸುತ್ತಾರೆ.

ರಾಜ್ಯವನ್ನು ಬಯಸದ ಭೀಷ್ಮನೇನೋ ಇದಕ್ಕೆ ಒಪ್ಪಿಕೊಳ್ಳಬಹುದು. ಆದರೆ ನಮ್ಮ ಮೇಲೆ ಪುರದ ಜನರು ಅತಿ ದೊಡ್ಡ ಪೀಡೆಯನ್ನು ತರಲು ಬಯಸುತ್ತಿದ್ದಾರೆ. ಹಿಂದೆ ಪಾಂಡುವು ತನ್ನ ಗುಣಗಳ ಕಾರಣಗಳಿಂದ ತನ್ನ ತಂದೆಯಿಂದ ರಾಜ್ಯವನ್ನು ಪಡೆದನು. ರಾಜ್ಯವು ನಿನಗೆ ಪ್ರಾಪ್ತಿಯಾಗುತ್ತಿದ್ದರೂ ನಿನ್ನ ಅವಗುಣದ ಕಾರಣದಿಂದ ಅದು ನಿನಗೆ ದೊರೆಯಲಿಲ್ಲ. ಈಗ ಪಾಂಡುವಿನ ದಾಯಾದ್ಯವು ಪಾಂಡವನಿಗೆ ದೊರೆತರೆ ಅದು ಮುಂದೆ ಅವನ ಮಗನಿಗೆ, ಮತ್ತೆ ಅವನ ಮಗನಿಗೆ ದೊರೆಯುವುದು ನಿರ್ದಿಷ್ಟ. ನಾವಾದರೂ ನಮ್ಮ ಮಕ್ಕಳೊಂದಿಗೆ ರಾಜವಂಶವನ್ನು ಕಳೆದುಕೊಂಡು ಲೋಕದಲ್ಲಿ ಯಾರಿಗೂ ತಿಳಿಯದವರಂತೆ ಆಗಿಬಿಡುತ್ತೇವೆ. ನಾವು ಈ ರೀತಿ ಪರ ಪಿಂಡದ ಉಪಜೀವನವೆಂಬ ಸತತ ನರಕಕ್ಕೆ ಹೋಗುವ ಮುನ್ನ ಇದಕ್ಕೆ ಏನನ್ನಾದರೂ ಶೀಘ್ರವಾಗಿ ಕ್ರಮತೆಗೆದುಕೋ. ಹಿಂದೆ ನೀನೇ ರಾಜ್ಯದಲ್ಲಿ ಸ್ಥಿರವಾಗಿ ಅಭಿಷಿಕ್ತನಾಗಿದ್ದರೆ, ಜನರಿಗೆ ಇಷ್ಟವಿಲ್ಲದಿದ್ದರೂ ನಿಶ್ಚಯವಾಗಿ ನಾವೇ ರಾಜ್ಯವನ್ನು ಪಡೆಯುತ್ತಿದ್ದೆವು."

ಪುತ್ರ ದುರ್ಯೋಧನನ ಈ ಮಾತುಗಳನ್ನು ಕೇಳಿದ ಧೃತರಾಷ್ಟ್ರನು ಒಂದು ಕ್ಷಣ ಯೋಚಿಸಿ ಹೇಳಿದನು:

“ಧರ್ಮನಿತ್ಯ ಪಾಂಡುವು ಸದಾ ಎಲ್ಲ ಬಾಂಧವರಿಗೂ, ಅದರಲ್ಲೂ ವಿಶೇಷವಾಗಿ ನನಗೆ ಪ್ರಿಯವಾದುದನ್ನೇ ಮಾಡುತ್ತಿದ್ದನು. ಅವನು ತನಗಾಗಿ ಭೋಜನವೇ ಇತ್ಯಾದಿ ಏನನ್ನೂ ಬಯಸಿದ್ದುದನ್ನು ತಿಳಿದಿಲ್ಲ. ಆ ಧೃತವ್ರತನು ರಾಜ್ಯವನ್ನು ಹೇಗೋ ಹಾಗೆ ನನಗೆ ಎಲ್ಲವನ್ನೂ ಕೊಡುತ್ತಿದ್ದನು. ಪಾಂಡುವಿನ ಹಾಗೆ ಅವನ ಪುತ್ರನೂ ಕೂಡ ಧರ್ಮಪರಾಯಣನಾಗಿದ್ದಾನೆ, ಗುಣದಲ್ಲಿ ಲೋಕವಿಖ್ಯಾತನಾಗಿದ್ದಾನೆ, ಮತ್ತು ಪೌರರ ಸುಸಮ್ಮತನಾಗಿದ್ದಾನೆ. ನಾವಾದರೂ ಹೇಗೆ, ವಿಶೇಷವಾಗಿ ಸಸಹಾಯನಾದ ಅವನನ್ನು  ಬಲವಂತವಾಗಿ ತನ್ನ ಪಿತೃ ಪಿತಾಮಹರ ರಾಜ್ಯದಿಂದ ಹೊರಗಟ್ಟಲು ಸಾದ್ಯ? ಪಾಂಡುವು ಸತತವಾಗಿ ಅಮಾತ್ಯರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು, ಸೇನೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು, ಮತ್ತು ವಿಶೇಷವಾಗಿ ತನ್ನ ಪುತ್ರ-ಪೌತ್ರರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು. ಹಿಂದೆ ಪಾಂಡುವು ಪೌರವ ಜನರೆಲ್ಲರನ್ನೂ ಸತ್ಕರಿಸುತ್ತಿದ್ದನು. ಮಗನೇ ಯುಧಿಷ್ಠಿರನ ಸಲುವಾಗಿ ಸಬಾಂಧವರಾಗಿ ನಮ್ಮನ್ನೆಲ್ಲ ಅವರು ಕೊಲ್ಲುವುದಿಲ್ಲವೇ?”

ದುರ್ಯೋಧನನು ಹೇಳಿದನು:

“ತಂದೇ! ಈ ದೋಷದ ಕುರಿತು ನಾನು ಇದಾಗಲೇ ಯೋಚಿಸಿದ್ದೇನೆ. ಪ್ರಕೃತಿಯಲ್ಲಿರುವ ಎಲ್ಲವನ್ನೂ ನೋಡಿದಾಗ ಹಣ ಮತ್ತು ಅನುಕೂಲಗಳನ್ನು ಪಡೆದಿರುವ ಪ್ರಜೆಗಳು ತಮ್ಮ ನಿಷ್ಠತೆಯನ್ನು ನಿಶ್ಚಯವಾಗಿಯೂ ನಮ್ಮ ಮೇಲೆ ಬದಲಾಯಿಸುತ್ತಾರೆ. ಅರ್ಥವರ್ಗ ಮತ್ತು ಅದಕ್ಕೆ ಸಂಬಂಧಿಸಿದ ಅಮಾತ್ಯರು ಈಗ ನನ್ನ ವಶದಲ್ಲಿದ್ದಾರೆ. ನೀನು ಪಾಂಡವರನ್ನು ಯಾವುದಾದರೂ ಮೃದು ಉಪಾಯದಿಂದ ವಾರಣಾವತ ನಗರದಲ್ಲಿರುವಂತೆ ಮಾಡಬೇಕು. ಯಾವಾಗ ಈ ರಾಜ್ಯವು ನನ್ನಲ್ಲಿ ಪ್ರತಿಷ್ಠಿತವಾಗುತ್ತದೆಯೋ ಆಗ ಕುಂತಿಯು ತನ್ನ ಮಕ್ಕಳಿಂದೊಡಗೂಡಿ ಪುನಃ ಇಲ್ಲಿಗೆ ಬರಬಹುದು.”

ಧೃತರಾಷ್ಟ್ರನು ಹೇಳಿದನು:

“ದುರ್ಯೋಧನ! ನಾನೂ ಕೂಡ ಅದೇ ಉಪಾಯವನ್ನು ಯೋಚಿಸಿದ್ದೆ. ಆದರೆ ಈ ಪಾಪಿ ಅಭಿಪ್ರಾಯವನ್ನು ಯಾರಿಗೂ ತಿಳಿಸಿರಲಿಲ್ಲ. ಭೀಷ್ಮನಾಗಲೀ ದ್ರೋಣನಾಗಲೀ ಕ್ಷತ್ತನಾಗಲೀ ಗೌತಮನಾಗಲೀ ಯಾರೂ ಸಹ ಕೌಂತೇಯರನ್ನು ಹೊರಗಟ್ಟುವುದನ್ನು ಎಂದೂ ಸಮ್ಮತಿಸುವುದಿಲ್ಲ. ಪುತ್ರಕ! ಆ ಕೌರವರಿಗೆ ನಾವೂ ಮತ್ತು ಅವರೂ ಒಂದೇ. ಈ ಧರ್ಮಯುಕ್ತ ಮನಸ್ವಿಗಳು ಈ

ರೀತಿಯ ವಿಷಮವನ್ನು ಎಂದೂ ಸಹಿಸುವುದಿಲ್ಲ. ಈ ಮಹಾತ್ಮ ಕೌರವರನ್ನು ಕೊಂದು ನಾವು ಹೇಗೆ ತಾನೆ ಜಗತ್ತಿನಲ್ಲಿ ಇರಲು ಸಾಧ್ಯ?"

ದುರ್ಯೋಧನನು ಹೇಳಿದನು:

"ಭೀಷ್ಮನು ಯಾವಾಗಲೂ ಮಧ್ಯಸ್ಥನಾಗಿರುತ್ತಾನೆ. ದ್ರೋಣ ಪುತ್ರನು ನನ್ನ ಕಡೆ ಇದ್ದಾನೆ. ಮತ್ತು ತನ್ನ ಪುತ್ರನೆಲ್ಲಿರುತ್ತಾನೋ ಅಲ್ಲಿ ದ್ರೋಣನಿರುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಅವರು ಮೂವರೂ ಎಲ್ಲಿ ಇರಲಿಕ್ಕಾಗುತ್ತದೆಯೋ ಅಲ್ಲಿ ಕೃಪ ಶಾರದ್ವತನೂ ಸೇರುತ್ತಾನೆ. ಅವನು ಎಂದೂ ದ್ರೋಣ ಮತ್ತು ತನ್ನ ತಂಗಿಯ ಮಗನನ್ನು ಬಿಟ್ಟಿರುವುದಿಲ್ಲ. ಅವನು ಬೇರೆಯವರೊಂದಿಗೆ ಗೌಪ್ಯವಾಗಿ ಎಷ್ಟೇ ಸೇರಿದರೂ, ಕ್ಷತ್ತನ ಜೀವನವು ನಮ್ಮೊಂದಿಗೆ ಬಂಧಿಸಲ್ಪಟ್ಟಿದೆ. ಪಾಂಡವರ ಪರವಾಗಿ ಏಕೈಕನಾದ ಅವನು ನಮಗೆ ಯಾವುದೇ ರೀತಿಯಲ್ಲಿ ಹಾನಿಯನ್ನುಂಟುಮಾಡಲಿಕ್ಕೂ ಸಮರ್ಥನಲ್ಲ. ನೀನು ಬೇಕಾದರೆ ಇಂದೇ ತಾಯಿಯೊಂದಿಗೆ ಪಾಂಡುಪುತ್ರರನ್ನು ನಿಸ್ಸಂಕೋಚವಾಗಿ ವಾರಣಾವತಕ್ಕೆ ಕಳುಹಿಸಬಹುದು. ಇದರಿಂದ ಯಾವ ದೋಷವೂ ಉಂಟಾಗುವುದಿಲ್ಲ. ಹೀಗೆ ಮಾಡಿ ನನ್ನ ಹೃದಯವನ್ನು

ಚುಚ್ಚಿ ಶೋಕದ ಪಾವಕನನ್ನು ಹುಟ್ಟಿಸಿರುವ ಈ ಒಂದು ಅತಿ ಘೋರ ಮುಳ್ಳನ್ನು ನಾಶಪಡಿಸು.”

ನಂತರ ದುರ್ಯೋಧನನು ತನ್ನ ತಮ್ಮಂದಿರೊಡಗೂಡಿ ಹಣ ಮತ್ತು ಗೌರವಗಳನ್ನು ನೀಡುತ್ತಾ ಕ್ರಮೇಣವಾಗಿ ಎಲ್ಲ ಪ್ರಜೆಗಳನ್ನೂ ಗೆಲ್ಲ ತೊಡಗಿದನು. ಧೃತರಾಷ್ಟ್ರನ ಆದೇಶದಂತೆ ಕೆಲವು ಕುಶಲಮಂತ್ರಿಗಳು ವಾರಣಾವತ ನಗರದ ರಮ್ಯತೆಯ ಕುರಿತಾಗಿ ಕಥೆಗಳನ್ನು ಕಟ್ಟಿ ಹೇಳ ತೊಡಗಿದರು:

“ಭುವಿಯಲ್ಲೆ ರಮಣೀಯತಮ ಪಶುಪತಿಯ ನಗರ ವಾರಣಾವತದಲ್ಲಿ ಅತಿ ದೊಡ್ಡ ಸಮ್ಮೇಳನವು ನಡೆಯಲಿದೆ. ಮನೋರಮೆ ಆ ಶ್ರೇಷ್ಠ ನಗರವು ಸರ್ವರತ್ನ ಸಮಾಕೀರ್ಣವಾಗಿದೆ.”

ಹೀಗೆಂದು ಧೃತರಾಷ್ಟ್ರನ ಜನರು ಕಥೆಗಳನ್ನು ಹರಡಿಸಿದರು. ಈ ರೀತಿ ರಮ್ಯ ವಾರಣಾವತ ನಗರದ ಕುರಿತು ಹೇಳಿದ್ದುದನ್ನು ಕೇಳಿದ ಪಾಂಡುಪುತ್ರರಲ್ಲಿ ಅಲ್ಲಿಗೆ ಹೋಗುವ ಅಭಿಪ್ರಾಯವುಂಟಾಯಿತು. ಅವರಲ್ಲಿ ಕುತೂಹಲ ಮೂಡಿದೆ ಎಂದು ತಿಳಿದ ನೃಪ ಅಂಬಿಕಾಸುತನು ಪಾಂಡವರನ್ನು ಕರೆಯಿಸಿ ಅವರಿಗೆ ಹೇಳಿದನು:

“ನನ್ನ ಜನರು ನಿತ್ಯವೂ ಪುನಃ ಪುನಃ ವಾರಾಣಾವತ ನಗರವು ಲೋಕದಲ್ಲೇ ರಮಣೀಯತರವಾದುದು ಎಂದು ಹೇಳುತ್ತಿರುತ್ತಾರೆ. ಮಗನೇ! ವಾರಣಾವತ ಉತ್ಸವನ್ನು

ನೋಡುವ ಮನಸ್ಸಿದ್ದರೆ ನಿನ್ನ ಅನುಯಾಯಿ ಗಣದೊಂದಿಗೆ ಅಲ್ಲಿ ಅಮರರಂತೆ ವಿಹರಿಸು. ಸುವರ್ಚಸ ದೇವತೆಗಳಂತೆ ನಿನಗಿಷ್ಟಬಂದಂತೆ ಬ್ರಾಹ್ಮಣರಿಗೆ ಮತ್ತು ಗಾಯಕರೆಲ್ಲರಿಗೂ ರತ್ನಗಳನ್ನು ಕೊಡು. ಸ್ವಲ್ಪ ಕಾಲ ಅಲ್ಲಿದ್ದು ಸಂಪೂರ್ಣ ಸಂತೋಷವನ್ನು ಹೊಂದಿಯಾದ ನಂತರ ನೀನು ಸುಖದಿಂದ ಪುನಃ ಈ ಹಸ್ತಿನಾಪುರಕ್ಕೆ ಬರಬಹುದು."

ಇದು ಧೃತರಾಷ್ಟ್ರನ ಆಸೆ ಎಂದು ತಿಳಿದ ಯುಧಿಷ್ಠಿರನು ತನ್ನ ಅಸಹಾಯಕತೆಯನ್ನು ತಿಳಿದು ಹಾಗೆಯೇ ಆಗಲೆಂದು ಉತ್ತರಿಸಿದನು. ನಂತರ ಯುಧಿಷ್ಠಿರನು ದೀನನಾಗಿ ಮೆಲ್ಲಗೆ ಮಹಾಪ್ರಾಜ್ಞ ಭೀಷ್ಮ, ಮಹಾಮತಿ ವಿದುರ, ದ್ರೋಣ, ಬಾಹ್ಲೀಕ, ಕೌರವ ಸೋಮದತ್ತ, ಕೃಪ, ಆಚಾರ್ಯ ಪುತ್ರ ಮತ್ತು ಯಶಸ್ವಿನಿ ಗಾಂಧಾರಿಯಲ್ಲಿ ಹೇಳಿದನು:

"ಧೃತರಾಷ್ಟ್ರನ ಆದೇಶದಂತೆ ನಾವು ನಮ್ಮವರೊಂದಿಗೆ ಜನಸಂಧಣಿಯ ರಮಣೀಯ ವಾರಣಾವತ ನಗರದಲ್ಲಿ ಹೋಗಿ ವಾಸಿಸುತ್ತೇವೆ. ಎಲ್ಲರೂ ಪ್ರಸನ್ನ ಮನಸ್ಕರಾಗಿ ಪುಣ್ಯ ಮಾತುಗಳಿಂದ ನೀವು ನೀಡಿದ ಆಶೀರ್ವಾದದ ಬಲದಿಂದ ನಮಗೆ ಯಾವುದೇ ರೀತಿಯ ಕಷ್ಟವೂ ಬರುವುದಿಲ್ಲ."

ಪಾಂಡುಪುತ್ರನ ಈ ಮಾತುಗಳಿಗೆ ಸರ್ವ ಕೌರವರೂ

ಪ್ರಸನ್ನವದನರಾಗಿ ಪಾಂಡವರನ್ನು ಬೀಳ್ಕೊಟ್ಟರು:

> “ನಿನ್ನ ದಾರಿಯಲ್ಲಿ ಎಲ್ಲ ಭೂತಗಳಿಂದಲೂ ಮಂಗಳವುಂಟಾಗಲಿ. ಪಾಂಡುನಂದನ! ಯಾವ ಕಡೆಯಿಂದಲೂ ಯಾವುದರಿಂದಲೂ ನಿನಗೆ ಅಶುಭವು ಬಾರದಿರಲಿ.”

ನಂತರ ಶುಭ ಪ್ರಯಾಣದ ಆಶೀರ್ವಾದಗಳನ್ನು ಹೊತ್ತ ಪಾಂಡವರು ರಾಜ್ಯಲಾಭಕ್ಕೆಂದು ಬೇಕಾದ ಎಲ್ಲ ಕಾರ್ಯಗಳನ್ನೂ ನೆರವೇರಿಸಿ ವಾರಣಾವತಕ್ಕೆ ಹೊರಟರು.

ರಾಜನು ಮಹಾತ್ಮ ಪಾಂಡವನಿಗೆ ಈ ರೀತಿ ಹೇಳಿದ್ದುದರಿಂದ ದುರಾತ್ಮ ದುರ್ಯೋಧನನು ಬಹಳ ಹರ್ಷಗೊಂಡನು. ಅವನು ತನ್ನ ಸಚಿವ ಪುರೋಚನನನ್ನು ಏಕಾಂತದಲ್ಲಿ ಕರೆದು ಅವನ ಬಲಗೈಯನ್ನು ಹಿಡಿದು ಈ ಮಾತುಗಳನ್ನಾಡಿದನು:

> “ಪುರೋಚನ! ವಸುಸಂಪೂರ್ಣ ಈ ವಸುಂಧರೆಯು ನನ್ನವಳಾದಹಾಗೆ. ನನ್ನವಳಾದ ಅವಳನ್ನು ನಿನಗೂ ಕೊಟ್ಟಿದ್ದೇನೆ. ಅವಳನ್ನು ರಕ್ಷಿಸಬೇಕು. ನಿನ್ನಲ್ಲಿದ್ದಷ್ಟು ವಿಶ್ವಾಸವು ನನಗೆ ಬೇರೆ ಯಾರಲ್ಲಿಯೂ ಇಲ್ಲ. ನನಗೆ ಈ ಸಹಾಯವನ್ನು ಮಾಡಿದೆಯೆಂದರೆ ನಿನಗೆ ಮಂತ್ರಿತ್ವವನ್ನು ನೀಡುವ ಭರವಸೆ ಕೊಡುತ್ತೇನೆ. ಈ ಸಮಾಲೋಚನೆಯನ್ನು ಗೌಪ್ಯವಾಗಿಡು. ನಿನ್ನ ನಿಪುಣ ಉಪಾಯಗಳಿಂದ ನನ್ನ

ಪ್ರತಿದ್ವಂದಿಗಳನ್ನು ನಾಶಗೊಳಿಸು. ನಾನು ಹೇಳಿದ ಹಾಗೆ ಮಾಡು. ಧೃತರಾಷ್ಟ್ರನು ಪಾಂಡವರನ್ನು ವಾರಣಾವತಕ್ಕೆ ಕಳುಹಿಸುತ್ತಿದ್ದಾನೆ. ಧೃತರಾಷ್ಟ್ರನ ಆದೇಶದಂತೆ ಅವರು ಅಲ್ಲಿ ಉತ್ಸವದಲ್ಲಿ ವಿಹರಿಸುತ್ತಾರೆ. ನೀನು ಇಂದೇ ವೇಗವಾಗಿ ಓಡುವ ರಾಸಭಗಳ ಗಾಡಿಯಲ್ಲಿ ವಾರಣಾವತವನ್ನು ಸೇರಿ ನಾನು ಹೇಳಿದ ಹಾಗೆ ಮಾಡು. ಅಲ್ಲಿ ಹೋಗಿ ಪರಮಸಂವೃತ ನಾಲ್ಕು ಕೋಣೆಗಳನ್ನುಳ್ಳ ಆಯುಧಾಗಾರದ ಬಳಿಯಲ್ಲಿಯೇ ಬೆಲೆಬಾಳುವ ಗೃಹವೊಂದನ್ನು ನಿರ್ಮಿಸು. ಶಣ ಸರ್ಜರ ಮೊದಲಾದ ಮತ್ತು ಯಾವುದಾದರೂ ಅಗ್ನಿಯಲ್ಲಿ ಸುಟ್ಟುಹೋಗಬಲ್ಲಂತಹ ಎಲ್ಲ ವಸ್ತುಗಳನ್ನೂ ಬಳಸು. ಅವುಗಳನ್ನು ತೈಲ, ಅರಗು ಮತ್ತು ತುಪ್ಪಗಳಿಂದ ಮಣ್ಣಿನಲ್ಲಿ ಸೇರಿಸಿ ಅದನ್ನು ಗೋಡೆಗಳಿಗೆ ಲೇಪಿಸಬೇಕು. ಹೆಚ್ಚಿನ ಪ್ರಮಾಣದಲ್ಲಿ ಸೆಣಬು, ಬಿದಿರು, ತುಪ್ಪ, ಮರ, ಮತ್ತು ಮರದ ಪುಡಿಯನ್ನು ಸೇರಿಸಬೇಕು. ಆದರೆ ಪಾಂಡವರು ಪರೀಕ್ಷಿಸಿದರೂ ಅವರಿಗೆ ಶಂಕೆಯುಂಟಾಗಬಾರದ ಹಾಗಿರಬೇಕು. ಅಥವಾ ಬೇರೆ ಯಾರಿಗೂ ಇದೊಂದು ಅಗ್ನಿಯ ಶಲ್ಯಂತ್ರವೆಂದು ತಿಳಿಯಬಾರದು. ಈ ರೀತಿ ಮನೆಯನ್ನು ನಿರ್ಮಿಸಿ, ಅವರನ್ನು ಸತ್ಕರಿಸಿ ಪಾಂಡವರು ಮತ್ತು ಸಖೀಮೇಳದೊಂದಿಗೆ ಅಲ್ಲಿ ವಾಸಿಸಲು ಕುಂತಿಯನ್ನು

ಆಗ್ರಹಿಸಬೇಕು. ನನ್ನ ತಂದೆಗೆ ತೃಪ್ತಿಕೊಡುವಷ್ಟು ಅಲ್ಲಿ ಪಾಂಡವರಿಗಾಗಿ ಆಸನಗಳ, ಹಾಸಿಗೆಗಳ, ಮಂಚಗಳ, ಮತ್ತು ವಾಹನಗಳ ವ್ಯವಸ್ಥೆಯಾಗಬೇಕು. ವಾರಣಾವತ ನಗರಿಯಲ್ಲಿ ಅವರು, ನಮ್ಮ ಸಮಯವು ಬರುವವರೆಗೆ, ಯಾವುದೇ ರೀತಿಯ ಸಂಶಯವನ್ನೂ ಹೊಂದದೇ ವಿಶ್ರಾಂತಿಪಡೆಯುತ್ತಿರಬೇಕು. ಅವರಿಗೆ ಬರುವ ಅಪಾಯದ ಯಾವ ಶಂಕೆಯೂ ಇಲ್ಲ ಎಂದು ಖಾತ್ರಿಪಡಿಸಿಕೊಂಡ ನಂತರ ಅವರು ನಿರ್ಭಯರಾಗಿ ಮಲಗಿಕೊಂಡಿದ್ದಾಗ ದ್ವಾರದಲ್ಲಿಯೇ ಬೆಂಕಿಯನ್ನು ಹಾಕಿ ಹೊತ್ತಿಸಬೇಕು. ಈ ರೀತಿ ಬೆಂಕಿಯಲ್ಲಿ ಸುಟ್ಟು ತೀರಿಕೊಂಡಾಗ ಪಾಂಡವರು ಅವರ ಮನೆಯಲ್ಲಿಯೇ ಜೀವಂತ ಸುಟ್ಟುಹೋದರು ಎಂದು ಅವರ ಜನರೆಲ್ಲರೂ ತಿಳಿದುಕೊಳ್ಳುತ್ತಾರೆ."

ಪುರೋಚನನು ಕೌರವನಿಗೆ ಹಾಗೆಯೇ ಮಾಡುತ್ತೇನೆಂದು ಪ್ರತಿಜ್ಞೆಯನ್ನಿತ್ತು ಕತ್ತೆಯ ಬಂಡಿಯನ್ನೇರಿ ವಾರಣಾವತ ನಗರಿಗೆ ಹೊರಟನು. ದುರ್ಯೋಧನನಿಗೆ ವಿನೀತ ಪುರೋಚನನು ಬೇಗನೆ ಹೋಗಿ ರಾಜಪುತ್ರನು ಹೇಳಿದ ಹಾಗೆಯೇ ಎಲ್ಲವನ್ನೂ ಮಾಡಿದನು.

ಅನಿಲೋಪಮ ಉತ್ತಮ ಅಶ್ವಗಳನ್ನು ಕಟ್ಟಿದ್ದ ರಥಗಳನ್ನು ಏರುವಾಗ ಆರ್ತ ಪಾಂಡವರು ಭೀಷ್ಮ, ರಾಜ ಧೃತರಾಷ್ಟ್ರ, ಮಹಾತ್ಮ ದ್ರೋಣ, ವಿದುರ, ಕೃಪ ಮತ್ತು ಅನ್ಯ ವೃದ್ಧರ ಪಾದಗಳಿಗೆರಗಿದರು. ಹೀಗೆ

ಎಲ್ಲ ಕುರುವೃದ್ಧರಿಗೂ ಅಭಿವಂದಿಸಿ ಯತವ್ರತರು ಸಮಾನರನ್ನು ಆಲಿಂಗಿಸಿದರು ಮತ್ತು ಕಿರಿಯರಿಂದ ಅಭಿವಂದಿಸಲ್ಪಟ್ಟರು. ಎಲ್ಲ ತಾಯಂದಿರಿಗೂ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಎಲ್ಲ ಪ್ರಜೆಗಳಿಂದ ಬೀಳ್ಕೊಂಡು ವಾರಣಾವತಕ್ಕೆ ಹೊರಟರು. ಮಹಾಪ್ರಾಜ್ಞ ವಿದುರ, ಅನ್ಯ ಕುರುಪುಂಗವರು ಮತ್ತು ಶೋಕಾರ್ತ ಪೌರರು ಆ ಪುರುಷವ್ಯಾಘ್ರರನ್ನು ಹಿಂಬಾಲಿಸಿದರು. ಅಲ್ಲಿಯೇ ಇದ್ದ ಕೆಲ ನಿರ್ಭಯ ಬ್ರಾಹ್ಮಣರು ಪಾಂಡುಪುತ್ರರಿಗಾಗಿ ಅತೀವ ದುಃಖಿತರಾಗಿ ಹೇಳಿಕೊಳ್ಳುತ್ತಿದ್ದರು:

> “ವಿಷಮ ರಾಜ ಧೃತರಾಷ್ಟ್ರನು ಎಲ್ಲೆಡೆಯಲ್ಲಿಯೂ ಕತ್ತಲೆಯನ್ನೇ ಕಾಣುತ್ತಿದ್ದಾನೆ. ದುರ್ಬುದ್ಧಿಯು ಧರ್ಮವನ್ನೇ ನೋಡುವುದಿಲ್ಲ. ಅಪಾಪಾತ್ಮ ಪಾಂಡವನು ಪಾಪಗೈಯುವವನೇ ಅಲ್ಲ; ಬಲಿಗಳಲ್ಲಿ ಶ್ರೇಷ್ಠ ಭೀಮನಾಗಲೀ, ಕೌಂತೇಯ ಧನಂಜಯನಾಗಲೀ, ಮಹಾಪ್ರಾಜ್ಞ ಮಾದ್ರೀಪುತ್ರರಾಗಲೀ ಪಾಪವನ್ನೆಂದೂ ಎಸಗುವುದಿಲ್ಲ. ಅವರು ಪಿತೃವಿನಿಂದ ರಾಜ್ಯವನ್ನು ಪಡೆದಿದ್ದುದು ಧೃತರಾಷ್ಟ್ರನಿಗೆ ಸಹಿಸಲಿಕ್ಕಾಗಲಿಲ್ಲ. ಭರತರ್ಷಭ ಕೌಂತೇಯರನ್ನು ಏನೂ ಕಾರಣವಿಲ್ಲದೇ ಹೊರಗಟ್ಟುವ ಈ ಅತಿದೊಡ್ಡ ಅಧರ್ಮಕ್ಕೆ ಭೀಷ್ಮನಾದರೂ ಹೇಗೆ ಅನುಮತಿಯನ್ನಿತ್ತ? ಹಿಂದೆ

ಶಾಂತನವ ವಿಚಿತ್ರವೀರ್ಯ ಮತ್ತು ಕುರುನಂದನ ಪಾಂಡು ಇಬ್ಬರೂ ನಮ್ಮ ತಂದೆಗಳಂತಿದ್ದರು. ಆ ಪುರುಷವ್ಯಾಘ್ರನು ದೈವಾಧೀನನಾದ ನಂತರ ಬಾಲಕರಾದ ಈ ರಾಜಪುತ್ರರನ್ನು ಧೃತರಾಷ್ಟ್ರನಿಗೆ ಸಹಿಸಲಾಗುತ್ತಿಲ್ಲ. ನಮಗೆ ಕೂಡ ಅವನನ್ನು ಸಹಿಸಲಾಗುತ್ತಿಲ್ಲ. ನಾವೆಲ್ಲರೂ ಈ ಉತ್ತಮ ನಗರಿ-ಮನೆಗಳನ್ನು ತೊರೆದು ಯುಧಿಷ್ಠಿರನು ಹೋಗುವಲ್ಲಿಗೆ ಹೋಗೋಣ."

ದುಃಖಿತ ಪೌರರು ಈ ರೀತಿ ಮಾತನಾಡಿಕೊಳ್ಳುತ್ತಿರುವಾಗ ದುಃಖಕರ್ಶಿತ ಧರ್ಮರಾಜ ಯುಧಿಷ್ಠಿರನು ಪರಮಪ್ರೀತನಾಗಿ ಹೇಳಿದನು:

"ಗುರುವಿನಂತೆ ಶ್ರೇಷ್ಠ ಪೃಥ್ವೀಪತಿಯನ್ನು ತಂದೆಯಂತೆ ಮನ್ನಿಸಬೇಕು. ಅವನು ನಮಗೆ ಏನನ್ನು ಹೇಳುತ್ತಾನೋ ಅದನ್ನು ಸ್ವಲ್ಪವೂ ಶಂಕಿಸದೇ ಮಾಡುತ್ತೇವೆ ಎನ್ನುವುದು ನಮ್ಮ ವ್ರತ. ನೀವು ನಮ್ಮ ಸುಹೃದಯರು. ನಮಗೆ ಪ್ರದಕ್ಷಿಣೆ ಮಾಡಿ ಆಶೀರ್ವದಿಸಿ ನಮ್ಮನ್ನು ಅಭಿನಂದಿಸಿ ನಿಮ್ಮ ನಿಮ್ಮ ಮನೆಗಳಿಗೆ ತೆರಳಿ. ನಿಮ್ಮಿಂದ ನಮಗೆ ಯಾವಾಗಲಾದರೂ ಕಾರ್ಯವಾಗಬೇಕೆಂದಾಗ ನನಗೆ ಪ್ರಿಯ ಮತ್ತು ಹಿತಕರವಾದವುಗಳನ್ನು ಮಾಡುವಿರಂತೆ."

ಅವರು ಹಾಗೆಯೇ ಆಗಲೆಂದು ಪ್ರತಿಜ್ಞೆಮಾಡಿ ಅವರಿಗೆ ಪ್ರದಕ್ಷಿಣೆ

ಮಾಡಿ ಆಶೀರ್ವದಿಸಿ-ಅಭಿನಂದಿಸಿ ನಗರಕ್ಕೆ ಹಿಂದಿರುಗಿದರು.

ಪೌರರು ಹಿಂದಿರುಗಿದ ನಂತರ ಸರ್ವ ಧರ್ಮವಿದ ವಿದುರನು ಪಾಂಡವಶ್ರೇಷ್ಠನಿಗೆ ಬೋಧಿಸುತ್ತಾ ಪ್ರಾಜ್ಞನು ಧರ್ಮಾರ್ಥದರ್ಶಿ ಒಗಟುಗಳನ್ನು ಅರಿಯಬಲ್ಲ ಪ್ರಾಜ್ಞನಿಗೆ ಹೇಳುವಂತೆ ಈ ಮಾತುಗಳನ್ನಾಡಿದನು:

> “ತಿಳಿದಿರುವವನು ಆಪತ್ತನ್ನು ಗೆಲ್ಲಲು ಪ್ರಯತ್ನಿಸುತ್ತಾನೆ. ಲೋಹವಲ್ಲದ ಆದರೂ ಮೊನಚಾದ ಶಸ್ತ್ರವೊಂದು ಶರೀರವನ್ನು ಆವರಿಸಿದೆ. ಇದನ್ನು ತಿಳಿದವನನ್ನು ಯಾವ ಆಯುಧವೂ ಕೊಲ್ಲುವುದಿಲ್ಲ ಆದರೆ ಶತ್ರುವನ್ನು ಎದುರಿಸುತ್ತದೆ. ಕಕ್ಷಗಳನ್ನು ಮತ್ತು ಛಳಿಯನ್ನು ಕೊಲ್ಲುವಂತಹ ಆಯುಧವು ವಿಶಾಲ ಬಿಲದಲ್ಲಿರುವುದನ್ನು ಕೊಲ್ಲುವುದಿಲ್ಲ ಎಂದು ತಿಳಿದವನು ತನ್ನನ್ನು ತಾನೇ ರಕ್ಷಿಸಿಕೊಂಡು ಜೀವಿಸುತ್ತಾನೆ. ಕುರುಡನಿಗೆ ದಾರಿ ಕಾಣುವುದಿಲ್ಲ, ಕುರುಡನಿಗೆ ದಿಕ್ಕೇ ಕಾಣುವುದಿಲ್ಲ ಮತ್ತು ತನ್ನ ರಕ್ಷಣೆಯನ್ನು ಮಾಡಿಕೊಳ್ಳದಿರುವವನು ಶ್ರೇಯಸ್ಸನ್ನು ಹೊಂದಲಾರ. ಇದನ್ನು ತಿಳಿದು ಜಾಗರೂಕನಾಗಿರು. ನರನು ಆಪ್ತರಲ್ಲದವರಿಂದ ಕೊಡಲ್ಪಟ್ಟ ಲೋಹವಲ್ಲದ ಈ ಶಸ್ತ್ರವನ್ನು ತೆಗೆದುಕೊಂಡು ಮುಳ್ಳುಹಂದಿಯ ಆಸರೆಯನ್ನು ಪಡೆದು ಬೆಂಕಿಯಿಂದ ಬಿಡುಗಡೆ ಹೊಂದುತ್ತಾನೆ.

> ನಡೆಯುತ್ತಿರುವ ಮಾರ್ಗಗಳನ್ನು ಮತ್ತು ದಿಕ್ಕುಗಳನ್ನು ನಕ್ಷತ್ರಗಳ ಮೂಲಕ ತಿಳಿದುಕೊಳ್ಳುತ್ತಾನೆ; ತಾನೇ ತನ್ನ ಪಂಚ ಇಂದ್ರಿಯಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಮುಳುಗಿಹೋಗುವುದರಿಂದ ತನ್ನನ್ನು ರಕ್ಷಿಸಿಕೊಳ್ಳುತ್ತಾನೆ."

ಅವರನ್ನು ಅನುಸರಿಸಿ ಹೋಗುತ್ತಿರುವಾಗ ಈ ಸೂಚನೆಗಳನ್ನಿತ್ತ ವಿದುರನು ಪಾಂಡವರಿಗೆ ಪ್ರದಕ್ಷಿಣೆಮಾಡಿ ಅವರನ್ನು ಬೀಳ್ಕೊಟ್ಟು ತನ್ನ ಮನೆಗೆ ಹಿಂದುರಿಗಿದನು.

ವಿದುರ, ಭೀಷ್ಮ, ಮತ್ತು ಪೌರಜನರು ಹಿಂದಿರುಗಿದ ನಂತರ ಕುಂತಿಯು ಅಜಾತಶತ್ರುವನ್ನ ಕರೆದು ಕೇಳಿದಳು:

> "ಜನರ ಮಧ್ಯದಲ್ಲಿ ಕ್ಷತ್ತನು ಏನು ಹೇಳಿದನು? ನೀನು ಅದಕ್ಕೆ ಹಾಗೆಯೇ ಆಗಲಿ ಎಂದೆ. ನಮಗೆ ಇದು ಅರ್ಥವಾಗಲಿಲ್ಲ! ನಾವೆಲ್ಲರೂ ಅದನ್ನು ಕೇಳಬಹುದಂಥದ್ದಾಗಿದ್ದರೆ, ಕೆಟ್ಟ ವಿಷಯವಲ್ಲದಿದ್ದರೆ ನಿನ್ನ ಮತ್ತು ಅವನ ಸಂವಾದವೆಲ್ಲವನ್ನು ತಿಳಿಯಲು ಬಯಸುತ್ತೇನೆ."

ಯುಧಿಷ್ಠಿರನು ಹೇಳಿದನು:

> "ವಿದುರನು ನನಗೆ ವಿಷ ಮತ್ತು ಅಗ್ನಿಗಳ ಕುರಿತು ಜಾಗರೂಕನಾಗಿರಲು ಹೇಳಿದನು. ದಾರಿಗಳ್ಯಾವುವೂ ನನಗೆ

ತಿಳಿಯದೆ ಇರಬಾರದೆಂದೂ ಹೇಳಿದನು.
ಜಿತೇಂದ್ರಿಯನಾಗಿದ್ದು ವಸುಧೆಯನ್ನು
ಪ್ರಾಪ್ತಗೊಳಿಸಿಕೊಳ್ಳಬಹುದು ಎಂದೂ ಹೇಳಿದನು.
ಅವೆಲ್ಲವೂ ಅರ್ಥವಾಯಿತೆಂದು ನಾನು ವಿದುರನಿಗೆ
ಉತ್ತರವಿತ್ತೆ.”

ಫಲ್ಗುಣದ ಎಂಟನೇ ದಿನ ರೋಹಿಣೀ ನಕ್ಷತ್ರದಲ್ಲಿ ಅವರು ವಾರಣಾವತವನ್ನು ಸೇರಿ ನಗರ ಮತ್ತು ಜನರನ್ನು ನೋಡಿದರು. ವಾರಣಾವತದ ಸರ್ವ ಪೌರಜನರೂ ನರಶ್ರೇಷ್ಠ ಪಾಂಡುಪುತ್ರರು ಬಂದಿದ್ದಾರೆಂದು ಕೇಳಿದೊಡನೆ ಅತಿ ಸಂತೋಷದಿಂದ ನಾನಾ ವಾಹನಗಳಲ್ಲಿ ಸಹಸ್ರಾರು ಸಂಖ್ಯೆಗಳಲ್ಲಿ ಶಾಸ್ತ್ರಗಳಲ್ಲಿ ಹೇಳಿದ ಎಲ್ಲ ಮಂಗಲ ವಸ್ತುಗಳನ್ನು ತೆಗೆದುಕೊಂಡು ನಗರದಿಂದ ಹೊರಬಂದರು. ವಾರಣಾವತಕ ಜನರು ಕೌಂತೇಯರನ್ನು ತಲುಪಿ ಸರ್ವರೂ ಅವರನ್ನು ಗೌರವದಿಂದ ಸುತ್ತುವರೆದು ಜಯಘೋಷಗೈದರು. ಅವರಿಂದ ಆವೃತ ಪುರುಷವ್ಯಾಘ್ರ ದೇವಸಂಕಾಶ ಧರ್ಮರಾಜ ಯುಧಿಷ್ಠಿರನು ಅಮರರ ಮಧ್ಯೆ ವಜ್ರಪಾಣಿಯಂತೆ ಕಂಗೊಳಿಸಿದನು. ಪೌರರಿಂದ ಸತ್ಕೃತರಾದ ಮತ್ತು ಪೌರರನ್ನು ಸತ್ಕರಿಸಿದ ಆ ಅನಘರು ಅಲಂಕೃತ ಜನಸಂಕೀರ್ಣ ವಾರಣಾವತವನ್ನು ಪ್ರವೇಶಿಸಿದರು. ಪುರವನ್ನು ಪ್ರವೇಶಿಸಿದ ಕೂಡಲೇ ಆ ವೀರರು ತಮ್ಮ ಕರ್ಮಗಳಲ್ಲಿ ನಿರತ ಬ್ರಾಹ್ಮಣರ ಮನೆಗಳಿಗೆ ಭೇಟಿಯಿಟ್ಟರು. ಹಾಗೆಯೇ ನಗರದ

ಅಧಿಕಾರಿಗಳ ಮತ್ತು ರಥಿಗಳ ಮನೆಗಳಿಗೆ ಹೋದರು. ಈ ನರಶ್ರೇಷ್ಠರು ವೈಶ್ಯ ಮತ್ತು ಶೂದ್ರರ ಮನೆಗಳಿಗೂ ಭೇಟಿಯಿತ್ತರು. ಪೌರಜನರಿಂದ ಪೂಜಿಸಿಲ್ಪಟ್ಟ ನಂತರ ಭರತರ್ಷಭ ಪಾಂಡವರು ತಮ್ಮ ವಸತಿಗೃಹಕ್ಕೆ ತೆರಳಿ ಅಲ್ಲಿ ಪುರೋಚನನಿಂದ ಸ್ವಾಗತಿಸಲ್ಪಟ್ಟರು. ಪುರೋಚನನು ಅವರಿಗೆ ಭಕ್ಷ್ಯಾನ್ನಗಳನ್ನೂ, ಪಾನೀಯಗಳನ್ನೂ, ಸುಂದರ ಹಾಸಿಗೆಗಳನ್ನೂ ಮತ್ತು ಮುಖ್ಯ ಆಸನಗಳನ್ನೂ ಇತ್ತನು. ಅಲ್ಲಿ ಅವರು ತಮ್ಮ ರಾಜಪರಿಚಾರಕರೊಂದಿಗೆ ಅವನಿಂದ ಸತ್ಕೃತರಾಗಿ ಪುರನಿವಾಸಿಗಳ ಸೇವೆಗಳೊಂದಿಗೆ ವಾಸಿಸಿದರು.

ಅಲ್ಲಿ ಅವರು ಹತ್ತು ದಿನಗಳು ಇರಲಾಗಿ ಪುರೋಚನನು ಅಶುಭವಾದರೂ ಶಿವ ಎಂದು ಕರೆಯಲ್ಪಟ್ಟ ಗೃಹವನ್ನು ಉಡುಗೊರೆಯಾಗಿತ್ತನು. ಪುರೋಚನನ ವಚನದಂತೆ ಆ ಪುರುಷವ್ಯಾಘ್ರರು ತಮ್ಮ ಪರಿಚಾರಕರೊಂದಿಗೆ ಗುಹ್ಯಕರು ಕೈಲಾಸವನ್ನು ಪ್ರವೇಶಿಸುವಂತೆ ಆ ಭವನವನ್ನು ಪ್ರವೇಶಿಸಿದರು. ಆದರೆ ಸರ್ವಧರ್ಮವಿಶಾರದ ಯುಧಿಷ್ಠಿರನು ಆ ಮನೆಯನ್ನು ಪರೀಕ್ಷಿಸಿ ಭೀಮಸೇನನಿಗೆ

> "ಬೆಣ್ಣೆ ಮತ್ತು ಲಾಕ್ಷಗಳಿಂದ ಮಿಶ್ರಿತ ಕೊಬ್ಬಿನ ವಾಸನೆ
> ಬರುತ್ತಿರುವ ಇದು ಒಂದು ಅಗ್ನಿಜಾಲ!"

ಎಂದು ಹೇಳಿದನು.

“ಪರಂತಪ! ಬೆಂಕಿಯಲ್ಲಿ ಸುಟ್ಟು ಭಸ್ಮಮಾಡುವುದಕ್ಕಾಗಿಯೇ ಈ ಮನೆಯನ್ನು ನಿರ್ಮಿಸಿದ್ದಾರೆ ಎನ್ನುವುದು ವ್ಯಕ್ತವಾಗುತ್ತದೆ. ಮನೆಯನ್ನು ಕಟ್ಟುವುದಕ್ಕೆ ಬಳಸಿದ ಶಣ, ಸರ್ಜ, ಗನ್ನೆ, ಹುಲ್ಲು, ತೊಗಟೆ ಮತ್ತು ಬಿದಿರು ಎಲ್ಲವನ್ನೂ ತುಪ್ಪದಲ್ಲಿ ತೋಯಿಸಿದ್ದಾರೆ ಎನ್ನುವುದೂ ವ್ಯಕ್ತವಾಗುತ್ತದೆ. ಅವರ ವೃತ್ತಿಯನ್ನು ಚೆನ್ನಾಗಿ ತಿಳಿದಿರುವ ಶಿಲ್ಪಿಗಳೇ ಇದನ್ನು ನಿರ್ಮಿಸಿದ್ದಾರೆ ಎನ್ನುವುದು ಸತ್ಯ. ನಾನು ನಿಶ್ಚಿಂತೆಯಿಂದಿರುವಾಗ ಪಾಪಿ ಪುರೋಚನನು ನನ್ನನ್ನು ಸುಟ್ಟುಹಾಕಲು ಬಯಸಿದ್ದಾನೆ. ಇದನ್ನೇ ಆ ಮಹಾಬುದ್ಧಿ ವಿದುರನು ಮೊದಲೇ ವೀಕ್ಷಿಸಿ ಇದರ ಕುರಿತು ಎಚ್ಚರಿಕೆಯ ಮಾತುಗಳನ್ನಾಡಿದ್ದ. ಅವನು ಮೊದಲೇ ನಮಗೆ ಎಚ್ಚರಿಕೆ ನೀಡಿದ್ದುದರಿಂದ ಈಗ ನಮಗೆ ಈ ಮನೆಯು ಅಶುಭವಾದದ್ದು ಮತ್ತು ದುರ್ಯೋಧನನ ವಶದಲ್ಲಿದ್ದು ಅವನಿಗೆ ವಿಧೇಯರಾಗಿರುವ ಗೂಢ ಕರ್ಮಿಗಳು ಇದನ್ನು ನಿರ್ಮಿಸಿದ್ದಾರೆ ಎನ್ನುವುದು ತಿಳಿದಿದೆ.”

ಭೀಮನು ಹೇಳಿದನು:

“ಈ ಮನೆಯು ಅಗ್ನಿಜಾಲವಾಗಿ ನಿರ್ಮಿತವಾಗಿದೆ ಎಂದು ನಿನ್ನ ಅಭಿಪ್ರಾಯವಾದರೆ ನಾವು ಮೊದಲೇ ವಾಸಿಸುತ್ತಿದ್ದ ಮನೆಗೆ ಹೋಗುವುದು ಒಳ್ಳೆಯದು.”

ಯುಧಿಷ್ಠಿರನು ಹೇಳಿದನು:

"ಇಲ್ಲ. ನಾವು ಏನೂ ತಿಳಿಯದವರಂತೆ ಉತ್ಸಾಹದಿಂದ, ನಾಶವಾಗುತ್ತೇವೋ ಎನ್ನುವ ಹಾಗೆ ಇಲ್ಲಿಯೇ ಇದ್ದುಕೊಂಡು ಇಲ್ಲಿಂದ ತಪ್ಪಿಸಿಕೊಳ್ಳುವ ನಿರ್ದಿಷ್ಠ ಮಾರ್ಗವನ್ನು ಹುಡುಕಬೇಕು ಎಂದು ನನಗನ್ನಿಸುತ್ತದೆ. ಏಕೆಂದರೆ ಪುರೋಚನನು ನಮಗೆ ಇದೆಲ್ಲ ತಿಳಿದಿದೆ ಎಂದು ಯೋಚಿಸಿದರೆ ಶೀಘ್ರದಲ್ಲಿಯೇ ಕಾರ್ಯವೆಸಗಿ ನಮ್ಮನ್ನು ಸುಟ್ಟು ಸಾಯಿಸುತ್ತಾನೆ. ಸುಯೋಧನನ ಅನುಮತಿಯಂತೆ ನಡೆಯುತ್ತಿರುವ ಮೂಢ ಪುರೋಚನನು ಯಾವುದೇ ರೀತಿಯ ಅಧರ್ಮ ಮತ್ತು ಉಪಕ್ರೋಶದಿಂದ ಹಿಂಜರಿಯುವುದಿಲ್ಲ. ನಾವು ಸುಟ್ಟು ಭಸ್ಮವಾದಾಗ ಪಿತಾಮಹ ಭೀಷ್ಮ ಅಥವಾ ಇತರ ಕೌರವರು ಕುಪಿತರಾಗುತ್ತಾರೋ ಇಲ್ಲವೋ ಎನ್ನುವುದು ಪ್ರಶ್ನೆ. ಧರ್ಮಪೂರಕವಾಗಿ ಅವನು ಮತ್ತು ಅನ್ಯ ಕುರುಪುಂಗವರು ಸಿಟ್ಟಿಗೇಳಲೂ ಬಹುದು. ಆದರೆ ಬೆಂಕಿಯ ಭಯದಿಂದ ನಾವು ಪಲಾಯನ ಮಾಡಿದರೆ ರಾಜ್ಯಲುಬ್ಧ ಸುಯೋಧನನು ನಮ್ಮೆಲ್ಲರನ್ನೂ ತನ್ನ ಗೂಢಾಚಾರಿಗಳ ಮೂಲಕ ಸಾಯಿಸುತ್ತಾನೆ. ಅವನಿಗೆ ಸ್ಥಾನಮಾನಗಳಿವೆ, ನಮಗೆ ಸ್ಥಾನಮಾನಗಳಿಲ್ಲ. ಅವನಿಗೆ ತನ್ನ ಪಕ್ಷದವರು

ಎನ್ನುವುವರಿದ್ದಾರೆ, ನಮಗೆ ನಮ್ಮವರು ಯಾರೂ ಇಲ್ಲ. ಅವನಿಗೆ ಮಹಾಕೋಶವೇ ಇದೆ. ನಮಗೆ ಕೋಶವೇ ಇಲ್ಲ. ನಿರ್ದಿಷ್ಟವಾಗಿಯೂ ಅವನು ನಮ್ಮನ್ನು ಸಂಹರಿಸಬಲ್ಲ. ಆದುದರಿಂದ ಈ ಪಾಪಿಯನ್ನೂ ಮತ್ತು ಪಾಪಿ ಸುಯೋಧನನ್ನೂ ವಂಚಿಸಿ ನಾವು ಎಲ್ಲಿಯೇ ವಾಸಿಸುತ್ತಿರಲಿ ಗೂಢವಾಗಿ ವಾಸಿಸಬೇಕು. ನಾವು ಬೇಟೆಗಾರರಂತೆ ಭೂಮಿಯನ್ನೆಲ್ಲಾ ಸುತ್ತೋಣ. ಇದರಿಂದ ಭವಿಷ್ಯದಲ್ಲಿ ಪಲಾಯನಗೈಯಲು ಎಲ್ಲ ಮಾರ್ಗಗಳೂ ನಮಗೆ ತಿಳಿಯುತ್ತವೆ. ಚೆನ್ನಾಗಿ ಮುಚ್ಚಲ್ಪಟ್ಟ ಒಂದು ಬಿಲವನ್ನು ಭೂಮಿಯಲ್ಲಿ ಅಗೆಯಬೇಕು; ಅಲ್ಲಿ ಅಡಗಿ ಕೊಂಡರೆ ಬೆಂಕಿಯು ನಮ್ಮನ್ನು ಸುಡುವುದಿಲ್ಲ. ನಾವು ಇಲ್ಲಿ ವಾಸಿಸುತ್ತಿರುವಾಗ ಪುರೋಚನನಿಗಾಗಲೀ ಅಥವಾ ಇತರ ಪೌರ ಜನರಿಗಾಗಲೀ ತಿಳಿಯದಂತೆ ಎಲ್ಲ ಜಾಗರೂಕತೆಯನ್ನೂ ವಹಿಸೋಣ.”

ಒಮ್ಮೆ ವಿದುರನ ಓರ್ವ ಸ್ನೇಹಿತ ಖನಕನು ಪಾಂಡವರು ಒಬ್ಬರೇ ಇರುವಾಗ ಹೇಳಿದನು:

“ನಾನೊಬ್ಬ ಅಗೆಯುವುದರಲ್ಲಿ ಕುಶಲ ಖನಕ. ವಿದುರನು ಪಾಂಡವರಿಗೆ ಒಳ್ಳೆಯದನ್ನು ಮಾಡಲೋಸುಗ ನನ್ನನ್ನು ಕಳುಹಿಸಿದ್ದಾನೆ. ನಿಮಗೆ ನಾನು ಏನು ಮಾಡಲಿ?

ಪಾಂಡವರಿಗೆ ಶ್ರೇಯಸ್ಸುಂಟಾಗುವಂತೆ ಮಾಡು, ಅವರಿಗೆ ವಿಶ್ವಾಸವನ್ನು ನೀಡು ಎಂದು ವಿದುರನು ನನಗೆ ಗುಟ್ಟಿನಲ್ಲಿ ಹೇಳಿದನು. ನಿಮಗೆ ನಾನು ಏನು ಮಾಡಲಿ? ಈ ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ ಪುರೋಚನನು ನಿಮ್ಮ ಈ ಭವನದ ದ್ವಾರದಲ್ಲಿ ಬೆಂಕಿಯನ್ನು ಹಚ್ಚುವವನಿದ್ದಾನೆ. ಧಾರ್ತರಾಷ್ಟ್ರನು ಪುರುಷರ್ಷಭ ಪಾಂಡವರನ್ನು ಅವರ ಮಾತೆಯ ಸಹಿತ ಸುಟ್ಟುಹಾಕಲು ನಿರ್ಧರಿಸಿದ್ದಾನೆ ಎಂದು ಕೇಳಿದ್ದೇನೆ. ವಿದುರನು ನಿನ್ನಲ್ಲಿ ಮ್ಲೇಚ್ಛ ಭಾಷೆಯಲ್ಲಿ ಏನನ್ನೋ ಹೇಳಿದ್ದನು. ಮತ್ತು ನೀನು ಅದಕ್ಕೆ ಹಾಗೆಯೇ ಆಗಲಿ ಎಂದು ಹೇಳಿದ್ದೆ. ಈ ವಿಷಯವೇ ನಿನಗೆ ನನ್ನಲ್ಲಿ ವಿಶ್ವಾಸವನ್ನು ತರಬೇಕು."

ಆಗ ಅವನಿಗೆ ಸತ್ಯಧೃತಿ ಕುಂತಿಪುತ್ರ ಯುಧಿಷ್ಠಿರನು ಹೇಳಿದನು:

"ಸೌಮ್ಯ! ನಿನ್ನನ್ನು ನಾನು ವಿದುರನ ಸುಹೃದನೆಂದೂ, ಶುಚಿಯಾದವನೆಂದೂ, ದೃಢಭಕ್ತಿಯುಳ್ಳವನೆಂದೂ, ಪ್ರಿಯಕರನೆಂದೂ ಗುರುತಿಸುತ್ತೇನೆ. ಕವಿಯಿಂದ ಯಾವುದೇ ರೀತಿಯ ಅಭಿಜ್ಞಾನವನ್ನು ಬಳಸುವ ಅವಶ್ಯಕತೆಯಿಲ್ಲ. ಅವನು ಹೇಗೆ ನಮ್ಮವನೋ ನೀನೂ ಕೂಡ ನಮ್ಮವನೇ; ನಿನ್ನನ್ನು ನಮ್ಮಲ್ಲಿಯೇ ಒಬ್ಬನೆಂದು ಪರಿಗಣಿಸುತ್ತೇವೆ. ನಾವು ಹೇಗೆ ಅವನಿಗೆ ಸೇರಿದ್ದೇವೋ ಹಾಗೆ ನಿನಗೂ ಸೇರಿದ್ದೇವೆ.

ಆ ಕವಿಯು ನಮ್ಮನ್ನು ಪಾಲಿಸುವಂತೆ ಪಾಲಿಸು. ಧಾರ್ತರಾಷ್ಟ್ರನ ಶಾಸನದಂತೆ ಪುರೋಚನನು ನನಗಾಗಿ ಈ ಅಗ್ನಿಜಾಲದ ಮನೆಯನ್ನು ನಿರ್ಮಿಸಿದ್ದಾನೆ ಎನ್ನುವುದು ವಿಹಿತವಾಗಿದೆ. ಆ ಪಾಪಿಯಲ್ಲಿ ಕೋಶವೂ ಇದೆ ಸಹಾಯಕರೂ ಇದ್ದಾರೆ. ಆ ದುರ್ಮತಿ ದುಷ್ಟಾತ್ಮನು ಯಾವಾಗಲೂ ನಮ್ಮನ್ನು ಬಾಧಿಸಲು ನಿರತನಾಗಿದ್ದಾನೆ. ನಿನ್ನೆಲ್ಲ ಪ್ರಯತ್ನಗಳಿಂದ ಬೆಂಕಿಯಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡು. ನಾವು ಸುಟ್ಟುಹೋದರೆ ಸುಯೋಧನನು ಬಯಸಿದಂತೆಯೇ ಆಗುತ್ತದೆ. ಇದೋ ಅಲ್ಲಿರುವುದು ಆ ದುರಾತ್ಮನ ಸಮೃದ್ಧ ಆಯುಧಾಗಾರ. ಈ ವಿಶಾಲ ಅರಮನೆಯನ್ನು ಅದರ ಗೋಡೆಗೆ ಹೊಂದಿಕೊಂಡೇ ಕಟ್ಟಿಸಿದ್ದಾರೆ. ಈ ಅಶುಭ ಕರ್ಮದಕುರಿತು ವಿದುರನಿಗೆ ಮೊದಲೇ ತಿಳಿದಿತ್ತು. ಆದುದರಿಂದಲೇ ಅವನು ನಮಗೆ ಎಚ್ಚರಿಕೆಯನ್ನು ನೀಡಿದ್ದ. ಮೊದಲೇ ಕ್ಷತ್ತನು ವೀಕ್ಷಿಸಿದ್ದ ಆಪತ್ತು ನಮಗೆ ಈಗ ಬಂದಾಗಿದೆ. ಪುರೋಚನನಿಗೆ ತಿಳಿಯದ ರೀತಿಯಲ್ಲಿ ನಾವು ಇದರಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡು.”

ಹಾಗೆಯೇ ಆಗಲೆಂದು ಹೇಳಿ ಖನಕನು ತನ್ನ ಕೆಲಸದಲ್ಲಿ ನಿರತನಾದನು. ಅವನು ಒಂದು ದೊಡ್ಡ ಗುಂಡಿಯನ್ನು ತೆಗೆದು

ಅದರಲ್ಲಿ ವಿಶಾಲ ಬಿಲವನ್ನು ಅಗೆದನು. ಅವನು ಅದನ್ನು ಮನೆಯ ಮಧ್ಯದಲ್ಲಿ ಅತಿ ದೊಡ್ಡ ಬಾಯಿಯಿಲ್ಲದ ಹಾಗೆ ನಿರ್ಮಿಸಿದನು. ಅದರ ಬಾಯನ್ನು ಭೂಮಿಗೆ ಸಮಾನ ಹಲಗೆಗಳಿಂದ ಮುಚ್ಚಿದನು. ಸದಾ ಅವರ ಗೃಹದ್ವಾರದಲ್ಲಿಯೇ ವಾಸಿಸುತ್ತಿದ್ದ ಅಶುಭ ಪುರೋಚನನ ಭಯದಿಂದ ಅವರು ಅದರ ಬಾಯನ್ನು ಚೆನ್ನಾಗಿ ಮುಚ್ಚಿದರು. ಪಾಂಡವೇಯರೆಲ್ಲರೂ ಆಯುಧಗಳ ಜೊತೆ ಆ ಬಿಲದಲ್ಲಿಯೇ ಮಲಗುತ್ತಿದ್ದರು. ಹಗಲಿನಲ್ಲಿ ಅವರು ಬೇಟೆಗೆಂದು ವನದಿಂದ ವನಕ್ಕೆ ಸಂಚರಿಸುತ್ತಿದ್ದರು. ಅವರು ಅಲ್ಲಿ ವಿಶ್ವಾಸವಿಲ್ಲದವರಾದರೂ ವಿಶ್ವಾಸವಿದ್ದವರಂತೆ, ಅಸಂತುಷ್ಟ-ರಾಗಿದ್ದರೂ ಸಂತುಷ್ಟರಾದವರಂತೆ ಪುರೋಚನನನ್ನು ವಂಚಿಸಿ ಪರಮದುಃಖಿತರಾಗಿ ವಾಸಿಸುತ್ತಿದ್ದರು. ವಿದುರನ ಅಮಾತ್ಯ ಖನಕಸತ್ತಮನನ್ನು ಬಿಟ್ಟು ನಗರವಾಸಿಗಳಲ್ಲಿ ಬೇರೆ ಯಾರೂ ಅವರನ್ನು ಅರ್ಥಮಾಡಿಕೊಳ್ಳಲಿಲ್ಲ.

ಅವರು ಸಂತೋಷದಿಂದ ಏನೂ ಸಂಶಯವಿಲ್ಲದವರ ಹಾಗೆ ಒಂದು ವರ್ಷ ಸಂಪೂರ್ಣವಾಗಿ ಕಳೆದುದನ್ನು ನೋಡಿದ ಪುರೋಚನನು ಹರ್ಷಿತನಾದನು. ಹಾಗೆ ಪುರೋಚನನು ಸಂತೋಷದಿಂದಿರಲು ಕೌಂತೇಯ ಧರ್ಮವಿದ ಯುಧಿಷ್ಠಿರನು ಭೀಮಸೇನ, ಅರ್ಜುನ ಮತ್ತು ಯಮಳರಿಗೆ ಹೇಳಿದನು:

"ಪಾಪಿ ಪುರೋಚನನು ನಮಗೇನೂ ಸಂಶಯವಿಲ್ಲವೆಂದು

ನಂಬಿದ್ದಾನೆ. ಆ ನೃಶಂಸಾತ್ಮನನ್ನು ಮೋಸಗೊಳಿಸಿ ಪಲಾಯನಮಾಡುವ ಕಾಲವು ಪ್ರಾಪ್ತವಾಗಿದೆ ಎಂದು ನನ್ನ ಅಭಿಪ್ರಾಯ. ಆಯುಧಾಗರಕ್ಕೆ ಬೆಂಕಿಯನ್ನಿಟ್ಟು ಪುರೋಚನನನ್ನೂ ಸುಟ್ಟು ಬಿಡೋಣ. ಆರು ಜನರನ್ನು ಇಲ್ಲಿ ಇರಿಸಿ, ನಾವು ಯಾರಿಗೂ ಕಾಣಿಸದ ಹಾಗೆ ತಪ್ಪಿಸಿಕೊಳ್ಳೋಣ."

ಆಗ ದಾನದ ನೆಪದಿಂದ ಕುಂತಿಯು ಒಂದು ರಾತ್ರಿ ಬ್ರಾಹ್ಮಣರಿಗೆ ಮಹಾ ಭೋಜನವನ್ನು ನಿಯೋಜಿಸಿದಳು. ಬಂದಿದ್ದ ಸ್ತ್ರೀಯರು ಯಥೇಚ್ಛವಾಗಿ ತಿಂದು ಕುಡಿದು ವಿಹರಿಸಿದರು. ನಂತರ ಮಾಧವಿಯ ಅನುಜ್ಞೆಯನ್ನು ಪಡೆದು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಅನ್ನವನ್ನು ಬೇಡಿಕೊಂಡು ಕಾಲಚೋದಿತ ನಿಷಾದಿಯೋರ್ವಳು ತನ್ನ ಐವರು ಪುತ್ರರೊಂದಿಗೆ ಆ ಭೋಜನಕ್ಕೆ ಬಂದಿದ್ದಳು. ಅವಳು ಮತ್ತು ಅವಳ ಪುತ್ರರು ಮದಿರವನ್ನು ಕುಡಿದು ಅಮಲಿನಿಂದ ಮದವಿಹ್ವಲರಾದರು. ಮಕ್ಕಳೂ ಕೂಡಿ ಅವರೆಲ್ಲರೂ ಅಲ್ಲಿಯೇ ಉಳಿದರು. ಅವರು ಸತ್ತವರಂತೆ ಹೊರಗಿನ ಜ್ಞಾನವೇ ಇಲ್ಲದೇ ಮಲಗಿದ್ದರು. ಆಗ ಭಿರುಗಾಳಿ ಬೀಸುತ್ತಿರಲು ಜನರೆಲ್ಲ ರಾತ್ರಿ ಮಲಗಿರಲು ಭೀಮನು ಪುರೋಚನನು ಮಲಗಿದ್ದಲ್ಲಿ ಬೆಂಕಿಯನ್ನಿಟ್ಟನು. ಆಗ ಜೋರಾಗಿ ಉರಿಯುತ್ತಿರುವ ಬೆಂಕಿಯ ಶಬ್ಧದಿಂದ ಜನರೆಲ್ಲರಿಗೂ ಎಚ್ಚರವಾಯಿತು. ಪೌರರು ಹೇಳಿದರು:




> “ದುರ್ಯೋಧನನ ಆಜ್ಞೆಯಂತೆ ಆ ಪಾಪಿ ಅಕೃತಬುದ್ಧಿ ಪುರೋಚನನು ಈ ಮನೆಯನ್ನು ಕಟ್ಟಿ ತಾನೇ ಅದರಲ್ಲಿ ಸುಟ್ಟುಹೋದ. ಮಂತ್ರಿಗಳ ಮೂಲಕ ಬಾಲಕ ಶುದ್ಧ ಪಾಂಡವರನ್ನು ಸುಟ್ಟುಹಾಕಿದ ಧೃತರಾಷ್ಟ್ರನ ಕೆಟ್ಟ ಬುದ್ಧಿಗೆ ಧಿಕ್ಕಾರ! ವಿಶ್ವಾಸದಿಂದಿದ್ದ ಆ ಮುಗ್ಧ ನರೋತ್ತಮರನ್ನು ಸುಡುವುದರೊಂದಿಗೆ ಆ ಅತಿದುರ್ಮತಿ ಪಾಪಾತ್ಮನೂ ಸುಟ್ಟು ಹೋಗಿದ್ದುದು ಒಳ್ಳೆಯದೇ ಆಯಿತು.”

ಆ ರಾತ್ರಿ ಮನೆಯನ್ನು ಸುತ್ತುವರೆದಿದ್ದ ವಾರಣಾವತದ ಜನರು ಈ

ರೀತಿ ವಿಲಪಿಸಿದರು.

ದುಃಖಿತ ಪಾಂಡವರು ತಮ್ಮ ತಾಯಿಯೊಂದಿಗೆ ಬಿಲದ ಮೂಲಕ ಹೊರಟು ಗುಟ್ಟಾಗಿ ಯಾರಿಗೂ ಕಾಣದಹಾಗೆ ಹೋದರು. ಆದರೆ ನಿದ್ದೆಯು ಕಡಿಮೆಯಾಗಿದ್ದುದರಿಂದ ಮತ್ತು ಭಯದಿಂದ ತಾಯಿಯೊಂದಿಗಿದ್ದ ಪರಂತಪ ಪಾಂಡವರಿಗೆ ಬೇಗ ಬೇಗ ಹೋಗಲು ಸಾಧ್ಯವಾಗಲಿಲ್ಲ. ಆಗ ಭೀಮವೇಗಪರಾಕ್ರಮಿ ಭೀಮಸೇನನು ತಾಯಿಯನ್ನೂ ಮತ್ತು ಭ್ರಾತೃಗಳೆಲ್ಲರನ್ನೂ ಎತ್ತಿಕೊಂಡು ನಡೆಯತೊಡಗಿದನು. ಆ ವೀರನು ತಾಯಿಯನ್ನು ಭುಜದಮೇಲೇರಿಸಿಕೊಂಡನು, ಯಮಳರನ್ನು ಸೊಂಟದ ಮೇಲಿರಿಸಿಕೊಂಡನು, ಮತ್ತು ಮಹಾಬಲಶಾಲಿ ಪಾರ್ಥರೀರ್ವರನ್ನೂ ಕೈಗಳಲ್ಲಿ ಎತ್ತಿ ಹಿಡಿದನು. ತನ್ನ ವೇಗದಿಂದ ಮರಗಳನ್ನು ಬೀಳಿಸಿದನು ಮತ್ತು ತನ್ನ ಹೆಜ್ಜೆಗಳಿಂದ ನೆಲವನ್ನು ತುಳಿದು ತತ್ತರಿಸಿದನು. ಈ ರೀತಿ ತೇಜಸ್ವಿ ವೃಕೋದರನು ಭಿರುಗಾಳಿಯಂತೆ ಮುನ್ನುಗ್ಗಿದನು.

ರಾತ್ರಿಯು ಕಳೆದ ನಂತರ ನಗರದ ಎಲ್ಲ ಜನರೂ ಬೇಗನೆ ಅಲ್ಲಿಗೆ ಬಂದು ಪಾಂಡುನಂದರನ್ನು ಹುಡುಕ ತೊಡಗಿದರು. ಬೆಂಕಿಯ ಉರಿಯನ್ನು ಆರಿಸಿದ ನಂತರ ಆ ಜನರು ಅದೊಂದು ಜಾತುಗೃಹವಾಗಿತ್ತು ಮತ್ತು ಅದರಲ್ಲಿ ಅಮಾತ್ಯ ಪುರೋಚನನೂ ಸುಟ್ಟು ಹೋಗಿದ್ದಾನೆ ಎನ್ನುವುದನ್ನು ಕಂಡರು.

> “ಇದು ಪಾಂಡವರ ವಿನಾಶಕ್ಕಾಗಿ ದುರ್ಯೋಧನನು ನಡೆಸಿದ ಪಾಪ ಕರ್ಮ !”

ಎಂದು ಕೂಗಾಡಿದರು.

> “ಈ ರೀತಿ ದಾಯಾದಿ ಪಾಂಡುಪುತ್ರರನ್ನು ಸುಟ್ಟುಹಾಕಿದ ಧಾರ್ತರಾಷ್ಟ್ರನ ಈ ಕೃತ್ಯವು ಧೃತರಾಷ್ಟ್ರನಿಗೆ ನಿಸ್ಸಂಶಯವಾಗಿಯೂ ತಿಳಿದಿತ್ತು. ಆದರೂ ಅವನು ಇದನ್ನು ನಿಲ್ಲಿಸಲಿಲ್ಲ. ನಿಜವಾಗಿ ಶಾಂತನವ ಭೀಷ್ಮನಾಗಲೀ, ದ್ರೋಣ, ವಿದುರ, ಕೃಪ ಮತ್ತು ಅನ್ಯ ಕೌರವರಾಗಲೀ ಯಾರೂ ಧರ್ಮವನ್ನು ಅನುಸರಿಸುತ್ತಿಲ್ಲ. ಪಾಂಡವರನ್ನು ಸುಟ್ಟುಹಾಕುವ ನಿನ್ನ ಈ ಸಂಚು ಸಫಲವಾಯಿತು ಎಂದು ಆ ದುರಾತ್ಮ ಧೃತರಾಷ್ಟ್ರನಿಗೆ ಸಂದೇಶವನ್ನು ಕಳಿಸೋಣ.”

ಬೆಂಕಿಯಲ್ಲಿ ಪಾಂಡವರನ್ನು ಹುಡುಕುತ್ತಿದ್ದಾಗ ಮುಗ್ಧ ನಿಷಾದಿ ಮತ್ತು ಅವಳ ಐವರು ಪುತ್ರರು ಸುಟ್ಟುಹೋಗಿದ್ದುದನ್ನು ಕಂಡರು. ಮನೆಯನ್ನು ಹುಡುಕುವಾಗ ಅದೇ ಖನಕನು ಆ ಬಿಲವನ್ನು ಸಂಪೂರ್ಣವಾಗಿ ಕಸದಿಂದ ಮುಚ್ಚಿ, ಇತರ ಜನರಿಗೆ ಕಾಣದಹಾಗೆ ಮಾಡಿದನು. ನಂತರ ನಾಗರೀಕರು ಪಾಂಡವರು ಮತ್ತು ಅಮಾತ್ಯ ಪುರೋಚನ ಅಗ್ನಿಯಲ್ಲಿ ಸುಟ್ಟುಹೋದರು ಎನ್ನುವ ವಿಷಯವನ್ನು ಧೃತರಾಷ್ಟ್ರನಿಗೆ ಕಳುಹಿಸಿದರು.

ರಾಜ ಧೃತರಾಷ್ಟ್ರನು ಪಾಂಡುಪುತ್ರರ ಮಹಾ ಅಪ್ರಿಯ ವಿನಾಶವನ್ನು

ಕೇಳಿ ಬಹು ದುಃಖಿತನಾಗಿ ವಿಲಪಿಸಿದನು.

> “ವಿಶೇಷವಾಗಿ ಅವನ ವೀರರು ಮಾತೆಯ ಸಹಿತ ಸುಟ್ಟುಹೋದ ನಂತರ ಈಗ ನನ್ನ ಸುದುರ್ಲಭ ತಮ್ಮ ರಾಜ ಪಾಂಡುವು ಮೃತನಾದ. ಜನರು ಶೀಘ್ರವೇ ವಾರಣಾವತ ನಗರಕ್ಕೆ ಹೋಗಿ ಆ ವೀರರಿಗೆ ಮತ್ತು ಕುಂತಿರಾಜಸುತೆಗೆ ಸಂಸ್ಕಾರಕ್ರಿಯೆಗಳನ್ನು ಮಾಡಲಿ. ಅವರ ಅಸ್ತಿಗಳಿಗೆ ಶುಭ್ರ ದೊಡ್ಡ ಕುಂಡಗಳನ್ನು ತಯಾರಿಸಿ ಅಲ್ಲಿ ಮೃತರಾದವರ ಸುಹೃದಯರು ಅವರನ್ನು ಸತ್ಕರಿಸಲಿ. ಈ ಗತಿಯನ್ನು ಹೊಂದಿದ ಪಾಂಡವರು ಮತ್ತು ಕುಂತಿಗೆ ನನ್ನಿಂದ ಏನೆಲ್ಲ ಮಾಡುವುದೋ ಹಿತವೋ ಮತ್ತು ಧನಗಳಿಂದ ಶಖ್ಯವೋ ಅವೆಲ್ಲವನ್ನು ಮಾಡಬೇಕು.”

ಹೀಗೆಂದ ಅಂಬಿಕಾ ಸುತ ಧೃತರಾಷ್ಟ್ರನು ತನ್ನ ಕುಲದವರಿಂದ ಸುತ್ತುವರೆಯಲ್ಪಟ್ಟು ಪಾಂಡುಪುತ್ರರಿಗೆ ತರ್ಪಣವನ್ನಿತ್ತನು. ಶೋಕಪರಾಯಣ ಸರ್ವ ಕೌರವರೂ ದುಃಖಿತರಾಗಿ ರೋದಿಸಿದರು. ಆದರೆ ಅವರಿಗಿಂಥ ಹೆಚ್ಚು ತಿಳಿದಿದ್ದ ವಿದುರನು ಸ್ವಲ್ಪವೇ ಶೋಕವನ್ನು ವ್ಯಕ್ತಪಡಿಸಿದನು.

ಪಾಂಡವರಾದರೂ ವಾರಣಾವತ ನಗರವನ್ನು ಬಿಟ್ಟು ವೇಗದಲ್ಲಿ ದಕ್ಷಿಣ ದಿಕ್ಕಿನ ಮುಖವಾಗಿ ಪ್ರಯಾಣಮಾಡಿದರು. ನಕ್ಷತ್ರಗಳ ಚಿಹ್ನೆಗಳಿಂದ ದಾರಿಯನ್ನು ತಿಳಿಯುತ್ತಾ ಅತಿ ಕಷ್ಟದಿಂದ

ದಕ್ಷಿಣಾಭಿಮುಖವಾಗಿ ಹೋಗುತ್ತಾ ಗಹನ ವನವೊಂದನ್ನು ಸಮೀಪಿಸಿದರು. ಪಾಂಡುನಂದನರು ಆಯಾಸಗೊಂಡಿದ್ದರು, ಬಾಯಾರಿಕೆಯಿಂದ ಬಳಲಿದ್ದರು ಮತ್ತು ನಿದ್ದೆಯಿಂದ ಕುರುಡರಾಗಿದ್ದರು. ಪುನಃ ಅವರು ಮಹಾವೀರ ಭೀಮಸೇನನಿಗೆ ಹೇಳಿದರು:

> "ಈ ಗಹನ ವನದಲ್ಲಿ ಇರುವುದಕ್ಕಿಂದ ಕಷ್ಟತರವಾದುದ್ದಾದರೂ ಏನಿದೆ? ಯಾವ ದಿಕ್ಕೂ ನಮಗೆ ತಿಳಿಯುತ್ತಿಲ್ಲ ಮತ್ತು ಮುಂದುವರೆಯಲು ಶಕ್ತಿಯೂ ಇಲ್ಲವಾಗಿದೆ. ಆ ಪಾಪಿ ಪುರೋಚನನು ಸುಟ್ಟು ಸತ್ತನೋ ಇಲ್ಲವೋ ಎಂದೂ ನಮಗೆ ತಿಳಿಯದು. ಹೇಗೆತಾನೆ ನಾವು ಈ ಭಯದಿಂದ ಯಾರಿಗೂ ಕಾಣದ ರೀತಿಯಲ್ಲಿ ತಪ್ಪಿಸಿಕೊಳ್ಳಬಹುದು? ಮೊದಲು ಮಾಡಿದಂತೆ ನಮ್ಮನ್ನು ಪುನಃ ಎತ್ತಿಕೋ. ನಮ್ಮೆಲ್ಲರಲ್ಲಿ ನೀನೊಬ್ಬನೇ ವಾಯುವಿನಷ್ಟು ಬಲವಂತನಾಗಿದ್ದೀಯೆ."

ಧರ್ಮರಾಜನು ಹೀಗೆ ಹೇಳಲು ಮಹಾಬಲಿ ಭೀಮಸೇನನು ಕುಂತಿ ಮತ್ತು ಭ್ರಾತೃಗಳನ್ನು ಎತ್ತಿಕೊಂಡು ಹೊರಟನು.

ಆ ವಿಕ್ರಮನು ವೇಗವಾಗಿ ಹೋಗುತ್ತಿರಲಾಗಿ ಅವನ ತೊಡೆಗಳ ವೇಗದಿಂದ ಆಷಾಢ ಮತ್ತು ಜ್ಯೇಷ್ಠ ಮಾಸಗಳ ಪ್ರಾರಂಭದಲ್ಲಿ ಕಂಡುಬರುವ ಭಿರುಗಾಳಿಯಂತೆ ಗಾಳಿಯೆದ್ದಿತು. ಅವನು ಹೂವು




ಹಣ್ಣುಗಳಿದ್ದ ಮರಗಳನ್ನು ತುಳಿದು ಹಾಕಿದನು ಮತ್ತು ಅವನ ದಾರಿಯ ಬಳಿಯಲ್ಲಿ ಬೆಳೆದಿದ್ದ ಗಿಡ-ಗಂಟಿಗಳನ್ನು ಇಲ್ಲದಂತೆ ಮಾಡಿದನು. ಹೀಗೆ ಮರಗಳನ್ನು ಉರುಳಿಸಿ ಬೀಳಿಸುತ್ತಾ ಅತಿ ವೇಗದಲ್ಲಿ ಅವನು ಹೋದನು. ಅವನ ವೇಗದಿಂದ ಪಾಂಡವರು ಮೂರ್ಛಿತರಾದಂತಾದರು. ದೂರ ದೂರದಲ್ಲಿ ದಡಗಳನ್ನು ಹೊಂದಿರುವ ಹಲವಾರು ನದಿಗಳನ್ನು ತಮ್ಮ ಭುಜಗಳನ್ನೇ ದೋಣಿಯನ್ನಾಗಿ ಮಾಡಿಕೊಂಡು ದಾಟಿದರು. ಮತ್ತು ದಾರಿಯಲ್ಲಿ ಧಾರ್ತರಾಷ್ಟ್ರನ ಭಯದಿಂದ ವೇಷವನ್ನು ಬದಲಾಯಿಸಿಕೊಂಡರು. ದುಷ್ಕರವಾದಗಲೆಲ್ಲಾ ಭೀಮಸೇನನು ಸುಕುಮಾರೀ ಯಶಸ್ವಿನೀ

ತಾಯಿಯನ್ನು ಮಾತ್ರ ತನ್ನ ಬೆನ್ನ ಮೇಲೆ ಎತ್ತಿಕೊಂಡು ದಡ ಮತ್ತು ಗುಡ್ಡಬೆಟ್ಟಗಳನ್ನು ಏರುತ್ತಿದ್ದನು. ಸಾಯಂಕಾಲವಾಗುತ್ತಿದ್ದಂತೆ ಭರತರ್ಷಭರು ಗಡ್ಡೆಗೆಣಸುಗಳು, ಫಲಗಳು ಮತ್ತು ನೀರಿನ ಅಭಾವವಾಗಿದ್ದ ಕ್ರೂರ ಪಕ್ಷಿಮೃಗಗಳಿಂದ ಕೂಡಿದ ಘೋರ ವನವೊಂದರ ಸಮೀಪ ತಲುಪಿದರು. ಘೋರ ಕತ್ತಲೆಯು ಆವರಿಸುತ್ತಿದ್ದಂತೆ ಮೃಗಪಕ್ಷಿಗಳು ದಾರುಣರಾಗಿ ಕಂಡವು; ಅಕಾಲಿಕವಾದ ಭಿರುಗಾಳಿಯಿಂದ ಸರ್ವ ದಿಕ್ಕುಗಳೂ ಕಾಣದಂತಾದವು. ಆಯಾಸ, ಬಾಯಾರಿಕೆ ಮತ್ತು ನಿದ್ದೆಯು ಆ ಕೌರವರನ್ನು ಪೀಡಿಸಿತು ಮತ್ತು ಇನ್ನು ಮುಂದುವರೆಯಲು ಅವರಿಗೆ ಅಸಾಧ್ಯವೆನಿಸಿತು. ಆಗ ಭೀಮನು ಆ ಘೋರ ವನವನ್ನು ಪ್ರವೇಶಿಸಿ ವಿಶಾಲ ಏಕಾಂತಪ್ರದೇಶದಲ್ಲಿ ವಿಪುಲ ನೆರಳನ್ನು ನೀಡುತ್ತಿದ್ದ ರಮಣೀಯ ನ್ಯಗ್ರೋಧ ವೃಕ್ಷವನ್ನು ಕಂಡನು. ಅವರನ್ನೆಲ್ಲ ಅಲ್ಲಿಯೇ ಕೆಳಗಿಳಿಸಿ ಭರತರ್ಷಭನು ಹೇಳಿದನು:

> "ನೀವೆಲ್ಲ ಇಲ್ಲಿಯೇ ವಿಶ್ರಮಿಸಿ. ನಾನು ನೀರನ್ನು ಹುಡುಕಿ ತರುತ್ತೇನೆ. ಸರೋವರದಲ್ಲಿ ವಾಸಿಸುವ ಸಾರಸಗಳ ಮಧುರ ಕೂಗನ್ನು ಕೇಳುತ್ತಿದ್ದೇನೆ. ಖಂಡಿತವಾಗಿಯೂ ಅಲ್ಲಿ ವಿಶಾಲವಾದ ಸರೋವರವೊಂದು ಇದೆ ಎಂದು ನನ್ನ ಅಭಿಪ್ರಾಯ."

ಜ್ಯೇಷ್ಠ ಅಣ್ಣನಿಂದ ಹೋಗಲು ಅನುಮತಿಯನ್ನು ಪಡೆದ ಅವನು ಆ

ಜಲಚಾರಿಣಿಗಳು ಕೂಗುತ್ತಿರುವಲ್ಲಿಗೆ ಹೋದನು. ಅಲ್ಲಿ ಆ ಭರತರ್ಷಭನು ನೀರನ್ನು ಕುಡಿದು, ಸ್ನಾನಮಾಡಿ ತನ್ನ ಉತ್ತರೀಯದಿಂದ ನೀರನ್ನು ಹಿಡಿದು ತಂದನು. ಹತ್ತಿರದಲ್ಲಿಯೇ ಇದ್ದ ತಾಯಿಯ ಕಡೆ ಬೇಗನೆ ಹಿಂದಿರುಗಿದನು. ಅಲ್ಲಿ ಬರಿಯ ನೆಲದಮೇಲೆ ಮಲಗಿದ್ದ ತನ್ನ ತಾಯಿ ಮತ್ತು ಸಹೋದರರನ್ನು ಕಂಡು ವೃಕೋದರನು ದುಃಖಿತನಾಗಿ ವಿಲಪಿಸಿದನು.

> "ಹಿಂದೆ ವಾರಣಾವತದಲ್ಲಿ ಶ್ರೇಷ್ಠ ಹಾಸಿಗೆಗಳ ಮೇಲೆ ನಿದ್ದೆಯನ್ನೇ ಪಡೆಯದಿದ್ದ ಇವರು ಈಗ ನೆಲದಮೇಲೆ ಮಲಗಿ ನಿದ್ದೆಹೋಗಿದ್ದಾರಲ್ಲ? ಶತ್ರುಸಂಘಾವಮರ್ದಿನ ವಾಸುದೇವನ ತಂಗಿ, ಸರ್ವಲಕ್ಷಣಪೂಜಿತೆ ಕುಂತಿಭೋಜಸುತೆ ಕುಂತಿ, ವಿಚಿತ್ರವೀರ್ಯನ ಸೊಸೆ, ಮಹಾತ್ಮ ಪಾಂಡುವಿನ ಭಾರ್ಯೆ, ನಿತ್ಯವೂ ಅರಮನೆಯಲ್ಲಿ ಮಲಗುವ ಪುಂಡರೀಕಾಂತರಪ್ರಭೆ, ಮಹಾ ಸ್ತ್ರೀಯರಲ್ಲಿ ಅತೀವ ಸುಕುಮಾರಿ, ಬೆಲೆಬಾಳುವ ಹಾಸಿಗೆಯ ಮೇಲೆ ಮಲಗುವವಳು ಈಗ ಅಯೋಚಿತ ನೆಲದ ಮೇಲೆ ಮಲಗಿದ್ದುದನ್ನು ನೋಡು! ಧರ್ಮ, ಇಂದ್ರ ಮತ್ತು ವಾಯುವಿನಿಂದ ಈ ಮಕ್ಕಳನ್ನು ಪಡೆದ ಅವಳು ಪರಿಶ್ರಾಂತಳಾಗಿ ನೆಲದಮೇಲೆ ಮಲಗಿದ್ದಾಳಲ್ಲ! ಇದಕ್ಕಿಂತಲೂ ಹೆಚ್ಚಾದ ಯಾವ ದೃಷ್ಟತಮ ದುಃಖವನ್ನು

ನನಗೆ ಸಹಿಸಲು ಸಾಧ್ಯ? ಈ ನರವ್ಯಾಘ್ರರು ಇಂದು ಈ ನೆಲದಮೇಲೆ ಮಲಗಿದ್ದುದ್ದನ್ನು ನೋಡುತ್ತಿದ್ದೇನಲ್ಲ! ಮೂರೂ ಲೋಕಗಳನ್ನೂ ರಾಜ್ಯವನ್ನಾಗಿ ಆಳುವ ಅರ್ಹತೆಯುಳ್ಳ ಈ ಧರ್ಮವಿದ ನೃಪನು ಹೇಗೆ ತಾನೆ ಓರ್ವ ಸಾಮಾನ್ಯನಂತೆ ಆಯಾಸಗೊಂಡು ಭೂಮಿಯ ಮೇಲೆ ಮಲಗಿದ್ದಾನೆ? ಮೋಡದಂತೆ ಕಪ್ಪಾಗಿರುವ, ಭೂಮಿಯಲ್ಲಿರುವ ನರರಲ್ಲಿಯೇ ಅಪ್ರತಿಮನಾಗಿರುವ ಇವನು ಸಾಮಾನ್ಯನೋರ್ವನಂತೆ ಭೂಮಿಯಮೇಲೆ ಮಲಗಿರುವುದು ದುಃಖತರವಲ್ಲವೇ? ಅಶ್ವಿನಿದೇವತೆಗಳಂತೆ ರೂಪಸಂಪನ್ನರಾದ ಈ ಯಮಳರು ಸಾಮಾನ್ಯರಂತೆ ಧರಣೀತಲದಲ್ಲಿ ಮಲಗಿದ್ದಾರಲ್ಲ! ಈ ಲೋಕದಲ್ಲಿ ವಿಷಮರಾಗಿರುವ ಮತ್ತು ಕುಲವನ್ನು ಕೆಡಿಸುವ ಬಂಧುಗಳು ಯಾರೂ ಇಲ್ಲದವನು ಗ್ರಾಮದಲ್ಲಿರುವ ಒಂಟಿ ಮರದಂತೆ ಸುಖವಾದ ಜೀವನವನ್ನು ಜೀವಿಸುತ್ತಾರೆ. ಗ್ರಾಮದಲ್ಲಿ ಒಂಟಿಯಾಗಿರುವ ವೃಕ್ಷವು ಪರ್ಣ ಫಲಪೂರಿತವಾಗಿರುತ್ತದೆ ಯಾಕೆಂದರೆ ಬಂಧುಗಳು ಯಾರನ್ನೂ ಹೊಂದಿರದ ಅದನ್ನು ಪೂಜಿಸುತ್ತಾರೆ. ಬಹಳ ಮಂದಿ ಧರ್ಮಸಂಶ್ರಿತ ಶೂರ ನೆಂಟರನ್ನು ಹೊಂದಿದವರು ಈ ಲೋಕದಲ್ಲಿ ನಿರಾಮಯ ಸುಖ ಜೀವನವನ್ನು ಜೀವಿಸುತ್ತಾರೆ. ಬಾಂಧವರನ್ನು ಮಿತ್ರರನ್ನಾಗಿ ಪಡೆದ

ಮಕ್ಕಳು ಅನ್ಯೋನ್ಯರಿಗೆ ಆಶ್ರಯವನ್ನು ನೀಡುತ್ತಾ ಕಾಡಿನಲ್ಲಿ ಬೆಳೆಯುವ ಮರಗಳಂತೆ ಬಲವಂತರಾಗಿ ಸಮೃದ್ಧ ಜೀವನವನ್ನು ಜೀವಿಸುತ್ತಾರೆ. ಧೃತರಾಷ್ಟ್ರ ಮತ್ತು ಅವನ ದುರಾತ್ಮ ಪುತ್ರನಿಂದ ಹೊರಗಟ್ಟಲ್ಪಟ್ಟ ನಾವು ಅವನೇ ಹೇಳಿ ಮಾಡಿಸಿದ್ದ ಬೆಂಕಿಯನ್ನು ಸ್ವಲ್ಪದರಲ್ಲಿಯೇ ತಪ್ಪಿಸಿಕೊಂಡೆವು. ಆ ಅಗ್ನಿಯಿಂದ ತಪ್ಪಿಸಿಕೊಂಡ ನಾವು ಈಗ ಈ ಮರದ ಆಶ್ರಯವನ್ನು ಬಯಸುತ್ತಿದ್ದೇವೆ. ಈ ಅನುತ್ತಮ ಕ್ಲೇಶವನ್ನು ಪಡೆದ ನಾವು ಯಾವ ದಿಕ್ಕಿನಲ್ಲಿ ಹೋಗಬಲ್ಲೆವು? ಈ ವನದಿಂದ ಹತ್ತಿರದಲ್ಲಿಯೇ ಒಂದು ನಗರವು ಕಂಡುಬರುತ್ತಿದೆ. ಆದರೆ ಅವರು ಮಲಗಿರುವಾಗ ಯಾರಾದರೂ ಒಬ್ಬರು ಎಚ್ಚರವಾಗಿರಬೇಕಲ್ಲ! ನಾನೇ ಎಚ್ಚರವಾಗಿರುತ್ತೇನೆ."

ಆಯಾಸವನ್ನು ತಣಿಸಿ ಎಚ್ಚೆತ್ತ ನಂತರ ಅವರು ನೀರನ್ನು ಕುಡಿಯುತ್ತಾರೆ ಎಂದು ನಿಶ್ಚಯಿಸಿದ ಭೀಮನು ಸ್ವಯಂ ರಾತ್ರಿಯಿಡೀ ಎಚ್ಚೆತ್ತೇ ಇದ್ದನು.

# ಹಿಡಿಂಬವಧ

ವನದಲ್ಲಿ ಪಾಂಡವರು ಮಲಗಿರುವಾಗ, ಆ ವನದಿಂದ ಸ್ವಲ್ಪ ದೂರದಲ್ಲಿಯೇ ಒಂದು ಶಾಲವೃಕ್ಷದಲ್ಲಿ ಹಿಂಡಿಂಬ ಎಂಬ ಹೆಸರಿನ ರಾಕ್ಷಸನು ಮಲಗಿದ್ದನು. ಮಹಾವೀರ, ಮಹಾಬಲಿ, ವಿರೂಪರೂಪಿ, ಪಿಂಗಾಕ್ಷ, ಕರಾಲ, ಘೋರದರ್ಶನ ಕ್ರೂರನು ಮನುಷ್ಯರ ಮಾಂಸವನ್ನು ಭಕ್ಷಿಸುವವನಾಗಿದ್ದನು. ಹಸಿದ ಅವನು ಮಾಂಸವನ್ನು ಬಯಸುತ್ತಿದ್ದಾಗ ಅಲ್ಲಿರುವ ಅವರನ್ನು ನೋಡಿದನು. ಪುನಃ ಪುನಃ ಅವನ ಕಣ್ಣುಗಳು ಅವರೆಡೆಗೇ ತಿರುಗುತ್ತಿರಲು ಅವನು ತನ್ನ ಬೆರಳುಗಳನ್ನು ಮೇಲಕ್ಕೆ ಮಾಡಿ ಹೊಲಸಾದ ತನ್ನ ಕೂದಲುಗಳನ್ನು ಕೆರೆದು ಕೆದರಿ ತನ್ನ ಅಗಲ ಬಾಯಿಯಿಂದ ಆಕಳಿಸಿದನು. ಆಗ ಆ ದುಷ್ಟ ಮಾನುಷಮಾಂಸ ಭಕ್ಷಕ, ಮಹಾಕಾಯ ಮಹಾಬಲಿಯು ಮನುಷ್ಯರ ವಾಸನೆಯನ್ನು ಆಘ್ರಾಣಿಸಿ ತನ್ನ ತಂಗಿಗೆ ಹೇಳಿದನು:

> “ದೀರ್ಘ ಕಾಲದ ನಂತರ ಇಂದು ನನ್ನ ಮನಃಪ್ರಿಯ ಭಕ್ಷವು ದೊರಕಿದೆ. ನನ್ನ ನಾಲಿಗೆಯು ಹಸಿವೆಯಿಂದ ಜೊಲ್ಲು ಸುರಿಸುತ್ತಿದೆ ಮತ್ತು ಬಾಯಿಯ ಸುತ್ತನ್ನೆಲ್ಲಾ ನೆಕ್ಕುತ್ತಿದೆ. ಎಷ್ಟೋ ಸಮಯದಿಂದ ಏನನ್ನೂ ಕಚ್ಚಲು ದೊರೆಯದಿದ್ದ ನನ್ನ ಈ ಎಂಟು ತೀಕ್ಷ್ಣ ದಂಷ್ಟ್ರಗಳು ಆ ದೇಹಗಳಲ್ಲಿರುವ ರುಚಿ ಮಾಂಸಗಳಲ್ಲಿ ಹುಗಿದುಕೊಳ್ಳಲು ಕಾತರಗೊಂಡಿವೆ.

ಆ ಮನುಷ್ಯರನ್ನು ಆಕ್ರಮಿಸಿ ಅವರ ಕಂಠಗಳ ಧಮನಿಯನ್ನು ಹರಿಯುವ ನೊರೆಯುಕ್ತ ಬಿಸಿಬಿಸಿ ಹೊಸರಕ್ತವನ್ನು ಕುಡಿಯುತ್ತೇನೆ. ಹೋಗು! ಈ ವನದಲ್ಲಿ ಮಲಗಿರುವ ಅವರು ಯಾರು ಎಂದು ತಿಳಿದುಕೊಂಡು ಬಾ. ಆ ಮನುಷ್ಯರ ಗಾಢ ವಾಸನೆಯಿಂದಲೇ ನಾನು ತೃಪ್ತನಾಗುತ್ತಿದ್ದೇನೆಂದು ಅನ್ನಿಸುತ್ತದೆ. ಆ ಮನುಷ್ಯರೆಲ್ಲರನ್ನೂ ಕೊಂದು ನನ್ನ ಹತ್ತಿರ ತೆಗೆದುಕೊಂಡು ಬಾ. ನಮ್ಮದಾದ ಈ ಪ್ರದೇಶದಲ್ಲಿ ಮಲಗಿರುವ ಅವರಿಂದ ನಿನಗೆ ಯಾವುದೇ ರೀತಿಯ ಭಯವೂ ಇಲ್ಲ. ಮನುಷ್ಯರ ಈ ಮಾಂಸಗಳಿಂದ ನಮಗಿಷ್ಟವಾದ ಹಾಗೆ ಅಡುಗೆ ಮಾಡಿ ಭಕ್ಷಿಸೋಣ. ಬೇಗನೆ ಹೋಗು ಮತ್ತು ನಾನು ಹೇಳಿದ ಹಾಗೆಯೇ ಮಾಡು."

ಅಣ್ಣನ ಈ ಆಜ್ಞೆಯನ್ನು ಕೇಳಿದ ರಾಕ್ಷಸಿಯು ತಕ್ಷಣವೇ ಪಾಂಡವರಿದ್ದಲ್ಲಿಗೆ ಹೋದಳು. ಅಲ್ಲಿ ಬಂದ ಅವಳು ಪೃಥಳ ಜೊತೆ ಮಲಗಿದ್ದ ಪಾಂಡವರನ್ನು ಮತ್ತು ಎಚ್ಚೆತ್ತಿದ್ದ ಅಪರಾಜಿತ ಭೀಮಸೇನನನ್ನು ನೋಡಿದಳು. ಶಾಲ ವೃಕ್ಷದ ರೆಂಬೆಯಂತೆ ಎತ್ತರವಾಗಿದ್ದ ಆ ಭೀಮಸೇನನನ್ನು ನೋಡಿದಾಕ್ಷಣವೇ ಆ ರಾಕ್ಷಸಿಯು ಭೂವಿಯಲ್ಲಿಯೇ ಅಪ್ರತಿಮ ರೂಪವಂತನಾದ ಅವನನ್ನು ಬಯಸಿದಳು.



REGISTERED No. 671 RAVI-VARMA-PRESS PICTURE DEPOT. भीम आणि हेडंबा. BOMBAY. RAVI-VARMA-PRESS. MALAVLI LONAVLA.

“ಈ ಶ್ಯಾಮವರ್ಣದ ಮಹಾಬಾಹು, ಸಿಂಹಸ್ಕಂಧ, ಮಾಹಾಕಾಂತಿಯುಕ್ತ, ಕಂಬುಗ್ರೀವ, ಪುಷ್ಕರಾಕ್ಷನು ನನಗೆ ಯೋಗ್ಯ ಗಂಡನಾಗುತ್ತಾನೆ. ನಾನು ನನ್ನ ಅಣ್ಣನ ಆ ಕ್ರೂರ ಆಜ್ಞೆಯನ್ನು ನಡೆಸುವುದಿಲ್ಲ. ಪತಿಯ ಮೇಲಿನ ಪ್ರೀತಿಯು ಅಣ್ಣನ ಮೇಲಿನ ಪ್ರೀತಿಗಿಂತ ಹೆಚ್ಚೇ ಅಲ್ಲವೇ? ಇವರನ್ನು ಕೊಂದರೆ ನನಗೆ ಮತ್ತು ಅಣ್ಣನಿಗೆ ಕ್ಷಣಮಾತ್ರದ ತೃಪ್ತಿ ದೊರೆಯಬಹುದು. ಆದರೆ ಇವರನ್ನು ಕೊಲ್ಲದಿದ್ದರೆ ವರ್ಷಾನುಗಟ್ಟಲೆ ನಾನು ತೃಪ್ತಿ ಹೊಂದಬಲ್ಲೆ.”

ಆ ಕಾಮರೂಪಿಣಿಯು ಉತ್ತಮ ಮಾನುಷಿಯ ರೂಪವನ್ನು ಧರಿಸಿ ನಾಚಿಕೊಂಡ ಲತೆಯಂತೆ ಮಹಾಬಾಹು ಭೀಮಸೇನನ ಬಳಿ ಮೆಲ್ಲ ಮೆಲ್ಲಗೆ ಬಂದಳು. ಆ ದಿವ್ಯಾಭರಣಭೂಷಿತೆಯು ಮುಗುಳ್ನಗುತ್ತಾ ಭೀಮಸೇನನಿಗೆ ಹೇಳಿದಳು:

“ಪುರುಷರ್ಷಭ! ನೀನು ಎಲ್ಲಿಂದ ಬಂದಿದ್ದೀಯೇ ಮತ್ತು ನೀನು ಯಾರು? ಇಲ್ಲಿ ಮಲಗಿರುವ ದೇವರೂಪಿ ಈ ಪುರುಷರು ಯಾರು? ಈ ಶ್ಯಾಮವರ್ಣೆ, ತನ್ನ ಮನೆಯಂತೆ ವಿಶ್ವಾಸದಿಂದ ಈ ವನದಲ್ಲಿ ಮಲಗಿರುವ ಈ ಎತ್ತರ ಸುಕುಮಾರಿಯು ನಿನಗೆ ಏನಾಗಬೇಕು? ಈ ಗಹನ ವನವು ರಾಕ್ಷಸರಿಂದ ಸೇರಿದೆ ಮತ್ತು ಇಲ್ಲಿಯೇ ಹತ್ತಿರದಲ್ಲಿ ಹಿಂಡಿಂಬ ಎಂಬ ಹೆಸರಿನ ಪಾಪಾತ್ಮ ರಾಕ್ಷಸನು

ವಾಸಿಸುತ್ತಿದ್ದಾನೆ ಎನ್ನುವುದು ಅವಳಿಗೆ ತಿಳಿದಿಲ್ಲವೇ? ನನ್ನ ಅಣ್ಣ ಆ ರಾಕ್ಷಸನು ದುಷ್ಟಭಾವದಿಂದ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಅವನು ಅಮರೋಪಮ ನಿಮ್ಮ ಮಾಂಸವನ್ನು ಭಕ್ಷಿಸಲು ಬಯಸುತ್ತಾನೆ. ದೇವಗರ್ಭಸಮಪ್ರಭನಾದ ನಿನ್ನನ್ನು ನೋಡಿದಾಕ್ಷಣವೇ ನನ್ನ ಓರ್ವನೇ ಪತಿಯನ್ನಾಗಿ ಹೊಂದಲು ಬಯಸುತ್ತೇನೆ. ನಿನಗೆ ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಇದನ್ನು ತಿಳಿದ ನೀನು ನನಗೆ ಯುಕ್ತವಾದಹಾಗೆ ನಡೆದುಕೋ. ನನ್ನ ಅಂಗಗಳು ಮತ್ತು ಮನಸ್ಸನ್ನು ಕಾಮವು ಆವರಿಸಿದೆ. ನಿನ್ನನ್ನು ಪ್ರೀತಿಸುತ್ತೇನೆ. ನನ್ನನ್ನು ಪ್ರೀತಿಸು. ನಿನ್ನನ್ನು ನಾನು ಆ ನರಭಕ್ಷಕ ರಾಕ್ಷಸನಿಂದ ಉಳಿಸಬಲ್ಲೆ. ನಾವಿಬ್ಬರೂ ಗಿರಿದುರ್ಗಗಳಲ್ಲಿ ವಾಸಿಸೋಣ. ನನ್ನ ಪತಿಯಾಗು. ಅಂತರಿಕ್ಷದಲ್ಲಿ ಸಂಚರಿಸಬಲ್ಲೆ, ಬೇಕಾದಲ್ಲಿ ಹೋಗಬಲ್ಲೆ. ಎಲ್ಲಿ ಬೇಕಾದರಲ್ಲಿ ನನ್ನೊಂದಿಗೆ ಅತುಲ ಪ್ರೀತಿಯನ್ನು ಹೊಂದು."

ಭೀಮನು ಹೇಳಿದನು:

"ರಾಕ್ಷಸಿ! ತಾಯಿಯನ್ನು, ಹಿರಿಯಣ್ಣನನ್ನು, ಮತ್ತು ಕಿರಿಯವರನ್ನು ಪರಿತ್ಯಜಿಸುವನು ಹೇಗೆ ತಾನೆ ಪ್ರಭು ಎನ್ನಿಸಿಕೊಳ್ಳುವನು? ನನ್ನಂಥಹ ಯಾವ ಮನುಷ್ಯನು

ಮಲಗಿರುವ ಈ ಭ್ರಾತೃಗಳನ್ನು ಮತ್ತು ತಾಯಿಯನ್ನು ರಾಕ್ಷಸಭೋಜನವನ್ನಾಗಿ ಕೊಟ್ಟು ಕಾಮಾರ್ತನಾಗಿ ಹೋಗುತ್ತಾನೆ?"

ರಾಕ್ಷಸಿಯು ಹೇಳಿದಳು:

"ನಿನಗೆ ಬೇಕಾದುದನ್ನು ನಾನು ಮಾಡುತ್ತೇನೆ. ಇವರೆಲ್ಲರನ್ನೂ ಎಬ್ಬಿಸು. ಆ ನರಭಕ್ಷಕ ರಾಕ್ಷಸನಿಂದ ನಿಮ್ಮನ್ನು ಉಳಿಸಲು ಬಯಸುತ್ತೇನೆ."

ಭೀಮನು ಹೇಳಿದನು:

"ರಾಕ್ಷಸಿ! ನನ್ನ ತಾಯಿ ಮತ್ತು ಸಹೋದರರು ವನದಲ್ಲಿ ಸುಖವಾಗಿ ನಿದ್ರಿಸುತ್ತಿದ್ದಾರೆ. ನಿನ್ನ ಆ ದುರಾತ್ಮ ಅಣ್ಣನ ಭಯದಿಂದ ನಾನು ಅವರನ್ನು ಎಬ್ಬಿಸಲಾರೆ. ನನ್ನ ಪರಾಕ್ರಮವನ್ನು ಎದುರಿಸುವ ಯಾವ ರಾಕ್ಷಸನೂ ಇಲ್ಲ, ಮನುಷ್ಯನೂ ಇಲ್ಲ, ಗಂಧರ್ವನೂ ಇಲ್ಲ ಅಥವಾ ಯಕ್ಷನೂ ಇಲ್ಲ. ಇಲ್ಲಿಯೇ ನಿಲ್ಲು ಅಥವಾ ಹೊರಟು ಹೋಗು. ನಿನಗಿಷ್ಟ ಬಂದ ಹಾಗೆ ಮಾಡು. ಅಥವಾ ನಿನ್ನ ಆ ನರಭಕ್ಷಕ ಅಣ್ಣನನ್ನು ಕಳುಹಿಸಿಕೊಡು."

ತನ್ನ ತಂಗಿಯು ಹೋಗಿ ತುಂಬಾ ಹೊತ್ತಾಯಿತೆಂದು ತಿಳಿದ ರಾಕ್ಷಸೇಶ್ವರ ಹಿಡಿಂಬನು ಮರದಿಂದ ಕೆಳಗಿಳಿದು ಪಾಂಡವನಿದ್ದಲ್ಲಿಗೆ

ಬಂದನು. ಆ ಮಹಾಬಲನ ಕಣ್ಣುಗಳು ಕೆಂಪಾಗಿದ್ದವು, ಬಾಹುಗಳು ಬಲವಾಗಿದ್ದವು, ಕೂದಲು ಎದ್ದು ನಿಂತಿದ್ದವು, ಮಳೆಯ ಮೋಡದಂತೆ ದಟ್ಟನಾಗಿದ್ದನು, ಹಲ್ಲುಗಳು ಮೊನಚಾಗಿದ್ದವು ಮತ್ತು ಮುಖವು ಪ್ರಜ್ಜ್ವಲಿಸುತ್ತಿತ್ತು. ಮೇಲೆರಗುತ್ತಾನೋ ಎನ್ನುವಂತಿರುವ ಆ ವಿಕೃತದರ್ಶನನನ್ನು ನೋಡಿ ಹಿಡಿಂಬಿಯು ನಡುಗುತ್ತಾ ಭೀಮಸೇನನಿಗೆ ಹೇಳಿದಳು:

> "ಇಗೋ ದುಷ್ಟಾತ್ಮ ನರಭಕ್ಷಕನು ಕೋಪಗೊಂಡು ಬರುತ್ತಿದ್ದಾನೆ. ನೀನು ಮತ್ತು ನಿನ್ನ ಸಹೋದರರು ನಾನು ಹೇಳಿದ ಹಾಗೆ ಮಾಡಿ. ರಾಕ್ಷಸರ ಬಲಸಮನ್ವಿತೆ ನಾನು ಬೇಕಾದಲ್ಲಿ ಹೋಗಬಲ್ಲೆ. ನನ್ನ ಸೊಂಟದ ಮೇಲೇರು. ನಿನ್ನನ್ನು ಆಕಾಶ ಮಾರ್ಗದಲ್ಲಿ ಕರೆದೊಯ್ಯುತ್ತೇನೆ. ಮಲಗಿಕೊಂಡಿರುವ ನಿನ್ನ ಈ ತಾಯಿ ಮತ್ತು ಸಹೋದರರನ್ನು ಎಚ್ಚರಿಸು. ನಿಮ್ಮೆಲ್ಲರನ್ನೂ ನಾನು ಆಕಾಶ ಮಾರ್ಗವಾಗಿ ಕರೆದೊಯ್ಯುತ್ತೇನೆ."

ಭೀಮನು ಹೇಳಿದನು:

> "ವಿಪುಲಶ್ರೋಣಿ! ಹೆದರದಿರು. ನಾನಿಲ್ಲಿ ನಿಂತಿರುವಾಗ ಯಾರೂ ಯಾವುದೇರೀತಿಯ ಹಾನಿಯನ್ನುಂಟುಮಾಡುವುದಿಲ್ಲ. ನಿನ್ನ ಕಣ್ಣುಗಳೆದುರೇ ಅವನನ್ನು ಕೊಂದು ಹಾಕುತ್ತೇನೆ. ಈ ರಾಕ್ಷಸಾಧಮನು

ಬಲದಲ್ಲಿ ನನ್ನ ಸರಿಸಾಟಿಯೇನಲ್ಲ. ರಾಕ್ಷಸರೆಲ್ಲ ಒಂದು ಸೇರಿದರೂ ಯುದ್ಧದಲ್ಲಿ ನನ್ನನ್ನು ಎದುರಿಸಲು ಸಾಧ್ಯವಿಲ್ಲ. ಆನೆಯ ಸೊಂಡಿಲಿನಂತೆ ಗೋಲಾಕಾರದಲ್ಲಿರುವ ಈ ನನ್ನ ಬಾಹುಗಳನ್ನು ನೋಡು. ಪರಿಘಗಳಂತಿರುವ ನನ್ನ ಈ ತೊಡೆಗಳನ್ನು ನೋಡು ಮತ್ತು ಗಟ್ಟಿಯಾದ ನನ್ನ ಈ ಎದೆಯನ್ನು ನೋಡು. ಇಂದ್ರನಂತಿರುವ ನನ್ನ ವಿಕ್ರಮವನ್ನು ಇಂದು ನೀನು ನೋಡುವೆ! ನಾನೋರ್ವ ಕೇವಲ ಮನುಷ್ಯನೆಂದು ತಿಳಿದು ಕಡೆಗಾಣಿಸಬೇಡ.”

ಹಿಡಿಂಬೆಯು ಹೇಳಿದಳು:

“ನರವ್ಯಾಘ್ರ! ದೇವರೂಪಿಣಿ ನಿನ್ನನ್ನು ನಾನು ಕಡೆಗಣಿಸುತ್ತಿಲ್ಲ. ಈ ರಾಕ್ಷಸನು ಮನುಷ್ಯರ ಮೇಲೆ ಯಾವರೀತಿ ಧಾಳಿ ಮಾಡುತ್ತಾನೆ ಎನ್ನುವುದನ್ನು ನಾನು ಮೊದಲೇ ನೋಡಿದ್ದೇನೆ.”

ಅವಳು ಈ ರೀತಿ ಭೀಮಸೇನನೊಂದಿಗೆ ಮಾತನಾಡುತ್ತಿರುವಾಗ ಆ ನರಭಕ್ಷಕ ರಾಕ್ಷಸನು ಕೇಳಿ ಕೃದ್ಧನಾದನು. ಹಿಡಿಂಬನು ಅವಳು ಮಾನುಷ ರೂಪವನ್ನು ಧರಿಸಿದ್ದುದನ್ನು ನೋಡಿದನು: ತಲೆಗೆ ಹೂಗಳನ್ನು ಮುಡಿದಿದ್ದಳು, ಅವಳ ಮುಖವು ಚಂದ್ರನ ಕಾಂತಿಯನ್ನು ಹೊಂದಿತ್ತು, ಸುಂದರ ಕಣ್ಣುಗಳನ್ನು, ಹುಬ್ಬುಗಳನ್ನು, ಮೂಗು ಮತ್ತು ಕೂದಲು, ಸುಕುಮಾರ ಉಗುರುಗಳು ಮತ್ತು ಚರ್ಮ, ಸರ್ವಾಭರಣ

ಸಂಯುಕ್ತಳಾಗಿ, ಸೂಕ್ಷ್ಮ ವಸ್ತ್ರವನ್ನು ಧರಿಸಿದ್ದಳು. ವಿಭ್ರಾಂತಿಗೊಳಿಸುವ ಸುಮನೋಹರ ಮಾನುಷಿಯ ರೂಪದಲ್ಲಿದ್ದ ಅವಳು ಆ ಪುರುಷನನ್ನು ಕಾಮಿಸುತ್ತಿದ್ದಾಳೆ ಎಂದು ಶಂಕಿಸಿ ಆ ನರಭಕ್ಷಕನು ಕೋಪಗೊಂಡನು. ರಾಕ್ಷಸನು ತನ್ನ ತಂಗಿಯ ಮೇಲೆ ಸಂಕೃದ್ಧನಾಗಿ ಅವನ ದೊಡ್ಡ ಕಣ್ಣುಗಳನ್ನು ತೆರೆದು ಅವಳಿಗೆ ಹೇಳಿದನು:

> "ನಾನು ಹಸಿದಿರುವಾಗ ಯಾವ ದುರ್ಮತಿಯು ವಿಘ್ನವನ್ನು ತರುತ್ತಿದ್ದಾಳೆ! ಹಿಂಡಿಂಬೇ! ನನ್ನ ಕೋಪದ ಸ್ವಲ್ಪವೂ ಭಯವಿಲ್ಲವೇ ನಿನಗೆ? ನಿನ್ನ ಬುದ್ಧಿಯನ್ನು ಕಳೆದುಕೊಂಡುಬಿಟ್ಟಿದ್ದೀಯಾ? ಪುರುಷನ ಹಿಂದೆ ಬಿದ್ದು ನನಗಿಷ್ಟವಾಗಿಲ್ಲದ್ದನ್ನು ಮಾಡುತ್ತಿರುವ ನಿನಗೆ ಧಿಕ್ಕಾರ! ಹಿಂದಿನ ಎಲ್ಲ ರಾಕ್ಷಸೇಂದ್ರರಿಗೆ ನೀನೊಬ್ಬಳು ಕಳಂಕಿ! ಯಾರಿಗೋಸ್ಕರ ನೀನು ನನ್ನ ವಿರುದ್ಧವಾಗಿ ನಡೆದುಕೊಳ್ಳುತ್ತಿರುವೆಯೋ ಅವರೆಲ್ಲರನ್ನೂ ಮತ್ತು ನಿನ್ನನ್ನೂ ಈ ಕ್ಷಣವೇ ಕೊಂದುಹಾಕುತ್ತೇನೆ."

ಹೀಗೆ ಹೇಳಿ ಲೋಹಿತಾಕ್ಷ ಹಿಂಡಿಂಬನು ಹಲ್ಲುಗಳನ್ನು ಕಡಿಯುತ್ತಾ ಹಿಡಿಂಬಿಯನ್ನು ವಧಿಸಲು ಅವಳ ಮೇಲೆರಗಿದನು. ತನ್ನ ತಂಗಿಯ ಮೇಲೆ ಬೀಳುತ್ತಿರುವ ಅವನನ್ನು ನೋಡಿ ಪ್ರಹರಿಗಳಲ್ಲಿ ಶ್ರೇಷ್ಠ ತೇಜಸ್ವಿ ಭೀಮನು ಅವನನ್ನು ಅವಹೇಳಿಸುತ್ತಾ "ನಿಲ್ಲು! ನಿಲ್ಲು!" ಎಂದು ಕೂಗಿದನು. ತಂಗಿಯ ಮೇಲೆ ಸಿಟ್ಟಿಗೆದ್ದ ಆ ರಾಕ್ಷಸನನ್ನು ನೋಡಿ

ಭೀಮಸೇನನು ನಗುತ್ತಾ ಹೇಳಿದನು:

"ಹಿಡಿಂಬ! ಸುಖವಾಗಿ ಮಲಗಿರುವ ಇವರನ್ನು ಏಕೆ ಎಬ್ಬಿಸುತ್ತಿರುವೆ? ದುರ್ಬುದ್ಧಿ! ಕೂಡಲೇ ನನ್ನನ್ನು ಎದುರಿಸು. ನನ್ನ ಮೇಲೆ ನಿನ್ನ ಪ್ರಹಾರಗಳನ್ನು ಪ್ರಯತ್ನಿಸು. ತಾನೇನೂ ತಪ್ಪು ಮಾಡಿರದ, ವಿಶೇಷವಾಗಿ ಇನ್ನೊಬ್ಬರಿಂದ ಅಪಕೃತಳಾದ ಈ ಸ್ತ್ರೀಯನ್ನು ಹೊಡೆಯಬೇಡ. ಈ ಬಾಲೆಯು ನನ್ನನ್ನು ಬಯಸುತ್ತಿರುವುದು ಅವಳ ವಶದಲ್ಲಿಲ್ಲ ಮತ್ತು ಪಾಪವೂ ಅಲ್ಲ. ಶರೀರಾಂತರದಲ್ಲಿ ಚಲಿಸುವ ಅನಂಗನಿಂದ ಅವಳು ಚೋದಿತಳಾಗಿದ್ದಾಳೆ. ಇವಳು ನಿನ್ನ ತಂಗಿ! ನೀನೇ ಅವಳನ್ನು ಇಲ್ಲಿಗೆ ಕಳುಹಿಸಿದೆ. ನನ್ನ ರೂಪವನ್ನು ನೋಡಿ ಕಾಮಪೀಡಿತಳಾದ ಈ ಭೀರುವು ನಿನ್ನ ಕುಲವನ್ನೇನೂ ದೂಷಿತ ಮಾಡಿಲ್ಲ. ಅನಂಗನಿಂದ ಆದ ದೋಷಕ್ಕಾಗಿ ಈ ಸ್ತ್ರೀಯನ್ನು ನಾನು ಇಲ್ಲಿ ನಿಂತಿರುವಾಗ ಕೊಲ್ಲಲಿಕ್ಕಾಗುವುದಿಲ್ಲ. ನನ್ನೊಡನೆ, ಒಬ್ಬನಿಗೆ ಒಬ್ಬನಾಗಿ ಹೋರಾಡು. ಇಂದು ನಾನೊಬ್ಬನೇ ನಿನ್ನನ್ನು ಯಮಸಾದನಕ್ಕೆ ಕಳುಹಿಸುತ್ತೇನೆ. ಇಂದು ನಿನ್ನ ತಲೆಯನ್ನು, ಆನೆಯೊಂದು ತನ್ನ ಕಾಲಿನಿಂದ ಜೋರಾಗಿ ತುಳಿದಿದೆಯೋ ಅನ್ನುವ ಹಾಗೆ ಅದು ಒಡೆದುಹೋಗುವ ತನಕ ನೆಲಕ್ಕೆ ಹಾಕಿ ಅಚ್ಚುತ್ತೇನೆ. ಇಂದು ಹೋರಾಟದಲ್ಲಿ ನಿನ್ನನ್ನು

ಕೊಂದಾಗ ಹದ್ದುಗಳು ಮತ್ತು ನರಿಗಳು ಸಂತೋಷದಿಂದ ನಿನ್ನ ಅಂಗ-ಅಂಗವನ್ನು ಹರಿದು ತಿನ್ನುತ್ತವೆ. ಒಂದೇ ಒಂದು ಕ್ಷಣದಲ್ಲಿ ಈ ವನವನ್ನು ಅದರ ಕಂಟಕನಿಂದ ಬಿಡುಗಡೆ ಮಾಡುತ್ತೇನೆ. ಮನುಷ್ಯರನ್ನು ಭಕ್ಷಿಸುತ್ತಾ ನೀನು ಬಹಳ ಕಾಲದವರೆಗೆ ಇದನ್ನು ದೂಷಿಸುತ್ತಿದ್ದೀಯೆ. ಇಂದು ಪರ್ವತಾಕಾರದ ಆನೆಯನ್ನು ಒಂದು ಹುಲಿಯು ಎಳೆದಾಡುವಂತೆ ನಿನ್ನನ್ನು ನಾನು ನೆಲದ ಮೇಲೆ ಎಳೆದಾಡಿ ಅಪ್ಪಳಿಸುವುದನ್ನು ನಿನ್ನ ತಂಗಿಯು ನೋಡುವಳು. ಪಾಪಿ ರಾಕ್ಷಸನೇ! ನಿನ್ನನ್ನು ಕೊಂದ ನಂತರ ಈ ವನದಲ್ಲಿ ಸಂಚರಿಸುವ ಪುರುಷರು ನಿನ್ನ ಭಯವಿಲ್ಲದೇ ಸಂಚರಿಸಬಹುದು."

ಹಿಡಿಂಬನು ಹೇಳಿದನು:

"ಮನುಷ್ಯ! ವೃಥಾ ಏಕೆ ಗರ್ಜಿಸುತ್ತಿರುವೆ? ಮೊದಲು ಕೃತ್ಯವನ್ನು ಮಾಡಿ ತೋರಿಸು. ಆಮೇಲೆ ಅದರ ಕುರಿತು ಜಂಬ ಕೊಚ್ಚಿಕೊಳ್ಳುವಿಯಂತೆ! ವಿಳಂಬ ಮಾಡಬೇಡ. ನನ್ನ ಬಲಕ್ಕಿಂಥ ನಿನ್ನನ್ನು ನೀನೇ ಪರಾಕ್ರಮಿಯೆಂದು ತಿಳಿದುಕೊಂಡಿದ್ದರೆ ನನ್ನೊಡನೆ ಹೋರಾಡು. ನಿನಗಿಂಥ ನನ್ನ ಬಲವೇ ಅಧಿಕ ಎನ್ನುವುದನ್ನು ತಿಳಿಯುತ್ತೀಯೆ. ಇವರನ್ನು ನಾನು ಈಗಲೇ ಹಿಂಸಿಸುವುದಿಲ್ಲ. ಸುಖವಾಗಿ

ಮಲಗಿಕೊಂಡಿದ್ದಾರೆ. ಮಲಗಿರಲಿ. ಅಪ್ರಿಯ ಮಾತನಾಡುತ್ತಿರುವ ದುರ್ಬುದ್ಧಿ ನಿನ್ನನ್ನು ಮೊದಲು ಕೊಲ್ಲುತ್ತೇನೆ. ನಿನ್ನ ದೇಹದ ರಕ್ತವನ್ನು ಕುಡಿದ ನಂತರ ಅವರನ್ನೂ ಮತ್ತು ನಂತರ ಈ ವಿಪ್ರಿಯಕಾರಿಣಿಯನ್ನೂ ಕೊಲ್ಲುತ್ತೇನೆ.”

ಹೀಗೆ ಹೇಳಿದ ಆ ಸಂಕ್ರುದ್ಧ ಪುರುಷಾದಕನು ತನ್ನ ಬಾಹುಗಳನ್ನು ಚಾಚಿ ಅರಿಂದಮ ಭೀಮಸೇನನ ಕಡೆ ಮುನ್ನುಗ್ಗಿದನು. ಆದರೆ ಅವನು ವೇಗದಿಂದ ಬರುತ್ತಿದ್ದ ಹಾಗೆಯೇ ಭೀಮಪರಾಕ್ರಮಿ ಭೀಮನು ನಗುತ್ತಾ ಅವನ ಬಾಹುಗಳಿಗೆ ಹೊಡೆದು ಕೆಳಗುರುಳಿಸಿದನು. ಅವನನ್ನು ಕೆಳಗುರುಳಿಸಿದ ಭೀಮನು ಸಿಂಹವು ಒಂದು ಸಣ್ಣ ಪ್ರಾಣಿಯನ್ನು ಎಳೆದುಕೊಂಡು ಹೋಗುವಂತೆ ಅಲ್ಲಿಂದ ಎಂಟು ಧನುಸ್ಸುಗಳ ದೂರಕ್ಕೆ ಜೋರಾಗಿ ಎಳೆದುಕೊಂಡು ಹೋದನು. ಪಾಂಡವನಿಂದ ಬಲವಂತವಾಗಿ ಎಳೆದುಕೊಂಡು ಹೋಗಲ್ಪಟ್ಟ ರಾಕ್ಷಸನು ಕೃದ್ಧನಾಗಿ ಭೀಮಸೇನನನ್ನು ಬಿಗಿದಪ್ಪಿ ಭೈರವ ಸ್ವರದಲ್ಲಿ ಕೂಗಿದನು. ಪುನಃ ಮಹಾಬಲಿ ಭೀಮನು ಸುಖವಾಗಿ ಮಲಗಿದ್ದ ಭ್ರಾತೃಗಳು ಆ ಶಬ್ಧದಿಂದ ಎಚ್ಚೆತ್ತುಕೊಳ್ಳಬಾರದೆಂದು ಅವನನ್ನು ಬಲವಂತವಾಗಿ ಎಳೆದುಕೊಂಡು ಇನ್ನೂ ಸ್ವಲ್ಪ ದೂರ ಹೋದನು. ತಮ್ಮ ಎಲ್ಲ ಬಲವನ್ನೂ ಬಳಸಿ ಅವರಿಬ್ಬರೂ ಅನ್ಯೋನ್ಯರ ಮೇಲೆ

ಕುಳಿತುಕೊಂಡು ಎಳೆದಾಡಿದರು: ರಾಕ್ಷಸ ಮತ್ತು ಭೀಮ ಇಬ್ಬರೂ ತಮ್ಮ ಪರಮ ವಿಕ್ರಮವನ್ನು ಪ್ರದರ್ಶಿಸಿದರು. ಮತ್ತಿನಲ್ಲಿರುವ ಅರವತ್ತು ವರ್ಷಗಳ ಆನೆಗಳಂತೆ ಇಬ್ಬರೂ ಮರಗಳನ್ನು ಮತ್ತು ಬಳ್ಳಿಗಳನ್ನು ಕಿತ್ತು ನಾಶಮಾಡಿದರು.

ಈ ಮಹಾ ಶಬ್ಧವನ್ನು ಕೇಳಿದ ನರರ್ಷಭರು ಎಚ್ಚೆದ್ದರು ಮತ್ತು ತಾಯಿಯೊಂದಿಗೆ ಅವರು ಎದುರಿಗೆ ನಿಂತಿದ್ದ ಹಿಡಿಂಬೆಯನ್ನು ನೋಡಿದರು. ಎಚ್ಚೆತ್ತ ಪೃಥೆಯ ಸಹಿತ ಆ ಪುರುಷವ್ಯಾಘ್ರರು ಅಮಾನುಷ ರೂಪಿಣಿ ಹಿಡಿಂಬೆಯನ್ನು ನೋಡಿ ವಿಸ್ಮಿತರಾದರು. ಆ ರೂಪಸಂಪದೆಯನ್ನು ನೋಡಿ ವಿಸ್ಮಿತಳಾದ ಕುಂತಿಯು, ನಿಧಾನವಾಗಿ ಸಾಂತ್ವನ ಪೂರ್ವಕ ಈ ಮಧುರ ವಾಖ್ಯಗಳನ್ನು ನುಡಿದಳು:

> "ವರವರ್ಣಿನಿ! ಸುರರ ಮಗುವಂತಿರುವ ನೀನು ಯಾರು? ಯಾವ ಕೆಲಸವನ್ನಿಟ್ಟು-ಕೊಂಡು ನೀನು ಇಲ್ಲಿಗೆ ಬಂದಿರುವೆ? ಎಲ್ಲಿಂದ ಬಂದಿರುವೆ? ನೀನು ಈ ವನದ ದೇವತೆಯಾಗಿದ್ದರೆ ಅಥವಾ ಅಪ್ಸರೆಯಾಗಿದ್ದರೆ ಎಲ್ಲವನ್ನೂ ನನಗೆ ಹೇಳು. ನೀನು ಏಕೆ ಇಲ್ಲಿ ನಿಂತಿದ್ದೀಯೆ ಹೇಳು."

ಹಿಡಿಂಬೆಯು ಹೇಳಿದಳು:

> "ನೀಲಮೇಘನಿಭದಂತೆ ದಟ್ಟ ಈ ಮಹಾವನವನ್ನು ನೀನೇನು ನೋಡುತ್ತಿದ್ದೀಯೋ ಅದು ನನ್ನ ಮತ್ತು ರಾಕ್ಷಸ ಹಿಡಿಂಬನ ವಾಸಸ್ಥಳ. ಭಾಮಿನಿ! ನಾನು ಆ ರಾಕ್ಷಸೇಂದ್ರನ

ತಂಗಿಯೆಂದು ತಿಳಿ. ನಿನ್ನನ್ನು ಮತ್ತು ನಿನ್ನ ಪುತ್ರರನ್ನು ಭಕ್ಷಿಸ ಬಯಸಿದ ನನ್ನ ಅಣ್ಣನು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಆ ಕ್ರೂರ ರಾಕ್ಷಸನ ಅಪ್ಪಣೆಯಂತೆ ನಾನು ಇಲ್ಲಿಗೆ ಬಂದೆ. ಇಲ್ಲಿ ನಿನ್ನ ಹೇಮವರ್ಣದ ಮಹೌಜಸ ಪುತ್ರನನ್ನು ಕಂಡೆ. ಸರ್ವಭೂತಗಳಲ್ಲಿ ವಿಚರಿಸಿರುವ ಮನ್ಮಥನಿಂದ ತಳ್ಳಲ್ಪಟ್ಟು ನಾನು ನಿನ್ನ ಪುತ್ರನ ವಶದಲ್ಲಿ ಬಂದೆ. ನಿನ್ನ ಮಹಾಬಲಶಾಲಿ ಪುತ್ರನನ್ನು ನನ್ನ ಪತಿಯನ್ನಾಗಿ ವರಿಸಿದ್ದೇನೆ. ಅವನನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿದೆ. ಆದರೆ ಸಾಧ್ಯವಾಗಲಿಲ್ಲ. ನಾನು ಹಿಂದಿರುಗುವುದಕ್ಕೆ ತಡವಾದುದ್ದನ್ನು ತಿಳಿದ ಆ ನರಭಕ್ಷಕನು ನಿನ್ನ ಪುತ್ರರನ್ನು ಕೊಲ್ಲಲು ಸ್ವಯಂ ತಾನೇ ಇಲ್ಲಿಗೆ ಬಂದನು. ನನ್ನ ಕಾಂತ ನಿನ್ನ ಧೀಮಂತ ಪುತ್ರ ಮಹಾತ್ಮನು ಅವನನ್ನು ನೆಲದ ಮೇಲೆ ಚಚ್ಚಿಹಾಕಿ ಇಲ್ಲಿಂದ ಬಲವಂತವಾಗಿ ಎಳೆದುಕೊಂಡು ಹೋದನು. ಅಲ್ಲಿ ನೋಡು! ಮಹಾವೇಗದಲ್ಲಿ ಗರ್ಜಿಸುತ್ತಾ ಪರಸ್ಪರ ಹೋರಾಡುತ್ತಿರುವ ಆ ವಿಕ್ರಾಂತ ನರ-ರಾಕ್ಷಸರನ್ನು ನೋಡು.”

ಅವಳ ಮಾತುಗಳನ್ನು ಕೇಳುತ್ತಿದ್ದಂತೆಯೇ ವೀರ ಯುಧಿಷ್ಠಿರ, ಅರ್ಜುನ ಮತ್ತು ನಕುಲ ಸಹದೇವರು ಮೇಲೆದ್ದು ಜಯವನ್ನು



ಬಯಸುತ್ತಾ ಪರಸ್ಪರರನ್ನು ಎಳೆದಾಡುತ್ತಿರುವ ರಣೋತ್ಕಟ ಎರಡು ಸಿಂಹಗಳಂತೆ ಹೊಡೆದಾಡುತ್ತಿರುವ ಅವರೀರ್ವರನ್ನು ಕಂಡರು. ಅವರು ಅನ್ಯೋನ್ಯರನ್ನು ಹಿಡಿದು ಪರಸ್ಪರರನ್ನು ಎಳೆಯುತ್ತಾ ಕಾಡ್ಗಿಚ್ಚಿನ ಹೊಗೆಯಂತೆ ದಟ್ಟ ಧೂಳನ್ನೆಬ್ಬಿಸಿದರು. ಅವರು ಧೂಳಿನಿಂದ ಮುಚ್ಚಿದ ಬೆಟ್ಟಗಳಂತೆ ಕಂಡರು, ಮತ್ತು ಮಂಜು ಮುಸುಕಿದ ಕಲ್ಲಿನ ಬೆಟ್ಟಗಳಂತೆ ಕಂಡರು. ಭೀಮನು ಆ ರಾಕ್ಷಸನಿಂದ ಕಷ್ಟಕ್ಕೊಳಗಾಗಿದ್ದುದನ್ನು ನೋಡಿದ ಪಾರ್ಥನು ನಗುತ್ತಾ ಮೆಲ್ಲನೆ ಹೇಳಿದನು:

"ಮಹಾಬಾಹು ಭೀಮ! ಹೆದರ ಬೇಡ. ಆಯಾಸಗೊಂಡ

ನಾವೆಲ್ಲಾ ಮಲಗಿದ್ದೆವು. ನೀನು ಈ ಭೀಮರೂಪದವನೊಡನೆ ಹೊಡೆದಾಟಕ್ಕಿಳಿದಿದ್ದುದು ತಿಳಿಯಲಿಲ್ಲ. ರಾಕ್ಷಸನೊಡನೆ ನಿನ್ನ ಈ ಹೋರಾಟದಲ್ಲಿ ನಾನು ಸಯಾಯ ಮಾಡಲು ನಿಂತಿದ್ದೇನೆ. ನಕುಲ ಮತ್ತು ಸಹದೇವರು ತಾಯಿಯನ್ನು ಕಾಯುತ್ತಾರೆ."

ಭೀಮನು ಹೇಳಿದನು:

"ಸುಮ್ಮನೆ ಕುಳಿತುಕೊಂಡು ನೋಡಿ! ವೃಥಾ ಉದ್ವೇಗಕ್ಕೊಳಗಾಗಬೇಡಿ! ನನ್ನ ಬಾಹುಗಳ ಮದ್ಯದಲ್ಲಿ ಸಿಲುಕಿದ ಇವನು ಇನ್ನು ಹೆಚ್ಚು ಕಾಲ ಬದುಕಲಾರ."

ಅರ್ಜುನನು ಹೇಳಿದನು:

"ಆ ಪಾಪಿ ರಾಕ್ಷಸನನ್ನು ಕೊಲ್ಲಲು ಇಷ್ಟೊಂದು ಸಮಯವನ್ನೇಕೆ ತೆಗೆದುಕೊಳ್ಳುತ್ತಿದ್ದೀಯೆ ಭೀಮ? ನಾವು ಇನ್ನು ಇಲ್ಲಿಂದ ಹೊರಡಬೇಕು. ಹೆಚ್ಚು ಹೊತ್ತು ಇಲ್ಲಿ ಇರಲು ಸಾಧ್ಯವಿಲ್ಲ. ಪೂರ್ವ ದಿಕ್ಕು ಕೆಂಪಾಗುವುದರೊಳಗಿನ ಸಂಧ್ಯಾ ಸಮಯದ ರೌದ್ರ ಮುಹೂರ್ತದಲ್ಲಿ ರಾಕ್ಷಸರು ಪ್ರಬಲರಾಗುತ್ತಾರೆ. ಬೇಗ ಮುಗಿಸು ಭೀಮ! ಅವನೊಂದಿಗೆ ಆಡಬೇಡ. ಆ ವಿಭೀಷಣ ರಾಕ್ಷಸನು ತನ್ನ ಮಾಯೆಯನ್ನು ಬಳಸುವುದರೊಳಗೆ ಅವನನ್ನು ಕೊಂದು ಹಾಕು. ನಿನ್ನ ಭುಜಗಳ ಶಕ್ತಿಯನ್ನು

ಬಳಸು."

ಅರ್ಜುನನ ಈ ಮಾತುಗಳನ್ನು ಕೇಳಿದ ಭೀಮನು ಆ ಭಯಂಕರ ರಾಕ್ಷಸನ ದೇಹವನ್ನು ಮೇಲೆತ್ತಿ ನೂರಕ್ಕೂ ಹೆಚ್ಚು ಬಾರಿ ತಿರುಗಿಸಿದನು. ಭೀಮನು ಹೇಳಿದನು:

"ವೃಥಾ ಮಾಂಸವನ್ನು ತಿಂದು ವೃಥಾ ಕೊಬ್ಬಿದ್ದೀಯೆ! ಬುದ್ಧಿ ಬೆಳೆಯದೇ ವೃಥಾ ಬೆಳೆದಿದ್ದೀ! ವೃಥಾ ಜೀವಿಸುವ ನಿನಗೆ ವೃಥಾ ಮರಣವೇ ತಕ್ಕುದು."

ಅರ್ಜುನನು ಹೇಳಿದನು:

"ಈ ರಾಕ್ಷಸನು ನಿನಗೆ ಭಾರಿ ಎಂದು ಅನ್ನಿಸಿದರೆ, ನಾನು ನಿನಗೆ ಯುದ್ಧದಲ್ಲಿ ಸಹಾಯಮಾಡುತ್ತೇನೆ. ಇವನನ್ನು ಬೇಗನೆ ಕೊಂದು ಮುಗಿಸು. ಇಲ್ಲವಾದರೆ ನಾನು ಅವನನ್ನು ಕೊಂದು ಮುಗಿಸುತ್ತೇನೆ. ವೃಕೋದರ! ಹೋರಾಡಿ ಆಯಾಸಗೊಂಡಿದ್ದರೆ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವುದು ಸರಿ."

ಅವನ ಈ ಮಾತುಗಳನ್ನು ಕೇಳಿದ ಭೀಮಸೇನನು ರೊಚ್ಚಿಗೆದ್ದು ಹಿಡಿಂಬನನ್ನು ಜೋರಾಗಿ ಭೂಮಿಯ ಮೇಲೆ ಅಪ್ಪಳಿಸಿ ಪ್ರಾಣಿಯನ್ನು ಬಲಿಕೊಡುವಂತೆ ಕೊಂದು ಹಾಕಿದನು. ಭೀಮನ ಕೈಯಿಂದ ಸಾಯುವಾಗ ಅವನು ಜೋರಾಗಿ ಕಿರುಚಿ, ವನವೆಲ್ಲಾ ಆ

ಆಕ್ರಂದನದಿಂದ ನೀರು ತುಂಬಿದ ದುಂದುಭಿಯಂತೆ ಮೊಳಗಿತು. ಬಲಶಾಲಿ ಪಾಂಡುನಂದನನು ಅವನನ್ನು ತನ್ನ ತೊಡೆಯ ಮೇಲಿರಿಸಿ ಅವನ ಬೆನ್ನು ಮುರಿಯುವವರೆಗೆ ಬಗ್ಗಿಸಿ ತುಂಡುಮಾಡಿ ಪಾಂಡವರಿಗೆ ಆನಂದವನ್ನಿತ್ತನು. ಹಿಡಿಂಬನ ಸಂಹಾರವನ್ನು ನೋಡಿದ ಅವರೆಲ್ಲರೂ ತುಂಬಾ ಸಂಹೃಷ್ಟರಾಗಿ ಅರಿಂದಮ, ನರವ್ಯಾಘ್ರ ಭೀಮಸೇನನನ್ನು ಅಭಿನಂದಿಸಿದರು. ಭೀಮ ಪರಾಕ್ರಮಿ ಮಹಾತ್ಮ ಭೀಮನನ್ನು ಅಭಿನಂದಿಸಿದ ನಂತರ ಅರ್ಜುನನು ವೃಕೋದರನಿಗೆ ಹೇಳಿದನು:

> "ಪ್ರಭು! ಈ ವನದ ಹತ್ತಿರದಲ್ಲಿಯೇ ಒಂದು ನಗರವಿದೆ ಎಂದು ನನ್ನ ಅನಿಸಿಕೆ. ನಿನಗೆ ಮಂಗಳವಾಗಲಿ! ಶೀಘ್ರವಾಗಿ ಹೋಗೋಣ. ಸುಯೋಧನನಿಗೆ ನಾವಿರುವುದು ತಿಳಿಯಬಾರದು."

ತಾಯಿಯೊಂದಿಗೆ ಎಲ್ಲ ಪರಂತಪರೂ ಹಾಗೆಯೇ ಆಗಲೆಂದು ಹೇಳಿ ಹೊರಟರು. ರಾಕ್ಷಸಿ ಹಿಡಿಂಬಿಯೂ ಆ ಪುರುಷವ್ಯಾಘ್ರರನ್ನು ಹಿಂಬಾಲಿಸಿದಳು.

ಭೀಮನು ಹೇಳಿದನು:

> "ರಾಕ್ಷಸರು ವೈರತ್ವವನ್ನು ನೆನಪಿನಲ್ಲಿಟ್ಟುಕೊಂಡು ಮೋಹನೀಯ ಮಾಯೆಗಳನ್ನು ಬಳಸುತ್ತಾರೆ. ಹಿಡಿಂಬೇ! ನಿನ್ನ ಅಣ್ಣನು ಬೆಳಗಿದ ದಾರಿಯಲ್ಲಿ ನೀನೂ ಹೋಗು."

ಯುಧಿಷ್ಠಿರನು ಹೇಳಿದನು:

> “ಪುರುಷವ್ಯಾಘ್ರ ಭೀಮ! ಕೋಪದಲ್ಲಿಯೂ ಕೂಡ ಒಂದು ಸ್ತ್ರೀಯನ್ನು ಕೊಲ್ಲಬೇಡ. ಶರೀರಕ್ಕಿಂತಲೂ ಅಧಿಕ ಧರ್ಮವನ್ನು ಕಾಪಾಡು. ನಮ್ಮನ್ನು ಕೊಲ್ಲುವ ಉದ್ದೇಶವನ್ನಿಟ್ಟುಕೊಂಡು ಬಂದಿದ್ದ ಮಹಾಬಲಶಾಲಿ ರಾಕ್ಷಸನನ್ನು ನೀನು ಕೊಂದುಹಾಕಿದ್ದೀಯೆ. ಆದರೆ ಅವನ ತಂಗಿಯಾದ ಇವಳು ಕೋಪಗೊಂಡಿದ್ದರೂ ನಮಗೆ ಏನು ಮಾಡಬಲ್ಲಳು?”

ಆಗ ಹಿಡಿಂಬೆಯು ಅಂಜಲೀ ಬದ್ಧಳಾಗಿ ಕುಂತಿ ಮತ್ತು ಕೌಂತೇಯ ಯುಧಿಷ್ಠಿರನಿಗೆ ಅಭಿವಂದಿಸಿ ಈ ಮಾತುಗಳನ್ನು ಹೇಳಿದಳು:

> “ಆರ್ಯೆ! ಅನಂಗಜನಿಂದ ಸ್ತ್ರೀಯರು ಹೇಗೆ ದುಃಖವನ್ನು ಅನುಭವಿಸುತ್ತಾರೆ ಎನ್ನುವುದು ನಿನಗೆ ತಿಳಿದಿದೆ. ಭೀಮಸೇನನಿಂದಾಗಿ ನನಗೆ ಆ ದುಃಖವು ಪ್ರಾಪ್ತವಾಗಿದೆ. ನನ್ನ ಸಮಯವನ್ನು ಪ್ರತೀಕ್ಷಿಸುತ್ತಾ ಆ ಪರಮ ದುಃಖವನ್ನು ನಾನು ಸಹಿಸಿಕೊಂಡಿದ್ದೇನೆ. ನನಗೆ ಸುಖವನ್ನು ನೀಡುವ ಆ ಸಮಯವು ಈಗ ಬಂದೊದಗಿದೆ. ನನ್ನ ಸುಹೃದಯರನ್ನು, ಸ್ವಧರ್ಮವನ್ನು, ಮತ್ತು ಸ್ವಜನರನ್ನು ತೊರೆದು ನಿನ್ನ ಪುರುಷವ್ಯಾಘ್ರ ಪುತ್ರನನ್ನು ಪತಿಯನ್ನಾಗಿ ವರಿಸಿದ್ದೇನೆ. ನಾನು ವರಿಸಿದ ಅವನು ಮತ್ತು ಯಶಸ್ವಿನಿ ನೀನು ನಾನು



ಮಾತನಾಡಿದ ಹಾಗೇ ನಡೆದುಕೊಳ್ಳುತ್ತೇನೆ ಎಂದು ನನ್ನನ್ನು ತಿರಸ್ಕರಿಸುತ್ತಿದ್ದೀರಾ? ನನ್ನನ್ನು ನೀನು ಮೂಢಳೆಂದು ತಿಳಿಯಬಹುದು ಅಥವಾ ನಿನ್ನನ್ನೇ ಅನುಸರಿಸುವ ಭಕ್ತೆ ಎಂದು ತಿಳಿಯಬಹುದು. ನಿನ್ನ ಸುತನನ್ನು ಪತಿಯನ್ನಾಗಿಸಿ ಸೇರಲು ಅನುಮತಿ ನೀಡು. ಆ ದೇವರೂಪಿಯನ್ನು ಬೇಕಾದಲ್ಲಿ ಕರೆದುಕೊಂಡು ಹೋಗುತ್ತೇನೆ. ಪುನಃ ನಾನು ಇಲ್ಲಿಗೇ ಬರುತ್ತೇನೆ. ನನ್ನಲ್ಲಿ ವಿಶ್ವಾಸವನ್ನಿಡು! ನೀನು ನನ್ನ ಕುರಿತು ಯೋಚಿಸಿದಾಗಲೆಲ್ಲಾ ನಾನು ಬಂದು ನಿಮ್ಮೆಲ್ಲರನ್ನೂ ಕರೆದೊಯ್ಯುತ್ತೇನೆ. ನಾನು ಈ ನರರ್ಷಭರನ್ನು ದುರ್ಗಗಳನ್ನು ದಾಟಲು ಸಹಾಯ ಮಾಡುತ್ತೇನೆ. ಅಥವಾ ನನ್ನ ಬೆನ್ನಮೇಲೆ ಕೂರಿಸಿಕೊಂಡು ನೀವು ಎಲ್ಲಿ ಹೋಗಬೇಕೆಂದು ಬಯಸುವಿರೋ ಅಲ್ಲಿಗೆ ಶೀಘ್ರವಾಗಿ ಕರೆದೊಯ್ಯುತ್ತೇನೆ. ನೀವೆಲ್ಲರೂ ನನ್ನ ಮೇಲೆ ಕರುಣೆ ತೋರಿ! ಭೀಮಸೇನನು ನನ್ನನ್ನು ಪ್ರೀತಿಸುವಂತೆ ಮಾಡಿ. ಆಪತ್ತಿನಿಂದ ಪಾರಾಗಲು ಯಾವರೀತಿಯಲ್ಲಾದರೂ ಪ್ರಾಣವನ್ನುಳಿಸಿ ಕೊಂಡಿರಬೇಕು. ಆಗ ಎಲ್ಲವನ್ನೂ ತನ್ನ ಕರ್ತವ್ಯ ಮತ್ತು ಧರ್ಮವೆಂದು ಅನುಸರಿಸಲಿ. ಆದರೆ ಆಪತ್ತಿನಲ್ಲಿ ತನ್ನ ಧರ್ಮವನ್ನು ಯಾರು ಪಾಲಿಸುತ್ತಾನೋ ಅವನೇ ಧರ್ಮವಿದುತ್ತಮ. ಯಾಕೆಂದರೆ ದರ್ಮಿಣಿಗೆ ಆಪತ್ತು ಧರ್ಮದ ವ್ಯಸನವೆಂದೇ ತೋರುತ್ತದೆ. ಪುಣ್ಯವು

ಪ್ರಾಣವನ್ನು ಕೊಡುತ್ತದೆ, ಪುಣ್ಯವು ಪ್ರಾಣವನ್ನು ಉಳಿಸುತ್ತದೆ. ಅವನು ಯಾವರೀತಿಯಲ್ಲಿ ತನ್ನ ಧರ್ಮವನ್ನು ಪಾಲಿಸಿದರೂ ತಪ್ಪೆನಿಸಿಕೊಳ್ಳುವುದಿಲ್ಲ."

ಯುಧಿಷ್ಠಿರನು ಹೇಳಿದನು:

"ಹಿಡಿಂಬೆ! ನೀನು ಹೇಳಿದ ಹಾಗೆಯೇ ಆಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ನೀನು ಹೇಳಿದ ಹಾಗೆ ಧರ್ಮದಲ್ಲಿಯೇ ನಿರತಳಾಗಿರು. ಸ್ನಾನ ಮತ್ತು ಆಹ್ನೀಕವನ್ನು ಪೂರೈಸಿ ಕೌತುಕ ಮಂಗಲವನ್ನು ಮಾಡಿದವನಾಗಿ ಭೀಮಸೇನನು ಸೂರ್ಯ ಮುಳುಗುವುದರೊಳಗೆ ನಿನಗೆ ಪ್ರೀತಿಮಾಡುತ್ತಾನೆ. ಹಗಲಿನಲ್ಲಿ ನೀನು ಅವನೊಡನೆ ನಿನಗಿಷ್ಟ ಬಂದಹಾಗೆ ವಿಹರಿಸಬಹುದು. ಆದರೆ ಪ್ರತಿ ರಾತ್ರಿಯೂ ಭೀಮಸೇನನನ್ನು ನೀನು ಪುನಃ ಇಲ್ಲಿಗೆ ತಲುಪಿಸಬೇಕು."

ಹಾಗೆಯೇ ಆಗಲೆಂದು ಪ್ರತಿಜ್ಞೆ ಮಾಡಿ ರಾಕ್ಷಸಿ ಹಿಡಿಂಬೆಯು ಬೀಮಸೇನನನ್ನು ಎತ್ತಿಕೊಂಡು ಮೇಲೇರಿದಳು. ಸರ್ವಾಭರಣಭೂಷಿತಳಾಗಿ ಅತ್ಯಂತ ಸುಂದರ ರೂಪವನ್ನು ಪಡೆದು ಸುಮಧುರ ಪ್ರಣಯಮಾತುಗಳಿಂದ ಪಾಂಡವನನ್ನು ಪರ್ವತಗಳ ತುದಿಗಳಲ್ಲಿ, ರಮ್ಯ ದೇವ ಸ್ಥಳಗಳಲ್ಲಿ, ಮೃಗಪಕ್ಷಿಗಳ ಧ್ವನಿಗಳು ಸದಾ ಕೇಳಿ ಬರುತ್ತಿರುವ ಸ್ಥಳಗಳಲ್ಲಿ ರಮಿಸಿದಳು. ಹಾಗೆಯೇ ಪುಷ್ಪಭರಿತ

ಮರಗಳನ್ನು ಹೊಂದಿದ ವನದುರ್ಗಗಳಲ್ಲಿ, ಅರಳುತ್ತಿರುವ ಕಮಲ ಮತ್ತು ಹೂಬಾಳೆಗಳಿಂದ ಕೂಡಿದ ರಮಣೀಯ ಸರೋವರಗಳಲ್ಲಿ, ವೈಢೂರ್ಯದ ಮರಳನ್ನು ಹೊಂದಿದ ನದಿ ದ್ವೀಪಪ್ರದೇಶಗಳಲ್ಲಿ, ಒಳ್ಳೆಯ ತೀರ್ಥವೆನಿಸಿಕೊಂಡ ವನಗಳಲ್ಲಿ, ಹರಿಯುವ ನದಿಗಳಲ್ಲಿ, ಪರ್ವತಗಳಿಂದ ಹರಿದು ಬರುವ ನದಿಗಳಲ್ಲಿ, ಮಣಿರತ್ನಗಳ ರಾಶಿಯನ್ನೇ ಹೊಂದಿರುವ ಸಾಗರ ಪ್ರದೇಶಗಳಲ್ಲಿ, ರಮ್ಯ ಪಟ್ಟಣಗಳಲ್ಲಿ ಮತ್ತು ಶಾಲ ವೃಕ್ಷಗಳ ಮಹಾ ವನದಲ್ಲಿ, ಪುಣ್ಯಕರ ದೇವಾರಣ್ಯಗಳಲ್ಲಿ ಮತ್ತು ಪರ್ವತ ಕಣಿವೆಗಳಲ್ಲಿ, ಗುಹ್ಯಕರ ನಿವಾಸ ಸ್ಥಳಗಳಲ್ಲಿ ಮತ್ತು ತಾಪಸಿಯರ ಆಶ್ರಮಗಳಲ್ಲಿ, ಸರ್ವ ಋತುಗಳ ಫಲಪುಷ್ಪಗಳಿಂದ ಭರಿತ ಮಾನಸ ಸರೋವರದಲ್ಲಿ ಅವಳು ಪರಮ ರೂಪದಿಂದ ಶೋಭಿತೆಯಾಗಿ ಪಾಂಡವನನ್ನು ರಮಿಸಿದಳು. ಭೀಮನೊಂದಿಗೆ ಎಲ್ಲೆಲ್ಲಿಯೂ ರಮಿಸಿದ ಆ ಮನೋಜವೆ ರಾಕ್ಷಸಿಯು ಮಹಾಬಲಿ ಭೀಮಸೇನನ ಪುತ್ರನಿಗೆ ಜನ್ಮವಿತ್ತಳು.

ವಿರೋಪಾಕ್ಷನಾದ ಅವನಿಗೆ ಅಗಲವಾದ ಮುಖವಿತ್ತು. ಶಂಖುವಿನಂಥ ವಿಭೀಷಣ ಕಿವಿಗಳನ್ನು ಹೊಂದಿದ್ದನು. ಆ ಭೀಮರೂಪಿಣಿ ಮಹಾಬಲಿಯ ತುಟಿಗಳು ಕೆಂಪಾಗಿದ್ದವು ಮತ್ತು ಹಲ್ಲುಗಳು ಹರಿತವಾಗಿದ್ದವು. ಅವನು ಮಹೇಷ್ವಾಸನೂ, ಮಹಾವೀರ್ಯನೂ, ಮಹಾಸತ್ವನೂ, ಮಹಾಭುಜನೂ, ಮಹಾಜವನೂ, ಮಹಾಕಾಯನೂ, ಮಹಾಮಾಯಿಯೂ ಮತ್ತು



ಅರಿಂದಮನೂ ಆಗಿದ್ದನು. ಮನುಷ್ಯನಿಗೆ ಹುಟ್ಟಿದ ಆ ಅಮಾನುಷನು ಭೀಮ ವೇಗವನ್ನು ಹೊಂದಿದ್ದನು. ಮಹಾ ಬಲಶಾಲಿಯಾಗಿದ್ದನು. ಮನುಷ್ಯ-ಪಿಶಾಚಿಗಳನ್ನು ಮತ್ತು ಇತರ ರಾಕ್ಷಸರನ್ನು ಮೀರಿಸುವಂತಿದ್ದನು. ಅವನು ಬಾಲಕನಾಗಿದ್ದರೂ ಮನುಷ್ಯರಲ್ಲಿ ಯುವಕನಂತೆ ತೋರುತ್ತಿದ್ದನು. ಆ ವೀರ ಬಲಿಯು ಸರ್ವ ಅಸ್ತ್ರಗಳಲ್ಲಿ ಪರಮ ಪರಿಣತಿಯನ್ನು ಪಡೆದನು. ರಾಕ್ಷಸಿಯರು ಗರ್ಭಧರಿಸಿದ ದಿನವೇ ಮಗುವಿಗೆ ಜನ್ಮ ನೀಡುತ್ತಾರೆ, ಮತ್ತು ಆ ಮಕ್ಕಳು ಬೇಕಾದ ರೂಪವನ್ನು, ಬೇರೆ ಬೇರೆ ರೂಪಗಳನ್ನು ಧರಿಸಬಹುದು. ಬೋಳುಮಂಡೆಯ ಅವನು ತನ್ನ ತಂದೆ ತಾಯಿಗಳ

ಪಾದಸ್ಪರ್ಶ ಮಾಡಿ ನಮಸ್ಕರಿಸಿದನು ಮತ್ತು ಅವರು ಆ ಪರಮೇಷ್ವಾಸನಿಗೆ ನಾಮಕರಣ ಮಾಡಿದರು. ಅವನು ಘಟದಂತೆಯೇ ಹೊಳೆಯುತ್ತಿದ್ದಾನೆ ಎಂದು ಅವನು ತಾಯಿಗೆ ಹೇಳಿದನು, ಮತ್ತು ಹಾಗೆಯೇ ಅವನ ಹೆಸರು ಘಟೋತ್ಕಚ ಎಂದಾಯಿತು.

ಘಟೋತ್ಕಚನು ಪಾಂಡವರಲ್ಲಿಯೇ ಅನುರಕ್ತನಾದನು ಮತ್ತು ಪಾಂಡವರೂ ಸಹ ಅವನನ್ನು ತುಂಬಾ ಪ್ರೀತಿಸುತ್ತಿದ್ದರು; ಅವನು ಅವರ ಆತ್ಮದಂತಿದ್ದನು. ಆಗ ಹಿಡಿಂಬೆಯು ಅವನಿಗೆ ನಮ್ಮ ಒಟ್ಟು ಬಾಳ್ವೆಯ ಸಮಯವು ಮುಗಿಯಿತು ಎಂದು ಹೇಳಿ ಒಂದು ಒಪ್ಪಂದವನ್ನು ಮಾಡಿಕೊಂಡು ತನ್ನ ದಾರಿಯಲ್ಲಿ ಹೊರಟುಹೋದಳು. ಘಟೋತ್ಕಚನು ತನ್ನ ತಂದೆಗೆ “ಕರೆದಾಗಲೆಲ್ಲಾ ಬರುತ್ತೇನೆ!”ಎಂದು ವಚನವನ್ನಿತ್ತು ಉತ್ತರ ದಿಕ್ಕಿನ ಕಡೆಗೆ ಹೊರಟುಹೋದನು. ತನ್ನ ಶಕ್ತ್ಯಾಸ್ತ್ರದ ಸಲುವಾಗಿ ಮಹಾತ್ಮ ಮಘವತನು ಅಪ್ರತಿಮ ವೀರ ಮಹಾತ್ಮ ಕರ್ಣನ ವಿನಾಶಕ್ಕಾಗಿ ಅವನನ್ನು ಸೃಷ್ಠಿಸಿದನು.

ಆ ಮಹಾರಥಿ ವೀರರು ಬಹಳಷ್ಟು ಮೃಗಗಣಗಳನ್ನು ಸಂಹರಿಸುತ್ತಾ ವನದಿಂದ ವನಕ್ಕೆ ಅತಿವೇಗದಲ್ಲಿ ಪ್ರಯಾಣ ಮಾಡಿದರು. ಅವರು ಮತ್ಸ್ಯ, ತ್ರಿಗರ್ತ, ಪಾಂಚಾಲ, ಕೀಚಕ ದೇಶಗಳನ್ನು ಅತಿಕ್ರಮಿಸಿ ರಮಣೀಯ ಸರೋವರಗಳನ್ನು ವನದೇಶಗಳನ್ನು ನೋಡಿದರು.

ಕುಂತಿಯೂ ಸೇರಿ ಆ ಮಹಾತ್ಮರೆಲ್ಲರೂ ಜಟೆಯನ್ನು ಧರಿಸಿ ವಲ್ಕಲ ಜಿನ ವಸ್ತ್ರಗಳನ್ನು ಧರಿಸಿ, ತಾಪಸಿಗಳ ವೇಷವನ್ನು ತಾಳಿದರು. ಕೆಲವೊಮ್ಮೆ ಆ ಮಹಾರಥಿಗಳು ತಾಯಿಯನ್ನು ಎತ್ತಿಕೊಂಡು ಓಡುತ್ತಿದ್ದರು. ಕೆಲವೊಮ್ಮೆ ಅವಸರ ಮಾಡದೇ ಬಹಿರಂಗವಾಗಿ ಹೋಗುತ್ತಿದ್ದರು. ಅವರು ಬ್ರಾಹ್ಮಣರ ಎಲ್ಲ ವೇದಗಳನ್ನೂ ವೇದಾಂಗಗಳನ್ನೂ, ನೀತಿ ಶಾಸ್ತ್ರವನ್ನೂ ಕಲಿತುಕೊಂಡರು.

ಆ ಧರ್ಮಜ್ಞರು ಅವರ ಪಿತಾಮಹನನ್ನು ಕಂಡರು. ಆಗ ಆ ಪರಂತಪರು ತಮ್ಮ ತಾಯಿಯ ಸಹಿತ ಮಹಾತ್ಮ ಕೃಷ್ಣದ್ವೈಪಾಯನನನ್ನು ಅಭಿವಂದಿಸಿ, ಅಂಜಲೀ ಬದ್ಧರಾಗಿ ನಿಂತುಕೊಂಡರು. ವ್ಯಾಸನು ಹೇಳಿದನು:

> "ಭರತರ್ಷಭರೇ! ಅಧರ್ಮ ನಿರತ ಧಾರ್ತರಾಷ್ಟ್ರರಿಂದ ನೀವು ವಿವಾಸಿತರಾಗುತ್ತೀರಿ ಎನ್ನುವುದನ್ನು ಪೂರ್ವದಲ್ಲಿಯೇ ನಾನು ನನ್ನ ಮನಸ್ಸಿನಲ್ಲಿ ತಿಳಿದುಕೊಂಡಿದ್ದೆ. ಅದನ್ನು ತಿಳಿದ ನಾನು ನಿಮಗೆ ಪರಮ ಹಿತವನ್ನು ಮಾಡುವ ಬಯಕೆಯಿಂದ ನಿಮ್ಮಲ್ಲಿಗೆ ಬಂದಿದ್ದೇನೆ. ಇದರ ಕುರಿತು ವಿಷಾದಿಸಬೇಡಿ. ಸರ್ವವೂ ಸುಖವನ್ನೇ ತರುತ್ತದೆ. ನೀವು ಮತ್ತು ಅವರು ಎಲ್ಲರೂ ನನಗೆ ಸಮಾನರೇ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಬಾಂಧವರು ದೀನ ಮತ್ತು ಬಾಲಿಶರಲ್ಲಿ ಸ್ನೇಹವನ್ನು

ಮಾಡುತ್ತಾರೆ. ಆದುದರಿಂದ ನನಗೆ ನಿಮ್ಮ ಮೇಲೆ ಹೆಚ್ಚಿನ ಸ್ನೇಹವಿದೆ. ಸ್ನೇಹಪೂರ್ವಕವಾಗಿ ನಿಮಗೆ ಸಹಾಯವನ್ನು ನೀಡಲು ಬಯಸುತ್ತೇನೆ. ಇಲ್ಲಿಯೇ ಹತ್ತಿರದಲ್ಲಿ ರಮಣೀಯವೂ ನಿರಾಮಯವೂ ಆದ ನಗರವೊಂದಿದೆ. ವೇಷಮರೆಸಿಕೊಂಡು ಅಲ್ಲಿಯೇ ವಾಸಿಸಿರಿ ಮತ್ತು ನಾನು ಮರಳಿ ಬರುವುದನ್ನು ಪ್ರತೀಕ್ಷಿಸುತ್ತಿರಿ.”

ಅರಿಂದಮ ಪಾರ್ಥರಿಗೆ ಈ ರೀತಿ ಸಮಾಶ್ವಾಸನೆಯನ್ನು ನೀಡಿದ ಪ್ರಭು ವ್ಯಾಸನು ಅವರೊಂದಿಗೆ ಏಕಚಕ್ರ ನಗರಕ್ಕೆ ಬಂದು ಕುಂತಿಗೆ ಆಶ್ವಾಸನೆಯನ್ನಿತ್ತನು:

“ಪುತ್ರಿ! ಜೀವಿಸು. ನಿನ್ನ ಈ ಮಗ ಧರ್ಮಪುತ್ರ ಯುಧಿಷ್ಠಿರನು ಧರ್ಮರಾಜನಾಗಿ ಪೃಥ್ವಿಯ ಸರ್ವ ಪಾರ್ಥಿವರನ್ನೂ ಆಳುತ್ತಾನೆ. ಈ ಧರ್ಮವಿದನು ಅಖಿಲ ಪೃಥ್ವಿಯನ್ನೂ ಭೀಮಸೇನ-ಅರ್ಜುನರ ಬಲದಿಂದ ಧರ್ಮಪೂರ್ವಕವಾಗಿ ಗೆದ್ದು ಭೋಗಿಸುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ನಿನ್ನ ಮತ್ತು ಮಾದ್ರಿಯ ಈ ಮಕ್ಕಳು ಎಲ್ಲರೂ ಮಹಾರಥಿಗಳು ಮತ್ತು ಅವರು ಸ್ವರಾಷ್ಟ್ರದಲ್ಲಿ ಸುಖವಾಗಿ ಸುಮನಸ್ಕರಾಗಿ ವಿಹರಿಸುತ್ತಾರೆ. ಈ ಪೃಥ್ವಿಯನ್ನು ಜಯಿಸಿ ನರವ್ಯಾಘ್ರರು ಅಧಿಕ ಭೂರಿದಕ್ಷಿಣೆಗಳನ್ನೊಡಗೂಡಿದ ರಾಜಸೂಯ, ಅಶ್ವಮೇಧ

ಮೊದಲಾದ ಕ್ರತುಗಳನ್ನು ಯಾಜಿಸಿತ್ತಾರೆ. ನಿನ್ನ ಮಕ್ಕಳು ಧನ ಮತ್ತು ಸುಖದಿಂದ ತಮ್ಮ ಸುಹೃದಯರನ್ನು ಅನುಗ್ರಹಿಸುತ್ತಾ ಪಿತೃಪಿತಾಮಹರ ಈ ರಾಜ್ಯವನ್ನು ಭೋಗಿಸುತ್ತಾರೆ.”

ಹೀಗೆ ಹೇಳಿ ಋಷಿ ದ್ವೈಪಾಯನನು ಅವರನ್ನು ಬ್ರಾಹ್ಮಣನೋರ್ವನ ಮನೆಗೆ ಕರೆದು ತಂದು ಪಾರ್ಥಿವಶ್ರೇಷ್ಠನಿಗೆ ಹೇಳಿದನು:

“ಪುನಃ ನಾನು ಬರುವುದನ್ನು ಪ್ರತೀಕ್ಷಿಸು. ದೇಶಕಾಲಗಳ ಕುರಿತು ತಿಳಿದನಂತರ ನೀವು ಪರಮ ಸಂತೋಷವನ್ನು ಹೊಂದುತ್ತೀರಿ.”

ಹಾಗೆಯೇ ಆಗಲೆಂದು ಪ್ರಾಂಜಲೀಬದ್ಧರಾಗಿ ಅವರು ವಚನವನ್ನಿತ್ತ ನಂತರ ಋಷಿ ಭಗವಾನ್ ವ್ಯಾಸಪ್ರಭುವು ತನಗಿಷ್ಟವಾದಲ್ಲಿಗೆ ಹೋದನು.

# ಬಕವಧ

ಮಹಾರಥಿ ಕುಂತೀಪುತ್ರರು ಏಕಚಕ್ರಕ್ಕೆ ಹೋಗಿ ಬ್ರಾಹ್ಮಣನ ಮನೆಯಲ್ಲಿ ಸ್ವಲ್ಪ ಸಮಯ ಉಳಿದರು. ಅವರೆಲ್ಲರೂ ಭಿಕ್ಷೆಬೇಡಲು ಹೋಗುತ್ತಿದ್ದಾಗ ರಮಣೀಯ ವಿವಿಧ ವನ, ರಾಜರ ದೇಶ ಮತ್ತು ನದೀ ಸರೋವರಗಳನ್ನು ಕಂಡರು. ತಮ್ಮ ಸುಗುಣಗಳಿಂದಾಗಿ ನಗರವಾಸಿಗಳಿಗೆ ಪ್ರಿಯದರ್ಶನರಾದರು. ಪ್ರತಿ ರಾತ್ರಿಯೂ ಅವರು ಭಿಕ್ಷವನ್ನು ಕುಂತಿಗೆ ತಂದು ಒಪ್ಪಿಸುತ್ತಿದ್ದರು. ಅದನ್ನು ಅವಳು ವಿಂಗಡಿಸಿದ ನಂತರ ಅವರವರ ಪಾಲುಗಳನ್ನು ಸೇವಿಸುತ್ತಿದ್ದರುಃ ಅರ್ಧವನ್ನು ತಾಯಿಯೂ ಸೇರಿ ಪರಂತಪ ವೀರರು ತಿನ್ನುತ್ತಿದ್ದರು. ಇನ್ನೊಂದು ಅರ್ಧ ಭಾಗವನ್ನೆಲ್ಲಾ ಮಹಾಬಲಿ ಭೀಮನು ತಿನ್ನುತ್ತಿದ್ದನು. ಈ ರೀತಿ ಆ ಮಹಾತ್ಮರು ಅಲ್ಲಿ ವಾಸಿಸುತ್ತಾ ಬಹಳಷ್ಟು ಸಮಯ ಕಳೆಯಿತು. ಒಮ್ಮೆ ಭರತರ್ಷಭರು ಭಿಕ್ಷಕ್ಕೆಂದು ಹೋಗಿದ್ದಾಗ, ಪೃಥಳಿಗೆ ಸಂಗಾತಿಯಾಗಿ ಭೀಮನು ಮನೆಯಲ್ಲಿಯೇ ಉಳಿದುಕೊಂಡನು. ಆಗ ಇದ್ದಕ್ಕಿದ್ದಹಾಗೆ ಕುಂತಿಯು ಬ್ರಾಹ್ಮಣನ ಮನೆಯಿಂದ ದುಃಖಭರಿತ, ಘೋರ ಮಹಾಶಬ್ದವನ್ನು ಕೇಳಿದಳು. ಪರಿವೇದನೆಯಲ್ಲಿ ಅಳುತ್ತಿರುವ ಎಲ್ಲರನ್ನೂ ಕೇಳಿ, ಸಾಧುಸ್ವಭಾವದ ಆ ದೇವಿಗೆ ಸಹಿಸಲು ಸಾಧ್ಯವಾಗಲಿಲ್ಲ. ದುಃಖದಿಂದ ಅವಳ ಹೃದಯವು ತುಮುಲದಲ್ಲಿರಲು ಕಲ್ಯಾಣಿ ಪೃಥೆಯು ಭೀಮನಿಗೆ ಈ

ಕೃಪಾನ್ವಿತ ಮಾತುಗಳನ್ನು ಹೇಳಿದಳು:

“ಪುತ್ರ! ಧಾರ್ತರಾಷ್ಟ್ರರಿಗೆ ತಿಳಿಯದಂತೆ ಈ ಬ್ರಾಹ್ಮಣನ ಮನೆಯಲ್ಲಿ ನಾವು ಸುಖದಿಂದ ವಾಸಿಸುತ್ತಿದ್ದೇವೆ. ಮತ್ತು ನಾವು ಇಲ್ಲಿ ಸತ್ಕೃತರಾಗಿದ್ದೇವೆ. ಬೇರೆಯವರ ಮನೆಯಲ್ಲಿ ಸುಖವಾಗಿ ವಾಸಿಸುತ್ತಿರುವವರು ಬಯಸುವಂತೆ ನಾನೂ ಕೂಡ ಈ ಬ್ರಾಹ್ಮಣನಿಗೆ ಏನನ್ನಾದರೂ ಒಳ್ಳೆಯದನ್ನು ಮಾಡಬೇಕೆಂದು ಸದಾ ಯೋಚಿಸುತ್ತಿದ್ದೆ. ಪುರುಷನು ಮಾಡಿದ ಇಂಥಹದು ಎಂದೂ ನಷ್ಟವಾಗುವುದಿಲ್ಲ. ಬೇರೆಯವರಿಗೆ ಯಾರು ಸಹಾಯಮಾಡುತ್ತಾನೋ ಅವನಿಗೆ ಅದಕ್ಕಿಂತಲೂ ಹೆಚ್ಚಿನ ಸಹಾಯವನ್ನು ಮಾಡಬೇಕು. ಈ ಬ್ರಾಹ್ಮಣನಿಗೆ ಯಾವುದೋ ಒಂದು ದುಃಖವು ಬಂದೊದಗಿದೆಯೆಂದು ತೋರುತ್ತಿದೆ. ಈಗ ಅವನಿಗೆ ಸಹಾಯ ಮಾಡಿದರೆ ಒಳ್ಳೆಯದಾಗುತ್ತದೆ.”

ಭೀಮನು ಹೇಳಿದನು:

“ಅವನಿಗೆ ಬಂದ ದುಃಖ ಏನು ಮತ್ತು ಎಲ್ಲಿಂದ ಎಂದು ತಿಳಿದುಕೊಳ್ಳೋಣ. ಅದನ್ನು ತಿಳಿದ ನಂತರ ಎಷ್ಟೇ ದುಷ್ಕರವಾಗಿರಲಿ ಏನು ಮಾಡಬೇಕೆಂದು ನಿರ್ಧರಿಸೋಣ.”

ಹೀಗೆ ಅವರೀರ್ವರೂ ಮಾತನಾಡಿಕೊಳ್ಳುತ್ತಿರುವಾಗ ಆ ಬ್ರಾಹ್ಮಣ ಮತ್ತು ಅವನ ಪತ್ನಿಯ ಆರ್ತಸ್ವರವು ಮತ್ತೊಮ್ಮೆ ಕೇಳಿಬಂದಿತು.




ಕುಂತಿಯು ತಕ್ಷಣ ತ್ವರೆಮಾಡಿ ಕಟ್ಟಿದ ಕರುವನ್ನು ನೋಡಲು ಬರುವ ಗೋವಿನಂತೆ ಆ ಮಹಾತ್ಮ ಬ್ರಾಹ್ಮಣನ ಅಂತಃಪುರವನ್ನು ಪ್ರವೇಶಿಸಿದಳು. ಅಲ್ಲಿ ಅವಳು ದುಃಖದಿಂದ ವಿಕೃತಾನನ ಬ್ರಾಹ್ಮಣನನ್ನು ಅವನ ಭಾರ್ಯೆ, ಮಗ ಮತ್ತು ಮಗಳೊಡನೆ ಕಂಡಳು.

ಬ್ರಾಹ್ಮಣನು ಹೇಳಿದನು:

> “ಬೆಂಕಿಯಂತೆ ಕೇವಲ ದುಃಖವನ್ನೇ ಕೊಡುವ ಈ ಅನರ್ಥಕ, ದುಃಖಮೂಲ, ಪರಾಧೀನ ಲೋಕ ಜೀವನಕ್ಕೇ

ಧಿಕ್ಕಾರ! ಜೀವನವೇ ಪರಮ ದುಃಖ; ಜೀವನವೇ ಪರಮ ಜ್ವರ; ಮತ್ತು ಬದುಕು ಕೇವಲ ದುಃಖಗಳ ಆಯ್ಕೆಯನ್ನು ನೀಡುತ್ತದೆ. ಧರ್ಮ, ಅರ್ಥ, ಕಾಮ ಎಲ್ಲವೂ ಒಬ್ಬನಿಗೇ ದೊರೆಯುವುದಿಲ್ಲ. ಇದೇ ಜನರ ಪರಮ ದುಃಖ. ಕೆಲವರು ಮೋಕ್ಷವೇ ಪರವೆಂದು ಹೇಳುತ್ತಾರೆ. ಆದರೆ ಅದೇ ಎಲ್ಲಿಯೂ ಇಲ್ಲ. ಹಣಸಂಪಾದನೆಯು ಕೇವಲ ನರಕವನ್ನೇ ಕೊಡುತ್ತದೆ. ಹಣದ ಹಿಂದೆ ಹೋಗುವುದು ಬಹಳ ದುಃಖವನ್ನು ತಂದೊಡ್ಡುತ್ತದೆ. ಹೆಚ್ಚು ಹಣವನ್ನು ಹೊಂದಿದವನಿಗೆ ದುಃಖವೂ ಹೆಚ್ಚಾಗಿರುತ್ತದೆ. ನನ್ನ ಮಕ್ಕಳು ಮತ್ತು ಪತ್ನಿಯ ಸಹಿತ ಸುರಕ್ಷಿತವಾದಲ್ಲಿಗೆ ಹೋಗುವುದರ ಹೊರತಾಗಿ ಈ ಆಪತ್ತಿನಿಂದ ತಪ್ಪಿಸಿಕೊಳ್ಳಲು ನನಗೆ ಬೇರೆ ಯಾವ ಮಾರ್ಗವೂ ತೋರುತ್ತಿಲ್ಲ. ಹಿಂದೆಯೇ ನಾನು ಕ್ಷೇಮಕರ ಬೇರೆ ಎಲ್ಲಿಯಾದರೂ ಹೋಗೋಣ ಎಂದು ಹೇಳಿದ್ದೆ. ಆದರೆ ನೀನು ನನ್ನ ಮಾತುಗಳನ್ನು ಕೇಳಲಿಲ್ಲ. “ಇಲ್ಲಿಯೇ ಹುಟ್ಟಿ ಬೆಳೆದಿದ್ದೇನೆ. ನನ್ನ ತಂದೆಯೂ ಇಲ್ಲಿಯೇ ಇರುತ್ತಾನೆ” ಎನ್ನುವ ದಡ್ಡ ಮಾತುಗಳಿಂದ ನನ್ನ ಎಲ್ಲ ಒತ್ತಾಯಗಳನ್ನೂ ದೂರಮಾಡಿದೆ. ಈಗ ನಿನ್ನ ತಂದೆ ತಾಯಿಯರು ಸ್ವರ್ಗವಾಸಿಗಳಾಗಿದ್ದಾರೆ, ಬಂಧುಗಳು ಕೂಡ ತೀರಿಕೊಂಡಿದ್ದಾರೆ. ಇಲ್ಲಿಯೇ ವಾಸಿಸುವುದರಿಂದ ಸಂತೋಷವಾದರೂ ಏನು ದೊರೆಯುತ್ತಿದೆ? ಅಂದು ನೀನು

ಬಂಧುಗಳ ಸಲುವಾಗಿ ನನ್ನ ಮಾತುಗಳನ್ನು ಕೇಳದೇ ಇದ್ದುದರಿಂದ ಈಗ ನಮ್ಮ ಕುಟುಂಬವನ್ನು ಕಳೆದುಕೊಳ್ಳುವ ಕಾಲ ಬಂದೊದಗಿತಲ್ಲ ಎಂದು ನನಗೆ ಅತ್ಯಂತ ದುಃಖವಾಗುತ್ತಿದೆ. ಅಥವಾ ಇದು ನನ್ನ ವಿನಾಶವನ್ನೇ ತರುತ್ತದೆ. ಏಕೆಂದರೆ, ಕರುಣೆಯಿಲ್ಲದವನಂತೆ ಬಂಧು ಯಾರನ್ನೂ ಬಲಿಕೊಟ್ಟು ಸ್ವಯಂ ನಾನು ಜೀವಿಸಿರುವುದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ! ನಿತ್ಯವೂ ನನ್ನ ತಾಯಿಯ ಸಮನಾಗಿರುವ ಸಹಧರ್ಮಚಾರಿಣಿ ನಿನ್ನನ್ನು ದೇವರಿಂದಲೇ ನನ್ನ ಸಖಿಯಾಗಿ ಪಡೆದಿದ್ದೇನೆ. ನೀನೇ ನನ್ನ ಪರಮ ಗತಿ. ಸದಾ ನನ್ನ ಗಾರ್ಹಸ್ಥ್ಯಭಾಗಿಯಾಗಿರೆಂದು ನಿನ್ನ ತಂದೆ ತಾಯಿಗಳು ನಿನ್ನನು ನನಗೆ ಮದುವೆ ಮಾಡಿಕೊಟ್ಟರು. ನಾನೂ ಕೂಡ ನ್ಯಾಯದಂತೆ ಮಂತ್ರಪೂರ್ವಕವಾಗಿ ನಿನ್ನನ್ನು ಮೆಚ್ಚಿ ಮದುವೆಯಾದೆ. ಈಗ ನನ್ನ ಜೀವನವನ್ನು ಉಳಿಸಿಕೊಳ್ಳಲೋಸುಗ ಕುಲೀನೆ, ಶೀಲಸಂಪನ್ನೆ, ಸಾಧ್ವಿ, ಅನಪಕಾರಿಣೀ, ನಿತ್ಯವೂ ಅನುವ್ರತಳಾದ, ನನ್ನ ಮಕ್ಕಳ ತಾಯಿಯಾದ ನಿನ್ನನ್ನು ಪರಿತ್ಯಜಿಸಲು ಶಕ್ತನಿಲ್ಲ. ಯೌವನದ ಚಿಹ್ನೆಗಳಿನ್ನೂ ಕಂಡುಬಂದಿರದ ಈ ಬಾಲಕಿ ಅಪ್ರಾಪ್ತವಯಸ್ಕ ನನ್ನ ಈ ಮಗಳನ್ನು ನಾನಾಗಿಯೇ ಹೇಗೆ ಪರಿತ್ಯಾಗಮಾಡಬಲ್ಲೆ? ಮಹಾತ್ಮ ಧಾತ್ರುವು ಭರ್ತುರ್ವೋರ್ವನಿಗಾಗಿ ಅವಳನ್ನು

ನನ್ನಲ್ಲಿ ಒತ್ತೆ ಇಟ್ಟಿದ್ದಾನೆ. ಮಗಳ ಮಗನಿಂದ ತೆರೆಯಲ್ಪಡುವ ಲೋಕಗಳಿಗೆ ನನ್ನ ಪಿತೃಗಳ ಸಹಿತ ನಾನೂ ಭಾಗಧಾರಿಯಾಗಿದ್ದೇನೆ. ಆದುದರಿಂದ ನಾನೇ ಜನ್ಮವಿತ್ತಿರುವ ಈ ಬಾಲಕಿಯನ್ನು ಹೇಗೆ ತಾನೆ ಪರಿತ್ಯಾಗ ಮಾಡಬಲ್ಲೆ? ತಂದೆಯಾದವನಿಗೆ ಮಗನಲ್ಲಿ ಹೆಚ್ಚು ಪ್ರೀತಿಯಿರುತ್ತದೆ ಮತ್ತು ಪುತ್ರಿಯರಲ್ಲಿ ಪ್ರೀತಿ ಅಷ್ಟು ಇರುವುದಿಲ್ಲ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ನನಗೆ ಇಬ್ಬರೂ ಒಂದೇ. ಉತ್ತಮ ಲೋಕಗಳ, ಸಂತಾನದ ಮತ್ತು ಶಾಶ್ವತ ಸುಖದ ನೆಲೆಯಾಗಿರುವ ಪಾಪರಹಿತ ಈ ಬಾಲೆಯನ್ನು ನಾನು ಹೇಗೆ ತಾನೆ ಪರಿತ್ಯಾಗ ಮಾಡಲು ಪ್ರಯತ್ನಿಸುವೆ? ನನ್ನನ್ನು ನಾನೇ ಬಲಿಕೊಟ್ಟು ಪ್ರೇತವಶನಾದರೂ ಪರಿತಪಿಸುತ್ತೇನೆ. ಏಕೆಂದರೆ ನನ್ನಿಂದ ವಿಮುಕ್ತರಾದ ಇವರು ಈ ಲೋಕದಲ್ಲಿ ಜೀವಿಸಲಾರರು ಎನ್ನುವುದು ಸ್ಪಷ್ಟ. ಇವರಲ್ಲಿ ಯಾರನ್ನು ಪರಿತ್ಯಾಗಮಾಡಿದರೂ ತಿಳಿದವರು ಗರ್ಹಿತನೆಂದು ನಿಂದಿಸುತ್ತಾರೆ. ಆದರೆ ಅತ್ಮಪರಿತ್ಯಾಗ ಮಾಡಿದರೂ ಇವರೆಲ್ಲರೂ ನನ್ನ ವಿನಹ ನಾಶಗೊಳ್ಳುತ್ತಾರೆ. ಈ ಕಷ್ಟಕರ ಮಹಾ ಆಪತ್ತಿನಲ್ಲಿ ಸಿಲುಕಿರುವ ನನಗೆ ಪಾರಾಗಲು ಶಕ್ಯವಾಗುತ್ತಿಲ್ಲ. ಸಬಾಂಧವನಾದ ನನಗೆ ಹೋಗಲಿಕ್ಕೆ ದಾರಿಯಾದರು ಏನಿದೆ? ಎಲ್ಲರೂ ಕೂಡಿ ಸಾಯುವುದೇ

ಶ್ರೇಯಸ್ಸು. ನಾನು ಬದುಕಿರುವುದಂತೂ ಸಾಧ್ಯವಿಲ್ಲ.”

ಬ್ರಾಹ್ಮಣಿಯು ಹೇಳಿದಳು:

“ಒಬ್ಬ ಸಾಮಾನ್ಯನಂತೆ ಸಂತಾಪಿಸುವುದು ನಿನಗೆ ಸರಿಯಲ್ಲ. ನಿನಂಥಹ ವಿದ್ವಾಂಸನಿಗೆ ಸಂತಾಪ ಮಾಡುವ ಕಾಲವು ಇದಲ್ಲ. ಮಾನವರೆಲ್ಲರೂ ಅವಶ್ಯವಾಗಿ ನಿಧನ ಹೊಂದಲೇ ಬೇಕು. ಅವಶ್ಯವಾಗಿರುವುದಕ್ಕೆ ಸಂತಾಪಪಡುವುದು ಸರಿಯಲ್ಲ. ಭಾರ್ಯೆ, ಪುತ್ರ ಮತ್ತು ಪುತ್ರಿ ಎಲ್ಲರನ್ನೂ ಮನುಷ್ಯನು ತನಗಾಗಿಯೇ ಬಯಸುತ್ತಾನೆ. ಸುಬುದ್ಧಿಯಿಂದ ವ್ಯಥೆಪಡುವುದನ್ನು ಬಿಡು. ಅಲ್ಲಿಗೆ ಸ್ವಯಂ ನಾನೇ ಹೋಗುತ್ತೇನೆ. ತನ್ನ ಪ್ರಾಣವನ್ನಾದರೂ ಪರಿತ್ಯಜಿಸಿ ಭರ್ತೃವಿಗೆ ಹಿತವನ್ನು ಮಾಡುವುದು ಈ ಲೋಕದ ನಾರಿಯರ ಸನಾತನ ಪರಮ ಕರ್ತವ್ಯ. ನಾನು ಹೀಗೆ ಮಾಡುವುದು ನಿನಗೆ ಇಲ್ಲಿ ಸುಖವನ್ನು ತರುತ್ತದೆ ಮತ್ತು ನನಗೆ ಇಲ್ಲಿ ಮತ್ತು ಅಲ್ಲಿ ಎರಡೂ ಕಡೆ ಅಕ್ಷಯ ಯಶಸ್ಸನ್ನು ತರುತ್ತದೆ. ನಾನು ನಿನಗೆ ಹೇಳಿದ್ದುದೇ ಶ್ರೇಷ್ಠ ಧರ್ಮ. ಇದರಿಂದ ನಿನ್ನ ಅರ್ಥ ಮತ್ತು ಧರ್ಮ ಇವೆರಡೂ ವೃದ್ಧಿಯಾಗುತ್ತವೆ. ಯಾವುದು ಬೇಕೆಂದು ಭಾರ್ಯೆಯನ್ನು ಬಯಸುತ್ತಾರೋ ಅದು ನಿನಗೆ ಈಗಾಗಲೇ ನನ್ನಿಂದ ದೊರಕಿದೆ. ಕನ್ಯೆ ಮತ್ತು ಕುಮಾರರನ್ನಿತ್ತು ನೀನು ನನ್ನನ್ನು

ಋಣಮುಕ್ತಳನ್ನಾಗಿ ಮಾಡಿದ್ದೀಯೆ. ನೀನು ಈ ಇಬ್ಬರು ಮಕ್ಕಳನ್ನೂ ಪೋಷಿಸಿ ರಕ್ಷಿಸಲು ಸಮರ್ಥನಾಗಿರುವೆ. ಆದರೆ ನಿನ್ನಹಾಗೆ ನಾನು ಇವರ ಪೋಷಣೆ-ರಕ್ಷಣೆಗೆ ಸಮರ್ಥಳಿಲ್ಲ. ನಿನ್ನನ್ನು ಕಳೆದುಕೊಂಡ ನನಗೆ ಎಲ್ಲ ಅವಶ್ಯಕತೆಗಳೂ ಆಪತ್ತುಗಳಾಗುವವು. ನೀನಿಲ್ಲದೇ ಇನ್ನೂ ಬಾಲ್ಯದಲ್ಲಿರುವ ಈ ಮಕ್ಕಳಿಬ್ಬರು ಮತ್ತು ನಾನು ಹೇಗೆ ಇರಬಲ್ಲೆವು? ನೀನಿಲ್ಲದೇ ಅನಾಥಳಾಗಿ ವಿಧವೆಯಾದ ನಾನು ಈ ಇಬ್ಬರು ಸಣ್ಣ ಮಕ್ಕಳನ್ನು ಸನ್ಮಾರ್ಗದಲ್ಲಿದ್ದುಕೊಂಡು ಹೇಗೆ ತಾನೇ ಸಾಕಬಲ್ಲೆ? ನಿನ್ನೊಡನೆ ಸಂಬಂಧವನ್ನು ಬೆಳೆಸಲು ಅಯೋಗ್ಯರಾಗಿ, ಅಹಂಕಾರದಿಂದ ಸೊಕ್ಕಿರುವವರಿಂದ ಈ ಮಗಳನ್ನು ಹೇಗೆ ತಾನೆ ರಕ್ಷಿಸಬಲ್ಲೆ? ನೆಲದ ಮೇಲೆ ಎಸೆದ ಮಾಂಸದ ತುಂಡನ್ನು ಪಕ್ಷಿಗಳೆಲ್ಲವೂ ಹೇಗೆ ಅಪೇಕ್ಷಿಸುತ್ತವೆಯೋ ಹಾಗೆ ವೀರ ಪತಿಯಿಲ್ಲದ ಸ್ತ್ರೀಯನ್ನು ಎಲ್ಲರೂ ಬಯಸುತ್ತಾರೆ. ನನ್ನನ್ನು ವಿಚಲಿತಳನ್ನಾಗಿ ಮಾಡಿ ಕೋರುತ್ತಿರುವಾಗ ಸಜ್ಜನರ ಮಾರ್ಗದಲ್ಲಿಯೇ ಇರಲು ಶಕ್ತಳಾಗುವುದಿಲ್ಲ. ನಿನ್ನ ಕುಲದ ಈ ಏಕೈಕ ಅವಿವಾಹಿತ ಬಾಲೆಯನ್ನು ಪಿತೃಪಿತಾಮಹರ ಮಾರ್ಗದಲ್ಲಿ ನಡೆಯುವಂತೆ ಹೇಗೆ ನಿರ್ವಹಿಸಬಲ್ಲೆ? ಧರ್ಮದರ್ಶಿ ನೀನಿಲ್ಲದೇ ಸರ್ವದಿಂದಲೂ ವಂಚಿತನಾಗುವ ಈ ಅನಾಥ ಬಾಲಕನಲ್ಲಿ

ಅಪೇಕ್ಷಿತ ಗುಣಗಳನ್ನು ಬೆಳೆಸಲು ನನಗೆ ಹೇಗೆ ತಾನೆ ಸಾಧ್ಯ? ಶೂದ್ರರು ವೇದಶ್ರುತಿಗಾಗಿ ಹೇಗೋ ಹಾಗೆ ಅನರ್ಹರು ನಿನ್ನ ಈ ಅನಾಥ ಬಾಲೆಯನ್ನು ಕೇಳುತ್ತಾ ನನ್ನನ್ನು ಪೀಡಿಸುತ್ತಾರೆ. ನಿನ್ನ ಸದ್ಗುಣಗಳಿಂದ ಸಂವರ್ಧಿತಳಾದ ಅವಳನ್ನು ನಾನು ಕೊಡಲು ಇಷ್ಟಪಡದಿದ್ದರೆ ಅವರು ಕಾಗೆಗಳು ಯಜ್ಞದಿಂದ ಹವಿಸ್ಸನ್ನು ಅಪಹರಿಸುವಂತೆ ಇವಳನ್ನು ಬಲಾತ್ಕಾರವಾಗಿ ಅಪಹರಿಸಿಕೊಂಡು ಹೋಗಬಹುದು. ನಿನಗೆ ಅನುರೂಪನಾಗಿ ಬೆಳೆಯದಿದ್ದ ನಿನ್ನ ಈ ಮಗನನ್ನು ಮತ್ತು ಅನರ್ಹರ ವಶಳಾಗುವ ನಿನ್ನ ಈ ಮಗಳನ್ನು ನೋಡಿದ ಜನರು ನನ್ನನ್ನು ದೂರುತ್ತಾರೆ. ಅವಲಿಪ್ತ ಜನರ ಮಧ್ಯೆ ಈ ಲೋಕದಲ್ಲಿ ನನ್ನನ್ನು ನಾನೇ ಗುರುತಿಸಲಾರದಂತಾಗಿ ನಿಸ್ಸಂಶಯವಾಗಿಯೂ ಸಾಯುತ್ತೇನೆ. ನಿನ್ನ ಮತ್ತು ನನ್ನಿಂದ ವಿಹೀನರಾದ, ನಿನ್ನಿಂದ ನನ್ನಲ್ಲಿ ಹುಟ್ಟಿದ ಈ ಇಬ್ಬರು ಮಕ್ಕಳೂ ನೀರು ಬತ್ತಿಹೋದಾಗ ಸಾಯುವ ಮೀನುಗಳಂತೆ ವಿನಾಶರಾಗುತ್ತಾರೆ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಈ ರೀತಿ ನಿನ್ನಿಂದ ವಿಹೀನರಾದ ನಾವು ಮೂವರೂ ಸರ್ವಥಾ ವಿನಾಶಹೊಂದುತ್ತೇವೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದುದರಿಂದ ನೀನು ನನ್ನನ್ನು ಪರಿತ್ಯಜಿಸುವುದು ಒಳ್ಳೆಯದು. ಬ್ರಾಹ್ಮಣ! ಭರ್ತುವಿನ ಮೊದಲೇ

ಪರಾಗತಿಯನ್ನು ಹೊಂದುವುದು ಸ್ತ್ರೀಯರಿಗೆ ಅತ್ಯಂತ ಶ್ರೇಷ್ಠ. ಪುತ್ರರ ಆಶ್ರಯದಲ್ಲಿ ಜೀವಿಸುವುದು ಸರಿಯಲ್ಲ. ನಿನಗಾಗಿ ನಾನು ನನ್ನ ಮಗ, ಮಗಳು, ಬಾಂಧವರು ಮತ್ತು ನನ್ನ ಈ ಜೀವವನ್ನೂ ಪರಿತ್ಯಜಿಸಲು ಸಿದ್ಧಳಿದ್ದೇನೆ. ಯಜ್ಞ, ತಪಸ್ಸು, ನಿಯಮ, ಮತ್ತು ದಾನ ಈ ಎಲ್ಲವುದಕ್ಕಿಂತಲೂ ನಿತ್ಯವೂ ಭರ್ತೃವಿನ ಪ್ರಿಯಹಿತ ನಿರತಳಾಗಿರುವುದು ಸ್ತ್ರೀಯ ವಿಶೇಷತೆ. ಆದುದರಿಂದ ನಾನು ನಿನಗೆ ಹೇಳುತ್ತಿರುವುದು ನಿನ್ನ ಇಷ್ಟ, ಹಿತ ಮತ್ತು ಕುಲಕ್ಕೆ ಪರಮ ಸಮ್ಮತ ಧರ್ಮ. ಆಪದ್ಧರ್ಮದಿಂದ ಮೋಕ್ಷವನ್ನು ಪಡೆಯಲು ಮಕ್ಕಳು, ಹಣ, ಸುಹೃದಯ ಪ್ರಿಯರು ಮತ್ತು ಭಾರ್ಯೆ ಬೇಕೆಂದು ತಿಳಿದಿರುವವರು ಅಭಿಪ್ರಾಯ ಪಡುತ್ತಾರೆ. ಒಂದು ಕಡೆ ಸಂಪೂರ್ಣ ಕುಲವನ್ನು ಮತ್ತು ಇನ್ನೊಂದು ಕಡೆ ತನ್ನನ್ನು ಇರಿಸಿ ತುಲನೆ ಮಾಡಿದರೆ ಅವೆಲ್ಲವೂ ಸೇರಿ ಅವನನ್ನು ಹೋಲುವುದಿಲ್ಲ ಎಂದು ತಿಳಿದವರು ಹೇಳುತ್ತಾರೆ. ಈ ಕೆಲಸವು ನನ್ನಿಂದಲೇ ನಡೆಯಲಿ. ನೀನು ನಿನ್ನನ್ನು ಉಳಿಸಿಕೋ. ನನಗೆ ಹೋಗಲಿಕ್ಕೆ ಅನುಮತಿಯನ್ನು ನೀಡು. ನನ್ನ ಈ ಮಕ್ಕಳನ್ನು ಪರಿರಕ್ಷಿಸು. ಸ್ತ್ರೀಯನ್ನು ವಧಿಸಬಾರದೆಂದು ಧರ್ಮಜ್ಞರು ಧರ್ಮನಿಶ್ಚಯಗಳಲ್ಲಿ ಹೇಳುತ್ತಾರೆ. ರಾಕ್ಷಸರೂ ಧರ್ಮಜ್ಞರಿರುತ್ತಾರೆ. ಹಾಗಾಗಿ ಅವನು ನನ್ನನ್ನು

ಕೊಲ್ಲದೆಯೂ ಇರಬಹುದು. ಪುರುಷನನ್ನು ಕೊಲ್ಲುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ಸ್ತ್ರೀಯನ್ನು ಕೊಲ್ಲುತ್ತಾನೆ ಎನ್ನುವುದರಲ್ಲಿ ಅನುಮಾನವಿದೆ. ಆದುದರಿಂದ ಧರ್ಮಜ್ಞನಾದ ನೀನು ನನಗೆ ಹೊರಡಲು ಅನುಮತಿಯನ್ನು ನೀಡು. ನಾನು ಸಾಕಷ್ಟು ಭೋಗಿಸಿದ್ದೇನೆ. ಸಂತೋಷಪಟ್ಟಿದ್ದೇನೆ. ಧರ್ಮದಲ್ಲಿ ನಡೆದುಕೊಂಡಿದ್ದೇನೆ. ಮತ್ತು ನಿನ್ನಿಂದ ಈ ಮುದ್ದು ಮಕ್ಕಳನ್ನು ಪಡೆದಿದ್ದೇನೆ. ಸಾಯಲು ನನಗೆ ದುಃಖವೇನೂ ಆಗುತ್ತಿಲ್ಲ. ಮಕ್ಕಳ ತಾಯಿಯಾಗಿದ್ದೇನೆ. ಮುದಿಯಾಗುತ್ತಿದ್ದೇನೆ. ನಿನಗೆ ಪ್ರಿಯವಾದುದನ್ನು ಮಾಡಬೇಕೆಂದು ಸದಾ ಯೋಚಿಸುತ್ತಿದ್ದೆ. ಹೀಗಾಗಿ ಇವೆಲ್ಲವನ್ನು ನೋಡಿಯೇ ನಾನು ಈ ನಿರ್ಧಾರಕ್ಕೆ ಬಂದಿದ್ದೇನೆ. ನನ್ನನ್ನು ಕಳೆದುಕೊಂಡರೂ ಕೂಡ ನಿನಗೆ ಅನ್ಯ ಸ್ತ್ರೀಯರು ದೊರಕುತ್ತಾರೆ. ನಿನ್ನ ಧರ್ಮವು ಪುನಃ ಚ್ಯುತಿಯಾಗುವುದಿಲ್ಲ. ಬಹುಪತ್ನಿಯರನ್ನು ವಿವಾಹವಾಗುವುದು ಪುರುಷರಿಗೆ ಅಧರ್ಮವೆಂದೆನಿಸಿಕೊಳ್ಳುವುದಿಲ್ಲ. ಆದರೆ ಮೊದಲ ಗಂಡನನ್ನು ಬಿಟ್ಟು ಮದುವೆಯಾಗುವುದು ಸ್ತ್ರಿಯರಿಗೆ ಮಹಾ ಅಧರ್ಮವೆನಿಸುತ್ತದೆ. ಇವೆಲ್ಲವನ್ನೂ ನೋಡಿ ಮತ್ತು ನಿನಗೆ ಆತ್ಮತ್ಯಾಗವು ಸರಿಯಲ್ಲ ಎಂದು ತಿಳಿದು ನೀನು ನಿನ್ನನ್ನು, ಕುಲವನ್ನು ಮತ್ತು ಮಕ್ಕಳನ್ನು ನನ್ನ ಮೂಲಕವೇ

ಉಳಿಸಿಕೊಳ್ಳಬೇಕು.”

ಹೀಗೆ ಹೇಳಿದ ಅವಳನ್ನು ಪತಿಯು ಆಲಿಂಗಿಸಿದನು. ಪತ್ನಿಯೂ ಸೇರಿ ಇಬ್ಬರೂ ದುಃಖ ಪೀಡಿತರಾಗಿ ಒಂದೇ ಸಮನೆ ಕಣ್ಣೀರಿಟ್ಟರು. ದುಃಖಿತರಾಗಿದ್ದ ಅವರ ಆ ಮಾತುಗಳನ್ನು ಕೇಳಿದ ಮಗಳು ದುಃಖಪರಿತಾಂಗಿಯಾಗಿ ಈ ಮಾತುಗಳನ್ನು ಹೇಳಿದಳು:

“ಅತ್ಯಂತ ದುಃಖಾರ್ತರಾಗಿ ಅನಾಥರಂತೆ ಈ ರೀತಿ ಏಕೆ ಅಳುತ್ತಿರುವಿರಿ? ನನ್ನ ಮಾತುಗಳನ್ನೂ ಸ್ವಲ್ಪ ಕೇಳಿ. ನಂತರ ಸರಿಯೆನಿಸಿದುದನ್ನು ಮಾಡುವಿರಂತೆ. ಧರ್ಮದ ಪ್ರಕಾರ ಯೌವನಕ್ಕೆ ಬಂದನಂತರ ನನ್ನನ್ನು ನೀವು ಪರಿತ್ಯಜಿಸಲೇ ಬೇಕು. ಇದರಲ್ಲಿ ಸಂಶಯವಿಲ್ಲ. ಪರಿತ್ಯಜಿಸಲೇ ಬೇಕಾದ ನನ್ನನ್ನು ಈಗಲೇ ಪರಿತ್ಯಜಿಸಿ ನನ್ನೊಬ್ಬಳಿಂದ ನೀವು ಮೂವರೂ ಉಳಿದುಕೊಳ್ಳಿ. ಮಕ್ಕಳು ನಮ್ಮನ್ನು ಪಾರುಮಾಡುತ್ತಾರೆ ಎನ್ನುವ ಉದ್ದೇಶದಿಂದಲೇ ಮಕ್ಕಳನ್ನು ಬಯಸುತ್ತಾರೆ. ಅಂತಹ ಕಾಲವು ಬಂದಿರುವಾಗ ನನ್ನನ್ನು ದೋಣಿಯನ್ನಾಗಿಸಿ ಪಾರುಮಾಡಿ. ಪುತ್ರನು ಎಲ್ಲ ರೀತಿಯಲ್ಲೂ ಪಾರುಮಾಡುತ್ತಾನೆ - ಇಲ್ಲಿ ಈ ಜೀವನದಲ್ಲಿ ಆಪತ್ತಿನಿಂದ ಪಾರು ಮಾಡುತ್ತಾನೆ ಅಥವಾ ಮರಣದ ನಂತರ ಆತ್ಮವನ್ನು ಪಾರುಮಾಡುತ್ತಾನೆ. ಆದುದರಿಂದಲೇ ತಿಳಿದವರು ಅವನಿಗೆ ಪುತ್ರ ಎಂದು ಕರೆಯುತ್ತಾರೆ.

ಪಿತಾಮಹರು ನಿತ್ಯ ಮಗಳ ಮಕ್ಕಳನ್ನೂ ಸಹ ಬಯಸುತ್ತಾರೆ. ನನ್ನ ತಂದೆಯ ಜೀವವನ್ನು ಉಳಿಸಿ ನಾನು ಅವರನ್ನೂ ಸಹ ಪಾರುಮಾಡುತ್ತೇನೆ. ನೀನು ಈ ಲೋಕದಿಂದ ಹೊರಟು ಹೋದರೆ ಈ ನನ್ನ ಬಾಲಕ ತಮ್ಮನು ಸ್ವಲ್ಪ ಸಮಯದಲ್ಲಿಯೇ ನಾಶಹೊಂದುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ತಂದೆಯೂ ಸ್ವರ್ಗವಾಸಿಯಾಗಿ, ನನ್ನ ತಮ್ಮನೂ ನಾಶವಾಗಿ ಪಿತೃಗಳ ಪಿಂಡವು ನಿಂತುಹೋದರೆ ಅವರಿಗೆ ಒಳ್ಳೆಯದಾಗುವುದಿಲ್ಲ. ತಂದೆ, ತಾಯಿ, ಹಾಗೂ ತಮ್ಮನಿಂದ ತ್ಯಕ್ತಳಾದ ನಾನಾದರೂ ದುಃಖದಿಂದ ಅತಿದುಃಖವನ್ನು ಹೊಂದಿ ನಾಶವಾಗುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಹೀಗಾಗುವುದು ಸರಿಯೆಂದು ನನಗೆ ಕಾಣುವುದಿಲ್ಲ. ನೀನೊಬ್ಬನು ಆರೋಗ್ಯದಿಂದ ಬಿಡುಗಡೆಯಾದೆಯೆಂದರೆ ನನ್ನ ತಾಯಿ, ಇನ್ನೂ ಬಾಲಕನಾಗಿರುವ ನನ್ನ ತಮ್ಮ, ವಂಶ, ಪಿಂಡ ಎಲ್ಲವೂ ನಿಸ್ಸಂಶಯವಾಗಿ ನೆಲೆಗೊಳ್ಳುವವು. ಪುತ್ರನು ಆತ್ಮ, ಭಾರ್ಯೆಯು ಸಖಿ ಮತ್ತು ಮಗಳು ಆಪತ್ತು ಎನ್ನುವುದಿಲ್ಲವೇ? ನಿನ್ನ ಈ ಆಪತ್ತಿನಿಂದ ಪಾರಾಗು ಮತ್ತು ನನ್ನನ್ನು ಧರ್ಮದೊಡನೆ ಜೋಡಿಸು. ತಂದೇ! ಬಾಲೆಯಾದ ನಾನು ನೀನಿಲ್ಲದೇ ಅನಾಥಳೂ, ಕರುಣಾಸ್ಪದಳೂ ಆಗಿ ಎಲ್ಲೆಲ್ಲಿಯೋ ತಿರುಗಾಡಬೇಕಾಗಿ ದೀನಳಾಗುವೆ. ನಾನು

ಕುಲವನ್ನು ಈ ಕಷ್ಟದಿಂದ ಪಾರುಮಾಡಿ ಬಹಳ ದುಷ್ಕರ ಕಾರ್ಯವನ್ನು ಮಾಡಿದ ಫಲವನ್ನು ಅನುಭವಿಸುತ್ತೇನೆ. ಅಥವಾ ನನ್ನನ್ನು ಬಿಟ್ಟು ನೀನು ಅವನಲ್ಲಿಗೆ ಹೋದರೆ ನಾನು ವಿಪತ್ತಿಗೊಳಗಾಗುವೆನು. ನನ್ನ ಕುರಿತೂ ಯೋಚಿಸು. ಆದುದರಿಂದ ನಮಗಾಗಿ, ಧರ್ಮಕ್ಕಾಗಿ, ಮತ್ತು ಸಂತಾನಕ್ಕಾಗಿ ನಿನ್ನನ್ನು ನೀನು ಪರಿರಕ್ಷಿಸು. ತ್ಯಕ್ತವ್ಯಳಾದ ನನ್ನನ್ನು ಪರಿತ್ಯಜಿಸು. ಅವಶ್ಯಕ ಕಾರ್ಯವನ್ನು ಕೈಗೊಳ್ಳುವುದರಲ್ಲಿ ವಿಳಂಬ ಮಾಡಬೇಡ. ನೀನು ನನಗೆ ಕೊಡುವ ತರ್ಪಣವೇ ನನಗೆ ಹಿತವನ್ನು ತರುತ್ತದೆ. ನೀನು ಸ್ವರ್ಗಸ್ಥನಾಗಿ ನಾವು ಬೇರೆಯವರಿಂದ ಅನ್ನವನ್ನು ಬೇಡುತ್ತಾ ನಾಯಿಗಳಂತೆ ಅಲೆಯುವುದಕ್ಕಿಂತ ಹೆಚ್ಚಿನ ದುಃಖವಾದರೂ ಏನಿದೆ? ಈ ಕಷ್ಟದಿಂದ ಬಂಧುಗಳ ಸಮೇತ ನೀನು ಆರೋಗ್ಯವಾಗಿ ನಿರ್ಮುಕ್ತನಾದೆಯೆಂದರೆ ಅಮೃತಲೋಕದಲ್ಲಿ ವಾಸಿಸುವ ನಾನೂ ಸುಖದಿಂದಿರುವೆ.”

ಈ ರೀತಿಯ ಬಹುವಿಧ ಪರಿವೇದನೆಯನ್ನು ನೋಡಿದ ತಂದೆ, ತಾಯಿ ಮತ್ತು ಆ ಕನ್ಯೆ ಮೂವರೂ ಬಹಳ ರೋದಿಸಿದರು. ಅವರೆಲ್ಲರೂ ರೋದಿಸುತ್ತಿರುವುದನ್ನು ನೋಡಿದ ಅವರ ಬಾಲಕ ಮಗನು ಕಣ್ಣುಗಳನ್ನು ಅಗಲವಾಗಿ ತೆರೆದು ತೊದಲು ನುಡಿಗಳಿಂದ ಈ ಮುದ್ದು ಮಾತುಗಳನ್ನಾಡಿದನು: ಮುಗುಳ್ನಗೆಯಿಂದ

“ಅಳಬೇಡ ಅಪ್ಪಾ! ಅಳಬೇಡ ಅಮ್ಮಾ! ಅಳಬೇಡ ಅಕ್ಕಾ!”

ಎನ್ನುತ್ತಾ ಪ್ರತಿಯೊಬ್ಬರ ಬಳಿಯೂ ಅಂಬೆಗಾಲಿಡುತ್ತಾ ಹೋದನು. ಆಗ ಅವನು ಒಂದು ಹುಲ್ಲುಕಡ್ಡಿಯನ್ನು ಹಿಡಿದು ಸಂತೋಷದಿಂದ ಹೇಳಿದನು:

“ಇದರಿಂದ ಆ ನರಭಕ್ಷಕ ರಾಕ್ಷಸನನ್ನು ಸಂಹರಿಸುತ್ತೇನೆ!”

ದುಃಖದಿಂದ ಆವೃತರಾಗಿದ್ದರೂ ಸಹ ಆ ಬಾಲಕನ ತೊದಲು ಮಾತುಗಳನ್ನು ಕೇಳಿದ ಅವರಿಗೆ ಮಹಾ ಹರ್ಷವಾಯಿತು.

ಇದೇ ಸರಿಯಾದ ಸಮಯವೆಂದು ತಿಳಿದು ಕುಂತಿಯು ಅವರನ್ನು ಸಮೀಪಿಸಿ ಸತ್ತವರನ್ನು ಬದುಕಿಸಬಲ್ಲ ಅಮೃತದಂತಿರುವ ಈ ಮಾತುಗಳನ್ನಾಡಿದಳು:

“ಈ ದುಃಖದ ಮೂಲ ಯಾವುದು ಎನ್ನುವುದನ್ನು ಸ್ಪಷ್ಟವಾಗಿ ತಿಳಿಯ ಬಯಸುತ್ತೇನೆ. ಅದನ್ನು ತಿಳಿದ ನಂತರ ಹೋಗಲಾಡಿಸಬಹುದಾದರೆ ಹೋಗಲಾಡಿಸುತ್ತೇನೆ.”

ಬ್ರಾಹ್ಮಣನು ಹೇಳಿದನು:

“ತಪೋಧನೇ! ನೀನು ಒಳ್ಳೆಯ ಮಾತುಗಳನ್ನೇ ಆಡಿದ್ದೀಯೆ. ಆದರೆ ಈ ದುಃಖವನ್ನು ಹೋಗಲಾಡಿಸಲು ಯಾವ ಮನುಷ್ಯನಿಂದಲೂ ಸಾಧ್ಯವಿಲ್ಲ. ಈ ನಗರದ ಸಮೀಪದಲ್ಲಿ

ಬಕ ಎನ್ನುವ ರಾಕ್ಷಸನು ವಾಸಿಸುತ್ತಾನೆ. ಆ ಮಹಾಬಲಿಯು ಈ ಜನಪದ ಮತ್ತು ನಗರಗಳನ್ನು ಆಳುತ್ತಿದ್ದಾನೆ. ಈ ಪುರುಷಾದಕ ದುರ್ಬುದ್ಧಿಯು ಮಾನುಷ ಮಾಂಸವನ್ನು ತಿಂದು ಕೊಬ್ಬಿದ್ದಾನೆ. ಅಸುರರಾಜ, ರಾಕ್ಷಸಬಲಸಮನ್ವಿತ ಆ ಬಲಶಾಲಿಯು ಜನಪದ, ನಗರ ಮತ್ತು ದೇಶವನ್ನು ರಕ್ಷಿಸುತ್ತಿದ್ದಾನೆ. ಅವನಿಂದಾಗಿ ನಮಗೆ ಶತ್ರುಗಳಿಂದ ಅಥವಾ ಯಾರಿಂದಲೂ ಭಯವೇ ಇಲ್ಲದಂತಾಗಿದೆ. ಅವನ ವಿಹಿತ ವೇತನವು ಒಂದು ಬಂಡಿ ಭೋಜನ, ಎರಡು ಎಮ್ಮೆಗಳು, ಮತ್ತು ಅವುಗಳನ್ನು ಅವನಲ್ಲಿಗೆ ತೆಗೆದುಕೊಂಡು ಹೋಗುವ ಓರ್ವ ಪುರುಷ. ಒಬ್ಬೊಬ್ಬರಾಗಿ ಎಲ್ಲರೂ ಅವನಿಗೆ ಭೋಜನವನ್ನು ಕಳುಹಿಸುತ್ತಾರೆ. ಆದರೆ ಬಹಳ ವರ್ಷಗಳಿಗೊಮ್ಮೆ ಬರುವ ಬಾರಿಯು ಬಂದಾಗ ಮನುಷ್ಯನಿಗೆ ಅದರಿಂದ ತಪ್ಪಿಸಿಕೊಳ್ಳಲು ಕಷ್ಟವಾಗುತ್ತದೆ. ಒಂದುವೇಳೆ ಯಾರಾದರೂ ಇದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಅವನನ್ನು ಆ ರಾಕ್ಷಸನು ಪುತ್ರ ಮತ್ತು ಪತ್ನಿ ಸಹಿತ ಕೊಂದು ಭಕ್ಷಿಸುತ್ತಾನೆ. ವೈತ್ರಕೀಯ ಗೃಹದಲ್ಲಿರುವ ನಮ್ಮ ರಾಜನು ತನ್ನ ಜನರನ್ನು ಈ ಪೀಡೆಯಿಂದ ಶಾಶ್ವತವಾಗಿ ಮುಕ್ತಿಗೊಳಿಸಲು ಯಾವುದೇ ರೀತಿಯ ಯೋಜನೆಯನ್ನೂ ಹೊಂದಿಲ್ಲ. ಕುರಾಜನ ಆಶ್ರಯದಲ್ಲಿ ಯಾವಾಗಲೂ ಉದ್ವಿಗ್ನರಾಗಿರುವ, ದುರ್ಬಲ ರಾಜನ

ರಾಜ್ಯದಲ್ಲಿರುವ ನಾವು ಇದಕ್ಕೆ ಅರ್ಹರಾಗಿದ್ದೇವೆ. ಬ್ರಾಹ್ಮಣರು ಯಾರ ಮಾತಿಗೂ ಒಳಪಡದೇ ಯಾರ ಇಚ್ಛೆಗೂ ಅಧೀನರಾಗಿ ನಡೆದುಕೊಳ್ಳದೇ ಇಚ್ಛೆಬಂದಂತೆ ಸಂಚರಿಸುವ ಪಕ್ಷಿಗಳೆಂದೂ ತಮ್ಮ ಗುಣಗಳಿಗೆ ಮಾತ್ರ ಅಧೀನರಾಗಿರುತ್ತಾರೆಂದು ಹೇಳುತ್ತಾರೆ. ಮೊದಲು ರಾಜನನ್ನು ಹುಡುಕಿಕೊಳ್ಳಬೇಕು ನಂತರ ಭಾರ್ಯೆಯನ್ನು ಮತ್ತು ಧನವನ್ನು. ಈ ಮೂರನ್ನೂ ಪಡೆದವನು ತನ್ನ ಪುತ್ರರನ್ನು ಮತ್ತು ಬಾಂಧವರನ್ನು ಪಾಲಿಸಬಹುದು. ಆದರೆ ನಾನು ಈ ಮೂರನ್ನೂ ವಿಪರೀತವಾಗಿ ಪಡೆದೆ (ಮೊದಲು ಧನ, ನಂತರ ಪತ್ನಿ ಮತ್ತು ಅಂತ್ಯದಲ್ಲಿ ರಾಜ). ಈಗ ನಾವು ಈ ಆಪತ್ತಿನಲ್ಲಿ ಸಿಲುಕಿದ್ದೇವೆ ಮತ್ತು ನಾವೇ ಇದನ್ನು ಅನುಭವಿಸಬೇಕು. ಆ ಕುಲವಿನಾಶಕ ಬಾರಿಯು ಈಗ ನಮಗೆ ಬಂದಿದೆ. ಅವನಿಗೆ ನಾನು ಓರ್ವ ಪುರುಷನನ್ನು ಭೋಜನವಾಗಿ ಕಳುಹಿಸಬೇಕಾಗಿದೆ. ಎಲ್ಲಿಂದಲಾದರೂ ವ್ಯಕ್ತಿಯೋರ್ವನನ್ನು ಖರೀದಿಸೋಣ ಎಂದರೂ ನನ್ನಲ್ಲಿ ಹಣವಿಲ್ಲ. ನನ್ನ ಕುಟುಂಬದ ಯಾರನ್ನು ಕೊಡಲೂ ಶಕ್ಯನಾಗಿಲ್ಲ. ಆ ರಾಕ್ಷಸನಿಂದ ಬಿಡುಗಡೆಹೊಂದುವ ಯಾವ ದಾರಿಯೂ ನನಗೆ ಕಾಣುತ್ತಿಲ್ಲ. ಹೀಗೆ ನಾನು ದುಃಖಸಾಗರದಲ್ಲಿ ಮುಳುಗಿ ಯಾವುದೇ ರೀತಿಯ ಬಿಡುಗಡೆ ದೊರೆಯದಂತಾಗಿದ್ದೇನೆ. ಈಗ ನಾನು ನನ್ನ ಇಡೀ

ಕುಟುಂಬ ಸಮೇತ ಆ ರಾಕ್ಷಸನಲ್ಲಿಗೆ ಹೋಗುತ್ತೇನೆ. ಆ ಕ್ಷುದ್ರ ರಾಕ್ಷಸನು ನಮ್ಮೆಲ್ಲರನ್ನೂ ತಿನ್ನಲಿ.”

ಕುಂತಿಯು ಹೇಳಿದಳು:

“ನಿನ್ನ ಈ ಪರಿಸ್ಥಿತಿಯ ಕುರಿತು ಸ್ವಲ್ಪವೂ ವಿಷಾದಿಸಬೇಡ. ಆ ರಾಕ್ಷಸನಿಂದ ಬಿಡುಗಡೆ ಹೊಂದಲು ನನಗೆ ಒಂದು ಉಪಾಯವು ತೋಚುತ್ತಿದೆ. ನಿನಗೆ ಒಬ್ಬನೇ ಒಬ್ಬ ಮಗನಿದ್ದಾನೆ ಮತ್ತು ಅವನೂ ಬಾಲಕನಿದ್ದಾನೆ. ಹಾಗೂ ಓರ್ವ ತಪಸ್ವಿನೀ ಕನ್ಯೆಯಿದ್ದಾಳೆ. ನೀನಾಗಲೀ ಅಥವಾ ನಿನ್ನ ಪತ್ನಿಯಾಗಲೀ ಅಲ್ಲಿಗೆ ಹೋಗುವುದು ನನಗೆ ಸರಿಯೆನಿಸುವುದಿಲ್ಲ. ಬ್ರಾಹ್ಮಣ! ನನಗೆ ಐವರು ಮಕ್ಕಳಿದ್ದಾರೆ. ಅವರಲ್ಲಿ ಒಬ್ಬನು ಹೋಗುತ್ತಾನೆ ಮತ್ತು ನಿನ್ನ ಪರವಾಗಿ ಆ ಪಾಪಿ ರಾಕ್ಷಸನಿಗೆ ಬಲಿಯನ್ನು ತೆಗೆದುಕೊಂಡು ಹೋಗುತ್ತಾನೆ.”

ಬ್ರಾಹ್ಮಣನು ಹೇಳಿದನು:

“ನನ್ನ ಜೀವನವನ್ನು ಹಿಡಿದುಕೊಂಡು ಬ್ರಾಹ್ಮಣ ಅತಿಥಿಯೊಬ್ಬನು ನನಗಾಗಿ ತನ್ನ ಪ್ರಾಣವನ್ನು ಬಿಡುವಂಥಹ ಕಾರ್ಯವನ್ನು ಎಂದೂ ಮಾಡುವುದಿಲ್ಲ. ಒಬ್ಬ ಬ್ರಾಹ್ಮಣನಿಗಾಗಿ ತನ್ನನ್ನಾಗಲೀ ಅಥವಾ ತನ್ನ ಮಗನನ್ನಾಗಲೀ ತ್ಯಜಿಸುವುದು ಅಧರ್ಮಿಷ್ಠರಲ್ಲಿ ಅಥವಾ

ಅಕುಲೀನರಲ್ಲಿಯೂ ನಡೆಯುವುದಿಲ್ಲ. ನನಗೆ ಯಾವುದು ಶ್ರೇಯಸ್ಸನ್ನು ತಂದು ಕೊಡುತ್ತದೆ ಎನ್ನುವುದನ್ನು ನಾನೇ ಅರ್ಥಮಾಡಿಕೊಳ್ಳಬೇಕು ಎಂದು ನನಗನ್ನಿಸುತ್ತದೆ. ಬ್ರಾಹ್ಮಣನನ್ನು ಕೊಲ್ಲುವುದು ಮತ್ತು ತಾನೇ ಸಾಯುವುದು ಇವೆರಡರಲ್ಲಿ ಆತ್ಮವಧೆಯೇ ಶ್ರೇಯಸ್ಸು ಎಂದು ನನಗನ್ನಿಸುತ್ತಿದೆ. ಬ್ರಹ್ಮವಧೆಯು ಪರಮ ಪಾಪ ಮತ್ತು ಅದಕ್ಕೆ ಯಾವುದೇ ರೀತಿಯ ನಿಷ್ಕೃತಿಯೂ ಇಲ್ಲ. ಅಬುದ್ಧಿಪೂರ್ವಕವಾಗಿ ಮಾಡಿದರೂ ಆತ್ಮವಧೆಯೇ ನನಗೆ ಶ್ರೇಯಸ್ಸು. ಶುಭೇ! ಆದರೂ ನಾನು ಆತ್ಮಹತ್ಯೆ ಮಾಡಿಕೊಳ್ಳಲು ಬಯಸುವುದಿಲ್ಲ. ಆದರೆ ಇನ್ನೊಬ್ಬರು ನನ್ನನ್ನು ವಧಿಸುವುದರಿಂದ ನನಗೆ ಆ ಪಾಪ ಸ್ವಲ್ಪವೂ ಬರುವುದಿಲ್ಲ ಎಂದು ತಿಳಿದಿದ್ದೇನೆ. ಆದರೆ ತಿಳಿದೂ ತಿಳಿದೂ ಬ್ರಾಹ್ಮಣನ ವಧೆಯಲ್ಲಿ ನಾನು ಭಾಗವಹಿಸಿದರೆ ಆ ಹೀನ ಕ್ರೂರ ಕೃತ್ಯಕ್ಕೆ ಯಾವುದೇರೀತಿಯ ನಿಷ್ಕೃತಿಯೂ ನನಗೆ ತೋಚುವುದಿಲ್ಲ. ಮನೆಗೆ ಬಂದವನನ್ನು ತ್ಯಾಗಮಾಡುವುದು, ಅಥವಾ ಶರಣಾರ್ಥಿಯನ್ನು ಹಾಗೂ ಬೇಡುವವನನ್ನು ವಧಿಸುವುದು ಅತ್ಯಂತ ಹೀನ ಕೃತ್ಯ ಎಂದು ನನಗನ್ನಿಸುತ್ತದೆ. ಎಂದೂ ನಿಂದಿತ ಹೀನ ಕೃತ್ಯವನ್ನು ಮಾಡಬಾರದು ಎಂದು ಹಿಂದಿನ ಮಹಾತ್ಮರು ಮತ್ತು ಆಪದ್ಧರ್ಮವನ್ನು ಅರಿತವರು ತಿಳಿಸಿದ್ದಾರೆ. ಪತ್ನಿಯ ಸಹಿತ

ನಾನೇ ಸಾಯುವುದು ನನಗೆ ಶ್ರೇಯಸ್ಸು. ಎಂದೂ ನಾನು ಬ್ರಾಹ್ಮಣನ ವಧೆಯನ್ನು ಒಪ್ಪುವುದಿಲ್ಲ."

ಕುಂತಿಯು ಹೇಳಿದಳು:

"ಬ್ರಾಹ್ಮಣ! ವಿಪ್ರರ ರಕ್ಷಣೆ ಮಾಡಬೇಕೆನ್ನುವುದು ನನ್ನ ದೃಢ ಅಭಿಪ್ರಾಯ. ನನಗೆ ಒಂದು ನೂರು ಪುತ್ರರಿದ್ದರೂ ನಾನು ಯಾರೊಬ್ಬನನ್ನೂ ಕಡಿಮೆ ಪ್ರೀತಿಸುತ್ತಿರಲಿಲ್ಲ. ಆದರೆ ರಾಕ್ಷಸನು ನನ್ನ ಈ ಪುತ್ರನನ್ನು ಕೊಲ್ಲಲು ಶಕ್ತನಿಲ್ಲ. ನನ್ನ ಈ ವೀರ ತೇಜಸ್ವಿ ಮಗನು ಮಂತ್ರಸಿದ್ಧಿಯನ್ನು ಹೊಂದಿದ್ದಾನೆ. ನನ್ನ ಮಗನು ರಾಕ್ಷಸನಿಗೆ ಆ ಭೋಜನವೆಲ್ಲವನ್ನೂ ತೆಗೆದುಕೊಂಡು ಹೋಗಿ ಒಪ್ಪಿಸಿ ಅವನಿಂದ ನಿಶ್ಚಿತವಾಗಿಯೂ ತನ್ನನ್ನು ತಾನು ಬಿಡುಗಡೆ ಮಾಡಿಸಿಕೊಳ್ಳುತ್ತಾನೆ ಎಂದು ನನಗೆ ವಿಶ್ವಾಸವಿದೆ. ಇದಕ್ಕೂ ಮೊದಲೇ ಹಲವು ಬಲಶಾಲಿ ಮಹಾಕಾಯ ರಾಕ್ಷಸರು ಈ ವೀರನನ್ನು ಎದುರಿಸಿ ಅವನಿಂದ ವಧಿಸಲ್ಪಟ್ಟಿದ್ದಾರೆ. ಆದರೆ ನೀನು ಇದರ ಕುರಿತು ಯಾರಿಗೂ ಯಾವ ಕಾರಣಕ್ಕೂ ಸ್ವಲ್ಪವೂ ತಿಳಿಸಬಾರದು. ಯಾಕೆಂದರೆ ಜನರು ಕುತೂಹಲದಿಂದ ಗುಟ್ಟನ್ನು ತಿಳಿಯಲು ಕಷ್ಟಕೊಡಬಹುದು. ನನ್ನ ಮಗನು ಇದನ್ನು ಗುರುವಿನ ಅನುಜ್ಞೆಯಿಲ್ಲದೇ ಇನ್ನೊಬ್ಬರಿಗೆ ತಿಳಿಸಿದರೆ ಅದು ಕಾರ್ಯವನ್ನು ಎಸಗದೇ

ಇರಬಹುದು ಎಂದು ತಿಳಿದವರು ಅಭಿಪ್ರಾಯ ಪಡುತ್ತಾರೆ.”

ಪೃಥಾಳು ಹೀಗೆ ಹೇಳಲು ಪತ್ನಿಸಮೇತ ಆ ವಿಪ್ರನು ಸಂತೋಷಗೊಂಡು ಆ ಅಮೃತೋಪಮ ಮಾತುಗಳನ್ನು ಆದರಿಸಿದನು. ಆಗ ಕುಂತಿ ಮತ್ತು ವಿಪ್ರ ಇಬ್ಬರೂ ಸೇರಿ ಅನಿಲಾತ್ಮಜನಿಗೆ ಏನೇನು ಮಾಡಬೇಕೆಂದು ಹೇಳಿದರು. ಅವನು ಅವರಿಬ್ಬರಿಗೂ “ಹಾಗೆಯೇ ಆಗಲಿ!” ಎಂದನು. ಮಾಡುತ್ತೇನೆ ಎಂದು ಭೀಮನು ಪ್ರತಿಜ್ಞೆಯನ್ನಿತ್ತ ನಂತರ ಭಿಕ್ಷೆಯನ್ನು ತೆಗೆದುಕೊಂಡು ಎಲ್ಲ ಪಾಂಡವರೂ ಮರಳಿದರು. ಪಾಂಡುಪುತ್ರ ಯುಧಿಷ್ಠಿರನು ಅವನ ತೋರಿಕೆಯಿಂದಲೇ ಏನೋ ರಹಸ್ಯವಿದೆಯೆಂದು ತಿಳಿದುಕೊಂಡು ತನ್ನ ತಾಯಿ ಒಬ್ಬಳನ್ನೇ ಕೂರಿಸಿಕೊಂಡು ಪ್ರಶ್ನಿಸಿದನು:

> “ಭೀಮಪರಾಕ್ರಮಿ ಭೀಮನು ಏನನ್ನು ಮಾಡಲು ಉತ್ಸುಕನಾಗಿದ್ದಾನೆ? ಅವನು ಏನನ್ನೋ ಮಾಡಲು ಬಯಸುತ್ತಿದ್ದಾನೆ ಮತ್ತು ಅದಕ್ಕೆ ನಿನ್ನ ಅನುಮತಿಯಿದ್ದಂತಿದೆ.”

ಕುಂತಿಯು ಹೇಳಿದಳು:

> “ನನ್ನ ಹೇಳಿಕೆಯಂತೆ ಆ ಪರಂತಪನು ಬ್ರಾಹ್ಮಣನಿಗಾಗಿ ಒಂದು ಮಹಾಕಾರ್ಯವನ್ನು ಮಾಡಿ ಈ ನಗರವನ್ನು ಬಿಡುಗಡೆಮಾಡಲಿದ್ದಾನೆ.”

ಯುಧಿಷ್ಠಿರನು ಹೇಳಿದನು:

“ಇದೆಂತಹ ತೀಕ್ಷ್ಣ ದುಷ್ಕರ ಸಾಹಸ ಕಾರ್ಯವನ್ನೆಸಗಿದೆ! ಸಾಧುಗಳು ಪುತ್ರ ಪರಿತ್ಯಾಗವನ್ನು ಪ್ರಶಂಸಿಸುವುದಿಲ್ಲ. ಪರಸುತನ ಸಲುವಾಗಿ ಸ್ವಸುತನನ್ನು ತ್ಯಜಿಸಲು ಹೇಗೆ ಇಚ್ಛಿಸುವೆ? ನಿನ್ನ ಪುತ್ರನ ತ್ಯಾಗಗೈದು ನೀನು ಲೋಕಾವೃತ್ತಿಯ ವಿರುದ್ಧ ನಡೆಯುತ್ತಿದ್ದೀಯೆ. ಅವನ ಬಾಹುಗಳ ಆಶ್ರಯವನ್ನೇ ಹೊಂದಿ ನಾವೆಲ್ಲರೂ ಸುಖ ನಿದ್ದೆಯನ್ನು ಮಾಡಬಲ್ಲೆವು ಮತ್ತು ಕೆಟ್ಟಜನರಿಂದ ಅಪಹೃತ ರಾಜ್ಯವನ್ನು ಪುನಃ ಹಿಂದೆ ತೆಗೆದುಕೊಳ್ಳುವುದಕ್ಕೂ ಇವನೇ ಸಹಾಯಮಾಡುವವನು. ಆ ಅಮಿತೌಜಸನ ವೀರ್ಯದಿಂದಾಗಿ ದುರ್ಯೋಧನನೂ ಚಿಂತೆಗೊಳಗಾಗುತ್ತಾನೆ ಮತ್ತು ಅವನಿಂದಾಗಿ ಶಕುನಿಯೂ ಸೇರಿ ಎಲ್ಲರೂ ದುಃಖದಿಂದ ನಿದ್ದೆ ಮಾಡುವುದಿಲ್ಲ. ಆ ವೀರನ ಧೈರ್ಯದಿಂದಲೇ ನಾವು ಜತುಗೃಹ ಮತ್ತು ಇತರ ಆಪತ್ತುಗಳಿಂದ ತಪ್ಪಿಸಿಕೊಂಡೆವು ಮತ್ತು ಪುರೋಚನನು ಸತ್ತುಹೋದ. ಅವನ ಧೈರ್ಯದ ಆಸರೆಯಲ್ಲಿಯೇ ನಾವು ಧೃತರಾಷ್ಟ್ರಜರನ್ನು ಕೊಂದು ಈ ವಸುಪೂರ್ಣೆ ವಸುಂಧರೆಯನ್ನು ಪಡೆಯುತ್ತೇವೆ ಎಂದು ಅಂದುಕೊಂಡಿದ್ದೇವೆ. ಇಂಥ ಅವನನ್ನು

ಪರಿತ್ಯಾಗಮಾಡಬೇಕೆಂಬುದು ನಿನ್ನ ಬುದ್ಧಿಗೆ ಹೇಗಾದರೂ ಬಂದಿತು? ದುಃಖದಿಂದ ನಿನ್ನ ಬುದ್ಧಿಯು ತೊಳೆದು ಹೋಗಿ ಬುದ್ಧಿಯಿಲ್ಲದವಳಂತೆ ಆಗಿಲ್ಲ ತಾನೆ?"

ಕುಂತಿಯು ಹೇಳಿದಳು:

"ಯುಧಿಷ್ಠಿರ! ವೃಕೋದರನ ವಿಷಯದಲ್ಲಿ ಸಂತಾಪಪಡಬೇಡ. ನಾನು ಬುದ್ಧಿ ದೌರ್ಬಲ್ಯದಿಂದ ಈ ನಿಶ್ಚಯವನ್ನು ತೆಗೆದುಕೊಂಡಿಲ್ಲ. ಈ ವಿಪ್ರನ ಮನೆಯಲ್ಲಿ ನಾವು ಸುಖವಾಗಿ ವಾಸಿಸುತ್ತಿದ್ದೇವೆ. ಅದಕ್ಕೆ ಪ್ರತಿಕ್ರಿಯೆಯಾಗಿ ನಾನು ಇದನ್ನು ಪರಿಗಣಿಸುತ್ತಿದ್ದೇನೆ. ಇಂಥಹ ಪುರುಷನಿಗೆ ಎಷ್ಟು ಮಾಡಿದರೂ ಸಾಕಾಗುವುದಿಲ್ಲ. ಜತುಗೃಹದಲ್ಲಿ ಭೀಮನ ಮಹಾ ವಿಕ್ರಾಂತ ಮತ್ತು ಹಿಡಿಂಬನ ವಧೆಯನ್ನು ನೋಡಿ ನನಗೆ ವೃಕೋದರನಲ್ಲಿ ವಿಶ್ವಾಸವಾಗಿದೆ. ಭೀಮನ ಬಾಹುಗಳ ಬಲವು ಆನೆಗಳ ಒಂದು ದೊಡ್ಡ ಗುಂಪಿಗೆ ಸಮನಾಗಿದೆ. ಅದೇ ಬಾಹುಗಳಿಂದ ಆನೆಗಳಂತಿರುವ ಪ್ರತಿಯೊಬ್ಬ ನಿಮ್ಮೆಲ್ಲರನ್ನೂ ವಾರಣಾವತದಿಂದ ಹೊತ್ತು ತಂದನು. ವೃಕೋದರನಷ್ಟು ಬಲಶಾಲಿಯಾದವನು ಬೇರೆ ಯಾರೂ ಇದಕ್ಕೆ ಮೊದಲೂ ಇರಲಿಲ್ಲ ಇನ್ನುಮುಂದೆಯೂ ಇರುವುದಿಲ್ಲ. ಅವನು ಯುದ್ಧದಲ್ಲಿ ಶ್ರೇಷ್ಠ ಯಾರನ್ನೂ,

ಸ್ವಯಂ ವಜ್ರಧರನನ್ನೂ ಎದುರಿಸಬಲ್ಲ. ಅವನ ದೇಹವು ಎಷ್ಟು ಗಟ್ಟಿಯಿದೆಯೆಂದರೆ - ಹಿಂದೆ ಹುಟ್ಟಿದ ಕೆಲವೇ ಸಮಯದಲ್ಲಿ ಅವನು ನನ್ನ ತೊಡೆಯಿಂದ ಪರ್ವತದ ಕೆಳಗೆ ಬಿದ್ದಾಗ ಅವನು ತನ್ನ ದೇಹದಿಂದ ಶಿಲೆಯನ್ನು ಒಡೆದು ಪುಡಿಮಾಡಿದನು. ಭೀಮನ ಬಲವನ್ನು ನೆನಪಿಸಿಕೊಂಡ ನಾನು ಸಂಪೂರ್ಣ ಪ್ರಜ್ಞೆಯಲ್ಲಿದ್ದೆ. ಆದುದರಿಂದಲೇ ನಾನು ಈ ಬ್ರಾಹ್ಮಣನಿಗೆ ಪ್ರತೀಕಾರವನ್ನು ಮಾಡಲು ಮನಸ್ಸುಮಾಡಿದೆ. ಇದನ್ನು ನಾನು ಲೋಭ ಅಥವಾ ಅಜ್ಞಾನ ಅಥವಾ ಮೋಹದಿಂದ ನಿರ್ಧರಿಸಲಿಲ್ಲ. ಬುದ್ಧಿಪೂರ್ವಕವಾಗಿ ಧರ್ಮ ಪೂರಕವಾಗಿಯೇ ನಾನು ಇದನ್ನು ನಿಶ್ಚಯಿಸಿದೆ. ಈ ರೀತಿಯಲ್ಲಿ ಎರಡು ಉದ್ದೇಶಗಳನ್ನು ಪೂರೈಸಬಹುದು: ನಮ್ಮ ವಸತಿಗೆ ಪ್ರತೀಕಾರ ಮತ್ತು ಅತಿ ದೊಡ್ಡ ಧರ್ಮವನ್ನು ಪಾಲಿಸುವುದು. ಬ್ರಾಹ್ಮಣನಿಗೆ ಯಾವುದೇ ವಿಷಯದಲ್ಲಿ ಯಾವುದೇ ರೀತಿಯಲ್ಲಿ ಸಹಾಯವನ್ನು ಮಾಡುವ ಕ್ಷತ್ರಿಯನಿಗೆ ಶುಭ ಲೋಕಗಳು ಪ್ರಾಪ್ತವಾಗುತ್ತವೆ ಎಂದು ಕೇಳಿದ್ದೇನೆ. ಇನ್ನೊಬ್ಬ ಕ್ಷತ್ರಿಯನನ್ನು ಸಾವಿನಿಂದ ಬಿಡುಗಡೆಮಾಡಿದ ಕ್ಷತ್ರಿಯನಿಗೆ ವಿಪುಲ ಕೀರ್ತಿ ಮತ್ತು ಲೋಕಗಳು ಇಲ್ಲಿ ಮತ್ತು ಪರದಲ್ಲಿ ದೊರೆಯುತ್ತವೆ. ಯುದ್ಧದಲ್ಲಿ ವೈಶ್ಯನಿಗೆ ಸಹಾಯಮಾಡುವ ಕ್ಷತ್ರಿಯನು

ಕೂಡ ಸರ್ವ ಲೋಕಗಳಲ್ಲಿ ಪ್ರಜೆಗಳ ಪ್ರೀತಿಯನ್ನು ಅನುಭವಿಸುತ್ತಾನೆ ಎನ್ನುವುದು ಸತ್ಯ. ಶರಣಾರ್ಥಿಯಾಗಿ ಬಂದ ಶೂದ್ರನನ್ನು ಬಿಡುಗಡೆ ಮಾಡಿದ ರಾಜನು ರಾಜಸತ್ಕೃತನಾಗಿ ಶ್ರೀಮಂತ ಕುಲದಲ್ಲಿ ಜನ್ಮವನ್ನು ತಾಳುತ್ತಾನೆ. ಈ ರೀತಿ ಆ ಭಗವಾನ್ ವ್ಯಾಸನು ಹಿಂದೆ ಹೇಳುತ್ತಿದ್ದನು. ಇದು ನಿಜವಾಗಿಯೂ ವಿವೇಕದ ಮಾತುಗಳು. ಆದುದರಿಂದ ನಾನು ಇದನ್ನು ಮಾಡಲು ಬಯಸುತ್ತೇನೆ.”

ಯುಧಿಷ್ಠಿರನು ಹೇಳಿದನು:

“ಮಾತೆ! ಬುದ್ಧಿಪೂರ್ವಕವಾಗಿ ನೀನು ಮಾಡಲು ತೊಡಗಿರುವುದು ಸರಿಯಾಗಿಯೇ ಇದೆ. ಆರ್ತ ಬ್ರಾಹ್ಮಣನಿಗೆ ದಯೆಯಿಂದ ಮಾಡುತ್ತಿದ್ದೀಯೆ. ಆದರೆ ಬ್ರಾಹ್ಮಣನು ಈ ವಿಷಯವನ್ನು ಬೇರೆ ಯಾರಲ್ಲಿಯೂ ಹೇಳದಂತೆ ಎಚ್ಚರ ವಹಿಸಬೇಕು. ನಗರವಾಸಿಗಳಿಗೆ ಇದರ ಕುರಿತು ಏನೂ ತಿಳಿಯಬಾರದು.”

ರಾತ್ರಿ ಕಳೆದ ನಂತರ ಪಾಂಡವ ಭೀಮಸೇನನು ಆಹಾರವನ್ನು ತೆಗೆದುಕೊಂಡು ಆ ಪುರುಷಾದಕನು ವಾಸಿಸುತ್ತಿರುವಲ್ಲಿಗೆ ಹೋದನು. ರಾಕ್ಷಸನ ಆ ವನವನ್ನು ತಲುಪಿದ ಬಲಶಾಲಿ ಪಾಂಡವನು ಅವನನ್ನು ಅವನ ಹೆಸರಿನಿಂದ ಕೂಗಿ ಕರೆದು ಆಹಾರವನ್ನು ತಿನ್ನ ತೊಡಗಿದನು.

ಭೀಮಸೇನನ ಆ ಕೂಗನ್ನು ಕೇಳಿದ ಆ ರಾಕ್ಷಸನು ಸಂಕೃದ್ಧನಾಗಿ ಬೀಮನು ನಿಂತಿರುವಲ್ಲಿಗೆ ಬಂದನು. ಮೂರು ಹುಬ್ಬುಗಳನ್ನು ಶಿಖಗಳನ್ನಾಗಿ ಕಟ್ಟಿ ಹಲ್ಲುಗಳ ಮೊಸಡೆಗಳನ್ನು ಕಡಿಯುತ್ತಾ ಆ ಮಹಾಕಾಯನು ಮೇದಿನಿಯನ್ನು ಪುಡಿಮಾಡುತ್ತಾನೋ ಎನ್ನುವಂತೆ ಮಹಾವೇಗದಲ್ಲಿ ಬಂದನು. ಅನ್ನವನ್ನು ತಿನ್ನುತ್ತಿರುವ ಭೀಮಸೇನನನ್ನು ನೋಡಿದ ಆ ರಾಕ್ಷಸನು ಸಿಟ್ಟಿನಿಂದ ಕಣ್ಣುಗಳನ್ನು ಅಗಲಿಸಿ ಈ ಮಾತುಗಳನ್ನಾಡಿದನು:

> “ನನಗಾಗಿ ಕಳುಹಿಸಿದ ಈ ಅಹಾರವನ್ನು, ನಾನು ನೋಡುತ್ತಿರುವ ಹಾಗೆಯೇ ತಿನ್ನುತ್ತಿರುವ ದುರ್ಬುದ್ಧಿ ನೀನು ಯಾರು? ಯಮಸಾದನಕ್ಕೆ ಹೋಗಲು ಬಯಸುತ್ತಿದ್ದೀಯಾ?”

ಅವನನ್ನು ಕೇಳಿದ ಭೀಮಸೇನನು ನಗುತ್ತಾ ಆ ರಾಕ್ಷಸನನ್ನು ತಿರಸ್ಕರಿಸಿ ಬೇರೆ ಕಡೆ ಮುಖ ತಿರುಗಿಸಿ ತಿನ್ನುವುದನ್ನು ಮುಂದುವರೆಸಿದನು. ಆಗ ಆ ಪುರುಷಾಧಕನು ಒಂದು ಭೈರವ ಕೂಗನ್ನು ಕೂಗಿ, ಎರಡೂ ತೋಳುಗಳನ್ನೂ ಮೇಲಕ್ಕೆತ್ತಿ ಭೀಮಸೇನನನ್ನು ಕೊಲ್ಲಲು ಅವನೆಡೆಗೆ ಮುನ್ನುಗ್ಗಿದ್ದನು. ಆದರೂ ಪರವೀರ ಪಾಂಡವ ವೃಕೋದರನು ಆ ರಾಕ್ಷಸನಿಗೆ ಗಮನಕೊಡದೇ ಆಹಾರವನ್ನು ತಿನ್ನುವುದನ್ನು ಮುಂದುವರೆಸಿದನು. ರೋಷಗೊಂಡ ರಾಕ್ಷಸನು ಕುಂತೀಪುತ್ರನ ಹಿಂದೆ ನಿಂತು ತನ್ನ ಎರಡೂ ಕೈಗಳಿಂದ

ಅವನ ಬೆನ್ನಿನ ಮೇಲೆ ಗುದ್ದತೊಡಗಿದನು. ರಾಕ್ಷಸನ ಕೈಗಳಿಂದ ನೋವಿನ ಪೆಟ್ಟುಗಳು ಬೀಳುತ್ತಿದ್ದರೂ ಬಲವಂತ ಭೀಮನು ಅವನನ್ನು ಅವಲೋಕಿಸದೇ ತಿನ್ನುತ್ತಲೇ ಇದ್ದನು. ಇನ್ನೂ ಸಂಕೃದ್ಧನಾದ ರಾಕ್ಷಸನು ಒಂದು ಮರವನ್ನು ಕಿತ್ತೆತ್ತಿ ಬಲಿ ಭೀಮನನ್ನು ಹೊಡೆಯಲೋಸುಗ ಪುನಃ ಓಡಿ ಬಂದನು. ಅಷ್ಟರಲ್ಲಿಯೇ ಪುರುಷರ್ಷಭ ಭೀಮನು ತನ್ನ ಊಟವನ್ನು ಮುಗಿಸಿದ್ದನು. ಬಾಯಿ ಕೈಗಳನ್ನು ತೊಳೆದ ಆ ಮಹಾಬಲಿಯು ಸಂತೋಷದಿಂದ ಯುದ್ಧಕ್ಕೆ ಎದಿರಾದನು. ಸಿಟ್ಟಿಗೆದ್ದ ರಾಕ್ಷಸನು ಎಸೆದ ವೃಕ್ಷವನ್ನು ಎಡಗೈಯಿಂದ ಬೇಗನೆ ಹಿಡಿದು ಭೀಮನು ಜೋರಾಗಿ ನಗತೊಡಗಿದನು. ಪುನಃ ಆ ಬಲಿಯು ಬಹುವಿಧ ವೃಕ್ಷಗಳನ್ನು ಕಿತ್ತು ಪಾಂಡವ ಭೀಮಸೇನನ ಮೇಲೆ ಎಸೆಯತೊಡಗಿದನು. ಭೀಮನೂ ಕೂಡ ಅವನ ಮೇಲೆ ಎಸೆಯತೊಡಗಿದನು.

ಈ ರೀತಿ ಬಕ ಪಾಂಡವನ ಮಧ್ಯೆ ಕಾಡನ್ನೇ ನಾಶಪಡಿಸಿದ ಘೋರರೂಪಿ ವೃಕ್ಷಯುದ್ಧವು ನಡೆಯಿತು. ಹೆಸರನ್ನು ಕೂಗುತ್ತಾ ಬಕನು ಪಾಂಡವನ ಕಡೆ ಓಡಿಬಂದು ಮಹಾಬಲಗಳನ್ನುಳ್ಳ ತನ್ನ ಎರಡೂ ಭುಜಗಳಿಂದ ಭೀಮಸೇನನನ್ನು ಹಿಡಿದುಕೊಂಡನು. ಭೀಮಸೇನನೂ ಕೂಡ ತನ್ನ ಮಹಾಭುಜಗಳಿಂದ ಆ ರಾಕ್ಷಸನನ್ನು ಹಿಡಿದು ಭುಸುಗುಟ್ಟುತ್ತಿದ್ದ ಆ ಬಲಶಾಲಿಯನ್ನು ಬಲಾತ್ಕಾರವಾಗಿ ಮಹಾವೇಗದಲ್ಲಿ ಎಳೆದಾಡಿದನು. ಭೀಮನಿಂದ ಎಳೆಯಲ್ಪಟ್ಟ,




ಪಾಂಡವನನ್ನೂ ಎಳೆಯುತ್ತಿದ್ದ ಆ ಪುರುಷಾದಕನು ಬೇಗನೇ ತೀವ್ರ ಆಯಾಸವನ್ನು ಹೊಂದಿದನು. ಅವರು ಮಹಾಕಾಯದ ಮರಗಳನ್ನು ಪುಡಿಪುಡಿ ಮಾಡುತ್ತಿದ್ದ ಮಹಾವೇಗದಿಂದ ಪೃಥ್ವಿಯೇ ನಡುಗಿತು. ಆ ರಾಕ್ಷಸನು ಕ್ಷೀಣಗೊಳ್ಳುತ್ತಿದ್ದಾನೆ ಎಂದು ನೋಡಿದ ವೃಕೋದರನು ಅವನನ್ನು ನೆಲದ ಮೇಲೆ ಬೀಳಿಸಿ ಮುಷ್ಟಿಗಳಿಂದ ಹೊಡೆಯತೊಡಗಿದನು. ನಂತರ ಅವನ ಬೆನ್ನನ್ನು ತನ್ನ ತೊಡೆಯಿಂದ ಬಿಗಿಯಾಗಿ ಕೆಳಕ್ಕೆ ಒತ್ತಿಹಿಡಿದು ಬಲಗೈಯಿಂದ ಅವನ ಶಿರವನ್ನು ಹಿಡಿದು ಎಡಗೈಯಿಂದ ಅವನ ಸೊಂಟದ ಪಟ್ಟಿಯನ್ನು ಹಿಡಿದು



ಪಾಂಡವನು ಭೈರವವಾಗಿ ಕೂಗಿಕೊಳ್ಳುತ್ತಿದ್ದ ಆ ರಾಕ್ಷಸನನ್ನು ಎರಡು ತುಂಡುಮಾಡಿದನು. ಭೀಮನು ಆ ಘೋರ ರಾಕ್ಷಸನನ್ನು ತುಂಡರಿಸುತ್ತಿದ್ದಂತೆ ಅವನ ಬಾಯಿಯಿಂದ ರಕ್ತವು ಹೊರಚೆಲ್ಲಿತು.

ಆ ಶಬ್ಧದಿಂದ ಎಚ್ಚೆತ್ತ ರಾಕ್ಷಸ ಜನರೆಲ್ಲರೂ ಪರಿಚಾರಿಗಳ ಸಹಿತ ಮನೆಯಿಂದ ಹೊರಬಿದ್ದರು. ಮುಷ್ಠಿಯುದ್ಧದಲ್ಲಿ ಶ್ರೇಷ್ಠ ಬಲವಾನ್ ಭೀಮನು ಭೀತರಾಗಿ ಬುದ್ಧಿಕಳೆದುಕೊಂಡಿದ್ದ ಅವರನ್ನು ಸಮಾಧಾನಪಡಿಸಿ ಒಂದು ಒಪ್ಪಂದಕ್ಕೆ ಒಪ್ಪಿಕೊಳ್ಳುವಂತೆ ಮಾಡಿದನು.

“ಇಲ್ಲಿರುವ ಯಾವ ಮನುಷ್ಯರಿಗೂ ಎಂದೂ ನೀವ್ಯಾರೂ

ಹಿಂಸಿಸಬಾರದು. ಹಿಂಸಿಸುವವರು ಇದೇರೀತಿ ಶೀಘ್ರವಾಗಿ ಸಾಯುತ್ತಾರೆ”

ಎಂದನು. ಅವನ ಆ ಮಾತುಗಳನ್ನು ಕೇಳಿದ ಆ ರಾಕ್ಷಸರು “ಹಾಗೆಯೇ ಆಗಲಿ!”ಎಂದು ಒಪ್ಪಂದಮಾಡಿಕೊಂಡು ಹೊರಟುಹೋದರು. ಅಂದಿನಿಂದ ಅಲ್ಲಿರುವ ರಾಕ್ಷಸರು ನಗರ ವಾಸಿಗಳನ್ನು ನಗರದ ಸುತ್ತಮುತ್ತ ನೋಡಿದರೂ ಸೌಮ್ಯರಾಗಿದ್ದರು. ಭೀಮನು ಸತ್ತುಹೋಗಿದ್ದ ಆ ಪುರುಷಾದಕನನ್ನು ಎಳೆದು ದ್ವಾರದ ಕೆಳಗೆ ಬೀಳಿಸಿ, ಯಾರಿಗೂ ಕಾಣದ ಹಾಗೆ ಅಲ್ಲಿಂದ ಹೊರಟುಹೋದನು. ಅವನನ್ನು ಕೊಂದು ಭೀಮನು ಬ್ರಾಹ್ಮಣನ ಮನೆಗೆ ಹೋಗಿ ರಾಜ ಯುಧಿಷ್ಠಿರನಿಗೆ ಏನನ್ನೂ ಬಿಡದೆ ಎಲ್ಲವನ್ನೂ ಯಥಾವತ್ತಾಗಿ ವರದಿಮಾಡಿದನು.

ಮರುದಿನ ಬೆಳಿಗ್ಗೆ ನಗರದಿಂದ ಹೊರಬಂದ ಜನರು ನೆಲದ ಮೇಲೆ ರಕ್ತದಿಂದ ಒದ್ದೆಯಾಗಿದ್ದ, ಪರ್ವತ ಶಿಖರದಂತೆ ಪುಡಿಯಾಗಿ ಭಯಾವಹವಾಗಿ ಸತ್ತು ಬಿದ್ದಿದ್ದ ರಾಕ್ಷಸನನ್ನು ನೋಡಿ ಏಕಚಕ್ರಕ್ಕೆ ಹೋಗಿ ಈ ವೃತ್ತಾಂತವನ್ನು ಬೇರೆಯವರಿಗೆಲ್ಲ ಹರಡಿದರು. ಆಗ ನಗರವಾಸಿಗಳು ತಮ್ಮ ಪತ್ನಿ ಮಕ್ಕಳ ಸಹಿತ ಸಹಸ್ರಾರು ಸಂಖ್ಯೆಗಳಲ್ಲಿ ಬಕನನ್ನು ನೋಡಲು ಅಲ್ಲಿಗೆ ಬಂದರು. ಆ ಅತಿಮಾನುಷ ಕರ್ಮವನ್ನು ನೋಡಿ ವಿಸ್ಮಿತರಾದ ಎಲ್ಲರೂ ಎಲ್ಲ ದೇವತೆಗಳಿಗೂ ಅರ್ಚನೆಯನ್ನು ನೀಡಿದರು. ಆಗ ಅವರು ರಾಕ್ಷಸನಿಗೆ

ಭೋಜನವನ್ನು ನೀಡುವ ಬಾರಿ ಯಾರಿದ್ದಿರಬಹುದು ಎಂದು ಲೆಖ್ಕ ಮಾಡಿ, ಆ ವಿಪ್ರನ ಬಾರಿಯಾಗಿತ್ತು ಎಂದು ತಿಳಿದು ಎಲ್ಲರೂ ಅವನನ್ನು ಪ್ರಶ್ನಿಸತೊಡಗಿದರು. ಈ ರೀತಿ ಬಹಳಷ್ಟು ಪ್ರಶ್ನೆಗಳನ್ನು ಎದುರಿಸಿದ ವಿಪ್ರರ್ಷಭನು ಪಾಂಡವರನ್ನು ರಕ್ಷಿಸುತ್ತಾ ನಾಗರೀಕರಿಗೆ ಹೇಳಿದನು:

> "ಆಹಾರವನ್ನೊದಗಿಸಲು ನನಗೆ ಆಜ್ಞಾಪನೆ ಬಂದಾಗ ಬಂಧುಗಳ ಸಹಿತ ರೋದಿಸುತ್ತಿರುವ ನಮ್ಮನ್ನು ಓರ್ವ ಮಂತ್ರಸಿದ್ಧ ಮಹಾಬಲಿ ಬ್ರಾಹ್ಮಣನು ನೋಡಿದನು. ಅವನು ನನ್ನಲ್ಲಿ ಹಿಂದಿನಿಂದ ಇರುವ ಪುರದ ಪರಿಕ್ಲೇಶದ ಕುರಿತು ಕೇಳಿದನು. ಮತ್ತು ಆ ವೀರ ಬ್ರಾಹ್ಮಣಶ್ರೇಷ್ಠನು ನಗುತ್ತಾ "ಆ ದುರಾತ್ಮನಿಗೆ ಆಹಾರವನ್ನು ನಾನು ಕೊಂಡೊಯ್ಯುತ್ತೇನೆ. ನನ್ನ ಕುರಿತು ಭಯಪಡಬೇಡ!" ಎಂದು ಆಶ್ವಾಸನೆಯನ್ನಿತ್ತನು. ಅವನು ಆಹಾರವನ್ನು ತೆಗೆದುಕೊಂಡು ಬಕವನದ ಕಡೆ ಹೋದನು. ಈ ಲೋಕಹಿತ ಕಾರ್ಯವು ಅವನ ಕೃತ್ಯವೇ ಆಗಿರಬೇಕು!"

ವಿಸ್ಮಿತರಾದ, ಮುದಿತ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಲ್ಲರೂ ಬ್ರಾಹ್ಮಣನಿಗೆ ಮಹಾ ಔತಣವನ್ನಿತ್ತರು. ಆಗ ಆ ಮಹಾ ಅದ್ಭುತವನ್ನು ನೋಡಲು ಜನಪದದಿಂದ ಎಲ್ಲರೂ ನಗರಕ್ಕೆ ಬಂದರು. ಪಾರ್ಥರು ತಮ್ಮ ವಾಸವನ್ನು ಅಲ್ಲಿಯೇ

ಮುಂದುವರೆಸಿದರು.

# ದ್ರೌಪದೀ ಸ್ವಯಂವರ-ವಿವಾಹ

## ದ್ರುಷ್ಟದ್ಯುಮ್ನ-ದ್ರೌಪದಿಯರ ಜನನ ವೃತ್ತಾಂತ

ಬಕರಾಕ್ಷಸನನ್ನು ಕೊಂದ ಬಳಿಕ ಪಾಂಡವರು ಏಕಚಕ್ರನಗರದ ಆ ಬ್ರಾಹ್ಮಣನ ಮನೆಯಲ್ಲಿಯೇ ಶ್ರೇಷ್ಠ ಬ್ರಹ್ಮಾಧ್ಯಯನ ನಿರತರಾಗಿ ವಾಸಿಸುತ್ತಿದ್ದರು. ಕೆಲವು ದಿನಗಳ ನಂತರ ಸಂಶಿತವ್ರತ ಬ್ರಾಹ್ಮಣನೋರ್ವನು ಆಶ್ರಯ ಹುಡುಕಿಕೊಂಡು ಆ ಬ್ರಾಹ್ಮಣನ ಮನೆಗೆ ಬಂದನು. ಸದಾ ಸರ್ವ ಅತಿಥಿವ್ರತ ಆ ವಿದ್ವಾನ್ ವಿಪ್ರರ್ಷಭನು ಅವನನ್ನು ಆಹ್ವಾನಿಸಿ ಚೆನ್ನಾಗಿ ಸತ್ಕರಿಸಿ ಆಶ್ರಯವನ್ನಿತ್ತನು. ಆಗ ಕುಂತಿಯ ಸಹಿತ ನರರ್ಷಭ ಸರ್ವ ಪಾಂಡವರೂ ಕಥೆಗಳನ್ನು ಹೇಳುವುದರಲ್ಲಿ ಕುಶಲನಾಗಿದ್ದ ಆ ವಿಪ್ರನನ್ನು ಸುತ್ತುವರೆದರು. ಅವನು ಅವರಿಗೆ ವಿವಿಧ ದೇಶ-ತೀರ್ಥ, ವಿವಿಧ ರಾಜರ, ಮತ್ತು ವಿವಿಧ ಪುರಗಳ ಆಶ್ಚರ್ಯಕರ ಕಥೆಗಳನ್ನು ಹೇಳಿದನು. ಆ ವಿಪ್ರನು ಕಥೆಗಳ ಅಂತ್ಯದಲ್ಲಿ ಪಾಂಚಾಲದೇಶದಲ್ಲಿ ನಡೆಯುವ ಯಾಜ್ಞಸೇನಿಯ ಅದ್ಭುತ ಸ್ವಯಂವರ, ಧೃಷ್ಟದ್ಯುಮ್ನನ ಉತ್ಪತ್ತಿ, ಶಿಖಂಡಿಯ ಉತ್ಪತ್ತಿ, ದ್ರುಪದನ ಮಹಾಮಖದಲ್ಲಿ ಅಯೋನಿಜೆ ಕೃಷ್ಣೆಯ ಜನನ - ಇವುಗಳ ಕುರಿತು ಹೇಳಿದನು.

ಲೋಕದಲ್ಲಿ ನಡೆದಿದ್ದ ಆ ಅದ್ಭುತ ಘಟನೆಗಳನ್ನು ಕೇಳಿದ ಆ ಪುರುಷರ್ಷಭರು ಕಥೆಯನ್ನು ವಿಸ್ತಾರವಾಗಿ ಹೇಳಬೇಕೆಂದು ಮಹಾತ್ಮನಿಗೆ ಕೇಳಿಕೊಂಡರು: "ವೇದಿಮಧ್ಯದ ಪಾವಕನಿಂದ ದ್ರುಪದಪುತ್ರ ಧೃಷ್ಟಧ್ಯುಮ್ನನ ಮತ್ತು ಕೃಷ್ಣೆಯ ಅದ್ಭುತ ಜನ್ಮವು ಹೇಗೆ ಆಯಿತು? ಹೇಗೆ ಆ ಮಹೇಷ್ವಾಸನು ದ್ರೋಣನಿಂದ ಸರ್ವ ಅಣ್ವಸ್ತ್ರಗಳನ್ನು ಕಲಿತುಕೊಂಡನು? ಮತ್ತು ಪ್ರಿಯಸಖರಾಗಿದ್ದ ಅವರೀರ್ವರಲ್ಲಿ ಭಿನ್ನತ್ವವು ಹೇಗೆ ಉಂಟಾಯಿತು?" ಈ ರೀತಿ ಪುರುಷರ್ಷಭರು ಒತ್ತಾಯಿಸಲಾಗಿ ಆ ವಿಪ್ರನು ದ್ರೌಪದಿಯ ಹುಟ್ಟಿನ ಕಥೆಯನ್ನು ಸಂಪೂರ್ಣವಾಗಿ ಹೇಳಿದನು.

***

ಗಂಗಾದ್ವಾರದ ಬಳಿಯಲ್ಲಿ ಮಹಾತಪಸ್ವಿ, ಮಹಾನೃಷಿ, ಮಹಾಪ್ರಾಜ್ಞ, ಸತತ ಸಂಶಿತವ್ರತ ಭರದ್ವಾಜನಿದ್ದನು. ಒಮ್ಮೆ ಅವನು ಗಂಗೆಯಲ್ಲಿ ಸ್ನಾನಕ್ಕೆಂದು ಹೋದಾಗ ಅಲ್ಲಿಗೆ ಮೊದಲೇ ಬಂದು ಅಷ್ಟೇ ಸ್ನಾನವನ್ನು ಮುಗಿಸಿದ್ದ ಸತಿ ಅಪ್ಸರೆ ಘೃತಾಚಿಯನ್ನು ನೋಡಿದನು. ನದೀತೀರದಲ್ಲಿ ನಿಂತಿರುವಾಗ ವಾಯುವು ಅವಳ ವಸ್ತ್ರವನ್ನು ಹಾರಿಸಿದನು ಮತ್ತು ನಗ್ನಳಾದವಳನ್ನು ನೋಡಿ ಋಷಿಯು ಅವಳನ್ನು ಕಾಮಿಸಿದನು. ಮನಸ್ಸನ್ನು ಅವಳಲ್ಲೇ ಅನುರಕ್ತಗೊಳಿಸಿದ ಆ ಕೌಮಾರ ಬ್ರಹ್ಮಚಾರಿಯು ಹೃಷ್ಟನಾಗಿ ರೇತಸ್ಖಲನವಾಯಿತು. ಅದನ್ನು ಋಷಿಯು ಒಂದು ದೊನ್ನೆಯಲ್ಲಿ ಇರಿಸಿದನು. ಅಲ್ಲಿಂದಲೇ

ಅವನಿಗೆ ಧೀಮಂತ ಕುಮಾರ ದ್ರೋಣನು ಹುಟ್ಟಿದನು. ಅವನು ವೇದ ಮತ್ತು ವೇದಾಂಗಗಳೆಲ್ಲವನ್ನೂ ಅಧ್ಯಯನ ಮಾಡಿದನು. ಪೃಷತ ಎಂಬ ಹೆಸರಿನ ಪಾರ್ಥಿವನು ಭರದ್ವಾಜನ ಸಖನಾಗಿದ್ದನು. ಅವನಿಗೂ ದ್ರುಪದ ಎಂಬ ಹೆಸರಿನ ಸುತನಿದ್ದನು. ಆ ಕ್ಷತ್ರಿಯರ್ಷಭ ಪಾರ್ಷತನು ನಿತ್ಯವೂ ಆಶ್ರಮಕ್ಕೆ ಹೋಗಿ ದ್ರೋಣನ ಸಹಿತ ಅಧ್ಯಯನ ಮಾಡುತ್ತಿದ್ದನು ಮತ್ತು ಆಟವಾಡುತ್ತಿದ್ದನು. ಪೃಷತನ ಅತೀತದ ನಂತರ ದ್ರುಪದನು ರಾಜನಾದನು.

ರಾಮನು ತನ್ನ ಸರ್ವ ಸಂಪತ್ತನ್ನೂ ಕೊಡುತ್ತಿದ್ದಾನೆ ಎಂದು ಕೇಳಿದ ಭರದ್ವಾಜಸುತ ದ್ರೋಣನು ವನಕ್ಕೆ ತೆರಳುತ್ತಿದ್ದ ರಾಮನಿಗೆ ಹೇಳಿದನು:

> "ದ್ವಿಜರ್ಷಭ! ವಿತ್ತವನ್ನು ಅಪೇಕ್ಷಿಸಿ ಬಂದಿರುವ ನನ್ನನ್ನು ದ್ರೋಣನೆಂದು ತಿಳಿ."

ರಾಮನು ಹೇಳಿದನು:

> "ನನ್ನ ಈ ದೇಹವೊಂದೇ ಇಂದು ಉಳಿದಿದೆ. ಬ್ರಾಹ್ಮಣ! ನನ್ನ ಅಸ್ತ್ರಗಳನ್ನು ಅಥವಾ ನನ್ನ ಈ ಶರೀರವನ್ನು ವರವನ್ನಾಗಿ ಕೇಳಿಕೋ."

ದ್ರೋಣನು ಹೇಳಿದನು:

> "ನಿನ್ನ ಸರ್ವ ಅಸ್ತ್ರಗಳನ್ನೂ ನೀಡು. ಅವುಗಳ ಪ್ರಯೋಗ

> ಮತ್ತು ಸಂಹಾರಗಳ ಕುರಿತು ಸರ್ವವನ್ನೂ ನನಗೆ ನೀಡಬೇಕು.”

ಹಾಗೆಯೇ ಆಗಲಿ ಎಂದು ಆ ಭೃಗುನಂದನನು ಅವುಗಳನ್ನು ನೀಡಲು ಒಪ್ಪಿದನು. ದ್ರೋಣನು ಅವುಗಳನ್ನು ಪಡೆದು ಕೃತಕೃತ್ಯನಾದನು. ರಾಮನಿಂದ ಅವನು ನರರಲ್ಲಿರುವುದೆಲ್ಲಕ್ಕಿಂತಲೂ ಅಧಿಕ ಪರಮ ಸಮ್ಮತ ಬ್ರಹ್ಮಾಸ್ತ್ರವನ್ನು ಸಂಪ್ರಹೃಷ್ಟಮನಸ್ಕನಾಗಿ ಸ್ವೀಕರಿಸಿದನು.

ನಂತರ ಪ್ರತಾಪಿ ಭಾರದ್ವಾಜನು ದ್ರುಪದನ ಬಳಿ ಹೋಗಿ “ಪುರುಷವ್ಯಾಘ್ರ! ನನ್ನನ್ನು ನಿನ್ನ ಸಖನೆಂದು ತಿಳಿ” ಎಂದನು. ದ್ರುಪದನು ಹೇಳಿದನು:

> “ಅಶ್ರೋತ್ರಿಯು ಶ್ರೋತ್ರಿಯ, ಅರಥಿಯು ರಥಿಯ, ಮತ್ತು ಪಾರ್ಥಿವನೋರ್ವನು ರಾಜನಲ್ಲದವನ ಸಖನಾಗಲು ಸಾದ್ಯವಿಲ್ಲ. ಹಳೆಯ ಸಖನು ಯಾರಿಗೆ ತಾನೇ ಬೇಕು?”

ಆ ಬುದ್ಧಿವಂತನು ಮನಸ್ಸಿನಲ್ಲಿಯೇ ಪಾಂಚಲ್ಯನ ವಿರುದ್ಧ ನಿಶ್ಚಯಿಸಿ ಕುರುಮುಖ್ಯರ ನಗರ ನಾಗಸಾಹ್ವಯಕ್ಕೆ ಹೋದನು. ಆಗಮಿಸಿದ ಧೀಮಂತ ದ್ರೋಣನಿಗೆ ಭೀಷ್ಮನು ವಿವಿಧ ಸಂಪತ್ತುಗಳನ್ನು ಕೊಟ್ಟು ತನ್ನ ಮೊಮ್ಮಕ್ಕಳನ್ನು ಶಿಷ್ಯರನ್ನಾಗಿ ಒಪ್ಪಿಸಿದನು. ದ್ರುಪದನಿಗೆ ಕೇಡನ್ನು ಬಯಸಿದ ವಿದ್ವಾನ್ ದ್ರೋಣನು ಎಲ್ಲ ಶಿಷ್ಯರನ್ನೂ ಕರೆದು ಈ ಮಾತುಗಳನ್ನಾಡಿದನು:

“ಗುರುದಕ್ಷಿಣೆಯಾಗಿ ಪಡೆಯಬೇಕೆಂದು ನನ್ನ ಮನಸ್ಸಿನಲ್ಲಿ ಒಂದು ವಿಚಾರವಿದೆ. ಅನಘರೇ! ಕೃತಾಸ್ತ್ರರಾದನಂತರ ನೀವು ನನಗೆ ಅದನ್ನು ನಿಜವಾಗಿಯೂ ಕೊಡುತ್ತೀರಿ ಎಂದು ಭರವಸೆಯನ್ನು ನೀಡಿ.”

ಪಾಂಡವರೆಲ್ಲರೂ ಕೃತಾಸ್ತ್ರರೂ ಕೃತನಿಶ್ರಮರೂ ಆದ ನಂತರ ದ್ರೋಣನು ಪುನಃ ವೇತನದ ಕುರಿತು ಕೇಳಿದನು:

“ಚತ್ರವತಿಯಲ್ಲಿ ಪಾರ್ಷತ ದ್ರುಪದನೆಂಬ ಹೆಸರಿನ ನರೇಶ್ವರನಿದ್ದಾನೆ. ಶೀಘ್ರದಲ್ಲಿಯೇ ಅವನ ರಾಜ್ಯವನ್ನು ಅವನಿಂದ ಗೆದ್ದು ನನಗೆ ನೀಡಿ!”

ಆಗ ಪಂಚ ಪಾಂಡುಸುತರು ದ್ರುಪದನನ್ನು ಯುದ್ಧದಲ್ಲಿ ನಿರ್ಜಯಿಸಿ ಸಚಿವ ಸಹಿತ ಅವನನ್ನು ಬಂಧಿಸಿ ದ್ರೋಣನಲ್ಲಿಗೆ ಕರೆತಂದರು. ದ್ರೋಣನು ದ್ರುಪದನಿಗೆ ಹೇಳಿದನು:

“ನರಾಧಿಪ! ನಿನ್ನಿಂದ ಸಖ್ಯವನ್ನು ಪುನಃ ಪ್ರಾರ್ಥಿಸುತ್ತಿದ್ದೇನೆ. ಯಾವ ರಾಜನೂ ರಾಜನಲ್ಲದವನ ಸಖ್ಯನಾಗಲಾರ ಎಂದು ನಿನಗೆ ತಿಳಿದೇ ಇದೆ. ಆದುದರಿಂದ ಯಜ್ಞಸೇನ! ನಾನು ನಿನ್ನ ರಾಜ್ಯಕ್ಕಾಗಿ ಪ್ರಯತ್ನಿಸಿದೆ. ನೀನು ಭಾಗೀರಥಿಯ ದಕ್ಷಿಣದಲ್ಲಿ ರಾಜನಾಗಿರು ಮತ್ತು ನಾನು ಉತ್ತರದಲ್ಲಿ ರಾಜನಾಗಿರುತ್ತೇನೆ.”

ಅಷ್ಟು ದೊಡ್ಡ ಅಪಮಾನವು ಅವನ ಹೃದಯವನ್ನು ಒಂದು ಕ್ಷಣವೂ ಬಿಡಲಿಲ್ಲ ಮತ್ತು ರಾಜನು ದುರ್ಮನಸ್ಕನೂ ಕೃಶನೂ ಆದನು. ಸೇಡಿನ ಮನಸ್ಸುಳ್ಳ ರಾಜ ದ್ರುಪದನು ಕರ್ಮಸಿದ್ಧ ದ್ವಿಜರ್ಷಭರನ್ನು ಹುಡುಕುತ್ತಾ ಹಲವಾರು ಬ್ರಾಹ್ಮಣ ವಾಸಸ್ಥಳಗಳಿಗೆ ಅಲೆದಾಡಿದನು. ಶೋಕದಿಂದ ಚೇತನವನ್ನೇ ಕಳೆದುಕೊಂಡು ಪುತ್ರಜನ್ಮವನ್ನು ಬಯಸಿ, "ನನಗೆ ಶ್ರೇಷ್ಠ ಮಕ್ಕಳಿಲ್ಲ!" ಎಂದು ನಿತ್ಯವೂ ಚಿಂತಿಸುತ್ತಿದ್ದನು. ಹುಟ್ಟಿದ್ದ ಪುತ್ರರನ್ನು ವೇದನೆಯಿಂದ "ಈ ಬಂಧುಗಳಿಗೆ ಧಿಕ್ಕಾರ!" ಎಂದು ಹೇಳಿದನು. ದ್ರೋಣನ ವಿರುದ್ಧ ಪ್ರತೀಕಾರವನ್ನು ಬಯಸುತ್ತಿದ್ದ ಅವನು ಯಾವಾಗಲೂ ನಿಟ್ಟುಸಿರು ಬಿಡುತ್ತಿದ್ದನು. ಅ ನೃಪಶ್ರೇಷ್ಠನು ಎಷ್ಟೇ ಪ್ರಯತ್ನಪಟ್ಟರೂ ದ್ರೋಣನ ವಿನಯ, ಶಿಕ್ಷಣ ಮತ್ತು ಚಾರಿತ್ರಗಳ ಪ್ರಭಾವವನ್ನು ತನ್ನ ಕ್ಷತ್ರಿಯ ಬಲದಿಂದ ಹೇಗೆ ಹಿಂದಾಗಿಸಬೇಕು ಎನ್ನುವುದನ್ನು ಕಾಣಲಾರದೇ ಹೋದನು. ಹೀಗೆ ಗಂಗಾತೀರದಲ್ಲಿ ಅಲೆದಾಡುತ್ತಾ ಮಹೀಪತಿಯು ಕಲ್ಮಾಶೀಯ ಬಳಿಯಲ್ಲಿ ಬ್ರಾಹ್ಮಣರು ವಾಸಿಸುತ್ತಿದ್ದ ಪುಣ್ಯಸ್ಥಳವೊಂದಕ್ಕೆ ಬಂದನು. ಅಲ್ಲಿ ಸ್ನಾತಕರಲ್ಲದ, ವ್ರತನಿರತರಲ್ಲದ ದ್ವಿಜರು ಯಾರೂ ಇರಲಿಲ್ಲ. ಅಲ್ಲಿ ಆ ಮಹಾಭಾಗನು ಇಬ್ಬರು ಸಂಶಿತವ್ರತ ಬ್ರಾಹ್ಮಣರನ್ನು ಕಂಡನು. ಪೃಷತಾತ್ಮಜನು ಅಲ್ಲಿ ಯಾಜ ಮತ್ತು ಉಪಯಾಜರೆಂಬ ಇಬ್ಬರು ಸಂಹಿತಾಧ್ಯಯನ ಯುಕ್ತ ಕಾಶ್ಯಪ ಗೋತ್ರೋತ್ಪನ್ನ ಬ್ರಹ್ಮರ್ಷಿಗಳನ್ನು ಕಂಡನು. ಪಾರುಮಾಡಲು ಯುಕ್ತರೂಪ ಆ

ಬ್ರಾಹ್ಮಣಋಷಿಸತ್ತಮರನ್ನು ಅವನು ಎಲ್ಲಾ ರೀತಿಯ ಆಸೆಗಳನ್ನು ತೋರಿಸಿ, ಎಡೆಬಿಡದೇ ಆಮಂತ್ರಿಸಿದನು. ತನ್ನ ಬಲ ಮತ್ತು ಬುದ್ಧಿಯನ್ನು ಅವರಮೇಲೆ ಹಾಕಿ ತಾನು ದುರ್ಬಲನಾಗುತ್ತಿದ್ದೇನೆಂದು ತಿಳಿದ ಅವನು ಧೃತವ್ರತ ಉಪಯಾಜನನ್ನು ಸುತ್ತು ಬಳಸಿ ಆಸೆತೋರಿಸಿ ಗೆಲ್ಲಲು ಪ್ರಯತ್ನಿಸಿದನು. ಅವನ ಪಾದಶುಶ್ರೂಷಣೆಯಲ್ಲಿ ನಿರತನಾಗಿ, ಪ್ರಿಯಮಾತುಗಳನ್ನಾಡುತ್ತಾ, ಬೇಕಾದುದೆಲ್ಲವನ್ನೂ ಕೊಡುತ್ತಾ, ನ್ಯಾಯದಂತೆ ನಡೆದುಕೊಳ್ಳುತ್ತಾ ಉಪಯಾಜನಿಗೆ ಹೇಳಿದನು:

> "ಬ್ರಾಹ್ಮಣ! ದ್ರೋಣನ ಮೃತ್ಯುವಾಗಬಲ್ಲ ಪುತ್ರನನ್ನು ಪಡೆಯುವುದಕ್ಕೆ ಏನಾದರೂ ಕರ್ಮವಿದೆಯೇ? ಹಾಗೇನಾದರೂ ಇದ್ದರೆ ಅದನ್ನು ನಡೆಸುವುದಕ್ಕೆ ನಾನು ನಿನಗೆ ಎಷ್ಟು ಬೇಕಾದರೂ ಗೋವುಗಳನ್ನು ನೀಡುತ್ತೇನೆ ಅಥವಾ ನಿನ್ನ ಮನಸ್ಸಿಗೆ ಪ್ರಿಯವಾದ ಏನನ್ನೂ ಎಲ್ಲವನ್ನೂ ಕೊಡುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ."

"ನಾನು ಮಾಡುವುದಿಲ್ಲ!" ಎಂದು ಆ ಋಷಿಯು ಉತ್ತರಿಸಿದನು. ದ್ರುಪದನು ಅವನನ್ನು ಗೆಲ್ಲಲೋಸುಗ ಪುನಃ ಆರಾಧಿಸುವುದನ್ನು ಮುಂದುವರೆಸಿದನು. ಒಂದು ವರ್ಷವು ಕಳೆದನಂತರ ಆ ದ್ವಿಜೋತ್ತಮ ಉಪಯಜನು ಒಳ್ಳೆಯ ಸಮಯವನ್ನು ನೋಡಿ ಮಧುರವಾಣಿಯಿಂದ ಹೇಳಿದನು:

"ನನ್ನ ಜ್ಯೇಷ್ಠ ಭ್ರಾತನು ಒಮ್ಮೆ ವನದಲ್ಲಿ ಸಂಚರಿಸುತ್ತಿರುವಾಗ ಭೂಮಿಯ ಮೇಲೆ ಬಿದ್ದಿರುವ ಫಲವೊಂದನ್ನು ಅಶೌಚವೆಂದು ತಿಳಿಯದೇ ಎತ್ತಿಕೊಂಡಿದ್ದನು. ಅವನನ್ನು ಹಿಂಬಾಲಿಸುತ್ತಿದ್ದ ನಾನು ಅಣ್ಣನ ಈ ಅಸಾಂಪ್ರತ ಕ್ರಿಯೆಯನ್ನು ನೋಡಿದೆನು. ಅವನು ಅದನ್ನು ತೆಗೆದುಕೊಳ್ಳುವಾಗ ಯಾವುದೇ ರೀತಿಯ ವಿಮರ್ಷೆಯನ್ನೂ ಮಾಡಲಿಲ್ಲ. ಫಲವನ್ನು ನೋಡಿದರೂ ಅದಕ್ಕೆ ಹತ್ತಿಕೊಂಡಿದ್ದ ದೋಷಗಳನ್ನು ನೋಡಲಿಲ್ಲ. ಒಂದು ವಿಷಯದಲ್ಲಿ ಶೌಚ ಅಶೌಚಗಳ ಬಗ್ಗೆ ಯೋಚಿಸದಿದ್ದವನು ಇನ್ನೊಂದು ವಿಷಯದ ಕುರಿತು ಏಕೆ ಯೋಚಿಸಿಯಾನು? ಸಂಹಿತಾಧ್ಯಯನವನ್ನು ಮಾಡುತ್ತಾ ಗುರುಕುಲದಲ್ಲಿ ವಾಸಿಸುತ್ತಿರುವಾಗಲೂ ಅವನು ಬೇರೆಯವರಿಂದ ಎಂಜಲಾಗಿ ಬಿಟ್ಟಿದ್ದ ಭಿಕ್ಷವನ್ನು ಸದಾ ತಿನ್ನುತ್ತಿದ್ದನು ಮತ್ತು ಪುನಃ ಪುನಃ ಅಂಥ ಆಹಾರದ ಗುಣಗಾನಮಾಡುತ್ತಿದ್ದನು. ಅದರಿಂದ ನನ್ನ ಅಣ್ಣನು ಫಲಾರ್ಥಿ ಎಂದು ನನಗನ್ನಿಸುತ್ತದೆ. ನೃಪತೇ! ಅವನಲ್ಲಿಯೇ ಹೋಗು. ಅವನು ನಿನ್ನ ಸಂಯಾಜಿಯಾಗುತ್ತಾನೆ."

ಜುಗುಪ್ಸಮನಸ್ಕ ನೃಪತಿಯು ಉಪಯಾಜನ ಮತುಗಳನ್ನು ಕೇಳಿ ಮನಸ್ಸಿನಲ್ಲಿಯೇ ಚಿಂತಿಸಿದನು. ಸರ್ವಧರ್ಮವಿದ ನೃಪತಿಯು

ಪೂಜಾರ್ಹ ಋಷಿ ಯಾಜನನ್ನು ಪೂಜಿಸಿ ಹೇಳಿದನು:

“ನಾನು ನಿನಗೆ ಎಂಭತ್ತು ಸಾವಿರ ಗೋವುಗಳನ್ನು ಕೊಡುತ್ತೇನೆ. ನನಗಾಗಿ ಯಜ್ಞವನ್ನು ಮಾಡು ವಿಭೋ! ದ್ರೋಣವೈರದಿಂದ ಅಭಿಸಂತಪ್ತ ನನ್ನನ್ನು ನೀನು ಬಿಡುಗಡೆಮಾಡಬೇಕು. ಬ್ರಹ್ಮವಿದರಲ್ಲಿ ಶ್ರೇಷ್ಠನಾದ ಅವನು ಬ್ರಹ್ಮಾಸ್ತ್ರದಲ್ಲಿ ಅನುತ್ತಮನಾಗಿದ್ದಾನೆ. ಹಾಗಾಗಿ ದ್ರೋಣನು ಸ್ನೇಹಿತರ ಮಧ್ಯದ ಜಗಳದಲ್ಲಿ ನನ್ನನ್ನು ಪರಾಜಯಗೊಳಿಸಿದನು. ಎಷ್ಟೇ ಅಗ್ರಣಿಯಾದರೂ ಕೌರವರ ಪ್ರಮುಖ ಆಚಾರ್ಯ ಧೀಮಂತ ಭಾರದ್ವಾಜನ ಸರಿಸಮ ಕ್ಷತ್ರಿಯನು ಪೃಥ್ವಿಯಲ್ಲಿಯೇ ಇಲ್ಲ. ದ್ರೋಣನ ಶರಜಾಲಗಳು ಪ್ರಾಣಿಗಳ ದೇಹಹರಣ ಮಾಡುತ್ತವೆ, ಮತ್ತು ಅವನ ಆರು ಅಡಿ ಎತ್ತರದ ಮಹಾ ಧನುಸ್ಸಿನ ಸರಿಸಾಟಿಯಾದುದು ಇನ್ನೊಂದಿಲ್ಲ. ಮಹೇಷ್ವಾಸ ಮಹಾತ್ಮ ಭಾರದ್ವಾಜನ ಬ್ರಾಹ್ಮಣವೇಗವು ಕ್ಷಾತ್ರವೇಗವನ್ನು ನಿಸ್ಸಂಶಯವಾಗಿಯೂ ಸೋಲಿಸುತ್ತದೆ. ಕ್ಷತ್ರಿಯರ ಛೇದನೆಗೆ ವಿಹಿತನಾಗಿ ಜಾಮದಗ್ನಿಯಂತೆ ಬಂದಿರುವ ಅವನ ಘೋರ ಅಸ್ತ್ರಬಲವು ಭೂಮಿಯ ನರರಿಂದ ಸಹಿಸಲಸಾಧ್ಯವಾದುದು. ತನ್ನ ಬ್ರಾಹ್ಮಣ ತೇಜಸ್ಸಿನಿಂದ ಅಗ್ನಿಯಂತೆ ಪ್ರಜ್ವಲಿಸುತ್ತಿರುವ ಅವನು ರಣರಂಗದಲ್ಲಿ

> ತುಪ್ಪದಿಂದ ಇನ್ನೂ ಉರಿಯುವ ಬೆಂಕಿಯಂತೆ ಕ್ಷತ್ರಿಯರನ್ನು ಸುಟ್ಟುಹಾಕುತ್ತಾನೆ. ಬ್ರಾಹ್ಮಣ ಮತ್ತು ಕ್ಷತ್ರಿಯರು ಎದುರಾದಾಗ ಬ್ರಹ್ಮತೇಜಸ್ಸೇ ಮೇಲಾಗುತ್ತದೆ. ಕೇವಲ ನನ್ನ ಕ್ಷತ್ರಿಯ ಬಲದಿಂದ ನಾನು ಸೋಲುತ್ತೇನೆ. ಆದರೆ ಈಗ ನಾನು ಬ್ರಹ್ಮವಿತ್ತಮ ನಿನ್ನನ್ನು ಸೇವಿಸಿ ದ್ರೋಣನಿಗಿಂಥಲೂ ವಿಶಿಷ್ಟ ಬ್ರಹ್ಮತೇಜಸ್ಸನ್ನು ಪಡೆದಿದ್ದೇನೆ. ಯುದ್ಧದಲ್ಲಿ ದುರ್ಜಯ ದ್ರೋಣಾಂತಕ ಪುತ್ರನನ್ನು ಕೊಡುವಂಥ ಕರ್ಮವನ್ನು ಯಾಜಿಸು. ನಿನಗೆ ಬೇಕಾದಷ್ಟು ಗೋವುಗಳನ್ನು ಕೊಡುತ್ತೇನೆ."

"ಹಾಗೆಯೇ ಆಗಲಿ!" ಎಂದು ಹೇಳಿದ ಯಾಜನು ಯಜ್ಞಕ್ಕೆ ತಯಾರಿ ನಡೆಸಿದನು. ಅವನು ಉಪಯಾಜನಿಗೆ ಮನಸ್ಸಿಲ್ಲದಿದ್ದರೂ "ಅಣ್ಣನಿಗೆ ಸಹಾಯ ಮಾಡು!" ಎಂದು ಒತ್ತಾಯಿಸಿದನು. ನಂತರ ಯಾಜನೂ ಕೂಡ ದ್ರೋಣವಿನಾಶಕ್ಕೆ ಭರವಸೆಯನ್ನಿತ್ತನು. ನಂತರ ಮಹಾತಪಸ್ವಿ ಉಪಯಾಜನು ನರೇಂದ್ರನಿಗೆ ಪುತ್ರಫಲವನ್ನು ನೀಡುವಂಥ ಕರ್ಮವನ್ನು ನಡೆಸಲು ಸೂಚನೆಯನ್ನಿತ್ತನು:

> "ರಾಜನ್! ನಿನಗೆ ಮಹಾವೀರ, ಮಹಾತೇಜಸ್ವಿ, ಮಹಾಬಲಿ ಪುತ್ರನಾಗುವ ಹಾಗೆ ಮಾಡುವ ವಿಧಾನವಿದು."

ಭಾರದ್ವಾಜನ ಹಂತಾರನನ್ನು ಅಭಿಸಂಧಾನ ಮಾಡಿದ ಭೂಮಿಪ

ದ್ರುಪದನು ಕರ್ಮಸಿದ್ಧಿಗಾಗಿ ಎಲ್ಲ ವ್ಯವಸ್ಥೆಗಳನ್ನು ಮಾಡಿದನು. ಹವನದ ಅಂತ್ಯದಲ್ಲಿ ಯಾಜನು ದೇವಿ ರಾಣಿಯನ್ನು ಕರೆದನು:

> "ಪೃಷತಿ ರಾಣಿ! ನನ್ನೊಂದಿಗೆ ಮಿಥುನದ ಕಾಲವೊದಗಿದೆ. ನನ್ನ ಬಳಿ ಬಾ."

ಆಗ ದೇವಿಯು ಹೇಳಿದಳು:

> "ಬ್ರಾಹ್ಮಣ! ನನ್ನ ಮುಖವು ಅವಲಿಪ್ತವಾಗಿದೆ. ನಾನು ಪುಣ್ಯಗಂಧಗಳನ್ನು ಧರಿಸಿದ್ದೇನೆ. ನನ್ನ ಪ್ರಿಯ ಸುತನಿಗಾಗಿ ಉಪರುದ್ಧಳಾಗಿದ್ದೇನೆ. ನಿಲ್ಲು!"

ಅದಕ್ಕೆ ಯಾಜನು ಹೇಳಿದನು:

"ನೀನು ಇಲ್ಲಿಗೆ ಬಾ ಅಥವಾ ಅಲ್ಲಿಯೇ ನಿಲ್ಲು. ಯಾಜನಿಂದ ಶ್ರಪಿತ ಮತ್ತು ಉಪಯಾಜನಿಂದ ಮಂತ್ರಿತ ಈ ಹವಿಸ್ಸು ಹೇಗೆ ತಾನೇ ನಿನ್ನ ಆಸೆಯನ್ನು ನೆರವೇರಿಸಲಾರದು?"

ಹೀಗೆ ಹೇಳಿದ ಯಾಜನು ಸಂಸ್ಕೃತಗೊಂಡ ಹವಿಸ್ಸನ್ನು ಆಹುತಿಯನ್ನಾಗಿತ್ತನು.

ಆ ಪಾವಕನಿಂದ ದೇವಸನ್ನಿಭ ಜ್ವಾಲವರ್ಣಿ, ಘೋರರೂಪಿ, ಕಿರೀಟಿ, ಉತ್ತಮ ಕವಚಧಾರಿ ಕುಮಾರನೋರ್ವನು ಹೊಳೆಯುತ್ತಿರುವ ಖಡ್ಗ ಮತ್ತು ಶರಗಳೊಂದಿಗೆ ಧನುಸ್ಸನ್ನೂ ಹಿಡಿದು ಹೂಂಕಾರಗೈಯುತ್ತಾ ಎದ್ದು ಬಂದನು. ಅವನು ಶ್ರೇಷ್ಠ ರಥವನ್ನೇರಿ ಮುಂದೆ



ಬರುತ್ತಿದ್ದಂತೆಯೇ ಪಾಂಚಾಲರು ಪ್ರಹೃಷ್ಟರಾಗಿ ‘ಸಾಧು! ಸಾಧು!’ ಎಂದು ಉದ್ಗಾರಗೈದರು. ಆಗ

> “ಈ ಪಾಂಚಾಲರ ಯಶಸ್ಕರ, ರಾಜನ ಶೋಕಾಪಹ ಭಯಾಪಹ ರಾಜಪುತ್ರನು ದ್ರೋಣವಧೆಗಾಗಿಯೇ ಹುಟ್ಟಿದ್ದಾನೆ!” ಎಂದು ಅದೃಶ್ಯ ಖೇಚರ ಮಹಾಭೂತವೊಂದು ಹೇಳಿತು.

ನಂತರ ವೇದಿಮಧ್ಯದಿಂದ ಸುಭಗೆ, ದರ್ಶನೀಯಾಂಗಿ, ವೇದಿಮಧ್ಯಾ, ಮನೋರಮೆ ಕುಮಾರಿ ಪಾಂಚಾಲಿಯೂ ಎದ್ದು ಬಂದಳು. ಶ್ಯಾಮಳಾದ ಅವಳು ಪದ್ಮಪಲಾಶಾಕ್ಷಿಯೂ, ನೀಲಕುಂಜಿತ ಮೂರ್ಧಜೆಯೂ ಆಗಿದ್ದು ಸಾಕ್ಷಾದ್ ಅಮರವರ್ಣಿನಿಯು ಮಾನುಷ ದೇಹವನ್ನು ಧರಿಸಿದ್ದಾಳೆಯೋ ಎಂದು ತೋರುತ್ತಿದ್ದಳು. ಅವಳಿಂದ ಹೊರಸೂಸುತ್ತಿದ್ದ ನೀಲೋತ್ಪಲ ಸಮಾನ ಸುಗಂಧವು ಒಂದು ಕ್ರೋಶದವರೆಗೂ ಪ್ರವಾಹಿಸುತ್ತಿತ್ತು. ಅವಳ ಪರಮ ರೂಪವು ಅತಿ ಸುಂದರವಾಗಿದ್ದು ಭೂವಿಯಲ್ಲಿಯೇ ಅವಳ ಸರಿಸಾಟಿಯಾದವಳು ಯಾರೂ ಇರಲಿಲ್ಲ. ಆ ಸುಶ್ರೋಣಿಯು ಹುಟ್ಟುತ್ತಿದ್ದ ಹಾಗೆಯೇ ಅಶರೀರವಾಣಿಯು ನುಡಿಯಿತು:

> “ಸರ್ವ ಸ್ತ್ರೀಯರಲ್ಲಿ ಶ್ರೇಷ್ಠೆ ಈ ಕೃಷ್ಣೆಯು ಕ್ಷತ್ರಿಯರ ಕ್ಷಯವನ್ನು ನಡೆಸಿಕೊಡುತ್ತಾಳೆ. ಈ ಸುಮಧ್ಯಮೆಯು ಕಾಲಬಂದಾಗ ಸುರಕಾರ್ಯವನ್ನು ನಡೆಸಿಕೊಡುತ್ತಾಳೆ

> ಮತ್ತು ಅವಳ ಕಾರಣದಿಂದಾಗಿ ಕ್ಷತ್ರಿಯರಿಗೆ ಮಹಾ ಭಯವೊಂದು ಉಂಟಾಗುತ್ತದೆ!”

ಇದನ್ನು ಕೇಳಿದ ಪಾಂಚಾಲರೆಲ್ಲರೂ ಸಿಂಹಸಂಘದಂತೆ ಗರ್ಜಿಸಿದರು ಮತ್ತು ಹರ್ಷಸಂಪೂರ್ಣರಾದ ಅವರನ್ನು ವಸುಂಧರೆಯು ಸಹಿಸಲು ಅಸಮರ್ಥಳಾದಳು.

ಅವರೀರ್ವರನ್ನೂ ನೋಡಿದ ಸುತಾರ್ಥಿನೀ ಪೃಷತಿಯು ಯಾಜನಲ್ಲಿ ಕೇಳಿಕೊಂಡಳು:

> “ಇವರೀರ್ವರು ನನ್ನನ್ನು ಬಿಟ್ಟು ಬೇರೆ ಯಾರನ್ನೂ ತಾಯಿಯನ್ನಾಗಿ ತಿಳಿಯದಿರಲಿ!”

ರಾಜನಿಗೆ ಪ್ರಿಯವಾದುದನ್ನು ಮಾಡಲು ಬಯಸಿದ ಯಾಜನು “ಹಾಗೆಯೇ ಆಗಲಿ!” ಎಂದನು. ಆ ಸಂಪೂರ್ಣ ಮಾನಸ ದ್ವಿಜರು ಅವರೀರ್ವರಿಗೆ ಹೆಸರುಗಳನ್ನಿಟ್ಟರು:

> “ಧೃಷ್ಟ, ಅತಿಧೃಷ್ಣು ಮತ್ತು ಧ್ಯುತಸಂಭವನಾದ ದ್ರುಪದನ ಈ ಕುಮಾರನು ಧೃಷ್ಟಧ್ಯುಮ್ನನಾಗುತ್ತಾನೆ. ಬಣ್ಣದಲ್ಲಿ ಕೃಷ್ಣೆಯಾಗಿರುವ ಇವಳು ಕೃಷ್ಣೆ!”

ಎಂದು ಕರೆದರು. ಹೀಗೆ ದ್ರುಪದನಿಗೆ ಈ ಅವಳಿ ಮಕ್ಕಳು ಮಹಾಮಖದಲ್ಲಿ ಹುಟ್ಟಿದರು.

ಪ್ರತಾಪಿ ಭಾರದ್ವಾಜನು ಪಾಂಚಾಲ್ಯ ಧೃಷ್ಟಧ್ಯುಮ್ನನನ್ನು ತನ್ನ

ಮನೆಗೇ ಕರೆಸಿಕೊಂಡು ಅವನಿಗೆ ಅಸ್ತ್ರಗಳ ಶಿಕ್ಷಣವನ್ನಿತ್ತನು. ದೈವವು ಅಮೋಕ್ಷಣೀಯವಾದದ್ದು ಎಂದು ತಿಳಿದ ಮಹಾಮತಿ ದ್ರೋಣನು ತನ್ನ ಕೀರ್ತಿಯನ್ನು ರಕ್ಷಿಸುವುದಕ್ಕೋಸ್ಕರ ಈ ರೀತಿ ಮಾಡಿದನು.

***

ಇದನ್ನು ಕೇಳಿದ ಮಹಾರಥಿ ಕೌಂತೇಯರು ಎಲ್ಲರೂ ಈಟಿ ಚುಚ್ಚಿದಂತವರಾಗಿ ಅಸ್ವಸ್ಥಮನಸ್ಕರಾದರು. ವಿಭ್ರಾಂತರಾಗಿ ಗತಚೇತಸರಾದ ಮಕ್ಕಳನ್ನು ನೋಡಿ ಸತ್ಯವಾದಿನೀ ಕುಂತಿಯು ಯುಧಿಷ್ಠಿರನಿಗೆ ಹೇಳಿದಳು:

> "ಯುಧಿಷ್ಠಿರ! ಈ ಬ್ರಾಹ್ಮಣನ ಮನೆಯಲ್ಲಿದ್ದುಕೊಂಡು ಈ ರಮ್ಯ ಪುರದಲ್ಲಿ ಭಿಕ್ಷೆಬೇಡಿಕೊಂಡು ನಾವು ಬಹಳ ದಿನಗಳನ್ನು ಸುಖವಾಗಿ ಕಳೆದಿದ್ದೇವೆ. ಇಲ್ಲಿರುವ ರಮಣೀಯ ವನ ಉಪವನಗಳೆಲ್ಲವನ್ನೂ ಪುನಃ ಪುನಃ ನೋಡಿಯಾಗಿದೆ. ಅವುಗಳನ್ನೇ ಪುನಃ ನೋಡಲು ಮನಸ್ಸಾಗಲಿಕ್ಕಿಲ್ಲ. ನಮಗೆ ಇಲ್ಲಿ ಇನ್ನು ಭಿಕ್ಷವೂ ಅಷ್ಟೊಂದು ದೊರೆಯಲಿಕ್ಕಿಲ್ಲ. ನೀನು ಒಪ್ಪಿಕೊಂಡರೆ ನಾವು ಅಪೂರ್ವದರ್ಶನವೂ ರಮಣೀಯವೂ ಆದ ಪಾಂಚಾಲರಲ್ಲಿಗೆ ಹೋಗುವುದು ಒಳ್ಳೆಯದೆನಿಸುತ್ತದೆ. ಪಾಂಚಾಲರಲ್ಲಿ ಸುಭಿಕ್ಷವಾಗಿದೆ ಎಂದು ಕೇಳಿದ್ದೇನೆ. ರಾಜ ಯಜ್ಞಸೇನನು ಬ್ರಹ್ಮಣ್ಯ ಎಂದೂ ಕೇಳಿದ್ದೇನೆ. ಒಂದೇ

> ಸ್ಥಳದಲ್ಲಿ ಬಹಳ ಕಾಲ ವಾಸಮಾಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ನೀನು ಒಪ್ಪಿಕೊಳ್ಳುವೆಯಾದರೆ ನಾವು ಅಲ್ಲಿಗೆ ಹೋಗುವುದು ನಮಗೆ ಒಳ್ಳೆಯದಾಗುತ್ತದೆ.”

ಯುಧಿಷ್ಠಿರನು ಹೇಳಿದನು:

> “ನೀನು ಬಯಸಿದ ಕಾರ್ಯವು ನಮಗೆ ಪರಮಹಿತವಾಗುತ್ತದೆ. ಆದರೆ ನನ್ನ ಅನುಜರು ಹೋಗಲು ಬಯಸುತ್ತಾರೋ ಇಲ್ಲವೋ ಗೊತ್ತಿಲ್ಲ.”

ಆಗ ಕುಂತಿಯು ಹೊರಡುವುದರ ಕುರಿತು ಭೀಮಸೇನ, ಅರ್ಜುನ ಮತ್ತು ಯಮಳರಿಗೆ ಹೇಳಿದಾಗ, ಅವರೆಲ್ಲರೂ ಹಾಗೆಯೇ ಆಗಲಿ ಎಂದರು. ಆ ವಿಪ್ರನನ್ನು ಬೀಳ್ಕೊಂಡು ಪುತ್ರರ ಸಹಿತ ಕುಂತಿಯು ಮಹಾತ್ಮ ದ್ರುಪದನ ರಮ್ಯ ನಗರಿಗೆ ಹೊರಟಳು.

## ದ್ರೌಪದಿಯ ಜನನದ ಪೂರ್ವ ವೃತ್ತಾಂತ

ಮಹಾತ್ಮ ಪಾಂಡವರು ಏಕಚಕ್ರನಗರಿಯಲ್ಲಿ ಪ್ರಚ್ಛನ್ನರಾಗಿ ವಾಸಿಸುತ್ತಿದ್ದಾಗ ಅವರನ್ನು ನೋಡಲು ಸತ್ಯವತೀಸುತ ವ್ಯಾಸನು ಬಂದಿದ್ದನು. ಅವನು ಆಗಮಿಸುತ್ತಿರುವುದನ್ನು ನೋಡಿದ ಪರಂತಪರು ಅವನನ್ನು ಭೆಟ್ಟಿಯಾಗಲು ಮೇಲೆದ್ದು ಕೈಗಳನ್ನು ಜೋಡಿಸಿ ಅಭಿವಂದಿಸಿ ಅವನ ಎದುರು ನಿಂತುಕೊಂಡರು.

ಪಾರ್ಥರಿಂದ ಪೂಜಿತನಾಗಿ ಪ್ರಸನ್ನನಾದ ಮುನಿಯು ಅವರೆಲ್ಲರಿಗೂ ಸುಖಾಸೀನರಾಗಲು ಅನುಜ್ಞೆಯನ್ನಿತ್ತು ಈ ಪ್ರೀತಿಪೂರ್ವಕ ಮಾತುಗಳನ್ನಾಡಿದನು:

> "ಪರಂತಪರೇ! ನೀವು ಧರ್ಮ ಮತ್ತು ಶಾಸ್ತ್ರಗಳ ಪ್ರಕಾರವೇ ನಡೆದುಕೊಂಡು ಬಂದಿದ್ದೀರಾ? ಪೂಜಾರ್ಹ ವಿಪ್ರರಿಗೆ ಬೇಕಾದಷ್ಟು ಗೌರವ ನೀಡುತ್ತಿದ್ದೀರಾ?"

ಈ ಧರ್ಮಾರ್ಥ ಮಾತುಗಳನ್ನಾಡಿದ ಭಗವಾನ್ ಋಷಿಯು ವಿಚಿತ್ರ ಕಥೆಗಳನ್ನು ಹೇಳುತ್ತಾ ಪುನಃ ಈ ಮಾತುಗಳನ್ನಾಡಿದನು:

> "ಹಿಂದೆ ಒಮ್ಮೆ ತಪೋವನದಲ್ಲಿ ತೆಳು ಸೊಂಟದ, ಸುಶ್ರೋಣಿ, ಸುಂದರ ಹುಬ್ಬಿನ, ಸರ್ವಗುಣಾನ್ವಿತೆ ಮಹಾತ್ಮ ಋಷಿಯ ಮಗಳೋರ್ವಳು ವಾಸಿಸುತ್ತಿದ್ದಳು. ಅವಳು ಮಾಡಿದ ಕರ್ಮಗಳಿಂದಾಗಿ ಅವಳು ದುರ್ಭಗಳಾಗಿದ್ದಳು. ರೂಪವತಿಯಾಗಿದ್ದರೂ ಆ ಸತಿ ಕನ್ಯೆಯು ಪತಿಯನ್ನು ಪಡೆಯಲಿಲ್ಲ. ಅಸುಖಿಯಾದ ಅವಳು ಪತಿಯನ್ನು ಪಡೆಯಲೋಸುಗ ತಪಸ್ಸನ್ನು ಪ್ರಾರಂಭಿಸಿದಳು. ಅವಳ ಉಗ್ರ ತಪಸ್ಸಿನಿಂದ ಶಂಕರನನ್ನು ತೃಪ್ತಿಪಡಿಸಿದಳು. ಸಂತುಷ್ಟ ಭಗವಾನನು ಆ ತಪಸ್ವಿನಿಗೆ ಹೇಳಿದನು: "ಭದ್ರೇ! ಭಾಮಿನೀ! ವರವನ್ನು ನೀಡುತ್ತೇನೆ. ಬೇಕಾದ ವರವನ್ನು ಕೇಳಿಕೋ." ಆಗ ಅವಳು "ಸರ್ವಗುಣೋಪೇತ ಪತಿಯನ್ನು

ಬಯಸುತ್ತೇನೆ!" ಎಂಬ ಆತ್ಮಹಿತ ಮಾತುಗಳನ್ನು ಪುನಃ ಪುನಃ ಈಶ್ವರನಲ್ಲಿ ಹೇಳಿಕೊಂಡಳು. ಮಾತನಾಡುವವರಲ್ಲಿ ಶ್ರೇಷ್ಠ ಈಶಾನ ಶಂಕರನು "ಭದ್ರೇ! ನಿನಗೆ ಐವರು ಪತಿಗಳಾಗುತ್ತಾರೆ!" ಎಂದು ಉತ್ತರಿಸಿದನು. "ನನಗೆ ಒಬ್ಬನೇ ಪತಿಯನ್ನು ಕೊಡು!" ಎಂದು ಪುನಃ ಕೇಳಿಕೊಂಡಾಗ ದೇವ ಶಂಕರನು ಈ ಮಾತುಗಳನ್ನಾಡಿದನು: "ನೀನು ಪುನಃ ಪುನಃ ಐದು ಬಾರಿ ಪತಿಯನ್ನು ಕೊಡು ಎಂದು ಕೇಳಿಕೊಂಡಿದ್ದೀಯೆ. ನೀನು ಅನ್ಯ ದೇಹವನ್ನು ಹೊಂದಿದಾಗ ನೀನು ಕೇಳಿಕೊಂಡಂತೆಯೇ ಆಗುತ್ತದೆ." ಅದೇ ಕನ್ಯೆಯು ದ್ರುಪದ ಕುಲದಲ್ಲಿ ದೇವರೂಪಿಣಿಯಾಗಿ ಹುಟ್ಟಿದ್ದಾಳೆ. ಆ ಅನಿಂದಿತೆ ಪಾರ್ಷತಿ ಕೃಷ್ಣೆಯು ನಿರ್ದಿಷ್ಠವಾಗಿಯೂ ನಿಮ್ಮ ಪತ್ನಿಯಾಗುತ್ತಾಳೆ. ಮಹಾಬಲರೇ! ಆದುದರಿಂದ ಪಾಂಚಾಲನಗರವನ್ನು ಪ್ರವೇಶಿಸಿ. ಅವಳನ್ನು ಪಡೆದ ಭವಿಷ್ಯದಲ್ಲಿ ನೀವು ಸುಖಿಗಳಾಗುತ್ತೀರಿ ಎನ್ನುವುದರಲ್ಲಿ ಸಂಶಯವಿಲ್ಲ."

ಪಾಂಡವ ಪಿತಾಮಹ ಮಹಾಭಾಗ ಪ್ರತಿಷ್ಠಿತ ಮಹಾತಪಸ್ವಿಯು ಹೀಗೆ ಹೇಳಿ ಕುಂತಿ ಮತ್ತು ಪಾರ್ಥರಿಂದ ಬೀಳ್ಕೊಂಡನು.

## ಗಂಧರ್ವ ಅಂಗಾರಪರ್ಣ

ತಾಯಿಯನ್ನು ಮುಂದಿರಿಸಿಕೊಂಡು ಆ ಪರಂತಪ ಪುರುಷರ್ಷಭರು

ಸೂಚಿಸಿದ್ದ ಸಮತರ ಮಾರ್ಗದಲ್ಲಿ ಉತ್ತರಾಭಿಮುಖವಾಗಿ ಹೊರಟರು. ಆ ಪುರುಷವ್ಯಾಘ್ರ ಪಾಂಡುನಂದನರು ಅಹೋರಾತ್ರಿ ನಡೆದು ಗಂಗಾ ತೀರದಲ್ಲಿರುವ ಸೋಮಶ್ರವಾಯಣ ತೀರ್ಥವನ್ನು ತಲುಪಿದರು. ಅವರೆಲ್ಲರ ಮುಂದೆ ದೀವಟಿಗೆಯೊಂದನ್ನು ಹಿಡಿದು ಮಹಾಯಶಸ್ವಿ ಧನಂಜಯನು ಬೆಳಕು-ರಕ್ಷಣೆಗಳನ್ನು ನೀಡುತ್ತಾ ನಡೆಯುತ್ತಿದ್ದನು. ಏಕಾಂತ ಆ ರಮ್ಯ ಗಂಗಾಜಲದಲ್ಲಿ ಸ್ತ್ರೀಯರೊಡನೆ ಕ್ರೀಡೆಗೆಂದು ಬಂದ ಗಂಧರ್ವರಾಜನು ಜಲಕ್ರೀಡೆಯಾಡುತ್ತಿದ್ದನು. ನದಿಯನ್ನು ಸಮೀಪಿಸುತ್ತಿರುವ ಅವರ ಶಬ್ಧವನ್ನು ಅವನು ಕೇಳಿದನು. ಬಲವಂತರಲ್ಲಿಯೇ ಬಲಶಾಲಿ ಅವನು ಶಬ್ಧದಿಂದ ಕ್ರೋಧಾವಿಷ್ಠನಾದನು. ತಾಯಿಯೊಂದಿಗಿದ್ದ ಆ ಪರಂತಪ ಪಾಂಡವರನ್ನು ನೋಡಿ ಧನುಸ್ಸನ್ನು ಠೇಂಕರಿಸಿ ಈ ಮಾತುಗಳನ್ನಾಡಿದನು:

> “ಕೆಂಪಾದ ಘೋರ ಸಂಧ್ಯೆಯು ಮೂಲಕ ರಾತ್ರಿ ಬೀಳುವ ಗಳಿಗೆಯನ್ನು, ಮೊದಲು ಎಂಟು ಮುಹೂರ್ತಗಳನ್ನು ಬಿಟ್ಟು, ಕಾಮಚಾರಿಗಳಾದ ಯಕ್ಷ, ಗಂಧರ್ವ ಮತ್ತು ರಾಕ್ಷಸರಿಗೆ ಮೀಸಲಾಗಿ ಇಡಲಾಗಿದೆ ಮತ್ತು ಉಳಿದ ಸಮಯದಲ್ಲಿ ಮನುಷ್ಯರು ಇಷ್ಟಬಂದಹಾಗೆ ವಿಹರಿಸಬಹುದು ಎಂದು ಕೇಳಿದ್ದೇವೆ. ಈ ವೇಳೆಯಲ್ಲಿ ಲೋಭ ಮತ್ತು ದಡ್ಡತನದಿಂದ ಸಂಚರಿಸುತ್ತಿರುವ ನರರನ್ನು ನಾವು ಮತ್ತು ರಾಕ್ಷಸರು ಎದುರಿಸಿ ಶಿಕ್ಷಿಸುತ್ತೇವೆ. ರಾತ್ರಿವೇಳೆ ನೀರಿರುವಲ್ಲಿಗೆ ನರರು -

ಬಲವಂತರಾದ ರಾಜರೂ ಕೂಡ - ಹೋಗುವುದು ತಪ್ಪೆಂದು ಬ್ರಹ್ಮವಿದ ಜನರು ಪರಿಗಣಿಸುತ್ತಾರೆ. ನನ್ನ ಸಮೀಪ ಬರದೇ ಅಲ್ಲಿಯೇ ದೂರದಲ್ಲಿ ನಿಲ್ಲಿ! ಭಾಗೀರಥೀ ನೀರಿಗೆ ಬಂದಿರುವ ನನ್ನನ್ನು ನೀವು ಹೇಗೆತಾನೇ ಗುರುತಿಸಲಿಲ್ಲ! ನನ್ನನ್ನು ಸ್ವಬಲಾಶ್ರಯ ಗಂಧರ್ವ ಅಂಗಾರಪರ್ಣನೆಂದು ತಿಳಿಯಿರಿ. ನಾನು ಒಬ್ಬ ಗರ್ವಿ ಮತ್ತು ಈರ್ಷೆಯ ಸ್ವಭಾವದವನು. ನಾನು ಕುಬೇರನ ಪ್ರಿಯ ಸಖನೂ ಹೌದು. ಅಂಗಾರಪರ್ಣವೆಂದು ಖ್ಯಾತ ಗಂಗಾತೀರದಲ್ಲಿರುವ ಈ ಸುಂದರ ವನ ಮತ್ತು ನಾನು ವಾಸಿಸುತ್ತಿರುವ ಈ ವಾಕೆಯು ನನ್ನದು. ಶವಗಳಾಗಲೀ, ಕೊಂಬಿರುವ ಪ್ರಾಣಿಗಳಾಗಲೀ, ದೇವತೆಗಳಾಗಲೀ ಅಥವಾ ಮನುಷ್ಯರಾಗಲೀ ಇದರ ಸಮೀಪ ಬರುವುದಿಲ್ಲ. ನೀವು ಹೇಗೆ ಇಲ್ಲಿಗೆ ಬಂದಿರಿ?”

ಅರ್ಜುನನು ಹೇಳಿದನು:

“ದುರ್ಮತೇ! ಸಮುದ್ರ, ಹಿಮವತ್ಪರ್ವತ ಮತ್ತು ನದೀ ಮಾರ್ಗಗಳನ್ನು ರಾತ್ರಿಯಾಗಲೀ, ಹಗಲಾಗಲೀ ಅಥವಾ ಸಾಯಂಕಾಲವಾಗಲೀ ಯಾರು ತಾನೆ ತಡೆಹಿಡಿಯುತ್ತಾನೆ? ನಾವು ಶಕ್ತಿ ಸಂಪನ್ನರಾಗಿದ್ದೇವೆ ಮತ್ತು ಇದು ಅಕಾಲವಾದರೂ ನಾವು ನಿನ್ನನ್ನು ಎದುರಿಸುತ್ತೇವೆ. ಕೇವಲ

ಅಶಕ್ತ ಮಾನವರು ನಿನ್ನ ಈ ಕ್ರೂರ ಕ್ಷಣದಲ್ಲಿ ನಿನ್ನನ್ನು ಪೂಜಿಸುತ್ತಾರೆ. ಹಿಂದೆ ಹಿಮವಂತದ ಹೇಮಶೃಂಗಗಳಿಂದ ಹೊರಬಂದ ಗಂಗೆಯು ಎಂಟು ಧಾರೆಗಳಾಗಿ ಸಮುದ್ರದ ನೀರನ್ನು ಸೇರುತ್ತಾಳೆ. ದ್ವೈಪಾಯನನು ಹೇಳಿರುವಂತೆ ಈ ಶುಚಿಯು ಏಕವಪ್ರಳಾಗಿ ದೇವತೆಗಳ ಆಕಾಶದಲ್ಲಿ ಹರಿಯುತ್ತಾಳೆ ಮತ್ತು ಮುಂದೆ ಅವಳೇ ಅಲಕನಂದಾ ಎಂದಾಗಿ ಮುಂದೆ ಪಿತೃಗಳ ಮಧ್ಯದಲ್ಲಿ ವೈತರಣಿ ಎಂದು, ನಂತರ ಪಾಪಕರ್ಮಿಗಳಿಗೆ ದುಸ್ತರಳಾದ ಗಂಗಾ ಎಂದೂ ಕರೆಯಿಸಿಕೊಳ್ಳುತ್ತಾಳೆ. ಈ ಶುಭ ದೇವನದಿಯು ಸ್ವರ್ಗವನ್ನು ಸೇರುತ್ತದೆ. ಇಂಥಹುದನ್ನು ನೀನು ಬೇರೆಯವರಿಗೆ ದೊರೆಯದಂತೆ ಹೇಗೆತಾನೇ ತಡೆಹಿಡಿಯಬಲ್ಲೆ? ಅದು ಸನಾತನ ಧರ್ಮವಲ್ಲ. ಅನಿವಾರ್ಯವೂ ಅಸಂಬಾಧವೂ ಆದ ನಿನ್ನ ಈ ಮಾತಿನಂತೆ ನಾವು ಏಕೆ ನಮಗಿಷ್ಟ ಬಂದಂತೆ ಈ ಪುಣ್ಯ ಭಾಗೀರಥೀಜಲವನ್ನು ಮುಟ್ಟಬಾರದು?”

ಇದನ್ನು ಕೇಳಿ ಅಂಗಾರಪರ್ಣನು ಕೃದ್ಧನಾಗಿ ತನ್ನ ಧನುಸ್ಸನ್ನು ಎಳೆದು ಬಲಶಾಲಿ ಸರ್ಪ ವಿಷದಂತೆ ಉರಿಯುತ್ತಿರುವ ಬಾಣಗಳನ್ನು ಬಿಟ್ಟನು. ಆದರೆ ಪಾಂಡವ ಧನಂಜಯನು ತನ್ನ ಧನುಸ್ಸು ಮತ್ತು ಉತ್ತಮ ಕವಚಗಳಿಂದ ಆ ಎಲ್ಲ ಶರಗಳನ್ನೂ ತಡೆಹಿಡಿದನು.

ಅರ್ಜುನನು ಹೇಳಿದನು:

> “ಗಂಧರ್ವ ! ಈ ರೀತಿಯ ದಬ್ಬಾಳಿಕೆಯು ಅಸ್ತ್ರಗಳನ್ನು ತಿಳಿದವರಲ್ಲಿ ಪ್ರಯೋಜನಕ್ಕೆ ಬಾರದು. ಇದನ್ನು ಅಸ್ತ್ರಜ್ಞರಲ್ಲಿ ಬಳಸಿದರೆ ಅದು ಹಾಲಿನ ಕೆನೆಯಂತೆ ಮಾಯವಾಗುತ್ತದೆ. ಸರ್ವ ಗಂಧರ್ವರೂ ಮನುಷ್ಯರನ್ನು ಮೀರಿಸುತ್ತಾರೆ ಎಂದು ತಿಳಿದಿದ್ದೇನೆ. ಆದುದರಿಂದ ನಾನು ನಿನ್ನಲ್ಲಿ ದಿವ್ಯಾಸ್ತ್ರಗಳಿಂದ ಹೋರಾಡುತ್ತೇನೆ. ಮಾಯೆಯಿಂದಲ್ಲ. ಇದು ಆಗ್ನೇಯಾಸ್ತ್ರ. ಹಿಂದೆ ಇದನ್ನು ಶತಕ್ರತುವಿನ ಗುರುಪುತ್ರ ಬೃಹಸ್ಪತಿಯು ಭರದ್ವಾಜನಿಗೆ ನೀಡಿದನು. ಭರದ್ವಾಜನಿಂದ ಇದು ಅಗ್ನಿವೇಶನಿಗೆ ಮತ್ತು ನಂತರ ನನ್ನ ಗುರುವಿಗೆ ಬಂದಿತು. ನಂತರ ಇದನ್ನು ಬ್ರಾಹ್ಮಣಸತ್ತಮ ದ್ರೋಣನು ನನಗೆ ಕೊಟ್ಟನು.”

ಕೃದ್ಧ ಪಾಂಡವನು ಹೀಗೆ ಹೇಳಿ ಉರಿಯುತ್ತಿರುವ ಆಗ್ನೇಯಾಸ್ತ್ರವನ್ನು ಗಂಧರ್ವನ ಮೇಲೆ ಬಿಡಲಾಗಿ, ಅದು ಅವನ ರಥವನ್ನು ಸುಟ್ಟುಹಾಕಿತು. ರಥವನ್ನು ಕಳೆದುಕೊಂಡ ಆ ಮಹಾಬಲಿ ಗಂಧರ್ವನು ಅಸ್ತ್ರ ತೇಜಸ್ಸಿನಿಂದ ಮೂರ್ಛೆಹೊಂದಿ ಕೆಳಮುಖನಾಗಿ ಬೂಮಿಯ ಮೇಲೆ ಬಿದ್ದನು. ಧನಂಜಯನು ಅಸ್ತ್ರದ ಹೊಡೆತದಿಂದ ಮೂರ್ಛಿತನಾಗಿದ್ದ ಅವನ ಕೂದಲ ಜಡೆಯನ್ನು ಹಿಡಿದು ತನ್ನ ಸಹೋದರರ ಬಳಿ ಎಳೆತಂದನು. ಆಗ ಕುಂಭೀನಸಿ ಎಂಬ ಹೆಸರಿನ

ಅವನ ಪತ್ನಿಯು ಪತಿಯ ಜೀವವನ್ನು ಉಳಿಸಬೇಕೆಂದು ಶರಣಾರ್ಥಿಯಾಗಿ ಯುಧಿಷ್ಠಿರನನ್ನು ಕೇಳಿಕೊಂಡಳು:

“ಮಹಾರಾಜ! ನನ್ನನ್ನು ಉಳಿಸು ಮತ್ತು ನನ್ನ ಪತಿಯನ್ನು ಬಿಡುಗಡೆಮಾಡು. ಕುಂಭೀನಸಿ ಎಂಬ ಹೆಸರಿನ ಗಂಧರ್ವಿಯು ನಿನ್ನ ಶರಣು ಬಂದಿದ್ದಾಳೆ.”

ಯುಧಿಷ್ಠಿರನು ಹೇಳಿದನು:

“ಯುದ್ಧದಲ್ಲಿ ಸೋತು ಯಶೋಹೀನನಾಗಿ ಸ್ತ್ರೀಯಿಂದ ರಕ್ಷಿಸಲ್ಪಟ್ಟ ಅಪರಾಕ್ರಮಿಯನ್ನು ನಿನ್ನಂಥಹ ವೀರನು ಕೊಲ್ಲಬಾರದು. ರಿಪುಸೂದನ! ಅವನನ್ನು ಬಿಟ್ಟುಬಿಡು!”

ಅರ್ಜುನನು ಹೇಳಿದನು:

“ಹಾಗೆಯೇ ಆಗಲಿ. ಅವನಿಗೆ ಜೀವವನ್ನು ನೀಡೋಣ. ಹೋಗು ಗಂಧರ್ವ! ಇನ್ನು ಕಷ್ಟಕ್ಕೊಳಗಾಗಬೇಡ! ಕುರುರಾಜ ಯುಧಿಷ್ಠಿರನು ಇಂದು ನಿನಗೆ ಅಭಯವನ್ನು ನೀಡುತ್ತಿದ್ದಾನೆ.”

ಗಂಧರ್ವನು ಹೇಳಿದನು:

“ಸೋತುಹೋದ ನಾನು ನನ್ನ ಹಿಂದಿನ ಅಂಗಾರಪರ್ಣ ಎನ್ನುವ ಹೆಸರನ್ನು ತೊರೆಯುತ್ತೇನೆ. ಇನ್ನು ಮುಂದೆ ಜನಸಂಸದಿಯಲ್ಲಿ ನನ್ನ ಹೆಸರು ಅಥವಾ ಬಲದಿಂದ

ಜಂಬಕೊಚ್ಚಿಕೊಳ್ಳಲು ಸಾಧ್ಯವಿಲ್ಲ. ಯುವಕನೊಂದಿಗೆ ನನ್ನ ಗಾಂಧರ್ವ ಮಾಯೆಯಿಂದ ಯುದ್ಧಮಾಡಲು ಬಯಸಿದ ನನಗೆ ದಿವ್ಯಾಸ್ತ್ರಧಾರಿಣಿಯು ದೊರಕಿದ್ದುದು ನನ್ನ ಅದೃಷ್ಟವೇ ಸರಿ. ನನ್ನ ವಿಚಿತ್ರ ಉತ್ತಮ ರಥವು ಅಸ್ತ್ರಾಗ್ನಿಯಿಂದ ಸುಟ್ಟುಹೋಯಿತು. ಚಿತ್ರರಥನೆಂಬ ಹೆಸರನ್ನು ಹೊಂದಿದ್ದ ನಾನು ದಗ್ಧರಥನಾದೆನು! ಹಿಂದೆ ತಪಸ್ಸಿನಿಂದ ಪಡೆದಿದ್ದ ಈ ಸಂಭೃತ ವಿಧ್ಯೆಯನ್ನು ಇಂದು ನನ್ನ ಪ್ರಾಣವನ್ನು ನೀಡಿದ ಮಹಾತ್ಮನಿಗೆ ಕೊಡುತ್ತೇನೆ. ಶತ್ರುವನ್ನು ತನ್ನ ಬಲದಿಂದ ಮೂರ್ಛೆಗೊಳಿಸಿ, ನಂತರ ಅವನು ಶರಣಾಗತನಾದಾಗ ಪ್ರಾಣವನ್ನಿತ್ತವನಿಗೆ ಇದಕ್ಕಿಂತಲೂ ಕಲ್ಯಾಣಕರ ಉಡುಗೊರೆಯು ಬೇರೆ ಏನಿದೆ? ಚಕ್ಷುಷೀ ಎಂಬ ಹೆಸರಿನ ಈ ವಿದ್ಯೆಯನ್ನು ಮನುವು ಸೋಮನಿಗೆ ಕೊಟ್ಟನು ಮತ್ತು ಅವನು ವಿಶ್ವಾವಸುವಿಗೆ ಕೊಟ್ಟನು. ವಿಶ್ವಾವಸುವು ನನಗೆ ಕೊಟ್ಟನು. ಗುರುದತ್ತವಾದ ಇದನ್ನು ಕಾಪುರುಷನಿಗೆ ಕೊಟ್ಟರೆ ಅದು ನಾಶವಾಗುತ್ತದೆ. ಇದರ ಆಗಮವನ್ನು ನಾನು ಹೇಳಿದ್ದೇನೆ. ವೀರ! ಇದನ್ನು ನನ್ನಿಂದ ಪಡೆದುಕೋ. ಮೂರೂ ಲೋಕಗಳಲ್ಲಿ ಯಾವುದನ್ನು ನೋಡಲು ಬಯಸುತ್ತೇವೋ ಅದನ್ನು ಈ ಚಕ್ಷುಷಿಯಿಂದ ನೋಡಬಹುದು ಮತ್ತು ಅದನ್ನು ಯಾವರೀತಿಯಲ್ಲಿ ನೋಡಲು ಬಯಸುತ್ತೇವೋ ಆ

ರೀತಿಯಲ್ಲಿ ನೋಡಬಹುದು. ಈ ವಿಧ್ಯೆಯನ್ನು ಆರು ತಿಂಗಳುಗಳು ಒಂದೇ ಕಾಲಿನ ಮೇಲೆ ನಿಂತು ಪಡೆಯಬಹುದು. ಆದರೆ ಸ್ವಯಂ ನಾನು ಇದನ್ನು ಮಾತು ಕೊಟ್ಟಹಾಗೆ ನಿನಗೆ ನೀಡುತ್ತೇನೆ. ಈ ವಿದ್ಯೆಯಿಂದಲೇ ನಾವು ನರರಿಗಿಂಥ ಶ್ರೇಷ್ಠರಾಗಿದ್ದೇವೆ ಮತ್ತು ಇದರ ವಿಶೇಷತೆಯಿಂದಲೇ ನಾವು ದೇವತೆಗಳಿಗಿಂತ ಭಿನ್ನರಾಗಿಲ್ಲ. ನೀವು ಐವರು ಭ್ರಾತೃಗಳಿಗೂ ತಲಾ ನೂರು ನೂರು ಗಂಧರ್ವರಿಂದ ಬೆಳೆಸಿದ ಅಶ್ವಗಳನ್ನು ಕೊಡುತ್ತೇನೆ. ದಿವ್ಯಗಂಧವನ್ನು ಹೊಂದಿದ ಈ ಮನೋಗಾಮಿಗಳು ದೇವತೆಗಳು ಮತ್ತು ಗಂಧರ್ವರ ವಾಹನಗಳು. ಇವು ಎಷ್ಟೇ ಕ್ಷೀಣರಾದರೂ ಅವರ ವೇಗವು ಕಡಿಮೆಯಾಗುವುದಿಲ್ಲ. ಹಿಂದೆ ವೃತ್ರನನ್ನು ಕೊಲ್ಲಲು ಮಹೇಂದ್ರನ ವಜ್ರವನ್ನು ಮಾಡಲಾಗಿತ್ತು. ಆದರೆ ಅದು ವೃತ್ರನ ತಲೆಯ ಮೇಲೆ ಹೊಡೆದಾಗ ಹತ್ತು ಮತ್ತು ನೂರು ಚೂರುಗಳಾಗಿ ಒಡೆದವು. ಅಂದಿನಿಂದ ದೇವತೆಗಳು ವಜ್ರಭಾಗಗಳನ್ನು ಹಂಚಿಕೊಂಡು ಅವುಗಳನ್ನು ಪೂಜಿಸುತ್ತಾ ಬಂದಿದ್ದಾರೆ. ಲೋಕದಲ್ಲಿ ಯಶಸ್ವಿಯಾಗಿರುವುದೆಲ್ಲವೂ ವಜ್ರತನುವೆಂದು ಹೇಳುತ್ತಾರೆ. ಬ್ರಾಹ್ಮಣನು ವಜ್ರಪಾಣಿಯೆಂದೂ, ಕ್ಷತ್ರಿಯನು ವಜ್ರರಥಿಯೆಂದೂ ವೈಶ್ಯನು ವಜ್ರದಾನಿಯೆಂದೂ ಮತ್ತು ಇನ್ನೂ ಕೆಳಗಿನವರು ವಜ್ರಕರ್ಮಿಗಳೆಂದೂ

ಕರೆಯಲ್ಪಟ್ಟಿದ್ದಾರೆ. ಕುದುರೆಗಳೇ ಕ್ಷತ್ರಿಯನ ವಜ್ರ ಮತ್ತು ಕುದುರೆಗಳು ಅವಧ್ಯ ಎಂದು ಹೇಳುತ್ತಾರೆ. ವಡವನು ರಥಾಂಗ ಕುದುರೆಗಳಿಗೆ ಜನ್ಮವಿತ್ತನು. ಆದುದರಿಂದ ಕುದುರೆಗಳನ್ನು ಓಡಿಸುವವರಿಗೆ ಸೂತ ಎನ್ನುವ ಹೆಸರು ಬಂದಿತು. ಗಂಧರ್ವರಲ್ಲಿ ಹುಟ್ಟಿ ಬೆಳೆದ ಈ ಕುದುರೆಗಳು ಬೇಕಾದ ಬಣ್ಣವನ್ನು ಪಡೆಯಬಹುದು, ಬೇಕಾದಷ್ಟು ವೇಗದಲ್ಲಿ ಹೋಗಬಹುದು, ಯಾವುದೇ ಆಸೆಗಳನ್ನಿಟ್ಟುಕೊಂಡೂ ಅವುಗಳ ಬಳಿ ಹೋಗಬಹುದು ಮತ್ತು ಯಾವುದೇ ಬಯಕೆಯಗಳನ್ನೂ ಪೂರೈಸಬಲ್ಲವು."

ಅರ್ಜುನನು ಹೇಳಿದನು:

"ಗಂಧರ್ವ ! ನಿನ್ನ ಜೀವವನ್ನು ಪುನಃ ಪಡೆದೆಯೆನ್ನುವ ಪ್ರೀತಿಯಿಂದ ಅಥವಾ ಸಂಶಯದಿಂದ ನಿನ್ನ ಈ ವಿಧ್ಯೆಯನ್ನು ಅಥವಾ ಸಂಪತ್ತನ್ನು ನಮಗೆ ಕೊಡುವುದಾದರೆ ಅವು ನಮಗೆ ಬೇಡ !"

ಗಂಧರ್ವನು ಹೇಳಿದನು:

"ಹೋರಾಟದಲ್ಲಿ ಮಾಡಿದ ಸ್ನೇಹವು ಸಂತೋಷವನ್ನು ನೀಡುತ್ತದೆ. ನನ್ನ ಜೀವ ಪ್ರದಾನದಿಂದ ಸಂತುಷ್ಟನಾಗಿ ನಾನು ನಿನಗೆ ಈ ವಿದ್ಯೆಯನ್ನು ಕೊಡುತ್ತಿದ್ದೇನೆ. ನಿನ್ನಿಂದ ನಾನು ಉತ್ತಮ ಆಗ್ನೇಯಾಸ್ತ್ರವನ್ನು ಸ್ವೀಕರಿಸುತ್ತೇನೆ. ಹೀಗೆ

ನಮ್ಮ ಸಖ್ಯವು ಚಿರವಾಗಿರಲಿ.”

ಅರ್ಜುನನು ಹೇಳಿದನು:

“ಅಸ್ತ್ರಕ್ಕೆ ಬದಲಾಗಿ ನಿನ್ನಿಂದ ಅಶ್ವಗಳನ್ನು ಸ್ವೀಕರಿಸುತ್ತೇನೆ ಮತ್ತು ನಮ್ಮ ಈ ಸಂಯೋಗವು ಶಾಶ್ವತವಾಗಿರಲಿ. ಸಖ! ಗಂಧರ್ವ! ನಿಮ್ಮಂಥವರ ಭಯವನ್ನು ಹೇಗೆ ಹೋಗಲಾಡಿಸಬಹುದು ಎನ್ನುವುದನ್ನು ಹೇಳು. ಬ್ರಹ್ಮವಿದ ನಾವೆಲ್ಲರೂ ರಾತ್ರಿಯಲ್ಲಿ ಪ್ರಯಾಣಮಾಡುತ್ತಿರುವಾಗ ನಮ್ಮ ಮೇಲೆ ನೀನು ಧಾಳಿಮಾಡಿದುದರ ಕಾರಣವನ್ನು ಹೇಳು.”

ಗಂಧರ್ವನು ಹೇಳಿದನು:

“ಪಾಂಡವನಂದನ! ಅನಗ್ನ, ಅನಾಹುತ ಮತ್ತು ವಿಪ್ರನನ್ನು ಮುಂದುಮಾಡಿಕೊಂಡಿರದೇ ಹೋಗುತ್ತಿದ್ದ ನಿಮ್ಮನ್ನು ನಾನು ತಡೆದು ಧಾಳಿಮಾಡಿದೆನು. ಯಕ್ಷ, ರಾಕ್ಷಸ, ಗಂಧರ್ವ, ಪಿಶಾಚ, ಉರಗ ಮತ್ತು ಮಾನವರು ವಿಸ್ತಾರ ಶ್ರೀಮಂತ ಕುರುವಂಶದ ಚರಿತ್ರೆಯನ್ನು ಹೇಳುತ್ತಿರುತ್ತಾರೆ. ನಾರದರೇ ಮೊದಲಾದ ದೇವರ್ಷಿಗಳಿಂದ ನಿನ್ನ ಧೀಮಂತ ಪೂರ್ವಜರ ಗುಣಗಳನ್ನು ನಾನು ಕೇಳಿದ್ದೇನೆ. ಸಾಗರಾಂಬರಿ ಈ ವಸುಮತಿಯಲ್ಲಿ ಸಂಚರಿಸುತ್ತಿರುವಾಗ ಸ್ವಯಂ ನಾನೇ ನಿನ್ನ ಕುಲದ ಶ್ರೇಷ್ಠ ಪ್ರಭಾವವನ್ನು ಕಂಡಿದ್ದೇನೆ. ಧನುರ್ವಿದ್ಯೆಯಲ್ಲಿ ನಿನ್ನ ಆಚಾರ್ಯ ಮೂರೂ

ಲೋಕಗಳಲ್ಲಿ ವಿಶ್ರುತ ಯಶಸ್ವಿ ಭಾರದ್ವಾಜನೂ ನನಗೆ ಗೊತ್ತು. ಧರ್ಮ, ವಾಯು, ಶಕ್ರ, ಅಶ್ವಿನಿಯರು ಮತ್ತು ದೇವಮಾನುಷಸತ್ತಮ ನಿನ್ನ ತಂದೆ ಕುರುಶಾರ್ದೂಲ ಪಾಂಡು ಈ ಆರು ಕುಲವರ್ಧನರೂ ನನಗೆ ಗೊತ್ತು. ನಿನ್ನ ಭ್ರಾತೃಗಳೆಲ್ಲರೂ ದಿವ್ಯಾತ್ಮರೂ, ಮಹಾತ್ಮರೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ, ಸುಚರಿತವ್ರತರೂ ಆಗಿದ್ದಾರೆ. ನಿಮ್ಮೆಲ್ಲರ ಉತ್ತಮ ಮನೋಬುದ್ಧಿಯನ್ನು ಮತ್ತು ಭಾವಿತ ಆತ್ಮಗಳನ್ನು ತಿಳಿದಿದ್ದರೂ ನಾನು ನಿಮ್ಮ ಮೇಲೆ ಇಲ್ಲಿ ಧಾಳಿಮಾಡಿದೆ. ಸ್ತ್ರೀಯರ ಎದಿರು ಉಲ್ಲಂಘನೆ ಮಾಡುವವರನ್ನು ನೋಡಿದ ಬಾಹುದ್ರವೀಣ ಆಶ್ರಿತ ಯಾರೂ ಕ್ಷಮಿಸುವುದಿಲ್ಲ. ರಾತ್ರಿವೇಳೆಯಲ್ಲಿ ನಮ್ಮ ಬಲವು ವೃದ್ಧಿಯಾಗುತ್ತದೆ. ಆದುದರಿಂದ ಪತ್ನಿಯೊಡನಿದ್ದ ನಾನು ಕೋಪಾವಿಷ್ಠನಾಗಿಬಿಟ್ಟೆ. ತಾಪತ್ಯವರ್ಧನ! ಈಗ ನಾನು ನಿನ್ನಿಂದ ಯುದ್ಧದಲ್ಲಿ ಸೋಲಲ್ಪಟ್ಟು ಸಖನಾಗಿ ನಿಂತಿದ್ದೇನೆ. ಯಾವ ರೀತಿಯಲ್ಲಿ ಇದನ್ನು ಆಚರಿಸಬೇಕು ಎನ್ನುವುದನ್ನು ಹೇಳು. ಬ್ರಹ್ಮಚರ್ಯವು ಪರಮ ಧರ್ಮ ಮತ್ತು ಇದು ನಿನ್ನಲ್ಲಿ ಗಟ್ಟಿಯಾಗಿ ನಿಂತುಕೊಂಡಿದೆ. ಇದರಿಂದಲೇ ನೀನು ಇಂದು ರಣದಲ್ಲಿ ನನ್ನನ್ನು ಗೆದ್ದೆ. ಆದರೆ ಕಾಮವೃತ ಕ್ಷತ್ರಿಯರು ಎಂದೂ ಯಾವರೀತಿಯಲ್ಲಿಯೂ ರಾತ್ರಿ ವೇಳೆ ನಮ್ಮಲ್ಲಿ ಯುದ್ಧಮಾಡಿ ಜೀವಿತವಾಗಿರಲು ಸಾಧ್ಯವಿಲ್ಲ.

ತಾಪತ್ಯ! ಕಾಮವೃತ ರಾಜನೂ ಕೂಡ ಪುರೋಹಿತನನ್ನು ಮುಂದಿಟ್ಟುಕೊಂಡು ಬಂದರೆ ರಾತ್ರಿವೇಳೆ ಸಂಗರದಲ್ಲಿ ಎಲ್ಲ ನಿಶಾಚರರ ಮೇಲೆ ಜಯವನ್ನು ಪಡೆಯಬಹುದು. ಆದುದರಿಂದಲೇ ಮನುಷ್ಯನು ಇಲ್ಲಿ ಏನೇ ಶ್ರೇಯಸ್ಸನ್ನು ಬಯಸಿದರೂ ಆ ಕರ್ಮದಲ್ಲಿ ದಾಂತಾತ್ಮ ಪುರೋಹಿತನನ್ನು ಬಳಸಿಕೊಳ್ಳಬೇಕು. ಎಲ್ಲ ನೃಪರೂ ಷಡಂಗಸಹಿತ ವೇದಗಳಲ್ಲಿ ನಿರತ, ಶುಚ, ಸತ್ಯವಾದಿ, ಧರ್ಮಾತ್ಮ, ಮತ್ತು ಕೃತಾತ್ಮ ಪುರೋಹಿತರನ್ನು ಪಡೆದಿರಬೇಕು. ಶೀಲವಂತ, ಶುಚಿ, ವಾಗ್ಮಿ ಮತ್ತು ಧರ್ಮವಿದ ಪುರೋಹಿತನನ್ನು ಪಡೆದಿದ್ದ ರಾಜನಿಗೆ ಇಲ್ಲಿ ಜಯ ಮತ್ತು ನಂತರ ಸ್ವರ್ಗವು ನಿಶ್ಚಯವಾದದ್ದು. ಅಲಬ್ಧವನ್ನು ಪಡೆಯಲು ಮತ್ತು ಪಡೆದುದನ್ನು ಪರಿರಕ್ಷಿಸಲು ರಾಜನು ಗುಣಸಮನ್ವಿತ ಪುರೋಹಿತನನ್ನು ಇಟ್ಟುಕೊಳ್ಳಬೇಕು. ಪುರೋಹಿತನ ಸಲಹೆಯಂತೆಯೇ ನಡೆದುಕೊಂಡರೆ ನೃಪನು ಮೇರುವರೋತಂಸೆ ಸಾಗರಾಂಬರೆ ಸರ್ವ ಪೃಥ್ವಿಯನ್ನೂ ಹೊಂದಲು ಇಚ್ಛಿಸಬಹುದು. ಅಬ್ರಾಹ್ಮಣ ಭೂಮಿಪತಿಯು ಕೇವಲ ಶೌರ್ಯದಿಂದ ಅಥವಾ ಉತ್ತಮ ಜನ್ಮದಿಂದ ಎಂದೂ ಯಾವುದೇ ರೀತಿಯಲ್ಲಿಯೂ ಭೂಮಿಯನ್ನು ಜಯಿಸಲು ಶಕ್ಯನಾಗಲಾರ. ಆದುದರಿಂದ ಬ್ರಾಹ್ಮಣಪ್ರಮುಖ

ರಾಜ್ಯವನ್ನು ಚಿರವಾಗಿ ಪಾಲಿಸಲು ಸಾಧ್ಯ ಎನ್ನುವುದನ್ನು ತಿಳಿದುಕೋ.”

ಅರ್ಜುನನು ಹೇಳಿದನು:

“ನೀನು ನನಗೆ ತಾಪತ್ಯ ಎನ್ನುವ ಮಾತಿನಿಂದ ಸಂಬೋಧಿಸಿದ್ದೀಯಲ್ಲ. ಆ ತಾಪತ್ಯದ ಅರ್ಥವನ್ನು ತಿಳಿಯಲು ಬಯಸುತ್ತೇನೆ. ನಾವು ಹೇಗೆ ಕೌಂತೇಯರೆಂದು ಕರೆದುಕೊಳ್ಳಲ್ಪಟ್ಟಿದ್ದೇವೋ ಹಾಗೆ ತಾಪತ್ಯ ಎಂದು ಕರೆದೆಯಲ್ಲ ಆ ತಪತಿಯು ಯಾರು ಮತ್ತು ಅವರ ಮಕ್ಕಳು ಯಾರು ಎಂದು ತಿಳಿಯಲು ಬಯಸುತ್ತೇನೆ.”

ಕುಂತೀಪುತ್ರ ಧನಂಜಯನ ಈ ಮಾತುಗಳನ್ನು ಕೇಳಿದ ಗಂಧರ್ವನು ತ್ರಿಲೋಕವಿಶ್ರುತ ಕಥೆಯನ್ನು ಹೇಳಲು ತೊಡಗಿದನು. ಗಂಧರ್ವನು ಹೇಳಿದನು:

“ಧರ್ಮಭೃತರಲ್ಲಿ ಶ್ರೇಷ್ಠ ಪಾರ್ಥ! ಅಖಿಲ ಧರ್ಮಗಳಿಂದೊಡಗೂಡಿದ ಆ ಮನೋರಮ ಕಥೆಯನ್ನು ನಡೆದಂತೆ ಹೇಳುತ್ತೇನೆ. ನಿನ್ನನ್ನು ಏಕೆ ತಾಪತ್ಯ ಎಂದು ಕರೆದೆ ಎನ್ನುವುದನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ನನ್ನನ್ನು ಕೇಳು.”

ಸಂವರಣ-ತಪತಿಯರ ಆಖ್ಯಾನವನ್ನು ಅರ್ಜುನನಿಗೆ ಹೇಳಿ

ಗಂಧರ್ವನು

> “ಈ ರೀತಿ ತಪತಿ ಎಂಬ ಹೆಸರಿನ ಮಹಾಭಾಗೆಯು ನಿನ್ನ ಪೂರ್ವಜಳಾಗಿದ್ದಳು. ಆ ವೈವಸ್ವತಿಯಿಂದಾಗಿ ನೀನು ತಾಪತ್ಯ ಎಂದು ಕರೆಯಲ್ಪಡುತ್ತೀಯೆ. ನೃಪ ಸಂವರಣನು ಅವಳಲ್ಲಿ ಕುರುವನ್ನು ಪಡೆದನು. ತಪತಿಯಿಂದಾಗಿ ತಾಪಸಿಗಳಲ್ಲಿ ಶ್ರೇಷ್ಠನಾದ ನೀನು ತಾಪತ್ಯನಾದೆ”

ಎಂದನು. ಗಂಧರ್ವನ ಈ ಮಾತುಗಳನ್ನು ಕೇಳಿದ ಭರತರ್ಷಭ ಅರ್ಜುನನು ಪರಮ ಸಂತುಷ್ಠನಾಗಿ ಪೂರ್ಣ ಚಂದ್ರನಂತೆ ಕಾಂತಿಯುಕ್ತನಾದನು. ವಸಿಷ್ಠನ ಅತೀವ ತಪೋಬಲದ ಕುರಿತು ಕುತೂಹಲ ಹುಟ್ಟಿದ ಕುರುಸತ್ತಮನು ಮಹೇಷ್ವಾಸ ಗಂಧರ್ವನಲ್ಲಿ ಕೇಳಿಕೊಂಡನು:

> “ವಸಿಷ್ಠ ಎಂಬ ಹೆಸರಿನ ಋಷಿಯ ಕುರಿತು ಹೇಳಿದೆಯಲ್ಲ ಅವನ ಕುರಿತು ಕೇಳಲು ಬಯಸುತ್ತೇನೆ. ಯಥಾವತ್ತಾಗಿ ನನಗೆ ಹೇಳು. ಗಂಧರ್ವಪತೇ! ನನ್ನ ಪೂರ್ವಜರ ಪುರೋಹಿತನಾಗಿದ್ದ ಭಗವಾನೃಷಿಯ ಕುರಿತು ನನಗೆ ಹೇಳು.”

ಗಂಧರ್ವನು ಹೇಳಿದನು:

> “ಅಮರರಿಂದಲೂ ಜಯಿಸಲಾಧ್ಯ ಕಾಮ ಕ್ರೋಧಗಳನ್ನು

ತಪಸ್ಸಿನಿಂದ ಜಯಿಸಿ ಅವು ತನ್ನ ಚರಣಗಳನ್ನು ಒತ್ತುವಂತೆ ಮಾಡಿದವನೇ ಅವನು. ವಿಶ್ವಾಮಿತ್ರನ ಅಪರಾಧದಿಂದ ಉಂಟಾದ ಅತ್ಯಂತ ಕೋಪವನ್ನು ಸಹಿಸಿಕೊಂಡು ಕುಶಿಕರನನ್ನು ನಾಶಪಡಿಸದೇ ಇದ್ದವನು ಅವನು. ಪುತ್ರವ್ಯಸನ ಸಂತಪ್ತನಾದಾಗ ಶಕ್ತಿವಂತನಾಗಿದ್ದರೂ ವಿಶ್ವಾಮಿತ್ರನ ವಿನಾಶಕ್ಕಾಗಿ ಯಾವುದೇ ದಾರುಣ ಕೃತ್ಯವನ್ನೂ ಮಾಡದ ಪ್ರಭುವು ಅವನು. ಸಾಗರವು ಹೇಗೆ ಒಂದು ಗಡಿಯನ್ನು ದಾಟಿ ಮುಂದೆ ಬರುವುದಿಲ್ಲವೋ ಹಾಗೆ ಅವನು ಯಮಕ್ಷಯದಿಂದ ಮೃತರಾದ ತನ್ನ ಪುತ್ರರನ್ನು ಪುನಃ ಕರೆಯಿಸಿಕೊಳ್ಳಲಿಲ್ಲ. ಈ ವಿಜಿತಾತ್ಮ ಮಹಾತ್ಮನನ್ನು ಪಡೆದ ಇಕ್ಷ್ವಾಕು ವಂಶದ ನರಾಧಿಪರು ಇಡೀ ಪೃಥ್ವಿಯನ್ನೇ ಪಡೆದು ಮಹೀಪಾಲರಾದರು. ಋಷಿಸತ್ತಮ ವಸಿಷ್ಠನನ್ನು ಶ್ರೇಷ್ಠ ಪುರೋಹಿತನನ್ನಾಗಿ ಪಡೆದ ಆ ನೃಪರು ಹಲವಾರು ಕ್ರತುಗಳನ್ನು ಯಾಜಿಸಿದರು. ಅಮರರಿಗೆ ಬೃಹಸ್ಪತಿಯು ಹೇಗೋ ಹಾಗೆ ಆ ಎಲ್ಲ ನೃಪಸತ್ತಮರಿಗೆ ಈ ಬ್ರಹ್ಮರ್ಷಿಯು ಯಜ್ಞಯಾಗಾದಿಗಳನ್ನು ಮಾಡಿಸಿಕೊಟ್ಟನು. ಆದುದರಿಂದ ಧರ್ಮಪ್ರಧಾನಾತ್ಮ ವೇದಧರ್ಮವಿದೀಪ್ಸಿತ ಗುಣವಂತ ಬ್ರಾಹ್ಮಣ ಯಾರನ್ನಾದರೂ ನಿನ್ನ ಪುರೋಹಿತನನ್ನಾಗಿ ಮಾಡಿಕೊಳ್ಳಲು ಹುಡುಕು. ಕ್ಷತಿಯನಾಗಿ ಹುಟ್ಟಿದವನು, ಪೃಥ್ವಿಯನ್ನು ಜಯಿಸುವ

ಇಚ್ಛೆಯುಳ್ಳವನು ರಾಜ್ಯಾಭಿವೃದ್ಧಿಗಾಗಿ ಮೊದಲು ಪುರೋಹಿತನನ್ನು ಪಡೆಯುವ ಕಾರ್ಯವನ್ನು ಮಾಡಬೇಕು. ಮಹಿಯನ್ನು ಜಯಿಸಲಿಚ್ಛಿಸುವ ರಾಜನು ತನ್ನ ಪುರಸ್ಸರದಲ್ಲಿ ಬ್ರಹ್ಮಕಾರ್ಯವನ್ನು ಮಾಡಬೇಕು. ಆದುದರಿಂದ ಗುಣವಂತ ದ್ವಿಜ ಯಾರಾದರೂ ನಿಮ್ಮ ಪುರೋಹಿತನಾಗಲಿ."

ಅರ್ಜುನನು ಹೇಳಿದನು:

"ಪುಣ್ಯಾಶ್ರಮಗಳಲ್ಲಿ ವಾಸಿಸುವ ವಸಿಷ್ಠ ಮತ್ತು ವಿಶ್ವಾಮಿತ್ರರಲ್ಲಿ ಯಾವ ಕಾರಣಕ್ಕಾಗಿ ವಿರಸವುಂಟಾಯಿತು? ಸರ್ವವನ್ನೂ ಹೇಳು!"

ಆಗ ಗಂಧರ್ವನು

"ಪಾರ್ಥ! ಈ ವಸಿಷ್ಠನ ಆಖ್ಯಾನವನ್ನು ಮೂರೂ ಲೋಕಗಳ ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಅದನ್ನು ಯಥಾವತ್ತಾಗಿ ನಾನು ಹೇಳುತ್ತೇನೆ. ಕೇಳು."

ಎಂದು ವಸಿಷ್ಠೋಪಾಖ್ಯಾನವನ್ನು ಅರ್ಜುನನಿಗೆ ಹೇಳಿದನು.

ಅರ್ಜುನನು ಹೇಳಿದನು:

"ಗಂಧರ್ವ! ನಮ್ಮ ಅನುರೂಪ ಪುರೋಹಿತನಾಗಬಲ್ಲ

ವೇದವಿದರು ಯಾರಾದರೂ ಇದ್ದಾರೆಯೇ? ನಿನಗೆ ಎಲ್ಲವೂ ತಿಳಿದಿದೆ.”

ಗಂಧರ್ವನು ಹೇಳಿದನು:

“ದೇವಲನ ಕಿರಿಯ ತಮ್ಮನು ಉತ್ಕೋಚಕ ತೀರ್ಥದ ವನದಲ್ಲಿ ತಪಸ್ಸನ್ನಾಚರಿಸುತ್ತಿದ್ದಾನೆ. ನಿಮಗಿಷ್ಟವಾದರೆ ಅವನನ್ನು ಆರಿಸಿಕೊಳ್ಳಿ.”

ನಂತರ ಅರ್ಜುನನು ಗಂಧರ್ವನಿಗೆ ಯಥಾವಿಧಿ ಆಗ್ನೇಯಾಸ್ತ್ರವನ್ನು ನೀಡಿ, ಪ್ರೀತಿಯಿಂದ ಹೇಳಿದನು: “ಗಂಧರ್ವಸತ್ತಮ! ಕುದುರೆಗಳನ್ನು ಸದ್ಯ ನಿನ್ನಲ್ಲಿಯೇ ಇಟ್ಟುಕೋ. ನಮಗೆ ಬೇಕಾದಾಗ ಅವುಗಳನ್ನು ತೆಗೆದುಕೊಳ್ಳುತ್ತೇವೆ. ನಿನಗೆ ಮಂಗಳವಾಗಲಿ!”

## ಧೌಮ್ಯನು ಪಾಂಡವರ ಪುರೋಹಿತನಾದುದು

ಗಂಧರ್ವ ಮತ್ತು ಪಾಂಡವರು ಅನ್ಯೋನ್ಯರಿಂದ ಬೀಳ್ಕೊಂಡು ರಮ್ಯ ಭಾಗೀರಥಿಯನ್ನು ದಾಟಿ ಮುಂದೆ ಹೊರಟರು. ನಂತರ ಅವರು ಉತ್ಕೋಚಕ ತೀರ್ಥದಲ್ಲಿ ಧೌಮ್ಯಾಶ್ರಮಕ್ಕೆ ಹೋಗಿ ಧೌಮ್ಯನನ್ನು ತಮ್ಮ ಪುರೋಹಿತನನ್ನಾಗಿ ಆರಿಸಿಕೊಂಡರು. ಸರ್ವವೇದವಿದರಲ್ಲಿ ಶ್ರೇಷ್ಠ ಧೌಮ್ಯನು ಅವರನ್ನು ಪಾದ್ಯ, ಫಲಮೂಲ ಮತ್ತು ಪೌರೋಹಿತ್ಯದಿಂದ ಸ್ವೀಕರಿಸಿದನು. ಬ್ರಾಹ್ಮಣನನ್ನು ಮುಂದಿಟ್ಟುಕೊಂಡ ಪಾಂಡವರಿಗೆ ಈಗ ಸಂಪತ್ತು, ರಾಜ್ಯ ಮತ್ತು

ಸ್ವಯಂವರವನ್ನು ಗೆಲ್ಲುವ ಭರವಸೆ ಉಂಟಾಯಿತು. ಆರನೆಯವಳಾಗಿ ತಾಯಿಯನ್ನು ಹೊಂದಿದ್ದ ಆ ಭರತರ್ಷಭರು ಸಂಗಡ ಗುರುವಿರುವುದರಿಂದ ತಮ್ಮನ್ನು ತಾವೇ ನಾಥವಂತರೆಂದು ಭಾವಿಸಿದರು. ಉದಾರಮನಸ್ಕ ಗುರುವು ವೇದಾರ್ಥತತ್ವಜ್ಞಾನಿಯಾಗಿದ್ದನು. ಅವನಿಂದಾಗಿಯೇ ಧರ್ಮವಿದ ಸರ್ವವಿದ ಪಾರ್ಥರು ಯಾಗಗಳನ್ನು ಮಾಡಿದರು. ಅವನು ಬುದ್ಧಿವೀರ್ಯಬಲೋತ್ಸಾಹಗಳಿಂದ ಕೂಡಿದ್ದ ದೇವತೆಗಳಂತೆ ಆ ವೀರರು ಸ್ವಧರ್ಮದಿಂದಲೇ ರಾಜ್ಯವನ್ನು ಹೊಂದುತ್ತಾರೆ ಎಂದು ತಿಳಿದನು. ಅವರ ಮಾರ್ಗವು ಮಂಗಳಕರವಾಗಲಿ ಎಂದು ಹರಸಿದನು. ನಂತರ ಆ ಮನುಜಾಧಿಪರು ಒಟ್ಟಿಗೇ ಪಾಂಚಾಲಿಯ ಸ್ವಯಂವರಕ್ಕೆ ಹೋಗಲು ನಿರ್ಧರಿಸಿದರು.

## ಪಾಂಚಾಲನಗರಿಗೆ ಪಾಂಡವರ ಪ್ರಯಾಣ

ಆ ನರ ಶಾರ್ದೂಲ ಐವರು ಪಾಂಡವ ಸೋದರರೂ ದ್ರೌಪದಿಯನ್ನು ಮತ್ತು ಆ ದೇವಮಹೋತ್ಸವವನ್ನು ನೋಡಲು ಪ್ರಯಾಣಿಸಿದರು. ಪರಂತಪ ನರವ್ಯಾಘ್ರರು ತಮ್ಮ ತಾಯಿಯ ಜೊತೆಗೂಡಿ ಹೋಗುತ್ತಿರುವಾಗ ಅದೇ ದಾರಿಯಲ್ಲಿ ಗುಂಪು-ಗುಂಪಾಗಿ ಪ್ರಯಾಣಿಸುತ್ತಿರುವ ಹಲವಾರು ಬ್ರಾಹ್ಮಣರನ್ನು ಕಂಡರು. ಬ್ರಹ್ಮಚಾರಿ ರೂಪದಲ್ಲಿ ಪ್ರಯಾಣಿಸುತ್ತಿರುವ ಪಾಂಡವರಿಗೆ ಆ ಬ್ರಾಹ್ಮಣರು ಕೇಳಿದರು:

“ನೀವು ಎಲ್ಲಿಗೆ ಪ್ರಯಾಣ ಮಾಡುತ್ತಿರುವಿರಿ ಮತ್ತು ಎಲ್ಲಿಂದ ಬಂದಿರಿ?”

ಯುಧಿಷ್ಠಿರನು ಹೇಳಿದನು:

“ದೇವದರ್ಶಿಗಳೇ! ನಾವು ಸಹೋದರರೆಂದು ತಿಳಿಯಿರಿ. ನಾವು ಏಕಚಕ್ರದಿಂದ ಬರುತ್ತಿದ್ದೇವೆ ಮತ್ತು ನಮ್ಮ ತಾಯಿಯೊಂದಿಗೆ ಪ್ರಯಾಣಿಸುತ್ತಿದ್ದೇವೆ.”

ಬ್ರಾಹ್ಮಣರು ಹೇಳಿದರು:

“ಹಾಗಿದ್ದರೆ ನೀವು ಪಾಂಚಾಲ ದ್ರುಪದನ ನಗರಿಗೆ ಹೋಗಬೇಕು. ಅಲ್ಲಿ ಒಂದು ತುಂಬಾ ಧನಯುಕ್ತ ದೊಡ್ಡ ಸ್ವಯಂವರವು ಜರುಗಲಿದೆ. ನಾವೆಲ್ಲರೂ ಒಟ್ಟಿಗೆ ಒಂದೇ ದೊಡ್ಡ ಗುಂಪಿನಲ್ಲಿ ಅಲ್ಲಿಗೇ ಹೋಗುತ್ತಿರುವೆವು. ಅಲ್ಲಿ ಅದ್ಭುತ ಮತ್ತು ಸುಮನೋಹರ ಉತ್ಸವವು ನಡೆಯಲಿದೆ. ಮಹಾತ್ಮ ಯಜ್ಞಸೇನ ದ್ರುಪದನ ಮಗಳು ಪದ್ಮಪತ್ರಲೋಚನೆಯು ಯಜ್ಞಕುಂಡದ ಮಧ್ಯದಿಂದ ಜನಿಸಿದವಳು. ಅನವದ್ಯಾಂಗಿಯೂ, ದರ್ಶನೀಯಳೂ, ಸುಕುಮಾರಿಯೂ, ಮನಸ್ವಿನಿಯೂ ಆದ ಅವಳು ಖಡ್ಗ ಮತ್ತು ಧನುರ್ಬಾಣಗಳ ಸಹಿತ, ಕವಚಧರಿಸಿ ದ್ರೋಣಶತ್ರುವಾಗಿ ಅಗ್ನಿಯಲ್ಲಿ ಜನಿಸಿದ ಅಗ್ನಿಪ್ರಕಾಶಮಾನ, ಮಹಾಬಾಹು ಪ್ರತಾಪಿ ಧೃಷ್ಟದ್ಯುಮ್ನನ ತಂಗಿ. ಅವನ ತಂಗಿ ಅನವದ್ಯಾಂಗಿ, ಕೃಶಮದ್ಯಮೆ, ನೀಲಕಮಲದಂತೆ

ತನ್ನ ಸುಗಂಧವನ್ನು ಕೋಶ ದೂರದವರೆಗೂ ಪ್ರಸರಿಸುವ, ಯಜ್ಞಸೇನನ ಮಗಳು ದ್ರೌಪದಿಯು ತನ್ನ ಸ್ವಯಂವರವನ್ನು ಇಟ್ಟುಕೊಂಡಿದ್ದಾಳೆ. ಅವಳನ್ನು ಮತ್ತು ಆ ದೇವಮಹೋತ್ಸವವನ್ನು ನೋಡಲು ನಾವೆಲ್ಲರೂ ಹೋಗುತ್ತಿದ್ದೇವೆ. ತಮ್ಮ ಪುರೋಹಿತರಿಗೆ ಶ್ರೀಮಂತ ದಕ್ಷಿಣೆಗಳನ್ನು ಕೊಡುವ ಯಜ್ವಾನ, ಸ್ವಾಧ್ಯಾಯವಂತ, ಶುಚಿರ್ಭೂತ, ಮಹಾತ್ಮ, ವ್ರತನಿರತ, ತರುಣ ದರ್ಶನೀಯ, ನಾನಾ ದೇಶಗಳಿಂದ ಆಗಮಿಸುವ, ಅಸ್ತ್ರಕೋವಿದ, ಮಹಾರಥಿ ಭೂಮಿಪ ರಾಜರು ಮತ್ತು ರಾಜಪುತ್ರರೆಲ್ಲರೂ ಅಲ್ಲಿಗೆ ಆಗಮಿಸಲಿದ್ದಾರೆ. ಅಲ್ಲಿರುವ ಎಲ್ಲ ನರೇಶ್ವರರೂ ವಿಜಯಪಾಲನೆಗಾಗಿ ವಿವಿಧರೀತಿಯ ದಾನಗಳನ್ನು-ಧನ, ಗೋವು, ಭಕ್ಷ್ಯ ಭೋಜ್ಯ –ಮುಂತಾದವುಗಳನ್ನು ನೀಡಲಿದ್ದಾರೆ. ಅವೆಲ್ಲವನ್ನೂ ಸ್ವೀಕರಿಸಿ, ಸ್ವಯಂವರವನ್ನು ನೋಡಿ, ಉತ್ಸವವನ್ನು ಆನಂದಿಸಿ, ಮುಂದೆ ನಾವು ನಮಗೆ ಇಷ್ಟವಿದ್ದಲ್ಲಿಗೆ ಪ್ರಯಾಣ ಮಾಡುವೆವು. ಬೇರೆ ಬೇರೆ ದೇಶಗಳಿಂದ ನಟರು, ವೈತಾಲಿಕರು (ವಾದ್ಯಗಾರರು), ನರ್ತಕರು, ಸೂತ-ಮಾಗಧರು, ಮಹಾಬಲ ಮಲ್ಲಯುದ್ಧ ಜಟ್ಟಿಗಳೂ ಬರಲಿದ್ದಾರೆ. ಇಂತಹ ಕೌತೂಹಲವನ್ನು ನೋಡಿ, ಪ್ರತಿಗ್ರಹಣ ಮಾಡಿ, ಪುನಹ ನಮ್ಮ ಜೊತೆಗೇ ಮಹಾತ್ಮರಾದ ನೀವು ಹಿಂದಿರುಗಬಹುದು. ದೇವರೂಪಿ

ನಿಮ್ಮ ನಿಲುವನ್ನು ನೋಡಿ ಕೃಷ್ಣೆಯು ನಿಮ್ಮಲ್ಲೇ ಒಬ್ಬನನ್ನು ವರನನ್ನಾಗಿ ಆರಿಸಲೂ ಬಹುದು! ದರ್ಶನೀಯ ಮಹಾಭುಜ ಈ ನಿನ್ನ ಶ್ರೀಮಾನ್ ತಮ್ಮನು ಮಲ್ಲಯುದ್ಧದ ಆಟದಲ್ಲಿ ಗೆದ್ದು ಬಹಳಷ್ಟು ಹಣವನ್ನೂ ಗಳಿಸಬಹುದು!" ಯುಧಿಷ್ಠಿರನು ಹೇಳಿದನು: "ಅತ್ಯುತ್ತಮ ದೇವಮಹೋತ್ಸವದಂತಿರುವ ಆ ಕನ್ಯೆಯ ಸ್ವಯಂವರವನ್ನು ನೋಡಲು ನಾವೆಲ್ಲರೂ ನಿಮ್ಮೊಡನೆ ಪ್ರಯಾಣಿಸುತ್ತೇವೆ."

ಬ್ರಾಹ್ಮಣರ ಈ ಮಾತಿನಂತೆ ಪಾಂಡವರು ರಾಜ ದ್ರುಪದನಿಂದ ಆಳಲ್ಪಟ್ಟ ದಕ್ಷಿಣ ಪಾಂಚಾಲಕ್ಕೆ ಪ್ರಯಾಣ ಮಾಡಿದರು. ಅನಂತರ ಪಾಂಡವರು ದಾರಿಯಲ್ಲಿ ಮಹಾತ್ಮ, ಶುದ್ಧಾತ್ಮ, ಅಕಲ್ಮಶ ದ್ವೈಪಾಯನನನ್ನು ಕಂಡರು. ಅವನನ್ನು ಯಥಾವತ್ ಸತ್ಕರಿಸಿ, ಅವನಿಂದ ಸಾಂತ್ವನ ಮತ್ತು ತದನಂತರ ಅಪ್ಪಣೆಯನ್ನು ಪಡೆದು ಅವರು ದ್ರುಪದ ನಗರಿಗೆ ಮುಂದುವರೆದರು. ಆ ಮಹಾರಥಿಗಳು ಅಲ್ಲಲ್ಲಿ ರಮಣೀಯ ವನ-ಸರೋವರಗಳ ಬಳಿ ತಂಗುತ್ತಾ, ನಿಧಾನವಾಗಿ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ನಂತರ ಪ್ರಯಾಣದ ಅಂತ್ಯದಲ್ಲಿ ಸ್ವಾಧ್ಯಾಯವಂತ, ಶುಚಿರ್ಭೂತ, ಮಧುರ ಪ್ರಿಯವಾದಿ ಕುರುನಂದನರು ಪಾಂಚಾಲನಗರಿಯನ್ನು ತಲುಪಿದರು. ಪುರವನ್ನು ಮತ್ತು ಅದರ ಕೋಟೆಗಳನ್ನು ನೋಡಿದ ನಂತರ ಪಾಂಡವರು ಒಬ್ಬ ಕುಂಬಾರನ ಮನೆಯಲ್ಲಿ ವಸತಿ ಮಾಡಿದರು.

ಬ್ರಾಹ್ಮಣವೃತ್ತಿಗೆ ಸಮಾನ ಭಿಕ್ಷೆಬೇಡಲು ಪ್ರಾರಂಭಿಸಿದರು; ಮತ್ತು ಈ ವೀರರ ಆಗಮನವನ್ನು ಯಾರಿಗೂ ಎಲ್ಲಿಯೂ ಗುರುತಿಸಲು ಆಗಲಿಲ್ಲ.

## ಸ್ವಯಂವರ

ಕೃಷ್ಣೆಯನ್ನು ಪಾಂಡವ ಕಿರೀಟಿಗೇ ಕೊಡಬೇಕೆಂದು ಯಜ್ಞಸೇನನು ಸದಾ ಬಯಸಿದ್ದರೂ, ಅದನ್ನು ಯಾರಿಗೂ ಬಹಿರಂಗಪಡಿಸಿರಲಿಲ್ಲ. ಕೌಂತೇಯರ ಅನ್ವೇಷಣೆಯ ಸಲುವಾಗಿ ಪಾಂಚಲ್ಯನು ಬಗ್ಗಿಸಲು ಅಸಾಧ್ಯವಾದ ಒಂದು ದೃಢ ಬಿಲ್ಲನ್ನು ಮಾಡಿಸಿದ್ದನು. ಅಂತರಿಕ್ಷದಲ್ಲಿ ಒಂದು ಕೃತ್ರಿಮ ಯಂತ್ರವನ್ನು ರಚಿಸಿ, ಆ ಯಂತ್ರಕ್ಕೆ ಚಿನ್ನದ ಒಂದು ಲಕ್ಷ್ಯವನ್ನು ಇಡಿಸಿದ್ದನು. ದ್ರುಪದನು ಹೇಳಿದನು:

> "ಈ ಧನುಸ್ಸನ್ನು ಕಟ್ಟಿ, ಕಟ್ಟಿಯಾದ ನಂತರ ಈ ಯಂತ್ರದ ಮೂಲಕ ಆ ಲಕ್ಷ್ಯಕ್ಕೆ ಯಾರು ಬಾಣವನ್ನು ಹೊಡೆಯುವವನೋ ಅವನಿಗೇ ನನ್ನ ಮಗಳು ದೊರೆಯುವಳು !"

ಈ ರೀತಿ ರಾಜ ದ್ರುಪದನು ಎಲ್ಲ ಕಡೆಯಲ್ಲಿ ಘೋಷಣೆ ಮಾಡಿಸಿದನು.

ಅದನ್ನು ಕೇಳಿ ಎಲ್ಲಾ ರಾಜರು ಅಲ್ಲಿ ಒಂದುಗೂಡಿದರು. ಸ್ವಯಂವರವನ್ನು ವೀಕ್ಷಿಸಲು ಮಹಾತ್ಮ ಋಷಿಗಳು ಹಾಗೂ ಕರ್ಣನನ್ನೊಡಗೂಡಿ ದುರ್ಯೋಧನನ ಮುಂದಾಳತ್ವದಲ್ಲಿ

ಕೌರವರೂ ಆಗಮಿಸಿದರು. ಸುತ್ತ ದೇಶಗಳಿಂದ ಮಹಾಭಾಗ ಬ್ರಾಹ್ಮಣರು ಆಗಮಿಸಿದರು ಮತ್ತು ರಾಜಗಣಗಳೆಲ್ಲವೂ ಮಹಾತ್ಮ ದ್ರುಪದನಿಂದ ಸ್ವಾಗತಿಸಲ್ಪಟ್ಟವು. ಭಿರುಗಾಳಿಗೆ ಸಿಲುಕಿದ ಸಮುದ್ರದಂತೆ ಘೋರ್ಗರೆಯುತ್ತಿರುವ ಪುರಜನ ಸಮೂಹವು ಆ ಶಿಶುಮಾರಪುರದಲ್ಲಿ ಒಂದುಗೂಡಿತು, ಪಾರ್ಥಿವರೆಲ್ಲರೂ ಅಲ್ಲಿ ತಂಗಿದರು. ನಗರದ ಪೂರ್ವೋತ್ತರ ದಿಶೆಯಲ್ಲಿ ಸಮ ಭೂಮಿಪ್ರದೇಶದಲ್ಲಿ ಸುತ್ತಲೂ ಸುಂದರ ಭವನಗಳಿಂದ ಆವೃತ ಶೋಭಾಯಮಾನ ಸಮಾಜವಾಟಿಕೆಯನ್ನು ನಿರ್ಮಿಸಲಾಗಿತ್ತು. ಅದು ಸುತ್ತಲೂ ಪ್ರಾಕಾರ, ತೋರಣಗಳಿಂದ ಅಲಂಕೃತ ದ್ವಾರಗಳು ಮತ್ತು ಬಣ್ಣ ಬಣ್ಣದ ಬಾವುಟಗಳಿಂದ ಆವೃತವಾಗಿತ್ತು. ನೂರಾರು ವಾದ್ಯಗಳ ಧ್ವನಿಯಿಂದ ಅದು ತುಂಬಿಕೊಂಡಿತ್ತು. ಅತ್ಯುತ್ತಮ ಧೂಪದಿಂದ ಸುಗಂಧಿತಗೊಂಡು, ಚಂದನೋದಕದಿಂದ ಸಿಂಚಿತಗೊಂಡು, ಹೂಮಾಲೆಗಳಿಂದ ಅಲಂಕೃತಗೊಂಡಿತ್ತು. ಅದು ಆಕಾಶವನ್ನೇ ಸೀಳಿಬಿಡುವಂತಿರುವ ಕೈಲಾಸಶಿಖರದಷ್ಟು ಎತ್ತರವಾಗಿ, ಬಹಳ ನೈಪುಣ್ಯತೆಯಿಂದ ಕಟ್ಟಲ್ಪಟ್ಟ, ಬಂಗಾರದ ಜಾಲಿಗಳು ಮತ್ತು ಮಣಿ ಕುಟ್ಟಿಮಗಳಿಂದ ಭೂಷಿತ, ಸುಖಾರೋಹಣಕ್ಕೆ ಅನುಕೂಲಕರ ಮೆಟ್ಟಿಲುಗಳು ಮತ್ತು ನೆರಳಿಗಾಗಿ ಕೊಡೆಗಳನ್ನು ಹೊತ್ತ ಮಹಾಸನಗಳನ್ನೊಳಗೊಂಡ, ಪ್ರಾಕಾರದಿಂದ ಸುತ್ತಲೂ ಆವೃತಗೊಂಡಿತ್ತು. ಆ ಪ್ರಾಕಾರದಲ್ಲಿ ಅಸಾಮಾನ್ಯ ಅತಿ ಶ್ರೇಷ್ಠ ರತ್ನಗಂಬಳಿಯನ್ನು ಹಾಸಲಾಗಿತ್ತು, ಮತ್ತು ಅಲ್ಲಿಯ ಧೂಪದ

ಸುಗಂಧವು ಶ್ವೇತಹಂಸದಂತೆ ಒಂದು ಯೋಜನ ದೂರದವರೆಗೂ ಪಸರಿಸಿತ್ತು. ಹಿಮವಾಚ್ಛಾದಿತ ಶಿಖರದಂತೆ ವಿವಿಧ ಲೋಹಗಳಿಂದ ತಯಾರಿಸಿದ ಶಯನಾಸನಗಳಿಂದ ಶೋಭಾಯಮಾನವಾಗಿದ್ದ ಆ ಸ್ಥಳಕ್ಕೆ ಒಂದು ನೂರು ದ್ವಾರಗಳಿದ್ದವು. ಒಬ್ಬರಿಗೊಬ್ಬರು ಸ್ಪರ್ಧಿಸುತ್ತಿರುವಂತೆ ನಾನಾ ರೀತಿಯಲ್ಲಿ ಅಲಂಕೃತರಾದ ಎಲ್ಲ ಪಾರ್ಥಿವರೂ ಅಲ್ಲಿ ವಿವಿಧ ಅಂತಸ್ತುಗಳಲ್ಲಿ ಆಸೀನರಾಗಿದ್ದರು. ಕೃಷ್ಣೆಯ ಸೌಂದರ್ಯವನ್ನು ಮಾತ್ರ ನೋಡಿ ಸಂತುಷ್ಟಗೊಳ್ಳಲು ನೆರೆದಿದ್ದ ಪುರಜನ ಮತ್ತು ಗ್ರಾಮಪ್ರದೇಶದವರು ಅವರಿಗಷ್ಟೇ ಸೀಮಿತ ಮಂಚಗಳಲ್ಲಿ ಕುಳಿತು ಅಲ್ಲಿ ಕುಳಿತಿರುವ ಮಹಾಸತ್ವಪರಾಕ್ರಮಿಗಳೂ, ಮಹಾಭಾಗರೂ, ಕಪ್ಪು ಕಸ್ತೂರಿಗಳಿಂದ ವಿಭೂಷಿತರೂ, ಮಹಾಪ್ರಸಾದರೂ, ಬ್ರಾಹ್ಮಣರೂಪಿಗಳೂ, ಸ್ವರಾಷ್ಟ್ರಪರಿರಕ್ಷಕರೂ, ಸುಕೃತಕರ್ಮಗಳಿಗಾಗಿ ಸರ್ವಲೋಕಪ್ರಿಯರೂ, ಶೋಭಾಯಮಾನರೂ ಆದ ಸಿಂಹಗಳಂತಿರುವ ರಾಜರುಗಳನ್ನು ನೋಡುತ್ತಿದ್ದರು.

ಬ್ರಾಹ್ಮಣರ ಮಧ್ಯದಲ್ಲಿ ಕುಳಿತಿದ್ದ ಪಾಂಡವರು, ಪಾಂಚಾಲ ರಾಜನ ಸರಿಸಾಟಿಯಿಲ್ಲದಂಥ ಸಂಪತ್ತನ್ನೇ ನೋಡುತ್ತಿದ್ದರು. ಬಹುದಿನಗಳವರೆಗೆ ನೆರೆದಿದ್ದ ಗುಂಪು ಹೆಚ್ಚಾಗುತ್ತಲೇ ಇತ್ತು. ರತ್ನಗಳ ರಾಶಿಗಳಿಂದ ತುಂಬಿಕೊಂಡಿತ್ತು ಮತ್ತು ನಟನರ್ತಕರಿಂದ ಶೋಭಾಯಮಾನವಾಗಿತ್ತು. ರಮಣೀಯ ಹದಿನಾರನೆಯ ದಿನ,




ವರ್ತಮಾನ ಸಮಾಜದ ಮಧ್ಯೆ, ಮಿಂದು, ಹೊಸವಸ್ತ್ರ ಮತ್ತು ಸರ್ವಾಭರಣಭೂಷಿತಳಾಗಿ ದ್ರೌಪದಿಯು ಕಾಣಿಸಿಕೊಂಡಳು. ಕಾಂಚನದಿಂದ ಅಲಂಕೃತಗೊಂಡ ವೀರಮಾಲೆಯನ್ನು ಹಿಡಿದು, ದ್ರೌಪದಿಯು ರಂಗದ ಮಧ್ಯೆ ಇಳಿದಳು. ಮಂತ್ರವಿದ್ವಾನ, ಶುಚಿರ್ಭೂತ ಸೋಮಕರ ಪುರೋಹಿತ ಬ್ರಾಹ್ಮಣನು ಸುತ್ತಲೂ ದರ್ಭೆಯನ್ನು ಹರಡಿ, ಅಗ್ನಿಯಲ್ಲಿ ವಿಧಿವತ್ತಾಗಿ ಆಜ್ಯದ ಆಹುತಿಯನ್ನು ನೀಡಿದನು. ಅಗ್ನಿಯನ್ನೂ ಮತ್ತು ಬ್ರಾಹ್ಮಣರನ್ನೂ ತೃಪ್ತಿಪಡಿಸಿದ ನಂತರ, ಸ್ವಸ್ತಿ ವಾಚನ ಮಾಡಿ, ಎಲ್ಲಾ ಕಡೆಯಲ್ಲಿಯೂ

ವಾದ್ಯಸಂಗೀತಗಳನ್ನು ನಿಲ್ಲಿಸಲು ಸೂಚಿಸಿದನು. ನಿಃಶಬ್ದವಾದ ಕೂಡಲೇ ಧೃಷ್ಟದ್ಯುಮ್ನನು ರಂಗಮಧ್ಯಕ್ಕೆ ಹೋಗಿ, ಮೇಘಗಂಭೀರ ಧ್ವನಿಯಲ್ಲಿ ಈ ಸುಲಕ್ಷಣ ಅರ್ಥಗರ್ಭಿತ ಮಾತುಗಳನ್ನು ಆಡಿದನು:

> “ಇಲ್ಲಿ ನೆರೆದಿರುವ ರಾಜರುಗಳೆಲ್ಲ ಕೇಳಿರಿ! ಈ ಬಿಲ್ಲು, ಲಕ್ಷ್ಯ ಮತ್ತು ಬಾಣಗಳನ್ನು ಸರಿಯಾಗಿ ನೋಡಿಕೊಳ್ಳಿ. ನೀವು ಚಕ್ರದಲ್ಲಿರುವ ಛಿದ್ರದ ಮೂಲಕ ಈ ಐದು ಬಾಣಗಳನ್ನು ಬಿಟ್ಟು ಈ ಲಕ್ಷ್ಯವನ್ನು ಹೊಡೆಯಬೇಕು. ಕುಲ, ರೂಪ ಮತ್ತು ಬಲವಂತ ಯಾರು ಈ ದುಷ್ಕರ ಕಾರ್ಯವನ್ನು ಮಾಡುತ್ತಾನೆಯೋ ಅವನಿಗೇ ನನ್ನ ತಂಗಿ ಕೃಷ್ಣೆಯು ಪತ್ನಿಯಾಗಿ ಹೋಗುತ್ತಾಳೆ ಎಂಬ ಭವಿಷ್ಯವಾಣಿಯನ್ನು ನುಡಿಯುತ್ತೇನೆ.”

ಈ ರೀತಿ ಹೇಳಿದ ನಂತರ ದ್ರುಪದ ಪುತ್ರನು, ದ್ರೌಪದಿಗೆ ಅಲ್ಲಿ ನೆರೆದಿರುವ ಎಲ್ಲಾ ನೃಪತಿಗಳ ಹೆಸರು, ಗೋತ್ರ, ಮತ್ತು ಕಾರ್ಯಗಳನ್ನು ಹೊಗಳ ತೊಡಗಿದನು:

> “ದುರ್ಯೋಧನ, ದುರ್ವಿಷಹ, ದುರ್ಮುಖ, ದುಷ್ಟದರ್ಶನ, ವಿವಿಂಶತಿ, ವಿಕರ್ಣ, ಸಹ, ದುಃಶಾಸನ, ಸಮ, ಯುಯುತ್ಸು, ವಾತವೇಗ, ಭೀಮವೇಗಧರ, ಉಗ್ರಾಯುಧ, ಬಲಾಕೀ, ಕನಕಾಯು, ವಿರೋಚನ, ಸುಕುಂಡಲ, ಚಿತ್ರಸೇನ, ಸುವರ್ಚ, ಕನಕಧ್ವಜ, ನಂದಕ, ಬಾಹುಶಾಲಿ, ಕುಂಡಜ, ವಿಕಟ –

ಇವರು ಮತ್ತು ಧೃತರಾಷ್ಟ್ರನ ಇನ್ನೂ ಅನೇಕ ಮಹಾಬಲ ವೀರ ಮಕ್ಕಳು ಕರ್ಣನ ಜೊತೆಗೂಡಿ ನಿನಗೋಸ್ಕರ ಆಗಮಿಸಿದ್ದಾರೆ! ಇಂಥಹ ನೂರಾರು ಮಹಾತ್ಮ ಪ್ರಸಿದ್ಧ ಕ್ಷತ್ರಿಯರ್ಷಭರು ಆಗಮಿಸಿದ್ದಾರೆ. ಶಕುನಿ, ಬಲ, ವೃಷಕ, ಬೃಹದ್ಬಲ ಗಾಂಧಾರರಾಜನ ಎಲ್ಲ ಸುತರೂ ಇಲ್ಲಿ ಸಮಾವೇಷಗೊಂಡಿದ್ದಾರೆ. ಸರ್ವ ಶಸ್ತ್ರಭೃತರಲ್ಲಿ ಶ್ರೇಷ್ಠ, ಮಹಾತ್ಮ ಅಶ್ವತ್ಥಾಮ ಮತ್ತು ಭೋಜ ಇಬ್ಬರೂ ನಿನಗಾಗಿ ಸಮಲಂಕೃತರಾಗಿ ಬಂದಿದ್ದಾರೆ. ಬೃಹಂತ, ಮಣಿಮಾ, ವೀರ್ಯವಂತ ದಂಡಧಾರ, ಸಹದೇವ, ಮಾಗಧ ಮೇಘಸಂಧಿ, ತನ್ನ ಇಬ್ಬರು-ಶಂಖ ಮತ್ತು ಉತ್ತರ-ಪುತ್ರರನ್ನೊಡಗೂಡಿದ ವಿರಾಟ, ವಾರ್ಧಕ್ಷೇಮಿ (ವೃದ್ಧಕ್ಷೇಮನ ಮಗ ಜಯದ್ರಥ), ಸುವರ್ಚಾ, ರಾಜ ಸೇನಾಬಿಂದು, ತನ್ನ ಸುವರ್ಚಸ ಪುತ್ರನನ್ನೊಡಗೂಡಿದ ಅಭಿಭೂ, ಸುಮಿತ್ರ, ಸುಕುಮಾರ, ವೃಕ, ಸತ್ಯಧೃತಿ, ಸೂರ್ಯಧ್ವಜ, ರೋಚಮಾನ, ನೀಲ, ಚಿತ್ರಾಯುಧ, ಅಂಶುಮಾನ್, ಚೇಕಿತಾನ, ಮಹಾಬಲ ಶ್ರೇಣಿಮಾನ್, ಸಮುದ್ರಸೇನನ ಪ್ರತಾಪಿ ಪುತ್ರ ಚಂದ್ರಸೇನ, ಜಲಸಂಧ, ಪಿತಾಪುತ್ರ ಸುದಂಡ ಮತ್ತು ದಂಡ, ಪೌಂಡ್ರಕ, ವಾಸುದೇವ, ವೀರ್ಯವಾನ್ ಭಗದತ್ತ, ಕಲಿಂಗ, ತಾಮ್ರಲಿಪ್ತ, ಪತ್ತನದ ಅಧಿಪತಿ, ಪುತ್ರರಿಂದೊಡಗೂಡಿ

ಮಹಾರಥಿ ಮದ್ರರಾಜ, ಹಾಗೂ ವೀರ ರುಕ್ಮಾಂಗದ-ರುಕ್ಮರಥ ಇವರೆಲ್ಲರೂ ಇಲ್ಲಿ ಸೇರಿದ್ದಾರೆ. ಅಲ್ಲಿ ಕೌರವ್ಯ ಸೋಮದತ್ತ ಮತ್ತು ಅವನ ಮಹಾರಥಿ ಪುತ್ರರು, ಶೂರತ್ರಯ ಭೂರಿ, ಭೂರಿಶ್ರವ ಮತ್ತು ಶಲ, ಸುದಕ್ಷಿಣ, ಕಾಂಬೋಜ, ಕೌರವ ದೃಢಧನ್ವ, ಬೃಹದ್ಬಲ, ಸುಷೇಣ, ಮತ್ತು ಶಿಬಿ ಔಶೀನರ ಮುಂತಾದವರು ಆಸೀನರಾಗಿದ್ದಾರೆ. ಸಂಕರ್ಷಣ, ವಾಸುದೇವ, ವೀರ್ಯವಾನ್ ರೌಕ್ಮಿಣೇಯ, ಸಾಂಬ, ಚಾರುದೇಷ್ಣ, ಸಾರಣ, ಗದ, ಅಕ್ರೂರ, ಸಾತ್ಯಕಿ, ಮಹಾಬಲ ಉದ್ಧವ, ಕೃತವರ್ಮ ಹಾರ್ದಿಕ್ಯ, ಪೃಥು ಮತ್ತು ವಿಪೃಥು, ವಿಢೂರಥ, ಕಂಕ, ಸಮೀಕ, ಸಾರಮೇಜಯ, ವೀರ ವಾತಪತಿ, ಝಿಲ್ಲಿ, ಪಿಂಡಾರಕ, ವಿಕ್ರಾಂತ, ಉಶೀನರ, ಈ ಎಲ್ಲ ಪ್ರಖ್ಯಾತ ವೃಷ್ಣಿಗಳೂ ಆಗಮಿಸಿದ್ದಾರೆ. ಭಗೀರಥ, ಬೃಹತ್ಕ್ಷತ್ರ, ಸೈಂಧವ ಜಯದ್ರಥ, ಬೃಹದ್ರಥ, ಬಾಹ್ಲೀಕ, ಮಹಾರಥಿ ಶೃತಾಯು, ಉಲೂಕ, ರಾಜ ಕೈತವ, ಚಿತ್ರಾಂಗದ, ಶುಭಾಂಗದ, ಧೃತಿವಂತ ವತ್ಸ ರಾಜ, ಮತ್ತು ಕೋಸಲಾಧಿಪತಿ ಇವರೆಲ್ಲರೂ ಇಲ್ಲಿ ನೆರೆದಿದ್ದಾರೆ. ಇವರೆಲ್ಲರೂ ಮತ್ತು ಇನ್ನೂ ಅನೇಕ ನಾನಾ ಜನಪದೇಶ್ವರರು - ಭೂಮಿಯಲ್ಲಿ ಪ್ರಖ್ಯಾತ ಎಲ್ಲ ಕ್ಷತ್ರಿಯರೂ ನಿನ್ನನ್ನು ಗೆಲ್ಲಲು ಆಗಮಿಸಿದ್ದಾರೆ. ಶುಭೇ! ನಿನ್ನನ್ನು ಗೆಲ್ಲುವ ಉದ್ದೇಶದಿಂದ ಈ ವೀರರು ಆ ಉತ್ತಮ

ಲಕ್ಷ್ಯಕ್ಕೆ ಗುರಿಯಿಟ್ಟು ಬಾಣಬಿಡುವರು. ಮತ್ತು ನೀನು ಆ ಲಕ್ಷ್ಯಕ್ಕೆ ಹೊಡೆಯುವವನನ್ನು ವರನನ್ನಾಗಿ ಆರಿಸುವೆ.”

ತಾವೇ ಅಸ್ತ್ರಬಲರೆಂಬ ಜಂಬದಿಂದ ಕುಂಡಲ ಮತ್ತಿತರ ಆಭರಣಗಳಿಂದ ಅಲಂಕೃತರಾದ ಯುವಕರು ಪರಸ್ಪರ ಸ್ಪರ್ಧಿಸಲು ಒಂದಾದರು. ರೂಪ, ವೀರ್ಯ, ಕುಲ, ಧರ್ಮ ಮತ್ತು ಯೌವನ ದರ್ಪದಿಂದ ತುಂಬಿದ ಅವರೆಲ್ಲರೂ ಹಿಮಾಲಯದ ಮದೋನ್ಮತ್ತ ಗಜೇಂದ್ರಗಳಂತೆ ಮುನ್ನುಗ್ಗುತ್ತಿದ್ದರು. ಪರಸ್ಪರರನ್ನು ಸ್ಪರ್ಧಾಭಾವದಿಂದ ನೋಡುತ್ತಾ, ಕಾಮದಲ್ಲಿ ಮುಳುಗೆದ್ದವರಂತೆ, “ಕೃಷ್ಣೆಯು ನನ್ನವಳಾಗುತ್ತಾಳೆ!” ಎಂದು ಘೋಷಿಸುತ್ತಾ ತಮ್ಮ ತಮ್ಮ ರಾಜ ಆಸನಗಳಿಂದ ಎದ್ದರು. ದ್ರುಪದಾತ್ಮಜೆಯನ್ನು ಗೆಲ್ಲಲು ರಂಗದಲ್ಲಿ ಸೇರಿದ್ದ ಕ್ಷತ್ರಿಯರು, ಪರ್ವತರಾಜಕನ್ಯೆ ಉಮೆಗಾಗಿ ನೆರೆದಿದ್ದ ದೇವಗಣದಂತೆ ಕಂಗೊಳಿಸಿದರು. ಕಂದರ್ಪನ ಬಾಣಗಳಿಂದ ಪೀಡಿತಾಂಗರಾಗಿ, ಕೃಷ್ಣೆಗಾಗಿ ಹೃದಯಗಳನ್ನು ಕಳೆದುಕೊಂಡ ನರೇಂದ್ರರು ದ್ರುಪದಾತ್ಮಜೆಗಾಗಿ ರಂಗಕ್ಕಿಳಿದು, ಅಲ್ಲಿ ಮಿತ್ರರನ್ನೂ ಸಹ ಶತ್ರುಗಳೆಂದು ಪರಿಗಣಿಸಿ ನೋಡತೊಡಗಿದರು. ಯಮ ಮತ್ತು ಧನೇಶ್ವರನನ್ನು ಮುಂದಿಟ್ಟುಕೊಂಡು, ರುದ್ರ, ಆದಿತ್ಯ, ವಸು, ಅಶ್ವಿನಿ, ಸಾಧ್ಯ, ಮರುತ್, ಆದಿ ಎಲ್ಲ ದೇವಗಣಗಳೂ ದೈತ್ಯರು, ಸುಪರ್ಣರು, ಮಹಾಉರಗಗಳು, ದೇವರ್ಷಿಗಳು, ಗುಹ್ಯಕರು, ಚರಣರು, ವಿಶ್ವಾವಸು, ನಾರದ, ಪರ್ವತ, ಗಂಧರ್ವ

ಪ್ರಮುಖರು, ಮತ್ತು ಅಪ್ಸರೆಯರು ವಿಮಾನಗಳಲ್ಲಿ ಬಂದು ನೆರೆದರು.

ಕೃಷ್ಣನ ಹೇಳಿಕೆಯಂತೆ ಯದುಪುಂಗವರೆಲ್ಲ ಒಂದೇ ಕಡೆ ಕುಳಿತಿದ್ದರು. ಅಲ್ಲಿಂದ ವೃಷ್ಣಿ ಮತ್ತು ಅಂಧಕರಲ್ಲಿ ಪ್ರಧಾನ ಹಲಾಯುಧ-ಕೇಶವರು ಸುತ್ತಲೂ ನೋಡಿದರು. ಮತ್ತಗಜೇಂದ್ರರೂಪಿ, ಭಸ್ಮಾವೃತಶರೀರಿ ಹವ್ಯವಾಹನಗಳಂತಿರುವ, ಸರೋವರದ ಪಂಚಪದ್ಮಗಳಂತಿರುವ ಪಾರ್ಥರನ್ನು ಯದುಪ್ರವೀರನು ಕಂಡನು. ರಾಮನಿಗೆ ಯುಧಿಷ್ಠಿರ, ಭೀಮ, ಜಿಷ್ಣು, ಮತ್ತು ವೀರ ಅವಳಿಗಳನ್ನು ಸೂಚಿಸಿದನು; ನಿಧಾನವಾಗಿ ಅವರೆಡೆಗೆ ನೋಡಿದ ರಾಮನು ಸಂತೋಷದಿಂದ ಜನಾರ್ದನನ ಕಡೆ ನೋಡಿದನು.

ತಮ್ಮ ನೇತ್ರ, ಮನಸ್ಸು ಮತ್ತು ಸ್ವಭಾವಗಳನ್ನು ಕೃಷ್ಣೆಗಾಗಿ ಕಳೆದುಕೊಂಡ ನಾನಾ ನೃಪಪುತ್ರರೂ ಪೌತ್ರರೂ ತಾಮ್ರದಂತೆ ಕೆಂಪಾದ ಮುಖವುಳ್ಳವರಾಗಿ, ತುಟಿಯನ್ನು ಕಚ್ಚುತ್ತಾ, ತಮ್ಮ ತೋಳಬಲವನ್ನು ತೋರಿಸುತ್ತಾ, ಮುಂದೆ ಸಾಗುತ್ತಿರುವ ದ್ರೌಪದಿಯನ್ನು ದುರುಗುಟ್ಟಿ ನೋಡುತ್ತಿದ್ದರು. ಮಹಾಬಾಹು, ಮಹಾನುಭಾವ ಪಾರ್ಥರು ಮತ್ತು ಇಬ್ಬರು ಅವಳಿಗಳು ದ್ರೌಪದಿಯನ್ನು ನೋಡುತ್ತಲೇ ಇದ್ದರು ಮತ್ತು ಅವರೆಲ್ಲರೂ ಕಂದರ್ಪಬಾಣಗಳಿಂದ ಗಾಯಗೊಂಡಿದ್ದರು. ಆಕಾಶವು ದೇವ, ಋಷಿ, ಗಂಧರ್ವ, ಸುಪರ್ಣ, ನಾಗ, ಅಸುರ ಮತ್ತು ಸಿದ್ಧರಿಂದ ತುಂಬಿಕೊಂಡಿತ್ತು ಮತ್ತು ಅಲ್ಲಲ್ಲಿ ಬಿಸುಟ ದಿವ್ಯಮಾಲೆಗಳಿಂದ

ಹೊಮ್ಮುತ್ತಿರುವ ದಿವ್ಯ ಸುಗಂಧದಿಂದ ತುಂಬಿಕೊಂಡಿತ್ತು. ದುಂಧುಭಿಗಳ ಮಹಾನಾದ ಗರ್ಜನೆಯಿಂದ ಅಂತರಿಕ್ಷವು ಇನ್ನೂ ಇಕ್ಕಟ್ಟೆನಿಸುತ್ತಿತ್ತು ಮತ್ತು ಹಲವಾರು ವಿಮಾನಗಳಿಂದ ಅದರ ಮಾರ್ಗಗಳು ಕಟ್ಟಿಹೋಗಿದ್ದವು ಹಾಗೂ ವೇಣು ಮತ್ತು ವೀಣಾವಾದನಗಳಿಂದ ಪ್ರತಿಧ್ವನಿಸುತ್ತಿತ್ತು.

ನಂತರ ಕ್ರಮೇಣವಾಗಿ ಕೃಷ್ಣೆಯ ಸಲುವಾಗಿ ರಾಜಗಣದಲ್ಲಿದ್ದ ಎಲ್ಲ ನೃಪರು ಹೊರಬಂದರು. ಆದರೆ ಆ ಬಿಲ್ಲು ಎಷ್ಟು ಗಡುಸಾಗಿತ್ತೆಂದರೆ ತಮ್ಮ ಎಲ್ಲ ಶಕ್ತಿಯನ್ನು ಬಳಸಿಯೂ ಅವರು ಆ ಬಿಲ್ಲಿಗೆ ದಾರವನ್ನು ಕಟ್ಟಲು ಅಸಮರ್ಥರಾದರು. ಆ ಗಡುಸಾದ ಬಿಲ್ಲನ್ನು ಬಗ್ಗಿಸುವಾಗಲೇ, ಅದು ಜೋರಾಗಿ ಬಳುಕಿ ನರೇಂದ್ರರನ್ನೆಲ್ಲಾ ಕೆಳಗುರುಳಿಸುತ್ತಿತ್ತು, ಮತ್ತು ಧರಣೀತಲದಲ್ಲಿ ಪೇಚಲಾಡುತ್ತಿದ್ದ ಅವರು ದೀನರೂ ವಿಭಗ್ನಚಿತ್ತರಾಗಿಯೂ ಕಾಣುತ್ತಿದ್ದರು. ದೃಢವಾದ ಆ ಬಿಲ್ಲು ಜೋರಾಗಿ ಶಬ್ಧಮಾಡುತ್ತಾ, ಅವರ ಅಂಗ ಮತ್ತು ಕುಂಡಲಗಳನ್ನು ಕಿತ್ತು ಚೆಲ್ಲಿತು; ಕೃಷ್ಣೆಗಾಗಿ ಇದ್ದ ಭಾವಗಳೆಲ್ಲವೂ ಇಲ್ಲದಂತಾಗಿ, ರಾಜರ ಆ ಮಂಡಲವು ಆರ್ತವಾಗಿ ಕಂಡಿತು. ಅಲ್ಲಿ ನೆರೆದಿರುವ ಭ್ರಾಂತಿಗೊಂಡ ಜನಸಮೂಹವು ನರಾಧಿಪರ ಕುರಿತು ನಿಕ್ಷಿಪ್ತ ಮಾತುಗಳನ್ನಾಡ ತೊಡಗಿರಲು, ಕುಂತೀಸುತ ವೀರ ಜಿಷ್ಣುವು ಧನುಸ್ಸನ್ನು ಸಜ್ಜಿಸಲು ಮತ್ತು ಅದಕ್ಕೆ ಶರವನ್ನೇರಿಸಲು ಎದ್ದನು.

ರಾಜರೆಲ್ಲರೂ ಧನುಸ್ಸನ್ನು ಸಜ್ಜಿಸುವ ಕಾರ್ಯದಿಂದ ಹಿಂದೆ

ಸರಿದುಕೊಂಡ ನಂತರ ಬ್ರಾಹ್ಮಣರ ಮಧ್ಯದಿಂದ ಉದಾರಮನಸ್ಸಿನ ಜಿಷ್ಣುವು ಎದ್ದು ನಿಂತನು. ಇಂದ್ರಧನುಸ್ಸಿನ ಕಾಂತಿಯುಕ್ತ ಪಾರ್ಥನು ಎದ್ದುದನ್ನು ನೋಡಿ ವಿಪ್ರಪ್ರಮುಖರೆಲ್ಲರೂ ತಮ್ಮ ಜಿನವಸ್ತ್ರಗಳನ್ನು ಹಾರಿಸಿ ಉದ್ಗರಿಸಿದರು. ಕೆಲವರು ವಿಮನಸಗೊಂಡರೆ ಮತ್ತೆ ಕೆಲವರು ಮುದಿತರಾದರು; ಮತ್ತೆ ಕೆಲವು ನಿಪುಣ ಬುದ್ಧಿಜೀವಿಗಳು ಪರಸ್ಪರರಲ್ಲಿ ಮಾತನಾಡಿಕೊಂಡರು:

> "ಕರ್ಣ ಮತ್ತು ಶಲ್ಯರಂತಹ ಲೋಕವಿಶ್ರುತ, ಬಲಶಾಲಿ, ಧನುರ್ವೇದಪರಾಯಣ ಪಾರ್ಥಿವರಿಂದಲೇ ಈ ಧನಸ್ಸನ್ನು ಬಗ್ಗಿಸಲು ಅಸಾಧ್ಯವಾದಾಗ, ಅಸ್ತ್ರ-ಶಸ್ತ್ರಗಳಲ್ಲಿ ಪರಿಣತಿಯಿಲ್ಲದ, ದುರ್ಬಲನಾಗಿ ಕಾಣುತ್ತಿರುವ ಈ ವಟುಮಾತ್ರನಿಂದ ಧನಸ್ಸನ್ನು ಸಜ್ಜಿಸಲು ಹೇಗೆ ಶಕ್ಯ, ಬ್ರಾಹ್ಮಣರೇ! ಚಪಲತೆಯಿಂದ, ಸರಿಯಾಗಿ ಆಲೋಚನೆ ಮಾಡದೇ ತೆಗೆದುಕೊಂಡ ಈ ಕಾರ್ಯದಲ್ಲಿ ಅವನು ಯಸಸ್ವಿಯಾಗದಿದ್ದರೆ, ಈ ಎಲ್ಲ ರಾಜರ ಮುಂದೆ ನಾವು ಬ್ರಾಹ್ಮಣರು ಅವಹಾಸ್ಯಗೊಳಗಾಗಲಿದ್ದೇವೆ. ಒಂದುವೇಳೆ ಅವನು ದರ್ಪ ಅಥವಾ ಉತ್ಸಾಹ ಅಥವಾ ಬ್ರಾಹ್ಮಣರ ಮೇಲಿರುವ ಕೀಳರಿಮೆಯಿಂದ ಆ ಧನುಸ್ಸನ್ನು ಕಟ್ಟಲು ಹೋಗುತ್ತಿದ್ದಾನೆಂದಾದರೆ, ನಾವು ಅಪಹಾಸ್ಯಕ್ಕೆ ಒಳಗಾಗದಿರಲು, ಹಗುರವೆನಿಸಿಕೊಳ್ಳದಿರಲು ಮತ್ತು

ಲೋಕದ ಎಲ್ಲ ಮಹೀಪತಿಗಳ ದ್ವೇಷಕ್ಕೊಳಗಾಗದೇ ಇರಲು ಅವನನ್ನು ತಡೆಹಿಡಿಯುವುದು ಒಳ್ಳೆಯದು."

ಇತರರು ಹೇಳಿದರು:

"ಯುವಕನು ಉತ್ತಮನಾಗಿದ್ದಾನೆ. ಗಜರಾಜನ ಸೊಂಡಿಲಿನಂತೆ ತೋರುತ್ತಿದ್ದಾನೆ. ಅವನ ಬಾಹು, ತೊಡೆ ಮತ್ತು ತೋಳುಗಳು ಮಾಂಸಖಂಡಗಳಿಂದ ತುಂಬಿಕೊಂಡು ಗಟ್ಟಿಯಾಗಿ ಕಾಣಿಸುತ್ತಿವೆ ಮತ್ತು ಹಿಮಾಲಯದಂತೆ ಅವನ ನಿಲುವಿನಲ್ಲಿ ಧೈರ್ಯವಿದೆ. ಅವನು ಕಾರ್ಯದಲ್ಲಿ ಗೆಲ್ಲುತ್ತಾನೆ ಎನ್ನುವುದನ್ನು ಅವನಲ್ಲಿರುವ ಉತ್ಸಾಹವೇ ತೋರಿಸುತ್ತಿದೆ. ಅವನ ಶಕ್ತಿಯಲ್ಲಿ ಉತ್ಸಾಹವಿದೆ. ಇಂತಹ ಸಮರ್ಥ ವ್ಯಕ್ತಿಯು ತಾನಾಗಿಯೇ ಬಿಟ್ಟುಹೋಗುವುದಿಲ್ಲ. ಇದಲ್ಲದೇ, ಮೂರು ಸಂಸ್ಥಾನಚಾರಿಗಳಲ್ಲಿ ಬ್ರಾಹ್ಮಣರಿಗೆ ಅಸಾಧ್ಯವಾದ ಯಾವ ಕಾರ್ಯವೂ ಯಾವುದೇ ಲೋಕದಲ್ಲಿಯೂ ಕಂಡುಬರುವುದಿಲ್ಲ. ಕೇವಲ ನೀರು, ವಾಯು ಅಥವಾ ಫಲಾಹಾರ ಸೇವನೆಯಿಂದ ದೃಢವ್ರತ ವಿಪ್ರರು ದುರ್ಬಲರೆನಿಸಿದರೂ, ಅವರ ಬ್ರಹ್ಮತೇಜಸ್ಸಿನಿಂದ ಬಹಳ ಬಲಶಾಲಿಗಳಾಗಿರುತ್ತಾರೆ. ಅವನು ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನು ಮಾಡಲಿ, ಅವನು ತೊಡಗಿರುವ ಕಾರ್ಯವು ಸುಖಕರವಾಗಿರಲಿ ದುಃಖಕರವಾಗಿರಲಿ ಅಥವಾ

> ದೊಡ್ಡಕಾರ್ಯವೇ ಆಗಿರಲಿ ಅಥವಾ ಸಣ್ಣಕಾರ್ಯವೇ ಆಗಿರಲಿ, ಬ್ರಾಹ್ಮಣನನ್ನು ಅವಹೇಳನೆ ಮಾಡಬಾರದು.”

ಈ ರೀತಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳುತ್ತಿರುವಾಗ, ಅರ್ಜುನನು ಧನುಸ್ಸಿನ ಬಳಿ ಹೋಗಿ ಅಚಲ ಪರ್ವತದಂತೆ ನಿಂತನು. ಆ ಪರಂತಪನು ಧನುಸ್ಸನ್ನು ಸುತ್ತುವರಿದು ಪ್ರದಕ್ಷಿಣೆ ಮಾಡಿ, ತಲೆ ಬಗ್ಗಿಸಿ ಪ್ರಣಾಮಮಾಡಿದನು ಮತ್ತು ಸಂತೋಷದಿಂದ ಅದನ್ನು ಕೈಯಲ್ಲಿ ತೆಗೆದುಕೊಂಡನು. ಕಣ್ಣು ಮುಚ್ಚಿ ಬಿಡುವುದರಲ್ಲಿ ಅವನು ಧನುಸ್ಸನ್ನು ಕಟ್ಟಿ, ಐದು ಬಾಣಗಳನ್ನು ತೆಗೆದುಕೊಂಡು, ರಂಧ್ರದ ಮೂಲಕ ಲಕ್ಷ್ಯವನ್ನು ಭೇದಿಸಿ ಕೆಳಗೆ ಭೂಮಿಯಮೇಲೆ ರಭಸದಿಂದ ಬೀಳಿಸಿದನು. ಅಂತರಿಕ್ಷದಲ್ಲಿ ಹರ್ಷೋದ್ಗಾರವಾಯಿತು, ಜನರ ಗುಂಪಿನಲ್ಲಿ ಮಹಾನಿನಾದ ಕೇಳಿಬಂದಿತು. ಶತ್ರುನಾಶಿನಿ ಪಾರ್ಥನ ನೆತ್ತಿಯಮೇಲೆ ದೇವತೆಗಳು ದಿವ್ಯ ಪುಷ್ಪಗಳ ಮಳೆ ಸುರಿಸಿದರು. ಉತ್ತರೀಯಗಳನ್ನು ಪಟದಂತೆ ಹಾರಿಸುತ್ತಾ ನೆರೆದಿದ್ದ ಎಲ್ಲ ಪ್ರೇಕ್ಷಕರೂ ಹಾಹಾಕಾರಗೈದರು ಮತ್ತು ನಭದಿಂದ ಪುಷ್ಪವೃಷ್ಟಿಯಾಯಿತು. ವಾದ್ಯಗಾರರು ನೂರಾರು ವಾದ್ಯ ತೂರೆಗಳನ್ನು ಮೊಳಗಿಸಿದರು ಮತ್ತು ಸೂತ ಮಾಗಧರು ಎತ್ತರ ಸ್ವರಗಳಲ್ಲಿ ಪ್ರಶಂಸನೆಗಳನ್ನು ಹಾಡಿದರು. ಅರಿನಿಷೂದನ ದ್ರುಪದನು ಅವನನ್ನು ನೋಡಿ ಸಂತೋಷಗೊಂಡು, ಪಾರ್ಥನ ರಕ್ಷಣೆಗೆಂದು

ಸೈನ್ಯಸಮೇತ ನಿಂತನು. ಈ ಗಲಾಟೆಯು ಹೆಚ್ಚಾಗುತ್ತಿದ್ದಂತೆ,





ಧರ್ಮಭೃತರಲ್ಲಿ ವರಿಷ್ಠ ಯುಧಿಷ್ಠಿರನು, ಪುರುಷೋತ್ತಮ ಅವಳಿಗಳ ಜೊತೆಗೂಡಿ ಶೀಘ್ರವಾಗಿ ಅವಾಸದೆಡೆಗೆ ಹೊರಟುಹೋದನು.

ಲಕ್ಷ್ಯವನ್ನು ಹೊಡೆದಿದ್ದನ್ನು ನೋಡಿ, ಶಕ್ರಪ್ರತಿಮ ಪಾರ್ಥನನ್ನು ನೋಡಿ, ಕೃಷ್ಣೆಯು ಬಿಳಿ ವರಮಾಲೆಯನ್ನು ಹಿಡಿದು, ಮುಗುಳ್ನಗುತ್ತಾ ಕುಂತೀಸುತನೆಡೆಗೆ ಬಂದಳು. ಸ್ಪರ್ಧೆಯಲ್ಲಿ ಜಯವನ್ನು ಗಳಿಸಿ ಬ್ರಾಹ್ಮಣರಿಂದ ಅಭಿಪೂಜ್ಯಮಾನ, ಅಚಿಂತ್ಯಕರ್ಮನು ತನ್ನ ಪತ್ನಿಯು ಅನುಸರಿಸುತ್ತಿದ್ದ ಹಾಗೆ ರಂಗದಿಂದ ಹೊರಬಂದನು.

ರಾಜನು ಕನ್ಯೆಯನ್ನು ಆ ಮಹಾತ್ಮ ಬ್ರಾಹ್ಮಣನಿಗೆ ಕೊಡಬೇಕೆಂದಿರುವಾಗ, ನೆರೆದಿದ್ದ ಮಹೀಪತಿಗಳೆಲ್ಲಾ ಕೋಪಗೊಂಡು ಪರಸ್ಪರರನ್ನು ನೋಡತೊಡಗಿದರು:

> “ಇಲ್ಲಿ ನೆರೆದಿರುವ ನಮ್ಮೆಲ್ಲರನ್ನೂ ತೃಣೀಕರಿಸಿ ಅತಿಕ್ರಮಿಸಿ, ಸ್ತ್ರೀಯರಲ್ಲೇ ಶ್ರೇಷ್ಠ ದ್ರೌಪದಿಯನ್ನು ಒಬ್ಬ ಬ್ರಾಹ್ಮಣನಿಗೆ ಕೊಡಲು ತೊಡಗಿದ್ದಾನೆ. ನಮಗೆ ಅಗೌರವವನ್ನು ತೋರಿಸುವ ಈ ದುರಾತ್ಮನನ್ನು ಕೊಲ್ಲೋಣ. ವೃದ್ಧರಿಗೆ ಅಥವಾ ಗುಣವಂತರಿಗೆ ತಗಲುವ ಸತ್ಕಾರಕ್ಕೆ ಇವನು ಅರ್ಹನಲ್ಲ. ಈ ನೃಪದ್ವೇಷಿ, ದುರಾಚಾರಿಯನ್ನು ಪುತ್ರರ ಸಮೇತ ಕೊಲ್ಲೋಣ. ಮೊದಲು ಎಲ್ಲ ನರಾಧಿಪರನ್ನೂ ಅಹ್ವಾನಿಸಿ, ಸತ್ಕರಿಸಿ, ಸರಿಯಾಗಿ ಭೋಜನಗಳನ್ನೆಲ್ಲ ಇತ್ತು

ನಂತರ ಅವರನ್ನೇ ನಿಂದನೆಮಾಡುತ್ತಿದ್ದಾನೆ. ದೇವಗಣಕ್ಕೆ ಸಮಾನ ಈ ರಾಜಸಮಾವೇಷದಲ್ಲಿ, ತನಗೆ ಸರಿಸಾಟಿಯಾದ ಯಾರೊಬ್ಬ ನೃಪನೂ ಕಾಣದೇ ಇರಲು ಹೇಗೆ ಸಾದ್ಯ? ಬ್ರಾಹ್ಮಣರಿಗೆ ಸ್ವಯಂವರದಲ್ಲಿ ಭಾಗವಹಿಸುವ ಅಧಿಕಾರವಿಲ್ಲ. ಶೃತಿಗಳ ಪ್ರಕಾರ ಸ್ವಯಂವರವು ಕ್ಷತ್ರಿಯರಿಗೆ ಮಾತ್ರ. ಅಥವಾ ಒಂದುವೇಳೆ ಈ ಕನ್ಯೆಗೆ ನಮ್ಮಲ್ಲಿ ಯಾರೂ ಬೇಡವಂತಿದ್ದರೆ, ಇವಳನ್ನು ಅಗ್ನಿಯಲ್ಲಿ ಹಾಕಿ ನಾವೆಲ್ಲರೂ ನಮ್ಮ ನಮ್ಮ ರಾಷ್ಟ್ರಗಳಿಗೆ ಮರಳೋಣ. ತಿಳುವಳಿಕೆ ಇಲ್ಲದೆಯೊ ಅಥವಾ ಲೋಭದಿಂದಲೋ ಪಾರ್ಥಿವೇಂದ್ರರೆಲ್ಲರಿಗೂ ಅಪ್ರಿಯವಾದದ್ದನ್ನು ಮಾಡಿದ್ದರೂ ಈ ಬ್ರಾಹ್ಮಣನನ್ನು ಕೊಲ್ಲುವುದಾದರೂ ಹೇಗೆ? ನಮ್ಮ ರಾಜ್ಯ, ಜೀವನ, ಸಂಪತ್ತು, ಪುತ್ರರು, ಪೌತ್ರರು, ಮತ್ತು ಸಮ್ಮಲ್ಲಿರುವ ಸರ್ವಸ್ವ ಧನವೂ ಬ್ರಾಹ್ಮಣಾರ್ಥವೇ ಅಲ್ಲವೆ? ಆದರೂ ನಮ್ಮ ಧರ್ಮವನ್ನು ಅಪಮಾನದಿಂದ ರಕ್ಷಿಸಬೇಕು ಮತ್ತು ಇತರ ಸ್ವಯಂವರಗಳು ಇದರಂತೆ ನಡೆಯದೇ ಇರುವಹಾಗೆ ನೋಡಿಕೊಳ್ಳಬೇಕು.”

## ಕರ್ಣ-ಶಲ್ಯರೊಡನೆ ಅರ್ಜುನ-ಭೀಮಸೇನರ ಯುದ್ಧ

ಈ ಪ್ರಕಾರ ಮಾತನಾಡಿಕೊಳ್ಳುತ್ತಾ ರಾಜಶಾರ್ದೂಲರೆಲ್ಲರೂ

ಉದ್ವೇಗಗೊಂಡು ಆಯುಧಗಳೆನ್ನಿತ್ತಿಕೊಂಡು ದೃಪದನನ್ನು ಮುಗಿಸಿ ಬಿಡುವ ಉದ್ದೇಶದಿಂದ ಆಯುಧಗಳನ್ನು ಬೀಸುತ್ತಾ ಮುನ್ನುಗ್ಗಿದರು. ತಮ್ಮ ತಮ್ಮ ಬಿಲ್ಲು ಬಾಣಗಳನ್ನು ಹಿಡಿದು ಕೋಪದಿಂದ ಮೇಲೆ ಬೀಳುತ್ತಿರುವ ನೃಪರನ್ನು ಕಂಡ ದ್ರುಪದನು ಭಯಗೊಂಡು ಬ್ರಾಹ್ಮಣರ ಶರಣುಹೊಕ್ಕನು. ಆಗ ಆ ಅರಿಂದಮ ವೀರ ಪಾಂಡುಪುತ್ರರು ಮದಿಸಿದ ಆನೆಗಳಂತೆ ಶೀಘ್ರವಾಗಿ ರಾಜರನ್ನು ಎದುರಿಸಿ ಮುಂದೆಬಂದರು. ತಮ್ಮ ಆಯುಧಗಳನ್ನು ಮೇಲೆತ್ತಿ ಅಂಗುಲೀ ಬದ್ಧರಾದ ಮಹೀಕ್ಷಿತರು ಕುರುರಾಜಪುತ್ರರನ್ನು ಕೊಲ್ಲಲು ಅರ್ಜುನ ಭೀಮಸೇನರ ಮೇಲೆ ಎರಗಿದರು. ಅದ್ಭುತ ವೀರ್ಯಕರ್ಮಿ, ಮಹಾಬಲಿ, ವಜ್ರಸಮಾನ ವೀರ್ಯವಂತ ಭೀಮನು ಏಕವೀರನಾಗಿ ಒಂದು ವೃಕ್ಷವನ್ನು ಕಿತ್ತು ಕೈಯಲ್ಲಿ ಹಿಡಿದು ಗಜೇಂದ್ರನಂತೆ ಅದರಲ್ಲಿರುವ ಎಲೆಗಳನ್ನೆಲ್ಲ ಉದುರಿಸಿದನು. ರಿಪುಪ್ರಮಥಿ ದೀರ್ಘಬಾಹು ಪಾರ್ಥನು ಪಿತೃರಾಜನು ತನ್ನ ಉಗ್ರ ದಂಡವನ್ನು ಹಿಡಿಯುವಂತೆ ಆ ಮರವನ್ನು ಹಿಡಿದು ಪುರುಷರ್ಷಭ ಪಾರ್ಥ ಅರ್ಜುನನ ಪಕ್ಕದಲ್ಲಿ ನಿಂತನು. ಅಚಿಂತ್ಯಕರ್ಮಿ ಜಿಷ್ಣು ಮತ್ತು ಅವನ ಸಹೋದರರ ಮನುಷ್ಯರಿಗೆ ಮೀರಿದ ಕೃತ್ಯವನ್ನು ಕಂಡ ದಾಮೋದರನು ತನ್ನ ಅಣ್ಣ ಉಗ್ರವೀರ್ಯ ಹಲಾಯುಧನಿಗೆ ಹೇಳಿದನು:

"ಸಂಕರ್ಷಣ, ನಾನು ವಾಸುದೇವನೆನ್ನುವುದರಲ್ಲಿ ಹೇಗೆ ಸಂದೇಹವೇ ಇಲ್ಲವೋ ಹಾಗೆ ಮದಿಸಿದ ವೃಷಭನಂತಿರುವ

ಮಹಾಧನಸ್ಸನ್ನು ಬಗ್ಗಿಸಿದ ಅವನು ಅರ್ಜುನನೆನ್ನುವುದರಲ್ಲಿ ಸಂದೇಹವೇ ಇಲ್ಲ. ತನ್ನ ಬಲದಿಂದ ವೃಕ್ಷವನ್ನು ಕಿತ್ತು ಈಗ ರಾಜರುಗಳನ್ನು ಎದುರಿಸುತ್ತಿರುವವನು ವೃಕೋದರ. ಯಾಕೆಂದರೆ ಇಂಥಹ ಕೃತ್ಯವನ್ನು ಮಾಡುವ ಬೇರೆ ಯಾವ ಮರ್ತ್ಯನೂ ಈ ಭೂಮಿಯಲ್ಲಿಲ್ಲ. ಈಗಾಗಲೇ ಹೊರಟುಹೋದ ಕಮಲಪತ್ರಾಕ್ಷ, ತೆಳುದೇಹಿ, ಸಿಂಹನಡುಗೆಯ, ವಿನೀತ, ಗೌರವರ್ಣದ ಹೊಳೆಯುತ್ತಿರುವ ಉದ್ದನೆಯ ಸುಂದರ ಮೂಗಿನ ಮಹಾತ್ಮನು ಧರ್ಮರಾಜನೇ ಇದ್ದಿರಬೇಕು. ಕಾರ್ತಿಕೇಯರಂತೆ ತೋರುತ್ತಿದ್ದ ಆ ಇಬ್ಬರು ಕುಮಾರರು ಅಶ್ವಿನಿ ದೇವತೆಗಳ ಪುತ್ರರಿರಬೆಕೆಂದೇ ನನ್ನ ಅಭಿಪ್ರಾಯ. ಯಾಕೆಂದರೆ ಪಾಂಡುಪುತ್ರರು ಮತ್ತು ಕುಂತಿಯು ಜತುಗೃಹದ ಬೆಂಕಿಯಿಂದ ತಪ್ಪಿಸಿಕೊಂಡರು ಎಂದು ಕೇಳಿದ್ದೇನೆ.”

ನಿರ್ಮಲ ಹಲಾಯುಧನು

“ನಮ್ಮ ತಂದೆಯ ಸಹೋದರಿ ಪೃಥಾಳಿಗೆ ಕೌರವಾಗ್ರರ ಸಹಿತ ಬಿಡುಗಡೆ ದೊರಕಿದುದನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ”

ಎಂದು ತನ್ನ ಸಹೋದರನಿಗೆ ಹೇಳಿದನು.

ಆ ಈರ್ವರು ದ್ವಿಜರ್ಷಭರು ತಮ್ಮ ಜಿನ-ಕರಕಗಳನ್ನು ಬಿಸುಟು

> “ಭಯಪಡುವುದು ಬೇಡ! ನಾವು ಈ ಶತ್ರುಗಳನ್ನು ಎದುರಿಸುತ್ತೇವೆ!”

ಎಂದು ದ್ರುಪದನಿಗೆ ಹೇಳಿದರು. ಅರ್ಜುನನು ನಸುನಗುತ್ತಾ “ನೀವು ಪಕ್ಕದಲ್ಲಿ ನಿಂತು ನೋಡಿ!” ಎಂದು ಬ್ರಾಹ್ಮಣರಿಗೆ ಹೇಳಿದನು:

> “ಮಂತ್ರೋಚ್ಛಾರಣೆಯಿಂದ ವಿಷಸರ್ಪಗಳನ್ನು ತಡೆಗಟ್ಟುವಂತೆ ನಾನು ಈ ನೂರಾರು ನೇರ ಮೊನಚು ಬಾಣಗಳನ್ನು ಸುರಿಸಿ ಈ ಕುಪಿತ ಕ್ಷತ್ರಿಯರನ್ನು ತಡೆಯುತ್ತೇನೆ.”

ಹೀಗೆನ್ನುತ್ತಾ ಆ ಮಹಾರಥಿಯು ಅಲ್ಲೇ ಬಿದ್ದಿದ್ದ ಧನುಸ್ಸನ್ನು ಎತ್ತಿ ಹಿಡಿದು ಅಚಲ ಪರ್ವತದಂತೆ ಭ್ರಾತಾ ಭೀಮನ ಹತ್ತಿರ ಬಿರುಸಾಗಿ ನಿಂತುಕೊಂಡನು. ನಂತರ ಇಬ್ಬರೂ ಕುಪಿತರಾಗಿ ಕರ್ಣನ ನಾಯಕತ್ವದಲ್ಲಿ ದಂಗೆಯೆದ್ದ ಕ್ಷತ್ರಿಯರ ಮೇಲೆ ತಮ್ಮ ಪ್ರತಿಕಾಮಿಗಳ ಮೇಲೆ ಎರಗುವ ಎರಡು ಆನೆಗಳಂತೆ ಎರಗಿದರು. ಕಟುಕರಂತಿದ್ದ ರಾಜರು ರೋಷದಿಂದ “ಯುದ್ಧದಲ್ಲಿ ಹೋರಾಡಲು ಬಯಸುತ್ತಿದ್ದ ಬ್ರಾಹ್ಮಣನನ್ನೂ ಕೊಲ್ಲಬಹುದು” ಎಂದು ಅಂದುಕೊಂಡರು. ಒಂದು ಆನೆಯು ಇನ್ನೊಂದು ಪ್ರತಿಸ್ಪರ್ಧಿ ಆನೆಯ ಮೇಲೆರಗುವಂತೆ ವೈಕರ್ತನ ಕರ್ಣನು ಯುದ್ಧದ ಉತ್ಸುಕತೆಯಿಂದ ಅರ್ಜುನನ ಮೇಲೆ ಧಾಳಿ ಮಾಡಿದನು. ಮದ್ರಾಧೀಶ್ವರ ಮಹಾಬಲಿ ಶಲ್ಯನು ಭೀಮಸೇನನನ್ನು ಎದುರಿಸಿದನು. ದುರ್ಯೋಧನ ಮತ್ತಿತರರು

ಬ್ರಾಹ್ಮಣರ ಮೇಲೆ ಮೃದುವಾಗಿ ಹೆಚ್ಚು ಕಷ್ಟಗಳನ್ನು ತೆಗೆದುಕೊಳ್ಳದೆ ಧಾಳಿ ಮಾಡಿದರು. ವೈಕರ್ತನ ಕರ್ಣನು ತನ್ನ ಮೇಲೆ ಬೀಸಿ ಬರುತ್ತಿದ್ದಂತೆ ಧೀಮಂತ ಅರ್ಜುನನು ತನ್ನ ಬಲವಾದ ಧನಸ್ಸನ್ನು ಎಳೆದು ಅವನ ಮೇಲೆ ಮೂರು ಬಾಣಗಳನ್ನು ಬಿಟ್ಟನು. ವೇಗವಾಗಿ ಬಂದ ಮೊನಚಾದ ಆ ಬಾಣಗಳು ರಾಧೇಯನನ್ನು ತತ್ತರಿಸಿದವು. ಅವನು ಜಾಗ್ರತೆಯಿಂದ ಮುಂದುವರೆದನು. ಇಬ್ಬರ ಚಲನೆಯ ವೇಗದಿಂದಾಗಿ ಒಬ್ಬರಿಗೊಬ್ಬರು ಸರಿಯಾಗಿ ಕಾಣುತ್ತಿರಲಿಲ್ಲ ಮತ್ತು ಶ್ರೇಷ್ಠರಾದ ಆ ಇಬ್ಬರೂ ವಿಜಯೋದ್ಧರು ಪರಸ್ಪರರನ್ನು ಸೋಲಿಸಲು ಭೀಷಣ ಯುದ್ಧದಲ್ಲಿ ತೊಡಗಿದರು.

> “ನಾನು ಅದನ್ನು ಹೇಗೆ ತಡೆಹಿಡಿದೆ ನೋಡು! ಈಗ ನನ್ನ ಬಾಹುಬಲವನ್ನು ನೋಡು!”

ಹೀಗೆ ವೀರರ ಭಾಷೆಯಲ್ಲಿ ಪರಸ್ಪರ ಛೇಡಿಸಿದರು. ಭುವಿಯಲ್ಲಿಯೇ ಅಪ್ರತಿಮ ಅರ್ಜುನನ ಭುಜಬಲವನ್ನು ಕಂಡ ವೈಕರ್ತನ ಕರ್ಣನು ಇನ್ನೂ ರೋಷದಿಂದ ಹೋರಾಡಿದನು. ಅರ್ಜುನನಿಂದ ವೇಗವಾಗಿ ಬರುತ್ತಿದ್ದ ಬಾಣಗಳನ್ನು ತಡೆಹಿಡಿದು ಜೋರಾಗಿ ನಿನಾದಿಸುತ್ತಿರುವ ಅವನನ್ನು ಅಲ್ಲಿರುವ ಸೈನಿಕರೆಲ್ಲ ಮೆಚ್ಚಿಕೊಂಡರು.

ಕರ್ಣನು ಹೇಳಿದನು:

> “ವಿಪ್ರಮುಖ್ಯ! ನಿನ್ನ ಭುಜವೀರ್ಯ, ಎಡೆಬಿಡದ ಯುದ್ಧ ಮತ್ತು ಶಸ್ತ್ರಾಸ್ತ್ರ ವಿನಯವು ನನ್ನನ್ನು ಸಂತುಷ್ಟಗೊಳಿಸಿದವು.

ಆತ್ಮರಕ್ಷಣೆಗೆಂದು ವಿಪ್ರರೂಪವನ್ನು ತಳೆದು
ಬಾಹುವೀರ್ಯದಿಂದ ನನ್ನೊಡನೆ ಘೋರವಾಗಿ
ಹೋರಾಡುತ್ತಿರುವ ವಿಪ್ರಸತ್ತಮ! ನೀನು ಸಾಕ್ಷಾತ್
ದೇವದೇವನೋ ಅಥವಾ ರಾಮನೋ ಅಥವಾ ಸಾಕ್ಷಾತ್
ಹರಿಹಯನೋ ಅಥವಾ ಸಾಕ್ಷಾತ್ ಅಚ್ಯುತ ವಿಷ್ಣುವೋ?
ಯಾಕೆಂದರೆ ಸಾಕ್ಷಾತ್ ಶಚೀಪತಿ ಮತ್ತು ಪಾಂಡವ
ಕಿರೀಟಿಯ ಹೊರತು ಇನ್ಯಾರೂ ಕೃದ್ಧನಾದ ನನ್ನೊಡನೆ
ಯುದ್ಧಮಾಡಲು ಶಕ್ತರಲ್ಲ."

ಅವನ ಈ ಮಾತುಗಳಿಗೆ ಫಲ್ಗುಣನು ಉತ್ತರಿಸಿದನು:

"ಇಲ್ಲ ಕರ್ಣ! ಧನುರ್ದೇವನಲ್ಲ, ಪ್ರತಾಪಿ ರಾಮನೂ ಅಲ್ಲ.
ಸರ್ವ ಶಸ್ತ್ರಗಳನ್ನು ಹಿಡಿಯುವವರಲ್ಲಿ ಶ್ರೇಷ್ಠನಾದ ನಾನು
ಓರ್ವ ಬ್ರಾಹ್ಮಣ. ಗುರುಶಾಸನದಂತೆ ನಾನು ಬ್ರಹ್ಮ ಮತ್ತು
ಪೌರಂದರ ಅಸ್ತ್ರಗಳಲ್ಲಿ ನಿಪುಣನಾಗಿದ್ದೇನೆ. ಇಂದು
ರಣದಲ್ಲಿ ನಿನನ್ನು ಗೆಲ್ಲಲು ಸಿದ್ಧನಾಗಿದ್ದೇನೆ. ವಿಚಲನಾಗು!"

ಈ ಮಾತುಗಳನ್ನು ಕೇಳಿದ ರಾಧೇಯ ಕರ್ಣನು ಯುದ್ಧದಿಂದ ಹಿಂದೆ ಸರಿದನು. ಆ ಮಹಾರಥಿಯು ಬ್ರಹ್ಮ ತೇಜಸ್ಸು ಅಜೇಯವಾದದ್ದು ಎಂದು ತಿಳಿದಿದ್ದನು.

ಅದೇ ಸ್ಥಳದಲ್ಲಿ ಶಲ್ಯ ಮತ್ತು ವೃಕೋದರರ ನಡುವೆ ಯುದ್ಧವು ನಡೆಯಿತು, ಇಬ್ಬರೂ ಬಲಶಾಲಿಗಳಾಗಿದ್ದು ಒಂದೇ ರೀತಿಯ ಮದ,

ಸ್ಪರ್ಧಾಭಾವ ಮತ್ತು ಬಲಗಳನ್ನು ಹೊಂದಿದ್ದರು. ಮದಿಸಿದ ಮಹಾಗಜಗಳಂತೆ ಅನ್ಯೋನ್ಯರನ್ನು ಕೂಗಿ ಕರೆಯುತ್ತಿದ್ದರು, ಮತ್ತು ಪರಸ್ಪರರನ್ನು ಮುಷ್ಠಿ ಮತ್ತು ತೊಡೆಗಳಿಂದ ಹೊಡೆಯುತ್ತಿದ್ದರು. ಸ್ವಲ್ಪ ಸಮಯ ಅವರೀರ್ವರೂ ಪರಸ್ಪರರನ್ನು ಹಿಡಿದು ರಣರಂಗದ ಸುತ್ತ ಹಿಡಿದು ಎಳೆದಾಡಿದರು. ಆಗ ಬಲಶಾಲಿಗಳಲ್ಲಿ ಶ್ರೇಷ್ಠ ಭೀಮನು ತನ್ನ ಬಾಹುಗಳಿಂದ ಶಲ್ಯನನ್ನು ಮೇಲಕ್ಕೆ ಎತ್ತಿ ನೆಲದ ಮೇಲೆ ಹೊತ್ತು ಹಾಕಿದನು. ಬ್ರಾಹ್ಮಣರು ನಕ್ಕರು. ಆಗ ಪುರುಷರ್ಷಭ ಬಲಶಾಲಿಗಳಲ್ಲಿಯೇ ಬಲಶಾಲಿ ಭೀಮಸೇನನು ನೆಲದ ಮೇಲೆ ಬಿದ್ದಿದ್ದ ಶಲ್ಯನನ್ನು ಕೊಲ್ಲದೇ ಒಂದು ಪವಾಡವನ್ನೇ ಮಾಡಿದನು. ಭೀಮಸೇನನು ಶಲ್ಯನನ್ನು ಕೆಳಗುರುಳಿಸಿದಾಗ ಮತ್ತು ಕರ್ಣನು ಹಿಂಜರಿದಾಗ, ಅಲ್ಲಿದ್ದ ಎಲ್ಲ ರಾಜರುಗಳೂ ಹಿಂಜರಿಯುತ್ತಾ ವೃಕೋದರನ ಸುತ್ತುವರೆದರು.

> “ಸಾಧು ಬ್ರಾಹ್ಮಣರ್ಷಭರೇ! ಅವರು ಎಲ್ಲಿ ಹುಟ್ಟಿದ್ದರು ಮತ್ತು ಎಲ್ಲಿ ವಾಸಿಸುತ್ತಿದ್ದಾರೆ ಎನ್ನುವುದನ್ನು ಕೇಳಿ ತಿಳಿಯೋಣ!”

ಎಂದು ಅವರೆಲ್ಲರೂ ಹೇಳುತ್ತಿದ್ದರು.

> “ರಾಮ ಅಥವಾ ದ್ರೋಣ ಅಥವಾ ಶಾರದ್ವತ ಕೃಪ ಅಥವಾ ದೇವಕೀಪುತ್ರ ಕೃಷ್ಣ ಅಥವಾ ಪರಂತಪ ಫಲ್ಗುಣನನ್ನು ಬಿಟ್ಟು ಬೇರೆ ಯಾರುತಾನೆ ರಣರಂಗದಲ್ಲಿ

ರಾಧಾಸುತ ಕರ್ಣನೊಂದಿಗೆ ಯುದ್ಧಮಾಡಲು ಶಕ್ತರು? ಅದೇರೀತಿ ದುರ್ಯೋಧನ ಅಥವಾ ವೀರ ಬಲದೇವ ಅಥವಾ ಪಾಂಡವ ವೃಕೋದರನ ಹೊರತಾಗಿ ಬೇರೆ ಯಾರು ರಣರಂದದಲ್ಲಿ ಬಲವಂತರಲ್ಲಿಯೇ ಶ್ರೇಷ್ಠ ಮದ್ರರಾಜ ಶಲ್ಯನನ್ನು ಎದುರಿಸಲು ಶಕ್ತರು? ಬ್ರಾಹ್ಮಣರೂ ಸೇರಿರುವ ಈ ಯುದ್ಧವನ್ನು ನಾವು ನಿಲ್ಲಿಸೋಣ ಮತ್ತು ಅವರು ಯಾರೆಂದು ತಿಳಿದು ಕೊಂಡ ನಂತರ ಪುನಃ ಯುದ್ಧ ಮಾಡೋಣ.”

ಭೀಮನ ಆ ಕೃತ್ಯವನ್ನು ನೋಡಿದ ಕೃಷ್ಣನು ಅವರು ಕುಂತೀಪುತ್ರರೇ ಇರಬೇಕೆಂದು ಶಂಕಿಸಿ ದ್ರೌಪದಿಯನ್ನು ಧರ್ಮಪೂರ್ವಕ ಪಡೆದಿದ್ದಾರೆ ಎಂದು ಸೂಕ್ಷ್ಮವಾಗಿ ಎಲ್ಲ ಮಹೀಪತಿಗಳನ್ನು ತಡೆಹಿಡಿದನು. ಆಗ ಯುದ್ಧವಿಶಾರದ ರಾಜಸತ್ತಮರು ಯುದ್ಧದಿಂದ ಹಿಂಜರಿದು ಎಲ್ಲರೂ ವಿಸ್ಮಿತರಾಗಿ ತಮ್ಮ ತಮ್ಮ ಪ್ರದೇಶಗಳಿಗೆ ಹಿಂದಿರುಗಿದರು. ಈ ರಂಗವು ಬ್ರಾಹ್ಮಣರಿಂದ ಸುತ್ತುವರೆಯಲ್ಪಟ್ಟಿದೆ, ಪಾಂಚಾಲಿಯು ಬ್ರಾಹ್ಮಣರಿಂದ ಆವೃತಳಾಗಿದ್ದಾಳೆ ಎಂದು ಹೇಳುತ್ತಾ ಅಲ್ಲಿ ಸೇರಿದವರೆಲ್ಲರೂ ಹಿಂದಿರುಗಿದರು. ರುರು ಮತ್ತು ಜಿನವಸ್ತ್ರಗಳನ್ನು ಧರಿಸಿದ್ದ ಬ್ರಾಹ್ಮಣರಿಂದ ಸುತ್ತುವರೆಯಲ್ಪಟ್ಟ ಭೀಮಸೇನ-ಧನಂಜಯರಿಗೆ ಅಲ್ಲಿಂದ ಹೊರಬರುವುದು ಕಷ್ಟವೇ ಆಯಿತು. ಜನರ ಮತ್ತು

ಶತ್ರುಗಳ ಭೀಡಿನಿಂದ ತಪ್ಪಿಸಿಕೊಂಡ ಆ ವೀರರು ಹಿಂಬಾಲಿಸುತ್ತಿರುವ ಕೃಷ್ಣೆಯೊಡಗೂಡಿ ವಿರಾಜಿಸಿದರು.

## ಕುಂತಿಯು ದ್ರೌಪದಿಯನ್ನು ಸಮನಾಗಿ ಹಂಚಿಕೊಳ್ಳಿ ಎಂದು ಮಕ್ಕಳಿಗೆ ಹೇಳಿದುದು

ಭಿಕ್ಷಾಸಮಯವು ಮುಗಿದು ಹೋಗಿ ತುಂಬಾ ಹೊತ್ತಾಗಿದ್ದರೂ ತನ್ನ ಪುತ್ರರು ಬಾರದೇ ಇದ್ದುದನ್ನು ನೋಡಿ ಅವರ ತಾಯಿಯು ಬಹುವಿಧ ಆಪತ್ತುಗಳ ಕುರಿತು ಚಿಂತಿಸುತ್ತಿದ್ದಳು. ಆ ಕುರುಪುಂಗವರನ್ನು ಗುರಿತಿಸಿದ ಧಾರ್ತರಾಷ್ಟ್ರರು ಅವರನ್ನು ಸಂಹರಿಸಿರಬಹುದೇ? ಅಥವಾ ದೃಢವೈರಿ ಘೋರ ಮಾಯಾವಿ ರಾಕ್ಷಸರಿಂದ ಕೊಲ್ಲಲ್ಪಟ್ಟರೇ? ಆದರೂ ಮಹಾತ್ಮ ವ್ಯಾಸನ ಅಭಿಪ್ರಾಯಕ್ಕಿಂತ ವಿಪರೀತವಾಗಲು ಸಾಧ್ಯವಿದೆಯೇ? ಈ ರೀತಿಯಾಗಿ ಪುತ್ರರ ಮೇಲಿನ ಪ್ರೀತಿಯಿಂದ ಪೃಥೆಯು ಚಿಂತಿಸತೊಡಗಿದಳು. ಆಗ ಅಪರಾಹ್ನಕ್ಕಿಂತ ತುಂಬಾ ಸಮಯದ ನಂತರ ಮೋಡಗಳಿಂದ ಆವೃತ ಸೂರ್ಯನು ಹೇಗೋ ಹಾಗೆ ಬ್ರಾಹ್ಮಣರಿಂದ ಸುತ್ತುವರೆಯಲ್ಪಟ್ಟ ಜಿಷ್ಣುವು ಬ್ರಹ್ಮಪುರಸ್ಕೃತನಾಗಿ ಹೊರಬಂದನು.

ಮಹಾನುಭಾವ ನರವ್ಯಾಘ್ರ ಪಾರ್ಥರೀರ್ವರು ಕುಂಬಾರನ ಮನೆಯನ್ನು ತಲುಪಿ ಅಲ್ಲಿ ಪೃಥೆಯನ್ನು ಕಂಡು ಪರಮಪ್ರತೀತರಾಗಿ ಯಾಜ್ಞಸೇನಿಯ ಕುರಿತು ನಾವು ತಂದಿರುವ ಭಿಕ್ಷೆಯನ್ನು ನೋಡು

ಎಂದು ಹೇಳಿದರು. ಮನೆಯೊಳಗಿದ್ದ ಅವಳು ತನ್ನ ಪುತ್ರರನ್ನು ನೋಡದೇ ಹೇಳಿದಳು:

> "ನೀವೆಲ್ಲರೂ ಅದನ್ನು ಸಮವಾಗಿ ಹಂಚಿಕೊಳ್ಳಿ!"

ಎಂದಳು. ನಂತರ ಕುಂತಿಯು ಆ ಕನ್ಯೆಯನ್ನು ನೋಡಿ

> "ನಾನು ಎಂಥಹ ಕಷ್ಟಕರ ಮಾತುಗಳನ್ನಾಡಿದೆ!"

ಎಂದಳು. ಅಧರ್ಮಭೀತಳಾಗಿ ವಿಲಜ್ಜಮಾನಳಾದ ಆ ಕುಂತಿಯು ಪರಮಪ್ರತೀತೆ ಯಾಜ್ಞಸೇನಿಯ ಕೈಗಳನ್ನು ಹಿಡಿದು ಒಳ ಹೋಗಿ ಯುಧಿಷ್ಠಿರನಲ್ಲಿ ಈ ಮಾತುಗಳನ್ನಾಡಿದಳು:

> "ನಿನ್ನ ತಮ್ಮಂದಿರಿಬ್ಬರು ರಾಜ ದ್ರುಪದನ ಈ ಮಗಳನ್ನು ನನಗೊಪ್ಪಿಸಿದರು. ಪುತ್ರ! ಯಾವಾಗಲೂ ನಾನು ಹೇಳುವಂತೆ ಈ ಬಾರಿಯೂ ಪ್ರಮಾದದಿಂದ ಅದನ್ನು ನೀವೆಲ್ಲರೂ ಸಮನಾಗಿ ಹಂಚಿಕೊಳ್ಳಿ ಎಂದುಬಿಟ್ಟೆ! ನಾನು ಹೇಳಿದ್ದುದು ಸುಳ್ಳಾಗದ ಹಾಗೆ ಮತ್ತು ಪಾಂಚಾಲರಾಜನ ಸುತೆಯೂ ಕೂಡ ಈ ಹಿಂದೆ ಯಾರೂ ಮಾಡಿರದ ಅಧರ್ಮವನ್ನು ಮಾಡದಹಾಗೆ ಹೇಗೆ ಮಾಡಬಹುದು ಹೇಳು ಕುರುಶ್ರೇಷ್ಠ!"

ಮುಹೂರ್ತಮಾತ್ರ ಯೋಚನೆಮಾಡಿ ಉತ್ತಮೌಜಸ ರಾಜ ಯುಧಿಷ್ಠಿರನು ತಾಯಿ ಕುಂತಿಗೆ ಸಮಾಧಾನ ಮಾಡುತ್ತಾ

ಕುರುಪ್ರವೀರ ಧನಂಜಯನನ್ನುದ್ದೇಶಿಸಿ ಈ ಮಾತುಗಳನ್ನು ಹೇಳಿದನು:

“ಪಾಂಡವ! ಯಾಜ್ಞಸೇನಿಯು ನಿನ್ನಿಂದ ಗೆದ್ದವಳು ಮತ್ತು ರಾಜಪುತ್ರಿಯನ್ನು ನೀನೇ ತೃಪ್ತಿಗೊಳಿಸಬೇಕು. ಅಗ್ನಿಯನ್ನು ಪ್ರಜ್ವಲಿಸಿ ಹವಿಸ್ಸನ್ನು ನೀಡಿ ವಿಧಿವತ್ತಾಗಿ ಅವಳ ಪಾಣಿಗ್ರಹಣ ಮಾಡಿಕೋ!”

ಅರ್ಜುನನು ಹೇಳಿದನು:

“ನರೇಂದ್ರ! ನಾನು ಅಧರ್ಮದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಡ! ಬೇರೆಯವರು ಸ್ವೀಕರಿಸುವ ಧರ್ಮವಿದಲ್ಲ. ನೀನೇ ಮೊದಲು ಮದುವೆಯಾಗಬೇಕು. ನಂತರ ಅಚಿಂತ್ಯಕರ್ಮಿ ಮಹಾಬಾಹು ಬೀಮ. ನಂತರ ನಾನು, ನನ್ನ ನಂತರ ನಕುಲ ಮತ್ತು ನಮ್ಮೆಲ್ಲರ ನಂತರ ಮಾದ್ರೀಸುತ ಸಹದೇವ. ವೃಕೋದರ, ನಾನು ಮತ್ತು ಅವಳಿಗಳು ಎಲ್ಲರೂ ಈ ಕನ್ಯೆಯು ನಿನಗೇ ಸೇರಬೇಕು ಎಂದು ಅಂದುಕೊಂಡಿದ್ದೇವೆ. ಈ ಪರಿಸ್ಥಿತಿಯಲ್ಲಿ ಏನನ್ನು ಮಾಡಿದರೆ ಒಳ್ಳೆಯದಾಗುವುದು, ಯಾವುದು ನಮಗೆ ಧರ್ಮ ಮತ್ತು ಯಶಸ್ಸನ್ನು ತರುವುದು ಮತ್ತು ಪಾಂಚಾಲರಾಜನಿಗೆ ಯಾವುದು ಪ್ರಿಯವಾದುದು ಎನ್ನುವುದರ ಬಗ್ಗೆ ಯೋಚಿಸು. ನಮಗೆ ಹೇಳು, ನಾವೆಲ್ಲ

ನಿನ್ನ ವಶದಲ್ಲಿದ್ದೇವೆ.”

ಎಲ್ಲರೂ ಅಲ್ಲಿ ನಿಂತಿದ್ದ ಯಶಸ್ವಿನೀ ಕೃಷ್ಣೆಯನ್ನು ನೋಡುತ್ತಾ ತಮ್ಮ ತಮ್ಮ ಹೃದಯದಲ್ಲಿ ಅವಳನ್ನು ಆರಾಧಿಸುತ್ತಾ ಅನ್ಯೋನ್ಯರನ್ನು ನೋಡಿದರು. ಅಮಿತ ತೇಜಸ್ವಿಗಳಾದ ಎಲ್ಲರೂ ಆ ದ್ರೌಪದಿಯನ್ನು ನೋಡುತ್ತಿರಲು ಅವರ ಮನದಲ್ಲಿ ಅವಳ ಮೇಲಿರುವ ಪ್ರೀತಿಯು ಅವರ ಇಂದ್ರಿಯಗಳನ್ನು ಕಡೆಯುತ್ತಿರಲು ಅವರ ಮನೋಭಾವಗಳು ಗೋಚರವಾದವು. ಸ್ವಯಂ ವಿಧಾತನಿಂದ ವಿಹಿತೆ ಆ ಪಾಂಚಾಲೆಯ ಕಾಮ್ಯಕ ರೂಪವು ಅನ್ಯರ ರೂಪಕ್ಕಿಂತ ಅಧಿಕವಾಗಿತ್ತು ಮತ್ತು ಸರ್ವಭೂತ ಮನೋಹರವಾಗಿದ್ದಿತು. ಅವರೆಲ್ಲರ ಭಾವನೆಗಳನ್ನು ತಿಳಿದ, ದ್ವೈಪಾಯನನ ಅದ್ಭುತವಚನಗಳನ್ನು ಸ್ಮರಿಸಿದ ನರರ್ಷಭ ಕುಂತೀಪುತ್ರ ಯುಧಿಷ್ಠಿರ ರಾಜನು ತಮ್ಮಲ್ಲಿಯೇ ಭಿರುಕುಂಟಾಗಬಹುದೆಂಬ ಭಯದಿಂದ ಅವರೆಲ್ಲರಿಗೂ:

“ಶುಭೆ ದ್ರೌಪದಿಯು ನಮ್ಮೆಲ್ಲರ ಭಾರ್ಯೆಯಾಗುತ್ತಾಳೆ!”

ಎಂದನು. ಜ್ಯೇಷ್ಠ ಪಾಂಡು ಅಣ್ಣನ ಈ ಮಾತುಗಳನ್ನು ಕೇಳಿ ಎಲ್ಲರೂ ಯೋಚಿಸತೊಡಗಿದರು. ಅದರ ಅರ್ಥವೇನೆಂದು ಮನಸ್ಸಿನಲ್ಲಿಯೇ ಚಿಂತಿಸುತ್ತಾ ಆ ಅಮಿತ ತೇಜಸರು ಅಲ್ಲಿಯೇ ಕುಳಿತುಕೊಂಡರು.

## ಕೃಷ್ಣ-ಬಲರಾಮರ ಮತ್ತು ಪಾಂಡವರ ಮೊದಲ ಭೇಟಿ

ಅಷ್ಟರಲ್ಲಿಯೇ ಅವರು ಕುರುಪ್ರವೀಣರೇ ಇರಬೇಕೆಂದು ಶಂಕಿಸಿದ



ವೃಷ್ಣಿಪ್ರವೀರನು ರೌಹಿಣೇಯನ ಜೊತೆಗೊಂಡು ಪುರುಷಪ್ರವೀರರು ವಸತಿಮಾಡಿಕೊಂಡಿದ್ದ ಆ ಕುಂಬಾರನ ಮನೆಗೆ ಬಂದನು. ಅಲ್ಲಿ ಕುಳಿತಿದ್ದ ದೀರ್ಘಬಾಹು ಪೃಥು ಮತ್ತು ಆ ಅಜಾತಶತ್ರುವನ್ನು ಸುತ್ತುವರೆದು ಕುಳಿತುಕೊಂಡು ಅಗ್ನಿಯಂತೆ ಬೆಳಗುತ್ತಿದ್ದವರನ್ನು ರೌಹಿಣೇಯನನ್ನೂ ಕೂಡಿ ಕೃಷ್ಣನು ನೋಡಿದನು. ಅಲ್ಲಿಗೆ ಆಗಮಿಸಿದ ವಾಸುದೇವನು ಧರ್ಮಭೃತರಲ್ಲಿ ವರಿಷ್ಠ ಕುಂತೀಸುತನಿಗೆ

“ನಾನು ಕೃಷ್ಣ!”

ಎಂದು ಹೇಳಿ ಆ ಅಜಮೀಡ ರಾಜ ಯುಧಿಷ್ಠಿರನ ಪಾದಗಳನ್ನು ಮುಟ್ಟಿದನು. ಕೃಷ್ಣನಂತೆ ರೌಹಿಣೇಯನೂ ಮಾಡಿದನು ಮತ್ತು ಕುರುಗಳು ಅವರನ್ನು ಸಂತೋಷದಿಂದ ಸ್ವಾಗತಿಸಿದರು. ಅನಂತರ ಆ ಯದುಪ್ರವೀರರು ತಮ್ಮ ತಂದೆಯ ತಂಗಿಯ ಪಾದಗಳಿಗೆ ನಮಸ್ಕರಿಸಿದರು. ಕುಶಲ ಪ್ರಶ್ನೆಯನ್ನು ಕೇಳಿಯಾದ ನಂತರ ಕುರುಪ್ರವೀರ ಅಜಾತಶತ್ರುವು ಕೃಷ್ಣನಿಗೆ ಕೇಳಿದನು:

“ವಾಸುದೇವ! ಗೌಪ್ಯವಾಗಿ ವಾಸಿಸುತ್ತಿರುವ ನಮ್ಮೆಲ್ಲರನ್ನೂ ನೀನು ಹೇಗೆ ಹುಡುಕಿ ಗುರುತಿಸಿದೆ?”

ಆಗ ವಾಸುದೇವನು ನಗುತ್ತಾ ಉತ್ತರಿಸಿದನು:

“ರಾಜನ್! ಗೂಢವಾಗಿದ್ದರೂ ಅಗ್ನಿಯು ಹೊರಗೆ ಕಂಡೇ ಕಾಣಿಸಿಕೊಳ್ಳುತ್ತದೆ. ಪಾಂಡವನನ್ನು ಬಿಟ್ಟು ಮನುಷ್ಯರಲ್ಲೇ ಬೇರೆ ಯಾರು ತಾನೆ ಅಂತಹ ವಿಕ್ರಮವನ್ನು ಮಾಡಿ ತೋರಿಸಿಯಾರು? ಶತ್ರುಸಾಹರಾದ ನೀವೆಲ್ಲ ಪಾಂಡವರೂ ಆ ಬೆಂಕಿಯಿಂದ ತಪ್ಪಿಸಿಕೊಂಡಿರೆಂಬುದು ಒಂದು ಒಳ್ಳೆಯ ವಿಷಯವೇ ಆಗಿದೆ. ಪಾಪಿ ಧೃತರಾಷ್ಟ್ರನ ಮಗನ ಮತ್ತು ಅವನ ಅಮಾತ್ಯನ ಸಂಚು ಯಶಸ್ವಿಯಾಗಲಿಲ್ಲ ಎನ್ನುವುದೂ ಒಳ್ಳೆಯದಾಯಿತು. ನಿಮಗೆಲ್ಲ ಮಂಗಳವಾಗಲಿ! ಗುಹೆಯಲ್ಲಿ

ಅಡಗಿದ್ದು ಕಿಚ್ಚಿತ್ತ ಬೆಂಕಿಯಂತೆ ವೃದ್ಧಿಯಾಗಿದ್ದೀರಿ. ಪಾರ್ಥಿವರಲ್ಲಿ ಯಾರಾದರೂ ನಿಮ್ಮನ್ನು ನೋಡಿ ಗುರುತಿಸಿಯಾರು. ಆದುದರಿಂದ ನಾವು ಇಲ್ಲಿಂದ ತೆರಳುತ್ತೇವೆ.”

ಪಾಂಡವರಿಂದ ಬೀಳ್ಕೊಂಡ ಆ ಅವ್ಯಯಶ್ರೀಯು ಬಲದೇವನ ಸಹಿತ ಶೀಘ್ರವಾಗಿ ಅಲ್ಲಿಂದ ಹೊರಟನು.

## ಧೃಷ್ಟದ್ಯುಮ್ನನು ಕುಂಬಾರನ ಮನೆಯಲ್ಲಿ ಅಡಗಿ ಅಲ್ಲಿ ನಡೆದುದನ್ನು ನೋಡಿ ದ್ರುಪದನಿಗೆ ನಿವೇದಿಸಿದುದು

ಕುಂಬಾರನ ಮನೆಗೆ ಹೋಗುವಾಗ ಕುರುನಂದನರನ್ನು ಪಾಂಚಾಲ್ಯ ಧೃಷ್ಟದ್ಯುಮ್ನನು ಹಿಂಬಾಲಿಸಿದ್ದನು. ಅವನು ತನ್ನ ಜನರನ್ನು ಅಡಗಿ ಕುಳಿತುಕೊಳ್ಳುವಂತೆ ಮಾಡಿ ಸ್ವಯಂ ಆ ಕುಂಬಾರನ ಮನೆಯ ಹತ್ತಿರದಲ್ಲಿ ಯಾರಿಗೂ ಕಾಣದಂತೆ ಅಡಗಿ ಕುಳಿತನು. ಸಾಯಂಕಾಲ ರಿಪುಪ್ರಮಥಿ ಭೀಮ, ಜಿಷ್ಣು ಮತ್ತು ಮಹಾನುಭಾವ ಅವಳಿಗಳು ಅವರ ಭಿಕ್ಷವನ್ನು ಮುಗಿಸಿ ಸಂತೋಷದಿಂದ ತಮಗೆ ದೊರೆತಿದ್ದುದೆಲ್ಲವನ್ನೂ ಯುಧಿಷ್ಠಿರನಿಗೆ ಕೊಟ್ಟರು. ಆಗ ಸಿಹಿಮಾತುಗಳನ್ನಾಡುವ ಕುಂತಿಯು ದೃಪದಾತ್ಮಜೆಯನ್ನು ಉದ್ದೇಶಿಸಿ ಹೇಳಿದಳು:

“ಭದ್ರೇ! ಇದನ್ನು ಮೊದಲು ನೀನು ತೆಗೆದುಕೋ; ದೇವರಿಗೆ,

ಮತ್ತು ವಿಪ್ರರಿಗೆ ಭಿಕ್ಷವನ್ನು ಕೊಡು. ಇಲ್ಲಿ ಸುತ್ತಮುತ್ತು ಇರುವ ಮನುಷ್ಯರಲ್ಲಿ ಅನ್ನ ಬೇಕೆನ್ನುವವರಿಗೆ ಸ್ವಲ್ಪ ಕೊಡು; ಅದರಲ್ಲಿ ಉಳಿದಿರುವುದನ್ನು ಎರಡು ಭಾಗಗಳಾಗಿ ಮಾಡು - ಅರ್ಧ ಭಾಗ ಆ ನಾಲ್ವರಿಗೆ, ನನಗೆ ಮತ್ತು ನಿನಗೆ. ಭದ್ರೇ! ಇನ್ನೊಂದು ಅರ್ಧವನ್ನು ಮತ್ತರ್ಷಭತುಲ್ಯರೂಪಿ, ಶ್ಯಾಮ, ಯುವಕ, ಲೋಹದಂತ ದೇಹವನ್ನು ಹೊಂದಿರುವ ಭೀಮನಿಗೆ ಕೊಡು. ಯಾಕೆಂದರೆ ಈ ವೀರನು ಯಾವಾಗಲೂ ಹೆಚ್ಚು ತಿನ್ನುತ್ತಾನೆ."

ರಾಜಪುತ್ರಿಯು ಸಂತೋಷದಿಂದಲೇ ಸಾಧ್ವಿಯ ಆ ಮಾತುಗಳನ್ನು ಸ್ವಲ್ಪವೂ ಶಂಕಿಸದೇ ಹೇಳಿದ ಹಾಗೆಯೇ ಮಾಡಿದಳು. ಮತ್ತು ಸರ್ವರೂ ಅನ್ನವನ್ನು ಊಟಮಾಡಿದರು. ಅನಂತರ ಮಾದ್ರೀಸುತ ಸಹದೇವನು ಭೂಮಿಯಮೇಲೆ ಕುಶದ ಹಾಸಿಗೆಯನ್ನು ಹಾಸಿದನು. ಪ್ರತಿಯೊಬ್ಬರೂ ತಮ್ಮ ತಮ್ಮ ಜಿನವನ್ನು ಹಾಸಿಕೊಂಡು, ಎಲಾ ವೀರರೂ ನೆಲದ ಮೇಲೆ ಮಲಗಿದರು. ಅಗಸ್ತ್ಯಮುನಿಯು ಹರಸಿದ ದಿಕ್ಕಿನಲ್ಲಿ ಆ ಕುರುಸತ್ತಮರು ತಮ್ಮ ಶಿರವನ್ನು ಇಟ್ಟಿದ್ದರು. ಅವರ ತಲೆಗಳ ಪಕ್ಕದಲ್ಲಿ ಕುಂತಿಯು ಮಲಗಿದ್ದಳು. ಮತ್ತು ಕೃಷ್ಣೆಯು ಅವರ ಕಾಲುಗಳ ಪಕ್ಕದಲ್ಲಿ ಮಲಗಿದಳು. ಈ ರೀತಿ ಕುಶವನ್ನೇ ಕಾಲುದಿಂಬನ್ನಾಗಿ ಮಾಡಿ ಅವಳು ಪಾಂಡುಪುತ್ರರ ಸಹ ಭೂಮಿಯಮೇಲೆ ಮಲಗಿದಳು; ಅವಳಲ್ಲಿ ಸ್ವಲ್ಪವೂ ದುಃಖವಿರಲಿಲ್ಲ ಮತ್ತು ಕುರುಪುಂಗವರ ಕುರಿತು ಯಾವರೀತಿಯ ಅಸಹ್ಯವೂ

ಅನ್ನಿಸಲಿಲ್ಲ. ಆ ಶೂರರು ಯುದ್ಧ, ದಿವ್ಯಾಸ್ತ್ರಗಳು, ರಥಗಳು, ಆನೆಗಳು, ಖಡ್ಗಗಳು, ಗದೆಗಳು ಮತ್ತು ಪರಶುಗಳ ಸಂಬಂದಿಸಿದ ವಿಚಿತ್ರ ಕಥೆಗಳನ್ನು ಕಟ್ಟಲು ಪ್ರಾರಂಭಿಸಿದರು. ಪಾಂಚಾಲರಾಜ ಸುತನು ಅವರು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿರುವ ಕಥೆಗಳನ್ನು ಕೇಳಿದನು; ಮತ್ತು ಅವನ ಜನರೆಲ್ಲರೂ ಕೃಷ್ಣೆಯು ನಿಷಣ್ಣಳಾಗಿ ಅಲ್ಲಿ ಹೇಗೆ ಮಲಗಿಕೊಂದಿದ್ದಾಳೆ ಎನ್ನುವುದನ್ನು ನೋಡಿದರು.

ರಾಜಪುತ್ರ ಧೃಷ್ಟದ್ಯುಮ್ನನು ರಾತ್ರಿಯಲ್ಲಿ ನಡೆದುದೆಲ್ಲವನ್ನೂ ರಾಜ ದ್ರುಪದನಿಗೆ ಹೇಳಬೇಕೆಂದು ಅಲ್ಲಿಂದ ತ್ವರಿತವಾಗಿ ಹೊರಟನು. ಮಹಾತ್ಮ ಪಾಂಚಾಲರಾಜನು ಪಾಂಡವರನ್ನು ಕಾಣದೇ ವಿಷಣ್ಣನಾಗಿ ಧೃಷ್ಟದ್ಯುಮ್ನನನ್ನು ಕೇಳಿದನು:

> "ಅವಳು ಎಲ್ಲಿಗೆ ಹೋದಳು? ಕೃಷ್ಣೆಯನ್ನು ಯಾರು ತೆಗೆದುಕೊಂಡು ಹೋದರು? ಹೀನ ಜನ ಶೂದ್ರರವಳಾಗಿದ್ದಾಳಾ? ಅಥವಾ ನನಗೆ ತೆರಿಗೆಯನ್ನು ಕೊಡುವ ವೈಶ್ಯರವಳಾಗಿದ್ದಾಳಾ? ನನ್ನ ತಲೆಯ ಮೇಲೆ ಯಾರಾದರೂ ಕಾಲಿಟ್ಟಹಾಗಾಯಿತೇ? ಅಥವಾ ಸ್ಮಶಾನದಲ್ಲಿ ಮಾಲೆ ಬಿದ್ದಹಾಗೆ ಆಯಿತೇ? ಅಥವಾ ಸವರ್ಣ ಪ್ರವರ ಮನುಷ್ಯನೋ? ಅಥವಾ ಅಕಸ್ಮಾತ್ ಉದ್ರಿಕ್ತವರ್ಣದವರು ಯಾರಾದರೋ? ಅಥವಾ ಯಾರಾದರೂ ಕೃಷ್ಣೆಯನ್ನು ಕೆಡಿಸಿ ನನ್ನ ತಲೆಯ ಮೇಲೆ

ತಮ್ಮ ಎಡ ಕಾಲನ್ನು ಇತ್ತಿದ್ದಾರೆಯೋ? ಅಥವಾ ನರರ್ಷಭ ಪಾರ್ಥನ ಜೊತೆಗೂಡಿದಳು ಎಂದು ನಿಶ್ಚಿಂತೆಯಿಂದ ಇರಬಹುದೇ? ಯಾವ ಮಹಾನುಭಾವನಿಂದ ನನ್ನ ಮಗಳು ಇಂದು ಗೆಲ್ಲಲ್ಪಟ್ಟಿದ್ದಾಳೆ ಎಂಬ ನಿಜವನ್ನು ಹೇಳು. ವಿಚಿತ್ರವೀರ್ಯ ಕುರುಪ್ರವೀರನ ಪುತ್ರರು ಜೀವಂತವಿದ್ದಾರೆ ಮತ್ತು ಕಿರಿಯ ಪಾರ್ಥನು ಇಂದು ಧನುವನ್ನು ಹಿಡಿದು ಲಕ್ಷ್ಯವನ್ನು ಹೊಡೆಯಲು ಸಾದ್ಯವಿದೆಯೇ?"

ಈ ಮಾತುಗಳನ್ನು ಕೇಳಿ ಸಂತೋಷಗೊಂಡ ಸೋಮಕರ ಪ್ರಭೆ ರಾಜಪುತ್ರ ಧೃಷ್ಟದ್ಯುಮ್ನನು ತನ್ನ ತಂದೆಗೆ ಕೃಷ್ಣೆಯನ್ನು ಯಾರು ಪಡೆದರು ಮತ್ತು ಏನಾಯಿತು ಎನ್ನುವುದನ್ನು ವರದಿಮಾಡಿದನು:

"ಕೆಂಪು ಮತ್ತು ಅಗಲ ಸುಂದರ ಕಣ್ಣುಗಳ, ಕೃಷ್ಣಾಜಿನದಲ್ಲಿದ್ದೂ ದೇವಸಮಾನರೂಪಿ, ಉಗ್ರ ಧನುಸ್ಸಿಗೆ ದಾರವನ್ನು ಕಟ್ಟಿ ಗುರಿಯನ್ನು ಕೆಳಕ್ಕುರುಳಿಸಿದ ಆ ಯುವಕನು ವಜ್ರೀವನು ಸರ್ವ ದೇವರ್ಷಿ ಋಷಿಗಳಿಂದ ಸುತ್ತುವರೆಯಲ್ಪಟ್ಟು ದಿತಿಯ ಮಕ್ಕಳನ್ನು ಗಮನಿಸದೇ ಹೇಗೆ ಹೋಗುತ್ತಾನೋ ಹಾಗೆ ಅಲ್ಲಿ ನೆರೆದಿದ್ದ ಯಾರನ್ನೂ ಗಮನಿಸದೇ ಬ್ರಾಹ್ಮಣ ಹಿರಿಯರಿಂದ ಸುತ್ತುವರೆಯಲ್ಪಟ್ಟು ಪ್ರಶಂಸನೆಗೊಳ್ಳುತ್ತಾ ಅವಸರದಲ್ಲಿ ಅಲ್ಲಿಂದ ಹೊರಟುಹೋದನು. ಅದನ್ನು ಸಹಿಸಲಾಗದ ನರಾಧಿಪರು

ಕ್ರುದ್ಧರಾಗಿ ಅವನ ಮೇಲೆ ಬೀಳುತ್ತಿರಲು ಕೃಷ್ಣೆಯು ಕೆಳಗಿಳಿದಿದ್ದ ಅವನ ಜಿನದ ತುದಿಯನ್ನು ಹಿಡಿದು ನಾಗವಧುವು ನಾಗವನ್ನು ಹೇಗೋ ಹಾಗೆ ಸಂತೋಷದಿಂದ ಹಿಂಬಾಲಿಸಿದಳು. ಆಗ ಪಾರ್ಥಿವರಾಜಮಧ್ಯದಲ್ಲಿದ್ದ ಓರ್ವನು ದೊಡ್ಡದಾಗಿ ಬೆಳೆದಿದ್ದ ವೃಕ್ಷವೊಂದನ್ನು ಭೂಮಿಯಿಂದ ಕಿತ್ತು ಕೃದ್ಧ ಅಂತಕನು ಪ್ರಾಣಭೃತರ ಮೇಲೆ ಹೇಗೋ ಹಾಗೆ ಆ ಪಾರ್ಥಿವಗಣದ ಮೇಲೆ ಎರಗಿ ಪಲಾಯನಹೋಗುವಂತೆ ಮಾಡಿದನು. ಪಾರ್ಥಿವರು ನೋಡುತ್ತಿದ್ದಂತೆಯೇ ಚಂದ್ರಸೂರ್ಯರಂತೆ ಹೊಳೆಯುತ್ತಿದ್ದ ಆ ಇಬ್ಬರು ನರವ್ಯಾಘ್ರರು ಕೃಷ್ಣೆಯನ್ನು ಕರೆದುಕೊಂಡು ಪುರದ ಹೊರಗಿರುವ ಭಾರ್ಗವಕರ್ಮಶಾಲೆಗೆ ಹೊರಟುಹೋದರು. ಅಲ್ಲಿ ಅಗ್ನಿಯ ಜ್ವಾಲೆಯಂತೆ ಬೆಳಗುತ್ತಿದ್ದ, ನನ್ನ ಮತದಂತೆ ಅವರ ತಾಯಿ, ಕುಳಿತುಕೊಂಡಿದ್ದಳು. ಅವಳ ಸುತ್ತಲೂ ಕುಳಿತುಕೊಂಡ ಅಗ್ನಿಸಮಾನ ಮೂವರು ನರಪ್ರವೀರರು ಅಗ್ನಿಗಳಂತೆ ತೋರುತ್ತಿದ್ದರು. ಅವರಿಬ್ಬರೂ ಅವಳ ಪಾದಕ್ಕೆ ಅಭಿವಂದಿಸಿದರು ಮತ್ತು ಅವಳನ್ನು ಅಭಿವಂದಿಸಲು ಕೃಷ್ಣೆಗೂ ಹೇಳಿದರು. ಅಲ್ಲಿಯೇ ನಿಂತು ಕೃಷ್ಣೆಯನ್ನು ಒಪ್ಪಿಸಿ ಆ ನರವ್ಯಾಘ್ರರು ಭಿಕ್ಷೆಗೆಂದು ಹೊರಟುಹೋದರು. ಕೃಷ್ಣೆಯು ಅವರಿಂದ ಭಿಕ್ಷವನ್ನು ತೆಗೆದುಕೊಂಡು ಬಲಿಯನ್ನು

ಮಾಡಿ ಬ್ರಾಹ್ಮಣನಿಗೆ ನೀಡಿದಳು. ನಂತರ ಅದನ್ನು ಆ ವೃದ್ಧೆಗೆ ಮತ್ತು ನರಪ್ರವೀರರಿಗೆ ನೀಡಿ, ತಾನೂ ಊಟಮಾಡಿದಳು. ಅವರೆಲ್ಲರೂ ಅವರ ದರ್ಭೆ ಮತ್ತು ಜಿನಗಳನ್ನು ನೆಲದ ಮೇಲೆ ಹಾಸಿ ಅಲ್ಲಿಯೇ ಮಲಗಿಕೊಂಡರು. ಕೃಷ್ಣೆಯು ಅವರ ಚರಣಗಳ ಕಡೆಯಲ್ಲಿ ಕಾಲುದಿಂಬಾಗಿ ಮಲಗಿಕೊಂಡಳು. ನಂತರ ಅವರು ಕಾಲಮೇಘವು ಗರ್ಜಿಸುವಂತೆ ವಿಚಿತ್ರ ಮಾತುಕಥೆಗಳನ್ನಾಡಿದರು. ಆ ಮಾತುಗಳು ವೈಶ್ಯರು ಆಡುವ ಮಾತುಗಳಂತಿರಲಿಲ್ಲ. ಆ ವೀರರು ಬ್ರಾಹ್ಮಣರಂತೆಯೂ ಮಾತನಾಡಿಕೊಳ್ಳುತ್ತಿರಲಿಲ್ಲ. ಅವರು ನಿಸ್ಸಂಶಯವಾಗಿಯೂ ಕ್ಷತ್ರಿಯ ಪುಂಗವರೇ. ಯಾಕೆಂದರೆ ಅವರು ಯುದ್ಧದ ಕುರಿತು ಮಾತನಾಡುತ್ತಿದ್ದರು. ನಮ್ಮ ಆಸೆಯು ನಿಶ್ಚಯವಾಗಿಯೂ ಪೂರೈಸಿದೆ ಎನ್ನುವುದು ವ್ಯಕ್ತವಾಗಿದೆ. ಪಾರ್ಥರು ಆ ಬೆಂಕಿಯಿಂದ ತಪ್ಪಿಸಿಕೊಂಡಿದ್ದರೆಂದು ಕೇಳುತ್ತೇವೆ. ಧನುಸ್ಸನ್ನು ಬಿಗಿದು ಹೇಗೆ ಲಕ್ಷ್ಯವನ್ನು ಹೊಡೆಯಲಾಯಿತೋ, ಯೋದ್ಧನ ಶಕ್ತಿಯಿಂದ ಹೇಗೆ ಆ ಯಂತ್ರವನ್ನು ಕೆಳಗುರಿಳಿಸಲಾಯಿತೋ, ಮತ್ತು ಪರಸ್ಪರರಲ್ಲಿ ಅವರು ಹೇಗೆ ಮಾತನಾಡಿಕೊಳ್ಳುತ್ತಿದ್ದರೋ ಇವೆಲ್ಲವುಗಳೂ ಅವರು ನಿಜವಾಗಿಯೂ ಅಡಗಿರುವ ಪಾರ್ಥರೆಂದು ಸೂಚಿಸುತ್ತವೆ.”

ಆಗ ರಾಜ ದ್ರುಪದನು ಪ್ರಹೃಷ್ಟನಾಗಿ ತಕ್ಷಣವೇ ತನ್ನ ಪುರೋಹಿತನನ್ನು ಅಲ್ಲಿಗೆ ಕಳುಹಿಸಿದನು:

> "ನೀವು ಯಾರೆಂದು ನಾವು ತಿಳಿದಿದ್ದೇವೆ. ಎಲ್ಲಿಯಾದರೂ ನೀವು ಮಹಾತ್ಮ ಪಾಂಡುವಿನ ಮಕ್ಕಳಿರಬಹುದೇ? ಎಂದು ಹೋಗಿ ಕೇಳು."

ಪುರೋಹಿತನು ನೃಪತಿಯ ವಾಕ್ಯಗಳನ್ನು ತೆಗೆದುಕೊಂಡು ಹೋಗಿ ಅವರನ್ನು ಪ್ರಶಂಸಿಸಿದನು. ನೃಪತಿಯು ಹೇಗೆ ಹೇಳಿ ಕಳುಹಿಸಿದ್ದನೋ ಸಮಗ್ರ ಎಲ್ಲವನ್ನೂ ಕ್ರಮವತ್ತಾಗಿ ಹೇಳಿದನು:

> "ಅವನೀಶ್ವರ ಪಾಂಚಾಲರಾಜ ದ್ರುಪದನು ವರಾರ್ಹ ನಿಮ್ಮನ್ನು ತಿಳಿಯಲು ಬಯಸುತ್ತಾನೆ. ಲಕ್ಷ್ಯವನ್ನು ಹೊಡೆದು ಕೆಳಗುರುಳಿಸಿದವನನ್ನು ನೋಡಿದ ಅವನ ಹರ್ಷಕ್ಕೆ ಅಂತ್ಯವೇ ಕಾಣುತ್ತಿಲ್ಲ. ನಿಮ್ಮ ಹಿನ್ನೆಲೆ ಜ್ಞಾತಿಕುಲವನ್ನು ಹೇಳಿಕೊಂಡು ನಿಮ್ಮ ದ್ವೇಷಿಗಳ ತಲೆಯಮೇಲೆ ಕಾಲನ್ನಿಡಿ ಮತ್ತು ಸಹಾನುಗ ಪಾಂಚಾಲರಾಜನ ಈ ಹೃದಯವನ್ನು ಸಂತೋಷದಿಂದ ತುಂಬಿಸಿರಿ. ರಾಜ ಪಾಂಡುವು ರಾಜ ದ್ರುಪದನಿಗೆ ಪ್ರಿಯಸಖನಾಗಿದ್ದು ಅತ್ಮಸಮನಾಗಿದ್ದನು. ತನ್ನ ಈ ಮಗಳು ಆ ಕೌರವನ ಸೊಸೆಯಾಗಬೇಕೆಂಬುದೇ ದ್ರುಪದನ ಆಸೆಯಾಗಿತ್ತು. ಅನಿಂದಿತಾಂಗರೇ! ಪೃಥುದೀರ್ಘಬಾಹು ಅರ್ಜುನನೇ ಅವನ ಸುತೆಯನ್ನು

ಧರ್ಮಪೂರ್ವಕ ವಿವಾಹವಾಗಲಿ ಎಂಬ ಈ ಆಸೆಯು ರಾಜ ದ್ರುಪದನ ಹೃದಯದಲ್ಲಿ ಯಾವಾಗಲೂ ನೆಲೆಸಿತ್ತು."

ಈ ರೀತಿ ತನ್ನ ಮಾತುಗಳನ್ನು ಹೇಳಿ ವಿನೀತನಾಗಿ ನಿಂತಿದ್ದ ಪುರೋಹಿತನನ್ನು ನೋಡಿದ ರಾಜನು

"ಇವನಿಗೆ ಪಾದ್ಯ ಮತ್ತು ಅರ್ಘ್ಯಗಳನ್ನು ನೀಡು!"

ಎಂದು ಹತ್ತಿರದಲ್ಲಿದ್ದ ಭೀಮನಿಗೆ ಆಜ್ಞೆಯನ್ನಿತ್ತನು.

"ರಾಜ ದ್ರುಪದನ ಪುರೋಹಿತನು ಮಾನ್ಯನು. ಅವನಿಗೆ ಅಧಿಕ ಪೂಜೆಯನ್ನೇ ನೀಡೋಣ!"

ಭೀಮನು ಹಾಗೆಯೇ ಮಾಡಲು ಅವನೂ ಕೂಡ ಆ ಪೂಜೆಯನ್ನು ಪ್ರತಿಸಂಗ್ರಹಿಸಿದನು. ಪುರೋಹಿತನು ಸುಖೋಪವಿಷ್ಟನಾಗಲು, ಯುಧಿಷ್ಠಿರನು ಬ್ರಾಹ್ಮಣನಿಗೆ ಹೇಳಿದನು:

"ಪಾಂಚಾಲರಾಜನು ತನ್ನ ಮಗಳನ್ನು ತನ್ನ ಧರ್ಮದಂತೆ, ಇಷ್ಟವಿದ್ದು ಸಂತೋಷದಿಂದ ಕೊಟ್ಟಿದ್ದಾನೆ. ರಾಜ ದ್ರುಪದನು ಅವಳಿಗೆ ಒಂದು ಶುಲ್ಕವನ್ನು ಇಟ್ಟಿದ್ದನು ಮತ್ತು ಅದರ ಪ್ರಕಾರವೇ ಈ ವೀರನು ಅವಳನ್ನು ಗೆದ್ದಿದ್ದಾನೆ. ಅವನ ಜಾತಿ, ಜೀವನಶಿಲ್ಪ, ಕುಲ ಅಥವಾ ಗೋತ್ರದ ಕುರಿತು ಯಾವುದೇ ರೀತಿಯ ಮನಸ್ತಾಪವೂ

ಉಂಟಾಗಬಾರದು. ಕಾರ್ಮುಕವನ್ನು ಬಿಗಿದು ಲಕ್ಷ್ಯವನ್ನು ಗುರಿಯಿಟ್ಟು ಹೊಡೆದು ಈ ಮಹಾತ್ಮನು ಪಾರ್ಥಿವಸಂಘಮಧ್ಯದಲ್ಲಿ ಕೃಷ್ಣೆಯನ್ನು ಗೆದ್ದಿದ್ದಾನೆ. ಹೀಗಿರುವಾಗ ರಾಜ ಸೌಮಿಕನು ಇಂದು ಸಂತಾಪವನ್ನೂ ಅಥವಾ ಅಸುಖವನ್ನೂ ಪಡೆಯುವುದು ಸರಿಯಲ್ಲ. ಆದರೂ ರಾಜ ದ್ರುಪದನ ಬಯಕೆಯು ಪಾರ್ಥಿವನಿಗೆ ನಿಜವಾಗಿದೆ. ಬ್ರಾಹ್ಮಣ! ನನ್ನ ಅಭಿಪ್ರಾಯದಂತೆ ರೂಪವತಿ ಈ ನರೇಂದ್ರಕನ್ಯೆಯು ಅಪ್ರಾಪ್ಯಳು. ಯಾಕೆಂದರೆ ಯಾವ ಮಂದಬಲಶಾಲಿಯೂ ಆ ಧನುವನ್ನು ಆ ರೀತಿಯಲ್ಲಿ ಬಿಗಿದು ಕಟ್ಟಲು ಶಕ್ಯವಿರಲಿಲ್ಲ. ಅಥವಾ ಅಸ್ತ್ರಗಳನ್ನು ಅರಿಯದೇ ಇದ್ದವನಿಂದ ಅಥವಾ ಹೀನಜನಿಂದ ಆ ರೀತಿ ಲಕ್ಷ್ಯವನ್ನು ಬೀಳಿಸುವುದು ಶಕ್ಯವಿರಲಿಲ್ಲ. ಆದುದರಿಂದ ಇಂದು ಪಾಂಚಾಲರಾಜನಿಗೆ ತನ್ನ ಮಗಳ ಕಾರಣದಿಂದ ಯಾವುದೇ ರೀತಿಯ ದುಃಖವೂ ಆಗಬಾರದು. ಮತ್ತು ಇವನು ಆ ಚಿಹ್ನೆಯನ್ನು ಹೊಡೆದು ಕೆಳಗುರುಳಿಸಿದ ಎನ್ನುವುದನ್ನು ಭುವಿಯಲ್ಲಿರುವ ಯಾವ ಮಾನವನೂ ಬದಲಾಯಿಸಲಾರ.”

## ಮಗಳನ್ನು ಗೆದ್ದವರು ಪಾಂಡವರೇ ಎಂದು ತಿಳಿದ ದ್ರುಪದನ ಸಂತೋಷ

ಯುಧಿಷ್ಠಿರನು ಹೀಗೆ ಹೇಳಲು ಪಾಂಚಾಲರಾಜನ ಕಡೆಯಿಂದ ಎರಡನೆಯ ಇನ್ನೊಬ್ಬನು ಆತುರದಿಂದ ಬಂದು "ಭೋಜನವು ಸಿದ್ಧವಾಗಿದೆ!" ಎಂದು ನಿವೇದಿಸಿದನು. ದೂತನು ಹೇಳಿದನು:

> "ವರನ ಕಡೆಯವರಿಗಾಗಿ ರಾಜ ದ್ರುಪದನು ಔತಣವನ್ನು ಏರ್ಪಡಿಸಿದ್ದಾನೆ. ಸರ್ವಕಾರ್ಯಗಳನ್ನೂ ಪೂರೈಸಿ ನೀವು ಕೃಷ್ಣೆಯೊಡನೆ ದ್ರುಪದನ ಅರಮನೆಗೆ ಬರಬೇಕು. ತಡಮಾಡಬಾರದು. ಕಾಂಚನಪದ್ಮ ಚಿತ್ರಗಳಿಂದ ಅಲಂಕೃತ ಅಶ್ವಗಳು ಎಳೆಯುವ, ವಸುಧಾಧಿಪರಿಗೆ ಅರ್ಹ ರಥಗಳು ಇಲ್ಲಿವೆ. ನೀವೆಲ್ಲರೂ ಅವುಗಳನ್ನು ಏರಿ ಪಾಂಚಾಲರಾಜನ ನಿವೇಶನಕ್ಕೆ ಬನ್ನಿ."

ನಂತರ ಕುರುಪುಂಗವರು ಆ ವಿಶಾಲ ರಥದಲ್ಲಿ ಮುಂದೆ ಪುರೋಹಿತನನ್ನು ಕೂರಿಸಿ ತಾವೂ ಕುಳಿತುಕೊಂಡು ಹೊರಟರು. ಕುಂತಿ ಮತ್ತು ಕೃಷ್ಣೆ ಇಬ್ಬರೂ ಇನ್ನೊಂದು ರಥದಲ್ಲಿ ಒಟ್ಟಿಗೆ ಕುಳಿತರು. ಧರ್ಮರಾಜನು ಹೇಳಿದ್ದುದನ್ನು ಪುರೋಹಿತನಿಂದ ಕೇಳಿದ ನಂತರ ದ್ರುಪದನು ಕುರುಗಳನ್ನು ಗುರುತಿಸುವುದಕ್ಕಾಗಿ ಅನೇಕ ದ್ರವ್ಯಗಳನ್ನು ಒಟ್ಟುಹಾಕಿಸಿದನು. ಫಲಗಳು, ಸುಂದರವಾಗಿ ಹೆಣೆದ ಮಾಲೆಗಳು, ಚರ್ಮ, ವರ್ಮ, ಆಸನಗಳು, ಹಸುಗಳು, ಹಗ್ಗಗಳು, ಮತ್ತು ಕೃಷಿಗೆ ಸಂಬಂಧಿಸಿದ ಇತರ ದ್ರವ್ಯಗಳನ್ನು ತರಿಸಿದ್ದನು. ಶಿಲ್ಪ ಮತ್ತು ವ್ಯಾಪಾರಗಳಲ್ಲಿ ಬಳಸುವ ಅನ್ಯ ಸರ್ವ

ವಸ್ತುಗಳನ್ನೂ, ಕ್ರೀಡೆಗಳಲ್ಲಿ ಬಳಸುವ ಸರ್ವವಸ್ತುಗಳನ್ನೂ ರಾಜನು ತರಿಸಿದ್ದನು. ಹೊಳೆಯುತ್ತಿರುವ ರಥ, ಅಶ್ವ, ಕವಚಗಳು, ಮಹಾ ಖಡ್ಗಗಳು, ಚಿತ್ರಣಗಳಿಂದ ಕೂಡಿದ ರಥಾಶ್ವಗಳು, ಆರಿಸಿದ್ದ ಬಿಲ್ಲುಗಳು, ಮುಖ್ಯ ಬಾಣಗಳು, ಭಲ್ಲಗಳು, ಮತ್ತು ಕಾಂಚನಭೂಷಿತ ಶಕ್ತಿ ಮುಂತಾದವುಗಳನ್ನೂ ತರಿಸಿದ್ದನು. ಪ್ರಾಸಗಳು, ಭುಷುಂಡಗಳು, ಪರಿಘಗಳು, ಮತ್ತು ಎಲ್ಲ ತರಹದ ಸಂಗ್ರಾಮ ಸಾಮಗ್ರಿಗಳನ್ನೂ, ಹಾಗೆಯೇ ಉತ್ತಮವಾಗಿ ತಯಾರಿಸಲ್ಪಟ್ಟ ವಿವಿಧ ಶಯ್ಯಾಸನಗಳನ್ನೂ ತರಿಸಿದ್ದನು.

ಕುಂತಿಯು ಸಾಧ್ವಿ ಕೃಷ್ಣೆಯನ್ನು ಕರೆದುಕೊಂಡು ದ್ರುಪದನ ಅಂತಃಪುರವನ್ನು ಪ್ರವೇಶಿಸಿದಳು. ಅಲ್ಲಿ ಉತ್ಸುಕ ಸ್ತ್ರೀಯರು ಕೌರವರಾಜಪತ್ನಿಯ ಉಪಚಾರದಲ್ಲಿ ತೊಡಗಿದರು. ಭುಜಗೇಂದ್ರನಂತೆ ಕೆತ್ತಿದ್ದ ನೀಳ ಬಾಹುಗಳ ಎಡಭುಜಗಳನ್ನು ಜಿನದ ಉತ್ತರೀಯದಿಂದ ಮುಚ್ಚಿ ಸಿಂಹವಿಕ್ರಾಂತರಂತೆ ನಡೆದು ಬರುತ್ತಿದ್ದ ಆ ಮಹರ್ಷಭ ಪುರುಷವೀರರನ್ನು ತಾವು ಇದ್ದಲ್ಲಿಂದಲೇ ನೋಡಿದ ರಾಜ ಮತ್ತು ರಾಜನ ಸರ್ವ ಸಚಿವರೂ, ರಾಜಪುತ್ರರೂ, ಸುಹೃದಯರೂ, ಸರ್ವ ನಿಖಿಲ ಪರಿಚಾರಕರೂ ಅತೀವ ಹರ್ಷಿತರಾದರು. ಆ ನರಾಗ್ರ ವೀರರು ಅಲ್ಲಿಯ ಮಹಾ ವೈಭವವನ್ನು ನೋಡಿ ಸ್ವಲ್ಪವೂ ವಿಸ್ಮಿತರಾಗದೇ ವಿಶಂಕರಾಗಿ ಪಾದಪೀಠಗಳನ್ನು ಹೊಂದಿದ್ದ ಉತ್ತಮ ಆಸನಗಳಲ್ಲಿ

ವಯಸ್ಸಿಗನುಗುಣವಾಗಿ ಕುಳಿತುಕೊಂಡರು. ಸುಂದರ ಶುಭ್ರವಸ್ತ್ರಗಳನ್ನು ಧರಿಸಿದ ಅಡುಗೆಯವರು ತಯಾರಿಸಿದ ಪಾರ್ಥಿವರ ಭೋಜನಕ್ಕೆ ಯೋಗ್ಯ ಎಲ್ಲಾ ತರಹದ ಆಹಾರವನ್ನು ಚಿನ್ನ ಮತ್ತು ಬಂಗಾರದ ಪಾತ್ರೆಗಳಲ್ಲಿ ಸುಂದರ ಉಡುಪುಗಳನ್ನು ಧರಿಸಿದ್ದ ದಾಸ ದಾಸಿಯರು ನೀಡಿದರು. ಆ ಪುರುಷಪ್ರವೀರರು ಭೋಜನವನ್ನು ಮುಗಿಸಿ, ಮನೋಕಾಮದಂತೆ ವಿಶ್ರಾಂತಿಪಡೆದು ಅಲ್ಲಿರಿಸಿದ್ದ ಸರ್ವ ವಸ್ತುಗಳನ್ನೂ ನೋಡುತ್ತಾ ಸಾಂಗ್ರಾಮಿಕ ವಸ್ತುಗಳ ಕಡೆಗೆ ಆ ವೀರರು ನಡೆದರು. ಅದನ್ನು ನೋಡಿದ ದ್ರುಪದನ ಪುತ್ರರು, ರಾಜ ಮತ್ತು ಜೊತೆಗಿದ್ದ ಸರ್ವ ಮಂತ್ರಿಪ್ರಮುಖರೂ ಹೃಷ್ಟರಾಗಿ ಪಾರ್ಥಿವ ಪುತ್ರಪೌತ್ರ ಕುಂತೀಸುತರನ್ನು ಉಪಚರಿಸಿದರು.

ಆಗ ಆ ಮಹಾದ್ಯುತಿ ಪಾಂಚಾಲ್ಯನು ರಾಜಪುತ್ರ ಯುಧಿಷ್ಠಿರನನ್ನು ಕರೆದು ಬ್ರಾಹ್ಮಣರನ್ನು ಸಂಬೋಧಿಸುವಂತೆ ಮಾತನಾಡಿದನು. ಆ ದೀನಾತ್ಮನು ಸುವರ್ಚಸ ಕುಂತೀಪುತ್ರನಲ್ಲಿ ಕೇಳಿದನು:

> “ನಾವು ನಿಮ್ಮನ್ನು ಯಾರೆಂದು ತಿಳಿಯಬೇಕು? ಕ್ಷತ್ರಿಯರೆಂದೋ ಅಥವಾ ಬ್ರಾಹ್ಮಣರೆಂದೋ? ಅಥವಾ ಗುಣಸಂಪನ್ನಾನುತ ವೈಶ್ಯರೆಂದೋ ಅಥವಾ ಶೂದ್ರಯೋನಿಯಲ್ಲಿ ಜನಿಸಿದವರೆಂದೋ? ಅಥವಾ ಕೃಷ್ಣೆಯ ಸಂದರ್ಶನಾರ್ಥಿಗಳಾಗಿ ಸ್ವರ್ಗದಿಂದ ತಮ್ಮ

ಮಾಯೆಯಿಂದ ಬಂದಿಳಿದ ಸರ್ವತೋದಿಶ ಸಂಚರಿಸುವ ಸಿದ್ಧರೆಂದೋ? ಇದರ ಕುರಿತು ಮಹಾ ಸಂದೇಹವನ್ನು ಹೊಂದಿದ ನಮಗೆ ಸತ್ಯವನ್ನು ತಿಳಿಸು. ನಮ್ಮ ಈ ಸಂಶಯವು ದೂರವಾದ ಕೂಡಲೇ ನಮ್ಮ ಮನಸ್ಸಿಗೆ ಸಂತಸವಾಗುತ್ತದೆ. ಪರಂತಪ! ನಮ್ಮ ಭಾಗಧೇಯವು ಶುಭವೆಂದು ತೋರುವುದಿಲ್ಲವೇ? ನೀನು ನಿನ್ನ ಬಯಕೆಯಂತೆ ಸತ್ಯವನ್ನೇ ಹೇಳು. ರಾಜರಲ್ಲಿ ಯಜ್ಞ ದಾನಗಳಿಗಿಂತಲೂ ಸತ್ಯವೇ ಶೋಭಿಸುತ್ತದೆ. ಆದುದರಿಂದ ಅನೃತವನ್ನು ಹೇಳಬೇಡ. ನಿನ್ನ ಮಾತುಗಳನ್ನು ಕೇಳಿದ ನಂತರವೇ ವಿವಾಹಕರ್ಮ ವಿಧಾನಗಳನ್ನು ನಿಶ್ಚಯಿಸುತ್ತೇನೆ."

ಯುಧಿಷ್ಠಿರನು ಹೇಳಿದನು:

"ರಾಜನ್! ವಿಮನಸ್ಕನಾಗಬೇಡ. ಸಂತೋಷಗೊಳ್ಳು ಪಾಂಚಾಲ್ಯ! ನಿನ್ನ ಆಸೆಯು ನಿಸ್ಸಂಶಯವಾಗಿಯೂ ನಿಶ್ಚಿತವಾಗಿಯೂ ಸಿದ್ಧಿಯಾಗಿದೆ. ನಾವು ಕ್ಷತ್ರಿಯರೇ! ಮಹಾತ್ಮ ಪಾಂಡುವಿನ ಪುತ್ರರು. ನಾನು ಜ್ಯೇಷ್ಠ ಕೌಂತೇಯನೆಂದು ತಿಳಿ. ಇವರೀರ್ವರು ರಾಜಸನ್ನಿಧಿಯಲ್ಲಿ ನಿನ್ನ ಸುತೆಯನ್ನು ಗೆದ್ದ ಅರ್ಜುನ-ಭೀಮಸೇನರು. ಅವಳಿಗಳು ಕೃಷ್ಣೆಯು ನಿಂತಿರುವಲ್ಲಿ ಇದ್ದಾರೆ. ನಾವು

ಕ್ಷತ್ರಿಯರು. ಆದುದರಿಂದ ನಿನ್ನ ಮನಸ್ಸಿನ ದುಃಖವನ್ನು ದೂರಮಾಡು. ನಿನ್ನ ಈ ಸುತೆಯು ಪದ್ಮದಂತೆ ಒಂದು ಕೊಳದಿಂದ ಇನ್ನೊಂದು ಕೊಳಕ್ಕೆ ಹೋಗಿದ್ದಾಳೆ. ನಾನು ಹೇಳಿದ ಇವೆಲ್ಲವೂ ಸತ್ಯ. ನೀನೇ ನಮ್ಮ ಪರಮ ಪರಾಯಣ ಗುರು."

ಆಗ ರಾಜ ದ್ರುಪದನು ಹರ್ಷವ್ಯಾಕುಲಲೋಚನನಾಗಿ ಮೊದಲಿಗೆ ಯುಧಿಷ್ಠಿರನಿಗೆ ಏನು ಹೇಳಲೂ ಶಕ್ಯನಾಗಲಿಲ್ಲ. ರಾಜ ಪರಂತಪನು ತನ್ನ ಆ ಸಂತಸವನ್ನು ನಿಗ್ರಹಿಸಲು ಪ್ರಯತ್ನಿಸುತ್ತಾ ಯುಧಿಷ್ಠಿರನಿಗೆ ಅನುರೂಪ ಪ್ರತ್ಯುತ್ತರವನ್ನಿತ್ತನು. ಅವರು ಹಿಂದಿನ ಘಟನೆಯಿಂದ ಹೇಗೆ ತಪ್ಪಿಸಿಕೊಂಡರೆಂದು ಧರ್ಮಾತ್ಮನು ಕೇಳಲು, ಪಾಂಡವನು ಅವನಿಗೆ ಮೊದಲಿನಿಂದ ಎಲ್ಲವನ್ನೂ ಹೇಳಿದನು. ಕುಂತೀಪುತ್ರನ ಮಾತುಗಳನ್ನು ಕೇಳಿದ ರಾಜ ದ್ರುಪದನು ಜನೇಶ್ವರ ಧೃತರಾಷ್ಟ್ರನನ್ನು ನಿಂದಿಸಿದನು. ಶ್ರೇಷ್ಠ ಮಾತುಗಾರ ದ್ರುಪದನು ರಾಜ್ಯವನ್ನು ದೊರಕಿಸುತ್ತೇನೆಂದು ಪ್ರತಿಜ್ಞೆಯನ್ನು ಮಾಡಿ ಕುಂತೀಪುತ್ರ ಯುಧಿಷ್ಠಿರನಿಗೆ ಆಶ್ವಾಸನೆಯನ್ನಿತ್ತನು.

## ದ್ರೌಪದಿಯು ಐವರನ್ನು ವಿವಾಹವಾಗುವುದು ಧರ್ಮವೇ ಎಂಬ ಜಿಜ್ಞಾಸೆ

ನಂತರ ರಾಜನು ಕುಂತಿ, ಕೃಷ್ಣೆ, ಭೀಮಸೇನ, ಅರ್ಜುನ ಮತ್ತು ಯಮಳರನ್ನು ಮಹಾ ಭುವನಕ್ಕೆ ಕರೆಸಿಕೊಂಡನು. ಯಜ್ಞಸೇನನ

ಸತ್ಕಾರದಲ್ಲಿ ಅವರು ಅಲ್ಲಿಯೇ ಉಳಿದುಕೊಂಡರು. ವಿಶ್ವಾಸವನ್ನು ಪಡೆದುಕೊಂಡ ಅವರಲ್ಲಿ ರಾಜನು ತನ್ನ ಪುತ್ರಸಮೇತನಾಗಿ ಹೇಳಿದನು:

“ಇಂದಿನ ಈ ಪುಣ್ಯದಿನದಲ್ಲಿ ಕುರುನಂದನ ಮಹಾಬಾಹು ಅರ್ಜುನನು ವಿಧಿವತ್ತಾಗಿ ಪಾಣಿಗ್ರಹಣಗೊಂಡು ಮುಹೂರ್ತವನ್ನು ಮಾಡಬೇಕು.”

ಆದಕ್ಕೆ ರಾಜ ಧರ್ಮಪುತ್ರ ಯುಧಿಷ್ಠಿರನು ಹೇಳಿದನು:

“ವಿಶಾಂಪತೇ! ಹಾಗಿದ್ದರೆ ನಾನೂ ಕೂಡ ದಾರಸಂಬಂಧಕಾರ್ಯವನ್ನು ನೆರವೇರಿಸಿಕೊಳ್ಳಬೇಕು.”

ದ್ರುಪದನು ಹೇಳಿದನು:

“ಅಥವಾ ವಿಧಿವತ್ತಾಗಿ ನೀನು ನನ್ನ ಮಗಳ ಪಾಣಿಗ್ರಹಣ ಮಾಡಿಕೋ. ಅಥವಾ ವೀರ! ನಿನಗಿಷ್ಟವಿದ್ದವನಿಗೆ ಕೃಷ್ಣೆಯನ್ನು ನೀಡು.”

ಯುಧಿಷ್ಠಿರನು ಹೇಳಿದನು:

“ರಾಜನ್! ದ್ರೌಪದಿಯು ನಮ್ಮೆಲ್ಲರ ರಾಣಿಯಾಗುತ್ತಾಳೆ. ಹಿಂದೆ ನನ್ನ ತಾಯಿಯು ಹೀಗೆಯೇ ಅಪ್ಪಣೆಯಿತ್ತಿದ್ದಳು. ನಾನಿನ್ನೂ ಮದುವೆಯಾಗಿಲ್ಲ. ಹಾಗೆಯೇ ಪಾಂಡವ ಭೀಮಸೇನನೂ ವಿವಾಹವಾಗಿಲ್ಲ. ಪಾರ್ಥನಿಂದ ಜಯಿಸಲ್ಪಟ್ಟ ನಿನ್ನ ಈ ಮಗಳು ನಿಧಿಸಮಾನಳು.

ಯಾವುದೇ ನಿಧಿಯನ್ನು ನಾವೆಲ್ಲರೂ ಜೊತೆಯಲ್ಲಿಯೇ ಅನುಭವಿಸುತ್ತೇವೆ ಎಂದು ನಮ್ಮ ಮಧ್ಯೆ ಒಪ್ಪಂದವಾಗಿದೆ. ನಾವು ಈ ಒಪ್ಪಂದವನ್ನು ಮುರಿಯಲು ಬಯಸುವುದಿಲ್ಲ. ಕೃಷ್ಣೆಯು ಧರ್ಮವತ್ತಾಗಿ ನಮ್ಮೆಲ್ಲರ ರಾಣಿಯಾಗುತ್ತಾಳೆ. ಅವಳು ಅಗ್ನಿ ಸಮ್ಮುಖದಲ್ಲಿ ಒಬ್ಬೊಬ್ಬರಾಗಿ ನಮ್ಮೆಲ್ಲರ ಕೈ ಹಿಡಿಯುತ್ತಾಳೆ."

ದ್ರುಪದನು ಹೇಳಿದನು:

"ಕುರುನಂದನ! ಒಬ್ಬನಿಗೆ ಹಲವಾರು ರಾಣಿಯರಿರಬಹುದು ಎಂದು ಹೇಳಿದ್ದಾರೆ. ಆದರೆ ಒಬ್ಬಳಿಗೆ ಹಲವಾರು ಪತಿಯರಿರುವರೆಂದು ಎಂದೂ ಎಲ್ಲಿಯೂ ಹೇಳಿಲ್ಲ. ಧಾರ್ಮಿಕನೂ ಶುಚಿಯೂ ಆದ ನೀನು ಲೋಕವೇದವಿರುದ್ಧ ಅಧರ್ಮವನ್ನು ಎಸೆಗಬಾರದು. ಈ ರೀತಿಯ ಯೋಚನೆಯಾದರೂ ನಿನಗೆ ಎಲ್ಲಿಂದ ಬಂದಿತು?"

ಯುಧಿಷ್ಠಿರನು ಹೇಳಿದನು:

"ಮಹಾರಾಜ! ಧರ್ಮವು ಸೂಕ್ಷ್ಮ ಮತ್ತು ಅದರ ಗತಿಯು ನಮಗೆ ತಿಳಿದಿದ್ದುದಲ್ಲ. ಹಿಂದಿನವರು ನಡೆದುಕೊಂಡು ಬಂದ ದಾರಿಯನ್ನೇ ನಾವು ಹಿಂಬಾಲಿಸಿಕೊಂಡು ಹೋಗುತ್ತೇವೆ. ನನ್ನ ನಾಲಿಗೆಯು ಸುಳ್ಳನ್ನಾಡುವುದಿಲ್ಲ ಮತ್ತು ನನ್ನ ಬುದ್ಧಿಯು ಅಧರ್ಮವನ್ನು ಯೋಚಿಸುವುದಿಲ್ಲ. ನನ್ನ

ತಾಯಿಯು ಇದನ್ನೇ ಹೇಳಿದ್ದಳು ಮತ್ತು ಅದರಂತೆ ನಡೆಯುವುದೇ ನನ್ನ ಮನೋಗತ. ನಿಶ್ಚಯವಾಗಿಯೂ ಇದು ದರ್ಮ. ಏನನ್ನೂ ಯೋಚಿಸಿದೇ ಪರಿಪಾಲಿಸು. ಇದರಲ್ಲಿ ಯಾವುದೇ ರೀತಿಯ ಶಂಕೆಯು ಇಲ್ಲದಿರಲಿ."

ದ್ರುಪದನು ಹೇಳಿದನು:

"ಕೌಂತೇಯ! ನೀನು, ಕುಂತಿ ಮತ್ತು ನನ್ನ ಸುತ ಧೃಷ್ಟದ್ಯುಮ್ನ ಎಲ್ಲರೂ ಏನು ಮಾಡಬೇಕೆಂದು ಸಮಾಲೋಚನೆ ಮಾಡಿ. ನಾಳೆ ನಾವು ಅದನ್ನೇ ಕಾರ್ಯಗತಗೊಳಿಸೋಣ."

ಈ ರೀತಿ ಅವರೆಲ್ಲರೂ ಅಲ್ಲಿ ಸೇರಿ ಚರ್ಚೆಮಾಡುತ್ತಿರಲು ಅದೇ ಸಮಯದಲ್ಲಿ ಅಲ್ಲಿಗೆ ದ್ವೈಪಾಯನನು ಬಂದನು. ಮಾಹಾತ್ಮ ಕೃಷ್ಣನನ್ನು ನೋಡಿದಾಕ್ಷಣವೇ ಮಹಾಯಶ ಪಾಂಡವ ಮತ್ತು ಪಾಂಚಾಲ ಸರ್ವರೂ ಮೇಲೆದ್ದು ಪೂಜಿಸಿದರು. ಅವರೆಲ್ಲರಿಗೂ ಪ್ರತಿವಂದಿಸಿ ಕುಶಲವನ್ನು ವಿಚಾರಿಸಿದ ಮಹಾಮನನು ಶುಭ್ರ ಕಾಂಚನದ ಆಸನದಲ್ಲಿ ಕುಳಿತುಕೊಂಡನು. ಅಮಿತತೇಜಸ್ವಿ ಮಹರ್ಷಿ ದ್ವಿಪದರಲ್ಲಿ ಶ್ರೇಷ್ಠ ಕೃಷ್ಣನಿಂದ ಅನುಜ್ಞೆಯನ್ನು ಪಡೆದ ಎಲ್ಲರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಂಡರು. ಸ್ವಲ್ಪಸಮಯದ ನಂತರ ವಿಶಾಂಪತಿ ಪಾರ್ಷತನು ಮಧುರ ವಾಣಿಯಲ್ಲಿ ದ್ರೌಪದಿಯ ಕುರಿತು ಮಹಾತ್ಮನನ್ನು ಕೇಳಿದನು:

“ಒಬ್ಬ ಸ್ತ್ರೀಯು ಹಲವಾರು ಪುರುಷರ ಪತ್ನಿಯಾದರೂ ಧರ್ಮಸಂಕರವಾಗದೇ ಇರುವುದು ಹೇಗೆ ಸಾಧ್ಯ? ಭಗವನ್! ಇವೆಲ್ಲವನ್ನೂ ಯಥಾವತ್ತಾಗಿ ನಮಗೆ ಹೇಳು.”

ವ್ಯಾಸನು ಹೇಳಿದನು:

“ಧರ್ಮಕ್ಕೆ ವಿಪ್ರಲಂಭವೆನಿಸಿಕೊಂಡ, ಲೋಕವೇದಗಳಿಗೆ ವಿರೋಧವೆನಿಸುವ ಇದರ ಕುರಿತು ನೀವು ಪ್ರತಿಯೊಬ್ಬರ ಸ್ವಂತ ಅಭಿಪ್ರಾಯಗಳನ್ನು ತಿಳಿಯ ಬಯಸುತ್ತೇನೆ.”

ದ್ರುಪದನು ಹೇಳಿದನು:

“ಲೋಕವೇದ ವಿರುದ್ಧವಾದ ಇದು ಅಧರ್ಮವೆಂದು ನನ್ನ ಮತ. ದ್ವಿಜಸತ್ತಮ! ಬಹುಮಂದಿಗಳಿಗೆ ಪತ್ನಿಯು ಒಬ್ಬಳೇ ಇರುವುದಿಲ್ಲ. ಹಿಂದೆಂದೂ ಮಹಾತ್ಮರು ಯಾರೂ ಈ ಧರ್ಮವನ್ನು ಆಚರಿಸಲಿಲ್ಲ. ಒಬ್ಬನಿಗಿಂಥ ಹೆಚ್ಚು ಪತಿಯನ್ನು ಹೊಂದುವುದು ಸನಾತನ ಧರ್ಮವಲ್ಲ ಮತ್ತು ಆಚರಿಸುವಂತಿಲ್ಲ. ಆದುದರಿಂದ ನಾನು ಇದನ್ನು ನಡೆಸಿಕೊಡಬೇಕೋ ಬೇಡವೋ ಎಂದು ನಿರ್ಧರಿಸಲಾರೆ. ನನಗೆ ಇದೊಂದು ಧರ್ಮಸಂದೇಹ ಸಂದಿಗ್ಧವೆಂದು ತೋರುತ್ತದೆ.”




ಧೃಷ್ಟದ್ಯುಮ್ನನು ಹೇಳಿದನು:

"ದ್ವಿಜರ್ಷಭ! ಜ್ಯೇಷ್ಠ ಭ್ರಾತನು ತನ್ನ ತಮ್ಮನ ಭಾರ್ಯೆಯೊಂದಿಗೆ ಕೂಡಿಕೊಂಡೂ ಧರ್ಮವಂತನಾಗಿರಲು ಹೇಗೆ ಸಾಧ್ಯ? ಸೂಕ್ಷ್ಮ ಧರ್ಮದ ಗತಿಯನ್ನು ಅರ್ಥಮಾಡಿಕೊಳ್ಳಲು ಎಂದೂ ಸಾಧ್ಯವಾಗಲಾರದು. ಇದು ಧರ್ಮವೋ ಅಧರ್ಮವೋ ಎಂದು ನಿರ್ಧರಿಸುವುದು ನಮ್ಮಂಥವರಿಗೆ ಶಕ್ಯವಿಲ್ಲ. ಆದುದರಿಂದ

ಕೃಷ್ಣೆಯು ಐವರ ರಾಣಿಯಾಗಬಹುದೋ ಅಥವಾ ಇಲ್ಲವೋ ಎಂದು ನಿರ್ಧರಿಸಲು ನಮಗೆ ಸಾಧ್ಯವಾಗುತ್ತಿಲ್ಲ.”

ಯುಧಿಷ್ಠಿರನು ಹೇಳಿದನು:

“ನನ್ನ ಮಾತು ಸುಳ್ಳನ್ನಾಡುವುದಿಲ್ಲ ಮತ್ತು ನನ್ನ ಮತಿಯು ಅಧರ್ಮವನ್ನು ಯೋಚಿಸುವುದಿಲ್ಲ. ನನ್ನ ಮನಸ್ಸು ಇದನ್ನು ಪ್ರೋತ್ಸಾಹಿಸುತ್ತಿದೆ ಎಂದರೆ ಇದು ಎಂದೂ ಅಧರ್ಮವಾಗಿರಲು ಸಾಧ್ಯವಿಲ್ಲ. ಪುರಾಣಗಳಲ್ಲಿಯೂ ಕೂಡ ಜಟಿಲಾ ಎಂಬ ಹೆಸರಿನ ಗೌತಮಿಯೋರ್ವಳು ಏಳು ಋಷಿಗಳೊಡನೆ ಕೂಡಿದ್ದಳು ಎಂದು ನಾವು ಕೇಳಿದ್ದೇವೆ. ಗುರುವಿನ ವಚನವೇ ಧರ್ಮವೆಂದು ಹೇಳುತ್ತಾರೆ. ಗುರುಗಳಲ್ಲೆಲ್ಲಾ ಜನನಿಯೇ ಪರಮ ಗುರುವು. ಅವಳೇ ನಮಗೆ ಭಿಕ್ಷೆಯಂತೆ ಹಂಚಿಕೊಳ್ಳಿ ಎಂದು ಹೇಳಿದ್ದಾಳೆ. ಆದುದರಿಂದ ನಾನು ಇದನ್ನೇ ಧರ್ಮವೆಂದು ತಿಳಿಯುತ್ತೇನೆ.”

ಕುಂತಿಯು ಹೇಳಿದಳು:

“ಧರ್ಮಚಾರಿ ಯುಧಿಷ್ಠಿರನು ಹೇಳಿದ ಹಾಗೆಯೇ ನಡೆಯಿತು. ಸುಳ್ಳಿನ ಕುರಿತು ನನಗೆ ತೀವ್ರ ಭಯವಿದೆ. ಈ ಸುಳ್ಳಿನಿಂದ ನಾನು ಹೇಗೆ ಹೊರಬರಲಿ?”

ವ್ಯಾಸನು ಹೇಳಿದನು:

> “ಭದ್ರೇ! ಸುಳ್ಳಿನಿಂದ ಬಿಡುಗಡೆಯಾಗುತ್ತದೆ. ಇದೇ ಸನಾತನ ಧರ್ಮ. ಆದರೆ ನಾನು ಇದನ್ನು ನಿಮಗೆಲ್ಲರಿಗೂ ಹೇಳುವುದಿಲ್ಲ. ಈ ಸನಾತನ ಧರ್ಮವು ಏನು ಮತ್ತು ಅದು ಹೇಗೆ ಬಂದಿತು ಎನ್ನುವುದನ್ನು ಸ್ವಯಂ ಪಾಂಚಾಲನು ಮಾತ್ರ ನನ್ನಿಂದ ಕೇಳುತ್ತಾನೆ. ಕೌಂತೇಯನು ಹೇಳಿದ್ದುದೇ ಧರ್ಮ ಎನ್ನುವುದರಲ್ಲಿ ಸಂಶಯವೇ ಇಲ್ಲ.”

ಭಗವಾನ್ ಪ್ರಭು ದ್ವೈಪಾಯನ ವ್ಯಾಸನು ರಾಜನ ಕೈಗಳನ್ನು ಹಿಡಿದು ರಾಜನ ಅಂತಃಪುರವನ್ನು ಪ್ರವೇಶಿಸಿದನು. ಪಾಂಡವರು, ಕುಂತಿ, ಮತ್ತು ಪಾರ್ಷತ ಧೃಷ್ಟದ್ಯುಮ್ನನು ವಿಚೇತಸರಾಗಿ ಅವರಿಬ್ಬರ ಪ್ರತೀಕ್ಷೆಯಲ್ಲಿ ಅಲ್ಲಿಯೇ ನಿಂತುಕೊಂಡರು.

## ಉಪೇಂದ್ರರೇ ಪಾಂಡವರಾಗಿ ಜನಿಸಿದುದರ ಕಥೆ ಮತ್ತು ದ್ರೌಪದಿಯ ಪೂರ್ವಜನ್ಮ ವೃತ್ತಾಂತ

ದ್ವೈಪಾಯನನು ಮಹಾತ್ಮ ನರೇಂದ್ರನಿಗೆ ಒಬ್ಬಳಿಗೇ ಬಹುಮಂದಿ ಪತಿಗಳಾಗುವ ಧರ್ಮವು ಹೇಗೆ ಬಂದಿತೆಂದು ಹೇಳಿದನು:

> “ರಾಜನ್! ಬಹಳ ಹಿಂದೆ ದೇವತೆಗಳು ನೈಮಿಷಾರಣ್ಯದ ಸತ್ರವೊಂದರಲ್ಲಿ ಉಪಸ್ಥಿತರಿದ್ದರು. ವೈವಸ್ವತನು ಅದರಲ್ಲಿ ಋತ್ವಿಕನಾಗಿದ್ದನು. ದೀಕ್ಷೆಗೊಂಡಿದ್ದ ಆ ಸಮಯದಲ್ಲಿ

ಯಮನು ಪ್ರಜೆಗಳ್ಯಾರನ್ನೂ ಕೊಲ್ಲಲಿಲ್ಲ. ಹಾಗಾಗಿ ಕಾಲದ ಹೊಡೆತ ಮತ್ತು ಮರಣದಿಂದ ತಪ್ಪಿಸಿಕೊಂಡ ಪ್ರಜೆಗಳು ಹೆಚ್ಚಿನ ಸಂಖ್ಯೆಯಲ್ಲಿ ವರ್ಧಿಸಿದರು. ಆಗ ಶಕ್ರ, ವರುಣ, ಕುಬೇರ, ಸಾಧ್ಯರು, ರುದ್ರರು, ವಸುಗಳು, ಅಶ್ವಿನಿಯರು ಮತ್ತು ಅನ್ಯ ದೇವತೆಗಳು ಭುವನ ಪ್ರಜಾಪತಿಯ ಬಳಿ ಹೋಗಿ ಸೇರಿದರು. ಅಲ್ಲಿ ಸಮೇತರಾದ ಅವರು ಲೋಕಗುರುವಿಗೆ ಹೇಳಿದರು: "ಮನುಷ್ಯರು ವೃದ್ಧಿಯಾಗುತ್ತಿರುವುದರನ್ನು ನೋಡಿದರೆ ನಮಗೆ ತೀವ್ರ ಭಯವುಂಟಾಗಿದೆ. ಆ ಭಯದಿಂದ ನಡುಗುತ್ತಾ, ಸುಖವನ್ನರಸುತ್ತಾ ನಿನ್ನ ಶರಣರಾಗಿ ನಾವೆಲ್ಲರೂ ಬಂದಿದ್ದೇವೆ." ಆಗ ಬ್ರಹ್ಮನು ಅವರಿಗೆ ಹೇಳಿದನು: "ಅಮರರಾಗಿರುವ ನೀವೆಲ್ಲರೂ ಮನುಷ್ಯರಿಂದ ಏಕೆ ಭಯಪಡಬೇಕು? ಮರ್ತ್ಯರಿಂದ ನಿಮಗೆ ಎಂದೂ ಭಯವಾಗದಿರಲಿ." ದೇವತೆಗಳು ಹೇಳಿದರು: "ಮರ್ತ್ಯರು ಅಮರ್ತ್ಯರಾಗಿದ್ದುದರಿಂದ ನಮ್ಮಿಬ್ಬರಲ್ಲಿ ವ್ಯತ್ಯಾಸವೇ ಇಲ್ಲದಂತಾಗಿದೆ. ನಮ್ಮಿಬ್ಬರಲ್ಲಿ ವ್ಯತ್ಯಾಸವಿರಬೇಕೆಂದು ಕೇಳಿಕೊಂಡೇ ನಾವು ನಿನ್ನಲ್ಲಿಗೆ ಬಂದಿದ್ದೇವೆ." ಬ್ರಹ್ಮನು ಹೇಳಿದನು: "ವೈವಸ್ವತನು ಸತ್ರದಲ್ಲಿ ಮಗ್ನನಾಗಿದ್ದಾನೆ. ಆದುದರಿಂದಲೇ ಮನುಷ್ಯರು ಸಾಯುತ್ತಿಲ್ಲ. ಏಕಾಗ್ರಚಿತ್ತದಿಂದ ಆ ಕಾರ್ಯಗಳೆಲ್ಲವನ್ನೂ ಮುಗಿಸಿದ

ನಂತರ ಆ ಅಂತಕಾಲನು ಅವರಿದ್ದಲ್ಲಿಗೆ ಹಿಂದಿರುಗುತ್ತಾನೆ. ನಿಮ್ಮ ವೀರ್ಯಗಳಿಂದ ಪ್ರಚೋದನೆಗೊಂಡ ವೈವಸ್ವತನ ದೇಹವು ಪುಷ್ಠಿಯಾಗುತ್ತದೆ. ಆಗ ಅವನು ನರರಲ್ಲಿ ಹಿಂದಿರುಗಿ ಕಾಲವು ಅಂತ್ಯವಾಗುತ್ತದೆಯೋ ಎನ್ನುವಂತೆ ಬಹುಜನರ ನಾಶಮಾಡುತ್ತಾನೆ.” ಪೂರ್ವಜನ ದೇವವಾಕ್ಯವನ್ನು ಕೇಳಿದ ಮಹಾಬಲಿ ದೇವತೆಗಳು, ದೇವತೆಗಳು ಯಜ್ಞಮಾಡುತ್ತಿರುವ ಸ್ಥಳಕ್ಕೆ ಹೋಗಿ ಒಟ್ಟಿಗೇ ಕುಳಿತುಕೊಂಡರು. ಆಗ ಅವರು ಭಾಗೀರಥಿಯಲ್ಲಿ ತೇಲುತ್ತಿದ್ದ ಒಂದು ಪುಂಡರೀಕವನ್ನು ಕಂಡರು. ಅದನ್ನು ನೋಡಿದ ಅವರು ವಿಸ್ಮಿತರಾದರು. ಅವರಲ್ಲಿ ಶೂರ ಇಂದ್ರನು ಅಲ್ಲಿಗೆ ಹೋದನು. ಸತತ ಹರಿಯುವ ಗಂಗೆಯಲ್ಲಿ ಅವನು ಅಗ್ನಿಸಮಾನ ಓರ್ವ ಸ್ತ್ರೀಯನ್ನು ಕಂಡನು. ಜಲಾರ್ಥಿನಿಯಾದ ಅವಳು ದೇವಿ ಗಂಗೆಯಲ್ಲಿ ಇಳಿದು ನಿಂತು ಅಳುತ್ತಿದ್ದಾಗ ಅವಳ ಕಣ್ಣೀರು ನೀರಿನಲ್ಲಿ ಬಿದ್ದು ಕಾಂಚನದ ಕಮಲಗಳಾಗಿ ತೇಲುತ್ತಿದ್ದವು. ಆ ಅದ್ಭುತವನ್ನು ನೋಡಿದ ವಜ್ರಿಯು ಅವಳ ಬಳಿಬಂದು ಪ್ರಶ್ನಿಸಿದನು: “ನೀನು ಯಾರು ಮತ್ತು ಯಾವ ಕಾರಣಕ್ಕಾಗಿ ನೀನು ಅಳುತ್ತಿರುವೆ? ನಿನಗೆ ಇಷ್ಟವಾದರೆ ಸತ್ಯವೇನೆಂದು ಹೇಳು.” ಅದಕ್ಕೆ ಸ್ತ್ರೀಯು ಹೇಳಿದಳು: “ಶಕ್ರ! ನಾನು ಯಾರು ಮತ್ತು ಯಾವ ಕಾರಣಕ್ಕಾಗಿ ಮಂದಭಾಗ್ಯೆಯಾದ ನಾನು

ರೋದಿಸುತ್ತಿದ್ದೇನೆ ಎಂದು ನಿನಗೆ ತಿಳಿದಿರಲೇ ಬೇಕು. ನಾನು ಮುಂದೆ ಹೋಗುತ್ತೇನೆ. ನೀನು ನನ್ನನ್ನು ಹಿಂಬಾಲಿಸಿ ಬಾ. ನಾನು ಏಕೆ ಅಳುತ್ತಿದ್ದೇನೆ ಎನ್ನುವುದನ್ನು ನೀನೇ ನೋಡುವೆಯಂತೆ.” ಅವಳು ಮುಂದೆ ಹೋಗುತ್ತಿರಲು ಅವನು ಅವಳನ್ನು ಹಿಂಬಾಲಿಸಿದನು. ಅಲ್ಲಿಯೇ ಹತ್ತಿರದ ಪರ್ವತ ಶಿಖರದಲ್ಲಿ ಸಿಂಹಾಸನದಲ್ಲಿ ಕುಳಿತು ಯುವತಿಯರ ಜೊತೆ ಪಗಡೆಯಾಡುತ್ತಿದ್ದ ಓರ್ವ ಸುಂದರ ತರುಣನನ್ನು ಅವನು ನೋಡಿದನು. ಅವನು ಪಗಡೆಯಾಟದಲ್ಲಿ ಮಗ್ನನಾಗಿದ್ದುದನ್ನು ಕಂಡು ಸಿಟ್ಟಿಗೆದ್ದು ಹೇಳಿದನು: “ನಾನು ದೇವರಾಜನೆಂದು ತಿಳಿ. ವಿಶ್ವ ಭುವನವೆಲ್ಲ ನನ್ನ ವಶದಲ್ಲಿದೆ. ನಾನೇ ಒಡೆಯ.” ಆ ದೇವನು ಕ್ರುದ್ಧ ಶಕ್ರನನ್ನು ನೋಡಿ ನಿಧಾನವಾಗಿ ಮುಗುಳ್ನಕ್ಕು ದಿಟ್ಟಿಸಿ ನೋಡಿದನು. ಅವನ ನೋಟದಡಿಯಲ್ಲಿ ದೇವರಾಜನು ಸಂಸ್ತಂಭಿತನಾಗಿ ಸ್ಥಾಣುವಿನಂತೆ ಅಲ್ಲಿಯೇ ನಿಂತು ಬಿಟ್ಟನು. ಕ್ರೀಡೆಯಲ್ಲಿ ಉತ್ಸಾಹವನ್ನು ಕಳೆದುಕೊಂಡ ಅವನು ರೋದಿಸುತ್ತಿರುವ ದೇವಿಯಲ್ಲಿ ಹೇಳಿದನು: “ಅವನನ್ನು ನನ್ನ ಹತ್ತಿರ ಕರೆದುಕೊಂಡು ಬಾ. ಅವನು ತನ್ನ ದರ್ಪದಿಂದ ಇನ್ನೂ ಹೆಚ್ಚು ಆವೇಶಗೊಳ್ಳದ ಹಾಗೆ ನೋಡಿಕೊಳ್ಳುತ್ತೇನೆ.” ಅವಳ ಸ್ಪರ್ಷಮಾತ್ರದಿಂದಲೇ ಶಕ್ರನು ತನ್ನ ಅಂಗಾಂಗಗಳು ಶಕ್ತಿಯನ್ನೇ ಕಳೆದುಕೊಂಡಂತಾಗಿ ಧರಣಿಯಮೇಲೆ ಕುಸಿದು

ಬಿದ್ದನು. ಉಗ್ರತೇಜಸ್ವಿ ಆ ಭಗವಾನನು ಅವನಿಗೆ ಹೇಳಿದನು: “ಶಕ್ರ! ಇನ್ನು ಎಂದೂ ಪುನಃ ಹೀಗೆ ಮಾಡಬೇಡ! ಬಲ ಮತ್ತು ವೀರ್ಯದಲ್ಲಿ ಅಪ್ರಮೇಯ ನೀನು ಈ ಮಹಾದ್ರಿರಾಜನನ್ನು ತಳ್ಳಿ ಉರುಳಿಸು. ಉರುಳಿಸಿದ ನಂತರ ಅದರ ಮಧ್ಯವನ್ನು ಪ್ರವೇಶಿಸು. ಅಲ್ಲಿ ನಿನ್ನಂತೆ ಸೂರ್ಯಭಾಸ ಇತರರನ್ನು ಕಾಣುತ್ತೀಯೆ.” ಮಹಾಗಿರಿಯ ಶಿಖರವನ್ನು ಉರುಳಿಸಿ, ಅಲ್ಲಿ ತನ್ನ ಕಾಂತಿಯನ್ನು ಹೋಲುವ ಇತರರನ್ನು ನೋಡಿದನು. ಅದನ್ನು ನೋಡಿ ಅವನು ನಾನೂ ಇವರ ಹಾಗೆ ಆಗಿಬಿಡುತ್ತೇನೆಯೇ? ಎಂದು ದುಃಖಿತನಾದನು. ಆಗ ಕುಪಿತ ದೇವ ಗಿರೀಶನು ಕಣ್ಣುಗಳನ್ನು ತಿರುಗಿಸುತ್ತಾ ವಜ್ರಪಾಣಿಗೆ ಹೇಳಿದನು: “ಶತಕ್ರತೋ! ನಿನ್ನ ಹುಡುಗಾಟಿಕೆಯಲ್ಲಿ ನನ್ನನ್ನು ಅವಮಾನಿಸಿದ್ದುದರಿಂದ ನೀನೂ ಈ ಬಿಲವನ್ನು ಪ್ರವೇಶಿಸು!” ವಿಭುವು ಈ ರೀತಿ ಹೇಳಿದ ನಂತರ ದೇವರಾಜನು ಆ ಶಾಪದಿಂದ ನಡುಗಿದನು. ಅವನ ಅಂಗಾಂಗಗಳು ಪರ್ವತ ಶಿಖರದ ಮೇಲಿದ್ದ ಅಶ್ವತ್ಥ ವೃಕ್ಷದ ಎಲೆಗಳು ಭಿರುಗಾಳಿಗೆ ಸಿಲುಕಿದರೆ ಹೇಗೋ ಹಾಗೆ ತತ್ತರಿಸಿದವು. ಆಗ ಅವನು ಕೈಜೋಡಿಸಿ, ಮುಖವನ್ನು ಕೆಳಮಾಡಿ, ಒಮ್ಮಿಂದೊಮ್ಮೆಗೇ ಬಂದ ಮಾತುಗಳನ್ನು ಕೇಳಿ ಕಂಪಿಸುತ್ತಾ ಆ ಬಹುರೂಪಿ

ಉಗ್ರನಿಗೆ ಹೇಳಿದನು: “ಭಗವನ್! ಇಂದು ಇದರಿಂದ ಬಿಡುಗಡೆಯನ್ನು ತೋರಿಸು!” ಆಗ ಆ ಉಗ್ರಧನ್ವಿಯು ನಗುತ್ತಾ ಹೇಳಿದನು: “ಹೀಗೆ ನಡೆದುಕೊಳ್ಳುವವರಿಗೆ ಇಲ್ಲಿಂದ ಬಿಡುಗಡೆಯೇ ಇಲ್ಲ. ಮುಂದೆ ಇವರೂ ಕೂಡ ನಿನ್ನಂತೆ ಆಗುತ್ತಾರೆ. ಆದುದರಿಂದ ಈ ಗುಹೆಯನ್ನು ಪ್ರವೇಶಿಸಿ ಅಲ್ಲಿಯೇ ಇರು. ನಿಮಗೆಲ್ಲ ಇದರಿಂದ ಬಿಡುಗಡೆ ದೊರೆಯುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ನೀವೆಲ್ಲರೂ ಮನುಷ್ಯ ಯೋನಿಯನ್ನು ಪ್ರವೇಶಿಸಿ, ಅಲ್ಲಿ ಬಹಳಷ್ಟು ಕಷ್ಟಕರ್ಮಗಳನ್ನು ಅನುಭವಿಸಿ, ಬೇರೆ ಹಲವಾರು ಜನರನ್ನು ಸಂಹರಿಸಿ, ಪುನಃ ಇಂದ್ರಲೋಕವನ್ನು ತೆರಳುತ್ತೀರಿ. ನಿಮ್ಮದೇ ಕರ್ಮಗಳಿಂದ ಈ ಮಹಾಲೋಕವನ್ನು ಪಡೆದಿದ್ದೀರಿ. ನಾನು ಹೇಳಿದ ಇವೆಲ್ಲವನ್ನೂ ಮಾಡಬೇಕಾಗುತ್ತದೆ. ಇದಲ್ಲದೇ ಬೇರೇನೂ ಆಗುವುದಿಲ್ಲ!” ಆಗ ಪೂರ್ವೇಂದ್ರರು ಹೇಳಿದರು: “ದೇವಲೋಕದಿಂದ ಮೋಕ್ಷವು ದುರಾಧರವೆಂದು ವಿಹಿತವಾಗಿರುವ ಮಾನುಷ ಲೋಕಕ್ಕೆ ನಾವು ಹೋಗುತ್ತೇವೆ. ಆದರೆ ಧರ್ಮ, ವಾಯು, ಮಘವತ್ ಮತ್ತು ಅಶ್ವಿನಿ ದೇವತೆಗಳು ನಮ್ಮನ್ನು ನಮ್ಮ ತಾಯಿಯಿಂದ ಪಡೆಯಬೇಕು.” ಈ ಮಾತುಗಳನ್ನು ಕೇಳಿದ ವಜ್ರಪಾಣಿಯು ದೇವಶ್ರೇಷ್ಠನಲ್ಲಿ ಪುನಃ ಹೇಳಿದನು: “ಈ ಕಾರ್ಯಗಳನ್ನು

ನೆರವೇರಿಸುವ ಅವರಲ್ಲಿಯ ಐದನೆಯ ಪುರುಷನನ್ನು ನನ್ನ ವೀರ್ಯದಿಂದ ಮಗನನ್ನಾಗಿ ಪಡೆಯುತ್ತೇನೆ.” ಉಗ್ರಧನ್ವಿ ಭಗವಂತನು ಅವರ ಇಷ್ಟವನ್ನು ಅವರು ಕೇಳಿದಹಾಗೆಯೇ ಅನುಗ್ರಹಿಸಿದನು. ಲೋಕಕಾಂತೆ ಶ್ರೀಯೇ ಮನುಷ್ಯಲೋಕದಲ್ಲಿ ಅವರ ಭಾರ್ಯೆಯಾಗಲೆಂದು ಅಪ್ಪಣೆ ಮಾಡಿದನು. ಅವರ ಜೊತೆಗೇ ಆ ದೇವನು ಅಪ್ರಮೇಯ ನಾರಾಯಣನಲ್ಲಿ ಸೇರಿಕೊಂಡನು. ಅವನೂ ಕೂಡ ಎಲ್ಲವೂ ಹಾಗೆಯೇ ಆಗಲೆಂದು ಅನುಮೋದಿಸಿದನು. ನಂತರ ಎಲ್ಲರೂ ಧರಣಿಯಲ್ಲಿ ಜನಿಸಿದರು. ಆಗ ಹರಿಯು ತನ್ನ ಶಿರದಿಂದ ಎರಡು ಕೂದಲುಗಳನ್ನು ಕಿತ್ತನು. ಅದರಲ್ಲಿ ಒಂದು ಬಿಳಿಯಾಗಿತ್ತು. ಇನ್ನೊಂದು ಕಪ್ಪಾಗಿತ್ತು. ಈ ಕೂದಲುಗಳು ಯದು ಕುಲದ ಸ್ತ್ರೀಯರಾದ ರೋಹಿಣಿ ಮತ್ತು ದೇವಕಿಯರನ್ನು ಪ್ರವೇಶಿಸಿದವು. ಅವುಗಳಲ್ಲಿ ಒಂದು ಬಲದೇವನಾಯಿತು. ಎರಡನೇ ಕಪ್ಪು ಬಣ್ಣದ್ದು ಕೇಶವನಾಗಿ ಜನಿಸಿತು. ಆ ಪರ್ವತ ಕಣಿವೆಯ ಗುಹೆಯಲ್ಲಿ ಬಂಧಿಗಳಾಗಿದ್ದ ಪೂರ್ವ ಶಕ್ರರೇ ಇಲ್ಲಿ ವೀರ್ಯವಂತ ಪಾಂಡವರಾಗಿ ಜನಿಸಿದ್ದಾರೆ. ಪಾಂಡವ ಸವ್ಯಸಾಚಿಯು ಶಕ್ರನ ಅಂಶದವನು. ಪೂರ್ವದಲ್ಲಿ ಇಂದ್ರರಾಗಿದ್ದವರೇ ಪಾಂಡವರಾಗಿ ಹುಟ್ಟಿದ್ದಾರೆ. ಪೂರ್ವದಲ್ಲಿಯೇ ಇವರ ಪತ್ನಿಯಾಗಲೆಂದು ನಿರ್ಧರಿಸಲ್ಪಟ್ಟ ಲಕ್ಷ್ಮಿಯು ದಿವ್ಯರೂಪಿ

ದ್ರೌಪದಿಯಾಗಿ ಜನಿಸಿದ್ದಾಳೆ. ದೈವಯೋಗದ ಹೊರತು ಬೇರೆ ಹೇಗೆ ಕರ್ಮಾಂತರದಲ್ಲಿ ಮಹೀತಲದಿಂದ ಸೋಮಸೂರ್ಯಪ್ರಕಾಶದ ರೂಪ ಮತ್ತು ಕೋಶಮಾತ್ರದವರೆಗೆ ಪಸರಿಸುವ ಸುಗಂಧವನ್ನು ಹೊಂದಿದ ಸ್ತ್ರೀಯು ಉದ್ಭವಿಸಬಲ್ಲಳು? ನರೇಂದ್ರ! ಪ್ರೀತಿಪೂರ್ವಕವಾಗಿ ನಿನಗೆ ಅದ್ಭುತ ವರವನ್ನು ನೀಡುತ್ತೇನೆ. ದಿವ್ಯ ಚಕ್ಷುಗಳಿಂದ ಕುಂತೀಪುತ್ರರನ್ನು ಅವರ ಪುಣ್ಯ ದಿವ್ಯ ಪೂರ್ವ ದೇಹರೂಪಗಳಲ್ಲಿ ನೋಡು!"

ಪರಮ ಉದಾರಕರ್ಮಿ ಶುಚಿ ವಿಪ್ರ ವ್ಯಾಸನು ತನ್ನ ತಪಸ್ಸಿನಿಂದ ರಾಜನಿಗೆ ದಿವ್ಯ ದೃಷ್ಠಿಯನ್ನು ನೀಡಿದನು. ರಾಜನು ಅವರೆಲ್ಲರನ್ನೂ ಅವರ ಪೂರ್ವದೇಹದಲ್ಲಿ ಹೇಗಿದ್ದರೋ ಹಾಗೆ ನೋಡಿದನು. ದಿವ್ಯ ಹೇಮಕಿರೀಟಮಾಲೆಗಳನ್ನು ಧರಿಸಿ, ಪಾವಕಾದಿತ್ಯ ವರ್ಣಿಗಳಾದ, ಆಭರಣಗಳನ್ನು ಧರಿಸಿದ್ದ, ವಿಶಾಲ ಎದೆಗಳ, ಎತ್ತರವಾಗಿ, ಇಂದ್ರರಂತಿದ್ದ ಪ್ರತಿಯೊಬ್ಬ ಯುವಕನನ್ನೂ ನೋಡಿದನು. ಮಲಿನವಾಗಲಾರದ ದಿವ್ಯ ಸುವರ್ಣ ವಸ್ತ್ರಗಳನ್ನು ಧರಿಸಿದ್ದ, ಆರಿಸಿದ್ದ ಮಾಲೆಗಳಿಂದ ಅತೀವ ಶೋಭಾಯಮಾನರಾದ, ಸಾಕ್ಷಾತ್ ಮುಕ್ಕಣ್ಣನೋ ಅಥವಾ ದಿವ್ಯ ವಸುಗಳೋ ಎಂದು ತೋರುತ್ತಿದ್ದ, ಆದಿತ್ಯರಂತೆ ಸರ್ವಗುಣೋಪಪನ್ನರಾದ, ಅಭಿರೂಪಿ ಆ ಪೂರ್ವೇಂದ್ರರನ್ನು ನೋಡಿದ ರಾಜ ದ್ರುಪದನು ವಿಸ್ಮಿತನೂ




ಸಂಪ್ರೀತನೂ ಆದನು. ಪಾರ್ಥಿವೇಂದ್ರನು ಅಪ್ಯಾಪ್ರಮೇಯ ದಿವ್ಯ ಮಾಯೆಯಿಂದ ಅವರ ರೂಪತೇಜಸ್ಸು ಮತ್ತು ಯಶಸ್ಸನ್ನು ಹೋಲುವ ಆ ರೂಪಿಣಿ ಶ್ರೀಯನ್ನೂ ನೋಡಿದನು. ಆ ಮಹಾದಾಶ್ಚರ್ಯ ರೂಪವನ್ನು ನೋಡಿ ಪ್ರಸನ್ನನಾದ ಅವನು ಸತ್ಯವತೀಸುತನ ಪಾದಗಳನ್ನು ಹಿಡಿದು "ಪರಮರ್ಷಿ ! ನಿನಗೆ ಇದು ಅದ್ಭುತವೇನಲ್ಲ !"ಎಂದನು.

ವ್ಯಾಸನು ಹೇಳಿದನು:

“ಒಮ್ಮೆ ಯಾವುದೋ ತಪೋವನದಲ್ಲಿ ಮಹಾತ್ಮನೋರ್ವನ ಮಗಳಿದ್ದಳು. ಸತೀ ರೂಪವತಿಯಾಗಿದ್ದರೂ ಆ ಕನ್ಯೆಗೆ ಪತಿಯು ದೊರೆಯಲಿಲ್ಲ. ಬೇರೆಯವರು ಹೇಳುವಂತೆ ಅವಳು ಉಗ್ರ ತಪಸ್ಸಿನಿಂದ ಶಂಕರನನ್ನು ತೃಪ್ತಿಪಡಿಸಿದಳು. ಪ್ರೀತ ಈಶ್ವರನು ತಾನಾಗಿಯೇ “ನಿನಗಿಷ್ಟ ವರವನ್ನು ಕೇಳು!” ಎಂದನು. ವರದ ಈಶ್ವರ ದೇವನಲ್ಲಿ ಆ ಕನ್ಯೆಯು “ಸರ್ವಗುಣೋಪೇತ ಪತಿಯನ್ನು ಬಯಸುತ್ತೇನೆ!” ಎಂದು ಪುನಃ ಪುನಃ ಕೇಳಿಕೊಂಡಳು. ಪ್ರೀತಿಮಾನ್ ದೇವ ಶಂಕರನು ಅವಳಿಗೆ “ನಿನಗೆ ಐವರು ಶ್ರೇಷ್ಠ ಪತಿಗಳಾಗುತ್ತಾರೆ!” ಎಂದು ವರವನ್ನಿತ್ತನು. ಪುನಃ ಪೂಜಿಸುತ್ತಾ ಅವಳು ದೇವನಿಗೆ ಹೇಳಿದಳು: “ನಿನ್ನಿಂದ ನಾನು ಒಬ್ಬನೇ ಗುಣೋಪೇತ ಪತಿಯನ್ನು ಕೇಳುತ್ತಿದ್ದೇನೆ.” ಆಗ ಆ ಪ್ರೀತಾತ್ಮ ದೇವದೇವನು ಪುನಃ ಈ ಶುಭವಚನಗಳನ್ನಾಡಿದನು: “ನೀನು ನನ್ನಲ್ಲಿ ಪತಿಯನ್ನು ಕೊಡು ಎಂದು ಐದು ಬಾರಿ ಪುನಃ ಪುನಃ ಕೇಳಿಕೊಂಡೆ. ಭದ್ರೇ! ಅದು ಹಾಗೆಯೇ ಆಗುತ್ತದೆ. ನಿನಗೆ ಮಂಗಳವಾಗಲಿ. ಅನ್ಯ ದೇಹವನ್ನು ಸೇರಿದಾಗ ನೀನು

ಕೇಳಿದಂತೆಯೇ ಆಗುತ್ತದೆ.” ದ್ರುಪದ! ಅವಳೇ ನಿನ್ನ ಈ ದೇವರೂಪಿಣಿ ಮಗಳಾಗಿ ಜನಿಸಿದ್ದಾಳೆ. ಕೃಷ್ಣೆ ಪಾಂಚಾಲಿಯು ಐವರ ಪತ್ನಿಯಾಗಿಯೂ ಅನಿಂದಿತೆಯಾಗಿರುತ್ತಾಳೆಂದು ವಿಹಿತವಾಗಿದೆ. ಘೋರ ತಪಸ್ಸನ್ನು ತಪಿಸಿ, ಪಾಂಡವರಿಗಾಗಿ ಸ್ವರ್ಗಶ್ರೀಯು ಮಹಾಮಖದಲ್ಲಿ ನಿನ್ನ ಮಗಳಾಗಿ ಹುಟ್ಟಿದಳು. ಸ್ವಯಂ ಸ್ವಯಂಭುವನಿಂದ ಸೃಷ್ಟಳಾದ ದೇವತೆಗಳೂ ಬಯಸುವ ಈ ದೇವಪತ್ನಿ ದೇವಿಯು ತಾನೇ ಮಾಡಿದ ಕರ್ಮಗಳಿಂದ ಈ ಐವರಿಗೆ ಒಬ್ಬಳೇ ಪತ್ನಿಯಾಗುವಳು. ದ್ರುಪದ! ಇದನ್ನು ಕೇಳಿದ ನೀನು ನಿನಗಿಷ್ಟವಾದುದನ್ನು ಮಾಡು.”

ದ್ರುಪದನು ಹೇಳಿದನು:

“ಮಹರ್ಷಿ! ಇದಕ್ಕೆ ಮೊದಲು ನಿನ್ನ ವಚನಗಳನ್ನು ಕೇಳದೇ ಇದ್ದುದರಿಂದ ನಾನು ಆ ರೀತಿ ವರ್ತಿಸಿದೆ. ವಿಹಿತವಾಗಿರುವುದನ್ನು ತಡೆಹಿಡಿಯಲು ಶಕ್ಯವಿಲ್ಲ. ಇದೇ ವಿಧಿಯು ನಿರೂಪಿಸಿದ್ದುದು. ವಿಧಿಯು ಕಟ್ಟಿದ ಗಂಟನ್ನು ಬಿಚ್ಚಲು ಅಸಾಧ್ಯ. ತನ್ನದೇ ಕರ್ಮಗಳಿಂದ ವಿಹಿತವಾಗಿದ್ದುದು ಯಾವುದೂ ಇಲ್ಲ. ಒಬ್ಬನೇ ವರನಿಗೋಸ್ಕರ ಏರ್ಪಡಿಸಿದ್ದ ಕಾರ್ಯವನ್ನು ವಿಧಿಯು ಬಹುಮಂದಿಗೆ ವಿಹಿತಗೊಳಿಸಿದಂತಿದೆ. ಹಿಂದೆ ಕೃಷ್ಣೆಯು

> ನನಗೆ ಅನೇಕ ಪತಿಗಳನ್ನು ಕೊಡು ಎಂದು ಕೇಳಿಕೊಂಡವಳಾದ್ದುದರಿಂದ ಎಲ್ಲವನ್ನು ತಿಳಿದ ದೇವನು ಅವಳು ಕೇಳಿದಂತೆಯೇ ವರವನ್ನು ನೀಡಿದನು. ಇದನ್ನು ಶಂಕರನೇ ವಿಧಿಸಿದನೆಂದಾದರೆ, ಧಾರ್ಮಿಕವಾಗಿರಲಿ ಅಥವಾ ಅಧಾರ್ಮಿಕವಾಗಿರಲಿ, ಅದರಲ್ಲಿ ನನ್ನ ಅಪರಾಧವೇನೂ ಇಲ್ಲ. ಕೃಷ್ಣೆಯು ಅವರಿಗೇ ವಿಹಿತಳಾಗಿರುವುದರಿಂದ ಅವರೆಲ್ಲರೂ ಬಯಸಿದಂತೆ ವಿಧಿವತ್ತಾಗಿ ಅವಳ ಕೈ ಹಿಡಿಯಲಿ."

ಆಗ ಆ ಭಗವಾನನು ದರ್ಮರಾಜನಿಗೆ ಹೇಳಿದನು:

> "ಪಾಂಡವ! ಇದು ಪುಣ್ಯ ದಿನ. ಇಂದು ಚಂದ್ರಮನು ಪೌಷ್ಯದಲ್ಲಿದ್ದಾನೆ. ಇಂದು ಮೊದಲನೆಯದಾಗಿ ನೀನು ಕೃಷ್ಣೆಯ ಪಾಣಿಗ್ರಹಣ ಮಾಡು."

## ವಿವಾಹ

ನಂತರ ರಾಜ ಯಜ್ಞಸೇನನು ಪುತ್ರನಿಂದೊಡಗೂಡಿ ಗಂಡಿನ ಕಡೆಯವರಿಗೆ ಬಹಳ ಉಡುಗೊರೆಗಳನ್ನಿತ್ತು, ಬಹಳ ರತ್ನ ವಿಭೂಷಣಗಳಿಂದ ಅಲಂಕೃತಳಾದ ಸುತೆ ಕೃಷ್ಣೆಯನ್ನು ಯುಧಿಷ್ಠಿರನಿಗೆ ಒಪ್ಪಿಸಿದನು. ಅಲ್ಲಿ ಅವನ ಸುಹೃದರಯರೆಲ್ಲರೂ, ಸಚಿವ ಮಂತ್ರಿಗಣಗಳೂ, ದ್ವಿಜರೂ, ಪ್ರಮುಖ ಪೌರರೂ ಆ

ಪರಮಪ್ರತೀತ ವಿವಾಹವನ್ನು ನೋಡಲು ಸೇರಿದ್ದರು. ವೇಷ್ಮಾರ್ಥಿಜನಗಳಿಂದ ಪರಿಶೋಭಿತ, ಅಲ್ಲಲ್ಲಿ ನಿರ್ಮಿಸಿದ್ದ ಪದ್ಮೋತ್ಪಲಗಳಿಂದ ಭೂಷಿತ, ಬೆಲೆಬಾಳುವ ರತ್ನ ರಾಶಿಗಳಿಂದ ಹೊಳೆಯುತ್ತಿರುವ ಅವನ ಅರಮನೆಯು ನಕ್ಷತ್ರಮಂಡಲುಗಳನ್ನುಳ್ಳ ದೇವಲೋಕವು ಬೆಳಗುವಂತೆ ಬೆಳಗುತ್ತಿತ್ತು. ಯುವ ಕೌರವರಾಜಪುತ್ರರು ಅಭ್ಯಂಜನವನ್ನು ಪಡೆದು, ಶ್ರೇಷ್ಠ ಚಂದನದಿಂದ ಲೇಪಿತರಾಗಿ, ಕುಂಡಲಗಳಿಂದ, ಅಧಿಕ ಬೆಲೆಯ ವಸ್ತ್ರಗಳಿಂದ ವಿಭೂಷಿತರಾಗಿ, ಮಂಗಲಕ್ರಿಯೆಗಳನ್ನು ಕೈಗೊಂಡರು. ಅಗ್ನಿವರ್ಚಸ ಪುರೋಹಿತ ಧೌಮ್ಯನಿಂದೊಡಗೂಡಿ ಯಥಾವಿಧಿಯಲ್ಲಿ ಎಲ್ಲರೂ ಕ್ರಮೇಣವಾಗಿ ಮಹರ್ಷಭಗಳು ಗೋವು ಇದ್ದ ಕಡೆ ಪ್ರವೇಶಿಸುವಂತೆ ಆ ಸದಸ್ಸನು ಪ್ರವೇಶಿಸಿದರು. ಆ ವೇದಪಾರಂಗತನು ಮಂತ್ರಗಳಿಂದ ಪ್ರಜ್ವಲಿಸುತ್ತಿರುವ ಹುತಾಶನನನ್ನು ರಚಿಸಿದನು ಮತ್ತು ಹಾಗೆಯೇ ಮಂತ್ರಪೂರ್ವಕ ಯುಧಿಷ್ಠಿರನನ್ನು ಕೃಷ್ಣೆಯ ಸಹಿತ ಉಪನೀಯವನ್ನು ನಿಯೋಜಿಸಿದನು. ಆ ವೇದಪಾರಂಗತನು ಅವರಿಬ್ಬರೂ ಕೈಗಳನ್ನು ಹಿಡಿದು ಯಜ್ಞಕುಂಡದ ಪ್ರದಕ್ಷಿಣೆ ಮಾಡಿಸಿದನು. ನಂತರ ಪುರೋಹಿತನು ಆ ಅಜಿಶೋಭಿಯ ಅನುಜ್ಞೆಯಂತೆ ರಾಜಗೃಹದಿಂದ ಹಿಂದಿರುಗಿದನು.

ಕ್ರಮಬದ್ಧವಾಗಿ, ಒಂದೊಂದು ದಿನಗಳ ಅಂತರದಲ್ಲಿ, ಆ

ಕೌರವವಂಶವರ್ಧನ ಮಹಾರಥಿ ನೃಪತಾತ್ಮಜರು ಉತ್ತಮರೂಪಧಾರಿಣಿಯನ್ನು ವರಿಸಿದರು. ಅಲ್ಲಿ ಉತ್ತಮ ಅಮಾನುಷ ಅದ್ಭುತವೊಂದು ನಡೆಯಿತೆಂದು ಹೇಳುತ್ತಾರೆ: ಆ ಮಹಾನುಭಾವೆ, ಸುಮಧ್ಯಮೆಯು ಪ್ರತಿ ಹಗಲೂ ಪುನಃ ಕನ್ಯೆಯಾಗಿಯೇ ಉಳಿಯುತ್ತಿದ್ದಳು.

ವಿವಾಹವನ್ನು ಮಾಡಿಕೊಟ್ಟ ನಂತರ ದ್ರುಪದನು ಆ ಮಹಾರಥಿಗಳಿಗೆ ಉತ್ತಮ ಚಿನ್ನದಿಂದ ಮಾಡಲ್ಪಟ್ಟ ಬಹಳಷ್ಟು ನೂರು ಸುಂದರ ರಥಗಳನ್ನು, ಪ್ರತಿಯೊಂದು ರಥಕ್ಕೂ ಚಿನ್ನದ ಮೋಜುಗಳನ್ನು ಹೊಂದಿದ್ದ ನಾಲ್ಕು ನಾಲ್ಕು ಕುದುರೆಗಳನ್ನು ಉಡುಗೊರೆಯಾಗಿತ್ತನು. ಪದ್ಮದ ಚಿಹ್ನೆಗಳನ್ನು ಹೊಂದಿ ಹೇಮಶೃಂಗಿ ಗಿರಿಗಳಂತಿದ್ದ ನೂರು ಗಜಗಳು, ಬೆಲೆಬಾಳುವ ವೇಷಾಭರಣಗಳಿಂದ ಸಿಂಗರಿಸಿದ್ದ ನೂರು ಯುವ ದಾಸಿಯರನ್ನೂ ನೀಡಿದನು. ಸೌಮಿಕನು ಅಗ್ನಿಸಾಕ್ಷಮ ಪ್ರತಿಯೊಬ್ಬರಿಗೂ ಅಬ್ಜಗಳಲ್ಲಿ ಧನ, ವಸ್ತ್ರಗಳು, ಪ್ರಭಾವಯುಕ್ತ ಬೆಲೆಬಾಳುವ ಭೂಷಣಗಳನ್ನು ನೀಡಿದನು. ವಿವಾಹಿತರಾದ ಮಹಾಬಲಿ ಪಾಂಡವರು ರತ್ನಗಳೊಡನೆ ಆ ಶ್ರೀಯನ್ನು ಪಡೆದು ಪಾಂಚಾಲನೃಪನ ಪುರದಲ್ಲಿ ಇಂದ್ರಪ್ರತಿಮರಾಗಿ ಉಳಿದುಕೊಂಡರು. ಪಾಂಡವರ ಜೊತೆ ಸೇರಿಕೊಂಡ ದ್ರುಪದನಿಗೆ ಯಾರ ಭಯವೂ, ದೇವತೆಗಳ ಭಯವೂ ಉಳಿಯಲಿಲ್ಲ.

ಮಹಾತ್ಮ ದ್ರುಪದನ ನಾರಿಯರು ಕುಂತಿಯ ಬಳಿಬಂದು ತಮ್ಮ ತಮ್ಮ ಹೆಸರುಗಳನ್ನು ಹೇಳಿಕೊಂಡು ತಮ್ಮ ನೆತ್ತಿಯನ್ನು ಅವಳ ಪಾದಗಳಿಗೆ ಮುಟ್ಟಿಸಿದರು. ರೇಷ್ಮೆಯ ವಸ್ತ್ರಗಳನ್ನು ಧರಿಸಿದ, ಮಾಂಗಲ್ಯವನ್ನು ಧರಿಸಿದ ಕೃಷ್ಣೆಯೂ ಕೂಡ ತನ್ನ ಅತ್ತೆಗೆ ನಮಸ್ಕರಿಸಿ ಕೈ ಮುಗಿದು ನಿಂತುಕೊಂಡಳು. ಪೃಥಳು ತನ್ನ ರೂಪಲಕ್ಷಣಸಂಪನ್ನೆ, ಶೀಲಾಚಾರಸಮನ್ವಿತೆ ಸೊಸೆ ದ್ರೌಪದಿಗೆ ಪ್ರೀತಿಯಿಂದ ಆಶೀರ್ವಚನಗಳನ್ನಿತ್ತಳು:

> "ಇಂದ್ರಾಣಿಯು ಹರಿಹಯನಿಗೆ ಹೇಗೋ ಹಾಗೆ, ಸ್ವಾಹಾಳು ವಿಭಾವಸುವಿಗೆ ಹೇಗೋ ಹಾಗೆ, ರೋಹಿಣಿಯು ಚಂದ್ರನಿಗೆ ಹೇಗೋ ಹಾಗೆ, ದಮಯಂತಿಯು ನಳನಿಗೆ ಹೇಗೋ ಹಾಗೆ, ಭದ್ರಳು ವೈಶ್ರವಣನಿಗೆ ಹೇಗೋ ಹಾಗೆ, ಅರುಂಧತಿಯು ವಸಿಷ್ಠನಿಗೆ ಹೇಗೋ ಹಾಗೆ, ಮತ್ತು ಲಕ್ಷ್ಮಿಯು ನಾರಾಯಣನಿಗೆ ಹೇಗೋ ಹಾಗೆ ನೀನು ನಿನ್ನ ಪತಿಯಂದಿರಿಗೆ ಆಗು. ಜೀವಂತ ಮಕ್ಕಳಿಗೆ ಮತ್ತು ವೀರ ಪುತ್ರರಿಗೆ ಜನ್ಮ ನೀಡು, ಸುಭದ್ರೇ! ಬಹುಸೌಖ್ಯಸಮನ್ವಿತಳಾಗಿರು. ಬೋಗ ಸಂಪನ್ನಳಾಗು. ಯಜ್ಞಪತ್ನಿಯಾಗು. ಒಳ್ಳೆಯ ಅನುವ್ರತಳಾಗು. ಆಗಮಿಸುವ ಅತಿಥಿಗಳ, ಸಾಧುಗಳ, ಬಾಲಕ ವೃದ್ಧರ, ಮತ್ತು ಗುರುವರ್ಯರ ಯಥಾವತ್ತಾದ ಪೂಜೆಗಳಲ್ಲಿಯೇ ನಿನ್ನ

ವರ್ಷಗಳು ಕಳೆಯಲಿ. ಕುರುಜಂಗಲದ ಮುಖ್ಯ ರಾಷ್ಟ್ರಗಳಲ್ಲಿ ಮತ್ತು ನಗರಗಳಲ್ಲಿ ಧರ್ಮವತ್ಸಲ ನೃಪತಿಯೊಡನೆ ಅಭಿಷಿಕ್ತಳಾಗು. ಮಹಾಬಲಶಾಲಿಗಳಾದ ನಿನ್ನ ಪತಿಗಳು ತಮ್ಮ ವಿಕ್ರಮದಿಂದ ಈ ಭೂಮಿಯನ್ನು ಜಯಿಸಿದಾಗ ಮಹಾಕ್ರತು ಅಶ್ವಮೇಧದ ಸಮಯದಲ್ಲಿ ಎಲ್ಲ ಬ್ರಾಹ್ಮಣರಿಗೂ ಕಾಣಿಕೆಗಳನ್ನು ನೀಡುವಂಥವಳಾಗು. ಪೃಥ್ವಿಯಲ್ಲಿ ಎಷ್ಟು ಬೆಲೆಬಾಳುವ ರತ್ನಗಳು ಇವೆಯೋ ಅವೆಲ್ಲವನ್ನೂ ಪಡೆದು ನುರಾರು ವರ್ಷಗಳು ಸುಖದಿಂದ ಬಾಳು. ಮದುವೆಯ ಪತ್ತಲವನ್ನುಟ್ಟಿರುವ ನಿನಗೆ ಈಗ ನಾನು ಹೇಗೆ ಆಶೀರ್ವದಿಸುತ್ತಿದ್ದೇನೆಯೋ ಹಾಗೆ ಇನ್ನೊಮ್ಮೆ ಗುಣಾನ್ವಿತ ಪುತ್ರರನ್ನು ಪಡೆದಾಗಲೂ ನಿನಗೆ ಆಶೀರ್ವದಿಸುತ್ತೇನೆ.”

ಪಾಂಡವರು ಪತ್ನಿಯನ್ನು ಪಡೆದ ನಂತರ ಹರಿಯು ಮುಕ್ತವೈಡೂರ್ಯ ಚಿತ್ರಗಳನ್ನೊಡಗೂಡಿದ ಹೇಮ ಆಭರಣಾದಿಗಳನ್ನು ಅವರಿಗೆ ಕಳುಹಿಸಿದನು. ಮಾಧವನು ಅವರಿಗೆ ಬೇರೆ ಬೇರೆ ದೇಶಗಳ ಅತ್ಯಂತ ಬೆಲೆಬಾಳುವ ವಸ್ತ್ರಗಳನ್ನೂ, ಮುಟ್ಟಲು ಚೆನ್ನಾಗಿರುವ ಸುಂದರ ಕಂಬಳಿ, ಜಿನ ಮತ್ತು ರತ್ನಗಳನ್ನೂ, ಬೇರೆ ಬೇರೆ ತರಹದ ಹಾಸಿಗೆ, ಆಸನ ಮತ್ತು ಪಲ್ಲಕ್ಕಿಗಳನ್ನು ಬಹಳ ಸಂಖ್ಯೆಯಲ್ಲಿ, ವೈಡೂರ್ಯ ವಜ್ರ ಚಿತ್ರಗಳಿಂದೊಡಗೂಡಿದ

ನೂರಾರು ಪಾತ್ರೆಗಳನ್ನು ಕಳುಹಿಸಿದನು. ಕೃಷ್ಣನು ನಾನಾ ದೇಶಗಳಿಂದ ಪಡೆದ ರೂಪ-ಯೌವನ-ದಾಕ್ಷಿಣ್ಯಗಳಿಂದೊಡಗೂಡಿದ ಸ್ವಲಂಕೃತ ಸಹಸ್ರಾರು ದಾಸಿಯರನ್ನೂ, ಸುರಕ್ಷಿತ ಪಳಗಿದ ಆನೆಗಳನ್ನೂ, ಪಳಗಿದ ಸ್ವಲಂಕೃತ ಒಳ್ಳೆಯ ಅಶ್ವಗಳನ್ನೂ, ಮತ್ತು ಸುಂದರ ಚಿನ್ನದ ಬಾವುಟಗಳಿಂದ ಅಲಂಕೃತ ರಥಗಳನ್ನೂ ಕಳುಹಿಸಿದನು. ಅಮೇಯಾತ್ಮ ಮಧುಸೂದನನು ಕೋಟಿ ಸಂಖ್ಯೆಗಳಲ್ಲಿ ಅವರಿಗೆ ಚಿನ್ನದ ಗಟ್ಟಿಗಳನ್ನು ಕಳುಹಿಸಿದನು. ಗೋವಿಂದನಿಗೆ ಪ್ರಿಯವನ್ನೇ ಬಯಸಿದ ಧರ್ಮರಾಜ ಯುಧಿಷ್ಠಿರನು ಅತ್ಯಂತ ಸಂತೋಷಗೊಂಡು ಅವುಗಳೆಲ್ಲವನ್ನೂ ಸ್ವೀಕರಿಸಿದನು.

# ಪಾಂಡವರಿಗೆ ರಾಜ್ಯಪ್ರಾಪ್ತಿ

## ಕುರುಗಳಲ್ಲಿ ಪಾಂಡವರ ಕುರಿತಾದ ಸಮಾಲೋಚನೆ

ವಿಮನಸ್ಕ ರಾಜ ದುರ್ಯೋಧನನು ಅಶ್ವತ್ಥಾಮ, ಮಾತುಲ, ಕರ್ಣ, ಕೃಪ ಮತ್ತು ತನ್ನ ಭ್ರಾತೃಗಳ ಸಹಿತ ದ್ರೌಪದಿಯು ಶ್ವೇತವಾಹನನ್ನು ವರಿಸಿದ್ದುದನ್ನು ಕಂಡು ವಿನಿವೃತನಾಗಿ ಹಿಂದಿರುಗಿದನು. ನಾಚಿಕೊಂಡ ದುಃಶಾಸನನು ಅವನಲ್ಲಿ ಪಿಸುಮಾತಿನಲ್ಲಿ ಹೇಳಿದನು:

> “ಬ್ರಾಹ್ಮಣನಾಗಿಲ್ಲದಿದ್ದರೆ ಎಂದೂ ಅವನು ದ್ರೌಪದಿಯನ್ನು ಪಡೆಯುತ್ತಿರಲಿಲ್ಲ. ರಾಜನ್! ಯಾರಿಗೂ ಅವನು

ಧನಂಜಯನೆಂದು ಗೊತ್ತಾಗಲಿಲ್ಲ. ದೈವವೇ ಪರಮವಾದದ್ದು ಪೌರುಷವು ನಿರರ್ಥಕ ಎನ್ನುವುದು ನನ್ನ ಅಭಿಪ್ರಾಯ. ಪಾಂಡವರು ಇನ್ನೂ ಜೀವದಿಂದಿದ್ದಾರೆಂದರೆ ನಮ್ಮ ಪೌರುಷಕ್ಕೆ ಧಿಕ್ಕಾರ!”

ಈ ರೀತಿ ಮಾತನಾಡುತ್ತಾ ಪುರೋಚನನನ್ನು ನಿಂದಿಸುತ್ತಾ ಆ ವಿಗತಚೇತಸ ದೀನರು ಹಸ್ತಿನಪುರವನ್ನು ಪ್ರವೇಶಿಸಿದರು. ಬೆಂಕಿಯಿಂದ ತಪ್ಪಿಸಿಕೊಂಡು ದ್ರುಪದನನ್ನು ಸೇರಿದ ಆ ಮಹೌಜಸ ಪಾರ್ಥರನ್ನು ನೋಡಿ ಮತ್ತು ಸರ್ವ ಯುದ್ಧ ವಿಶಾರದ ಧೃಷ್ಟದ್ಯುಮ್ನ, ಶಿಖಂಡಿ ಮತ್ತು ದ್ರುಪದನ ಇತರ ಮಕ್ಕಳನ್ನು ಯೋಚಿಸಿ ಅವರೆಲ್ಲರೂ ವಿಗತಸಂಕಲ್ಪರಾಗಿ ನಡುಗಿದರು.

ಆದರೆ ದ್ರೌಪದಿಯು ಪಾಂಡವರನ್ನು ವರಿಸಿದಳು ಮತ್ತು ಧಾರ್ತರಾಷ್ಟ್ರರ ದರ್ಪವು ಭಗ್ನವಾಗಿ ನಾಚಿಕೊಂಡು ಹಿಂದಿರುಗಿದರು ಎಂದು ಕೇಳಿ ಸಂತೋಷಗೊಂಡ ಕ್ಷತ್ತ ವಿದುರನು ವಿಸ್ಮಿತನಾಗಿ

“ಕುರುಗಳು ವರ್ಧಿಸಿದ್ದಾರೆ!”

ಎಂದು ಧೃತರಾಷ್ಟ್ರನಿಗೆ ಕೂಗಿ ಹೇಳಿದನು. ವಿದುರನ ಈ ಮಾತುಗಳನ್ನು ಕೇಳಿ ಪರಮಪ್ರೀತ ನೃಪ ವೈಚಿತ್ರವೀರ್ಯನು

“ಒಳ್ಳೆಯದೇ ಆಯಿತು! ಒಳ್ಳೆಯದೇ ಆಯಿತು!”

ಎಂದನು. ಪ್ರಾಜ್ಞಚಕ್ಷು ನರೇಶ್ವರನು ಅವಿಜ್ಞಾನದಿಂದ ದ್ರುಪದ ಕನ್ಯೆಯು ತನ್ನ ಜ್ಯೇಷ್ಠ ಪುತ್ರ ದುರ್ಯೋಧನನನ್ನೇ ವರಿಸಿದ್ದಾಳೆ ಎಂದು ಭಾವಿಸಿದ್ದನು. ಅವನು ದ್ರೌಪದಿಗೋಸ್ಕರ ಬಹು ಭೂಷಣಗಳನ್ನು ಮತ್ತು

> "ಕೃಷ್ಣೆಯನ್ನು ಕರೆದುಕೊಂಡು ಬಾ!"

ಎಂದು ಪುತ್ರ ದುರ್ಯೋಧನನಿಗೆ ಆಜ್ಞಾಪಿಸಿದನು. ನಂತರ ವಿದುರನು

> "ಪಾಂಡವರು ವರಿಸಲ್ಪಟ್ಟಿದ್ದಾರೆ! ಸರ್ವ ವೀರರೂ ಕುಶಲದಿಂದಿದ್ದಾರೆ! ಬಹು ಬಲಸಮನ್ವಿತರೊಂದಿಗೆ ಸಂಬಂಧವನ್ನು ಮಾಡಿಕೊಂಡ ಅವರು ದ್ರುಪದನಿಂದ ಸತ್ಕರಿಸಲ್ಪಟ್ಟಿದ್ದಾರೆ!"

ಎಂದು ವರದಿಮಾಡಿದನು. ಆಗ ಧೃತರಾಷ್ಟ್ರನು ಹೇಳಿದನು:

> "ಪಾಂಡುವಿನ ಪುತ್ರರು ಅವನಿಗೆ ಹೇಗೋ ಅದಕ್ಕಿಂತಲೂ ಅಧಿಕವಾಗಿ ನನಗಾಗುತ್ತಾರೆ. ವಿದುರ! ವೀರ ಪಾಂಡವರು ಕುಶಲರಾಗಿದ್ದು ಮಿತ್ರರನ್ನು ಪಡೆದಿದ್ದಾರೆ ಎಂದು ಕೇಳಿ ನನ್ನ ಸಂತೋಷವು ಇನ್ನೂ ಹೆಚ್ಚಾಗಿದೆ ಎಂದು ನನ್ನ ಅನಿಸಿಕೆ. ಸಂಪತ್ತನ್ನು ಕಳೆದುಕೊಂಡ ಮತ್ತು ಬಲಶಾಲಿಯಾಗಬೇಕೆನ್ನುವ ಯಾವ ಪಾರ್ಥಿವನು ದ್ರುಪದ

ಮತ್ತು ಅವನ ಬಾಂಧವರ ಮಿತ್ರತ್ವವನ್ನು ಬಯಸುವುದಿಲ್ಲ?”

ಅವನು ಹಾಗೆ ಹೇಳಲು ವಿದುರನು ಉತ್ತರಿಸಿದನು:

“ರಾಜನ್! ನಿನ್ನ ಈ ಬುದ್ಧಿಯು ನೂರು ವರ್ಷಗಳು ಸದಾ ಇರಲಿ!”

ನಂತರ ದುರ್ಯೋಧನ ಮತ್ತು ರಾಧೇಯರು ಧೃತರಾಷ್ಟ್ರನಲ್ಲಿಗೆ ಬಂದು ಈ ಮಾತುಗಳನ್ನಾಡಿದರು:

“ನೃಪ! ವಿದುರನ ಸನ್ನಿಧಿಯಲ್ಲಿ ನಿನ್ನೊಡನೆ ಮಾತನಾಡಲು ಸಾಧ್ಯವಾಗಲಿಲ್ಲ. ಆದುದರಿಂದ ನಾವು ನಿನ್ನಲ್ಲಿ ಏಕಾಂತದಲ್ಲಿ ಕೇಳುತ್ತಿದ್ದೇವೆ. ನೀನು ಈಗ ಏನು ಮಾಡಬೇಕೆಂದು ಯೋಚಿಸಿದ್ದೀಯೆ? ವಿದುರನ ಎದಿರು ಅವರ ಪ್ರಶಂಸೆಯನ್ನು ಮಾಡುತ್ತಿದ್ದೆಯಲ್ಲ! ನಿನ್ನ ಪ್ರತಿಸ್ಪರ್ಧಿಗಳ ಯಶಸ್ಸನ್ನು ನಿನ್ನದೇ ಯಶಸ್ಸೆಂದು ಭಾವಿಸುತ್ತಿದ್ದೀಯಾ? ಒಂದು ಕೆಲಸವನ್ನು ಮಾಡಬೇಕೆಂದಿದ್ದರೆ ಇನ್ನೊಂದನ್ನು ಮಾಡಿಬಿಡುತ್ತೀಯೆ. ಏನಾದರೂ ಮಾಡಿ ನಿತ್ಯವೂ ಅವರ ಬಲವನ್ನು ನಾಶಪಡಿಸಬೇಕು. ಅವರು ನಮ್ಮನ್ನು ಪುತ್ರ ಬಲ ಬಾಂಧವರ ಸಹಿತ ನುಂಗಲಾರದಂತೆ ನಾವೆಲ್ಲರೂ ಏನಾದರೂ ಉಪಾಯವನ್ನು ಯೋಚಿಸುವ ಕಾಲವು

ಪ್ರಾಪ್ತವಾಗಿದೆ.”

ಧೃತರಾಷ್ಟ್ರನು ಹೇಳಿದನು:

“ನಿಮ್ಮ ಹಾಗೆ ನಾನೂ ಕೂಡ ಅದರ ಕುರಿತೇ ಚಿಂತಿಸುತ್ತೇನೆ. ವಿದುರನ ಎದಿರು ನನಗನಿಸಿದ್ದುದನ್ನು ಹೇಳಲು ಇಷ್ಟಪಡುವುದಿಲ್ಲ. ವಿದುರನಿಗೆ ನನ್ನ ನಿಜವಾದ ಅಭಿಪ್ರಾಯ ಇಂಗಿತಗಳು ತಿಳಿಯಬಾರದೆಂದು ಅವನ ಎದಿರು ವಿಶೇಷವಾಗಿ ಅವರ ಗುಣಗಳನ್ನೇ ಹೊಗಳುತ್ತಿರುತ್ತೇನೆ. ಸುಯೋಧನ! ಈ ವಿಷಯದಲ್ಲಿ ನಿನಗೇನನ್ನಿಸುತ್ತಿದೆ ಎನ್ನುವುದನ್ನು ಹೇಳು. ರಾಧೇಯ! ನೀನೂ ಕೂಡ ನಿನ್ನ ಅಭಿಪ್ರಾಯವನ್ನು ಹೇಳು.”

ದುರ್ಯೋಧನನು ಹೇಳಿದನು:

“ಪಾಂಡವರಲ್ಲಿಯೇ ಕುಂತಿಪುತ್ರರು ಮತ್ತು ಮಾದ್ರಿಪುತ್ರರಲ್ಲಿ ಭೇದವನ್ನುಂಟು ಮಾಡಲು ಸಮರ್ಥ ಆಪ್ತ ಕುಶಲವಿಪ್ರರನ್ನು ಇಂದೇ ಕಳುಹಿಸೋಣ. ಅಥವಾ ರಾಜ ದ್ರುಪದ, ಅವನ ಪುತ್ರರು ಮತ್ತು ಅಮಾತ್ಯರು ಎಲ್ಲರಿಗೂ ಮಹಾ ವಿತ್ತಸಂಚಯಗಳನ್ನಿತ್ತು ಕುಂತೀಪುತ್ರ ರಾಜ ಯುಧಿಷ್ಠಿರನನ್ನು ಪರಿತ್ಯಜಿಸುವಂತೆ ಮಾಡೋಣ. ಅಥವಾ ಅವರು ಅಲ್ಲಿಯೇ ವಾಸಿಸಲು ಬಯಸುವಂತೆ ಮಾಡೋಣ. ಅವರು ಇಲ್ಲಿ ಬಂದು ವಾಸಮಾಡುವುದರ

ದುಷ್ಪರಿಣಾಮಗಳನ್ನು ಪುನಃ ಪುನಃ ಒತ್ತಿಹೇಳಿ ಪಾಂಡವರು ಅಲ್ಲಿಯೇ ವಾಸಿಸಲು ಮನಸ್ಸುಮಾಡುವ ಹಾಗೆ ಮಾಡೋಣ. ಅಥವಾ ಒಳ್ಳೆಯ ಕುಶಲ ಉಪಾಯನಿಪುಣ ಮನುಷ್ಯರ ಮೂಲಕ ಪಾರ್ಥ ಪರಸ್ಪರರಲ್ಲಿ ಭೇದವುಂಟಾಗುವಂತೆ ಮಾಡಬೇಕು. ಅಥವಾ ಅವರು ಅಷ್ಟೊಂದು ಜನರಿದ್ದುದರಿಂದ ಸುಲಭವಾಗಿ ಕೃಷ್ಣೆಯೇ ಅವರ ವಿರುದ್ಧ ಹೋಗುವಹಾಗೆ ಮಾಡಬಹುದು. ಇಲ್ಲವಾದರೆ, ಉಪಾಯಕುಶಲರಿಂದ ಭೀಮಸೇನನ ಸಾವನ್ನು ಏರ್ಪಡಿಸೋಣ. ಅವರಲ್ಲಿ ಎಲ್ಲರಿಗಿಂತ ಹೆಚ್ಚು ಬಲಶಾಲಿಯಾದ ಅವನು ಇಲ್ಲವಾದ ನಂತರ ತಮ್ಮ ತೇಜಸ್ಸುಗಳನ್ನು ಕಳೆದುಕೊಂಡು ಅವರೆಲ್ಲರೂ ಉತ್ಸಾಹಹೀನರಾಗುತ್ತಾರೆ. ಅವರೆಲ್ಲರ ಆಶ್ರಯವು ಅವನೇ ಒಬ್ಬನಾಗಿದ್ದುದರಿಂದ, ಅವನಿಲ್ಲವಾದಾಗ ರಾಜ್ಯದ ಮೇಲಿನ ಅವರ ಪ್ರೀತಿ, ಪ್ರಯತ್ನ ಎರಡೂ ಕಡಿಮೆಯಾಗುತ್ತವೆ. ವೃಕೋದರನ ಬೆಂಬಲಮಾತ್ರದಿಂದ ಸಮರದಲ್ಲಿ ಅರ್ಜುನನು ಅಜೇಯನು. ಅವನಿಲ್ಲದಿದ್ದರೆ ಫಲ್ಗುಣನು ಯುದ್ಧದಲ್ಲಿ ರಾಧೇಯನ ಕಾಲುಭಾಗಕ್ಕೂ ಬರುವುದಿಲ್ಲ! ಭೀಮಸೇನನಿಲ್ಲದೇ ತಮ್ಮ ಮಹಾ ದೌರ್ಬಲ್ಯವನ್ನು ಅರಿತು ಮತ್ತು ನಮ್ಮ ಬಲವನ್ನು ಅರ್ಥಮಾಡಿಕೊಂಡು ಅವರ

ಬಲವು ಕ್ರಮೇಣ ನಶಿಸಿಹೋಗುತ್ತದೆ. ಪಾರ್ಥರು ಇಲ್ಲಿಗೆ ಬಂದು ನಮ್ಮ ಆಜ್ಞೆಗಳಿಗೆ ನಡೆದುಕೊಂಡರೆಂದರೆ ಅವರನ್ನು ಸುಲಭವಾಗಿ ನಿರ್ಮೂಲನ ಮಾಡಬಹುದು. ಅಥವಾ ಅವರಿಗೆ ಒಬ್ಬರಾದ ಮೇಲೆ ಇನ್ನೊಬ್ಬ ಸುಂದರ ತರುಣಿಯರನ್ನು ತೋರಿಸಿ ಆಸೆಪಡಿಸೋಣ. ಹೀಗೆ ಕೃಷ್ಣೆಯು ಕೌಂತೇಯರನ್ನು ತಿರಸ್ಕರಿಸುತ್ತಾಳೆ. ಅಥವಾ ರಾಧೇಯನನ್ನು ಕಳುಹಿಸಿ ಅವರನ್ನು ಇಲ್ಲಿಗೆ ಕರೆತರಿಸೋಣ. ದಾರಿಯಲ್ಲಿ ಆಪ್ತ ಢಕಾಯಿತರು ಅವರ ಮೇಲೆ ಆಕ್ರಮಣ ಮಾಡಿ ಕೊಲ್ಲುವ ಹಾಗೆ ಮಾಡೋಣ. ಇವುಗಳಲ್ಲಿ ನಿನಗೆ ಯಾವುದು ನಿರ್ದೋಷವೆನಿಸುತ್ತದೆಯೋ ಅದನ್ನು ತಡವಾಗುವುದರೊಳಗೆ ಕಾರ್ಯಗತಗೊಳಿಸು. ಪಾರ್ಥಿವರ್ಷಭ ದ್ರುಪದನು ಸಂಪೂರ್ಣ ವಿಶ್ವಾಸವನ್ನು ಪಡೆಯುವುದರೊಳಗೆ ಅವರ ಕುರಿತು ಏನಾದರೂ ಮಾಡಲು ಸಾಧ್ಯ. ನಂತರ ಸಾಧ್ಯವಾಗುವುದಿಲ್ಲ. ನನ್ನ ಪ್ರಕಾರ ಇವುಗಳ ಮೂಲಕ ಅವರನ್ನು ನಿಗ್ರಹಿಸಬಲ್ಲೆವು. ರಾಧೇಯ! ನಾನು ಸರಿಯೋ ಅಥವಾ ಅಲ್ಲವೋ? ನಿನಗೇನನ್ನಿಸುತ್ತದೆ?”

ಕರ್ಣನು ಹೇಳಿದನು:

“ದುರ್ಯೋಧನ! ನಿನಗೆ ಪ್ರಜ್ಞೆ ಸರಿಯಿಲ್ಲ ಎಂದು ನನ್ನ

ಅಭಿಪ್ರಾಯ. ಉಪಾಯಗಳಿಂದ ಪಾಂಡವರನ್ನು ಗೆಲ್ಲಲು ಶಕ್ಯವಿಲ್ಲ. ಈ ಹಿಂದೆಯೂ ಕೂಡ ಅವರನ್ನು ನಿಗ್ರಹಿಸಲು ನೀನು ಸೂಕ್ಷ್ಮ ಉಪಾಯಗಳನ್ನು ಬಳಸಿದೆ. ಆದರೆ ಅದು ನಿನ್ನಿಂದ ಸಾಧ್ಯವಾಗಲಿಲ್ಲ. ಇನ್ನೂ ರೆಕ್ಕೆಬಾರದಿದ್ದ ಶಿಶುಗಳಾದ ಅವರು ಇಲ್ಲಿಯೇ ನಿನ್ನ ಸಮೀಪದಲ್ಲಿ ಇದ್ದರು. ಆದರೂ ಅವರನ್ನು ಬಾಧಿಸಲು ಸಾಧ್ಯವಾಗಲಿಲ್ಲ. ಈಗ ಅವರೆಲ್ಲರಿಗೆ ರೆಕ್ಕೆಗಳು ಬಂದಿವೆ, ವಿದೇಶದಲ್ಲಿದ್ದಾರೆ, ಬೆಳೆದಿದ್ದಾರೆ. ಈಗ ನಿನ್ನ ಉಪಾಯಗಳಿಂದ ಕೌಂತೇಯರನ್ನು ಗೆಲ್ಲಬಹುದೆಂದು ನನಗನ್ನಿಸುವುದಿಲ್ಲ. ಆ ದಿಷ್ಟಕೃತರನ್ನು ವ್ಯಸನಗಳಿಗೆ ಬಂಧಿಸಲಿಕ್ಕೂ ಆಗುವುದಿಲ್ಲ. ಪಿತೃಪಿತಾಮಹರ ರಾಜ್ಯವನ್ನು ಪಡೆಯಲು ಬಯಸುತ್ತಿರುವ ಅವರು ಶಂಕಿತರಾಗಿದ್ದಾರೆ. ಪರಸ್ಪರರಲ್ಲಿ ಭೇದವನ್ನುಂಟುಮಾಡಲೂ ಶಕ್ಯವಿಲ್ಲ. ಒಬ್ಬಳೇ ಪತ್ನಿಯಲ್ಲಿ ಅನುರಕ್ತರಾದ ಪರಸ್ಪರರಲ್ಲಿ ಭೇದವುಂಟಾಗುವುದಿಲ್ಲ. ಅವರಿಂದ ಕೃಷ್ಣೆಯನ್ನು ಬೇರೆಮಾಡಲಿಕ್ಕೂ ಸಾಧ್ಯವಿಲ್ಲ. ಎಲ್ಲವನ್ನೂ ಕಳೆದುಕೊಂಡಿದ್ದಾಗಲೇ ಅವರನ್ನು ವರಿಸಿದ್ದವಳು ಅವರು ಇನ್ನೂ ಅಭಿವೃದ್ಧಿಪರರಾಗಿದ್ದಾಗ ಏನು ಹೇಳಬಹುದು? ಒಬ್ಬನಿಗಿಂಥ ಹೆಚ್ಚು ಪತಿಯನ್ನು ಹೊಂದಿರುವುದು ಒಂದು ಈಪ್ಸಿತ ಗುಣವೆಂದು ಸ್ತ್ರೀಯರು ಯೋಚಿಸುತ್ತಾರೆ. ಅದನ್ನು ಪಡೆದ ಕೃಷ್ಣೆಯನ್ನು ಅದರಿಂದ

ದೂರಮಾಡುವುದು ಅಷ್ಟು ಸುಲಭವಲ್ಲ. ಪೂಜನೀಯ ನಡವಳಿಕೆಯ ರಾಜ ಪಾಂಚಾಲ್ಯನು ಧನಪ್ರಿಯನಲ್ಲ. ರಾಜ್ಯಗಳನ್ನು ಇತ್ತರೂ ಕೂಡ ಅವನು ಕೌಂತೇಯರನ್ನು ತ್ಯಜಿಸುವುದಿಲ್ಲ ಎನ್ನುವುದು ನಿಶ್ಚಯ. ಅವನಂತೆಯೆ ಅವನ ಪುತ್ರನೂ ಕೂಡ ಗುಣವಂತ ಮತ್ತು ಪಾಂಡವರಲ್ಲಿ ಅನುರಕ್ತ. ಆದುದರಿಂದ ಯಾವುದೇ ಉಪಾಯವೂ ಅವರ ಮೇಲೆ ಯಶಸ್ವಿಯಾಗುವುದಿಲ್ಲ ಎನ್ನುವುದು ನನ್ನ ಅನಿಸಿಕೆ. ಆದರೆ ನಾವು ಇಷ್ಟನ್ನು ಮಾಡಬಹುದು. ಎಲ್ಲಿಯೂ ನೆಲೆಯೂರುವುದರೊಳಗೆ ಪಾಂಡವರನ್ನು ಹೊಡೆದುರುಳಿಸಬಹುದು. ಇದು ನಿನ್ನ ವಿಕ್ರಮಕ್ಕೆ ಹಿಡಿಸಬಹುದು. ನಮ್ಮ ಪಕ್ಷವು ದೊಡ್ಡದಾಗಿರುವಾಗ ಮತ್ತು ಪಾಂಚಾಲನ ಪಕ್ಷವು ಸಣ್ಣದಾಗಿರುವಾಗಲೇ ನಾವು ಅವರನ್ನು ಹೊಡೆದುರುಳಿಸಬೇಕು. ಈ ವಿಷಯದಲ್ಲಿ ವಿಳಂಬಮಾಡಬಾರದು. ಗಾಂಧಾರೇ! ಅವರ ವಾಹನಗಳು ಹೆಚ್ಚಾಗುವುದರ ಮತ್ತು ಮಿತ್ರರು ಬಹಳವಾಗುವುದರ ಮೊದಲೇ ಅವರ ಮೇಲೆ ಯುದ್ಧಸಾರಬೇಕು. ಪುತ್ರರೊಂದಿಗೆ ರಾಜ ಪಾಂಚಾಲ್ಯನು ಏನನ್ನಾದರೂ ಮಾಡಲು ಮನಸ್ಸು ಮಾಡುವುದಕ್ಕಿಂತ ಮೊದಲೇ ಅವರ ಮೇಲೆ ಆಕ್ರಮಣಮಾಡು. ಪಾಂಡವರಿಗೆ ರಾಜ್ಯವನ್ನು ದೊರಕಿಸಲು ವಾರ್ಷ್ಣೇಯನು ಯಾದವ ಸೇನೆಯನ್ನು

ತರುವುದರ ಮೊದಲೇ ಅವರ ಮೇಲೆ ಆಕ್ರಮಣಮಾಡಬೇಕು. ಪಾಂಡವರಿಗೋಸ್ಕರ ಕೃಷ್ಣನು ತನ್ನ ಸಂಪತ್ತು, ವಿವಿಧ ಭೋಗಗಳು ಮತ್ತೇನು ರಾಜ್ಯವನ್ನೂ ತ್ಯಾಗಮಾಡುತ್ತಾನೆ. ಮಹಾತ್ಮ ಭರತನು ತನ್ನ ವಿಕ್ರಮದಿಂದಲೇ ಈ ಮಹಿಯನ್ನು ಪಡೆದನು. ಪಾಕಶಾಸನನೂ ಕೂಡ ತನ್ನ ವಿಕ್ರಮದಿಂದಲೇ ಮೂರುಲೋಕಗಳನ್ನು ಗೆದ್ದನು. ಕ್ಷತ್ರಿಯರಲ್ಲಿ ವಿಕ್ರಮವನ್ನೇ ಪ್ರಶಂಸಿಸುತ್ತಾರೆ. ಶೂರರಿಗೆ ವಿಕ್ರಮವೇ ಸ್ವಧರ್ಮ. ಮಹಾ ಚತುರಂಗಬಲದಿಂದ ದ್ರುಪದನನ್ನು ಸದೆಬಡಿದು ಶೀಘ್ರವಾಗಿ ಪಾಂಡವರನ್ನು ಇಲ್ಲಿಗೆ ಕರೆತರಬೇಕು. ಸಾಮ, ದಾನ, ಭೇದ, ಯಾವುದರಿಂದಲೂ ಪಾಂಡವರನ್ನು ಜಯಿಸಲು ಸಾಧ್ಯವಿಲ್ಲ. ವಿಕ್ರಮದಿಂದ ಮಾತ್ರ ಅವರನ್ನು ಜಯಿಸಬಹುದು. ವಿಕ್ರಮದಿಂದ ಅವರನ್ನು ಜಯಿಸಿ ಅಖಿಲ ಮೇದಿನಿಯನ್ನು ಭೋಗಿಸು. ಬೇರೆ ಯಾವ ಕಾರ್ಯೋಪಾಯವೂ ನನಗೆ ತೋಚುತ್ತಿಲ್ಲ."

ರಾಧೇಯನ ಮಾತುಗಳನ್ನು ಕೇಳಿದ ಪ್ರತಾಪಿ ಧೃತರಾಷ್ಟ್ರನು ಅದನ್ನು ಪ್ರಶಂಸಿಸಿ ನಂತರ ಈ ಮಾತುಗಳನ್ನಾಡಿದನು: "ಮಹಾಪ್ರಜ್ಞ ಕೃತಾಸ್ತ್ರ ಸೂತನಂದನ! ಈ ವಿಕ್ರಮ ಮಾತುಗಳು ನಿನ್ನಂಥವರಿಗೆ ಸರಿಯೆನಿಸುತ್ತದೆ. ಆದರೆ ಭೀಷ್ಮ, ದ್ರೋಣ, ವಿದುರ ಮತ್ತು

ನೀವಿಬ್ಬರೂ ಸೇರಿ ನಮಗೆ ಸುಖವನ್ನು ತರುವಂತೆ ಏನಾದರೂ ಯೋಚಿಸಿ.” ನಂತರ ಆ ಸುಮಹಾಯಶ ಮಹಾರಾಜ ಧೃತರಾಷ್ಟ್ರನು ಆ ಎಲ್ಲ ಮಂತ್ರಿಗಳನ್ನೂ ಕರೆಯಿಸಿ, ಅವರೊಂದಿಗೆ ಮಂತ್ರಾಲೋಚನೆ ಮಾಡಿದನು.

ಭೀಷ್ಮನು ಹೇಳಿದನು:

> “ಪಾಂಡುಪುತ್ರರೊಂದಿಗೆ ಯುದ್ಧವು ನನಗೆ ಎಂದೂ ಇಷ್ಟವಾಗುವುದಿಲ್ಲ. ನನಗೆ ಧೃತರಾಷ್ಟ್ರನು ಹೇಗೋ ಹಾಗೆ ಪಾಂಡುವೂ ಅಗಿದ್ದನು ಎನ್ನುವುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲದಿರಲಿ. ಗಾಂಧಾರಿಯರ ಪುತ್ರರ ಹಾಗೆ ನನಗೆ ಕುಂತೀಸುತರೂ ಹೌದು. ಅವರು ಹೇಗೆ ಧೃತರಾಷ್ಟ್ರನ ರಕ್ಷಣೆಯಲ್ಲಿದ್ದಾರೋ ಹಾಗೆ ನನ್ನ ರಕ್ಷಣೆಯಲ್ಲಿಯೂ ಇದ್ದಾರೆ. ಅವರು ನನಗೆ ಮತ್ತು ರಾಜನಿಗೆ ಹೇಗೋ ಹಾಗೆ ದುರ್ಯೋಧನನಿಗೂ ಮತ್ತು ಅನ್ಯ ಕುರುಗಳೆಲ್ಲರಿಗೂ ಹೌದು. ಹೀಗಿರುವಾಗ ನಾನು ಯುದ್ಧವನ್ನು ಬಯಸುವುದಿಲ್ಲ. ಆ ವೀರರೊಂದಿಗೆ ಸಂಧಿಮಾಡಿಕೊಂಡು ಅವರಿಗೆ ಭೂಮಿಯನ್ನು ಕೊಡಬೇಕು. ಪಿತ ಪ್ರಪಿತಾಮಹರ ಈ ರಾಜ್ಯವು ಆ ಕುರೂತ್ತಮರದ್ದೂ ಹೌದು. ದುರ್ಯೋಧನ! ನೀನು ಹೇಗೆ ಈ ರಾಜ್ಯವನ್ನು ನನ್ನ ಪಿತ್ರಾರ್ಜಿತವೆಂದು ಕಾಣುತ್ತೀಯೋ ಹಾಗೆ ಪಾಂಡವರೂ

ಕಾಣುತ್ತಾರೆ. ತಪಸ್ವಿ ಪಾಂಡವರಿಗೆ ರಾಜ್ಯ ದೊರೆಯದಿದ್ದರೆ ಇದು ನಿಮಗಾಗಲೀ ಅಥವಾ ಬೇರೆ ಯಾವ ಭಾರತನಿಗಾಗಲೀ ಏಕೆ ದೊರೆಯಬೇಕು? ನೀನು ಈ ರಾಜ್ಯವನ್ನು ಧರ್ಮಪೂರ್ವಕ ಪಡೆದಿದ್ದರೆ ನಿನಗಿಂಥಲೂ ಮೊದಲೇ ಅವರು ರಾಜ್ಯವನ್ನು ಪಡೆದಿದ್ದರು ಎಂದು ನನ್ನ ಅಭಿಪ್ರಾಯ. ಅರ್ಧ ರಾಜ್ಯವನ್ನು ಅವರಿಗೆ ಒಳ್ಳೆಯರೀತಿಯಲ್ಲಿ ನೀಡೋಣ. ಅದೇ ನಮ್ಮೆಲ್ಲರ ಹಿತದಲ್ಲಿದೆ. ಬೇರೆ ಏನು ಮಾಡಿದರೂ ಅದು ನಮಗೆ ಹಿತವಾಗುವುದಿಲ್ಲ. ಮತ್ತು ನಿನ್ನ ಮೇಲೆಯೇ ಸಕಲ ಅಪಕೀರ್ತಿಯೂ ಬರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಕೀರ್ತಿಯೇ ಪರಮ ಬಲವು. ಕೀರ್ತಿಯನ್ನು ರಕ್ಷಣೆಮಾಡಿಕೋ. ಕೀರ್ತಿಯನ್ನು ಕಳೆದುಕೊಂಡ ಮನುಷ್ಯನ ಜೀವನವೇ ನಿಷ್ಫಲವೆಂದು ಹೇಳುತ್ತಾರೆ. ಮನುಷ್ಯನ ಕೀರ್ತಿಯು ಅವನ ಜೀವವಿರುವವರೆಗೂ ನಶಿಸುವುದಿಲ್ಲ. ಆದರೆ ಕೀರ್ತಿಯನ್ನೇ ಕಳೆದುಕೊಂಡವನ ಜೀವನವೇ ನಶಿಸಿಹೋದಂತೆ. ಈ ನಿನ್ನ ಕುರು ಪೂರ್ವಜರಿಗೆ ಅನುರೂಪ ಕುರುಕುಲೋಚಿತ ಧರ್ಮವನ್ನು ಪರಿಪಾಲಿಸು. ಆ ವೀರರೆಲ್ಲರೂ ಬದುಕಿದ್ದಾರೆ ಎನ್ನುವುದೇ ನಮ್ಮ ಅದೃಷ್ಟ, ಆ ಪೃಥೆಯು ಜೀವಂತವಿದ್ದಾಳೆ ಎನ್ನುವುದೇ ನಮ್ಮ ಅದೃಷ್ಟ, ಮತ್ತು ಅವನ ಉಪಾಯದಲ್ಲಿ

ಸಫಲನಾಗದೇ ಪಾಪಿ ಪುರೋಚನನು ಸತ್ತುಹೋದ ಎನ್ನುವುದೇ ನಮ್ಮ ಅದೃಷ್ಟ. ಕುಂತಿಗೆ ನಡೆದುಹೋದದ್ದನ್ನು ಕೇಳಿದಂದಿನಿಂದ ನಾನು ಈ ಲೋಕದಲ್ಲಿ ಜೀವಿಸಿರುವ ಯಾರೊಬ್ಬರ ಮುಖವನ್ನು ನೋಡಲೂ ಶಕ್ಯನಾಗಿರಲಿಲ್ಲ. ಜನರು ನಿನ್ನನ್ನು ದೂಷಿಸುವಷ್ಟು ಪುರೋಚನನನ್ನು ದೂಷಿಸುವುದಿಲ್ಲ. ಅವರು ಜೀವಂತವಾಗಿದ್ದಾರೆ ಎನ್ನುವುದು ನಿನ್ನ ಮೇಲಿರುವ ಅಪವಾದವನ್ನು ತೆಗೆದುಹಾಕಿದೆ. ಪಾಂಡವರ ದರ್ಶನವು ಬಯಸುವಂಥಹುದೇ ಆಗಿದೆ. ಈ ವೀರರು ಜೀವಂತವಿರುವಹಾಗೆ ಸ್ವಯಂ ವಜ್ರಭೃತನೂ ಕೂಡ ಅವರ ಪಿತ್ರೋಂಶವನ್ನು ತೆಗೆದುಕೊಳ್ಳಲು ಶಕ್ಯನಿಲ್ಲ. ಅವರೆಲ್ಲರೂ ಧರ್ಮದಲ್ಲಿ ನಿರತರಾಗಿದ್ದಾರೆ, ಎಲ್ಲರೂ ಒಂದೇ ಮನಸ್ಸುಳ್ಳವರಾಗಿದ್ದಾರೆ ಮತ್ತು ಅವರೂ ಕೂಡ ರಾಜ್ಯದ ಮೇಲೆ ಸಮನಾದ ಹಕ್ಕುಳ್ಳವರಾದರೂ ಅಧರ್ಮಪೂರ್ವಕ ಅವರು ಅದರಿಂದ ವಂಚಿತರಾಗಿದ್ದಾರೆ. ನನಗೆ ಪ್ರೀತಿಯುಕ್ತವಾದುದನ್ನು ಮಾಡಲು ಅಥವಾ ಧರ್ಮಯುಕ್ತ ಕ್ಷೇಮ ಕಾರ್ಯವನ್ನು ಮಾಡಲು ಬಯಸಿದರೆ, ಅವರಿಗೆ ಅರ್ಧರಾಜ್ಯವನ್ನು ಕೊಡಬೇಕು.”

ದ್ರೋಣನು ಹೇಳಿದನು:

“ನಾನೂ ಕೂಡ ಮಹಾತ್ಮ ಭೀಷ್ಮನ ಅಭಿಪ್ರಾಯಗಳನ್ನೇ ಹೊಂದಿದ್ದೇನೆ. ಕೌಂತೇಯರಿಗಾಗಿ ರಾಜ್ಯವನ್ನು ಸವಿಭಜನೆ ಮಾಡಬೇಕು. ಅದೇ ಸನಾತನ ಧರ್ಮ. ತಕ್ಷಣವೇ ದ್ರುಪದನಲ್ಲಿಗೆ ಯಾರಾದರೂ ಒಳ್ಳೆಯದನ್ನೇ ಮಾತನಾಡುವವನನ್ನು ಅವರಿಗಾಗಿ ಬಹು ರತ್ನಗಳೊಂದಿಗೆ ಕಳುಹಿಸಿಕೊಡು. ಅವನು ಗೌರವಾರ್ಥವಾಗಿ ಬಹಳಷ್ಟು ಉಡುಗೊರೆಗಳನ್ನು ತೆಗೆದುಕೊಂಡು ಹೋಗಲಿ ಮತ್ತು ಅಲ್ಲಿ ಎರಡೂ ಕುಲಗಳ ಸಂಯೋಗದಿಂದ ಉಂಟಾದ ಪರಮ ಅಭಿವೃದ್ಧಿಯ ಕುರಿತು ಮಾತನಾಡಲಿ. ನೀನು ಮತ್ತು ದುರ್ಯೋಧನ ಈರ್ವರೂ ಸಂತೋಷಗೊಂಡಿದ್ದೀರಿ ಎಂದು ಪುನಃ ಪುನಃ ಅವನು ದ್ರುಪದ-ದೃಷ್ಟದ್ಯುಮ್ನರ ಎದುರು ಹೇಳಲಿ. ಅವನು ಪುನಃ ಪುನಃ ಕೌಂತೇಯರು ಮತ್ತು ಮಾದ್ರೀ ಪುತ್ರರನ್ನು ಸಂತವಿಸುತ್ತಾ ಈ ಸಂಯೋಗದ ಉಚಿತತ್ವ, ಪ್ರಿಯತ್ವ ಮತ್ತು ಯೋಗವನ್ನೂ ಕೂಡ ವರ್ಣಿಸಲಿ. ನಿನ್ನ ವಚನದಂತೆ ಅವನು ದ್ರೌಪದಿಗೆ ಹಿರಣ್ಮಯ ಶುಭ್ರ ಬಹು ಆಭರಣಗಳನ್ನು ನೀಡಲಿ. ಹಾಗೆಯೇ ದ್ರುಪದನ ಸರ್ವ ಪುತ್ರರಿಗೂ, ಸರ್ವ ಪಾಂಡವರಿಗೂ, ಮತ್ತು ಕುಂತಿಗೂ ಯುಕ್ತವಾದುದ್ದನ್ನು ನೀಡಲಿ. ಈ ರೀತಿ ಪಾಂಡವರೊಡನೆ ದ್ರುಪದನು ಸಂತ್ವಸಮಾಯುಕ್ತನಾದ ನಂತರ ಅವರ ಹಿಂದಿರುಗುವುದರ

ಕುರಿತು ಪ್ರಸ್ತಾವಿಸಬೇಕು. ಆ ವೀರರು ಅಲ್ಲಿಂದ ಹೊರಟ ನಂತರ ದುಃಶಾಸನ ಮತ್ತು ವಿಕರ್ಣರು ಶೋಭನೀಯ ಸೇನೆಯನ್ನು ತೆಗೆದುಕೊಂಡು ಹೋಗಿ ಪಾಂಡವರನ್ನು ಇಲ್ಲಿಗೆ ಕರೆತರಲಿ. ಅದರ ನಂತರ ನಿನ್ನಿಂದ ಮತ್ತು ಪುರಜನರ ಸತ್ಕಾರದೊಂದಿಗೆ ಅವರು ತಮ್ಮ ತಂದೆಯ ಸ್ಥಾನವನ್ನು ಸ್ವೀಕರಿಸಲಿ. ಇದೇ ನೀನು ನಿನ್ನ ಮತ್ತು ಅವನ ಪುತ್ರರೊಡನೆ ನಡೆದುಕೊಳ್ಳಬೇಕಾದ ರೀತಿ. ಭೀಷ್ಮನಿಗೂ ಇದರ ಸಮ್ಮತಿಯಿದೆ."

ಕರ್ಣನು ಹೇಳಿದನು:

"ಸರ್ವಕಾರ್ಯಗಳ ನಂತರವೂ ಇವರೀರ್ವರು ಸಂಪತ್ತಿನಿಂದ ಗೌರವಿತರಾಗಿದ್ದಾರೆ. ಆದರೂ ನಿನ್ನ ಶ್ರೇಯಕ್ಕೆ ಸರಿಯಾದ ಸಲಹೆನೀಡುತ್ತಿಲ್ಲ ಎನ್ನುವುದಕ್ಕಿಂತ ಹೆಚ್ಚಿನ ಅದ್ಭುತವೇನಿದೆ? ದುಷ್ಟಮನಸ್ಸಿನಿಂದ, ತನ್ನ ನಿಜ ಅಭಿಪ್ರಾಯಗಳನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು ಹೇಳಿದ್ದುದನ್ನು ಸತ್ಯವಂತರು ಹೇಗೆ ತಾನೆ ಶ್ರೇಯಸ್ಸೆಂದು ಸ್ವೀಕರಿಸಬಹುದು? ಕಷ್ಟಸಮಯದಲ್ಲಿ ಮಿತ್ರರು ಶ್ರೇಯಸ್ಸನ್ನು ತರಬಹುದು ಅಥವಾ ತರದೇ ಇರಬಹುದು. ದುಃಖ ಅಥವಾ ಸುಖ ಸರ್ವವೂ ವಿಧಿಯನ್ನವಲಂಬಿಸಿದೆ. ಕೃತಪ್ರಜ್ಞನಾಗಿರಲಿ, ಅಕೃತಪ್ರಜ್ಞನಾಗಿರಲಿ,

ಬಾಲಕನಾಗಿರಲಿ, ವೃದ್ಧನಾಗಿರಲಿ, ಸಸಹಾಯಕನಾಗಿರಲಿ, ಅಸಹಾಯಕನಾಗಿರಲಿ, ಎಲ್ಲ ಮಾನವರೂ ಎಲ್ಲಕಡೆಯೂ ಇದನ್ನು ತಿಳಿದುಕೊಂಡಿದ್ದಾರೆ. ಹಿಂದೆ ಅಂಬುವೀಚ ಎಂದು ಖ್ಯಾತ ಮಗಧ ಮಹೀಕ್ಷಿತರ ರಾಜನು ರಾಜಗೃಹದಲ್ಲಿ ಇದ್ದನೆಂದು ಕೇಳಿದ್ದೇವೆ. ಆ ನೃಪನು ಅತ್ಯಂತ ಬಲಹೀನನಾಗಿದ್ದು ಕೇವಲ ಉಸಿರಾಡುತ್ತಿದ್ದನು. ತನ್ನ ಎಲ್ಲ ಕಾರ್ಯಗಳಲ್ಲಿಯೂ ಅಮಾತ್ಯನಮೇಲೆ ಅವಲಂಬಿಸಿದ್ದನು. ಆ ಅಮಾತ್ಯ ಮಹಾಕರ್ಣಿಯು ತಾನೇ ಏಕೇಶ್ವರನಾದನು. ಆ ಅಮಾತ್ಯನು ಎಲ್ಲ ಅಧಿಕಾರಗಳನ್ನೂ ತೆಗೆದುಕೊಂಡು ರಾಜನನ್ನು ಕೀಳಾಗಿ ಕಾಣತೊಡಗಿದನು. ಆ ಮೂಢನು ರಾಜನ ಸರ್ವವನ್ನೂ, ಸ್ತ್ರೀಯರು, ರತ್ನಧನಗಳನ್ನು, ಸಕಲ ಐಶ್ವರ್ಯವನ್ನು ತನ್ನದಾಗಿಸಿಕೊಂಡು ಸ್ವಯಂ ಭೋಗಿಸತೊಡಗಿದನು. ತೆಗೆದುಕೊಂಡಷ್ಟೂ ಅವನ ಲೋಭವು ಹೆಚ್ಚಾಯಿತು. ಎಲ್ಲವನ್ನೂ ತೆಗೆದುಕೊಂಡಿದ್ದ ಅವನು ರಾಜ್ಯವನ್ನೂ ತನ್ನದಾಗಿಸಿಕೊಳ್ಳಲು ಬಯಸಿದನು. ತನ್ನ ಎಲ್ಲ ಶಕ್ತಿಯನ್ನೂ ಕಳೆದುಕೊಂಡು ಕೇವಲ ಉಸಿರಾಡುತ್ತಿದ್ದ ಆ ರಾಜನಿಂದ ಅವನು ರಾಜ್ಯವನ್ನು ಪಡೆಯಲು ಶಕ್ತನಾಗಲಿಲ್ಲ ಎಂದು ಕೇಳಿದ್ದೇವೆ. ಅವನ ರಾಜತ್ವವು ವಿಧಿವಿಹಿತವಾದುದಲ್ಲದೇ ಬೇರೆ ಏನಾಗಿತ್ತು? ವಿಶಾಂಪತೇ! ರಾಜ್ಯವು ನಿನ್ನದೆಂದೇ ವಿಧಿವಿಹಿತವಾಗಿದ್ದರೆ

ಅದು ಸರ್ವಲೋಕದ ಎದುರು ನಿನ್ನದಾಗಿಯೇ ಒಳಿಯುತ್ತದೆ ಎನ್ನುವುದು ಖಂಡಿತ. ಹಾಗಿರದಿದ್ದರೆ ನೀನು ಎಷ್ಟು ಪ್ರಯತ್ನಿಸಿದರೂ ಬಯಸಿದರೂ ಅದು ನಿನ್ನದಾಗಿರುವುದಿಲ್ಲ. ಇದನ್ನು ತಿಳಿದು ನಿನ್ನ ಮಂತ್ರಿಗಳ ಸಲಹೆಯು ಎಷ್ಟರ ಮಟ್ಟಿಗೆ ಒಳ್ಳೆಯದು ಅಥವಾ ಒಳ್ಳೆಯದಲ್ಲ ಎನ್ನುವುದನ್ನು ತಿಳಿ."

ದ್ರೋಣನು ಹೇಳಿದನು:

"ನೀನು ಯಾವ ಭಾವದೋಷದಿಂದ ಮತ್ತು ಯಾವ ಅರ್ಥದಿಂದ ಮಾತನಾಡುತ್ತಿದ್ದೀಯೆ ಎಂದು ತಿಳಿದಿದೆ. ದುಷ್ಟನಾದ ನೀನು ಪಾಂಡವರ ಕುರಿತು ನಿನ್ನ ದ್ವೇಶವನ್ನು ಪ್ರತಿಪಾದಿಸುತ್ತಿದ್ದೀಯೆ. ಕರ್ಣ! ಆದರೆ ನಾನು ಹೇಳಿದ್ದುದು ಕುರುವರ್ಧನಕ್ಕೇ ಪರಮ ಹಿತವಾಗಿದ್ದುದು. ಇದನ್ನು ನೀನು ದುಷ್ಟವಾದುದೆಂದು ತಿಳಿಯುವುದಾದರೆ ಪರಮ ಹಿತವಾದುದು ಏನೆಂಬುದನ್ನು ನೀನೇ ಹೇಳು. ನಾನು ಹೇಳಿದ್ದುದು ಪರಮ ಹಿತವಾದುದಲ್ಲ ಅದು ಬೇರೆಯದನ್ನೇ ಸಾಧಿಸುತ್ತದೆ ಎನ್ನುವುದಿದ್ದರೆ ಅಲ್ಪ ಸಮಯದಲ್ಲಿಯೇ ಕುರುಗಳ ವಿನಾಶವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ."

ವಿದುರನು ಹೇಳಿದನು:

“ರಾಜನ್! ನಿನ್ನ ಬಾಂಧವರು ನಿನಗೆ ಶ್ರೇಯಸ್ಸನ್ನು ತರುವ ಮಾತುಗಳನ್ನೇ ಆಡಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಕೇಳಲಿಕ್ಕೆ ಮನಸ್ಸಿಲ್ಲದಿರುವವರಿಗೆ ಆ ಮಾತುಗಳು ಒಳ್ಳೆಯದೆನಿಸುವುದಿಲ್ಲ. ಕುರುಸತ್ತಮ ಭೀಷ್ಮ ಶಾಂತನವನು ನಿನ್ನ ಹಿತಕ್ಕಾಗಿಯೇ ಆ ಮಾತುಗಳನ್ನಾಡಿದನು. ಆದರೆ ನೀನು ಅವುಗಳನ್ನು ಸ್ವೀಕರಿಸಲಿಲ್ಲ. ದ್ರೋಣನೂ ಕೂಡ ನಿನ್ನ ಹಿತವನ್ನುದ್ದೇಶಿಸಿ ಬಹಳಷ್ಟು ಮಾತನಾಡಿದನು. ಆದರೆ ಅವುಗಳು ನಿನಗೆ ಹಿತಕಾರಕವೆಂದು ರಾಧಾಸುತ ಕರ್ಣನು ಸ್ವೀಕರಿಸುವುದಿಲ್ಲ. ಆದರೆ ನನ್ನ ಯೋಚನೆಯಲ್ಲಿ ಈ ಇಬ್ಬರು ಪುರುಷಸಿಂಹರನ್ನು ಬಿಟ್ಟು ಬೇರೆ ಯಾರೂ ನಿನ್ನ ಸುಹೃದಯರಲ್ಲಿ ಉತ್ತಮರೆಂದು ಕಾಣುತ್ತಿಲ್ಲ. ಇವರಿಬ್ಬರೂ ವಯಸ್ಸಿನಲ್ಲಿ, ಪ್ರಜ್ಞೆಯಲ್ಲಿ, ಮತ್ತು ಕಲಿಕೆಯಲ್ಲಿ ವೃದ್ಧರಾಗಿದ್ದಾರೆ. ಮತ್ತು ಇವರಿಗೆ ನೀನು ಮತ್ತು ಪಾಂಡುಸುತರು ಇಬ್ಬರೂ ಒಂದೇ. ಧರ್ಮದಲ್ಲಿಯಾಗಲೀ ಸತ್ಯದಲ್ಲಿಯಾಗಲೀ ಅವರೀರ್ವರೂ ದಾಶರಥಿ ರಾಮ ಮತ್ತು ಗಯನಿಗಿಂಥ ಕಡಿಮೆಯಿಲ್ಲ ಎನ್ನುವುದರಲ್ಲಿ ಸಂಶಯವಿಲ್ಲ. ಹಿಂದೆ ಎಂದೂ ಅವರು ನಿನಗೆ ಅಶ್ರೇಯ ಸಲಹೆಯನ್ನಾಗಲೀ ಅಥವಾ ನಿನಗೆ ಯಾವುದೇ ಅಪಕೃತ ಮಾಡಿದುದನ್ನು ನೀನು ಕಂಡಿಲ್ಲ. ಹಾಗಿದ್ದಾಗ ಈಗ ಏಕೆ ಈ ಸತ್ಯಪರಾಕ್ರಮಿ ಪುರುಷವ್ಯಾಘ್ರರು ನಿನಗೆ ಅಶ್ರೇಯ

ಸಲಹೆಯನ್ನು ನೀಡುತ್ತಾರೆ? ಲೋಕದಲ್ಲೇ ಪ್ರಜ್ಞಾವಂತ ಈ ನರಶ್ರೇಷ್ಠರು ನಿನ್ನ ವಿಷಯದಲ್ಲಿ ಎಂದೂ ವಿರುದ್ಧ ಮಾತುಗಳನ್ನಾಡುವುದಿಲ್ಲ. ಇದು ನನ್ನ ಮೂಲಭೂತ ಯೋಚನೆಯಾಗಿದೆ. ಈ ಇಬ್ಬರು ಧರ್ಮಜ್ಞರು ತಮ್ಮ ವೈಯಕ್ತಿಕ ಲಾಭಕ್ಕೋಸ್ಕರ ಯಾವುದೇ ಒಂದು ಪಕ್ಷದ ಪರವಾಗಿ ಮಾತನಾಡುವುದಿಲ್ಲ. ನಿನ್ನ ಪರಮ ಶ್ರೇಯಸ್ಸನ್ನೇ ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ. ದುರ್ಯೋಧನರೇ ಮೊದಲಾದವರು ನಿನಗೆ ಹೇಗೆ ಪುತ್ರರೋ ಹಾಗೆ ಪಾಂಡವರೂ ಕೂಡ ನಿನ್ನ ಪುತ್ರರು. ಇದರಲ್ಲಿ ಯಾವುದೇ ಸಂಶಯವಿಲ್ಲ. ಒಂದು ವೇಳೆ ನಿನ್ನ ಮಂತ್ರಿಗಳು ಅವಿವೇಕದಿಂದ ಪಾಂಡವರಿಗೆ ಶ್ರೇಯಸ್ಸಾಗದ ಸಲಹೆಗಳನ್ನು ನೀಡಿದರೆ, ಅವರು ವಿಶೇಷವಾಗಿ ನಿನ್ನ ಶ್ರೇಯಸ್ಸನ್ನು ಪರಿಗಣಿಸುತ್ತಿಲ್ಲ ಎಂದು ಸ್ಪಷ್ಟ. ಅಥವಾ, ನಿನ್ನ ಹೃದಯದಲ್ಲಿ ನಿನ್ನ ಮಕ್ಕಳ ಮೇಲೇ ವಿಶೇಷ ಪ್ರೀತಿಯಿದ್ದರೆ, ಅದನ್ನು ನಿನ್ನ ಒಳಗಿದ್ದುದನ್ನು ಬಹಿರಂಗಪಡಿಸುವುದರಿಂದ ನಿನಗೆ ಶ್ರೇಯಸ್ಸಾಗುವುದಿಲ್ಲ ಎನ್ನುವುದೂ ಖಂಡಿತ. ಹಾಗಿದ್ದರೆ, ಈ ಮಹಾತ್ಮ ಮಹಾದ್ಯುತಿಗಳಿಬ್ಬರೂ ಬಹಿರಂಗವಾಗಿ ಮಾತನಾಡದೇ ಇದ್ದರೂ ನಿನ್ನ ನಿರ್ಧಾರಗಳು ಎಂದೂ ಬದಲಾವಣೆಯಾಗಲಾರದು. ಪಾಂಡವರನ್ನು ಗೆಲ್ಲುವುದು ಅಶಕ್ಯ ಎನ್ನುವ ಈ

ಪುರುಷರ್ಷಭರ ಮಾತು ಸತ್ಯ. ಇನ್ನು ನಿನಗೆ ಮಂಗಳವಾಗಲಿ. ಶ್ರೀಮಾನ್, ಪರಂತಪ, ಪಾಂಡವ ಸವ್ಯಸಾಚಿಯನ್ನು ಸಂಗ್ರಾಮದಲ್ಲಿ ಮಘವತನಿಗೂ ಕೂಡ ಗೆಲ್ಲಲು ಹೇಗೆ ಶಕ್ಯ? ಮಹಾಬಾಹು, ಆನೆಗಳ ಬಲವನ್ನುಳ್ಳ ಮಹಾ ಭೀಮಸೇನನನ್ನು, ಅಮರರೂ ಕೂಡ ಹೇಗೆ ಯುದ್ಧದಲ್ಲಿ ಜಯಿಸಲು ಶಕ್ಯ? ಹಾಗೆಯೇ ಯಮಸುತರಂತಿರುವ ಯುದ್ಧ ಕೃತಿ ಯಮಳರನ್ನು ಜೀವಂತವಿರಲು ಇಚ್ಛಿಸುವವನು ಹೇಗೆ ರಣದಲ್ಲಿಗೆಲ್ಲಲು ಸಾಧ್ಯ? ಯಾರಲ್ಲಿ ಧೃತಿ, ಅನುಕ್ರೋಶ, ಕ್ಷಮಾ, ಸತ್ಯ ಮತ್ತು ಪರಾಕ್ರಮಗಳು ನಿತ್ಯವೂ ನೆಲೆಸಿರುವೆಯೋ ಆ ಪಾಂಡವಶ್ರೇಷ್ಠನನ್ನು ರಣದಲ್ಲಿ ಹೇಗೆ ಜಯಿಸಬಹುದು? ಯಾರ ಪಕ್ಷಧರನಾಗಿ ರಾಮನಿದ್ದಾನೆಯೋ, ಯಾರ ಮಂತ್ರಿಯಾಗಿ ಜನಾರ್ದನನಿದ್ದಾನೆಯೋ, ಮತ್ತು ಯಾರ ಪಕ್ಷದಲ್ಲಿ ಸಾತ್ಯಕಿಯ ಬೆಂಬಲವಿದೆಯೋ ಅವರು ಗೆಲ್ಲದೇ ಇರುವವರು ಇನ್ನು ಯಾರಿದ್ದಾರೆ? ಮಾವನನ್ನಾಗಿ ದ್ರುಪದನನ್ನು ಪಡೆದ ಮತ್ತು ದೃಷ್ಟದ್ಯುಮ್ನನೇ ಮೊದಲಾದ ಪಾರ್ಷತ ದ್ರುಪದಾತ್ಮಜರನ್ನು ಬಾವಂದಿರನ್ನಾಗಿ ಹೊಂದಿದ ಅವರನ್ನು ಗೆಲ್ಲಲು ಹೇಗೆ ಸಾದ್ಯ? ಅವರನ್ನು ಗೆಲ್ಲುವುದು ಅಶಕ್ಯ ಮತ್ತು ಧರ್ಮದ ಪ್ರಕಾರ ಅವರು ಮೊದಲೇ ಇದರ ದಾಯಾದಿಗಳು ಎಂದು ತಿಳಿದು

ಅವರೊಂದಿಗೆ ಒಳ್ಳೆಯದಾಗಿ ನಡೆದುಕೋ. ಪುರೋಚನನ ಕೃತ್ಯದಿಂದ ನಿನಗಾದ ನಿರ್ದಿಗ್ದ ಅಯಶವನ್ನು ಅವರ ಮೇಲೆ ಅನುಗ್ರಹಮಾಡುವುದರ ಮೂಲಕ ನೀನೇ ಶುದ್ಧಪಡೆಸಿಕೋ. ಹಿಂದೆ ಮಹಾರಾಜ ದ್ರುಪದನೂ ಕೂಡ ವೈರವನ್ನು ಸಾಧಿಸುತ್ತಿದ್ದನು. ಅವನ ಸಂಬಧದ ಮೂಲಕ ನಿನ್ನ ಪಕ್ಷವನ್ನು ವೃದ್ಧಿಪಡೆಸಿಕೋ. ಬಹುಸಂಖ್ಯೆಯಲ್ಲಿರುವ ದಾಶಾರ್ಹರು ಬಲವಂತರು. ಅವರು ಕೃಷ್ಣನಿದ್ದಲ್ಲೇ ಇರುತ್ತಾರೆ ಮತ್ತು ಎಲ್ಲಿ ಕೃಷ್ಣನಿರುವನೋ ಅಲ್ಲಿಯೇ ಜಯ. ಸಮಾಚರದಿಂದ ತಡೆಯಬಹುದಾದ ಈ ಯುದ್ಧವನ್ನು ಕೈಗೊಳ್ಳುವ ಯಾರು ತಾನೇ ವಿಧಿಯ ಶಾಪಕ್ಕೊಳಗಾಗಿದ್ದಾನೆ? ನಗರ ಮತ್ತು ಗ್ರಾಮೀಣ ಜನರು ಪಾರ್ಥರು ಜೀವಂತವಿದ್ದಾರೆ ಎಂದು ಕೇಳಿದ್ದಾರೆ ಮತ್ತು ಅವರನ್ನು ನೋಡಲು ಕಾತರರಾಗಿದ್ದಾರೆ. ಅವರಿಗೆ ಆ ಸಂತೋಷವನ್ನು ನೀಡು. ದುರ್ಯೋಧನ, ಕರ್ಣ, ಮತ್ತು ಶಕುನಿ ಸೌಬಲರು ಅಧರ್ಮಯುಕ್ತ ದುಷ್ಪ್ರಜ್ಞ ಬಾಲಕರಾಗಿದ್ದಾರೆ. ಅವರ ಮಾತುಗಳಂತೆ ಮಾಡಬೇಡ! ದುರ್ಯೋಧನನ ಅಪರಾಧದಿಂದ ಈ ರಾಜ್ಯವು ವಿನಾಶವಾಗುತ್ತದೆ ಎಂದು ನಾನು ನಿನಗೆ ಹಿಂದೆಯೇ ಹೇಳಿದ್ದೆ."

ಧೃತರಾಷ್ಟ್ರನು ಹೇಳಿದನು:

“ವಿದ್ವಾನ್ ಶಾಂತನವ ಭೀಷ್ಮ ಮತ್ತು ಭಗವಾನೃಷಿ ದ್ರೋಣರು ನನಗೆ ಪರಮ ಹಿತವನ್ನು ತರುವಂಥ ಮಾತುಗಳನ್ನು ಹೇಳಿದ್ದಾರೆ. ನೀನೂ ಕೂಡ ನನಗೆ ಸತ್ಯವನ್ನು ನುಡಿದಿದ್ದೀಯೆ. ಧರ್ಮದ ಪ್ರಕಾರ ಆ ವೀರ ಕುಂತೀಪುತ್ರ ಮಹಾರಥಿ ಪಾಂಡುವಿನ ಮಕ್ಕಳು ಹೇಗೋ ಹಾಗೆ ನನ್ನ ಮಕ್ಕಳೂ ಹೌದು ಎನ್ನುವುದರಲ್ಲಿ ಸಂಶಯವೇ ಇಲ್ಲ. ಈ ರಾಜ್ಯವು ನನ್ನ ಮಕ್ಕಳಿಗೆ ಹೇಗೆ ವಿಧಿವತ್ತಾಗಿದೆಯೋ ಹಾಗೆ ಪಾಂಡುಪುತ್ರರಿಗೂ ಕೂಡ ಈ ರಾಜ್ಯವಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಕ್ಷತ್ತ! ಹೋಗಿ ಅವರನ್ನು ಅವರ ತಾಯಿ ಮತ್ತು ದೇವರೂಪಿಣಿ ಕೃಷ್ಣೆಯ ಸಹಿತ ಸುಸತ್ಕೃತರಾಗಿ ಕರೆದುಕೊಂಡು ಬಾ. ಅದೃಷ್ಟವಶಾತ್ ಪಾರ್ಥರು ಜೀವಂತವಾಗಿದ್ದಾರೆ. ಅದೃಷ್ಟವಶಾತ್ ಪೃಥಳು ಜೀವಂತವಾಗಿದ್ದಾಳೆ. ಮಹಾರಥಿಗಳು ದ್ರುಪದಕನ್ಯೆಯನ್ನು ಪಡೆದಿದ್ದಾರೆ, ತುಂಬಾ ಒಳ್ಳೆಯದಾಯಿತು. ಒಳ್ಳೆಯದಾಯಿತು ನಾವೆಲ್ಲರೂ ಅಭಿವೃದ್ಧಿ ಹೊಂದುತ್ತಿದ್ದೇವೆ. ಒಳ್ಳೆಯದಾಯಿತು ಪುರೋಚನನು ಸುಮ್ಮನಾಗಿದ್ದಾನೆ. ಒಳ್ಳೆಯದಾಯಿತು. ನನ್ನ ಪರಮ ದುಃಖವನ್ನು ಕೊಂಡೊಯ್ಯಲಾಗಿದೆ.”

## ದ್ರುಪದನಗರಿಗೆ ವಿದುರನ ಆಗಮನ

ನಂತರ ಧೃತರಾಷ್ಟ್ರನ ಶಾಸನದಂತೆ ವಿದುರನು ಯಜ್ಞಸೇನ ಮತ್ತು ಪಾಂಡವರ ಬಳಿ ಹೋದನು. ಧರ್ಮಜ್ಞನೂ ಸರ್ವಶಾಸ್ತ್ರವಿಶಾರದನೂ ಆದ ಅವನು ದ್ರುಪದನಲ್ಲಿಗೆ ಹೋಗಿ ನ್ಯಾಯಪೂರ್ವಕ ಸರಿಯಾಗಿ ಬರಮಾಡಿಸಿಕೊಂಡನು. ಅವನೂ ಕೂಡ ವಿದುರನನ್ನು ಧಾರ್ಮಿಕವಾಗಿ ಬರಮಾಡಿಕೊಂಡನು ಮತ್ತು ನ್ಯಾಯದಂತೆ ಪರಸ್ಪರರ ಕುಶಲಪ್ರಶ್ನೆಗಳನ್ನು ಕೇಳಿಕೊಂಡರು. ಅಲ್ಲಿ ಅವನು ಪಾಂಡವರನ್ನು ಮತ್ತು ವಾಸುದೇವನನ್ನು ನೋಡಿದನು ಮತ್ತು ಅವರನ್ನು ಸ್ನೇಹಪೂರ್ವಕ ಆಲಂಗಿಸಿ ಅವರ ಆರೋಗ್ಯದ ಕುರಿತು ವಿಚಾರಿಸಿದನು. ಒಬ್ಬೊಬ್ಬರಾಗಿ ಅವರು ಆ ಅಮಿತಬುದ್ಧಿಯನ್ನು ನಮಸ್ಕರಿಸಿದರು ಮತ್ತು ಅವನು ಧೃತರಾಷ್ಟ್ರನ ಸ್ನೇಹಯುಕ್ತ ಮಾತುಗಳಂತೆ ಪುನಃ ಪುನಃ ಆ ಪಾಂಡುನಂದನರ ಆರೋಗ್ಯದ ಕುರಿತು ಕೇಳಿದನು. ಕೌರವರು ಕಳುಹಿಸಿದ್ದ ವಿವಿಧ ರತ್ನ ಮತ್ತು ಐಶ್ವರ್ಯಗಳನ್ನು ಪಾಂಡವರಿಗೆ, ಕುಂತಿಗೆ, ದ್ರೌಪದಿಗೆ ಮತ್ತು ದ್ರುಪದನ ಪುತ್ರರಿಗೆ ಕೊಟ್ಟನು. ನಂತರ ಆ ಅಮಿತಮತಿ ವಿನಯಾನ್ವಿತನು ಕೇಶವ ಮತ್ತು ಪಾಂಡುಪುತ್ರರ ಸನ್ನಿಧಿಯಲ್ಲಿ ದ್ರುಪದನನ್ನುದ್ದೇಶಿಸಿ ಹೇಳಿದನು:

> “ರಾಜನ್! ಅಮಾತ್ಯ ಮತ್ತು ಪುತ್ರರ ಸಹಿತ ನನ್ನ ಮಾತುಗಳನ್ನು ಕೇಳು. ತನ್ನ ಪುತ್ರರು, ಅಮಾತ್ಯರು ಮತ್ತು ಬಾಂಧವರನ್ನು ಸೇರಿ ಧೃತರಾಷ್ಟ್ರನು ಪ್ರೀತಿಯುತವಾಗಿ

ಪುನಃ ಪುನಃ ನಿನ್ನ ಕುಶಲದ ಕುರಿತು ಕೇಳಿದ್ದಾನೆ. ನಿನ್ನೊಡನೆ ಸಂಬಂಧವಾದುದರಿಂದ ಅವನು ಅತ್ಯಂತ ಸಂತಸಗೊಂಡಿದ್ದಾನೆ. ಶಾಂತನವ ಭೀಷ್ಮ ಮತ್ತು ಸರ್ವ ಕೌರವರೂ ಕೂಡ ನಿನ್ನ ಮತ್ತು ಎಲ್ಲರ ಕುಶಲತೆಯನ್ನು ಕೇಳಿದ್ದಾರೆ. ನಿನ್ನ ಪ್ರಿಯಸಖ ಮಹೇಷ್ವಾಸ ದ್ರೋಣ ಭಾರದ್ವಾಜನು ನಿನ್ನನ್ನು ಆಲಿಂಗಿಸಿ ನಿನ್ನ ಕುಶಲವನ್ನು ಕೇಳುತ್ತಾನೆ. ನಿನ್ನೊಡನೆ ಸಂಬಂಧವನ್ನು ಪಡೆದ ಧೃತರಾಷ್ಟ್ರ ಮತ್ತು ಹಾಗೆಯೇ ಇತರ ಕೌರವರೂ ತಮ್ಮನ್ನು ತಾವು ಕೃತಾರ್ಥರೆಂದು ಭಾವಿಸುತ್ತಾರೆ. ನಿನ್ನೊಡನೆಯ ಈ ಸಂಬಂಧದಿಂದ ಆದ ಸಂತೋಷವೂ ನಿನ್ನ ರಾಜ್ಯವನ್ನು ಪಡೆದರೆ ಸಿಗುತ್ತಿರಲಿಲ್ಲ. ಇದನ್ನು ತಿಳಿದು ನೀನು ಪಾಂಡವರಿಗೆ ಹೊರಡಲು ಅನುಮತಿಕೊಡಬೇಕು. ಕೌರವರು ಪಾಂಡುದಾಯಾದಿಗಳನ್ನು ನೋಡಲು ತುಂಬ ತವಕದಿಂದಿದ್ದಾರೆ. ಈ ನರರ್ಷಭರು ದೀರ್ಘಕಾಲದವರೆಗೆ ಹೊರಗಡೆಯೇ ಇದ್ದಾರೆ. ಅವರು ಮತ್ತು ಪೃಥೆಯು ನಗರವನ್ನು ನೋಡಲು ಉತ್ಸುಕರಾಗಿರುತ್ತಾರೆ. ದೇಶ, ಪುರ ಮತ್ತು ಕುರುವರಸ್ತ್ರೀಯರೆಲ್ಲರೂ ಪಾಂಚಾಲಿ ಕೃಷ್ಣೆಯನ್ನು ನೋಡಲು ಆಸೆಯಿಂದ ಕಾಯ್ದು ಕೊಂಡಿದ್ದಾರೆ. ತಡಮಾಡದೇ ಪತ್ನಿಯೊಂದಿಗೆ ಪಾಂಡುಪುತ್ರರು ಹೊರಡುವುದಕ್ಕೆ ಮತ್ತು ನನಗೆ ಹಿಂದಿರುಗುವುದಕ್ಕೆ

ಅನುಮತಿಯನ್ನು ನೀಡು. ಮಹಾತ್ಮ ಪಾಂಡವರಿಗೆ ಅನುಮತಿಯನ್ನಿತ್ತರೆ ಕುಂತಿ ಮತ್ತು ಕೌಂತೇಯರು ಕೃಷ್ಣೆಯ ಸಹಿತ ಬರುತ್ತಾರೆ ಎಂದು ನಾನು ಧೃತರಾಷ್ಟ್ರನಲ್ಲಿಗೆ ಶೀಘ್ರಗರನ್ನು ಕಳುಹಿಸುತ್ತೇನೆ.”

ದ್ರುಪದನು ಹೇಳಿದನು:

“ಮಹಾಪ್ರಜ್ಞ ವಿದುರ! ನೀನು ನನಗೆ ಹೇಳಿದ ಹಾಗೆಯೇ ನನಗೂ ಕೂಡ ಈ ಸಂಬಂಧವಾದುದರಿಂದ ಪರಮ ಹರ್ಷವಾಗುತ್ತಿದೆ. ಮಹಾತ್ಮರು ತಮ್ಮ ಮನೆಗೆ ತೆರಳುವುದು ಯುಕ್ತವಾಗಿದೆ. ಆದರೆ ಇದನ್ನು ನಾನೇ ನನ್ನ ಮಾತುಗಳಲ್ಲಿ ಹೇಳುವುದು ಸರಿಯೆನಿಸುತ್ತಿರಲಿಲ್ಲ. ವೀರ ಕುಂತೀಪುತ್ರ ಯುಧಿಷ್ಠಿರ, ಭೀಮಸೇನ, ಅರ್ಜುನ, ಮತ್ತು ಪುರುಷರ್ಷಭ ಯಮಳರು ಒಪ್ಪಿದರೆ ಮತ್ತು ಧರ್ಮಜ್ಞ ಬಲರಾಮ-ಕೃಷ್ಣರು ಒಪ್ಪಿಕೊಂಡರೆ ಪಾಂಡವರು ಹೋಗಬಹುದು. ಈ ಈರ್ವರು ಪುರುಷವ್ಯಾಘ್ರರು ಅವರ ಪ್ರಿಯರೂ ಹಿತೈಷಿಗಳೂ ಹೌದು.”

ಯುಧಿಷ್ಠಿರನು ಹೇಳಿದನು:

“ರಾಜನ್! ನಾವೆಲ್ಲರೂ ನಿನ್ನ ಸಹಾನುಗರು ಮತ್ತು ಅವಲಂಬಿಸಿರುವೆವು. ನಮ್ಮ ಒಳ್ಳೆಯದಕ್ಕಾಗಿ ನೀನು ಏನನ್ನು ಹೇಳುತ್ತೀಯೋ ಹಾಗೆಯೇ ಮಾಡುತ್ತೇವೆ.”

> “ಸರ್ವಧರ್ಮವನ್ನೂ ತಿಳಿದ ರಾಜ ದ್ರುಪದನು ಒಪ್ಪಿಕೊಂಡರೆ ಅವರು ಹೋಗಬೇಕು ಎನ್ನುವುದು ನನ್ನ ಅಭಿಪ್ರಾಯ”

ಎಂದು ವಾಸುದೇವನು ಹೇಳಿದನು. ದ್ರುಪದನು ಹೇಳಿದನು:

> “ವೀರ ದಾಶಾರ್ಹ ಮಹಾಬಾಹು! ಬುದ್ಧಿನಿಶ್ಚಿತ ಪುರುಷೋತ್ತಮನ ಸಮಯಕ್ಕೆ ಸರಿಯಾದ ಅಭೀಪ್ರಾಯವೇನಿದೆಯೋ ಅದೇ ನನ್ನ ಅಭಿಪ್ರಾಯ. ಯಾಕೆಂದರೆ ಮಹಾಭಾಗ ಕೌಂತೇಯರು ನನಗೆಷ್ಟು ಹತ್ತಿರದವರೋ ಹಾಗೆಯೇ ಪಾಂಡುಪುತ್ರರು ವಾಸುದೇವನ ಹತ್ತಿರದವರೂ ಎನ್ನುವುದರಲ್ಲಿ ಸಂಶಯವಿಲ್ಲ. ಪುರುಷವ್ಯಾಘ್ರ ಕೇಶವನು ಇವರ ಶ್ರೇಯಸ್ಸಿನ ಕುರಿತು ಚಿಂತಿಸುವಷ್ಟು ಕೌಂತೇಯ ಧರ್ಮಪುತ್ರ ಯುಧಿಷ್ಠಿರನೂ ಚಿಂತಿಸುವುದಿಲ್ಲ.”

ನಂತರ ಮಹಾತ್ಮ ದ್ರುಪದನು ಅವರಿಗೆ ಅನುಜ್ಞೆಯನ್ನಿತ್ತನು.

## ಪಾಂಡವರು ಹಸ್ತಿನಾಪುರಕ್ಕೆ ಮರಳಿಬಂದು ಇಂದ್ರಪ್ರಸ್ಥದಲ್ಲಿ ರಾಜ್ಯವನ್ನು ಸ್ಥಾಪಿಸಿದುದು

ಪಾಂಡವರು, ಕೃಷ್ಣ, ಮಹಾಮತಿ ವಿದುರ, ಮತ್ತು ಯಶಸ್ವಿನಿ ಕುಂತಿಯು ದ್ರೌಪದಿ ಕೃಷ್ಣೆಯನ್ನು ಕರೆದುಕೊಂಡು ಸುಖವಾಗಿ ಅಲ್ಲಲ್ಲಿ

ತಂಗುತ್ತಾ ನಾಗಸಾಹ್ವಯ ನಗರಕ್ಕೆ ಹೋದರು. ಆ ವೀರರು ಬರುತ್ತಿದ್ದಾರೆ ಎಂದು ಕೇಳಿದ ಕೌರವ ಧೃತರಾಷ್ಟ್ರನು ಪಾಂಡವರನ್ನು ಸ್ವಾಗತಿಸಲು ಕೌರವರನ್ನು ಕಳುಹಿಸಿದನು: ವಿಕರ್ಣ, ಚಿತ್ರಸೇನ, ಪರಮೇಷ್ವಾಸ ದ್ರೋಣ ಮತ್ತು ಗೌತಮ ಕೃಪ. ಅವರಿಂದ ಸುತ್ತುವರೆಯಲ್ಪಟ್ಟು ಶೋಭಾಯಮಾನರಾದ ಆ ವೀರ ಮಹಾರಥಿಗಳು ನಿಧಾನವಾಗಿ ಹಸ್ತಿನಾಪುರ ನಗರವನ್ನು ಪ್ರವೇಶಿಸಿದರು. ಶೋಕದುಃಖವಿನಾಶಕ ಪುರುಷವ್ಯಾಘ್ರರು ಪ್ರವೇಶಿಸಿದ ಆ ನಗರವು ಕುತೂಹಲದಿಂದ ಬಿರಿದು ಒಡೆಯುವಂತೆ ತೋರುತ್ತಿತ್ತು. ಅವರ ಪ್ರಿಯರು ಪ್ರೀತಿಯುಕ್ತ ಮಾತುಗಳನ್ನು ಚೀರಿ ಹೇಳುತ್ತಿದ್ದರು. ಅವನ್ನು ಕೇಳಿದ ಪಾಂಡವರ ಹೃದಯವು ತುಂಬಿಬಂದಿತು:

> "ಧರ್ಮವಿದ ಪುರುಷವ್ಯಾಘ್ರನು ಪುನಃ ಬಂದಿದ್ದಾನೆ! ತನ್ನ ದಾಯಾದಿಗಳೋ ಎನ್ನುವಂತೆ ಇನ್ನು ನಮ್ಮನ್ನು ಧರ್ಮದಿಂದ ಪರಿರಕ್ಷಿಸುತ್ತಾನೆ. ಇಂದು ವನಪ್ರಿಯ ಮಹಾರಾಜ ಪಾಂಡುವು ವನದಿಂದ ನಮಗೆಲ್ಲ ಒಳ್ಳೆಯದನ್ನು ಮಾಡಲಿಕ್ಕಾಗಿ ಬಂದಂತೆ ತೋರುತ್ತಿದೆ ಎನ್ನುವುದರಲ್ಲಿ ಸಂಶಯವಿಲ್ಲ. ವೀರ ಭರ್ತಾರ ಕುಂತೀಸುತರು ಪುನಃ ಬಂದಿದ್ದಾರೆ ಎನ್ನುವುದನ್ನು ಬಿಟ್ಟು ಇನ್ನೂ ಅತಿಯಾದ ಸಂತೋಷವು ಇಂದು ನಮಗೆ ಎಲ್ಲರಿಗೂ ಬೇರೆ ಯಾವುದಿದೆ? ನಾವು ಎಂದಾದರೂ ದಾನ

> ಮಾಡಿದ್ದರೆ, ಯಜ್ಞಗಳನ್ನು ಮಾಡಿದ್ದರೆ ಅಥವಾ ತಪಸ್ಸನ್ನು ಮಾಡಿದ್ದರೆ ಅದರ ಕಾರಣದಿಂದಲಾದರೂ ಪಾಂಡವರು ಈ ನಗರದಲ್ಲಿ ನೂರು ಶರದಗಳ ಕಾಲ ನಿಲ್ಲಲಿ!"

ನಂತರ ಅವರು ಧೃತರಾಷ್ಟ್ರ, ಮಹಾತ್ಮ ಭೀಷ್ಮ ಮತ್ತು ಇತರ ಅರ್ಹರ ಪಾದಗಳನ್ನು ಹಿಡಿದು ಅಭಿನಂದಿಸಿದರು, ಮತ್ತು ನಗರದಲ್ಲಿ ಸರ್ವರ ಕುಶಲಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾ ಧೃತರಾಷ್ಟ್ರನ ಹೇಳಿಕೆಯಂತೆ ಅವನ ಅರಮನೆಯನ್ನು ಪ್ರವೇಶಿಸಿದರು. ಆ ಮಾಹಾತ್ಮ ಮಹಾಬಲಿಗಳು ವಿಶ್ರಾಂತಿ ಹೊಂದಿದ ಸ್ವಲ್ಪ ಸಮಯದಲ್ಲಿ ರಾಜ ಧೃತರಾಷ್ಟ್ರ ಮತ್ತು ಶಾಂತನವರು ಅವರನ್ನು ಕರೆಸಿದರು. ಧೃತರಾಷ್ಟ್ರನು ಹೇಳಿದನು:

> "ಕೌಂತೇಯ! ಭ್ರಾತೃಗಳ ಸಹಿತ ನನ್ನ ಈ ಮಾತುಗಳನ್ನು ಗಮನವಿಟ್ಟು ಕೇಳು. ಪುನಃ ಮನಸ್ತಾಪವಾಗದಿರಲೆಂದು ನೀನು ಖಾಂಡವಪ್ರಸ್ಥಕ್ಕೆ ಹೋಗು. ತ್ರಿದಶ ವಜ್ರಿಯಂತಿರುವ ಪಾರ್ಥನಿಂದ ರಕ್ಷಿಸಲ್ಪಟ್ಟು ಅಲ್ಲಿ ವಾಸಿಸಿದರೆ ನಿನ್ನನ್ನು ಯಾರೂ ಕೂಡ ಬಾಧಿಸಲು ಶಕ್ಯವಿಲ್ಲ. ಅರ್ಧ ರಾಜ್ಯವನ್ನು ಪಡೆದು ಖಾಂಡವಪ್ರಸ್ಥಕ್ಕೆ ಹೋಗು."

ನೃಪನ ಆ ಮಾತುಗಳನ್ನು ಸ್ವೀಕರಿಸಿದ ಅವರೆಲ್ಲರೂ ಅವನಿಗೆ ನಮಸ್ಕರಿಸಿದರು. ನಂತರ ಆ ಮನುಜರ್ಷಭರು ಅರ್ಧ ರಾಜ್ಯವನ್ನು ಪಡೆದು ಘೋರ ವನವಾಗಿದ್ದ ಖಾಂಡವಪ್ರಸ್ಥವನ್ನು ಪ್ರವೇಶಿಸಿದರು.

ಕೃಷ್ಣನ ಮುಂದಾಳತ್ವದಲ್ಲಿ ಪಾಂಡವರು ಅಲ್ಲಿಗೆ ಹೋಗಿ ಸ್ವರ್ಗದಷ್ಟೇ ಸುಂದರ ಪುರವೊಂದನ್ನು ನಿರ್ಮಿಸಿದರು. ದ್ವೈಪಾಯನನ ನಾಯಕತ್ವದಲ್ಲಿ ಒಂದು ಪುಣ್ಯ ಕಾಲದಲ್ಲಿ ಶುಭ ಪ್ರದೇಶವನ್ನು ಶಾಂತಿಗೊಳಿಸಿ ಮಹಾರಥಿಗಳು ನಗರದ ಮಾಪನ ಮಾಡಿದರು. ಅದು ಸಾಗರದಂತಿದ್ದ ಪರಿಖಗಳಿಂದ ಅಲಂಕೃತವಾಗಿತ್ತು. ಆಕಾಶವನ್ನು ವ್ಯಾಪಿಸಿದ ಸುಂದರ, ಅಭ್ರಪ್ರಕಾಶದಿಂದ ಬಿಳಿಯಾದ, ಅಥವಾ ಹಿಮರಾಶಿಯಂತಿರುವ ಪ್ರಾಕಾರಗಳಿಂದ ಸುತ್ತುವರೆಯಲ್ಪಟ್ಟಿತ್ತು. ನಾಗಗಳಿಂದ ಬೋಗವತಿಯು ಹೇಗೆ ಶೋಭಿಸುತ್ತದೆಯೋ ಹಾಗೆ ಆ ಶ್ರೇಷ್ಠ ಪುರವೂ ಶೋಭಿಸುತ್ತಿತ್ತು. ಅದು ಘೋರವಾಗಿ ಕಾಣುತ್ತಿದ್ದ ಗರುಡನ ಎರಡು ರೆಕ್ಕೆಗಳಂತಿರುವ ದ್ವಾರಗಳಿಂದ ರಕ್ಷಿತವಾಗಿತ್ತು. ದ್ವಾರದ ಗೋಪುರಗಳು ಮಂದರವನ್ನು ಮುಚ್ಚಿರುವ ಮೋಡಗಳಂತೆ ತೋರುತ್ತಿದ್ದವು. ದ್ವಾರಗಳಲ್ಲಿ ತುಂಬಾ ಹರಿತ ವಿವಿಧ ಶಸ್ತ್ರಗಳನ್ನಿಟ್ಟಿದ್ದರು. ಎರಡು ನಾಲಿಗೆಗಳ ಪನ್ನಗಗಳಂತಿರುವ ಶಕ್ತಿಗಳಿಂದ ಸುತ್ತುವರೆಯಲ್ಪಟ್ಟಿತ್ತು. ಖಡ್ಗ ಡಮರುಗಳನ್ನು ಹಿಡಿದ ಶುಭ ಯೋಧರಿಂದ ರಕ್ಷಿಸಲ್ಪಟ್ಟಿತ್ತು. ನೂರಾರು ತೀಕ್ಷ್ಣ ಅಂಕುಶ ಮತ್ತು ಯಂತ್ರಜಾಲಗಳಿಂದ ಶೋಭಿತವಾಗಿತ್ತು ಆ ಉತ್ತಮ ಪುರವು ಆಯಸ ಮಹಾಚಕ್ರಗಳಿಂದ ಶೋಭಿತವಾಗಿತ್ತು. ಅಲ್ಲಿ ಮಹಾರಥಗಳು ಹೋಗಲು ಬೇರೆ ಬೇರೆ ಹೊಂಡ ಅಪಘಾತಗಳು ಆಗದಂತಿದ್ದ, ಎರಡೂ ಕಡೆ ಉತ್ತಮ ಶ್ವೇತವರ್ಣ ಭವನಗಳಿಂದ ಕೂಡಿದ್ದ ವಿಶಾಲ ರಸ್ತೆಗಳಿದ್ದವು.

ಸ್ವರ್ಗದಂತೆ ಹೊಳೆಯುತ್ತಿದ್ದ ಇಂದ್ರಪ್ರಸ್ಥವು ಆಕಾಶದಲ್ಲಿ ಮಿಂಚಿನಿಂದ ಸಮಾವೃತ ಮೋಡಗಳ ರಾಶಿಯಂತೆ ಕಾಣುತ್ತಿತ್ತು. ಈ ರಮ್ಯ ಶುಭ ಪ್ರದೇಶದಲ್ಲಿ ಶುಭ ಸಂಪತ್ತು ಅಕ್ಷಯವಾಗಿದೆಯೋ ಎನ್ನುವಂತೆ ಧನಸಂಪೂರ್ಣವಾದ ಕೌರವನ ನಿವೇಶನವಿತ್ತು.

ಸರ್ವವೇದವಿದರಲ್ಲಿ ಶ್ರೇಷ್ಠ ದ್ವಿಜರು ಅಲ್ಲಿಗೆ ಬಂದರು. ಸರ್ವ ಭಾಷೆಯ ಜನರೂ ಅಲ್ಲಿ ವಾಸಿಸಲು ಬಯಸುತ್ತಿದ್ದರು. ಆ ದೇಶಕ್ಕೆ ಎಲ್ಲ ಕಡೆಗಳಿಂದಲೂ ಧನಾರ್ಥಿಗಳಾದ ವ್ಯಾಪಾರಿಗಳು, ವರ್ತಕರು ಬಂದರು ಮತ್ತು ಸರ್ವ ಶಿಲ್ಪ ವಿದ್ವಾಂಸರೂ ಅಲ್ಲಿ ವಾಸಿಸಲು ಬಂದರು. ನಗರವು ಮಾವು, ಅಮ್ರಾತಕ, ನಿಪ, ಅಶೋಕ, ಚಂಪಕ, ಪುನ್ನಾಗ, ನಾಗಪುಷ್ಪ, ಲಕುಚ, ಪನಸ, ಶಾಲತಾಲ, ಕದಂಬ, ಬಕುಲ, ಸಕೇತ, ಮೊದಲಾದ ಮನೋಹರ ಪುಷ್ಪಿತ, ಫಲಗಳ ಭಾರದಿಂದ ಬಾಗಿದ್ದ, ಮರಗಳಿಂದ ಕೂಡಿದ ಸುಂದರ ಉದ್ಯಾನವನಗಳಿಂದ ಆವೃತವಾಗಿತ್ತು. ಆ ವನಗಳು ಗಳಿತ ಅಮಲಕ, ಲೋಧ್ರ, ಹೂವಿಟ್ಟ ಅಂಕೋಲಗಳು, ಜಂಬೂ, ಪಾಟಲ, ಕುಬ್ಜಕ, ಅತಿಮುಕ್ತಕ, ಕರವೀರ, ಪಾರಿಜಾತ, ಮತ್ತು ಅನ್ಯ ವಿವಿಧ ಮರಗಳಿಂದ, ನಿತ್ಯವೂ ಪುಷ್ಪ-ಫಲಗಳಿಂದ ತುಂಬಿರುವ ನಾನಾಪಕ್ಷಿಗಳ ಸಂಕುಲಗಳಿಂದ ಕೂಡಿದ, ಮತ್ತಿನಲ್ಲಿದ್ದ ನವಿಲುಗಳ ಮತ್ತು ಸದಾ ಮದದಲ್ಲಿದ್ದ ಕೋಕಿಲಗಳ ಧ್ವನಿಗಳಿಂದ ಕೂಡಿದ್ದವು. ಅದು ಕನ್ನಡಿಗಳಂತೆ ಶುಭ್ರ ಮನೆಗಳಿಂದ, ವಿವಿಧ ಲತಾಗೃಹಗಳಿಂದ,

ಬಣ್ಣಬಣ್ಣದ ಮನೋಹರ ಮನೆಗಳಿಂದ, ಸುಖಮಯ ಪರ್ವತಗಳಿಂದ, ಶುದ್ಧ ನೀರು ತುಂಬಿದ ಕೊಳಗಳಿಂದ, ಪದ್ಮ ಕುಸುಮಗಳ ಸುಗಂಧದಿಂದ ತುಂಬಿದ, ಹಂಸ ಬಾತುಕೋಳಿಗಳ ಕಲರವದಿಂದ, ಚಕ್ರವಾಕ ಪಕ್ಷಿಗಳಿಂದ ಶೋಭಿತ ಅತಿರಮ್ಯ ಸುಂದರ ಸರೋವರಗಳಿಂದ, ರಮ್ಯ ವನಗಳಿಂದ ಆವೃತ ವಿವಿಧ ಪುಷ್ಕರಿಣಿಗಳಿಂದ, ಮತ್ತು ಅಗಲ ಮತ್ತು ದೊಡ್ಡ ರಮ್ಯ ಕೆರೆಗಳಿಂದ ಕೂಡಿತ್ತು. ಆ ಪುಣ್ಯಜನೋಪೇತ ಮಹಾ ರಾಷ್ಟ್ರದಲ್ಲಿ ವಾಸಿಸುತ್ತಿದ್ದ ಪಾಂಡವರ ಸಂತೋಷವು ನಿರಂತರವೂ ಹೆಚ್ಚಾಗುತ್ತಿತ್ತು. ಈ ರೀತಿ ಭೀಷ್ಮ ಮತ್ತು ರಾಜನ ಧರ್ಮ ಪ್ರಣಯದಿಂದ ಪಾಂಡವರು ಖಾಂಡವಪ್ರಸ್ಥದಲ್ಲಿ ವಾಸಿಸಲು ಪ್ರಾರಂಭಿಸಿದರು. ಆ ಐದು ಇಂದ್ರಕಲ್ಪ ಮಹೇಷ್ವಾಸರಿದ ಕೂಡಿದ ಆ ಶ್ರೇಷ್ಠ ಪುರವು ನಾಗಗಳಿಂದ ಭೋಗವತಿಯು ಹೇಗೋ ಹಾಗೆ ಶೋಭಿಸುತ್ತಿತ್ತು.

ಅಲ್ಲಿ ಅವರ ತಳವನ್ನೂರಿಸಿ ಕೇಶವನು ವೀರ ರಾಮನ ಸಹಿತ ಪಾಂಡವರ ಅನುಮತಿಯನ್ನು ಪಡೆದು ದ್ವಾರವತಿಗೆ ಹಿಂದಿರುಗಿದನು.

# ಅರ್ಜುನವನವಾಸ

## ಇಂದ್ರಪ್ರಸ್ಥಕ್ಕೆ ನಾರದನ ಆಗಮನ

ಧೃತರಾಷ್ಟ್ರನ ಅನುಜ್ಞೆಯಂತೆ ರಾಜ್ಯವನ್ನು ಹೊಂದಿದ ಆ

ಪುರುಷವ್ಯಾಘ್ರ, ಪರಂತಪ ಪಾಂಡವರು ಕೃಷ್ಣೆಯೊಡನೆ ರಮಿಸಿದರು. ರಾಜ್ಯವನ್ನು ಪಡೆದ ಮಹಾತೇಜಸ್ವಿ ಸತ್ಯಸಂಧ ಯುಧಿಷ್ಠಿರನು ಭ್ರಾತೃಗಳೊಡನೆ ಪೃಥ್ವಿಯನ್ನು ಧರ್ಮದಿಂದ ಪಾಲಿಸತೊಡಗಿದನು. ಅರಿಗಳನ್ನು ಗೆದ್ದು ಮಹಾಪ್ರಾಜ್ಞ ಸತ್ಯಧರ್ಮಪರಾಯಣ ಪಾಂಡುನಂದನನು ಪರಮ ಸಂತಸವನ್ನು ಹೊಂದಿ ಬಾಳುತ್ತಿದ್ದನು. ಪುರುಷರ್ಷಭರು ಬೆಲೆಬಾಳುವ ರಾಜಾಸನಗಳಲ್ಲಿ ಕುಳಿತು ಸರ್ವ ಪೌರಕಾರ್ಯಗಳನ್ನೂ ಮಾಡುತ್ತಿದ್ದರು. ಒಮ್ಮೆ ಸರ್ವ ಮಹಾತ್ಮರೂ ಕುಳಿತಿರುವಾಗ ಅಲ್ಲಿಗೆ ದೇವರ್ಷಿ ನಾರದನು ಬಂದನು. ಯುಧಿಷ್ಠಿರನು ಅವನಿಗೆ ತನ್ನದೇ ಸುಂದರ ಆಸನವನ್ನು ನೀಡಿದನು ಮತ್ತು ದೇವರ್ಷಿಯನ್ನು ಸ್ವಯಂ ಕುಳ್ಳಿರಿಸಿ ಯಥಾವಿಧಿ ಅರ್ಘ್ಯವನ್ನಿತ್ತನು. ನಂತರ ಧೀಮಾನ್ ಯುಧಿಷ್ಠಿರನು ರಾಜ್ಯವನ್ನೇ ಅವನಿಗೆ ನಿವೇದಿಸಿದನು. ಅವನ ಪೂಜೆಯನ್ನು ಸ್ವೀಕರಿಸಿದ ಋಷಿಯು ಸಂತೋಷಗೊಂಡು ಅವನಿಗೆ ಆಶೀರ್ವಾದಗಳನ್ನಿತ್ತು ಕುಳಿತುಕೊಳ್ಳಲು ಹೇಳಿದನು. ರಾಜ ಯುಧಿಷ್ಠಿರನು ಕುಳಿತುಕೊಳ್ಳಲು ಭಗವಾನನು ಬಂದಿದ್ದಾನೆಂದು ಕೃಷ್ಣೆಗೆ ಬರಲು ಹೇಳಿ ಕಳುಹಿಸಿದನು. ಕೇಳಿದೊಡನೆಯೇ ದ್ರೌಪದಿಯು ಶುಚಿರ್ಭೂತಳಾಗಿ ಪಾಂಡವರೊಡನೆ ನಾರದನು ಇರುವಲ್ಲಿಗೆ ಹೋದಳು. ದೇವರ್ಷಿಯ ಚರಣಗಳೆರಡಕ್ಕೂ ನಮಸ್ಕರಿಸಿದ ಧರ್ಮಚಾರಿಣಿ ದ್ರುಪದಾತ್ಮಜೆಯು ಅಂಜಲೀಬದ್ಧಳಾಗಿ, ಸುಸಂವೀತಳಾಗಿ ನಿಂತುಕೊಂಡಳು. ಸತ್ಯವಾಗ್ಮಿ ಋಷಿಸತ್ತಮ ಧರ್ಮಾತ್ಮ ಭಗವಾನ್



ನಾರದನು ಅನಿಂದಿತೆ ರಾಜಪುತ್ರಿಗೆ ವಿವಿಧ ಆಶೀರ್ವಾದಗಳನ್ನಿತ್ತು ಹೋಗಬಹುದೆಂದು ಹೇಳಿದನು. ಕೃಷ್ಣೆಯು ಹೋದನಂತರ ಯುಧಿಷ್ಠಿರನೇ ಮೊದಲಾದ ಪಾಂಡವರು ಮಾತ್ರ ಏಕಾಂತದಲ್ಲಿರಲು, ಸರ್ವರನ್ನೂ ಉದ್ದೇಶಿಸಿ ಭಗವಾನ್ ಋಷಿಯು ಹೇಳಿದನು:

"ಯಶಸ್ವಿನೀ ಪಾಂಚಾಲಿಯು ನಿಮ್ಮೆಲ್ಲರಿಗೂ ಒಬ್ಬಳೇ ಧರ್ಮಪತ್ನಿಯಾಗಿದ್ದಾಳೆ. ಅವಳಿಂದಾಗಿ ನಿಮ್ಮ ನಿಮ್ಮಲ್ಲಿ ಭೇದವುಂಟಾಗದಂತೆ ನಿಮ್ಮಲ್ಲಿಯೇ ಒಂದು ನೀತಿಯನ್ನು ಪಾಲಿಸಬೇಕಾಗುತ್ತದೆ. ಹಿಂದೆ ಮೂರೂ ಲೋಕಗಳಲ್ಲಿಯೂ ವಿಶ್ರುತ, ಒಬ್ಬರನ್ನೊಬ್ಬರು ಬಿಟ್ಟಿರದೇ ಇದ್ದ ಸುಂದ ಮತ್ತು ಉಪಸುಂದರೆಂಬ ಈರ್ವರು ಅಸುರ ಸಹೋದರರಿದ್ದರು. ಅವರು ಬೇರೆ ಯಾರಿಂದಲೂ ಅವಧ್ಯರಾಗಿದ್ದರು. ಒಂದೇ ರಾಜ್ಯ, ಒಂದೇ ಅರಮನೆ, ಒಂದೇ ಹಾಸಿಗೆ, ಆಸನ, ಆಹಾರವನ್ನು ಬಳಸುತ್ತಿದ್ದ ಅವರು ತಿಲೋತ್ತಮೆಯ ಸಲುವಾಗಿ ಪರಸ್ಪರರರನ್ನು ಸಂಹರಿಸಿದರು. ಯುಧಿಷ್ಠಿರ! ಆದುದರಿಂದ ನಿಮ್ಮ ಅನ್ಯೋನ್ಯರಲ್ಲಿ ಇರುವ ಸೌಹಾರ್ದತೆಯನ್ನು ರಕ್ಷಿಸಿಕೋ ಮತ್ತು ನಿಮ್ಮಲ್ಲಿಯೇ ಭೇದವುಂಟಾಗದ ಹಾಗೆ ನಡೆದುಕೋ!"

ಯುಧಿಷ್ಠಿರನು ಹೇಳಿದನು:

"ಮಹಾಮುನೇ! ಸುಂದ ಮತ್ತು ಉಪಸುಂದರು ಯಾರ

ಮಕ್ಕಳು ಮತ್ತು ಅವರಲ್ಲಿ ಹೇಗೆ ಭೇದವುಂಟಾಯಿತು ಮತ್ತು ಅವರು ಹೇಗೆ ಅನ್ಯೋನ್ಯರನ್ನು ಸಂಹರಿಸಿದರು? ಮತ್ತು ಕಾಮದಿಂದ ಆ ಸಮ್ಮತ್ತರು ಪರಸ್ಪರರನ್ನು ಸಂಹರಿಸಿದ ಆ ತಿಲೋತ್ತಮೆಯು ಯಾರು? ಅಪ್ಸರೆಯೇ? ದೇವಕನ್ಯೆಯೇ? ಮತ್ತು ಅವಳು ಯಾರವಳು? ಇವೆಲ್ಲವನ್ನೂ ಯಥಾವತ್ತಾಗಿ ಕೇಳಲು ಬಯಸುತ್ತೇನೆ. ವಿಪ್ರ! ಇದರ ಕುರಿತು ನನಗೆ ಪರಮ ಕುತೂಹಲವುಂಟಾಗಿದೆ."

ಆಗ ನಾರದನು ಪಾಂಡವರಿಗೆ ಸುಂದೋಪಸುಂದರ ಕಥೆಯನ್ನು ಹೇಳಿ,

"ಭರತಸತ್ತಮರೆಲ್ಲರ ಮೇಲಿರುವ ನನ್ನ ಪ್ರೀತಿಯ ಕಾರಣದಿಂದಾಗಿ ನಾನು ನಿಮಗೆ ಹೇಳುತ್ತಿದ್ದೇನೆ. ದ್ರೌಪದಿಯ ಕಾರಣದಿಂದಾಗಿ ನಿಮ್ಮೆಲ್ಲರಲ್ಲಿ ಭೇದವುಂಟಾಗದಿರಲಿ! ನನಗೆ ಪ್ರಿಯವಾದುದನ್ನು ಮಾಡಬೇಕೆಂದರೆ ಹಾಗೆಯೇ ಮಾಡಿರಿ. ನಿಮಗೆ ಮಂಗಲವಾಗಲಿ!"

ಎಂದನು. ಮಹಾತ್ಮ ನಾರದ ಮಹರ್ಷಿಯು ಈ ರೀತಿ ಹೇಳಲು ಅವರು ಒಂದಾಗಿ ಆ ದೇವರ್ಷಿ ಅಮಿತತೇಜಸ್ವಿ ನಾರದನ ಸಮಕ್ಷಮದಲ್ಲಿ ಅನ್ಯೋನ್ಯರಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡರು:

“ದ್ರೌಪದಿಯೊಡನಿರುವವನನ್ನು ಅನ್ಯ ಯಾರೂ ನೋಡಿದರೆ ಅವನು ಬ್ರಹ್ಮಚಾರಿಯಾಗಿ ಹನ್ನೆರಡು ವರ್ಷಗಳು ವನದಲ್ಲಿ ವಾಸಿಸಬೇಕು!”

ಧರ್ಮಚಾರಿ ಪಾಂಡವರಲ್ಲಿ ಈ ಒಪ್ಪಂದ ಆಗುವಹಾಗೆ ಮಾಡಿ ಪರಮ ಪ್ರೀತ ಮಹಾಮುನಿ ನಾರದನು ಇಷ್ಟ ದೇಶಕ್ಕೆ ತೆರಳಿದನು. ಹೀಗೆ ನಾರದನಿಂದ ಪ್ರಚೋದಿತರಾದ ಅವರು ಮೊದಲೇ ಅನ್ಯೋನ್ಯ ಒಪ್ಪಂದವನ್ನು ಮಾಡಿಕೊಂಡು ಯಾವುದೇ ರೀತಿಯ ಭೇದಗಳಿಲ್ಲದೇ ವಾಸಿಸುತ್ತಿದ್ದರು. ಈ ರೀತಿ ಒಪ್ಪಂದವನ್ನು ಮಾಡಿಕೊಂಡ ಪಾಂಡವರು ಅಲ್ಲಿಯೇ ವಾಸಿಸುತ್ತಿದ್ದರು. ಅವರ ಶಸ್ತ್ರಪ್ರತಾಪದಿಂದ ಅನ್ಯ ಮಹೀಕ್ಷಿತರನ್ನು ವಶಪಡಿಸಿಕೊಂಡರು. ಕೃಷ್ಣೆಯು ಆ ಎಲ್ಲ ಅಮಿತೌಜಸ, ಮನುಜಸಿಂಹ, ಪಂಚ ಪಾರ್ಥರ ವಶವರ್ತಿನಿಯಾಗಿದ್ದಳು. ಆನೆಗಳೊಂದಿಗೆ ಸರಸ್ವತಿಯು ಹೇಗೋ ಹಾಗೆ ಅವಳು ತನ್ನ ಐದು ಪತಿಗಳೊಡನೆ ಪರಮಪ್ರೀತಳಾಗಿದ್ದಳು. ಮಹಾತ್ಮ ಪಾಂಡವರು ಧರ್ಮದಲ್ಲಿ ನಡೆದುಕೊಂಡಿರಲು ಸರ್ವ ಕುರುಗಳೂ ದೋಷರಹಿತರಾಗಿ ಸುಖಾನ್ವಿತರಾಗಿ ವರ್ಧಿಸಿದರು.

## ಅರ್ಜುನನು ಒಪ್ಪಂದವನ್ನು ಮುರಿದುದರಿಂದ ವನವಾಸಕ್ಕೆ ತೆರಳಿದುದು

ದೀರ್ಘಕಾಲದ ನಂತರ ಕೆಲವು ಕಳ್ಳರು ಓರ್ವ ಬ್ರಾಹ್ಮಣನ

ಗೋವುಗಳನ್ನು ಅಪಹರಿಸಿದರು. ತನ್ನ ಧನವನ್ನು ಕಳೆದುಕೊಂಡು ಕ್ರೋಧಮೂರ್ಛಿತನಾದ ಆ ಬ್ರಾಹ್ಮಣನು ಖಾಂಡವಪ್ರಸ್ಥಕ್ಕೆ ಬಂದು ಪಾಂಡವರನ್ನು ಮೂದಲಿಸಿದನು.

> "ಕ್ಷುದ್ರ, ನೃಶಂಸ, ಅಕೃತಾತ್ಮರು ಗೋಧನವನ್ನು ಕದ್ದು ಹೋಗುತ್ತಿದ್ದಾರೆ! ಪಾಂಡವರೇ! ಓಡಿ ಹೋಗಿ ಅದನ್ನು ಹಿಂದಿರುಗಿ ತೆಗೆದುಕೊಂಡು ಬನ್ನಿ! ಪ್ರಮತ್ತ ಬ್ರಾಹ್ಮಣನ ಹವಿಸ್ಸನ್ನು ಕಾಗೆಗಳು ಎತ್ತಿಕೊಂಡು ಹೋಗುತ್ತಿವೆ. ಶಾರ್ದೂಲನ ಗುಹೆಯಲ್ಲಿ ಯಾರೂ ಇಲ್ಲದಿರಲು ನೀಚ ತೋಳವು ಒಳಹೊಕ್ಕಿದೆ! ಪ್ರಜೆಗಳು ಕೊಡುವ ರಾಜಾದಾಯದ ಆರನೆಯ ಒಂದು ಪಾಲನ್ನು ಉಪಭೋಗಿಸುವ ರಾಜನು ತನ್ನ ಪ್ರಜೆಗಳನ್ನು ರಕ್ಷಿಸದಿದ್ದರೆ ಅವನು ಸಮಗ್ರ ಸರ್ವಲೋಕದಲ್ಲಿ ಪಾಪಚಾರಿ ಎಂದೆನಿಸಿಕೊಳ್ಳುತ್ತಾನೆ. ಬ್ರಾಹ್ಮಣನ ವಸ್ತುವಿನ ಕಳ್ಳತನವಾಗಿದೆಯೆಂದರೆ ಧರ್ಮ-ಅರ್ಥದ ವಿಲೋಪವಾದಂತೆ! ನಾನು ರೋಧಿಸುತ್ತಿದ್ದೇನೆ! ಅಸ್ತ್ರಧಾರಣಮಾಡಿ!"

ರೋಧಿಸುತ್ತಿರುವ ಆ ವಿಪ್ರನ ಸುತ್ತ ಮುತ್ತಲಿದ್ದ ಕುಂತೀಪುತ್ರ ಪಾಂಡವ ಧನಂಜಯನು ಅವನ ಆ ಮಾತುಗಳನ್ನು ಕೇಳಿದನು. ಇದನ್ನು ಕೇಳಿದ ಆ ಮಹಾಬಾಹುವು ದ್ವಿಜನಿಗೆ

“ಹೆದರಬೇಡ!”ಎಂದು ಹೇಳಿದನು. ಆದರೆ ಮಹಾತ್ಮ ಪಾಂಡವರು ತಮ್ಮ ಆಯುಧಗಳನ್ನು ಎಲ್ಲಿ ಇರಿಸಿದ್ದರೋ ಅಲ್ಲಿ ಕೃಷ್ಣೆಯ ಸಹಿತ ಧರ್ಮರಾಜ ಯುಧಿಷ್ಠಿರನಿದ್ದನು. ಆ ಪಾಂಡವನು ಅಲ್ಲಿ ಪ್ರವೇಶಿಸಲೂ ಶಕ್ಯನಿರಲಿಲ್ಲ. ಅಲ್ಲಿಂದ ಹೊರಟು ಹೋಗಲೂ ಶಕ್ಯನಿರಲಿಲ್ಲ. ಆ ಅರ್ತನು ಪುನಃ ಪುನಃ ತನ್ನ ತೀಕ್ಷ್ಣ ನಾಲಗೆಯಿಂದ ಒತ್ತಾಯಿಸುತ್ತಿರಲು, ಅವನ ಆಕ್ರಾಂತದ ಮಧ್ಯೆ ಕೌಂತೇಯನು ದುಃಖಿತನಾಗಿ ಚಿಂತಿಸಿದನು:

> “ಈ ತಪಸ್ವಿ ಬ್ರಾಹ್ಮಣನ ಧನದ ಕಳ್ಳತನವಾಗಿದೆ. ಅವನ ಕಣ್ಣೀರನ್ನು ಒಣಗಿಸುವುದು ನಿಶ್ಚಯವಾಗಿಯು ಕರ್ತವ್ಯ. ಇಂದು ದ್ವಾರದಲ್ಲಿ ನಿಂತು ರೋದಿಸುತ್ತಿರುವ ಇವನ ರಕ್ಷಣೆಯನ್ನು ಮಾಡದೇ ಇದರ ಉಪಪ್ರೇಕ್ಷಣೆಯನ್ನು ಮಾಡಿದರೆ ಮಹೀಪತಿಯು ಮಹಾ ಅಧರ್ಮವನ್ನು ಮಾಡಿದ ಹಾಗಾಗುತ್ತದೆ. ನಾನು ರಕ್ಷಿಸದಿದ್ದರೆ ನಾವೆಲ್ಲರೂ ಈ ಲೋಕದಲ್ಲಿಯೇ ಅನಾಸ್ತಿಕರೆಂದೂ, ಅಧರ್ಮಿಗಳೆಂದೂ ಕುಪ್ರಸಿದ್ಧರಾಗುತ್ತೇವೆ. ರಾಜನನ್ನು ಕೇಳದೆಯೇ ನಾನು ಹೋದೆನೆಂದರೆ ನಿಸ್ಸಂಶಯವಾಗಿಯೂ ನನ್ನ ನೃಪತಿ ಅಜಾತಶತ್ರುವಿಗೆ ಅಪ್ರಿಯವನ್ನು ಮಾಡಿದಂಥಾಗುತ್ತದೆ. ರಾಜನ ಗೃಹವನ್ನು ಪ್ರವೇಶಿಸಿದರೆ ನನಗೆ ವನವಾಸವಾಗುತ್ತದೆ. ಅಧರ್ಮ ಅಥವಾ ಮಹಾವನದಲ್ಲಿ

ನನ್ನ ಮರಣ. ಆದರೆ ಶರೀರನಾಶಕ್ಕಿಂತಲೂ ಧರ್ಮವೇ ಮೇಲು!"

ಈ ರೀತಿ ನಿಶ್ಚಯಿಸಿದ ಕುಂತೀಪುತ್ರ ಧನಂಜಯನು ರಾಜನ ಅನುಜ್ಞೆಯಿಲ್ಲದೇ ಪ್ರವೇಶಿಸಿ ಧನುಸ್ಸನ್ನು ತಂದು ಸಂಹೃಷ್ಠ ಬ್ರಾಹ್ಮಣನಿಗೆ ಉತ್ತರಿಸಿದನು:

"ಬ್ರಾಹ್ಮಣ! ಶೀಘ್ರವಾಗಿ ಬಾ! ಆ ಕಳ್ಳರನ್ನು ಹಿಡಿಯಬೇಕು. ಆ ಕ್ಷುದ್ರರು ತುಂಬಾ ದೂರ ಹೋಗಿರಲಿಕ್ಕಿಲ್ಲ. ಒಟ್ಟಿಗೇ ಹೋಗೋಣ. ಅವರನ್ನು ಹಿಡಿದು ನಿನ್ನ ಧನವನ್ನು ಹಿಂದಿರುಗಿಸುತ್ತೇನೆ."

ಆ ಮಹಾಬಾಹುವು ಧನುಸ್ಸನ್ನು ಹಿಡಿದು, ವರ್ಮದಿಂದ ಧ್ವಜಯುಕ್ತ ರಥವನ್ನೇರಿ ಚೋರರರನ್ನು ಬೆನ್ನಟ್ಟಿ ಶರಗಳಿಂದ ವಿಧ್ವಂಸಿಸಿ ಧನವನ್ನು ಗೆದ್ದನು. ಬ್ರಾಹ್ಮಣನಿಗೆ ಅದನ್ನು ಒಪ್ಪಿಸಿ ಯಶವನ್ನು ಪಡೆದು ವೀರ ಪಾಂಡವ ಪರಂತಪ ಸವ್ಯಸಾಚಿಯು ಪುರವನ್ನು ಸೇರಿದನು. ಸರ್ವ ಗುರುಗಳನ್ನೂ ಅಭಿವಂದಿಸಿದನು ಮತ್ತು ಅವರೂ ಅವನಿಗೆ ಪ್ರತಿನಂದಿಸಿದರು. ನಂತರ ಅವನು ಧರ್ಮರಾಜನಿಗೆ ಹೇಳಿದನು:

"ನನಗೆ ವ್ರತವನ್ನು ಆದೇಶಿಸು! ನಾನು ನಿನ್ನನ್ನು ನೋಡಿ ಒಪ್ಪಂದವನ್ನು ಅತಿಕ್ರಮಿಸಿದ್ದೇನೆ. ನಾವು ಮಾಡಿಕೊಂಡ ಒಪ್ಪಂದದಂತೆ ನಾನು ವನವಾಸಕ್ಕೆ ತೆರಳುತ್ತೇನೆ."

ಒಮ್ಮೆಲೇ ಈ ಅಪ್ರಿಯ ವಾಕ್ಯವನ್ನು ಕೇಳಿದ ಧರ್ಮರಾಜನು ಶೋಕಾರ್ತನಾಗಿ ಸಜ್ಜಮಾನನಾಗಿ "ಏಕೆ?"ಎಂದು ಉದ್ಗರಿಸಿದನು. ನಂತರ ಅಚ್ಯುತ ಭ್ರಾತಾ ಯುಧಿಷ್ಠಿರನು ತಮ್ಮ ಗುಡಾಕೇಶನಿಗೆ ಹೇಳಿದನು:

> "ಅನಘ! ನಾನು ಹಿರಿಯವನಾಗಿದ್ದೇನಾದರೆ ನನ್ನ ಮತವನ್ನು ಕೇಳು. ನೀನು ಅನುಪ್ರವೇಶಿಸಿ ನನಗೇನಾದರೂ ಅಪ್ರಿಯವಾದುದನ್ನು ಮಾಡಿದ್ದೀಯೆಂದರೆ ನಾನು ಅದೆಲ್ಲವನ್ನೂ ಕ್ಷಮಿಸುತ್ತೇನೆ ಮತ್ತು ಅದರ ಸೇಡನ್ನು ನನ್ನ ಹೃದಯದಿಂದ ತೆಗೆದುಬಿಡುತ್ತೇನೆ. ಕಿರಿಯವನು ಹಿರಿಯವನಲ್ಲಿ ಪ್ರವೇಶಿಸಿದರೆ ಅಪಘಾತವೆನಿಸುವುದಿಲ್ಲ. ಆದರೆ ಕಿರಿಯನಲ್ಲಿ ಹಿರಿಯವನು ಅನುಪ್ರವೇಶಿಸಿದರೆ ಅದು ವಿಧಿಲೋಪಕವಾಗುತ್ತದೆ. ನಿಲ್ಲು! ನನ್ನ ವಚನದಂತೆ ಮಾಡು. ನಿನ್ನಿಂದ ಧರ್ಮಲೋಪವೂ ಆಗಲಿಲ್ಲ ಮತ್ತು ನಿನ್ನಿಂದ ನನಗೆ ಯಾವುದೇ ರೀತಿಯ ಅಪಮಾನವೂ ಆಗಲಿಲ್ಲ."

ಅರ್ಜುನನು ಹೇಳಿದನು:

> "ಧರ್ಮವನ್ನು ಕಪಟದಿಂದ ಪಾಲಿಸಬೇಡ ಎನ್ನುವುದನ್ನು ನಿನ್ನಿಂದಲೇ ನಾನು ಕೇಳಿದ್ದೇನೆ. ನಾನು ಸತ್ಯದಿಂದ ವಿಚಲಿತನಾಗುವುದಿಲ್ಲ. ನಾನು ಸತ್ಯದ ಆಯುಧವನ್ನು

ಧರಿಸಿದ್ದೇನೆ.”

ರಾಜನ ಅನುಜ್ಞೆಯಂತೆ ಅವನಿಗೆ ಬ್ರಹ್ಮಚರ್ಯದ ದೀಕ್ಷೆಯನ್ನು ನೀಡಲಾಯಿತು. ಅವನು ಹನ್ನೆರಡು ವರ್ಷಗಳು ವನದಲ್ಲಿ ವಾಸಿಸಲು ಹೊರಟನು.

ಕೌರವರ ಯಶಸ್ಕರ ಮಹಾಬಾಹುವು ಹೊರಡುವಾಗ ವೇದಪಾರಂಗತ, ಮಹಾತ್ಮ ಬ್ರಾಹ್ಮಣರು, ವೇದವೇದಾಂಗ ವಿದ್ವಾಂಸರು, ಆಧ್ಯಾತ್ಮ ಚಿಂತಕರು, ಆಕ್ಷರು, ಭಗದ್ಭಕ್ತರು, ಸೂತರು, ಪೌರಾಣಿಕರು, ಕಥಕರು, ಶ್ರವಣರು, ವನೌಕಸರು, ಮತ್ತು ದಿವ್ಯ ಆಖ್ಯಾನಗಳನ್ನು ಮಧುರವಾಗಿ ಓದಬಲ್ಲ ದ್ವಿಜರು ಮತ್ತು ಇತರರು ಅನುಸರಿಸಿದರು. ಇವರು ಮತ್ತು ಅನೇಕ ಇತರರ ಸಹಾಯದಿಂದ, ಇಂದ್ರನು ಮರುತ್ತರಿಂದ ಸುತ್ತುವರೆಯಲ್ಪಟ್ಟಂತೆ ಸುತ್ತುವರೆಯಲ್ಪಟ್ಟು, ಸುಂದರ ಕಥೆಗಳನ್ನು ಕೇಳುತ್ತಾ ಪ್ರಯಾಣಿಸಿದನು. ಆ ಭರತರ್ಷಭನು ರಮಣೀಯ ಸುಂದರ ವನಗಳನ್ನು, ಸರೋವರಗಳನ್ನು, ನದಿಗಳನ್ನು, ಸಾಗರಗಳನ್ನು, ಪ್ರದೇಶಗಳನ್ನು, ಮತ್ತು ಪುಣ್ಯ ತೀರ್ಥಗಳನ್ನು ನೋಡಿದನು. ಗಂಗಾದ್ವಾರವನ್ನು ಸೇರಿದ ನಂತರ ಪ್ರಭುವು ಅಲ್ಲಿಯೇ ವಾಸಿಸಲು ಪ್ರಾರಂಭಿಸಿದನು.

## ಉಲೂಪಿ

ಕೌಂತೇಯನು ಗಂಗಾದ್ವಾರದಲ್ಲಿ ವಾಸಿಸುತ್ತಿರಲು ಬ್ರಾಹ್ಮಣ ವಿಪ್ರರು

ಅನೇಕ ಅಗ್ನಿಹೋತ್ರಗಳನ್ನು ನೆರವೇರಿಸಿದರು. ಅವುಗಳನ್ನು ಹೆಚ್ಚಿಸಿ, ಜ್ವಲಿಸಿ, ಆಹುತಿಗಳನ್ನು ಹಾಕುವ, ಎರಡೂ ದಡಗಳಿಂದ ಪುಷ್ಪಗಳನ್ನು ಹಾಕುವ, ಸ್ನಾನಮಾಡಿ ಸತ್ಪಥ ನಿರತ ಆ ಮಹಾತ್ಮರಿಂದ ಗಂಗಾದ್ವಾರವು ಅತೀವ ಶೋಭೆಗೊಂಡಿತ್ತು. ಇವೆಲ್ಲವೂ ಆ ನಿವೇಶ ಸ್ಥಳದಲ್ಲಿ ನಡೆಯುತ್ತಿರಲು ಪಾಂಡುನಂದನ ಕೌಂತೇಯನು ಸ್ನಾನಕ್ಕೆಂದು ಗಂಗೆಯಲ್ಲಿ ಇಳಿದನು. ಅಲ್ಲಿ ಅವನು ಸ್ನಾನಮಾಡಿ, ಪಿತಾಮಹರಿಗೆ ತರ್ಪಣೆಯನ್ನಿತ್ತು ಅಗ್ನಿಕಾರ್ಯವನ್ನು ಮಾಡಲು ನೀರಿನಿಂದ ಮೇಲಕ್ಕೆ ಬರಬೇಕೆನ್ನುವಾಗ ಆ ಮಹಾಬಾಹುವನ್ನು ಮನಸ್ಸಿಗೆ ಬಂದಂತೆ ಹೋಗಬಲ್ಲ ಅಂತರ್ಜಲ ಮಹಾರಾಜನ ಕನ್ಯೆ ಉಲೂಪಿಯು ನೀರಿಗೆ ಸೆಳೆದಳು. ನಾಗ ಕೌರವನ ಪರಮಾರ್ಚಿತ ಭವನದಲ್ಲಿ ಸುಸಮಾಹಿತ ಅಗ್ನಿಯನ್ನು ಪಾಂಡವನು ಕಂಡನು. ಕುಂತೀಪುತ್ರ ಧನಂಜಯನು ಅಲ್ಲಿಯೇ ಅಶಂಕಮಾನನಾಗಿ ಅಗ್ನಿಕಾರ್ಯವನ್ನು ಮಾಡಿ, ಹುತಾಶನನನ್ನು ತೃಪ್ತಿಪಡಿಸಿದನು. ಅಗ್ನಿಕಾರ್ಯವನ್ನು ಪೂರೈಸಿ ಕೌಂತೇಯನು ಮುಗುಳ್ನಗುತ್ತಾ ನಾಗರಾಜಸುತೆಗೆ ಈ ಮಾತುಗಳನ್ನಾಡಿದನು.

> “ಭೀರು! ನೀನು ಏಕೆ ಈ ಸಾಹಸವನ್ನು ಮಾಡಿದೆ? ಈ ಸುಂದರ ದೇಶವು ಯಾವುದು? ನೀನು ಯಾರು? ಯಾರ ಮಗಳು?”


WARWICK GOBLE

ಉಲೂಪಿಯು ಹೇಳಿದಳು:

"ಐರಾವತ ಕುಲದಲ್ಲಿ ಹುಟ್ಟಿದ ಕೌರವ್ಯ ಎಂಬ ಹೆಸರಿನ ಪನ್ನಗನಿದ್ದಾನೆ. ಪಾರ್ಥ! ಪನ್ನಗಿಯಾದ ನಾನು ಅವನ ಮಗಳು. ಹೆಸರು ಉಲೂಪಿ. ನೀನು ಸ್ನಾನಕ್ಕೆಂದು ನದಿಯಲ್ಲಿ ಇಳಿಯುವುದನ್ನು ನೋಡಿದೆ. ನಿನ್ನನ್ನು ನೋಡಿದೊಡನೆಯೇ ನಾನು ಕಾಮ ಮೂರ್ಛಿತಳಾದೆ. ನಿನ್ನ ಕಾರಣದಿಂದ ಅನಂಗಮಥಿತಳಾದ ನನ್ನನ್ನು ಸಂತೋಷಗೊಳಿಸು. ರಹಸ್ಯವಾಗಿ ನಿನ್ನನ್ನಿತ್ತು ಅನನ್ಯಳಾದ ನನ್ನನ್ನು ಪ್ರೀತಿಸು."

ಅರ್ಜುನನು ಹೇಳಿದನು:

"ಭದ್ರೇ! ಧರ್ಮರಾಜನು ನನಗೆ ಹನ್ನೆರಡು ವರ್ಷಗಳ ಬ್ರಹ್ಮಚರ್ಯವನ್ನು ಅದೇಶಿಸಿದ್ದಾನೆ. ನಾನು ನನ್ನ ವಶದಲ್ಲಿಲ್ಲ. ಆದರೂ ನಾನು ನಿನ್ನನ್ನು ಪ್ರೀತಿಸಲು ಬಯಸುತ್ತೇನೆ. ಇದಕ್ಕೆ ಮೊದಲು ನಾನು ಎಂದೂ ಯಾವ ಕಾರಣಕ್ಕೂ ಅನೃತವನ್ನು ಹೇಳಿದವನಲ್ಲ. ಹೇಗೆ ನಾನು ನನ್ನನ್ನು ಸುಳ್ಳನ್ನಾಗಿಸದೇ, ಧರ್ಮವನ್ನು ಬಿಡದೇ ನಿನ್ನನ್ನು ಪ್ರೀತಿಸಲಿ?"

ಉಲೂಪಿಯು ಹೇಳಿದಳು:

"ಪಾಂಡವ! ನೀನು ಮೇದಿನಿಯಲ್ಲಿ ಅಲೆಯುತ್ತಿರುವೆ ಮತ್ತು

ನಿನ್ನ ಹಿರಿಯನು ನಿನಗೆ ಬ್ರಹ್ಮಚರ್ಯದ ಆದೇಶವನ್ನಿತ್ತಿದ್ದಾನೆ ಎನ್ನುವುದನ್ನು ನಾನು ತಿಳಿದಿದ್ದೇನೆ. ದ್ರುಪದನ ಮಗಳೊಡನೆ ಇರುವಾಗ ನಿಮ್ಮಲ್ಲಿ ಬೇರೆ ಯಾರಾದರೂ ಅಲ್ಲಿಗೆ ತಿಳಿಯದೇ ಹೋದರೆ ಅವನು ಹನ್ನೆರಡು ವರ್ಷಗಳ ಪರ್ಯಂತ ಬ್ರಹ್ಮಚಾರಿಯಾಗಿ ವನದಲ್ಲಿ ತಿರುಗಾಡಬೇಕು ಎಂಬ ಒಪ್ಪಂದವನ್ನು ಮಾಡಿಕೊಂಡಿರುವಿರಿ. ಆದರೆ ಅನ್ಯೋನ್ಯರ ಈ ವನವಾಸವು ದ್ರೌಪದಿಗೆ ಮಾತ್ರ ಸಂಬಂಧಿಸಿದ್ದುದು. ಅವಳ ಕುರಿತಾಗಿ ಮಾತ್ರ ಇದು ಧರ್ಮದ ವಿಷಯವಾಗುತ್ತದೆ. ನನ್ನ ವಿಷಯದಲ್ಲಿ ಅದು ಅಧರ್ಮವಾಗುವುದಿಲ್ಲ. ಆರ್ತರ ಪರಿತ್ರಾಣವು ನಿನ್ನ ಕರ್ತವ್ಯ. ನನ್ನ ಪರಿತ್ರಾಣದಿಂದ ನಿನ್ನ ಧರ್ಮವು ಲೋಪವಾಗುವುದಿಲ್ಲ. ಒಂದುವೇಳೆ ಅದರಿಂದ ಸೂಕ್ಷ್ಮ ಪ್ರಮಾಣದಲ್ಲಿ ಧರ್ಮದ ಅತಿಕ್ರಮವಾದರೂ ನನಗೆ ಪ್ರಾಣ ನೀಡುವುದೂ ಕೂಡ ನಿನ್ನ ಧರ್ಮವೇ. ನಿನ್ನನ್ನು ಪ್ರೀತಿಸುವ ನನ್ನನ್ನು ಪ್ರೀತಿಸು. ಅದೇ ಸಾತ್ವಿಕರ ಮತ. ನೀನು ಇದನ್ನು ಮಾಡದಿದ್ದರೆ ನನ್ನ ಸಾವು ನಿಶ್ಚಯ. ಪ್ರಾಣದಾನವನ್ನಿತ್ತು ಅನುತ್ತಮ ಧರ್ಮವನ್ನು ಪರಿಪಾಲಿಸು. ಇಂದು ನಾನು ನಿನ್ನ ಶರಣು ಬಂದಿದ್ದೇನೆ. ನೀನು ನಿತ್ಯವೂ ದೀನರನ್ನು ಅನಾಥರನ್ನು ಪರಿರಕ್ಷಿಸಿದ್ದೀ. ದುಃಖದಿಂದ ರೋದಿಸುತ್ತಾ ನಿನ್ನ ಶರಣು ಬಂದಿದ್ದೇನೆ. ನಿನ್ನ ಮೇಲಿನ

ಪ್ರೇಮದಿಂದ ನಾನು ಶರಣು ಬಂದಿದ್ದೇನೆ. ಆದುದರಿಂದ ನನಗೆ ಪ್ರಿಯವಾದುದನ್ನು ಮಾಡು. ಆತ್ಮಪ್ರದಾನದ ಮೂಲಕ ನೀನು ನನ್ನ ಕಾಮವನ್ನು ಪೂರೈಸಬೇಕು.”

ಪನ್ನಗೇಶ್ವರ ಕನ್ಯೆಯು ಹೀಗೆ ಹೇಳಲು ಕೌಂತೇಯನು ಧರ್ಮವನ್ನೇ ತನ್ನ ಗುರಿಯನಾಗಿಟ್ಟುಕೊಂಡು ಅವಳು ಕೇಳಿದಂತೆಯೇ ಎಲ್ಲವನ್ನೂ ಮಾಡಿದನು. ಆ ಪ್ರತಾಪವಂತನು ಅವಳೊಡನೆ ನಾಗಭವನದಲ್ಲಿ ರಾತ್ರಿಯನ್ನು ಕಳೆದು ಸೂರ್ಯೋದಯವಾಗುತ್ತಿದ್ದಂತೆ ಕೌರವ್ಯನ ನಿವೇಶನದಿಂದ ಮೇಲೆದ್ದನು.

ವಜ್ರಧರಾತ್ಮಜನು ಅವೆಲ್ಲವನ್ನೂ ಬ್ರಾಹ್ಮಣರಿಗೆ ವರದಿಮಾಡಿ, ಹಿಮವತ್ಪರ್ವತದ ಪಕ್ಕದಿಂದ ನಡೆದರು. ಕೌಂತೇಯನು ಅಗಸ್ತ್ಯವಟ, ವಸಿಷ್ಠ ಪರ್ವತ ಮತ್ತು ಭೃಗುತುಂಗಗಳಿಗೆ ಹೋಗಿ ಅಲ್ಲಿ ತನ್ನನ್ನು ಪರಿಶುದ್ಧಿಮಾಡಿಕೊಂಡನು. ಕುರುಸತ್ತಮನು ತೀರ್ಥಸ್ಥಳಗಳಲ್ಲಿ ದ್ವಿಜರಿಗೆ ಸಹಸ್ರಾರು ಗೋವು-ನಿವೇಶನಗಳನ್ನು ದಾನವಿತ್ತನು. ಪುರುಷಸತ್ತಮನು ಹಿರಣ್ಯಬಿಂದು ತೀರ್ಥದಲ್ಲಿ ಸ್ನಾನಮಾಡಿ ಪರ್ವತಶ್ರೇಷ್ಠನನ್ನು ಮತ್ತು ಪುಣ್ಯ ಪ್ರದೇಶಗಳನ್ನು ನೋಡಿದನು. ಪೂರ್ವದಿಶೆಯಲ್ಲಿ ಹೋಗಲಿಚ್ಛಿಸಿದ ಆ ಭರತರ್ಷಭ ನರಶ್ರೇಷ್ಠನು ಬ್ರಾಹ್ಮಣರೊಡನೆ ಅಲ್ಲಿಂದ ಕೆಳಗಿಳಿದನು. ಒಂದೊಂದಾಗಿ ಆ ಕುರುಸತ್ತಮನು ರಮ್ಯ ನೈಮಿಷಾರಣ್ಯದ ಬಳಿಯಲ್ಲಿದ್ದ ನದಿ ಉತ್ಪಲಿನೀ, ನಂದಾ, ಅಪರನಂದಾ, ಯಶಸ್ವಿನೀ ಕೌಶಿಕೀ,

ಮಹಾನದೀ, ಗಯಾ ಮತ್ತು ಗಂಗಾ ಮೊದಲಾದ ತೀರ್ಥಗಳನ್ನು ಕಂಡನು. ಈ ರೀತಿ ಸರ್ವ ತೀರ್ಥಗಳನ್ನು ಮತ್ತು ಆಶ್ರಮಗಳನ್ನು ನೋಡಿ, ಬ್ರಾಹ್ಮಣರಿಗೆ ಸಂಪತ್ತುಗಳನ್ನಿತ್ತು ತನ್ನನ್ನು ಪಾವನಗೊಳಿಸಿದನು. ಅಂಗ, ವಂಗ, ಕಳಿಂಗಗಳಲ್ಲಿ ಯಾವ ಯಾವ ಪುಣ್ಯ ತೀರ್ಥಸ್ಥಳಗಳಿವೆಯೋ ಅವೆಲ್ಲವುಗಳಿಗೂ ಹೋದನು. ಅವುಗಳನ್ನು ನೋಡಿ ಅಲ್ಲಿ ವಿಧಿವತ್ತಾಗಿ ಧನವನ್ನೂ ದಾನ ಮಾಡಿದನು. ಕಲಿಂಗರಾಷ್ಟ್ರ ದ್ವಾರದಲ್ಲಿ ಪಾಂಡವನನ್ನು ಅನುಸರಿಸಿ ಬಂದಿದ್ದ ಬ್ರಾಹ್ಮಣರು ಕೌಂತೇಯನ ಅನುಜ್ಞೆಯಂತೆ ಹಿಂದಿರುಗಿದರು. ಶೂರ ಕುಂತೀಪುತ್ರ ಧನಂಜಯನು ಅವರ ಅನುಜ್ಞೆಯನ್ನು ಪಡೆದು ಕೆಲವೇ ಸಹಾಯಕರೊಂದಿಗೆ ಸಾಗರದವರೆಗೂ ಪ್ರಯಾಣಿಸಿದನು. ಕಲಿಂಗವನ್ನೂ ಅಲ್ಲಿಯ ಧರ್ಮ, ರಮಣೀಯ, ಪ್ರೇಕ್ಷಣೀಯ ದೇಶ ಪ್ರದೇಶಗಳನ್ನೂ ದಾಟಿ ಪ್ರಭುವು ತಾಪಸರಿಂದ ಉಪಶೋಭಿತ ಮಹೇಂದ್ರಪರ್ವತವನ್ನು ನೋಡಿ, ನಿಧಾನವಾಗಿ ಸಮುದ್ರತೀರದಲ್ಲಿದ್ದ ಮಣಲೂರಿಗೆ ಬಂದನು.

## ಚಿತ್ರಾಂಗದಾ

ಅಲ್ಲಿ ಸರ್ವ ಪುಣ್ಯ ತೀರ್ಥಕ್ಷೇತ್ರಗಳಿಗೂ ಭೇಟಿನೀಡಿ ಆ ಮಹಾಬಾಹುವು ಮಣಲೂರೇಶ್ವರ ಧರ್ಮಜ್ಞ ಮಹೀಪತಿ ಚಿತ್ರವಾಹನನಲ್ಲಿಗೆ ಹೋದನು. ಆ ಪುರದಲ್ಲಿ ವಿಹರಿಸುತ್ತಿದ್ದ ಅವನ ಮಗಳು ಚಾರುದರ್ಶನೆ ಚಿತ್ರಾಂಗದ ಎನ್ನುವ ಹೆಸರುಳ್ಳವಳನ್ನು

ಕಂಡನು. ಅ ವರಾರೋಹೆ ಚೈತ್ರವಾಹಿನಿಯನ್ನು ನೋಡಿದ ಕೂಡಲೇ ಅವನು ಕಾಮಮೋಹಿತನಾದನು ಮತ್ತು ರಾಜನಲ್ಲಿಗೆ ಹೋಗಿ ತನ್ನ ಉದ್ದೇಶವನ್ನು ತಿಳಿಸಿದನು. ಆಗ ರಾಜನು ಅವನಿಗೆ ಈ ಸಾಂತ್ವಪೂರ್ವಕ ಮಾತುಗಳನ್ನಾಡಿದನು:

"ಈ ಕುಲದಲ್ಲಿ ಪ್ರಭಂಕರ ಎಂಬ ಹೆಸರಿನ ರಾಜನಿದ್ದನು. ಅಪುತ್ರನಾದ ಅವನು ಸಂತಾನಕ್ಕಾಗಿ ಉತ್ತಮ ತಪವನ್ನಾಚರಿಸಿದನು. ಅವನ ಉಗ್ರ ತಪಸ್ಸಿನಿಂದ ಮತ್ತು ಪ್ರಣಿಪಾತದಿಂದ ಶಂಕರ ಈಶ್ವರ ಮಹಾದೇವ ಉಮಾಪತಿಯು ಸಂತುಷ್ಟನಾದನು. ಭಗವಾನನು ಅವನಿಗೆ ಕುಲದ ಒಂದೊಂದು ಪೀಳಿಗೆಯಲ್ಲಿ ಒಂದೊಂದೇ ಸಂತಾನವಾಗುತ್ತದೆ ಎಂದು ವರವನ್ನಿತ್ತನು. ಅಂದಿನಿಂದ ಈ ಕುಲದಲ್ಲಿ ಒಂದೇ ಸಂತಾನವು ಆಗುತ್ತಾ ಬಂದಿದೆ. ನನ್ನ ಪೂರ್ವಜರೆಲ್ಲರಿಗೂ ಪುತ್ರರು ಹುಟ್ಟಿದ್ದರು. ಆದರೆ ನನ್ನ ಕುಲದಲ್ಲಿ ಕನ್ಯೆಯು ಹುಟ್ಟಿದ್ದಾಳೆ. ಅವಳೇ ಈ ಕುಲವನ್ನು ಮುಂದುವರೆಸಿಕೊಂಡು ಹೋಗುತ್ತಾಳೆ ಎನ್ನುವುದರಲ್ಲಿ ಸಂಶಯವಿಲ್ಲ. ಅವಳು ನನ್ನ ಪುತ್ರನೆಂದೇ ಭಾವಿಸುತ್ತಿದ್ದೇನೆ. ವಿಧಿವತ್ತಾಗಿ ಅವಳು ಪುತ್ರಿಕೆಯಂತಿದ್ದಾಳೆ. ನಿನ್ನಿಂದ ಅವಳಲ್ಲಿ ಹುಟ್ಟುವವನು ಈ ಕುಲದ ವಾರಸನಾಗಲಿ. ಇದು ನನ್ನ ಶುಲ್ಕ. ಇದಕ್ಕೆ ಒಪ್ಪಿಗೆಯಿದ್ದರೆ ಅವಳನ್ನು ಸ್ವೀಕರಿಸು."

ಹಾಗೆಯೇ ಆಗಲೆಂದು ಪ್ರತಿಜ್ಞೆಮಾಡಿ ಅವನು ಆ ಕನ್ಯೆಯನ್ನು ಸ್ವೀಕರಿಸಿದನು. ಕೌಂತೇಯನು ಆ ನಗರದಲ್ಲಿ ಮೂರು ವರ್ಷಗಳ ಪರ್ಯಂತ ವಾಸಿಸಿದನು.

## ಅಪ್ಸರೆಯರ ಶಾಪ ವಿಮೋಚನೆ

ನಂತರ ಭರತರ್ಷಭನು ದಕ್ಷಿಣದಲ್ಲಿ ಸುಪುಣ್ಯ ತಪಸ್ವಿಗಳಿಂದ ಕೂಡಿದ ಸಮುದ್ರ ತೀರ್ಥಗಳಿಗೆ ಹೋದನು. ಅಲ್ಲಿಯ ತಪಸ್ವಿಗಳು ಐದು ತೀರ್ಥಗಳನ್ನು - ಹಿಂದೆ ತಪಸ್ವಿಗಳು ಅವುಗಳನ್ನು ಪೂಜಿಸುತ್ತಿದ್ದರೂ - ತೊರೆದಿದ್ದರು. ಅವುಗಳು ಅಗಸ್ತ್ಯ ತೀರ್ಥ, ಸೌಭದ್ರ, ಸುಪಾವನ ಪೌಲೋಮ, ಅಶ್ವಮೇಧ ಫಲವನ್ನು ನೀಡುವ ಪ್ರಸನ್ನ ಕಾರಂಧಮ, ಮತ್ತು ಮಹಾ ಪಾಪ ಪ್ರಮಶನ ಭರದ್ವಾಜ ತೀರ್ಥ. ತಪಸ್ವಿಗಳಿಂದ ತೊರೆಯಲ್ಪಟ್ಟು ನಿರ್ಜನವಾಗಿದ್ದ ಆ ತೀರ್ಥಗಳನ್ನು ನೋಡಿದ ಕುರುನಂದನ ಪಾಂಡವನು ಅಂಜಲೀ ಬದ್ಧನಾಗಿ ಅವರಲ್ಲಿ ಪ್ರಶ್ನಿಸಿದನು:

> "ಬ್ರಹ್ಮವಾದಿಗಳು ಈ ತೀರ್ಥಗಳನ್ನು ಏಕೆ ವರ್ಜಿಸಿದ್ದಾರೆ?"

ಅದಕ್ಕೆ ತಾಪಸಿಗಳು ಹೇಳಿದರು:

> "ಅಲ್ಲಿ ಐದು ಮೊಸಳೆಗಳು ವಾಸಿಸುತ್ತಿವೆ ಮತ್ತು ಅವು ತಪೋಧನರನ್ನು ಹಿಡಿಯುತ್ತವೆ. ಕುರುನಂದನ! ಆದುದರಿಂದ ಈ ತೀರ್ಥಗಳು ವರ್ಜಿತವಾಗಿವೆ."

ಅವರಿಂದ ಇದನ್ನು ಕೇಳಿದ ಮಹಾಬಾಹು ಪುರುಷೋತ್ತಮನು ತಪೋಧನರು ತಡೆದರೂ ಆ ತೀರ್ಥಗಳನ್ನು ನೋಡಲು ಹೋದನು.

ಆ ಶೂರ ಪರಂತಪನು ಮಹರ್ಷಿ ಸುಭದ್ರನ ತೀರ್ಥಕ್ಕೆ ಬಂದು ಸ್ನಾನಕ್ಕೆಂದು ಅತಿವೇಗದಲ್ಲಿ ಅದರಲ್ಲಿ ಧುಮುಕಿದನು. ತಕ್ಷಣವೇ ನೀರಿನಲ್ಲಿ ವಾಸಿಸುತ್ತಿದ್ದ ಮಹಾ ಮೊಸಳೆಯೊಂದು ಕುಂತೀಪುತ್ರ ಧನಂಜಯನನ್ನು ಹಿಡಿದು ನೀರಿಗೆ ಎಳೆಯಿತು. ಬಲಿಗಳಲ್ಲಿಯೇ ಶ್ರೇಷ್ಠ ಮಹಾಬಾಹು ಕೌಂತೇಯನು ತನ್ನ ಬಲದಿಂದ ಭುಸುಗುಟ್ಟುತ್ತಿದ್ದ ಆ ಜಲಚರವನ್ನು ಹಿಡಿದು, ಮೆಟ್ಟಿ ನೀರಿನ ಮೇಲೆ ಬಂದನು. ಯಶಸ್ವಿ ಅರ್ಜುನನು ಎಳೆದು ಮೇಲೆ ತಂದಕೂಡಲೇ ಅದು ಸರ್ವಾಭರಣ ಭೂಷಿತ ಕಲ್ಯಾಣಿ, ಶ್ರೀಯಂತೆ ದೀಪ್ಯಮಾನ ದಿವ್ಯರೂಪಿ ಮನೋರಮೆ ನಾರಿಯ ರೂಪವನ್ನು ತಾಳಿತು. ಈ ಮಹಾ ಅದ್ಭುತವನ್ನು ನೋಡಿದ ಕುಂತೀಪುತ್ರ ಧನಂಜಯನು ಪರಮಪ್ರೀತನಾಗಿ ಆ ಸ್ತ್ರೀಗೆ ಹೇಳಿದನು:

> "ಕಲ್ಯಾಣಿ! ನೀನು ಯಾರು? ಮತ್ತು ಹೇಗೆ ಮೊಸಳೆಯಾದೆ? ನೀನು ಯಾವ ಪುರಾತನ ಕಾರಣಕ್ಕಾಗಿ ಈ ಮಹಾ ಪಾಪವನ್ನು ಮಾಡುತ್ತಿರುವೆ?"

ನಾರಿಯು ಹೇಳಿದಳು:

> "ಮಹಾಬಾಹು! ನಾನು ದೇವಾರಣ್ಯವಿಚಾರಿಣಿ ಅಪ್ಸರೆ. ನಿತ್ಯವೂ ಮಹಾಬಲ ಧನಪತಿಯ ಇಷ್ಟದವಳಾದ ನನ್ನ

ಹೆಸರು ವರ್ಗಾ. ನನ್ನ ಅನ್ಯ ನಾಲ್ಕು ಸಖಿಯರಿದ್ದರು. ಎಲ್ಲರೂ ಕಾಮಗಾಮಿಗಳು ಮತ್ತು ಸುಂದರಿಯರು. ನಾವೆಲ್ಲ ಒಮ್ಮೆ ಲೋಕಪಾಲಕನ ನಿವೇಶನಕ್ಕೆ ಹೋಗಿದ್ದೆವು. ದಾರಿಯಲ್ಲಿ ನಾವೆಲ್ಲರೂ ಏಕಾಂತದಲ್ಲಿ ಒಬ್ಬನೇ ಅಭ್ಯಾಸಮಾಡುತ್ತಿದ್ದ ಸಂಶಿತವ್ರತ, ರೂಪವಂತ ಬ್ರಾಹ್ಮಣನನ್ನು ನೋಡಿದೆವು. ಅವನ ತಪಸ್ಸಿನಿಂದ ಆ ಪ್ರದೇಶವು ತೇಜಸ್ಸಿನಿಂದ ಆವೃತವಾಗಿತ್ತು. ಆದಿತ್ಯನಂತೆ ಅವನು ಇಡೀ ಪ್ರದೇಶವನ್ನು ಬೆಳಗುತ್ತಿದ್ದನು. ಅವನ ಉಗ್ರ ತಪಸ್ಸಿನ ಪ್ರಭಾವ ಮತ್ತು ಅದ್ಭುತವನ್ನು ನೋಡಿ ನಾವು ಅವನ ತಪಸ್ಸಿನಲ್ಲಿ ವಿಘ್ನವನ್ನುಂಟುಮಾಡಲು ಆ ಪ್ರದೇಶಕ್ಕೆ ಬಂದಿಳಿದೆವು. ನಾನು, ಸೌರಭೇಯೀ, ಸಮೀಚೀ, ಬುದ್ಬುದಾ, ಲತಾ ಎಲ್ಲರೂ ಒಟ್ಟಿಗೇ ಆ ವಿಪ್ರನಲ್ಲಿಗೆ ಹೋದೆವು. ನಾವು ಹಾಡಿದೆವು, ನಕ್ಕೆವು ಮತ್ತು ಆ ದ್ವಿಜನನ್ನು ಪ್ರಚೋದಿಸಿದೆವು. ಆದರೆ ಅವನು ನಮಗೆ ಯಾವುದೇ ರೀತಿಯ ಗಮನವನ್ನೂ ಕೊಡಲಿಲ್ಲ. ತಪಸ್ಸಿನಲ್ಲಿ ನಿರತನಾಗಿದ್ದ ಆ ನಿರ್ಮಲನು ಅಲುಗಾಡಲೂ ಇಲ್ಲ. ಆದರೆ ಕುಪಿತನಾದ ಅವನು ನಮಗೆ ಶಾಪವನ್ನಿತ್ತನು: ’ನೀವೆಲ್ಲರೂ ನೂರು ವರ್ಷಗಳು ಮೊಸಳೆಗಳಾಗಿ ಜಲದಲ್ಲಿ ವಾಸಿಸುತ್ತೀರಿ!’

ವ್ಯಥಿತರಾದ ನಾವೆಲ್ಲರೂ ಆ ತಪೋಧನ, ಅಚ್ಯುತ ವಿಪ್ರನ ಶರಣು ಹೋದೆವು: 'ನಮ್ಮ ರೂಪ, ಯೌವನ, ಮತ್ತು ಕಂದರ್ಪನಿಂದ ದರ್ಪಿತರಾದ ನಾವು ಈ ಅಯುಕ್ತ ಕಾರ್ಯವನ್ನೆಸಗಿದ್ದೇವೆ. ದ್ವಿಜ! ನಮ್ಮನ್ನು ಕ್ಷಮಿಸಬೇಕು. ನಮ್ಮ ಸಾವಿನ ಕಾಲಬಂದಿದೆಯೆಂದೇ ನಾವು ಸಂಶಿತಾತ್ಮ ನಿನ್ನನ್ನು ಪ್ರಲೋಭಿಸಿಸಲು ಬಂದಿರುವಂತಿದೆ. ಆದರೆ ಧರ್ಮಚಿಂತಕರು ಸ್ತ್ರೀಯರನ್ನು ಕೊಲ್ಲಬಾರದೆಂದು ಹೇಳುತ್ತಾರೆ. ಆದುದರಿಂದ ಧರ್ಮಜ್ಞನಾದ ನೀನು ಧರ್ಮಪ್ರಕಾರವಾಗಿ ನಮ್ಮನ್ನು ಹಿಂಸಿಸಬಾರದು. ಸರ್ವಭೂತಗಳ ಮಿತ್ರ ಧರ್ಮಜ್ಞನೇ ಬ್ರಾಹ್ಮಣನೆಂದು ಹೇಳುತ್ತಾರೆ. ಮನೀಷಿಗಳ ಈ ಕಲ್ಯಾಣಕರ ಮಾತನ್ನು ಸತ್ಯವನ್ನಾಗಿಸು. ಶಿಷ್ಟರು ಶರಣುಬಂದ ಪ್ರಪನ್ನರನ್ನು ಪಾಲಿಸುತ್ತಾರೆ. ನಾವು ನಿನ್ನ ಶರಣು ಬಂದ ಪ್ರಪನ್ನರು. ನೀನು ನಮ್ಮನ್ನು ಕ್ಷಮಿಸಬೇಕು.'

ಈ ಮಾತುಗಳನ್ನು ಕೇಳಿದ ರವಿಸೋಮಸಮಪ್ರಭ ಶುಭಕರ್ಮಿ ಧರ್ಮಾತ್ಮ ಬ್ರಾಹ್ಮಣನು ಪ್ರಸನ್ನನಾಗಿ ಹೇಳಿದನು: 'ನೂರು, ಸಾವಿರ, ಎನ್ನುವ ಶಬ್ಧಗಳು ಯಾವಾಗಲೂ ಅಕ್ಷಯವಾಚಕಗಳು. ಆದರೆ ನನ್ನ ಶತ ಪರಿಮಾಣವು ಅಕ್ಷಯವಾಚಕವಲ್ಲ. ಯಾವಾಗ ನೀವು

ಮೊಸಳೆಗಳಾಗಿ ಪುರುಷರನ್ನು ನೀರಿಗೆ ಎಳೆಯುತ್ತೀರೋ ಆಗ ಪುರುಷಸತ್ತಮನೋರ್ವನು ನಿಮ್ಮನ್ನು ಜಲದಿಂದ ಮೇಲಕ್ಕೆ ಎಳೆದಾಗ ನೀವೆಲ್ಲರೂ ಅದೇ ಸ್ಥಳದಲ್ಲಿ ಪುನಃ ಸ್ವರೂಪವನ್ನು ಹೊಂದುತ್ತೀರಿ. ಈ ಹಿಂದೆ ನಾನು ಎಂದೂ ಹಾಸ್ಯಕ್ಕಾಗಿಯೂ ಸುಳ್ಳನ್ನು ಹೇಳಿಲ್ಲ. ಇಂದಿನಿಂದ ಈ ಎಲ್ಲ ತೀರ್ಥಗಳೂ ನಾರೀ ತೀರ್ಥಗಳೆಂಬ ಹೆಸರಿನಿಂದ ಖ್ಯಾತಿ ಹೊಂದುತ್ತವೆ. ಅವುಗಳು ಮನೀಷಿಗಳಿಗೆ ಪುಣ್ಯ ಮತ್ತು ಪಾವನಗಳೆನಿಸುತ್ತವೆ.’

ನಂತರ ನಾವು ಆ ವಿಪ್ರನ ಪ್ರದಕ್ಷಿಣೆ ಮಾಡಿ, ಅಭಿವಂದಿಸಿ ಅವನಿಂದ ಬೀಳ್ಕೊಂಡು, ದುಃಖಿತರಾಗಿ ನಮ್ಮ ಸ್ವದ್ರೂಪವನ್ನು ಪುನಃ ನೀಡುವ ಆ ನರನು ಯಾರು? ಅವನ ಹೆಸರೇನು? ಅವನು ಯಾವಾಗ ಬರುತ್ತಾನೆ? ಎಂದು ಚಿಂತಿಸಿದೆವು. ನಾವು ಹೀಗೆ ಚಿಂತಿಸುತ್ತಿರುವಾಗ ತಕ್ಷಣವೇ ಮಹಾಭಾಗ ದೇವರ್ಷಿ ನಾರದನನ್ನು ಕಂಡೆವು. ಆ ದೇವರ್ಷಿ ಅಮಿತದ್ಯುತಿಯನ್ನು ಕಂಡು ನಾವೆಲ್ಲರೂ ಹೃಷ್ಟರಾಗಿ ಅವನನ್ನು ಅಭಿನಂದಿಸಿ ವ್ಯಥಿತ ಮುಖಿಗಳಾಗಿ ನಿಂತೆವು. ಅವನು ನಮ್ಮ ದುಃಖದ ಮೂಲವನ್ನು ಕೇಳಿದನು ಮತ್ತು ನಾವು ಅವನಿಗೆ ಎಲ್ಲವನ್ನೂ ಹೇಳಿದೆವು. ಅದನ್ನು ಕೇಳಿದ ಅವನು ನಮಗೆ ಈ ಮಾತುಗಳನ್ನು ಹೇಳಿದನು:

’ದಕ್ಷಿಣ ಸಾಗರ ತಟದಲ್ಲಿ ಐದು ತೀರ್ಥಗಳಿವೆ.
ತಡಮಾಡದೇ ಆ ಪುಣ್ಯ ರಮಣೀಯ ಸ್ಥಳಕ್ಕೆ ಹೋಗಿರಿ.
ಅಲ್ಲಿಗೆ ಪುರುಷವ್ಯಾಘ್ರ ಪಾಂಡವ ಧನಂಜಯನು
ಬರುತ್ತಾನೆ ಮತ್ತು ಆ ಶುದ್ಧಾತ್ಮನು ನಿಸ್ಸಂಶಯವಾಗಿಯೂ
ನಿಮ್ಮನ್ನು ನಿಮ್ಮ ಕಷ್ಟದಿಂದ ಬಿಡುಗಡೆ ಮಾಡುತ್ತಾನೆ.’
ಅವನ ಮಾತುಗಳನ್ನು ಕೇಳಿ ನಾವೆಲ್ಲರೂ ಇಲ್ಲಿಗೆ ಬಂದೆವು.
ನಿನ್ನಿಂದ ನಾನು ಬಿಡುಗಡೆಹೊಂದಿದೆ ಎನ್ನುವುದು ಸತ್ಯ.
ಆದರೆ ನನ್ನ ಅನ್ಯ ಸಖಿಯರು ಇನ್ನೂ ಜಲದಲ್ಲಿ ಇದ್ದಾರೆ.
ವೀರ! ಈ ಎಲ್ಲರನ್ನೂ ಬಿಡುಗಡೆಗೊಳಿಸುವ ಶುಭ
ಕರ್ಮವನ್ನು ಮಾಡು!”

ನಂತರ ವೀರ್ಯವಾನ್ ಪಾಂಡವಶ್ರೇಷ್ಠನು ಆಪತ್ತಿನಲ್ಲಿದ್ದ ಆ ಎಲ್ಲ ದೀನಾತ್ಮರನ್ನೂ ಬಿಡುಗಡೆಗೊಳಿಸಿದನು. ಅಪ್ಸರೆಯರು ನೀರಿನಿಂದ ಮೇಲೆದ್ದು ತಮ್ಮ ರೂಪವನ್ನು ಪಡೆದರು ಮತ್ತು ಹಿಂದಿನಂತೆಯೇ ಕಾಣತೊಡಗಿದರು. ಆ ತೀರ್ಥಗಳನ್ನು ಶುದ್ಧಗೊಳಿಸಿ ಅನುಜ್ಞೆಯನ್ನು ಪಡೆದು ಪ್ರಭುವು ಚಿತ್ರಾಂಗದೆಯನ್ನು ನೋಡಲು ಮಣಲೂರಪುರಕ್ಕೆ ಪುನಃ ಹೋದನು. ಅವಳಲ್ಲಿ ರಾಜ ಬಭ್ರುವಾಹನನು ಪುತ್ರನಾಗಿ ಜನಿಸಿದ್ದನು. ಅವನನ್ನು ನೋಡಿ ಪಾಂಡವನು ಗೋಕರ್ಣಕ್ಕೆ ಹೋದನು. ನಂತರ ಆ ಅಮಿತ ವಿಕ್ರಮನು ಪಶ್ಚಿಮದಿಕ್ಕಿನಲ್ಲಿದ್ದ ಎಲ್ಲ ಪುಣ್ಯ ತೀರ್ಥ ಪ್ರದೇಶಗಳಿಗೆ ಭೇಟಿಯಿತ್ತನು. ಪಶ್ಚಿಮ ಸಮುದ್ರದಲ್ಲಿ

ಯಾವ್ಯಾವ ತೀರ್ಥ ಸ್ಥಾನಗಳಿವೆಯೋ ಅವೆಲ್ಲವಕ್ಕೂ ಹೋಗಿ ಅವನು ಪ್ರಭಾಸಕ್ಕೆ ಬಂದನು.

## ಕೃಷ್ಣಾರ್ಜುನರ ಪುನರ್ಮಿಲನ

ಮಧುಸೂದನನು ಅಪರಾಜಿತ ಬೀಭತ್ಸುವು ತೀರ್ಥಯಾತ್ರೆ ಮಾಡುತ್ತಾ ಪ್ರಭಾಸದೇಶವನ್ನು ತಲುಪಿದ್ದಾನೆ ಎನ್ನುವುದನ್ನು ಕೇಳಿದನು. ಕೌಂತೇಯನಿಗೆ ತಿಳಿಯದಂತೆಯೇ ಮಾಧವನು ಅಲ್ಲಿಗೆ ಹೋದನು ಮತ್ತು ಪುನಃ ಪ್ರಭಾಸದಲ್ಲಿ ಕೃಷ್ಣ ಪಾಂಡವರ ಅನ್ಯೋನ್ಯ ದರ್ಶನವಾಯಿತು. ಅವರು ಅನ್ಯೋನ್ಯರನ್ನು ಆಲಂಗಿಸಿದರು ಮತ್ತು ಕುಶಲವನ್ನು ವಿಚಾರಿಸಿದರು. ನರನಾರಾಯಣ ಋಷಿಗಳಾಗಿದ್ದ ಆ ಪ್ರಿಯ ಸಖರು ವನದಲ್ಲಿ ಕುಳಿತುಕೊಂಡರು. ನಂತರ ವಾಸುದೇವನು ಅರ್ಜುನನ ಕುರಿತು ಕೇಳಿದನು:

> "ಪಾಂಡವ! ನೀನು ಯಾವ ಕಾರಣಕ್ಕಾಗಿ ತೀರ್ಥಯಾತ್ರೆ ಮಾಡುತ್ತಿದ್ದೀಯೆ?"

ಆಗ ಅರ್ಜುನನು ನಡೆದುದೆಲ್ಲವನ್ನೂ ಯಥಾವತ್ತಾಗಿ ಹೇಳಿದನು. ಅದನ್ನು ಕೇಳಿ ಪ್ರಭು ವಾರ್ಷ್ಣೇಯನು ಅದು ಸರಿಯೆಂದು ಹೇಳಿದನು. ಪ್ರಭಾಸದಲ್ಲಿ ಕೃಷ್ಣ ಪಾಂಡವರು ಮನಬಂದಂತೆ ವಿಹರಿಸಿದರು. ಅವರು ಉಳಿಯಲು ರೈವತ ಪರ್ವತಕ್ಕೆ ಹೋದರು. ಕೃಷ್ಣನ ವಚನದಂತೆ ಮೊದಲೇ ಆ ಪರ್ವತವನ್ನು ಜನರು ಸಮಲಂಕರಿಸಿ ಭೋಜನವನ್ನು ಏರ್ಪಡಿಸಿದ್ದರು. ಪಾಂಡವನು ಅವೆಲ್ಲವನ್ನೂ



ಸ್ವೀಕರಿಸಿ ಆನಂದಿಸಿದನು. ಮತ್ತು ವಾಸುದೇವನ ಸಹಿತ ನಟನರ್ತಕರನ್ನೂ ನೋಡಿದನು. ಅವರೆಲ್ಲರನ್ನೂ ಪ್ರಶಂಸಿಸಿ ಬೀಳ್ಕೊಟ್ಟು ಮಹಾದ್ಯುತಿ ಪಾಂಡವನು ಸಿಂಗರಿಸಿದ ದಿವ್ಯ ಶಯನವನ್ನು ಸೇರಿದನು. ಅವನು ಸಾತ್ವತನಿಗೆ ತಾನು ಕಂಡ ತೀರ್ಥಗಳ, ಪರ್ವತಗಳ, ನದಿಗಳ ಮತ್ತು ವನಗಳ ಕುರಿತು ಹೇಳಿದನು. ಈ ಕಥೆಗಳನ್ನೆಲ್ಲಾ ಹೇಳುತ್ತಿರುವಾಗಲೇ ನಿದ್ರೆಯು ಕೌಂತೇಯನನ್ನು ಸ್ವರ್ಗಸಮ್ಮಿತ ಲೋಕಕ್ಕೆ ಕರೆದುಕೊಂಡು ಹೋಯಿತು.

ಬೆಳಗಾಗುತ್ತಲೇ ಆ ಅನಘನು ಮಧುರ ಗೀತ, ವೀಣೆಯ ನಾದ, ಮತ್ತು ಮಂಗಲ ಸ್ತುತಿಗಳಿಗೆ ಎಚ್ಚೆತ್ತನು. ಅವಶ್ಯಕಾರ್ಯಗಳನ್ನು

ಮುಗಿಸಿ ವಾರ್ಷ್ಣೇಯನಿಂದ ಅಭಿನಂದಿತನಾಗಿ ಕಾಂಚನಾಂಗ ರಥದಲ್ಲಿ ದ್ವಾರಕೆಗೆ ಹೋದನು. ಕುಂತೀಸುತನ ಗೌರವಾರ್ಥವಾಗಿ ದ್ವಾರಕೆಯನ್ನು ಗುಡಿಸಲನ್ನೂ ಸೇರಿ ಚೆನ್ನಾಗಿ ಅಲಂಕರಿಸಲಾಗಿತ್ತು. ದ್ವಾರಕಾವಾಸಿ ಜನರು ಕೌಂತೇಯನನ್ನು ನೋಡಲೆಂದು ರಾಜ ಮಾರ್ಗದಲ್ಲಿ ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಸೇರಿದರು. ಅಲ್ಲಿ ಭೋಜ, ವೃಷ್ಣಿ, ಅಂಧಕರು ಮತ್ತು ಅವರ ಸ್ತ್ರೀಯರ ನೂರಾರು ಸಹಸ್ರಾರು ಸಂಖ್ಯೆಗಳ ಮಹಾ ಸಮಾವೇಶವಿತ್ತು. ಭೋಜ, ವೃಷ್ಣಿ, ಅಂಧಕಾತ್ಮಜರಿಂದ ಸತ್ಕೃತನಾಗಿ, ಅಭಿವಾದಿಸುವವರನ್ನು ಅಭಿವಾದಿಸಿ ಸರ್ವರಿಗೂ ಸಂತಸವನ್ನು ತಂದನು. ಕುಮಾರ ಸರ್ವರೂ ಆ ವೀರನನ್ನು ಸತ್ಕಾರದಿಂದ ಅಭಿವಾದಿಸಿದರು. ಸಮಾನ ವಯಸ್ಕರು ಎಲ್ಲರೂ ಪುನಃ ಪುನಃ ಆಲಂಗಿಸಿದರು. ಅವನು ರತ್ನ ಭೋಜ್ಯ ಸಮಾವೃತ ಕೃಷ್ಣನ ಭವನದಲ್ಲಿ ಕೃಷ್ಣನೊಡನೆ ಬಹಳಷ್ಟು ರಾತ್ರಿಗಳು ತಂಗಿದನು.

## ಸುಭದ್ರಾಹರಣ

ಕೆಲವು ದಿನಗಳ ನಂತರ ವೃಷ್ಣಿ ಮತ್ತು ಅಂಧಕರು ಅದೇ ರೈವತಕ ಗಿರಿಯಲ್ಲಿ ಒಂದು ಮಹಾ ಉತ್ಸವವನ್ನು ನೆರವೇರಿಸಿದರು. ವೀರ ಭೋಜರು, ವೃಷ್ಣಿಗಳು ಮತ್ತು ಅಂಧಕರು ಆ ಮಹಾಗಿರಿಯಲ್ಲಿ ಸಹಸ್ರಾರು ಬ್ರಾಹ್ಮಣರಿಗೆ ದಾನವನ್ನಿತ್ತರು. ಆ ಗಿರಿಯ ಸುತ್ತಲ ಪ್ರದೇಶವು ರತ್ನಚಿತ್ರಗಳಿಂದ ಕೂಡಿದ ಪ್ರಾಸಾದಗಳಿಂದ ಮತ್ತು

ಎಲ್ಲೆಡೆಯೂ ದೀಪವೃಕ್ಷಗಳಿಂದ ಶೋಭಿತವಾಗಿತ್ತು. ಅಲ್ಲಿ ವಾದಕರು ತಮ್ಮ ವಾದ್ಯಗಳನ್ನು ನುಡಿಸುತ್ತಿದ್ದರು, ನರ್ತಕರು ನರ್ತಿಸುತ್ತಿದ್ದರು ಮತ್ತು ಗಾಯಕರು ಗಾಯನ ಹಾಡುತ್ತಿದ್ದರು. ಸುಮಹೌಜಸ ವೃಷ್ಣಿ ಕುಮಾರರು ಅಲಂಕೃತರಾಗಿ ತಮ್ಮ ತಮ್ಮ ವಾಹನಗಳ ಮೇಲೆ ಕುಳಿತು ಬಂಗಾರದ ಕಡಗಗಳನ್ನು ಹಾಕಿಕೊಂಡು ಎಲ್ಲ ಕಡೆ ಓಡಾಡುತ್ತಿದ್ದರು. ಪೌರರು ತಮ್ಮ ಪತ್ನಿಯರು ಮತ್ತು ಅನುಚರರೊಂದಿಗೆ ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ನಡೆಯುತ್ತ ಅಥವಾ ವಾಹನಗಳಲ್ಲಿ ಹೊರಬಂದಿದ್ದರು. ಅಲ್ಲಿ ಸಂಗೀತಗಾರರು ಹಿಂಬಾಲಿಸಿಬರುತ್ತಿರಲು ಎತ್ತರವಾಗಿದ್ದ ಪ್ರಭು ಹಲಧರನು ಕುಡಿದು ಮತ್ತನಾಗಿ ರೇವತಿಯ ಸಹಿತ ತಿರುಗಾಡುತ್ತಿದ್ದನು. ಅಲ್ಲಿ ವೃಷ್ಣಿಗಳ ರಾಜ ಪ್ರತಾಪವಾನ್ ಉಗ್ರಸೇನನೂ ತನ್ನ ಸಹಸ್ರ ಪತ್ನಿಯರೊಂದಿಗೆ ಗಂಧರ್ವರಿಂದ ರಂಜಿಸಿಕೊಳ್ಳುತ್ತಾ ಇದ್ದನು.
ದಿವ್ಯಮಾಲಾಂಬರಗಳನ್ನು ಧರಿಸಿ ಕುಡಿದ ಅಮಲಿನಲ್ಲಿ ಸಮರದುರ್ಮದರಾಗಿದ್ದ ರೌಕ್ಮಿಣೇಯ-ಸಾಂಬರಿಬ್ಬರೂ ಅಮಲಿನಲ್ಲಿ ಅಮರರಂತೆ ವಿಹರಿಸುತ್ತಿದ್ದರು. ಅಕ್ರೂರ, ಸಾರಣ, ಗದ, ಭಾನು, ವಿಡೂರಥ, ನಿಶಠ, ಚಾರುದೇಷ್ಣ, ಪೃಥು, ವಿಪೃಥು, ಸತ್ಯಕ, ಸಾತ್ಯಕಿ, ಭಂಗಕಾರ, ಸಹಾಚರ, ಹಾರ್ದಿಕ್ಯ ಕೃತವರ್ಮ ಮತ್ತು ಇನ್ನೂ ಇತರರು ಯಾರ ಹೆಸರನ್ನು ಹೇಳಲಿಲ್ಲ ಎಲ್ಲರೂ ತಮ್ಮ ತಮ್ಮ ಸ್ತ್ರೀಯರು ಮತ್ತು ಗಾಯಕರಿಂದ ಸುತ್ತುವರೆಯಲ್ಪಟ್ಟು ರೈತಕದಲ್ಲಿ ನಡೆಯುತ್ತಿದ್ದ ಆ ಉತ್ಸವದ ಶೋಭೆಯನ್ನು ಹೆಚ್ಚಿಸಿದರು. ಆ

ಮಹಾಶುಭ ಕೋಲಾಹಲವು ನಡೆಯುತ್ತಿರಲು ವಾಸುದೇವ ಮತ್ತು ಪಾರ್ಥರು ಒಟ್ಟಿಗೇ ನಡೆಯುತ್ತಿದ್ದರು ಮತ್ತು ಅಲ್ಲಿ ನಡೆಯುತ್ತಿರುವಾಗ ಅಲಂಕೃತಳಾಗಿ ಸಖಿಗಳ ಮಧ್ಯದಲ್ಲಿದ್ದ ವಸುದೇವನ ಸುಂದರ ಮಗಳು ಭದ್ರೆಯನ್ನು ನೋಡಿದರು. ಅವಳನ್ನು ನೋಡಿದೊಡನೆಯೇ ಅರ್ಜುನನು ಅವಳಲ್ಲಿ ಅನುರಕ್ತನಾದನು. ಪಾರ್ಥನು ಅವಳಲ್ಲಿಯೇ ಏಕಾಗ್ರಮನಸ್ಕನಾಗಿದ್ದುದನ್ನು ಕೃಷ್ಣನು ಗಮನಿಸಿದನು. ಆಗ ಪುಷ್ಕರಾಕ್ಷನು ನಗುತ್ತಾ ಹೇಳಿದನು:

> “ವನಚರನ ಮನಸ್ಸು ಕಾಮದಿಂದ ಏರುಪೇರಾಗುತ್ತಿದೆಯೇ? ಪಾರ್ಥ! ನಿನಗೆ ಮಂಗಳವಾಗಲಿ! ಅವಳು ಸಾರಣನ ಸಹೋದರಿ ಮತ್ತು ನನ್ನ ತಂಗಿ. ಸುಭದ್ರಾ ಎಂಬ ಹೆಸರಿನವಳು. ನನ್ನ ತಂದೆಯ ಹಿರಿಯ ಮಗಳು. ನಿನ್ನ ಮನಸ್ಸು ಅವಳಲ್ಲಿದೆ ಎಂದಾದರೆ ಸ್ವಯಂ ನಾನೇ ತಂದೆಯಲ್ಲಿ ಮಾತನಾಡುತ್ತೇನೆ.”

ಅರ್ಜುನನು ಹೇಳಿದನು:

> “ರೂಪಸಂಪನ್ನಳಾದ ಈ ವಸುದೇವನ ಮಗಳು ಮತ್ತು ವಾಸುದೇವನ ತಂಗಿಯನ್ನು ಯಾರು ತಾನೇ ಮೋಹಿಸುವುದಿಲ್ಲ? ನಿನ್ನ ತಂಗಿ ವಾರ್ಷ್ಣೇಯಿಯು ನನ್ನ ಮಹಿಷಿಯಾಗುತ್ತಾಳೆಂದರೆ ನಾನು ಎಲ್ಲ ಒಳ್ಳೆಯ ಕೆಲಸಗಳನ್ನೂ ಮಾಡಿರಬೇಕು. ಅವಳನ್ನು ಪಡೆಯುವ

ಉಪಾಯವೇನು ಹೇಳು. ಮನುಷ್ಯನಿಂದ ಸಾಧ್ಯವಾಗುವ ಎಲ್ಲವನ್ನೂ ಮಾಡುತ್ತೇನೆ."

ವಾಸುದೇವನು ಹೇಳಿದನು:

"ಪಾರ್ಥ ! ಸ್ವಯಂವರವೇ ಕ್ಷತ್ರಿಯರ ವಿವಾಹ. ಆದರೆ ಅದು ಸಂಶಯಯುಕ್ತವಾದುದು ಏಕೆಂದರೆ ಅದರ ಫಲಿತಾಂಶವು ಭಾವನೆಗಳ ಮೇಲೆ ಅವಲಂಬಿಸಿಲ್ಲ. ಬಲವಂತಾಗಿ ಕದ್ದುಕೊಂಡು ಹೋಗುವುದೂ ಶೂರ ಕ್ಷತ್ರಿಯರ ವಿವಾಹವಾಗಬಹುದು ಎಂದು ಧರ್ಮವಿದುಗಳು ಹೇಳುತ್ತಾರೆ. ನನ್ನ ತಂಗಿ ಕಲ್ಯಾಣಿಯನ್ನು ಕದ್ದುಕೊಂಡು ಹೋಗು. ಸ್ವಯಂವರದಲ್ಲಿ ಅವಳ ಬಯಕೆಗಳು ಏನೋ ತಿಳಿದಿಲ್ಲ."

ಅರ್ಜುನ-ಕೃಷ್ಣರು ಆ ನಿಶ್ಚಯವನ್ನು ಮಾಡಿ ಶೀಘ್ರಗ ಜನರನ್ನು ಇಂದ್ರಪ್ರಸ್ಥದಲ್ಲಿದ್ದ ಧರ್ಮರಾಜನಲ್ಲಿಗೆ ಕಳುಹಿಸಿದರು. ವಿಷಯವನ್ನು ಕೇಳಿದೊಡನೆಯೇ ಮಹಾಬಾಹು ಪಾಂಡವನು ತನ್ನ ಒಪ್ಪಿಗೆಯನ್ನು ನೀಡಿದನು. ಭೀಮಸೇನನು ಇದನ್ನು ಕೇಳಿ ಕೃತಕೃತ್ಯನಾದಂತೆ ಭಾವಿಸಿದನು. ಇತರರೊಡನೆ ಈ ವಿಷಯವನ್ನು ಹೇಳಿಕೊಂಡು ಸಂತಸ ಪಟ್ಟನು. ಅವನ ಅನುಜ್ಞೆಯಿದೆ ಎಂದು ತಿಳಿದ ಧನಂಜಯನು ಕನ್ಯೆಯು ರೈವತಕ್ಕೆ ಹೋಗಿದ್ದಾಳೆ ಎನ್ನುವುದನ್ನೂ ತಿಳಿದುಕೊಂಡನು. ಕೃಷ್ಣನೊಂದಿಗೆ ಉಪಾಯವನ್ನು ಚರ್ಚಿಸಿ, ಅವನ

ಅನುಜ್ಞೆಯನ್ನು ಪಡೆದು, ಕೃಷ್ಣನ ಮನಸ್ಸನ್ನು ತಿಳಿದುಕೊಂಡು ಭರತರ್ಷಭನು ಯಥಾವಿಧಿಯಾಗಿ ತಯಾರಿಸಿದ, ಸೈನ್ಯ-ಸುಗ್ರೀವರನ್ನು ಕಟ್ಟಿದ, ಗಂಟೆ ಮಾಲೆಗಳಿಂದ ಅಲಂಕೃತವಾದ ಕಾಂಚನಾಂಗ ರಥವನ್ನೇರಿ ಹೊರಟನು. ಅರಿಗಳ ಹರ್ಷಘಾತಿಯ ಆ ರಥದಲ್ಲಿ ಮಳೆಯ ಮೋಡಗಳಂತೆ ಘರ್ಜಿಸಬಲ್ಲ ಮತ್ತು ಅಗ್ನಿಪ್ರಕಾಶದಿಂದ ಜ್ವಲಿಸುವ ಎಲ್ಲ ಶಸ್ತ್ರಗಳೂ ಇದ್ದವು. ಕವಚ, ಖಡ್ಗ, ಕೈ ಮತ್ತು ಬೆರಳುಗಳ ಕವಚಗಳಿಂದ ಸನ್ನದ್ಧನಾಗಿ ಬೇಟೆಯಾಡಲು ಹೋಗುವ ನೆಪದಲ್ಲಿ ವೇಗದಿಂದ ಹೊರಟನು. ಸುಭದ್ರೆಯು ಶೈಲೇಂದ್ರ ರೈವತವನ್ನೂ ಮತ್ತು ಅಲ್ಲಿರುವ ಸರ್ವ ದೇವತೆಗಳನ್ನೂ ಬ್ರಾಹ್ಮಣರ ಸ್ವಸ್ತಿ ವಾಚಗಳೊಂದಿಗೆ ಪೂಜಿಸಿ, ಗಿರಿಯ ಪ್ರದಕ್ಷಿಣೆ ಮಾಡಿ ದ್ವಾರಕೆಯ ಕಡೆ ಬರುತ್ತಿದ್ದಳು. ಆಗ ಕಾಮಬಾಣ ಪೀಡಿತ ಕೌಂತೇಯನು ಚಾರು ಸರ್ವಾಂಗೀ ಸುಭದ್ರೆಯನ್ನು ಎತ್ತಿ ಬಲವಂತವಾಗಿ ತನ್ನ ರಥದ ಮೇಲೆ ಇರಿಸಿದನು.

ಆ ಶುಚಿಸ್ಮಿತೆಯನ್ನು ಪಡೆದ ಕೂಡಲೇ ಪುರುಷವ್ಯಾಘ್ರನು ಆಕಾಶವೇಗದಲ್ಲಿ ತನ್ನ ರಥದಲ್ಲಿ ಸ್ವಪುರದ ಕಡೆ ಪ್ರಯಾಣಿಸಿದನು. ಆದರೆ, ಸುಭದ್ರೆಯು ಅಪಹರಣವಾಗುತ್ತಿರುವುದನ್ನು ನೋಡಿದ ಅವಳ ಸೈನಿಕ ಜನರು ಸರ್ವರೂ ಕೂಗುತ್ತಾ ದ್ವಾರಕಾಪುರಿಗೆ ಓಡಿದರು. ಅವಸರದಲ್ಲಿ ಸುಧರ್ಮ ಸಭೆಯನ್ನು ಸೇರಿದ ಅವರು



ಪಾರ್ಥವಿಕ್ರಮದ ಕುರಿತು ಸರ್ವವನ್ನು ಸಭಾಪಾಲನಿಗೆ ನಿವೇದಿಸಿದರು. ಅದನ್ನು ಕೇಳಿದ ಸಭಾಪಾಲನು ಬಂಗಾರದಿಂದ ಅಲಂಕೃತ ಮಹಾಘೋಷದ ಯುದ್ಧ ಭೇರಿಯನ್ನು ಹೊಡೆಯಿಸಿದನು. ಶಬ್ಧದಿಂದ ಬೆದರಿದ ಭೋಜ ವೃಷ್ಣಿ ಅಂಧಕರು ಅನ್ನಪಾನಗಳನ್ನು

ಅಲ್ಲಿಯೇ ತೊರೆದು ಸಭೆಯನ್ನು ಸೇರಿದರು. ಆಗ ಪುರುಷವ್ಯಾಘ್ರ ವೃಷ್ಣಿ ಅಂಧಕ ಮಹಾರಥಿಗಳು ನೂರಾರು ಸಂಖ್ಯೆಗಳಲ್ಲಿ ಹುತಾಶನನು ಅಗ್ನಿಕುಂಡವನ್ನು ಏರುವಂತೆ ಬಂಗಾರದಿಂದ ಮಾಡಲ್ಪಟ್ಟ, ಬೆಲೆಬಾಳುವ ದಿಂಬುಗಳಿದ್ದ, ಮಣಿವಿದ್ರುಮಚಿತ್ರಗಳಿಂದ ಜ್ವಲಿತಾಗ್ನಿ ಪ್ರಭಾವಳಿಗಳಿಂದ ಕೂಡಿದ ಸಿಂಹಾಸನಗಳನ್ನು ಅಲಂಕರಿಸಿದರು. ಅವರೆಲ್ಲರೂ ದೇವತೆಗಳಂತೆ ಕುಳಿತುಕೊಳ್ಳಲು ಸಭಾಪಾಲ ಮತ್ತು ಸಹಾನುಗರು ಜಿಷ್ಣುವಿನ ಚೇಷ್ಟೆಯನ್ನು ವರದಿಮಾಡಿದರು. ಅದನ್ನು ಕೇಳಿದ ಮದದಿಂದ ರಕ್ತಾಂತಲೋಚನರಾದ ವೃಷ್ಣಿವೀರರು ಪಾರ್ಥನನ್ನು ಕ್ಷಮಿಸದೆಯೇ ಒಟ್ಟಾದರು.

> “ರಥಗಳನ್ನು ಕಟ್ಟಿ. ಧನುಸ್ಸು, ಮಹಾರ್ಹಣಿ ಮತ್ತು ಕವಚ ಮುಂತಾತ ಅನೇಕ ಆಯುಧಗಳನ್ನು ತನ್ನಿ.”

ಕೆಲವರು ತಮ್ಮ ಅನುಚರರಿಗೆ ರಥಗಳನ್ನು ಕಟ್ಟುವಂತೆ ಕೂಗಿ ಹೇಳಿದರು. ಇನ್ನು ಕೆಲವರು ತಾವೇ ವಿಭೂಷಿತ ತುರಗಗಳನ್ನು ಕಟ್ಟಿದರು. ರಥಗಳನ್ನು, ಕವಚಗಳನ್ನು, ಧ್ವಜಗಳನ್ನು ತರುವಾಗ ಕೂಗಾಡುತ್ತಿದ್ದ ಆ ನರವೀರರಲ್ಲಿ ಮಹಾ ಗೊಂದಲವುಂಟಾಯಿತು. ಇವುಗಳ ಮಧ್ಯದಲ್ಲಿ ಕೈಲಾಸಶಿಖರೋಪಮವಾಗಿ ಎತ್ತರವಾಗಿದ್ದ, ನೀಲವಸ್ತ್ರಗಳನ್ನು ಧರಿಸಿದ್ದ, ಕುಡಿದ ಅಮಲಿನಲ್ಲಿದ್ದ ವನಮಾಲಿ [ಬಲರಾಮ] ಯು ಈ ಮಾತುಗಳನ್ನಾಡಿದನು:

> “ಜನಾರ್ದನನು ಸುಮ್ಮನಿರುವಾಗ ನೀವೆಲ್ಲ ಮೂಢರು ಏನು ಮಾಡುತ್ತಿರುವಿರಿ? ಅವನ ಮನಸ್ಸಿನಲ್ಲಿ ಏನಿದೆಯೆಂದು ತಿಳಿಯದೇ ಸಂಕೃದ್ಧ ಮೇಘಗಳಂತೆ ಗರ್ಜಿಸುತ್ತಿದ್ದೀರಲ್ಲ? ಮೊದಲು ಆ ಮಹಾಮತಿಯು ತನ್ನ ಮನಸ್ಸಿನಲ್ಲಿ ಏನಿದೆ ಎನ್ನುವುದನ್ನು ಹೇಳಲಿ. ನಂತರ ಅವನು ಏನನ್ನು ಬಯಸುತ್ತಾನೆ ಅದನ್ನೇ ಹಿಂಜರಿಯದೇ ಮಾಡಿ.”

ಹಲಾಯುಧಧಾರಿಯ ಈ ಒಳ್ಳೆಯ ಸಲಹೆಯನ್ನು ಕೇಳಿದ ಅವರೆಲ್ಲರೂ ಸಾಧು ಸಾಧು ಎಂದು ಸುಮ್ಮನಾದರು. ಧೀಮಂತ ಬಲದೇವನ ಮಾತು ಸರಿಯಾದುದೆಂದು ಪುನಃ ಸರ್ವರೂ ಸಭಾಮಧ್ಯದಲ್ಲಿ ಕುಳಿತುಕೊಂಡರು. ಆಗ ಕಾಮಪಾಲನು ಪರಂತಪ ವಾಸುದೇವನನ್ನುದ್ದೇಶಿಸಿ ಹೇಳಿದನು:

> “ಜನಾರ್ದನ! ನೀನು ಏಕೆ ಏನನ್ನೂ ಹೇಳದೇ ಇಲ್ಲಿಯೇ ನೋಡುತ್ತಾ ಕುಳಿತಿದ್ದೀಯೆ. ನಿನ್ನ ಕಾರಣದಿಂದಲೇ ನಾವೆಲ್ಲರೂ ಪಾರ್ಥನನ್ನು ಇಲ್ಲಿಗೆ ಬರಮಾಡಿಸಿಕೊಂಡೆವು. ಆ ದುರ್ಬುದ್ಧಿ ಕುಲಪಾಪಿಯು ನಮ್ಮ ಈ ಗೌರವಕ್ಕೆ ಅರ್ಹನಿರಲಿಲ್ಲ! ತಾನು ಒಂದು ಒಳ್ಳೆಯ ಕುಲದಲ್ಲಿ ಹುಟ್ಟಿದವನೆಂದು ತಿಳಿಯುವ ಯಾವ ಪುರುಷ ತಾನೆ ಊಟಮಾಡಿದ ತಟ್ಟೆಯನ್ನು ಸ್ವಯಂ ಒಡೆಯುತ್ತಾನೆ? ಸಂಬಂಧವನ್ನು ಬೆಳೆಸಲು ಮತ್ತು ಹಿಂದೆ ಮಾಡಿದ

ಉಪಕಾರಗಳನ್ನು ಗೌರವಿಸಿ ಬಂದ ಯಾರುತಾನೇ ಈ ರೀತಿಯ ಸಾಹಸವನ್ನು ಮಾಡಬಲ್ಲರು? ಸುಭದ್ರೆಯನ್ನು ಬಲವಂತವಾಗಿ ಅಪಹರಿಸಿ ಅವನು ನಮ್ಮ ಮೇಲೆ ಮತ್ತು ಕೇಶವನ ಮೇಲೆ ಅವನಿಗಿರುವ ಅಸಹ್ಯಭಾವನೆಯನ್ನು ತೋರಿಸಿ ಅಪಮಾನ ಮಾಡಿದ್ದಾನೆ ಮತ್ತು ತನ್ನ ಮೃತ್ಯುವನ್ನು ಬಯಸಿದ್ದಾನೆ. ನನ್ನ ತಲೆಯ ಮೇಲೆ ಕಾಲನ್ನಿಟ್ಟ ಅವನನ್ನು ಹೇಗೆತಾನೇ ಕ್ಷಮಿಸಲಿ? ಪಾದದಿಂದ ತುಳಿಯಲ್ಪಟ್ಟ ಹಾವು ಕ್ಷಮಿಸಬಲ್ಲದೇ? ಇಂದು ನಾನೊಬ್ಬನೇ ವಸುಧೆಯಲ್ಲಿ ಕೌರವರೇ ಇಲ್ಲದಂತೆ ಮಾಡುತ್ತೇನೆ. ಅರ್ಜುನನ ಈ ಅತಿಕ್ರಮವನ್ನು ನಾನು ಸಹಿಸಲಾರೆ!”

ಮೇಘದುಂದುಭಿಯಂತೆ ಗರ್ಜಸುತ್ತಿರುವ ಅವನನ್ನು ಸರ್ವ ಭೋಜ ವೃಷ್ಣಿ ಅಂಧಕರೂ ಅನುಮೋದಿಸಿದರು. ಸರ್ವ ವೃಷ್ಣಿಗಳೂ ಅವನ ಮಾತುಗಳನ್ನು ಪುನಃ ಪುನಃ ಹೇಳುತ್ತಿರಲು ವಾಸುದೇವನು ಧರ್ಮಾರ್ಥಸಂಹಿತ ಈ ಮಾತುಗಳನ್ನು ಹೇಳಿದನು:

“ಗುಡಾಕೇಶನು ನಮ್ಮ ಕುಲಕ್ಕೆ ಯಾವುದೇ ಅಪಮಾನವನ್ನೆಸಗಿಲ್ಲ. ಹೊರತಾಗಿ ನಮ್ಮ ಮೇಲೆ ಅಧಿಕ ಸನ್ಮಾನವನ್ನು ತೋರಿಸಿದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಸಾತ್ವತರು ಅರ್ಥಲುಬ್ಧಿಗಳಲ್ಲ ಎನ್ನುವುದನ್ನು

ಪಾರ್ಥನು ತಿಳಿದ್ದಿದ್ದಾನೆ. ಹಾಗೆಯೇ ಆ ಪಾಂಡವನು ಸ್ವಯಂವರದಲ್ಲಿ ಗೆಲ್ಲಲಾರ ಎನ್ನುವುದನ್ನೂ ಅರಿತಿದ್ದಾನೆ. ಪಶುವಂತೆ ಕನ್ಯೆಯರನ್ನು ಕೊಡುವುದನ್ನು ಯಾರುತಾನೆ ಮನ್ನಿಸಿಯಾರು? ಮತ್ತು ಭುವಿಯ ಯಾವ ಪುರುಷನು ತಾನೆ ತನ್ನ ಸಂತಾನವನ್ನು ಮಾರಾಟಮಾಡುತ್ತಾನೆ? ಈ ಎಲ್ಲ ದೋಷಗಳನ್ನೂ ಕೌಂತೇಯನು ಪರಿಶೀಲಿಸಿದ್ದ ಎನ್ನುವುದು ನನ್ನ ಅಭಿಪ್ರಾಯ. ಆದುದರಿಂದ ಪಾಂಡವನು ಧರ್ಮಪ್ರಕಾರ ಕನ್ಯೆಯನ್ನು ಅಪಹರಿಸಿದ್ದಾನೆ. ಈ ಸಂಬಂಧವು ಉಚಿತವೇ ಆಗಿದೆ. ಸುಭದ್ರೆಯು ಯಶಸ್ವಿನಿ ಮತ್ತು ಅವಳನ್ನು ಬಲವಂತವಾಗಿ ಅಪಹರಿಸಿದ ಪಾರ್ಥನೂ ಕೂಡ ಯಶಸ್ವಿಯು. ಭರತ ಮತ್ತು ಮಹಾತ್ಮ ಶಂತನುವಿನ ಕುಲದಲ್ಲಿ ಜನಿಸಿದ ಮತ್ತು ಕುಂತಿಭೋಜನ ಮಗಳ ಪುತ್ರ ಅರ್ಜುನನನ್ನು ಯಾರುತಾನೇ ಬಯಸುವುದಿಲ್ಲ? ನನ್ನಷ್ಟೇ ಸಮರ್ಥನಾಗಿರುವ ಪಾರ್ಥನನ್ನು ವಿಕ್ರಮದಲ್ಲಿ ಪರಾಜಿಸುವ ಯಾರನ್ನೂ ವಿರೂಪಾಕ್ಷ ಭಗನೇತ್ರಹರ ಹರನನ್ನು ಬಿಟ್ಟು ಸರ್ವ ಲೋಕಗಳಲ್ಲಿಯೂ ಇಂದ್ರ ರುದ್ರರಲ್ಲಿಯೂ ನನಗೆ ಕಾಣುತ್ತಿಲ್ಲ. ಅದರಲ್ಲೂ ರಥ ನನ್ನದು ಮತ್ತು ಕುದುರೆಗಳೂ ನನ್ನವೇ. ಯುದ್ಧದಲ್ಲಿ ಶೀಘ್ರಾಸ್ತ್ರನಾದ ಪಾರ್ಥನಿಗೆ ಸರಿಸಾಟಿ ಯಾರೂ ಇಲ್ಲ. ಧನಂಜಯನ ಬೆನ್ನಟ್ಟುವ ಬದಲಾಗಿ

ಅವನನ್ನು ಸಂತವಿಸಿ ಸಂತೋಷದಿಂದ ಹಿಂದೆ ಕರೆದುಕೊಂಡು ಬರಬೇಕು ಎನ್ನುವುದು ನನ್ನ ಅಂತಿಮ ಅಭಿಪ್ರಾಯ. ತನ್ನ ಬಲದಿಂದ ನಮ್ಮನ್ನೆಲ್ಲ ಸೋಲಿಸಿ ಪಾರ್ಥನು ತನ್ನ ಪುರವನ್ನು ಸೇರಿದನೆಂದರೆ ತಕ್ಷಣವೇ ನಮ್ಮೆಲ್ಲರಿಗೆ ಅಪಕೀರ್ತಿ ಬರುತ್ತದೆ. ಆದರೆ ಸಾಂತ್ವನದಲ್ಲಿ ಪರಾಜಯವೆನ್ನುವುದೇ ಇಲ್ಲ.”

ವಾಸುದೇವನ ಈ ಮಾತುಗಳನ್ನು ಕೇಳಿದ ನಂತರ ಅವರು ಅದರಂತೆಯೇ ಮಾಡಿದರು. ಅರ್ಜುನನನ್ನು ಹಿಂದೆ ಕರೆತಂದು ಅವನ ವಿವಾಹವನ್ನು ನೆರವೇರಿಸಿದರು. ಕೌಂತೇಯನು ಆ ವರ್ಷದ ಉಳಿದ ರಾತ್ರಿಗಳನ್ನು ವೃಷ್ಣಿನಂದನರ ಸತ್ಕಾರದಲ್ಲಿ ಯಥಾಕಾಮವಾಗಿ ವಿಹರಿಸುತ್ತಾ ಅಲ್ಲಿಯೇ ಕಳೆದನು. ಉಳಿದ ಸಮಯವನ್ನು ಪ್ರಭುವು ಪುಷ್ಕರದಲ್ಲಿ ಕಳೆದನು.

## ಹರಣಾಹರಣ

ಹನ್ನೆರಡು ವರ್ಷಗಳು ಪೂರ್ಣವಾದ ನಂತರ ಅವನು ಖಾಂಡವಪ್ರಸ್ಥವನ್ನು ಪ್ರವೇಶಿಸಿದನು. ಧನಂಜಯನು ಆಗಮಿಸಿ ಧೌಮ್ಯ ಮತ್ತು ತಾಯಿಯನ್ನು ವಂದಿಸಿದನು. ಧನಂಜಯನು ರಾಜನ ಮತ್ತು ಭೀಮನ ಚರಣಗಳನ್ನು ಸ್ಪರ್ಷಿಸಿದನು. ನಂತರ ಹರ್ಷಿತರಾದ ಯಮಳರು ಅವನಿಗೆ ವಂದಿಸಿದರು. ಮತ್ತು ಸಖರು ಆನಂದಿತರಾದರು. ಆ ವಿನಯ ಸಮಾಹಿತನು ರಾಜನನ್ನು

ಅಭಿನಂದಿಸಿದನು. ಆಚಾರ್ಯ ಮತ್ತು ಬ್ರಾಹ್ಮಣರನ್ನು ಅಭಿನಂದಿಸಿ, ಪಾರ್ಥನು ದ್ರೌಪದಿಯಿದ್ದಲ್ಲಿಗೆ ಬಂದನು. ದ್ರೌಪದಿಯು ಪ್ರಣಯದಲ್ಲಿ ಕುರುನಂದನಿಗೆ ಉತ್ತರಿಸಿದಳು:

> "ಕೌಂತೇಯ! ಸಾತ್ವತಾತ್ಮಜೆಯು ಎಲ್ಲಿ ಇರುವಳೋ ಅಲ್ಲಿಗೆ ಹೋಗು. ಎಷ್ಟು ಚೆನ್ನಾಗಿ ಕಟ್ಟಿದ್ದರೂ ಭಾರ ಬಿದ್ದಾಗ ಮೊದಲನೆಯ ಗಂಟೇ ಸಡಿಲವಾಗುತ್ತದೆ!"

ಈ ರೀತಿ ಕೃಷ್ಣೆಯು ಬಹುವಿಧವಾಗಿ ವಿಲಪಿಸುತ್ತಿರಲು ದನಂಜಯನು ಅವಳನ್ನು ಪುನಃ ಪುನಃ ಸಂತವಿಸಲು ಪ್ರಯತ್ನಿಸಿದನು ಮತ್ತು ಕ್ಷಮೆಯನ್ನು ಯಾಚಿಸಿದನು. ಪಾರ್ಥನು ತ್ವರೆಮಾಡಿ ರಕ್ತಕೌಶೇಯವನ್ನು ಧರಿಸಿದ್ದ ಸುಭದ್ರೆಯನ್ನು ಗೋಪಾಲಿಕ ವೇಷಕ್ಕೆ ಬದಲಾಯಿಸಿ ಕರೆತಂದನು. ಯಶಸ್ವಿನಿಯು ಆ ರೂಪದಲ್ಲಿ ಇನ್ನೂ ಅಧಿಕ ಶೋಭಮಾನಳಾಗಿ ಕಾಣುತ್ತಿದ್ದಳು. ಶ್ರೇಷ್ಠ ಭವನವನ್ನು ಪ್ರವೇಶಿಸಿ ಆ ವೀರಪತ್ನಿ ವರಾಂಗನೆ, ವಿಶಾಲ ಕಣ್ಣುಗಳ ಯಶಸ್ವಿನೀ ಭದ್ರೆಯು ಪೃಥಾಳನ್ನು ವಂದಿಸಿದಳು. ಕುಂತಿಯು ಆ ಚಾರುಸರ್ವಾಂಗಿಯನ್ನು ಬಿಗಿದಪ್ಪಿ ನೆತ್ತಿಯನ್ನು ಆಘ್ರಾಣಿಸಿದಳು. ಮತ್ತು ಪರಮ ಪ್ರೀತಿಯಿಂದ ಅವಳಿಗೆ ಅತುಲ ಅಶೀರ್ವಚನಗಳನ್ನಿತ್ತಳು. ನಂತರ ಆ ಪೂರ್ಣೇಂದುಸದ್ರುಶಾನನೆಯು ತ್ವರೆಮಾಡಿ ದ್ರೌಪದಿಯನ್ನು ವಂದಿಸಿ

> "ನಾನು ಭದ್ರಾ. ನಿನ್ನ ಸೇವಕಿ!"



ಎಂದು ಹೇಳಿದಳು. ಮಾಧವನ ತಂಗಿಯನ್ನು ಮೇಲೆತ್ತಿದ್ದ ಕೃಷ್ಣೆಯು ಅವಳನ್ನು ಆಲಂಗಿಸಿ ಪ್ರೀತಿಯಿಂದ ಹೇಳಿದಳು:

"ನಿನ್ನ ಪತಿಗೆ ಬೇರೆ ಯಾವ ಸ್ಪರ್ಧಿಯೂ ಇಲ್ಲದಂತಾಗಲಿ!"

ಇದರಿಂದ ಸಂತೋಷಗೊಂಡ ಭದ್ರೆಯು "ಹಾಗೆಯೇ ಆಗಲಿ!" ಎಂದು ಉತ್ತರಿಸಿದಳು. ಮಹಾರಥಿ ಪಾಂಡವರೂ ಹರ್ಷಿತರಾದರು. ಕುಂತಿಯೂ ಕೂಡ ಪರಮಪ್ರೀತಳಾದಳು.

ಇಂದ್ರಪ್ರಸ್ಥಕ್ಕೆಂದು ಹೊರಟಿದ್ದ ಪಾಂಡವಶ್ರೇಷ್ಠ ಅರ್ಜುನನನು ನಗರವನ್ನು ಸೇರಿದನೆಂಬ ವಿಷಯವನ್ನು ಕೇಳಿದ ವಿಶುದ್ಧಾತ್ಮ ಪುಂಡರೀಕಾಕ್ಷ ಕೇಶವನು ರಾಮನ ಸಹಿತ ವೀರರೂ ಮಹಾರಥಿಗಳೂ ಆದ ವೃಷ್ಣಿ ಅಂಧಕ ಮುಖ್ಯರೊಡಗೂಡಿ ಅಲ್ಲಿಗೆ ಬಂದನು. ನೂರಾರು ಭ್ರಾತೃಗಳು, ಕುಮಾರರು, ಮತ್ತು ಯೋಧರಿಂದ ಸುತ್ತುವರೆಯಲ್ಪಟ್ಟು, ಮಹಾಸೈನ್ಯದೊಂದಿಗೆ ಪರಂತಪ ಶೌರಿಯು ಆಗಮಿಸಿದನು. ಅಲ್ಲಿಗೆ ದಾನಪತಿ, ಧೀಮಂತ, ಮಹಾಯಶ, ವೃಷ್ಣಿವೀರರ ಸೇನಾಪತಿ, ಅರಿಂದಮ ಅಕ್ರೂರನು ಆಗಮಿಸಿದನು. ಮಹಾತೇಜಸ್ವಿ ಅನಾದೃಷ್ಟಿ, ಮಹಾಯಶ ಉದ್ಧವ, ಸಾಕ್ಷಾತ್ ಬೃಹಸ್ಪತಿಯ ಶಿಷ್ಯ, ಮಹಾಬುದ್ಧಿ, ಮಹಾಯಶ, ಸತ್ಯಕ, ಸಾತ್ಯಕಿ, ಮತ್ತು ಸಾತ್ವತ ಕೃತವರ್ಮ, ಪ್ರದ್ಯುಮ್ನ, ಸಾಂಬ, ನಿಶಠ, ಶಂಖು, ಚಾರುದೇಷ್ಣ, ವಿಕ್ರಾಂತ ಝಿಲ್ಲಿ, ವಿಪ್ರುಥು, ಮಹಾಬಾಹು ಸಾರಣ, ಮತ್ತು ವಿದುಷರಲ್ಲಿ ಶ್ರೇಷ್ಠ ಗದ - ಇವರು ಮತ್ತು ಇನ್ನೂ ಬಹಳಷ್ಟು

ವೃಷ್ಣೀ, ಭೋಜ ಮತ್ತು ಅಂಧಕರು ವಧುವಿಗೆ ಉಡುಗೊರೆಗಳನ್ನು ತೆಗೆದುಕೊಂಡು ಖಾಂಡವಪ್ರಸ್ಥಕ್ಕೆ ಆಗಮಿಸಿದರು. ಕೃಷ್ಣ ಮಾಧವನು ಬರುತ್ತಿದ್ದಾನೆಂದು ಕೇಳಿ ರಾಜ ಯುಧಿಷ್ಠಿರನು ಅವನನ್ನು ಬರಮಾಡಿಕೊಳ್ಳಲು ಅವಳಿಯರನ್ನು ಕಳುಹಿಸಿದನು. ಅವರು ಸಮೃದ್ಧವಾದ ವೃಷ್ಣೀ ಚಕ್ರವನ್ನು ಸ್ವಾಗತಿಸಿ ಪತಾಕ ಧ್ವಜ ಶೋಭಿತ ಖಾಂಡವಪ್ರಸ್ಥವನ್ನು ಪ್ರವೇಶಿಸಿದರು.

ಮಾರ್ಗಗಳನ್ನು ಗುಡಿಸಿ ಸಿಂಪಡಿಸಲಾಗಿತ್ತು, ಪುಷ್ಪಗಳನ್ನು ಹರಡಿ ಶೋಭೆಗೊಳಿಸಲಾಗಿತ್ತು, ಚಂದನದ ರಸ ಮತ್ತು ಇತರ ಶೀತಲ ಪುಣ್ಯ ಸುಗಂಧಗಳನ್ನು ಪಸರಿಸಲಾಗಿತ್ತು. ಅಲ್ಲಲ್ಲಿ ಗಂಧದ ಹೊಗೆಯ ಸುಗಂಧವು ಬರುತ್ತಿತ್ತು. ನಗರವು ಶುಚಿರ್ಭೂತರಾದ ನರರಿಂದ ಮತ್ತು ವಣಿಕರಿಂದ ಶೋಭಿಸುತ್ತಿತ್ತು. ಮಹಾಬಾಹು ಪುರುಷೋತ್ತಮ ಕೇಶವನು ರಾಮನೊಂದಿಗೆ ವೃಷ್ಣಿ ಅಂಧಕ ಮಹಾಭೋಜರಿಂದ ಸಂವೃತನಾಗಿ ಮುನ್ನಡೆದನು. ಸಹಸ್ರಾರು ಪೌರರಿಂದ ಬ್ರಾಹ್ಮಣರಿಂದ ಸಂಪೂಜ್ಯಮಾನನಾಗಿ ಅವನು ಪುರಂದರನ ಗೃಹದಂತಿದ್ದ ರಾಜ ಭವನವನ್ನು ಪ್ರವೇಶಿಸಿದನು. ಯುಧಿಷ್ಠಿರನು ಯಥಾವಿಧಿಯಾಗಿ ರಾಮನನ್ನು ಸ್ವಾಗತಿಸಿದನು ಮತ್ತು ಕೇಶವನ ನೆತ್ತನ್ನು ಆಘ್ರಾಣಿಸಿ, ಬಾಹುಗಳಿಂದ ಬಿಗಿದಪ್ಪಿದನು. ಪ್ರೀಯಮಾಣನಾದ ಕೃಷ್ಣನು ಅವನನ್ನು ವಿನಯದಿಂದ ನಮಸ್ಕರಿಸಿದನು ಮತ್ತು ಪುರುಷವ್ಯಾಘ್ರ ಭೀಮನನ್ನು ವಿಧಿವತ್ತಾಗಿ

ಗೌರವಿಸಿದನು. ಧರ್ಮರಾಜ ಯುಧಿಷ್ಠಿರನು ವೃಷ್ಣಿ ಅಂಧಕ ಶ್ರೇಷ್ಠರನ್ನು ತಕ್ಕುದಾಗಿ ಯಥಾವಿಧಿಯಾಗಿ ಸತ್ಕರಿಸಿ ಬರಮಾಡಿಕೊಂಡನು. ಕೆಲವರನ್ನು ಹಿರಿಯರೆಂದು ನಮಸ್ಕರಿಸಿದನು, ಕೆಲವರನ್ನು ಸಮವಯಸ್ಕರಂತೆ, ಇನ್ನು ಕೆಲವರನ್ನು ಕಿರಿಯವರೆಂದು ಪ್ರೇಮದಿಂದ ಅಭಿವಾದಿಸಿದನು. ಅನಂತರ ಮಹಾಯಶಸ್ವಿ ವಾಸುದೇವನು ವರನ ಕಡೆಯವರಿಗೆ ಸುಭದ್ರೆಯ ಬಂಧು ಬಳಗದವರಿಂದ ಎಂದು ಉತ್ತಮ ಧನವನ್ನು ಬಳುವಳಿಯಾಗಿ ನೀಡಿದನು. ಕಿಂಕಿಣೀಜಾಲಮಾಲೆಗಳಿಂದ ಶೋಭಿತವಾದ, ನಾಲ್ಕು ಕುದುರೆಗಳನ್ನು ಕಟ್ಟಿದ್ದ, ಕುಶಲ ಸಮ್ಮತರಾದ ಸೂತರೊಂದಿಗೆ ಕಾಂಚನದ ಸಾವಿರ ರಥಗಳನ್ನು ಮತ್ತು ಮಥುರದೇಶದ, ಹಾಲನ್ನು ಕೊಡುವ, ಪುಣ್ಯವರ್ಚಸ ಸುಂದರ ಮತ್ತು ಉತ್ತಮ ಗೋವುಗಳನ್ನು ಕೃಷ್ಣನು ನೀಡಿದನು. ಇದಲ್ಲದೇ ಜನಾರ್ದನನು ಪ್ರೀತಿಯಿಂದ ಶುಭ್ರವಾದ, ಚಂದ್ರನ ಬಿಂಬಗಳಂತೆ ಕಾಣುತ್ತಿದ್ದ, ಹೇಮಭೂಷಿತ ಸಹಸ್ರ ಕುದುರೆಗಳನ್ನು ನೀಡಿದನು. ಹಾಗೆಯೇ ಐದು ಐದು ನೂರು ಬಿಳಿ ಬಣ್ಣದ ಮತ್ತು ಕಪ್ಪು ಬಣ್ಣದ ವೇಗವಾಗಿ ಹೋಗಬಲ್ಲ ಅಶ್ವತರಿಗಳನ್ನೂ ನೀಡಿದನು. ಮತ್ತು ಆ ಪುಷ್ಕರೇಕ್ಷಣನು ಬೆಳ್ಳಗಿರುವ, ಸುವೇಷಿತ, ಸುವರ್ಚಸ, ನೂರು ಸುವರ್ಣದ ಮಾಲೆಗಳನ್ನು ಧರಿಸಿದ್ದ, ಆರೋಗ್ಯವಂತ, ಸುಂದರ ವಸ್ತ್ರಗಳನ್ನು ಧರಿಸಿದ್ದ, ಪರಿಚರ್ಯೆಗಳಲ್ಲಿ ದಕ್ಷ, ಮತ್ತು ಅಲಂಕಾರದಲ್ಲಿ ನಿಪುಣರಾದ ಸಹಸ್ರ ಯುವತಿಯರನ್ನು ಉಡುಗೊರೆಯಾಗಿತ್ತನು.

ಮೇಲೆ ಕುಳಿತು ಸವಾರಿಮಾಡಬಲ್ಲ ಬಾಹ್ಲೀಕ ದೇಶದ ಒಂದು ಲಕ್ಷ ಕುದುರೆಗಳನ್ನು ಅನುತ್ತಮ ಕನ್ಯಾಧನವಾಗಿ ಜನಾರ್ದನನು ನೀಡಿದನು. ದಾಶಾರ್ಹ ಜನಾರ್ದನನು ಹತ್ತು ಮನುಷ್ಯರು ಹೊರಬಲ್ಲಷ್ಟು ಅಗ್ನಿವರ್ಚಸ ಉತ್ತಮ ಗುಣದ ಕೃತಾಕೃತ ಕನಕವನ್ನೂ ನೀಡಿದನು. ಸಾಹಸಪ್ರಿಯನು ಮೂರು ಕಡೆಗಳಲ್ಲಿ ಮದ ಸುರಿಸುತ್ತಿದ್ದ, ಪರ್ವತಗಳಂತೆ ಎತ್ತರವಾಗಿದ್ದ, ಸಮರದಲ್ಲಿ ಹಿಂದೆ ಹೆಜ್ಜೆಯಿಡದ, ಶ್ರೇಷ್ಠ ಜೋರಾಗಿ ಶಬ್ಧ ನೀಡಬಲ್ಲ ಬಂಗಾರದ ಗಂಟೆಗಳಿಂದ ಕಟ್ಟಲ್ಪಟ್ಟ, ಪಲ್ಲಕ್ಕಿಗಳನ್ನು ಹೊಂದಿದ ಆಯ್ದ ಸಹಸ್ರ ಆನೆಗಳನ್ನು ನೀಡಿದನು. ಇವೆಲ್ಲವನ್ನು ಸಂಬಂಧದಿಂದ ಸಂತೋಷಗೊಂಡ ಹಲಧರ ರಾಮನು ಪಾರ್ಥನಿಗೆ ಪ್ರೀತಿಯಿಂದ ಕೊಟ್ಟನು. ವಸ್ತ್ರಕಂಬಳಿಗಳೇ ನೊರೆಯಾಗಿದ್ದ, ಮಹಾ ಗಜಗಳೇ ತಿಮಿಂಗಿಲಗಳಾಗಿದ್ದ, ಪತಾಕಗಳ ದೋಣಿಗಳು ತೇಲುತ್ತಿದ್ದ ಧನ ರತ್ನಗಳ ಈ ಮಹಾಪ್ರವಾಹವು ಸಾಗರವನ್ನು ಸೇರುವ ಮಹಾ ನದಿಯಂತೆ ಪಾಂಡವರನ್ನು ಸಂಪೂರ್ಣವಾಗಿ ಆವರಿಸಿ ಅವರ ವೈರಿಗಳಲ್ಲಿ ಅಸೂಯೆಯನ್ನು ಮಾಡಿಸಿ ಅವರಿಗೆ ಸಂತೋಷಪಡಿಸಿತು.

ಧರ್ಮರಾಜ ಯುಧಿಷ್ಠಿರನು ಅವೆಲ್ಲವನ್ನೂ ಸ್ವೀಕರಿಸಿ ವೃಷ್ಣಿ ಅಂಧಕ ಮಹಾರಥಿಗಳಿಗೆ ಸತ್ಕರಿಸಿದನು. ಅಲ್ಲಿ ಸೇರಿದ್ದ ಮಹಾತ್ಮ ಕುರು ವೃಷ್ಣಿ ಅಂಧಕ ಶ್ರೇಷ್ಠರು ಪುಣ್ಯಪುರುಷರು ಸ್ವರ್ಗದಲ್ಲಿ ಹೇಗೋ ಹಾಗೆ ಆನಂದಿಸಿದರು. ಕುರು ವೃಷ್ಣಿಯರು ಎಷ್ಟು ಬೇಕೋ ಅಷ್ಟು

ಎಷ್ಟು ಯೋಗ್ಯವೋ ಅಷ್ಟು ಮಹಾ ಪಾನ, ಸಂಗೀತ ಮತ್ತು ವಾದ್ಯಗಳ ಮೂಲಕ ರಂಜಿಸಿದರು. ಈ ರೀತಿ ಉತ್ತಮ ವೀರರು ಅಲ್ಲಿ ಬಹಳ ದಿವಸಗಳು ವಿಹರಿಸಿ ಕುರುಗಳಿಂದ ಪೂಜಿತರಾಗಿ ಪುನಃ ದ್ವಾರವತೀ ಪುರವನ್ನು ತಲುಪಿದರು. ಕುರುಸತ್ತಮರು ನೀಡಿದ್ದ ಶುಭ್ರ ರತ್ನಗಳನ್ನು ಸ್ವೀಕರಿಸಿ ವೃಷ್ಣಿ ಅಂಧಕ ಮಹಾರಥಿಗಳು ರಾಮನ ನೇತೃತ್ವದಲ್ಲಿ ಹೊರಟರು. ಆದರೆ ಮಹಾಮನ ವಾಸುದೇವನು ಪಾರ್ಥನ ಸಹಿತ ರಮ್ಯ ಶಕ್ರಪ್ರಸ್ಥ ನಗರದಲ್ಲಿ ಉಳಿದುಕೊಂಡನು. ಅವನು ಪಾರ್ಥನ ಸಹಿತ ಯಮುನಾ ತೀರದಲ್ಲಿ ವಿಹರಿಸುತ್ತಿದ್ದನು. ಕಿರೀಟಿಯ ಸಹಿತ ವರಾಹ ಮತ್ತು ಇತರ ಮೃಗಗಳನ್ನು ಬೇಟೆಯಾಡಿ ರಮಿಸಿದನು.

## ಅಭಿಮನ್ಯು-ದ್ರೌಪದೇಯರ ಜನ್ಮ

ಕೇಶವನ ಪ್ರಿಯ ತಂಗಿ ಸುಭದ್ರೆಯು ಪೌಲೋಮಿಯು ದ್ಯುತಿಮಂತ ಜಯಂತನಿಗೆ ಹೇಗೋ ಹಾಗೆ ಸೌಭದ್ರನಿಗೆ ಜನ್ಮವಿತ್ತಳು. ಸುಭದ್ರೆಯು ಜನ್ಮವಿತ್ತ ಅಭಿಮನ್ಯುವು ದೀರ್ಘಬಾಹುವೂ, ಮಹಾಸತ್ವಯುತನೂ, ವೃಷಭಾಕ್ಷನೂ, ನರರ್ಷಭನೂ ವೀರನೂ ಆಗಿದ್ದನು. ಅವನು ನಿರ್ಭಯನಾಗಿದ್ದನು, ಕುಪಿತನಾಗಿದ್ದನು. ಅದುದರಿಂದ ಪುರುಷರ್ಷಭ ಅರಿಮರ್ದನ ಆರ್ಜುನಿಯನ್ನು ಅಭಿಮನ್ಯು ಎಂದು ಕರೆಯಲಾಯಿತು. ಕಡೆದ ಶಮೀ ಗರ್ಭದ ಮುಖದಿಂದ ಹುತಾಶನನು ಹೇಗೋ ಹಾಗೆ ಆ ಅತಿರಥನು ಸಾತ್ವತೆಯಲ್ಲಿ

ಧನಂಜಯನಿಂದ ಸಂಭವಿಸಿದನು. ಅವನು ಹುಟ್ಟಿದಾಗ ಮಹಾಬಾಹು ಕುಂತೀಪುತ್ರ ಯುಧಿಷ್ಠಿರನು ದ್ವಿಜರಿಗೆ ಹತ್ತು ಸಾವಿರ ಹಸುಗಳನ್ನೂ ಮತ್ತು ಅಷ್ಟೇ ಸಂಖ್ಯೆಯಲ್ಲಿ ಬಂಗಾರದ ನಾಣ್ಯಗಳನ್ನೂ ದಾನಮಾಡಿದನು. ಪಿತೃಗಳಿಗೆ ಮತ್ತು ಸರ್ವ ಪ್ರಜೆಗಳಿಗೆ ಚಂದ್ರಮನು ಹೇಗೋ ಹಾಗೆ ಅವನು ಬಾಲ್ಯದಿಂದ ವಾಸುದೇವನ ಅಚ್ಚುಮೆಚ್ಚಿನವನಾಗಿದ್ದನು. ಜನ್ಮಪ್ರಭೃತಿಯಾದ ಅವನ ಎಲ್ಲ ಶುಭಕ್ರಿಯೆಗಳನ್ನೂ ಕೃಷ್ಣನೇ ನೆರವೇರಿಸಿದನು. ಮತ್ತು ಆ ಬಾಲಕನೂ ಶುಕ್ಲಪಕ್ಷದಲ್ಲಿ ಶಶಿಯ ಹಾಗೆ ವೃದ್ಧಿಸಿದನು. ಆ ಅರಿಂದಮನು ವೇದಜ್ಞ ಅರ್ಜುನನಿಂದ ಚತುಷ್ಪಾದಗಳನ್ನು ಹೊಂದಿದ್ದ, ದಶವಿಧದ ಸಕಲ ದಿವ್ಯ ಮಾನುಷ ಧನುರ್ವೇದವನ್ನು ಕಲಿತುಕೊಂಡನು. ಆ ಮಹಾಬಲಿಯು ಅಸ್ತ್ರಗಳ ವಿಜ್ಞಾನವನ್ನೂ ಕಲಿತುಕೊಂಡನು, ಸರ್ವವನ್ನೂ ಬಳಸುವುದರಲ್ಲಿ, ಮತ್ತು ವಿಶೇಷವಾದವುಗಳನ್ನೂ ಕಲಿತುಕೊಂಡನು. ಅವನು ಆಗಮ ಪ್ರಯೋಗಗಳಲ್ಲಿ ತನ್ನ ಸರಿಸಾಟಿಯನ್ನಾಗಿ ಮಾಡಿದನು. ಧನಂಜಯನು ಪುತ್ರ ಸೌಭದ್ರನನ್ನು ನೋಡಿದಾಗಲೆಲ್ಲಾ ಸಂತೋಷಪಡುತ್ತಿದ್ದನು.

ಸರ್ವಸಂಹನನೋಪೇತ, ಸರ್ವಲಕ್ಷಣಲಕ್ಷಿತ, ದುರ್ದರ್ಷ, ವೃಷಭಸ್ಕಂಧ, ಉರಗದಂತೆ ಅಗಲ ಬಾಯನ್ನುಳ್ಳ, ಸಿಂಹದರ್ಪ, ಮಹೇಷ್ವಾಸ, ಮತ್ತಮಾತಂಗ ವಿಕ್ರಮಿ, ಮೇಘದುಂಧುಭಿ ನಿರ್ಘೋಷ, ಪೂರ್ಣಚಂದ್ರನಿಭಾನನ, ಶೌರ್ಯ ವೀರ್ಯ ರೂಪದಲ್ಲಿ ಕೃಷ್ಣ ಸದೃಶ ಪುತ್ರನನ್ನು ವಘವಂತನು ಹೇಗೋ ಹಾಗೆ

ಕಂಡನು.

ಶುಭಲಕ್ಷಣೆ ಪಾಂಚಾಲಿಯೂ ಕೂಡ ತನ್ನ ಐವರು ಪತಿಗಳಿಂದ ಐದು ಪರ್ವತಗಳಂತಿರುವ ವೀರ ಶುಭ ಐವರು ಪುತ್ರರನ್ನು ಪಡೆದಳು. ಯುಧಿಷ್ಠಿರನಿಂದ ಪ್ರತಿವಿಂದ್ಯ, ವೃಕೋದರನಿಂದ ಸುತಸೋಮ, ಅರ್ಜುನನಿಂದ ಶೃತಕರ್ಮ, ನಕುಲನಿಂದ ಶತಾನೀಕ, ಮತ್ತು ಸಹದೇವನಿಂದ ಶೃತಸೇನ ಈ ಐವರು ವೀರ ಮಹಾರಥಿಗಳಿಗೆ ಪಾಂಚಾಲಿಯು ಅದಿತಿಯು ಆದಿತ್ಯರನ್ನು ಹೇಗೋ ಹಾಗೆ ಜನ್ಮವಿತ್ತಳು. ಶಾಸ್ತ್ರತಃ ವಿಪ್ರನು ಯುಧಿಷ್ಠಿರನಿಗೆ ಪ್ರತಿವಿಂದ್ಯನ ಕುರಿತು ಹೇಳಿದನು:

> “ಇವನು ಪರಪ್ರಹರಣಜ್ಞಾನದಲ್ಲಿ ಪ್ರತಿವಿಂದ್ಯನಾಗುತ್ತಾನೆ. ಸಹಸ್ರ ಸೋಮಗಳನ್ನು ಹಿಂಡಿದಾಗ ಆಗುವ ಸೋಮಾರ್ಕಸಮತೇಜಸ್ವಿ ಮಹೇಷ್ವಾಸ ಸುತಸೋಮನನ್ನು ಭೀಮಸೇನನಿಂದ ಪಡೆದಳು. ಪ್ರಸಿದ್ಧ ಮಹಾಕರ್ಮಗಳನ್ನು ಮಾಡಿ ಹಿಂದಿರುಗಿದ ಕಿರೀಟಿಯಿಂದ ಹುಟ್ಟಿದ ಈ ಪುತ್ರನು ಶೃತಕರ್ಮನೆಂದಾಗುತ್ತಾನೆ.”

ಕೌರವ್ಯ ಕುರುನಂದನ ನಕುಲನು ಕೀರ್ತಿವರ್ಧನ ತನ್ನ ಪುತ್ರನಿಗೆ ರಾಜರ್ಷಿ ಶತಾನೀಕನ ಹೆಸರನ್ನೇ ಇಟ್ಟನು. ನಂತರ ಕೃಷ್ಣೆಯು ವಹ್ನಿದೇವತೆಯ ನಕ್ಷತ್ರದಲ್ಲಿ ಸಹದೇವನಿಂದ ಸುತನನ್ನು ಪಡೆದಳು. ಆದುದರಿಂದ ಅವನು ಶೃತಸೇನನೆಂದಾದನು. ಯಶಸ್ವಿಯರಾದ

ದ್ರೌಪದೇಯರು ಒಂದೊಂದು ವರ್ಷ ಅಂತರದಲ್ಲಿ ಹುಟ್ಟಿದರು ಮತ್ತು ಪರಸ್ಪರರರ ಹಿತದಲ್ಲಿ ನಿರತರಾಗಿದ್ದರು. ಅವರಿಗೆ ಧೌಮ್ಯನು ವಿಧಿವತ್ತಾಗಿ ಜಾತಕರ್ಮ, ಚೌಳ, ಮತ್ತು ಉಪನಯನಗಳನ್ನು ನೆರವೇರಿಸಿಕೊಟ್ಟನು. ಆ ಸುಚರಿತವ್ರತರು ವೇದಾಧ್ಯಯನವನ್ನು ಮುಗಿಸಿ ದಿವ್ಯ ಮಾನುಷ ಸರ್ವ ಅಸ್ತ್ರ ಶಸ್ತ್ರಗಳನ್ನೂ ಅರ್ಜುನನಿಂದ ಕಲಿತರು. ಈ ವಿಶಾಲ ಛಾತಿಯ ಮಹಾಬಲಶಾಲಿ ದೇವಗರ್ಭಸಮಾನ ಪುತ್ರರಿಂದ ಸುತ್ತುವರೆಯಲ್ಪಟ್ಟ ರಾಜಶಾರ್ದೂಲ ಪಾಂಡವರು ಸಂತೋಷವನ್ನು ಹೊಂದಿದರು.

# ಖಾಂಡವದಹನ

## ಬ್ರಾಹ್ಮಣ ರೂಪಿ ಅನಲನ ಆಗಮನ

ರಾಜ ಧೃತರಾಷ್ಟ್ರ ಮತ್ತು ಶಾಂತನುವಿನ ಶಾಸನದಂತೆ ಇಂದ್ರಪ್ರಸ್ಥದಲ್ಲಿ ವಾಸಿಸುತ್ತಿದ್ದ ಪಾಂಡವರು ಅನ್ಯ ನರಾಧಿಪರನ್ನು ಸದೆಬಡಿದರು. ಧರ್ಮರಾಜನ ಆಶ್ರಯದಲ್ಲಿ ಸರ್ವ ಜನರೂ ಪುಣ್ಯಲಕ್ಷಣ ಕರ್ಮಗಳ ದೇಹಗಳೊಳಗಿರುವ ಆತ್ಮಗಳಂತೆ ಸುಖವಾಗಿ ವಾಸಿಸುತ್ತಿದ್ದರು. ಭರತರ್ಷಭರು ಧರ್ಮ, ಅರ್ಥ, ಕಾಮ ಈ ಮೂರು ಬಂಧುಗಳನ್ನೂ ಆತ್ಮಸಮಾನ ಬಂಧುಗಳೆಂದು ತಿಳಿದು ಸಮವಾಗಿ ಬೆಳೆಸಿದರು. ಆ ಪಾರ್ಥಿವನು ಭೂಮಿಯ ಮೇಲೆ ಸಮ

ಭಾಗಗಳಲ್ಲಿ ದೇಹ ತಳೆದ ಧರ್ಮ, ಅರ್ಥ, ಕಾಮಗಳಿಗೆ ನಾಲ್ಕನೆಯವನಂತೆ ಇದ್ದನು. ಈ ಜನಾಧಿಪನಲ್ಲಿ ವೇದಗಳು ಒಬ್ಬ ಪರಮ ವಿದ್ಯಾರ್ಥಿಯನ್ನು, ಮಹಾಧ್ವರಗಳು ಒಬ್ಬ ಪ್ರಯೋಕ್ತಾರನನ್ನು ಮತ್ತು ವರ್ಣಗಳು ಒಬ್ಬ ಪರಮ ಸಂರಕ್ಷಕನನ್ನು ಪಡೆದವು. ಈ ಪೃಥಿವೀಕ್ಷಿತನಲ್ಲಿ ಲಕ್ಷ್ಮಿಯು ಅಧಿಷ್ಠಾನವನ್ನೂ ಮತಿಯು ಪರಾಯಣವನ್ನೂ ಪಡೆದರು ಮತ್ತು ಅಖಿಲ ಬಂಧುಗಳೂ ಧರ್ಮನಿರತರಾಗಿದ್ದರು. ವೇದಗಳಿಂದ ನಡೆಯುತ್ತಿರುವ ಮಹಾಧ್ವರವು ಹೇಗೆ ಪ್ರಜ್ವಲಿತವಾಗಿರುತ್ತದೆಯೋ ಹಾಗೆ ನಾಲ್ವರು ಸಹೋದರನ್ನೊಡಗೂಡಿದ ರಾಜನು ಅಧಿಕ ಪ್ರಾಯುಜ್ಯಮಾನನಾಗಿದ್ದನು. ಬೃಹಸ್ಪತಿಸಮಾನ ಅಮರ ಪ್ರಮುಖರು ಪ್ರಜಾಪತಿಯನ್ನು ಹೇಗೋ ಹಾಗೆ ಧೌಮ್ಯಾದಿ ವಿಪ್ರರು ಅವನನ್ನು ಸುತ್ತುವರೆದು ಕುಳಿತಿರುತ್ತಿದ್ದರು. ಧರ್ಮರಾಜನಲ್ಲಿ ಅತಿ ಪ್ರೀತರಾದ ಪ್ರಜೆಗಳ ಕಣ್ಣು-ಹೃದಯಗಳಲ್ಲಿ ಪೂರ್ಣಚಂದ್ರ ಸಮಾನ ಸಂತೋಷವಿತ್ತು. ಅವನೇ ದೇವ ಎನ್ನುವ ಭಾವನೆ ಮಾತ್ರವಲ್ಲದೇ ಅವನಿಗೆ ಅವರ ಮೇಲಿದ್ದ ಪ್ರಜಾಭಾವದಿಂದ, ಮನಸ್ಸಿಗೆ ಆನಂದವನ್ನೀಯುವ ಕರ್ಮಗಳಿಂದ ಪ್ರಜೆಗಳು ಸುಖದಿಂದಿದ್ದರು. ಆ ಚಾರುಭಾಷಿ ಧೀಮಂತ ಪಾರ್ಥನಿಂದ ಯಾವುದೇ ರೀತಿಯ ಅಯುಕ್ತ, ಅಸತ್ಯ, ಸತ್ಯವಲ್ಲದ ಮತ್ತು ವಿಪ್ರಿಯ ಮಾತುಗಳು ಹೊರಬರುತ್ತಿರಲಿಲ್ಲ. ತನ್ನ ಮತ್ತು ಸರ್ವಲೋಕ ಹಿತಕಾರಕ ಕೃತ್ಯಗಳನ್ನು ಮಾಡುವಲ್ಲಿ ಆ ಸುಮಹಾತೇಜಸ್ವಿ ಭರತಸತ್ತಮನು

ಆನಂದ ಪಡುತ್ತಿದ್ದನು. ಪಾಂಡವರು ಹೀಗೆ ಕಷ್ಟಗಳಿಂದ ಬಿಡುಗಡೆ ಹೊಂದಿ ಸಂತೋಷ ಮತ್ತು ಸ್ವ-ತೇಜಸ್ಸಿನಿಂದ ಇತರ ಪೃಥ್ವಿಪಾಲರನ್ನು ಸಂತಪ್ತಗೊಳಿಸುತ್ತಾ ವಾಸಿಸಿದರು.

ಕೆಲವು ದಿನಗಳ ನಂತರ ಬೀಭತ್ಸುವು ಕೃಷ್ಣನಿಗೆ ಹೇಳಿದನು:

> "ಕೃಷ್ಣ! ಬೇಸಗೆಯ ದಿನಗಳು ನಡೆಯುತ್ತಿವೆ! ಯಮುನೆಯ ಕಡೆ ಹೋಗೋಣ! ನಮ್ಮ ಗೆಳೆಯರೊಂದಿಗೆ ಅಲ್ಲಿ ಹೋಗಿ ವಿಹರಿಸೋಣ! ನಿನಗೆ ಬೇಕೆಂದರೆ ಸಾಯಂಕಾಲವೇ ಹಿಂದಿರುಗೋಣ."

ಅದಕ್ಕೆ ವಾಸುದೇವನು

> "ಪಾರ್ಥ! ನಾನೂ ಕೂಡ ಗೆಳೆಯರೊಂದಿಗೆ ಜಲದಲ್ಲಿ ಯಥಾಸುಖವಾಗಿ ವಿಹರಿಸಲು ಬಯಸುತ್ತೇನೆ."

ಎಂದು ಹೇಳಿದನು. ಧರ್ಮರಾಜನಲ್ಲಿ ವಿಚಾರಿಸಿ ಅವನ ಅನುಜ್ಞೆಯನ್ನು ಪಡೆದು ತಮ್ಮ ಸುಹೃದಯರಿಂದೊಡಗೂಡಿ ಪಾರ್ಥ-ಗೋವಿಂದರು ಹೊರಟರು. ಅವರೆಲ್ಲರೂ ನಾನಾ ಪ್ರಕಾರದ ಉತ್ತಮ ವೃಕ್ಷಗಳಿಂದ ಕೂಡಿದ್ದ, ಅಲ್ಲಲ್ಲಿ ಪುರಂದರ ಗೃಹಕ್ಕೆ ಸಮಾನ ಮನೆಗಳಿಂದ ಕೂಡಿದ್ದ, ವಾರ್ಷ್ಣೇಯ ಪಾರ್ಥರಿಗೆ ತಕ್ಕುದಾದ ಬೆಲೆಬಾಳುವ ಭಕ್ಷ್ಯ, ಭೋಜ್ಯ, ಪಾನೀಯ, ರಸಗಳು, ಮಾಲೆಗಳನ್ನು ಇರಿಸಿದ್ದ, ವಿಹಾರಪ್ರದೇಶವನ್ನು ಸೇರಿ ರತ್ನದ ಹೊಳಪಿನ ನೀರಿನಿಂದ

ತುಂಬಿರುವ ಕೊಳಗಳನ್ನು ಪ್ರವೇಶಿಸಿ ಮನ ಬಂದಂತೆ ಜಲಕ್ರೀಡೆಯಾಡಿದರು. ಕೆಲವು ಅಂಗನೆಯರು ವನದಲ್ಲಿ, ಕೆಲವರು ನೀರಿನಲ್ಲಿ ಮತ್ತೆ ಕೆಲವರು ಮನೆಗಳಲ್ಲಿ ಹೀಗೆ ಕೃಷ್ಣ-ಪಾರ್ಥರಿಗೆ ಇಷ್ಟವಾದ ಕಡೆಗಳಲ್ಲಿ ಆಡಿದರು. ಮದೋತ್ಕಟ ದ್ರೌಪದೀ-ಸುಭದ್ರೆಯರು ಅತ್ಯಂತ ಬೆಲೆ ಬಾಳುವ ವಸ್ತ್ರ-ಆಭರಣಗಳನ್ನು ಸ್ತ್ರೀಯರಿಗೆ ನೀಡಿದರು. ಕೆಲವರು ಸಂತೋಷದಿಂದ ಕುಣಿದರು, ಕೆಲವರು ಜೋರಾಗಿ ಕೂಗಾಡಿದರು, ಕೆಲವರು ಜೋರಾಗಿ ನಕ್ಕರು ಮತ್ತು ಇನ್ನು ಕೆಲವರು ಇಷ್ಟಬಂದ ಮದಿರವನ್ನು ಕುಡಿದರು. ಕೆಲವರು ಅಳುತ್ತಿದ್ದರೆ ಇನ್ನು ಕೆಲವರು ಪರಸ್ಪರರಲ್ಲಿ ಜಗಳವಾಡುತ್ತಿದ್ದರು. ಮತ್ತೆ ಕೆಲವರು ಪರಸ್ಪರರಲ್ಲಿ ಗುಟ್ಟಿನ ಪಿಸುಮಾತುಗಳನ್ನಾಡುತ್ತಿದ್ದರು. ಆ ಸುಸಮೃದ್ಧ ವನವು ಮನಸೆಳೆಯುವ ವೇಣು, ವೀಣಾ ಮತ್ತು ಮೃದಂಗಗಳ ಶಬ್ಧದಿಂದ ತುಂಬಿಕೊಂಡಿತ್ತು.

ಹೀಗೆ ನಡೆಯುತ್ತಿರಲು ಕುರು-ದಾಶಾರ್ಹನಂದನರಿಬ್ಬರೂ ಸಮೀಪದ ಸುಮನೋಹರ ಪ್ರದೇಶವೊಂದನ್ನು ಸೇರಿದರು. ಅಲ್ಲಿ ಹೋಗಿ ಕೃಷ್ಣರು ಸೊಗಸಾದ ಆಸನವೊಂದರಲ್ಲಿ ಕುಳಿತುಕೊಂಡರು. ಅಲ್ಲಿ ಪಾರ್ಥ-ಮಾಧವರು ಹಿಂದಿನ ಬಹಳಷ್ಟು ವಿಕ್ರಾಂತ ಮತ್ತು ಪ್ರೀತಿಯ ಘಟನೆಗಳನ್ನು ಹೇಳಿಕೊಳ್ಳುತ್ತಾ ಸಂತೋಷ ಪಡುತ್ತಿದ್ದರು. ಈ ರೀತಿ ವಾಸುದೇವ-ಧನಂಜಯರು ಸ್ವರ್ಗದಲ್ಲಿರುವ ಅಶ್ವಿನಿಗಳಂತೆ

ಸಂತೋಷದಿಂದ ಕುಳಿತುಕೊಂಡಿರಲು ಅಲ್ಲಿಗೆ ವಿಪ್ರನೋರ್ವನು ಆಗಮಿಸಿದನು. ಅವನು ಬೃಹತ್ತಾದ ಶಾಲವೃಕ್ಷದಂತೆ ಎತ್ತರವಾಗಿದ್ದನು. ಕರಗಿಸಿದ ಬಂಗಾರದ ಪ್ರಭೆಯನ್ನು ಹೊಂದಿದ್ದನು. ಕಿತ್ತಳೆ ಬಣ್ಣದವನಾಗಿದ್ದನು. ಅವನ ಗಡ್ಡ ಕೆಂಪಾಗಿತ್ತು. ಸಮ ಪ್ರಮಾಣನಾಗಿ ಆಯತನಾಗಿದ್ದನು. ಉದಯಿಸುತ್ತಿರುವ ಆದಿತ್ಯನಂತಿದ್ದನು. ಕಪ್ಪು ವಸ್ತ್ರಗಳನ್ನು ಧರಿಸಿದ್ದು, ಜಟಾಧರನಾಗಿದ್ದನು. ಕಣ್ಣುಗಳು ಪದ್ಮಪತ್ರಗಳಂತಿದ್ದವು. ಪ್ರಜ್ವಲಿಸುವಂಥಹ ಹಳದಿ ತೇಜಸ್ಸಿನಿಂದ ಕೂಡಿದ್ದನು. ಭ್ರಾಜಿಸುತ್ತಿರುವ ಆ ದ್ವಿಜೋತ್ತಮನನ್ನು ನೋಡಿದ ಕೂಡಲೇ ಕೃಷ್ಣವರ್ಣಿ ಅರ್ಜುನ-ವಾಸುದೇವರು ಎದ್ದು ನಿಂತರು.

ಖಾಂಡವದ ಸಮೀಪದಲ್ಲಿಯೇ ನಿಂತಿದ್ದ ಲೋಕಪ್ರವೀರ ಅರ್ಜುನ ಮತ್ತು ಸಾತ್ವತ ವಾಸುದೇವ ಇಬ್ಬರನ್ನೂ ಉದ್ದೇಶಿಸಿ ಆ ವಿಪ್ರನು ಹೇಳಿದನು:

> “ಸದಾ ಅತಿಯಾಗಿ ತಿನ್ನುವ ಬಹುಭೋಕ್ತ ಬ್ರಾಹ್ಮಣನು ನಾನು. ವಾರ್ಷ್ಣೇಯ! ಪಾರ್ಥ! ನಾನು ನಿಮ್ಮಲ್ಲಿ ಒಂದು ಭಿಕ್ಷೆಯನ್ನು ಕೇಳುತ್ತಿದ್ದೇನೆ. ನನ್ನನ್ನು ತೃಪ್ತಗೊಳಿಸಿ.”

ಅವನು ಹೀಗೆ ಹೇಳಲು, ಕೃಷ್ಣ-ಪಾಂಡವರು ಕೇಳಿದರು:

> “ಯಾವುದರಿಂದ ನೀನು ತೃಪ್ತಿಗೊಳ್ಳುವೆ? ಅದನ್ನೇ ನಾವು ನಿನಗೆ ತೆಗೆದುಕೊಂಡು ಬರುತ್ತೇವೆ.”

“ಏನು ಅನ್ನವನ್ನು ತಯಾರಿಸಬೇಕು?” ಎಂದು ಕೇಳುತ್ತಿದ್ದ ಆ ವೀರರಿಗೆ ವಿಪ್ರನು ಹೇಳಿದನು:

> “ನಾನು ಅನ್ನವನ್ನು ತಿನ್ನುವುದಿಲ್ಲ! ನನ್ನನ್ನು ಪಾವಕನೆಂದು ತಿಳಿಯಿರಿ. ನನಗೆ ಅನುರೂಪವಾದ ಆಹಾರವನ್ನು ತೆಗೆದುಕೊಂಡು ಬನ್ನಿ! ಇಂದ್ರನು ಸದಾ ಈ ಖಾಂಡವವನ್ನು ಸುಡುವುದರಿಂದ ರಕ್ಷಿಸಿಕೊಂಡು ಬಂದಿದ್ದಾನೆ. ಎಲ್ಲಿಯವರೆಗೆ ಆ ಮಹಾತ್ಮನು ಇದನ್ನು ರಕ್ಷಿಸುತ್ತಾನೋ ಅಲ್ಲಿಯವರೆಗೆ ಇದನ್ನು ಸುಡುವ ಶಕ್ತಿ ನನಗಿಲ್ಲ. ಅವನ ಸಖ ಪನ್ನಗ ತಕ್ಷಕನು ತನ್ನ ಗಣಸಮೇತ ಸದಾ ಇಲ್ಲಿ ವಾಸಿಸುತ್ತಾನೆ. ಅವನಿಗೋಸ್ಕರ ವಜ್ರಭೃತನು ಇದನ್ನು ಸುಡುವುದರಿಂದ ರಕ್ಷಿಸುತ್ತಿದ್ದಾನೆ. ಪ್ರಸಂಗತಃ ಅಲ್ಲಿ ಇನ್ನೂ ಅನೇಕ ಜೀವಿಗಳು ರಕ್ಷಿಸಲ್ಪಟ್ಟಿವೆ. ಶಕ್ರನ ತೇಜಸ್ಸಿನಿಂದಾಗಿ ಅವರ್ಯಾರನ್ನೂ ಸುಡಲು ಶಕ್ತನಾಗಿಲ್ಲ. ನಾನು ಅದನ್ನು ಸುಡುವುದನ್ನು ನೋಡಿದ ಕೂಡಲೇ ಅವನು ಮೋಡಗಳಿಂದ ಕೂಡಿದ ಧಾರಕಾರ ಮಳೆಯನ್ನು ಸುರಿಸುತ್ತಾನೆ. ಆಗ ನನಗೆ ಸುಡಬೇಕೆಂದು ಎಷ್ಟು ಆಸೆಯಿದ್ದರೂ ನಾನು ಅದನ್ನು ಸುಡಲು ಶಕ್ತನಾಗುವುದಿಲ್ಲ. ಅಸ್ತ್ರವಿದ ನಿಮ್ಮಿಬ್ಬರನ್ನೂ ಭೆಟ್ಟಿಯಾಗಿ ಸಹಾಯವನ್ನು ಕೇಳಿದ್ದೇನಾದ್ದರಿಂದ ನಾನು ಈಗ ಖಾಂಡವವನ್ನು

ಸುಡುತ್ತೇನೆ. ಇದೇ ನಾನು ಕೇಳಿಕೊಳ್ಳುವ ಆಹಾರ. ಉತ್ತಮ ಅಸ್ತ್ರವಿದರಾದ ನೀವು ಎಲ್ಲ ಜೀವಿಗಳನ್ನೂ ಮೋಡಗಳನ್ನೂ ಎಲ್ಲ ಕಡೆಗಳಿಂದಲೂ ತಡೆಹಿಡಿಯಬಲ್ಲಿರಿ."

## ಅಗ್ನಿಯು ಕೃಷ್ಣಾರ್ಜುನರಿಗೆ ವರುಣನ ಗಾಂಡೀವ ಧನುಸ್ಸನ್ನು, ಅಕ್ಷಯ ಭತ್ತಳಿಕೆಗಳನ್ನೂ, ಚಕ್ರ-ಗದೆಗಳನ್ನೂ, ದಿವ್ಯ ರಥವನ್ನೂ ನೀಡಿದುದು

ಇದನ್ನು ಕೇಳಿದ ಬೀಭತ್ಸುವು ಶತಕ್ರತುವನ್ನು ಮೀರಿಯೂ ಖಾಂಡವವನ್ನು ಸುಡಲು ಬಯಸುತ್ತಿದ್ದ ಜಾತವೇದಸನನ್ನುದ್ದೇಶಿಸಿ ಹೇಳಿದನು:

"ನನ್ನಲ್ಲಿ ಅನೇಕ ವಜ್ರಧರರೊಂದಿಗೆ ಯುದ್ಧಮಾಡಲು ಸಾಧ್ಯವಾಗುವ ಬಹಳಷ್ಟು ಉತ್ತಮ ದಿವ್ಯಾಸ್ತ್ರಗಳಿವೆ. ಆದರೆ ಭಗವನ್! ನನ್ನ ಬಾಹುವೀರ್ಯಕ್ಕೆ ಸಮಾನವಾದ, ಮತ್ತು ಸಮರದಲ್ಲಿ ನನ್ನ ಯತ್ನ ಮತ್ತು ವೇಗಗಳನ್ನು ಸಹಿಸಬಲ್ಲಂಥ ಧನುಸ್ಸು ಇಲ್ಲವಾಗಿದೆ. ಮತ್ತು ನಾನು ವೇಗದಲ್ಲಿ ಬಾಣಗಳನ್ನು ಬಿಡುವಾಗ ನನಗೊಂದು ಅಕ್ಷಯ ಭತ್ತಳಿಕೆ ಬೇಕಾಗಿದೆ. ನನ್ನಲ್ಲಿರುವ ಎಲ್ಲ ಶರಗಳನ್ನೂ ಈ ರಥವು ಹೊರಲು ಸಾಧ್ಯವಿಲ್ಲ. ವಾಯುವೇಗದ ಬಿಳಿ ದಿವ್ಯಾಶ್ವಗಳು ಬೇಕು. ಮೇಘನಿರ್ಘೋಷ ಮತ್ತು ತೇಜಸ್ಸಿನಲ್ಲಿ ಸೂರ್ಯಪ್ರತಿಮ ರಥವೂ ಬೇಕು. ಅದೇ ರೀತಿ ಈ

ನಾಗಗಳು ಮತ್ತು ಪಿಶಾಚಿಗಳನ್ನು ರಣದಲ್ಲಿ ಸಂಹರಿಸಲು ಕೃಷ್ಣ ಮಾಧವನಲ್ಲಿಯೂ ಕೂಡ ಅವನ ವೀರ್ಯಕ್ಕೆ ಸರಿಸಾಟಿ ಆಯುಧವಿಲ್ಲ. ಈ ಕೆಲಸದಲ್ಲಿ ಯಶಸ್ವಿಯಾಗುವ ಉಪಾಯವನ್ನು ಹೇಳಬೇಕು. ಇದರಿಂದ ಇಂದ್ರನು ಈ ಮಹಾವನದ ಮೇಲೆ ಮಳೆಯನ್ನು ಸುರಿಸದಂತೆ ತಡೆಗಟ್ಟಬಹುದು. ಪೌರುಷದಿಂದ ಮಾಡಬೇಕಾದ ಕಾರ್ಯವೆಲ್ಲವನ್ನೂ ನಾವು ಮಾಡುತ್ತೇವೆ. ಅದಕ್ಕೆ ಸಮರ್ಥ ಕರಣಗಳನ್ನು ನೀಡಬೇಕು."

ಇದನ್ನು ಕೇಳಿದ ಧೂಮಕೇತು ಭಗವಾನ್ ಹುತಾಶನನು ಲೋಕಪಾಲ ವರುಣನನ್ನು ನೋಡಬೇಕೆಂದು ಆ ಉದಕವಾಸಿ ಜಲೇಶ್ವರ ಆದಿತ್ಯನನ್ನು ನೆನೆದನು. ಅವನ ಯೋಚನೆಯನ್ನು ತಿಳಿದ ಅವನು ಪಾವಕನಿಗೆ ಕಾಣಿಸಿಕೊಂಡನು. ಧೂಮಕೇತುವು ಲೋಕಪಾಲಕರಲ್ಲಿ ನಾಲ್ಕನೆಯವನಾದ ರಕ್ಷಕ ಮಹೇಶ್ವರ ಜಲೇಶ್ವರನನ್ನು ಪೂಜಿಸಿ ಹೇಳಿದನು:

"ರಾಜ ಸೋಮನು ನಿನಗೆ ಒಮ್ಮೆ ನೀಡಿದ್ದ ಧನುಸ್ಸು, ಎರಡು ಭತ್ತಳಿಕೆಗಳು ಮತ್ತು ಕಪಿಲಕ್ಷಣದ ರಥವನ್ನು ಶೀಘ್ರದಲ್ಲಿಯೇ ಇವರೀರ್ವರಿಗೆ ಕೊಡು. ಆ ಗಾಂಡೀವದಿಂದ ಪಾರ್ಥನು ಒಂದು ಸುಮಹತ್ತರ ಕಾರ್ಯವನ್ನು ನೆರವೇರಿಸುತ್ತಾನೆ. ನನಗೋಸ್ಕರವಾಗಿ

ವಾಸುದೇವನಿಗೆ ಚಕ್ರವನ್ನು ನೀಡು.”

“ಇವುಗಳನ್ನು ಕೊಡುತ್ತೇನೆ”ಎಂದು ವರುಣನು ಪಾವಕನಿಗೆ ಉತ್ತರಿಸಿದನು. ಆಗ ಆ ಅದ್ಭುತ, ಮಹಾವೀರ್ಯ, ಯಶಸ್ಸು ಮತ್ತು ಕೀರ್ತಿಗಳನ್ನು ಹೆಚ್ಚಿಸುವ, ಎಲ್ಲ ಶಸ್ತ್ರಗಳಿಗೂ ಅನಾದೃಷ, ಸರ್ವಶಸ್ತ್ರ ಪ್ರಮಥಿ, ಸರ್ವಾಯುಧ ಮಹಾಮಾತ್ರವಾದ, ಪರಸೇನೆಯನ್ನು ತತ್ತರಿಸುವ, ಒಂದೇ ಒಂದು ಲಕ್ಷಕ್ಕೆ ಸಮನಾದ, ರಾಷ್ಟ್ರವಿವರ್ಧಕ, ರತ್ನಗಳಿಂದ ಅಲಂಕೃತ, ಸುಂದರ ಬಣ್ಣದ, ನುಣುಪಾದ, ಯಾವುದೇರೀತಿಯ ಗಾಯಗಳು ಇಲ್ಲದ, ಅನಾದಿಕಾಲದಿಂದಲೂ ದೇವದಾನವಗಂಧರ್ವರಿಂದ ಪೂಜಿತ, ಆ ಧನುರತ್ನವನ್ನೂ, ಹಾಗೆಯೇ ಅಕ್ಷಯ ಭತ್ತಳಿಕೆಯನ್ನೂ, ದಿವ್ಯಾಶ್ವಗಳಿಂದ ಕೂಡಿದ, ಗಂಧರ್ವರ ಬೆಳ್ಳಿಯ ಬಣ್ಣದ ಕುದುರೆಗಳಿಂದ ಎಳೆಯಲ್ಪಡುವ, ಕಪಿಪ್ರವರ ಕೇತನವನ್ನು ಹೊಂದಿದ್ದ, ಹೇಮ ಮಾಲೆಗಳಿಂದ ಅಲಂಕೃತ, ಆಕಾಶದಲ್ಲಿ ಮೋಡಗಳಂತೆ ಕಾಣುವ, ವಾಯು ಅಥವಾ ಮನೋವೇಗವನ್ನು ಹೊಂದಿದ ರಥವನ್ನು ನೀಡಿದನು. ಅದು ಸರ್ವೋಪಕರಣಗಳಿಂದ ಯುಕ್ತವಾಗಿತ್ತು, ದೇವದಾನವರಿಂದ ಅಜೇಯವಾಗಿತ್ತು, ಹೊಳೆಯುತ್ತಿತ್ತು ಮತ್ತು ಸರ್ವಭೂತಮನೋಹರ ಮಹಾಘೋಷವನ್ನು ನೀಡುತ್ತಿತ್ತು. ರವಿಯಂತೆ ರೂಪವನ್ನೂ ವರ್ಣಿಸಲಸಾಧ್ಯವಾದ ಆ ರಥವನ್ನು ಭುವನಪ್ರಭು ಪ್ರಜಾಪತಿ ವಿಶ್ವಕರ್ಮನು ತನ್ನ ತಪಸ್ಸಿನಿಂದ ಸೃಷ್ಟಿಸಿದ್ದನು. ಪ್ರಭು ಸೋಮನು

ಅದನ್ನು ಏರಿ ದಾನವರನ್ನು ಜಯಿಸಿದ್ದನು. ಆನೆ ಅಥವಾ ಮೇಘವನ್ನು ಹೋಲುತ್ತಿದ್ದ ಅದು ತನ್ನ ಸೌಂದರ್ಯದಿಂದ ಜ್ವಲಿಸುತ್ತಿತ್ತು. ಆ ಶ್ರೇಷ್ಠ ರಥದಲ್ಲಿ ಶಕ್ರನ ಆಯುಧದಂತಿದ್ದ ಬಂಗಾರದಿಂದ ಮಾಡಲ್ಪಟ್ಟ, ಸುಂದರ ಉತ್ತಮ ಶುಭ ಧ್ವಜವೊಂದು ನಿಂತಿತ್ತು. ಅದರ ಮೇಲೆ ಸಿಂಹಶಾರ್ದೂಲ ಲಕ್ಷಣಗಳಿಂದ ಕೂಡಿದ, ಇನ್ನೇನು ಘರ್ಜಿಸುತ್ತಾನೋ ಎನ್ನುವಂತಿರುವ ದಿವ್ಯ ವಾನರನು ಶೋಭಿಸುತ್ತಿದ್ದನು. ಧ್ವಜದ ಮೇಲೆ ವಿವಿಧ ಮಹಾ ಭೂತಗಳು ವಾಸಿಸುತ್ತಿದ್ದು ತಮ್ಮ ನಾದದಿಂದ ರಿಪುಸೈನ್ಯಗಳನ್ನು ಮೂರ್ಛಿತಗೊಳಿಸುತ್ತಿದ್ದವು.

ಅನಂತರ ಪಾರ್ಥನು ನಾನಾಪತಾಕಗಳಿಂದ ಶೋಭಿತ ಆ ಉತ್ತಮ ರಥವನ್ನು ಪ್ರದಕ್ಷಿಣೆಮಾಡಿ ದೇವತೆಗಳಿಗೆ ವಂದಿಸಿ, ಕವಚ-ಖಡ್ಗಗಳನ್ನು ಧರಿಸಿ, ಬೆರಳು-ಕೈಗಳಿಗೆ ಕಟ್ಟಿ ಸನ್ನದ್ಧನಾಗಿ, ಪುಣ್ಯವಂತನು ವಿಮಾನವನ್ನು ಏರುವಂತೆ, ರಥವನ್ನು ಏರಿದನು. ಹಿಂದೆ ಬ್ರಹ್ಮನಿಂದ ನಿರ್ಮಿತ ದಿವ್ಯ ಶ್ರೇಷ್ಠ ಧನು ಗಾಂಡೀವವನ್ನು ಕೈಗೆತ್ತಿಹಿಡಿದ ಅರ್ಜುನನು ಮುದಿತನಾದನು. ಹುತಾಶನನನ್ನು ನಮಸ್ಕರಿಸಿ ವೀರ್ಯವಾನನು ಧನುಸ್ಸಿಗೆ ಶಿಂಜನಿಯನ್ನು ಬಲವಾಗಿ ಬಿಗಿದನು. ಬಲಶಾಲಿ ಪಾಂಡವನು ತನ್ನ ಧನುಸ್ಸಿಗೆ ನೀಡಿದ ಠೇಂಕಾರವನ್ನು ಕೇಳಿದವರ ಮನಸ್ಸು ತತ್ತರಿಸಿತು. ರಥವನ್ನೂ, ಧನುವನ್ನೂ ಮತ್ತು ಎರಡು ಅಕ್ಷಯ ಬತ್ತಳಿಕೆಗಳನ್ನೂ ಪಡೆದ

ಕೌಂತೇಯನು ಸಂತೋಷಗೊಂಡು ಮುಂದಿರುವ ಕಾರ್ಯಕ್ಕೆ ಉತ್ಸುಕನಾದನು.

ಅನಂತರ ಪಾವಕನು ಕೃಷ್ಣನಿಗೆ ವಜ್ರನಾಭ ಚಕ್ರವನ್ನು ನೀಡಿದನು. ಅವನೂ ಕೂಡ ತನಗೆ ಅತ್ಯಂತ ಪ್ರಿಯವಾದ ಆ ಭೀಷಣ ಅಸ್ತ್ರವನ್ನು ಪಡೆದು ಶಕ್ತಿಸಮನ್ವಿತನಾಗಿ ತಯಾರಾದನು. ಪಾವಕನು ಹೇಳಿದನು:

> "ಮಧುಸೂದನ! ಇದರಿಂದ ನೀನು ಅಮಾನುಷರನ್ನೂ ರಣದಲ್ಲಿ ಗೆಲ್ಲುತ್ತೀಯೆ ಎನ್ನುವುದರಲ್ಲಿ ಸಂಶಯವಿಲ್ಲ. ಇದರಿಂದ ನೀನು ಯಾರನ್ನೇ ಆಗಲಿ - ಮನುಷ್ಯ, ದೇವ, ರಾಕ್ಷಸ, ಪಿಶಾಚಿ, ದೈತ್ಯ, ನಾಗ ಮತ್ತು ಇತರರನ್ನೂ ಸದಾ ಸೋಲಿಸುತ್ತೀಯೆ ಎನ್ನುವುದರಲ್ಲಿ ಸಂಶಯವಿಲ್ಲ. ಮಾಧವ! ರಣದಲ್ಲಿ ನೀನು ಎಷ್ಟು ಬಾರಿ ಇದನ್ನು ಬಿಟ್ಟರೂ ಅದು ವೈರಿಗಳನ್ನು ಸಂಹರಿಸಿ ಪುನಃ ನಿನ್ನ ಕೈ ಬಂದು ಸೇರುತ್ತದೆ."

ವರುಣನು ಹರಿಗೆ ಗುಡುಗಿನಂತೆ ಗರ್ಜಿಸಬಲ್ಲ, ಘೋರ ದೈತ್ಯರ ಅಂತಕಾರಿಣಿಯಾಗಿದ್ದ, ಕೌಮೋದಕೀ ಎಂಬ ಹೆಸರಿನ ಗದೆಯನ್ನೂ ನೀಡಿದನು. ನಂತರ ಪ್ರಹೃಷ್ಟ ಕೃಷ್ಣಪಾಂಡವರು ಪಾವಕನಿಗೆ ಹೇಳಿದರು:

> "ಭಗವನ್! ಅಸ್ತ್ರಗಳನ್ನು ಪಡೆದು ಶಸ್ತ್ರಸಂಪನ್ನರಾಗಿ ರಥ ಮತ್ತು ಧ್ವಜಗಳನ್ನೂ ಪಡೆದು ಸುರಾಸುರರೆಲ್ಲರೊಡನೆಯೂ ಯುದ್ಧಮಾಡಲು ಉತ್ಸುಕರಾಗಿದ್ದೇವೆ. ಪನ್ನಗನಿಗಾಗಿ

ಏಕಾಂಗಿಯಾಗಿ ಯುದ್ಧಮಾಡಲು ಸಿದ್ಧನಿರುವ ಇಂದ್ರನೇನಂತೆ!”

ಅರ್ಜುನನು ಹೇಳಿದನು:

“ವೀರ್ಯವಾನ್ ವಾರ್ಷ್ಣೇಯನು ಯುದ್ಧದಲ್ಲಿ ಚಕ್ರಾಸ್ತ್ರವನ್ನು ಪ್ರಯೋಗಿಸಿದನೆಂದರೆ ಜನಾರ್ದನನು ಗೆಲ್ಲಲಿಕ್ಕಾಗದೇ ಇರುವ ಏನೂ ಈ ಮೂರು ಲೋಕಗಳಲ್ಲಿ ಇಲ್ಲದಂತಾಗುತ್ತದೆ. ನನ್ನ ಈ ಗಾಂಡೀವ ಧನುಸ್ಸು ಮತ್ತು ಈ ಎರಡು ಅಕ್ಷಯ ಭತ್ತಳಿಕೆಗಳಿಂದ ನಾನೂ ಕೂಡ ಯುದ್ಧದಲ್ಲಿ ಲೋಕಗಳನ್ನು ಗೆಲ್ಲಬಲ್ಲೆ ಎಂಬ ಉತ್ಸಾಹವಿದೆ ಪಾವಕ! ಈಗ ಮಹಾ ಪ್ರಜ್ವಾಲೆಗಳಿಂದ ನಿನಗಿಷ್ಟ ಬಂದಹಾಗೆ ಈ ಅರಣ್ಯವನ್ನು ಸುತ್ತುವರೆ. ನಾವು ಈ ಕಾರ್ಯದಲ್ಲಿ ಸಹಭಾಗಿಗಳಾಗಲು ಸಿದ್ಧರಿದ್ದೇವೆ.”

## ಖಾಂಡವ ದಹನ

ಅರ್ಜುನ ಮತ್ತು ದಾಶಾರ್ಹನ ಈ ಮಾತುಗಳನ್ನು ಕೇಳಿದ ಭಗವಾನನು ತನ್ನ ತೇಜಸ್ವಿ ರೂಪ ಧಾರಣಮಾಡಿ ಅರಣ್ಯವನ್ನು ಸುಡಲು ಪ್ರಾರಂಭಿಸಿದನು. ಎಲ್ಲ ಕಡೆಗಳಿಂದಲೂ ಸುತ್ತುವರೆದು ತನ್ನ ಏಳು ಜ್ವಾಲೆಗಳ ಮೂಲಕ ಆ ಕೃದ್ಧನು ಖಾಂಡವವನ್ನು ಸುಡುತ್ತಿರಲು ಯುಗವೇ ಅಂತ್ಯವಾಗುತ್ತಿದೆಯೋ ಎನ್ನುವಂತೆ



ತೋರುತ್ತಿತ್ತು. ಆ ವನವನ್ನು ಸುತ್ತುವರೆದು ಮೇಲೆರಗಿ ಮಳೆಗಾಲದ ಮೋಡಗಳ ಗುಡುಗಿನಂತೆ ಗರ್ಜಿಸುತ್ತಾ ಸರ್ವಭೂತಗಳನ್ನೂ ಭುಗಿಲೆಂದು ಉರಿಯುತ್ತಿರುವ ಆ ವನವು ಕಾಂಚನ ಮಹಾದ್ಯುತಿ ನಗೇಂದ್ರ ಮೇರುವಿನಂತೆ ತೋರುತ್ತಿತ್ತು.

ಅರಣ್ಯದ ಎರಡು ಕಡೆಗಳಲ್ಲಿ ರಥವನ್ನೇರಿ ನಿಂತಿದ್ದ ಆ ಇಬ್ಬರು ನರವ್ಯಾಘ್ರರು ಸರ್ವ ಭೂತಗಳ ಮಹಾ ಸಂಹಾರ ಕಾರ್ಯದಲ್ಲಿ ತೊಡಗಿದರು. ಎಲ್ಲೆಲ್ಲಿ ಖಾಂಡವವನ್ನು ಬಿಟ್ಟು ಓಡಿಹೋಗುತ್ತಿರುವ ಪ್ರಾಣಿಗಳು ಕಂಡುಬರುತ್ತಿದ್ದವೋ ಅಲ್ಲಲ್ಲಿ ಅವುಗಳನ್ನು ಬೆನ್ನಟ್ಟಿ ಆ ವೀರರು ಕೆಳಗುರುಳಿಸುತ್ತಿದ್ದರು. ರಥದ ಮಹಾವೇಗದಿಂದಾಗಿ ತಪ್ಪಿಸಿಕೊಂಡು ಹೋಗಲು ಯಾವುದೇ ಮಾರ್ಗವೂ

ತೋರಿಬರುತ್ತಿರಲಿಲ್ಲ. ರಥಗಳೆರಡೂ ಮತ್ತು ರಥಿಗಳೆರಡೂ ಅತಿ ಬಲವಾದ ಜೋಡಿಗಳಾಗಿ ತೋರುತ್ತಿದ್ದರು. ಖಾಂಡವವು ಹತ್ತಿ ಉರಿಯುತ್ತಿರಲು ಅದರಲ್ಲಿದ್ದ ಸಹಸ್ರಾರು ಜೀವಿಗಳು ಭೈರವ ಧ್ವನಿಗಳಲ್ಲಿ ಚೀರುತ್ತಾ ಹತ್ತು ದಿಕ್ಕುಗಳಲ್ಲಿ ಹಾರತೊಡಗಿದವು. ಬಹಳಷ್ಟು ಒಂದೇ ಸ್ಥಳದಲ್ಲಿ ಸುಟ್ಟುಹೋದವು, ಇನ್ನು ಕೆಲವು ಅಲ್ಲಲ್ಲಿ ಹರಡಿ ಚೆಲ್ಲಿ ಮೂರ್ಛೆ ತಪ್ಪಿ ಕಣ್ಣುಗಳು ಒಡೆದು ಬೆಂದು ಹೋದವು. ಕೆಲವರು ತಮ್ಮ ಮಕ್ಕಳನ್ನು, ಇನ್ನು ಕೆಲವರು ತಮ್ಮ ತಂದೆ ತಾಯಿಯರನ್ನು ತ್ಯಜಿಸಲಾರದೆ ಸ್ನೇಹದಿಂದ ಶೋಕದಿಂದ ಅಪ್ಪಿ ಹಿಡಿದು ಅಲ್ಲಿಯೇ ನಿಧನರಾದರು. ಇನ್ನು ಕೆಲವರು ನೋಡಲು ವಿಕೃತರಾಗಿ ಸಹಸ್ರಾರು ಸಂಖ್ಯೆಗಳಲ್ಲಿ ಮೇಲೆ ಹಾರಿ ಅಲ್ಲಲ್ಲಿ ಪುನಃ ಉರಿಯುತ್ತಿರುವ ಅಗ್ನಿಯಲ್ಲಿ ಬಿದ್ದರು. ಅಲ್ಲಲ್ಲಿ ಭೂಮಿಯ ಮೇಲೆ ವಿಚೇಷ್ಟರಾಗಿ ರೆಕ್ಕೆ, ಕಣ್ಣು ಮತ್ತು ಪಂಜಗಳು ಸಹಿತ ದೇಹವೆಲ್ಲ ಸುಟ್ಟು ವಿನಾಶರಾಗಿದ್ದುದು ಕಾಣುತ್ತಿತ್ತು. ಎಲ್ಲ ಜಲಸ್ಥಾನಗಳು ಕುದಿಯುತ್ತಿರಲು ಆಮೆ ಮೀನುಗಳು ಸಹಸ್ರಾರು ಸಂಖ್ಯೆಗಳಲ್ಲಿ ಸತ್ತು ಬಿದ್ದಿರುವುದು ಕಾಣುತ್ತಿತ್ತು. ಆ ವನದಲ್ಲಿದ್ದ ಪ್ರಾಣಿಗಳೆಲ್ಲವೂ ಉರಿಯುತ್ತಿರುವ ಶರೀರಗಳಿಂದ ಉರಿಯುತ್ತಿರುವ ಬೆಂಕಿಗಳಂತೆ ತೋರುತ್ತಿದ್ದು ತಮ್ಮ ಪ್ರಾಣಗಳನ್ನು ಕಳೆದುಕೊಂಡು ನಾಶವಾಗುತ್ತಿದ್ದರು. ಅವರು ಹೊರಗೆ ಹಾರಲು ಪಾರ್ಥನು ನಗುತ್ತಾ ಶರಗಳಿಂದ ಹೊಡೆದು ತುಂಡುಮಾಡಿ ಉರಿಯುತ್ತಿರುವ ಬೆಂಕಿಯಲ್ಲಿ ಪುನಃ ಬೀಳಿಸುತ್ತಿದ್ದನು. ಸರ್ವಾಂಗಗಳೂ ಶರಗಳಿಂದ ಚುಚ್ಚಿರಲು



ಮಹಾ ರೋದನೆಯಿಂದ ವೇಗದಿಂದ ಮೇಲಕ್ಕೆ ಹಾರಿ ಪುನಃ ಅಗ್ನಿಯಲ್ಲಿ ಬೀಳುತ್ತಿದ್ದವು. ಶರಗಳಿಂದ ಹೊಡೆಯಲ್ಪಟ್ಟು ಸುಟ್ಟುಹೋಗುತ್ತಿದ್ದ ಆ ವನೌಕಸರ ರೋದನೆಯು ಮಥಿಸಲ್ಪಟ್ಟ ಸಮುದ್ರದಂತೆ ಕೇಳಿಬರುತ್ತಿತ್ತು. ಸಂತೋಷದಿಂದ ಭುಗಿಲೆಂದು ಉರಿಯುತ್ತಿರುವ ಬೆಂಕಿಯು ಆಕಾಶವನ್ನು ಮುಟ್ಟಿ ದಿವೌಕಸರಲ್ಲಿ ಮಹಾ ಉದ್ವೇಗವನ್ನು ಉಂಟುಮಾಡಿತು. ಆಗ ಮಹಾತ್ಮ ದಿವೌಕಸರೆಲ್ಲರೂ ದೇವರಾಜ ಸಹಸ್ರಾಕ್ಷ ಪುರಂದರನ ಶರಣು ಹೊಕ್ಕರು.

ದೇವತೆಗಳು ಹೇಳಿದರುಃ

> “ಇವರೆಲ್ಲರೂ ಏಕೆ ಬೆಂಕಿಯಲ್ಲಿ ಸುಟ್ಟುಹೋಗುತ್ತಿದ್ದಾರೆ? ಲೋಕಗಳ ಅಮರೇಶ್ವರ! ಪ್ರಳಯವೇನಾದರೂ ಪ್ರಾಪ್ತವಾಗಿದೆಯೇ?”

ಅವರ ಈ ಮಾತುಗಳನ್ನು ಕೇಳಿದ ವೃತ್ರಹ ಹರಿವಾಹನನು ಸ್ವತಃ ಕೆಳಗಿ ಇಣುಕಿ ನೋಡಿ ಖಾಂಡವದ ವಿಮೋಕ್ಷಕ್ಕಾಗಿ ಧಾವಿಸಿದನು. ವಜ್ರಭೃತ ಸುರೇಶ್ವರನು ನಾನಾರೂಪದ ಮಹಾಮೇಘಜಾಲದಿಂದ ಆಕಾಶವನ್ನು ತುಂಬಿಸಿ ಮಳೆಯನ್ನು ಸುರಿಸಲು ಪ್ರಾರಂಭಿಸಿದನು. ಸಹಸ್ರಾಕ್ಷನು ಖಾಂಡವವನ್ನು ಸುಡುತ್ತಿದ್ದ ಪಾವಕನ ಮೇಲೆ ನೂರಾರು ಸಾವಿರಾರು ಮಳೆಗಳ ಧಾರೆಗಳನ್ನು ಸುರಿಸಿದನು. ಆದರೆ ಆ ಮಳೆಯ ಧಾರೆಗಳು ಕೆಳಗೆ ತಲುಪುವುದರೊಳಗೇ ಜಾತವೇದಸನ

ತೇಜಸ್ಸಿನಿಂದ ಬತ್ತಿ ಆವಿಯಾಗಿ ಪಾವಕನನ್ನು ಮುಟ್ಟದೆಯೇ ಹೋದವು. ಆಗ ನಮೂಚಿಹನು ಅಗ್ನಿಯ ಮೇಲೆ ಅತ್ಯಂತ ಕೋಪಗೊಂಡು ಇನ್ನೂ ಹೆಚ್ಚಿನ ಮಳೆಯನ್ನು ಸುರಿಸಲು ಪುನಃ ಪ್ರಾರಂಭಿಸಿದನು. ಬೆಂಕಿ ಮತ್ತು ಮಳೆಯ ಯುದ್ಧವು ನಡೆಯುತ್ತಿರಲು ಹೊಗೆ ಮಿಂಚುಗಳ ಮಿಶ್ರಣದಿಂದ ಮತ್ತು ಮೇಘಘರ್ಜನೆಗಳಿಂದ ಆ ವನವು ಘೋರರೂಪವನ್ನು ತಾಳಿತು.

ಬೀಭತ್ಸು ಪಾಂಡವನು ಶರಗಳ ಮಳೆಯನ್ನು ಸುರಿಸಿ ಆ ಮಳೆಯನ್ನು ತಡೆದು ಅಸ್ತ್ರಗಳಲ್ಲಿ ತನಗಿದ್ದ ಉತ್ತಮ ಪ್ರವೀಣತೆಯನ್ನು ತೋರಿಸಿದನು. ಪಾಂಡವನು ಇಡೀ ಖಾಂಡವವನ್ನು ಶರಗಳಿಂದ ಮುಚ್ಚಿ ಇಂದ್ರನ ಮಳೆಯು ವನವನ್ನು ತಲುಪದಂತೆ ತಡೆಹಿಡಿದನು. ಸವ್ಯಸಾಚಿಯು ಆಕಾಶದಲ್ಲಿ ಹಾರುತ್ತಿರುವ ಶರಗಳಿಂದ ಮುಚ್ಚಿದಾಗ ಅಲ್ಲಿಂದ ಯಾವುದೇ ಒಂದು ಜೀವಿಯೂ ತಪ್ಪಿಸಿಕೊಳ್ಳುವಂತಿರಲಿಲ್ಲ. ಆದರೆ ಸರ್ಪರಾಜ ಮಹಾಬಲ ತಕ್ಷಕನು ಅಲ್ಲಿರಲಿಲ್ಲ. ವನವು ಸುಡುತ್ತಿರುವಾಗ ಅವನು ಕುರುಕ್ಷೇತ್ರದಲ್ಲಿದ್ದನು. ಆದರೆ ತಕ್ಷಕನ ಬಲಶಾಲಿ ಮಗ ಅಶ್ವಸೇನನು ಅಲ್ಲಿದ್ದನು. ಅವನು ಹವ್ಯವಾಹನನಿಂದ ತಪ್ಪಿಸಿಕೊಳ್ಳಲು ತೀವ್ರ ಪ್ರಯತ್ನವನ್ನು ಮಾಡಿದನು. ಕೌಂತೇಯನ ಶರಗಳಿಂದ ಸುತ್ತುವರೆಯಲ್ಪಟ್ಟ ಅವನಿಗೆ ಹೊರಬರಲು ಸಾಧ್ಯವಾಗಲಿಲ್ಲ. ಅವನ ತಾಯಿ ಭುಜಗಾತ್ಮಜೆಯು ಅವನನ್ನು ನುಂಗಿ ಉಳಿಸಲು ಪ್ರಯತ್ನಿಸಿದಳು. ಅವಳು ಮೊದಲು

ಅವನ ಶಿರವನ್ನು ನುಂಗಿದಳು. ಅವನ ಬಾಲವನ್ನು ನುಂಗುತ್ತಿರುವಾಗ ಆ ಮನ್ನಗಿ ಪುತ್ರಗೃದ್ಧಿನಿಯು ಮೇಲೆ ಹಾರಲು ಪ್ರಯತ್ನಿಸಿದಳು. ಆಗ ಪಾಂಡವನು ವಿಶಾಲಧಾರೆಯ ತೀಕ್ಷ್ಣ ಭಲ್ಲದಿಂದ ಅವಳ ಶಿರವನ್ನು ಕತ್ತರಿಸಿದನು ಮತ್ತು ಅದನ್ನು ಸುರೇಶ್ವರನು ನೋಡಿದನು. ಆಗ ವಜ್ರಿಯು ಅವನನ್ನು ಉಳಿಸಲು ಪ್ರಯತ್ನಿಸಿ ಪಾಂಡವನ ಮೇಲೆ ಮಾಯೆಯ ಭಿರುಗಾಳಿ ಮಳೆಗಳನ್ನು ಸುರಿಸಿದನು. ಅದೇ ಸಮಯದಲ್ಲಿ ಅಶ್ವಸೇನನು ತಪ್ಪಿಸಿಕೊಂಡನು. ಆ ಘೋರ ನಾಗಗಳ ಮಾಯೆ ಮತ್ತು ಮೋಸವನ್ನು ಕಂಡ ಅವನು ಆಕಾಶದ ಕಡೆ ಹಾರುತ್ತಿರುವ ನಾಗಗಳನ್ನು ಎರಡು ಮೂರು ಭಾಗಗಳನ್ನಾಗಿ ಕತ್ತರಿಸಿ ತುಂಡುಮಾಡಿದನು. ಸಂಕೃದ್ಧ ಬೀಭತ್ಸು, ಪಾವಕ ಮತ್ತು ವಾಸುದೇವನೂ ಕೂಡ ಆ ನಾಗಕ್ಕೆ ಅಪ್ರತಿಷ್ಠನಾಗು ಎಂದು ಶಪಿಸಿದರು. ಆಗ ಜಿಷ್ಣುವು ಸಹಸ್ರಾಕ್ಷನು ಮಾಡಿದ ವಂಚನೆಯಿಂದ ಸಂಕೃದ್ಧನಾಗಿ ಆಕಾಶವನ್ನು ಶರಗಳಿಂದ ತುಂಬಿ ಅವನೊಡನೆ ಯುದ್ಧ ಮಾಡಿದನು. ಕುಪಿತ ಫಲ್ಗುನನನ್ನು ನೋಡಿ ದೇವರಾಜನು ಇಡೀ ನಭವನ್ನೇ ಬೆಳಗಿಸುವಂತಿದ್ದ ಉರಿಯುತ್ತಿರುವ ತನ್ನ ಅಸ್ತ್ರವನ್ನು ಪ್ರಯೋಗಿಸಿದನು. ಆಗ ವಾಯುವು ಮಹಾಘೋಷದೊಂದಿಗೆ ಸರ್ವಸಾಗರಗಳನ್ನು ಕ್ಷೋಭಿಸುತ್ತಾ ಭಾರೀ ಮಳೆಯನ್ನು ತರುವ ಗಿರಿಗಳಂತಿರುವ ಮೋಡಗಳ ಸಂಕುಲವನ್ನೇ ಉಂಟುಮಾಡಿದನು. ತನ್ನ ರಕ್ಷಣೆಯನ್ನು ಅರಿತಿದ್ದ ಅರ್ಜುನನು ಅವನನ್ನು ತಡೆಯಲು ಉತ್ತಮ ವಾಯವ್ಯಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ ಇಂದ್ರನ

ಮಳೆಮೋಡಗಳ ವೀರ್ಯ ಓಜಸ್ಸನ್ನು ನಾಶಮಾಡಿದನು. ಮೋಡಗಳು ಬತ್ತಿಹೋದವು. ಮಿಂಚು ನಿಂತುಹೋಯಿತು. ಕ್ಷಣದಲ್ಲಿ ಆಕಾಶದಲ್ಲಿಯ ರಜ ಮತ್ತು ತಮಗಳು ಪ್ರಶಾಂತವಾಗಿ, ಸುಖಶೀತಲವು ಬೀಸಿ ಅರ್ಕಮಂಡಲವು ಸ್ವಭಾವಕ್ಕೆ ತೆರಳಿತು. ವಿರೋಧಗಳೇನೂ ಇಲ್ಲದೇ ಪ್ರಹೃಷ್ಟ ಅಗ್ನಿಯು ವಿವಿಧಾಕೃತಿಯಲ್ಲಿ ಪ್ರಜ್ವಲಿಸಿ ತನ್ನ ನಾದದಿಂದ ಜಗತ್ತನ್ನು ತುಂಬಿ ಸುಡತೊಡಗಿದನು.

ಕೃಷ್ಣರಿಬ್ಬರೂ ಆ ಕಾಡ್ಗಿಚ್ಚನ್ನು ರಕ್ಷಿಸುತ್ತಿರುವುದನ್ನು ನೋಡಿದ ಗರುಡನೇ ಮೊದಲಾದ ಪಕ್ಷಿಗಳು ಆಕಾಶಕ್ಕೆ ಹಾರಿದವು. ಗರುಡನು ಅವರನ್ನು ಹೊಡೆಯಲೋಸುಗ ತನ್ನ ವಜ್ರಸದೃಶ ರೆಕ್ಕೆ, ಕೊಕ್ಕು ಮತ್ತು ಪಂಜಗಳಿಂದ ಕೃಷ್ಣಪಾಂಡವರ ಮೇಲೆ ಎರಗಿದನು. ಹಾಗೆಯೇ ಉರಗಸಂಘಾತಗಳು ತಮ್ಮ ಜ್ವಲಿಸುತ್ತಿರುವ ಬಾಯಿಗಳಿಂದ ಘೋರ ವಿಷವನ್ನು ಕಾರುತ್ತಾ ಪಾಂಡವನ ಸಮೀಪಕ್ಕೆ ಧಾವಿಸಿದವು. ಆಕಾಶಗಾಮಿಗಳು ರೋಷದಿಂದ ಧಾವಿಸುತ್ತಿರುವುದನ್ನು ಕಂಡ ಪಾರ್ಥನು ಶರಗಳಿಂದ ಅವುಗಳನ್ನು ಕತ್ತರಿಸಲು, ಶಕ್ತಿರಹಿತರಾಗಿ ಅವುಗಳು ಉರಿಯುತ್ತಿರುವ ಬೆಂಕಿಯಲ್ಲಿ ಬಿದ್ದವು. ಆಗ ಕ್ರೋಧಸಂಮೂರ್ಛಿತ ರಣಾರ್ಥಿ ಸುರರು ಗಂಧರ್ವ ಯಕ್ಷ ರಾಕ್ಷಸ ಪನ್ನಗರೊಡಗೂಡಿ ಮಹಾನಾದದೊಂದಿಗೆ ಮೇಲೆದ್ದು ಲೋಹದ ಗದೆ, ಚಕ್ರ, ಕಲ್ಲು ಬಂಡೆಗಳು ಮತ್ತು ಅಗ್ನಿಯನ್ನು ಉಗುಳುವ ಅಸ್ತ್ರಗಳೊಂದಿಗೆ ಕೃಷ್ಣಪಾರ್ಥರನ್ನು ಸಂಹರಿಸಲು

ಮುಂದಾದರು. ಅವರು ಹೀಗೆ ಮುಂದಾಗಿ ಶಸ್ತ್ರಗಳ ಮಳೆಯನ್ನೇ ಸುರಿಸಲು ಬೀಭತ್ಸುವು ತನ್ನ ನಿಶಿತ ಶರಗಳಿಂದ ಅವರ ಅಂಗಗಳನ್ನು ಕತ್ತರಿಸಿದನು. ಸುಮಹಾತೇಜಸ್ವಿ ಅರಿಧ್ವಂಸಿ ಕೃಷ್ಣನು ಚಕ್ರದಿಂದ ಮಹಾ ಕದನದಲ್ಲಿ ದೈತ್ಯದಾನವರನ್ನು ಸಂಹರಿಸಿದನು. ಇನ್ನೂ ಇತರ ಮಹೌಜಸ ದೈತ್ಯರು ಶರಗಳಿಂದ ತುಂಡಾಗಿ ಚಕ್ರದ ವೇಗಕ್ಕೆ ಸಿಲುಕಿ ಅಲೆಗಳು ದಡವನ್ನು ಸೇರುವಾಗ ಹೇಗೋ ಹಾಗೆ ಸ್ಥಬ್ಧರಾದರು. ಆಗ ತ್ರಿದಶ ಮಹೇಶ್ವರ ಶಕ್ರನು ಸಂಕೃದ್ಧನಾಗಿ ಶ್ವೇತ ಗಜವನ್ನೇರಿ ಅವರಿಬ್ಬರ ಮೇಲೆ ಭಿರುಗಾಳಿಯಂತೆ ಎರಗಿದನು. ತಕ್ಷಣವೇ ವಜ್ರವನ್ನು ಹಿಡಿದು ಅವರ ಮೇಲೆ ಎಸೆಯಲು ಅಸುರಸೂದನನು ಸುರರಿಗೆ “ಅವರಿಬ್ಬರೂ ಹತರಾದರು!” ಎಂದನು.

ದೇವೇಂದ್ರನು ಮಹಾಶನಿಯನ್ನು ಹಿಡಿದಿದ್ದುದನ್ನು ನೋಡಿ ಸುರರೆಲ್ಲರೂ ತಮ್ಮ ತಮ್ಮ ಅಸ್ತ್ರಗಳನ್ನು ಹಿಡಿದರು: ಯಮರಾಜನು ಕಾಲದಂಡವನ್ನು, ಧನೇಶ್ವರನು ಶಿಬಿಕೆಯನ್ನು, ವರುಣನು ಪಾಶವನ್ನು ಮತ್ತು ಶಿವನು ತ್ರಿಶೂಲವನ್ನು ಹಿಡಿದರು. ದೀಪ್ಯಮಾನ ಔಷಧಿಗಳನ್ನು ಅಶ್ವಿನಿಯರು ಹಿಡಿದರು. ಧಾತನು ಧನುವನ್ನು ಹಿಡಿದನು ಮತ್ತು ಜಯನು ಮುಸಲವನ್ನು ಹಿಡಿದನು. ಕೃದ್ಧ ಮಹಾಬಲಿ ತ್ವಷ್ಟನು ಪರ್ವತವನ್ನೇ ಹಿಡಿದನು. ಅಂಶನು ಶಕ್ತಿಯನ್ನು ಹಿಡಿದನು ಮತ್ತು ಮೃತ್ಯುದೇವನು ಪರಶವನ್ನು ಹಿಡಿದನು. ಆರ್ಯಮನು ಘೋರ

ಪರಿಘವನ್ನು ಹಿಡಿದು ಚಲಿಸಿದನು ಮತ್ತು ಮಿತ್ರನು ಕ್ಷುರಪರ್ಯಂತ ಚಕ್ರವನ್ನು ಹಿಡಿದು ನಿಂತನು. ಸಂಕೃದ್ಧ ಪೂಷಾ, ಭಗ ಮತ್ತು ಸವಿತರು ಧನುಸ್ಸು ಮತ್ತು ಖಡ್ಗಗಳನ್ನು ಹಿಡಿದು ಕೃಷ್ಣಪಾರ್ಥರ ಮೇಲೆ ಧಾಳಿಯಿಟ್ಟರು. ರುದ್ರರು, ವಸವರು, ಮಹಾಬಲಿ ಮರುತರು, ವಿಶ್ವೇದೇವರು, ಸಾಧ್ಯರು ಮತ್ತು ಇನ್ನೂ ಇತರ ಬಹಳ ದೇವತೆಗಳು ಪುರುಷೋತ್ತಮ ಕೃಷ್ಣಪಾರ್ಥರನ್ನು ಕೊಲ್ಲಲು ತಮ್ಮ ದೀಪ್ಯಮಾನ ತೇಜಸ್ಸಿನಿಂದ ವಿವಿಧ ಆಯುಧಗಳಿಂದ ಮುನ್ನುಗ್ಗಿದರು. ಆ ಅದ್ಭುತ ಯುದ್ಧದಲ್ಲಿ ಯುಗಾಂತಸಮರೂಪ ನಿಮಿತ್ತಗಳು ಕಾಣಿಸಿಕೊಂಡು ಭೂತಗಳ ಅಂತ್ಯವನ್ನು ಸೂಚಿಸಿದವು. ಅವರೀರ್ವರು ಅಚ್ಯುತರು ದೇವತೆಗಳೊಡಗೂಡಿ ಮುನ್ನುಗ್ಗುತ್ತಿದ್ದ ಶಕ್ರನನ್ನು ನೋಡಿ ನಿರ್ಭೀತರಾಗಿ ತಮ್ಮ ಧನುಸ್ಸುಗಳನ್ನು ಹಿಡಿದು ಸಿದ್ಧರಾಗಿ ಯುದ್ಧದಲ್ಲಿ ದುರ್ಧರ್ಷರಾಗಿ ನಿಂತರು. ಎಲ್ಲಕಡೆಯಿಂದಲೂ ಮುಂದುವರೆಯುತ್ತಿದ್ದ ದೇವತೆಗಳನ್ನು ನೋಡಿದ ಆ ಸಂಕೃದ್ಧರು ತಮ್ಮ ವಜ್ರಸದೃಷ ಬಾಣಗಳಿಂದ ಅವರನ್ನು ತಡೆದರು. ಪುನಃ ಪುನಃ ಅವರ ಸಂಕಲ್ಪವು ಭಗ್ನವಾಗಲು ಅಸಹಾಯಕ ಸುರರು ಭಯದಿಂದ ರಣವನ್ನು ಪರಿತ್ಯಜಿಸಿ ಶಕ್ರನಲ್ಲಿ ಶರಣು ಹೋದರು. ದಿವಿಯಲ್ಲಿ ನೆಲೆಸಿದ್ದ ಮುನಿಗಳು ಮಾಧವಾರ್ಜುನರು ದೇವತೆಗಳನ್ನು ತಡೆಹಿಡಿದಿದ್ದುದನ್ನು ನೋಡಿ ಅಶ್ಚರ್ಯಚಕಿತರಾದರು. ರಣದಲ್ಲಿ ಅವರಿಬ್ಬರ ವೀರತನವನ್ನು ನೋಡಿ ಪರಮಪ್ರೀತನಾಗಿ ಶಕ್ರನು ಇನ್ನೊಮ್ಮೆ ಅವರೊಡನೆ ಯುದ್ಧಮಾಡತೊಡಗಿದನು. ಸವ್ಯಸಾಚಿಯ

ವೀರ್ಯವನ್ನು ಪರೀಕ್ಷಿಸಲು ಪಾಕಶಾಸನನು ಮಹಾ ಕಲ್ಲುಬಂಡೆಗಳ ಮಳೆಯನ್ನು ಸುರಿಸಿದನು. ಆದರೆ ಅರ್ಜುನನನು ತನ್ನ ಶರಗಳ ಮಳೆಯಿಂದ ಅವುಗಳನ್ನು ತುಂಡರಿಸಿದನು. ದೇವರಾಜ ಶತಕ್ರತುವು ತನ್ನ ಪ್ರಯತ್ನವು ವಿಫಲವಾದುದನ್ನು ನೋಡಿ ಪ್ರಹಾರವನ್ನು ಇನ್ನೂ ಹೆಚ್ಚಿಸಿದನು. ಆದರೆ ಪಾಕಶಾಸನಿಯು ತನ್ನ ತಂದೆಯನ್ನು ಅಣಕಿಸುತ್ತಾ ಮಹಾವೇಗದ ಶರಗಳಿಂದ ಆ ಕಲ್ಲುಬಂಡೆಗಳ ಮಳೆಯನ್ನು ವಿಲಯಗೊಳಿಸಿದನು. ಶಕ್ರನು ಅವನನ್ನು ಶಿಕ್ಷಿಸಲು ತನ್ನ ಕೈಗಳಿಂದ ಮರಗಳೊಡನೆ ಮಂದರದ ಒಂದು ಮಹಾ ಶಿಖರವನ್ನು ಕಿತ್ತು ಪಾಂಡುನಂದನನ ಮೇಲೆ ಎಸೆದನು.  ಆಗ ಅರ್ಜುನನು ತುದಿಯು ಜ್ವಲಿಸುತ್ತಿರುವ ವೇಗ ಬಾಣಗಳಿಂದ ಆ ಗಿರಿಶೃಂಗವನ್ನು ಸಹಸ್ರ ತುಂಡುಗಳನ್ನಾಗಿ ಕತ್ತರಿಸಿದನು. ಬೀಳುತ್ತಿರುವ ಆ ಗಿರಿಯ ತುಂಡುಗಳು ಅರ್ಕಚಂದ್ರಗ್ರಹಗಳೊಡನೆ ನಭವೇ ಬೀಳುತ್ತಿದೆಯೋ ಎನ್ನುವಂತೆ ತೋರುತ್ತಿತ್ತು. ಆ ಮಹಾ ಶೈಲವು ವನದ ಮೇಲೆ ಬೀಳಲು ಅದರ ಘಾತದಿಂದ ಖಾಂಡವದಲ್ಲಿ ವಾಸಿಸುತ್ತಿದ್ದ ಇನ್ನೂ ಹೆಚ್ಚಿನ ಪ್ರಾಣಿಗಳು ಹತವಾದವು."

## ಮಯದರ್ಶನ

ಆಗ ಬೀಳುತ್ತಿರುವ ಶೈಲಕ್ಕೆ ಭಯಪಟ್ಟು ಖಾಂಡವವಾಸಿಗಳಾದ ನೂರಾರು ದಾನವರು, ರಾಕ್ಷಸರು, ನಾಗಗಳು, ಚಿರತೆಗಳು, ಕರಡಿಗಳು, ಕೊಬ್ಬಿದ ಆನೆಗಳು, ಹುಲಿಗಳು, ಕೇಸರಿ ಸಿಂಹಗಳು, ಜಿಂಕೆಗಳು,

ಎಮ್ಮೆಗಳು ಮತ್ತು ಇತರ ಭೂತಜಾತಿಗಳು ಹಾಗೂ ಪಕ್ಷಿಗಳು ಉದ್ವಿಗ್ನರಾಗಿ ಚೆಲ್ಲಾಪಿಲ್ಲಿ ಓಡಿದರು.  ಬೆಂಕಿಯು ಉರಿಯುತ್ತಿರುವುದನ್ನು ನೋಡುತ್ತಿದ್ದ ಆಯುಧಗಳಿಂದ ಸಿದ್ಧರಾಗಿದ್ದ ಕೃಷ್ಣರಿಬ್ಬರೂ ನಾದಶಬ್ಧ ಉತ್ಪಾತಗಳಿಂದ ಅವುಗಳನ್ನು ಕಾಡಿಸಿ ಕೆಳಗುರಿಳಿಸಿದರು. ಜನಾರ್ದನನು ತನ್ನ ತೇಜಸ್ಸಿನಿಂದ ಬೆಳಗುತ್ತಿದ್ದ ಚಕ್ರವನ್ನು ಪ್ರಯೋಗಿಸಿದನು. ಅದರಿಂದ ದಾನವ ನಿಶಾಚರರೊಡನೆ ಆ ಎಲ್ಲ ಕ್ಷುದ್ರ ಜಾತಿಯವರೂ ನೂರಾರು ಸಂಖ್ಯೆಗಳಲ್ಲಿ ತುಂಡಾಗಿ ಕ್ಷಣದಲ್ಲಿ ಬೆಂಕಿಗೆ ಬಿದ್ದರು. ಕೃಷ್ಣನ ಚಕ್ರದಿಂದ ಘಾತರಾದ ರಾಕ್ಷಸರು ತಮ್ಮ ಮಾಂಸ ಮತ್ತು ರಕ್ತಗಳಿಂದ ಆವೃತರಾಗಿ ಸಂಧ್ಯಾಕಾಲದ ಮೋಡಗಳಂತೆ ತೋರುತ್ತಿದ್ದರು. ವಾರ್ಷ್ಣೇಯನು ಕಾಲನಂತೆ ಸಹಸ್ರಾರು ಸಂಖ್ಯೆಗಳಲ್ಲಿ ಪಿಶಾಚ, ಪಕ್ಷಿ, ನಾಗ, ಮತ್ತು ಪಶುಗಳನ್ನು ಸಂಹರಿಸುತ್ತಾ ನಡೆದನು. ಅಮಿತ್ರಘಾತಿ ಕೃಷ್ಣನು ಯಾವ ಯಾವಾಗ ಆ ಚಕ್ರವನ್ನು ಪ್ರಯೋಗಿಸಿದರೂ ಅದು ಅನೇಕ ಜೀವಿಗಳನ್ನು ಸಂಹರಿಸಿ ಪುನಃ ಪುನಃ ಅವನ ಕೈಗೇ ಬಂದು ಸೇರುತ್ತಿತ್ತು. ಈ ರೀತಿ ಸರ್ವಸತ್ವಗಳನ್ನು ಸಂಹರಿಸುತ್ತಿರಲು ಆ ಸರ್ವಭೂತಾತ್ಮನು ಅತೀ ಉಗ್ರರೂಪನಾಗಿ ತೋರುತ್ತಿದ್ದನು. ಅಲ್ಲಿ ನೆರೆದಿದ್ದ ಸರ್ವ ದೇವತೆಗಳಲ್ಲಿ ಅಥವಾ ದಾನವರಲ್ಲಿ ಯುದ್ಧದಲ್ಲಿ ಕೃಷ್ಣಪಾಂಡವರನ್ನು ಜಯಿಸುವವರು ಯಾರೂ ಇರಲಿಲ್ಲ. ಸುರರು ಯಾವಾಗ ತಮ್ಮ ಬಲದಿಂದ ಆ ವನವನ್ನು ಸುಟ್ಟುಹೋಗುವುದರಿಂದ ರಕ್ಷಿಸಲು ಮತ್ತು ಬೆಂಕಿಯನ್ನು ಆರಿಸಲು

ಸಾಧ್ಯವಾಗಲಿಲ್ಲವೋ ಆಗ ಅವರು ಪರಾಂಙ್ಮುಖರಾದರು. ದೇವಗಣಗಳು ಹಿಂದಿರುಗಿ ಹೋಗುತ್ತಿದ್ದುದನ್ನು ನೋಡಿದ ಶತಕ್ರತುವು ಪ್ರೀತನಾಗಿ ಕೃಷ್ಣಪಾಂಡವರನ್ನು ಪ್ರಶಂಸಿಸುತ್ತಾ ಅಲ್ಲಿಯೇ ನಿಂತನು. ದೇವತೆಗಳು ನಿವೃತ್ತರಾಗಲು ಶತಕ್ರತುವನ್ನು ಉದ್ದೇಶಿಸಿ ಮಹಾಗಂಭೀರನಿಃಸ್ವನದಲ್ಲಿ ಒಂದು ಅಶರೀರವಾಣಿಯಾಯಿತು.

> "ನಿನ್ನ ಸಖ ಪನ್ನಗೋತ್ತಮ ತಕ್ಷಕನು ಖಾಂಡವ ದಹನದ ಕಾಲದಲ್ಲಿ ಕುರುಕ್ಷೇತ್ರಕ್ಕೆ ಹೋಗಿರುತ್ತಾನೆ. ಶಕ್ರ! ನನ್ನ ಮಾತುಗಳನ್ನು ಕೇಳು! ಯುದ್ಧದಲ್ಲಿ ನಿರತರಾದ ವಾಸುದೇವಾರ್ಜುನರನ್ನು ನೀನು ಗೆಲ್ಲಲು ಸಾಧ್ಯವಿಲ್ಲ. ಅವರು ದಿವಿಯಲ್ಲಿ ವಿಶ್ರುತರಾದ ನರನಾರಾಯಣ ದೇವರುಗಳು. ಈ ವೀರರ ಪರಾಕ್ರಮವೇನೆಂದು ನಿನಗೆ ಕೂಡ ತಿಳಿದಿದೆ. ಈ ದುರಾದರ್ಷ ಅಜಿತ ಪುರಾತನ ಋಷಿಸತ್ತಮರನ್ನು ಗೆಲ್ಲಲು ಸರ್ವ ಲೋಕದಲ್ಲಿ ಯಾರಿಗೂ ಶಕ್ಯವಿಲ್ಲ. ಅವರು ಯಕ್ಷ ರಾಕ್ಷಸ ಗಂಧರ್ವ ನರ ಕಿನ್ನರ ಪನ್ನಗಳ ಸಹಿತ ಸರ್ವ ಸುರಾಸುರರಿಗೆ ಪೂಜನೀಯರು. ವಾಸವ! ಆದುದರಿಂದ ಸುರರ ಸಹಿತ ನೀನು ಇಲ್ಲಿಂದ ಹೋಗಬೇಕು. ಮತ್ತು ವಿಧಿನಿರ್ಮಿತ ಈ ಖಾಂಡವ ವಿನಾಶನವನ್ನು ನೋಡು."

ಈ ಮಾತನ್ನು ಕೇಳಿ ಅದು ಸತ್ಯವನ್ನೇ ನುಡಿಯುತ್ತಿದೆ ಎನ್ನುವುದನ್ನು ತಿಳಿದ ಅಮರೇಶ್ವರನು ಕೋಪ ಮತ್ತು ಸಿಡುಕನ್ನು ತೋರೆದು ದಿವಕ್ಕೆ ತೆರಳಿದನು. ಮಹಾತ್ಮ ಶತಕ್ರತುವು ಹಿಂದಿರುಗುತ್ತಿರುವುದನ್ನು ನೋಡಿದ ದಿವೌಕಸರೂ ತ್ವರೆಮಾಡಿ ಅವನೊಂದಿಗೆ ಹಿಂದಿರುಗಿದರು. ದೇವತೆಗಳೊಡನೆ ಹಿಂದಿರುಗುತ್ತಿರುವ ದೇವರಾಜನನ್ನು ನೋಡಿ ವೀರ ವಾಸುದೇವಾರ್ಜುನರು ಸಿಂಹನಾದಗೈದರು. ದೇವರಾಜನು ಹೊರಟುಹೋಗಲು ಪ್ರಹೃಷ್ಟ ಕೃಷ್ಣ-ಪಾಂಡವರು ನಿರ್ವಿಶಂಕರಾದರು. ಪುನಃ ಅಗ್ನಿಯು ಸುಡಲು ತೊಡಗಿದನು. ಮಾರುತವು ಮೋಡಗಳನ್ನು ಹೇಗೋ ಹಾಗೆ ಸುರರನ್ನು ನಾಶಪಡಿಸಿದ ಅರ್ಜುನನು ತನ್ನ ಬಲ ಬಾಣಗಳಿಂದ ಖಾಂಡವದಲ್ಲಿ ವಾಸಿಸುತ್ತಿದ್ದ ಪ್ರಾಣಿಗಳನ್ನು ಕೊಂದು ಹಾಕಿದನು. ಅಲ್ಲಿರುವ ಯಾವುದೂ ಅಲ್ಲಿಂದ ಹೊರಗೆ ಹೋಗಲು ಶಕ್ಯವಿರಲಿಲ್ಲ. ಸವ್ಯಸಾಚಿಯು ಪ್ರಯೋಗಿಸಿದ ಶರಗಳು ಎಲ್ಲವನ್ನೂ ಕತ್ತರಿಸಿ ಕೆಳಗೆ ಬೀಳಿಸಿದವು. ರಣದಲ್ಲಿ ಇರುವವೆಲ್ಲವನ್ನೂ ಅಮೋಘವಾಗಿ ನಾಶಪಡಿಸುತ್ತಿದ್ದ ಅರ್ಜುನನನ್ನು ಮಹಾತ್ಮರೂ ನೋಡಲಿಕ್ಕಾಗುತ್ತಿರಲಿಲ್ಲ. ಇನ್ನು ಅವನೊಡನೆ ಕಾದಾಡುವವರು ಯಾರಿದ್ದರು? ಅವನು ನೂರು ಶರಗಳಿಂದ ಒಂದನ್ನು ಅಥವಾ ನೂರನ್ನು ಒಂದೇ ಶರದಿಂದ ಹೊಡೆಯುತ್ತಿರಲು ಅವೆಲ್ಲವೂ ಜೀವವನ್ನು ಕಳೆದುಕೊಂಡು ಕಾಲನಿಂದ ಹೊಡೆತ ತಿಂದವರಂತೆ ಅಗ್ನಿಯಲ್ಲಿ ಬಿದ್ದವು. ಬೆಂಕಿಯ ಸಂತಾಪವು ಹೆಚ್ಚುತ್ತಿರಲು ಅವುಗಳಿಗೆ

ದಡದ ಹಿಂದೆಯಾಗಲೀ ಅಥವಾ ವಿಷಮ ಪ್ರದೇಶಗಳಲ್ಲಿಯಾಗಲೀ ಅಥವಾ ಪಿತೃದೇವನಿವಾಸಗಳಲ್ಲಿಯಾಗಲೀ ಆಶ್ರಯ ದೊರೆಯಲಿಲ್ಲ. ಸಹಸ್ರಾರು ಭೂತಸಂಕುಲಗಳು ದೀನರಾಗಿ ಮಹಾಸ್ವರದಲ್ಲಿ ಕೂಗಿದವು, ಆನೆಗಳು ಮತ್ತು ಮೃಗಪಕ್ಷಿಗಳು ಚೀರಿದವು. ಅವುಗಳ ಶಬ್ಧದಿಂದ ಗಂಗೆ ಮತ್ತು ಸಾಗರಗಳಲ್ಲಿ ವಾಸಿಸುವವರು ಭಯಭೀತರಾದರು. ಮಹಾಬಾಹು ಅರ್ಜುನ ಮತ್ತು ಮಹಾಬಲಿ ಕೃಷ್ಣನನ್ನು, ಯುದ್ಧದಲ್ಲಿ ಎದುರಿಸುವುದಿರಲಿ, ನೋಡಲಿಕ್ಕೆ ಕೂಡ ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಅವರ ದಾರಿಯಲ್ಲಿ ಯಾರೇ ಬಂದರೂ ಅವರು ಅಲ್ಲಿಯೇ ಬೀಳುತ್ತಿದ್ದರು. ಹರಿಯು ಚಕ್ರದಿಂದ ರಾಕ್ಷಸರನನ್ನು, ದಾನವರನ್ನು ಮತ್ತು ನಾಗಗಳನ್ನು ಸಂಹರಿಸಿದನು. ಚಕ್ರದ ವೇಗದಿಂದ ವಿಭಿನ್ನಗೊಂಡ ಶಿರದೇಹಗಳುಳ್ಳ ಮಹಾಕಾಯರು ಉರಿಯುತ್ತಿರುವ ಬೆಂಕಿಯ ಬಾಯಲ್ಲಿ ಸತ್ತು ಬಿದ್ದರು. ಮಾಂಸ-ರಕ್ತದ ಹೊಳೆಯಿಂದ ಮತ್ತು ಕೊಬ್ಬಿನ ಹೊಳೆಯಿಂದ ಭುಗಿಲೆದ್ದ ವಹ್ನಿಯು ಹೊಗೆಯಿಲ್ಲದೆ ಆಕಾಶವನ್ನು ಮುಟ್ಟುತ್ತಿದೆಯೋ ಎನ್ನುವಂತೆ ತೋರುತ್ತಿತ್ತು. ಉರಿಯುತ್ತಿರುವ ಕಣ್ಣುಗಳ, ಉರಿಯುತ್ತಿರುವ ನಾಲಗೆಯ, ಉರಿಯುತ್ತಿರುವ ಮಹಾನನ ಊರ್ಧ್ವಕೇಶ, ಪಿಂಗಾಕ್ಷ ಹುತಾಶನನು ಪ್ರಾಣಿಗಳ ದೇಹಗಳನ್ನು ಕುಡಿದು ಕೃಷ್ಣಾರ್ಜುನರು ನೀಡಿದ ಆ ಸುಧೆಯನ್ನು ಪಡೆದು ತೃಪ್ತನಾಗಿ ಸಂತೋಷಗೊಂಡನು.

ಆಗ ತಕ್ಷಣವೇ ತಕ್ಷಕನ ನಿವೇಶನದಿಂದ ಹೊರಬರುತ್ತಿದ್ದ ಮಯ

ಎಂಬ ಹೆಸರಿನ ಅಸುರನನ್ನು ಮಧುಸೂದನನು ಕಂಡನು. ವಾಯುವೇ ಸಾರಥಿಯಾಗಿದ್ದ ಅಗ್ನಿಯು ಜಟಾಧರ ಬ್ರಾಹ್ಮಣನ ದೇಹವನ್ನು ಧರಿಸಿ ಗುಡುಗಿನಂತೆ ಗರ್ಜಿಸುತ್ತಾ ಅವನನ್ನು ಸುಡಲು ಬೆನ್ನಟ್ಟಿದನು. ಆಗ ವಾಸುದೇವನು ಅವನನ್ನು ಕೊಲ್ಲಲು ಚಕ್ರವನ್ನು ಹಿಡಿದು ಎದುರು ಬಂದನು. ಅವನು ಚಕ್ರವನ್ನು ಮೇಲೆತ್ತಿದುದನ್ನು ಮತ್ತು ಸುಡಲು ಕಾತರನಾಗಿದ್ದ ಹುತಾಶನನನ್ನು ನೋಡಿದ ಮಯನು "ಅರ್ಜುನ! ಸಹಾಯ ಮಾಡು!" ಎಂದು ಕೂಗಿದನು. ಅವನ ಭಯಭರಿತ ಧ್ವನಿಯನ್ನು ಕೇಳಿದ ಪಾರ್ಥ ಧನಂಜಯನು ಮಯನಿಗೆ ಪುನರ್ಜೀವವನ್ನು ನೀಡುತ್ತಿದ್ದಾನೋ ಎನ್ನುವಂತೆ "ಹೆದರಬೇಡ!" ಎಂದು ಉತ್ತರಿಸಿದನು. ನಮೂಚಿಯ ಭ್ರಾತರ ಮಯನಿಗೆ ಪಾರ್ಥನು ಅಭಯವನ್ನು ನೀಡಲು ದಾಶಾರ್ಹನು ಅವನನ್ನು ಕೊಲ್ಲಲು ಬಯಸಲಿಲ್ಲ ಮತ್ತು ಪಾವಕನು ಅವನನ್ನು ಸುಡಲಿಲ್ಲ. ಆ ವನವು ಸುಡುತ್ತಿರುವಾಗ ಆರುಮಂದಿ ಸುಡಲಿಲ್ಲ - ಅಶ್ವಸೇನ, ಮಯ ಮತ್ತು ನಾಲ್ಕು ಸಾರಂಗಗಳು.

ತಿಗ್ಮಾಂಶು ಭಗವಾನನಾದರೂ ಜಗತ್ತಿಗೇ ಭಯವನ್ನುಂಟುಮಾಡುವಂತೆ ಇಡೀ ಖಾಂಡವವನವನ್ನು ಕೃಷ್ಣರಿಬ್ಬರ ಸಹಾಯದಿಂದ ಸುಟ್ಟನು. ಮಾಂಸ, ಮೇದ ಮತ್ತು ರಕ್ತವನ್ನು ಕುಡಿದ ಪಾವಕನು ಪರಪ ತೃಪ್ತನಾಗಿ ಬಂದು ಅರ್ಜುನನನಿಗೆ ಕಾಣಿಸಿಕೊಂಡನು. ಆಗ ಮರುದ್ಗಣಗಳಿಂದ ಆವೃತ



ಭಗವಾನ್ ಸುರೇಶ್ವರನು ಅಂತರಿಕ್ಷದಿಂದ ಕೆಳಗಿಳಿದುಬಂದು ಪಾರ್ಥ ಮಾಧವರನ್ನುದ್ದೇಶಿಸಿ ಮಾತನಾಡಿದನು:

"ಅಮರರಿಗೂ ದುಷ್ಕರವಾಗಿರುವ ಕೃತ್ಯವನ್ನು ನೀವಿಬ್ಬರೂ ಮಾಡಿದ್ದೀರಿ. ನಾನು ಸಂತುಷ್ಟನಾಗಿದ್ದೇನೆ. ದುರ್ಲಭ

ಅಮಾನುಷ ವರಗಳನ್ನು ಕೇಳಿ.”

ಪಾರ್ಥನಾದರೋ ಶಕ್ರನಿಂದ ಸರ್ವ ಶಸ್ತ್ರಗಳನ್ನು ಕೇಳಿದನು. ಆದರೆ ಶಕ್ರನು ಅವುಗಳನ್ನು ಪಡೆಯುವ ಕಾಲದ ಕುರಿತು ಹೇಳಿದನು.

“ಪಾಂಡವ! ಭಗವಾನ್ ಮಹಾದೇವನು ನಿನ್ನ ಮೇಲೆ ಯಾವಾಗ ಪ್ರಸನ್ನನಾಗುತ್ತಾನೋ ಆಗ ಸರ್ವ ಅಸ್ತ್ರಗಳನ್ನು ನಿನಗೆ ನೀಡುತ್ತೇನೆ. ಕುರುನಂದನ! ನನಗೇ ಆ ಕಾಲವು ತಿಳಿಯುತ್ತದೆ. ನಿನ್ನ ಮಹಾ ತಪಸ್ಸಿನ ಪರಿಣಾಮವಾಗಿ ನಾನು ನಿನಗೆ ಅವೆಲ್ಲವನ್ನೂ ಕೊಡುತ್ತೇನೆ. ಧನಂಜಯ! ಆಗ್ನೇಯ, ವಾಯವ್ಯ ಮೊದಲಾದ ಸರ್ವವನ್ನೂ ಮತ್ತು ನನ್ನ ಸರ್ವವವನ್ನೂ ಪಡೆಯುವೆ.”

ವಾಸುದೇವನು ಪಾರ್ಥನಲ್ಲಿದ್ದ ಪ್ರೀತಿಯು ಶಾಶ್ವತವಾಗಿರುವಂತೆ ಕೇಳಿಕೊಂಡನು. ದೇವೇಂದ್ರನು ಪ್ರೀತಿಯಿಂದ ಆ ವರವನ್ನಿತ್ತನು. ಅವರಿಬ್ಬರಿಗೆ ವರವನ್ನಿತ್ತು ಪ್ರೀತನಾದ ಮರುತ್ಪತಿಯು ದೇವತೆಗಳೊಂದಿಗೆ ಹುತಾಶನನನ್ನು ಬೀಳ್ಕೊಂಡು ತ್ರಿದಿವಕ್ಕೆ ಹಿಂದಿರುಗಿದನು. ಪಾವಕನಾದರೂ ಮೃಗಪಕ್ಷಿಗಳ ಸಹಿತ ಆ ವನವನ್ನು ಆರು ದಿನಗಳು ಸುಟ್ಟು ಸುತರ್ಪಿತನಾಗಿ ನಿಂತನು. ಮಾಂಸವನ್ನು ತಿಂದು ಮೇದ ರುಧಿರಗಳನ್ನು ಕುಡಿತು ಪರಮಪ್ರೀತನಾದ ಅವನು ಹೇಳಿದನು:

“ನೀವಿಬ್ಬರೂ ಪುರುಷವ್ಯಾಘ್ರರು ಯಥಾಸುಖವಾಗಿ ನನಗೆ

ತೃಪ್ತಿನೀಡಿದ್ದೀರಿ. ವೀರರೇ! ನಿಮ್ಮನ್ನು ಬೀಳ್ಕೊಡುತ್ತೇನೆ. ಇಷ್ಟಬಂದಲ್ಲಿ ಹೋಗಿರಿ.”

ಅರ್ಜುನ, ವಾಸುದೇವ ಮತ್ತು ದಾನವ ಮಯ ಈ ಮೂವರೂ ಮಹಾತ್ಮ ಪಾವಕನನ್ನು ಬೀಳ್ಕೊಂಡು ಸುತ್ತಾಡಿ ರಮಣೀಯ ನದೀತೀರದಲ್ಲಿ ಒಟ್ಟಿಗೇ ಕುಳಿತುಕೊಂಡರು.

# ಸಭಾ ಪರ್ವ




# ಸಭಾಕ್ರಿಯ

## ಮಯನಿಂದ ಸಭಾಭವನ ನಿರ್ಮಾಣ ಕಾರ್ಯಾರಂಭ

**ನಂತರ ಮಯನು ಅಂಜಲಿಬದ್ಧನಾಗಿ ಶ್ಲಾಘನೀಯ ಮಾತುಗಳಿಂದ ಪುನಃ ಪುನಃ ಪೂಜಿಸುತ್ತಾ ವಾಸುದೇವನ ಸನ್ನಿಧಿಯಲ್ಲಿ ಪಾರ್ಥನನ್ನು ಉದ್ದೇಶಿಸಿ ಹೇಳಿದನು:**

**"ಕುಂತಿಪುತ್ರ! ಸಂಕೃದ್ಧ ಕೃಷ್ಣ ಮತ್ತು ಧಗಿಸಲು ಸಿದ್ಧ ಪಾವಕನಿಂದ ನನ್ನನ್ನು ರಕ್ಷಿಸಿದ್ದೀಯೆ. ನಿನಗಾಗಿ ನಾನು ಏನು**



ಮಾಡಲಿ? ಹೇಳು."

ಅರ್ಜುನನು ಹೇಳಿದನು:

"ನೀನು ಸರ್ವವನ್ನೂ ಮಾಡಿದ್ದೀಯೆ! ಮಂಗಳವಾಗಲಿ! ಇನ್ನು ನೀನು ಹೋಗಬಹುದು. ನಮ್ಮ ಮೇಲೆ ನಿನ್ನ ಪ್ರೀತಿ ಯಾವಾಗಲೂ ಇರಲಿ. ನಿನ್ನ ಮೇಲೆಯೂ ನಮ್ಮ ಪ್ರೀತಿ ಸದಾ ಇರುತ್ತದೆ."

ಮಯನು ಹೇಳಿದನು:

"ಭರತ! ಪುರುಷರ್ಷಭನಂತೆ ಮಾತನಾಡಿದ್ದೀಯೆ. ಆದರೂ, ಪ್ರೀತಿಪೂರ್ವಕವಾಗಿ ನಿನಗೋಸ್ಕರ ಏನನ್ನಾದರೂ ಮಾಡಲು ಇಚ್ಛಿಸುತ್ತೇನೆ. ನಾನೊಬ್ಬ ಮಹಾಕವಿ. ದಾನವರ ವಿಶ್ವಕರ್ಮನಿದ್ದಂತೆ. ಆದ್ದರಿಂದ ನಿನಗೋಸ್ಕರ ಏನನ್ನಾದರೂ ಮಾಡಲು ಇಚ್ಛಿಸುತ್ತೇನೆ."

ಅರ್ಜುನನು ಹೇಳಿದನು:

"ನಾನು ನಿನ್ನನ್ನು ಪ್ರಾಣಸಂಕಟದಿಂದ ವಿಮುಕ್ತಗೊಳಿಸಿದೆ ಎಂದು ತಿಳಿದಿರುವೆ. ಹಾಗಿದ್ದರೂ ನಾನು ನಿನ್ನಿಂದ ಏನನ್ನು ಮಾಡಿಸಿಕೊಳ್ಳಲೂ ಶಕ್ಯನಿಲ್ಲ. ದಾನವ! ಹಾಗೆಂದು ನಿನ್ನ ಇಚ್ಛೆಯನ್ನು ಭಂಗಗೊಳಿಸಲೂ ನನಗೆ ಇಷ್ಟವಿಲ್ಲ. ಕೃಷ್ಣನಿಗೋಸ್ಕರ ಏನನ್ನಾದರೂ ಮಾಡು. ಅದೇ ನನಗೆ ಪ್ರತೀಕಾರ ಮಾಡಿದಂತಾಗುತ್ತದೆ."

ಮಯನು ವಾಸುದೇವನನ್ನು ಒತ್ತಾಯಿಸಲು ಅವನು ಏನನ್ನು ಕೇಳಬೇಕೆಂದು ಮುಹೂರ್ತಕಾಲ ಯೋಚಿಸಿ ಪ್ರಚೋದಿಸಿದನು:

"ದೈತ್ಯ! ಧರ್ಮರಾಜನಿಗೆ ತಕ್ಕದು ಎಂದು ನಿನಗನ್ನಿಸುವ ಒಂದು ಸಭಾಭವನವನ್ನು ನಿರ್ಮಿಸು! ನೋಡಿ ವಿಸ್ಮಿತರಾದ ಈ ಮನುಷ್ಯಲೋಕದ ಯಾವ ಮಾನವರಿಂದಲೂ

ಅದರಂತಹುದನ್ನು ಕಟ್ಟಿಸಲು ಅಸಾಧ್ಯವಾಗುವ ಅದ್ಭುತ ಸಭಾಭವನವನ್ನು ನಿರ್ಮಿಸು. ದೇವತೆಗಳ, ಅಸುರರ ಮತ್ತು ಮನುಷ್ಯರ ವಿನ್ಯಾಸಗಳು ಕಂಡುಬರುವಂತಹ ಒಂದು ಸಭಾಭವನನ್ನು ನಿರ್ಮಾಣಮಾಡು!”

ಈ ಮಾತನ್ನು ಕೇಳಿದ ಮಯನು ಸಂತುಷ್ಟನಾಗಿ, ದೇವತೆಗಳ ವಿಮಾನದಂತಿರುವ ಸಭಾಭವನವನ್ನು ಪಾಂಡವರಿಗಾಗಿ ನಿರ್ಮಿಸಲು ಸಂತೋಷದಿಂದ ಒಪ್ಪಿಕೊಂಡನು. ಅನಂತರ, ಕೃಷ್ಣ ಮತ್ತು ಪಾರ್ಥರು ನಡೆದದ್ದೆಲ್ಲವನ್ನೂ ಯಥಾವತ್ತಾಗಿ ಧರ್ಮರಾಜ ಯುಧಿಷ್ಠಿರನಿಗೆ ವರದಿ ಮಾಡಿದರು ಮತ್ತು ಮಯನಿಗೆ ಭೆಟ್ಟಿ ಮಾಡಿಸಿದರು. ಯುಧಿಷ್ಠಿರನು ಅವನಿಗೆ ಯಥಾರ್ಹ ಪೂಜಿಸಿದನು ಮತ್ತು ಮಯನೂ ಎಲ್ಲ ಸತ್ಕಾರಗಳನ್ನೂ ಸತ್ಕೃತನಾಗಿ ಸ್ವೀಕರಿಸಿದನು. ನಂತರ ಆ ದೈತ್ಯನು ಪಾಂಡುಪುತ್ರರಿಗೆ ಪೂರ್ವಕಾಲದಲ್ಲಿ ಅಲ್ಲಲ್ಲಿ ನಡೆದ ದೇವಚರಿತ್ರೆಯನ್ನು ತಿಳಿಸಿದನು. ಸ್ವಲ್ಪ ಕಾಲ ವಿಶ್ರಾಂತಿ ಪಡೆದ ಆ ವಿಶ್ವಕರ್ಮನು ಮಹಾತ್ಮ ಪಾಂಡವರಿಗೋಸ್ಕರ ಸಭಾಭವನದ ಯೋಜನೆಯನ್ನು ತಯಾರಿಸಿ ಕಟ್ಟಲು ಪ್ರಾರಂಭಿಸಿದನು. ಪಾರ್ಥರ ಮತ್ತು ಮಹಾತ್ಮ ಕೃಷ್ಣನ ಅಭಿಪ್ರಾಯದಂತೆ ಆ ಮಹಾತೇಜಸ್ವಿ, ಕೃತಕೌತಕಿ, ಮಂಗಲಕರ, ವೀರ್ಯವಂತ ಅಸುರನು ಪುಣ್ಯಕಾಲದಲ್ಲಿ ಸಾವಿರಾರು ದ್ವಿಜಶ್ರೇಷ್ಠರಿಗೆ ಪಾಯಸ ಮತ್ತು ಬಹುವಿಧ ಧನವನ್ನಿತ್ತು ತೃಪ್ತಿಪಡಿಸಿ

ಸರ್ವಋತುಗುಣಸಂಪನ್ನ, ದಿವ್ಯರೂಪಿ ಹತ್ತು ಸಾವಿರ ಕಿಷ್ಕು ಮನೋಹರ ಭೂಮಿಯನ್ನು ಅಳತೆಮಾಡಿದನು.

## ಇಂದ್ರಪ್ರಸ್ಥದಿಂದ ದ್ವಾರಕೆಗೆ ಶ್ರೀಕೃಷ್ಣನ ಪ್ರಯಾಣ



ಖಾಂಡವಪ್ರಸ್ಥದಲ್ಲಿ ಸುಖವಾಗಿ ವಾಸವಾಗಿದ್ದು, ಪ್ರೀತಿಪರ ಪಾರ್ಥರಿಂದ ಪೂಜನಾರ್ಹನಾಗಿ ಪೂಜಿಸಿಕೊಂಡ ಜನಾರ್ದನನು ತಂದೆಯನ್ನು ಕಾಣುವ ಮನಸ್ಸುಳ್ಳವನಾಗಿ, ಹೊರಡಲು ಇಚ್ಛಿಸಿದನು. ವಿಶಾಲನೇತ್ರ ಜಗದ್ವಂದ್ಯನು ಧರ್ಮರಾಜ ಮತ್ತು ಪೃಥಾರಿಗೆ ಬೀಳ್ಕೊಡುತ್ತಾ ತಂದೆಯ ಸೋದರಿಯ ಪಾದಗಳಲ್ಲಿ ತಲೆಯನ್ನಿಟ್ಟು ವಂದಿಸಿದನು. ಅವಳು ಕೇಶವನ ಶಿರವನ್ನು ಆಘ್ರಾಣಿಸಿ, ತೊಟ್ಟಿ ಹಿಡಿದಳು. ನಂತರ ಮಹಾಯಶ ಕೃಷ್ಣನು ತನ್ನ ತಂಗಿಯ ಬಳಿ

ಹೋದನು. ಅವಳನ್ನು ನೋಡಿದ ಹೃಷೀಕೇಶನು ಪ್ರೀತಿಯಿಂದ ಕಣ್ಣೀರು ತುಂಬಿದವನಾದನು. ಭಗವಂತನು ಭದ್ರೆ ಭದ್ರಭಾಷಿಣಿ ಸುಭದ್ರೆಗೆ ಅರ್ಥಪೂರ್ಣ, ತತ್ವಪೂರ್ಣ, ಸಂಕ್ಷಿಪ್ತ ಹಿತ ಮಾತುಗಳನ್ನಾಡಲು ಅವಳು ಸ್ವ-ಜನರಿಗೆ ಸಂದೇಶಗಳನ್ನು ಕಳುಹಿಸಿಸುತ್ತಾ ಅವನಿಗೆ ಪುನಃ ಪುನಃ ಶಿರಸಾ ವಂದಿಸಿದಳು. ಭಾಮಿನಿ ಸುಭದ್ರೆಯನ್ನು ಬೀಳ್ಕೊಂಡ ನಂತರ ಜನಾರ್ದನನು ಕೃಷ್ಣೆ ಮತ್ತು ಧೌಮ್ಯರನ್ನು ನೋಡಲು ಹೋದನು. ಪುರುಷಸತ್ತಮ ಜನಾರ್ದನನು ಧೌಮ್ಯನಿಗೆ ಯಥಾವತ್ತಾಗಿ ವಂದಿಸಿದನು. ಮತ್ತು ದ್ರೌಪದಿಗೆ ಸಾಂತ್ವನವನ್ನು ನೀಡಿ, ಅವಳಿಂದ ಬೀಳ್ಕೊಂಡನು. ನಂತರ ಆ ಧೀಮಂತ ಬಲಶಾಲಿಯು, ಪಾರ್ಥನ ಸಹಿತ ಸಹೋದರರ ಬಳಿ ಬಂದನು; ಐವರು ಸಹೋದರರಿಂದ ಸುತ್ತುವರಿಯಲ್ಪಟ್ಟ ಕೃಷ್ಣನು ಅಮರರಿಂದ ಸುತ್ತುವರಿಯಲ್ಪಟ್ಟ ಶಕ್ರನಂತೆ ಕಂಡನು. ಯದುಪುಂಗವನು ಮಾಲೆ, ಜಪ, ನಮಸ್ಕಾರ, ಮತ್ತು ವಿವಿಧ ಗಂಧಗಳಿಂದ ದೇವ-ದ್ವಿಜರನ್ನು ಪೂಜಿಸಿದನು. ಈ ಎಲ್ಲ ಕಾರ್ಯಗಳನ್ನೂ ಮುಗಿಸಿದ ನಂತರ ಶ್ರೇಷ್ಠನು ಹೊರಟು, ಸ್ವಸ್ತಿ ವಾಚನ ಮಾಡುತ್ತಿದ್ದ ವಿಪ್ರರೆಲ್ಲರಿಗೂ ಮೊಸರಿನ ಪಾತ್ರೆ, ಫಲಾಕ್ಷತೆ, ಮತ್ತು ಅರಳನ್ನು ನೀಡಿ, ಪ್ರದಕ್ಷಿಣೆ ಮಾಡಿದನು. ಗರುಡನ ಚಿಹ್ನೆಯನ್ನೊಳಗೊಂಡ ಧ್ವಜವನ್ನು ಹೊತ್ತ ಕಾಂಚನ ರಥವನ್ನು ಏರಿ, ಗದಾ, ಚಕ್ರ, ಖಡ್ಗ ಮತ್ತು ಇತರ ಆಯುಧಗಳನ್ನು ಧರಿಸಿದನು. ಉತ್ತಮ ತಿಥಿ, ನಕ್ಷತ್ರ ಮತ್ತು ಮುಹೂರ್ತದಲ್ಲಿ ಪುಂಡರೀಕಾಕ್ಷನು

ಸೈನ್ಯ-ಸುಗ್ರೀವ ವಾಹನನಾಗಿ ಹೊರಟನು. ಪ್ರೇಮಭಾವದಿಂದ ರಾಜ ಯುಧಿಷ್ಠಿರನು ಅವನನ್ನು ಅನುಸರಿಸಿ ರಥವನ್ನೇರಿ, ಉತ್ತಮ ಸಾರಥಿ ದಾರುಕನನ್ನು ಸರಿಸಿ, ಸ್ವಯಂ ಕುರುಪತಿಯೇ ಕಡಿವಾಣವನ್ನು ಹಿಡಿದನು. ಅರ್ಜುನನೂ ಸಹ ರಥವನ್ನೇರಿ, ಚಿನ್ನದ ದಂಡದ ಚಾಮರವನ್ನು ಅವನ ಶಿರದ ಸುತ್ತ ಸೂರ್ಯ ಪ್ರದಕ್ಷಿಣೆಯಂತೆ ಬೀಸಿದನು. ವಿಜಯೀ ಭೀಮಸೇನನೂ ಕೂಡ ಅವಳಿಗಳ ಸಹಿತ ಋತ್ವಿಕರು ಮತ್ತು ಪೌರಜನರಿಂದ ಸುತ್ತುವರಿಯಲ್ಪಟ್ಟ ಕೃಷ್ಣನನ್ನು ಅನುಸರಿಸಿದನು. ಸಹೋದರರಿಂದ ಅನುಸರಿಸಲ್ಪಟ್ಟ ಪರವೀರವಿನಾಶಿ ಕೇಶವನು ಪ್ರಿಯ ಶಿಷ್ಯರ ಮಧ್ಯದಲ್ಲಿರುವ ಗುರುವಿನಂತೆ ಶುಶೋಭಿಸಿದನು. ಗೋವಿಂದನು ಪಾರ್ಥನನ್ನು ಬಿಗಿದಪ್ಪಿ, ಅತಿ ದುಃಖದಿಂದ ಬೀಳ್ಕೊಟ್ಟನು ಮತ್ತು ಯುಧಿಷ್ಠಿರ-ಭೀಮಸೇನರಿಗೆ ವಂದಿಸಿದನು. ಯಮಳರು ಅವನನ್ನು ಬಾಹುಗಳಿಂದ ಬಿಗಿದಪ್ಪಿ ಬೀಳ್ಕೊಟ್ಟರು. ಹೀಗೆ ಪಾಂಡವರನ್ನು ಬೀಳ್ಕೊಟ್ಟು, ಹಿಂಬಾಲಿಸಿ ಬಂದಿದ್ದವರೆಲ್ಲರಲ್ಲೂ ಮರಳಿ ಕಳುಹಿಸಿ, ಕೃಷ್ಣನು ಇನ್ನೊಬ್ಬ ಪುರಂದರನಂತೆ ತನ್ನ ನಗರಕ್ಕೆ ಪ್ರಯಾಣಿಸಿದನು. ಕಣ್ಮರೆಯಾಗುವವರೆಗೂ ಕೃಷ್ಣನನ್ನು ಕಣ್ಣಿನಲ್ಲಿಯೇ ಹಿಂಬಾಲಿಸಿ, ನಂತರ ಆ ಪ್ರೀತಿಸಮನ್ವಿತನನ್ನು ತಮ್ಮ ತಮ್ಮ ಮನಸ್ಸಿನಲ್ಲಿಯೇ ಹಿಂಬಾಲಿಸಿದರು. ಅವರೆಲ್ಲರೂ ಕೇಶವದರ್ಶನಕ್ಕಾಗಿ ಅತೃಪ್ತ ಮನಸ್ಸಿನವರಾಗಿದ್ದಂತೆ, ಪ್ರಿಯದರ್ಶನ ಶೌರಿಯು ಶೀಘ್ರದಲ್ಲಿಯೇ ಅವರ ಕಣ್ಣಿಂದ ಅಂತರ್ಧಾನನಾದನು. ಗೋವಿಂದನ ಜೊತೆ ತಮ್ಮ

ಮನಸ್ಸುಗಳನ್ನೂ ಕಳುಹಿಸಿಕೊಟ್ಟ ಪುರುಷರ್ಷಭ ಪಾರ್ಥರೆಲ್ಲರೂ ತಮ್ಮ ನಗರಕ್ಕೆ ಮರಳಿದರು ಮತ್ತು ಸಮಯದಲ್ಲಿ ಕೃಷ್ಣನು ತನ್ನ ರಥದಲ್ಲಿ ದ್ವಾರಕೆಯನ್ನು ತಲುಪಿದನು.

## ಮಯಸಭೆಯ ನಿರ್ಮಾಣ

ವಿಜಯಿಗಳಲ್ಲಿ ಶ್ರೇಷ್ಠ ಪಾರ್ಥ ಅರ್ಜುನನಿಗೆ ಮಯನು ಹೇಳಿದನು:

> “ನಾನು ಈಗ ಹೊರಡುತ್ತಿದ್ದೇನೆ. ಬೇಗನೆ ಹಿಂದಿರುಗಿಬಿಡುತ್ತೇನೆ. ನನ್ನನ್ನು ಕೇಳು. ಕೈಲಾಸದ ಉತ್ತರದ ಮೇರುಪರ್ವತದಲ್ಲಿ ಎಲ್ಲ ದಾನವರೂ ಯಾಗಮಾಡಬೇಕೆಂದಿದ್ದಾಗ ನಾನು ರಮ್ಯ ಬಿಂದು ಸರೋವರದ ಬಳಿ ಒಂದು ಮಣಿಮಯ ಭಂಡಾರವನ್ನು ರಚಿಸಿದ್ದೆ. ಅದನ್ನು ಸತ್ಯಸಂಧ ವೃಷಪರ್ವನ ಸಭೆಯಲ್ಲಿ ಇಟ್ಟಿದ್ದೆ. ಅದು ಇನ್ನೂ ಅಲ್ಲಿ ಇದ್ದರೆ ನಾನು ಹೋಗಿ ತೆಗೆದುಕೊಂಡು ಬರುತ್ತೇನೆ. ಅದರಿಂದ ಯಶಸ್ವಿನಿ ಪಾಂಡವನಿಗಾಗಿ ಎಲ್ಲರ ಮನಸ್ಸನ್ನೂ ಅಹ್ಲಾದಿಸುವ ಸರ್ವರತ್ನಭೂಷಿತ ಸುಂದರ ಸಭೆಯನ್ನು ನಿರ್ಮಿಸುತ್ತೇನೆ! ಬಿಂದುಸರೋವರದಲ್ಲಿ ರಾಜ ಯೌವನಾಶ್ವನು ರಣದಲ್ಲಿ ರಿಪುಗಳನ್ನು ಸಂಹರಿಸಿ ಇಟ್ಟ ಶ್ರೇಷ್ಠ ಗದೆಯೊಂದಿದೆ. ಅದು ಭಾರವಾಗಿದೆ, ದೊಡ್ಡದಾಗಿದೆ. ಸುಂದರ, ಸುವರ್ಣಬಿಂದುಗಳಿಂದ ಅಲಂಕೃತಗೊಂಡು

ಸುಂದರವಾಗಿದೆ. ಧೃಡವಾಗಿದ್ದು ಶತಸಹಸ್ರ ಸೇನೆಯಲ್ಲಿ ಎಲ್ಲರನ್ನೂ ಸಂಹರಿಸಬಲ್ಲದ್ದು. ನಿನಗೆ ಗಾಂಡೀವವು ಹೇಗೋ ಹಾಗೆ ಭೀಮನಿಗೆ ಅದು ಅನುರೂಪವಾದದ್ದು. ಮತ್ತು ವರುಣನ ಸುಘೋಷದಿಂದೊಡಗೂಡಿದ ದೇವದತ್ತ ಮಹಾಶಂಖವೂ ಇದೆ. ಇವೆಲ್ಲವನ್ನು ನಿನಗೆ ತಂದು ಕೊಡುತ್ತೇನೆ. ಅದರಲ್ಲಿ ಸಂಶಯವೇ ಇಲ್ಲ!"

ಪಾರ್ಥನಲ್ಲಿ ಈ ರೀತಿ ಮಾತನಾಡಿ ಆ ಅಸುರನು ಆಗ್ನೇಯ ದಿಕ್ಕಿನಲ್ಲಿ ಹೋದನು. ಕೈಲಾಸದ ಉತ್ತರದಲ್ಲಿ ಮೈನಾಕ ಪರ್ವತದ ಕಡೆ ಹಿರಣ್ಮಯ ಶಿಖರವನ್ನು ಹೊಂದಿದ ಒಂದು ಪೂಜನೀಯ ಮಣಿಮಯ ಮಹಾಗಿರಿಯಿದೆ. ಅಲ್ಲಿಯೇ ರಾಜ ಭಗೀರಥನು ಬಹಳ ವರ್ಷಗಳು ಭಾಗೀರಥಿ ಗಂಗೆಯನ್ನು ನೋಡುತ್ತಾ ವಾಸಿಸುತ್ತಿದ್ದ ಬಿಂದು ಎಂಬ ಹೆಸರಿನ ರಮ್ಯ ಸರೋವರವಿದೆ. ಅಲ್ಲಿಯೇ ಮಹಾತ್ಮ ಸರ್ವಭೂತೇಶ್ವರನು ಯಾಗ ಮಂಟಪದ ಮಣಿಮಯ ಸ್ಥಂಭಗಳನ್ನು ಮತ್ತು ಹಿರಣ್ಮಯ ಯಾಗ ಕುಂಡವನ್ನು, ಸುಂದರವಾಗಿ ಕಾಣಲಿಕ್ಕೆಂದೇ ಹೊರತು ದೃಷ್ಟಾಂತವನ್ನು ನೀಡಲಿಕ್ಕಲ್ಲ, ರಚಿಸಿ ಒಂದು ನೂರು ಮುಖ್ಯ ಯಾಗಗಳನ್ನು ಮಾಡಿದ್ದನು. ಇದೇ ಸ್ಥಳದಲ್ಲಿ ಶಚೀಪತಿ ಸಹಸ್ರಾಕ್ಷನು ಸಿದ್ಧಿಯನ್ನು ಪಡೆದನು. ಅಲ್ಲಿಯೇ ತಿಗ್ಮತೇಜಸ್ವಿ ಭೂತಪತಿಯು ಸನಾತನ ಸರ್ವಲೋಕಗಳನ್ನೂ ಸೃಷ್ಟಿಸಿ ಸಹಸ್ರಾರು ಭೂತಗಳಿಂದ ಸುತ್ತುವರೆದು

ಉಪಾಸಿತನಾಗಿದ್ದನು. ಅಲ್ಲಿಯೇ ನರ ನಾರಾಯಣರು, ಬ್ರಹ್ಮ, ಯಮ, ಮತ್ತು ಐದನೆಯದಾಗಿ ಸ್ಥಾಣುವು ಸಹಸ್ರಯುಗಗಳಿಗೊಮ್ಮೆ ಸತ್ರವನ್ನು ನಡೆಸುತ್ತಾರೆ. ಅದೇ ಸ್ಥಳದಲ್ಲಿ ವಾಸುದೇವನು ಸಹಸ್ರವರ್ಷಗಳ ಸತ್ರವನ್ನು ಶ್ರದ್ಧೆಯಿಂದ ಸತತವಾಗಿ ಶಿಷ್ಟರಿಗೆ ಕಲಿಸಲೋಸುಗ ಆಯೋಜಿಸುತ್ತಾನೆ. ಅಲ್ಲಿ ಕೇಶವನು ಸಹಸ್ರಾರು ಸಂಖ್ಯೆಗಳಲ್ಲಿ ಸುವರ್ಣಮಾಲೆಗಳಿಂದಲಂಕೃತ ಕಂಬಗಳನ್ನೂ ಮತ್ತು ಹೊಳೆಯುತ್ತಿರುವ ಯಜ್ಞವೇದಿಕೆಗಳನ್ನೂ ಕೊಟ್ಟಿದ್ದನು. ಅಲ್ಲಿಗೆ ಹೋಗಿ ಆ ರಾಕ್ಷಸನು ಗದೆ, ಶಂಖ, ಮತ್ತು ವೃಷಪರ್ವನಲ್ಲಿದ್ದ ಸ್ಫಟಿಕ ಸಭಾದ್ರವ್ಯಗಳೆಲ್ಲವನ್ನೂ ಕಿಂಕರರ ಸಹಾಯದಿಂದ ಎತ್ತಿಕೊಂಡನು. ಅವೆಲ್ಲವನ್ನೂ ತೆಗೆದುಕೊಂಡು ಬಂದು ಅವನು ಸುರರದ್ದೋ ಎಂದು ತೋರುವ, ಅಪ್ರತಿಮ, ದಿವ್ಯ, ಮಣಿಮಯ, ಮೂರೂ ಲೋಕಗಳಲ್ಲಿಯೂ ವಿಶ್ರುತ ಶುಭ ಸಭೆಯ ನಿರ್ಮಾಣದಲ್ಲಿ ತೊಡಗಿದನು. ಅವನು ಅಪ್ರತಿಮ ಗದೆಯನ್ನು ಭೀಮಸೇನನಿಗೆ ಕೊಟ್ಟನು ಮತ್ತು ಅನುತ್ತಮ ದೇವದತ್ತ ಶಂಖವನ್ನು ಪಾರ್ಥನಿಗಿತ್ತನು.

ನೂರು ಗಟ್ಟಿ ಸ್ತಂಭಗಳಿಂದ ಕೂಡಿದ ಆ ಸಭೆಯು ಪರಿಧಿಯಲ್ಲಿ ಹತ್ತು ಸಾವಿರ ಕಿಷ್ಕುಗಳದ್ದಾಗಿತ್ತು. ಆ ಅತಿ ದಿವ್ಯ ಸುಂದರ ಸಭೆಯು ಅಗ್ನಿ, ಸೂರ್ಯ ಅಥವಾ ಚಂದ್ರನಂತೆ ಹೊಳೆಯುತ್ತಿತ್ತು. ಕಾಂತಿಯಲ್ಲಿ ಸೂರ್ಯನ ಕಾಂತಿಯನ್ನೂ ಮೀರುತ್ತಿದೆಯೋ ಎಂಬಂತಿದ್ದ ಅದು ದೇವತೆಗಳ ವರ್ಚಸ್ಸಿನಿಂದ ಉರಿಯುತ್ತಿದೆಯೋ ಎಂಬಂತೆ

ಹೊಳೆಯುತ್ತಿತ್ತು. ಅತಿ ಎತ್ತರದ ಆ ವಿಸ್ತಾರ ಸುಂದರ ಸಭೆಯು ಪರ್ವತ ಅಥವಾ ಮೋಡಗಳಂತೆ ಆಕಾಶವನ್ನು ಮುಟ್ಟಿ ನಿಂತಿತ್ತು ಮತ್ತು ನೋಡಿದವರ ಆಯಾಸವನ್ನೆಲ್ಲ ನೀಗಿಸುತ್ತಿತ್ತು. ಉತ್ತಮ ದ್ರವ್ಯಗಳಿಂದ ನಿರ್ಮಿತವಾಗಿ ಮಣಿಯುಕ್ತ ಗೋಡೆಗಳಿಂದ ಸುತ್ತುವರೆಯಲ್ಪಟ್ಟ ಅದು ವಿಶ್ವಕರ್ಮನ ಸುಕೃತದಿಂದ ಬಹು ರತ್ನ ಮತ್ತು ಬಹು ಧನಗಳಿಂದ ಭರಿತವಾಗಿತ್ತು. ಮಯನು ಇದಕ್ಕೆ ನೀಡಿದ್ದ ರೂಪ ಸಂಪನ್ನತೆಗೆ ದಾಶಾರ್ಹನ ಸುಧರ್ಮವಾಗಲೀ ಬ್ರಹ್ಮನ ಸಭೆಯಾಗಲೀ ಸರಿಸಾಟಿಯಾಗುವಂತಿರಲಿಲ್ಲ. ಮಯನ ಆಜ್ಞೆಯಂತೆ ಕಿಂಕರರೆಂಬ ಹೆಸರಿನ ಎಂಟು ಸಹಸ್ರ ರಾಕ್ಷಸರು ಆ ಸಭೆಯನ್ನು ಕಾಯುತ್ತಿದ್ದರು. ಅಂತರಿಕ್ಷಚರಿ ಘೋರ, ಮಹಾಕಾಯ, ಮಹಾಬಲಿಗಳೂ ಆಗಿದ್ದ ಅವರು ರಕ್ತಾಕ್ಷರೂ, ಪಿಂಗಳಾಕ್ಷರೂ, ಶುಕ್ತಿಕರ್ಣರೂ, ಮತ್ತು ಪ್ರಹಾರಿಗಳೂ ಆಗಿದ್ದರು. ಆ ಸಭೆಯಲ್ಲಿ ಮಯನು ಅಪ್ರತಿಮ ವೈಡೂರ್ಯದ ಎಲೆಗಳು ಮತ್ತು ಮಣಿಯುಕ್ತ ದಂಟುಗಳನ್ನುಳ್ಳ ಕಮಲ, ಪದ್ಮ, ಸೌಗಂಧಿಕಾ ಪುಷ್ಪಗಳಿಂದ, ಪುಷ್ಪಿತ ನಾನಾವಿಧದ ನೀರು ಸಸ್ಯಗಳಿಂದ, ಪಂಕಜಗಳು, ಕೂರ್ಮ ಮತ್ಸ್ಯಗಳಿಂದ ತುಂಬಿ ಶೋಭನೀಯವಾದ ಒಂದು ಸರೋವರವನ್ನು ನಿರ್ಮಿಸಿದನು. ಅದರೊಳಗೆ ನಿಧಾನವಾಗಿ ಮೆಟ್ಟಿಲುಗಳು ಜಾರಿದ್ದವು, ನೀರು ಕೆಸರಿಲ್ಲದೆ ಶುಭ್ರವಾಗಿತ್ತು. ಎಲ್ಲ ಋತುಗಳಲ್ಲಿಯೂ ತುಂಬಿರುತ್ತಿತ್ತು ಮತ್ತು ಅದರಲ್ಲಿರುವ ಮುಕ್ತಬಿಂದುಗಳಂತಿರುವ ಪುಷ್ಪಗಳು ಮಂದ ಮಾರುತವು ಬೀಸಲು ತೇಲಾಡುತ್ತಿದ್ದವು.



ಮಣಿರತ್ನಗಳಿಂದ ರಚಿತಗೊಂಡ ಅದನ್ನು ನೋಡಿದ ಕೆಲವು ಪಾರ್ಥಿವರು ಸರೋವರವೆಂದು ಕಂಡರೂ ಗುರುತಿಸಲಾಗದೆ ಅಜ್ಞಾನದಿಂದ ಅದರೊಳಗೆ ಬಿದ್ದರು. ಆ ಸಭೆಯ ಸುತ್ತಲೂ ನಿತ್ಯವೂ ಪುಷ್ಪವಂತ, ನಾನಾವಿಧದ ನೀಲ ಶೀತ ನೆರಳನ್ನು ನೀಡುವ ಮನೋರಮ ಮಹಾದ್ರುಮಗಳು ನಿಂತಿದ್ದವು. ಎಲ್ಲೆಡೆಯಲ್ಲಿಯೂ ಸುಗಂಧ ಕಾನನಗಳು, ಹಂಸ, ಬಾತುಕೋಳಿ ಮತ್ತು ಚಕ್ರವಾಕ ಶೋಭಿತಗೊಂಡ ಪುಷ್ಕರಣಿಗಳು ಇದ್ದವು. ಮಾರುತ ಗಾಳಿಯು ನೀರು ಮತ್ತು ನೆಲಗಳಲ್ಲಿ ಬೆಳೆದ ಪುಷ್ಪಗಳೆಲ್ಲವುಗಳ ಸುವಾಸನೆಯನ್ನು ಹೊತ್ತು ಪಾಂಡವರ ಬಳಿ ಬೀಸುತ್ತಿತ್ತು. ಈ ರೀತಿಯಾಗಿತ್ತು ಆ ಮಯನಿಂದ ಹದಿನಾಲ್ಕು ತಿಂಗಳುಗಳಲ್ಲಿ ನಿರ್ಮಿತ ಸಭೆ! ಸಂಪೂರ್ಣವಾದ ನಂತರ ಮಯನು ರಾಜ ಧರ್ಮರಾಜನಿಗೆ ತಿಳಿಸಿದನು.

## ಸಭಾಪ್ರವೇಶ

ಅನಂತರ ರಾಜ ಯುಧಿಷ್ಠಿರನು ಅದನ್ನು ಪ್ರವೇಶಿಸಿದನು. ಆ ಸಮಯದಲ್ಲಿ ನರಾಧಿಪನು ಹತ್ತು ಸಾವಿರ ಬ್ರಾಹ್ಮಣರಿಗೆ ಘೃತಪಾಯಸ, ಮಧು, ಮತ್ತು ಮೂಲಫಲಗಳ ಭಕ್ಷಗಳ ಭೋಜನವನ್ನಿತ್ತನು ಮತ್ತು ಅವರಿಗೆ ವಸ್ತ್ರ ಭೂಷಣಗಳನ್ನು ನಾನಾರೀತಿಯ ಮಾಲೆಗಳನ್ನು ಕೊಟ್ಟನು. ಪ್ರಭುವು ಪ್ರತಿಯೊಬ್ಬನಿಗೆ ಸಹಸ್ರ ಗೋವುಗಳನ್ನಿತ್ತನು. ಅಲ್ಲಿಯ ಪುಣ್ಯಾಹಘೋಷವು ಸ್ವರ್ಗದವರೆಗೂ ಕೇಳಿಬರುತ್ತಿತ್ತು. ಆ ಕುರುಶ್ರೇಷ್ಠನು ವಾದ್ಯಗಳು, ವಿವಿಧ ಗೀತಗಳು ಮತ್ತು ನಾನಾವಿಧದ ಸುಗಂಧಗಳಿಂದ ದೇವತೆಗಳನ್ನು ಪೂಜಿಸುತ್ತಿರಲು ಅಲ್ಲಿ ಮಲ್ಲರು, ನಟರು, ಝಲ್ಲರು, ಸೂತರು, ವೈತಾಲಿಕರು ಮಹಾತ್ಮ ಯುಧಿಷ್ಠಿರನನ್ನು ಏಳು ರಾತ್ರಿಗಳವರೆಗೆ ಸೇವಿಸಿದರು. ಭ್ರಾತೃಗಳ ಸಹಿತ ಆ ರಮ್ಯ ಸಭೆಯನ್ನು ಪೂಜಿಸಿದ ಪಾಂಡವನು ದಿವಿಯಲ್ಲಿಯ ಶಕ್ರನ ಹಾಗೆ ರಮಿಸಿದನು. ಆ ಸಭೆಯಲ್ಲಿ ಪಾಂಡವರ ಸಹಿತ ಋಷಿಗಳು ಕುಳಿತಿದ್ದರು. ಮತ್ತು ನಾನಾ ದೇಶಗಳಿಂದ ಸಮಾಗತ ನರೇಂದ್ರರೂ ಕುಳಿತಿದ್ದರು. ಅಸಿತ ದೇವಲ, ಸತ್ಯ, ಸರ್ಪಮಾಲೀ, ಮಹಾಶಿರ, ಅರ್ವಾವಸು, ಸುಮಿತ್ರ, ಮೈತ್ರೇಯ, ಶುಲಕ, ಬಲಿ, ವಕ, ದಾಲ್ಭ್ಯ, ಸ್ಥೂಲಶಿರ, ಕೃಷ್ಣದ್ವೈಪಾಯನ, ವ್ಯಾಸಶಿಷ್ಯರಾದ ನಾನು, ಶುಕ, ಸುಮಂತು, ಜೈಮಿನಿ, ಮತ್ತು ಪೈಲ, ತಿತ್ತಿರಿ, ಯಾಜ್ಞವಲ್ಕ್ಯ, ಮಗನೊಂದಿಗೆ ಲೋಮಹರ್ಷಣ, ಅಪ್ಸುಹೋಮ, ಧೌಮ್ಯ,

ಅಣೀಮಂಡವ್ಯ, ಕೌಶಿಕ, ದಾಮೋಷ್ಣೀಷ, ತ್ರೈವಣಿ, ಪರ್ಣಾದ, ಘಟಜಾನುಕ, ಮೌಂಜಾಯನ, ವಾಯುಭಕ್ಷ, ಪಾರಾಶರ್ಯ, ಸಾರಿಕ, ಬಲವಾಕ, ಶಿನೀವಾಕ, ಸುತ್ಯಪಾಲ, ಕೃತ್ವಶ್ರಮ, ಜಾತೂಕರ್ಣ, ಶಿಖಾವಾ, ಸುಬಲ, ಪಾರಿಜಾತಕ, ಪರ್ವತ, ಮಹಾಭಾಗ ಮಿನಿ ಮಾರ್ಕಾಂಡೇಯ, ಜಂಘಾಬಂಧು, ರೈಭ್ಯ, ಕೋಪವೇಗಸ್ರಬ, ಭೃಗು, ಹರಿಬಭ್ರು, ಕೌಂಡಿನ್ಯ, ಬಭ್ರುಮಾಲೀ, ಸನಾತನ, ಕಕ್ಷೀವಾನ, ಔಷಿಷ, ನಾಚಿಕೇತ, ಗೌತಮ, ಮಹಾತಪರಾದ ಪೈಂಗ, ವರಾಹ, ಶುನಕ, ಶಾಂಡಿಲ್ಯ, ಕರ್ಕರ, ವೇಣುಜಂಘ, ಕಲಾಪ, ಕಠ, ಮೊದಲಾದ ಧರಸಂಹಿತ, ಧೃತಾತ್ಮ, ಜಿತೇಂದ್ರಿಯ ಮುನಿಗಳು ಮತ್ತು ಅನ್ಯ ಬಹಳಷ್ಟು ವೇದಪಾರಂಗತರು ಆ ಮಹಾತ್ಮನ ಸಭೆಯಲ್ಲಿ ಉಪಸ್ಥಿತರಿದ್ದರು. ಆ ಪುಣ್ಯ, ಧರ್ಮಜ್ಞ, ಶುಚಿ ಮತ್ತು ಅಮಲ ಋಷಿಸತ್ತಮರು ಕಥೆಗಳನ್ನು ಹೇಳುತ್ತಿದ್ದರು.

ಹಾಗೆಯೇ, ಶ್ರೀಮಂತ ಮಹಾತ್ಮ ಧರ್ಮಾತ್ಮ ಕ್ಷತ್ರಿಯಶ್ರೇಷ್ಠರು ಧರ್ಮರಾಜನ ಉಪಸ್ಥಿತಿಯಲ್ಲಿದ್ದರು: ಮುಂಜಕೇತು, ವಿವರ್ಧನ, ಸಂಗ್ರಾಮಜಿತ್, ದುರ್ಮುಖ, ವೀರ್ಯವಾನ ಉಗ್ರಸೇನ, ಕಕ್ಷಸೇನ, ಕ್ಷಿತಿಪತಿ ಕ್ಷೇಮಕಕ್ಷ, ಅಪರಾಜಿತ ಕಾಂಬೋಜರಾಜ ಕಮಲ, ದೇವ ವಜ್ರಧರನು ಕಾಲಕೇಯ ಅಸುರರನ್ನು ಹೇಗೋ ಹಾಗೆ ಯವನರನ್ನು ಒಬ್ಬನೇ ಸತತವೂ ನಡುಗಿಸುತ್ತಿದ್ದ ಮಹಾಬಲ ಕಂಪನ. ಮದ್ರಕಾಂತ ಜಟಾಸುರ, ಕುಂತಿ, ಕಿರಾತರಾಜ ಕುಣಿಂದ, ಹಾಗೆಯೇ ಅಂಗ ವಂಗರ

ಸಹಿತ ಪುಂಡ್ರಕ, ಪಾಂಡ್ಯ, ಉದ್ರಜ ಮತ್ತು ಅಂಧಕ. ಕಿರಾತರಾಜ ಸುಮನ, ಯವನಾಧಿಪತಿ ಜಾಣೂರ, ದೇವರಾತ ಭೋಜ, ಭೀಮರಥ, ಶ್ರುತಾಯುಧ, ಕಲಿಂಗ ಜಯತ್ಸೇನ, ಮಗಧ, ಸುಶರ್ಮ, ಚೇಕಿತಾನ, ಅಮಿತ್ರಕರ್ಷಣ ಸುರಥ, ಕೇತುಮಾನ್, ವಸುದಾನ, ವೈದೇಹಿ ಕೃತಕ್ಷಣ, ಸುಧರ್ಮ, ಅನಿರುದ್ಧ, ಮಹಾಬಲ ಶ್ರುತಾಯು, ಅನೂಪರಾಜ, ದುರ್ಧರ್ಷ, ಕ್ಷೇಮಜಿ, ಸುದಕ್ಷಿಣ, ಮಗನೊಂದಿಗೆ ಶಿಶುಪಾಲ, ಕರೂಷಾಧಿಪತಿ, ವೃಷ್ಣಿಗಳಲ್ಲಿ ದುರ್ಧರ್ಷ, ದೇವರೂಪಿಣಿ ಕುಮಾರ ಆಹುಕ, ವಿಪೃಥು, ಗದ, ಸಾರಣ, ಅಕ್ರೂರ, ಕೃತವರ್ಮ, ಶಿನಿಯ ಸುತ ಸಾತ್ಯಕಿ, ಭೀಷ್ಮಕ, ಅಥಾಹೃತಿ, ವೀರ್ಯವಾನ ದ್ಯುಮತ್ಸೇನ, ಕೇಕಯ, ಮಹೇಷ್ವಾಸ ಸೌಮಕಿ ಯಜ್ಞಸೇನ, ಮತ್ತು ಅರ್ಜುನನು ಸ್ವೀಕರಿಸಿದ್ದ ರೌರವಜಿನಗಳನ್ನು ಧರಿಸಿ ಧನುರ್ವೇದವನ್ನು ಕಲಿಯುತ್ತಿದ್ದ ಮಹಾಬಲಶಾಲಿ ರಾಜಪುತ್ರರು, ಅಲ್ಲಿಯೇ ಕಲಿಯುತ್ತಿದ್ದ ವೃಷ್ಣಿನಂದನ ಕುಮಾರ ರೌಕ್ಮಿಣೇಯ, ಸಾಂಬ, ಯುಯುಧಾನ ಮತ್ತು ಸಾತ್ಯಕಿ.

ಇವರು ಮತ್ತು ಇನ್ನೂ ಅನ್ಯ ಬಹಳಷ್ಟು ರಾಜರು, ಧನಂಜಯನ ನಿತ್ಯ ಸಖ ತುಂಬುರು, ಗೀತವಾದ್ಯ ಕುಶಲ, ಶಮ್ಯತಾಲವಿಶಾರದ ಗಂಧರ್ವ, ಅಪ್ಸರೆಯರು, ತಾಲ ಲಯಗಳ ವಿಶಾರದ ಕಿನ್ನರರು, ಮತ್ತು ಅಮಾತ್ಯನ ಸಹಿತ ಚಿತ್ರಸೇನ, ಇವರೆಲ್ಲ ಗಂಧರ್ವರೂ ತುಂಬುರುವಿನ ನಿರ್ದೇಶನದಲ್ಲಿ ಒಟ್ಟಿಗೇ ಸಂಗೀತ ಹಾಡಿದರು.

ದಿವ್ಯತಾನಗಳಿಂದ ಕ್ರಮಬದ್ಧವಾಗಿ ಹಾಡುತ್ತಾ ಆ ಮನೋರಂಜಕರು ಪಾಂಡುಪುತ್ರರನ್ನು ಮತ್ತು ಋಷಿಗಳನ್ನು ರಮಿಸುತ್ತಾ ಉಪಾಸಿಸುತ್ತಿದ್ದರು. ಆ ಸಭೆಯಲ್ಲಿ ಆಸೀನರಾಗಿದ್ದ ಸುವ್ರತ ಸತ್ಯಸಂಗರವು ದಿವಿಯಲ್ಲಿ ಬ್ರಹ್ಮನನ್ನು ದೇವತೆಗಳು ಹೇಗೋ ಹಾಗೆ ಯುಧಿಷ್ಠಿರನನ್ನು ಉಪಾಸಿಸುತ್ತಿತ್ತು.

## ನಾರದನ ಆಗಮನ ಮತ್ತು ರಾಜ್ಯಾಡಳಿತದ ಕುರಿತು ಪ್ರಶ್ನೆಗಳು




ಹೀಗೆ ಮಹಾತ್ಮ ಪಾಂಡವರು ಅಲ್ಲಿ ಕುಳಿತಿರಲು ಮತ್ತು ಮಹಾ ಗಂಧರ್ವರೂ ಕೂಡ ಅಲ್ಲಿ ಕುಳಿತುಕೊಂಡಿರಲು ಆ ಸಭೆಗೆ ಸರ್ವ

ಲೋಕಗಳನ್ನೂ ಸಂಚರಿಸುವ ಸುಮಹಾತೇಜಸ್ವಿ ಋಷಿ ನಾರದನು ಇತರ ಋಷಿಗಳ ಸಹಿತ ಆಗಮಿಸಿದನು. ಪಾರಿಜಾತ, ಧೀಮಂತ ರೈವತ, ಸುಮುಖ ಮತ್ತು ಸೌಮ್ಯರೊಂದಿಗೆ ಸಂಚರಿಸುತ್ತಿದ್ದ ಮನೋವೇಗಿ ಅಮಿತದ್ಯುತಿ ದೇವರ್ಷಿಯು ತಮ್ಮ ಸಭೆಯಲ್ಲಿದ್ದ ಪಾಂಡವರನ್ನು ಕಾಣಲು ಬಯಸಿದ್ದನು. ಋಷಿಯು ಬರುತ್ತಿರುವುದನ್ನು ನೋಡಿದ ಸರ್ವಧರ್ಮವಿದು ಪಾಂಡವಶ್ರೇಷ್ಠನು ತನ್ನ ಅನುಜರೊಡನೆ ತಕ್ಷಣವೇ ಮೇಲೆದ್ದನು. ವಿನಯಾವನತನಾಗಿ ಪ್ರೀತಿಯಿಂದ ನಮಸ್ಕರಿಸಿದನು ಮತ್ತು ಯಥಾವಿಧಿಯಾಗಿ ಅವನಿಗೆ ಅರ್ಹ ಆಸನವನ್ನು ನೀಡಿದನು. ಆ ಧರ್ಮವಿದುವು ಅವನನ್ನು ರತ್ನಗಳಿಂದ ಮತ್ತು ಸರ್ವಕಾಮಗಳಿಂದ ಅರ್ಚಿಸಿದನು. ಈ ರೀತಿ ಸರ್ವ ಪಾಂಡವರಿಂದ ಅರ್ಚಿತ ವೇದಪಾರಗ ಮಹರ್ಷಿಯು ಯುಧಿಷ್ಠಿರನಲ್ಲಿ ಧರ್ಮಕಾಮಾರ್ಥಸಂಯುಕ್ತ ಈ ಪ್ರಶ್ನೆಗಳನ್ನು ಕೇಳಿದನು:

> “ನಿನ್ನ ಸಂಪತ್ತು ಸಾಕೆನಿಸುತ್ತದೆಯೇ? ಮನಸ್ಸು ಧರ್ಮದಲ್ಲಿ ರಮಿಸುತ್ತಿದೆಯೇ? ಸುಖಗಳನ್ನು ಅನುಭವಿಸುತ್ತಿದ್ದೀಯಾ? ನಿನ್ನ ಮನಸ್ಸು ನೊಂದಿಲ್ಲ ತಾನೆ? ಪೂರ್ವ ಪಿತಾಮಹರ ಆಚರಣೆಯಲ್ಲಿಯೇ ನಡೆದುಕೊಳ್ಳುತ್ತಿದ್ದೀಯಾ? ಪ್ರಜೆಗಳ ಧರ್ಮ ಮತ್ತು ಅರ್ಥಗಳೆರಡನ್ನೂ ಕ್ಷೀಣಮಾಡದಂತೆ ನಡೆದುಕೊಳ್ಳುತ್ತಿದ್ದೀಯಾ? ಅರ್ಥಕ್ಕಾಗಿ ಧರ್ಮವನ್ನು

ಅಥವಾ ಧರ್ಮಕ್ಕಾಗಿ ಅರ್ಥವನ್ನು, ಅಥವಾ ಇವೆರಡಕ್ಕಾಗಿ ಪ್ರೀತಿಸಾರ ಕಾಮವನ್ನು ಬಾಧಿಸುತ್ತಿಲ್ಲವಲ್ಲ? ಅರ್ಥ, ಧರ್ಮ, ಕಾಮಗಳ ಸಮಯವನ್ನು ತಿಳಿದು, ಕಾಲಕ್ಕೆ ತಕ್ಕಂತೆ ವಿಭಜಿಸಿ, ಸೇವಿಸುತ್ತಿದ್ದೀಯಾ? ಆರು ರಾಜಗುಣಗಳು, ಏಳು ಉಪಾಯಗಳು ಮತ್ತು ಬಲಾಬಲ - ಈ ಹದಿನಾಲ್ಕು ಅಂಶಗಳನ್ನು ನೀನು ಸರಿಯಾಗಿ ಪರೀಕ್ಷಿಸುತ್ತಿದ್ದೀಯಾ? ಒಟ್ಟಾಗಿ ಮಾಡುವ ಎಂಟು ಕರ್ಮಗಳನ್ನು ತೆಗೆದುಕೊಳ್ಳುವುದಕ್ಕೆ ಮೊದಲು ನಿನ್ನನ್ನು ಮತ್ತು ನಿನ್ನ ಶತ್ರುಗಳನ್ನು ಪರೀಕ್ಷಿಸುತ್ತೀಯಾ? ನಿನ್ನ ಆರು ಅಧಿಕಾರಿಗಳು ಲುಪ್ತರಲ್ಲ ತಾನೆ? ಶ್ರೀಮಂತರಾದ ಅವರೆಲ್ಲರೂ ದುರ್ವ್ಯಸನಗಳಿಗೆ ತುತ್ತಾಗದೇ ನಿನಗೆ ವಿಧೇಯರಾಗಿಯೇ ಇದ್ದಾರಲ್ಲವೇ? ಅವರು ತರ್ಕ ಮತ್ತು ಗೂಢಚರರ ತನಿಖೆಗೊಳಗಾಗಿ ಪರಿಶಂಕಿತರಾಗಿದ್ದಾರೆ ತಾನೆ? ಸದಾ ನಿನ್ನ ಮಂತ್ರಿಗಳು ಗುಟ್ಟನ್ನು ಕೇವಲ ನಿನ್ನಲ್ಲಿ ಅಥವಾ ಅಮಾತ್ಯರಲ್ಲಿ ಇಟ್ಟುಕೊಳ್ಳುತ್ತಾರಲ್ಲವೇ? ನೀನು ಶಾಂತಿ ಮತ್ತು ಯುದ್ಧಗಳನ್ನು ಕಾಲಕ್ಕನುಗುಣವಾಗಿ ಅನುಸರಿಸುತ್ತಿದ್ದೀಯಲ್ಲವೇ? ಉದಾಸೀನರಾದವರ ಮತ್ತು ಯಾರಪಂಗಡವನ್ನೂ ಸೇರಿರದವರೊಡನೆ ನೀನು ಸರಿಯಾಗಿ ನಡೆದು ಕೊಳ್ಳುತ್ತಿದ್ದೀಯಾ? ನಿನ್ನ ಮಂತ್ರಿಗಳು ನಿನ್ನ ಹಾಗೆಯೇ ಯೋಚನೆಯಲ್ಲಿ ಶುದ್ಧರಾಗಿ ಜೀವಿಸಲು

ಸಮರ್ಥರಿದ್ದಾರೆಯೇ? ನಿನ್ನ ಹಾಗೆಯೇ ಕುಲೀನರೂ, ಅನುರಕ್ತರೂ, ಮತ್ತು ಕೃತಾರ್ಥರೂ ಆಗಿದ್ದಾರೆಯೇ? ಈ ಮಂತ್ರಿಗಳೇ ರಾಜರ ವಿಜಯದ ಮೂಲವಾಗುತ್ತಾರೆ. ಈ ಮಂತ್ರಧನವು ಶಾಸ್ತ್ರಕೋವಿದರಾದ ಅಮಾತ್ಯರಲ್ಲಿ ಸುರಕ್ಷಿತವಾಗಿರುತ್ತದೆ. ನೀನು ನಿದ್ರಾವಶಕ್ಕೊಳಗಾಗದೆ ಸರಿಯಾದ ಸಮಯಕ್ಕೆ ಏಳುತ್ತೀಯಾ?

ಅರ್ಥಧರ್ಮವಿದುವಾದ ನೀನು ಅಪರ ರಾತ್ರಿಯಲ್ಲಿ ಚಿಂತಿಸುತ್ತಿರುತ್ತೀಯಾ? ನೀನು ಒಬ್ಬನೇ ಅಥವಾ ಬಹು ಜನರೊಟ್ಟಿಗೆ ನಿರ್ಧಾರಗಳನ್ನು ತೆಗೆದುಕೊಳ್ಳುವುದಿಲ್ಲ ತಾನೇ? ಮತ್ತು ನೀನು ತೆಗೆದುಕೊಂಡ ಅಥವಾ ತೆಗೆದುಕೊಳ್ಳುವ ನಿರ್ಧಾರಗಳು ರಾಷ್ಟ್ರದಲ್ಲಿ ಎಲ್ಲರಕಡೆಗೂ ಹೋಗುವುದಿಲ್ಲ ತಾನೆ? ನೀನು ಕಡಿಮೆ ವೆಚ್ಚದ ಆದರೆ ಉತ್ತಮ ಅಭಿವೃದ್ಧಿಯ ಯೋಜನೆಗಳನ್ನು ಒಪ್ಪಿಕೊಂಡ ನಂತರ ಅದನ್ನು ಶೀಘ್ರವಾಗಿ ನೆರವೇರಿಸಲು ಯಾವುದೇ ವಿಘ್ನಗಳನ್ನು ತರುವುದಿಲ್ಲ ತಾನೇ? ನಿನಗೆ ಗೊತ್ತಿಲ್ಲದ, ಅಥವಾ ಸ್ವಲ್ಪವೇ ತಿಳಿದಿರುವ ಅಥವಾ ನಿನಗೆ ಅನುಮಾನವಿರುವ ರಾಜ್ಯದ ಯಾವುದೇ ಆಗುಹೋಗುಗಳು ಇಲ್ಲ ತಾನೇ? ಯಾಕೆಂದರೆ ಅವುಗಳಲ್ಲಿ ಭಾಗವಹಿಸುವುದು ಅಗತ್ಯ. ಜನರು ನೀನು ಏನು ಮಾಡಿಲ್ಲವೋ ಅದನ್ನು ಬಿಟ್ಟು ನೀನು ಸಂಪೂರ್ಣ ಮಾಡಿರುವ ಅಥವಾ ನಿನ್ನಿಂದ

ಸಂಪೂರ್ಣವಾಗುತ್ತಿರುವ ಯೋಜನೆ ಕಾರ್ಯಗಳ ಕುರಿತು ಮಾತ್ರ ತಿಳಿದಿದ್ದಾರೆ ತಾನೇ? ಸರ್ವಶಾಸ್ತ್ರಕೋವಿದ ಕಾರಣಿಕರು ಎಲ್ಲ ಕುಮಾರರಿಗೂ ಮತ್ತು ಯೋಧಪ್ರಮುಖರಿಗೂ ಸಂಪೂರ್ಣವಾಗಿ ತರಬೇತಿಯನ್ನು ನೀಡುತ್ತಿದ್ದಾರೆ ತಾನೇ? ನೀನು ಸಹಸ್ರ ಮೂರ್ಖರಿಗಿಂಥಲೂ ಒಂದು ಪಂಡಿತನನ್ನು ಬಯಸುತ್ತೀಯೆ ತಾನೆ? ಯಾಕೆಂದರೆ ಕಾರ್ಯಕಲಾಪಗಳಲ್ಲಿ ಅಡಚಣೆಗಳೊದಗಿದಾಗ ಪಂಡಿತರೇ ಪರಿಹಾರಗಳನ್ನು ನೀಡುತ್ತಾರೆ. ನಿನ್ನ ಸರ್ವ ದುರ್ಗಗಳೂ ಧನ, ಧಾನ್ಯ, ಆಯುಧಗಳು, ನೀರು, ಯಂತ್ರಗಳು, ಶಿಲ್ಪಿಗಳು ಮತ್ತು ಧನುರ್ಧರರಿಂದ ತುಂಬಿ ತುಳುಕುತ್ತಿದೆ ತಾನೆ? ಮೇಧಾವಿಯೂ, ಶೂರನೂ, ನಿಯಂತ್ರದಲ್ಲಿರುವವನೂ, ಬುದ್ಧಿವಂತನೂ ಆದ ಒಬ್ಬನೇ ಅಮಾತ್ಯನು ರಾಜನಿಗೆ ಅಥವಾ ರಾಜಕುಮಾರನಿಗೆ ಮಹಾ ಶ್ರೇಯಸ್ಸನ್ನು ತರುತ್ತಾನೆ. ಅನ್ಯರ ಹದಿನೆಂಟು ಮತ್ತು ಸ್ವಪಕ್ಷದ ಹದಿನೈದು ಪದಾಧಿಕಾರಿಗಳನ್ನು ಪರಸ್ಪರರಿಗೆ ಪರಿಚಯವಿಲ್ಲದಿರುವ ಮೂವರು ಗುಪ್ತಚಾರರ ಮೂಲಕ ತಿಳಿದುಕೊಳ್ಳುತ್ತಿದ್ದೀಯಾ? ಜಾಗರೂಕತೆಯಿಂದ, ಅವರಿಗೆ ತಿಳಿಯದಂತೆ ನೀನು ನಿನ್ನ ಶತ್ರುಗಳ ಮೇಲೆ ಗಮನವಿಟ್ಟಿರುತ್ತೀಯೆ ತಾನೆ? ನಿನ್ನ ಪುರೋಹಿತನು ವಿನಯಸಂಪನ್ನನೇ? ಉತ್ತಮ ಕುಲದಲ್ಲಿ ಜನಿಸಿದವನೇ?

ಬಹಳಷ್ಟು ಪಂಡಿತನೇ? ಅಸೂಯೆಯಿಲ್ಲದೇ ಪ್ರಶ್ನಿಸುವವನೇ? ಮತ್ತು ನೀನು ಅವನನ್ನು ಸತ್ಕರಿಸುತ್ತೀಯಾ? ಅವನು ನಿನ್ನ ಅಗ್ನಿಕಾರ್ಯಗಳಲ್ಲಿ ನಿರತನಾಗಿದ್ದಾನೆಯೇ? ವಿಧಿ-ವಿಧಾನಗಳನ್ನು ತಿಳಿದುಕೊಂಡಿದ್ದಾನೆಯೇ? ಮತ್ತು ಅವನು ಯಾವಾಗ ಆಹುತಿಗಳನ್ನು ಕೊಡಬೇಕು ಎನ್ನುವುದನ್ನು ಸದಾ ತಿಳಿದಿದ್ದಾನೆಯೇ? ನಿನ್ನ ಜ್ಯೋತಿಷಿಯು ವೇದ ಮತ್ತು ಅದರ ಅಂಗಗಳಲ್ಲಿ ನಿಷ್ಣಾತನಾಗಿದ್ದಾನೆಯೇ? ಎಲ್ಲ ಉತ್ಪಾತಗಳಲ್ಲಿ ಮುಂದೇನಾಗಬಹುದು ಎನ್ನುವುದನ್ನು ಪ್ರತಿಪಾದಿಸುವುದರಲ್ಲಿ ಕುಶಲನಾಗಿದ್ದಾನೆ ತಾನೆ? ನೀನು ಉತ್ತಮರನ್ನು ಉನ್ನತ ಹುದ್ದೆಗೆ, ಮಧ್ಯಮರನ್ನು ಮಧ್ಯಮ ಹುದ್ದೆಗೆ, ಮತ್ತು ವಿನಯಾವಂತರನ್ನು ಕೆಳಹುದ್ದೆಗಳಿಗೆ ನಿಯೋಜಿಸಿದ್ದಿ ತಾನೆ? ಪಿತೃ ಪಿತಾಮಹರೂ ಶುಚಿಯಾಗಿರುವ, ಶ್ರೇಷ್ಠರಲ್ಲಿಯೂ ಶ್ರೇಷ್ಠರಾದ, ಮೋಸವನ್ನು ಮೀರಿರುವ ಮಹಾತ್ಮರನ್ನು ನಿನ್ನ ಮುಖ್ಯ ಮಂತ್ರಿಯನ್ನಾಗಿ ನಿಯೋಜಿಸಿದ್ದೀ ತಾನೆ ? ನಿನ್ನ ಮಂತ್ರಿಗಳು ಪ್ರಜೆಗಳನ್ನು ಉಗ್ರ ಶಿಕ್ಷೆಗಳಿಂದ ದಂಡಿಸದೇ ನಿನ್ನ ರಾಷ್ಟ್ರವನ್ನು ಆಳುತ್ತಿದ್ದಾರೆಯೇ? ಯಾಜಕರು ಜಾತಿಯನ್ನು ಕಳೆದುಕೊಂಡವರನ್ನು ಕೀಳಾಗಿ ಕಾಣುವಂತೆ ಮತ್ತು ಪ್ರೀತಿಯುಳ್ಳ ಆದರೆ ಉಗ್ರನಾದ ಪತಿಯನ್ನು ಪತ್ನಿಯು

ಹೇಗೋ ಹಾಗೆ ನಿನ್ನ ಜನರು ನಿನ್ನನ್ನು ಕೀಳಾಗಿ ಕಾಣುವುದಿಲ್ಲ ತಾನೆ? ನಿನ್ನ ಸೇನಾಪತಿಯು ದೃಷ್ಟಿಯುಳ್ಳವನೂ, ಶೂರನೂ, ಮತಿವಂತನೂ, ಧೃತಿವಂತನೂ, ಶುಚಿಯೂ, ಕುಲೀನನೂ ಸುಂದರನೂ, ಅನುರಕ್ತನೂ, ದಕ್ಷನೂ ಆಗಿದ್ದಾನೆ ತಾನೇ? ನಿನ್ನ ಸರ್ವ ಸೇನಾಮುಖ್ಯರೂ ಯುದ್ಧವಿಶಾರದರೂ, ಮಹಾಯುದ್ಧಗಳನ್ನು ಮಾಡಿತೋರಿಸಿದವರೂ, ವಿಕ್ರಾಂತರೂ, ಮತ್ತು ನಿನ್ನಿಂದ ಸತ್ಕೃತರೂ ಮಾನಿತರೂ ಆಗಿದ್ದಾರೆ ತಾನೆ? ನೀನು ನಿನ್ನ ಸೇನೆಗೆ ಯಥೋಚಿತ ಆಹಾರ, ವೇತನವನ್ನು ಕಾಲಕ್ಕೆ ಸರಿಯಾಗಿ, ಮುಂದೂಡದೇ ಕೊಡುತ್ತಿದ್ದೀಯೆ ತಾನೇ? ಆಹಾರ-ಸಂಬಳಗಳನ್ನು ಸಮಯಕ್ಕೆ ಸರಿಯಾಗಿ ಕೊಡದೇ ಇದ್ದರೆ ಸೇವಕರು ಒಡೆಯನ ಮೇಲೆ ಸಿಟ್ಟಿಗೇಳುತ್ತಾರೆ. ಅವರಿಗಿದ್ದ ಕೊರತೆಯಿಂದಾಗಿ ಮಹಾ ಅನರ್ಥವೇ ಆಗಬಹುದು ಎಂದು ಹೇಳುತ್ತಾರೆ. ಮುಖ್ಯವಾಗಿ ಎಲ್ಲ ಕುಲೀನ ಪುತ್ರರೂ ನಿನ್ನಲ್ಲಿಯೇ ಅನುರಕ್ತರಾಗಿದ್ದಾರೆ ತಾನೆ? ಅವರು ಯಾವಾಗಲೂ ಯುದ್ಧದಲ್ಲಿ ನಿನಗೋಸ್ಕರವಾಗಿ ಪ್ರಾಣವನ್ನು ತೊರೆಯಲು ಸಿದ್ಧರಿದ್ದಾರೆ ತಾನೆ? ಸೇನೆಯಲ್ಲಿ ತನ್ನ ಸ್ವಾರ್ಥಕ್ಕೋಸ್ಕರ ಶಾಸನವನ್ನು ಮೀರಿ ತನಗಿಷ್ಟಬಂದಂತೆ ಆಳುವ ಯಾರೊಬ್ಬನೂ ಇಲ್ಲ ತಾನೆ? ತನಗೆ ವಹಿಸಿದ

ಜವಾಬ್ದಾರಿಗಳನ್ನೂ ಮೀರಿ, ತನ್ನದೇ ಪ್ರೇರಣೆಯಿಂದ ಕೆಲಸವನ್ನು ಸಾಧಿಸಿದವನಿಗೆ ವಿಶೇಷ ಸನ್ಮಾನ, ಅಥವಾ ವೇತನ ಅಥವಾ ಆಹಾರವು ದೊರಕುತ್ತದೆ ತಾನೆ? ವಿಧ್ಯಾವಿನೀತರು ಮತ್ತು ಜ್ಞಾನವಿಶಾರದರಿಗೆ ಅವರ ಗುಣಕ್ಕೆ ತಕ್ಕಂತೆ ನೀಡಿ ಸಂತೋಷಪಡಿಸುತ್ತೀಯೆ ತಾನೆ? ನಿನಗಾಗಿ ಮೃತ್ಯುವನ್ನು ಹೊಂದಿದವರ ಪತ್ನಿಯರಿಗೆ ಅಥವಾ ಬೇರೆ ಯಾವುದೇ ಕಾರಣಕ್ಕೆ ಕಷ್ಟದಲ್ಲಿರುವವರಿಗೆ ಆರ್ಥಿಕ ಬೆಂಬಲವನ್ನು ನೀಡುತ್ತೀಯೆ ತಾನೆ? ಯುದ್ಧದಲ್ಲಿ ಸೋತ ಅಥವಾ ಹೆದರಿ ಶರಣುಬಂದ ಅಥವಾ ಮನಸ್ಸನ್ನು ಬದಲಾಯಿಸಿ ಶರಣುಬಂದ ಶತ್ರುವನ್ನು ಪುತ್ರನನ್ನು ಹೇಗೋ ಹಾಗೆ ರಕ್ಷಿಸುತ್ತೀಯೆ ತಾನೆ? ಭೂಮಿಯಲ್ಲಿರುವ ಸರ್ವರನ್ನೂ, ತಾಯಿ ಅಥವಾ ತಂದೆಯಂತೆ, ಸಮನಾಗಿ, ಶಂಕಿಸದೇ ನೋಡಿಕೊಳ್ಳುತ್ತಿದ್ದೀಯೆ ತಾನೆ? ಓರ್ವ ಶತ್ರುವು ತೊಂದರೆಯಲ್ಲಿದ್ದಾನೆ ಎಂದು ಕೇಳಿದಾಗ ನೀನು ತಕ್ಷಣ ನಿನ್ನ ತ್ರಿವಿಧ ಸೇನೆಯನ್ನು ವೀಕ್ಷಿಸಿ, ಜಯ ಮತ್ತು ಅಪಜಯಗಳು ನಂತರ ನಿರ್ಧರಿಸಲ್ಪಡುತ್ತದೆ ಎಂದು ತಿಳಿದೂ, ಮುಂಗಡ ವೇತನವನ್ನಿತ್ತು, ಅವನ ಮೇಲೆ ಧಾಳಿಯಿಡುತ್ತೀಯೆ ತಾನೆ? ಶತ್ರುವಿನ ರಾಷ್ಟ್ರದಲ್ಲಿ ಅಡಗಿರುವ ರತ್ನ ಸಂಪತ್ತುಗಳನ್ನು ನಿನ್ನ ಸೇನಾಪತಿಗಳಲ್ಲಿ ಅವರ ಪದವಿಗೆ ತಕ್ಕಂತೆ ಹಂಚುತ್ತೀಯೆ ತಾನೆ? ಮೊದಲು ನಿನ್ನನ್ನು ನೀನೇ

ಗೆದ್ದುಕೊಂಡು ಜಿತೇಂದ್ರಿಯನಾಗಿ ಪ್ರಮತ್ತರೂ ಅಜಿತೇಂದ್ರಿಯರೂ ಆದ ನಿನ್ನ ಶತ್ರುಗಳನ್ನು ಗೆಲ್ಲುತ್ತೀಯೆ ತಾನೇ? ನೀನು ಶತ್ರುಗಳ ಮೇಲೆ ಧಾಳಿಯಿಡುವ ಮೊದಲು ಸಾಮ, ದಾನ, ಭೇದ, ಮತ್ತು ದಂಡ ಈ ನೀತಿಗಳನ್ನು ಸರಿಯಾಗಿ ಬಳಸುತ್ತೀಯೆ ತಾನೆ? ನಿನ್ನ ಮೂಲವನ್ನು ದೃಢಪಡಿಸಿಕೊಂಡೇ ಯುದ್ಧಕ್ಕೆ ಹೊರಡುತ್ತೀಯೆ ತಾನೆ? ನೀನು ಗೆಲ್ಲಲೆಂದೇ ಹೋರಾಡುತ್ತೀಯಾ ಮತ್ತು ಗೆದ್ದವರನ್ನು ರಕ್ಷಿಸುತ್ತೀಯಾ? ನಿನ್ನ ಸೇನೆಯು ಚತುರ್ವಿಧವಾಗಿದ್ದು ಎಂಟು ಅಂಗಗಳನ್ನು ಹೊಂದಿದೆಯೇ? ಶತ್ರುವನ್ನು ಸದೆಬಡಿಯಲು ಸೇನಾಪತಿಗಳಿಂದ ಒಳ್ಳೆಯ ರೀತಿಯಲ್ಲಿ ನಡೆಸಲ್ಪಡುತ್ತಿವೆ ತಾನೆ? ಶತ್ರುವಿನ ರಾಷ್ಟ್ರದಲ್ಲಿ ಸುಗ್ಗಿ ಮತ್ತು ಬಿತ್ತುವ ಕಾಲವನ್ನು ಬಿಟ್ಟು ಸಮರದಲ್ಲಿ ಶತ್ರುವಿನ ಮೇಲೆ ಆಕ್ರಮಣ ಮಾಡುತ್ತೀಯೆ ತಾನೆ? ನಿನ್ನ ಮತ್ತು ಪರ ರಾಷ್ಟ್ರಗಳಲ್ಲಿ ಇರುವ ನಿನ್ನ ಅಧಿಕೃತರಿಗೆ ಹಣದ ಕೊರತೆಯಿಲ್ಲ ತಾನೇ ಮತ್ತು ಪರಸ್ಪರರನ್ನು ರಕ್ಷಿಸುತ್ತಾರೆ ತಾನೆ? ನಿನ್ನ ಆಹಾರ, ಆಭರಣಗಳು ಮತ್ತು ಸುವಾಸನೆಗಳನ್ನು ಕಾಯುವವರನ್ನು ನೀನೇ ಆರಿಸಿಕೊಂಡಿದ್ದೀಯೆ ತಾನೆ? ನಿನ್ನ ಕೋಶ, ಕೋಷ್ಠ (ಪಣತ), ವಾಹನ, ದ್ವಾರ, ಆಯುಧ, ಮತ್ತು ತೆರಿಗೆಗಳನ್ನು ಕಾಯುತ್ತಿರುವವರು ಒಳ್ಳೆಯವರು, ನಿನ್ನಲ್ಲೇ ನಿರತ ಭಕ್ತರು

ತಾನೆ? ಒಳಗಿರಲಿ ಅಥವಾ ಹೊರಗಿರಲಿ, ಮೊದಲು ನಿನ್ನನ್ನು ನೀನು ರಕ್ಷಿಸಿಕೊಳ್ಳುತ್ತೀಯೆ, ನಂತರ ನಿನ್ನ ಸೇವಕರು, ಮತ್ತು ನಿನ್ನ ಬಾಂಧವರು ತಾನೆ? ಪಾನ, ದ್ಯೂತ, ವೈಶ್ಯೆಯರೊಡನೆ ಸಂಗ ಇತ್ಯಾತಿ ವ್ಯಸನಗಳಿಗೆ ಸಂಬಂಧಿಸಿದ ನಿನ್ನ ಖರ್ಚು ಎಷ್ಟಾಯಿತೆಂದು ನಿನ್ನ ಸೇವಕರು ಪ್ರಾತಃಕಾಲದಲ್ಲಿ ತಿಳಿಸುವುದಿಲ್ಲ ತಾನೆ? ನಿನ್ನ ಖರ್ಚುವೆಚ್ಚಗಳು ನಿನ್ನ ಆದಾಯದ ಅರ್ಧಭಾಗವೋ ಅಥವಾ ಕಾಲುಭಾಗವೋ ಅಥವಾ ಮುಕ್ಕಾಲುಭಾಗವೋ? ಕಷ್ಟದಲ್ಲಿರುವ ನಿನ್ನ ಜ್ಞಾತಿ-ಬಾಂಧವರನ್ನೂ, ಆಚಾರ್ಯರನ್ನೂ, ವೃದ್ಧರನ್ನೂ, ವರ್ತಕರನ್ನೂ, ಶಿಲ್ಪಿಗಳನ್ನೂ, ನಿನ್ನ ಇತರ ಆಶ್ರಿತರನ್ನೂ ಧನ-ದಾನ್ಯಗಳನ್ನಿತ್ತು ಸಂತೈಸುವೆ ತಾನೆ? ನಿನ್ನ ಆಯವ್ಯಯ ಪರಿಶೀಲನೆಯಲ್ಲಿ ನಿಯುಕ್ತ ಸರ್ವ ಗಣಕ ಲೇಖಕರೂ ದಿನನಿತ್ಯದ ಆಯವ್ಯಯವನ್ನು ಪೂರ್ವಾಹ್ಣದಲ್ಲಿಯೇ ನಿನಗೆ ವರದಿ ಮಾಡುತ್ತಾರೆ ತಾನೇ? ಅರ್ಥಶಾಸ್ತ್ರದಲ್ಲಿ ಅನುಭವಹೊಂದಿದ್ದ ನಿನ್ನ ಹಿತಕಾಮಿ, ಅನುಪ್ರಿಯ ಅಧಿಕಾರಿಗಳನ್ನು, ಮೊದಲು ಯಾವುದೇ ತರಹದ ತಪ್ಪು ಇಲ್ಲದಿದ್ದರೂ ತೆಗೆದುಹಾಕಿಲ್ಲ ತಾನೆ? ಉತ್ತಮ, ಮಧ್ಯಮ ಮತ್ತು ಅಧಮ ಪುರುಷರನ್ನು ತಿಳಿದು ನೀನು ಅವರಿಗೆ ಅನುರೂಪ ಕೆಲಸಗಳಲ್ಲಿ ನಿಯೋಜಿಸುತ್ತೀಯೆ ತಾನೆ?

ಹಣದಾಸೆಯಿರುವವರನ್ನೂ, ಕಳ್ಳರನ್ನೂ, ವೈರಿಗಳನ್ನೂ ಮತ್ತು ವ್ಯವಹಾರದಲ್ಲಿ ಅನುಭವವಿಲ್ಲದವರನ್ನೂ ಅಧಿಕಾರಸ್ಥಾನದಲ್ಲಿ ಇಟ್ಟುಕೊಂಡಿಲ್ಲ ತಾನೆ? ಲೋಭಿಗಳಿಂದಲೂ, ಕಳ್ಳರಿಂದಲೂ, ಕುಮಾರರಿಂದಲೂ, ಸ್ತ್ರೀಬಲದಿಂದಲೂ ಅಥವಾ ನಿನ್ನಿಂದಲೂ ರಾಷ್ಟ್ರವು ಪೀಡೆಗೊಳಗಾಗಿಲ್ಲ ತಾನೆ? ಕೃಷಿಕರು ಸಂತುಷ್ಟರಾಗಿದ್ದಾರೆ ತಾನೆ? ನಿನ್ನ ರಾಷ್ಟ್ರದಲ್ಲಿ ಎಲ್ಲಾ ಕಡೆ ತುಂಬಿದ ದೊಡ್ಡ ದೊಡ್ಡ ಕೆರೆಗಳನ್ನು ನಿರ್ಮಿಸಿದ್ದೀಯೆ ತಾನೇ? ಕೃಷಿಯು ದೈವ ತರುವ ಮಳೆಯ ಮೇಲೆ ಮಾತ್ರ ಅವಲಂಬಿತವಾಗಿಲ್ಲ ತಾನೆ? ಕೃಷಿಕರ ಬೀಜಧಾನ್ಯ ಅಥವಾ ಆಹಾರ ಧಾನ್ಯಗಳು ಕಡಿಮೆಯಾದರೆ, ಅವರಿಗೆ ನೂರಕ್ಕೆ ಒಂದರಂತೆ ಮಾಸಿಕವೃದ್ಧಿಯನ್ನು ಪಡೆದುಕೊಂಡು ಸಾಲವನ್ನು ಕೊಡುತ್ತೀಯೆ ತಾನೇ? ನಂಬಿಕೆಗೆ ಅರ್ಹ ಸಾಧು ಜನರು ನಿನ್ನ ಮುಖ್ಯ ಇಲಾಖೆಗಳನ್ನು ನೋಡಿಕೊಳ್ಳುತ್ತಿರುವವರು ತಾನೆ? ಏಕೆಂದರೆ ಮುಖ್ಯ ಇಲಾಖೆಗಳು ಸರಿಯಾಗಿ ನಡೆದರೆ ಮಾತ್ರ ಲೋಕವು ಸುಖ ಮತ್ತು ಅಭಿವೃದ್ಧಿಯನ್ನು ಹೊಂದುತ್ತದೆ. ನಿಷ್ಠರೂ, ಪ್ರಾಜ್ಞರೂ, ನ್ಯಾಯಪರರೂ ಮತ್ತು ನಿನಗೆ ವಿಧೇಯರಾಗಿರುವ ಐದು ಅಧಿಕಾರಿಗಳು ನಿನ್ನ ನಗರದ ಪ್ರತಿ ಗ್ರಾಮೀಣ ಪ್ರದೇಶದಲ್ಲಿ ಇರುವರು ತಾನೆ? ಇವರು ಒಗ್ಗಟ್ಟಿನಲ್ಲಿ ಕೆಲಸಮಾಡಿ ಕ್ಷೇಮ ತರುತ್ತಾರೆ ತಾನೇ?

ನಗರಗಳ ರಕ್ಷಣೆಗೋಸ್ಕರ ಗ್ರಾಮಗಳಲ್ಲಿಯೂ ನಗರಗಳಲ್ಲಿರುವಂಥೆ ವ್ಯವಸ್ಥೆಮಾಡಲಾಗಿದೆ ತಾನೆ? ಗ್ರಾಮಗಳ ರಕ್ಷೆಗೋಸ್ಕರ ಎಲ್ಲ ಹಳ್ಳಿಗಳಲ್ಲಿಯೂ ಗ್ರಾಮಗಳಲ್ಲಿರುವ ಸೌಕರ್ಯಗಳಿವೆ ತಾನೆ? ನಿನ್ನ ದೇಶದಲ್ಲಿ ಸೈನ್ಯವು ಸಮ ಮತ್ತು ವಿಷಮ ಪ್ರದೇಶಗಳಲ್ಲಿಯೂ ನಗರಗಳಲ್ಲಿಯೂ ಸಂಚರಿಸಿ ಕಳ್ಳರನ್ನು ಹುಡುಕುತ್ತಿರುತ್ತಾರೆ ತಾನೆ? ಸ್ತ್ರೀಯರನ್ನು ಸಂತವಿಸುತ್ತೀಯೆ ಮತ್ತು ಅವರನನ್ನು ರಕ್ಷಿಸುತ್ತಿರುವೆ ತಾನೆ? ಆದರೆ ಅವರ ಮೇಲೆ ತುಂಬಾ ನಂಬಿಕೆಯನ್ನಿಡುವುದಿಲ್ಲ ತಾನೆ? ಅವರೊಂದಿಗೆ ರಹಸ್ಯವಿಷಯಗಳನ್ನು ಹೇಳಿಕೊಳ್ಳುವುದಿಲ್ಲ ತಾನೆ? ಗೂಢಚಾರರ ವರದಿಯನ್ನು ಕೇಳಿ ಮಾಡಬೇಕಾದ ಕಾರ್ಯದ ಕುರಿತು ಯೋಚಿಸಿ, ಒಳಗಿರುವವರು ಯಾರೆಂದು ತಿಳಿದು ನಂತರ ಸುಖವಾಗಿ ಸುರಕ್ಷಿತವಾಗಿ ಮಲಗುತ್ತೀಯೆ ತಾನೆ? ರಾತ್ರಿಯ ಮೊದಲು ಎರಡು ಯಾಮಗಳಲ್ಲಿ ನಿದ್ದೆ ಮಾಡಿ ಕೊನೆಯ ಯಾಮದಲ್ಲಿ ಎದ್ದು ಧರ್ಮಾರ್ಥ ವಿಷಯಗಳ ಕುರಿತು ಚಿಂತಿಸುತ್ತೀಯೆ ತಾನೆ? ಸಕಾಲದಲ್ಲಿ ಎದ್ದು, ನಿತ್ಯವಿಧಿಗಳನ್ನು ಪೂರೈಸಿ, ಸಮಲಂಕೃತನಾಗಿ, ಕಾಲಜ್ಞ ಮಂತ್ರಿಗಳೊಂದಿಗೆ ಪುರಜನರ ದರ್ಶನ ಮಾಡುತ್ತೀಯೆ ತಾನೆ? ಕೆಂಪು ಉಡುಗೆಗಳನ್ನು ಧರಿಸಿ ಕಡ್ಗಗಳನ್ನು ಹಿಡಿದಿರುವ, ಅಲಂಕೃತ ಅಂಗರಕ್ಷಕರು

ಸುತ್ತಲೂ ಇದ್ದು ಯಾವಾಗಲೂ ನಿನ್ನನ್ನು ರಕ್ಷಿಸಿರುತ್ತಾರೆ ತಾನೆ? ನ್ಯಾಯಕ್ಕೆ ಬಂದ ವಿಷಯಗಳಲ್ಲಿ, ಶಿಕ್ಷೆನೀಡಬೇಕಾದವರಿಗೆ ಮತ್ತು ಗೌರವಿಸಬೇಕಾದವರಿಗೆ, ನಿನಗಿಷ್ಟವಾದವರಾಗಿದ್ದರೂ ಇಷ್ಟವಿಲ್ಲದವರಾಗಿದ್ದರೂ ಸಂಪೂರ್ಣವಾಗಿ ಪರೀಕ್ಷಿಸಿ ಯಮನಂತೆ ವರ್ತಿಸುತ್ತೀಯೆ ತಾನೆ? ಶಾರೀರಿಕ ಬಾಧೆಗಳನ್ನು ಔಷಧ ಮತ್ತು ಪಥ್ಯಗಳಿಂದ ಮತ್ತು ಮಾನಸಿಕ ಬಾಧೆಗಳನ್ನು ವೃದ್ಧರ ಸೇವೆ ಮಾಡುವುದರಿಂದ ಸದಾ ಹೋಗಲಾಡಿಸಿಕೊಳ್ಳುತ್ತೀಯೆ ತಾನೆ? ನಿನ್ನ ಶರೀರ ಹಿತವನ್ನು ನೋಡಿಕೊಳ್ಳುವ ವೈದ್ಯರು ಅಷ್ಟಾಂಗ ಚಿಕಿತ್ಸೆಯಲ್ಲಿ ವಿಶಾರದರು, ಸ್ನೇಹಪರರು ಮತ್ತು ಅನುರಕ್ತರು ತಾನೆ? ಲೋಭದಿಂದಲಾಗಲೀ, ಮೋಹದಿಂದಲಾಗಲೀ, ಅಭಿಮಾನದಿಂದಾಗಲೀ ನೀನು ನಿನ್ನಲ್ಲಿಗೆ ಬಂದಿರುವ ಅರ್ಥಿ-ಪ್ರತ್ಯರ್ಥಿಗಳನ್ನು ಎಂದೂ ಹಿಂದೆ ಕಳುಹಿಸುವುದಿಲ್ಲ ತಾನೆ? ಲೋಭದಿಂದಾಗಲೀ, ಮೋಹದಿಂದಾಗಲೀ, ಗೊಂದಲದಿಂದಾಗಲೀ, ಅಥವಾ ಪ್ರೀತಿಯಿಂದಾಗಲೀ ನಿನ್ನ ಆಶ್ರಿತರಾಗಿರುವ ಮನುಷ್ಯರ ಜೀವನವೃತ್ತಿಯನ್ನು ನಿಲ್ಲಿಸುವುದಿಲ್ಲ ತಾನೆ? ನಗರದಲ್ಲಿ ವಾಸಿಸುವವರ ಸಹಿತ ನಿನ್ನ ರಾಷ್ಟ್ರದಲ್ಲಿ ವಾಸಿಸಿರುವವರು ಶತ್ರುಗಳ ಪ್ರೇರಣೆಯಿಂದ ನಿನ್ನ ವಿರುದ್ಧ ಒಟ್ಟಿಗೆ ಪ್ರತಿಭಟಿಸುತ್ತಿಲ್ಲ ತಾನೆ? ನಿನ್ನ ದುರ್ಬಲಶತ್ರುವನ್ನು

ಬಲಪ್ರಯೋಗಿಸಿ ನಿಯಂತ್ರಣದಲ್ಲಿಟ್ಟುಕೊಂಡಿದ್ದೀಯೆ ತಾನೆ? ಮತ್ತು ನಿನಗಿಂಥ ಹೆಚ್ಚು ಬಲಶಾಲಿಯಾಗಿರುವವರನ್ನು ಪರಸ್ಪರ ವಿಚಾರವಿನಿಮಯದಿಂದ ತೊಂದರೆಕೊಡದ ಹಾಗೆ ನೋಡಿಕೊಳ್ಳುತ್ತಿದ್ದೀಯೆ ತಾನೆ? ನಿನ್ನ ಅಧೀನದಲ್ಲಿರುವ ಭೂಮಿಪಾಲರೆಲ್ಲರೂ ನಿನ್ನಲ್ಲಿಯೇ ಅನುರಕ್ತರಾಗಿದ್ದಾರೆ ತಾನೆ? ಮತ್ತು ನಿನಗಾಗಿ ಪ್ರಾಣವನ್ನು ತೊರೆಯಲೂ ಸಿದ್ಧರಿದ್ದಾರೆ ತಾನೆ? ನೀನು ನಿನ್ನ ಒಳ್ಳೆಯದಕ್ಕಾಗಿಯೇ ಸರ್ವ ವಿಧ್ಯೆಗಳಲ್ಲಿ ಅವರಿಗಿರುವ ಗುಣಮಟ್ಟಕ್ಕನುಗುಣವಾಗಿ ಬ್ರಾಹ್ಮಣರು ಮತ್ತು ಸಾಧುಗಳನ್ನು ಗೌರವಿಸುತ್ತೀಯೆ ತಾನೆ? ನಿನ್ನ ಪೂರ್ವಜ ಜನರಿಂದ ಆಚರಿತಗೊಂಡ ಮೂರುವೇದಗಳೇ ಮೂಲ ಧರ್ಮದಂತೆ ನಡೆದುಕೊಳ್ಳುತ್ತಿದ್ದೇಯೆ ಮತ್ತು ಕರ್ಮಗಳಲ್ಲಿ ನಿರತನಾಗಿದ್ದೀಯೆ ತಾನೆ? ನಿನ್ನ ಮನೆಯಲ್ಲಿ ನಿನ್ನ ಸಮ್ಮುಖದಲ್ಲಿ ಗುಣವಂತ ದ್ವಿಜರು ದಕ್ಷಿಣೆಗಳನ್ನು ಪಡೆದು ಸ್ವಾದಯುಕ್ತ ಉತ್ತಮ ಊಟವನ್ನು ಉಣ್ಣುತ್ತಾರೆ ತಾನೆ? ಏಕಚಿತ್ತನಾಗಿ ಆತ್ಮವನ್ನು ಜಯಿಸಿ, ವಾಜಪೇಯ ಮತ್ತು ಪುಂಡರೀಕ ಕ್ರತುಗಳನ್ನು ಸಂಪೂರ್ಣವಾಗಿ ಮಾಡಲು ಪ್ರಯತ್ನಿಸುತ್ತಿರುವೆ ತಾನೆ? ನೀನು ಜ್ಞಾತಿ-ಬಾಂಧವರನ್ನು, ಗುರುಗಳನ್ನು, ವೃದ್ಧರನ್ನು, ದೇವತೆಗಳನ್ನು, ತಾಪಸರನ್ನು, ಚೈತ್ಯಗಳನ್ನು, ಮಂಗಳಕರ ವೃಕ್ಷಗಳನ್ನು, ಬ್ರಾಹ್ಮಣರನ್ನು

ನಮಸ್ಕರಿಸುತ್ತೀಯೆ ತಾನೆ? ಆಯುಸ್ಸನ್ನೂ ಯಶವನ್ನೂ ವೃದ್ಧಿಸುವ, ಧರ್ಮಕಾಮಾರ್ಥಗಳನ್ನು ತೋರಿಸುವ ಇದರಂತೆಯೇ ಬುದ್ಧಿ ಮತ್ತು ನಡತೆಗಳಿಂದ ನಿನ್ನ ದೇಶವನ್ನು ಆಳುತ್ತಿದ್ದೀಯೆ ತಾನೆ?

ಈ ರೀತಿ ಬುದ್ಧಿಯುಕ್ತನಾಗಿ ನಡೆದುಕೊಳ್ಳುವವನ ರಾಷ್ಟ್ರವು ನಾಶವಾಗುವುದಿಲ್ಲ ಮತ್ತು ಅಂಥಹ ರಾಜನು ಮಹಿಯನ್ನು ಗೆದ್ದು ಅತ್ಯಂತ ಸುಖವನ್ನು ಹೊಂದುತ್ತಾನೆ. ಆರ್ಯ ವಿಶುದ್ಧಾತ್ಮರ ಮೇಲೆ ಕಳ್ಳತನದ ಅಪವಾದನ್ನು ಹೊರಿಸಿ ಲೋಭದಿಂದಲೋ ಮಂದಬುದ್ಧಿಯಿಂದಲೋ ವಧೆಯಾಗದ ಹಾಗೆ ನೋಡಿಕೊಳ್ಳುತ್ತೀಯೆ ತಾನೆ? ಪ್ರಶ್ನೆಗಳಿಗೊಳಗಾಗಿ, ಅವನನ್ನು ಸಲಕರಣೆಗಳೊಡನೆ ನೋಡಿದವರ ಸಾಕ್ಷಿಯ ಪ್ರಕಾರ ಸೆರೆಹಿಡಿದು ಬಂಧನದಲ್ಲಿಟ್ಟ ಅಪರಾಧಿಯು ಲಂಚದ ಕಾರಣದಿಂದ ಬಿಡುಗಡೆ ಹೊಂದಬಹುದೇ? ಒಂದುವೇಳೆ ಧನಿಕ ಮತ್ತು ಬಡವನ ಮಧ್ಯೆ ಜಗಳ ಬಂದಾಗ ನಿನ್ನ ಅಮಾತ್ಯರು ಲಂಚವನ್ನು ತೆಗೆದುಕೊಂಡು ಸುಳ್ಳು ನಿರ್ಧಾರಗಳನ್ನು ನೀಡುತ್ತಾರೆಯೇ? ನಾಸ್ತಿಕ್ಯ (ದೇವರಲ್ಲಿ ನಂಬಿಕೆಯನ್ನಿಡದಿರುವುದು), ಅನೃತ (ಸುಳ್ಳು ಹೇಳುವುದು), ಕ್ರೋಧ (ಸಿಟ್ಟು), ಪ್ರಮಾದ (ಅಜಾಗರೂಕತೆ),

ದೀರ್ಘಸೂತ್ರತೆ (ಸುತ್ತುಬಳಸಿ ಯೋಜಿಸುವುದು, ಕೆಲಸ ಮಾಡುವುದು), ಜ್ಞಾನವನ್ನು ಕಾಣದಿರುವುದು (ವಿವೇಕತೆಯನ್ನು ಅಲಕ್ಷಿಸುವುದು), ಆಲಸ್ಯ (ಸೋಮಾರಿತನ), ಕ್ಷಿಪ್ತಚಿತ್ತತೆ (ಸದಾ ಮರೆಯುವಿಕೆ), ಒಬ್ಬನಿಂದಲೇ ಸಲಹೆ ಸೂಚನೆಗಳನ್ನು ಸ್ವೀಕರಿಸುವುದು, ಅಭಿವೃದ್ಧಿ ಯೋಜನೆಗಳ ಕುರಿತು ಅವುಗಳ ಬಗ್ಗೆ ತಿಳಿಯದಿದ್ದವರಿಂದ ಸಲಹೆ ಸೂಚನೆಗಳನ್ನು ಪಡೆಯುವುದು, ನಿರ್ಧರಿಸಿದ ಕಾರ್ಯಗಳನ್ನು ತಡವಾಗಿ ಆರಂಭಿಸುವುದು, ಮಂತ್ರಾಲೋಚನೆಗಳನ್ನು ಗೌಪ್ಯವಾಗಿ ಇಡದೇ ಇರುವುದು, ಮಂಗಲಕಾರ್ಯಗಳನ್ನು ಕೈಗೊಳ್ಳದೇ ಇರುವುದು, ಮತ್ತು ಸುಖಭೋಗಗಳಲ್ಲಿಯೇ ತೊಡಗಿರುವುದು ಇವೇ ಹದಿನಾಲ್ಕು ರಾಜದೋಷಗಳನ್ನು ನೀನು ವರ್ಜಿಸಿದ್ದೀಯೆ ತಾನೇ? ವೇದಗಳು ಸಫಲವಾಗಿವೆಯೇ? ಧನವು ಸಫಲವಾಗಿದೆಯೇ? ಹೆಂಡತಿಯರು ಸಫಲವಾಗಿದ್ದಾರೆಯೇ? ಮತ್ತು ಕಲಿತಿದ್ದಿದು ಸಫಲವಾಗಿದೆಯೇ?”

ಯುಧಿಷ್ಠಿರನು ಹೇಳಿದನು:

“ವೇದಗಳು ಹೇಗೆ ಸಫಲವಾಗುತ್ತವೆ? ಧನವು ಹೇಗೆ ಸಫಲವಾಗುತ್ತದೆ? ಪತ್ನಿಯರು ಹೇಗೆ ಸಫಲವಾಗುತ್ತಾರೆ?

ಮತ್ತು ಕಲಿತಿದ್ದಿದು ಹೇಗೆ ಸಫಲವಾಗುತ್ತದೆ?”

ನಾರದನು ಹೇಳಿದನು:

“ವೇದಗಳು ಅಗ್ನಿಹೋತ್ರದಲ್ಲಿ ಫಲವನ್ನು ನೀಡುತ್ತವೆ. ಧನವು ಭೋಗ ಮತ್ತು ದಾನಗಳಲ್ಲಿ ಸಫಲವಾಗುತ್ತದೆ. ಪತ್ನಿಯರು ರತಿಕ್ರೀಡೆಯಲ್ಲಿ ಮತ್ತು ಸಂತಾನದಲ್ಲಿ ಫಲವನ್ನು ನೀಡುತ್ತಾರೆ. ಮತ್ತು ಕಲಿತಿದ್ದಿದು ಶೀಲ ಮತ್ತು ನಡವಳಿಕೆಯಲ್ಲಿ ಸಫಲವಾಗುತ್ತದೆ.”

ಆ ಸುಮಹಾತಪ ನಾರದನು ಈ ರೀತಿ ಹೇಳಿದ ನಂತರ ಅರಿಂದಮ ಧರ್ಮಾತ್ಮ ಯುಧಿಷ್ಠಿರನನ್ನು ಕೇಳಿದನು:

“ತೆರಿಗೆಯ ಅಧಿಕಾರಿಗಳು ದೂರದೇಶಗಳಿಂದ ಲಾಭಗಳಿಸಲೆಂದು ಬಂದಿರುವ ವರ್ತಕರಿಂದ ಯಥೋಕ್ತ ಶುಲ್ಕವನ್ನು ತೆಗೆದುಕೊಳ್ಳುತ್ತಾರೆ ತಾನೆ? ತಮ್ಮ ದ್ರವ್ಯಗಳನ್ನು ತಂದ ಅವರನ್ನು ನಿನ್ನ ರಾಷ್ಟ್ರದ ನಗರಗಳಲ್ಲಿ ಮೋಸಮಾಡದೇ ವಂಚನೆ ಮಾಡದೇ ಗೌರವದಿಂದ ಕಾಣುತ್ತಾರೆ ತಾನೆ? ಅರ್ಥವಿದ, ಧರ್ಮಾನುದರ್ಶಿಗಳಾದ ವೃದ್ಧರಿಂದ ನೀನು ನಿತ್ಯವೂ ಧರ್ಮಾರ್ಥಸಹಿತ ಮಾತುಗಳನ್ನು ಕೇಳುತ್ತಿರುತ್ತೀಯೆ ತಾನೆ? ಸುಗ್ಗಿಯ ಕಾಲದಲ್ಲಿ, ಗೋವುಗಳು ಕರುಹಾಕುವ ಕಾಲದಲ್ಲಿ, ಮರಗಳು ಹೂಬಿಡುವ ಮತ್ತು ಹಣ್ಣುಗಳನ್ನು ಪಡೆಯುವ ಕಾಲದಲ್ಲಿ

ಧರ್ಮಾರ್ಥ ವೃದ್ಧಿಗೋಸ್ಕರ ದ್ವಿಜರಿಗೆ ಜೇನು ಮತ್ತು ತುಪ್ಪಗಳ ದಾನ ಮಾಡುತ್ತೀಯೆ ತಾನೆ? ನೀನು ಯಾವಾಗಲೂ ಎಲ್ಲ ಶಿಲ್ಪಿಗಳಿಗೂ ನಾಲ್ಕುತಿಂಗಳ ಮುಂಗಡ ದ್ರವ್ಯೋಪಕರಣಗಳನ್ನು ಕೊಡುತ್ತೀಯೆ ತಾನೆ? ಕಾರ್ಯ ಮತ್ತು ಕರ್ತಾರರನ್ನು ಗುರುತಿಸಿ, ಪ್ರಶಂಸಿಸಿ, ಸಾತ್ವಿಕರ ಮಧ್ಯೆ ಪೂಜಿಸಿ ಸತ್ಕರಿಸುತ್ತೀಯೆ ತಾನೆ? ಸರ್ವ ಸೂತ್ರಗಳನ್ನು-ಹಸ್ತಿಸೂತ್ರ, ಅಶ್ವಸೂತ್ರ, ರಥ ಸೂತ್ರಗಳನ್ನು ಪಡೆದಿದ್ದೀಯೆ ತಾನೆ? ನಿನ್ನ ಮನೆಯಲ್ಲಿ ಧನುರ್ವೇದ ಸೂತ್ರ, ನಗರ ನಿರ್ಮಾಣ ಯಂತ್ರ ಸೂತ್ರಗಳ ಅಧ್ಯಯನವು ಸದಾ ನಡೆಯುತ್ತದೆ ತಾನೆ? ನಿನಗೆ ಶತ್ರುಗಳನ್ನು ನಾಶಪಡಿಸಬಲ್ಲ ಸರ್ವ ಅಸ್ತ್ರಗಳ, ಬ್ರಹ್ಮದಂಡದ ಮತ್ತು ವಿಷಯೋಗ ಪ್ರಯೋಗಗಳೆಲ್ಲವೂ ತಿಳಿದಿದೆ ತಾನೆ? ನೀನು ನಿನ್ನ ರಾಷ್ಟ್ರವನ್ನು ಅಗ್ನಿಭಯ, ಸರ್ಪ ಭಯ, ವ್ಯಾಲಭಯ, ರೋಗಭಯ ಮತ್ತು ರಾಕ್ಷಸಭಯಗಳಿಂದ ರಕ್ಷಿಸುತ್ತಿದ್ದೀಯೆ ತಾನೆ? ಅಂಧರನ್ನೂ, ಮೂಕರನ್ನೂ, ಕುಂಟರನ್ನೂ, ವಿಕಲಾಂಗರನ್ನೂ, ಅನಾಥರನ್ನೂ, ಪರಿವ್ರಾಜಕರನ್ನೂ ತಂದೆಯೋಪಾದಿಯಲ್ಲಿ ಪರಿರಕ್ಷಿಸುತ್ತಿರುವ ತಾನೆ?”

ಆ ಮಹಾತ್ಮ ಬ್ರಾಹ್ಮಣಸತ್ತಮನ ಮಾತುಗಳನ್ನು ಕೇಳಿ ಸಂತೋಷಗೊಂಡ ಕುರುವೃಷಭ ರಾಜನು ಆ ದೇವರೂಪಿ ನಾರದನ

ಪಾದಗಳಿಗೆ ಅಭಿವಂದಿಸಿ ನಮಸ್ಕರಿಸಿ ಹೇಳಿದನು:

> “ನನ್ನ ಪ್ರಜ್ಞೆಯನ್ನು ಇನ್ನೂ ವೃದ್ಧಿಗೊಳಿಸಿದ ನೀನು ಹೇಳಿದ ಮಾತುಗಳಂತೆಯೇ ನಡೆದುಕೊಳ್ಳುತ್ತೇನೆ.”

ಆ ರಾಜನು ಹಾಗೆ ಹೇಳಿದುದಲ್ಲದೇ ಅದರಂತೆಯೇ ಮಾಡಿ ಸಾಗರದಿಂದ ಆವೃತ ಮಹಿಯನ್ನು ಪಡೆದನು.

ನಾರದನು ಹೇಳಿದನು:

> “ಈ ರೀತಿಯಲ್ಲಿ ಯಾವ ರಾಜನು ನಡೆದುಕೊಳ್ಳುತ್ತಾನೋ ಅವನು ಚಾತುರ್ವರ್ಣ್ಯದವರನ್ನು ರಕ್ಷಿಸಿ, ಈ ಭೂಮಿಯಲ್ಲಿ ಸುಖೀ ಜೀವನವನ್ನು ಪಡೆದು ಶಕ್ರನ ಲೋಕವನ್ನು ಹೊಂದುತ್ತಾನೆ.”

ಮಹರ್ಷಿಯ ವಚನಗಳಿಂದ ಪರಮಸಂತುಷ್ಟನಾದ ಧರ್ಮರಾಜ ಯುಧಿಷ್ಠಿರನು ಅವನನ್ನು ಪೂಜಿಸಿ, ಅನುಜ್ಞೆಯನ್ನು ಪಡೆದು ಈ ಮಾತುಗಳನ್ನಾಡಿದನು:

> “ಭಗವನ್! ನೀವು ಹೇಳಿದ ಧರ್ಮನಿಶ್ಚಯವೂ ಅನುಸರಣೀಯವೂ ಆದುದನ್ನು ಯಥಾಶಕ್ತಿಯಾಗಿ, ಯಥಾನ್ಯಾಯವಾಗಿ ಮತ್ತು ವಿಧಿವತ್ತಾಗಿ ಮಾಡುತ್ತೇನೆ. ಹಿಂದಿನ ರಾಜರು ಇವೆಲ್ಲವನ್ನೂ ಯಥಾನ್ಯಾಯವಾಗಿ ಅರ್ಥವತ್ತಾಗಿ ವಿಚಾರಿಸಿ ಆಚರಿಸಿ ಫಲಗಳನ್ನು ಪಡೆದರು.

ನಾವೂ ಕೂಡ ನಿನ್ನ ಈ ಸತ್ಪಥದಲ್ಲಿ ನಡೆಯಲು
ಇಚ್ಛಿಸುತ್ತೇವೆ. ಆದರೆ ನಿಯತಾತ್ಮರಾದ ಹಿಂದಿನವರು
ನಡೆದುಕೊಂಡಂತೆ ನಡೆದುಕೊಳ್ಳಲು
ಶಕ್ಯವಿಲ್ಲದಿರಬಹುದು.”

## ಲೋಕಪಾಲಕರ ಸಭೆಗಳ ವರ್ಣನೆಯ ಪ್ರಸ್ತಾವನೆ

ಹೀಗೆ ಮಾತನಾಡಿದ ಆ ಧರ್ಮಾತ್ಮ ಮಹಾಮತಿ ಪಾಂಡವ ಯುಧಿಷ್ಠಿರನು ಅವನನ್ನು ಪೂಜಿಸಿ, ಒಂದು ಕ್ಷಣ ಕಾದು, ಸಮಯ ಪ್ರಾಪ್ತಿಯಾದಾಗ, ಆ ಲೋಕಚರ ಮುನಿ ನಾರದನು ತನ್ನ ಆಸನದಲ್ಲಿ ಕುಳಿತುಕೊಂಡಿದ್ದುದನ್ನು ನೋಡಿ, ರಾಜರ ಮಧ್ಯದಲ್ಲಿ ಕೇಳಿದನು:

“ಮನೋವೇಗದಲ್ಲಿ ಪ್ರಯಾಣಿಸಬಲ್ಲ ನೀವು ಸದಾ
ಪೂರ್ವದಲ್ಲಿ ಬ್ರಹ್ಮನು ನಿರ್ಮಿಸಿದ ಪ್ರೇಕ್ಷಣೀಯ ನಾನಾ
ವಿಧದ ಬಹಳಷ್ಟು ಲೋಕಗಳನ್ನು ಸಂಚರಿಸುತ್ತಿರುತ್ತೀರಿ.
ಬ್ರಹ್ಮನ್! ಈ ರೀತಿಯ ಅಥವಾ ಇದಕ್ಕಿಂತಲೂ ಉತ್ತಮ
ಸಭಾಭವನವನ್ನು ನೀವು ಇದಕ್ಕೂ ಮೊದಲು
ಎಲ್ಲಿಯಾದರೂ ನೋಡಿದ್ದಿರೇ? ನನ್ನ ಈ ಪ್ರಶ್ನೆಗೆ
ಉತ್ತರಿಸಿ!”

ಧರ್ಮರಾಜನಾಡಿದ ಮಾತುಗಳನ್ನು ಕೇಳಿ ನಾರದನು ಮುಗುಳ್ನಗುತ್ತಾ ಪಾಂಡವನಿಗೆ ಮಧುರ ವಾಣಿಯಲ್ಲಿ ಉತ್ತರಿಸಿದನು:

> “ರಾಜನ್! ಮನುಷ್ಯರಲ್ಲಿ ಇದರಂಥಹ ಮಣಿಮಯ ಸಭೆಯನ್ನು ಇದಕ್ಕೂ ಮೊದಲು ನೋಡಿರಲಿಲ್ಲ ಕೇಳಿರಲಿಲ್ಲ. ಆದರೆ ನಿನಗೆ ಕೇಳಲು ಮನಸ್ಸಿದ್ದರೆ ನಾನು ಪಿತೃರಾಜನ, ಧೀಮತ ವರುಣನ, ಇಂದ್ರನ, ಕೈಲಾಸನಿಲಯನ, ಮತ್ತು ಬ್ರಹ್ಮನ ದಿವ್ಯ ದುಃಖವನ್ನು ಹೋಗಲಾಡಿಸುವ ಸಭೆಗಳ ಕುರಿತು ಹೇಳುತ್ತೇನೆ.”

ನಾರದನ ಈ ಮಾತುಗಳನ್ನು ಕೇಳಿ ಧರ್ಮರಾಜ ಮಹಾಮನಸ್ವಿ ಯುಧಿಷ್ಠಿರನು ಸಹೋದರರೊಂದಿಗೆ ಸರ್ವ ನೃಪರ ಮಧ್ಯದಲ್ಲಿ ಅಂಜಲೀಬದ್ಧನಾಗಿ ಉತ್ತರಿಸಿದನು:

> “ನಾವು ಆ ಎಲ್ಲ ಸಭೆಗಳ ಕುರಿತು ಕೇಳಲು ಬಯಸುತ್ತೇವೆ. ಹೇಳಿ. ಬ್ರಹ್ಮನ್! ಆ ಸಭೆಗಳು ಯಾವ ದ್ರವ್ಯದಿಂದ ಮಾಡಲ್ಪಟ್ಟಿವೆ? ಅವುಗಳ ವಿಸ್ತಾರ ಮತ್ತು ಅಳತೆ ಏನು? ಅವನ ಸಭೆಯಲ್ಲಿ ಪಿತಾಮಹನನ್ನು ಯಾರು ಉಪಾಸಿಸುತ್ತಾರೆ? ಹಾಗೆಯೇ ದೇವರಾಜ ವಾಸವನ, ವೈವಸ್ವತ ಯಮನ, ವರುಣನ, ಕುಬೇರನ ಸಭೆಗಳಲ್ಲಿ ಯಾರು ಯಾರು ಉಪಸ್ಥಿತರಿರುತ್ತಾರೆ? ಇವೆಲ್ಲವನ್ನು ನೀನು ಹೇಳಿದಂತೆ ಕೇಳಲು ಬಯಸುತ್ತೇವೆ. ಇದರ ಕುತೂಹಲವು ಅತ್ಯಧಿಕವಾಗಿದೆ.”

ಪಾಂಡವನು ಈ ರೀತಿ ಹೇಳಲು ನಾರದನು ಅವನಿಗೆ ಉತ್ತರಿಸಿದನು:

“ರಾಜನ್! ಒಂದೊಂದಾಗಿ ಆ ಸಭೆಗಳ ಕುರಿತು ಹೇಳುತ್ತೇನೆ. ಕೇಳು.”

## ಇಂದ್ರಸಭೆಯ ವರ್ಣನೆ



ನಾರದನು ಹೇಳಿದನು:

“ಕೌರವ್ಯ! ತನ್ನ ಕರ್ಮಗಳಿಂದ ಪಡೆದ ಶಕ್ರನ ದಿವ್ಯ ಸಭೆಯು ಸೂರ್ಯಪ್ರಭೆಯ ಸರಿಸಮ ಕಾಂತಿಯುಕ್ತವಾಗಿದ್ದು ಸ್ವಯಂ ಶಕ್ರನಿಂದ ನಿರ್ಮಿತಗೊಂಡಿತು. ಇಷ್ಟವಿದ್ದಲ್ಲಿಗೆ ಹೋಗಬಹುದಾದ ಆ ಸಭೆಯು ಒಂದು ನೂರು ಯೋಜನೆ ಅಗಲವಾಗಿಯೂ, ನೂರಾ ಐವತ್ತು ಯೋಜನೆ

ಉದ್ದವಾಗಿಯೂ, ಐದು ಯೋಜನೆ ಎತ್ತರವಾಗಿಯೂ ಇದೆ. ವೃದ್ಧಾಪ್ಯ, ಶೋಕ ಮತ್ತು ರೋಗರಹಿತ, ನಿರಾತಂಕ, ಮಂಗಳಕರ, ಶುಭ, ಕೊಠಡಿ ಮತ್ತು ಆಸನಗಳಿಂದ ತುಂಬಿದ, ರಮ್ಯ, ದಿವ್ಯ ವೃಕ್ಷಗಳಿಂದ ಶೋಭಿತ, ಸಬೆಯ ಪರಮಾಸನದಲ್ಲಿ ಕಿರೀಟಿ ಲೋಹಿತಾಂಗ ದೇವೇಶ್ವರನು ಮಹೇಂದ್ರಾಣಿ ಶಚಿ ಮತ್ತು ಶ್ರೀ ಲಕ್ಷ್ಮಿಯರೊಡನೆ ಮತ್ತು ಹ್ರೀ, ಕೀರ್ತಿ ಮತ್ತು ದ್ಯುತಿಗಳ ಸಹಿತ ಹೊಳೆಯುವ ಆಕಾರವನ್ನು ಪಡೆದು, ಶುದ್ಧ ವಸ್ತ್ರ, ಬಣ್ಣದ ಮಾಲೆಗಳನ್ನು ಧರಿಸಿ ಕುಳಿತಿರಲು ಮರುತರು, ಗೃಹಮೇಧಿ ದೇವತೆಗಳು, ಸಿದ್ಧರು, ದೇವರ್ಷಿಗಳು, ಸಾಧ್ಯರು ಮತ್ತು ದೇವಗಣಗಳು ಆ ಮಹಾತ್ಮ ಶತಕ್ರತುವನ್ನು ನಿತ್ಯವೂ ಉಪಾಸಿಸುತ್ತಾರೆ. ಇವರ ದಿವ್ಯರೂಪ ಸ್ವಲಂಕೃತ ಅನುಚರರು ಎಲ್ಲರೂ ಮಹಾತ್ಮ ಅರಿಂದಮ ದೇವರಾಜನನ್ನು ಉಪಾಸಿಸುತ್ತಾರೆ. ಹಾಗೆಯೇ ಅಮಲರೂ, ನಿಷ್ಪಾಪರೂ, ಅಗ್ನಿಯಂತೆ ಬೆಳಗುವವರೂ, ತೇಜಸ್ವಿಗಳು, ಸೋಮಯಾಜಿಗಳೂ, ವಿಪಾಪಿಗಳೂ, ವಿಗತಕ್ಲಮರೂ ಆದ ಸರ್ವ ದೇವರ್ಷಿಗಳೂ ಶಕ್ರನ ಉಪಾಸನೆ ಮಾಡುತ್ತಾರೆ: ಪರಾಶರ, ಪರ್ವತ, ಸಾವರ್ಣಿ, ಗಾಲವ, ಶಂಖ, ಲಿಖಿತ, ಮುನಿ ಗೌರಶಿರ, ದುರ್ವಾಸ, ದೀರ್ಘತಪಸ್, ಯಾಜ್ಞವಲ್ಕ್ಯ, ಭಾಲುಕಿ, ಉದ್ದಾಲಕ, ಶ್ವೇತಕೇತು, ಪ್ರಭು ಶಾತ್ಯಾಯನ, ಹವಿಷ್ಮತ್,

ಗವಿಷ್ಠ, ಪಾರ್ಥಿವ ಹರಿಶ್ಚಂದ್ರ, ಹೃದ್ಯ, ಉದರಶಾಂಡಿಲ್ಯ,
ಪಾರಶರ್ಯ, ಮತ್ತು ಕೃಷೀವಲ, ವಾತಸ್ಕಂಧ, ವಿಶಾಖ,
ವಿಧಾತ, ಕಾಲ, ಅನಂತದಂತ, ತ್ವಷ್ಟ, ವಿಶ್ವಕರ್ಮ,
ತುಂಬುರು, ಮೊದಲಾದ ಯೋನಿಜರೂ, ಅಯೋನಿಜರೂ,
ವಾಯುಭಕ್ಷರೂ, ಹುತಾಶಿನರು ಎಲ್ಲರೂ ಸರ್ವಲೋಕಗಳ
ಒಡೆಯ ವಜ್ರಿಯನ್ನು ಉಪಾಸಿಸುತ್ತಾರೆ. ಹಾಗೆಯೇ
ಮಹಾತಪಸ್ವಿಗಳಾದ ಸಹದೇವ, ಸುನೀಥ, ವಾಲ್ಮೀಕಿ,
ಸತ್ಯವಂತ ಸಮೀಕ, ಸತ್ಯಸಂಗರ ಪ್ರಚೇತ, ಮೇಧಾತಿಥಿ,
ವಾಮದೇವ, ಪುಸಸ್ತ್ಯ, ಪುಲಹ, ಕ್ರತು, ಮರುತ್ತ, ಮರೀಚಿ,
ಸ್ಥಾಣು, ಮಹಾತಪಸ್ವಿಗಳಾದ ಅತ್ರಿ, ಕಕ್ಷಿವಾನ್, ಗೌತಮ,
ಆರ್ಕ್ಷ್ಯ, ಮುನಿ ವೈಶ್ವಾನರ, ಮುನಿ ಕಾಲಕವೃಕ್ಷೀಯ,
ಆಶ್ರವ್ಯ, ಹಿರಣ್ಯದ, ಸಂವರ್ತ, ದೇವಹವ್ಯ, ಮತ್ತು
ವೀರ್ಯವಾನ್ ವಿಷ್ವಕ್ಸೇನ. ದಿವ್ಯ ನದಿಗಳು, ಔಷಧಗಳು,
ಶ್ರದ್ಧಾ, ಮೇಧಾ, ಸರಸ್ವತೀ, ಧರ್ಮ, ಅರ್ಥ, ಕಾಮ,
ಮಿಂಚು, ಮಳೆಯ ಮೋಡಗಳು, ವಾಯು, ಗುಡುಗು,
ಪೂರ್ವ ದಿಕ್ಕು, ಇಪ್ಪತ್ತೇಳು ಯಜ್ಞವಾಹಕ ಅಗ್ನಿಗಳು -
ಅಗ್ನಿಶೋಮ, ಇಂದ್ರಾಗ್ನೀ, ಮಿತ್ರ, ಸವಿತರ್, ಯಮ, ಭಗ,
ವಿಶ್ವ, ಸಾಧ್ಯ, ಶುಕ್ರ, ಮಂಥೀ, ಯಜ್ಞ, ದಕ್ಷಿಣ, ಗ್ರಹಗಳು,
ಸರ್ವ ಸ್ತೋಭಗಳು, ಮತ್ತು ಯಜ್ಞವನ್ನು ಕೊಂಡೊಯ್ಯುವ
ಎಲ್ಲ ಮಂತ್ರಗಳು ಅಲ್ಲಿ ಸೇರಿರುತ್ತಾರೆ. ಹಾಗೆಯೇ

ಅಪ್ಸರೆಯರು, ಮನೋರಮ ಗಂಧರ್ವರು ವಿವಿಧ ನೃತ್ಯ, ವಾದ್ಯ, ಗೀತ, ಹಾಸ್ಯಗಳಿಂದ, ಸ್ತುತಿ, ಮಂಗಲ ಸ್ತುತಿಗಳಿಂದ ಕರ್ಮಗಳಿಂದ ಮಹಾತ್ಮ ವಿಕ್ರಮ ನೃಪತಿ ದೇವರಾಜ ಶತಕ್ರತು ಬಲವೃತ್ರನಿಷೂದನನನ್ನು ರಮಿಸುತ್ತಿರುತ್ತಾರೆ. ಸರ್ವ ಬ್ರಹ್ಮ ರಾಜರ್ಷಿಗಳು, ಸರ್ವ ದೇವರ್ಷಿಗಳು ಭೂಷಿತರಾಗಿ ಅಗ್ನಿಯಂತೆ ಬೆಳಗುತ್ತಿರುವ ವಿವಿಧ ದಿವ್ಯ ವಿಮಾನಗಳಲ್ಲಿ ಒಳಗೆ ಮತ್ತು ಹೊರಗೆ ಹೋಗುತ್ತಿರುತ್ತಾರೆ. ಬೃಹಸ್ಪತಿ ಶುಕ್ರರು ಒಟ್ಟಿಗೇ ಅವನಲ್ಲಿಗೆ ಹೋಗುತ್ತಿರುತ್ತಾರೆ. ಇವರು ಮತ್ತು ಇನ್ನೂ ಇತರ ಬಹಳಷ್ಟು ಯತಾತ್ಮ ಯತವ್ರತರು ಚಂದ್ರಸಂಕಾಶರು ಸೋಮನಂತೆ ಪ್ರಿಯದರ್ಶನರು ಬ್ರಹ್ಮನ ವಚನದಂತೆ ಬರುವ ಭೃಗು ಮುಂತಾದ ಸಪರ್ಷಿಗಳು ಬಂದು ಹೋಗುತ್ತಿರುತ್ತಾರೆ. ಶತಕ್ರತುವಿನ ಈ ಪುಷ್ಕರಮಾಲಿನೀ ಸಭೆಯನ್ನು ನಾನು ನೋಡಿದಹಾಗೆ ಹೇಳಿದ್ದೇನೆ.”

## ಯಮಸಭಾವರ್ಣನೆ

ನಾರದನು ಹೇಳಿದನು:

“ಯುಧಿಷ್ಠಿರ! ವಿಶ್ವಕರ್ಮನು ವೈವಸ್ವತ ಯಮನಿಗೋಸ್ಕರ ನಿರ್ಮಿಸಿದ ದಿವ್ಯ ಸಭೆಯ ಕುರಿತು ಹೇಳುತ್ತೇನೆ ಕೇಳು. ಆ ತೇಜಸ್ವೀ, ಸೂರ್ಯನ ಪ್ರಕಾಶದಂತೆ ಬೆಳಗುತ್ತಿರುವ



ಸಭೆಯು ನೂರು ಯೋಜನ ವಿಸ್ತಾರವಾಗಿದ್ದು ಎಲ್ಲೆಲ್ಲಿ ಹೋಗಲೂ ಸಾದ್ಯವಾಗಿರುವಂಥದಾಗಿದೆ. ಒಳಗೆ ಅತಿ ಉಷ್ಣವೂ ಇಲ್ಲ ಅತಿ ಶೀತವೂ ಇಲ್ಲ, ಮನಸ್ಸನ್ನು ಸಂತೋಷಗೊಳಿಸುತ್ತದೆ, ಶೋಕವಿಲ್ಲ, ವೃದ್ಧಾಪ್ಯವಿಲ್ಲ, ಹಸಿವು ಬಾಯಾರಿಕೆಗಳಿಲ್ಲ, ಅಪ್ರಿಯವಾದುದೇನೂ ಇಲ್ಲ, ದೀನತೆಯಿಲ್ಲ, ಶೋಕವಿಲ್ಲ ಮತ್ತು ಅನಾನುಕೂಲವಾದದ್ದು ಏನೂ ಇಲ್ಲ. ಅಲ್ಲಿ ಮನುಷ್ಯರ ಮತ್ತು ದೇವತೆಗಳ ಸರ್ವ ಕಾಮಗಳೂ ತೃಪ್ತಿಗೊಳ್ಳುತ್ತವೆ. ಅಲ್ಲಿ ಭಕ್ಷ್ಯ ಭೋಜ್ಯಗಳ ಮತ್ತು ಅವುಗಳ ರುಚಿಯಲ್ಲಿ ಕೊರತೆಯಿಲ್ಲ. ಅಲ್ಲಿ

ಪುಣ್ಯಸುಗಂಧಿತ ಮಾಲೆಗಳಿವೆ, ಮತ್ತು ವೃಕ್ಷಗಳು ಸದಾ ಹೂ ಹಣ್ಣುಗಳಿಂದ ತುಂಬಿರುತ್ತವೆ. ಅಲ್ಲಿ ರುಚಿಕರ ತಣ್ಣೀರು ಮತ್ತು ಬಿಸಿ ನೀರು ಎರಡೂ ದೊರೆಯುತ್ತವೆ. ಅಲ್ಲಿ ಪುಣ್ಯ ರಾಜರ್ಷಿಗಳೂ, ಅಮಲ ದೇವರ್ಷಿಗಳೂ ಸಂತೋಷದಿಂದ ವೈವಸ್ವತ ಯಮನನ್ನು ಉಪಾಸಿಸುತ್ತಾರೆ - ಯಯಾತಿ, ನಹುಷ, ಪುರು, ಮಾಂಧಾತ, ಸೋಮಕ, ನೃಗ, ತ್ರಸದಸ್ಯು, ತುರಯ, ಕೃತವೀರ್ಯ, ಶೃತಶ್ರವ, ಅರಿಪ್ರಣುತ್, ಸುಸಿಂಹ, ಕೃತವೇಗ, ಕೃತಿ, ನಿಮಿ, ಪ್ರತರ್ದನ, ಶಿಬಿ, ಮತ್ಸ್ಯ, ಪೃಥ್ವಕ್ಷ, ಬೃಹದ್ರಥ, ಐಡ, ಮರುತ, ಕುಶಿಕ, ಸಾಂಕಸ್ಯ, ಸಂಕೃತಿ, ಭಾವ, ಚತುರಶ್ವ, ಸದಶ್ವೋರ್ಮಿ. ಪಾರ್ಥಿವ ಕಾರ್ತವೀರ್ಯ, ಭರತ, ಸುರಥ, ಸುನೀಥ, ನೈಷಧ ನಲ, ದಿವೋದಾಸ, ಸುಮನ, ಅಂಬರೀಷ, ಭಗೀರಥ, ವ್ಯಶ್ವ, ಸ್ವದಶ್ವ, ವಧ್ರಶ್ವ, ಪಂಚಹಸ್ತ, ಪೃಥುಶ್ರವ, ಋಷದ್ಗು, ವೃಷಸೇನ, ಕ್ಷುಪ, ಸುಮಹಾಬಲ, ಋಷದಶ್ವ, ವಸುಮನ, ಧ್ವಜೀ ರಥೀ ಪುರುಕುತ್ಸ, ಅರಿಷ್ಟಿಶೇಣ, ದಿಲೀಪ, ಮಹಾತ್ಮ ಉಶೀನರ, ಔಶೀನರ, ಪುಂಡರೀಕ, ಶರ್ಯಾತಿ, ಶರಭ, ಶುಚಿ, ಅಂಗ, ಅರಿಷ್ಟ, ವೇನ, ದುಃಷಂತ, ಸಂಜಯ, ಜಯ, ಭಾಮಸ್ವರಿ, ಸುನೀಥ, ನಿಷಧ, ತ್ರಿಶೀರಥ, ಕರಂಧಮ, ಬಾಹ್ಲೀಕ, ಸುದ್ಯುಮ್ನ, ಬಲವಾನ್ ಮಧು, ಕಪೋತರೋಮ, ತೃಣಕ, ಸಹದೇವ, ಅರ್ಜುನ, ರಾಮ ದಾಶರಥಿ, ಲಕ್ಷ್ಮಣ,

ಪ್ರತರ್ದನ, ಅಲರ್ಕ, ಕಕ್ಷಸೇನ, ಗಯ, ಗೌರ, ಜಾಮದಗ್ನಿ ರಾಮ, ನಾಭಾಗ, ಸಗರ, ಭೂರಿದ್ಯುಮ್ನ, ಮಹಾಶ್ವ, ಪೃಥ್ವಶ್ವ, ಜನಕ, ವೈನ್ಯ, ರಾಜ ವಾರಿಷೇಣ, ಪುರುಜ, ಜನಮೇಜಯ, ಬ್ರಹ್ಮದತ್ತ, ತ್ರಿಗರ್ತ, ರಾಜ ಉಪರಿಚರ, ಇಂದ್ರದ್ಯುಮ್ನ, ಭೀಮಜ, ಗಯ, ಪೃಷ್ಠ, ಅನಘ ನಯ, ಪದ್ಮ, ಮುಚುಕುಂದ, ಭೂರಿದ್ಯುಮ್ನ, ಪ್ರಸೇನಜಿತ್, ಅರಿಷ್ಟನೇಮಿ, ಪ್ರದ್ಯುಮ್ನ, ಪೃಥಗಾಶ್ವ, ಅಜಕ, ನೂರು ಮತ್ಸ್ಯ ನೃಪತಿಯರು, ನೂರು ನೀಪರು, ನೂರು ಹಯರು, ನೂರು ಧೃತರಾಷ್ಟ್ರರು, ಎಂಭತ್ತು ಜನಮೇಜಯರು, ನೂರು ಬ್ರಹ್ಮದತ್ತರು, ನೂರು ವೈರಿಗಳಾದ ಈರಿಗಳು, ರಾಜರ್ಷಿ ಶಂತನು, ನಿನ್ನ ತಂದೆ ಪಾಂಡು, ಉಶದ್ಗವ, ಶತರಥ, ದೇವರಾಜ, ಜಯದ್ರಥ, ರಾಜರ್ಷಿ ವೃಷಾದರ್ಭಿ, ಮಂತ್ರಿಗಳ ಸಹಿತ ಧಾಮ್ನಾ, ಬಹಳಷ್ಟು ಭೂರಿ ದಕ್ಷಿಣೆಗಳನ್ನಿತ್ತು ಅಶ್ವಮೇಧೇಷ್ಠಿಗಳನ್ನು ನಡೆಸಿದ ಸಹಸ್ರಾರು ಶತಬಿಂದುಗಳು. ಈ ಎಲ್ಲ ಕೀರ್ತಿಮಂತ, ಬಹುಶ್ರುತ, ಪುಣ್ಯ ರಾಜರ್ಷಿಗಳು ಆ ಸಭೆಯಲ್ಲಿ ವೈವಸ್ವತನನ್ನು ಆರಾಧಿಸುತ್ತಾರೆ. ಅಗಸ್ತ್ಯ, ಮತಂಗ, ಕಾಲ, ಮೃತ್ಯು, ಯಜ್ವಾನ, ಸಿದ್ಧರು, ಯೋಗಶರೀರಿಗಳು, ಅಗ್ನಿಷ್ವಾತ್ತರು, ಪಿತರರು, ಫೇನಪರು, ಚೋಶ್ಮಪರು, ಸ್ವಧಾವಂತರು, ಬರ್ಹಿಷದರು, ಮೂರ್ತಿಮಂತರು, ಕಾಲಚಕ್ರ, ಸಾಕ್ಷಾತ್

ಭಗವಾನ್ ಹವ್ಯವಾಹನ, ದುಷ್ಕೃತಕರ್ಮಿ ನರರು, ದಕ್ಷಿಣಾಯನದಲ್ಲಿ ಮೃತಹೊಂದಿದವರು, ಕಾಲವನ್ನು ನಡೆಸುವ ಯಮನನ್ನು ಅರಿತ ಮನುಷ್ಯರು, ಶಿಂಶಪ ಮತ್ತು ಪಾಲಾಶ ವೃಕ್ಷಗಳು, ಕಶ ಮತ್ತು ಕುಶಗಳು, ಧರ್ಮರಾಜ ಮೂರ್ತಿಮಂತ ನಿರಾಮಯನನ್ನು ಉಪಾಸಿಸುತ್ತಾರೆ. ಇವರು ಮತ್ತು ಇನ್ನೂ ಬಹಳಷ್ಟು ಇತರ ಪಿತೃರಾಜನ ಸಭಾಸದರಾಗಿದ್ದಾರೆ ಮತ್ತು ಇವರೆನ್ನೆಲ್ಲರನ್ನೂ ನಾಮ ಕರ್ಮಗಳಿಂದ ಎಣಿಸುವುದು ಅಶಕ್ಯ. ಆದರೂ ಬೇಕೆಂದಲ್ಲಿಗೆ ಹೋಗಬಲ್ಲ ಈ ರಮ್ಯ ಸಭೆಯಲ್ಲಿ ಎಂದೂ ಇಕ್ಕಟ್ಟು ಎನ್ನಿಸುವುದಿಲ್ಲ. ದೀರ್ಘಕಾಲದವರೆಗೆ ತಪಸ್ಸನ್ನು ತಪಿಸಿ ವಿಶ್ವಕರ್ಮನು ಇದನ್ನು ನಿರ್ಮಿಸಿದನು ಮತ್ತು ತನ್ನದೇ ತೇಜಸ್ಸಿನಿಂದ ಅದು ಉರಿಯುತ್ತಿದೆಯೋ ಎನ್ನುವಂತೆ ಬೆಳಗುತ್ತದೆ. ಅಲ್ಲಿಗೆ ಉಗ್ರತಪಸ್ವಿಗಳು, ಸುವ್ರತರು, ಸತ್ಯವಾದಿಗಳು, ಶಾಂತರು, ಸನ್ಯಾಸಿಗಳು, ಸಿದ್ಧರು, ಪುಣ್ಯಕರ್ಮಗಳಿಂದ ಪೂತರಾದವರು ಎಲ್ಲರೂ ಹೊಳೆಯುತ್ತಿರುವ ದೇಹಗಳನ್ನು ಧರಿಸಿ, ಶುಭ್ರವಸ್ತ್ರಗಳನ್ನು ಧರಿಸಿ, ಬಣ್ಣಬಣ್ಣದ ಅಂಗದ ಮತ್ತು ಮಾಲೆಗಳನ್ನು ಧರಿಸಿ, ಜ್ವಲಿಸುತ್ತಿರುವ ಕುಂಡಲಗಳನ್ನು ಧರಿಸಿ ಹೋಗುತ್ತಾರೆ. ಇಂಥಹ ಪುಣ್ಯಕರ್ಮ ಸುಕೃತರು ಅನುಸರಿಸುತ್ತಿರಲು ಭೂಷಿತ ಮಹಾತ್ಮ ಗಂಧರ್ವರು ಮತ್ತು ನೂರಾರು

ಅಪ್ಸರಗಣಗಳು ವಾದ್ಯ, ನೃತ್ಯ, ಗೀತ, ಹಾಸ್ಯ, ಲಾಸ್ಯ ಮತ್ತು ಎಲ್ಲವುಗಳಿಂದ ಪುಣ್ಯ ಗಂಧ, ಶಬ್ಧಗಳಿಂದ ದಿವ್ಯ ಮಾಲೆಗಳಿಂದ ಎಲ್ಲರೂ ಅವನನ್ನು ಸುತ್ತುವರೆದಿರುತ್ತಾರೆ! ನೂರು ನೂರು ಸಾವಿರದಷ್ಟು ಧರ್ಮಿಗಳು ಮಹಾತ್ಮ ರೂಪಯುಕ್ತ ಮನಸ್ವಿನಿ ಪ್ರಜೇಶ್ವರನನ್ನು ಉಪಾಸನೆ ಮಾಡುತ್ತಾರೆ. ಮಹಾತ್ಮ ಪಿತೃರಾಜನ ಸಭೆಯು ಈ ರೀತಿ ಇದೆ. ಈಗ ಪುಷ್ಕರಮಾಲಿನೀ ಎಂಬ ವರುಣನ ಸಭೆಯ ಕುರಿತು ಹೇಳುತ್ತೇನೆ."

## ವರುಣಸಭಾ ವರ್ಣನೆ

ನಾರದನು ಹೇಳಿದನು:

"ಯುಧಿಷ್ಠಿರ! ವರುಣನ ದಿವ್ಯ ಸಿತಪ್ರಭಾ ಸಭೆಯು ಶುಭಪ್ರಾಕಾರತೋರಣಗಳಿಂದ ಕೂಡಿದ್ದು ಪ್ರಮಾಣದಲ್ಲಿ ಯಮನ ಸಭೆಯಂತೆಯೇ ಇದೆ. ನೀರಿನಲ್ಲಿ ವಿಶ್ವಕರ್ಮನು ಅದನ್ನು ನಿರ್ಮಿಸಿದ್ದನು. ಅದು ದಿವ್ಯ ರತ್ನಮಯ ಫಲಪುಷ್ಪಗಳನ್ನು ನೀಡುವ ವೃಕ್ಷಗಳಿಂದ ಆವೃತಗೊಂಡಿದೆ. ಬೇರೆ ಬೇರೆ ಬಣ್ಣಗಳ - ನೀಲಿ, ಹಳದಿ, ಕಪ್ಪು, ಬಿಳಿ, ಕೆಂಪು - ಹೂವಿನ ಹಾಸಿಗೆ ಇದೆ. ಮತ್ತು ಅಲ್ಲಿ ಪುಷ್ಪಗುಚ್ಛಗಳಿಂದ ತುಂಬಿದ ಬಳ್ಳಿಗಳೂ ಇವೆ. ಅಲ್ಲಿ ನಾನಾ ರೂಪದ ವರ್ಣಿಸಲಾಧ್ಯ ಸುಂದರ ನೂರಾರು


© www.sanatansociety.com

ಸಹಸ್ರಾರು ಮೃದುಸ್ವರಗಲ ಪಕ್ಷಿಗಳು ಅಲ್ಲಲ್ಲಿ ಹಾರಾಡುತ್ತಿರುತ್ತವೆ. ಆ ಸಭೆಯಲ್ಲಿ ಏನನ್ನು ಮುಟ್ಟಿದರೂ ಸುಖವಾಗಿರುತ್ತದೆ. ಶೀತವೂ ಇಲ್ಲ ಉಷ್ಣವೂ ಇಲ್ಲ. ವರುಣನು ಪಾಲಿಸುತ್ತಿರುವ ಆ ರಮ್ಯ ಶ್ವೇತ ಸಭೆಯಲ್ಲಿ ಹಲವಾರು ಕೊಠಡಿಗಳು ಆಸನಗಳು ಇವೆ. ಅಲ್ಲಿ ವರುಣನು ವರುಣಿಯೊಡನೆ ದಿವ್ಯರತ್ನಾಂಬರಗಳನ್ನು ಧರಿಸಿ ಭೂಷಣಗಳಿಂದ ಶೋಭಿತನಾಗಿ ಕುಳಿತಿರುತ್ತಾನೆ. ಹಾರಗಳನ್ನು ಆಭರಣಗಳನ್ನು ಧರಿಸಿ, ದಿವ್ಯಮಾಲೆಗಳನ್ನು ಕೆಳಗೆ ಹಾಸಿರುವ ಆದಿತ್ಯರು ಅಲ್ಲಿ ಜಲೇಶ್ವರ ವರುಣನನ್ನು ಉಪಾಸಿಸುತ್ತಾರೆ. ಅದೇ ರೀತಿ, ನಾಗ ವಾಸುಕಿ, ತಕ್ಷಕ, ಐರಾವತ ಕೃಷ್ಣ, ಲೋಹಿತ, ಪದ್ಮ, ಚಿತ್ರ, ವೀರ್ಯವಂತ ಕಂಬಲ, ಅಶ್ವತರ, ನಾಗ ಧೃತರಾಷ್ಟ್ರ, ಬಲಾಹಕ, ಮಣಿಮಾನ್, ಕುಂಡಲಧರ, ಕರ್ಕೋಟಕ, ಧನಂಜಯ, ಪ್ರಹ್ಲಾದ, ಮೂಷಿಕಾದ, ಮತ್ತು ಜನಮೇಯ ಎಲ್ಲರೂ ಪತಾಕ ಮಂಡಲಗಳಿಂದ ಶೋಭಿತರಾಗಿ ಹೆಡೆಯನ್ನು ಎತ್ತಿ, ಇವರು ಮತ್ತು ಇನ್ನೂ ಇತರ ಬಹಳಷ್ಟು ಸರ್ಪಗಳು ಮಹಾತ್ಮ ವರುಣನನ್ನು ಉಪಾಸನೆಮಾಡಿ ರೋಗಗಳಿಂದ ಹೊರತಾಗಿರುತ್ತಾರೆ. ರಾಜಾ ಬಲಿ ವಿರೋಚನ, ಪೃಥ್ವಿಯನ್ನು ಜಯಿಸಿದ ನರಕ, ಪ್ರಹ್ಲಾದ, ವಿಪ್ರಚಿತ್ತಿ, ಸರ್ವ ಕಾಲಕಂಜರು, ಸುಮನು, ದುರ್ಮುಖ, ಶಂಖ, ಸುಮನ,

ಸುಮತಿ, ಸ್ವನ, ಘಟೋದರ, ಮಹಾಪಾರ್ಶ್ವ, ಕಥನ, ಪಿಠರ, ವಿಶ್ವರೂಪ, ಸುರೂಪ, ವಿರೂಪ, ಮಹಾಶಿರ, ದಶಗ್ರೀವ, ವಾಲಿ, ಮೇಘವಾಸ, ದಶಾವರ, ಕೈಟಭ, ವಿಟ್ಟಥ, ಸಂಹ್ಲಾದ, ಇಂದ್ರತಾಪನ, ದೈತ್ಯ ದಾನವ ಪಂಗಡಗಳು - ತಮ್ಮ ಹೊಳೆಯುವ ಕುಂಡಲಗಳು, ಎಲ್ಲರೂ ಮಾಲೆಗಳನ್ನು ಕಿರೀಟಗಳನ್ನು ಧರಿಸಿ, ದಿವ್ಯ ವಸ್ತ್ರಗಳನ್ನು ಧರಿಸಿ, ಎಲ್ಲರೂ ಶೂರರೂ, ವರಗಳನ್ನು ಪಡೆದವರೂ, ಮೃತ್ಯುವನ್ನು ಜಯಿಸಿದವರೂ, ಸದಾ ಧರ್ಮಪಾಶದಲ್ಲಿರುವ, ಸರ್ವ ಸುಚರಿತವ್ರತರೂ ಆ ಮಹಾತ್ಮ ವರುಣದೇವನನ್ನು ಉಪಾಸಿಸುತ್ತಾರೆ. ಹಾಗೆಯೇ ನಾಲ್ಕು ಸಮುದ್ರಗಳು, ನದೀ ಭಾಗೀರಥಿ, ಕಾಲಿಂದೀ, ವಿದಿಶಾ, ವೇಣ್ಣಾ, ವೇಗವಾಹಿನೀ ನರ್ಮದಾ, ವಿಪಾಶಾ, ಶತದ್ರು, ಚಂದ್ರಭಾಗ, ಸರಸ್ವತೀ, ಇರಾವತೀ, ವಿತ, ಸಿಂಧು, ದೇವನದಿ, ಗೋದಾವರೀ, ಕೃಷ್ಣವೇಣಿ, ಕಾವೇರಿ, ಸರಿದ್ವರಾ, ಇವು ಮತ್ತು ಇತರ ನದಿಗಳು, ತೀರ್ಥಗಳು, ಸರೋವರಗಳು, ಬಾವಿಗಳು, ಕಾರಂಜಿಗಳು ದೇಹವಂತರಾಗಿ, ಹೊಂಡ-ಕೆರೆಗಳು ದೇಹವಂತರಾಗಿ, ದಿಕ್ಕುಗಳು, ಭೂಮಿ, ಸರ್ವ ಪರ್ವತಗಳು, ಸರ್ವ ಜಲಚರಗಳು ಮಹಾತ್ಮನನ್ನು ಉಪಾಸಿಸುತ್ತವೆ. ಗೀತ, ವಾದ್ಯಗಳಿಂದ ಅಲ್ಲಿ ಎಲ್ಲ ಗಂಧರ್ವ ಅಪ್ಸರ ಗಣಗಳು ಒಟ್ಟಿಗೇ ವರುಣನನ್ನು ಸ್ತುತಿಸುತ್ತಿರುತ್ತಾರೆ.

ರತ್ನವಂತ ಪರ್ವತಗಳು ಮತ್ತು ಅಲ್ಲಿ ಕಂಡುಬರುವ ಔಷಧ ರಸಗಳು ಎಲ್ಲವೂ ರೂಪತಾಳಿ ಆ ಈಶ್ವರನನ್ನು ಉಪಾಸಿಸುತ್ತವೆ. ಸ್ವಯಂ ನಾನೇ ಹಿಂದೆ ವರುಣನ ಸಭೆಗೆ ಹಾರಿ ಹೋಗಿ ನೋಡಿದ್ದೇನೆ. ಈಗ ಕುಬೇರನ ರಮ್ಯ ಸಭೆಯ ಕುರಿತು ಕೇಳು."

## ಕುಬೇರಸಭಾ ವರ್ಣನೆ

ನಾರದನು ಹೇಳಿದನು:

"ರಾಜನ್! ವೈಶ್ರವಣಿಯ ಬಿಳಿಯ ಕಾಂತಿಯುಕ್ತ ಸಭೆಯು ಒಂದು ನೂರು ಯೋಜನ ಉದ್ದ ಮತ್ತು ಎಪ್ಪತ್ತು ಯೋಜನ ವಿಸ್ತೀರ್ಣವಾದದ್ದು. ಸ್ವಯಂ ವೈಶ್ರವಣನು ತನ್ನ ತಪಸ್ಸಿನಿಂದ ಚಂದ್ರನ ಪ್ರಭೆಯನ್ನು ಹೊಂದಿದ, ಆಕಾಶದಲ್ಲಿ ತೇಲುತ್ತಿರುವ, ಕೈಲಾಸಶಿಖರದಂತಿದ್ದ ಆ ಸಭೆಯನ್ನು ನಿರ್ಮಿಸಿದನು. ಗುಹ್ಯಕರು ಕೊಂಡೊಯ್ಯುವ ಆ ಸಭೆಯು ಆಕಾಶಕ್ಕೆ ಅಂಟಿಕೊಂಡಿರುವಂತೆ ತೋರುತ್ತದೆ. ಅದು ದಿವ್ಯ ಹೇಮಮಯ ಎತ್ತರ ಮರಗಳಿಂದ ಶೋಭಿತವಾಗಿದೆ. ಕಿರಣಗಳನ್ನು ಹೊರಸೂಸುವ, ಹೊಳೆಯುತ್ತಿರುವ, ದಿವ್ಯಗಂಧಾ ಮನೋರಮಾ ಬಿಳಿಯ ಮೋಡ ಅಥವಾ ಶಿಖರದಂತಿರುವ ಆ ಸಭೆಯು ತೇಲುತ್ತಿರುವಂತೆ ತೋರುತ್ತದೆ. ಅಲ್ಲಿ ರಾಜಾ ವೈಶ್ರವಣನು ವಿಚಿತ್ರ ಆಭರಣ



ವಸ್ತ್ರಗಳನ್ನು ಧರಿಸಿ, ಹೊಳೆಯುತ್ತಿರುವ ಕುಂಡಲಗಳನ್ನು
ಧರಿಸಿ, ಸಹಸ್ರಾರು ಸ್ತ್ರೀಯರಿಂದ ಸುತ್ತುವರೆಯಲ್ಪಟ್ಟು,
ದಿವಾಕರನಂತೆ ಹೊಳೆಯುತ್ತಿರುವ, ದಿವ್ಯ ದಿಂಬುಗಳಿಂದ

ಅಲಂಕೃತ, ದಿವ್ಯ ಪಾದಪೀಠವನ್ನು ಹೊಂದಿದ, ಸುಂದರ ಶ್ರೇಷ್ಠ ಆಸನದಲ್ಲಿ ಕುಳಿತಿರುತ್ತಾನೆ. ಸುವಾಸಿತ ಶುದ್ಧ ಗಾಳಿಯು ಮಂದಾರ ವನಗಳ ಉದಾರತೆಯನ್ನು ಎತ್ತಿಕೊಂಡು, ಸೌಂಗಂಧಿಕಗಳ ಸುವಾಸನೆಯನ್ನು ಎತ್ತಿ ತರುತ್ತದೆ. ಮಿಶ್ರಕೇಶಿ, ರಂಭಾ, ಶುಚಿಸ್ಮಿತೆ ಚಿತ್ರಸೇನಾ, ಚಾರುನೇತ್ರೆ, ಘೃತಾಚೀ, ಮೇನಕಾ, ಪುಂಜಿಕಸ್ಥಲಾ, ವಿಶ್ವಾಚೀ, ಸಹಜನ್ಯಾ, ಪ್ರಮ್ಲೋಚಾ, ಊರ್ವಶೀ, ಇರಾ, ವರ್ಗಾ, ಸೌರಭೇಯೀ, ಸಮೀಚೀ, ಬುದ್ಬುದಾ, ಲತಾ - ಇವರು ಮತ್ತು ಇನ್ನೂ ಸಹಸ್ರಾರು ಇತರ ನೃತ್ತಗೀತವಿಶಾರದ ಅಪ್ಸರೆಯರ ಗುಂಪು ಧನದನ ಸೇವೆಮಾಡುತ್ತದೆ. ಅನಿಶವೂ ದಿವ್ಯ ವಾದ್ಯ, ನೃತ್ಯ, ಗೀತಗಳಿಂದ ತುಂಬಿದ ಆ ಸಭೆಯು ಗಂಧರ್ವಾಪ್ಸರ ಗಣಗಳಿಂದ ಹೊಳೆಯುತ್ತಿರುತ್ತದೆ. ಅಲ್ಲಿ ಕಿನ್ನರ ಎಂಬ ಹೆಸರಿನ ಗಂಧರ್ವರು, ಮತ್ತು ನರ ಎಂಬ ಹೆಸರಿನ ಇತರರು, ಮಣಿಭದ್ರ, ಧನದ, ಶ್ವೇತಭದ್ರ, ಗುಹ್ಯಕ, ಕಶೇರಕ, ಗಂಡಕಂಡು, ಮಹಾಬಲ ಪ್ರದ್ಯೋತ, ಕುಸ್ತುಂಬುರು, ಪಿಶಾಚ, ಗಜಕರ್ಣ, ವಿಶಾಲಕ, ವರಾಹಕರ್ಣ, ಸಾಂದ್ರೋಷ್ಠ, ಫಲಭಕ್ಷ, ಫಲೋದಕ, ಅಂಗಚೂಡ, ಶಿಖಾವರ್ತ, ಹೇಮನೇತ್ರ, ವಿಭೀಷಣ, ಪುಷ್ಪಾನನ, ಪಿಂಗಲಕ, ಶೋಣಿತೋದ, ಪ್ರವಾಲಕ,

ವೃಕ್ಷವಾಸ್ಯ, ನಿಕೇತ, ಚೀರವಾಸ, ಇವರು ಮತ್ತು ಅನ್ಯ ಬಹಳಷ್ಟು ನೂರಾರು ಸಹಸ್ರಾರು ಯಕ್ಷರು ನಲಕೂಬರರು, ಭಗವತೀ ಮತ್ತು ಶ್ರೀ ಸದಾ ಅವನ ಉಪಸ್ಥಿತಿಯಲ್ಲಿರುತ್ತಾರೆ. ನಾನು ಮತ್ತು ನನ್ನಂಥಹ ಇತರರು, ಆಚಾರ್ಯರು, ಇತರ ದೇವರ್ಷಿಗಳು ಹಲವಾರು ಬಾರಿ ಅಲ್ಲಿ ಬಂದಿರುತ್ತಾರೆ. ನೂರಾರು ಸಹಸ್ರಾರು ಭೂತಗಣಗಳಿಂದ ಆವೃತ ಉಮಾಪತಿ, ಪಶುಪತಿ, ಶೂಲಧಾರಿ, ಭಗನೇತ್ರಹ, ಭಗವಾನ್ ತ್ರ್ಯಂಬಕ ಮತ್ತು ಅಯಾಸವೇ ತೋರದ ದೇವಿ ಅಲ್ಲಿದ್ದಾರೆ. ಮಾಂಸ, ಕೊಬ್ಬು ಮತ್ತು ಎಲಬುಗಳನ್ನು ಸೇವಿಸುವ, ನೋಡಲು ಅಥವಾ ಕೇಳಲು ಉಗ್ರರಾಗಿರುವ, ನಾನಾ ಆಯುಧಗಳನ್ನು ಘೋರ ಭಿರುಗಾಳಿಯಿಂದ ನಡುಗುತ್ತಿದೆಯೋ ಎನ್ನುವಂತೆ ಬೀಸುತ್ತಿರುವ, ವಿಕಟ, ಮಹಾಜವ, ಕೆಂಪುಕಣ್ಣಿನ, ಮನೋವೇಗದ ಕುಬ್ಜ ಸಖರಿಂದ ಧನದನು ಸದಾ ಆವೃತನಾಗಿರುತ್ತಾನೆ. ಅಂತರಿಕ್ಷದಲ್ಲಿ ಪ್ರಯಾಣಿಸುತ್ತಿರುವಾಗ ಅವನ ಈ ಸಭೆಯನ್ನು ನಾನು ನೋಡಿದೆ. ರಾಜನ್! ಈಗ ನಾನು ಎಲ್ಲ ಆಯಾಸಗಳನ್ನೂ ಹೋಗಲಾಡಿಸುವ ಪಿತಾಮಹನ ಸಭೆಯ ಕುರಿತು ಹೇಳುತ್ತೇನೆ.”

## ಬ್ರಹ್ಮಸಭಾ ವರ್ಣನೆ ಮತ್ತು ರಾಜಸೂಯದ ಪ್ರಸ್ತಾವನೆ



ನಾರದನು ಹೇಳಿದನು:

“ರಾಜನ್! ಹಿಂದೆ ದೇವಯುಗದಲ್ಲಿ ವಿಗತಕ್ಲಮ ಭಗವಾನ್ ಆದಿತ್ಯನು ಮಾನುಷ ಲೋಕವನ್ನು ನೋಡಲು ದಿವದಿಂದ ಆಗಮಿಸಿದನು. ಮಾನುಷರೂಪದಲ್ಲಿ ಸಂಚರಿಸುತ್ತಿರುವಾಗ ಅವನು ಸ್ವಯಂಭು ಬ್ರಹ್ಮನ ಮಹಾ ಸಭೆಯನ್ನು ನೋಡಿದ

ಹಾಗೆ ನನಗೆ ಹೇಳಿದನು. ದಿವ್ಯ ಅಪ್ರಮೇಯ ಪ್ರಭೆಯನ್ನು ಹೊಂದಿದ, ಮನಸ್ಸಿಗೆ ಸಂತೋಷವನ್ನು ನೀಡುವ, ತನ್ನ ಅನಿರ್ದೇಶ್ಯ ಪ್ರಭಾವದಿಂದ ಸರ್ವಭೂತಗಳ ಮನೋರಮೆ ಆ ಸಭೆಯ ಗುಣಗಳನ್ನು ಕೇಳಿದ ನಾನು ಅದನ್ನು ನೋಡಲು ಉತ್ಸುಕನಾಗಿ ಆದಿತ್ಯನಲ್ಲಿ ಕೇಳಿಕೊಂಡೆನು. "ಭಗವನ್! ಪಿತಾಮಹನ ಮಹಾಸಭೆಯನ್ನು ನೋಡಲು ಬಯಸುತ್ತೇನೆ. ಯಾವ ತಪಸ್ಸು, ಕರ್ಮ, ಔಷಧಿ, ಉಪಾಯ ಅಥವಾ ಮಾಯೆಯಿಂದ ಅದನ್ನು ನೋಡಲು ಸಾಧ್ಯವಾಗುತ್ತದೆ? ನಾನು ಆ ಸಭೆಯನ್ನು ಹೇಗೆ ನೋಡಲಿ ಎಂದು ಹೇಳು." ಆಗ ಆ ವೀರ್ಯವಾನ್ ಸೂರ್ಯ ಭಗವಾನನು ಪಾಪವೇ ಇಲ್ಲದ ಆಯಾಸವನ್ನೇ ಅರಿಯದ ಬ್ರಹ್ಮನ ಆ ಸಭೆಗೆ ನನ್ನನ್ನು ಕರೆದುಕೊಂಡು ಆಗಮಿಸಿದನು. ಇದೇ ಅದರ ರೂಪವೆಂದು ನಿರ್ದಿಷ್ಠವಾಗಿ ಹೇಳಲು ಶಕ್ಯವಿಲ್ಲ. ಯಾಕೆಂದರೆ ಕ್ಷಣ ಕ್ಷಣಕ್ಕೆ ಅದರ ಅನಿರ್ದೇಶ್ಯ ರೂಪವು ಬದಲಾಗುತ್ತಿರುತ್ತದೆ. ನನಗೆ ಅದರ ಪರಿಮಾಣವಾಗಲೀ ಸಂಸ್ಥಾನವಾಗಲೀ ಗೊತ್ತಿಲ್ಲ. ಮತ್ತು ಅದಕ್ಕೆ ಮೊದಲು ಎಂದೂ ನಾನು ಅಂಥಹ ರೂಪವನ್ನು ನೋಡಿರಲಿಲ್ಲ. ಆ ಸಭೆಯು ಸುಸುಖವಾಗಿದೆ - ಶೀತವೂ ಇಲ್ಲ ಉಷ್ಣವೂ ಇಲ್ಲ. ಅದನ್ನು ಪ್ರವೇಶಿಸಿದವರಿಗೆ ಹಸಿವು, ಬಾಯಾರಿಕೆ, ಆಯಾಸ ಎನ್ನುವುದೇ ಇರುವುದಿಲ್ಲ. ಅದು ಬಣ್ಣ ಬಣ್ಣಗಳಿಂದ

ಹೊಳೆಯುತ್ತಿದ್ದು ನಾನಾ ರೂಪಗಳಲ್ಲಿ ರಚಿಸಲ್ಪಟ್ಟಿದೆ. ಅದಕ್ಕೆ ಬೆಂಬಲ ನೀಡುವ ಯಾವ ಸ್ತಂಬಗಳೂ ಇರಲಿಲ್ಲ. ಶಾಶ್ವತವಾಗಿದ್ದ ಅದಕ್ಕೆ ಕ್ಷಯವೆಂಬುದೇ ತಿಳಿದಿಲ್ಲ. ಅದು ಚಂದ್ರ, ಸೂರ್ಯ ಮತ್ತು ಅಗ್ನಿಗೂ ಅಧಿಕ ಸ್ವಯಂಪ್ರಭೆಯನ್ನು ಹೊಂದಿದೆ. ನಾಕದ ಸೂರಿನಲ್ಲಿ ಭಾಸ್ಕರನಿಗೆ ಬೆಳಕನ್ನು ನೀಡುತ್ತಿದೆಯೋ ಎನ್ನುವಂತೆ ಬೆಳಗುತ್ತದೆ. ಅದರಲ್ಲಿ ದೇವಮಾಯೆಯಿಂದ ನಿಲುವಿಲ್ಲದೇ ಲೋಕಗಳನ್ನು ಸೃಷ್ಟಿಮಾಡುತ್ತಿರುವ ಲೋಕಪಿತಾಮಹ ಭಗವಾನನು ತಾನೊಬ್ಬನೇ ಕುಳಿತಿದ್ದಾನೆ. ಪ್ರಜಾಪತಿಗಳಾದ ದಕ್ಷ, ಪ್ರಚೇತ, ಪುಲಹ, ಮರೀಚಿ, ಕಶ್ಯಪ, ಭೃಗು, ಅತ್ರಿ, ವಸಿಷ್ಠ, ಗೌತಮ, ಅಂಗಿರಸ, ಮನು, ಅಂತರಿಕ್ಷ, ವಿಧ್ಯೆ, ವಾಯು, ಅಗ್ನಿ, ಜಲ, ಭೂಮಿ, ಶಬ್ಧ, ಸ್ಪರ್ಷ, ರೂಪ, ರಸ, ಗಂಧ, ಪ್ರಕೃತಿ, ವಿಕಾರ ಮತ್ತು ವಿಶ್ವದ ಅನ್ಯ ಕಾರಣಗಳು ಆ ಪ್ರಭುವಿನ ಸೇವೆಮಾಡುತ್ತಾರೆ. ನಕ್ಷತ್ರಗಳ ಸಹಿತ ಚಂದ್ರಮ, ಗಭಸ್ತಿಮಾನ ಆದಿತ್ಯ, ವಾಯು, ಋತುಗಳು, ಸಂಕಲ್ಪ, ಪ್ರಾಣ, ಇವು ಮತ್ತು ಅನ್ಯ ಬಹಳಷ್ಟು – ಅರ್ಥ, ಧರ್ಮ, ಕಾಮ, ಹರ್ಷ, ದ್ವೇಶ, ತಪಸ್ಸು, ದಮ - ಎಲ್ಲವೂ ಸ್ವಯಂಭುವಿನ ಉಪಸ್ಥಿತಿಯಲ್ಲಿದ್ದಾರೆ. ಅಲ್ಲಿಗೆ ಗಂಧರ್ವರು ಅಪ್ಸರೆಯರು ಒಟ್ಟಿಗೇ ಬರುತ್ತಾರೆ. ಇಪ್ಪತ್ತೇಳು ಮತ್ತು ಅನ್ಯ ಲೋಕಪಾಲರೆಲ್ಲರೂ, ಶುಕ್ರ, ಬೃಹಸ್ಪತಿ, ಬುಧ, ಅಂಗಾರಕ,

ಶನೈಶ್ಚರ, ರಾಹು ಮೊದಲಾದ ಗ್ರಹಗಳೆಲ್ಲರೂ, ಮಂತ್ರ, ರಥಂತರ, ಹರಿಮಾನ್, ವಸುಮಾನ್, ಅವರ ರಾಜನೊಂದಿಗೆ ಆದಿತ್ಯರು, ಎರಡೆರಡು ಹೆಸರುಗಳಿಂದ ಕರೆಯಲ್ಪಡುವ ಎಲ್ಲ ದೇವತೆಗಳೂ, ಮರುತ, ವಿಶ್ವಕರ್ಮ, ವಸವ, ಎಲ್ಲ ಪಿತೃಗಣಗಳು, ಸರ್ವ ಹವಿಸ್ಸುಗಳು, ಋಗ್ವೇದ, ಸಾಮವೇದ, ಯಜುರ್ವೇದ, ಅಥರ್ವವೇದ, ಪರ್ವಗಳು, ಸರ್ವ ಇತಿಹಾಸಗಳು, ಉಪವೇದಗಳು, ವೇದಾಂಗಗಳು, ಗ್ರಹಗಳು, ಯಜ್ಞಗಳು, ಸೋಮಗಳು, ಸರ್ವ ದೇವತೆಗಳು, ದುರ್ಗತರಣೀ ಸಾವಿತ್ರೀ, ಸಪ್ತವಿಧ ವಾಣೀ, ಮೇಧಾ, ಧೃತಿ, ಶ್ರುತಿ, ಪ್ರಜ್ಞಾ, ಬುದ್ಧಿ, ಯಶಸ್ಸು, ಕ್ಷಮಾ, ಸಾಮ, ಸ್ತುತಿ, ಶಸ್ತ್ರಗಳು, ಗಾಥಗಳು, ವಿವಿಧ ಭಾಷೆಗಳು, ತರ್ಕಯುಕ್ತ ಭಾಗಗಳು, ಕ್ಷಣ, ಲವ, ಮುಹೂರ್ತ, ಹಗಲು, ರಾತ್ರಿ, ಮತ್ತು ಅರ್ಧಮಾಸ, ಮಾಸ, ಆರೂ ಋತುಗಳು, ಸಂವತ್ಸರಗಳು, ಪಂಚಯುಗಗಳು, ಚತುರ್ವಿಧ ಆಹೋರಾತ್ರಿಗಳು, ದಿವ್ಯ, ನಿತ್ಯವೂ ಅಕ್ಷಯ ಮತ್ತು ಅವ್ಯಯ ಕಾಲಚಕ್ರ, ಅದಿತಿ, ದಿತಿ, ದನು, ವಿನತ, ಇರಾ, ಕದ್ರು, ಕಾಲಕ, ಸುರಭಿ, ದೇವಿ ಸರಮಾ, ಗೌತಮೀ, ಆದಿತ್ಯ, ವಸವ, ರುದ್ರ, ಮರುತ, ಅಶ್ವಿನೀ ದೇವತೆಗಳು, ವಿಶ್ವೇದೇವರು, ಸಾದ್ಯರು, ಪಿತೃಗಳು, ಮನಸ್ಸಿನಲ್ಲಿಯೇ ಹುಟ್ಟಿದವರು, ರಾಕ್ಷಸರು, ಪಿಶಾಚರು, ದಾನವರು, ಗುಹ್ಯಕರು, ಸುಪರ್ಣ,

ನಾಗ ಮತ್ತು ಇತರ ಪಶುಗಳು ಪಿತಾಮಹನ ಸೇವೆ ಮಾಡುತ್ತಾರೆ. ಅಲ್ಲಿ ದೇವ ನಾರಾಯಣನಿದ್ದಾನೆ, ದೇವರ್ಷಿಗಳು, ವಾಲಖಿಲ್ಯ ಋಷಿಗಳು, ಯೋನಿಗಳಲ್ಲಿ ಹುಟ್ಟಿದವರು, ಅಯೋನಿಜರು ಎಲ್ಲರೂ ಇದ್ದಾರೆ. ಈ ತ್ರಿಲೋಕದಲ್ಲಿ ಕಾಣುತ್ತಿರುವ ಏನೆಲ್ಲ ಸ್ಥಾವರ ಜಂಗಮಗಳಿವೆಯೋ ಅವೆಲ್ಲವನ್ನೂ ನಾನು ಅಲ್ಲಿ ನೋಡಿದ್ದೇನೆ ಎಂದು ತಿಳಿ. ಎಂಭತ್ತು ಸಾವಿರ ಊರ್ಧ್ವರೇತಸ ಯತಿಗಳು, ಮಕ್ಕಳನ್ನು ಪಡೆದಿರುವ ಐವತ್ತು ಸಾವಿರ ಋಷಿಗಳು, ಮತ್ತು ಸರ್ವ ದಿವೌಕಸರೂ ತಮಗಿಷ್ಟ ಬಂದಂತೆ ಅಲ್ಲಿಗೆ ಬಂದು ಅವನಿಗೆ ಶಿರಸಾ ವಂದಿಸಿ ಬಂದಹಾಗೆ ಮರಳಿ ಹೋಗುವವರನ್ನು ಕಂಡಿದ್ದೇನೆ. ಅತಿಥಿಗಳಾಗಿ ಆಗಮಿಸಿದ ದೇವತೆಗಳು, ದೈತ್ಯರು, ನಾಗಗಳು, ಮುನಿಗಳು, ಯಕ್ಷರು, ಸುಪರ್ಣರು, ಕಾಲೇಯರು, ಗಂಧರ್ವರು, ಅಪ್ಸರೆಯರಿಗೆ ಅಮಿತಬುದ್ಧಿ ಮಹಾಭಾಗ ಲೋಕಪಿತಾಮಹ ಸರ್ವಭೂತಗಳಿಗೂ ದಯಾವಂತ ಬ್ರಹ್ಮನು ಯಥಾರ್ಹವಾಗಿ ಪ್ರೀತಿ ತೋರಿಸುತ್ತಾನೆ. ಆ ವಿಶ್ವಾತ್ಮ ಸ್ವಯಂಭು ಅಮಿತಪ್ರಭನು ಅವರನ್ನು ಬರಮಾಡಿಕೊಂಡು ಸಾಂತ್ವನದಾಯಕ ಆನಂದವನ್ನು ನೀಡುತ್ತಾನೆ. ಬರುವ ಮತ್ತು ಹೋಗುತ್ತಿರುವ ಅತಿಥಿಗಳಿಂದ ಆ ಸುಖಪ್ರದ ಸಭೆಯು ಸದಾ ಅತ್ಯಂತ

ಬಿಡುವಿಲ್ಲದಂತಿರುತ್ತದೆ. ಬ್ರಹ್ಮರ್ಷಿಗಣಸೇವಿತ, ಸರ್ವತೇಜೋಮಯಿ, ಆಯಾಸವನ್ನು ದೂರಮಾಡುವ, ಬ್ರಹ್ಮನ ಶ್ರೀಯಿಂದ ದೀಪ್ಯಮಾನವಾಗಿರುವ ಆ ದಿವ್ಯ ಸಭೆಯು ಮಂಗಳಕರವಾದುದು. ಸರ್ವಲೋಕದಲ್ಲಿ ಅದರಂತೆ ಕಾಣುವ ಸಭೆಯು ಹೇಗೆ ದುರ್ಲಭವೋ ಹಾಗೆ ಮನುಷ್ಯರಲ್ಲಿ ನಿನ್ನ ಈ ಸಭೆಯು ದುರ್ಲಭ. ದೇವತೆಗಳಲ್ಲಿ ನಾನು ಇದಕ್ಕೂ ಮೊದಲು ನೋಡಿದ ಸಭೆಗಳಿವು. ನಿನ್ನ ಈ ಸಭೆಯು ಮನುಷ್ಯ ಲೋಕದಲ್ಲಿ ಸರ್ವಶ್ರೇಷ್ಠತಮವಾದದ್ದು."

ಯುಧಿಷ್ಠಿರನು ಹೇಳಿದನು:

"ಪ್ರಭೋ! ನೀನು ಹೇಳಿದಂತೆ ವೈವಸ್ವತನ ಸಭೆಯಲ್ಲಿ ಪ್ರಾಯಷಃ ಲೋಕದ ರಾಜರುಗಳೆಲ್ಲರೂ ಇದ್ದಾರೆ ಎಂದಾಯಿತು. ವರುಣನ ಸಭೆಯಲ್ಲಿ ನಾಗಗಳು, ದೈತ್ಯೇಂದ್ರರು, ನದಿಗಳು ಮತ್ತು ಸಾಗರಗಳು ಇದ್ದಾರೆ ಎಂದು ನೀನು ಹೇಳಿದೆ. ಹಾಗೆಯೇ ಧನಪತಿಯ ಸಭೆಯಲ್ಲಿ ಯಕ್ಷರು, ಗುಹ್ಯಕರು, ರಾಕ್ಷಸರು, ಗಂಧರ್ವರು, ಅಪ್ಸರೆಯರು ಮತ್ತು ಭಗವಾನ್ ವೃಷಧ್ವಜನು ಇದ್ದಾರೆ. ಮತ್ತು ಪಿತಾಮಹನ ಸಭೆಯಲ್ಲಿ ಮಹರ್ಷಿಗಳು, ಸರ್ವ ದೇವತೆಗಳು ಮತ್ತು ಸರ್ವ ಶಾಸ್ತ್ರಗಳು ಇವೆಯೆಂದು

ಹೇಳಿದೆ. ಶತಕ್ರತುವಿನ ಸಭೆಯಲ್ಲಿ ದೇವತೆಗಳು, ಮುನಿಗಳು, ನಿರ್ದಿಷ್ಟ ಗಂಧರ್ವರು ಮತ್ತು ವಿವಿಧ ಮಹರ್ಷಿಗಳು ಇದ್ದಾರೆಂದು ಹೇಳಿದೆ. ಆದರೆ ನೀನು ಮಹಾತ್ಮ ದೇವೇಂದ್ರನ ಸಭೆಯಲ್ಲಿ ಒಬ್ಬನೇ ರಾಜರ್ಷಿ ಹರಿಶ್ಚಂದ್ರನು ಇದ್ದಾನೆಂದು ಹೇಳಿದೆ. ಅವನು ಏನು ಮಾಡಿದನು ಅಥವಾ ತಪಸ್ಸನ್ನು ಮಾಡಿದನೇ ಅಥವಾ ವ್ರತಗಳನ್ನು ಮಾಡಿದನೇ? ಯಾವುದರಿಂದ ಆ ಮಹಾಯಶನು ಶಕ್ರನೊಂದಿಗೆ ಸ್ಪರ್ಧಿಸುತ್ತಿದ್ದಾನೆ? ಮತ್ತು ಪಿತೃಲೋಕಕ್ಕೆ ಹೋದಾಗ ನೀನು ನನ್ನ ತಂದೆ ಮಹಾಭಾಗ ಪಾಂಡುವನ್ನು ನೋಡಿದೆ. ಅವನೊಂದಿಗೆ ಭೇಟಿಯು ಹೇಗಿತ್ತು? ಅವನು ನಿನ್ನಲ್ಲಿ ಏನು ಹೇಳಿದನು ಎನ್ನುವುದನ್ನು ತಿಳಿಯಲು ಬಯಸುತ್ತೇನೆ. ನಿನ್ನಿಂದ ಸರ್ವವನ್ನೂ ಕೇಳಿ ತಿಳಿದುಕೊಳ್ಳಬೇಕೆಂಬ ಕುತೂಹಲವಾಗಿದೆ.”

ನಾರದನು ಹೇಳಿದನು:

“ರಾಜೇಂದ್ರ! ಹರಿಶ್ಚಂದ್ರನ ಕುರಿತು ಕೇಳಿದ್ದೀಯಾದ್ದರಿಂದ ನಿನಗೆ ಆ ಧೀಮಂತನ ಮಹಾತ್ಮೆಯನ್ನು ಹೇಳುತ್ತೇನೆ. ಆ ಬಲವಂತ ರಾಜನು ಸರ್ವಮಹೀಕ್ಷಿತರ ಸಾಮ್ರಾಟನಾಗಿದ್ದು ಸರ್ವ ಮಹೀಪಾಲರೂ ಅವನ ಆಜ್ಞೆಯನ್ನು ಪಾಲಿಸುತ್ತಿದ್ದರು. ಅವನು ಏಕಾಂಗಿಯಾಗಿ ಹೇಮವಿಭೂಷಿತ

ರಥವನ್ನೇರಿ ಏಳೂ ದ್ವೀಪಗಳನ್ನು ತನ್ನ ಶಸ್ತ್ರಪ್ರತಾಪದಿಂದ ಗೆದ್ದನು. ಶೈಲವನಕಾನನಗಳ ಸಹಿತ ಸರ್ವ ಮಹಿಯನ್ನೂ ಗೆದ್ದು ಅವನು ಮಹಾಕ್ರತು ರಾಜಸೂಯವನ್ನು ನೆರವೇರಿಸಿದನು. ಅವನ ಆಜ್ಞೆಯಂತೆ ಸರ್ವ ಮಹೀಪಾಲರೂ ಧನ ಮತ್ತು ಅನ್ಯ ಸಂಪತ್ತುಗಳನ್ನು ತಂದು ಆ ಯಜ್ಞದಲ್ಲಿ ದ್ವಿಜರ ಸೇವೆ ಮಾಡಿದರು. ಆ ನರೇಶ್ವರನು ಯಾಜಕರಿಗೆ ಪ್ರೀತಿಯಿಂದ ಅವರು ಕೇಳಿದುದಕ್ಕಿಂತಲೂ ಐದು ಪಟ್ಟು ಧನವನ್ನು ಅಲ್ಲಿಯೇ ಅದೇ ಸಮಯದಲ್ಲಿಯೇ ದಾನವನ್ನಾಗಿತ್ತನು. ಯಜ್ಞವು ಮುಗಿದ ನಂತರ ಅವನು ನಾನಾ ದಿಕ್ಕುಗಳಿಂದ ಬಂದು ಸೇರಿದ್ದ ಬ್ರಾಹ್ಮಣರನ್ನು ವಿವಿಧ ಸಂಪತ್ತುಗಳನ್ನಿತ್ತು ತೃಪ್ತಿಪಡಿಸಿದನು. ವಿವಿಧ ಭಕ್ಷ್ಯ ಭೋಜ್ಯಗಳಿಂದ ರತ್ನಗಳ ರಾಶಿಗಳಿಂದ ಮುದಿತಗೊಂಡ ದ್ವಿಜರು ಸಂತೋಷದಿಂದ ನೃಪರೆಲ್ಲರಲ್ಲಿ ನೀನು ಅಧಿಕ ತೇಜಸ್ವಿ ಮತ್ತು ಯಶಸ್ವಿ ಎಂದು ಹೇಳಿದರು. ಈ ಕಾರಣಗಳಿಂದ ಹರಿಶ್ಚಂದ್ರನು ಸಹಸ್ರಾರು ರಾಜರುಗಳನ್ನೂ ಮೀರಿ ಬೆಳಗುತ್ತಾನೆ ಎನ್ನುವುದನ್ನು ತಿಳಿ. ಆ ಮಹಾಯಜ್ಞವನ್ನು ಮುಗಿಸಿದ ಪ್ರತಾಪವಾನ್ ಹರಿಶ್ಚಂದ್ರನು ಆ ಶುಭಸಾಂರಾಜ್ಯದ ಅಭಿಷಿಕ್ತನಾದನು. ಮಹಾಕ್ರತು ರಾಜಸೂಯವನ್ನು ಯಾಜಿಸುವ ಅನ್ಯ ಮಹೀಪಾಲರೂ ಮಹೇಂದ್ರನೊಂದಿಗೆ ಸಂತೋಷಪಡುತ್ತಾರೆ. ಯಾರು

ಸಂಗ್ರಾಮದಲ್ಲಿ ಪಲಾಯನಮಾಡದೇ ನಿಧನವನ್ನು ಹೊಂದುತ್ತಾರೋ ಅವರೂ ಕೂಡ ಅವನ ಸಭೆಯನ್ನು ಸೇರಿ ಆನಂದಿಸುತ್ತಾರೆ. ಮತ್ತು ಯಾರು ತೀವ್ರ ತಪಸ್ಸಿನ ಮೂಲಕ ಇಲ್ಲಿ ದೇಹವನ್ನು ತ್ಯಜಿಸುತ್ತಾರೋ ಅವರೂ ಕೂಡ ಅವನ ಆಸ್ಥಾನವನ್ನು ಸೇರಿ ನಿತ್ಯವೂ ಶ್ರೀಮಂತರಾಗಿ ಬೆಳಗುತ್ತಾರೆ. ಹರಿಶ್ಚಂದ್ರನ ಶ್ರಿಯನ್ನು ನೋಡಿದ ನೃಪತಿ ಪಾಂಡುವು ವಿಸ್ಮಿತನಾದನು. ನಿನ್ನ ವಶದಲ್ಲಿರುವ ಭ್ರಾತರ ಮೂಲಕ ಮಹಿಯನ್ನು ಗೆಲ್ಲಲು ಸಮರ್ಥನಾಗಿದ್ದೀಯೆ. ರಾಜಸೂಯ ಕ್ರತುವನ್ನು ಕೈಗೊಳ್ಳತಕ್ಕದ್ದು ಎಂದು ಅವನು ಹೇಳಿದನು. ಅವನ ಸಂಕಲ್ಪದಂತೆ ಮಾಡು. ಪೂರ್ವಜರ ಸಹಿತ ಅವನು ಮಹೇಂದ್ರನ ಲೋಕವನ್ನು ಸೇರುತ್ತಾನೆ. ಈ ಕ್ರತುವಿನಲ್ಲಿ ಮಹಾ ವಿಘ್ನಗಳು ಬಂದೊದಗುತ್ತವೆ ಎಂದು ನಂಬಿಕೆಯಿದೆ. ಯಜ್ಞಗಳನ್ನು ನಾಶಪಡಿಸುವ ಬ್ರಹ್ಮರಾಕ್ಷಸರು ಇದರಲ್ಲಿರುವ ದುರ್ಬಲತೆಯನ್ನು ಹುಡುಕಿಕೊಂಡಿರುತ್ತಾರೆ. ಪೃಥ್ವಿಕ್ಷಯಕಾರಕ ಯುದ್ಧವು ಮುಂದೆಬರುತ್ತದೆ ಮತ್ತು ಅಂಥಹ ಕ್ಷಯವನ್ನು ಸೂಚಿಸುವ ನಿಮಿತ್ತಗಳು ಕೆಲವು ಕಂಡುಬರುತ್ತವೆ. ಇದರ ಕುರಿತು ಚೆನ್ನಾಗಿ ಯೋಚಿಸು. ಯಾವುದು ಕ್ಷಮವೆನಿಸುತ್ತದೆಯೋ ಅದನ್ನು ಮಾಡು. ನಿತ್ಯವೂ ಚಾತುರ್ವರ್ಣ್ಯದ ರಕ್ಷಣೆಯನ್ನು ಮರೆಯಬೇಡ. ನೀನು ಕೂಡ ವೃದ್ಧಿ ಹೊಂದು, ಸಂತೋಷಪಡು, ಮತ್ತು

ದ್ವಿಜರಿಗೆ ದಾನಗಳನ್ನಿತ್ತು ತೃಪ್ತಿಪಡಿಸು. ನೀನು ಕೇಳಿದ್ದುದೆಲ್ಲವನ್ನೂ ವಿಸ್ತಾರವಾಗಿ ನಾನು ನಿನಗೆ ಹೇಳಿದ್ದೇನೆ. ನಿನ್ನಿಂದ ಬೀಳ್ಕೊಂಡು ನಾನು ಈಗ ದಾಶಾರ್ಹನಗರಿಯ ಕಡೆ ಹೋಗುತ್ತೇನೆ. ”

ಪಾರ್ಥನಿಗೆ ಈ ರೀತಿ ಹೇಳಿ ನಾರದನು ತನ್ನ ಜೊತೆಗಿದ್ದ ಋಷಿಗಳೊಂದಿಗೆ ಹೊರಟು ಹೋದನು. ನಾರದನು ಹೋದ ನಂತರ ಪಾರ್ಥನು ಭ್ರಾತೃಗಳ ಸಹಿತ ಕ್ರತುಶ್ರೇಷ್ಠ ರಾಜಸೂಯದ ಕುರಿತು ಚಿಂತನೆಮಾಡಿದನು.

# ರಾಜಸೂಯದ ಕುರಿತು ಸಮಾಲೋಚನೆ; ಜರಾಸಂಧವಧೆ

ನಾರದ ಋಷಿಯ ಮಾತನ್ನು ಕೇಳಿ ಯುಧಿಷ್ಠಿರನು ನಿಟ್ಟುಸಿರೆಳೆದು, ರಾಜಸೂಯವನ್ನು ಹೇಗೆ ನೆರವೇರಿಸಬಹುದು ಎಂದು ಚಿಂತಿಸಿದನು ಮತ್ತು ಯಾವುದೇ ರೀತಿಯ ಸಾಂತ್ವನವನ್ನು ಪಡೆಯಲಿಲ್ಲ. ಮಹಾತ್ಮ ರಾಜರ್ಷಿಗಳ ಮಹಿಮೆಗಳನ್ನು ಕೇಳಿ ಮತ್ತು ಈ ಯಾಗಕರ್ಮದಿಂದ ಅವರಿಗೆ ಪುಣ್ಯಲೋಕ ಪ್ರಾಪ್ತಿಯಾದುದನ್ನು ನೋಡಿ, ಅದರಲ್ಲೂ ವಿಶೇಷವಾಗಿ ರಾಜರ್ಷಿ ಹರಿಶ್ಚಂದ್ರನು ಯಜಿಸಿದ ರಾಜಸೂಯ ಯಜ್ಞವನ್ನು ಕೈಗೊಳ್ಳಲು ಬಯಸಿದನು. ನಂತರ ಯುಧಿಷ್ಠಿರನು

ಸಭಾಸದರೆಲ್ಲರನ್ನೂ ಅರ್ಚಿಸಿ, ತಿರುಗಿ ಅವರೆಲ್ಲರಿಂದ ಗೌರವವಿಸಲ್ಪಟ್ಟು, ಯಜ್ಞದ ಕುರಿತು ಯೋಚಿಸತೊಡಗಿದನು. ಬಹಳಷ್ಟು ಯೋಚನೆಮಾಡಿದ ನಂತರ ಆ ಕುರುವೃಷಭ ರಾಜೇಂದ್ರನು ರಾಜಸೂಯ ಕ್ರತುವನ್ನು ಕೈಗೊಳ್ಳಲು ಮನಸ್ಸು ಮಾಡಿದನು. ಪುನಃ ಧರ್ಮವನ್ನೇ ಅನುಪಾಲಿಸುತ್ತಿದ್ದ ಆ ಅದ್ಭುತವೀರ್ಯಜನು ಇದು ಸರ್ವಲೋಕಗಳಿಗೂ ಹಿತವಾದದ್ದುದೇ ಎಂದು ಯೋಚಿಸಿದನು. ಸರ್ವ ಧರ್ಮವಿದರಲ್ಲಿ ವರಿಷ್ಠ ಯುಧಿಷ್ಠಿರನು ಸರ್ವ ಪ್ರಜೆಗಳನ್ನೂ ಗಮನದಲ್ಲಿಟ್ಟುಕೊಂಡು ಯಾರನ್ನೂ ಬಿಡದೇ ಎಲ್ಲರಿಗೂ ಹಿತವಾದುದನ್ನು ಕೈಗೊಂಡನು. ಹೀಗೇ ಮುಂದುವರೆದು ಅವನು ತನ್ನ ಜನರಿಗೆ ತಂದೆಯಂತೆ ಆಶ್ವಾಸನೆಗಳನ್ನಿತ್ತನು ಮತ್ತು ಅವನನ್ನು ದ್ವೇಷಿಸುವವರು ಯಾರೂ ಇಲ್ಲದೇ ಹೋದುದರಿಂದ ಅವನು ಅಜಾತಶತ್ರು ಎಂದು ಕರೆಯಿಸಿಕೊಂಡನು. ಮಾತನಾಡುವವರಲ್ಲಿ ಶ್ರೇಷ್ಠ ಅವನು ತನ್ನ ಮಂತ್ರಿಗಳು ಮತ್ತು ಭ್ರಾತೃಗಳನ್ನು ಕರೆಯಿಸಿ ರಾಜಸೂಯದ ಕುರಿತು ಪುನಃ ಪುನಃ ಕೇಳುತ್ತಿದ್ದನು. ಈ ರೀತಿಯ ಪ್ರಶ್ನೆ ಬರಲು ಅಲ್ಲಿ ಸೇರಿದ್ದ ಮಂತ್ರಿಗಳು ಯಜ್ಞವನ್ನು ಕೈಗೊಳ್ಳಲು ಉತ್ಸುಕನಾಗಿದ್ದ ಮಹಾಪ್ರಾಜ್ಞ ಯುಧಿಷ್ಠಿರನಿಗೆ ಹೇಳಿದರು:

> “ಈ ರೀತಿ ಅಭಿಷಿಕ್ತನಾಗುವುದರಿಂದ ನೃಪತಿಯು ವರುಣನ ಸ್ಥಾನವನ್ನು ಪಡೆಯುತ್ತಾನೆ. ಅವನು ಆಗ ರಾಜನಾಗಿದ್ದರೂ ಸಂಪೂರ್ಣ ಸಮ್ರಾಟನ ಸ್ಥಾನವನ್ನು ಪಡೆಯುತ್ತಾನೆ. ನೀನು

ಅಂಥಹ ಸಮ್ರಾಟ ಸ್ಥಾನಕ್ಕೆ ಅರ್ಹನಾಗಿದ್ದುದರಿಂದ ರಾಜಸೂಯದ ಸಮಯ ಪ್ರಾಪ್ತವಾಗಿದೆ ಎಂದು ನಿನ್ನ ಸುಹೃದಯರು ಅಭಿಪ್ರಾಯ ಪಡುತ್ತಾರೆ. ಸಂಶಿತವ್ರತರು ಸಾಮವೇದದ ಮೂಲಕ ಆರು ಅಗ್ನಿಗಳನ್ನು ಸ್ಥಾಪಿಸುವ ಈ ಯಜ್ಞಕ್ಕೆ ಕ್ಷತ್ರಿಯರ ಸಮ್ಮತವಿರಬೇಕಾಗಿದ್ದುದರಿಂದ ತನ್ನದೇ ಆದ ಸಮಯವೆಂದಿಲ್ಲ. ಎಲ್ಲ ಕ್ರಮಗಳನ್ನೂ ಆಹುತಿಗಳನ್ನೂ ನಡೆಸಿ ಕ್ರತುವನ್ನು ಪೂರೈಸಿ ಅಭಿಷಿಕ್ತನಾದ ನಂತರವೇ ಅವನನ್ನು ಸರ್ವಜಿತುವೆಂದು ಕರೆಯಲಾಗುತ್ತದೆ. ನಾವೆಲ್ಲರೂ ನಿನ್ನ ವಶದಲ್ಲಿದ್ದೇವೆ. ನೀನು ಸಮರ್ಥನಾಗಿದ್ದೀಯೆ. ವಿಚಾರಮಾಡದೇ ರಾಜಸೂಯಕ್ಕೆ ಮನಸ್ಸು ಮಾಡು."

ಹೀಗೆ ಅವನ ಸರ್ವ ಸುಹೃದಯರೂ ಪುನಃ ಪುನಃ ಹೇಳಿದರು. ಅಂಥಹ ಧಾರ್ಮಿಕ, ಧೃಷ್ಠ, ಇಷ್ಠ, ಮತ್ತು ವರಿಷ್ಠ ಮಾತುಗಳನ್ನು ಅವರಿಂದ ಕೇಳಿದ ವಿಶಾಂಪತಿ ಪಾಂಡವನು ಅದನ್ನು ಸ್ವೀಕರಿಸಿದನು. ಸುಹೃದಯರ ಮಾತುಗಳನ್ನು ಕೇಳಿ ಮತ್ತು ತಾನು ಸಮರ್ಥನೆಂದು ತಿಳಿದ ಅವನು ಪುನಃ ಪುನಃ ಮನಸ್ಸಿನಲ್ಲಿಯೇ ರಾಜಸೂಯದ ಕುರಿತು ಯೋಚಿಸಿದನು. ಆ ಮಹಾತ್ಮನು ಪುನಃ ಪುನಃ ಭ್ರಾತೃಗಳೊಡನೆ, ಧೌಮ್ಯ-ದ್ವೈಪಾಯನರಂಥಹ ಧೀಮಂತ ಋತ್ವಿಗರೊಡನೆ, ಮತ್ತು ಮಂತಿಗಳೊಡನೆ ಮಂತ್ರಾಲೋಚನೆ

ಮಾಡಿದನು. ಯುಧಿಷ್ಠಿರನು ಹೇಳಿದನು:

> "ಶ್ರದ್ಧೆಯಿಂದ ಹೇಳುತ್ತಿರುವ ಈ ಸಮ್ರಾಟಸ್ಥಾನವನ್ನು
> ನೀಡುವ ಸುಕ್ರತು ರಾಜಸೂಯವು ಹೇಗೆ
> ನಡೆಯಬಹುದು?"

ಆ ರಾಜನು ಹೀಗೆ ಹೇಳಲು ಧರ್ಮಾತ್ಮ ಯುಧಿಷ್ಠಿರನಿಗೆ ಪ್ರತಿಸಲವೂ

> "ಧರ್ಮಜ್ಞ! ರಾಜಸೂಯ ಮಹಾಕ್ರತುವಿಗೆ ನೀನು ಅರ್ಹ !"

ಎಂದು ಹೇಳುತ್ತಿದ್ದರು. ಋತ್ವಿಗ ಋಷಿಗಳು ಈ ರೀತಿ ನೃಪತಿಗೆ ಹೇಳಲು ಮಂತ್ರಿಗಳು ಮತ್ತು ಸಹೋದರರು ಆ ಮಾತನ್ನು ಸನ್ಮಾನಿಸಿ ಸ್ವಾಗತಿಸಿದರು. ಮಹಾಪ್ರಾಜ್ಞ ರಾಜ ಪಾರ್ಥನಾದರೂ ಲೋಕಗಳ ಹಿತವನ್ನೇ ಬಯಸಿ ಪುನಃ ತನ್ನ ಮನಸ್ಸಿನಲ್ಲಿಯೇ ವಿಮರ್ಶಿಸಿದನು. ತನ್ನ ಸಾಮರ್ಥ್ಯವನ್ನು ಪರಿಗಣಿಸಿ, ದೇಶ ಕಾಲಗಳನ್ನು ತುಲನೆ ಮಾಡಿ, ಆದಾಯ ವ್ಯಯಗಳನ್ನು ಪರಿಶೀಲಿಸಿ ಕಾರ್ಯವನ್ನು ಕೈಗೊಳ್ಳುವ ಪ್ರಾಜ್ಞನು ಎಂದೂ ನಾಶವಾಗುವುದಿಲ್ಲ. ತನ್ನನ್ನು ಆಪತ್ತಿನಲ್ಲಿ ತಂದುಕೊಳ್ಳಲು ಯಜ್ಞ ಸಮಾರಂಭವನ್ನು ಕೈಗೊಳ್ಳಬಾರದು ಮತ್ತು ಈ ಕಾರ್ಯದಲ್ಲಿ ಪ್ರಯತ್ನ ಬೇಕು ಎಂದು ತಿಳಿದ ಅವನು ಆ ಕಾರ್ಯದ ನಿಶ್ಚಿತಾರ್ಥಕ್ಕಾಗಿ ಮನಸ್ಸಿನಲ್ಲಿಯೇ ಸರ್ವಲೋಕಗಳಲ್ಲಿ ಶ್ರೇಷ್ಠನೆಂದು ತಿಳಿದ ಜನಾರ್ದನ ಹರಿ ಕೃಷ್ಣನಲ್ಲಿಗೆ ಹೋದನು. ಪಾಂಡವನು ದೇವಕರ್ಮಗಳಿಗೆ ಸಮ

ಕಾರ್ಯಗಳನ್ನೆಸಗಿದ ಆ ಮಹಾಬಾಹು, ಹುಟ್ಟಿಲ್ಲದ ಆದರೂ ಸ್ವ ಇಚ್ಛೆಯಿಂದ ಮನುಷ್ಯರಲ್ಲಿ ಜನ್ಮ ತಾಳಿದ ಅಪ್ರಮೇಯನನ್ನು ನೆನೆದನು. ಅವನಿಗೆ ತಿಳಿಯದೇ ಇದ್ದದ್ದು ಏನೂ ಇಲ್ಲ. ಅವನ ಕರ್ಮದಿಂದ ಹುಟ್ಟದೇ ಇರುವಂಥಹುದು ಏನೂ ಇಲ್ಲ. ಅವನು ಸಹಿಸದೇ ಇರುವಂಥಹುದು ಯಾವುದೂ ಇಲ್ಲ ಎಂದು ಕೃಷ್ಣನ ಕುರಿತು ಅವನು ಯೋಚಿಸಿದನು.

ಅಂತಿಮ ನಿರ್ಧಾರಕ್ಕೆ ಬಂದ ನಂತರ ಪಾರ್ಥ ಯುಧಿಷ್ಠಿರನು ಬೇಗನೆ ಗುರುವಿಗೆ ಕಳುಹಿಸುವಂತೆ ದೂತನನ್ನು ಆ ಸರ್ವ ಭೂತಗಳ ಗುರುವಿಗೆ ಕಳುಹಿಸಿದನು. ಶೀಘ್ರರಥದಲ್ಲಿ ಬೇಗನೇ ಯಾದವರನ್ನು ತಲುಪಿದ ದೂತನು ದ್ವಾರಕಾವಾಸಿ ಕೃಷ್ಣನನ್ನು ದ್ವಾರವತಿಯ ಮನೆಯಲ್ಲಿ ಕಂಡನು. ತನ್ನನ್ನು ನೋಡಲು ಬಯಸಿದ ಪಾರ್ಥನನ್ನು ನೋಡುವ ಆಸೆಯಿಂದ ಅಚ್ಯುತನು ಇಂದ್ರಸೇನನನ್ನೊಡಗೊಂಡು ಇಂದ್ರಪ್ರಸ್ಥಕ್ಕೆ ಹೊರಟನು. ಕ್ಷಿಪ್ರವಾಹನವನ್ನೇರಿ ವಿವಿಧದೇಶಗಳನ್ನು ವೇಗವಾಗಿ ದಾಟಿ ಜನಾರ್ದನನು ಇಂದ್ರಪ್ರಸ್ಥವನ್ನು ಸೇರಿ ಪಾರ್ಥನನ್ನು ಭೇಟಿಯಾದನು. ಭ್ರಾತೃವಿನ ಮನೆಗೆ ಭ್ರಾತೃವನ್ನು ಸ್ವಾಗತಿಸುವಂತೆ ಧರ್ಮರಾಜ ಭೀಮಸೇನರು ಸ್ವಾಗತಿಸಲು ಅವನು ತನ್ನ ತಂದೆಯ ತಂಗಿಯನ್ನು ಪ್ರೀತಿಯಿಂದ ಕಂಡನು. ತನ್ನ ಪ್ರೀತಿಯ ಸುಹೃದ ಅರ್ಜುನನೊಡನೆ ರಮಿಸಿದನು ಮತ್ತು ಯಮಳರಿಂದ ಗುರುವಿಗೆ ತಕ್ಕ ಗೌರವವನ್ನು ಪಡೆದನು. ಅವನು ವಿಶ್ರಾಂತಿಯನ್ನು

ಹೊಂದ ನಂತರ ಸಮಯ ಮಾಡಿಕೊಂಡು ಶುಭದೇಶದಲ್ಲಿ ಧರ್ಮರಾಜನು ಅವನನ್ನು ಬೇಟಿಮಾಡಿ ತನ್ನ ಯೋಜನೆಯ ಕುರಿತು ಹೇಳಿಕೊಂಡನು. ಯುಧಿಷ್ಠಿರನು ಹೇಳಿದನು:

> "ರಾಜಸೂಯವನ್ನು ಕೈಗೊಳ್ಳುವ ಮನಸ್ಸಾಗಿದೆ. ಆದರೆ ಕೃಷ್ಣ! ನಿನಗೆ ತಿಳಿದಿದೆ ಇದನ್ನು ಕೇವಲ ಇಚ್ಛಿಸುವುದರಿಂದ ಮಾತ್ರ ನೆರವೇರಿಸಿದಂತಾಗುವುದಿಲ್ಲ. ಯಾವುದರಿಂದ ಎಲ್ಲವೂ ಸಂಭವಿಸುತ್ತವೆಯೋ ಯಾವುದನ್ನು ಎಲ್ಲೆಡೆಯೂ ಪೂಜಿಸುತ್ತಾರೋ ಮತ್ತು ಯಾವ ರಾಜನನ್ನು ಸರ್ವೇಶ್ವರನೆಂದು ಪರಿಗಣಿಸುತ್ತಾರೋ ಅದೇ ರಾಜಸೂಯ. ಸಭೆಯಲ್ಲಿ ನನ್ನ ಮಿತ್ರರು ನಾನು ರಾಜಸೂಯವನ್ನು ಮಾಡಲು ಅರ್ಹ ಎಂದಿದ್ದಾರೆ. ಆದರೆ ಇದರ ಕುರಿತು ನಿನ್ನ ಮಾತುಗಳನ್ನು ಕೇಳಿಯೇ ನಿಶ್ಚಯಿಸಬೇಕೆಂದಿದ್ದೇನೆ. ಕೆಲವರು ಮಿತ್ರತ್ವದಿಂದಾಗಿ ದೋಷವನ್ನು ಪರಿಗಣಿಸುವುದಿಲ್ಲ. ಇನ್ನು ಕೆಲವರು ಲಾಭದ ಪ್ರತೀಕ್ಷೆಯಿಂದ ಪ್ರಿಯ ಮಾತುಗಳನ್ನೇ ಆಡುತ್ತಾರೆ. ಹಾಗಾಗಿ ಜನರ ಅಭಿಪ್ರಾಯಗಳು ಅಷ್ಟೇ ಪ್ರಯೋಜನವಾಗಿರುತ್ತವೆ. ಆದರೆ ನೀನು ಕಾಮ ಕ್ರೋಧಗಳನ್ನು ತೊರೆದು ಈ ಎಲ್ಲ ಆಕಾಂಕ್ಷೆಗಳನ್ನೂ ಮೀರಿದ್ದೀಯೆ. ಈ ಲೋಕಕ್ಕೆ ಶ್ರೇಷ್ಠವಾದುದು ಏನು ಎನ್ನುವುದನ್ನು ನೀನು ಹೇಳಬೇಕು."

## ರಾಜಸೂಯದ ಕುರಿತು ಯುಧಿಷ್ಠಿರನಿಗೆ ಶ್ರೀಕೃಷ್ಣನ ಸಲಹೆ

ಶ್ರೀಕೃಷ್ಣನು ಹೇಳಿದನು:

"ಮಹಾರಾಜ! ನಿನ್ನ ಸರ್ವಗುಣಗಳಿಂದಾಗಿ ನೀನು ರಾಜಸೂಯವನ್ನು ಮಾಡಲು ಅರ್ಹನಾಗಿದ್ದೀಯೆ. ಆದರೆ, ನಿನಗೆ ಇದೆಲ್ಲ ತಿಳಿದಿದ್ದರೂ ಕೆಲವು ವಿಷಯಗಳನ್ನು ಹೇಳುತ್ತೇನೆ. ಈಗ ಕ್ಷತ್ರಿಯರೆಂದು ಯಾರು ತಿಳಿಯಲ್ಪಟ್ಟಿದ್ದಾರೋ ಅವರೆಲ್ಲರೂ ಜಾಮದಗ್ನಿ ರಾಮನು ಉಳಿಸಿದ ಕ್ಷತ್ರಿಯರಿಂದಲೇ ಹುಟ್ಟಿದ್ದಾರೆ. ಈಗಿನ ಕ್ಷತ್ರಿಯರು ತಮ್ಮ ಕುಲಸಂಕಲ್ಪಗಳನ್ನು ಅವರವರ ಮಾತಿನ ಅಧಿಕಾರದಂತೆ ಮಾಡಿಕೊಂಡಿದ್ದಾರೆ. ಈ ಭುವಿಯಲ್ಲಿರುವ ರಾಜರುಗಳ ಮತ್ತು ಇತರ ಶ್ರೇಣಿಬದ್ಧ ಕ್ಷತ್ರಿಯರು ಇಲ ಮತ್ತು ಇಕ್ಷ್ವಾಕು ವಂಶಗಳಿಂದ ಬಂದಿದ್ದವೆಂದು ಪರಿಗಣಿಸುತ್ತಾರೆ. ಇಲ ಮತ್ತು ಇಕ್ಷ್ವಾಕು ವಂಶದ ನೃಪರ ನೂರಾ ಒಂದು ಕುಲಗಳಿವೆ ಎಂದು ತಿಳಿ. ಯಯಾತಿ ಮತ್ತು ಭೋಜರ ಎರಡು ಮಹಾ ಕವಲುಗಳು ನಾಲ್ಕೂ ದಿಶೆಯಲ್ಲಿ ಹರಡಿವೆ. ಹೀಗೆ ಎಲ್ಲ ಕ್ಷತ್ರಿಯರೂ ಅವರವರ ಕುಲವನ್ನು ಗೌರವಿಸುತ್ತಾರೆ. ಮಧ್ಯ ಭೂಮಿಯನ್ನಾಳಿದ ನೂರಾಒಂದನೆಯ ಕುಲದಲ್ಲಿ ಹುಟ್ಟಿದ ಚತುರ್ಯ ಎನ್ನುವ ಓರ್ವ ರಾಜನು ಇದರಲ್ಲಿ ಮಿಥಭೇದವನ್ನು ತಂದನು. ಆ ಸಾಮ್ರಾಜ್ಯವನ್ನು ತನ್ನ ಹುಟ್ಟಿನಿಂದ ಜರಾಸಂಧನು

ಪಡೆದಿದ್ದಾನೆ. ಇನ್ನೊಬ್ಬ ಪ್ರತಾಪಿ ಶಿಶುಪಾಲನು ಸಂಪೂರ್ಣವಾಗಿ ಅವನೊಂದಿಗೆ ಸೇರಿಕೊಂಡಿದ್ದಾನೆ ಮತ್ತು ಅತಿ ಬುದ್ಧಿವಂತಿಕೆಯಿಂದ ಅವನ ಸೇನಾಪತಿಯಾಗಿದ್ದಾನೆ. ಕರೂಷಾಧಿಪತಿ ಮಾಯಾಯೋದ್ಧ ಮಹಾಬಲ ವಕ್ರನು ಶಿಷ್ಯನಂತೆ ಅವನನ್ನು ಸೇರಿಕೊಂಡಿದ್ದಾನೆ. ಹಂಸ ಮತ್ತು ಡಿಂಬಕರೆಂಬ ಇಬ್ಬರು ಇತರ ಮಹಾವೀರ ಮಹಾತ್ಮರು ಆ ಮಹಾವೀರ ಜರಾಸಂಧನನ್ನು ಸೇರಿಕೊಂಡಿದ್ದಾರೆ. ಇದೇ ರೀತಿ ದಂತವಕ್ತ್ರ, ಕರೂಷ, ಕಲಭ, ಮೇಘವಾಹನರೂ ಅವನನ್ನು ಸೇರಿದ್ದಾರೆ. ಭೂತಮಣಿಯೆಂದು ಹೆಸರಾದ ಹೊಳೆಯುತ್ತಿರುವ ದಿವ್ಯ ಮಣಿಯನ್ನು ತಲೆಯ ಮೇಲೆ ಹೊತ್ತ, ಯವನಾಧಿಪರಾದ ಮುರ ಮತ್ತು ನರಕರನ್ನು ಶಿಕ್ಷಿಸಿದ, ವರುಣನಂತೆ ಅತೀವ ಬಲದಿಂದ ಪಶ್ಚಿಮ ದೇಶಗಳನ್ನು ಆಳುತ್ತಿರುವ, ನಿನ್ನ ತಂದೆಯ ಸಖ ವೃದ್ಧ ಭಗದತ್ತನು ಅವನಿಗೆ ಮಾತು ಮತ್ತು ಕರ್ಮಗಳ ಮೂಲಕ ನಮಿಸುತ್ತಾನೆ. ಆದರೆ ನಿನ್ನ ತಂದೆಯ ಸ್ನೇಹದಿಂದಾಗಿ ಮನಸ್ಸಿನಲ್ಲಿ ನಿನ್ನ ಬೆಂಬಲಿಗನಾಗಿದ್ದಾನೆ. ಭೂಮಿಯ ದಕ್ಷಿಣ-ಪಶ್ಚಿಮ ಭಾಗದಲ್ಲಿರುವ ನಿನ್ನ ಸೋದರ ಮಾವ, ಕುಂತಿವರ್ಧನ, ಶತ್ರುತಾಪನ ಶೂರ ಪುರುಜಿತುವು ಮಾತ್ರ ನಿನ್ನನ್ನು ಸ್ನೇಹದಿಂದ ಕಾಣುತ್ತಿದ್ದಾನೆ. ಹಿಂದೆ ನನ್ನಿಂದ ಹತನಾಗದ, ಪುರುಷೋತ್ತಮನೆಂದು ವಿಜ್ಞಾತನಾದ,

ಚೇದಿಯಲ್ಲಿರುವ ದುರ್ಮತಿಯು ಈ ಲೋಕದಲ್ಲಿ ಪುರುಷೋತ್ತಮನು ತಾನೇ ಎಂದು ತಿಳಿದು ಮೋಹದಿಂದ ನನ್ನ ಬಿರುದನ್ನು ಇಟ್ಟುಕೊಂಡಿರುವ ವಂಗ, ಪುಂಡ್ರ ಮತ್ತು ಕಿರಾತರ ರಾಜ ಬಲಸಮನ್ವಿತ ವಾಸುದೇವನೆಂದು ಈ ಲೋಕದಲ್ಲಿ ವಿಶ್ರುತ ಪೌಂಡ್ರಕನೂ ಕೂಡ ಜರಾಸಂಧನ ಕಡೆ ಹೋಗಿದ್ದಾನೆ. ಯುದ್ಧದಲ್ಲಿ ಜಾಮದಗ್ನಿ ಪರಶುರಾಮನಂತೆ ಶೂರನಾದ ಆಹೃತಿಯ ಸೋದರ, ತನ್ನ ವಿದ್ಯಾಬಲದಿಂದ ಪಾಂಡ್ಯ, ಕ್ರಥ ಮತ್ತು ಕೈಶಿಕರನ್ನು ಸೋಲಿಸಿದ, ಇಂದ್ರಸಖ ಬಲೀ ಭೋಜ ಚತುರ್ಯುಜ ಭೀಷ್ಮಕನು ರಾಜ ಮಾಗಧನ ಭಕ್ತ. ಆ ಪರವೀರಹನು ಸಂಬಂಧಿಗಳಾದ ನಮ್ಮಲ್ಲಿ ಯಾವಾಗಲೂ ಪ್ರೀತಿಯಿಂದ ನಡೆದುಕೊಳ್ಳಲಿಲ್ಲ. ನಾವು ಅವನನ್ನು ಒಳ್ಳೆಯದಾಗಿ ಕಂಡರೂ ಅವನು ನಮ್ಮನ್ನು ಕೆಟ್ಟದಾಗಿ ನೋಡುತ್ತಿದ್ದಾನೆ. ತನ್ನ ಕುಲ ಮತ್ತು ಬಲಗಳನ್ನು ಗಮನಿಸದೇ ಬೆಳಗುತ್ತಿರುವ ಯಶಸ್ಸನ್ನು ನೋಡಿ ಅವನು ಜರಾಸಂಧನ ಆಸರೆಯಲ್ಲಿದ್ದಾನೆ. ಜರಾಸಂಧನಿಂದ ಭಯಗೊಂಡು ಉತ್ತರದ ಭೋಜರೂ ಮತ್ತು ಇತರ ಹದಿನೆಂಟು ಕುಲಗಳೂ ಪಶ್ಚಿಮದ ಕಡೆ ಪಲಾಯನ ಮಾಡಿದ್ದಾರೆ. ಅವರಂತೆ ಶೂರಸೇನರು, ಭದ್ರಕಾರರು, ಬೋಧರು, ಶಾಲ್ವರು, ಪಟಚರರು, ಸುಸ್ಥರರು, ಸುಕುಟ್ಟರು, ಕುಣಿಂದರು, ಕುಂತರು, ಮತ್ತು ತಮ್ಮ

ರಕ್ತಸಂಬಂಧಿಗಳೊಡನೆ ಶಾಲ್ವೇಯ ರಾಜರು, ದಕ್ಷಿಣ ಪಾಂಚಾಲರು ಮತ್ತು ಪೂರ್ವ ಕುಂತಳದ ಕೋಶಲರು ಪಲಾಯನ ಮಾಡಿದ್ದಾರೆ. ಭಯಾರ್ದಿತರಾಗಿ ಮತ್ಸ್ಯರೂ ಮತ್ತು ಸಂನ್ಯಸ್ತಪಾದರೂ ಉತ್ತರದಿಶೆಯನ್ನು ತೊರೆದು ದಕ್ಷಿಣ ದಿಕ್ಕಿನಲ್ಲಿ ವಾಸಿಸುತ್ತಿದ್ದಾರೆ. ಅದೇ ರೀತಿ ಸರ್ವ ಪಾಂಚಾಲರೂ ಜರಾಸಂಧನ ಭಯಾರ್ದಿತರಾಗಿ ತಮ್ಮ ರಾಷ್ಟ್ರಗಳನ್ನು ಸಂಪೂರ್ಣವಾಗಿ ತೊರೆದು ಎಲ್ಲ ದಿಕ್ಕುಗಳಲ್ಲಿ ಚದುರಿ ಹೋಗಿದ್ದಾರೆ. ಕೆಲವೇ ಸಮಯದ ಹಿಂದೆ ತನ್ನ ಬಾಂಧವರನ್ನೇ ತುಳಿದ ಕಂಸನು ಬಾರ್ಹದ್ರಥ ಜರಾಸಂಧನ ಇಬ್ಬರು ಪುತ್ರಿಯರನ್ನು, ಅಂದರೆ ಸಹದೇವನ ಸಹೋದರಿಯರಾದ ಅಸ್ತಿ ಮತ್ತು ಪ್ರಾಪ್ತಿಯರನ್ನು ಮದುವೆಯಾಗಿದ್ದ. ಆ ವೃಥಾಮತಿಯು ತನ್ನವರನ್ನೇ ಬಲತ್ಕಾರದಿಂದ ವಶದಲ್ಲಿರಿಸಿಕೊಂಡಿದ್ದ. ಆ ದುರಾತ್ಮನು ಭೋಜರಾಜ ವೃದ್ಧರನ್ನು ಅತಿಯಾಗಿ ಪೀಡಿಸುತ್ತಿದ್ದಾಗ ಅವರು, ತಮ್ಮನ್ನು ಉಳಿಸಿಕೊಳ್ಳುವುದಕ್ಕೋಸ್ಕರ ನಮ್ಮೊಂದಿಗೆ ಒಂದು ಒಪ್ಪಂದ ಮಾಡಿಕೊಂಡರು. ಆಹುಕನ ಮಗಳು ಸುತನುವನ್ನು ಅಕ್ರೂರನಿಗಿತ್ತು, ಸಂಕರ್ಷಣ ರಾಮನೊಡನೆ ಅವನ ಬೆಂಬಲದಿಂದ ನಾನು ಕಂಸ ಮತ್ತು ಸುನಾಮರನ್ನು ಕೊಂದು ನಮ್ಮವರ ಕಷ್ಟಗಳನ್ನು ಕಡೆಗಾಣಿಸಿದೆ. ಆ ಭಯದಿಂದ ವಿಮುಕ್ತರಾದ ಈ

ಹದಿನೆಂಟು ಕುಲಗಳು ಜರಾಸಂಧನ ವಿರುದ್ಧ ಬಂಡಾಯಕ್ಕೆಂದು ತಮ್ಮೊಳಗೇ ಮಂತ್ರಾಲೋಚನೆ ಮಾಡಿದರು. ಒಂದೇ ಏಟಿಗೆ ನೂರರನ್ನು ಒಮ್ಮಿಲೇ ಕೊಲ್ಲಬಹುದಾದ ಮಹಾಸ್ತ್ರಗಳಿಂದ, ಮುನ್ನೂರು ವರ್ಷಗಳು ಸತತವಾಗಿ ವಿಶ್ರಾಂತಿಯಿಲ್ಲದೇ ಹೋರಾಡಿದರೂ ನಾವು ಅವನನ್ನು ಸಂಹರಿಸಲಾರೆವು ಎಂಬ ನಿರ್ಧಾರಕ್ಕೆ ಬಂದರು. ಯಾಕೆಂದರೆ ಅವನ ಜೊತೆ ಬಲಶಾಲಿಗಳಲ್ಲಿಯೇ ಬಲಶಾಲಿ ಶ್ರೇಷ್ಠರಾದ ಹಂಸ ಮತ್ತು ಡಿಭಕರೆಂಬ ಹೆಸರಿನ ಅಮರಸಮ ಯೋಧಸತ್ತಮರಿದ್ದರು. ಆ ಇಬ್ಬರು ವೀರರೂ ಮತ್ತು ವೀರ್ಯವಾನ್ ಜರಾಸಂಧನೂ ಸೇರಿ ಈ ಮೂವರೂ ಮೂರುಲೋಕಗಳಿಗೂ ಸಾಕು ಎನ್ನುವುದು ನನ್ನ ಮತ. ಇದು ಕೇವಲ ನಮ್ಮ ನಂಬಿಕೆ ಮಾತ್ರವಲ್ಲ. ಈಗ ಎಷ್ಟುಮಂದಿ ರಾಜರಿದ್ದಾರೋ ಅವರೆಲ್ಲರ ಅಭಿಪ್ರಾಯ. ಆಗ ಒಮ್ಮೆ ಹಂಸನೆಂದು ಖ್ಯಾತ ಮಹಾನೃಪನು ಅನ್ಯರಸಹಿತ ಆ ಹದಿನೆಂಟು ಕುಲಗಳಮೇಲೆ ಧಾಳಿಯಿಟ್ಟನು. ಯಾರೋ ಹಂಸನು ಹತನಾದನೆಂಬ ಸುಳ್ಳನ್ನು ಹರಡಿಸಿದರು ಮತ್ತು ಅದನ್ನು ಕೇಳಿದ ಡಿಭಕನು ಯಮುನಾ ನದಿಯಲ್ಲಿ ಮುಳುಗಿದನು. ಹಂಸನ ಹೊರತಾಗಿ ಈ ಲೋಕದಲ್ಲಿ ಜೀವಿಸುವ ಬಯಕೆಯಿಲ್ಲ ಎಂದು

ನಿರ್ಧರಿಸಿ ಡಿಭಕನು ಸಾವನ್ನಪ್ಪಿದನು. ಡಿಭಕನ ಕುರಿತು ಕೇಳಿ ಪರಪುರಂಜಯ ಹಂಸನೂ ಕೂಡ ಯಮುನೆಯನ್ನು ತಲುಪಿ ಅಲ್ಲಿ ಮುಳುಗಿ ಸತ್ತನು. ಅವರಿಬ್ಬರೂ ನಿಧನ ಹೊಂದಿದರು ಎನ್ನುವುದನ್ನು ಕೇಳಿದ ರಾಜಾ ಜರಾಸಂಧನು ಶೂರಸೇನನ ಕಡೆಯಿಂದ ತನ್ನ ಪುರಕ್ಕೆ ಹಿಂದಿರುಗಿದನು. ಆ ರಾಜನು ಹಿಂದಿರುಗಿದ ನಂತರ ನಾವೆಲ್ಲರೂ ಪುನಃ ಸಂತೋಷದಿಂದ ಮಥುರೆಯಲ್ಲಿ ವಾಸಿಸುತ್ತಿದ್ದೇವೆ. ನಂತರ ರಾಜೀವಲೋಚನೆ ಕಂಸನ ಪತ್ನಿ ಮತ್ತು ಜರಾಸಂಧನ ಮಗಳು ತನ್ನ ಪತಿಯನ್ನು ಕಳೆದುಕೊಂಡ ದುಃಖದಲ್ಲಿ ತಂದೆ ಮಗಧ ನೃಪತಿಯಲ್ಲಿಗೆ ಹೋಗಿ ಅವಳ ಗಂಡನನ್ನು ಕೊಂದವನನ್ನು ಕೊಲ್ಲುವ ಪ್ರತಿಜ್ಞೆಗೈಯುವಂತೆ ಪ್ರಚೋದಿಸಿದಳು. ಆಗ ನಾವು ಹಿಂದೆ ಮಾಡಿದ ಮಂತ್ರಾಲೋಚನೆಯನ್ನು ನೆನಪಿಸಿಕೊಂಡು ವಿಮನಸ್ಕರಾಗಿ ಹಿಂದೆ ಸರಿದೆವು. ಅವನ ಭಯದಿಂದ ನಮ್ಮ ಮಹಾ ಸಂಪತ್ತನ್ನು ದೋಚಿಕೊಂಡು ಧನ ಮತ್ತು ಬಾಂಧವರೊಡಗೂಡಿ ಚದುರಿ ಪಲಾಯನ ಮಾಡಿದೆವು. ಎಲ್ಲರೂ ಆಲೋಚನೆ ಮಾಡಿ ಪಶ್ಚಿಮ ದಿಕ್ಕಿನಲ್ಲಿ ರೈವತ ಶೋಭಿತ ರಮ್ಯ ಕುಶಸ್ಥಲೀ ಪುರದಲ್ಲಿ ನೆಲೆ ಮಾಡಿದೆವು. ಅಲ್ಲಿ ನಾವು ದೇವತೆಗಳಿಗೂ ಅಸಾಧ್ಯ ಕೋಟೆಗಳನ್ನು ಕಟ್ಟಿ ಪುನರ್ವಸತಿ ಮಾಡಿದೆವು. ಅಲ್ಲಿ ಸ್ತ್ರೀಯರೂ

ಯುದ್ಧಮಾಡಬಲ್ಲರು. ಇನ್ನು ವೃಷ್ಣಿಪುಂಗವರದ್ದೇನು! ಮಾಧವೀತೀರ್ಥದ ಮುಖ್ಯ ಪರ್ವತವನ್ನು ನೋಡುತ್ತಿರುವ ಆ ಪ್ರದೇಶದಲ್ಲಿ ನಾವು ಯಾರದ್ದೂ ಭಯವಿಲ್ಲದೇ ವಾಸಿಸುತ್ತಿದ್ದೇವೆ. ಈ ರೀತಿ ಜರಾಸಂಧನಿಂದ ಸತತ ಕಿರುಕುಳಕ್ಕೊಳಪಟ್ಟು ನಾವು ಸಾಮರ್ಥ್ಯವಂತರೂ ಸಂಬಂಧಿಗಳೂ ಆದ ನಿಮ್ಮ ಆಶ್ರಯದಲ್ಲಿ ಇದ್ದೇವೆ. ಒಂದೊಂದು ಯೋಜನೆಯ ಅಂತರದಲ್ಲಿಯೂ ಗೋಡೆಗಳಿಂದ ಆವೃತವಾಗಿ ನಮ್ಮ ಸ್ಥಳವು ಮೂರು ಯೋಜನೆ ಆಳದಲ್ಲಿದೆ. ಒಂದೊಂದು ಯೋಜನೆಯ ಅಂತರದಲ್ಲಿಯೂ ಸೇನೆಯನ್ನಿರಿಸಲಾಗಿದೆ ಮತ್ತು ಮಧ್ಯದಲ್ಲಿ ನೂರು ಬಾಗಿಲುಗಳ ಕೋಟೆ ಮತ್ತು ನಿರೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗಿದೆ. ಇವೆಲ್ಲವೂ ಹದಿನೆಂಟು ಕುಲಗಳ ಯುದ್ಧದುರ್ಮದ ಕ್ಷತ್ರಿಯರಿಂದ ರಕ್ಷಿಸಲ್ಪಟ್ಟಿದೆ. ನಮ್ಮ ಕುಲದಲ್ಲಿ ಹದಿನೆಂಟು ಸಾವಿರ ಸೇನೆಗಳಿವೆ. ಆಹುಕನಿಗೆ ನೂರು ಮಕ್ಕಳಿದ್ದಾರೆ. ಪ್ರತಿಯೊಬ್ಬರಲ್ಲಿಯೂ ಮೂರುನೂರು ಜನರಿದ್ದಾರೆ. ಸಹೋದರನೊಂದಿಗೆ ಚಾರುದೇಷ್ಣ, ಚಕ್ರದೇವ, ಸಾತ್ಯಕಿ, ನಾನು, ರೌಹಿಣೇಯ, ಯುದ್ಧದಲ್ಲಿ ಶೌರಿಯ ಸಮ ಸಾಂಬ - ಇವರೆಲ್ಲರೂ ಏಳು ರಥಿಗಳು. ಇನ್ನು ಇತರರ ಕುರಿತು ನನ್ನನ್ನು ಕೇಳು ರಾಜನ್! ಕೃತವರ್ಮ, ಅನಾಧೃಷ್ಟಿ, ಸಮೀಕ, ಸಮಿತಿಂಜಯ, ಕಹ್ವ,

ಶಂಕು, ನಿದಾಂತ ಇವರು ಅನ್ಯ ಏಳು ಮಹಾರಥಿಗಳು ಮತ್ತು ಭೋಜ ಅಂಧಕನ ಈರ್ವರು ಪುತ್ರರು ಮತ್ತು ವೃದ್ಧ ರಾಜನೂ ಸೇರಿ ಹತ್ತು ಮಹಾರಥಿಗಳು. ಲೋಕಗಳನ್ನೇ ನಾಶಪಡಿಸಬಲ್ಲ ಈ ವೀರ್ಯವಂತ ವೀರ ಮಹಾಬಲರು ಮಧ್ಯಮ ದೇಶವನ್ನು ನೆನಪಿಸಿಕೊಡುತ್ತಾ ವೃಷ್ಣಿಗಳ ಮಧ್ಯದಲ್ಲಿ ವ್ಯಥೆಯನ್ನು ಕಳೆದುಕೊಂಡು ವಾಸಿಸುತ್ತಿದ್ದಾರೆ. ಸದಾ ಸಂಗ್ರಾಮಗುಣಯುಕ್ತ ನೀನು ಕ್ಷತ್ರಿಯರಲ್ಲಿ ನಿನ್ನನ್ನು ಸಾಮ್ರಾಟನನ್ನಾಗಿ ಮಾಡಿಕೊಳ್ಳಲು ಅರ್ಹನಾಗಿದ್ದೀಯೆ. ಆದರೆ ಮಹಾಬಲ ಜರಾಸಂಧನು ಜೀವಿತವಾಗಿರುವವರೆಗೆ ರಾಜಸೂಯವನ್ನು ಮಾಡಲು ನಿನ್ನಿಂದ ಶಕ್ಯವಿಲ್ಲ ಎಂದು ನನ್ನ ಅನಿಸಿಕೆ. ಮಹಾ ಆನೆಗಳನ್ನು ಸಿಂಹವು ಹಿಮಾಲಯದ ಕಂದರಗಳಲ್ಲಿ ಅಡಗಿಸಿಟ್ಟುಕೊಳ್ಳುವಂತೆ ಸರ್ವ ರಾಜರುಗಳನ್ನೂ ಗೆದ್ದು ಅವನು ಗಿರಿವ್ರಜದಲ್ಲಿ ಸೆರೆಹಿಡಿದಿಟ್ಟಿದ್ದಾನೆ. ಮಹಾದೇವನನ್ನು ಆರಾಧಿಸಲೆಂದೇ ಆ ಪಾರ್ಥಿವರನ್ನು ಗೆದ್ದ ರಾಜ ಜರಾಸಂಧನು ವಸುಧಾಧಿಪರನ್ನು ಬಲಿಕೊಡಲು ಬಯಸುತ್ತಿದ್ದಾನೆ. ಪಾರ್ಥಿವರನ್ನು ಸೋಲಿಸಿದಾಗಲೆಲ್ಲ ಅವನು ತನ್ನ ಪುರಕ್ಕೆ ಕರೆದುಕೊಂಡು ಹೋಗಿ ಬಂಧಿಸಿ ಸೇನೆಯ ಕಾವಲಿನಲ್ಲಿರಿಸಿದ್ದಾನೆ. ನಾವೂ ಕೂಡ ಜರಾಸಂಧನ ಭಯದಿಂದ ಮಥುರೆಯನ್ನು ತೊರೆದು ದ್ವಾರವತೀ ಪುರಕ್ಕೆ

ಹೋಗಬೇಕಾಯಿತು. ಒಂದು ವೇಳೆ ನೀನು ಯಜ್ಞವನ್ನು ನೆರವೇರಿಸಲು ಇಚ್ಛಿಸುವೆಯಾದರೆ ಜರಾಸಂಧನನ್ನು ವಧಿಸಿ ಅವರನ್ನು ಬಿಡುಗಡೆಮಾಡಲು ಪ್ರಯತ್ನಿಸು. ಹೀಗೆಯೇ ರಾಜಸೂಯದ ಸೂಕ್ತ ಆರಂಭ ಸಾಧ್ಯ. ಬೇರೆ ಯಾವುದರಿಂದಲೂ ಅಲ್ಲ. ಇದು ನನ್ನ ಅಭಿಪ್ರಾಯ. ಅಥವಾ ನೀನು ಬೇರೆ ಏನನ್ನಾದರೂ ಯೋಚಿಸುತ್ತಿದ್ದೀಯಾ? ಇದು ಹೀಗಿರಲು ಸ್ವಯಂ ನೀನೇ ನನ್ನ ಅಭಿಪ್ರಾಯಗಳ ಕುರಿತು ನಿರ್ಧರಿಸು."

ಯುಧಿಷ್ಠಿರನು ಹೇಳಿದನು:

"ಬುದ್ಧಿವಂತ! ಯಾರಿಗೂ ಹೇಳಲು ಸಾಧ್ಯವಾಗದೇ ಇದ್ದುದನ್ನು ನೀನು ಹೇಳಿದ್ದೀಯೆ. ನೀನಲ್ಲದೇ ಭುವಿಯಲ್ಲಿ ಬೇರೆ ಯಾರಿಗೂ ಸಂಶಯಗಳನ್ನು ನಿರ್ಮೂಲನೆ ಮಾಡುವುದು ತಿಳಿದಿಲ್ಲ! ರಾಜರ ಮನೆ ಮನೆಗಳಲ್ಲಿ ಅವರವರದ್ದೇ ಮೆಚ್ಚಿನವರಿರುತ್ತಾರೆ. ಆದರೆ ಅವರ್ಯಾರೂ ಎಲ್ಲರನ್ನೂ ಒಳಗೊಂಡ ಸಾಮ್ರಾಟ ಎನ್ನುವ ಪದವಿಯನ್ನು ಪಡೆಯಲಿಲ್ಲ. ಇನ್ನೊಬ್ಬರ ಶಕ್ತಿಯನ್ನು ತಿಳಿದಿದ್ದವನು ತನ್ನನ್ನು ತಾನೇ ಹೊಗಳಿಕೊಳ್ಳಬಹುದು? ಇತರರಿಗೆ ಹೋಲಿಸಿ ಯಾರನ್ನು ಪ್ರಶಂಸಿಸುತ್ತಾರೋ ಅವರಿಗೇ ನಿಜವಾದ ಗೌರವ. ಭೂಮಿಯು ಬಹಳ ವಿಶಾಲವಾಗಿದೆ ಮತ್ತು ಬಹಳ

ರತ್ನಗಳಿಂದ ಕೂಡಿದೆ. ದೂರ ಹೋದರೇ ಯಾವುದು ಒಳ್ಳೆಯದೆಂದು ತಿಳಿಯಲು ಸಾಧ್ಯ. ಶಮೆಯೇ ಅತ್ಯುತ್ತಮವೆಂದು ನನ್ನ ಅನಿಸಿಕೆ. ಅವರನ್ನು ಬಿಡುಗಡೆಮಾಡಿಸುವುದರಿಂದ ಶಮೆಯು ದೊರಕುವುದಿಲ್ಲ. ಯಜ್ಞವನ್ನು ಪ್ರಾರಂಭಿಸಿದರೆ ಅದು ದೊರಕುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಒಳ್ಳೆಯ ಕುಲದಲ್ಲಿ ಹುಟ್ಟಿದ ಮನಸ್ವಿಗಳೆಲ್ಲರೂ ಇದೇ ಅಭಿಪ್ರಾಯ ಪಡುತ್ತಾರೆ. ಬಹುಷಃ ಯಾವಾಗಲೋ ಅವರಲ್ಲಿಯೇ ಒಬ್ಬನು ಶ್ರೇಷ್ಠನೆನಿಸಿಕೊಳ್ಳುತ್ತಾನೆ."

ಭೀಮನು ಹೇಳಿದನು:

"ಸಾಹಸಪ್ರವೃತ್ತಿಯಿಲ್ಲದ ರಾಜನು ಹುತ್ತದಂತೆ ಕುಸಿಯುತ್ತಾನೆ. ಉಪಾಯವಿಲ್ಲದ ಬಲಶಾಲಿಯೂ ದುರ್ಬಲನೆಂದೇ ಪರಿಗಣಿಸಲ್ಪಡುತ್ತಾನೆ. ಆದರೆ, ಓರ್ವ ದುರ್ಬಲನು ಉಪಾಯದಿಂದ ಬಲಶಾಲಿ ಶತ್ರುವನ್ನು ಸೋಲಿಸಬಹುದು. ಅವನ ಯೋಜನೆಯು ಸರಿಯಾದುದಾಗಿತ್ತೆಂದರೆ ಅವನು ತನಗೆ ಹಿತವಾದುದನ್ನು ಸಾಧಿಸಬಹುದು. ಕೃಷ್ಣನಲ್ಲಿ ಯೋಜನೆಯಿದೆ. ನನ್ನಲ್ಲಿ ಶಕ್ತಿಯಿದೆ. ಮತ್ತು ಪಾರ್ಥ ಧನಂಜಯನಲ್ಲಿ ಜಯವಿದೆ. ಮೂರು ಅಗ್ನಿಗಳಂತೆ ನಾವು ಮಾಗಧನನ್ನು ಗೆಲ್ಲಬಹುದು."

ಕೃಷ್ಣನು ಹೇಳಿದನು:

"ತನ್ನ ಲಾಭವನ್ನೇ ಅನುಸರಿಸುತ್ತಿರುವ ಮೂರ್ಖನು ಆಗುವ ಪರಿಣಾಮಗಳನ್ನು ಗಮನಿಸುವುದಿಲ್ಲ. ಆದುದರಿಂದ ಅವರು ಲಾಭದ ಹಿಂದೆಹೋಗುತ್ತಿರುವ ಮೂರ್ಖ ಶತ್ರುಗಳನ್ನು ಸಹಿಸುವುದಿಲ್ಲ. ತೆರಿಗೆಯಿಲ್ಲದಂತೆ ಮಾಡಿ ಯೌವನಾಶ್ವ, ಪ್ರಜಾಪಾಲನೆಯ ಮೂಲಕ ಭಗೀರಥ, ತಪೋಯೋಗದ ಮೂಲಕ ಕಾರ್ತವೀರ್ಯ, ಬಲದಿಂದ ವಿಭು ಭರತ, ಮತ್ತು ಸಂಪತ್ತಿನ ಮೂಲಕ ಮರುತ್ತ ಈ ಐವರು ಸಾಮ್ರಾಟರೆನಿಸಿಕೊಂಡರೆಂದು ಕೇಳಿದ್ದೇವೆ. ಈಗ ಬಾರ್ಹದತ್ತ ಜರಾಸಂಧನನ್ನು ಧರ್ಮ, ಲಾಭ ಮತ್ತು ನ್ಯಾಯಗಳಿಂದ ನಿಗ್ರಹಿಸುವ ಸೂಚನೆಯು ಬಂದೊದಗಿದೆ ಎಂದು ತಿಳಿ. ನೂರಾಒಂದು ಕುಲಗಳ ನೃಪರು ಅವನಿಗೆ ತಕ್ಕಂತೆ ನಡೆದುಕೊಳ್ಳಲು ಬಯಸುವುದಿಲ್ಲ. ಆದುದರಿಂದಲೇ ಅವನು ತನ್ನ ಬಲದಿಂದ ರಾಜ್ಯಭಾರ ಮಾಡುತ್ತಿದ್ದಾನೆ. ಸಂಪತ್ತಿಗೆ ಭಾಗಧಾರ ರಾಜರು ಜರಾಸಂಧನನ್ನು ಗೌರವಿಸುತ್ತಾರೆ. ಆದರೆ ಬಾಲ್ಯದಿಂದಲೇ ಅನ್ಯಾಯದಲ್ಲಿ ನಿರತನಾಗಿದ್ದ ಅವನಿಗೆ ಇದೂ ಕೂಡ ತೃಪ್ತಿಯನ್ನು ನೀಡುತ್ತಿಲ್ಲ. ಅವನು ಮೂರ್ಧಾಭಿಷಿಕ್ತ ನೃಪತಿ ಮುಖ್ಯ ಪುರುಷರನ್ನು ಬಲಾತ್ಕಾರವಾಗಿ

ಸೋರೆಹೊಡೆಯುತ್ತಾನೆ. ಅವನಿಗೆ ಕಪ್ಪವನ್ನು ಕೊಡದೇ ಇರುವ ಪುರುಷರು ಯಾರನ್ನೂ ನೋಡಿಲ್ಲ. ಈ ರೀತಿ ಜರಾಸಂಧನು ಸರ್ವರನ್ನೂ ತನ್ನ ವಶದಲ್ಲಿ ಇರಿಸಿಕೊಂಡಿದ್ದಾನೆ - ಅಂಥವರ ಸಂಖ್ಯೆ ಸುಮಾರು ನೂರರ ಹತ್ತಿರವಿದೆ. ಅಂಥಹವನ ಮೇಲೆ ಓರ್ವ ದುರ್ಬಲ ರಾಜನು ಹೇಗೆ ತಾನೆ ಧಾಳಿಯಿಡಬಹುದು? ಪಶುಪತಿಯ ಮನೆಯಲ್ಲಿ ಬಲಿಪಶುಗಳಂತೆ ಪ್ರೋಕ್ಷಣೆಮಾಡಿ ಶುದ್ಧಪಡಿಸಿದ ರಾಜರು ಹೇಗೆ ತಾನೆ ಜೀವಿತವಾಗಿರಲು ಬಯಸುತ್ತಾರೆ? ಶಸ್ತ್ರದಿಂದ ಮರಣಹೊಂದಿದ ಕ್ಷತ್ರಿಯನು ಗೌರವಿಸಲ್ಪಡುತ್ತಾನೆ. ಹೀಗಿರುವಾಗ ನಾವೆಲ್ಲರೂ ಸೇರಿ ಮಾಗಧನನ್ನು ಎದುರಿಸಬಾರದೇ? ಎಂಭತ್ತಾರು ರಾಜರು ಜರಾಸಂಧನ ಕಾರಗೃಹದಲ್ಲಿ ಬಂಧಿತರಾಗಿದ್ದಾರೆ. ಇನ್ನು ಉಳಿದ ಹದಿನಾಲ್ಕು ರಾಜರುಗಳ ನಂತರ ಅವನ ಕ್ರೂರಕೃತ್ಯವನ್ನು ನೆರವೇರಿಸುತ್ತಾನೆ. ಇದರಲ್ಲಿ ಅವನಿಗೆ ವಿಘ್ನವನ್ನು ತರುವವನು ಬೆಳಗುವ ಯಶಸ್ಸನ್ನು ಹೊಂದುತ್ತಾನೆ. ಮತ್ತು ಜರಾಸಂಧನ ಮೇಲೆ ವಿಜಯವನ್ನು ಗಳಿಸಿದವನು ನಿಶ್ಚಯವಾಗಿಯೂ ಸಾಮ್ರಾಟನಾಗುತ್ತಾನೆ.”

## ಜರಾಸಂಧವಧೆಯ ಕುರಿತು ಸಮಾಲೋಚನೆ

ಯುಧಿಷ್ಠಿರನು ಹೇಳಿದನು:

“ಸಾಮ್ರಾಟಪದವಿಯನ್ನು ಪಡೆಯುವುದು ನನ್ನ ವೈಯಕ್ತಿಕ ಬಯಕೆ. ಸ್ವಾರ್ಥಪರಾಯಣನಾದ ನಾನು ಹೇಗೆ ನಿಮ್ಮೆಲ್ಲರನ್ನೂ ಬಲವಂತಮಾಡಿ ಇಂಥಹ ಸಾಹಸಕ್ಕೆ ಕಳುಹಿಸಲಿ? ಜನಾರ್ದನ! ಭೀಮಾರ್ಜುನರಿಬ್ಬರೂ ನನ್ನ ಕಣ್ಣುಗಳಿದ್ದಂತೆ ಎಂದು ನನ್ನ ಅನಿಸಿಕೆ. ಮನಸ್ಸು ಮತ್ತು ಕಣ್ಣುಗಳನ್ನು ಕಳೆದುಕೊಂಡರೆ ನನ್ನ ಜೀವನದಲ್ಲಿ ಉಳಿಯುವುದಾದರೂ ಏನು? ಜರಾಸಂಧನ ದುಷ್ಪಾರ ಭೀಮವಿಕ್ರಮ ಬಲವನ್ನು ಎದುರಿಸಿದಾಗ ಕೇವಲ ಶ್ರಮವು ಪರಾಜಯಗೊಳಿಸುತ್ತದೆ. ಇದರಲ್ಲಿ ಅರ್ಥವಾದರೂ ಏನಿದೆ? ಇದಕ್ಕಿಂತ ಬೇರೆ ಪರಿಣಾಮವಾದರೂ ಅತ್ಯಂತ ಅನರ್ಥವಾಗುವುದು. ಇದರ ಕುರಿತು ನಾನು ಏನು ಯೋಚಿಸುತ್ತಿದ್ದೇನೆ ಎನ್ನುವುದನ್ನು ಕೇಳು. ಈ ಯೋಜನೆಯನ್ನು ಇಲ್ಲಿಯೇ ಬಿಟ್ಟುಬಿಡುವುದು ಒಳ್ಳೆಯದು ಎಂದು ನನಗನ್ನಿಸುತ್ತಿದೆ. ಈಗ ನನ್ನ ಮನಸ್ಸು ಇದರ ವಿರುದ್ಧವಾಗಿದೆ. ರಾಜಸೂಯವು ಸಾಧ್ಯವಾದುದಲ್ಲ.”

ಶ್ರೇಷ್ಠ ಧನುಸ್ಸು, ಎರಡು ಅಕ್ಷಯ ಭತ್ತಳಿಕೆಗಳು, ರಥ, ಧ್ವಜ, ಮತ್ತು ಸಭೆಯನ್ನು ಪಡೆದ ಮಹಾಯೋಧ ಪಾರ್ಥನು ಯುಧಿಷ್ಠಿರನಿಗೆ ಹೇಳಿದನು:

“ರಾಜನ್! ಬಯಸಿದರೂ ದೊರಕಲು ಕಷ್ಟವಾದ ಧನಸ್ಸು,

ಅಸ್ತ್ರ, ಬಾಣಗಳು, ವೀರ್ಯ, ಬೆಂಬಲಿಗರು, ಭೂಮಿ, ಯಶಸ್ಸು, ಬಲಗಳನ್ನು ನಾನು ಪಡೆದಿದ್ದೇನೆ. ತಿಳಿದವರು ಉತ್ತಮ ಕುಲದಲ್ಲಿ ಜನಿಸಿದವರನ್ನು ಮತ್ತು ಸತ್ಕರ್ಮದಲ್ಲಿ ತೊಡಗಿದವರನ್ನು ಪ್ರಶಂಸಿಸುತ್ತಾರೆ. ಆದರೆ ಬಲದ ಸದೃಶವಾದುದ್ದು ಇಲ್ಲ ಮತ್ತು ಸಾಹಸವು ನನಗೆ ಇಷ್ಟವಾಗುತ್ತದೆ. ವೀರ ಕುಲದಲ್ಲಿ ಹುಟ್ಟಿದವನು ನಿರ್ವೀರ್ಯನಾಗಿ ಏನನ್ನು ಸಾಧಿಸುತ್ತಾನೆ? ಎಲ್ಲೆಡೆಯೂ ಸೋಲಿಸುವುದನ್ನೇ ಪ್ರವೃತ್ತಿಯನ್ನಾಗಿಸಿಕೊಂಡವನು ಕ್ಷತ್ರಿಯನೆನಿಸಿಕೊಳ್ಳುತ್ತಾನೆ. ಸರ್ವಗುಣಹೀನನೂ ಕೂಡ ವೀರ್ಯವಂತನಾಗಿದ್ದರೆ ಶತ್ರುಗಳನ್ನು ಸೋಲಿಸುತ್ತಾನೆ. ಆದರೆ ಸರ್ವಗುಣಯುಕ್ತನಾಗಿದ್ದರೂ ನಿರ್ವೀರ್ಯನಾಗಿದ್ದರೆ ಏನು ತಾನೆ ಮಾಡಿಯಾನು? ಬಳಸಬಹುದಾದ ಸರ್ವಗುಣಗಳೂ ಪರಾಕ್ರಮಿಯಲ್ಲಿವೆ. ಸಿದ್ಧಿ, ಕಾರ್ಯ, ದೈವಗಳು ಒಟ್ಟಿಗೇ ಜಯಕ್ಕೆ ಕಾರಣವಾಗುತ್ತವೆ. ಒಮ್ಮೊಮ್ಮೆ ಈ ಬಲಗಳಿಂದ ಕೂಡಿದವನೂ ಪ್ರಮಾದಕ್ಕೊಳಗಾಗಿ ಶತ್ರುವಿನ ದ್ವಾರದಲ್ಲಿಯೇ ತನ್ನ ಬಲವನ್ನು ಕಡಿಮೆಮಾಡಿಕೊಳ್ಳಬಹುದು. ಬಲವಿಲ್ಲದವನು ಹೇಗೆ ದೀನನೋ ಹಾಗೆ ಬಲಾನ್ವಿತನು ಎಲ್ಲರಿಗೂ ಬೇಕಾದವನು. ಜಯವನ್ನು ಬಯಸುವ ರಾಜನು ಇವೆರಡೂ ನಾಶಕಾರಕ ಕಾರಣಗಳನ್ನು ತೊರೆಯಬೇಕು. ಯಜ್ಞಕ್ಕೋಸ್ಕರ

ನಾವು ಜರಾಸಂಧನ ವಿನಾಶ ಮತ್ತು ರಾಜರ ವಿಮೋಚನೆಯನ್ನು ಸಾಧಿಸಿದರೆ ಇದಕ್ಕಿಂತಲೂ ಹೆಚ್ಚಿನದು ಏನಾಗಬಹುದು? ಇದಕ್ಕೆ ನಾವು ಹಿಂಜರಿದರೆ ನಮ್ಮಲ್ಲಿ ಗುಣವಿಲ್ಲವೆಂದಾಗುವುದು ನಿಶ್ಚಯ. ನಿಃಸಂಶಯ ಗುಣಕ್ಕಿಂತಲೂ ನಿರ್ಗುಣವನ್ನು ನೀನು ಹೇಗೆ ಗೌರವಿಸುತ್ತೀಯೆ? ನಿನ್ನನ್ನು ಸಾಮ್ರಾಟನನ್ನಾಗಿಸಲು ನಾವು ಶತ್ರುಗಳೊಂದಿಗೆ ಹೋರಾಡುತ್ತೇವೆ. ನಂತರ ಶಾಂತಿಯನ್ನು ಬಯಸುವ ಮುನಿಗಳಿಗೆ ಸುಲಭವಾಗಿ ಕಾಷಾಯವು ದೊರೆಯುತ್ತದೆ."

ವಾಸುದೇವನು ಹೇಳಿದನು:

"ಅರ್ಜುನನು ಭಾರತ ವಂಶದಲ್ಲಿ ಮತ್ತು ಕುಂತಿಯ ಸುತನಾಗಿ ಹುಟ್ಟಿದುದಕ್ಕೆ ಸರಿಯಾದ ಬುದ್ಧಿಯನ್ನು ಪ್ರದರ್ಶಿಸಿದ್ದಾನೆ. ರಾತ್ರಿಯೋ ಹಗಲೋ ಮೃತ್ಯುವಿನ ಸಮಯವನ್ನು ನಾವು ಯಾರೂ ತಿಳಿದಿಲ್ಲ! ಹಾಗೆಯೇ ಯುದ್ಧಮಾಡದೇ ಅಮರರಾದ ಯಾರ ಕುರಿತೂ ನಾವು ಕೇಳಿಲ್ಲ! ಇದೇ ನ್ಯಾಯ ಮತ್ತು ವಿಧಿಪೂರ್ವಕವಾಗಿ ಶತ್ರುಗಳ ಮೇಲೆ ಧಾಳಿಯಿಡುವ ಪುರುಷನ ಹೃದಯವನ್ನು ಸಂತಸಗೊಳಿಸುವ ಕಾರ್ಯ. ಹೋರಾಟದಲ್ಲಿ ಉತ್ತಮ ನ್ಯಾಯವೇ ಗೆಲ್ಲುತ್ತದೆ. ಎರಡೂ ಪಕ್ಷಗಳು

ಸರಿಸಮವಾಗಿದ್ದರೆ, ಅದರಲ್ಲಿ ಸಂಶಯ ಬರಬಹುದು. ಆದರೆ ಎರಡು ಪಕ್ಷಗಳು ಎಂದೂ ಸರಿಸಮವಾಗಿರುವುದಿಲ್ಲ. ಒಳ್ಳೆಯ ನೀತಿಯನ್ನು ನಮ್ಮದಾಗಿಸಿಕೊಂಡು ಶತ್ರುವಿನ ಬಳಿ ಹೋದರೆ ನದಿಯ ಪ್ರವಾಹವು ವೃಕ್ಷವನ್ನು ಹೇಗೋ ಹಾಗೆ ಕೊನೆಗೊಳಿಸಲು ಏಕೆ ಸಾಧ್ಯವಿಲ್ಲ? ನಮ್ಮ ದುರ್ಬಲತೆಯನ್ನು ಮುಚ್ಚಿಟ್ಟುಕೊಂಡು ಅವನ ದುರ್ಬಲತೆಯನ್ನು ನೋಡಿ ಆಕ್ರಮಣ ಮಾಡೋಣ. ತನಗಿಂತಲೂ ಬಲಶಾಲಿಯಾಗಿರುವವನನ್ನು ಸೇನೆ ಮತ್ತು ಬಲದೊಂದಿಗೆ ಆಕ್ರಮಣ ಮಾಡಬಾರದು ಎನ್ನುವುದು ಬುದ್ಧಿವಂತರ ನೀತಿ ಮತ್ತು ಇದು ನನಗೂ ಇಷ್ಟವಾಗುತ್ತದೆ. ಸೇನೆಯನ್ನು ತೆಗೆದುಕೊಳ್ಳದೇ ಶತ್ರುವಿನ ಬಳಿಸೇರಿ, ಶತ್ರುದೇಹವನ್ನು ಆಕ್ರಮಿಸಿ, ನಮ್ಮ ಗುರಿಯನ್ನು ಸಾಧಿಸಿದರೆ ನಮ್ಮ ಮೇಲೆ ಯಾವ ಅಪವಾದವೂ ಬರುವುದಿಲ್ಲ. ಜೀವಿಗಳ ಅಂತರಾತ್ಮನಂತೆ ಅವನೊಬ್ಬನೇ ನಿತ್ಯ ಶ್ರೀಯನ್ನು ಹೊರಸೂಸುತ್ತಾನೆ, ಅವನ ಕ್ಷಯದೊಂದಿಗೆ ಅವನ ಬಲವೂ ಕ್ಷಯಿಸುವುದು. ಒಂದುವೇಳೆ ಅವನನ್ನು ನಾವು ಕೊಂದನಂತರ ಉಳಿದವರು ನಮ್ಮ ಮೇಲೆ ಆಕ್ರಮಣ ಮಾಡಿದರೆ ತಮ್ಮ ಜಾತಿಯವರನ್ನು ಬಿಡುಗಡೆಮಾಡಲು ತೊಡಗಿ ಯುದ್ಧದಲ್ಲಿ ವೀರಸ್ವರ್ಗವನ್ನು ಪಡೆಯುತ್ತೇವೆ.”

ಯುಧಿಷ್ಠಿರನು ಹೇಳಿದನು:

“ಕೃಷ್ಣ! ಈ ಜರಾಸಂಧನು ಯಾರು? ಅಗ್ನಿಸದೃಶನಾದ ನಿನ್ನನ್ನು ಮುಟ್ಟಿದರೂ ಪತಂಗದಂತೆ ಸುಟ್ಟುಹೋಗದೇ ಇರುವ ಅವನ ವೀರ್ಯ ಮತ್ತು ಪರಾಕ್ರಮಗಳಾದರೂ ಏನು?”

## ಜರಾಸಂಧ

ಕೃಷ್ಣನು ಹೇಳಿದನು:

“ರಾಜನ್! ಜರಾಸಂಧನ ವೀರ್ಯ ಪರಾಕ್ರಮಗಳ ಕುರಿತು ಮತ್ತು ಅವನು ನಮ್ಮ ವಿರುದ್ಧ ಬಹಳ ರೀತಿಯಲ್ಲಿ ನಡೆದುಕೊಂಡರೂ ಏನೂ ಮಾಡದೇ ಇದ್ದುದಕ್ಕೆ ಕಾರಣವನ್ನು ಕೇಳು. ಮೂರು ಅಕ್ಷೌಹಿಣೀ ಸೇನಾಪತಿ ಸಮರದರ್ಪಿತ ಬೃಹದ್ರಥನೆಂಬ ಹೆಸರಿನ ಮಗಧಾಧಿಪತಿ ರಾಜನಿದ್ದನು. ಅವನು ರೂಪವಂತನೂ ವೀರ್ಯಸಂಪನ್ನನೂ ಶ್ರೀಮಂತನೂ ಅತುಲವಿಕ್ರಮನೂ ಆಗಿದ್ದನು. ನಿತ್ಯವೂ ದೀಕ್ಷಾನಿರತನಾಗಿದ್ದ ಅವನು ತೆಳುದೇಹನವನಾಗಿದ್ದು ಇನ್ನೊಬ್ಬ ಶತುಕ್ರತುವೋ ಎಂಬಂತೆ ತೋರುತ್ತಿದ್ದನು. ತೇಜಸ್ಸಿನಲ್ಲಿ ಸೂರ್ಯಸದೃಶನಾಗಿದ್ದನು, ಕ್ಷಮೆಯಲ್ಲಿ ಪೃಥ್ವಿಸಮನಾಗಿದ್ದನು, ಕೋಪದಲ್ಲಿ ಅಂತಕ ಯಮನ

ಸಮನಾಗಿದ್ದನು, ಮತ್ತು ಸಂಪತ್ತಿನಲ್ಲಿ ವೈಶ್ರವಣನಂತಿದ್ದನು. ಅವನ ಉಚ್ಛ ಜನ್ಮದಂತೆ ಅವನ ಗುಣಗಳೂ ಉತ್ತಮವಾಗಿದ್ದು, ಸೂರ್ಯನಿಂದ ಹೊರಸೂಸಿದ ಕಿರಣಗಳಂತೆ ಇಡೀ ಪೃಥ್ವಿಯನ್ನೇ ವ್ಯಾಪಿಸಿದ್ದವು. ಆ ಮಹಾವೀರನು ರೂಪ ಮತ್ತು ಸಂಪತ್ತನ್ನು ಹೊಂದಿದ್ದ ಕಾಶೀರಾಜನ ಅವಳಿ ಮಕ್ಕಳನ್ನು ಮದುವೆಯಾದನು. ಆ ಪುರುಷರ್ಷಭನು ತನ್ನ ಪತ್ನಿಯರಿಬ್ಬರ ಸಮಕ್ಷಮದಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡನು: ಅವನು ಅವರ ವಿರುದ್ಧ ಎಂದೂ ನಡೆದುಕೊಳ್ಳುವುದಿಲ್ಲ ಎಂದು. ಆ ರಾಜನು ತನ್ನ ಪ್ರಿಯ ಅನುರೂಪ ಇಬ್ಬರು ಪತ್ನಿಯರೊಂದಿಗೆ ಹೆಣ್ಣಾನೆಗಳ ಮಧ್ಯೆ ಗಂಡಾನೆಯಂತೆ ರಂಜಿಸಿದನು. ಅವರಿಬ್ಬರ ಮಧ್ಯೆ ವಸುಧಾಧಿಪನು ಗಂಗಾ ಮತ್ತು ಯಮುನೆಯರ ಮಧ್ಯೆ ಸಾಗರನ ಮೂರ್ತಿಯಂತೆ ರರಾಜಿಸಿದನು. ವಿಷಯ ಸುಖದಲ್ಲಿಯೇ ಮಗ್ನನಾಗಿ ಅವನ ಯೌವನವು ಕಳೆಯುತ್ತಾಬಂದರೂ ಅವನಿಗೆ ವಂಶಕರ ಪುತ್ರನು ಯಾರೂ ಜನಿಸಲಿಲ್ಲ. ಬಹಳಷ್ಟು ಮಂಗಲ ಹೋಮಗಳು ಮತ್ತು ಪುತ್ರಕಾಮೇಷ್ಠಿಯಿಂದಲೂ ಆ ನೃಪಶ್ರೇಷ್ಠನು ಕುಲವಿವರ್ಧನ ಪುತ್ರನನ್ನು ಪಡೆಯಲಿಲ್ಲ. ಆಗ ಮಹಾತ್ಮ ಗೌತಮ ಕಾಕ್ಷೀವತನ ಮಗ ಚಂಡಕೌಶಿಕಿ ಎಂದು ಪ್ರಸಿದ್ಧ ಉದಾರ ತಪಸ್ವಿಯು ಅಲ್ಲಿಗೆ ಬಂದು

ಒಂದು ಮರದಡಿಯಲ್ಲಿ ವಿಶ್ರಾಂತಿತೆಗೆದುಕೊಳ್ಳುತ್ತಿದ್ದಾನೆ ಎಂದು ಕೇಳಿದನು. ಪತ್ನಿಯರ ಸಹಿತ ರಾಜನು ಸರ್ವ ರತ್ನ ಉಡುಗೊರೆಗಳಿಂದ ಅವನನ್ನು ಸಂತೃಪ್ತಿಗೊಳಿಸಿದನು. ಆ ಸತ್ಯಧೃತಿ ಸತ್ಯವಾಗ್ಮಿ ಋಷಿಸತ್ತಮನು "ಸುವ್ರತ ರಾಜನ್! ನಾನು ಸಂತುಷ್ಠಗೊಂಡಿದ್ದೇನೆ. ವರವನ್ನು ಕೇಳಿಕೋ!" ಎಂದನು. ಪುತ್ರನನ್ನು ನೋಡಲು ಹಾತೊರೆಯುತ್ತಿದ್ದ ಬೃಹದ್ರಥನು ತನ್ನ ಪತ್ನಿಯರೊಂದಿಗೆ ನಮಸ್ಕರಿಸಿ ಕಣ್ಣೀರಿನಿಂದ ಕಟ್ಟಿದ ಧ್ವನಿಯಲ್ಲಿ ಹೇಳಿದನು: "ಭಗವನ್! ಮಕ್ಕಳಿಲ್ಲದೆ ರಾಜ್ಯವನ್ನು ತೊರೆದು ತಪೋವನಕ್ಕೆ ಹೊರಡುತ್ತಿರುವ ಈ ಅಲ್ಪಭಾಗನಿಗೆ ಈ ರಾಜ್ಯದಿಂದ ಏನಾಗಬೇಕು? ವರದಿಂದ ಏನಾಗಬೇಕು?"

ಇದನ್ನು ಕೇಳಿದ ಮುನಿಯು ಚಿಂತೆಗೊಳಗಾಗಿ ಧ್ಯಾನಮಗ್ನನಾದನು. ಅವನು ಯಾವ ಮಾವಿನ ಮರದ ಕೆಳಗೆ ಕುಳಿತಿದ್ದನೋ ಅಲ್ಲಿಂದ ಗಿಳಿಗಳು ಕಚ್ಚದೇ ಇದ್ದ ಒಂದು ಇಡೀ ಮಾವಿನ ಹಣ್ಣು ಅವನ ತೊಡೆಯಮೇಲೆ ಬಿದ್ದಿತು.  ಮುನಿಶ್ರೇಷ್ಠನು ಆ ಅಪ್ರತಿಮ ಹಣ್ಣನ್ನು ತನ್ನ ಕೈಯಲ್ಲಿ ತೆಗೆದುಕೊಂಡು, ಪುತ್ರನನ್ನು ಕೊಡುವಂಥೆ ಅದಕ್ಕೆ ಹೃದಯದಿಂದ ಅಭಿಮಂತ್ರಿಸಿ ರಾಜನಿಗೆ ಕೊಟ್ಟನು. ಮತ್ತು ಆ ಮಹಾಪ್ರಾಜ್ಞ ಮಹಾಮುನಿಯು ರಾಜನಿಗೆ ಹೇಳಿದನು:

“ರಾಜನ್! ನಿನ್ನ ಆಸೆಯು ಈಡೇರುತ್ತದೆ. ಹೋಗು. ಮನುಜಾಧಿಪ! ಹಿಂದಿರುಗು.” ಆಗ ಆ ನೃಪತಿಸತ್ತಮನು ತಾನು ಮಾಡಿಕೊಂಡಿದ್ದ ಒಪ್ಪಂದವನ್ನು ನೆನಪಿಸಿಕೊಂಡು ತನ್ನ ಇಬ್ಬರು ಪತ್ನಿಯರಿಗೂ ಆ ಒಂದು ಫಲವನ್ನು ಕೊಟ್ಟನು. ಶುಭೆಯರಿಬ್ಬರೂ ಆ ಮವಿನಹಣ್ಣನ್ನು ಅರ್ಧಮಾಡಿ ತಿಂದರು. ಮುನಿಯ ಸತ್ಯವಾಖ್ಯಗಳು ನಿಜವಾಗುವುದು ನಿರ್ದಿಷ್ಟವಾಗುವುದರಿಂದ, ಆ ಮಾವಿನ ಹಣ್ಣನ್ನು ತಿಂದ ಇಬ್ಬರೂ ಗರ್ಭವನ್ನು ಧರಿಸಿದರು. ಅವರನ್ನು ನೋಡಿದ ನರಪತಿಯು ಬಹಳ ಹರ್ಷಿತನಾದನು. ಸಮಯವು ಪ್ರಾಪ್ತಿಯಾದಾಗ ಇಬ್ಬರು ಶುಭೆಯರೂ ಅರ್ಧ ದೇಹವನ್ನು ಹೊಂದಿದ - ಒಂದು ಕಣ್ಣು, ಒಂದು ತೋಳು, ಒಂದು ಕಾಲು, ಕುಂಡೆ, ಅರ್ಧ ಮುಖ ಮತ್ತು ಹೊಟ್ಟೆಯ ಮಗುವಿಗೆ ಜನ್ಮವಿತ್ತರು. ಆ ಅರ್ಧ ಮಗುವನ್ನು ನೋಡಿ ಇಬ್ಬರೂ ಭಯದಿಂದ ನಡುಗಿದರು. ಆಗ ಆ ಉದ್ವಿಗ್ನ ಅಬಲೆ ಸಹೋದರಿಯರು ಜೊತೆಗೆ ವಿಚಾರ ಮಾಡಿ ಬಹು ದುಃಖಿತರಾಗಿ ಜೀವಂತವಾಗಿದ್ದ ಆ ಎರಡು ಅರ್ಧ ಶಿಶುಗಳನ್ನು ಬಿಸಾಡಿದರು. ಆ ಎರಡು ಅರ್ಧ ಶಿಶುಗಳನ್ನು ಸರಿಯಾಗಿ ಸುತ್ತಿ ಸೂತಗಿತ್ತಿಯರು ಅಂತಃಪುರದ ಬಾಗಿಲಿನಿಂದ ಹೊರಹೋಗಿ ಎಸೆದು ಅವಸರದಲ್ಲಿ ಹಿಂದಿರುಗಿದರು. ಅದೇ ಸಮಯದಲ್ಲಿ ರಕ್ತ-ಮಾಂಸಗಳನ್ನು

ತಿನ್ನುವ ಜರಾ ಎಂಬ ಹೆಸರಿನ ರಾಕ್ಷಸಿಯು ನಾಲ್ಕು ರಸ್ತೆಗಳು ಸೇರುವಲ್ಲಿ ಇರಿಸಿದ್ದ ಮಕ್ಕಳನ್ನು ಎತ್ತಿಕೊಂಡಳು. ಅವನ್ನು ತೆಗೆದುಕೊಂಡು ಹೋಗಲು ಸುಲಭವಾಗಲೆಂದು ಆ ರಾಕ್ಷಸಿಯು, ವಿಧಿಯ ಶಕ್ತಿಯಿಂದ ಪ್ರಚೋದಿತಳಾಗಿ, ಆ ಎರಡು ಅರ್ಧ ಶರೀರಗಳನ್ನು ಒಟ್ಟುಮಾಡಿ ಹಿಡಿದುಕೊಂಡಳು. ಆ ಎರಡು ಅರ್ಧಶರೀರಗಳನ್ನು ಒಟ್ಟುಮಾಡಿದ ಕೂಡಲೇ ಒಂದಾಗಿ ವೀರ ಕುಮಾರನ ಶರೀರವನ್ನು ತಾಳಿತು. ಆಗ ಆ ರಾಕ್ಷಸಿಯು ಆಶ್ಚರ್ಯದಿಂದ ತೆರೆದ ಕಣ್ಣುಗಳಿಂದ ನೋಡಿದಳು. ವಜ್ರದಿಂದ ಮಾಡಿದಂತಿದ್ದ ಆ ಶಿಶುವನ್ನು ಎತ್ತಿಕೊಂಡು ಹೋಗಲೂ ಅವಳಿಗೆ ಸಾಧ್ಯವಾಗಲಿಲ್ಲ. ಆ ಬಾಲಕನು ತನ್ನ ಕೈಬೆರಳುಗಳನ್ನು ಮುಷ್ಟಿ ಮಾಡಿಕೊಂಡು ತನ್ನ ಬಾಯಿಯಲ್ಲಿಟ್ಟುಕೊಂಡು ಮಳೆಯ ಮೋಡವು ಒಡೆಯುವಾಗ ಹೇಗೆ ಗುಡುಗುತ್ತದೆಯೋ ಹಾಗೆ ಜೋರಾಗಿ ಅಳತೊಡಗಿದನು. ಆ ಶಬ್ಧವನ್ನು ಕೇಳಿ ಸಂಭ್ರಾಂತನಾದ ಪರಂತಪ ನರವ್ಯಾಘ್ರ ರಾಜನು ಅಂತಃಪುರ ಜನರೊಂದಿಗೆ ಹೊರಬಂದನು. ದುಃಖಿತರಾದ, ನಿರಾಶರಾದ, ಹಾಲುತುಂಬಿದ ಸ್ತನಗಳ ಆ ಅಬಲೆಯರು ಪುತ್ರನನ್ನು ಪಡೆಯಲೋಸುಗ ತಕ್ಷಣವೇ ಓಡಿ ಬಂದರು. ಸಂತತಿಯನ್ನು ಬಯಸಿ ಬಂದ ಆ ರಾಜನನ್ನು ಮತ್ತು ಬಲಶಾಲಿ

ಮಗುವನ್ನು ನೋಡಿದ ರಾಕ್ಷಸಿಯು ಯೋಚಿಸಿದಳು: "ಪುತ್ರನಿಗಾಗಿ ಕೃಪಣನಾದ ಈ ರಾಜನ ರಾಜ್ಯದಲ್ಲಿ ವಾಸಿಸುತ್ತಿರುವ ನಾನು ಬಾಸ್ಕರನ ಕಿರಣಗಳನ್ನು ಕೊಂಡೊಯ್ಯುವ ಮೋಡಗಳಂತೆ ಈ ಬಾಲಕನನ್ನು ಎತ್ತಿಕೊಂಡು ಹೋಗಬಾರದು."

ಅವಳು ಮನುಷ್ಯರೂಪವನ್ನು ಧರಿಸಿ ಮನುಜಾಧಿಪನಿಗೆ ಹೇಳಿದಳು: "ಬೃಹದ್ರಥ! ನಾನು ಕೊಡುತ್ತಿರುವ ಇವನು ನಿನ್ನ ಮಗ. ಸ್ವೀಕರಿಸು. ಆ ದ್ವಿಜಶ್ರೇಷ್ಠನ ವರಪ್ರಸಾದದಿಂದ ನಿನ್ನ ಇಬ್ಬರು ಪತ್ನಿಯರಲ್ಲಿ ಜನಿಸಿ, ಸೂಲಗಿತ್ತಿರಿಯರಿಂದ ಪರಿತ್ಯಕ್ತನಾದ ಇವನನ್ನು ನಾನು ರಕ್ಷಿಸಿದ್ದೇನೆ." ಅನಂತರ ಸುಂದರ ಕಾಶಿರಾಜನ ಸುತೆಯರು ಆ ಬಾಲಕನನ್ನು ಎಳೆದು ಬಿಗಿದಪ್ಪಿ ಹರಿದು ಬರುತ್ತಿದ್ದ ಮೊಲೆಯ ಹಾಲನ್ನು ಅವನ ಮೇಲೆ ಸುರಿಸಿದರು. ಇದನ್ನೆಲ್ಲ ನೋಡಿ ಸಂತೋಷಗೊಂಡ ರಾಜನು ತನ್ನ ಮನುಷ್ಯರೂಪದಲ್ಲಿ ರಾಕ್ಷಸಿಯಂತೆ ತೋರದಿದ್ದ ಹೊಸ ಬಂಗಾರದ ಕಾಂತಿಯುಕ್ತ ಆ ರಾಕ್ಷಸಿಗೆ ಹೇಳಿದನು: "ನನ್ನ ಮಗನನ್ನು ಇತ್ತ ಕಮಲದ ಕುಸುಮದಂತೆ ಕಾಂತಿಯುಕ್ತಳಾದ ನೀನು ಯಾರು? ಕಲ್ಯಾಣಿ! ನನಗೆ ನಿನ್ನ ಮೇಲುಂಟಾದ ಪ್ರೀತಿಗಾಗಿ ಹೇಳು. ನಿನ್ನ ಪ್ರತಿಭೆಯನ್ನು ನೋಡಿದರೆ ದೇವತೆಯೆಂದು ನನಗನ್ನಿಸುತ್ತದೆ." ಆಗ

ರಾಕ್ಷಸಿಯು ಹೇಳಿದಳು: “ರಾಜೇಂದ್ರ! ನಿನಗೆ ಮಂಗಳವಾಗಲಿ! ನಾನೋರ್ವಳು ಇಚ್ಛಿಸಿದ ದೇಹವನ್ನು ಧರಿಸಬಲ್ಲ ಜರಾ ಎಂಬ ಹೆಸರಿನ ರಾಕ್ಷಸಿ. ನಾನು ನಿನ್ನ ರಾಜ್ಯದಲ್ಲಿ ಎಲ್ಲರಿಂದ ಗೌರವಿಸಲ್ಪಟ್ಟು ಸುಖದಿಂದ ವಾಸಿಸುತ್ತಿದ್ದೇನೆ. ನಿನಗೆ ಹೇಗೆ ಪ್ರತ್ಯುಪಕಾರ ಮಾಡಲಿ ಎಂದು ನಿತ್ಯವೂ ಚಿಂತಿಸುತ್ತಿದ್ದೆ. ಈಗ ನಿನ್ನ ಪುತ್ರನ ಎರಡು ಅರ್ಧಗಳನ್ನು ನೋಡಿ, ಒಟ್ಟುಗೂಡಿಸಿದಾಗ ವಿಧಿಯ ಹೇಳಿಕೆಯಂತೆ ಕುಮಾರನಾದನು. ಇದು ನಿನ್ನ ಭಾಗ್ಯ. ಇದರಲ್ಲಿ ನಾನು ಕೇವಲ ಒಂದು ಕಾರಣ ಅಷ್ಟೆ.”

ಇದನ್ನು ಹೇಳಿದ ಅವಳು ಅಲ್ಲಿಯೇ ಅಂತರ್ಧಾನಳಾದಳು. ನೃಪನು ತನ್ನ ಕುಮಾರನನ್ನು ಎತ್ತಿಕೊಂಡು ಸ್ವಗೃಹವನ್ನು ಪ್ರವೇಶಿಸಿದನು. ಅನಂತರ ನೃಪನು ತನ್ನ ಬಾಲಕನಿಗೆ ಮಾಡಬೇಕಾದ ಎಲ್ಲ ಸಂಸ್ಕಾರಗಳನ್ನೂ ಮಾಡಿ ರಾಕ್ಷಸಿಯ ಕುರಿತು ಮಗಧದಲ್ಲಿ ಮಹಾ ಉತ್ಸವವನ್ನು ಆಜ್ಞಾಪಿಸಿದನು. ಆ ಪ್ರಜಾಪತಿಸಮ ಪಿತನು ಅವನಿಗೆ ನಾಮಕರಣ ಮಾಡಿದನು. ಜರಾಳಿಂದ ಒಂದಾದುದರಿಂದ ಅವನ ಹೆಸರನ್ನು ಜರಾಸಂಧನೆಂದಾಯಿತು. ಆ ಮಗಧಾಧಿಪತಿಯ ಮಗನಾದರೂ ಮಹಾತೇಜಸ್ಸಿನಿಂದ ಆಹುತಿಯನ್ನು ಹಾಕಿದಾಗ ಅಗ್ನಿಯು ಹೇಗೋ ಹಾಗೆ ಗಾತ್ರ ಮತ್ತು ಬಲ

ಸಂಪನ್ನನಾಗಿ ಬೆಳೆದನು. ಸ್ವಲ್ಪ ಸಮಯದ ನಂತರ ಪುನಃ ಅದೇ ಮಹಾತಪಸ್ವಿ ಭಗವಾನ್ ಚಂಡಕೌಶಿಕಿಯು ಮಗಧ ದೇಶಕ್ಕೆ ಬಂದನು. ಅವನ ಆಗಮನದಿಂದ ಸಂತೋಷಗೊಂಡ ಬೃಹದ್ರಥನು ತನ್ನ ಅಮಾತ್ಯರು, ಪುರದ ಜನರು, ಪತ್ನಿಯರು ಮತ್ತು ಮಗನೊಂದಿಗೆ ಹೊರಬಂದನು. ಪಾದ್ಯ, ಅರ್ಘ್ಯ, ಆಚಮನೀಯಗಳಿಂದ ಅವನನ್ನು ಅರ್ಚಿಸಿ ನೃಪತಿಯು ತನ್ನ ರಾಜ್ಯದ ಸಹಿತ ಪುತ್ರನನ್ನು ಅವನಿಗೆ ಸಮರ್ಪಿಸಿದನು. ರಾಜನಿಂದ ಆ ಪೂಜೆಯನ್ನು ಸ್ವೀಕರಿಸಿದ ಭಗವಾನ್ ಋಷಿಯು ಸಂತೋಷಗೊಂಡ ಅಂತರಾತ್ಮದಿಂದ ಮಾಗಧ ರಾಜನಿಗೆ ಹೇಳಿದನು: “ರಾಜನ್! ಇವೆಲ್ಲವನ್ನೂ ನಾನು ನನ್ನ ಜ್ಞಾನದ ಕಣ್ಣುಗಳಿಂದ ತಿಳಿದಿದ್ದೆ. ನಿನ್ನ ಪುತ್ರನು ಭವಿಷ್ಯದಲ್ಲಿ ಏನಾಗುತ್ತಾನೆ ಎನ್ನುವುದನ್ನು ಈಗ ಕೇಳು. ಇವನ ವೀರ್ಯಕ್ಕಿಂತಲೂ ವೀರ್ಯವುಳ್ಳ ಪಾರ್ಥಿವರ್ಯಾರೂ ಇರುವುದಿಲ್ಲ. ನದಿಯ ಪ್ರವಾಹವು ಪರ್ವತಕ್ಕೆ ಹೇಗೆ ನೋವನ್ನುಂಟಮಾಡಲಾರವೋ ಹಾಗೆ ದೇವತೆಗಳೂ ಬಿಟ್ಟ ಅಸ್ತ್ರಗಳಿಂದ ಇವನಿಗೆ ಪೆಟ್ಟಾಗುವುದಿಲ್ಲ. ನಕ್ಷತ್ರಗಳ ಪ್ರಭೆಯನ್ನು ಮೀರಿಸುವ ಭಾಸ್ಕರನಂತೆ ಇವನು ಮೂರ್ಧಾಭಿಷಿಕ್ತರಾದ ಎಲ್ಲರ ಶಿರಗಳಿಗಿಂಥ ಬೆಳಗುತ್ತಾನೆ. ಇವನನ್ನು ಆಕ್ರಮಿಸುವ ರಾಜರ ಸಮೃದ್ಧ ಬಲ

ವಾಹನಗಳು ಬೆಂಕಿಯಿಂದ ಪತಂಗವು ಹೇಗೋ ಹಾಗೆ ವಿನಾಶ ಹೊಂದುತ್ತವೆ. ಮಳೆನೀರೆಲ್ಲವನ್ನು ನದಿಗಳ ಮೂಲಕ ಹೇಗೆ ಸಾಗರವು ಹೀರಿಕೊಳ್ಳುತ್ತದೆಯೋ ಹಾಗೆ ಇವನು ಸರ್ವರಾಜರ ಶ್ರಿಯನ್ನು ಒಟ್ಟುಗೂಡಿಸಿ ಹಿಡಿದುಕೊಳ್ಳುತ್ತಾನೆ. ಸರ್ವಸಸ್ಯಧಾರಿಣಿ ಈ ಧರೆಯು ಹೇಗೆ ಶುಭ ಮತ್ತು ಅಶುಭಗಳನ್ನು ಸಹಿಸಿಕೊಳ್ಳುತ್ತಾಳೋ ಹಾಗೆ ಈ ಮಹಾಬಲನು ನಾಲ್ಕೂ ವರ್ಣದವರನ್ನು ಚೆನ್ನಾಗಿ ಪರಿಪಾಲಿಸುತ್ತಾನೆ. ಸರ್ವಭೂತಗಳಲ್ಲಿ ಇರುವ ವಾಯುವಿಗೆ ಶರೀರವು ಹೇಗೋ ಹಾಗೆ ಸರ್ವ ನರಾಧಿಪರೂ ಇವನ ಆಜ್ಞೆಗೊಳಗಾಗುತ್ತಾರೆ. ತನ್ನ ಅತಿಬಲದಿಂದ ಸರ್ವಲೋಕಗಳನ್ನು ಜಯಿಸುವ ಈ ಮಾಗಧನು ಸ್ವಯಂ ಮಹಾದೇವ ತ್ರಿಪುರಾಂತಕ ಹರ ರುದ್ರನನ್ನು ಕಾಣುತ್ತಾನೆ." ಹೀಗೆ ಹೇಳಿದ ಮುನಿಯು ತನ್ನ ಕಾರ್ಯಗಳ ಕುರಿತು ಯೋಚಿಸುತ್ತಾ ನೃಪ ಬೃಹದ್ರಥನನ್ನು ಕಳುಹಿಸಿದನು. ತನ್ನ ಜ್ಞಾತಿಬಾಂಧವರಿದ ಕೂಡಿ ನಗರವನ್ನು ಪ್ರವೇಶಿಸಿ ಜರಾಸಂಧನನ್ನು ಮಗಧಾಧಿಪತಿಯನ್ನಾಗಿ ಅಭಿಷೇಕಿಸಿ ನರಪತಿ ಬೃಹದ್ರಥನು ಅಂತಿಮ ನಿವೃತ್ತಿಯನ್ನು ಪಡೆದನು. ಜರಾಸಂಧನನ್ನು ಅಭಿಷೇಕಿಸಿ ರಾಜ ಬೃಹದ್ರಥನು ತನ್ನ ಇಬ್ಬರೂ ಪತ್ನಿಯರೊಡನೆ ತಪೋವನದಲ್ಲಿ ಅನುರತನಾದನು. ತನ್ನ ಈರ್ವರು ತಾಯಂದಿರೊಡನೆ

ತಂದೆಯು ತಪೋವನದಲ್ಲಿರಲು ಜರಾಸಂಧನು ತನ್ನ ವೀರ್ಯದಿಂದ ರಾಜರನ್ನು ವಶಮಾಡಿಕೊಂಡನು. ತುಂಬಾ ಸಮಯದ ನಂತರ ತಪೋವನಕ್ಕೆ ಹೋಗಿದ್ದ ನೃಪ ಬೃಹದ್ರಥನು ತಪಸ್ಸನ್ನು ಮಾಡಿ ತನ್ನ ಭಾರ್ಯೆಯರೊಂದಿಗೆ ಸ್ವರ್ಗವನ್ನು ಸೇರಿದನು. ಶಸ್ತ್ರಗಳಿಂದ ಸಾವನ್ನು ಹೊಂದದ ಹಂಸ-ಡಿಭಕರು ಜರಾಸಂಧನ ಜೊತೆಯಿದ್ದರು. ನಾನು ಈ ಮೊದಲೇ ಹೇಳಿದ ಆ ಮಹಾಬಲಶಾಲಿಗಳಿಬ್ಬರೂ ಮಂತ್ರಾಲೋಚನೆಯಲ್ಲಿ ಮತಿವಂತರಾಗಿ ಶ್ರೇಷ್ಠರಾಗಿದ್ದರು, ಯುದ್ಧ ಶಾಸ್ತ್ರದಲ್ಲಿ ವಿಶಾರದರಾಗಿದ್ದರು. ಇವನೇ ಆ ವೀರಬಲಿ. ಅವನನ್ನು ಕುಕುರರು, ಅಂಧಕರು, ಮತ್ತು ವೃಷ್ಣಿಗಳು ನೀತಿಯ ಕಾರಣದಿಂದ ಅಲಕ್ಷಿಸಿದ್ದರು.”

## ಕೃಷ್ಣ-ಪಾಂಡವರ ಮಾಗಧಯಾತ್ರೆ

ವಾಸುದೇವನು ಹೇಳಿದನು:

“ಹಂಸ-ಡಿಭಕರು ಪತಿತರಾಗಿದ್ದಾರೆ; ಕಂಸ ಮತ್ತು ಅವನ ಅಮಾತ್ಯರು ನಿಪತಿತರಾಗಿದ್ದಾರೆ. ಈಗ ಜರಾಸಂಧನ ನಿಧನದ ಕಾಲವು ಬಂದೊದಗಿದೆ. ಅವನನ್ನು ರಣದಲ್ಲಿ ಗೆಲ್ಲಲು ಸುರಾಸುರ ಸರ್ವರಿಂದಲೂ ಶಕ್ಯವಿಲ್ಲ. ಆದರೆ, ನಮಗೆ ತಿಳಿದಿರುವಂತೆ, ಪ್ರಾಣ-ಯುದ್ಧದಲ್ಲಿ ಅವನನ್ನು

ಗೆಲ್ಲಬಹುದು. ನನ್ನಲ್ಲಿ ನೀತಿಯಿದೆ. ಭೀಮನಲ್ಲಿ ಬಲವಿದೆ. ಮತ್ತು ಅರ್ಜುನನು ನಮ್ಮಿರ್ವರನ್ನು ರಕ್ಷಿಸಬಲ್ಲನು. ರಾಜನ್! ಮೂರು ಅಗ್ನಿಗಳಂತೆ ನಾವು ಅವನನ್ನು ಸಾಧಿಸುತ್ತೇವೆ. ಏಕಾಂತದಲ್ಲಿ ಆ ನರಾಧಿಪನನ್ನು ನಾವು ಮೂವರೂ ಎದುರಿಸಿದಾಗ ನಮ್ಮಲ್ಲಿ ಒಬ್ಬನನ್ನು ಯುದ್ಧದಲ್ಲಿ ತೊಡಗಿಸುತ್ತಾನೆ ಎನ್ನುವುದರಲ್ಲಿ ಸಂದೇಹವಿಲ್ಲ. ಲೋಕದ ಅವಮಾನ ಮತ್ತು ತನ್ನ ಮೇಲಿರುವ ಅಭಿಮಾನಗಳು ನಿಶ್ಚಿತವಾಗಿಯೂ ಅವನನ್ನು ಭೀಮಸೇನನೊಡನೆ ಯುದ್ಧಮಾಡಲು ಪ್ರೇರೇಪಿಸುತ್ತವೆ. ಲೋಕ ನಿಧನಕ್ಕೆ ಹೇಗೆ ಅಂತಕನು ಸಾಕೋ ಹಾಗೆ ಅವನ ನಿಧನಕ್ಕೆ ಮಹಾಬಾಹು ಮಹಾಬಲ ಭೀಮಸೇನನು ಸಾಕು. ನಿನ್ನ ಹೃದಯವು ತಿಳಿದಿದ್ದರೆ ಮತ್ತು ನನ್ನಮೇಲೆ ನಿನಗೆ ವಿಶ್ವಾಸವಿದ್ದರೆ ಶೀಘ್ರದಲ್ಲಿಯೇ ಭೀಮಾರ್ಜುನರನ್ನು ನನಗೊಪ್ಪಿಸು."

ಭಗವಂತನು ಹೀಗೆ ಹೇಳಲು ಯುಧಿಷ್ಠಿರನು ಸಂಪ್ರಹೃಷ್ಟಮುಖರಾಗಿ ನಿಂತಿದ್ದ ಭೀಮ ಪಾರ್ಥರೆಡೆಗೆ ನೋಡುತ್ತಾ ಉತ್ತರಿಸಿದನು:

"ಅಚ್ಯುತ! ನನ್ನೊಂದಿಗೆ ಈ ರೀತಿ ವ್ಯವಹರಿಸಬೇಡ! ಪಾಂಡವರ ನಾಥನು ನೀನು. ನಾವೆಲ್ಲರೂ ನಿನ್ನ ಆಶ್ರಯದಲ್ಲಿದ್ದೇವೆ. ನೀನು ಹೇಳಿದುದೆಲ್ಲವೂ ಸರಿಯೇ.

ಲಕ್ಷ್ಮಿಯು ಪರಾಂಙ್ಮುಖಿಯಾಗಿರುವವರ ಎದುರು ನೀನು ಬರುವುದೇ ಇಲ್ಲ. ನಿನ್ನ ನಿರ್ದೇಶನದಂತೆ ನಡೆದರೆ ಜರಾಸಂಧನು ನಿಹತನಾಗುತ್ತಾನೆ, ಮಹೀಕ್ಷಿತರು ಬಿಡುಗಡೆ ಹೊಂದುತ್ತಾರೆ ಮತ್ತು ರಾಜಸೂಯವು ನನಗೆ ಲಬ್ಧವಾಗುತ್ತದೆ. ನನ್ನ ಜಗತ್ಕಾರ್ಯ ಕಾರ್ಯವು ಸರಿಯಾಗಿ ನೆರವೇರುವಂತೆ ಮಾಡು. ನೀವು ಮೂವರ ವಿನಃ ನಾನು ಜೀವಿಸಲು ಶಕ್ಯನಿಲ್ಲ. ಧರ್ಮಕಾಮಾರ್ಥರಹಿತ ರೋಗಿಯಂತೆ ಬಳಲುತ್ತೇನೆ. ಶೌರಿಯ ವಿನಃ ಪಾರ್ಥನಿಲ್ಲ, ಪಾಂಡವನ ವಿನಃ ಶೌರಿಯಿಲ್ಲ. ಈ ಈರ್ವರು ಕೃಷ್ಣರಿಗೆ ಲೋಕದಲ್ಲಿ ಅಜೇಯರು ಯಾರೂ ಇಲ್ಲ ಎನ್ನುವುದು ನನ್ನ ಅಭಿಪ್ರಾಯ. ಈ ಶ್ರೀಮಾನ್ ವೃಕೋದರನೂ ಕೂಡ ಬಲಿಗಳಲ್ಲಿ ಶ್ರೇಷ್ಠನು. ನಿಮ್ಮಿಬ್ಬರ ಸಹಾಯ ದೊರೆತರೆ ಈ ಮಹಾಯಶಸ್ವಿ ವೀರನು ಏನನ್ನು ಸಾಧಿಸಲಾರ? ಸುಪ್ರಣೀತನ ನಾಯಕತ್ವವನ್ನು ಹೊಂದಿರುವ ಬಲಪ್ರವಾಹವು ಉತ್ತಮ ಕಾರ್ಯವನ್ನು ಸಾಧಿಸಬಲ್ಲದು. ಪ್ರಣೀತನ ನಾಯಕತ್ವದಲ್ಲಿ ಬಲವಿರಬೇಕು. ಇಲ್ಲದಿದ್ದರೆ ಅದು ಕುರುಡು ಮತ್ತು ಜಡವಾಗಿರುತ್ತದೆ ಎಂದು ಹೇಳುತ್ತಾರೆ. ತಗ್ಗಿರುವಲ್ಲಿಗೇ ನೀರು ಹೇಗೆ ಹರಿಯುತ್ತದೆಯೋ ಹಾಗೆ ಅಮಿತಬುದ್ಧಿಯುಳ್ಳವರು ಛಿದ್ರವಿರುವಲ್ಲಿಗೆ ಬಲವನ್ನು ಒಯ್ಯುತ್ತಾರೆ. ಆದುದರಿಂದ ವಿಧಾನಜ್ಞ

ಲೋಕವಿಶ್ರುತ ಪುರುಷ ಗೋವಿಂದನ ಆಶ್ರಯದಲ್ಲಿರುವ ನಾವು ಕಾರ್ಯಸಿದ್ಧಿಯನ್ನು ಹೊಂದುತ್ತೇವೆ. ಹೀಗೆ ಕಾರ್ಯಾರ್ಥಸಿದ್ಧಿಗಾಗಿ ಎಲ್ಲ ಕಾರ್ಯಗಳಲ್ಲಿ ಪ್ರಜ್ಞೆ, ನೀತಿ, ಬಲ ಮತ್ತು ಕ್ರಿಯೋಪಾಯಸಮನ್ವಿತ ಕೃಷ್ಣನನ್ನೇ ಮುಂದಿಡಬೇಕು. ಈ ರೀತಿ ಕಾರ್ಯಾರ್ಥಸಿದ್ಧಿಗಾಗಿ ಪಾರ್ಥ ಅರ್ಜುನನು ಯದುಶ್ರೇಷ್ಠ ಕೃಷ್ಣನನ್ನು ಅನುಸರಿಸಲಿ. ಭೀಮನು ದನಂಜಯನನ್ನು ಅನುಸರಿಸಲಿ. ನೀತಿ, ಜಯ ಮತ್ತು ಬಲವು ವಿಕ್ರಮವನ್ನು ಸಿದ್ಧಿಗೊಳಿಸುತ್ತದೆ.”

ಅವನು ಈ ರೀತಿ ಹೇಳಲು ವಿಪುಲೌಜಸ ಸರ್ವ ಭ್ರಾತರರೂ - ವಾರ್ಷ್ಣೇಯ ಮತ್ತು ಪಾಂಡವರೀರ್ವರು - ಮಗಧದ ಕಡೆ ಹೊರಟರು. ವರ್ಚಸ್ವಿ ಸ್ನಾತಕ ಬ್ರಾಹ್ಮಣರ ಉಡುಪನ್ನು ಹೊದ್ದು ಸುಹೃದಯರ ಮನೋಜ್ಞ ಮಾತುಗಳಿಂದ ಅಭಿನಂದಿತರಾಗಿ ಹೊರಟರು. ಸುಂದರ ವಸ್ತ್ರಗಳನ್ನು ಧರಿಸಿದ್ದ ಮತ್ತು ಅಭಿತಪ್ತ ಜ್ಞಾತಿಗಳಿಗೋಸ್ಕರ ಸಿಟ್ಟಿಗೆದ್ದಿದ್ದ ಆ ರವಿಸೋಮಾಗ್ನಿವಪುಷರ ದೇಹಗಳು ಭಯಂಕರವಾಗಿ ತೋರುತ್ತಿದ್ದವು. ಭೀಮನನ್ನು ಮುಂದಿಟ್ಟುಕೊಂಡು ಒಂದೇ ಕಾರ್ಯದಲ್ಲಿ ತೊಡಗಿರುವ ಯುದ್ಧದಲ್ಲಿ ಅಪರಾಜಿತ ಕೃಷ್ಣರೀರ್ವರನ್ನು ನೋಡಿದ ಅವನು ಜರಾಸಂಧನು ಹತನಾದನೆಂದೇ ಭಾವಿಸಿದನು. ಯಾಕೆಂದರೆ ಅವರೀರ್ವರು ಮಹಾತ್ಮರೂ ಸರ್ವಕಾರ್ಯಗಳನ್ನು ಪ್ರಾರಂಭಿಸುವುದರಲ್ಲಿ ಮತ್ತು

ಧರ್ಮಾರ್ಥಕಾಮಕಾರ್ಯಗಳ ನಿಗ್ರಹದಲ್ಲಿ ಈಶರು.

ಕುರುದೇಶದಿಂದ ಹೊರಟು ಕುರುಜಂಗಲದ ಮಧ್ಯದಿಂದ ಹಾಯ್ದು ರಮ್ಯ ಪದ್ಮಸರೋವರಕ್ಕೆ ಹೋಗಿ ಕಾಲಕೂಟವನ್ನು ದಾಟಿ, ಒಂದೇ ಪರ್ವತದಿಂದ ಉದ್ಭವಿಸುವ ಗಂಡಕೀ, ಶೋಣ ಮತ್ತು ಸದಾನೀರ ನದಿಗಳನ್ನು ಒಂದೊಂದಾಗಿ ದಾಟಿ ಮುಂದುವರೆದರು. ರಮ್ಯ ಸರಯೂವನ್ನು ದಾಟಿ ಪೂರ್ವದಲ್ಲಿ ಕೋಸಲವನ್ನು ನೋಡುತ್ತಾ ಮಿಥಿಲೆಗೆ ಹೋಗಿ ಮಾಲಾ ಮತ್ತು ಚರ್ಮಣ್ವತೀ ನದಿಗಳನ್ನು ದಾಟಿದರು. ಆ ಮೂವರು ಅಚ್ಯುತರೂ ಪೂರ್ವಮುಖವಾಗಿ ಹೊರಟು ಗಂಗಾ ಮತ್ತು ಶೋಣ ನದಿಗಳನ್ನು ದಾಟಿ ಕುರವ ವೃಕ್ಷಗಳಿಂದ ಸುತ್ತುವರೆಯಲ್ಪಟ್ಟ ಮಾಗಧ ಕ್ಷೇತ್ರವನ್ನು ತಲುಪಿದರು. ಗೋವುಗಳ ಗುಂಪಿನಿಂದ ಕೂಡಿದ, ಒಳ್ಳೆಯ ನೀರು ಮತ್ತು ಸುಂದರ ವೃಕ್ಷಗಳಿಂದ ಕೂಡಿದ ಗೋರಥ ಗಿರಿಯನ್ನು ತಲುಪಿ ಅಲ್ಲಿಂದ ಅವರು ಮಾಗಧ ಪುರವನ್ನು ಕಂಡರು.

ವಾಸುದೇವನು ಹೇಳಿದನು:

> “ಪಾರ್ಥ ! ಇದೇ ಸದಾ ಪಶು-ನೀರಿನಿಂದ ಮತ್ತು ನಿರಾಮಯ ಸುಂದರ ದೊಡ್ಡ ನಿವೇಶನಗಳಿಂದ ಕೂಡಿದ ಶುಭ ಮಾಗಧ ! ಇವು ವೈಹಾರ, ವರಾಹ, ವೃಷಭ, ಋಷಿಗಿರಿ ಮತ್ತು ಚೈತ್ಯಗಳೆಂಬ ಐದು ವಿಪುಲ ಬೆಟ್ಟಗಳು. ಶೀತಲ ದ್ರುಮಗಳನ್ನೊಡಗೂಡಿದ ಈ ಐದು ಮಹಾಶೃಂಗ

ಪರ್ವತಗಳು ಒಟ್ಟಾಗಿ, ಒಂದಕ್ಕೊಂದು ಹೊಂದಿಕೊಂಡು, ಗಿರಿವ್ರಜವನ್ನು ರಕ್ಷಿಸುತ್ತಿವೆಯೋ ಎಂಬಂತೆ ತೋರುತ್ತಿವೆ. ಪುಷ್ಪಗಳಿಂದ ತುಂಬಿದ ಶಾಖೆಗಳ ಮನೋರಮ ಸುಗಂಧವನ್ನು ಸೂಸುವ ಕಾಮಿಜನಪ್ರಿಯಕರ ಲೋಧ್ರಾ ವನಗಳಲ್ಲಿ ಗಿರಿವ್ರಜವು ಅಡಗಿರುವಂತೆ ತೋರುತ್ತಿದೆ. ಇಲ್ಲಿಯೇ ಮಹಾತ್ಮ ಸಂಶಿತವ್ರತ ಗೌತಮ ಋಷಿಯು ಶೂದ್ರ ಔಶೀನರಿಯಲ್ಲಿ ಕಾಕ್ಷೀವಾನ್ ಮೊದಲಾದ ಸುತರನ್ನು ಪಡೆದನು. ಅವನ ಸ್ಥಳದಲ್ಲಿ ವಾಸಿಸುತ್ತಿದ್ದುದಕ್ಕಾಗಿ ಗೌತಮನು ಮಗಧ ರಾಜವಂಶವನ್ನು ಅದರ ರಾಜರು ಅವನಿಗಿತ್ತ ಮಾನ್ಯತೆಗಳಿಗಾಗಿ ಪ್ರೀತಿಸಿದನು. ಅರ್ಜುನ! ಹಿಂದೆ ಅಂಗ, ವಂಗ ಮೊದಲಾದ ಸುಮಹಾಬಲ ರಾಜರುಗಳೂ ಕೂಡ ಗೌತಮನ ಆಶ್ರಮಕ್ಕೆ ಬಂದು ಸಂತೋಷವನ್ನು ಪಡೆದರು. ಗೌತಮನ ಆಶ್ರಮಕ್ಕೆ ಹೊಂದಿಕೊಂಡು ಬೆಳೆದಿರುವ ಈ ಮನೋರಮ ಪ್ರಿಯಾಲ ವನರಾಶಿ ಮತ್ತು ಸುಂದರ ಲೋಧ್ರಾವೃಕ್ಷಗಳನ್ನು ನೋಡು. ಇಲ್ಲಿ ಅರ್ಬುದ ಮತ್ತು ಶಕ್ರವಾಪೀ ಎಂಬ ಎರಡು ಶತ್ರುತಾಪನ ಪನ್ನಗಗಳು ವಾಸಿಸುತ್ತವೆ. ಅಲ್ಲಿಯೇ ಸ್ವಸ್ತಿಕ ಮತ್ತು ಮಣಿನಾಗನ ಉತ್ತಮ ಆಲಯಗಳೂ ಇವೆ. ಮಣಿಯ ಕೃಪೆಯಿಂದ ಈ ಮಾಗಧವು ಮೇಘಗಳಿಂದ ಎಂದೂ ವಂಚಿತವಾಗುವುದಿಲ್ಲ. ಕೌಶಿಕ ಮತ್ತು ಮಣಿಮತನೂ ಕೂಡ

> ಇದರ ಮೇಲೆ ಅನುಗ್ರಹವನ್ನು ವೃದ್ಧಿಸಿದ್ದಾರೆ. ತಾನು ಗಳಿಸಿದ ಅರ್ಥಸಿದ್ಧಿಯು ಎಂದೂ ಕಡಿಮೆಯಾಗುವುದಿಲ್ಲ ಎಂದು ಜರಾಸಂಧನು ತಿಳಿದಿದ್ದಾನೆ. ಆದರೆ ನಾವು ಅವನ ಬಳಿ ಹೋಗಿ ಅವನ ದರ್ಪವನ್ನು ಕೆಳಗುರಿಸೋಣ."

ಈ ರೀತಿ ಮಾತನಾಡುತ್ತಾ ವಿಪುಲೌಜಸ ಅಣ್ಣತಮ್ಮಂದಿರೆಲ್ಲರೂ - ವಾರ್ಷ್ಣೇಯ ಮತ್ತು ಇಬ್ಬರು ಪಾಂಡವರು - ಮಗಧಪುರ ಪ್ರವೇಶ ಮಾಡಿದರು. ತುಷ್ಟಪುಷ್ಟಜನ ಭರಿತ, ಚಾತುರ್ವರ್ಣ್ಯಜನ ಸಮುದಾಯದಿಂದ ಕೂಡಿದ, ವಿಜೃಂಭಣೆಯ ಉತ್ಸವಭರಿತವಾದ, ಭೇಧಿಸಲಸಾಧ್ಯ ಗಿರಿವ್ರಜವನ್ನು ಅವರು ಪ್ರವೇಶಿಸಿದರು. ಅವರು ನಗರದ ಮಹಾದ್ವಾರದ ಮೂಲಕ ಹೋಗದೇ ಬೃಹದ್ರಥರು ಮತ್ತು ನಗರವಾಸಿಗಳು ಪೂಜಿಸುವ ಗಿರಿಯನ್ನು ಏರಿದರು. ಅಲ್ಲಿ ಬೃಹದ್ರಥನು ನರಭಕ್ಷಕ ವೃಷಭರೂಪೀ ರಾಕ್ಷಸನನ್ನು ಸಂಹರಿಸಿದ್ದನು. ಆ ನರಭಕ್ಷಕನನ್ನು ಸಂಹರಿಸಿ ಅವನ ಚರ್ಮದಿಂದ ಮೂರು ನಗಾರಿಗಳನ್ನು ಮಾಡಿದ್ದನು. ಚರ್ಮದಿಂದ ಅವುಗಳನ್ನು ಮುಚ್ಚಿ ತನ್ನ ಪುರದಲ್ಲಿ ಸ್ಥಾಪಿಸಿದನು. ಈ ನಗಾರಿಗಳನ್ನು ಬಾರಿಸುವಾಗ ದಿವ್ಯಪುಷ್ಪಗಳ ಮಳೆ ಸುರಿಯುತ್ತಿತ್ತು. ಜರಾಸಂಧನನ್ನು ಕೊಲ್ಲಲು ಬಯಸಿದ ಅವರು ಮಾಗಧರ ಮೆಚ್ಚಿನ ಚೈತ್ಯಕ ಶಿಖರವನ್ನೇರಿ ಅವನ ತಲೆಯನ್ನೋ ಎನ್ನುವಂತೆ ಆ ನಗಾರಿಗಳನ್ನು ಒಡೆದುಹಾಕಿದರು. ಆ ಶೃಂಗವು ಪುರಾತನವೂ, ಅಗಲವೂ,

ಸ್ಥಿರವಾಗಿದ್ದುದೂ ಆಗಿತ್ತು ಮತ್ತು ಮಾಲೆಗಳಿಂದ ಸದಾ ಅರ್ಚಿಸಲ್ಪಟ್ಟು ಸುಪ್ರತಿಷ್ಠವಾಗಿತ್ತು. ತಮ್ಮ ವಿಪುಲ ಬಾಹುಬಲದಿಂದ ಆ ವೀರರು ಅದನ್ನು ಒಡೆದು ಕೆಳಗುರುಳಿಸಿದರು. ನಂತರ ಅವರು ಮಾಗಧವನ್ನು ನೋಡಿ, ಪುರವನ್ನು ಪ್ರವೇಶಿಸಿದರು. ಇದೇ ಸಮಯದಲ್ಲಿ ಪುರೋಹಿತರು ನೃಪ ಜರಾಸಂಧನನ್ನು ಆನೆಯ ಮೇಲೆ ಕುಳ್ಳಿರಿಸಿ ನಾಲ್ಕೂ ಕಡೆಗಳಿಂದ ಅಗ್ನಿಯನ್ನು ಹಿಡಿದು ಪೂಜಿಸುತ್ತಿದ್ದರು. ಸ್ನಾತಕವ್ರತಿಗಳಂತೆ ವೇಷಧರಿಸಿದ ಆ ಮೂವರು ತಮ್ಮ ಬಾಹುಗಳನ್ನು ಬಿಟ್ಟು ಬೇರೆ ಯಾವ ಆಯುಧಗಳೂ ಇಲ್ಲದೇ ಜರಾಸಂಧನೊಡನೆ ಹೋರಾಡಲು ಪ್ರವೇಶಮಾಡಿದರು. ಸರ್ವಕಾಮ ಸಮೃದ್ಧಿಗೊಳಿಸುವ ಸರ್ವಗುಣೋಪೇತ ಉತ್ತಮ ವಸ್ತುಗಳಿಂದ ಭೂಷಿತ ಸಂಪದ್ಭರಿತ ಭಕ್ಷ್ಯ ಮಾಲೆಗಳ ಅಂಗಡಿಗಳನ್ನು ನೋಡಿದರು. ಆ ಸಮೃದ್ಧ ವೀಧಿಗಳನ್ನು ನೋಡಿ ಆ ನರೋತ್ತಮ ಕೃಷ್ಣ, ಭೀಮ, ಧನಂಜಯರು ರಾಜಮಾರ್ಗದಲ್ಲಿ ನಡೆದರು. ಆ ಮಹಾಬಲಿಗಳು ಬಲಾತ್ಕಾರವಾಗಿ ಮಾಲಾಕಾರನಿಂದ ಮಾಲೆಗಳನ್ನು ಕಸಿದುಕೊಂಡರು. ಈ ರೀತಿ ಬಣ್ಣಬಣ್ಣದ ವಸ್ತ್ರಗಳನ್ನು, ಮಾಲೆಗಳನ್ನು ಮತ್ತು ಉತ್ತಮ ಕುಂಡಲಗಳನ್ನು ಧರಿಸಿ ಅವರು ಧೀಮತ ಜರಾಸಂಧನ ನಿವೇಶನವನ್ನು ಹಿಮವತ್ಪರ್ವತದ ಸಿಂಹಗಳು ಗೋವಿನ ಹಟ್ಟಿಯನ್ನು ಪ್ರವೇಶಿಸುವಂತೆ ಪ್ರವೇಶಿಸಿದರು. ಆ ಬಾಹುಶಾಲಿಗಳ ಚಂದನ ಮತ್ತು ಅಗರುಗಳಿಂದ ಭೂಷಿತ ಬಾಹುಗಳು ಶೈಲಸ್ತಂಭಗಳಂತೆ ಶೋಭಿಸುತ್ತಿದ್ದವು. ಆನೆಗಳಂತೆ

ಧೃಢಕಾಯರಾದ, ಶಾಲವೃಕ್ಷದಂತೆ ಎತ್ತರವಿದ್ದ, ವಿಶಾಲ ಎದೆಯ ಅವರನ್ನು ನೋಡಿದ ಮಾಗಧರು ವಿಸ್ಮಿತರಾದರು. ಆ ಮಹಾಬಲಿ ನರರ್ಷಭರು ಜನಸಂದಣಿಯಿಂದ ಕೂಡಿದ್ದ ಮೂರು ಕಕ್ಷಗಳನ್ನು ದಾಟಿ ಅಹಂಕಾರದಿಂದ ರಾಜನ ಸಮೀಪ ಬಂದರು. ಜರಾಸಂಧನು ಪಾದ್ಯ-ಮಧುಪರ್ಕಗಳಿಗರ್ಹ ಮಾನಾರ್ಹ ಅವರನ್ನು ಕುಳ್ಳಿರಿಸಿ ಯಥಾವಿಧಿಯಾಗಿ ಸತ್ಕರಿಸಿದನು.

## ಕೃಷ್ಣ-ಜರಾಸಂಧರ ಸಂವಾದ

ಅವರಿಗೆ ರಾಜ ಪ್ರಭುವು ನಿಮಗೆ ಸ್ವಾಗತ ಎಂದು ಹೇಳಿದನು. ಏಕೆಂದರೆ ಸ್ನಾತಕ ಬ್ರಾಹ್ಮಣರು ತಲುಪಿದ್ದಾರೆ ಎಂದು ಕೇಳಿದ ಕೂಡಲೇ ಮಧ್ಯರಾತ್ರಿಯಲ್ಲಿ ಕೂಡ ಅವರನ್ನು ಭೇಟಿಯಾಗುವುದು ಆ ನೃಪತಿಯ ಭೂಮಿಯಲ್ಲೆಲ್ಲ ವಿಶ್ರುತ ವ್ರತವಾಗಿದ್ದಿತು. ಅಪೂರ್ವ ವೇಷಗಳಲ್ಲಿದ್ದ ಅವರನ್ನು ಸಮೀಪದಿಂದ ನೋಡಿದ ನೃಪತಿಸತ್ತಮ ಜರಾಸಂಧನು ವಿಸ್ಮಿತನಾದನು. ರಾಜ ಜರಾಸಂಧನನ್ನು ಕಂಡಕೂಡಲೇ ಅಮಿತ್ರಘ್ನ ನರರ್ಷಭರು ಎಲ್ಲರೂ ಹೀಗೆ ಹೇಳಿದರು: "ರಾಜನ್! ಸ್ವಸ್ತಿ ಮತ್ತು ಕುಶಲವಾಗಲಿ!" ಇದನ್ನು ಹೇಳಿ ಹಾಗೆಯೇ ನಿಂತುಕೊಂಡು, ನೃಪನನ್ನೂ ಮತ್ತು ಪರಸ್ಪರರನ್ನೂ ನೋಡತೊಡಗಿದರು. ನಂತರ ಜರಾಸಂಧನು ಬ್ರಾಹ್ಮಣವೇಷದಲ್ಲಿದ್ದ ಯಾದವ-ಪಾಂಡವರಿಗೆ ಕುಳಿತುಕೊಳ್ಳಿ ಎಂದು ಹೇಳಿದನು. ಮೂವರು ಪುರುಷರ್ಷಭರೂ ಕುಳಿತುಕೊಂಡರು. ಮಹಾಧ್ವರದ




ಅಗ್ನಿಗಳಂತೆ ಮೂವರೂ ಕಳೆಯಿಂದ ಬೆಳಗುತ್ತಿದ್ದರು. ಆಗ ಅವರ ವೇಷಧಾರಣೆಯ ಕಾರಣದಿಂದ ಅವರನ್ನು ನಿಂದಿಸುತ್ತಾ ಸತ್ಯಸಂಧ ನರಾಧಿಪ ಜರಾಸಂಧನು ಹೇಳಿದನು:

“ನನಗೆ ಎಲ್ಲ ತಿಳಿದಿರುವಂತೆ ಈ ಮನುಷ್ಯಲೋಕದಲ್ಲಿ ಸ್ನಾತಕವ್ರತದಲ್ಲಿರುವ ಬ್ರಾಹ್ಮಣರು ಮಾಲೆ-ಲೇಪನಗಳನ್ನು ಧರಿಸುವುದಿಲ್ಲ. ಇಲ್ಲಿರುವ ನೀವು ಪುಷ್ಪಗಳನ್ನು ಧರಿಸಿದ್ದೀರಿ ಮತ್ತು ನಿಮ್ಮ ಭುಜಗಳು ಧನುಸ್ಸನ್ನು ಏರಿಸಿದುದರಿಂದಾದ ಘಾಯಗಳನ್ನು ಹೊಂದಿವೆ. ಕ್ಷತ್ರಿಯರ ಅಂಗವಸ್ತ್ರಗಳನ್ನು ಧರಿಸಿರುವ ನೀವು ಬ್ರಾಹ್ಮಣರೆಂದು ತೋರುತ್ತಿದ್ದೀರಿ. ಈ

ರೀತಿ ಬಣ್ಣಬಣ್ಣದ ವಸ್ತ್ರಗಳನ್ನು ಧರಿಸಿ, ಮಾಲೆ-ಲೇಪನಗಳನ್ನು ಧರಿಸಿರುವ ನೀವು ಯಾರು? ಸತ್ಯವನ್ನು ಹೇಳಿರಿ. ರಾಜನಲ್ಲಿ ಸತ್ಯವೇ ಶೋಭೆಯನ್ನು ನೀಡುತ್ತದೆ. ನೀವುಗಳು ರಾಜನನ್ನು ಅಪಮಾನಿಸುತ್ತಿದ್ದೇವೆ ಎನ್ನುವ ಭಯವಿಲ್ಲದೇ ಚೈತ್ಯಕ ಗಿರಿಯ ಶಿಖರವನ್ನು ಒಡೆದು, ದ್ವಾರದ ಮೂಲಕವಲ್ಲದೇ ಪ್ರವೇಶಿಸಿದ್ದುದು ಏಕೆ? ವಿಶೇಷವಾಗಿ ಮಾತಿನಲ್ಲಿಯೇ ಬ್ರಾಹ್ಮಣರ ವೀರತನವಿರುತ್ತದೆ. ಆದರೆ ನೀವು ಮಾಡಿದ್ದುದು ನಿಮ್ಮ ಗುರುತಿಗೆ ಸರಿಯಾದುದಲ್ಲ. ನಿಮ್ಮ ಉದ್ದೇಶವೇನು ಹೇಳಿ. ಈ ರೀತಿ ನನ್ನ ಬಳಿ ಬಂದು ವಿಧಿಪೂರ್ವಕವಾಗಿ ನಿಮಗಿತ್ತಿರುವ ಸತ್ಕಾರವನ್ನು ನೀವು ಏಕೆ ಸ್ವೀಕರಿಸುತ್ತಿಲ್ಲ? ನೀವು ಯಾವ ಕಾರ್ಯಕ್ಕಾಗಿ ನಮ್ಮಲ್ಲಿಗೆ ಬಂದಿದ್ದೀರಿ?”

ಅವನ ಈ ಮಾತಿಗೆ ಮಹಾಮನಸ್ವಿ, ವಾಕ್ಯವಿಶಾರದ ಕೃಷ್ಣನು ಮೃದು-ಗಂಭೀರಧ್ವನಿಯಲ್ಲಿ ಈ ಮಾತುಗಳನ್ನಾಡಿದನು:

“ರಾಜನ್! ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ಯಾರೂ ಸ್ನಾತಕವ್ರತಿಗಳಾಗಬಹುದು. ಆದರೆ ಅದಕ್ಕೆ ಕೆಲವು ವಿಶೇಷನಿಯಮಗಳು ಕೆಲವು ಸಾಧಾರಣ ನಿಯಮಗಳೂ ಇವೆ. ವಿಶೇಷನಿಯಮಗಳನ್ನು ಪರಿಪಾಲಿಸುವ ಕ್ಷತ್ರಿಯನು ಸದಾ ಸಂಪತ್ತಿನ

ಪಾತ್ರನಾಗುತ್ತಾನೆ. ಪುಷ್ಪಧಾರಣಮಾಡುವವರಲ್ಲಿ ಶ್ರೀಯು ವಾಸಿಸುವುದು ನಿಶ್ಚಿತ. ಆದುದರಿಂದ ನಾವು ಪುಷ್ಪಗಳನ್ನು ಧರಿಸಿದ್ದೇವೆ. ಕ್ಷತ್ರಿಯನ ವೀರ್ಯತ್ವವು ಅವನ ಬಾಹುಗಳಲ್ಲಿರುತ್ತವೆ. ಮಾತಿನಲ್ಲಿ ಅವನು ಅಷ್ಟೊಂದು ವೀರನಿಲ್ಲದಿರಬಹುದು. ಆದುದರಿಂದ ಅವನ ಮಾತು ನಿಷ್ಠೂರವಾಗಿರುವುದಿಲ್ಲ ಎಂದು ಕೇಳಿದ್ದೇವೆ. ವಿಧಾತನು ಕ್ಷತ್ರಿಯರ ವೀರ್ಯವನ್ನು ಅವರ ಭುಜಗಳಲ್ಲಿಯೇ ಇರಿಸಿದ್ದಾನೆ. ಅದನ್ನು ನೀನು ನೋಡಲು ಬಯಸುವೆಯಾದರೆ ನಿಸ್ಸಂಶಯವಾಗಿ ನಿನಗೆ ತೋರಿಸಲಾಗುತ್ತದೆ. ಸಂತರು ಅವರ ಶತ್ರುವಿನ ಗೃಹವನ್ನು ದ್ವಾರದಮೂಲಕ ಪ್ರವೇಶಿಸುವುದಿಲ್ಲ ಮತ್ತು ಸುಹೃದಯರ ಗೃಹವನ್ನು ದ್ವಾರದ ಮೂಲಕವೇ ಪ್ರವೇಶಿಸುತ್ತಾರೆ. ಆದುದರಿಂದ ನಾವು ನಿನ್ನ ದ್ವಾರವನ್ನು ತಿರಸ್ಕರಿಸಿದೆವು. ಒಂದು ಕಾರ್ಯದ ಉದ್ದೇಶವನ್ನಿಟ್ಟುಕೊಂಡು ಬಂದ ನಾವು ಶತ್ರುವಿನ ಆತಿಥ್ಯವನ್ನು ಸ್ವೀಕರಿಸುವುದಿಲ್ಲ. ಇದು ನಮ್ಮ ಶಾಶ್ವತ ವ್ರತವೆಂದು ತಿಳಿ.”

ಜರಾಸಂಧನು ಹೇಳಿದನು:

“ನಿಮಗೆ ನಾನು ಎಂದೂ ವೈರತ್ವದಿಂದ ಏನನ್ನೂ ಮಾಡಿದ ನೆನಪಿಲ್ಲ. ನಿಮ್ಮ ಕುರಿತು ಕೆಟ್ಟದ್ದಾಗಿ ಯೋಚಿಸಿದ್ದೂ ನನ್ನ

ಗಮನಕ್ಕಿಲ್ಲ. ವೈರತ್ವವನ್ನೇ ತೋರಿಸದಿದ್ದ ಅನಾಗಸ ನನ್ನನ್ನು ನೀವು ಹೇಗೆ ಶತ್ರುವೆಂದು ತಿಳಿಯುತ್ತೀರಿ. ಹೇಳಿ ವಿಪ್ರರೇ! ಇದು ಸಾತ್ವಿಕರ ನಿಯಮವೇ? ಅನಾಗಸನ ವಿರುದ್ಧವಾದರೆ ಕ್ಷತ್ರಿಯನಾಗಿದ್ದರೂ ಅವನು ಧರ್ಮಲೋಪಿಯಾಗುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಅವನು ಎಷ್ಟೇ ಧರ್ಮಜ್ಞನಾಗಿರಲಿ ಅಥವಾ ಮಹಾತ್ಮನಾಗಿರಲಿ, ಇದಕ್ಕೆ ವಿರುದ್ಧವಾಗಿ ಲೋಕದಲ್ಲಿ ನಡೆದುಕೊಂಡರೆ ವೃಜಿಗಳ ಗತಿಯನ್ನು ಹೊಂದುತ್ತಾನೆ ಮತ್ತು ತನ್ನ ಶ್ರೇಯಸ್ಸನ್ನು ಕಳೆದುಕೊಳ್ಳುತ್ತಾನೆ. ತ್ರೈಲೋಕ್ಯದಲ್ಲಿಯೇ ಕ್ಷತ್ರಧರ್ಮವನ್ನು ಪಾಲಿಸಿಕೊಂಡು ಸಾಧುಚಾರಿಗಳಲ್ಲಿ ಶ್ರೇಷ್ಠನಾದ, ಅನಾಗಸನಾದ, ಪ್ರಜಾಪಾಲಕನಾದ, ನನ್ನನ್ನು ನೀವು ಪ್ರಮಾದದಿಂದ ಶತ್ರುವೆಂದು ತಿಳಿದಿರುವಿರಿ.”

ವಾಸುದೇವನು ಹೇಳಿದನು:

“ಮಹಾಬಾಹೋ! ಕುಲಕಾರ್ಯನಾದ ಕುಲೋದ್ಧಹನಾದ ಓರ್ವ ಮಹಾರಾಜನಿದ್ದಾನೆ. ಅವನ ನಿಯೋಗದಿಂದಲೇ ನಾವು ಮೂವರು ಇಲ್ಲಿ ಉಪಸ್ಥಿತರಿದ್ದೇವೆ. ಲೋಕವಾಸಿಗಳಾದ ಕ್ಷತ್ರಿಯರನ್ನು ನೀನು ಅಪಹರಿಸಿದ ಅತಿ ದೊಡ್ಡ ಕ್ರೂರಕಾರ್ಯವನ್ನು ಮಾಡಿದ್ದರೂ ನೀನು ನಿನ್ನನ್ನು

ಅನಾಗಸನೆಂದು ಹೇಗೆ ಕಲ್ಪಿಸಿಕೊಂಡಿದ್ದೀಯೆ? ಒಬ್ಬ ರಾಜನು ಇತರ ಸಾಧು ರಾಜರುಗಳನ್ನು ಹೇಗೆ ತಾನೆ ಹಿಂಸಿಸಬಹುದು? ಸೆರೆಹಿಡಿದ ರಾಜರುಗಳನ್ನು ನೀನು ರುದ್ರನಿಗೆ ಬಲಿಯಾಗಿ ನೀಡಲು ಬಯಸುತ್ತಿರುವೆ! ನೀನು ಮಾಡಿದ ಈ ಪಾಪಕೃತ್ಯವು ನಮ್ಮ ಮೇಲೆಯೂ ಪರಿಣಾಮ ಬೀರುತ್ತಿದೆ. ಏಕೆಂದರೆ, ಧರ್ಮಚಾರಿಣರಾದ ನಾವು ಧರ್ಮದ ರಕ್ಷಣೆಗೆ ಶಕ್ತರಾಗಿದ್ದೇವೆ.   ಮನುಷ್ಯರನ್ನು ಬಲಿಕೊಡುವುದನ್ನು ಎಂದೂ ನೋಡಿದ್ದಿಲ್ಲ. ನೀನು ಹೇಗೆ ದೇವ ಶಂಕರನಿಗೆ ಮನುಷ್ಯರನ್ನು ಬಲಿಕೊಡಲು ಯೋಚಿಸುತ್ತಿರುವೆ? ಸವರ್ಣಿಯಾದ ನೀನು ಸವರ್ಣದವರನ್ನೇ ಪಶುಗಳಂತೆ ಬಲಿಕೊಡಲು ಬಯಸುತ್ತಿದ್ದೀಯೆ. ಜರಾಸಂಧ! ನಿನಗಿಂತಲೂ ವೃಥಾಮತಿಯಾದ ಇನ್ನೊಬ್ಬನು ಯಾರಿದ್ದಾನೆ? ಆರ್ತಾನುಸಾರಿಗಳಾದ ನಾವು ಜ್ಞಾತಿಕ್ಷಯಕಾರಕ ನಿನ್ನನ್ನು ವಿನೀತನನ್ನಾಗಿಸಿ ಜ್ಞಾತಿಜರ ವೃದ್ಧಿಗೋಸ್ಕರವಾಗಿ ಇಲ್ಲಿಗೆ ಬಂದಿದ್ದೇವೆ. ಲೋಕದ ಕ್ಷತ್ರಿಯರಲ್ಲಿ ಅನ್ಯ ಪುರುಷರು ಯಾರೂ ಇಲ್ಲವೆಂದು ನೀನು ತಿಳಿದಿದ್ದರೆ ಅದೊಂದು ದೊಡ್ಡ ಬುದ್ಧಿವಿಪ್ಲವತೆ ಎಂದು ತಿಳಿ. ತನ್ನ ಉತ್ತಮ ಜನ್ಮವನ್ನು ತಿಳಿದ ಯಾವ ಕ್ಷತ್ರಿಯನು ತಾನೆ ರಣದಲ್ಲಿ ತೀರಿಕೊಂಡ ನಂತರ ಅವ್ಯಯವೂ ಅತುಲವೂ ಆದ ಸ್ವರ್ಗವನ್ನು

ಹೊಂದುವುದಿಲ್ಲ? ಸ್ವರ್ಗವನ್ನೇ ಗುರಿಯನಾಗಿಟ್ಟುಕೊಂಡು ರಣಯಜ್ಞದಲ್ಲಿ ದೀಕ್ಷಿತರಾದವರನ್ನು ಲೋಕದ ಕ್ಷತ್ರಿಯರು ಪೂಜಿಸುತ್ತಾರೆ ಎನ್ನುವುದನ್ನು ತಿಳಿ. ಜಯವು ಸ್ವರ್ಗಯೋನಿ, ಯಶಸ್ಸೂ ಸ್ವರ್ಗಯೋನಿ, ತಪಸ್ಸೂ ಸ್ವರ್ಗಯೋನಿ. ಹಾಗೆಯೇ ಯುದ್ಧವೂ ನೇರವಾದ ಮಾರ್ಗವು. ಯಾಕೆಂದರೆ ಇದೇ ಗುಣದಿಂದಲೇ ನಿತ್ಯ ಸಮಾಹಿತ ವೈಜಯಂತ ಜಗತ್ಪತಿ ಶತಕ್ರತು ಇಂದ್ರನು ಅಸುರರನ್ನು ಪರಾಜಿತಗೊಳಿಸಿದನು. ವಿಪುಲ ಮಾಗಧ ಸೈನ್ಯವನ್ನು ಹೊಂದಿ ಬಾಹುಬಲದರ್ಪಿತನಾದ ನಿನ್ನನ್ನು ಸೋಲಿಸದೇ ಬೇರೆ ಹೇಗೆ ತಾನೆ ಸ್ವರ್ಗವನ್ನು ಪಡೆಯಬಹುದು? ಇತರರನ್ನು ಕಡೆಗಣಿಸಬೇಡ! ಯಾವ ನರನಲ್ಲಿಯೂ ವೀರ್ಯವಿಲ್ಲವೇ? ನಿನ್ನ ತೇಜಸ್ಸಿಗೆ ಸಮನಾದವನು ಯಾರೂ ಇಲ್ಲವೇ? ನಾನು ನಿನಗೆ ಹೇಳುತ್ತೇನೆ. ನಾವು ನಿನ್ನ ಸರಿಸಾಟಿಗಳಾಗಿದ್ದೇವೆ. ನಿನ್ನ ದರ್ಪವನ್ನು ತೊರೆ. ಮಕ್ಕಳು, ಅಮಾತ್ಯರು ಮತ್ತು ಸೇನೆಯೊಂದಿಗೆ ಯಮಕ್ಷಯಕ್ಕೆ ಹೋಗಬೇಡ. ಅವರಿಗಿಂಥ ಉತ್ತಮರನ್ನು ಕಡೆಗಣಿಸಿದುದರಿಂದಲೇ ಇಲ್ಲಿ ದಂಭೋದ್ಭವ, ಕಾರ್ತವೀರ್ಯ, ಉತ್ತರ ಮತ್ತು ಬೃಹದ್ರಥ ಮೊದಲಾದ ನೃಪರು ಸೇನೆಗಳೊಂದಿಗೆ ವಿನಾಶಹೊಂದಿದರು. ನಿನ್ನಿಂದ ರಾಜರುಗಳನ್ನು ಬಿಡುಗಡೆಮಾಡಲು ಬಯಸುವ ನಾವು

ಬ್ರಾಹ್ಮಣರಲ್ಲ. ನಾನು ಶೌರಿ ಹೃಷೀಕೇಶ ಮತ್ತು ಈ ಈರ್ವರು ವೀರ ಪಾಂಡವರು. ನಾವು ನಿನ್ನನ್ನು ಆಹ್ವಾನಿಸುತ್ತಿದ್ದೇವೆ. ಸ್ಥಿರನಾಗಿ ಯುದ್ಧ ಮಾಡು. ಸರ್ವ ನೃಪತಿಗಳನ್ನೂ ಬಿಡುಗಡೆಮಾಡು ಅಥವಾ ಯಮಕ್ಷಯಕ್ಕೆ ಹೋಗು."

ಜರಾಸಂಧನು ಹೇಳಿದನು:

"ನಾನು ಎಂದೂ ಸೋಲಿಸದೇ ಯಾವ ರಾಜನನ್ನೂ ಹಿಡಿದಿಲ್ಲ. ಸೋತವರು ಯಾರುತಾನೆ ನನ್ನನ್ನು ಎದುರಿಸಿದ್ದಾರೆ? ಮತ್ತು ನಾನು ಯಾರನ್ನು ತಾನೇ ಸೋಲಿಸಲಿಲ್ಲ? ಕೃಷ್ಣ! ವಿಕ್ರಮದಿಂದ ವಶಮಾಡಿಕೊಳ್ಳುವುದು ಮತ್ತು ತನಗಿಷ್ಟಬಂದಂತೆ ನಡೆದುಕೊಳ್ಳುವುದೇ ಕ್ಷತ್ರಿಯನ ಧರ್ಮವೆಂದು ಹೇಳಿದ್ದಾರೆ. ಕ್ಷತ್ರಿಯಧರ್ಮವನ್ನು ತಿಳಿದಿರುವ ನಾನು ದೇವನಿಗೆಂದು ಹಿಡಿದಿಟ್ಟಿರುವ ಈ ರಾಜರುಗಳನ್ನು ಇಂದು ಭಯದಿಂದ ಹೇಗೆ ಬಿಡುಗಡೆಮಾಡಬಲ್ಲೆ? ಸೈನ್ಯದೊಂದಿಗೆ ಸೇರಿರುವ ಸೈನ್ಯವನ್ನು ಅಥವಾ ಒಬ್ಬನೇ ಒಬ್ಬನೊಂದಿಗೆ, ಅಥವಾ ಇಬ್ಬರೊಂದಿಗೆ ಅಥವಾ ಒಬ್ಬೊಬ್ಬರಾಗಿ ಅಥವಾ ಒಟ್ಟಿಗೇ ಮೂವರೊಂದಿಗೆ ಯುದ್ಧಮಾಡಬಲ್ಲೆ."

ಹೀಗೆ ಹೇಳಿ ಜರಾಸಂಧನು ಸಹದೇವನ ಅಭಿಷೇಕವನ್ನು ಆಜ್ಞಾಪಿಸಿ

ಭಯಂಕರ ಯುದ್ಧಮಾಡಲು ಸಿದ್ಧನಾಗಿ ನಿಂತನು. ಆ ಯುದ್ಧವು ಪ್ರಾರಂಭವಾಗುವಾಗ ರಾಜನು ತನ್ನ ಸೇನಾಪತಿಗಳಾದ, ಲೋಕದಲ್ಲಿ ಹಂಸ-ಡಿಭಕರೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ, ಮನುಷ್ಯಲೋಕದಲ್ಲಿ ಹಿಂದೆ ಶ್ರೇಷ್ಠರೆಂದು ಕರೆಯಲ್ಪಟ್ಟು ಲೋಕಸತ್ಕೃತರಾಗಿದ್ದ, ಕೌಶಿಕ ಚಿತ್ರಸೇನರನ್ನು ನೆನೆದನು. ಅಚ್ಯುತ ಶೌರಿಯು ಕೂಡ ಆ ರಾಜನು ಬಲಶಾಲಿಗಳಲ್ಲಿ ಶ್ರೇಷ್ಠ, ವಿಕ್ರಮದಲ್ಲಿ ಶಾರ್ದೂಲ ಸಮನಾಗಿದ್ದಾನೆ, ಸತ್ಯಸಂಧ ಜರಾಸಂಧನು ಭುವಿಯಲ್ಲಿ ಬೀಮಪರಾಕ್ರಮಿಯಾಗಿದ್ದಾನೆ ಮತ್ತು ಅವನ ವಧೆಯು ಬೇರೆಯವನ ಪಾಲೆಂದು ನಿರ್ದಿಷ್ಠವಾಗಿದೆ ಎನ್ನುವುದನ್ನು ನೆನಪಿಸಿಕೊಂಡನು. ಹೀಗೆ ಹಲಧರನ ಅನುಜ ಮಧುಸೂದನನು ತನ್ನನ್ನು ತಾನೇ ಮುಖ್ಯನೆಂದು ಪರಿಗಣಿಸದೇ ಬ್ರಹ್ಮನ ಯೋಜನೆಯನ್ನು ಪುರಸ್ಕರಿಸಿ ಅವನನ್ನು ಕೊಲ್ಲಲು ಮುಂದಾದನು. ನಂತರ ಯದುನಂದನ ಅಧೋಕ್ಷಜನು ಯುದ್ಧಕ್ಕೆ ನಿರ್ಧರಿಸಿದ ವಾಗ್ಮಿ ರಾಜನನ್ನು ಕುರಿತು ಹೇಳಿದನು:

> “ರಾಜನ್! ನಮ್ಮ ಈ ಮೂವರಲ್ಲಿ ಯಾರೊಂದಿಗೆ
> ಯುದ್ಧಮಾಡಲು ಬಯಸುತ್ತೀಯೆ? ನಮ್ಮಲ್ಲಿ ಯಾರು
> ನಿನ್ನೊಂದಿಗೆ ಯುದ್ಧಮಾಡಲು ಅಣಿಯಾಗಬೇಕು?”

ಕೃಷ್ಣನು ಈ ರೀತಿ ಹೇಳಲು ಮಾಗಧ ಮಹಾದ್ಯುತಿ ಜರಾಸಂಧನು ಯುದ್ಧಮಾಡಲು ಭೀಮಸೇನನನ್ನು ಆರಿಸಿಕೊಂಡನು.

## ಭೀಮಸೇನ-ಜರಾಸಂಧರ ಮಲ್ಲಯುದ್ಧ; ಜರಾಸಂಧವಧೆ

ಜರಾಸಂಧನ ಬಳಿಯಲ್ಲಿ ಅವನ ಪುರೋಹಿತರು ವೇದನೆಯನ್ನು ಹೋಗಲಾಡಿಸುವ, ಪುನಃಶ್ಚೇತನಗೊಳಿಸುವ ಶ್ರೇಷ್ಠ ಗಿಡಮೂಲಿಕೆಗಳನ್ನು ಹಿಡಿದು ನಿಂತರು. ವಿದ್ವಾನ್ ಬ್ರಾಹ್ಮಣರು ಯಶಸ್ಸಿಗಾಗಿ ಆಶೀರ್ವಚನಗಳನ್ನು ನೀಡಲು, ಸಮನರ್ಹ ಕ್ಷತ್ರಧರ್ಮ ಪಾಲಕ ಜರಾಸಂಧನು ತನ್ನ ಕಿರೀಟವನ್ನು ಕೆಳಗಿಟ್ಟು, ತಲೆಗೂದಲನ್ನು ಬಾಚಿ, ಅಲೆಗಳೊಂದಿಗೆ ಮೇಲೇರುವ ಸಮುದ್ರದಂತೆ ಮೇಲೆದ್ದನು. ಆ ಮತಿವಂತ ರಾಜನು ಭೀಮಪರಾಕ್ರಮಿ ಭೀಮನಲ್ಲಿ ಹೇಳಿದನು:

> "ಭೀಮ! ನಾನು ನಿನ್ನೊಂದಿಗೆ ಯುದ್ಧ ಮಾಡುತ್ತೇನೆ. ಏಕೆಂದರೆ ತನಗಿಂಥ ಶ್ರೇಷ್ಠನಾದವನಿಂದ ಸೋಲುವುದು ಒಳ್ಳೆಯದು."

ಹೀಗೆ ಹೇಳಿ ಅರಿಂದಮ ಮಹಾತೇಜಸ್ವಿ ಜರಾಸಂಧನು ಹಿಂದೆ ಅಸುರ ಬಲಿಯು ಶಕ್ರನನ್ನು ಹೇಗೋ ಹಾಗೆ ಭೀಮಸೇನನ ಮೇಲೆ ಎರಗಿದನು. ಆಗ ಬಲಶಾಲಿ ಭೀಮಸೇನನು ಕೃಷ್ಣನಿಂದ ಸಲಹೆ ಪಡೆದು ಅವನಿಂದ ಹರಸಲ್ಪಟ್ಟು ಜರಾಸಂಧನೊಡನೆ ಯುದ್ಧಮಾಡಲು ಮುಂದಾದನು. ಆ ಇಬ್ಬರು ವೀರ ನರಶಾರ್ದೂಲರು ಬಾಹುಗಳನ್ನೇ ಶಸ್ತ್ರಗಳನ್ನಾಗಿಸಿ ಪರಮಸಂಹೃಷ್ಟರಾಗಿ ಅನ್ಯೋನ್ಯರನ್ನು ಸೋಲಿಸುವ ಉದ್ದೇಶದಿಂದ ಪರಸ್ಪರರ ಮೇಲೆರಗಿದರು. ಅವರ ಭುಜಗಳ ಹೊಡೆತದಿಂದ, ನಿಗ್ರಹ ಪ್ರಗ್ರಹಗಳ ಶಬ್ಧವು ಮಿಂಚು ಬಡಿದ ಪರ್ವತಗಳ



ಗರ್ಜನೆಯಂತೆ ಕೇಳಿಬಂದವು. ಅವರಿಬ್ಬರೂ ಪರಮಸಂಹೃಷ್ಟರಾಗಿದ್ದರು. ಇಬ್ಬರೂ ಬಲದಲ್ಲಿ ಅತಿಬಲರಾಗಿದ್ದರು ಮತ್ತು ಪರಸ್ಪರರನ್ನು ಬೀಳಿಸುವ ಉದ್ದೇಶದಿಂದ ಅನ್ಯೋನ್ಯರಲ್ಲಿರುವ ನ್ಯೂನತೆಗಳನ್ನು ಹುಡುಕುತ್ತಿದ್ದರು. ವೃತ್ರ ಮತ್ತು ವಾಸವರ ಯುದ್ಧದಂತಿದ್ದ ಈ ಬಲಿಗಳ ನಡುವಿನ ಯುದ್ಧವು ಬಹಳಷ್ಟು ಪ್ರೇಕ್ಷಕರನ್ನು ಹಿಂಜರಿಯುವಂತೆ ಮಾಡಿತು.

ಪ್ರಕರ್ಷಣ ಆಕರ್ಷಣಗಳಿಂದ ಮತ್ತು ಬಿಗಿ ಹಿಡಿದ ಮುಷ್ಠಿಗಳಿಂದ ಅನ್ಯೋನ್ಯರನ್ನು ಎಳೆದಾಡಿ ಕಾಲುಗಳನ್ನು ಮೇಲೆತ್ತಿ ಬಡಿದರು. ನಂತರ ದೊಡ್ಡ ಧ್ವನಿಯಿಂದ ಪರಸ್ಪರರನ್ನು ಹೀಯಾಳಿಸುತ್ತಾ ಕಲ್ಲಿನ ಮೇಲೆ ಕಲ್ಲಿನ ಪ್ರಹಾರವಾಗುತ್ತಿದೆಯೋ ಎನ್ನುವಂತೆ ಇಬ್ಬರೂ ಪರಸ್ಪರರನ್ನು ಗುದ್ದಿದರು. ವಿಶಾಲ ಎದೆಯ, ನೀಳಬಾಹುಗಳ, ಇಬ್ಬರು ಯುದ್ಧಕುಶಲರೂ ಕಬ್ಬಿಣದ ಪರಿಘಗಳಂತಿರುವ ಬಾಹುಗಳಿಂದ ಶರೀರದಮೇಲೆ ಹೊಡೆತಗಳ ಮಳೆಸುರಿಸಿದರು. ಕಾರ್ತೀಕ ಮಾಸದ ಪ್ರಥಮ ದಿನ ಪ್ರಾರಂಭವಾದ ಆ ಸ್ಪರ್ಧೆಯು ದಿನರಾತ್ರಿಗಳೆನ್ನದೇ ಅನವರತವಾಗಿ ಅವಿಶ್ರಾಂತವಾಗಿ ನಡೆಯಿತು. ಹದಿಮೂರನೆಯ ದಿನವೂ ಇಬ್ಬರು ಮಹಾತ್ಮರೂ ಯುದ್ಧದಲ್ಲಿ ತೊಡಗಿದ್ದರು. ಆದರೆ, ಹದಿನಾಲ್ಕನೆಯ ರಾತ್ರಿ, ಮಾಗಧನು ಆಯಾಸಗೊಂಡು ಹಿಂದೆ ಸರಿದನು. ರಾಜನು ಆಯಾಸಗೊಂಡಿದ್ದುದನ್ನು ನೋಡಿದ ಜನಾರ್ದನನು ಭೀಮಕರ್ಮಿಣಿ



ಭೀಮನನ್ನು ಸಂಬೋಧಿಸುತ್ತಿದ್ದಾನೋ ಎನ್ನುವಂತೆ ಹೇಳಿದನು:

> “ಕೌಂತೇಯ! ಆಯಾಸಗೊಂಡ ಶತ್ರುವನ್ನು ರಣದಲ್ಲಿ ಅಪ್ಪಳಿಸಬಾರದು. ಹಾಗೆ ಅಪ್ಪಳಿಸಿದರೆ ಅವನು ಸಂಪೂರ್ಣವಾಗಿ ಜೀವ ತೊರೆಯಬಹುದು. ಆದುದರಿಂದ ನರಾಧಿಪನನ್ನು ಪೀಡಿಸಬೇಡ. ಮೊದಲಿನಂತೆ ಒಂದೇ ಸಮನೆ ಬಾಹುಗಳಿಂದಲೇ ಯುದ್ಧಮಾಡು.”

ಕೃಷ್ಣನು ಈ ರೀತಿ ಹೇಳಲು ಪರವೀರಹ ಪಾಂಡವನು ಜರಾಸಂಧನ ರಂಧ್ರವನ್ನು ತಿಳಿದು ಅವನನ್ನು ವಧಿಸುವ ಮನಸ್ಸುಮಾಡಿದನು.

ಜಯಿಸಲಾಧ್ಯ ಜರಾಸಂಧನನ್ನು ಬಲಿಗಳ ಮುಖ್ಯ ವೃಕೋದರ ಕುರುನಂದನನು ಗಟ್ಟಿಯಾಗಿ ಹಿಡಿದುಕೊಂಡನು. ಆಗ ಭೀಮಸೇನನು ಜರಾಸಂಧನನ್ನು ಕೊಲ್ಲುವ ಸಂಪೂರ್ಣ ಮನಸ್ಸುಮಾಡಿ ಯದುನಂದನ ಕೃಷ್ಣನಿಗೆ ಹೇಳಿದನು:

> "ಕೃಷ್ಣ! ಕಚ್ಚೆ ಕಟ್ಟಿ ನಿಂತಿರುವ ನನ್ನಿಂದ ಈ ಪಾಪಿಯು ಪ್ರಾಣಕ್ಕೆ ಅರ್ಹನಲ್ಲ."

ಇದನ್ನು ಕೇಳಿದ ಪುರುಷವ್ಯಾಘ್ರ ಕೃಷ್ಣನು ಜರಾಸಂಧನ ವಧೆಯನ್ನು ಬಯಸಿ ವೃಕೋದರನಿಗೆ ತ್ವರೆಮಾಡಲು ಹೇಳಿದನು:

> "ಹಾಗಾದರೆ ತಕ್ಷಣವೇ ನೀನು ದೇವತೆಗಳಿಂದ ಪಡೆದಿರುವ ಸತ್ವವನ್ನು ತೋರಿಸು! ಭೀಮ! ಈ ದಿನ ವಾಯುದೇವನ ಬಲವನ್ನು ಜರಾಸಂಧನ ಮೇಲೆ ಪ್ರಯೋಗಿಸಿ ತೋರಿಸು!"

ಇದನ್ನು ಕೇಳಿದ ಅರಿಂದಮ ಮಹಾಬಲಿ ಭೀಮನು ಜರಾಸಂಧನನ್ನು ಬಲವಂತವಾಗಿ ಮೇಲಕ್ಕೆತ್ತಿ ತನ್ನ ಭುಜಗಳಿಂದ ನೂರು ಬಾರಿ ಅವನನ್ನು ತಿರುಗಿಸಿ, ತನ್ನ ತೊಡೆಯ ಮೇಲೆ ಬೀಳಿಸಿ, ಅವನ ಬೆನ್ನನ್ನು ಮುರಿದು, ದೇಹವನ್ನು ತುಳಿದು ಗರ್ಜಿಸಿದನು. ಅವನು ಕೆಳಗೆ ಬೀಳಲು ಮತ್ತು ಪಾಂಡವನು ಗರ್ಜಿಸಲು ಸರ್ವಪಾಣಿಗಳಿಗೂ ಭಯವನ್ನುಂಟುಮಾಡುವ ತುಮುಲವು ಕೇಳಿಬಂದಿತು. ಭೀಮಸೇನ-ಜರಾಸಂಧರ ಗರ್ಜನೆಗಳನ್ನು ಕೇಳಿ ಸರ್ವ ಮಾಗಧರೂ ತಲೆತಿರುಗಿ ಬಿದ್ದರು ಮತ್ತು ಗರ್ಭಿಣಿ ಮಹಿಳೆಯರಿಗೆ ಗರ್ಭಪಾತವಾಯಿತು.

ಭೀಮಸೇನನ ಗರ್ಜನೆಯನ್ನು ಕೇಳಿದ ಮಾಗಧರು ಹಿಮಾಲಯವೇ ಸೀಳಿಹೋಯಿತೇ ಅಥವಾ ಭೂಮಿಯೇ ಕುಸಿದು ಹೋಯಿತೇ ಎಂದು ಯೋಚಿಸಿದರು.

ಅನಂತರ ಆ ಅರಿಂದಮರು ನಿದ್ದೆಯಲ್ಲಿರುವಂತೆ ತೋರುತ್ತಿದ್ದ ಮೃತನೃಪತಿಯನ್ನು ರಾಜಕುಲದ್ವಾರದಲ್ಲಿಯೇ ಬಿಟ್ಟು ಕತ್ತಲೆಯಲ್ಲಿ ಹೊರಟುಹೋದರು. ಕೃಷ್ಣನು ಜರಾಸಂಧನ ಪತಾಕಯುಕ್ತ ರಥವನ್ನು ಕಟ್ಟಿ, ಭ್ರಾತೃಗಳಿಗೆ ಅದನ್ನು ಏರಲು ಹೇಳಿ, ಬಾಂಧವರನ್ನು ಬಿಡುಗಡೆಗೊಳಿಸಿದನು. ಮಹಾಭಯದಿಂದ ಬಿಡುಗಡೆ ಹೊಂದಿದ ಪೃಥಿವೀಶ್ವರ ರಾಜರು ರತ್ನಭುಜ ಕೃಷ್ಣನಿಗೆ ರತ್ನಗಳನ್ನಿತ್ತು ಸತ್ಕರಿಸಿದರು. ಆ ಅಕ್ಷತ, ಶಸ್ತ್ರಸಂಪನ್ನ ಜಿತಾರಿಯು ದಿವ್ಯರಥವನ್ನೇರಿ ರಾಜರೊಡನೆ ಗಿರಿವ್ರಜದಿಂದ ನಿರ್ಗಮಿಸಿದನು. ಇಬ್ಬರು ಯೋಧರು ಮತ್ತು ಕೃಷ್ಣನು ಸಾರಥಿಯಾಗಿರುವ, ಕೊಲ್ಲುವ ಅಭ್ಯಾಸವನ್ನಿಟ್ಟುಕೊಂಡಿರುವ, ಸರ್ವ ರಾಜರಿಗೂ ದುರ್ಜಯವಾದ ಆ ರಥವು ತನಗೆ ತಕ್ಕವರನ್ನು ಪಡೆದುಕೊಂಡಂತೆ ಕಂಡುಬಂದಿತು. ಭೀಮಾರ್ಜುನರು ಕುಳಿತಿರುವ, ಕೃಷ್ಣನ ಸಾರಥ್ಯದಲ್ಲಿರುವ, ಸರ್ವ ಧನ್ವಿಗಳಿಗೂ ದುರ್ಜಯವಾದ ಆ ರಥವು ಸುಂದರವಾಗಿ ಹೊಳೆಯುತ್ತಿತ್ತು. ತಾರಕನೊಡನೆ ಆದ ಸಂಗ್ರಾಮದ ಸಮಯದಲ್ಲಿ ಶಕ್ರ ಮತ್ತು ವಿಷ್ಣು ಏರಿ ಹೋಗುತ್ತಿದ್ದ ರಥವನ್ನೇ ಕೃಷ್ಣನು ಏರಿ ಹೊರಟನು. ಯಾವ ರಥವನ್ನೇರಿ ಶಕ್ರನು ತೊಂಭತ್ತೊಂಭತ್ತು

ದಾನವರನ್ನು ಸಂಹರಿಸಿದ್ದನೋ ಆ ಹದಮಾಡಿದ ಚಿನ್ನದಂತೆ ಹೊಳೆಯುತ್ತಿರುವ, ಕಿಂಕಿಣೀಜಾಲ ಮಾಲೆಗಳಿಂದ ಅಲಂಕೃತವಾದ, ಮಳೆಗಾಲದ ಮೋಡಗಳಂತೆ ಶಬ್ಧಮಾಡುತ್ತಿದ್ದ, ವಿಜಯೀ, ಶತ್ರುಘಾತಿ ರಥವನ್ನು ಪಡೆದ ಪುರುಶರ್ಷಭರು ಅತ್ಯಂತ ಸಂತೋಷಗೊಂಡರು. ಭ್ರಾತೃಗಳ ಸಹಿತ ಮಹಾಬಾಹು ಕೃಷ್ಣನನ್ನು ಆ ರಥದಲ್ಲಿ ಕುಳಿತಿದ್ದುದನ್ನು ನೋಡಿದ ಮಾಗಧರು ವಿಸ್ಮಿತರಾದರು. ದಿವ್ಯಾಶ್ವಗಳನ್ನು ಹೊಂದಿದ್ದ, ವಾಯುಸಮ ವೇಗವುಳ್ಳ ಆ ರಥವು ಕೃಷ್ಣನು ಏರುತ್ತಿದ್ದಂತೆ ಪ್ರಕಾಶಗೊಂಡು ಇನ್ನೂ ಕಂಗೊಳಿಸಿತು. ಆ ರಥದ ಮೇಲೆ ಒಂದು ಯೋಜನೆಯವರೆಗೂ ಕಾಣಿಸುವಂತೆ ಶ್ರೀಮಾನ, ಇಂದ್ರಾಯುಧದಂತೆ ಹೊಳೆಯುತ್ತಿರುವ, ದೇವವಿಹಿತ ಉತ್ತಮ ಧ್ವಜವು ಹಾರುತ್ತಿತ್ತು. ಆಗ ಕೃಷ್ಣನು ಗುರುತ್ಮಂತನನ್ನು ಸ್ಮರಿಸಿದನು ಮತ್ತು ಕೂಡಲೆ ಅವನು ಬಂದನು. ಅವನೊಂದಿಗೆ ಪತಾಕೆಯು ದೇವಾಲಯಗಳಲ್ಲಿನ ಧ್ವಜಸ್ಥಂಭದಂತೆ ಎತ್ತರಕ್ಕೆ ಏರಿತು. ಧ್ವಜದಲ್ಲಿದ್ದ ಇತರ ಭೂತಗಳು ಬಾಯಿತೆರೆದು ಮಹಾನಾದ ಮಾಡುತ್ತಿರಲು ಪನ್ನಗಾಶನ ಗುರುತ್ಮಂತನು ಆ ರಥದ ಮೇಲೆ ಏರಿದನು. ಭೂತಗಳ ಕಣ್ಣುಕುಕ್ಕಿಸುವಂತೆ ಅವನು ಅಧಿಕ ತೇಜಸ್ಸಿನಿಂದ ಮಧ್ಯಾಹ್ನದ ಭಾಸ್ಕರನಂತೆ ಸಹಸ್ರಕಿರಣಗಳಿಂದ ಆವೃತನಾಗಿ ಬೆಳಗಿದನು. ಆ ಧ್ವಜವು ಎಂದೂ ವೃಕ್ಷಗಳಿಗೆ ಸಿಲುಕಿರಲಿಲ್ಲ, ಯಾವುದೇ ಅಸ್ತ್ರಗಳಿಂದ ಘಾಯಗೊಂಡಿರಲಿಲ್ಲ ಮತ್ತು ಆ ದಿವ್ಯ ಧ್ವಜವು ದೇವತೆಗಳಿಗೆ ಮತ್ತು ಮನುಷ್ಯರಿಗೆ ಕಾಣುತ್ತಿತ್ತು.

ಮಳೆಗಾಲದ ಮೋಡದ ಗುಡುಗಿನಂತೆ ಶಬ್ಧಮಾಡುವ ಆ ದಿವ್ಯ ರಥವನ್ನೇರಿ ಪುರುಷವ್ಯಾಘ್ರ ಅಚ್ಯುತನು ಪಾಂಡವರಿಬ್ಬರನ್ನೊಡಗೂಡಿ ಹೊರಟನು. ಆ ರಥವನ್ನು ರಾಜ ವಸುವು ವಾಸವನಿಂದ ಪಡೆದಿದ್ದನು ಮತ್ತು ಬೃಹದ್ರಥನು ವಸುವಿನಿಂದ ಪಡೆದನು. ಕ್ರಮೇಣವಾಗಿ ಬೃಹದ್ರಥನಿಂದ ನೃಪ ಬಾರ್ಹದ್ರಥನು ಪಡೆದನು.

ಮಹಾಬಾಹು ಪುಂಡರೀಕಾಕ್ಷನು ಗಿರಿವ್ರಜದಿಂದ ಹೊರಟ ನಂತರ ಆ ಮಹಾಯಶರು ಹೊರಗಡೆ ಒಂದು ಸಮ ಪ್ರದೇಶದಲ್ಲಿ ರಥವನ್ನು ನಿಲ್ಲಿಸಿದರು. ಅಲ್ಲಿ ಸರ್ವ ನಾಗರೀಕರೂ ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ವಿಧಿವತ್ತಾದ ಕರ್ಮಗಳಿಂದ ಅವರನ್ನು ಸತ್ಕರಿಸಿದರು. ಬಂಧನದಿಂದ ಮುಕ್ತರಾದ ರಾಜರು ಮಧುಸೂದನನನ್ನು ಸಾಂತ್ವಪೂರ್ವ ವಚನಗಳಿಂದ ಪೂಜಿಸಿದರು.

> “ದೇವಕಿನಂದನ! ಭೀಮಾರ್ಜುನರ ಬಲದಿಂದ ಕೂಡಿ ಧರ್ಮವನ್ನು ಪರಿಪಾಲಿಸಿದ್ದುದು ಮಹಾ ಅದ್ಭುತವೇನೂ ಅಲ್ಲ. ವಿಷ್ಣು! ಪುರುಷೋತ್ತಮ! ಜರಾಸಂಧನ ಕೆಟ್ಟ ಘೋರ ದುಃಖದ ಮಡುಲಿನಲ್ಲಿ ಮುಳುಗಿದ್ದ, ದಾರುಣ ಗಿರಿದುರ್ಗಗಳ ಕೋಟೆಯೊಳಗೆ ಕೊಳೆಯುತ್ತಿದ್ದ ರಾಜರನ್ನು ಇಂದು ಉದ್ಧರಿಸಿ ನೀನು ಬೆಳಗುತ್ತಿದ್ದೀಯೆ. ನಾವು ಏನು ಮಾಡಬೇಕು ಹೇಳು. ನೃಪರಿಗೂ ದುಷ್ಕರವೆನಿಸಿದ್ದುದನ್ನು

ಮಾಡಿಕೊಡುತ್ತೇವೆ ಎಂದು ತಿಳಿ.”

ಆ ಆಶ್ವಾಸನೆಗೆ ಮಹಾಮನ ಹೃಷೀಕೇಶನು ಉತ್ತರಿಸಿದನು:

“ಯುಧಿಷ್ಠಿರನು ಮಹಾಕ್ರತು ರಾಜಸೂಯವನ್ನು ಮಾಡಲಿಚ್ಛಿಸಿದ್ದಾನೆ. ಪಾರ್ಥಿವತ್ವವನ್ನು ಬಯಸುತ್ತಿರುವ ಆ ಧರ್ಮಪ್ರವೃತ್ತನ ಯಜ್ಞಕ್ಕೆ ನೀವೆಲ್ಲರೂ ಸಹಾಯವನ್ನು ನೀಡಬೇಕು.”

ಆಗ ಸರ್ವ ನೃಪರೂ ಸಂತೋಷದಿಂದ “ಹಾಗೆಯೇ ಆಗಲಿ!” ಎಂದು ಮಾತುಕೊಟ್ಟರು. ಪೃಥಿವೀಶ್ವರರು ತಮ್ಮ ರತ್ನಗಳನ್ನು ದಾಶಾರ್ಹನೊಂದಿಗೆ ಹಂಚಿಕೊಳ್ಳಲು, ಗೋವಿಂದನು ಅವರ ಮೇಲಿನ ಅನುಕಂಪದಿಂದ ಇಷ್ಟವಿಲ್ಲದಿದ್ದರೂ ಅವುಗಳನ್ನು ಸ್ವೀಕರಿಸಿದನು.

ಜರಾಸಂಧನ ಮಗ ಮಹಾರಥಿ ಸಹದೇವನು ಪುರೋಹಿತನನ್ನು ಮುಂದಿಟ್ಟುಕೊಂಡು ಅಮಾತ್ಯರು ಮತ್ತು ತನ್ನವರೊಂದಿಗೆ ಹೊರಬಂದನು. ಸಹದೇವನು ಮನುಷ್ಯರ ದೇವ ವಾಸುದೇವನ ಮುಂದೆ ಬಹುರತ್ನಗಳನ್ನು ಇಟ್ಟು ತಲೆತಗ್ಗಿಸಿ ನಿಂತನು. ಭಯಗ್ರಸ್ತನಾದ ಅವನಿಗೆ ಕೃಷ್ಣನು ಅಭಯವನ್ನಿತ್ತನು ಮತ್ತು ಜರಾಸಂಧನ ಮಗನನ್ನು ಅಲ್ಲಿಯೇ ಆಗಲೇ ಅಭಿಷೇಕಿಸಿದನು. ಕೃಷ್ಣನೊಂದಿಗೆ ಸೇರಿ, ಪಾರ್ಥರಿಬ್ಬರಿಂದಲೂ ಸತ್ಕೃತನಾದ ಮತಿವಂತ ರಾಜನು ಪುನಃ ಬಾರ್ಹದ್ರಥನ ಪುರವನ್ನು

ಪ್ರವೇಶಿಸಿದನು. ಪುಷ್ಕರೇಕ್ಷಣ ಕೃಷ್ಣನಾದರೂ ಪಾರ್ಥರಿಬ್ಬರೊಡಗೂಡಿ, ಪರಮ ಸಂಪತ್ತನ್ನು ಭೂರಿ ರತ್ನಗಳನ್ನೂ ತೆಗೆದುಕೊಂಡು ಪರಮ ತೇಜಸ್ಸಿನಿಂದ ಹೊರಟನು. ಪಾಂಡವರಿಬ್ಬರೊಡನೆ ಅಚ್ಯುತನು ಇಂದ್ರಪ್ರಸ್ಥವನ್ನು ತಲುಪಿ ಧರ್ಮರಾಜನನ್ನು ಭೇಟಿಯಾಗಿ ಸಂತೋಷದಿಂದ ಹೇಳಿದನು:

> "ನೃಪಸತ್ತಮ ! ಅದೃಷ್ಟವಶಾತ್ ಬಲವಾನ್ ಭೀಮನು ಜರಾಸಂಧರನ್ನು ಕೆಳಗುರುಳಿಸಿ ಬಂಧನದಲ್ಲಿದ್ದ ರಾಜರನ್ನು ವಿಮುಕ್ತಿಗೊಳಿಸಿದನು. ಅದೃಷ್ಟವಶಾತ್ ಭೀಮಸೇನಧನಂಜಯರಿಬ್ಬರೂ ಕುಶಲವಾಗಿ ಪುನಃ ತಮ್ಮ ನಗರಕ್ಕೆ ಹಿಂದಿರುಗಿದ್ದಾರೆ !"

ಯುಧಿಷ್ಠಿರನು ಕೃಷ್ಣನಿಗೆ ಯಥಾರ್ಹವಾಗಿ ಪೂಜಿಸಿದನು ಮತ್ತು ಸಂತೋಷದಿಂದ ಭೀಮಸೇನ ಅರ್ಜುನರನ್ನು ಬಿಗಿದಪ್ಪಿದನು. ನಂತರ ಜರಾಸಂಧನನ್ನು ಸೋಲಿಸುವುದರಲ್ಲಿ ಸಹೋದರರು ಪಡೆದ ಜಯವನ್ನು ಭ್ರಾತೃಗಳೊಂದಿಗೆ ಅಜಾತಶತ್ರುವು ಆನಂದಿಸಿದನು. ಪಾಂಡವನು ಸೇರಿದ್ದ ರಾಜ ನರಾಧಿಪರನ್ನು ವಯಸ್ಸಿಗೆ ತಕ್ಕಂತೆ ಪೂಜಿಸಿ ಸತ್ಕರಿಸಿ ಬೀಳ್ಕೊಂಡನು. ಯುಧಿಷ್ಠಿರನಿಂದ ಅನುಜ್ಞೆಯನ್ನು ಪಡೆದ ಆ ನೃಪರು ಸಂತೋಷಗೊಂಡು ಅವರವರ ರಥಗಳಲ್ಲಿ ತಮ್ಮ ದೇಶಗಳಿಗೆ ತ್ವರೆಮಾಡಿ ಹೊರಟರು. ಹೀಗೆ ಪುರುಷಶಾರ್ದೂಲ ಮಹಾಬುದ್ಧಿ ಜನಾರ್ದನನು ಅರಿ

ಜರಾಸಂಧನನ್ನು ಪಾಂಡವರ ಮೂಲಕ ಸಂಹರಿಸಿದನು. ಜರಾಸಂಧನನ್ನು ಸಂಹರಿಸಿದ ಆ ಬುದ್ಧಿಪೂರ್ವ ಅರಿಂದಮನು ಧರ್ಮರಾಜನ, ಪೃಥಾ, ಕೃಷ್ಣಾ, ಸುಭದ್ರಾ, ಭೀಮಸೇನ, ಫಲ್ಗುನ ಮತ್ತು ಯಮಳರ ಅನುಜ್ಞೆಯನ್ನು ಪಡೆದು, ಧೌಮ್ಯನಿಂದ ಬೀಳ್ಕೊಂಡು ತನ್ನ ಪುರದ ಕಡೆ ಹೊರಟನು. ಧರ್ಮರಾಜನು ಉಡುಗೊರೆಯನ್ನಾಗಿ ಕೊಟ್ಟಿದ್ದ, ದಿಶಗಳಲ್ಲಿ ದಿವ್ಯನಾದಗಳಿಂದ ತುಂಬುವ ಆ ಪ್ರಮುಖ ರಥದಲ್ಲಿ ಉದಯವಾಗುತ್ತಿರುವ ಸೂರ್ಯನ ತೇಜಸ್ಸಿನಿಂದ ಕುಳಿತುಕೊಂಡನು. ನಂತರ ಯುಧಿಷ್ಠಿರನನ್ನು ಮುಂದಿಟ್ಟುಕೊಂಡು ಪಾಂಡವರು ಅಕ್ಲಿಷ್ಟಕಾರಿಣಿ ಕೃಷ್ಣನನ್ನು ಪ್ರದಕ್ಷಿಣೆಮಾಡಿದರು.

ದೇವಕಿನಂದನ ಭಗವಾನ್ ಕೃಷ್ಣನು ಹೋದನಂತರ, ವಿಪುಲ ಜಯವನ್ನು ಪಡೆದ, ರಾಜರಿಗೆ ಅಭಯವನ್ನಿತ್ತು ತಮ್ಮ ಕರ್ಮಗಳಿಂದ ತೇಜಸ್ಸನ್ನು ವೃದ್ಧಿಗೊಳಿಸಿಕೊಂಡ ಪಾಂಡವರು ದ್ರೌಪದಿಯೊಡನೆ ಪರಮ ಪ್ರೀತಿಯಿಂದ ವರ್ಧಿಸಿದರು. ರಾಜ್ಯಪಾಲನೆಗೆ ಕೀರ್ತಿವಂತನಾದ ಆ ರಾಜನು ಆ ಸಮಯದಲ್ಲಿ ಧರ್ಮಕಾಮಾರ್ಥಕ್ಕನುಗುಣ ಕಾರ್ಯಗಳಲ್ಲಿ ನಿರತನಾದನು.

# ಪಾಂಡವ ದಿಗ್ವಿಜಯ

ಶ್ರೇಷ್ಠ ಧನುಸ್ಸು, ಎರಡು ಅಕ್ಷಯ ಬತ್ತಳಿಕೆಗಳು, ರಥ, ಮತ್ತು ಧ್ವಜಗಳನ್ನು ಪಡೆದ ಮಹೇಷುಧಿ ಪಾರ್ಥನು ಸಭೆಯಲ್ಲಿ ಯುಧಿಷ್ಠಿರನಿಗೆ ಹೇಳಿದನು:

> "ರಾಜನ್! ಬಯಸಿದರೂ ಪಡೆಯಲು ದುಷ್ಕರವಾದ ಧನಸ್ಸು, ಅಸ್ತ್ರ, ಬಾಣ, ವೀರ್ಯ, ಬೆಂಬಲಿಗರು, ಭೂಮಿ, ಯಶಸ್ಸು, ಬಲಗಳನ್ನು ನಾನು ಗಳಿಸಿದ್ದೇನೆ. ಈಗ ನಮ್ಮ ಕೋಶವನ್ನು ವೃದ್ಧಿಗೊಳಿಸುವ ಕೃತ್ಯವನ್ನು ಮಾಡಬೇಕೆಂದು ನನ್ನ ಅಭಿಪ್ರಾಯ. ಎಲ್ಲ ರಾಜರುಗಳಿಂದ ಕರ-ಕಪ್ಪಗಳನ್ನು ತರುತ್ತೇನೆ. ಶುಭ ತಿಥಿ, ಮುಹೂರ್ತ ಮತ್ತು ನಕ್ಷತ್ರದಲ್ಲಿ ವಿಜಯಕ್ಕಾಗಿ ಧನರಾಜನಿಂದ ರಕ್ಷಿತ ದಿಕ್ಕಿಗೆ ಹೊರಡುತ್ತೇನೆ."

ಧನಂಜಯನ ಮಾತುಗಳನ್ನು ಕೇಳಿದ ಧರ್ಮರಾಜ ಯುಧಿಷ್ಠಿರನು ಪ್ರೀತಿ ಮತ್ತು ಗಂಭೀರಧ್ವನಿಯಲ್ಲಿ ಈ ಮಾತುಗಳನ್ನಾಡಿದನು:

> "ಭರತರ್ಷಭ! ಶತ್ರುಗಳಿಗೆ ದುಃಖವನ್ನು ತರಲು ಮತ್ತು ಸುಹೃದಯರಿಗೆ ಸಂತೋಷವನ್ನು ತರಲು ಅರ್ಹ ವಿಪ್ರರ ಸ್ವಸ್ತಿವಾಚನಗಳೊಂದಿಗೆ ಹೊರಡು. ನಿನಗೆ ವಿಜಯವು

ನಿಶ್ಚಯವಾದದ್ದು. ನಿನ್ನ ಪ್ರಿಯಕಾಮಗಳೆಲ್ಲವನ್ನೂ ಪಡೆಯುತ್ತೀಯೆ!”

ಇದನ್ನು ಕೇಳಿ ಪಾರ್ಥನು ಮಹಾ ಸೇನೆಯೊಂದಿಗೆ ಅಗ್ನಿದತ್ತ ಅದ್ಭುತಕರ್ಮಿ ದಿವ್ಯ ರಥದಲ್ಲಿ ಹೊರಟನು. ಹಾಗೆಯೇ ಭೀಮಸೇನ ಮತ್ತು ಯಮಳ ಪುರುಷರ್ಷಭರೀರ್ವರೆಲ್ಲರೂ ಸೈನ್ಯಗಳೊಂದಿಗೆ ಧರ್ಮರಾಜನ ಆಶೀರ್ವಾದದೊಂದಿಗೆ ಹೊರಟರು. ಧನಪತಿಯ ಇಷ್ಟದಿಶವನ್ನು ಪಾಕಶಾಸನಿಯು ಜಯಿಸಿದನು, ಹಾಗೆಯೇ ಭೀಮಸೇನನು ಪೂರ್ವ, ಸಹದೇವನು ದಕ್ಷಿಣ ಮತ್ತು ಅಸ್ತ್ರವಿದುಶಿ ನಕುಲನು ಪಶ್ಚಿಮ ದಿಕ್ಕುಗಳನ್ನು ಜಯಿಸಿದರು. ಧರ್ಮರಾಜ ಯುಧಿಷ್ಠಿರನು ಮಧ್ಯದಲ್ಲಿದ್ದ ಖಾಂಡವಪ್ರಸ್ಥದಲ್ಲಿಯೇ ಉಳಿದುಕೊಂಡನು. ಪಾರ್ಥರು ಒಂದೇ ವೇಳೆಯಲ್ಲಿ ವಸುಂಧರೆಯನ್ನು ಜಯಿಸಿದರು.

## ಅರ್ಜುನನ ಉತ್ತರ ದಿಗ್ವಿಜಯ

ಮೊಟ್ಟಮೊದಲನೆಯದಾಗಿ ಮಹಾಬಾಹು ಧನಂಜಯನು ಕುಣಿಂದ ದೇಶದ ಮಹೀಪತಿಗಳನ್ನು ವಶೀಕರಿಸಿದನು. ಅನಾರ್ತ, ಕಾಲಕೂಟ ಮತ್ತು ಕುಣಿಂದರನ್ನು ಜಯಿಸಿ, ಆ ಪಾಪಜಿತನು ಸುಮಂಡಲನನ್ನು ತನ್ನ ಅನುಸೈನಿಕನನ್ನಾಗಿ ಮಾಡಿದನು. ಅವನೊಂದಿಗೆ ಸವ್ಯಸಾಚೀ ಪರಂತಪನು ಸಕಲ ದ್ವೀಪವನ್ನು ಮತ್ತು ಸಕಲದ್ವೀಪವಾಸಿ ಪಾರ್ಥಿವ ಪ್ರತಿವಿಂಧ್ಯನನ್ನು ಜಯಿಸಿದನು. ಏಳು ದ್ವೀಪಗಳ ನೃಪರ ಮತ್ತು

ಅರ್ಜುನನ ಸೇನೆಗಳ ಮಧ್ಯೆ ತುಮುಲ ಯುದ್ಧವೇ ನಡೆಯಿತು. ಅವರನ್ನು ಜಯಿಸಿದ ಆ ಮಹೇಷ್ವಾಸನು ಅವರೆಲ್ಲರ ಸಹಿತ ಪ್ರಾಗ್ಜ್ಯೋತಿಷ ಪುರದ ಮೇಲೆ ಆಕ್ರಮಣ ಮಾಡಿದನು. ಅಲ್ಲಿಯ ಮಹಾರಾಜ ಭಗದತ್ತನೊಂದಿಗೆ ಮಹಾತ್ಮ ಪಾಂಡವನ ಮಹಾಯುದ್ಧವಾಯಿತು. ಪ್ರಾಗ್ಜ್ಯೋತಿಷವು ಕಿರಾತ ಮತ್ತು ಚೀನರಿಂದ ಹಾಗೂ ಸಾಗರ ಮಡುವಿನಲ್ಲಿ ವಾಸಿಸುತ್ತಿದ್ದ ಇನ್ನೂ ಇತರ ಬಹಳಷ್ಟು ಯೋದ್ಧರಿಂದ ಸುತ್ತುವರೆಯಲ್ಪಟ್ಟಿತ್ತು. ಧನಂಜಯನೊಡನೆ ಎಂಟು ದಿನಗಳು ಯುದ್ಧಮಾಡಿದ ಆ ರಾಜನು ರಣರಂಗದಲ್ಲಿ ಆಯಾಸಹೊಂದದೇ ಮುಗುಳ್ನಗುತ್ತಾ ಹೇಳಿದನು:

> "ಮಹಾಬಾಹು ಪಾಂಡವನಂದನ! ಪಾಕಶಾಸನ ದಾಯಾದಿ! ಯುದ್ಧದಲ್ಲಿ ಶೋಭಿಸುವ ನಿನ್ನ ಈ ವೀರ್ಯವು ಯಾವುದಕ್ಕೂ ಕಡಿಮೆಯಿಲ್ಲ. ಸುರೇಂದ್ರನ ಸಖನಾದ ನಾನು ರಣದಲ್ಲಿ ಶಕ್ರನನಿಗೆ ಸರಿಸಮ. ಆದರೂ ಯುದ್ಧದಲ್ಲಿ ನಿನ್ನನ್ನು ಎದುರಿಸಲು ಸಾಧ್ಯವಿಲ್ಲ! ನಿನಗಾಗಿ ನಾನು ಏನುಮಾಡಬೇಕೆಂದು ಬಯಸುತ್ತೀಯೆ ಹೇಳು! ನನಗೆ ಕೇಳಿದ್ದುದನ್ನು ಮಾಡಿಕೊಡುತ್ತೇನೆ."

ಅರ್ಜುನನು ಹೇಳಿದನು:

> "ಕುರುವೃಷಭ ಧರ್ಮಪುತ್ರ ರಾಜಾ ಯುಧಿಷ್ಠಿರನನ್ನು ಪಾರ್ಥಿವನೆಂದು ಪರಿಗಣಿಸಿ ಅವನಿಗೆ ಕರವನ್ನು

ಕೊಡಬೇಕೆಂಬುದೇ ನನ್ನ ಇಚ್ಛೆ. ನೀನು ನನ್ನ ತಂದೆಯ ಮಿತ್ರ ಮತ್ತು ನನ್ನ ಮೇಲೆಯೂ ಪ್ರೀತಿಯನ್ನು ತೋರಿಸುತ್ತಿದ್ದೀಯೆ. ಆದುದರಿಂದ ನಾನು ನಿನಗೆ ಆಜ್ಞೆಯನ್ನು ಮಾಡುತ್ತಿಲ್ಲ. ಪ್ರೀತಿಪೂರ್ವಕವಾಗಿ ಕೊಡು."

ಭಗದತ್ತನು ಹೇಳಿದನು:

"ಕುಂತಿಯ ಮಗನಾದ ನೀನು ನನಗೆ ಹೇಗೋ ಹಾಗೆ ರಾಜ ಯುಧಿಷ್ಠಿರನು ಕೂಡ ಹೌದು. ಎಲ್ಲವನ್ನೂ ಮಾಡುತ್ತೇನೆ. ನಿನಗಾಗಿ ಬೇರೆ ಏನನ್ನು ಮಾಡಬೇಕು?"

ಅವನನ್ನು ಜಯಿಸಿದ ಮಹಾಬಾಹು ಕುಂತೀಪುತ್ರ ಧನಂಜಯನು ಧನದನು ಪಾಲಿಸುವ ಉತ್ತರ ದಿಶೆಯಲ್ಲಿ ಹೊರಟನು. ಪುರುಷರ್ಷಭ ಕೌಂತೇಯನು ಒಳಗಿನ ಪರ್ವತಗಳನ್ನು, ಹೊರಗಿನ ಪರ್ವತಪ್ರದೇಶಗಳನ್ನು ಮತ್ತು ಮೇಲಿನ ಪರ್ವತಗಳನ್ನು ಜಯಿಸಿದನು. ಆ ಎಲ್ಲ ಪರ್ವತಗಳನ್ನೂ ಗೆದ್ದು ಅಲ್ಲಿಯ ನರಾಧಿಪರೆಲ್ಲರನ್ನೂ ತನ್ನ ವಶದಲ್ಲಿ ಪಡೆದುಕೊಂಡು ಅವರ ಸಂಪತ್ತುಗಳನ್ನೆಲ್ಲವನ್ನೂ ತನ್ನದಾಗಿಸಿಕೊಂಡನು. ಆ ಎಲ್ಲ ನೃಪರನ್ನೊಡಗೂಡಿ ಕುಲೂತವಾಸಿ ರಾಜ ಬೃಹಂತನ ಮೇಲೆ ಭೂಮಿಯನ್ನು ನಡುಗಿಸುವ ಮೃದಂಗ ವಾದ್ಯಗಳಿಂದ, ರಥಗಳ ಧ್ವನಿಯಿಂದ, ಅನೆಗಳ ನಿನಾದದಿಂದ ಕೂಡಿ ಆಕ್ರಮಣ ಮಾಡಿದನು. ಆಗ ತರುಣ ಬೃಹಂತನು ಚತುರಂಗ ಬಲದೊಂದಿಗೆ ನಗರದ

ಹೊರಬಂದು ಪಾಂಡವನೊಂದಿಗೆ ಯುದ್ಧ ಮಾಡಿದನು. ಧನಂಜಯ ಬೃಹಂತರ ಮಧ್ಯೆ ಮಹಾ ಕಾಳಗವೇ ನಡೆಯಿತು. ಆದರೆ ಬೃಹಂತನು ಪಾಂಡವನ ವಿಕ್ರಮವನ್ನು ಎದುರಿಸಲು ಅಶಕ್ತನಾದನು. ಕೌಂತೇಯನನ್ನು ಸೋಲಿಸಲಿಕ್ಕಾಗುವುದಿಲ್ಲ ಎಂದು ತಿಳಿದ ಆ ಪರ್ವತೇಶ್ವರನು ತನ್ನ ಸರ್ವ ಸಂಪತ್ತನ್ನೂ ತಂದೊಪ್ಪಿಸಿದನು. ಆ ರಾಜ್ಯವನ್ನು ಪಡೆಹು ಕುಲೂತನೊಂದಿಗೆ ಹೊರಟು, ಸೇನಾಬಿಂದುವನ್ನು ಅವನ ರಾಜ್ಯಭ್ರಷ್ಟನನ್ನಾಗಿ ಮಾಡಿದನು. ಅವನು ಮೋದಾಪುರ, ವಾಮದೇವ, ಸುದಾಮರೊಡನೆ ಉತ್ತರ ಕುಲೂತದ ಸರ್ವ ರಾಜಕುಲಗಳನ್ನು ತನ್ನದಾಗಿಸಿಕೊಂಡನು. ಧರ್ಮರಾಜನ ಶಾಸನದಂತೆ ಅಲ್ಲಿಯೇ ತಂಗಿ ಧನಂಜಯನು ತನ್ನ ಸೇನೆಯಿಂದ ಐದು ದೇಶಗಳನ್ನು ಗೆದ್ದನು. ಸೇನಬಿಂದುವಿನ ಮಹಾ ಪುರ ದಿವಃಪ್ರಸ್ಥವನ್ನು ತಲುಪಿ ಆ ಪ್ರಭುವು ಅದನ್ನೇ ತನ್ನ ಚತುರಂಗಬಲದ ತಂಗುದಾಣವನ್ನಾಗಿ ಮಾಡಿದನು. ಅವರೆಲ್ಲರಿಂದ ಪರಿವೃತನಾಗಿ ಆ ಮಹಾತೇಜಸ್ವಿ ಪುರುಷರ್ಷಭನು ನರಾಧಿಪ ಪೌರವ ವಿಶ್ವಗಶ್ವನಲ್ಲಿಗೆ ಹೋಗಿ ಶೂರ ಮಹಾರಥಿ ಪರ್ವತ ಜನರನ್ನು ತನ್ನ ಧ್ವಜಯುಕ್ತ ಸೇನೆಯಿಂದ ಗೆದ್ದು ಪೌರವರಕ್ಷಿತ ಪುರವನ್ನು ಗೆದ್ದನು. ಪೌರವನನ್ನು ಸೋಲಿಸಿದ ನಂತರ ಪಾಂಡವನು ಪರ್ವತವಾಸಿ ಏಳು ದಸ್ಯುಗಣ ಉತ್ಸವಸಂಕೇತಕರನ್ನು ಗೆದ್ದನು. ಅನಂತರ ಕ್ಷತ್ರಿಯರ್ಷಭನು ಅವರ ಹತ್ತು ಮಂಡಲಗಳೊಂದಿಗೆ ವೀರ ಕಾಶ್ಮೀರಕ ಮತ್ತು ಲೋಹಿತ ಕ್ಷತ್ರಿಯರನ್ನು ಜಯಿಸಿದನು. ಹಾಗೆಯೇ

ತ್ರಿಗರ್ತರನ್ನು, ದಾರ್ವರನ್ನು, ಕೋಕನದರನ್ನು ಮತ್ತು ಇನ್ನೂ ಅವನೊಂದಿಗೆ ಹೋರಾಡಿದ ಬಹಳ ಕ್ಷತ್ರಿಯರೆಲ್ಲರನ್ನೂ ಕೌಂತೇಯನು ಗೆದ್ದನು. ಕುರುನಂದನನು ರಮ್ಯ ನಗರಿ ಅಭಿಸಾರಿಯನ್ನು ಮುತ್ತಿ, ಉರಶವಾಸಿ ರೋಚಮಾನನನ್ನು ರಣದಲ್ಲಿ ಗೆದ್ದನು. ಅನಂತರ ಪಾಕಶಾಸನಿಯು ಚಿತ್ರಾಯುಧನಿಂದ ಸುರಕ್ಷಿತ ರಮ್ಯ ಸಿಂಹಪುರವನ್ನು ತನ್ನ ಅತಿ ದೊಡ್ಡ ಬಲದಿಂದ ಗೆದ್ದನು. ನಂತರ ಕಿರೀಟೀ ಪಾಂಡವರ್ಷಭ ಕುರುನಂದನನು ತನ್ನ ಸರ್ವ ಸೈನ್ಯದಿಂದ ಸುಹ್ಮರು ಮತ್ತು ಚೋಲರನ್ನು ಗೆದ್ದನು. ಅನಂತರ ಪರಮವಿಕ್ರಾಂತ ಕುರುನಂದನನು ದುರಾಸದ ಬಾಹ್ಲೀಕರನ್ನು ತನ್ನ ಮಹಾ ಶಕ್ತಿಯೊಂದಿಗೆ ವಶಮಾಡಿಕೊಂಡನು. ಪಾಕಶಾಸನಿ ಪಾಂಡವನು ಅವರ ಬಲವನ್ನು ಕಿತ್ತುಕೊಂಡು ಕಡಿಮೆಯಿದ್ದಿದ್ದ ಸಂಪನ್ಮೂಲಗಳನ್ನು ಅಲ್ಲಿಯೇ ಬಿಟ್ಟು ದರದರೊಂದಿಗೆ ಕಾಂಬೋಜರನ್ನು ಜಯಿಸಿದನು. ಇಂದ್ರನ ಮಗ ಪ್ರಭುವು ಪೂರ್ವೋತ್ತರ ದಿಕ್ಕಿನಲ್ಲಿ ವಾಸಿಸುವ ದಸ್ಯುಗಳನ್ನು ಮತ್ತು ವನಗಳಲ್ಲಿ ವಾಸಿಸುತ್ತಿರುವವರನ್ನು ಸೋಲಿಸಿದನು. ಅನಂತರ ಪಾಕಶಾಸನಿಯು ಲೋಹರನ್ನು, ಮೇಲಿನ ಕಾಂಬೋಜರನ್ನು, ಮತ್ತು ಉತ್ತರದ ಋಷಿಕರನ್ನು ಒಟ್ಟಿಗೇ ಗೆದ್ದನು. ಋಷಿಕದಲ್ಲಿ ಮೇಲಿನ ಋಷಿಕರು ಮತ್ತು ಪಾರ್ಥನ ನಡುವೆ ನಡೆದ ಯುದ್ಧವು ತಾರಕನೊಂದಿಗೆ ನಡೆದ ಯುದ್ಧದಂತೆ ಅತಿ ಭಯಂಕರವಾಗಿತ್ತು. ರಣದಲ್ಲಿ ಋಷಿಕರನ್ನು ಜಯಿಸಿದ ನಂತರ ಅವನು ಗಿಳಿಯ ಹೊಟ್ಟೆಯ ಬಣ್ಣದ ಎಂಟು

ಮತ್ತು ನವಿಲಿನ ಬಣ್ಣದ ಇನ್ನೂ ಇತರ ಕುದುರೆಗಳನ್ನು ವಶಪಡಿಸಿಕೊಂಡನು. ನಿಷ್ಕುಟದೊಂದಿಗೆ ಹಿಮವತ್ಪರ್ವತವನ್ನು ಸಂಗ್ರಾಮದಲ್ಲಿ ಗೆದ್ದು ಪುರುಷರ್ಷಭನು ಶ್ವೇತಪರ್ವವನ್ನು ಸೇರಿ ಅಲ್ಲಿ ಬೀಡು ಬಿಟ್ಟನು.

ಶ್ವೇತಪರ್ವತವನ್ನು ದಾಟಿ ಆ ವೀರನು ದ್ರುಮಪುತ್ರನಿಂದ ರಕ್ಷಿತ ಕಿಂಪುರುಷರು ವಾಸಿಸುತ್ತಿದ್ದ ದೇಶಕ್ಕೆ ಬಂದನು. ಹಲವಾರು ಕ್ಷತ್ರಿಯರು ತಮ್ಮ ಅಂತ್ಯವನ್ನು ಕಂಡ ಆ ಮಹಾ ಯುದ್ಧದಲ್ಲಿ ಪಾಂಡವಶ್ರೇಷ್ಠನು ಅದನ್ನು ಗೆದ್ದು ಕರವನ್ನು ಪಡೆದುಕೊಂಡನು. ಗುಹ್ಯಕರಿಂದ ರಕ್ಷಿತ ಹಾಟಕ ಎಂಬ ಹೆಸರಿನ ದೇಶವನ್ನು ಗೆದ್ದು ನಿರವ್ಯಗ್ರ ಪಾಕಶಾಸನಿಯು ಸೈನ್ಯದೊಂದಿಗೆ ಅಲ್ಲಿ ನೆಲಸಿದನು. ಸಾಂತ್ವನದಿಂದ ಅವರನ್ನು ಗೆದ್ದು ಕುರುನಂದನನು ಋಷಿಕುಂಜರಗಳಿಂದ ಕೂಡಿದ್ದ ಉತ್ತಮ ಮಾನಸ ಸರೋವರವನ್ನು ಕಂಡನು. ಮಾನಸ ಸರೋವರವನ್ನು ತಲುಪಿ ಪ್ರಭು ಪಾಂಡವನು ಹಾಟಕದ ಬಳಿಯಿರುವ ಗಂಧರ್ವರಿಂದ ರಕ್ಷಿತ ದೇಶವನ್ನು ಗೆದ್ದನು. ಅಲ್ಲಿ ಗಂಧರ್ವ ನಗರದಲ್ಲಿ ಅವನು ತಿತ್ತಿರಿ ಬಣ್ಣದ ಕಪ್ಪೆಯಂತೆ ಕಣ್ಣುಗಳನ್ನು ಹೊಂದಿದ್ದ ಉತ್ತಮ ಕುದುರೆಗಳನ್ನು ಇನ್ನೂ ಇತರ ಕಾಣಿಕೆಗಳನ್ನು ಪಡೆದನು. ಅನಂತರ ಪಾಕಶಾಸನ ನಂದನ ಪಾಂಡವನು ಉತ್ತರ ಹರಿವರ್ಷವನ್ನು ತಲುಪಿ ಆ ದೇಶವನ್ನು ಗೆಲ್ಲಲು ಬಯಸಿದನು. ಅಲ್ಲಿ ಮಹಾಕಾಯ, ಮಹಾವೀರ, ಮಹಾಬಲ

ದ್ವಾರಪಾಲಕರು ಅವನ ಹತ್ತಿರ ಬಂದು ಸಂತೋಷದಿಂದ ಈ ಮಾತುಗಳನ್ನಾಡಿದರು:

> “ಪಾರ್ಥ! ಯಾವ ರೀತಿಯಿಂದಲೂ ಈ ಪುರವನ್ನು ಜಯಿಸಲು ನೀನು ಶಕ್ಯನಿಲ್ಲ. ಹಿಂದಿರುಗು! ಇದೇ ನಿನಗೆ ಒಳ್ಳೆಯದಾಗುತ್ತದೆ! ಈ ಪುರವನ್ನು ಪ್ರವೇಶಿಸುವ ಯಾವ ನರನೂ ಸಾಯಲೇ ಬೇಕು. ನಾವು ನಿನ್ನ ಮೇಲೆ ಪ್ರೀತಿಯನ್ನು ತೋರಿಸುತ್ತಿದ್ದೇವೆ. ನಿನ್ನ ವಿಜಯವನ್ನು ಇನ್ನು ಸಾಕುಮಾಡು. ನೀನು ಜಯಿಸಬೇಕಾದ್ದುದು ಇನ್ನು ಯಾವುದೂ ಉಳಿದಿಲ್ಲ. ಇದು ಉತ್ತರ ಕುರುಗಳ ರಾಷ್ಟ್ರ ಮತ್ತು ಇಲ್ಲಿ ಯುದ್ಧ ಯಾವುದೂ ನಡೆಯುವುದಿಲ್ಲ. ಒಂದು ವೇಳೆ ನೀನು ಇದನ್ನು ಪ್ರವೇಶಿಸಿದರೂ ನಿನಗೆ ಏನೂ ಕಾಣುವುದಿಲ್ಲ. ಯಾಕೆಂದರೆ ಇಲ್ಲಿರುವ ಏನನ್ನು ನೋಡಲು ಮನುಷ್ಯನಿಗೆ ಶಕ್ಯವಿಲ್ಲ. ಆದರೆ ಇಲ್ಲಿ ಇನ್ನೇನನ್ನಾದರನ್ನೂ ಮಾಡಲು ಬಯಸುವೆಯಾದರೆ ಹೇಳು. ನಿನ್ನ ಮಾತನ್ನು ನಡೆಸಿಕೊಡುತ್ತೇವೆ.”

ಈ ಮಾತುಗಳಿಗೆ ಪಾಕಶಾಸನಿ ಅರ್ಜುನನು ಹೇಳಿದನು:

> “ಧೀಮಂತ ಧರ್ಮರಾಜನು ಪಾರ್ಥಿವತ್ವವನ್ನು ಬಯಸಿದ್ದಾನೆ. ಮನುಷ್ಯರಿಗೆ ಬಾಧ್ಯತ ನಿಮ್ಮ ದೇಶವನ್ನು ನಾನು ಪ್ರವೇಶಿಸುವುದಿಲ್ಲ. ಆದರೆ ಯುಧಿಷ್ಠಿರನಿಗೆ ಕರದ

ರೂಪದಲ್ಲಿ ಏನನ್ನಾದರೂ ಕೊಡಬೇಕು.”

ಆಗ ಅವರು ದಿವ್ಯ ವಸ್ತ್ರಗಳನ್ನು, ದಿವ್ಯ ಆಭರಣಗಳನ್ನೂ, ದಿವ್ಯ ಚರ್ಮಗಳನ್ನೂ ಕರವಾಗಿ ಅವನಿಗೆ ನೀಡಿದರು. ಈ ರೀತಿ ಪುರುಷವ್ಯಾಘ್ರನು ಉತ್ತರ ದಿಶವನ್ನು ಗೆದ್ದು, ಕ್ಷತ್ರಿಯರು ಮತ್ತು ದಸ್ಯುಗಳೊಂದಿಗೆ ಬಹಳಷ್ಟು ಸಂಗ್ರಾಮಗಳನ್ನು ನಡೆಸಿ ಆ ರಾಜರನ್ನು ಗೆದ್ದು ಅವರು ಕರವನ್ನು ಕೊಡುವಂತೆ ಮಾಡಿ, ಅವರೆಲ್ಲರಿಂದ ವಿವಿಧ ಧನ, ರತ್ನಗಳು, ಚಿಟ್ಟೆಗಳ ಬಣ್ಣಗಳ ನವಿಲು ಮತ್ತು ಗಿಳಿಗಳ ರೆಕ್ಕೆಗಳ ಬಣ್ಣಗಳ, ಎಲ್ಲವೂ ವಾಯುವೇಗದ ಕುದುರೆಗಳನ್ನು ಪಡೆದನು. ಮಹತ್ತರ ಚತುರಂಗ ಬಲದಿಂದೊಡಗೂಡಿ ಆ ವೀರನು ಉತ್ತಮ ಶಕ್ರಪ್ರಸ್ಥ ಪುರವನ್ನು ಪುನಃ ಪ್ರವೇಶಿಸಿದನು.

## ಭೀಮಸೇನನ ಪೂರ್ವ ದಿಗ್ವಿಜಯ

ಇದೇ ಸಮಯದಲ್ಲಿ ವೀರ್ಯವಾನ್ ಭೀಮಸೇನನು ಧರ್ಮರಾಜನ ಅನುಮತಿಯನ್ನು ಪಡೆದು ಪೂರ್ವದಿಕ್ಕಿನ ಕಡೆ ಹೊರಟನು. ಪರರಾಷ್ಟ್ರಗಳನ್ನು ಸದೆಬಡಿಯುವ ಮಹಾ ಬಲಚಕ್ರದಿಂದೊಡಗೂಡಿ ಶತ್ರುಗಳ ಶೋಕವನ್ನು ವೃದ್ಧಿಸುತ್ತಾ ಆ ಭರತಶಾರ್ದೂಲನು ಮುಂದುವರೆದನು. ಆ ರಾಜಶಾರ್ದೂಲ ಪಾಂಡವನು ಮೊದಲಿಗೆ ಪಾಂಚಾಲರ ಪುರಕ್ಕೆ ಹೋಗಿ ವಿವಿಧ ಉಪಾಯಗಳಿಂದ ಪಾಂಚಾಲರನ್ನು ಒಲಿಸಿದನು. ನರರ್ಷಭ ಶೂರ ಪ್ರಭುವು ಕಂಡಕೀ ಮತ್ತು ವಿದೇಹರನ್ನು ಜಯಿಸಿ ಸ್ವಲ್ಪವೇ ಸಮಯದಲ್ಲಿ ದಶಾರ್ಣರ

ಮೇಲೆ ಎರಗಿದನು. ಅಲ್ಲಿ ದಾಶಾರ್ಣಕ ರಾಜಾ ಸುಧರ್ಮನು ಭೀಮನೊಂದಿಗೆ ನಿರಾಯುಧ, ನವಿರೇಳಿಸುವ ಮಹಾಯುದ್ಧವನ್ನು ನಡೆಯಿಸಿದನು. ಅವನ ಈ ಕಾರ್ಯವನ್ನು ನೋಡಿದ ಪರಂತಪ ಭೀಮಸೇನನು ಮಹಾಬಲ ಸುಧರ್ಮನನ್ನು ತನ್ನ ಸೇನಾಪತಿಯನ್ನಾಗಿ ನಿಯುಕ್ತಿಸಿದನು. ಅನಂತರ ಭೀಮಪರಾಕ್ರಮಿ ಭೀಮನು ತನ್ನ ಮಹಾಸ್ಯೈನ್ಯದಿಂದ ಮೇದಿನಿಯನ್ನು ನಡುಗಿಸುತ್ತಾ ಪೂರ್ವದಿಕ್ಕಿನಲ್ಲಿ ಹೊರಟನು. ಆ ಬಲಿಗಳಲ್ಲಿ ಶ್ರೇಷ್ಠ ವೀರನು ಅಶ್ವಮೇಧೇಶ್ವರ ರೋಚಮಾನನನ್ನು ಅವನ ಅನುಜನೊಂದಿಗೆ ಸಮರದಲ್ಲಿ ಬಲದೊಂದಿಗೆ ಗೆದ್ದನು. ಅಷ್ಟೊಂದು ತೀವ್ರವಾಗಿಲ್ಲದ ಯುದ್ಧದಲ್ಲಿಯೇ ಅವನನ್ನು ಸೋಲಿಸಿ ಮಹಾವೀರ ಕುರುನಂದನ ಕೌಂತೇಯನು ಪೂರ್ವದೇಶವನ್ನು ಗೆದ್ದನು. ಅನಂತರ ದಕ್ಷಿಣದಲ್ಲಿ ಮಹಾ ಪುನಿಂದ ನಗರಕ್ಕೆ ಸೇರಿ ಸುಕುಮಾರ ಮತ್ತು ನರಾಧಿಪ ಸುಮಿತ್ರನನ್ನು ಗೆದ್ದನು. ನಂತರ ಧರ್ಮರಾಜನ ಶಾಸನದಂತೆ ಭರತರ್ಷಭನು ಮಹಾವೀರ ಶಿಶುಪಾಲನಲ್ಲಿಗೆ ಹೋದನು. ಪಾಂಡವನ ಇಚ್ಛೆಯನ್ನು ಕೇಳಿದ ಚೇದಿರಾಜನು ನಗರದಿಂದ ಹೊರಬಂದು ಆ ಪರಂತಪನನ್ನು ಬರಮಾಡಿಕೊಂಡನು. ಕುರು ಮತ್ತು ಚೇದಿ ವೃಷಭರೀರ್ವರು ಭೇಟಿಯಾದಾಗ ತಮ್ಮ ಎರಡೂ ಕುಲಗಳ ಕುಶಲವನ್ನು ಪರಸ್ಪರರರಲ್ಲಿ ಕೇಳಿದರು. ಚೇದಿರಾಜನು ತನ್ನ ರಾಜ್ಯವನ್ನು ಅವನಿಗೆ ಸಮರ್ಪಿಸಿ ನಗುತ್ತಾ ಭೀಮನಿಗೆ ಕೇಳಿದನು: “ಅನಘ! ಇದೇನು ನೀನು ಮಾಡುತ್ತಿರುವೆ?” ಆಗ ಭೀಮನು ಅವನಿಗೆ

ಧರ್ಮರಾಜನ ಬಯಕೆಯ ಕುರಿತು ಹೇಳಿದನು. ಅದನ್ನು ಒಪ್ಪಿಕೊಂಡ ನರಾಧಿಪನು ಅದಕ್ಕೆ ತಕ್ಕುದಾಗಿ ನಡೆದುಕೊಂಡನು. ಭೀಮನು ಅಲ್ಲಿ ಶಿಶುಪಾಲನಿಂದ ಸತ್ಕೃತನಾಗಿ ಸೇನೆ ವಾಹನಗಳೊಂದಿಗೆ ಮೂವತ್ತು ರಾತ್ರಿಗಳನ್ನು ಕಳೆದನು.

ಅನಂತರ ಆ ಅರಿಂದಮನು ಕುಮಾರ ದೇಶದ ಶ್ರೇಣಿಮಂತ ಮತ್ತು ಕೋಸಲಾಧಿಪತಿ ಬೃಹದ್ಬಲನನ್ನು ಗೆದ್ದನು. ಪಾಂಡವಶ್ರೇಷ್ಠನು ಅಷ್ಟೇನೂ ಕಷ್ಟವಿಲ್ಲದೇ ಅಯೋಧ್ಯೆಯ ಧರ್ಮಜ್ಞ ಮಹಾಬಲಿ ದೀರ್ಘಪ್ರಜ್ಞನನ್ನು ಗೆದ್ದನು. ಅನಂತರ ಪ್ರಭುವು ಗೋಪಾಲಕಚ್ಛ, ಉತ್ತರ ಸೋತ್ತಮರನ್ನು ಮತ್ತು ಮಲ್ಲರ ಅಧಿಪತಿ ಪಾರ್ಥಿವನನ್ನು ಜಯಿಸಿದನು. ಹಿಮಾಲಯದ ತಪ್ಪಲಿನಲ್ಲಿ ಜರದ್ಗವನನ್ನು ಎದುರಿಸಿ ಸ್ವಲ್ಪವೇ ಸಮಯದಲ್ಲಿ ಇಡೀ ದೇಶವನ್ನು ಬಲವಂತವಾಗಿ ತನ್ನ ವಶಪಡಿಸಿಕೊಂಡನು. ಈ ರೀತಿ ಹಲವಾರು ದೇಶಗಳನ್ನು ಗೆದ್ದು ಆ ಪುರುಷರ್ಷಭ, ಬಲಶಾಲಿಗಳಲ್ಲಿ ಶ್ರೇಷ್ಠ ಪಾಂಡವನು ಉನ್ನಾಟವನ್ನು ಗೆದ್ದು ಪರ್ವತ ಕುಕ್ಷಿಮಂತವನ್ನು ಬಲವಂತವಾಗಿ ತನ್ನ ವಶದಲ್ಲಿ ತೆಗೆದುಕೊಂಡನು. ಆ ಮಹಾಬಾಹು ಭೀಮಪರಾಕ್ರಮಿ ಭೀಮನು ಸಮರದಲ್ಲಿ ಕಾಶಿರಾಜನನ್ನು ಮತ್ತು ಹಿಂದೇಟನ್ನು ಹಾಕದೇ ಇದ್ದ ಸುಬಂಧುವನ್ನು ವಶಪಡಿಸಿಕೊಂಡನು. ಅನಂತರ ಪಾಂಡವರ್ಷಭನು ಬಲದಿಂದ ಯುದ್ಧ ಮಾಡಿ ಕ್ರಥದಲ್ಲಿದ್ದ ರಾಜಪತಿ ಸುಪಾರ್ಶ್ವನನ್ನು ಸೋಲಿಸಿದನು. ಅನಂತರ ಮಹಾತೇಜಸ್ವಿ ಮತ್ಸ್ಯರನ್ನು,

ಮಹಾಬಲಶಾಲಿ ಮಲಯರನ್ನು, ವಧಿಸಲಸಾಧ್ಯ ಗಯರನ್ನು ಮತ್ತು ಪಶುಭೂಮಿ ಸರ್ವವನ್ನೂ ಸೋಲಿಸಿದನು. ಮಹಾಬಾಹುವು ಹಿಂದಿರುಗಿ ಉತ್ತರಾಭಿಮುಖವಾಗಿ ಹೊರಟು ಮದರ್ವೀಕ ಪರ್ವತ ಮತ್ತು ಸುತ್ತಮುತ್ತಲ ಪ್ರದೇಶನ್ನು ಗೆದ್ದನು. ಬಲಶಾಲಿ ಕೌಂತೇಯನು ಬಲವನ್ನು ಪ್ರಯೋಗಿಸಿ ವತ್ಸಭೂಮಿಯನ್ನು ಸೋಲಿಸಿ, ಭರ್ಗರ ಅಧಿಪ, ನಿಷಾದಧಿಪತಿ ಮತ್ತು ಮಣಿಮತನೇ ಮೊದಲಾದ ಹಲವಾರು ಭೂಮಿಪಾಲರನ್ನು ಗೆದ್ದನು. ಅನಂತರ ಪಾಂಡವ ಭೀಮನು ದಕ್ಷಿಣ ಮಲ್ಲರನ್ನೂ ಭೋಗವಂತನನ್ನೂ ಏನೂ ಕಷ್ಟವಿಲ್ಲದೇ ಗೆದ್ದನು. ಪುರುಷವ್ಯಾಘ್ರ ಪ್ರಭುವು ಶರ್ಮಕರನ್ನು ಮತ್ತು ವರ್ಮಕರನ್ನು ಸಾಂತ್ವನದಿಂದ ಗೆದ್ದು ವೈದೇಹಕ ರಾಜ ಜಗತೀಪತಿ ಜನಕನನ್ನು ಸುಲಭವಾಗಿ ಗೆದ್ದನು. ವಿದೇಹದಲ್ಲಿಯೇ ಇದ್ದುಕೊಂಡು ಕೌಂತೇಯ ಪಾಂಡವನು ಇಂದ್ರಪರ್ವತದ ಕೊನೆಯಲ್ಲಿದ್ದ ಕಿರಾತರ ಏಳು ಅಧಿಪತಿಗಳನ್ನು ಗೆದ್ದನು. ಅನಂತರ ವೀರ್ಯವಾನ್ ಬಲಿ ಕೌಂತೇಯನು ಅವರು ನೋಡುತ್ತಿದ್ದಂತೆಯೇ ಸುಂಹರನ್ನು, ಪೂರ್ವ ಸುಂಹರನ್ನು ಯದ್ಧದಲ್ಲಿ ಸೋಲಿಸಿ, ಮಾಗಧ ದೇಶವನ್ನು ಆಕ್ರಮಣ ಮಾಡಿದನು. ಪೃಥಿವೀಪತಿ ದಂಡ ಮತ್ತು ದಂಡಧಾರರನ್ನು ಗೆದ್ದು ಅವರೆಲ್ಲರೊಡನೆ ಗಿರಿವ್ರಜವನ್ನು ಧಾಳಿಯಿಟ್ಟನು. ಜರಾಸಂಧಿಯನ್ನು ಸಂತವಿಸಿ ಅವನನ್ನು ಕರಕೊಡುವವನ್ನಾಗಿ ಮಾಡಿ, ಅವರೆಲ್ಲರನ್ನೂ ಸೇರಿ ವೇಗದಿಂದ ಬಲಿ ಕರ್ಣನ ಮೇಲೆ ಆಕ್ರಮಣ ಮಾಡಿದನು. ಚತುರಂಗ ಬಲದಿಂದ ಮಹಿಯನ್ನು ಕಂಪಿಸುತ್ತಾ ಪಾಂಡವಶ್ರೇಷ್ಠನು

ಅಮಿತ್ರಘಾತಿ ಕರ್ಣನೊಡನೆ ಯುದ್ಧ ಮಾಡಿದನು. ಯುದ್ಧದಲ್ಲಿ ಕರ್ಣನನ್ನು ಸೋಲಿಸಿ ವಶಪಡಿಸಿಕೊಡು ಅವನು ಪರ್ವತವಾಸಿಗಳಾದ ಬಲವಾನ್ ರಾಜರನ್ನು ಗೆದ್ದನು.

ಅನಂತರ ಪಾಂಡವನು ಮಹಾ ಮುಷ್ಠಿಯುದ್ಧದಲ್ಲಿ ಬಲವತ್ತರ ಮೋದಗಿರಿಯನ್ನು ಬಾಹುವೀರ್ಯದಿಂದ ಸೋಲಿಸಿದನು. ಬಲವೃತರೂ ವೀರರೂ ತೀವ್ರಪರಾಕ್ರಮಿಗಳು ಆದ ಪೌಂಡ್ರಾಧಿಪ ವೀರ ಮಹಾಬಲಿ ವಾಸುದೇವ ಮತ್ತು ಕೌಶಿಕೀ ತೀರದಲ್ಲಿ ವಾಸಿಸುತ್ತಿದ್ದ ಮಹೌಜಸ ರಾಜರನ್ನು ಸೋಲಿಸಿ ವಂಗರಾಜದ ಮೇಲೆ ಧಾಳಿಯಿಟ್ಟನು. ಪಾರ್ಥಿವ ಸಮುದ್ರಸೇನ ಮತ್ತು ಚಂದ್ರಸೇನರನ್ನು ಸೋಲಿಸಿ ತಾಮ್ರಲಿಪ್ತದ ರಾಜ, ಕಾಚ ಮತ್ತು ವಂಗಾಧಿಪರು, ಸುಹ್ಮಾನರ ಅಧಿಪ ಮತ್ತು ಸಾಗರವಾಸಿ ಸರ್ವ ಮ್ಲೇಚ್ಛಗಣಗಳನ್ನು ಆ ಭರತರ್ಷಭನು ಗೆದ್ದನು. ಈ ರೀತಿ ಬಹುವಿಧದ ದೇಶಗಳನ್ನು ಗೆದ್ದು ಅವರಿಂದ ಸಂಪತ್ತನ್ನು ಪಡೆದು ಬಲಿ ಪವನಾತ್ಮಜನು ಲೌಹಿತ್ಯಕ್ಕೆ ಬಂದನು. ಸಾಗರದ್ವೀಪವಾಸಿಗಳಾದ ಸರ್ವ ಮ್ಲೇಚ್ಛ ನೃಪತಿಗಳಿಂದ ವಿವಿಧ ರತ್ನಗಳನ್ನೂ, ಚಂದನ, ಅಗುರು, ವಸ್ತ್ರ, ಮಣಿ, ಅನುತ್ತಮ ಮುಕ್ತ, ಕಾಂಚನ, ರಜತ, ಜ್ರ, ವಿದ್ರುಮ ಮತ್ತು ಮಹಾಧನವನ್ನು ಕಪ್ಪ ಕಾಣಿಕೆಗಳನ್ನಾಗಿ ಪಡೆದನು. ಕೋಟಿ ಶತ ಸಂಖ್ಯೆಗಳಲ್ಲಿ ಮಹಾ ಘನ ಧನವನ್ನು ಅಮೇಯಾತ್ಮ ಪಾಂಡವನ ಮೇಲೆ ಮಳೆಯಂತೆ ಸುರಿಸಿದನು. ಇಂದ್ರಪ್ರಸ್ಥಕ್ಕೆ ಹಿಂದಿರಗಿದ

ಭೀಮಪರಾಕ್ರಮಿ ಭೀಮನು ಆ ಧನವನ್ನು ಧರ್ಮರಾಜನಿಗೆ ನಿವೇದಿಸಿದನು.

## ಸಹದೇವನ ದಕ್ಷಿಣ ದಿಗ್ವಿಜಯ

ಹಾಗೆಯೇ ಸಹದೇವನೂ ಕೂಡ ಧರ್ಮರಾಜನಿಂದ ಗೌರವಿಸಲ್ಪಟ್ಟು ಮಹಾಸೇನೆಯೊಂದಿಗೆ ದಕ್ಷಿಣ ದಿಕ್ಕಿಗೆ ಪ್ರಯಾಣಿಸಿದನು. ಮೊದಲು ಪ್ರಭುವು ಶೂರಸೇನನ ಸಂಪೂರ್ಣ ರಾಜ್ಯವನ್ನು ಜಯಿಸಿದನು. ಮತ್ತು ಆ ಕೌರವ್ಯನು ಬಲಿ ಮತ್ಸ್ಯ ರಾಜನನ್ನು ಬಲವಂತವಾಗಿ ವಶಪಡಿಸಿಕೊಂಡನು. ಮಹಾಯುದ್ಧದಲ್ಲಿ ಅಧಿರಾಜಾಧಿಪ ದಂತವಕ್ತ್ರನನ್ನು ಗೆದ್ದು ಕರದನನ್ನಾಗಿ ಮಾಡಿ ತನ್ನ ರಾಜ್ಯದೊಡನೆ ಸೇರಿಸಿಕೊಂಡನು. ಅವನು ನರಾಧಿಪ ಸುಕುಮಾರ, ಸುಮಿತ್ರರನ್ನು ವಶಪಡೆಸಿಕೊಂಡು ಪಶ್ಚಿಮ ಮತ್ಸ್ಯರನ್ನೂ ಪಟಚ್ಚರನ್ನೂ ಜಯಿಸಿದನು. ವೇಗದಲ್ಲಿ ನಿಷಧಭೂಮಿಯನ್ನೂ, ಪರ್ವತಪ್ರವರ ಗೋಶೃಂಗವನ್ನೂ, ಧೀಮಂತ ಪಾರ್ಥಿವ ಶ್ರೇಣಿಮಂತನನ್ನೂ ಜಯಿಸಿದನು. ನವರಾಷ್ಟ್ರವನ್ನು ಗೆದ್ದು ಕುಂತಿಭೋಜನ ಬಳಿ ಬರಲು ಅವನು ಪ್ರೀತಿಪೂರ್ವಕವಾಗಿ ಶಾಸನವನ್ನು ಸ್ವೀಕರಿಸಿದನು. ಅನಂತರ ಚರ್ಮಣ್ವತೀ ತೀರದಲ್ಲಿ ಹಿಂದೆ ವಾಸುದೇವನಿಂದ ಉಳಿಸಲಟ್ಟ ನೃಪ ಜಂಭಕನ ಮಗನನ್ನು ಕಂಡನು. ಅಲ್ಲಿಯೇ ಭೋಜನೊಂದಿಗೆ ಸಂಗ್ರಾಮವನ್ನು ಮಾಡಿ ಅವನ್ನು ಸೋಲಿಸಿ ದಕ್ಷಿಣಾಭಿಮುಖವಾಗಿ ಪ್ರಯಾಣಿಸಿದನು. ಅವರಿಂದ ವಿವಿಧ

ರತ್ನಗಳನ್ನು ಕರವನ್ನಾಗಿ ಪಡೆದು ಅವರೆಲ್ಲರ ಸಹಿತ ನರ್ಮದಾನದಿಯ ಕಡೆ ಹೊರಟನು. ವೀರವಾನ್, ಪ್ರತಾಪವಾನ್ ಅಶ್ವಿನೇಯನು ಮಹಾಸೇನೆಗನ್ನು ಹೊಂದ್ದ ಅವಂತಿಯ ವಿಂದಾನುವಿಂದರನ್ನು ಸಮರದಲ್ಲಿ ಜಯಿಸಿ ಅವರಿಂದ ರತ್ನಗಳನ್ನು ಪಡೆದು ಮಾಹಿಷ್ಮತೀ ಪುರವನ್ನು ಸೇರಿದನು. ಅಲ್ಲಿ ನರರ್ಷಭ ಪಾಂಡವ ಪರವೀರಘ್ನ ತಾಪವಾನ್ ಸಹದೇವನು ಭಗವಾನ್ ಹವ್ಯವಾಹನನು ಸಹಾಯ ನೀಡಿದ ರಾಜ ನೀಲನೊಂದಿಗೆ ಸೈನ್ಯಕ್ಷಯಕರ, ತನ್ನ ಪ್ರಾಣಕ್ಕೇ ಸಂಶಯತರುವಂಥಹ ಯುದ್ಧವನ್ನು ನಡೆಸಿದನು. ಸಹದೇವನ ಸೇನೆಯಲ್ಲಿ ಕುದುರೆಗಳು, ರಥಗಳು, ಆನೆಗಳು, ಸೈನಿಕರು, ಕವಚಗಳು ಇದ್ದಕ್ಕಿದ್ದ ಹಾಗೆ ಬೆಂಕಿ ಹಿಡಿಯುತ್ತಿರುವುದು ಕಂಡುಬಂದಿತು. ಆಗ ಕುರುನಂದನನು ತುಂಬಾ ಸಂಭ್ರಾಂತ ಮನಸ್ಕನಾದನು ಮತ್ತು ಅದಕ್ಕೆ ಪ್ರತ್ಯುತ್ತರವನ್ನು ಕೊಡಲು ಅಸಮರ್ಥನಾದನು.

ಅಲ್ಲಿ ಮಾಹಿಷ್ಮತೀವಾಸಿ ಭಗವಾನ್ ಹವ್ಯವಾಹನನು ಹಿಂದೆ ಪಾರದಾರಿಕೆಗೋಸ್ಕರ ಬಂಧಿಯಾಗಿದ್ದನು. ಆಗ ಬ್ರಾಹ್ಮಣರೂಪದಲ್ಲಿ ಕದ್ದು ನಡೆಯುತ್ತಿದ್ದ ಅವನನ್ನು ಹಿಂದಿನ ರಾಜ ನೀಲನ ಮುಂದೆ ಕರೆದೊಯ್ಯಲಾಯಿತು. ಧಾರ್ಮಿಕ ರಾಜನು ಯಥಾಶಾಸ್ತ್ರವಾಗಿ ದಂಡಿಸಲು ಕೋಪದಿಂದ ಭಗವಾನ್ ಹವ್ಯವಾಹನನು ಉರಿದೆದ್ದನು. ಇದನ್ನು ನೋಡಿ ವಿಸ್ಮಿತನಾದ ರಾಜನು ಆ ಕವಿಗೆ ಶಿರಸಾ

ನಮಸ್ಕರಿಸಲು ಆ ವಿಭಾವಸುವು ರಾಜನಿಗೆ ಕರುಣೆತೋರಿದನು. ಸ್ವಿಷ್ಟಕೃತ್ತಮನು ನೃಪನಿಗೆ ವರದಿಂದ ತೃಪ್ತಿಗೊಳಿಸಲು ಮಹೀಪತಿಯು ತನ್ನ ಸೈನ್ಯಕ್ಕೆ ಅಭಯವನ್ನು ಬೇಡಿದನು. ಅಂದಿನಿಂದ ಅಜ್ಞಾನದಿಂದ ನೃಪರು ಆ ಪುರಿಯನ್ನು ಬಲವಂತವಾಗಿ ಜಯಿಸಲು ಪ್ರಯತ್ನಿಸಿದರೆ ಅಲ್ಲಿಯೇ ವಹ್ನಿಯಿಂದ ಸುಟ್ಟುಹೋಗುತ್ತಿದ್ದರು. ಅದಕ್ಕೂ ಮೊದಲು ಮಾಹಿಷ್ಮತಿಯ ಸ್ತ್ರೀಯರನ್ನು ಹಿಡಿದಿಟ್ಟಿರುತ್ತಿದ್ದರು. ಆಗ ಅಗ್ನಿಯು ಅವರನ್ನು ಬೇರೆಯಾಗಿ ಇಡಬಾರದು ಯಾಕೆಂದರೆ ನಾರಿಯರು ಸ್ವತಂತ್ರರು ಮತ್ತು ತಮಗಿಷ್ಟಬಂದಹಾಗೆ ನಡೆದುಕೊಳ್ಳಬಹುದು ಎಂದು ಸ್ತ್ರೀಯರಿಗೆ ವರವನ್ನಿತ್ತನು. ಅಂದಿನಿಂದ ರಾಜರು ಆ ರಾಷ್ಟ್ರವನ್ನು ಅಗ್ನಿಯ ಭಯದಿಂದ ಸರ್ವದಾ ವರ್ಜಿಸಿದ್ದರು.

ಭಯಾರ್ದಿತ ಸೇನೆಯನ್ನು ನೋಡಿ ಧರ್ಮಾತ್ಮ ಸಹದೇವನು ಅಗ್ನಿಯಿಂದ ಸುತ್ತುವರೆಯಲ್ಪಟ್ಟ ಗಿರಿಯಂತೆ ನಡುಗಿದನು. ನೀರನ್ನು ಮುಟ್ಟಿ ಶುಚಿರ್ಭೂತನಾಗಿ ಅವನು ಪಾವಕನನ್ನುದ್ದೇಶಿಸಿ ಹೇಳಿದನು:

> “ನಿನಗಾಗಿಯೇ ಈ ಸಮಾರಂಭವನ್ನು ಕೈಗೊಡಿದ್ದೇವೆ. ಕೃಷ್ಣವರ್ತ್ಮ! ನಿನಗೆ ನಮಸ್ಕಾರ. ನೀನು ದೇವತೆಗಳ ಬಾಯಿ. ಪಾವಕ! ನೀನು ಯಜ್ಞ. ಪಾವನ ಮಾಡುವ ನೀನು ಪಾವಕ! ಹವಿಸ್ಸನ್ನು ಕೊಂಡೊಯ್ಯುವ ವಾಹನ ನೀನು ಹವ್ಯವಾಹನ! ನಿನಗೋಸ್ಕರವೇ ವೇದಗಳು

ಹುಟ್ಟಿರುವುದರಿಂದ ನೀನು ಜಾತವೇದಸ. ಈ ಯಜ್ಞಕ್ಕೆ ವಿಘ್ನವನ್ನು ತಂದೊಡ್ಡುವುದು ನಿನಗೆ ಸರಿಯಲ್ಲ.”

ಭೂಮಿಯ ಮೇಲೆ ಕುಶವನ್ನೇರಿ ಕುಳಿತು ಪುರುಷವ್ಯಾಘ್ರ ಮಾದ್ರೇಯನು ಈ ರೀತಿ ವಿಧಿವತ್ತಾಗಿ ಸ್ತುತಿಸಲು ಪಾವಕನು ಭೀತ ಉದ್ವಿಗ್ನವಾಗಿದ್ದ ಸರ್ವ ಸೇನೆಯ ಎದುರು ಕಾಣಿಸಿಕೊಂಡನು. ಮಹೋದಧಿಯು ಪ್ರವಾಹದ ರೇಖೆಯನ್ನು ಹೇಗೆ ದಾಟುವುದಿಲ್ಲವೋ ಹಾಗೆ ಅವನನ್ನು ದಾಟಿ ಮುಂದುವರೆಯಲಿಲ್ಲ. ಅವನ ಹತ್ತಿರ ಬಂದು ವಹ್ನಿಯು ಕುರುನಂದನ ಮನುಷ್ಯರ ದೇವ ಸಹದೇವನಿಗೆ ಮೆಲ್ಲನೆ ಸಾಂತ್ವಪೂರ್ವಕ ಈ ಮಾತುಗಳನ್ನು ಹೇಳಿದನು.

“ಕೌರವ್ಯ! ಮೇಲೇಳು! ನಿನ್ನನ್ನು ಪರೀಕ್ಷಿಸಲು ನಾನು ಹೀಗೆ ಮಾಡಿದೆ. ನಿನ್ನ ಮತ್ತು ಧರ್ಮಸುತನ ಸರ್ವ ಅಭಿಪ್ರಾಯವನ್ನು ಅರಿತಿದ್ದೇನೆ. ಆದರೂ ರಾಜ ನೀಲನ ಕುಲವಂಶಧರರು ಇರುವವರೆಗೆ ಈ ಪುರವನ್ನು ನಾನು ರಕ್ಷಿಸಬೇಕಾಗಿದೆ. ನಿನ್ನ ಮನಸ್ಸಿನಲ್ಲಿರುವ ಆಸೆಯಂತೆ ನಡೆಸಿಕೊಡುತ್ತೇನೆ.”

ಆಗ ಪುರುಷರ್ಷಭ ಮಾದ್ರೇಯನು ಸಂತೋಷಗೊಂಡು ಎದ್ದುನಿಂತು ಅಂಜಲೀ ಬದ್ಧನಾಗಿ ತಲೆಬಾಗಿ ಪಾವಕನನ್ನು ಪೂಜಿಸಿದನು. ಪಾವಕನು ಹಿಂದೆಸರಿಯಲು ರಾಜ ನೀಲನು ಆಗಮಿಸಿ, ಯೋದ್ಧರ

ನಾಯಕ ನರವ್ಯಾಘ್ರ ಸಹದೇವನನ್ನು ಸತ್ಕರಿಸಿ ಸ್ವಾಗತಿಸಿದನು. ಅವನ ಸತ್ಕಾರವನ್ನು ಸ್ವೀಕರಿಸಿ ಅವನನ್ನು ಕರನೀಡುವವನನ್ನಾಗಿ ಮಾಡಿದನು. ನಂತರ ವಿಜಯೀ ಮಾದ್ರೀಸುತನು ದಕ್ಷಿಣ ದಿಕ್ಕಿನಲ್ಲಿ ಮುಂದುವರೆದನು. ಆ ಮಹಾಬಾಹುವು ಅಮಿತೌಜಸ ತ್ರಿಪುರ ರಾಜನನ್ನು ವಶಪಡಿಸಿಕೊಂಡು ಬೇಗನೆ ಪೋತನೇರನನ್ನು ಜಯಿಸಿದನು. ಅನಂತರ ಆ ಮಹಾಬಾಹುವು ಕೌಶಿಕನು ಆಚಾರ್ಯನಾಗಿದ್ದ ಸುರಾಷ್ಟ್ರಾಧಿಪತಿ ಆಹೃತಿಯನ್ನು ಮಹಾ ಪ್ರಯತ್ನದಿಂದ ವಶಪಡೆಸಿಕೊಂಡನು. ಸುರಾಷ್ಟ್ರದೇಶದಲ್ಲಿದ್ದಾಗ ಭೋಜಕಟದಲ್ಲಿದ್ದ ಧೀಮಂತ ಧರ್ಮಾತ್ಮ ಸಾಕ್ಷಾತ್ ಇಂದ್ರನ ಸಖ ಭೀಷ್ಮಕ ರಾಜ ರುಕ್ಮಿಣನಿಗೆ ರಾಯಭಾರಿಯನ್ನು ಕಳುಹಿಸಿದನು. ಮಗನೊಂದಿಗೆ ಅವನು ಮಹಾಬಾಹು ವಾಸುದೇವನನ್ನು ಗಮನಿಸಿ ಪ್ರೀತಿಪೂರ್ವಕವಾಗಿ ಅವನ ಶಾಸನವನ್ನು ಸ್ವೀಕರಿಸಿದನು. ರತ್ನಗಳನ್ನು ಪಡೆದು ಅಲ್ಲಿಂದ ಮಹಾಬಲ ಯುಧಾಂಪತಿಯು ಪುನಃ ಹೊರಟು ಶೂರ್ಪರಕ ಗಣ ಮತ್ತು ಉಪಕೃತ ದೇಶಗಳನ್ನು ಹಾಗೂ ದಂಡಕರನ್ನು ವಶಪಡೆಸಿಕೊಂಡನು. ಆ ಮಹಾಮತಿಯು ಸಾಗರದ್ವೀಪವಾಸಿ ಮ್ಲೇಚ್ಛಯೋನಿಜ ನೃಪತಿಗಳನ್ನು, ನಿಷಾದರನ್ನೂ ಕರ್ಣಪ್ರಾವರಣರನ್ನೂ, ರಾಕ್ಷಸ ಯೋನಿಯ ಕಾಲಮುಖರೆಂಬ ಹೆಸರಿನ ನರರನ್ನೂ, ಕೋಲ್ಲಗಿರಿ ಮತ್ತು ಮುರಚೀಪತ್ತನ, ಹಾಗೂ ತಾಮ್ರಾಹ್ವಯ ದ್ವೀಪವನ್ನೂ, ರಾಮಕ ಎನ್ನುವ ಪರ್ವತವನ್ನೂ, ತಿಮಿಂಗಿಲದ ನೃಪತಿಯನ್ನೂ ವಶಪಡೆಸಿಕೊಂಡನು. ಕೇವಲ

ವನವಾಸಿಗಳಾದ ಒಂದೇ ಕಾಲಿನ ಪುರುಷರನ್ನು, ಸಂಜಯಂತೀ ನಗರವನ್ನು, ಪಿಚ್ಛಂಡರನ್ನು, ಮತ್ತು ಕರಹಾಟಕರನ್ನು ಕೇವಲ ದೂತರ ಮೂಲಕ ವಶಪಡೆಸಿಕೊಂಡು ಕಪ್ಪ ಕೊಡುವವರನ್ನಾಗಿ ಮಾಡಿದನು. ಅದೇರೀತಿ ದೂತರ ಮೂಲಕ ಪಾಂಡ್ಯರನ್ನು, ದ್ರವಿಡರನ್ನು, ಚೋಡ್ರ ಕೇರಳೀಯರ ಸಹಿತ ಆಂಧ್ರರನ್ನು, ತಲವರನ್ನು, ಕಲಿಂಗರನ್ನು, ಊಷ್ಟ್ರಕರ್ಣಿಕರನ್ನು, ಅಂತಾಖೀಯರನ್ನು ರೋಮನರನ್ನೂ ಮತ್ತು ಯವನರ ಪುರವನ್ನು ವಶ ಪಡೆಸಿಕೊಂಡು ಕಪ್ಪವನ್ನು ಕೊಡುವವರನ್ನಾಗಿ ಮಾಡಿದನು. ಅನಂತರ ಅರಿಂದಮ ಧೀಮಾನ್ ಮಾದ್ರವತೀಸುತನು ಭರೂಕಚ್ಛಕ್ಕೆ ಹೋಗಿ ಪೌಲಸ್ತ್ಯ, ಮಹಾತ್ಮ, ಧರ್ಮಾತ್ಮ ವಿಭೀಷಣನಿಗೆ ಪ್ರೀತಿಪೂರ್ವಕ ದೂತರನ್ನು ಕಳುಹಿಸಿದನು. ಅವನು ಶಾಸನವನ್ನು  ಪ್ರೀತಿಪೂರ್ವಕವಾಗಿ ಸ್ವೀಕರಿಸಿ, ಆ ಧೀಮಂತನು ಕಾಲಕೃತ ಪ್ರಭುವಿಗೆ ಒಪ್ಪಿಗೆಯನ್ನಿತ್ತನು. ಅವನು ವಿವಿಧ ರತ್ನಗಳನ್ನೂ, ಚಂದನ, ಅಗರು, ಪ್ರಮುಖ ದಿವ್ಯಾಭರಣಗಳನ್ನೂ ಕಳುಹಿಸಿಕೊಟ್ಟನು. ಈ ರೀತಿ ಸಾಂತ್ವನದಿಂದ ಮತ್ತು ವಿಜಯದಿಂದ ಬೇಗನೆ ಪಾರ್ಥಿವರನ್ನು ಕರದರನ್ನಾಗಿಮಾಡಿ ಆ ಅರಿಂದಮ ಧೀಮಾನ್, ಪ್ರತಾಪವಾನ್ ಸಹದೇವನು ಬೆಲೆಬಾಳುವ ವಸ್ತ್ರಗಳನ್ನೂ, ಮಣಿ ಮಹಾಧನಗಳನ್ನು ಪಡೆದು ಹಿಂದಿರುಗಿದನು. ಅವೆಲ್ಲವನ್ನೂ ಧರ್ಮರಾಜನಿಗೆ ನಿವೇದಿಸಿ ಅವನು ಕೃತಕರ್ಮನಾಗಿ ಸುಖದಿಂದ ವಾಸಿಸಿದನು.

## ನಕುಲನ ಪಶ್ಚಿಮ ದಿಗ್ವಿಜಯ

ಖಾಂಡವಪ್ರಸದಿಂದ ಹೊರಟು ಪಶ್ಚಿಮ ದಿಶಾಭಿಮುಖವಾಗಿ ಮಹಾ ಸೇನೆಯೊಂದಿಗೆ ಯೋಧರ ಮಹಾ ಸಿಂಹನಾದ ಗರ್ಜನೆಗಳು ಮತ್ತು ರಥವೇಗದ ನಿನಾದದಿಂದ ವಸುಧೆಯನ್ನೇ ಕಂಪಿಸುತ್ತಾ ಆ ಮತಿವಂತ ನಕುಲನು ಹೊರಟನು. ಮೊದಲು ಬಹುಧನಯುಕ್ತ ಗೋ, ಅಶ್ವ ಧನ ಧಾನ್ಯಯುಕ್ತ, ಕಾರ್ತಿಕೇಯನ ಅಚ್ಚುಮೆಚ್ಚಿನ ರೋಹೀತಕವನ್ನು ತಲುಪಿದನು. ಅಲ್ಲಿ ಶೂರ ಮತ್ತಮಯೂರಕರೊಂದಿಗೆ ನಡೆದ ಮಹಾ ಯುದ್ಧದಲ್ಲಿ ಮಹಾದ್ಯುತಿಯು ಮರುಭೂಮಿ ರಾಜ್ಯ ಮತ್ತು ಧನ್ಯಸಮೃದ್ಧ ಶೈರೀಷಕ - ಮಹೇಚ್ಛಗಳನ್ನು, ಶಿಬಿಗನ್ನು, ತ್ರಿಗರ್ತರನ್ನು, ಅಂಬಷ್ಠರನ್ನು, ಮಾಲವಾನರನ್ನು, ಪಂಚಕರ್ಪಟರನ್ನು, ಮಧ್ಯಮಿಕರನ್ನು ಮತ್ತು ವಾಟಧಾನ ಬ್ರಾಹ್ಮಣರನ್ನು ವಶಪಡೆಸಿಕೊಂಡನು. ಅಲ್ಲಿಯೇ ಸುತ್ತುವರೆದು ಪುಷ್ಕರಾರಣ್ಯದಲ್ಲಿ ವಾಸಿಸುತ್ತಿದ್ದ ಉತ್ಸವಸಂಕೇತಕ ಗಣಗಳನ್ನು, ಸಿಂಧುನದೀತೀರದಲ್ಲಿ ವಾಸಿಸುತ್ತಿದ್ದ ವುಹಾಬಲಶಾಲಿ ಗ್ರಾಮಣೀಯರನ್ನು, ಸರಸ್ವತೀ ತೀರದಲ್ಲಿ ವಾಸಿಸುತ್ತಿದ್ದ, ಮೀನಿಂದಲೇ ಜೀವಿಸುತಿದ್ದ  ಮತ್ತು ಪರ್ವತವಾಸಿ ಶೂದ್ರ ಮತ್ತು ಅಭೀರ ಗಣಗಳನ್ನೂ, ಐದು ನದಿ ಪ್ರದೇಶವೆಲ್ಲವನ್ನೂ, ಪಶ್ಚಿಮ ಪರ್ಯಟವನ್ನು, ಉತ್ತರ ಜ್ಯೋತಿಕವನ್ನು, ವೃಂದಾಟಕ ಪುರವನ್ನು, ಮತ್ತು ದ್ವಾರಪಾಲ, ಪಶ್ಚಿಮದ ರಾಜರಾದ ರಮಟರು, ಹಾರಣರು ಮತ್ತು ಎಲ್ಲರನ್ನೂ

ಮಹಾದ್ಯುತಿ ಪುರುಷರ್ಷಭ ಪಾಂಡವನು ಸೋಲಿಸಿ, ವಶಪಡೆಸಿಕೊಂಡು ಶಾಸನವನ್ನು ಸ್ಥಾಪಿಸಿದನು. ಅಲ್ಲಿ ಇರುವಾಗ ವಿಜಯಿಯು ವಾಸುದೇವನಿಗೆ ಸಂದೇಶವನ್ನು ಕಳುಹಿಸಲು ಅವನು ಅಲ್ಲಿಯ ಹತ್ತು ರಾಜ್ಯಗಳೊಡನೆ ಶಾಸನವನ್ನು ಸ್ವೀಕರಿಸಿದನು. ಅನಂತರ ಮದ್ರದೇಶದ ರಾಜಧಾನಿ ಶಾಕಲವನ್ನು ಸೇರಿ ಅಲ್ಲಿ ಆ ಬಲಿಯು ಸೋದರಮಾವ ಶಲ್ಯನನ್ನು ಪ್ರೀತಿಪೂರ್ವಕವಾಗಿ ವಶಪಡಿಸಿಕೊಂಡನು. ಆ ಸತ್ಕಾರಾರ್ಹ ಯುಧಾಂಪತಿಯು ರಾಜನಿಂದ ಸತ್ಕೃತನಾಗಿ ಬಹಳಷ್ಟು ರತ್ನಗಳನ್ನು ಪಡೆದು ಹೊರಟನು. ಅನಂತರ ಅವನು ಸಾಗರದ ದಂಡೆಯಲ್ಲಿದ್ದ ಪರಮದಾರುಣ ಮ್ಲೇಚ್ಛರನ್ನು, ಪಹ್ಲವರನ್ನು ಮತ್ತು ಬರ್ಬರರನ್ನು ಎಲ್ಲರನ್ನೂ ವಶಪಡಿಸಿಕೊಂಡನು. ಪಾರ್ಥಿವರನ್ನು ವಶಪಡಿಸಿಕೊಂಡು ರತ್ನಗಳನ್ನು ಗಳಿಸಿದ ನಂತರ ಚಿತ್ರಮಾರ್ಗವಿದು ನರಶ್ರೇಷ್ಠ ನಕುಲನು ಹಿಂದಿರುಗಿದನು. ಆ ಮಹಾತ್ಮನು ಸಂಗ್ರಹಿಸಿದ್ದ ಮಹಾಧನವನ್ನು ಹತ್ತುಸಾವಿರ ಒಂಟೆಗಳು ಬಹಳ ಕಷ್ಟಪಟ್ಟು ಹೊತ್ತು ತಂದವು. ಅನಂತರ ಶ್ರೀಮಾನ್ ಮಾದ್ರೀಸುತನು ಇಂದ್ರಪ್ರಸ್ಥಕ್ಕೆ ಹೋಗಿ ವೀರ ಯುಧಿಷ್ಠಿರನನ್ನು ಭೇಟಿಯಾಗಿ ಅವನಿಗೆ ಧನವನ್ನು ಅರ್ಪಿಸಿದನು. ಹೀಗೆ ಭರತರ್ಷಭ ನಕುಲನು ವಾಸುದೇವನಿಂದ ಗೆಲ್ಲಲ್ಪಟ್ಟಿದ್ದ ವರುಣನಿಂದ ಪಾಲಿತ ಪಶ್ಚಿಮ ದಿಕ್ಕನ್ನು ಗೆದ್ದನು.

# ರಾಜಸೂಯ: ಶಿಶುಪಾಲ ವಧೆ

## ರಾಜಸೂಯ ದೀಕ್ಷೆ

ಧರ್ಮರಾಜನ ರಕ್ಷಣೆ, ಸತ್ಯಪರಿಪಾಲನೆ, ಮತ್ತು ಶತ್ರುಗಳ ಮರ್ದನದಿಂದ ಪ್ರಜೆಗಳು ಸ್ವಕರ್ಮನಿರತರಾಗಿದ್ದರು. ಆ ಬಲಶಾಲಿಗಳ ಒಳ್ಳೆಯ ದಾನ ಧರ್ಮಗಳಿಂದೊಡಗೂಡಿದ ಅನುಶಾಸನದಿಂದ ಸಕಾಲದಲ್ಲಿ ಸಾಕಷ್ಟು ಮಳೆಸುರಿದು, ಗ್ರಾಮೀಣ ಪ್ರದೇಶಗಳು ಅಭಿವೃದ್ಧಿ ಹೊಂದಿದವು. ಗೋರಕ್ಷಣೆ, ಕೃಷಿ, ವಾಣಿಜ್ಯ ಎಲ್ಲ ಉದ್ದಿಮೆಗಳೂ ಅಭಿವೃದ್ಧಿ ಹೊಂದಿದವು. ವಿಶೇಷವಾಗಿ ಇವೆಲ್ಲವೂ ರಾಜಕರ್ಮ ಎಂದು ಜನರು ತಿಳಿದುಕೊಂಡರು. ದಸ್ಯುಗಳಿಂದಾಗಲೀ, ವಂಚಕರಿಂದಾಗಲೀ, ರಾಜವಲ್ಲಭರಿಂದಾಗಲೀ ರಾಜನ ಕುರಿತು ಕೆಟ್ಟ ಮಾತು ಬರುತ್ತಿರಲಿಲ್ಲ. ಬರಗಾಲವಾಗಲೀ, ಅತಿವೃಷ್ಠಿಯಾಗಲೀ, ವ್ಯಾಧಿಗಳಾಗಲೀ, ಬೆಂಕಿಯಾಗಲೀ ದಂಗೆಯಾಗಲೀ ಧರ್ಮನಿಷ್ಠ ಯುಧಿಷ್ಠಿರನಲ್ಲಿ ಸರ್ವಥಾ ಇರಲಿಲ್ಲ. ಏನಾದರೂ ಒಳ್ಳೆಯದನ್ನು ಮಾಡಲಿಕ್ಕೆಂದು, ತಮ್ಮ ಹಾಜರಿಯನ್ನು ಹಾಕಲು ಅಥವಾ ತಾವಾಗಿಯೇ ಕಪ್ಪ ಕೊಡಬೇಕೆಂದು ನೃಪರು ಪುನಃ ಪುನಃ ಬರುತ್ತಿದ್ದರೇ ಹೊರತು ಬೇರೆ ಯಾವ ಕಾರಣಕ್ಕೂ ಬರುತ್ತಿರಲಿಲ್ಲ. ಧರ್ಮದಿಂದ ಸಂಗ್ರಹಿಸಿದ ವಿತ್ತವು ನೂರು ವರ್ಷಗಳಲ್ಲಿಯೂ ಖರ್ಚು ಮಾಡಲಿಕ್ಕಾಗದಷ್ಟು ವೃದ್ಧಿಯಾಯಿತು.

ತನ್ನ ಕೋಶ ಮತ್ತು ಕೋಷ್ಟಗಳ ಪ್ರಮಾಣವನ್ನು ತಿಳಿದ ರಾಜ ಕೌಂತೇಯನು ಯಜ್ಞದ ಕುರಿತು ಮನಸ್ಸುಮಾಡಿದನು. ಅವನ ಎಲ್ಲ ಸುಹೃದಯರೂ ಒಟ್ಟಿಗೆ ಮತ್ತು ಪ್ರತ್ಯೇಕವಾಗಿ

> "ವಿಭೋ! ಯಜ್ಞದ ಸಮಯ ಬಂದಿದೆ. ಅದಕ್ಕೆ ತಕ್ಕುದನ್ನು ಮಾಡು!"

ಎಂದು ಹೇಳಿದರು. ಹೀಗೆ ಅವರು ಮಾತನಾಡಿಕೊಳ್ಳುತ್ತಿರುವಾಗ ಅಲ್ಲಿಗೆ ಋಷಿ, ಪುರಾಣ, ವೇದಾತ್ಮ, ತಿಳಿದವರಿಗೆ ಮಾತ್ರ ಕಾಣಿಸಿಕೊಳ್ಳುವ, ಶ್ರೇಷ್ಠರಲ್ಲಿ ಶ್ರೇಷ್ಠನಾದ, ಜಗತ್ತಿನ ಹುಟ್ಟು ಮತ್ತು ಅಂತ್ಯನಾದ, ಹಿಂದೆ ಆಗಿದ್ದುದರ, ಮುಂದೆ ಆಗುವ ಮತ್ತು ಈಗ ಆಗುತ್ತಿರುವುದಕ್ಕೆ ಒಡೆಯನಾದ, ಕೇಶಿಸೂದನ, ಕೇಶವ, ಸರ್ವ ವೃಷ್ಣಿಗಳಿಗೆ ಕೋಟೆಯಂತಿರುವ, ಕಷ್ಟದಲ್ಲಿರುವವರಿಗೆ ರಕ್ಷಣೆಯನ್ನು ನೀಡುವ ಶತ್ರುಹರ ಹರಿಯು ಆಗಮಿಸಿದನು. ಅನಕದುಂದುಭಿಯನ್ನು ತನ್ನ ಬಲದ ನಿಯಂತ್ರಣಕ್ಕೆ ಇರಿಸಿ ಧರ್ಮರಾಜನಿಗೆ ಬಹಳಷ್ಟು ಸಂಪತ್ತನ್ನು ತೆಗೆದುಕೊಂಡು ಪುರುಷವ್ಯಾಘ್ರ ಮಾಧವನು ಮಹಾ ಸೇನೆಯೊಂದಿಗೆ, ಆ ಅಪರಿಮಿತ ಅಕ್ಷಯ ರತ್ನಗಳ ಸಾಗರವೇ ಉಕ್ಕಿಬಂದಹಾಗೆ ರಥಘೋಷದ ಶಬ್ಧದೊಡನೆ ಆ ಉತ್ತಮ ಪುರವನ್ನು ಪ್ರವೇಶಿಸಿದನು. ಬೆಳಕಿಲ್ಲದಿದ್ದಲ್ಲಿ ಸೂರ್ಯನಿಂದ ಹೇಗೋ ಹಾಗೆ ಮತ್ತು ಗಾಳಿಯಿಲ್ಲದಿದ್ದಲ್ಲಿ ವಾಯುವಿನಿಂದ ಹೇಗೋ ಹಾಗೆ ಭಾರತ ಪುರವು ಕೃಷ್ಣನ ಆಗಮನವನ್ನು ಉತ್ಸಾಹಿಸಿತು.

ಯುಧಿಷ್ಠಿರನು ಸಂತೋಷದಿಂದ ಅವನನ್ನು ಬರಮಾಡಿಕೊಂಡು ಯಥಾವಿಧಿಯಾಗಿ ಸತ್ಕರಿಸಿದನು. ಕುಶಲವನ್ನು ವಿಚಾರಿಸಿ ಸುಖಾಸೀನನಾದನಂತರ ಆ ಪುರುಷರ್ಷಭನು ಧೌಮ್ಯ-ದ್ವೈಪಾಯನರ ಸಮ್ಮುಖದಲ್ಲಿ ಋತ್ವಿಜರು ಮತ್ತು ಭೀಮಾರ್ಜುನರ ಸಹಿತ ಕೃಷ್ಣನಿಗೆ ಹೇಳಿದನು:

> "ಕೃಷ್ಣ! ನಿನ್ನ ಕೃಪೆಯಿಂದ ಸರ್ವ ಪೃಥ್ವಿಯೂ ನನ್ನ ವಶದಲ್ಲಿದೆ. ನಿನ್ನ ಅನುಗ್ರಹದಿಂದ ಬಹಳಷ್ಟು ಧನವನ್ನೂ ಒಟ್ಟುಗೂಡಿಸಿದ್ದೇವೆ. ದೇವಕೀಸುತ! ಮಾಧವ! ಈಗ ನಾನು ಈ ಎಲ್ಲವನ್ನೂ ವಿಧಿವತ್ತಾಗಿ ದ್ವಿಜಾಗ್ರರ ಮೂಲಕ ಹವ್ಯವಾಹಕ್ಕೆ ಉಪಯೋಗಿಸಲು ಬಯಸುತ್ತೇನೆ. ನಿನ್ನೊಂದಿಗೆ ಮತ್ತು ಅನುಜರೊಂದಿಗೆ ನಾನು ಯಾಗಿಸಲು ಬಯಸುತ್ತೇನೆ. ಅದಕ್ಕೆ ಅಪ್ಪಣೆಯನ್ನು ನೀಡಬೇಕು! ನೀನು ನನಗೆ ಇದಕ್ಕೆ ದೀಕ್ಷೆಯನ್ನು ನೀಡು. ನಿನ್ನ ಇಷ್ಟದಂತೆ ಇದು ನಡೆದರೆ ನಾನು ದೋಷವನ್ನು ಹೊಂದುವುದಿಲ್ಲ. ಕೃಷ್ಣ! ನೀನು ಅನುಜ್ಞೆಯನ್ನಿತ್ತರೆ ತಮ್ಮಂದಿರೊಡನೆ ಉತ್ತಮ ಕ್ರತುವನ್ನು ಸಾಧಿಸಬಲ್ಲೆ."

ಅವನ ಬಹು ಗುಣಗಳನ್ನು ವಿಸ್ತರಿಸುತ್ತಾ ಕೃಷ್ಣನು ಉತ್ತರಿಸಿದನು:

> "ರಾಜಶಾರ್ದೂಲ! ನೀನು ಸಾಮ್ರಾಟನಾಗಲು ಅರ್ಹನಾಗಿದ್ದೀಯೆ. ಮಹಾಕ್ರತುವನ್ನೂ ಕೈಗೊಳ್ಳುತ್ತೀಯೆ.

ನೀನು ಅದನ್ನು ಗಳಿಸಿದೆಯಾದರೆ ನಾವು ಕೃತಕೃತ್ಯರಾಗುತ್ತೇವೆ. ನಿನ್ನ ಶ್ರೇಯಸ್ಸಿಗೆ ನಾನು ಬದ್ಧನಾಗಿರುವಾಗ ನಿನಗಿಷ್ಟವಾದ ಯಜ್ಞವನ್ನು ಯಾಜಿಸು. ನನ್ನನ್ನೂ ಈ ಕೆಲಸದಲ್ಲಿ ತೊಡಗಿಸಿಕೋ. ನೀನು ಹೇಳಿದುದೆಲ್ಲವನ್ನೂ ನಾನು ಮಾಡುತ್ತೇನೆ.”

ಯುಧಿಷ್ಠಿರನು ಹೇಳಿದನು:

“ಕೃಷ್ಣ! ನೀನು ನಿನಗಿಷ್ಟಬಂದಹಾಗೆ ನನ್ನೊಡನಿದ್ದೀಯೆಯಾದರೆ ನನ್ನ ಸಂಕಲ್ಪವು ಸಫಲವಾಯಿತು ಮತ್ತು ನನ್ನ ಸಿದ್ಧಿಯೂ ನಿಶ್ಚಯವಾಯಿತು.”

ಹೀಗೆ ಕೃಷ್ಣನಿಂದ ಅನುಮತಿಯನ್ನು ಪಡೆದ ಪಾಂಡವನು ಭ್ರಾತೃಗಳ ಸಹಿತ ರಾಜಸೂಯಕ್ಕೆ ಸಾಧನಗಳ ಏರ್ಪಾಡುಮಾಡಲು ಪ್ರಾರಂಭಿಸಿದನು. ಅರಿನಿಬರ್ಹಣ ಪಾಂಡವನು ಯೋದ್ಧರಲ್ಲಿ ಶ್ರೇಷ್ಠ ಸಹದೇವ ಮತ್ತು ಎಲ್ಲ ಮಂತ್ರಿಗಳಿಗೆ ಆಜ್ಞಾಪಿಸಿದನು:

“ಈ ಕ್ರತುವಿನ ಯಜ್ಞಾಂಗವಾಗಿ ದ್ವಿಜರು ಏನೆಲ್ಲ ಮಂಗಲ ಉಪಕರಣಗಳು ಬೇಕೆಂದು ಹೇಳುತ್ತಾರೋ ಆ ಎಲ್ಲನ್ನೂ ಮತ್ತು ಧೌಮ್ಯನು ಹೇಳುವ ಅಧಿಯಜ್ಞದ ಪದಾರ್ಥಗಳನ್ನೆಲ್ಲವನ್ನೂ ಬೇಗನೇ ಯೋಗ್ಯ ಪುರುಷರು ಯಥಾಕ್ರಮವಾಗಿ ಒಟ್ಟುಗೂಡಿಸಲಿ. ಇಂದ್ರಸೇನ, ವಿಶೋಕ,

ಅರ್ಜುನಸಾರಥಿ ಪುರು ಇವರು ನನ್ನ ಪ್ರೀತಿ ಇಷ್ಟದಂತೆ ಆಹಾರ-ಊಟದ ವ್ಯವಸ್ಥೆಯನ್ನು ವಹಿಸಿಕೊಳ್ಳಬೇಕು. ದ್ವಿಜರಿಗೆ ಪ್ರೀತಿಕರವೂ ಮನೋಹರವೂ ಆದ ಎಲ್ಲ ಬಯಕೆಗಳನ್ನೂ ಪೂರೈಸುವ ರಸಗಂಧಸಮನ್ವಿತ ಆಹಾರವನ್ನು ತರಿಸಿ!”

ಮಹಾತ್ಮ ಧರ್ಮರಾಜನ ಈ ಮಾತುಗಳನ್ನು ಕೇಳಿದ ತಕ್ಷಣವೇ ಯೋದ್ಧರಲ್ಲಿ ಶ್ರೇಷ್ಠ ಸಹದೇವನು ಅವೆಲ್ಲವನ್ನೂ ಏರ್ಪಡಿಸಿದನು. ನಂತರ ದ್ವೈಪಾಯನನು ಸಾಕ್ಷಾತ್ ವೇದಗಳೇ ಮೂರ್ತಿಮತ್ತರಾಗಿದ್ದರೋ ಎನ್ನುವ ಮಹಾಭಾಗ ದ್ವಿಜ ಋತ್ವಿಜರನ್ನು ಕರೆಯಿಸಿಕೊಂಡನು. ಸ್ವಯಂ ಸತ್ಯವತೀಸುತನು ಅದರ ಬ್ರಹ್ಮತ್ವವನ್ನು ವಹಿಸಿಕೊಂಡನು. ಧನಂಜಯರ ಋಷಭ ಸುಸಾಮನು ಸಾಮಗನಾದನು. ಬ್ರಹ್ಮಿಷ್ಠ ಸತ್ತಮ ಯಾಜ್ಞವಲ್ಕ್ಯನು ಅಧ್ವರ್ಯುವಾದನು. ಧೌಮ್ಯನ ಸಹಿತ ವಸುಪುತ್ರ ಪೈಲನು ಹೋತಾರನಾದನು. ವೇದ ವೇದಾಂಗಪಾರಗರಾದ ಇವರ ಶಿಷ್ಯವರ್ಗ ಮತ್ತು ಪುತ್ರರು ಎಲ್ಲರೂ ಹೋತ್ರಗರಾದರು. ವಾಚನ ಪುಣ್ಯಾಹಾದಿಗಳನ್ನು ವಿಧಿವತ್ತಾಗಿ ಪೂರೈಸಿ ಆ ಮಹಾ ದೇವಯಜ್ಞವನ್ನು ಶಾಸ್ತ್ರೋಕ್ತವಾಗಿ ನಿಯೋಜಿಸಿದರು. ಅಪ್ಪಣೆಯ ಮೇರೆಗೆ ಶಿಲ್ಪಿಗಳು ಉಳಿಯಲಿಕ್ಕೆಂದು ದೇವತೆಗಳ ಮನೆಗಳಂತಿರುವ ರತ್ನಗಳಿಂದ ಅಲಂಕೃತ ವಿಶಾಲ ಮನೆಗಳನ್ನು ನಿರ್ಮಿಸಿದರು. ಆಗ

ಕುರುಸತ್ತಮ ರಾಜಸತ್ತಮ ರಾಜನು ತನ್ನ ಸದ್ಯದ ಮಂತ್ರಿ ಸಹದೇವನಿಗೆ ಆಜ್ಞೆಯನ್ನಿತ್ತನು:

> “ಆಮಂತ್ರಣಕ್ಕೆಂದು ನೀನು ವೇಗವಾಗಿ ಹೋಗಬಲ್ಲ ದೂತರನ್ನು ಕಳುಹಿಸು!”

ರಾಜನ ಈ ಮಾತುಗಳನ್ನು ಕೇಳಿದ ಕೂಡಲೇ ದೂತರನ್ನು ಕಳುಹಿಸಿದನು:

> “ರಾಷ್ಟ್ರಗಳನ್ನು, ಬ್ರಾಹ್ಮಣರನ್ನು ಭೂಮಿಪರನ್ನು ಆಮಂತ್ರಿಸಿ! ಗೌರವಕ್ಕೆ ಅರ್ಹ ಎಲ್ಲ ವೈಶ್ಯರನ್ನೂ ಶೂದ್ರರನ್ನೂ ಕರೆದುಕೊಂಡು ಬನ್ನಿ!”

ಪಾಂಡವೇಯನ ಶಾಸನದಂತೆ ಅವರು ಸರ್ವ ಮಹೀಪಾಲರನ್ನೂ ಆಮಂತ್ರಿಸಿದರು. ಇನ್ನೂ ಇತರರಿಗೆ ಆಮಂತ್ರಣಗಳನ್ನು ಕಳುಹಿಸಲಾಯಿತು. ಆ ಸಮಯದಲ್ಲಿ ಯಥಾಕಾಲದಲ್ಲಿ ವಿಪ್ರರು ರಾಜಸೂಯಕ್ಕೆಂದು ಕುಂತೀಪುತ್ರ ಯುಧಿಷ್ಠಿರನಿಗೆ ದೀಕ್ಷೆಯನ್ನು ನೀಡಿದರು. ದೀಕ್ಷಿತನಾದ ನೃಪಶ್ರೇಷ್ಠ ಧರ್ಮಾತ್ಮ ಧರ್ಮರಾಜ ಯುಧಿಷ್ಠಿರನು ಸಹಸ್ರಾರು ವಿಪ್ರರಿಂದ, ಭ್ರಾತೃಗಳಿಂದ, ಬಾಂಧವರಿಂದ, ಮಿತ್ರರಿಂದ, ಸಚಿವರಿಂದ, ನಾನಾ ದೇಶಗಳಿಂದ ಬಂದು ಸೇರಿದ್ದ ಕ್ಷತ್ರಿಯ ಮನುಷ್ಯೇಂದ್ರರಿಂದ, ಅಮಾತ್ಯರಿಂದ, ಸುತ್ತುವರೆಯಲ್ಪಟ್ಟು ಧರ್ಮನೇ ಮೂರ್ತಿಮತ್ತಾಗಿರುವಂತೆ ಯಜ್ಞವೇದಿಕೆಯನ್ನು ಪ್ರವೇಶಿಸಿದನು. ಬೇರೆ ಬೇರೆ ದೇಶಗಳಿಂದ

ಸರ್ವ ವಿಧ್ಯೆಗಳಲ್ಲಿ ನಿಷ್ಣಾತ ವೇದವೇದಾಂಗಪಾರಂಗತ ಬ್ರಾಹ್ಮಣರು ಅಲ್ಲಿಗೆ ಬಂದರು. ಅವರೆಲ್ಲರಿಗೆ ಉಳಿದುಕೊಳ್ಳಲು ಧರ್ಮರಾಜನ ಶಾಸನದಂತೆ ಅವರೊಂದಿಗೆ ಬಂದವರಿಗೂ ಸಾಕಾಗುವಷ್ಟು ಆಹಾರ-ಶಯನಗಳಿಂದ ಸುಸಜ್ಜಿತ, ಸರ್ವ ಋತುಗಳಿಗೆ ಯುಕ್ತ ಸೌಲಭ್ಯಗಳಿಂದ ಕೂಡಿದ ಸಹಸ್ರಾರು ಪ್ರತ್ಯೇಕ ಪ್ರತ್ಯೇಕ ವಸತಿಗೃಹಗಳನ್ನು ಶಿಲ್ಪಿಗಳು ನಿರ್ಮಿಸಿದರು. ಚೆನ್ನಾಗಿ ಸತ್ಕೃತರಾಗಿ ಬ್ರಾಹ್ಮಣರು ಅಲ್ಲಿಯೇ ಕಥೆಗಳನ್ನು ಹೇಳುತ್ತಾ, ನಟನರ್ತಕರನ್ನು ನೋಡುತ್ತಾ ವಾಸಿಸಿದರು. ಸಂತೋಷದಿಂದಿದ್ದ ಆ ಮಹಾತ್ಮ ವಿಪ್ರರ ಊಟಮಾಡುತ್ತಿದ್ದ ಮಾತನಾಡುತ್ತಿದ್ದ ಮಹಾ ಧ್ವನಿಯು ಹಗಲೂ ರಾತ್ರಿ ಕೇಳಿಬರುತ್ತಿತ್ತು.

> “ಇದನ್ನು ಕೊಡಿ! ಕೊಡಿ! ಮತ್ತು ಭೋಜನಮಾಡಿ!
> ಭೋಜನ ಮಾಡಿ!”

ಈ ಪ್ರಕಾರದ ಮಾತುಗಳು ಅಲ್ಲಿ ನಿತ್ಯವೂ ಕೇಳಿಬರುತ್ತಿತ್ತು. ಧರ್ಮರಾಜನು ಅವರಿಗೆ ಪ್ರತ್ಯೇಕವಾಗಿ ಒಂದು ಲಕ್ಷ ಗೋವುಗಳನ್ನು, ಶಯನಗಳನ್ನು, ಚಿನ್ನ ಮತ್ತು ದಾಸಿಯರನ್ನು ನೀಡಿದನು. ಈ ರೀತಿ ಸ್ವರ್ಗದಲ್ಲಿ ಶಕ್ರನು ಹೇಗೋ ಹಾಗೆ ಪೃಥ್ವಿಯಲ್ಲಿ ಏಕೈಕ ವೀರ ಮಹಾತ್ಮ ಪಾಂಡವನ ಯಜ್ಞವು ಪ್ರಾರಂಭಗೊಂಡಿತು.

## ನಿಮಂತ್ರಿತ ರಾಜರ ಆಗಮನ

ಆಗ ರಾಜ ಯುಧಿಷ್ಠಿರನು ಪಾಂಡವ ನಕುಲನನ್ನು ಹಸ್ತಿನಾಪುರಕ್ಕೆ ಭರತರ್ಷಭ ಭೀಷ್ಮ, ದ್ರೋಣ, ಧೃತರಾಷ್ಟ್ರ, ಕೃಪ, ತಮ್ಮಂದಿರು, ಮತ್ತು ಯುಧಿಷ್ಠಿರನಲ್ಲಿ ಅನುರಕ್ತರಾಗಿದ್ದ ಎಲ್ಲರನ್ನೂ ಆಹ್ವಾನಿಸಲು ಕಳುಹಿಸಿದನು. ಸಮಿತಿಂಜಯ ಪಾಂಡವ ನಕುಲನು ಹಸ್ತಿನಾಪುರಕ್ಕೆ ಹೋಗಿ ಭೀಷ್ಮ ಮತ್ತು ಧೃತರಾಷ್ಟ್ರರನ್ನು ಆಮಂತ್ರಿಸಿದನು. ಧರ್ಮರಾಜನ ಯಜ್ಞದ ಕುರಿತು ಕೇಳಿ ಆ ಯಜ್ಞವಿದರು ಬ್ರಾಹ್ಮಣರನ್ನು ಮುಂದಿರಿಸಿಕೊಂಡು ಪ್ರೀತಿಮನಸ್ಕರಾಗಿ ಯಜ್ಞಕ್ಕೆಂದು ಹೊರಟರು. ಇನ್ನೂ ಇತರ ನೂರಾರು ಸಂತುಷ್ಟ ಮನಸ್ಕ ರಾಜರು ಧರ್ಮರಾಜನ ಸಭೆಯನ್ನು ಮತ್ತು ಆ ಪಾಂಡವನನ್ನು ನೋಡುವ ಆಸೆಯಿಂದ ಬಂದರು. ಹೆಚ್ಚಿನ ಮತ್ತು ವಿವಿಧ ರತ್ನಗಳನ್ನು ತೆಗೆದುಕೊಂಡು ಎಲ್ಲ ದಿಕ್ಕುಗಳಿಂದಲೂ ಪಾರ್ಥಿವರು ಅಲ್ಲಿ ಸೇರಿದ್ದರು. ಧೃತರಾಷ್ಟ್ರ, ಭೀಷ್ಮ, ಮಹಾಮತಿ ವಿದುರ, ದುರ್ಯೋಧನನ ನಾಯಕತ್ವದಲ್ಲಿ ಎಲ್ಲ ಸಹೋದರರು, ಆಚಾರ್ಯನೇ ಮೊದಲಾದ ನೃಪರು - ಗಾಂಧಾರರಾಜ ಸುಬಲ, ಮಹಾಬಲಿ ಶಕುನಿ, ಅಚಲ ವೃಷಕ, ರಥಿಗಳಲ್ಲಿ ಶ್ರೇಷ್ಠ ಕರ್ಣ, ಋತ, ಮದ್ರರಾಜ ಶಲ್ಯ, ಮಹಾರಥಿ ಬಾಹ್ಲೀಕ, ಕೌರವ್ಯ ಸೋಮದತ್ತ, ಭೂರಿ ಭೂರಿಶ್ರವ, ಶಲ, ಅಶ್ವತ್ಥಾಮ, ಕೃಪ, ದ್ರೋಣ, ಸೈಂಧವ ಜಯದ್ರಥ - ಎಲ್ಲರನ್ನೂ ಸತ್ಕರಿಸಿ ಬರಮಾಡಿಕೊಳ್ಳಲಾಯಿತು. ಪುತ್ರನೊಂದಿಗೆ ಯಜ್ಞಸೇನ, ವಸುಧಾಧಿಪ ಶಾಲ್ವ, ಪ್ರಾಗ್ಜ್ಯೋತಿಷದ ನೃಪತಿ ಮಹಾಯಶ ಭಗದತ್ತ, ಇವರೆಲ್ಲರ ಜೊತೆ ಸಾಗರದಾಚೆ

ವಾಸಿಸುತ್ತಿದ್ದ ಮ್ಲೇಚ್ಛರು, ಪರ್ವತ ದೇಶಗಳ ರಾಜರು, ರಾಜ ಬೃಹದ್ಬಲ, ವಾಸುದೇವ ಪೌಂಡ್ರಕ, ವಂಗ, ಕಲಿಂಗ, ಆಕರ್ಷ, ಕುಂತಲ, ವಾನವಾಸ್ಯರು, ಆಂಧ್ರಕರು, ದ್ರವಿಡರು, ಸಿಂಹಲರು, ಕಾಶ್ಮೀರ ರಾಜ, ಮಹಾತೇಜ ಕುಂತಿಭೋಜ, ಸುಮಹಾಬಲ ಸುಹ್ಮ, ಇತರ ಎಲ್ಲ ಶೂರ ಬಾಹ್ಲೀಕ ರಾಜರು, ಪುತ್ರರೊಂದಿಗೆ ವಿರಾಟ, ಮಹಾರಥಿ ಮಾಚೇಲ್ಲ, ಪುತ್ರನೊಂದಿಗೆ ಮಹಾವೀರ್ಯ ಸಂಗ್ರಾಮದುರ್ಮದ ಶಿಶುಪಾಲ ಹೀಗೆ ರಾಜರು, ರಾಜಪುತ್ರರು ಮತ್ತು ನಾನಾ ಜನಪದೇಶ್ವರರು ಪಾಂಡವನ ಯಜ್ಞಕ್ಕೆ ಬಂದರು. ರಾಮ, ಅನಿರುದ್ಧ, ಬಭ್ರು, ಸಾರಣ, ಗದ, ಪ್ರದ್ಯುಮ್ನ, ಸಾಂಬ, ವೀರ್ಯವಾನ್ ಚಾರುದೇಷ್ಣ, ಉಲ್ಮುಕ, ನಿಷಠ, ವೀರ ಪ್ರಾದ್ಯುಮ್ನ, ಮತ್ತು ಇತರ ಸರ್ವ ಮಹಾರಥಿ ವೃಷ್ಣಿಗಳು ಬಂದು ಸೇರಿದರು. ಇವರು ಮತ್ತು ಇನ್ನೂ ಇತರ ಬಹಳಷ್ಟು ಮಧ್ಯದೇಶದ ರಾಜರು ಪಾಂಡುಪುತ್ರನ ರಾಜಸೂಯ ಮಹಾಕ್ರತುವಿಗೆ ಬಂದರು.

ಧರ್ಮರಾಜನ ಶಾಸನದಂತೆ ಅವರಿಗೆ ಬಹಳ ಕೋಣೆಗಳಿರುವ, ಕೊಳ ಮತ್ತು ವೃಕ್ಷಗಳಿಂದೊಡಗೂಡಿದ ಸುಂದರ ವಸತಿಗೃಹಗಳನ್ನು ನೀಡಲಾಯಿತು. ಧರ್ಮರಾಜನು ಅವರಿಗೆ ಅನುತ್ತಮ ಪೂಜೆಯನ್ನಿತ್ತು ಸತ್ಕರಿಸಿದ ನಂತರ ಆ ನೃಪರು ಕೈಲಾಸಶಿಖರದಷ್ಟು ಎತ್ತರವಾದ, ಮನೋಜ್ಞ, ದ್ರವ್ಯಭೂಷಿತ, ಎಲ್ಲಕಡೆಯಿಂದಲೂ ಎತ್ತರ ಪ್ರಾಕಾರಗಳಿಂದ ಸುತ್ತುವರೆಯಲ್ಪಟ್ಟ ಬಲಿಷ್ಟ ಮತ್ತು ಸುಂದರ

ಆವಾಸಗಳಿಗೆ ತೆರಳಿದರು. ಜಾಲಿಗಳನ್ನು ಚಿನ್ನದಲ್ಲಿ ಮಾಡಲಾಗಿತ್ತು, ನೆಲವನ್ನು ಮಣಿಗಳಿಂದ ಸಿಂಗರಿಸಲಾಗಿತ್ತು, ಮೆಟ್ಟಿಲುಗಳು ಸುಖಕರವಾಗಿದ್ದವು ಮತ್ತು ಆಸನಗಳು ಎತ್ತರದಲ್ಲಿದ್ದವು. ನಿವಾಸಗಳನ್ನು ಹೂಗುಚ್ಛ ಮತ್ತು ಮಾಲೆಗಳಿಂದ ಸುಹಾಸಿತ ಗಂಧಗಳಿಂದ ಸಿಂಗರಿಸಲಾಗಿತ್ತು, ಹಂಸದ ಗರಿಗಳಿಂದ ಮಾಡಿದ ಮೆತ್ತನೆಯ ಹಾಸಿಗೆಗಳಿಂದ ಕೂಡಿದ್ದವು, ಮತ್ತು ನೋಡಲು ವಿಶಾಲವಾಗಿಯೂ ಸುಂದರವಾಗಿಯೂ ಇದ್ದವು. ಅವುಗಳು ಇಕ್ಕಟ್ಟಾಗಿರಲಿಲ್ಲ ಮತ್ತು ದ್ವಾರಗಳು ಸಾಕಷ್ಟು ವಿಶಾಲವಾಗಿದ್ದು ಸಿಂಗರಿಸಲ್ಪಟ್ಟಿದ್ದವು. ಅವುಗಳ ಕೋಳುಗಳನ್ನು ಬಹುಧಾತುಗಳಿಂದ ಮಾಡಿದ್ದರು ಮತ್ತು ಹಿಮಾಲಯದ ಶಿಖರಗಳಂತೆ ತೋರುತ್ತಿದ್ದವು. ವಿಶ್ರಾಂತಿಯನ್ನು ಪಡೆದ ಭೂಮಿಪರು ಭೂರಿದಕ್ಷಿಣೆಗಳನ್ನು ಪಡೆದ ಸದಸ್ಯರಿಂದ ಆವೃತ ಧರ್ಮರಾಜ ಯುಧಿಷ್ಠಿರನನ್ನು ನೋಡಿದರು. ಪಾರ್ಥಿವರು ಮತ್ತು ಮಹಾತ್ಮ ಬ್ರಾಹ್ಮಣರಿಂದ ಕೂಡಿದ್ದ ಆ ಸಭೆಯು ಅಮರರಿಂದ ಕೂಡಿದ ದೇವಸಭೆಯಂತೆ ಹೊಳೆಯುತ್ತಿತ್ತು.

## ಯಜ್ಞಕರಣ

ಯುಧಿಷ್ಠಿರನು ಮೇಲೆದ್ದು ಪಿತಾಮಹ ಮತ್ತು ಗುರುವನ್ನು ಅಭಿವಂದಿಸಿ ಭೀಷ್ಮ, ದ್ರೋಣ, ಕೃಪ, ದ್ರೌಣಿ, ದುರ್ಯೋಧನ ಮತ್ತು ವಿವಿಂಶತಿಯನ್ನುದ್ದೇಶಿಸಿ ಈ ಮಾತುಗಳನ್ನಾಡಿದನು: "ಈ ಯಜ್ಞದಲ್ಲಿ ನೀವೆಲ್ಲರೂ ನನ್ನನ್ನು ಅನುಗ್ರಹಿಸಬೇಕು. ಇಲ್ಲಿರುವ ನನ್ನ ಈ ಧನ

ನಿಮ್ಮದು ಮತ್ತು ಸ್ವಯಂ ನಾನು ನಿಮ್ಮವನು. ಯಾವುದೇ ನಿಯಂತ್ರಣಗಳಿಲ್ಲದೇ ಯಥೇಷ್ಟವಾಗಿ ನೀವು ಸಂತೋಷಹೊಂದಿರಿ.” ಎಲ್ಲರಿಗೂ ಹೀಗೆ ಹೇಳಿದ ದೀಕ್ಷಿತ ಪಾಂಡವಾಗ್ರಜನು ಪ್ರತಿಯೊಬ್ಬರಿಗೂ ಅವರಿಗೆ ತಕ್ಕುದಾದ ಕಾರ್ಯಗಳನ್ನು ವಹಿಸಿಕೊಟ್ಟನು. ಭಕ್ಷ್ಯಭೋಜ್ಯಗಳ ಅಧಿಕಾರವನ್ನು ದುಃಶಾಸನನಿಗೆ ನೀಡಲಾಯಿತು. ಬ್ರಾಹ್ಮಣರನ್ನು ಬರಮಾಡಿಕೊಳ್ಳುವ ಕೆಲಸಕ್ಕೆ ಅಶ್ವತ್ಥಾಮನು ನಿಯುಕ್ತಗೊಂಡನು. ರಾಜರ ಆತಿಥ್ಯಕ್ಕೆ ಸಂಜಯನನ್ನು ನಿಯೋಜಿಸಿದನು. ಏನನ್ನು ಮಾಡಬೇಕು ಏನನ್ನು ಮಾಡಬಾರದು ಎನ್ನುವುದನ್ನು ತಿಳಿಸುವ ಕಾರ್ಯವನ್ನು ಮಹಾಮತಿ ಭೀಷ್ಮ-ದ್ರೋಣರಿಗೆ ನೀಡಲಾಯಿತು. ಹಿರಣ್ಯ, ಸುವರ್ಣ, ರತ್ನಗಳು, ದಕ್ಷಿಣೆ ಮತ್ತು ದಾನಗಳ ಮೇಲ್ವಿಚಾರಣೆಗೆಂದು ರಾಜನು ಕೃಪನನ್ನು ನಿಯೋಜಿಸಿದನು. ಹೀಗೆ ಇತರ ಪುರುಷವ್ಯಾಘ್ರರನ್ನೂ ಬೇರೆ ಬೇರೆ ಕೆಲಸಗಳಿಗೆ ನಿಯೋಜಿಸಿದನು. ಬಾಹ್ಲೀಕ, ಧೃತರಾಷ್ಟ್ರ, ಸೋಮದತ್ತ, ಜಯದ್ರಥರು ನಕುಲನ ಆತಿಥ್ಯದಿಂದ ಸ್ವಾಮಿಗಳಂತೆ ರಮಿಸಿದರು. ಸರ್ವಧರ್ಮವಿದು ಕ್ಷತ್ತ ವಿದುರನು ವ್ಯಯಕರನಾದನು ಮತ್ತು ದುರ್ಯೋಧನನು ಎಲ್ಲ ಕಾಣಿಕೆ-ಉಡುಗೊರೆಗಳನ್ನು ಸ್ವೀಕರಿಸಿದನು.

ಅಂತ್ಯದ ಉತ್ತಮ ಫಲವನ್ನು ಬಯಸಿ, ಧರ್ಮರಾಜ ಪಾಂಡವನನ್ನೂ ಅವನ ಸಭೆಯನ್ನೂ ನೋಡುವ ಉದ್ದೇಶದಿಂದ ಲೋಕದ ಸರ್ವರೂ ಬಂದು ಸೇರಿದರು. ಒಂದು ಸಾವಿರಕ್ಕಿಂತ ಕಡಿಮೆ ಬೆಲೆಯ

ಉಡುಗೊರೆಯನ್ನು ಯಾರೂ ತರಲಿಲ್ಲ. ಅಲ್ಲಿ ಬಂದ ಬಹಳ ರತ್ನಗಳಿಂದ ಧರ್ಮರಾಜನ ಸಂಪತ್ತು ವೃದ್ಧಿಯಾಯಿತು. ನನ್ನ ರತ್ನದಾನದಿಂದ ಕೌರವ್ಯನು ಯಜ್ಞಮಾಡುವನು ಎಂಬ ಭರವಸೆಯನ್ನು ಹೊತ್ತು ಪರಸ್ಪರರಲ್ಲಿ ಸ್ಪರ್ಧೆಮಾಡುತ್ತಿರುವಂತೆ ರಾಜರು ಅವನಿಗೆ ಧನವನ್ನಿತ್ತರು. ಬಹಳ ಮಹಡಿ ಮತ್ತು ಗೋಪುರಗಳನ್ನು ಹೊಂದಿದ್ದ, ಸೇನೆಗಳ ಕಾವಲಿನಲಿದ್ದ, ಲೋಕದ ರಾಜರ ವಿಮಾನಗಳು ಮತ್ತು ಬ್ರಾಹ್ಮಣರ ವಸತಿ ಗೃಹಗಳು, ದಿವ್ಯವಿಮಾನಗಳಂತೆ ರಚಿಸಿದ್ದ ಬಣ್ಣ ಬಣ್ಣದ ರತ್ನಗಳಿದ ಸಿಂಗರಿಸಿದ, ಅಪರಿಮಿತ ಸಂಪತ್ತಿನ ವಸತಿ ಗೃಹಗಳು, ಸೇರಿದ್ದ ರಾಜರು ಅತಿ ಶ್ರೀ ಸಮೃದ್ಧಿಯಿಂದ ಮಹಾತ್ಮ ಕೌಂತೇಯನ ಸದಸ್ಸು ಸುಶೋಭಿಸಿತು. ಸಂಪತ್ತಿನಲ್ಲಿ ವರುಣದೇವನೊಂದಿಗೆ ಸ್ಪರ್ಧಿಸುತ್ತಿರುವನೋ ಎಂದಿದ್ದ ಯುಧಿಷ್ಠಿರನು ಆರು ಅಗ್ನಿಗಳಿಂದ ಉತ್ತಮ ದಕ್ಷಿಣೆಗಳನ್ನೊಡಗೂಡಿದ ಯಜ್ಞವನ್ನು ಕೈಗೊಂಡು ಸರ್ವಜನರ ಸರ್ವ ಕಾಮಗಳನ್ನೂ ಸಮೃದ್ಧವಾಗಿ ತೃಪ್ತಿಗೊಳಿಸಿದನು. ಬಹಳ ಆಹಾರ ಭಕ್ಷ್ಯಗಳಿಂದ ತೃಪ್ತಿಗೊಂಡ ಜನಸನ್ನಿಧಿಯಲ್ಲಿ ರತ್ನಗಳ ಉಡುಗೊರೆಗಳ್ನು ನೀಡುವ ಕಾರ್ಯಕ್ರಮವು ಕೂಡಿಬಂದಿತು. ಯಜ್ಞದಲ್ಲಿ ಮಂತ್ರಶಿಕ್ಷಾಸಮನ್ವಿತ ಈಡಾಜ್ಯಹೋಮ ಆಹುತಿಗಳಿಂದ ದೇವತೆಗಳೂ ಮಹರ್ಷಿಗಳು ತೃಪ್ತಿಹೊಂದಿದರು. ದೇವತೆಗಳಂತೆ ವಿಪ್ರರೂ ದಕ್ಷಿಣೆ, ಅನ್ನ ಮತ್ತು ಮಹಾಧನಗಳಿಂದ ತೃಪ್ತಿಹೊಂದಿದರು ಮತ್ತು ಆ ಯಜ್ಞದಿಂದ ಸರ್ವ

ವರ್ಣದವರೂ ಮುದಿತರಾದರು.

## ಶ್ರೀಕೃಷ್ಣನಿಗೆ ಪ್ರಥಮಾರ್ಘ್ಯ

ನಂತರ ಅಭಿಷೇಕದ ದಿನದಂದು ಬ್ರಾಹ್ಮಣ-ರಾಜರುಗಳು ಸೇರಿ ಮಹರ್ಷಿಗಳ ಸತ್ಕಾರ ಕಾರ್ಯಕ್ಕೆ ಒಳವೇದಿಯನ್ನು ಪ್ರವೇಶಿಸಿದರು. ನಾರದರೇ ಮೊದಲಾದ ಮಹಾತ್ಮರು ವೇದಿಕೆಯ ಹತ್ತಿರದಲ್ಲಿ, ರಾಜರ್ಷಿಗಳೊಡನೆ ಬ್ರಹ್ಮ ಭವನದಲ್ಲಿ ದೇವ ದೇವರ್ಷಿಗಳು ಹೇಗೆ ಒಟ್ಟಿಗೇ ಕುಳಿತಿರುತ್ತಾರೋ ಹಾಗೆ, ಕುಳಿತುಕೊಂಡರು. ಆ ಅಮಿತೌಜಸರು ಕರ್ಮಗಳನ್ನು ಒಂದೊಂದಾಗಿ ನೆರವೇರಿಸಿ ಮಧ್ಯದಲ್ಲಿ ಅವುಗಳ ಕುರಿತು ಚರ್ಚಿಸುತ್ತಿದ್ದರು.

> “ಇದು ಸರಿ! ಇದು ಹೀಗಲ್ಲ! ಇದನ್ನು ಹೀಗೆಯೇ
> ಮಾಡಬೇಕು! ಬೇರೆ ಯಾವರೀತಿಯೂ ಸರಿಯಲ್ಲ!”

ಎಂದು ಗುಂಪಿನಲ್ಲಿ ಪರಸ್ಪರರೊಂದಿಗೆ ವಾದಮಾಡುತ್ತಿದ್ದರು. ಇದೇ ಶಾಸ್ತ್ರನಿಶ್ಚಿತವೆಂದು ಕೆಲವರು ಚಿಕ್ಕ ವಿಷಯಗಳನ್ನು ದೊಡ್ಡದಾಗಿ ಮಾಡಿದರು. ಇನ್ನು ಕೆಲವರು ದೊಡ್ಡ ದೊಡ್ಡ ವಿಷಯಗಳನ್ನು ಚಿಕ್ಕ ವಿಷಯಗಳನ್ನಾಗಿ ಮಾಡಿದರು. ಕೆಲವು ಮೇಧಾವಿಗಳು ಇನ್ನೊಬ್ಬರ ನಿಶ್ಚಯಗಳನ್ನು ಆಕಾಶದಲ್ಲಿ ಎಸೆದ ಮಾಂಸದ ತುಂಡನ್ನು ಗಿಡುಗವು ಹೇಗೋ ಹಾಗೆ ಚಿಂದಿಮಾಡಿದರು. ಇನ್ನು ಕೆಲವು ಸರ್ವ ವೇದವಿದರಲ್ಲಿ ಶ್ರೇಷ್ಠ ಮಹಾವ್ರತರು ಧರ್ಮಾರ್ಥಸಂಯುಕ್ತ ಕಥೆಗಳನ್ನು ಹೇಳಿ ಸಂತೋಷಪಟ್ಟರು. ವೇದಸಂಪನ್ನರಿಂದ, ದೇವ

ದ್ವಿಜರಿಂದ, ಮಹರ್ಷಿಗಳಿಂದ ಕೂಡಿದ್ದ ಆ ವೇದಿಕೆಯು ನಕ್ಷತ್ರಗಳಿಂದ ಹೊಳೆಯುತ್ತಿರುವ ನಿರ್ಮಲ ಆಕಾಶದಂತೆ ಕಂಡುಬಂದಿತು. ಯುಧಿಷ್ಠಿರನ ಮನೆಯ ಒಳಗಿನ ಆ ವೇದಿಕೆಯ ಬಳಿ ಯಾವ ಶೂದ್ರನೂ ಅಥವಾ ಅವ್ರತನೂ ಇರಲಿಲ್ಲ.

ಯಜ್ಞವಿಧಿಯಿಂದ ಉಂಟಾದ ಧೀಮಂತ ಶ್ರೀಮಂತ ಧರ್ಮರಾಜನ ಸಂಪತ್ತನ್ನು ಕಂಡ ನಾರದನು ಸಂತೋಷಗೊಂಡನು. ಆಗ ಮುನಿ ನಾರದನು ಸರ್ವ ಕ್ಷತ್ರಿಯರ ಆ ಸಮಾಗಮವನ್ನು ನೋಡಿ ಹಿಂದೆ ಬ್ರಹ್ಮನ ಭವನದಲ್ಲಿ ಕಟ್ಟಲಾದ ಅಂಶಾವತರಣದ ಕಥೆಯನ್ನು ನೆನಪಿಸಿಕೊಂಡನು. ಇದು ದೇವತೆಗಳದ್ದೇ ಸಮಾಗಮವೆಂದು ತಿಳಿದ ನಾರದನು ಮನಸ್ಸಿನಲ್ಲಿಯೇ ಪುಂಡರೀಕಾಕ್ಷ ಹರಿಯನ್ನು ಸ್ಮರಿಸಿದನು:

> ““ಅನ್ಯೋನ್ಯರನ್ನು ಸಂಹರಿಸಿ ನೀವು ಪುನಃ ನಿಮ್ಮ ಲೋಕವನ್ನು ಸೇರುತ್ತೀರಿ” ಎಂದು ಹಿಂದೆ ದೇವತೆಗಳಿಗೆ ಆಜ್ಞೆಯನ್ನಿತ್ತಿದ್ದ ದೇವಶತ್ರುಗಳ ಸಂಹಾರಕ, ಧೀಮಂತ, ಪರಪುರಂಜಯ ವಿಭು ನಾರಾಯಣನು ಆಜ್ಞೆಯನ್ನು ಪಾಲಿಸಲು ಸ್ವಯಂ ಸಾಕ್ಷಾತ್ ಕ್ಷತ್ರಿಯರಲ್ಲಿ ಹುಟ್ಟಿದ್ದಾನೆ! ಹೀಗೆ ದೇವತೆಗಳಿಗೆ ಆದೇಶವನ್ನಿತ್ತಿದ್ದ ಶಂಭು, ಭಗವನ್, ವಂಶೋದ್ಧಾರಕರಲ್ಲಿ ಶ್ರೇಷ್ಠ ಪ್ರಭು ನಾರಾಯಣನು ಅಂಧಕ ವೃಷ್ಣಿಗಳ ವಂಶದಲ್ಲಿ ಯದುಕುಲದಲ್ಲಿ ಜನ್ಮತಾಳಿ ಈಗ ನಕ್ಷತ್ರಗಳ ಮಧ್ಯದಲ್ಲಿರುವ ಚಂದ್ರನಂತೆ ಅತ್ಯಂತ



ಶೋಭೆಯಿಂದ ವಿಜೃಂಭಿಸುತ್ತಿದ್ದಾನೆ! ಯಾರ ಬಾಹುಬಲವನ್ನು ಇಂದ್ರನೂ ಸೇರಿ ಸರ್ವ ಸುರರೂ ಪೂಜಿಸುತ್ತಾರೋ ಆ ಅರಿಮರ್ದನ ಹರಿಯು ಇಂದು ಸಂಪೂರ್ಣ ಮಾನವನಾಗಿದ್ದಾನೆ! ಅಹೋ! ಈ ಮಹದ್ಭೂತ, ಸ್ವಯಂಭುವು ಮಹತ್ತರವಾಗಿ ಬೆಳೆದಿರುವ ಈ ಕ್ಷತ್ರಿಯಕುಲವನ್ನು ಸ್ವಯಂ ತನ್ನೊಂದಿಗೆ ಕರೆದೊಯ್ಯುತ್ತಾನೆ!"

ಎಂಬ ಯೋಚನೆಯನ್ನು ಯೋಚಿಸಿದ ಧರ್ಮವಿದ ನಾರದನು,

"ಇವನೇ ಯಜ್ಞಗಳಿಗೆಲ್ಲ ಒಡೆಯನಾದ ಹರಿ ನಾರಾಯಣ"

ಎಂದು ತಿಳಿದನು. ಧರ್ಮವಿದರಲ್ಲಿ ಶ್ರೇಷ್ಠ ಆ ಮಹಾಬುದ್ಧಿಯು ಧೀಮಂತ ಧರ್ಮರಾಜನಿಗೆ ಉಡುಗೊರೆಯ ರೂಪದಲ್ಲಿ ಆ ಮಹಾಧ್ವರದಲ್ಲಿ ಉಳಿದುಕೊಂಡನು.

ಆಗ ಭೀಷ್ಮನು ಧರ್ಮರಾಜ ಯುಧಿಷ್ಠಿರನು ಹೇಳಿದನು:

"ಭಾರತ! ಯಥಾರ್ಹವಾಗಿ ರಾಜರಿಗೆ ಉಡುಗೊರೆಗಳನ್ನಿತ್ತು ಗೌರವಿಸುವ ಕಾರ್ಯಕ್ರಮವು ನಡೆಯಲಿ. ಆಚಾರ್ಯ, ಋತ್ವಿಜ, ಸಂಬಂಧಿ, ಸ್ನಾತಕ, ಸ್ನೇಹಿತ, ಮತ್ತು ರಾಜ ಈ ಆರು ಮಂದಿಯು ಅತಿಥಿ ಗೌರವಕ್ಕೆ ಪಾತ್ರರು ಎಂದು ಹೇಳುತ್ತಾರೆ. ಒಂದು ವರ್ಷ

ಪರ್ಯಂತ ಬಂದು ಉಳಿದುಕೊಂಡಿದ್ದವರೂ ಇದಕ್ಕೆ ಅರ್ಹರೆಂದು ಕೂಡ ಹೇಳುತ್ತಾರೆ. ಈ ರಾಜರು ಕೆಲವು ಸಮಯದ ಹಿಂದೆಯೇ ನಮ್ಮಲ್ಲಿಗೆ ಬಂದಿದ್ದಾರೆ. ಅವರಲ್ಲಿ ಪ್ರತಿಯೊಬ್ಬರಿಗೂ ಅತಿಥಿ ಉಡುಗೊರೆಗಳನ್ನು ಕೊಡುವ ಸಮಯವು ಬಂದಿದೆ. ಮೊಟ್ಟ ಮೊದಲು ಇವರಲ್ಲಿ ಯಾರು ವರಿಷ್ಟನೋ ಅವನಿಗೆ ಉಡುಗೊರೆಯನ್ನು ತರಿಸು."

ಯುಧಿಷ್ಠಿರನು ಹೇಳಿದನು:

"ಪಿತಾಮಹ! ಯಾವ ಓರ್ವನಿಗೆ ಈ ಅರ್ಘ್ಯವನ್ನು ನೀಡಬೇಕೆಂದು ನಿನ್ನ ಅಭಿಪ್ರಾಯ? ಯಾವುದು ಯುಕ್ತವೆಂದು ನನಗೆ ಹೇಳು."

ಆಗ ಭೀಷ್ಮ ಶಾಂತನವನು ಮನದಲ್ಲಿಯೇ ನಿಶ್ಚಯಿಸಿ,

"ಭಾರತ! ವಾರ್ಷ್ಣೇಯ ಕೃಷ್ಣನೇ ಈ ಗೌರವಕ್ಕೆ ಈ ಭುವಿಯಲ್ಲಿಯೇ ಅತ್ಯಂತ ಅರ್ಹನು ಎಂದು ನನ್ನ ಅನಿಸಿಕೆ. ಅವನೇ ಇಲ್ಲಿ ಸೇರಿರುವರಲ್ಲೆಲ್ಲಾ ತೇಜಸ್ಸು, ಬಲ, ಮತ್ತು ಪರಾಕ್ರಮಗಳಿಂದ ನಕ್ಷತ್ರಗಳಲ್ಲೆಲ್ಲಾ ಸೂರ್ಯನು ಹೇಗೋ ಹಾಗೆ ಪ್ರಜ್ವಲಿಸುತ್ತಿದ್ದಾನೆ. ಕತ್ತಲಲ್ಲಿ ಸೂರ್ಯನಿಂದ ಮತ್ತು ಗಾಳಿಯಿಲ್ಲದಿರುವಾಗ ಗಾಳಿಯಿಂದ ಹೇಗೆ ಸಂತೋಷವು ದೊರೆಯುತ್ತದೆಯೋ ಹಾಗೆ ಕೃಷ್ಣನಿಂದ ಈ ಸಭಾಸದರೆಲ್ಲರೂ ಕಾಂತಿಯುಕ್ತರಾಗಿದ್ದಾರೆ ಮತ್ತು

ಮುದಿತರಾಗಿದ್ದಾರೆ.”

ಭೀಷ್ಮನ ಅನುಜ್ಞೆಯಂತೆ ಪ್ರತಾಪಿ ಸಹದೇವನು ವಿಧಿವತ್ತಾಗಿ ಆ ಉತ್ತಮ ಅರ್ಘ್ಯವನ್ನು ವಾರ್ಷ್ಣೇಯನಿಗೆ ಸಮರ್ಪಿಸಿದನು. ಕೃಷ್ಣನು ಅದನ್ನು ಶಾಸ್ತ್ರೋಕ್ತವಾಗಿ ಸ್ವೀಕರಿಸಿದನು. ಆದರೆ ಶಿಶುಪಾಲನು ಮಾತ್ರ ವಾಸುದೇವನಿಗಿತ್ತ ಆ ಪೂಜೆಯನ್ನು ಸಹಿಸಲಿಲ್ಲ. ಮಹಾಬಲಿ ಚೇದಿರಾಜನು ಆ ಸಂಸದಿಯಲ್ಲಿ ಭೀಷ್ಮ, ಧರ್ಮರಾಜ ಮತ್ತು ವಾಸುದೇವನನ್ನು ಹೀಯಾಳಿಸಿದನು.

## ಶ್ರೀಕೃಷ್ಣನಿಗೆ ಅರ್ಘ್ಯವನ್ನಿತ್ತುದ್ದಕ್ಕೆ ಶಿಶುಪಾಲನ ಆಕ್ಷೇಪ

ಶಿಶುಪಾಲನು ಹೇಳಿದನು:

“ಕೌರವ್ಯ! ಮಹಾತ್ಮ ಮಹೀಪತಿಗಳು ಇಲ್ಲಿರವಾಗ ಪಾರ್ಥಿವನಿಗೆ ಸಲ್ಲಬೇಕಾದ ರಾಜ ಗೌರವಕ್ಕೆ ರಾಜನಲ್ಲದ ವಾರ್ಷ್ಣೇಯನು ಅರ್ಹನಲ್ಲ. ನಿಮಗಿಷ್ಟ ಬಂದಹಾಗೆ ಈ ಪುಂಡರೀಕಾಕ್ಷನನ್ನು ಅರ್ಚಿಸುವುದು ಮಹಾತ್ಮ ಪಾಂಡವರಿಗೆ ತಕ್ಕುದಲ್ಲ! ಸೂಕ್ಷ್ಮವಾದ ಧರ್ಮವು ನಿಮ್ಮಂಥ ಬಾಲಕರಿಗೆ ಅರ್ಥವಾಗುವುದಿಲ್ಲ! ಆದರೆ ಈ ದೂರದೃಷ್ಟಿಯಿಲ್ಲದ ನದಿಯ ಪುತ್ರ ಭೀಷ್ಮನು ಧರ್ಮಯುಕ್ತನಾಗಿದ್ದರೂ ಧರ್ಮವನ್ನು ಉಲ್ಲಂಘಿಸಿ ತನಗಿಷ್ಟಬಂದಹಾಗೆ ಮಾಡುತ್ತಾನೆಂದಾದರೆ ಅವನೇ ಈ ಲೋಕದ ಸಂತರಿಂದ ಹೆಚ್ಚು ಹೀಳಾಯಿಸಿಕೊಳ್ಳುತ್ತಾನೆ.

ರಾಜನಲ್ಲದ ದಾಶಾರ್ಹನು ಸರ್ವ ಮಹೀಕ್ಷಿತರ ಮಧ್ಯೆ ಹೇಗೆ ನೀವು ಅರ್ಚಿಸಿದಂತೆ ಅಗ್ರಪೂಜೆಗೆ ಅರ್ಹನಾಗುತ್ತಾನೆ? ಅಥವಾ ಕೃಷ್ಣನು ಹಿರಿಯವನೆಂದು ನೀವು ಪರಿಗಣಿಸಿದರೆ, ವಸುದೇವನೇ ಇಲ್ಲಿರುವಾಗ ಅವನ ಮಗನು ಹೇಗೆ ಹಿರಿಯವನಾಗುತ್ತಾನೆ? ಅಥವಾ ವಾಸುದೇವನು ನಿಮ್ಮ ಪ್ರಿಯಕರ, ಬೇಕಾದುದನ್ನು ಮಾಡಿಕೊಡುತ್ತಾನೆ ಎಂದಿದ್ದರೆ ದ್ರುಪದನೇ ಇಲ್ಲಿ ಇರುವಾಗ ಮಾಧವನು ಈ ಪೂಜೆಗೆ ಅರ್ಹನಾಗುತ್ತಾನೆ? ಅಥವಾ ಕೃಷ್ಣನನ್ನು ಆಚಾರ್ಯನೆಂದು ಮನ್ನಿಸಿದೆಯಾದರೆ, ದ್ರೋಣನೇ ಇಲ್ಲಿರುವಾಗ ವಾರ್ಷ್ಣೇಯನು ಹೇಗೆ ಪೂಜೆಗೆ ಅರ್ಹನಾಗುತ್ತಾನೆ? ಅಥವಾ ಕೃಷ್ಣನನ್ನು ಋತ್ವಿಜನೆಂದು ಮನ್ನಿಸಿದೆಯಾದರೆ ವಿಪ್ರ ದ್ವೈಪಾಯನನೇ ಇಲ್ಲಿರುವಾಗ ಕೃಷ್ಣನು ಹೇಗೆ ಪೂಜೆಗೆ ಅರ್ಹನಾಗುತ್ತಾನೆ? ಈ ಮಧುಸೂದನನು ಋತ್ವಿಜನೂ ಅಲ್ಲ, ಆಚಾರ್ಯನೂ ಅಲ್ಲ, ರಾಜನೂ ಅಲ್ಲ. ಅಂಥವನನ್ನು ನೀನು ಪೂಜೆಸಿದ್ದೀಯೆಂದರೆ ಇದು ಕೇವಲ ನಿನಗಿಷ್ಟಬಂದಹಾಗೆ ಮಾಡಿದಹಾಗಾಗಲಿಲ್ಲವೇ? ನಿನಗೆ ಮಧುಸೂದನನನ್ನೇ ಪೂಜಿಸಬೇಕೆಂದಿದ್ದಿದ್ದರೆ ಈ ರಾಜರನ್ನೆಲ್ಲಾ ಇಲ್ಲಿಗೆ ಕರೆದಿದ್ದೇಕೆ? ಅವಮಾನ ಮಾಡಲಿಕ್ಕೆಂದೇ? ನಾವೆಲ್ಲ ಮಹಾತ್ಮ ಕೌಂತೇಯನಿಗೆ ಕರವನ್ನು ಕೊಟ್ಟಿದ್ದುದು

ಭಯದಿಂದಲ್ಲ, ಲೋಭದಿಂದಲೂ ಅಲ್ಲ ಅಥವಾ ನಿನ್ನನ್ನು ಮೆಚ್ಚಿಸಬೇಕೆಂದೂ ಅಲ್ಲ. ಈ ಧರ್ಮಪ್ರವೃತ್ತನು ಪಾರ್ಥಿವತ್ವವನ್ನು ಬಯಸಿದನು. ಆದುದರಿಂದ ಅವನಿಗೆ ಕರವನಿತ್ತೆವು. ಆದರೆ ಈಗ ಅವನು ನಮ್ಮನ್ನು ಪರಿಗಣಿಸುವುದೇ ಇಲ್ಲ! ಈ ರಾಜ ಸಂಸದಿಯಲ್ಲಿ ಅದರ ಚಿಹ್ನೆಯೇ ಇಲ್ಲದ ಕೃಷ್ಣನಿಗೆ ಅರ್ಘ್ಯವನ್ನಿತ್ತು ಪೂಜಿಸಿದ್ದೀಯೆಂದರೆ ಇದು ನಮ್ಮನ್ನು ಅವಮಾನಿಸುವ ಬುದ್ಧಿಯಿಂದಲ್ಲದೇ ಮತ್ತ್ಯಾವ ಕಾರಣದಿಂದ? ಅಕಸ್ಮಾತ್ ಧರ್ಮಪುತ್ರನ ಧರ್ಮಾತ್ಮನೆನ್ನುವ ಯಶಸ್ಸು ಹೊರಟುಹೋಯಿತು! ವೃಷ್ಣಿಕುಲದಲ್ಲಿ ಹುಟ್ಟಿ ಹಿಂದೆ ರಾಜನನ್ನು ಕೊಂದ ಧರ್ಮಚ್ಯುತನಿಗೆ ಯಾರುತಾನೇ ಈ ರೀತಿಯ ಗೌರವವನ್ನಿತ್ತು ಪೂಜಿಸುತ್ತಾರೆ? ಕೃಷ್ಣನಿಗೆ ಅರ್ಘ್ಯವನ್ನು ನೀಡುವುದರಿಂದ ಇಂದು ಯುಧಿಷ್ಠಿರನ ಧರ್ಮಾತ್ಮತೆಯು ಹರಿದು ಚಿಂದಿಯಾಗಿ ಹೋಗಿ ಅವನ ಕೃಪಣತ್ವವು ತೋರಿಸಿಕೊಂಡಿತು!

ಒಂದು ವೇಳೆ ಕೌಂತೇಯರು ಭೀತರೂ, ಕೃಪಣರೂ, ಬೆಂದವರೂ ಆಗಿದ್ದಾರೆಂದರೆ ಮಾಧವ! ಅವರಿಗೆ ನೀನಾದರೂ ಎಂಥಹ ಪೂಜೆಗೆ ಅರ್ಹ ಎಂದು ತಿಳಿಸಿಕೊಡಬಹುದಿದ್ದಲ್ಲವೇ? ಅಥವಾ ತಮ್ಮ

ಸಣ್ಣಬುದ್ಧಿಯಿಂದ ಅನರ್ಹನಾದ ನಿನಗೆ ಪೂಜೆಯನ್ನಿತ್ತರೂ ಜನಾರ್ದನ! ನೀನು ಹೇಗೆ ಅದನ್ನು ಒಪ್ಪಿಕೊಂಡು ಸ್ವೀಕರಿಸಿದೆ? ಇಲ್ಲ! ಚೆಲ್ಲಿದ ಹವಿಸ್ಸನ್ನು ಎತ್ತಿಕೊಂಡು ಹೋಗಿ ನಿರ್ಜನ ಪ್ರದೇಶದಲ್ಲಿ ತಿಂದು ಸಂತೋಷಪಡುವ ನಾಯಿಯ ಹಾಗೆ ನೀನು ನಿನಗರ್ಹವಾಗಿರದ ಪೂಜೆಯನ್ನು ಉತ್ತಮ ಉಡುಗೊರೆಯೆಂದು ಸಂತೋಷಪಡುತ್ತಿದ್ದೀಯೆ! ಕೌರವರು ಈ ಪಾರ್ಥಿವೇಂದ್ರರಿಗೆ ಅಪಮಾನ ಮಾಡಿದ್ದುದಲ್ಲದೇ ನಿನ್ನನ್ನು ಪೂಜಿಸಿ ನೀನೂ ಕೂಡ ಎಂಥವನೆಂದು ಪ್ರದರ್ಶಿಸಿದ್ದಾರೆ! ಶಿಖಂಡಿಗೆ ಮದುವೆಯು ಹೇಗೋ ಹಾಗೆ, ಅಂಧನಿಗೆ ರೂಪದರ್ಶನವು ಹೇಗೋ ಹಾಗೆ, ರಾಜನಲ್ಲದ ನಿನಗೆ ಸಲ್ಲಿಸಿದ ರಾಜಪೂಜೆ! ರಾಜ ಯುದ್ಧಿಷ್ಠಿರನು ಎಂಥವನು ಎಂದು ನೋಡಿದೆವು, ಭೀಷ್ಮನೂ ಎಂಥವನೆಂದು ನೋಡಿದೆವು, ಮತ್ತು ವಾಸುದೇವನನ್ನೂ ಇಂದು ನಾವೆಲ್ಲರೂ ನೋಡಿಯಾಯಿತು."

ಹೀಗೆ ಹೇಳಿ ಶಿಶುಪಾಲನು ಉನ್ನತ ಆಸನದಿಂದ ಮೇಲೆದ್ದು ಕೆಲವು ರಾಜರೊಂದಿಗೆ ಸಭೆಯನ್ನು ಬಿಟ್ಟು ಹೊರಟನು.

## ಭೀಷ್ಮನಿಂದ ಶ್ರೀಕೃಷ್ಣನ ಅರ್ಹತೆಯ ಪ್ರತಿಪಾದನೆ

ಆಗ ರಾಜಾ ಯುಧಿಷ್ಠಿರನು ಶಿಶುಪಾಲನಲ್ಲಿಗೆ ಧಾವಿಸಿ ಈ ಮಧುರ ಸಾಂತ್ವನ ಪೂರ್ವಕ ಮಾತುಗಳನ್ನು ಹೇಳಿದನು:

“ಮಹೀಪಾಲ! ನೀನು ಹೀಗೆ ಮಾತನಾಡುವುದು ಸರಿಯಲ್ಲ. ಹೀಗೆ ಮಾತನಾಡುವುದು ಅತಿ ದೊಡ್ಡ ಅಧರ್ಮ, ನಿರರ್ಥಕ ಕೊಚ್ಚಿಕೊಳ್ಳುವ ಮಾತುಗಳು. ಭೀಷ್ಮ ಶಾಂತನವನು ಎಂದೂ ಪರಮ ಧರ್ಮವನ್ನು ತಪ್ಪು ತಿಳಿಯಲಾರ. ಆದುದರಿಂದ ಸುಮ್ಮನೇ ಅವನನ್ನು ತೆಗಳಬೇಡ. ನಿನಗಿಂತಲೂ ಹಿರಿಯರಾದ ಬಹಳಷ್ಟು ಮಹೀಪಾಲರಿದ್ದಾರೆ ನೋಡು. ಅವರೆಲ್ಲರೂ ಕೃಷ್ಣನ ಪೂಜೆಗೆ ಅನುಮತಿಯನ್ನಿತ್ತಿದ್ದಾರೆ. ನೀನೂ ಕೂಡ ಅವರಂತೆ ಇದನ್ನು ಸಹಿಸಬೇಕು. ಭೀಷ್ಮನು ನಿಜವಾಗಿಯೂ ಮತ್ತು ಸಂಪೂರ್ಣವಾಗಿ ಕೃಷ್ಣನನ್ನು ತಿಳಿದಿದ್ದಾನೆ. ಅವನ ಕುರಿತು ಈ ಕೌರವನಿಗೆ ತಿಳಿದಷ್ಟು ನಿನಗೆ ತಿಳಿದಿಲ್ಲ.”

ಭೀಷ್ಮನು ಹೇಳಿದನು:

“ಲೋಕದಲ್ಲಿ ಎಲ್ಲರಿಗಿಂಥಲೂ ಹಿರಿಯನಾದ ಕೃಷ್ಣನಿಗೆ ಗೌರವಿಸುವುದನ್ನು ತಿರಸ್ಕರಿಸುವವನಿಗೆ ಯಾವುದೇ ರೀತಿಯ ಸಭ್ಯತೆಯನ್ನು ತೋರಿಸಬಾರದು ಮತ್ತು ಅಂಥವನು ಸಾಂತ್ವನಕ್ಕೆ ಅರ್ಹನಲ್ಲ. ಕ್ಷತ್ರಿಯನನ್ನು ಗೆದ್ದು ಅವನನ್ನು ಸೆರೆಹಿಡಿದು ನಂತರ ಬಿಡುಗಡೆ ಮಾಡುವ ರಣಶ್ರೇಷ್ಠ ಕ್ಷತ್ರಿಯನು ಅವನಿಗೆ ಗುರುವೆನಿಸಿಕೊಳ್ಳುತ್ತಾನೆ. ಈ ಸಾತ್ವತೀ ಪುತ್ರನ ತೇಜಸ್ಸಿನಿಂದ ಯುದ್ಧದಲ್ಲಿ ಸೋಲದೇ ಇದ್ದ ಯಾವ

ಮಹೀಪಾಲನನ್ನೂ ನಾನು ಇಲ್ಲಿ ನೆರೆದಿರುವ ರಾಜರಲ್ಲಿ ನೋಡಿಲ್ಲ. ಅಚ್ಯುತನು ಕೇವಲ ನಮ್ಮಿಂದ ಮಾತ್ರ ಪೂಜಾರ್ಹನಲ್ಲ. ಜನಾರ್ದನನು ಮೂರು ಲೋಕಗಳಿಂದಲೂ ಅರ್ಚನೀಯ. ಬಹಳಷ್ಟು ಕ್ಷತ್ರಿಯರ್ಷಭರು ಯುದ್ಧದಲ್ಲಿ ಕೃಷ್ಣನಿಂದ ಪರಾಜಯಗೊಂಡಿದ್ದಾರೆ. ಸರ್ವ ಜಗತ್ತೂ ಒಂದಾಗಿ ವಾರ್ಷ್ಣೇಯನನ್ನೇ ಆಧರಿಸಿದೆ. ಆದುದರಿಂದ ವೃದ್ಧರ ಸಮಕ್ಷಮದಲ್ಲಿಯೂ ಕೃಷ್ಣನನ್ನೇ ಅರ್ಚಿಸುತ್ತೇವೆ. ಬೇರೆ ಯಾರನ್ನೂ ಅಲ್ಲ. ಈ ರೀತಿ ಮಾತನಾಡಲು ನೀನು ಅರ್ಹನಲ್ಲ. ಈ ರೀತಿಯ ಯೋಚನೆಯನ್ನು ತೆಗೆದುಹಾಕು! ನಾನು ಬಹಳಷ್ಟು ಜ್ಞಾನ ವೃದ್ಧರ ಸೇವೆ ಮಾಡಿದ್ದೇನೆ. ಅವರೇ ಹೇಳಿದಂತೆ ಈ ಶೌರಿಯು ಸಂತರ ಬಹುಮತದಲ್ಲಿ ಯಾವು ಗುಣಗಳು ಶ್ರೇಷ್ಠವೆಂದು ಪರಿಗಣಿಸಲ್ಪಡುತ್ತವೆಯೋ ಆ ಎಲ್ಲ ಗುಣಗಳು ಸಮಾಗತವಾಗಿರುವ ಗುಣವಂತನು. ಎಷ್ಟೋ ಬಾರಿ ಮತ್ತು ಬಹಳಷ್ಟು ರೀತಿಗಳಲ್ಲಿ ಜನರು ಈ ಧೀಮಂತನು ಜನ್ಮಪ್ರಭೃತಿ ಮಾಡಿದ ಕಾರ್ಯಗಳ ಬಗ್ಗೆ ಹೇಳಿದ್ದುದನ್ನು ಕೇಳಿದ್ದೇನೆ. ಚೇದಿರಾಜ! ಕೇವಲ ಅವನಿಗಿಷ್ಟವಾದುದನ್ನು ಮಾಡಲೆಂದಾಗಲೀ ಅಥವಾ ಅವನೊಡನೆ ನಮಗಿರುವ ಸಂಬಂಧದಿಂದಾಗಲೀ, ಅಥವಾ ಅವನಿಂದ ನಮಗೆ ಏನೋ ಲಾಭ ದೊರೆಯಬೇಕೆಂದಾಗಲೀ

ನಾವು ಜನಾರ್ದನನನ್ನು ಪುರಸ್ಕರಿಸಲಿಲ್ಲ. ಭೂಮಿಯ ಸದ್ಭಾವರಿಂದ ಪೂಜಿತನಾದ ಭೂಮಿಯ ಸುಖವೆಲ್ಲವನ್ನೂ ನೀಡಬಲ್ಲ ಇವನನ್ನು ನಾವು ಅವನ ಯಶಸ್ಸು, ಶೌರ್ಯ, ಮತ್ತು ವಿಜಯಗಳನ್ನು ತಿಳಿದೇ ಪೂಜಿಸಿದ್ದೇವೆ. ಎಷ್ಟೇ ಸಣ್ಣವರಿರಲಿ ಯಾರನ್ನೂ ಬಿಡದೇ ಎಲ್ಲರನ್ನೂ ಪರಿಶೀಲಿಸಿದ್ದೇವೆ ಮತ್ತು ಗುಣಗಳಲ್ಲಿ ವೃದ್ಧರಾದವರಲ್ಲಿ ಹರಿಯೇ ಅರ್ಚನೆಗೆ ಅರ್ಹನೆಂದು ನಮ್ಮ ಮತ. ದ್ವಿಜರಲ್ಲಿ ಇವನೇ ಜ್ಞಾನವೃದ್ಧ, ಕ್ಷತ್ರಿಯರಲ್ಲಿ ಅಧಿಕ ಬಲವುಳ್ಳವನು ಇವನು. ಇವೆರಡೂ ಪೂಜಾರ್ಹ ಗುಣಗಳು ಗೋವಿಂದನಲ್ಲಿವೆ. ವೇದವೇದಾಂಗ ವಿಜ್ಞಾನವನ್ನೂ ಮತ್ತು ಅಪ್ರಮಿತ ಬಲವನ್ನು ಈ ಲೋಕದ ಯಾವ ಮನುಷ್ಯನು ತಾನೇ ಕೇಶವನಷ್ಟು ವಿಶಿಷ್ಟವಾಗಿ ಹೊಂದಿದ್ದಾನೆ? ದಾನ, ದಾಕ್ಷ್ಯ, ಶಿಕ್ಷಣ, ಶೌರ್ಯ, ವಿನಯತೆ, ಕೀರ್ತಿ, ಉತ್ತಮ ಬುದ್ಧಿ, ಸನ್ನತಿ, ಶ್ರೀ, ಧೃತಿ, ತುಷ್ಟಿ, ಮತ್ತು ಪುಷ್ಟಿಗಳು ನಿರಂತರವಾಗಿ ಅಚ್ಯುತನಲ್ಲಿವೆ. ಆದುದರಿಂದ ಈ ಸರ್ವಸಂಪನ್ನ, ಆಚಾರ್ಯ, ತಂದೆ, ಗುರು, ಅರ್ಚನಾರ್ಹ ಮತ್ತು ಅರ್ಚಿತನನ್ನು ಅರ್ಚಿಸಬೇಕು ಎನ್ನುವುದಕ್ಕೆ ನೀವೆಲ್ಲರೂ ಸಮ್ಮತಿಯನ್ನು ನೀಡಬೇಕು. ಋತ್ವಿಗ, ಗುರು, ವಿವಾಹಕ್ಕೆ ಯೋಗ್ಯ, ಸ್ನಾತಕ, ನೃಪತಿ, ಪ್ರಿಯಕರ ಇವರೆಲ್ಲರೂ ಹೃಷೀಕೇಶನಲ್ಲಿಯೇ ಇವೆ. ಆದುದರಿಂದ

ಅಚ್ಯುತನನ್ನು ಅರ್ಚಿಸಬೇಕು. ಲೋಕಗಳ ಉತ್ಪತ್ತಿ ಮತ್ತು ಲಯಗಳಿಗೆ ಕೃಷ್ಣನೇ ಕಾರಣ. ಈ ವಿಶ್ವ ಮತ್ತು ಅದರಲ್ಲಿರುವವು ಕೃಷ್ಣನಿಗೆ ಸಮರ್ಪಿತವೆಂದೇ ಸೃಷ್ಟಿಸಲ್ಪಟ್ಟಿವೆ. ಇವನೇ ಈ ಪ್ರಕೃತಿಯ ಅವ್ಯಕ್ತ ಮತ್ತು ಸನಾತನ ಕರ್ತ, ಆದುದರಿಂದ ಅಚ್ಯುತನು ಸರ್ವ ಭೂತಗಳಿಗೂ ಹಿರಿಯವನು ಮತ್ತು ವೃದ್ಧನು. ಬುದ್ಧಿ, ಮನಸ್ಸು, ಮಹಾನ್ ವಾಯು, ತೇಜಸ್ಸು, ನೀರು, ಆಕಾಶ, ಮಹಿ ಮತ್ತು ಚತುರ್ವಿಧ ಭೂತಗಳೆಲ್ಲವೂ ಕೃಷ್ಣನಲ್ಲಿಯೇ ಇವೆ. ಆದಿತ್ಯ, ಚಂದ್ರಮ, ನಕ್ಷತ್ರಗಳು, ಗ್ರಹಗಳು, ದಿಕ್ಕುಗಳು, ಉಪದಿಕ್ಕುಗಳು ಎಲ್ಲವೂ ಕೃಷ್ಣನಲ್ಲಿಯೇ ಇವೆ.

ಈ ಶಿಶುಪಾಲನು ಕೃಷ್ಣನು ಎಲ್ಲೆಲ್ಲಿಯೂ ಎಲ್ಲ ಕಾಲದಲ್ಲಿಯು ಇರುವವನೆಂದು ತಿಳಿಯದ ದಡ್ಡ ಪುರುಷ. ಆದುದರಿಂದಲೇ ಅವನು ಹೀಗೆ ಮಾತನಾಡುತ್ತಿದ್ದಾನೆ. ಯಾಕೆಂದರೆ ಧರ್ಮನಿಷ್ಠ ಮತಿವಂತ ಮನುಷ್ಯರು ಮಾತ್ರ ಧರ್ಮವೇನೆಂದು ತಿಳಿಯಬಲ್ಲರು. ಈ ಚೇದಿರಾಜನು ಅಂಥವನಲ್ಲ. ಇಲ್ಲಿರುವ ಯಾವ ಮಹಾತ್ಮ ವೃದ್ಧ ಅಥವಾ ಬಾಲಕ ಪಾರ್ಥಿವನು ಕೃಷ್ಣನು ಪೂಜೆಗರ್ಹನೆಂದು ಒಪ್ಪಿಕೊಳ್ಳುವುದಿಲ್ಲ? ಅಥವಾ ಯಾರು ತಾನೆ ಅವನನ್ನು ಪೂಜಿಸುವುದಿಲ್ಲ? ಈ ಪೂಜೆಯು ದುಷ್ಕೃತವೆಂದು

ಶಿಶುಪಾಲನು ತಿಳಿದರೆ, ದುಷ್ಕೃತಗಳಿಗೆ ಹೇಗೆ ಪ್ರತಿಕ್ರಯಿಸಬೇಕೋ ಹಾಗೆಯೇ ಮಾಡಲಿ!"

## ಸಹದೇವನು ಅಗ್ರಪೂಜೆಯನ್ನು ಪೂರೈಸಿದುದು

ಹೀಗೆ ಹೇಳಿದ ಮಹಾಯಶಸ್ವಿ ಭೀಷ್ಮನು ಸುಮ್ಮನಾದನು. ಅದಕ್ಕೆ ಉತ್ತರವಾಗಿ ಸಹದೇವನು ಅರ್ಥವತ್ತಾದ ಮಾತುಗಳನ್ನಾಡಿದನು:

"ಅಪ್ರಮೇಯ ಪರಾಕ್ರಮಿ ಕೇಶಿಹಂತಾರ ಕೇಶವ ಕೃಷ್ಣನನ್ನು ನಾನು ಪೂಜಿಸಿದ್ದುದನ್ನು ಯಾರಿಗೆ ಸಹಿಸಲಿಕ್ಕಾಗಲಿಲ್ಲವೋ ಅವರೆಲ್ಲ ಬಲಿಗಳ ಶಿರಗಳನ್ನು ನನ್ನ ಈ ಪಾದದಿಂದ ತುಳಿಯುತ್ತೇನೆ. ನನ್ನ ಈ ಮಾತಿಗೆ ಅವನು ಸರಿಯಾದ ಉತ್ತರವನ್ನು ನೀಡಲಿ! ಆದರೆ ಮತಿವಂತ ನೃಪರು ಅವನು ಆಚಾರ್ಯ, ಪಿತ, ಗುರು, ಅರ್ಚಿತನು, ಅರ್ಚನೆಗರ್ಹ, ಮತ್ತು ಅರ್ಚಿಸಬೇಕಾದವನು ಎಂದು ತಿಳಿದಿದ್ದಾರೆ."

ಹೀಗೆ ಅವನು ತನ್ನ ಪಾದವನ್ನು ತೋರಿಸಿದಾಗ ಅಲ್ಲಿದ್ದ ಬುದ್ಧಿವಂತ, ಸಂತ, ಗೌರವಾನ್ವಿತ, ಬಲಶಾಲಿ ರಾಜರು ಯಾರೂ ಮಾತನಾಡಲಿಲ್ಲ. ಆಗ ಸಹದೇವನ ತಲೆಯಮೇಲೆ ಪುಷ್ಪವೃಷ್ಠಿಯು ಬಿದ್ದಿತು ಮತ್ತು "ಸಾಧು! ಸಾಧು!" ಎಂಬ ಅದೃಶ್ಯ ರೂಪೀ ಮಾತುಗಳು ಕೇಳಿಬಂದವು. ಆಗ ಭೂತಭವಿಷ್ಯಗಳನ್ನು ತಿಳಿದಿರುವ, ಸರ್ವಸಂಶಯ ನಿರ್ಮೋಕ್ತ, ಸರ್ವಲೋಕವಿದು ನಾರದನು ತನ್ನ ಕೃಷ್ಣಾಜಿನವನ್ನು ಮುಟ್ಟಿದನು. ಸುನೀಥನ ನಾಯಕತ್ವದಲ್ಲಿ

ಆಗಮಿಸಿದ್ದ ಅತಿಥಿ ಗಣಗಳಲ್ಲಿದ್ದ ಎಲ್ಲರೂ ಸಂಕೃದ್ಧರಾಗಿ ವಿವರ್ಣವದನರಾಗಿ ಕಂಡು ಬಂದರು. ಯುಧಿಷ್ಠಿರನ ಅಭಿಷೇಕ ಮತ್ತು ವಾಸುದೇವನಿಗಿತ್ತ ಪೂಜೆಯ ಕುರಿತು ಇವಕ್ಕೆಲ್ಲ ತಾವೇ ಅರ್ಹರಾಗಿದ್ದರೆಂದು ತಿಳಿದ ರಾಜರು ಮಾತನಾಡಿಕೊಂಡರು. ಮಿತ್ರರು ಅವರನ್ನು ತಡೆಯಲು ಹಸಿಮಾಂಸದ ತುಂಡಿನಿಂದ ದೂರಕ್ಕೆ ಎಳೆಯಲ್ಪಡುತ್ತಿರುವ ಸಿಂಹಗಳು ಗರ್ಜಿಸುವಂತೆ ಕಂಡುಬರುತ್ತಿದ್ದರು. ಆಗ ಆ ಅಕ್ಷಯ ರಾಜಸಾಗರವು ತಮ್ಮ ಸೇನೆಗಳನ್ನು ಒಟ್ಟುಮಾಡಿಕೊಂಡು ಯುದ್ಧಕ್ಕೆ ತಯಾರಿ ನಡೆಸುತ್ತಿದೆ ಎನ್ನುವುದನ್ನು ಕೃಷ್ಣನು ಅರ್ಥಮಾಡಿಕೊಂಡನು. ಮನುಷ್ಯರಲ್ಲಿ ದೇವನಂತಿದ್ದ ಸಹದೇವನು ಪೂಜಾರ್ಹ ಬ್ರಾಹ್ಮಣ-ಕ್ಷತ್ರಿಯರನ್ನು ವಿಶೇಷವಾಗಿ ಪೂಜಿಸಿ ಆ ಕರ್ಮವನ್ನು ಪೂರೈಸಿದನು.

## ಯುಧಿಷ್ಠಿರನ ಆಶ್ವಾಸನೆ

ಕೃಷ್ಣನನ್ನು ಅರ್ಚಿಸಿದ ನಂತರ ಶತ್ರುಕರ್ಷಣ ಸುನೀಥನು ಕೋಪದಿಂದ ತನ್ನ ಕಣ್ಣುಗಳನ್ನು ಅತೀವ ಕೆಂಪಾಗಿಸಿಕೊಂಡು ಮನುಜಾಧಿಪರನ್ನುದ್ದೇಶಿಸಿ ಹೇಳಿದನು:

> "ನಾನು ನಿಮ್ಮ ಸೇನಾಪತಿಯಾಗಿ ನಿಂತಿದ್ದೇನೆ. ನಿಮಗೆಲ್ಲರಿಗೂ ಸ್ವೀಕಾರವಿದೆ ತಾನೆ? ಇಲ್ಲಿ ಒಂದಾಗಿರುವ ವೃಷ್ಣಿ-ಪಾಂಡವರೊಂದಿಗೆ ಯುದ್ಧಕ್ಕೆ ಸನ್ನದ್ಧನಾಗಿ ನಿಂತಿದ್ದೇನೆ."




ಹೀಗೆ ರಾಜರೆಲ್ಲರೂ ಉತ್ಸಾಹದಿಂದ ಮೇಲೇಳಲು, ಚೇದಿಪುಂಗವನು ರಾಜರೊಂದಿಗೆ ಈ ಯಜ್ಞವನ್ನು ಭಂಗಪಡಿಸುವ ಕುರಿತು ಯೋಚಿಸಿದನು.

ಈ ರೀತಿ ಸಾಗರಸಂಕಾಶ ಸರ್ವ ನೃಪತಿಸಾಗರವು ರೋಷದಿಂದ ಪ್ರಚಲಿತವಾದುದನ್ನು ಕಂಡ ಯುಧಿಷ್ಠಿರನು ಮತಿಮತರಲ್ಲಿ ಶ್ರೇಷ್ಠ ವೃದ್ಧ ಕುರುಪಿತಾಮಹ ಬೃಹಸ್ಪತಿಯಂತೆ ಬೃಹತ್ತೇಜಸ್ವಿ ಪುರುಹೂತ ಭೀಷ್ಮನಲ್ಲಿ ಈ ರೀತಿ ಕೇಳಿಕೊಂಡನು:

"ಈ ಮಹಾನೃಪತಿಸಾಗರವು ರೋಷದಿಂದ

ಪ್ರಚಲಿತವಾಗುತ್ತಿದೆ. ಪಿತಾಮಹ! ಹೀಗಿರುವಾಗ ನಾನು ಏನನ್ನು ಮಾಡಬೇಕೆಂದು ಹೇಳು. ಈ ಯಜ್ಞವು ವಿಘ್ನವಾಗದಂತೆ ಮತ್ತು ಪ್ರಜೆಗಳಿಗೆ ಶುಭವಾಗುವಂಥೆ ನಾನು ಏನು ಮಾಡಬಹುದೆಂದು ಸರ್ವವನ್ನೂ ಇಂದು ನನಗೆ ಹೇಳು."

ಧರ್ಮಜ್ಞ ಧರ್ಮರಾಜ ಯುಧಿಷ್ಠಿರನು ಈ ರೀತಿ ಹೇಳಲು ಕುರುಪಿತಾಮಹ ಭೀಷ್ಮನು ಈ ಮಾತುಗಳನ್ನಾಡಿದನು.

"ಕುರುಶಾರ್ದೂಲ! ಭಯಪಡದಿರು! ನಾಯಿಯು ಸಿಂಹವನ್ನು ಕೊಲ್ಲಬಲ್ಲದೇ? ಇದರ ಹಿಂದೆಯೇ ನಾನು ಒಂದು ಮಂಗಳಕರ ಸುನೀತಿಯುಕ್ತ ದಾರಿಯನ್ನು ಆರಿಸಿಕೊಂಡಿದ್ದೇನೆ. ಈ ಎಲ್ಲ ವಸುಧಾಧಿಪರೂ ಸಿಂಹವು ಮಲಗಿರುವ ಸಮಯದಲ್ಲಿ ಬೊಗಳುವ ನಾಯಿಗಳ ಪಡೆಯಂತೆ ಸೇರಿಕೊಂಡಿದ್ದಾರೆ. ಇವರೆಲ್ಲರೂ ಮಲಗಿರುವ ವೃಷ್ಣಿಸಿಂಹನ ಎದುರು ನಿಂತು ಸಿಂಹನ ಸನ್ನಿಧಿಯಲ್ಲಿ ಬೊಗಳುವ ನಾಯಿಗಳಂತೆ ಬೊಗಳುತ್ತಿದ್ದಾರೆ. ಎಲ್ಲಿಯವರೆಗೆ ಮಲಗಿರುವ ಸಿಂಹದಂತಿರುವ ಅಚ್ಯುತನು ಏಳುವುದಿಲ್ಲವೋ ಅಲ್ಲಿಯವರೆಗೆ ಅವರೆಲ್ಲರೂ ಆ ನರಸಿಂಹ ಚೇದಿಪುಂಗವನನ್ನು ಸಿಂಹನನ್ನಾಗಿ ಮಾಡುತ್ತಿದ್ದಾರೆ. ಮಗೂ! ಅಲ್ಪಚೇತನ ಶಿಶುಪಾಲನು ಪಾರ್ಥಿವ

ಸರ್ವರನ್ನೂ, ಯಾರನ್ನೂ ಬಿಡದೇ, ತನ್ನೊಂದಿಗೆ ಯಮಲೋಕಕ್ಕೆ ಕರೆದೊಯ್ಯಲು ಬಯಸುತ್ತಿದ್ದಾನೆ. ಅಧೋಕ್ಷಜನು ಶಿಶುಪಾಲನಲ್ಲಿರುವ ತೇಜಸ್ಸನ್ನು ಹಿಂದೆ ತೆಗೆದುಕೊಳ್ಳಲು ಬಯಸುತ್ತಿದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ. ನಿನಗೆ ಮಂಗಳವಾಗಲಿ. ಚೇದಿರಾಜನ ಮತ್ತು ಸರ್ವ ಮಹೀಕ್ಷಿತರ ಬುದ್ಧಿಯು ಕೆಟ್ಟುಹೋಗಿದೆ. ಯಾಕೆಂದರೆ ಈ ನರವ್ಯಾಘ್ರನು ಯಾರನ್ನು ತೆಗೆದುಕೊಳ್ಳಲು ಇಚ್ಛಿಸುತ್ತಾನೋ ಅವರ ಬುದ್ಧಿಯು ಚೇದಿಪತಿಯ ಬುದ್ಧಿಯು ಹೇಗೆ ಕೆಟ್ಟುಹೋಗಿದೆಯೋ ಹಾಗೆ ಕೆಟ್ಟುಹೋಗುತ್ತದೆ. ಮೂರೂ ಲೋಕಗಳ ಎಲ್ಲ ಚತುರ್ವಿಧ ಭೂತಗಳಿಗೆ ಮಾಧವನೇ ಪ್ರಭವ ಮತ್ತು ನಿಧನ.”

## ಶಿಶುಪಾಲನ ಮಾತು

ಅವನ ಈ ಮಾತುಗಳನ್ನು ಕೇಳಿದ ಚೇದಿಪತಿ ನೃಪನು ಬೀಷ್ಮನಿಗೆ ಸಿಟ್ಟಿನಿಂದ ಈ ಮಾತುಗಳನ್ನು ಹೇಳಿದನು:

“ಕುಲಘಾತಕ! ಈ ರೀತಿ ನಿನ್ನ ಹಲವಾರು ಹೆದರಿಕೆಗಳಿಂದ ಸರ್ವ ಪಾರ್ಥಿವರನ್ನೂ ಭಯಪಡಿಸುತ್ತಿರುವ ನಿನಗೆ ನಾಚಿಕೆಯಾದರೂ ಏಕೆ ಆಗುವುದಿಲ್ಲ? ನಪುಂಸಕನಂತೆ ಜೀವಿಸುತ್ತಿರುವ ನಿನಗೆ ಈ ರೀತಿ ಧರ್ಮ ವಿರುದ್ಧ ಮಾತುಗಳನ್ನಾಡುವುದು ನಿಜವಾಗಿಯೂ ಸರಿಯೆನಿಸುತ್ತದೆ.

ಇನ್ನೊಂದು ದಾರಿತಪ್ಪಿದ ದೋಣಿಗೆ ಕಟ್ಟಿದ ದೋಣಿಯಂತೆ, ಕುರುಡನನ್ನು ಹಿಂಬಾಲಿಸುವ ಕುರುಡನಂತೆ ಕೌರವರೆಲ್ಲರೂ ನಿನ್ನನ್ನು ತಮ್ಮ ಮುಖಂಡನನ್ನಾಗಿ ಹೊಂದಿದ್ದಾರೆ. ಹಿಂದೆ ಇವನು ಪೂತನಿಯನ್ನು ಕೊಂದ ಕೆಲಸವನ್ನು ವಿಶೇಷವಾಗಿ ಹೊಗಳುತ್ತಾ ನೀನು ನಮ್ಮ ಮನಸ್ಸೆಲ್ಲವೂ ಕುಸಿದುಬೀಳುವಂತೆ ಮಾಡಿರುವೆ. ಕೇಶವನನ್ನು ಸ್ತುತಿಸಲು ಬಯಸುವ ನಿನ್ನ ನಾಲಗೆಯು ಹೇಗೆ ನೂರು ಚೂರುಗಳಾಗಿ ಒಡೆದು ಹೋಗಿಲ್ಲ? ಜ್ಞಾನವೃದ್ಧ ನೀನು ಮೂಢರೂ ಹೀಗಳೆಯುವ ಗೋಪನನ್ನು ಸಂಸ್ತುತಿಸಲು ಇಚ್ಛಿಸುವೆಯಾ! ಬಾಲ್ಯದಲ್ಲಿ ಅವನು ಶಕುನಿಯೊಂದನ್ನು ಕೊಂದನೆಂದರೆ ಅದರಲ್ಲಿ ಆಶ್ಚರ್ಯವೇನು? ಆ ಅಶ್ವ ವೃಷಭರು ಯುದ್ಧವಿಶಾರದರಾಗಿರಲಿಲ್ಲ. ಚೇತನಾರಹಿತ ಕಟ್ಟಿಗೆಯ ಬಂಡಿಯನ್ನು ಪಾದದಿಂದ ಒದ್ದು ಬೀಳಿಸಿದನೆಂದರೆ ಅದರಲ್ಲಿ ಯಾವ ರೀತಿಯ ಅದ್ಭುತವನ್ನು ಮಾಡಿದಹಾಗಾಯಿತು? ಕೇವಲ ಹುತ್ತದ ಗಾತ್ರದ ಗೋವರ್ಧನ ಪರ್ವತವನ್ನು ಏಳು ದಿನಗಳ ಪರ್ಯಂತ ಅವನು ಎತ್ತಿ ಹಿಡಿದನೆಂದರೆ ಅದೊಂದು ಪವಾಡವಲ್ಲ ಎನ್ನುವುದು ನನ್ನ ಅಭಿಪ್ರಾಯ. ಅವನು ಪರ್ವತದ ಮೇಲೆ ಆಡುತ್ತಿರುವಾಗ ಬಹಳಷ್ಟು ಆಹಾರವನ್ನು ತಿನ್ನನೆಂದು ನಮಗೆ ಹೇಳುವ ನೀನು ನಮ್ಮನ್ನೆಲ್ಲ ಬಹಳ ವಿಸ್ಮಿತರನ್ನಾಗಿ

ಮಾಡಿದ್ದೀಯೆ. ಯಾರ ಅನ್ನವನ್ನು ತಿಂದಿದ್ದನೋ ಅದೇ ಬಲಶಾಲಿ ಕಂಸನನ್ನು ಇವನು ಕೊಂದನೆನ್ನುವುದು ಧರ್ಮಜ್ಞ ನಿನಗೆ ಮಹಾದ್ಭುತವೆಂದು ತೋರುವುದಿಲ್ಲವೇ? ಸತ್ಯವಂತರು ಹೇಳುವ ಈ ವಿಷಯಗಳನ್ನು ಅಧರ್ಮಜ್ಞ ನೀನು ಕೇಳಿಲ್ಲ ಎನ್ನುವುದು ನಿಶ್ಚಿತ! ಸ್ತ್ರೀಯರ, ಗೋವುಗಳ, ಬ್ರಾಹ್ಮಣರ, ಯಾರ ಅನ್ನವನ್ನು ತಿಂದಿದ್ದೀವೋ ಅವರ ಮೇಲೆ ಮತ್ತು ಶರಣಾಗತರಾದವರ ಮೇಲೆ ಶಸ್ತ್ರಗಳನ್ನು ಪ್ರಯೋಗಿಸಬಾರದು ಎಂದು ಸಂತರು, ಧಾರ್ಮಿಕರು ಮತ್ತು ಸಜ್ಜನರು ಸದಾ ಹೇಳಿದ್ದಾರೆ. ಭೀಷ್ಮ! ನೀನು ಲೋಕದಲ್ಲಿನ ಇವೆಲ್ಲವನೂ ತಿರಸ್ಕರಿಸಿರುವಂತೆ ತೋರುತ್ತಿದೆ. ನನಗೇನೂ ತಿಳಿದಿಲ್ಲ ಎನ್ನುವ ರೀತಿಯಲ್ಲಿ ನೀನು ಕೇಶವನು ಜ್ಞಾನವೃದ್ಧ, ವೃದ್ಧ ಎಂದು ಸ್ತುತಿಸುತ್ತಿದ್ದೀಯಲ್ಲ! ಓರ್ವ ಗೋಹಂತಕ ಮತ್ತು ಸ್ತ್ರೀ ಹಂತಕನು ಹೇಗೆ ಸ್ತುತಿಗೆ ಅರ್ಹನಾಗುತ್ತಾನೆ? ಇವನು ಮತಿವಂತರಲ್ಲೆಲ್ಲಾ ಶ್ರೇಷ್ಠನು, ಇವನೇ ಜಗತ್ಪ್ರಭು ಎಂಬ ನಿನ್ನ ಈ ಮಾತುಗಳನ್ನು ಜನಾರ್ದನನೂ ಇವೆಲ್ಲವೂ ಸತ್ಯವೆಂದು ತಿಳಿದಿದ್ದಾನೆ. ಆದರೆ ಇವೆಲ್ಲವೂ ಸುಳ್ಳು ಎನ್ನುವುದಂತೂ ನಿಶ್ಚಿತ. ಎಷ್ಟು ಬಾರಿ ಹಾಡಿದರೂ ಹಾಡು ಹಾಡುಗಾರನನ್ನು ಪ್ರಶಂಸಿಸುವುದಿಲ್ಲ. ಭೂಲಿಂಗ ಪಕ್ಷಿಯಂತೆ ಇರುವವೆಲ್ಲವೂ ಪ್ರಕೃತಿಯನ್ನು ಅನುಸರಿಸುತ್ತವೆ. ನಿನ್ನ ಸ್ವಭಾವವು ಅತ್ಯಂತ ಕೀಳಾದದ್ದು ಎನ್ನುವುದರಲ್ಲಿ

ಸಂಶಯವೇ ಇಲ್ಲ. ಸತ್ಯದ ದಾರಿತಪ್ಪಿದ, ಅಧರ್ಮಜ್ಞನಾಗಿದ್ದೂ ಧರ್ಮದ ಮಾತನಾಡುವ ನಿನ್ನ ಹೇಳಿಕೆಯಂತೆ ಕೃಷ್ಣನಿಗೆ ಅತ್ಯುನ್ನತ ಗೌರವವನ್ನು ನೀಡಬೇಕು ಎಂದು ತಿಳಿಯುವ ಈ ಪಾಂಡವರೂ ಕೂಡ ಪಾಪಿಗಳಿರಬೇಕು. ತಾನು ಧರ್ಮಿಯೆಂದು ತಿಳಿದ ಯಾರುತಾನೆ ಧರ್ಮವನ್ನೇ ಕಡೆಗಣಿಸಿ ನಿನ್ನಂತೆ ನಡೆದುಕೊಳ್ಳುತ್ತಾರೆ? ನೀನೊಬ್ಬ ಪ್ರಾಜ್ಞಮಾನಿ, ಧರ್ಮಜ್ಞ ಎಂದು ತಿಳಿದುಕೊಂಡರೆ ಅನ್ಯನನ್ನು ಕಾಮಿಸುತ್ತಿದ್ದ ಅಂಬಾ ಎಂಬ ಹೆಸರಿನವಳನ್ನು ನೀನು ಏಕೆ ಅಪಹರಿಸಿದೆ? ನಿನ್ನಿಂದ ಅಪಹೃತಳಾದ ಕನ್ಯೆಯನ್ನು ನಿನ್ನ ಭ್ರಾತ ವಿಚಿತ್ರವೀರ್ಯನು ಸ್ವೀಕರಿಸದೇ ಸತ್ಯವಂತರಹಾಗೆ ನಡೆದುಕೊಂಡನು. ಅವನ ಪತ್ನಿಯರಲ್ಲಿ ಇನ್ನೊಬ್ಬ ಪ್ರಾಜ್ಞಮಾನಿಯು ನಿನಗಾಗಿ ಸಂತಾನವನ್ನು ಹುಟ್ಟಿಸಿ ಸಜ್ಜನರು ಆಚರಿಸುವ ದಾರಿಯಲ್ಲಿ ನಡೆದುಕೊಳ್ಳುವಹಾಗೆ ಮಾಡಬೇಕಾಯಿತು. ಮೋಹದಿಂದ ಅಥವಾ ಕ್ಲೀಬತ್ವದಿಂದ ನೀನು ವೃಥಾ ಆಚರಿಸುತ್ತಿರುವ ಈ ಬ್ರಹ್ಮಚರ್ಯವು ನಿನ್ನ ಧರ್ಮವಲ್ಲ ಭೀಷ್ಮ! ನೀನು ಏಳ್ಗೆಯನ್ನು ಕಾಣುತ್ತೀಯೆ ಎಂದು ನನಗೆ ಅನ್ನಿಸುವುದಿಲ್ಲ. ನೀನು ಎಂದೂ ವೃದ್ಧರ ಸೇವೆಯನ್ನೂ ಮಾಡಲಿಲ್ಲ. ಧರ್ಮದಲ್ಲಿ ಹೇಳಿದ ಪ್ರಕಾರ ದಾನವನ್ನು ನೀಡುವುದು, ಬಹುದಕ್ಷಿಣೆಯುಕ್ತ ಯಜ್ಞ ಇವೆಲ್ಲವೂ ಸಂತಾನದ ಮುಂದೆ

ಹದಿನಾರರ ಒಂದಂಶವೂ ಅಲ್ಲ. ಬಹಳಷ್ಟು ವ್ರತ ಉಪವಾಸಗಳನ್ನು ಮಾಡಿದ್ದರೂ ಎಲ್ಲವೂ ಸಂತಾನವಿಲ್ಲವೆಂದರೆ ವ್ಯರ್ಥವಾಗುತ್ತವೆ ಎಂದು ನಿಶ್ಚಯವಾಗಿದೆ. ಸುಳ್ಳುಧರ್ಮವನ್ನು ಅನುಸರಿಸುವ ನೀನು ಮಕ್ಕಳಿಲ್ಲದೇ ವೃದ್ಧನಾಗುತ್ತೀಯೆ. ಹಂಸದಂತೆ ಈಗ ನಿನ್ನ ಬಂಧುಗಳ ಕೈಯಲ್ಲಿಯೇ ಸಾವನ್ನು ಹೊಂದು. ಜ್ಞಾತಿವಿದ ಜನರು ಹಿಂದೆ ಹೇಳುತ್ತಿದ್ದ ಕಥೆಯನ್ನು ಇದ್ದಹಾಗೆಯೇ ನಿನಗೆ ಹೇಳುತ್ತೇನೆ. ಅದನ್ನು ಕೇಳು.

ಹಿಂದೆ ಸಮುದ್ರ ತೀರದಲ್ಲಿ ಧರ್ಮವನ್ನು ಮಾತನಾಡುವ ಆದರೆ ಆಚರಿಸದಿರುವ ವೃದ್ಧ ಹಂಸವೊಂದು ಇರುತ್ತಿತ್ತು. ಅದು ಇತರ ಪಕ್ಷಿಗಳಿಗೆ ಧರ್ಮದಲ್ಲಿ ನಡೆದುಕೋ, ಅಧರ್ಮದಲ್ಲಿ ಬೇಡ ಎಂದು ಧರ್ಮದ ಉಪದೇಶವನ್ನು ನೀಡುತ್ತಿತ್ತು. ಆ ಧರ್ಮವಾದಿಯಿಂದ ಸತತವೂ ಇದನ್ನೇ ಪಕ್ಷಿಗಳು ಕೇಳುತ್ತಿದ್ದವು. ಇತರ ಪಕ್ಷಿಗಳು ಅವನಿಗೆ ಆಹಾರ, ಸಮುದ್ರದ ನೀರಿನಲ್ಲಿ ವಾಸಿಸುತ್ತಿದ್ದ ಮೀನುಗಳು ಮೊದಲಾದವುಗಳನ್ನು ಧರ್ಮಾರ್ಥ ತಂದುಕೊಡುತ್ತಿದ್ದವು. ಮತ್ತು ಆ ಪಕ್ಷಿಗಳು ಎಲ್ಲವೂ ತಮ್ಮ ಮೊಟ್ಟೆಗಳನ್ನು ಇವನಲ್ಲಿ ಇಟ್ಟು ಸಮುದ್ರದ ನೀರಿನಲ್ಲಿ ವಿನೋದಿಸುತ್ತಿದ್ದವು. ಇತರರು ಸಂಪ್ರಮತ್ತರಾಗಿದ್ದಾಗ ತನ್ನ ಕೆಲಸವನ್ನು

ನೋಡಿಕೊಳ್ಳುವ ಆ ಪಾಪಕರ್ಮಿ ಹಂಸವು ಅವರ ಎಲ್ಲ ಮೊಟ್ಟೆಗಳನ್ನೂ ತಿಂದು ಹಾಕಿತು. ಮೊಟ್ಟೆಗಳ ಸಂಖ್ಯೆಯು ಬಹಳಷ್ಟು ಕಡಿಮೆಯಾಗುತ್ತಿರುವುದನ್ನು ನೋಡಿದ ಕೆಲವು ಬುದ್ಧಿವಂತ ಪಕ್ಷಿಗಳು ಅವನನ್ನು ಶಂಕಿಸಿ ಅವನ ಮೇಲೆ ಕಣ್ಣಿಟ್ಟವು. ಆ ಹಂಸದ ಕೆಟ್ಟಕಾರ್ಯವನ್ನು ನೋಡಿದ ಅವುಗಳು ಪರಮದುಃಖಾರ್ತರಾಗಿ ಇತರ ಸರ್ವ ಪಕ್ಷಿಗಳಿಗೂ ತಿಳಿಸಿದವು. ಆ ಎಲ್ಲ ಪಕ್ಷಿಗಳೂ ಒಂದಾಗಿ ಪ್ರತ್ಯಕ್ಷತಃ ಅವನನ್ನು ನೋಡಿ, ಸುಳ್ಳುನಡೆದುಕೊಳ್ಳುತ್ತಿದ್ದ ಆ ಹಂಸವನ್ನು ಕೊಂದುಹಾಕಿದವು. ಪಕ್ಷಿಗಳು ಆ ಹಂಸವನ್ನು ಕೊಂದಹಾಗೆ ಈ ವಸುಧಾಧಿಪರೂ ಕೂಡ ಸಂಕೃದ್ಧರಾಗಿ ಹಂಸಧರ್ಮದಂತೆ ನಿನ್ನನ್ನು ಕೊಲ್ಲುತ್ತಾರೆ. ಪುರಾಣವನ್ನು ತಿಳಿದ ಜನರು ಇದರ ಮೇಲೆ ಒಂದು ಹಾಡನ್ನು ಹಾಡುತ್ತಾರೆ. ಅದನ್ನು ನಿನಗೆ ಇದ್ದಹಾಗೆ ಹೇಳುತ್ತೇನೆ. ನೀನು ಸುಳ್ಳನ್ನು ಹೇಳುತ್ತಿರುವಾಗ ನಿನ್ನ ಅಂತರಾತ್ಮವು ಇನ್ನೊಂದೆಡೆಗೆ ತಿರುಗಿರುತ್ತದೆ. ಮೊಟ್ಟೆಯನ್ನು ತಿನ್ನುವ ಈ ನಿನ್ನ ಅಪಕೃತ್ಯವು ನೀನು ಮಾತನಾಡುವುದರಕ್ಕಿಂತ ಬೇರೆಯಾಗಿದೆ.

"ನೀನು ದಾಸನಿಗಿಂತ ಹೆಚ್ಚಿನವನಲ್ಲ!" ಎಂದು ಹೇಳಿ ಇವನೊಂದಿಗೆ ಯುದ್ಧಮಾಡಲು ನಿರಾಕರಿಸಿದ ಮಹಾಬಲಿ

ಜರಾಸಂಧನನ್ನು ನಾನು ತುಂಬಾ ಗೌರವಿಸುತ್ತಿದ್ದೆ. ಕೇಶವನಿಂದ, ಮತ್ತು ಭೀಮಸೇನ ಅರ್ಜುನರಿಂದ ಆದ ಜರಾಸಂಧವಧೆಯನ್ನು ಯಾರುತಾನೆ ಒಳ್ಳೆಯದಾಯಿತೆಂದು ಸ್ವೀಕರಿಸುತ್ತಾರೆ? ಧೀಮಂತ ಜರಾಸಂಧನು ಬ್ರಹ್ಮವಾದಿಯ ವೇಷದಲ್ಲಿದ್ದ ಕೃಷ್ಣನನ್ನು ಯಾವ ದ್ವಾರದಿಂದ ಪ್ರವೇಶಿಸಿದುದನ್ನೂ ನೋಡಲಿಲ್ಲ. ಆ ಧರ್ಮಾತ್ಮನು ಇವರು ಬ್ರಾಹ್ಮಣರೆಂದು ತಿಳಿದು ಈ ದುರಾತ್ಮ ಕೃಷ್ಣ, ಭೀಮ, ಧನಂಜಯರಿಗೆ ಮೊದಲು ಪಾದ್ಯವನ್ನು ನೀಡಿ, ನಂತರ ಭೋಜನ ಮಾಡಿ ಎಂದು ಹೇಳಿದನು. ಕೃಷ್ಣನು ಜರಾಸಂಧನಿಗೆ ಮೋಸಮಾಡಿದನು. ಮೂರ್ಖನಾದ ನೀನು ತಿಳಿದಂತೆ ಒಂದುವೇಳೆ ಇವನೇನಾದರೂ ಜಗತ್ತಿನ ಕರ್ತುವಾಗಿದ್ದರೆ, ಅವನು ಅಲ್ಲಿಗೆ ತನ್ನನ್ನು ಬ್ರಾಹ್ಮಣನನ್ನಾಗಿಸಿಕೊಂಡು ಏಕೆ ಹೋದನು? ನಿನ್ನಿಂದ ಸತ್ಯವಂತರ ಮಾರ್ಗವನ್ನು ಕಳೆದುಕೊಂಡ ಪಾಂಡವರು ಈಗಲೂ ನಿನ್ನನ್ನು ಸಾಧುವೆಂದು ತಿಳಿಯುತ್ತಿದ್ದಾರಲ್ಲ. ಅದೇ ನನಗೆ ಬಹಳ ಆಶ್ಚರ್ಯವೆನಿಸುತ್ತದೆ. ಅಥವಾ ಅವರಿಗೆ ಸ್ತ್ರೀಯಂತೆ ನಡೆದುಕೊಳ್ಳುತ್ತಿರುವ ವೃದ್ಧ ಭಾರತ ನೀನು ಸರ್ವವಿಷಯಗಳ ಮಾರ್ಗದರ್ಶಕ ಎನ್ನುವುದು ಬಹುಷಃ ಅಷ್ಟೊಂದು ಆಶ್ಚರ್ಯಕರವಾದದ್ದು ಇಲ್ಲದಿರಬಹುದು."

## ಭೀಮನ ಕ್ರೋಧ

ಕಟುಶಬ್ಧಗಳಿಂದ ಕೂಡಿದ ಅವನ ಈ ಸುದೀರ್ಘ ಕಟು ಮಾತುಗಳನ್ನು ಕೇಳಿದ ಬಲಶಾಲಿಗಳಲ್ಲಿ ಶ್ರೇಷ್ಠ ಪ್ರತಾಪಿ ಭೀಮಸೇನನು ಸಿಟ್ಟಿಗೆದ್ದನು. ಪದ್ಮದಂತೆ ಸ್ವಭಾವತಃ ಶಾಂತವಾಗಿದ್ದ ಕಣ್ಣುಗಳು ಕ್ರೋಧದಿಂದ ಕೆಂಪಾದವು ಮತ್ತು ಕಣ್ಣಂಚು ತಾಮ್ರದ ಬಣ್ಣವನ್ನು ತಾಳಿತು. ಅವನ ಹಣೆಯ ಹುಬ್ಬುಗಳು ತ್ರಿಕೂಟದಿಂದ ಮೂರು ಭಾಗಗಳಾಗಿ ಹರಿಯುವ ಗಂಗೆಯಂತೆ ಮೂರು ಪದರಗಳಲ್ಲಿ ಬಿಗಿಯಾದುದನ್ನು ಸರ್ವ ಪಾರ್ಥಿವರೂ ನೋಡಿದರು. ಅವನು ಯುಗಾಂತದಲ್ಲಿ ಸರ್ವಭೂತಗಳನ್ನೂ ಸುಟ್ಟುಬಿಡುವ ಕಾಲನಂತೆ ಕೋಪದಿಂದ ಹಲ್ಲು ಕಡೆಯುತ್ತಿದ್ದುದನು ನೋಡಿದರು. ಆದರೆ ವೇಗದಿಂದ ಮೇಲೆದ್ದು ಮುಂದೆಬರುತ್ತಿದ್ದ ಮಹಾಬಾಹು ಭೀಮಸೇಸನನ್ನು ಈಶ್ವರ ಭೀಷ್ಮನು ತಡೆಹಿಡಿದನು. ಭೀಷ್ಮನು ಭೀಮನನ್ನು ತಡೆಯಲು, ಗುರುವಿನ ವಿವಿಧ ವಾಕ್ಯಗಳಿಂದ ಅವನ ಕ್ರೋಧವು ಪ್ರಶಮನವಾಯಿತು. ಮಳೆಗಾಲದಲ್ಲಿ ಮಹೋದಧಿಯು ಎಷ್ಟೇ ಭರತ ಹೊಂದಿದರೂ ಪ್ರವಾಹರೇಖೆಯನ್ನು ಹೇಗೆ ದಾಟುವುದಿಲ್ಲವೋ ಹಾಗೆ ಆ ಅರಿಂದಮನು ಭೀಷ್ಮನ ವಾಕ್ಯವನ್ನು ಅತಿಕ್ರಮಿಸಲಿಲ್ಲ. ಸಂಕೃದ್ಧ ಭೀಮಸೇನನಿಗೆ ಶಿಶುಪಾಲನು ಹೆದರಲಿಲ್ಲ ಮತ್ತು ಆ ವೀರನು ತನ್ನ ಪೌರುಷದಲ್ಲಿಯೇ ವ್ಯವಸ್ಥಿತನಾಗಿದ್ದನು. ಆ ಅರಿಂದಮನು ಪುನಃ ಪುನಃ ವೇಗದಿಂದ ಎದ್ದೇಳುತ್ತಿದ್ದರೂ ಒಂದು ಸಿಂಹವು ಕ್ಷುದ್ರಮೃಗವನ್ನು ಹೇಗೋ ಹಾಗೆ ಅವನ ಕುರಿತು ಸ್ವಲ್ಪವೂ

ಚಿಂತಿಸಲಿಲ್ಲ. ಭೀಮಪರಾಕ್ರಮಿ ಅತಿಕೃದ್ಧ ಭೀಮಸೇನನನ್ನು ನೋಡಿ ಪ್ರತಾಪಿ ಚೇದಿರಾಜನು ಜೋರಾಗಿ ನಗುತ್ತಾ ಹೇಳಿದನು:

> “ಭೀಷ್ಮ ! ಅವನನ್ನು ಬರಲು ಬಿಡು. ಅಗ್ನಿಯಲ್ಲಿ ಪತಂಗದಂತೆ ನನ್ನ ಪ್ರತಾಪಾಗ್ನಿಯಲ್ಲಿ ಇವನು ಸುಟ್ಟುಹೋಗುವುದನ್ನು ನರಾಧಿಪರೆಲ್ಲ ನೋಡಲಿ !”

## ಶಿಶುಪಾಲವೃತ್ತಾಂತ ಕಥನ

ಆಗ ಚೇದಿಪತಿಯ ಈ ಮಾತುಗಳನ್ನು ಕೇಳಿದ ಮತಿವಂತರಲ್ಲಿ ಶ್ರೇಷ್ಠ ಕುರುಸತ್ತಮ ಭೀಷ್ಮನು ಬೀಮಸೇನನಿಗೆ ಈ ಮಾತುಗಳನ್ನಾಡಿದನು:

> “ಚೇದಿರಾಜಕುಲದಲ್ಲಿ ಇವನು ಮೂರು ಕಣ್ಣುಗಳು ಮತ್ತು ನಾಲ್ಕು ಭುಜಗಳುಳ್ಳವನಾಗಿ ಜನಿಸಿದನು. ಮತ್ತು ಅವನು ಕತ್ತೆಯಹಾಗೆ ಕಿರುಚಿಕೊಳ್ಳುತ್ತಿದ್ದನು. ಬಾಂಧವರೊಂದಿಗೆ ಅವನ ತಂದೆ ತಾಯಿಯರು ಅವನನ್ನು ನೋಡಿ ನಡುಗಿದರು ಮತ್ತು ಅವನ ವೈಕೃತವನ್ನು ಕಂಡು ಅವನನ್ನು ತ್ಯಾಗಿಸುವ ಮನಸ್ಸು ಮಾಡಿದರು. ಪತ್ನಿ, ಅಮಾತ್ಯರು ಮತ್ತು ಪುರೋಹಿತರೊಂದಿಗೆ ಚಿಂತೆಯಿಂದ ಸಮ್ಮೂಢ ಹೃದಯನಾದ ಆ ನೃಪತಿಗೆ ಒಂದು ಅಶರೀರವಾಣಿಯು ನುಡಿಯಿತು: ‘ನೃಪತೇ ! ನಿನಗೆ ಹುಟ್ಟಿದ ಪುತ್ರನು ಶ್ರೀಮಂತನೂ, ಮಹಾಬಲಿಯೂ ಆಗಿದ್ದಾನೆ. ಆದುದರಿಂದ ಈ ಶಿಶುವನ್ನು ಜಾಗರೂಕತೆಯಿಂದ ಪರಿಪಾಲಿಸು. ನೀನು

ಇವನ ಮೃತ್ಯುವಿಗೆ ಕಾರಣನಲ್ಲ ಮತ್ತು ಇವನ ಮೃತ್ಯುವಿನ ಕಾಲವೂ ಬಂದಿಲ್ಲ. ಇವನನ್ನು ಶಸ್ತ್ರದಿಂದ ಕೊಲ್ಲುವವನು ಈಗಾಗಲೇ ಹುಟ್ಟಿದ್ದಾನೆ.' ಈ ರೀತಿಯ ಅಂತರ್ಹಿತ ಮಾತುಗಳನ್ನು ಕೇಳಿದ ಅವನ ಜನನಿಯು ಪುತ್ರಸ್ನೇಹದಿಂದ ಸಂತಪ್ತಳಾಗಿ ಹೇಳಿದಳು: 'ನನ್ನ ಮಗನ ಕುರಿತಾಗಿ ಈ ವಾಕ್ಯವನ್ನು ಹೇಳಿದವನಿಗೆ ಕೈಜೋಡಿಸಿ ನಮಸ್ಕರಿಸಿ ಪುನಃ ಹೇಳಲು ಕೇಳಿಕೊಳ್ಳುತ್ತೇನೆ. ನನ್ನ ಈ ಪುತ್ರನ ಮೃತ್ಯುವು ಯಾರಿಂದ ಆಗುತ್ತದೆ ಎನ್ನುವುದನ್ನು ತಿಳಿಯಲು ಬಯಸುತ್ತೇನೆ.' ಆಗ ಅಂತರ್ಹಿತ ಭೂತವು ಪುನಃ ಹೀಗೆ ಹೇಳಿತು: 'ಯಾರು ತನ್ನ ತೊಡೆಯಮೇಲೆ ಇವನನ್ನು ಹಿಡಿದಾಗ ಅವನ ಅಧಿಕ ಎರಡು ಕೈಗಳು ಐದುಹೆಡೆಯ ಸರ್ಪದಂತೆ ಭೂಮಿಯಮೇಲೆ ಬೀಳುತ್ತವೆಯೋ ಮತ್ತು ಈ ಬಾಲಕನ ಹಣೆಯ ಮೇಲಿರುವ ಮೂರನೆಯ ಕಣ್ಣು ಕರಗಿ ಹೋಗುತ್ತದೆಯೋ ಅವನೇ ಇವನ ಮೃತ್ಯುವಾಗುತ್ತಾನೆ.' ಅವನಿಗೆ ಮೂರು ಕಣ್ಣುಗಳು ಮತ್ತು ನಾಲ್ಕು ಭುಜಗಳಿವೆ ಎಂದು ಕೇಳಿದ ಧರಣಿಯ ಸರ್ವ ಪಾರ್ಥಿವ ಸಮುದಾಯವೂ ಅವನನ್ನು ನೋಡಲು ಬಂದರು. ಆಗಮಿಸಿದವರನ್ನು ಮಹೀಪತಿಯು ಯಥಾರ್ಹ ಸ್ವಾಗತಿಸಿ ಒಬ್ಬೊಬ್ಬರ ತೊಡೆಯ ಮೇಲೂ ಪುತ್ರನನ್ನು ಕೂರಿಸಿದನು. ಈ ರೀತಿ ಆಗಮಿಸಿದ ಸಹಸ್ರಾರು ರಾಜರುಗಳ

ತೊಡೆಯಮೇಲೆ ಕೂರಿಸಿದರೂ ಭವಿಷ್ಯವಾಣಿಯು ನಿಜವಾಗಲಿಲ್ಲ. ಆಗ ಸಂಕರ್ಷಣ-ಜನಾರ್ದನರಿಬ್ಬರು ಯಾದವರೂ ತಮ್ಮ ತಂದೆಯ ತಂಗಿ ಯಾದವಿಯನ್ನು ನೋಡಲು ಚೇದಿಪುರಕ್ಕೆ ಬಂದರು. ಜ್ಯೇಷ್ಠರನ್ನೂ ನೃಪತಿಯನ್ನೂ ಯಥಾನ್ಯಾಯ ಅಭಿವಂದಿಸಿ ರಾಮ-ಕೇಶವರು ಕುಶಲಪ್ರಶ್ನೆಗಳನ್ನು ಕೇಳಿ ಕುಳಿತುಕೊಂಡರು. ಇಬ್ಬರು ವೀರರನ್ನೂ ಸ್ವಾಗತಿಸಲಾಯಿತು ಮತ್ತು ಅಧಿಕ ಪ್ರೀತಿಯಿಂದ ದೇವಿಯು ತನ್ನ ಮಗನನ್ನು ಸ್ವಯಂ ದಾಮೋದರನ ತೊಡೆಯ ಮೇಲೆ ಕೂರಿಸಿದಳು. ಅವನ ತೊಡೆಯಮೇಲೆ ಇಟ್ಟಕೂಡಲೇ ಅಧಿಕವಾಗಿದ್ದ ಅವನ ಎರಡು ಕೈಗಳು ಕೆಳಗೆ ಬಿದ್ದವು ಮತ್ತು ಲಲಾಟದಲ್ಲಿದ್ದ ನಯನವೂ ಕರಗಿಹೋಯಿತು. ಇದನ್ನು ನೋಡಿ ವ್ಯಥಿತಳಾಗಿ ನಡುಗಿದ ಅವಳು ಕೃಷ್ಣನಲ್ಲಿ ಬೇಡಿಕೊಂಡಳು: ‘ಮಹಾಭುಜ ಕೃಷ್ಣ! ಭಯಾರ್ತ ನನಗೆ ವರವನ್ನು ಕೊಡು. ನೀನು ಆರ್ತರ ಸಮಾಶ್ವಾಸ ಮತ್ತು ಭಯಭೀತರ ಅಭಯಂಕರ.’ ಆಗ ತನ್ನ ತಂದೆಯ ತಂಗಿಗೆ ಜನಾರ್ದನನು ಉತ್ತರಿಸಿದನು: ‘ಹೆದರಬೇಡ! ಅತ್ತೆ! ನಾನು ನಿನಗೆ ಯಾವ ವರವನ್ನು ಕೊಡಲಿ? ಏನು ಮಾಡಲಿ? ಅದು ಸಾಧ್ಯವಿರಲಿ ಅಥವಾ ಸಾಧ್ಯವಿಲ್ಲದಿರಲಿ. ನಿನ್ನ ಮಾತಿನಂತೆ ಮಾಡುತ್ತೇನೆ.’ ಇದಕ್ಕೆ ಅವಳು ಯದುನಂದನ ಕೃಷ್ಣನಿಗೆ

ಹೇಳಿದಳು: ‘ಮಹಾಬಲ! ನೀನು ಶಿಶುಪಾಲನ ಅಪರಾಧಗಳನ್ನು ಕ್ಷಮಿಸು.’ ಕೃಷ್ಣನು ಹೇಳಿದನು: ‘ಅತ್ತೆ! ವಧಾರ್ಹವಾಗಿದ್ದರೂ ಇವನ ನೂರು ಅಪರಾಧಗಳನ್ನು ಕ್ಷಮಿಸುತ್ತೇನೆ. ಶೋಕಿಸಬೇಡ.’ ವೀರ! ಆದುದರಿಂದಲೇ ಗೋವಿಂದವರದರ್ಪಿತ ಈ ಪಾಪಿ ನೃಪ ಮೂಢ ಶಿಶುಪಾಲನು ನಿನ್ನನ್ನು ಕೆರಳಿಸುತ್ತಿದ್ದಾನೆ.

ಅಚ್ಯುತನನ್ನು ಕೆರಳಿಸುವ ಇದು ಚೇದಿಪತಿಯ ಅವನ ಬುದ್ಧಿಯಿಂದಲ್ಲ. ನಿಶ್ಚಿತವಾಗಿಯೂ ಇದು ಜಗದ್ಭರ್ತು ಕೃಷ್ಣನ ನಿರ್ಧಾರವೇ ಆಗಿರಬೇಕು. ಭೀಮಸೇನ! ಈ ಕುಲಪಾಂಸನನನ್ನು ಬಿಟ್ಟು ದೈವಪರಿತಾತ್ಮನಲ್ಲದ ಭೂಮಿಯ ಮೇಲಿರುವ ಬೇರೆ ಯಾವ ಪಾರ್ಥಿವನು ಈ ರೀತಿ ನನ್ನನ್ನು ಹೀಯಾಳಿಸಲು ಸಾಧ್ಯ? ಇವನು ಮಹಾಬಾಹು ಹರಿಯ ತೇಜಸ್ಸಿನ ಒಂದು ಅಂಶ ಮತ್ತು ಪೃಥುಯಶ ಹರಿಯು ಅದನ್ನು ಪುನಃ ಹಿಂದೆಗೆದುಕೊಳ್ಳಲು ಬಯಸುತ್ತಾನಿರಬಹುದು. ಆದುದರಿಂದಲೇ ಈ ದುರ್ಬುದ್ಧಿ ಚೇದಿರಾಜನು ನಮ್ಮೆಲ್ಲರ ಕುರಿತು ಯೋಚಿಸದೇ ಶಾರ್ದೂಲದಂತೆ ಗರ್ಜಿಸುತ್ತಿದ್ದಾನೆ.”

ಆಗ ಚೈದ್ಯನು ಭೀಷ್ಮನ ಮಾತುಗಳಿಂದ ತತ್ತರಿಸದೇ ಸಂಕೃದ್ಧನಾಗಿ ಬೀಷ್ಮನಿಗೆ ಪುನಃ ಉತ್ತರಿಸಿದನು:

“ಭೀಷ್ಮ! ನೀನು ಸ್ತುತಿಸಿದ ಕೇಶವನ ಪ್ರಭಾವವು ನಮ್ಮ ದ್ವೇಷಿಗಳದ್ದಿರಲಿ. ನೀನು ಸತತ ಅವನ ಹೊಗಳುಭಟ್ಟನಾಗಿದ್ದೀಯೆ. ಒಂದುವೇಳೆ ನಿನಗೆ ಸದಾ ಇನ್ನೊಬ್ಬರನ್ನು ಹೊಗಳುವುದರಲ್ಲಿಯೇ ಸಂತೋಷ ದೊರೆಯುತ್ತದೆಯಾದರೆ ಜನಾರ್ದನನನ್ನು ಬಿಟ್ಟು ಬೇರೆ ಯಾರಾದರೂ ನಿಜ ರಾಜರನ್ನು ಹೊಗಳು. ಹುಟ್ಟುತ್ತಲೇ ಮಹಿಯನ್ನು ತನ್ನದಾಗಿಸಿಕೊಂಡ ಈ ಪಾರ್ಥಿವಸತ್ತಮ ದರದ ಬಾಹ್ಲೀಕನನ್ನು ಸ್ತುತಿಸು. ವಂಗಾಂಗದೇಶಗಳ ಅಧ್ಯಕ್ಷ, ಬಲದಲ್ಲಿ ಸಹಸ್ರಾಕ್ಷನ ಸಮ, ಮಹಾಚಾಪವಿಕರ್ಷಣ ಈ ಕರ್ಣನನ್ನು ಸ್ತುತಿಸು. ಮಹಾರಥಿ, ಸತತವೂ ದ್ವಿಜಸತ್ತಮ ಸ್ತುತಿಗಳಿಗರ್ಹ ಪಿತ-ಪುತ್ರ ದ್ರೋಣ ದ್ರೌಣಿಯರನ್ನು ಸ್ತುತಿಸು. ಅವರಲ್ಲಿ ಯಾರೊಬ್ಬರೂ ಸಂಕೃದ್ಧರಾದರೆ ಈ ವಸುಮತಿಯನ್ನು ಸಚರಾಚರಗಳ ಅಶೇಷಮತಿಯನ್ನಾಗಿ ಮಾಡುತ್ತಾರೆ ಎಂದು ನನ್ನ ಅಭಿಪ್ರಾಯ. ಯುದ್ಧದಲ್ಲಿ ದ್ರೋಣನ ಅಥವಾ ಅಶ್ವತ್ಥಾಮನ ಸರಿಸಮ ನರಾಧಿಪನನ್ನು ಕಾಣಲಾರೆ. ಆದರೂ ನೀನು ಇವರಿಬ್ಬರನ್ನು ಹೊಗಳಲು ಬಯಸುತ್ತಿಲ್ಲವಲ್ಲ! ನಿನ್ನ ಬುದ್ಧಿಯು ಎಲ್ಲರ ಹೊಗಳಿಕೆಯಲ್ಲಿ ನಿರತವಾಗಿದ್ದರೆ ನೀನು ಶಲ್ಯ ಮೊದಲಾದ ವಸುಧಾಧಿಪರನ್ನು ಏಕೆ ಹೊಗಳುತ್ತಿಲ್ಲ? ನೀನು ಹಿಂದೆ ಧರ್ಮವಾದಿಗಳು ಹೇಳಿಕೊಟ್ಟವುಗಳನ್ನು ಕೇಳದಿದ್ದರೆ

ನಾನು ತಾನೆ ಏನು ಮಾಡಬಲ್ಲೆ? ಆರ್ಯನೆನಿಸಿಕೊಂಡವನು ಆತ್ಮನಿಂದೆ, ಆತ್ಮಪೂಜೆ, ಪರನಿಂದನೆ, ಪರಸ್ತುತಿ ಈ ನಾಲ್ಕನ್ನೂ ಮಾಡುವುದಿಲ್ಲ. ನಿನ್ನ ಮೋಹದಿಂದಲೋ ಭಕ್ತಿಯಿಂದಲೋ ಈ ಕೇಶವನನ್ನು ಸ್ತುತಿಸುತ್ತೀಯಾದರೆ ಸ್ತುತಿಸು. ಆದರೆ ಬೇರೆ ಯಾರೂ ಇದಕ್ಕೆ ಒಪ್ಪಿಕೊಳ್ಳುವುದಿಲ್ಲ. ನಿನ್ನ ವೈಯಕ್ತಿಕ ಬಯಕೆಯಿಂದಾಗಿ ಭೋಜನ ಬಾಗಿಲು ಕಾವಲುಗಾರನಾದ ಈ ದುರಾತ್ಮನಿಗಾಗಿ ನೀನು ಹೇಗೆ ತಾನೆ ಸರ್ವ ಜಗತ್ತನ್ನೂ ಕೇವಲಗೊಳಿಸಬಲ್ಲೆ? ಅಥವಾ ಈ ಭಕ್ತಿಯು ನಿನ್ನ ಪ್ರಕೃತಿಯಾಗಿರದಿದ್ದರೆ - ನೀನು ಭೂಲಿಂಗ ಪಕ್ಷಿಯನ್ನು ಹೋಲುತ್ತೀಯೆ ಎಂದು ಮೊದಲೇ ನಿನಗೆ ನಾನು ಹೇಳಿರಲಿಲ್ಲವೇ? ಭೂಲಿಂಗ ಎಂಬ ಹೆಸರಿನ ಪಕ್ಷಿಯು ಹಿಮಾಲಯದ ಹತ್ತಿರದಲ್ಲಿರುತ್ತದೆ. ಅದರ ಮಾತುಗಳು ಸದಾ ಅರ್ಥಹೀನವಾಗಿರುತ್ತವೆ ಎಂದು ಕೇಳಿದ್ದೇವೆ. ಅದು ದುಡುಕಬೇಡ ಎಂದು ಸದಾ ಉಪದೇಶನೀಡುತ್ತಿರುತ್ತದೆ. ಆದರೆ ದಡ್ಡತನದಿಂದ ತಾನೇ ದುಡುಕುತ್ತಾ ಜೀವಿಸುತ್ತದೆ. ಯಾಕೆಂದರೆ ಈ ಅಲ್ಪಚೇತನ ಪಕ್ಷಿಯು ತಿನ್ನುತ್ತಿರುವ ಸಿಂಹದ ಮುಖದಮೇಲೆ ತಗಲಿರುವ ಮತ್ತು ಹಲ್ಲುಗಳ ನಡುವೆ ಸಿಲುಕಿಕೊಂಡಿರುವ ಮಾಂಸದ ತುಂಡುಗಳನ್ನು ತಿನ್ನುತ್ತದೆ. ಅದು ಸಿಂಹದ ಇಚ್ಛೆಯಂತೆ ಜೀವಿಸುತ್ತದೆ

ಎನ್ನುವುದರಲ್ಲಿ ಸಂಶಯವಿಲ್ಲ. ಅದರಂತೆ ನೀನೂ ಕೂಡ ಸದಾ ಅಧರ್ಮಜ್ಞನ ಮಾತುಗಳನ್ನಾಡುತ್ತಿದ್ದೀಯೆ. ಈ ಪಾರ್ಥಿವೇಂದ್ರರ ಇಚ್ಛೆಯಂತೆ ನೀನು ಜೀವಿಸುತ್ತಿದ್ದೀಯೆ ಎನ್ನುವುದರಲ್ಲಿ ಸಂಶಯವಿಲ್ಲ. ಯಾಕೆಂದರೆ ಜನರಿಗೆ ಇಷ್ಟವಾಗದೇ ಇರುವ ನಿನ್ನಂಥ ಬೇರೆ ಯಾರೂ ಇಲ್ಲ."

ಚೇದಿಪತಿಯ ಈ ಕಟುಕ ಮಾತುಗಳನ್ನು ಕೇಳಿದ ಭೀಷ್ಮನು ಚೇದಿರಾಜನಿಗೆ ಕೇಳುವಹಾಗೆ ಈ ಮಾತುಗಳನ್ನಾಡಿದನು:

"ಹೌದು ! ಈ ನರಾಧಿಪ ಗಣವನ್ನು ತೃಣಸಮಾನವಾಗಿ ಕಾಣುತ್ತಿರುವ ನಾನು ಈ ಮಹೀಕ್ಷಿತರ ಹೆಸರಿನಲ್ಲಿ ಜೀವಿಸುತ್ತಿದ್ದೇನೆ !"

ಭೀಷ್ಮನ ಈ ಮಾತಿಗೆ ನೃಪರಲ್ಲಿ ಕೆಲವರು ಸಂಕೃದ್ಧರಾದರು. ಕೆಲವರು ತತ್ತರಿಸಿದರು ಮತ್ತು ಇನ್ನು ಕೆಲವರು ಭೀಷ್ಮನನ್ನು ನಿಂದಿಸಿದರು. ಭೀಷ್ಮನ ಈ ಮಾತುಗಳನ್ನು ಕೇಳಿದ ಇತರ ಮಹೇಷ್ವಾಸರು

"ಪಾಪಿ, ಅವಲಿಪ್ತ, ವೃದ್ಧ ಭೀಷ್ಮನು ನಮ್ಮ ಕ್ಷಮೆಗೆ ಅರ್ಹನಲ್ಲ !"

ಎಂದು ಕೂಗಿದರು. ನೃಪರೆಲ್ಲರೂ ಸೇರಿ




“ಈ ದುರ್ಮತಿ ಬೀಷ್ಮನನ್ನು ಬಲಿಪಶುವಂತೆ
ಕೊಂದುಹಾಕೋಣ ಅಥವಾ ಕಟಾಗ್ನಿಯಲ್ಲಿ
ಸುಟ್ಟುಹಾಕೋಣ!”

ಎಂದು ಹೇಳಿದರು. ಅವರ ಈ ಕೂಗನ್ನು ಕೇಳಿದ ಕುರುಪಿತಾಮಹ ಮತಿವಂತ ಭೀಷ್ಮನು ಅಲ್ಲಿ ನೆರದಿದ್ದ ವಸುಧಾಧಿಪರಲ್ಲಿ ಹೇಳಿದನು:

“ಇಲ್ಲಿ ಈ ರೀತಿ ಮಾತನಾಡುವುದರಿಂದ ಯಾವ
ಅಂತ್ಯವನ್ನೂ ನಾನು ಕಾಣಲಾರೆ. ವಸುಧಾಧಿಪರೇ! ನಾನು

ಏನು ಹೇಳಲಿದ್ದೇನೋ ಅದನ್ನು ಕೇಳಿ! ಪಶುವಂತೆ ನನ್ನನ್ನು ಕೊಲ್ಲಿ ಅಥವಾ ಕಟಾಗ್ನಿಯಲ್ಲಿ ಸುಡಿ! ಆದರೆ ನಾನು ನಿಮ್ಮೆಲ್ಲರನ್ನೂ ತುಳಿಯುತ್ತೇನೆ. ಇಲ್ಲಿ ನಿಂತಿದ್ದಾನೆ ನಾವು ಪೂಜಿಸಿದ ಅಚ್ಯುತ ಗೋವಿಂದ! ಯಾರ ಬುದ್ಧಿಯು ಮರಣಕ್ಕೆ ಕಾತರಿಸುತ್ತಿದೆಯೋ ಅವನು ಯುದ್ಧದಲ್ಲಿ ಈ ಶಾಂಙ್ರಗದಾಧರ ದೇವ ಯಾದವ ಮಾಧವ ಕೃಷ್ಣನಿಂದ ಪತನವಾಗಿ ಅವನ ದೇಹವನ್ನು ಪ್ರವೇಶಿಸಲಿ!”

## ಶಿಶುಪಾಲವಧೆ

ಭೀಷ್ಮನನ್ನು ಕೇಳಿದ ಅತಿವಿಕ್ರಮಿ ಚೇದಿರಾಜನು ವಾಸುದೇವನೊಂದಿಗೆ ಯುದ್ಧಮಾಡಲು ಉತ್ಸುಕನಾಗಿ ವಾಸುದೇವನಿಗೆ ಹೇಳಿದನು:

“ನಾನು ನಿನ್ನನ್ನು ಅಹ್ವಾನಿಸುತ್ತಿದ್ದೇನೆ. ಜನಾರ್ದನ! ನನ್ನೊಡನೆ ರಣಕ್ಕೆ ಬಾ. ಪಾಂಡವರೆಲ್ಲರ ಸಹಿತ ನಿನ್ನನ್ನು ನಿರ್ನಾಮಗೊಳಿಸುತ್ತೇನೆ! ಕೃಷ್ಣ! ನೃಪತಿಗಳನ್ನೆಲ್ಲ ಅತಿಕ್ರಮಿಸಿ ರಾಜನಲ್ಲದ ನಿನ್ನನ್ನು ಅರ್ಚಿಸಿದ ಆ ಪಾಂಡವರನ್ನೂ ನಾನು ವಧಿಸುತ್ತೇನೆ. ಬಾಲ್ಯದಲ್ಲಿ ದುರ್ಮತಿ, ದಾಸ ಮತ್ತು ಅರಾಜನಾದ ನಿನ್ನನ್ನು ಅನರ್ಹನಾಗಿದ್ದರೂ ಅರ್ಹನೆಂದು ತಿಳಿದು ಅರ್ಚಿಸಿದ ಅವರನ್ನೂ ವಧಿಸಬೇಕೆಂದು ಯೋಚಿಸುತ್ತಿದ್ದೇನೆ.” ಈ ರೀತಿ

ಹೇಳಿದ ರಾಜಶಾರ್ದೂಲನು ಗರ್ಜಿಸುತ್ತಾ ಕೋಪವನ್ನು ಕಾರುತ್ತಾ ಎದ್ದು ನಿಂತನು. ಇದನ್ನು ಕೇಳಿದ ಕೃಷ್ಣನು ಮೃದುಪೂರ್ವಕ ಮಾತುಗಳಲ್ಲಿ ಅಲ್ಲಿದ್ದ ಸರ್ವ ಪಾರ್ಥಿವ-ಪಾಂಡವರ ಸಮಕ್ಷಮದಲ್ಲಿ ಹೇಳಿದನು: “ಈ ಸಾತ್ವತೀಸುತನು ಪಾರ್ಥಿವರ ಅತ್ಯಂತ ಶತ್ರು. ಈ ನೃಶಂಸಾತ್ಮನು ಸಾತ್ವತರ ಹಿತವಂತನಲ್ಲ. ಅನಪಕಾರಿ. ನರಾಧಿಪರೇ! ನಾನು ಪ್ರಾಗ್ಜ್ಯೋತಿಷಪುರಕ್ಕೆ ಹೋದದ್ದನ್ನು ತಿಳಿದ ಈ ಕಪಟಿಯು ಸ್ವಸ್ತ್ರೀಯರ ದ್ವಾರಕೆಯನ್ನು ಸುಟ್ಟುಹಾಕಲು ಪ್ರಯತ್ನಿಸಿದನು. ಹಿಂದೆ ಭೋಜರಾಜರು ರೈವತಕ ಗಿರಿಯಲ್ಲಿ ಆಡುತ್ತಿರುವಾಗ ಇವನು ಅವರೆಲ್ಲರನ್ನೂ ಹೊಡೆದು, ಬಂಧಿಸಿ ತನ್ನ ನಗರಕ್ಕೆ ಕರೆದೊಯ್ದನು. ರಕ್ಷಣೆಯ ಜೊತೆ ಅಶ್ವಮೇಧದ ಕುದುರೆಯನ್ನು ಇವನ ತಂದೆಯು ಬಿಟ್ಟಾಗ ಈ ಪಾಪನಿಶ್ಚಯಿಯು ಅವನ ಯಜ್ಞಕ್ಕೆ ವಿಘ್ನವನ್ನುಂಟುಮಾಡಲೋಸುಗ ಕುದುರೆಯನ್ನು ಕದ್ದನು. ಸೌವೀರಕ್ಕೆ ಹೋಗುತ್ತಿರುವಾಗ ಇವನು ಯಶಸ್ವಿನಿ ಬಭ್ರುವಿನ ಭಾರ್ಯೆಯನ್ನು ಮೋಹಿಸಿ ಅವಳಿಗೆ ಇಷ್ಟವಿಲ್ಲದಿದ್ದರೂ ಅಪಹರಿಸಿದನು. ತನ್ನ ಮಾವ ಕರೂಷನಿಗೆಂದಿರುವ ತಪಸ್ವಿನೀ ಭದ್ರೆ ವೈಶಾಲಿಯನ್ನು ಇವನು ಮಾಯೆಯ ಮಸುಕನ್ನು ಎಸೆದು ಮೋಸಗೊಳಿಸಿ

ಎತ್ತಿಕೊಂಡು ಹೋದನು. ನನ್ನ ಅತ್ತೆಯ ದುಃಖವನ್ನು ನೋಡಿ ಈ ಮಹತ್ತರ ಹಿಂಸೆಯನ್ನು ತಡೆದುಕೊಳ್ಳುತ್ತಿದ್ದೇನೆ. ಆದರೆ ದುರದೃಷ್ಟವಶಾತ್ ಇದು ಈ ಎಲ್ಲ ರಾಜರ ಸಭೆಯಲ್ಲಿ ನಡೆಯುತ್ತಿದೆ. ಇಂದು ಇವನು ನನ್ನ ಕುರಿತು ಮಾಡಿದ ಅತೀವ ವಿರೋಧಗಳನ್ನು ನೋಡಿದ್ದೀರಿ. ಅವನು ಪರೋಕ್ಷವಾಗಿ ನನ್ನ ವಿರುದ್ಧ ಏನೇನು ಮಾಡಿದ್ದಾನೆ ಎನ್ನುವುದನ್ನು ಕೇಳಿ. ಇಂದು ನಡೆಸಿದ ಇವನ ಅತಿಕ್ರಮವನ್ನು ನಾನು ಕ್ಷಮಿಸಲು ಶಕ್ಯನಿಲ್ಲ. ಮತ್ತು ಸಮಗ್ರ ರಾಜಮಂಡಲದಲ್ಲಿ ಮಾಡಿದ ಈ ಅಪಮಾನಕ್ಕೆ ಅವನು ಮರಣಾರ್ಹ. ಸಾವನ್ನು ಬಯಸುತ್ತಿರುವ ಈ ಮೂಢನು ಒಮ್ಮೆ ರುಕ್ಮಿಣಿಯನ್ನು ಕೇಳಿದನು. ಆದರೆ ಮೂಢ ಶೂದ್ರನು ವೇದವನ್ನು ಹೇಗೆ ಕೇಳಲಿಕ್ಕಾಗುವುದಿಲ್ಲವೋ ಹಾಗೆ ಅವಳನ್ನು ಪಡೆಯಲಿಲ್ಲ.”

ಅಲ್ಲಿ ನೆರೆದಿದ್ದ ಸರ್ವ ನರಾಧಿಪರೂ ವಾಸುದೇವನ ಈ ಮಾತುಗಳನ್ನು ಕೇಳಿ ಚೇದಿರಾಜನನ್ನು ನಿಂದಿಸಿದರು. ಆದರೆ ಇದನ್ನು ಪ್ರತಾಪಿ ಶಿಶುಪಾಲನು ಕೇಳಿ ಜೋರಾಗಿ ನಕ್ಕನು ಮತ್ತು ನಗುತ್ತಾ ಹೇಳಿದನು:

“ಕೃಷ್ಣ! ನಿನ್ನವಳಾಗುವುದರ ಮೊದಲು ರುಕ್ಮಿಣಿಯು ಇನ್ನೊಬ್ಬನದ್ದಾಗಿದ್ದಳು ಎಂದು ವಿಶೇಷವಾಗಿ ಈ

ಪಾರ್ಥಿವರ ಮುಂದೆ ಹೇಳಿಕೊಳ್ಳಲು ನಿನಗೆ ನಾಚಿಕೆಯಾಗುವುದಿಲ್ಲವೇ? ನಿನ್ನನ್ನು ಹೊರತು ಇನ್ನು ಯಾವ ಗೌರವಾನ್ವಿತ ಪುರುಷನು ತನ್ನ ಸ್ತ್ರೀಯು ತನ್ನ ಮೊದಲು ಇನ್ನೊಬ್ಬನದ್ದಾಗಿದ್ದಳು ಎಂದು ಸತ್ಯಪುರುಷರಲ್ಲಿ ಹೇಳಿಕೊಳ್ಳುತ್ತಾನೆ? ಕ್ಷಮಿಸು ಅಥವಾ ನನ್ನ ಮೇಲೆ ನಂಬಿಕೆಯಿಲ್ಲದಿದ್ದರೆ ಕ್ಷಮಿಸಬೇಡ. ನಿನಗೆ ಸಿಟ್ಟಾದರೂ ಸಂತೋಷವಾದರೂ ನಿನ್ನಿಂದ ನನಗೇನಾಗುವುದಿದೆ?”



ಅವನು ಹೀಗೆ ಮಾತನಾಡುತ್ತಿದ್ದಾಗಲೇ ಅಮಿತ್ರಕರ್ಶಣ ಭಗವಾನ್ ಮಧುಸೂದನನು ಕೋಪಗೊಂಡು ಚಕ್ರದಿಂದ ಅವನ ಶಿರವನ್ನು ಕತ್ತರಿಸಿದನು. ಆ ಮಹಾಬಾಹುವು ವಜ್ರಹತ ಪರ್ವತದಂತೆ ಕೆಳಗೆ ಬಿದ್ದನು. ಆಗ ಚೇದಿಪತಿಯ ದೇಹದಿಂದ ಆಕಾಶದಲ್ಲಿ ಮೇಲೇರುತ್ತಿರುವ ಭಾಸ್ಕರನಂತೆ ಗುಹ್ಯ ತೇಜಸ್ಸೊಂದು ಹೊರಬಂದು ಆ ತೇಜಸ್ಸು ಕಮಲಪತ್ರಾಕ್ಷ, ಲೋಕನಮಸ್ಕೃತ, ಕೃಷ್ಣನನ್ನು ವಂದಿಸಿ ಅವನನ್ನು ಪ್ರವೇಶಿಸಿದುದನ್ನು ನೃಪರು ನೋಡಿದರು. ಆ ತೇಜಸ್ಸು ಮಹಾಬಾಹು ಪುರುಷೋತ್ತಮನನ್ನು ಪ್ರವೇಶಿಸಿದ ಅದ್ಭುತವನ್ನು ಸರ್ವ ಮಹೀಕ್ಷಿತರೂ ಸಂಪೂರ್ಣವಾಗಿ ನೋಡಿದರು. ಕೃಷ್ಣನು ಚೈದ್ಯನನ್ನು ವಧಿಸುತ್ತಿದ್ದಂತೆ ಮೋಡಗಳಿಲ್ಲದ ಆಕಾಶದಿಂದ ಮಳೆಸುರಿಯಿತು, ಜ್ವಲಿಸುವ ಮಿಂಚುಗಳು ಬಿದ್ದವು ಮತ್ತು ವಸುಂಧರೆಯು ಕಂಪಿಸಿದಳು. ಅಲ್ಲಿ ಕೆಲವು ಮಹೀಪಾಲರು ಏನನ್ನೂ ಮಾತನಾಡದೇ ಇದ್ದರು. ಮತ್ತು ಈ ಅತೀತವಾಕ್ಪಥ (ಮೂಕರನ್ನಾಗಿಸುವ) ಕಾಲದಲ್ಲಿ ಜನಾರ್ದನನ್ನು ನೋಡುತ್ತಲೇ ಇದ್ದರು. ಕೆಲವರು ಅಮರ್ಷಿತರಾಗಿ ಕೈಯಲ್ಲಿ ಕೈಯನ್ನು ತಿಕ್ಕಿದರು. ಇನ್ನು ಕೆಲವರು ಕ್ರೋಧಮೂರ್ಛಿತರಾಗಿ ತುಟಿಗಳನ್ನು ಕಚ್ಚಿದರು. ಕೆಲವು ನರಾಧಿಪರು ಗುಟ್ಟಿನಲ್ಲಿಯೇ ವಾರ್ಷ್ಣೇಯನನ್ನು ಪ್ರಶಂಸಿದರು. ಕೆಲವರು ಸಿಟ್ಟಿಗೆದ್ದರೆ ಇನ್ನು ಕೆಲವರು ಮಧ್ಯಸ್ಥರಾಗಿ ಉಳಿದರು. ಪ್ರಹೃಷ್ಟ ಮಹರ್ಷಿಗಳು, ಮಹಾತ್ಮ ಬ್ರಾಹ್ಮಣರು ಮತ್ತು ಮಹಾಬಲಿ ಪಾರ್ಥಿವರು ಕೇಶವನಿದ್ದಲ್ಲಿಗೆ ಹೋಗಿ ಅವನನ್ನು



ಸ್ತುತಿಸಿದರು.

ಪಾಂಡವನು ದಮಘೋಷಾತ್ಮಜ ಆ ವೀರ ಮಹೀಪತಿಯ ಮರಣಕ್ರಿಯೆಗಳನ್ನು ನೆರವೇರಿಸಲು ಹೇಳಿದನು. ಅವನ ಶಾಸನದಂತೆ ಭ್ರಾತೃಗಳು ನಡೆದುಕೊಂಡರು. ಪಾರ್ಥನು ಇತರ ವಸುಧಾಧಿಪರೊಡನೆ ಆ ಮಹೀಪತಿಯ ಪುತ್ರನನ್ನು ಚೇದಿಯ ಅಧಿಪತಿಯನ್ನಾಗಿ ಅಭಿಷೇಕಿಸಿದನು. ನಂತರ ಕುರುರಾಜನ ಸರ್ವಸಮೃದ್ಧ ಕ್ರತುವು ವಿಪುಲ ತೇಜಸ್ಸಿನಿಂದ ನಡೆಯಿತು ಮತ್ತು ಯುವಕರಲ್ಲಿ ಸಂತೋಷವನ್ನು ತಂದಿತು. ಅದರ ವಿಘ್ನವು ಶಾಂತವಾಗಿ, ಸುಖದಿಂದ ಆರಂಭಗೊಂಡು, ಧನಧಾನ್ಯಗಳಿಂದ ಕೂಡಿ, ಅನ್ನ ಮತ್ತು ಬಹುಭಕ್ಷಗಳಿಂದ ಕೂಡಿ, ಕೇಶವನಿಂದ ಸುರಕ್ಷಿತಗೊಂಡಿತು.  ಮಹಾಬಾಹು ಜನಾರ್ದನನು ಆ ಮಹಾಕ್ರತು ರಾಜಸೂಯ ಯಜ್ಞವನ್ನು ಸಮಾಪ್ತಗೊಳಿಸಿ, ಶಾಂಗ್ರಚಕ್ರಗದಾಧರ ಶೌರಿಯು ಅವರನ್ನು ರಕ್ಷಿಸಿದನು. ಅವಭೃತನಾತ ಧರ್ಮರಾಜ ಯುಧಿಷ್ಠಿರನನ್ನು ಸಮಸ್ತ ಪಾರ್ಥಿವ ಕ್ಷತ್ರಿಯರು ಸಮೀಪಿಸಿ ಹೇಳಿದರು:

> “ಧರ್ಮಜ್ಞ! ಅದೃಷ್ಟವಶಾತ್ ನೀನು ಸಾಮ್ರಾಜ್ಯವನ್ನು ಪಡೆದಿದ್ದೀಯೆ. ನಿನ್ನಿಂದ ಆಜಮೀಢರ ಯಸಸ್ಸು ವೃದ್ಧಿಗೊಂಡಿದೆ. ಈ ಕರ್ಮದಿಂದ ನೀನು ಅತ್ಯುನ್ನತ ಧರ್ಮವನ್ನು ಪ್ರತಿಪಾದಿಸಿದ್ದೀಯೆ! ನಾವು ಹಿಂದಿರುಗುತ್ತೇವೆ! ನಮಗಿಷ್ಟವಾದ ರೀತಿಯಲ್ಲಿ ನಾವು

> ಸರ್ವರೂ ಸುಪೂಜಿತರಾಗಿದ್ದೇವೆ. ನಾವು ನಮ್ಮ ರಾಷ್ಟ್ರಗಳಿಗೆ ಹೋಗುತ್ತಿದ್ದೇವೆ. ಅನುಜ್ಞೆಯನ್ನು ನೀಡಬೇಕು."

ರಾಜರ ಈ ಮಾತುಗಳನ್ನು ಕೇಳಿದ ಧರ್ಮರಾಜ ಯುಧಿಷ್ಠಿರನು ನೃಪತಿಗಳನ್ನು ಯಥಾರ್ಹವಾಗಿ ಸತ್ಕರಿಸಿ ತನ್ನ ಸಹೋದರರೆಲ್ಲರಿಗೂ ಹೇಳಿದನು:

> "ಈ ಎಲ್ಲ ರಾಜರೂ ನಮ್ಮ ಮೇಲಿನ ಪ್ರೀತಿಯಿಂದ ಇಲ್ಲಿಗೆ ಬಂದಿದ್ದಾರೆ. ಈ ಪರಂತಪರು ನನ್ನನ್ನು ಬೀಳ್ಕೊಂಡು ತಮ್ಮ ತಮ್ಮ ರಾಷ್ಟ್ರಗಳಿಗೆ ಹೊರಟಿದ್ದಾರೆ. ನಿಮಗೆ ಮಂಗಳವಾಗಲಿ! ಈ ನೃಪೋತ್ತಮರನ್ನು ನಮ್ಮ ದೇಶದ ಗಡಿಯವರೆಗೆ ಬಿಟ್ಟು ಬನ್ನಿ!"

ಧರ್ಮಚಾರಿ ಪಾಂಡವರು ಅಣ್ಣನ ವಚನವನ್ನು ನಡೆಸಿಕೊಟ್ಟರು ಮತ್ತು ನೃಪತಿಮುಖ್ಯರನ್ನು ಒಬ್ಬೊಬ್ಬರನ್ನಾಗಿ ಯಥಾರ್ಹವಾಗಿ ಕಳುಹಿಸಿಕೊಟ್ಟರು. ಪ್ರತಾಪಿ ದೃಷ್ಟದ್ಯುಮ್ನನು ವಿರಾಟನನ್ನು ಕಳುಹಿಸಿಕೊಟ್ಟನು, ಮಹಾರಥಿ ಧನಂಜಯನು ಮಹಾತ್ಮ ಯಜ್ಞಸೇನನನ್ನು, ಮಹಾಬಲಿ ಭೀಮಸೇನನು ಭೀಷ್ಮ ಮತ್ತು ದೃತರಾಷ್ಟ್ರರನ್ನು, ಮಹಾರಥಿ ವೀರ ಸಹದೇವನು ದ್ರೋಣ ಮತ್ತು ಅವನ ಪುತ್ರನನ್ನು, ನಕುಲನು ರಾಜ ಸುಬಲ ಮತ್ತು ಅವನ ಪುತ್ರನೊಂದಿಗೆ ಹೋದನು ಮತ್ತು ದ್ರೌಪದೇಯರು ಸೌಭದ್ರನೊಂದಿಗೆ ಪರ್ವತದ ಮಹೀಪತಿಗಳನ್ನು ಕಳುಹಿಸಿಕೊಟ್ಟರು.

ಹೀಗೆ ಕ್ಷತ್ರಿಯರ್ಷಭರು ಅನ್ಯ ಕ್ಷತ್ರಿಯರನ್ನೂ ಅನುಸರಿಸಿ ಹೋದರು. ಸರ್ವ ವಿಪ್ರರೂ ಕೂಡ ಹೀಗೆ ಸಂಪೂಜಿತರಾಗಿ ಹಿಂದಿರುಗಿದರು. ಸರ್ವ ಪಾರ್ಥಿವೇಂದ್ರರು ಹೊರಟು ಹೋದ ನಂತರ ಪ್ರತಾಪಿ ವಾಸುದೇವನು ಯುಧಿಷ್ಠಿರನಿಗೆ ಹೇಳಿದನು: "ಕುರುನಂದನ! ನಿನ್ನನ್ನು ಬೀಳ್ಕೊಂಡು ನಾನು ದ್ವಾರಕೆಗೆ ಹಿಂದಿರುಗುತ್ತೇನೆ. ಅದೃಷ್ಟವಶಾತ್ ನೀನು ಕ್ರತುಶ್ರೇಷ್ಠ ರಾಜಸೂಯವನ್ನು ಪೂರೈಸಿದ್ದೀಯೆ."

ಈ ಮಾತುಗಳಿಗೆ ಧರ್ಮರಾಜನು ಮಧುಸೂಧನನಿಗೆ ಹೇಳಿದನು:

> "ಗೋವಿಂದ! ನಿನ್ನ ಪ್ರಸಾದದಿಂದಲೇ ನಾನು ಈ ಕ್ರತುವನ್ನು ಪೂರೈಸಲು ಶಕ್ಯನಾಗಿದ್ದೇನೆ. ನಿನ್ನ ಅನುಗ್ರಹದಿಂದ ಸಮಸ್ತ ಕ್ಷತ್ರಿಯ ಪಾರ್ಥಿವರೂ ನನ್ನ ವಶದಲ್ಲಿ ಬಂದು, ಕಪ್ಪ ಕಾಣಿಕೆಗಳನ್ನು ತಂದು ನನ್ನನು ಮುಖ್ಯನನ್ನಾಗಿ ಕಂಡಿದ್ದಾರೆ. ನೀನಿಲ್ಲದೇ ಎಂದೂ ನಾವು ಸಂತೋಷವನ್ನು ಹೊಂದುವುದಿಲ್ಲ. ಆದರೂ ನೀನು ನಿನ್ನ ದ್ವಾರವತೀ ಪುರಿಗೆ ಅವಶ್ಯವಾಗಿಯೂ ಹೋಗಬೇಕು."

ಇದನ್ನು ಕೇಳಿ ಧರ್ಮಾತ್ಮ ಪೃಥುಯಶ ಹರಿಯು ಯುಧಿಷ್ಠಿರನನ್ನೊಡಗೊಂಡು ಪೃಥೆಯಲ್ಲಿಗೆ ಹೋಗಿ ಪ್ರೀತಿಯಿಂದ ಹೇಳಿದನು:

> "ಅತ್ತೆ! ನಿನ್ನ ಮಕ್ಕಳು ಇಂದು ಸಾಮ್ರಾಜ್ಯವನ್ನು ಒಳ್ಳೆಯದಾಗಿ ಪಡೆದು ಸಿದ್ಧಾರ್ಥರೂ ವಸುಮಂತರೂ

> ಆಗಿದ್ದಾರೆ. ನಿನಗೆ ಸಂತೋಷವಾಗಿರಬಹುದು. ನಿನ್ನಿಂದ ಅನುಜ್ಞೆಯನ್ನು ಪಡೆದು ದ್ವಾರಕೆಗೆ ಹೋಗಲು ಉತ್ಸುಕನಾಗಿದ್ದೇನೆ."

ಸುಭದ್ರೆ ದ್ರೌಪದಿಯರನ್ನೂ ಕೇಶವನು ಭೇಟಿ ಮಾಡಿ, ಯುಧಿಷ್ಠಿರನ ಸಹಿತ ಅಂತಃಪುರವನ್ನು ಬಿಟ್ಟನು. ಸ್ನಾನಮುಗಿಸಿ, ಜಪವನ್ನು ಮಾಡಿ, ಬ್ರಾಹ್ಮಣರಿಂದ ಸ್ವಸ್ತಿವಾಚಗಳನ್ನು ಕೇಳಿದ ನಂತರ ಸುಂದರ ಮೋಡದಂತೆ ಕಾಣುತ್ತಿದ್ದ ಸುಕಲ್ಪಿತ ರಥವನ್ನು ದಾರುಕನು ಕಟ್ಟಿ ಕೃಷ್ಣನಿದ್ದಲ್ಲಿಗೆ ಬಂದನು. ತಾರ್ಕ್ಷಪ್ರವರಕೇತನವಾದ ರಥವು ಉಪಸ್ಥಿತವಿದ್ದುದನ್ನು ನೋಡಿ ಮಹಾತ್ಮನು ಪ್ರತಕ್ಷಿಣೆಮಾಡಿ ಮೇಲೇರಿ, ಪುಂಡರೀಕಾಕ್ಷನು ದ್ವಾರವತೀ ಪುರಕ್ಕೆ ಪಯಣಿಸಿದನು. ಧರ್ಮರಾಜ ಯುಧಿಷ್ಠಿರನು ಭ್ರಾತೃಗಳ ಸಹಿತ ಕಾಲ್ನಡುಗೆಯಲ್ಲಿ ಶ್ರೀಮಾನ್ ವಾಸುದೇವ ಮಹಾಬಲಿಯನ್ನು ಹಿಂಬಾಲಿಸಿದನು. ಪುಂಡರೀಕಾಕ್ಷ ಸ್ಯಂದನಪ್ರವರ ಹರಿಯು ಸ್ವಲ್ಪ ಸಮಯ ರಥವನ್ನು ನಿಲ್ಲಿಸಿ ಕುಂತೀಪುತ್ರ ಯುಧಿಷ್ಠಿರನಿಗೆ ಹೇಳಿದನು:

> "ವಿಶಾಂಪತೇ! ಪರ್ಜನ್ಯನು ಭೂತಗಳನ್ನು ಮತ್ತು ಮಹಾದ್ರುಮವು ಪಕ್ಷಿಗಳನ್ನು ಹೇಗೋ ಹಾಗೆ ನಿತ್ಯವೂ ಅಪ್ರಮತ್ತನಾಗಿದ್ದು ಪ್ರಜೆಗಳನ್ನು ಪಾಲಿಸು. ಅಮರರು ಸಹಸ್ರಾಕ್ಷನಲ್ಲಿರುವಂತೆ ನಿನ್ನ ಬಾಂಧವರು ನಿನ್ನೊಂದಿಗೆ ಉಪಜೀವಿಸಲಿ."

ಪರಸ್ಪರರಲ್ಲಿ ಸಂವಿದವನ್ನು ಮಾಡಿಕೊಂಡು ಕೃಷ್ಣ-ಪಾಂಡವರಿಬ್ಬರೂ ಅನ್ಯೋನ್ಯರಿಂದ ಬೀಳ್ಕೊಂಡು ತಮ್ಮ ತಮ್ಮ ಮನೆಗಳ ಕಡೆ ಹೊರಟರು. ಸಾತ್ವತಪ್ರವರ ಕೃಷ್ಣನು ದ್ವಾರವತಿಗೆ ಹೋಗಲು ಅವನ ದಿವ್ಯ ಸಭೆಯಲ್ಲಿ ರಾಜಾ ದುರ್ಯೋಧನ ಮತ್ತು ಸೌಬಲ ಶಕುನಿ - ಈ ನರರ್ಷಭರಿಬ್ಬರು ಉಳಿದುಕೊಂಡರು.

# ಯುಧಿಷ್ಠಿರನ ವೈಭವವನ್ನು ಕಂಡ ದುರ್ಯೋಧನನ ಅಸೂಯೆ-ಸಂತಾಪ; ದ್ಯೂತದ ಸಂಚು

## ದುರ್ಯೋಧನನ ಸಂತಾಪ

ಇಂದ್ರಪ್ರಸ್ಥದಲ್ಲಿ ಪಾಂಡವರ ಮಯ ಸಭೆಯಲ್ಲಿ ವಾಸಿಸುತ್ತಿದ್ದ ಸಮಯದಲ್ಲಿ ದುರ್ಯೋಧನನು ಶಕುನಿಯೊಡನೆ ನಿಧಾನವಾಗಿ ಸಭೆಯ ಸರ್ವಸ್ವವನ್ನೂ ನೋಡಿದನು. ಕುರುನಂದನನು ಇದಕ್ಕೂ ಮೊದಲು ತನ್ನ ನಾಗಸಾಹ್ವಯದಲ್ಲಿ ನೋಡಿಯೇ ಇರದ ದಿವ್ಯ ಅಭಿಪ್ರಾಯಗಳನ್ನು ಅಲ್ಲಿ ನೋಡಿದನು. ಒಮ್ಮೆ ಮಹೀಪತಿ ರಾಜ ಧಾರ್ತರಾಷ್ಟ್ರನು ಸ್ಫಟಿಕದಿಂದ ನಿರ್ಮಿಸಿದ್ದ ಸಭಾಮಧ್ಯದ ಒಂದು ನೆಲದ ಬಳಿ ಬಂದು ನೀರಿದೆಯೆಂದು ಶಂಕಿಸಿ ಬುದ್ಧಿಮೋಹಿತನಾಗಿ




ತನ್ನ ವಸ್ತ್ರಗಳನ್ನು ಎತ್ತಿಹಿಡಿದನು. ನಂತರ ನಾಚಿಕೆಯಿಂದ ನೊಂದ ಅವನು ಸಭೆಯ ಇನ್ನೊಂದೆಡೆ ಹೋದನು. ಇನ್ನೊಮ್ಮೆ ಸ್ಫಟಿಕ ಕಮಲಗಳಿಂದ ಶೋಭಿತ ಸ್ಫಟಿಕದಂತಿದ್ದ ನೀರನ್ನು ನೋಡಿ ನೆಲವೆಂದು ತಿಳಿದು ವಸ್ತ್ರಗಳ ಸಮೇತ ನೀರಿನಲ್ಲಿ ಬಿದ್ದನು. ನೀರಿನಲ್ಲಿ ಬಿದ್ದುದನ್ನು ನೋಡಿ ಜೋರಾಗಿ ನಕ್ಕ ಅಲ್ಲಿದ್ದ ಸೇವಕರೆಲ್ಲರೂ

ರಾಜಶಾಸನದಂತೆ ಅವನಿಗೆ ಶುಭವಸ್ತ್ರಗಳನ್ನು ಕೊಟ್ಟರು. ಅವನನ್ನು ಆ ಅವಸ್ಥೆಯಲ್ಲಿ ನೋಡಿದ ಮಹಾಬಲಿ ಭೀಮಸೇನ, ಅರ್ಜುನ ಮತ್ತು ಅವಳಿಗಳೆಲ್ಲರೂ ಜೋರಾಗಿ ನಕ್ಕರು. ಅವರ ಅಪಹಾಸ್ಯದಿಂದ ತನಗಾದ ನೋವನ್ನು ಅವರ ಕಡೆ ನೋಡದೆಯೇ ತನ್ನ ಮುಖದಲ್ಲಿಯೇ ಆ ಅಮರ್ಷಣನು ಬಚ್ಚಿಟ್ಟುಕೊಂಡನು. ಇನ್ನೊಮ್ಮೆ ಅವನು ಗಟ್ಟಿಯಾದ ನೆಲವನ್ನು ನೀರಿನ ಕೊಳವೆಂದು ತಿಳಿದು ತನ್ನ ವಸ್ತ್ರವನ್ನು ಮೇಲಕ್ಕೆತ್ತಿ ದಾಟಿದುದನ್ನು ನೋಡಿ ಎಲ್ಲರೂ ಪುನಃ ನಕ್ಕರು. ಒಮ್ಮೆ ಅವನು ತೆರದಹಾಗೆ ತೋರುತ್ತಿದ್ದ ದ್ವಾರದ ಒಳಗೆ ಹೋಗಲು ಪ್ರಯತ್ನಿಸಿ ತನ್ನ ಹಣೆಯನ್ನು ಚಚ್ಚಿಕೊಂಡನು. ಇನ್ನೊಮ್ಮೆ ದ್ವಾರವು ಮುಚ್ಚಿದೆಯೆಂದು ತಿಳಿದು ಬಾಗಿಲಿನಲ್ಲಿಯೇ ಬಿದ್ದನು. ಆ ಅದ್ಭುತ ಸಮೃದ್ಧ ಮಹಾಕ್ರತು ರಾಜಸೂಯವನ್ನು ನೋಡಿ ಮತ್ತು ಅಲ್ಲಿ ಈ ರೀತಿಯ ವಿವಿಧ ಪರಿಪಾಟಗಳನ್ನು ಅನುಭವಿಸಿದ ನೃಪ ದುರ್ಯೋಧನನು ಮನಸ್ಸಿನಲ್ಲಿಯೇ ಅಸಂತುಷ್ಟನಾಗಿ ಪಾಂಡವರಿಂದ ಅಪ್ಪಣೆಯನ್ನು ಪಡೆದು ಗಜಸಾಹ್ವಯಕ್ಕೆ ಹೊರಟನು.

ಪಾಂಡವರ ಏಳ್ಗೆಯನ್ನು ಸಹಿಸಲಾಗದೇ ಧ್ಯಾನಮಗ್ನನಾದ ನೃಪತಿ ದುರ್ಯೋಧನನಲ್ಲಿ ಕೆಟ್ಟ ಯೋಚನೆಗಳು ಹುಟ್ಟಿದವು. ಪಾರ್ಥರ ಸಂತೋಷವನ್ನು, ಅವರಿಗೆ ವಶರಾದ ಪಾರ್ಥಿವರನ್ನು, ಅವರ ಸಣ್ಣ ಮಕ್ಕಳನ್ನೂ ಸೇರಿಸಿ ಎಲ್ಲರ ಹಿತವನ್ನೇ ಸರ್ವಲೋಕವೂ ಬಯಸುತ್ತಿರುವುದನ್ನು, ಮಹಾತ್ಮ ಪಾಂಡವರ ಇತರ ಅತ್ಯುನ್ನತ

ಮಹಿಮೆಗಳನ್ನು ನೋಡಿ ಧಾರ್ತರಾಷ್ಟ್ರ ದುರ್ಯೋಧನನು ವಿವರ್ಣನಾದನು. ಧೀಮಂತ ಧರ್ಮರಾಜನ ಆ ಅನುಪಮ ಸುಂದರ ಸಭೆಯ ಕುರಿತೇ ಯೋಚಿಸುತ್ತಾ ಏಕಾಗ್ರನಾಗಿ ಪ್ರಮತ್ತನಾಗಿ ಹೊರಟ ಧೃತರಾಷ್ಟ್ರ ಪುತ್ರ ದುರ್ಯೋಧನನು ಪುನಃ ಪುನಃ ಮಾತನಾಡುತ್ತಿದ್ದ ಸುಬಲಜನಲ್ಲಿ ಏನನ್ನೂ ಮಾತನಾಡಲಿಲ್ಲ. ಆ ಅನೇಕಾಗ್ರನನ್ನು ನೋಡಿದ ಶಕುನಿಯು ಕೇಳಿದನು:

> "ದುರ್ಯೋಧನ! ಯಾವ ಕಾರಣಕ್ಕಾಗಿ ಈ ರೀತಿ ನಿಟ್ಟಿಸುರುಬಿಡುತ್ತಾ ಪ್ರಯಾಣಿಸುತ್ತಿರುವೆ?"

ದುರ್ಯೋಧನನು ಹೇಳಿದನು:

> "ಮಹಾತ್ಮ ಶ್ವೇತಾಶ್ವನ ಅಸ್ತ್ರಪ್ರತಾಪದಿಂದ ಗೆಲ್ಲಲ್ಪಟ್ಟ ಇಡೀ ಪೃಥ್ವಿಯೇ ಯುಧಿಷ್ಠಿರನ ವಶವಾದುದನ್ನು ನಾನು ಕಂಡೆ. ಮಾವ! ದೇವತೆಗಳಲ್ಲಿ ಶಕ್ರನ ಯಜ್ಞವು ಹೇಗಿರುತ್ತದೆಯೋ ಹಾಗೆ ನಡೆದ ಪಾರ್ಥನ ಯಜ್ಞವನ್ನು ನೋಡಿದೆ. ಹಗಲು ರಾತ್ರಿ ಸುಡುತ್ತಿರುವ ಅಸೂಯೆಯು ನನ್ನನ್ನು ತುಂಬಿಕೊಂಡಿದೆ ಮತ್ತು ಬೇಸಗೆಯಲ್ಲಿ ಬತ್ತಿಹೋಗುವ ಕೊಳದಂತೆ ನಾನು ಸೊರಗುತ್ತಿದ್ದೇನೆ. ನೋಡು! ಸಾತ್ವತಮುಖ್ಯನು ಶಿಶುಪಾಲನನ್ನು ಉರುಳಿಸಿದನು. ಆದರೂ ಅವನನ್ನು ಬೆಂಬಲಿಸುವ ಯಾವ ಪುರುಷನೂ ಅಲ್ಲಿರಲಿಲ್ಲ. ಪಾಂಡವೋದ್ಭವ ವಹ್ನಿಯಿಂದ

ಸುಡುತ್ತಿರುವ ಆ ರಾಜರು ಅವರ ಅಪರಾಧವನ್ನು ಕ್ಷಮಿಸಿದರು. ಆದರೂ ಅದನ್ನು ಯಾರುತಾನೆ ಕ್ಷಮಿಸಬಲ್ಲರು? ವಾಸುದೇವನ ಯಥಾಯುಕ್ತ ಮಹಾಕಾರ್ಯದಿಂದಾಗಿ ಮಹಾತ್ಮ ಪ್ರತಾಪಿ ಪಾಂಡವರು ಯಶಸ್ವಿಯಾದರು. ಹಾಗೆಯೇ ರಾಜನಿಗೆಂದು ವಿವಿಧ ರತ್ನಗಳನ್ನು ತಂದು ತೆರಿಗೆ ಕೊಡುವ ವೈಶ್ಯರಂತೆ ನೃಪರು ಕೌಂತೇಯನ ಉಪಸ್ಥಿತಿಯಲ್ಲಿದ್ದರು. ಪಾಂಡವರ ಆ ಸಂಪತ್ತನ್ನು ನೋಡಿ ನಾನು ಅಸೂಯೆಯ ವಶದಲ್ಲಿ ಬಂದು ಔಚಿತ್ಯವಲ್ಲದಿದ್ದರೂ ಸುಡುತ್ತಿದ್ದೇನೆ. ಬೆಂಕಿಯಲ್ಲಿಯಾದರೂ ಬೀಳುತ್ತೇನೆ, ವಿಷವನ್ನಾದರೂ ಸೇವಿಸುತ್ತೇನೆ, ಅಥವಾ ನೀರಿನಲ್ಲಿ ಮುಳುಗುತ್ತೇನೆ, ಆದರೆ ಇನ್ನು ಜೀವಿಸುವುದನ್ನು ಸಹಿಸಲಾರೆ. ಯಾಕೆಂದರೆ ಯಾವ ಸತ್ವಯುತ ಮನುಷ್ಯ ತಾನೇ ತನ್ನ ಪ್ರತಿಸ್ಪರ್ಧಿಗಳು ವೃದ್ಧಿಯಾಗುವುದನ್ನು ಮತ್ತು ಸ್ವತಃ ಹಾನಿಯನ್ನು ಹೊಂದುವುದನ್ನು ನೋಡಿಯೂ ಸಹಿಸಿಕೊಳ್ಳುತ್ತಾನೆ? ಅವರಿಗೆ ದೊರಕಿರುವ ಶ್ರೇಯಸ್ಸನ್ನು ನಾನು ಸಹಿಸಿಕೊಂಡೆನೆಂದರೆ ನಾನು ಸ್ತ್ರೀಯೂ ಆಗಿರಲಿಕ್ಕಿಲ್ಲ ಸ್ತ್ರೀಯಲ್ಲದೆಯೂ ಇರಲಿಕ್ಕಿಲ್ಲ ಅಥವಾ ಪುರುಷನೂ ಆಗಿರಲಿಕ್ಕಿಲ್ಲ ಪುರುಷನಲ್ಲದೆಯೂ ಇರಲಿಕ್ಕಿಲ್ಲ. ಪೃಥ್ವಿಯಲ್ಲಿ ಅವರ ಈಶ್ವರತ್ವವನ್ನು ಮತ್ತು ಅಂಥಹ ಸಂಪತ್ತು, ಅಂಥಹ ಯಜ್ಞವನ್ನು ನೋಡಿದ ನನ್ನಂಥಹ ಯಾರು ತಾನೇ

ಜ್ವರದಿಂದ ಸುಡುವುದಿಲ್ಲ? ನಾನೊಬ್ಬನೇ ಅಂಥಹ ನೃಪಶ್ರೀಯನ್ನು ಪಡೆಯಲು ಶಕ್ಯನಿಲ್ಲ. ನನಗೆ ಸಹಾಯಮಾಡುವ ಯಾರನ್ನು ಕೂಡ ನಾನು ಕಾಣುತ್ತಿಲ್ಲ. ಆದುದರಿಂದ ನಾನು ಮೃತ್ಯುವನ್ನೇ ಯೋಚಿಸುತ್ತಿದ್ದೇನೆ. ಕುಂತೀಸುತನು ಒಟ್ಟುಗೂಡಿಸಿರುವ ಆ ಶುಭ್ರ ಶ್ರೀಯನ್ನು ನೋಡಿ ನನಗನ್ನಿಸುತ್ತದೆ: ದೈವವೇ ಪರ, ಪೌರುಷವೆಲ್ಲವೂ ನಿರರ್ಥಕ. ಹಿಂದೆ ನಾನು ಅವನ ವಿನಾಶಕ್ಕೆ ಪಯತ್ನಿಸಿದೆ. ಆದರೆ ಅವೆಲ್ಲವನ್ನು ಅತಿಕ್ರಮಿಸಿ ಅವನು ನೀರಿನಲ್ಲಿನ ಪಂಕಜದಂತೆ ವೃದ್ಧಿಯಾಗಿದ್ದಾನೆ. ಆದರಿಂದ ನನಗನ್ನಿಸುತ್ತದೆ: ದೈವವೇ ಪರ, ಪೌರುಷವು ನಿರರ್ಥಕ. ಧಾರ್ತರಾಷ್ಟ್ರರು ನಿತ್ಯವೂ ಕುಸಿಯುತ್ತಿದ್ದಾರೆ ಮತ್ತು ಪಾರ್ಥರು ವರ್ಧಿಸುತ್ತಿದ್ದಾರೆ. ಅವರ ಸಂಪತ್ತು, ಸಭೆ, ಮತ್ತು ಅಲ್ಲಿಯ ಕಾವಲುಗಾರರು ಮಾಡಿದ ಅಪಹಾಸ ಇವೆಲ್ಲವೂ ನನ್ನನ್ನು ಅಗ್ನಿಯಂತೆ ಸುಡುತ್ತಿವೆ. ಇಂದು ಈ ಕಹಿ ದುಃಖವನ್ನು ಅನುಭವಿಸಲು ಬಿಡು ಮತ್ತು ನನ್ನನ್ನು ಸಮಾವೇಶಗೊಂಡಿರುವ ಅಸೂಯೆಯ ಕುರಿತು ಧೃತರಾಷ್ಟ್ರನಲ್ಲಿ ನಿವೇದಿಸು.”

## ಶಕುನಿಯಿಂದ ದ್ಯೂತದ ಸಲಹೆ

ಶಕುನಿಯು ಹೇಳಿದನು:

“ದುರ್ಯೋಧನ! ಯುಧಿಷ್ಠಿರನ ಕುರಿತು ಯಾವುದೇ ರೀತಿಯ ಅಸೂಯೆ ಮಾಡಬೇಡ. ಯಾಕೆಂದರೆ ಪಾಂಡವರು ಸದಾ ಭಾಗ್ಯವಂತರಾಗಿದ್ದಾರೆ. ಹಿಂದೆ ನೀನು ಅವರ ಮೇಲೆ ಅನೇಕ ಉಪಾಯ ಪ್ರಯತ್ನಗಳನ್ನು ಮಾಡಿದ್ದೀಯೆ. ಆದರೆ ಆ ನರವ್ಯಾಘ್ರರು ಭಾಗ್ಯದಿಂದಲೇ ವಿಮುಕ್ತರಾದರು. ಪೃಥ್ವಿಯನ್ನು ಗೆಲ್ಲುವುದಕ್ಕೆ ಅವರು ದ್ರೌಪದಿಯನ್ನು ಪತ್ನಿಯನಾಗಿ, ಸುತರ ಸಹಿತ ದ್ರುಪದನನ್ನು ಹಾಗೂ ವೀರ್ಯವಾನ್ ವಾಸುದೇವನನ್ನು ಸಹಾಯಕರನ್ನಾಗಿ ಗೆದ್ದರು. ಅವರು ಪೃಥ್ವೀಪತಿ ತಂದೆಯ ಭಾಗವಾದ ಸಂಪತ್ತನ್ನು ಪಡೆದರು ಮತ್ತು ಅವರದ್ದೇ ತೇಜಸ್ಸಿನಿಂದ ಅದನ್ನು ವೃದ್ಧಿಸಿದರು. ಅದರಲ್ಲಿ ದುಃಖಪಡುವಂಥಹುದು ಏನಿದೆ? ಮಹೇಷುಧೀ ಧನಂಜಯನು ಹುತಾಶನನನ್ನು ತೃಪ್ತಿಗೊಳಿಸಿ ಗಾಂಡೀವವನ್ನೂ, ಅಕ್ಷಯ ಭತ್ತಳಿಕೆಗಳನ್ನೂ, ದಿವ್ಯಾಸ್ತ್ರಗಳನ್ನೂ ಪಡೆದನು. ಆ ಉತ್ತಮ ಧನುಸ್ಸಿನಿಂದ ಮತ್ತು ತನ್ನದೇ ಬಾಹುವೀರ್ಯದಿಂದ ಅವನು ಮಹೀಪಾಲರನ್ನು ವಶಗೊಳಿಸಿದನು. ಅದರಲ್ಲಿ ಬೇಸರಪಡುವಂಥಹುದು ಏನಿದೆ? ಆ ಪರಂತಪ ಸವ್ಯಸಾಚಿಯು ದಹಿಸುತ್ತಿರುವ ಅಗ್ನಿಯಿಂದ ದಾನವ ಮಯನನ್ನು ಉಳಿಸಿ ಅವನಿಂದ ಸಭೆಯನ್ನು ಕಟ್ಟಿಸಿದನು. ಅದೇ ಮಯನ ಹೇಳಿಕೆಯಂತೆ ಕಿಂಕರರೆಂಬ ಹೆಸರಿನ

ಭಯಂಕರ ರಾಕ್ಷಸರು ಆ ಸಭೆಯನ್ನು ನಡೆಸುತ್ತಿದ್ದಾರೆ. ಇದರಲ್ಲಿ ದುಃಖಿಸುವುದಾದರೂ ಏನಿದೆ? ನಿನ್ನ ಸಹಾಯಕರು ಯಾರೂ ಇಲ್ಲ ಎಂದು ಹೇಳುತ್ತಿದ್ದೀಯಲ್ಲ. ಅದು ಸುಳ್ಳು! ನಿನ್ನ ಮಹಾರಥಿ ಸಹೋದರರರೇ ನಿನ್ನ ಸಹಾಯಕರು. ಹಾಗೆಯೇ ತನ್ನ ಧೀಮಂತ ಪುತ್ರ ಸಹಿತ ಮಹೇಷ್ವಾಸ ದ್ರೋಣ, ಸೂತಪುತ್ರ ರಾಧೇಯ, ಮತ್ತು ಮಹಾರಥಿ ಗೌತಮಿ ಇವರೂ ನಿನ್ನವರೇ. ಸೋದರರರೊಂದಿಗೆ ನಾನೂ ಕೂಡ, ಮತ್ತು ವೀರ್ಯವಂತ ಸೌಮದತ್ತಿ, ಇವರೆಲ್ಲರ ಜೊತೆಗೂಡಿ ನೀನು ಇಡೀ ವಸುಂಧರೆಯನ್ನೇ ಜಯಿಸಬಹುದು."

ದುರ್ಯೋಧನನು ಹೇಳಿದನು:

"ರಾಜನ್! ನೀನು ಒಪ್ಪುವುದಾದರೆ, ನಿನ್ನ ಮತ್ತು ಇತರ ಮಹಾರಥಿಗಳೊಡಗೂಡಿ ಅವರನ್ನು ಸೋಲಿಸುತ್ತೇನೆ. ಅವರನ್ನು ಸೋಲಿಸಿದಾಗ ಈ ಮಹಿ, ಸರ್ವ ಪೃಥಿವೀಪಾಲರು, ಆ ಸಭೆ, ಆ ಮಹಾ ಐಶ್ವರ್ಯ ಎಲ್ಲವೂ ನನ್ನದಾಗುತ್ತದೆ."

ಶಕುನಿಯು ಹೇಳಿದನು:

"ಆ ಮಹಾರಥಿ, ಮಹೇಷ್ವಾಸ, ಕೃತಾಸ್ತ್ರ ಮತ್ತು ಯುದ್ಧದುರ್ಮದ ಧನಂಜಯ, ವಾಸುದೇವ, ಭೀಮಸೇನ,

ಯುಧಿಷ್ಠಿರ, ನಕುಲ, ಸಹದೇವ ಮತ್ತು ಪುತ್ರರ ಸಹಿತ ದ್ರುಪದ ಇವರನ್ನು ಬಲದಿಂದ ಯುದ್ಧದಲ್ಲಿ ಜಯಿಸಲು ಸುರಗಣರಿಗೂ ಶಕ್ಯವಿಲ್ಲ. ರಾಜನ್! ಆದರೆ ಯುಧಿಷ್ಠಿರನನ್ನು ಹೇಗೆ ಸೋಲಿಸಬಹುದು ಎನ್ನುವುದನ್ನು ನಾನು ತಿಳಿದಿದ್ದೇನೆ. ಅದನ್ನು ಕೇಳು ಮತ್ತು ಅದರಂತೆ ಮಾಡು."

ದುರ್ಯೋಧನನು ಹೇಳಿದನು:

"ಮಾವ! ಸುಹೃದಯರಿಗೆ ಮತ್ತು ಇತರ ಮಹಾತ್ಮರಿಗೆ ಅಪ್ರಮಾದವಾಗದ ರೀತಿಯಲ್ಲಿ ಅವರನ್ನು ಜಯಿಸಲು ಶಕ್ಯವಿದ್ದರೆ ಅದನ್ನು ಹೇಳು!"

ಶಕುನಿಯು ಹೇಳಿದನು:

"ಕೌಂತೇಯನು ದ್ಯೂತಪ್ರಿಯ. ಆದರೆ ಜೂಜಾಡುವುದು ಅವನಿಗೆ ಗೊತ್ತಿಲ್ಲ. ಆಹ್ವಾನಿಸಿದರೆ ಆ ರಾಜೇಂದ್ರನಿಗೆ ನಿರಾಕರಿಸಲು ಕಷ್ಟವಾಗುತ್ತದೆ. ನಾನು ಜೂಜಿನಲ್ಲಿ ಕುಶಲ ಮತ್ತು ಇದರಲ್ಲಿ ನನ್ನ ಸರಿಸಮನು ಮೂರೂ ಲೋಕಗಳಲ್ಲಿಯೂ, ಭೂಮಿಯಲ್ಲಿಯೂ ಯಾರೂ ಇಲ್ಲ. ಕೌಂತೇಯನನ್ನು ದ್ಯೂತಕ್ಕೆ ಆಹ್ವಾನಿಸು. ಜೂಜಾಟದಲ್ಲಿ ನನ್ನ ಈ ಕುಶಲತೆಯಿಂದ ನಿಶ್ಚಯವಾಗಿಯೂ ಅವನ ರಾಜ್ಯ ಮತ್ತು ಸಂಪತ್ತನ್ನು ನಿನ್ನದಾಗಿಸುತ್ತೇನೆ. ಇವೆಲ್ಲವನ್ನು ನೀನು ರಾಜನಿಗೆ ನಿವೇದಿಸು. ನಿನ್ನ ತಂದೆಯು ಅಪ್ಪಣೆಯಿತ್ತರೆ

ನಾನು ಅವನನ್ನು ಜಯಿಸುತ್ತೇನೆ. ಸಂಶಯವೇ ಇಲ್ಲ.”

ದುರ್ಯೋಧನನು ಹೇಳಿದನು:

“ಸೌಬಲ! ನೀನೇ ಇದನ್ನು ಕುರುಮುಖ್ಯ ಧೃತರಾಷ್ಟ್ರನಲ್ಲಿ ಸರಿಯಾದ ರೀತಿಯಲ್ಲಿ ಹೇಳಬೇಕು. ಈ ವಿಷಯವನ್ನು ಪ್ರಸ್ತಾಪಿಸಲು ನನಗೆ ಸಾಧ್ಯವಿಲ್ಲ.”

## ದುರ್ಯೋಧನನಿಂದ ಯುಧಿಷ್ಠಿರನ ಐಶ್ವರ್ಯದ ವರ್ಣನೆ

ರಾಜ ಯುಧಿಷ್ಠಿರನ ಮಹಾಕ್ರತು ರಾಜಸೂಯವನ್ನು ನೃಪತಿ ಗಾಂಧಾರೀಸುತನೊಡಗೂಡಿ ಅನುಭವಿಸಿ, ದುರ್ಯೋಧನನ ಮತವನ್ನು ಮೊದಲೇ ತಿಳಿದುಕೊಂಡು, ದುರ್ಯೋಧನನು ಹೇಳಿದ್ದುದನ್ನು ಕೇಳಿ, ಅವನಿಗೆ ಪ್ರಿಯವಾದುದನ್ನು ಮಾಡಲೆಂದು ಬಯಸಿದ ಮಹಾಪ್ರಾಜ್ಞ ಶಕುನಿ ಸೌಬಲನು ಪ್ರಜ್ಞಾಚಕ್ಷು ಜನಾಧಿಪ ಧೃತರಾಷ್ಟ್ರನಲ್ಲಿಗೆ ಬಂದು, ಈ ಮಾತುಗಳನ್ನಾಡಿದನು:

“ಮಹಾರಾಜ! ದುರ್ಯೋಧನನು ವಿವರ್ಣ, ಹರಿಣ, ಕೃಷ, ದೀನ, ಮತ್ತು ಚಿಂತಾಪರನಾಗಿದ್ದಾನೆ. ನಿನ್ನ ಜ್ಯೇಷ್ಠಪುತ್ರನನ್ನು ಕಾಡುತ್ತಿರುವ ಈ ಶತ್ರುಸಂಭವ ಶೋಕವು ಏನೆಂದು ನೀನು ಪರೀಕ್ಷಿಸಿ ಕಂಡುಕೊಳ್ಳುವುದಿಲ್ಲ ಏಕೆ?”

ಧೃತರಾಷ್ಟ್ರನು ಹೇಳಿದನು:

“ದುರ್ಯೋಧನ! ಪುತ್ರ! ಯಾವ ಕಾರಣಕ್ಕಾಗಿ ನೀನು

ಅಷ್ಟೊಂದು ಶೋಕದಿಂದ ಸೊರಗುತ್ತಿದ್ದೀಯೆ? ಅದರ ಕುರಿತು ನಾನು ಕೇಳಬಹುದೇ? ಹೇಳು. ಶಕುನಿಯು ಹೇಳುತ್ತಿದ್ದಾನೆ - ನೀನು ವಿವರ್ಣನೂ, ಹರಿಣನೂ, ಕೃಷನೂ ಚಿಂತಾಪರನೂ ಆಗಿದ್ದೀಯಂತೆ. ಆದರೆ ನಿನ್ನ ಶೋಕದ ಕಾರಣವೇನೆಂದು ನಾನು ಕಾಣುತ್ತಿಲ್ಲ. ಈ ಮಹಾ ಐಶ್ವರ್ಯವೆಲ್ಲವೂ ನಿನ್ನ ಸಮರ್ಪಣೆಯಲ್ಲಿದೆ. ಸಹೋದರರು, ಸುಹೃದಯರು ಯಾರೂ ನಿನಗೆ ಅಪ್ರಿಯವಾಗಿ ನಡೆದುಕೊಳ್ಳುತ್ತಿಲ್ಲ. ಅತ್ಯಮೂಲ್ಯ ವಸ್ತ್ರಗಳನ್ನು ತೊಡುತ್ತಿದ್ದೀಯೆ, ರುಚಿಯಾದ ಶ್ರೇಷ್ಠ ಆಹಾರವನ್ನು ಉಣ್ಣುತ್ತಿದ್ದೀಯೆ, ಉತ್ತಮ ಥಳಿಯ ಕುದುರೆಗಳು ನಿನ್ನನ್ನು ಸವಾರಿಗೆ ಒಯ್ಯುತ್ತವೆ. ಇನ್ನು ಯಾವ ಕಾರಣಕ್ಕೆ ನೀನು ಹರಿಣನೂ, ಕೃಶನೂ ಆಗಿದ್ದೀಯೆ? ಬೆಲೆಬಾಳುವ ಹಾಸಿಗೆಗಳು, ತೃಪ್ತಿಪಡಿಸಲು ಮನೋರಮೆಯರು, ಒಳ್ಳೆಯ ಅರಮನೆ, ಯಥಾಸುಖ ವಿಹಾರಗಳು, ಇವೆಲ್ಲವೂ ದೇವತೆಗಳಂತೆ ನಿನ್ನ ಮಾತಿಗೆ ಬದ್ಧವಾಗಿವೆ ಎನ್ನುವುದರಲ್ಲಿ ಸಂಶಯವಿಲ್ಲ. ದುರ್ದರ್ಷನಾದರೂ ಏಕೆ ದೀನನಾಗಿರುವೆ? ಪುತ್ರಕ! ಯಾವುದಕ್ಕಾಗಿ ಶೋಕಿಸುತ್ತಿದ್ದೀಯೆ?”

ದುರ್ಯೋಧನನು ಹೇಳಿದನು:

“ಕಾಪುರುಷನಂತೆ ಉಣ್ಣುತ್ತೇನೆ ಮತ್ತು ಉಡುತ್ತೇನೆ. ದಿನೇ ದಿನೇ ಕಾಲ ಉರುಳುತ್ತಿದ್ದಂತೆ ನನ್ನಲ್ಲಿ ಅತಿಹೆಚ್ಚಿನ ಅಸೂಯೆಯೊಂದು ಉಂಟಾಗಿದೆ. ತನ್ನ ಶತ್ರುವನ್ನು ಅನುಸರಿಸುವ ಪ್ರಜೆಗಳನ್ನು ಸಹಿಸದೇ ತನ್ನ ಶತ್ರುಗಳಿಂದ ಒದಗಿದ ಕ್ಲೇಶಗಳಿಂದ ಮುಕ್ತಿಯನ್ನು ಬಯಸುವವನಿಗೆ ಪುರುಷ ಎನ್ನುತ್ತಾರೆ. ಅನುಕ್ರೋಶ-ಭಯಗಳೊಡನೆ ಸಂತೃಪ್ತಿ-ಅಭಿಮಾನಗಳೆರಡೂ ಸಂಪತ್ತನ್ನು ನಾಶಪಡಿಸುತ್ತವೆ. ಇವುಗಳಿರುವವನು ಎಂದೂ ಮಹಾತ್ಮನೆನೆಸಿಕೊಳ್ಳುವುದಿಲ್ಲ. ಕೌಂತೇಯ ಯುಧಿಷ್ಠಿರನ ಆ ಸಂಪತ್ತನ್ನು ನೋಡಿದ ನನಗೆ ಈ ಭೋಗಗಳು ಸುಖವನ್ನು ಕೊಡದೇ ನನ್ನನ್ನು ವಿವರ್ಣನನ್ನಾಗಿ ಮಾಡುತ್ತಿವೆ. ಪ್ರತಿಸ್ಪರ್ಧಿಗಳ ಅಭಿವೃದ್ಧಿಯೇ ನನ್ನ ಅಧೋಗತಿಯೆಂದು ತಿಳಿದಿರುವ ನಾನು ಕೌಂತೇಯನ ಉಚ್ಛ ಸ್ಥಾನವನ್ನು ನೋಡಿ ಹೊರಗಡೆ ತೋರಿಸಿಕೊಳ್ಳದಿದ್ದರೂ ಚಿಂತಿಸುತ್ತಿದ್ದೇನೆ. ಆದುದರಿಂದ ವಿವರ್ಣನೂ, ದೀನನೂ, ಹರಿಣನೂ, ಕೃಶನೂ ಆಗಿದ್ದೇನೆ. ತಲಾ ಮೂವತ್ತು ದಾಸಿಯರನ್ನು ಪಡೆದ ಎಂಭತ್ತೆಂಟು ಸಾವಿರ ಸ್ನಾತಕ ಕುಟುಂಬಗಳನ್ನು ಯುಧಿಷ್ಠಿರನು ಪೊರೆಯುತ್ತಿದ್ದಾನೆ. ಇನ್ನೂ ಹತ್ತುಸಾವಿರ ಜನರು ಯುಧಿಷ್ಠಿರನ ಮನೆಯಲ್ಲಿ ನಿತ್ಯವೂ ಉತ್ತಮ ಆಹಾರವನ್ನು ಬಂಗಾರದ ಬಟ್ಟಲುಗಳಲ್ಲಿ ಸೇವಿಸುತ್ತಾರೆ.

ಕಾಂಬೋಜನು ಅವನಿಗೆ ಕದಲೀ ಮೃಗ ಚರ್ಮದ ಕಪ್ಪು, ನೀಲಿ ಮತ್ತು ಕೆಂಪು ಬಣ್ಣದ ಅತ್ಯಮೂಲ್ಯ ಕಂಬಳಿಗಳು, ನೂರಾರು ಸಹಸ್ರಾರು ರಥಗಳು, ಸ್ತ್ರೀಯರು, ಮತ್ತು ಕುದುರೆಗಳನ್ನು ಕಳುಹಿಸಿದ್ದಾನೆ. ಅಲ್ಲಿ ಮೂವತ್ತು ಸಾವಿರ ಒಂಟೆಗಳು ವಿಹರಿಸುತ್ತಿವೆ. ಎಲ್ಲ ತರಹದ ರತ್ನಗಳನ್ನೂ ಪಾರ್ಥಿವರು ಆ ಸುಂದರ ಮುಖ್ಯ ಕ್ರತುವಿನಲ್ಲಿ ಕುಂತೀಪುತ್ರನಿಗೆ ತಂದಿದ್ದರು. ಧೀಮತ ಪಾಂಡುಪುತ್ರನ ಯಜ್ಞದಲ್ಲಿ ಬಂದಷ್ಟು ಧನವನ್ನು ನಾನು ಬೇರೆ ಎಲ್ಲಿಯೂ ನೋಡಲಿಲ್ಲ, ಅಥವಾ ಕೇಳಲಿಲ್ಲ. ಆ ಶತ್ರುವಿನ ಕಡೆ ಹರಿಯುತ್ತಿದ್ದ ಆ ಅಮೋಘ ಸಂಪತ್ತಿನ ಹೊಳೆಯನ್ನು ಕಂಡ ನನಗೆ ಎಲ್ಲಿಯೂ ನೆಲೆಯನ್ನು ಕಾಣದೇ ಒಂದೇಸಮನೆ ಚಿಂತೆಗೊಳಗಾಗಿದ್ದೇನೆ. ಮೂರು ಖರ್ವ ಕಪ್ಪಗಳನ್ನು ತೆಗೆದುಕೊಂಡು ಬಂದ ಗೋಮಂತ ವಾಟಧಾನ ಬ್ರಾಹ್ಮಣರ ನೂರಾರು ಗುಂಪುಗಳನ್ನು ಹಿಂದೆ ಕಳುಹಿಸಲಾಯಿತು. ಆದರೆ ಅವರು ಸುಂದರವಾದ ಬಂಗಾರದ ಕಮಂಡಲುಗಳನ್ನು ಕಪ್ಪವಾಗಿ ತೆಗೆದುಕೊಂಡು ಬಂದ ನಂತರ ಅವರಿಗೆ ಪ್ರವೇಶವು ದೊರೆಯಿತು. ಶಕ್ರನಿಗೆ ಮಧುವಿನ ಘಟಗಳನ್ನು ಅಮರಸ್ತ್ರೀಯರು ಹಿಡಿಯುವಂತೆ ಬಹುರತ್ನವಿಭೂಷಿತ ಸಹಸ್ರಾರು ನಾರಿಯರು ವರುಣನು ತುಂಬಿದ ಬಂಗಾರದ ಕಲಶಗಳನ್ನು ಹಿಡಿದಿದ್ದರು. ಪೂರ್ವ

ಮತ್ತು ದಕ್ಷಿಣದ ಸಮುದ್ರಗಳಿಗೆ ಹೋಗಿ ಪಡೆದಿದ್ದ ಮತ್ತು ಹಾಗೆಯೇ ಪಶ್ಚಿಮ ದಿಕ್ಕಿನಿಂದ ಪಡೆದಿದ್ದ ಅವೆಲ್ಲವನ್ನೂ ನೋಡಿ ನನಗೆ ಜ್ವರಬಂದಂಥಾಯಿತು. ಪಕ್ಷಿಗಳ ಹೊರತಾಗಿ ಉತ್ತರದಿಕ್ಕಿಗೆ ಯಾರೂ ಹೋಗುವುದಿಲ್ಲ. ಅಲ್ಲಿ ನಡೆದ ಅದ್ಭುತವವನ್ನು ಹೇಳುತ್ತೇನೆ. ಕೇಳು. ಪೂರ್ಣ ಒಂದು ಸಹಸ್ರ ವಿಪ್ರರ ಭೋಜನವಾದನಂತರ ನಿತ್ಯವೂ ಅದರ ಸೂಚನೆಯನ್ನು ಶಂಖವನ್ನು ಊದುವುದರ ಮೂಲಕ ಕೊಡಲಾಗುತ್ತಿತ್ತು. ಕ್ಷಣಕ್ಕೊಮ್ಮೆ ಕೇಳಿಬರುತ್ತಿದ್ದ ಆ ಉತ್ತಮ ಶಂಖನಾದದಿಂದ ನನ್ನ ರೋಮಗಳು ನಿಮಿರೇಳುತ್ತಿದ್ದವು! ಸರ್ವರತ್ನಗಳನ್ನು ತೆಗೆದುಕೊಂಡು ನೋಡಲು ಬಂದಿದ್ದ ಪಾರ್ಥಿವರಿಂದ ಆ ಸಭೆಯು ತುಂಬಿಹೋಗಿತ್ತು. ಆ ಪಾಂಡುಪುತ್ರ ದೀಮಂತನ ಯಜ್ಞದಲ್ಲಿ ದ್ವಿಜರ ಮುಂದೆ ಮಹೀಪಾಲರು ಸಾಮನ್ಯಜನರಂತೆ ತೋರುತ್ತಿದ್ದರು. ಯುಧಿಷ್ಠಿರನಲ್ಲಿರುವಷ್ಟು ಸಿರಿಯನ್ನು ದೇವರಾಜ, ಯಮ, ವರುಣ ಅಥವಾ ಗುಹ್ಯಕಾಧಿಪತಿಯಲ್ಲಿಯೂ ಇಲ್ಲ. ಪಾಂಡುಪುತ್ರನ ಆ ಅಪರಿಮಿತ ಸಂಪತ್ತನ್ನು ನೋಡಿದಾಗಿನಿಂದ ಸುಡುತ್ತಿರುವ ನನ್ನ ಚೇತನದಲ್ಲಿ ಶಾಂತಿಯೆನ್ನುವುದೇ ದೊರೆಯದಾಗಿದೆ.”

ಶಕುನಿಯು ಹೇಳಿದನು:

> “ಸತ್ಯಪರಾಕ್ರಮ! ಪಾಂಡವನಲ್ಲಿ ನೀನು ನೋಡಿದ ಉತ್ತಮ ಸಂಪತ್ತನ್ನು ಹೇಗೆ ನಿನ್ನದಾಗಿಸಿಕೊಳ್ಳಬಹುದು ಎನ್ನುವುದನ್ನು ಹೇಳುತ್ತೇನೆ. ಕೇಳು. ನಾನು ಪೃಥಿವಿಯಲ್ಲಿಯೇ ಅತಿ ಶ್ರೇಷ್ಠ ಅಕ್ಷಶ್ವವನ್ನು ತಿಳಿದವನು. ನಾನು ದಾಳಗಳ ಹೃದಯವನ್ನು, ಪಣವನ್ನು ಮತ್ತು ವಿಶೇಷತೆಯನ್ನು ಬಲ್ಲೆ. ಕೌಂತೇಯನು ದ್ಯೂತಪ್ರಿಯ. ಆದರೆ ಅವನಿಗೆ ಜೂಜಾಡುವುದು ಗೊತ್ತಿಲ್ಲ. ಕರೆದರೆ ಅವನು ಖಂಡಿತವಾಗಿಯೂ ಬರುತ್ತಾನೆ. ಆಗ ನಾನು ಅವನನ್ನು ನನ್ನೊಡನೆ ಜೂಜಾಡಲು ಕರೆಯಬಹುದು.”

ಶಕುನಿಯ ಈ ಮಾತುಗಳನ್ನು ಕೇಳಿದ ರಾಜ ದುರ್ಯೋಧನನು ಅವನದೇ ಹೆಜ್ಜೆಗಳಲ್ಲಿ ಮುಂದುವರಿದು ದೃತರಾಷ್ಟ್ರನಿಗೆ ಹೇಳಿದನು:

> “ರಾಜನ್! ಇವನಿಗೆ ಜೂಜಾಡುವುದು ಗೊತ್ತಿದೆ ಮತ್ತು ದ್ಯೂತದಲ್ಲಿ ಪಾಂಡುಪುತ್ರನ ಶ್ರೀಯನ್ನು ತೆಗೆದುಕೊಳ್ಳಲು ಸಮರ್ಥನಾಗಿದ್ದಾನೆ. ಅದಕ್ಕೆ ಅನುಜ್ಞೆಯನ್ನು ನೀಡಬೇಕು.”

ಧೃತರಾಷ್ಟ್ರನು ಹೇಳಿದನು:

> “ನಾನು ಮಹಾಪ್ರಜ್ಞ ಮಂತ್ರಿ ಕ್ಷತ್ತನ ಅಭಿಪ್ರಾಯಕ್ಕೆ ಬದ್ಧನಾಗಿದ್ದೇನೆ. ನಾನು ಅವನೊಡನೆ ಸಮಾಲೋಚನೆ ಮಾಡಿ ಏನು ಮಾಡಬೇಕೆಂದು ನಿಶ್ಚಯಿಸುತ್ತೇನೆ. ಆ ದೀರ್ಘದರ್ಶಿಯು ಧರ್ಮವನ್ನು ಪುರಸ್ಕರಿಸುತ್ತಾನೆ, ನಮ್ಮ

ಅಂತಿಮ ಹಿತವನ್ನೇ ಬಯಸುತ್ತಾನೆ ಮತ್ತು ಎರಡೂ ಪಕ್ಷಗಳಿಗೆ ಯುಕ್ತವಾಗುವಂತೆ ಅರ್ಥನಿಶ್ಚಯ ಮಾಡುತ್ತಾನೆ.”

ದುರ್ಯೋಧನನು ಹೇಳಿದನು:

“ಇದರಲ್ಲಿ ಕ್ಷತ್ತನನ್ನು ಸೇರಿಸಿಕೊಂಡರೆ ಅವನು ನೀನು ಹಿಂದೆ ಸರಿಯುವಂತೆ ಮಾಡುತ್ತಾನೆ. ರಾಜೇಂದ್ರ! ಇದರಿಂದ ನೀನು ಹಿಂದೆಸರಿದೆಯಾದರೆ ನಾನು ಆತ್ಮಹತ್ಯೆಮಾಡಿಕೊಳ್ಳುತ್ತೇನೆ. ಇದರಲ್ಲಿ ಸ್ವಲ್ಪವೂ ಸಂಶಯಪಡಬೇಡ! ನನ್ನ ಮರಣದ ನಂತರ ವಿದುರನೊಂದಿಗೆ ಸುಖದಿಂದಿರು. ಇಡೀ ಪೃಥ್ವಿಯನ್ನು ಭೋಗಿಸಬಲ್ಲೆ. ನನಗಾಗಿ ನೀನು ಏನು ಮಾಡಬಲ್ಲೆ!”

ಅವನ ಪ್ರಣಯೋಕ್ತ ಆರ್ತವಾಕ್ಯವನ್ನು ಕೇಳಿದ ಧೃತರಾಷ್ಟ್ರನು ದುರ್ಯೋಧನನ ಅಭಿಪ್ರಾಯವನ್ನೇ ಹೊಂದಿದವನಾಗಿ ಪರಿಚಾರಕರಿಗೆ ಹೇಳಿದನು:

“ನನಗಾಗಿ ಒಂದು ಸಾವಿರ ಕಂಬಗಳಿಂದ ಮತ್ತು ನೂರು ದ್ವಾರಗಳಿಂದ ಕೂಡಿದ ವಿಶಾಲ ಮನೋರಮ, ದರ್ಶನೀಯ ಸಭೆಯನ್ನು ಶಿಲ್ಪಿಗಳಿಂದ ನಿರ್ಮಿಸಿ. ಎಲ್ಲೆಡೆಯೂ ರತ್ನ ಮತ್ತು ದಾಳಗಳನ್ನು ಭಿತ್ತರಿಸಿ, ಸಂಪೂರ್ಣ ನಿರ್ಮಾಣವಾದ ನಂತರ ಸುಪ್ರವೇಶಕ್ಕೆ ಗುಪ್ತವಾಗಿ ನನಗೆ ಬಂದು ತಿಳಿಸಿರಿ.”

ದುರ್ಯೋಧನನ ಶಾಂತಿಗಾಗಿ ಇದನ್ನು ನಿಶ್ವಯಿಸಿದ ಭೂಮಿಪ ಮಹಾರಾಜ ಧೃತರಾಷ್ಟ್ರನು ವಿದುರನಿಗೆ ಕರೆಕಳುಹಿಸಿದನು. ಏಕೆಂದರೆ ವಿದುರನನ್ನು ಕೇಳದೇ ಯಾವುದೇ ನಿಶ್ಚಯವನ್ನೂ ಅವನು ಮಾಡುತ್ತಿರಲಿಲ್ಲ. ದ್ಯೂತದ ದೋಷಗಳನ್ನು ಅರಿತಿದ್ದರೂ ಅವನು ಪುತ್ರಸ್ನೇಹದಿಂದ ಅದರೆಡೆಗೆ ಸೆಳೆಯಲ್ಪಟ್ಟಿದ್ದನು. ಕಲಿಯು ದ್ವಾರದಲ್ಲಿಯೇ ಕುಳಿತಿದ್ದಾನೆ ಮತ್ತು ವಿನಾಶದ ಬಾಯಿಯು ತೆರೆಯಲ್ಪಟ್ಟಿದೆ ಎಂದು ಕೇಳಿದ ಧೀಮಂತ ವಿದುರನು ಧೃತರಾಷ್ಟ್ರನಲ್ಲಿಗೆ ಧಾವಿಸಿ ಬಂದನು. ತಮ್ಮನು ಹಿರಿಯ ಅಣ್ಣನಿದ್ದಲ್ಲಿಗೆ ಬಂದು ತಲೆಬಾಗಿಸಿ ಚರಣಗಳಿಗೆ ವಂದಿಸಿ ಈ ಮಾತುಗಳನ್ನು ಆಡಿದನು:

> “ರಾಜನ್! ನೀನು ತೆಗೆದುಕೊಂಡ ಈ ನಿಶ್ಚಯವನ್ನು ನಾನು ಸ್ವಾಗತಿಸುವುದಿಲ್ಲ. ದ್ಯೂತದಿಂದ ನಿನ್ನ ಪುತ್ರರಲ್ಲಿ ಭೇದವುಂಟಾಗುವ ಹಾಗೆ ಮಾಡಬೇಡ.”

ಧೃತರಾಷ್ಟ್ರನು ಹೇಳಿದನು:

> “ಕ್ಷತ್ತ! ನನ್ನ ಪುತ್ರರು ಮತ್ತು ಇತರ ಪುತ್ರರಲ್ಲಿ ಕಲಹವಾಗುವುದಿಲ್ಲ. ದಿವಿಯ ದೇವರುಗಳು ಪ್ರಸಾದ ನೀಡುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಅಶುಭವಾಗಿರಲಿ ಶುಭವಾಗಿರಲಿ, ಹಿತವಾಗಿರಲಿ ಅಹಿತವಾಗಿರಲಿ, ಈ ಸ್ನೇಹಪೂರ್ವಕ ದ್ಯೂತವು ನಡೆದೇ

ನಡೆಯುತ್ತದೆ. ಹಾಗೆಯೇ ಅದು ವಿಧಿ ವಿಹಿತವಾಗಿದೆ. ಭರತರ್ಷಭ ಭೀಷ್ಮ ಮತ್ತು ನನ್ನ ಸನ್ನಿಧಿಯಲ್ಲಿ ದೈವವಿಹಿತ ಯಾವುದೇ ರೀತಿಯ ಅನ್ಯಾಯವೂ ನಡೆಯುವುದಿಲ್ಲ. ವಾಯುವೇಗದ ಕುದುರೆಗಳನ್ನು ಕಟ್ಟಿದ ರಥದಲ್ಲಿ ಖಾಂಡವಪ್ರಸ್ತಕ್ಕೆ ಹೋಗಿ ಯುಧಿಷ್ಠಿರನನ್ನು ಕರೆದುಕೊಂಡು ಬಾ. ವಿದುರ! ನಾನು ನಿನಗೆ ಹೇಳುತ್ತಿದ್ದೇನೆ. ನನ್ನ ಈ ಇಚ್ಛೆಯನ್ನು ತಡೆಗಟ್ಟಬೇಡ. ಈ ರೀತಿ ನಡೆಯುವುದಕ್ಕೆ ಪರಮ ದೈವವೇ ಕಾರಣವೆಂದು ಭಾವಿಸುತ್ತೇನೆ.”

ಇದನ್ನು ಕೇಳಿದ ಧೀಮಂತ ವಿದುರನು ಅದು ಹಾಗಲ್ಲ ಎಂದು ಯೋಚಿಸಿ ಸುದುಃಖಿತನಾಗಿ ಮಹಾಪ್ರಾಜ್ಞ ಆಪಗೇಯ ಭೀಷ್ಮನಲ್ಲಿಗೆ ಹೋದನು.

ವಿದುರನ ಅಭಿಪ್ರಾಯವನ್ನು ತಿಳಿದ ಅಂಬಿಕಾಸುತ ಧೃತರಾಷ್ಟ್ರನು ಪುನಃ ಏಕಾಂತದಲ್ಲಿ ದುರ್ಯೋಧನನಿಗೆ ಹೇಳಿದನು:

“ಗಾಂಧಾರೇ! ದ್ಯೂತವು ಬೇಡ. ವಿದುರನು ಇದಕ್ಕೆ ಇಷ್ಟಪಡುತ್ತಿಲ್ಲ. ಆ ಮಹಾಬುದ್ಧಿಯು ಇದು ನಮ್ಮೆಲ್ಲರ ಹಿತದಲ್ಲಿದೆ ಎಂದೂ ಅಭಿಪ್ರಾಯಪಟ್ಟಿಲ್ಲ. ಪರಮ ಹಿತಕ್ಕಾಗಿಯೇ ವಿದುರನು ಹೀಗೆ ಮಾತನಾಡುತ್ತಿದ್ದಾನೆ. ಪುತ್ರ! ಅವನು ಹೇಳಿದ ಹಾಗೆ ಮಾಡೋಣ. ಅದರಲ್ಲಿಯೇ ನಿನ್ನ ಹಿತವಿದೆ ಎಂದು ನನಗನ್ನಿಸುತ್ತದೆ. ದೇವರಾಜ

ವಾಸವನ ಗುರು ದೇವರ್ಷಿ ಧೀಮಂತ ಉದಾರಧೀ ಭಗವಾನ್ ಬೃಹಸ್ಪತಿಯಿಂದ ಶಾಸ್ತ್ರಗಳನ್ನು ತಿಳಿಸಲ್ಪಟ್ಟ ಮತ್ತು ಸರ್ವರಹಸ್ಯಗಳ ಸಹಿತ ಅವುಗಳನ್ನು ತಿಳಿದುಕೊಂಡ ಮಹಾಕವಿ ವಿದುರನ ಮಾತುಗಳಂತೆಯೇ ನಾನು ಸದಾ ನಡೆದುಕೊಳ್ಳುತ್ತೇನೆ. ವೃಷ್ಣಿಗಳಲ್ಲಿ ಉದ್ಧವನನ್ನು ಹೇಗೆ ಮಹಾಬುದ್ಧಿವಂತನೆಂದು ಪೂಜಿಸುತ್ತಾರೋ ಹಾಗೆ ಕುರುಗಳಲ್ಲಿ ವಿದುರನನ್ನು ಮೇಧಾವೀ ಪ್ರವರನೆಂದು ಅಭಿಪ್ರಾಯಪಡುತ್ತಾರೆ. ಆದುದರಿಂದ ಈ ದ್ಯೂತವು ಬೇಡ. ದ್ಯೂತದಿಂದ ಭೇದವುಂಟಾಗುತ್ತದೆ ಮತ್ತು ಭೇದದಿಂದ ರಾಜ್ಯವು ವಿನಾಶಗೊಳ್ಳುತ್ತದೆ. ಅದನ್ನು ಬಿಟ್ಟುಬಿಡು. ಮಾತಾ ಪಿತರಿಂದ ಒಬ್ಬ ಪುತ್ರನಿಗೆ ದೊರಕಬೇಕೆಂದು ಸ್ಮೃತವಾದ ಪರಮ ಪಿತೃ ಪಿತಾಮಹರ ಪದವು ನಿನಗೆ ದೊರಕಿದೆ. ಶಾಸ್ತ್ರಗಳಲ್ಲಿ ಪರಿಣಿತನನ್ನಾಗಿ ಮಾಡಿದ್ದೇವೆ. ಮನೆಯಲ್ಲಿ ಸತತವಾಗಿ ಆಡುತ್ತಿರುವೆ. ರಾಜ್ಯದಲ್ಲಿ ಜ್ಯೇಷ್ಠ ಭ್ರಾತೃವಾಗಿ ಇದ್ದೀಯೆ. ಇವುಗಳಲ್ಲಿ ಯಾವುದನ್ನೂ ನೀನು ಒಳ್ಳೆಯದೆಂದು ತಿಳಿಯುವುದಿಲ್ಲವೇ? ಸಾಮನ್ಯ ಜನರಿಗೆ ದೊರೆಯುವುದಕ್ಕಿಂತಲೂ ಶ್ರೇಷ್ಠವಾದ ಬೋಜನ, ಉಡುಗೆತೊಡುಗೆಗಳನ್ನು ಪಡೆದಿದ್ದೀಯೆ. ಇವೆಲ್ಲವನ್ನೂ ಹೊಂದಿದ ನೀನು ಯಾಕೆ ಶೋಕಿಸುತ್ತಿರುವೆ? ಪಿತೃಪಿತಾಮಹರಿಂದ ದೊರಕಿದ ಸಮೃದ್ಧವಾದ ಈ

ಮಹಾ ರಾಷ್ಟ್ರವನ್ನು ನಿತ್ಯವೂ ಆಳುತ್ತಿರುವ ನೀನು ದಿವಿಯಲ್ಲಿ ದೇವೇಶ್ವರನಂತೆ ಬೆಳಗುತ್ತಿದ್ದೀಯೆ. ನೀನು ವಿದಿತಪ್ರಜ್ಞನೆಂದು ನನಗೆ ಗೊತ್ತು. ಆದರೂ ಸಮುತ್ಥಿತವಾದ ದುಃಖತರವಾದ ನಿನ್ನ ಈ ಶೋಕದ ಮೂಲವು ಏನು? ನನಗೆ ಹೇಳು."

ದುರ್ಯೋಧನನು ಹೇಳಿದನು:

"ಊಟ ಮತ್ತು ಉಡುಗೆತೊಡುಗೆಗಳನ್ನಷ್ಟೇ ಕಾಣುವವನು ಪಾಪಪುರುಷ. ಅಸೂಯೆಪಡದಿರುವ ಪುರುಷನು ಅಧಮನೆಂದು ಹೇಳುತ್ತಾರೆ. ಸಾಧಾರಣವಾದ ಸಂಪತ್ತು ನನಗೆ ಸಂತೋಷವನ್ನು ನೀಡುವುದಿಲ್ಲ. ಕೌಂತೇಯನಲ್ಲಿರುವ ಪ್ರಜ್ವಲಿಸುವ ಶ್ರೀಯನು ನೋಡಿ ನನ್ನ ಮನಸ್ಸು ವಿಹ್ವಲವಾಗಿದೆ. ಸರ್ವ ಪೃಥ್ವಿಯೂ ಯುಧಿಷ್ಠಿರನ ವಶವಾದುದನ್ನು ನೋಡಿಯೂ ನಾನು ಇನ್ನೂ ಜೀವಂತನಾಗಿ ಇಲ್ಲಿ ನಿಂತಿದ್ದೇನಲ್ಲ! ಇದನ್ನು ದುಃಖದಿಂದ ನಿನಗೆ ಹೇಳುತ್ತಿದ್ದೇನೆ. ಯುಧಿಷ್ಠಿರನ ನಿವೇಶನದಲ್ಲಿ ಸದೆಬಡಿಯಲ್ಪಟ್ಟ ಸೋತ ಚೈತ್ರಿಕರು, ಕೌಕುರರು, ಕಾರಸ್ಕರರು, ಲೋಗಜಂಘರಂತೆ ಆಗಿದ್ದೇನೆ. ಯುಧಿಷ್ಠಿರನ ನಿವೇಶನದಲ್ಲಿ ಹಿಮಾಲಯದ, ಸಾಗರದ ಮತ್ತು ತಪ್ಪಲುಪ್ರದೇಶಗಳ ಸರ್ವ ರತ್ನಾಕರರೂ ಮತ್ತು ಇತರರೂ

ದಾಸರಂತೆ ಇದ್ದಾರೆ. ನಾನು ಜ್ಯೇಷ್ಠ ಮತ್ತು ಶ್ರೇಷ್ಠನೆಂದು ತಿಳಿದು ಸತ್ಕರಿಸಿ ಯುಧಿಷ್ಠಿರನು ನನ್ನನ್ನು ರತ್ನಪರಿಗ್ರಹಕ್ಕೆ ನಿಯುಕ್ತಗೊಳಿಸಿದನು. ಅಲ್ಲಿದ್ದ ಶ್ರೇಷ್ಠ ಬೆಲೆಬಾಳುವ ರತ್ನಗಳ ತುದಿ ಮೊದಲುಗಳನ್ನು ನೋಡಲಿಕ್ಕಾಗುತ್ತಿರಲಿಲ್ಲ. ಆ ಸಂಪತ್ತುಗಳನ್ನು ಸ್ವೀಕರಿಸುವಾಗ ನಾನು ನನ್ನ ಕೈಒಡ್ಡಬೇಕಾಗಿರಲಿಲ್ಲ. ದೂರದಿಂದ ತಂದು ಅಲ್ಲಿರಿಸಿದ್ದ ಸಂಪತ್ತನ್ನು ತೆಗೆದುಕೊಳ್ಳುವುದರಲ್ಲಿಯೇ ನಾನು ಆಯಾಸಗೊಂಡಿದ್ದೆನು. ಬಿಂದುಸರೋವರದ ರತ್ನಗಳಿಂದ ಸ್ಫಟಿಕಕಾಂಚನಗಳಿಂದ ಮಯನು ನಿರ್ಮಿಸಿದ ತಾವರೆಯ ಕೊಳವನ್ನು ನಾನು ನೋಡಿದ್ದೇನೆ. ರತ್ನವರ್ಜಿತನಾದ ನಾನು ಶತ್ರುಗಳ ವಿಶೇಷ ವೃದ್ಧಿಯನ್ನು ನೋಡಿ ವಿಮೂಢನಾಗಿ ವಸ್ತ್ರವನ್ನು ಮೇಲಿತ್ತಿಕೊಂಡಾಗ ವೃಕೋದರನು ನಕ್ಕನು. ನನಗೆ ಸಾಧ್ಯವಾಗಿದ್ದರೆ ನಾನು ಆಗಲೇ ಆ ವೃಕೋದರನನ್ನು ಕೊಂದುಬಿಡುತ್ತಿದ್ದೆ! ಪ್ರತಿಸ್ಪರ್ಧಿಯಿಂದ ಅಪಮಾನಗೊಂಡ ನಾನು ಸುಡುತ್ತಿದ್ದೇನೆ. ಇನ್ನೊಮ್ಮೆ ಅದೇತರಹದ ತಾವರೆಗಳಿಂದ ತುಂಬಿದ್ದ ಇನ್ನೊಂದು ಕೊಳವನ್ನು ನೋಡಿ ಅದೂಕೂಡ ಶಿಲಾಸಮವೆಂದು ತಿಳಿದು ಹೋಗಿ ನೀರಿನಲ್ಲಿ ಬಿದ್ದೆ. ಆಗ ಅಲ್ಲಿ ಪಾರ್ಥನೊಂದಿಗೆ ಕೃಷ್ಣನು ಜೋರಾಗಿ ನಕ್ಕನು. ಹಾಗೆಯೇ ಸ್ತ್ರೀಯರೊಂದಿಗೆ ದ್ರೌಪದಿಯೂ ನನ್ನ ಮನಸ್ಸನ್ನು ನೋಯಿಸಲು ನಕ್ಕಳು.

ನೀರಿನಿಂದ ನನ್ನ ವಸ್ತ್ರವು ಒದ್ದೆಯಾಗಿರಲು ರಾಜನ ಆಜ್ಞೆಯಂತೆ ಕಿಂಕರರು ನನಗಾಗಿ ಬೇರೆ ವಸ್ತ್ರಗಳನ್ನಿತ್ತರು. ನನಗೆ ಇನ್ನೂ ಹೆಚ್ಚು ದುಃಖವನ್ನು ನೀಡಿದ್ದುದೆಂದರೆ, ಅವರು ಅನ್ಯರಿಗೆ ಕೇಳುವಂತೆ ತುಂಬಾ ಹೊತ್ತು ನಕ್ಕಿದ್ದುದು, ದ್ವಾರವಿದೆಯೇನೋ ಎಂದು ತೋರುತ್ತಿದ್ದ ಗೋಡೆಯಲ್ಲಿ ಹೋಗಿ ಶಿಲೆಯು ನನ್ನ ಹಣೆಗೆ ಹೊಡೆದು ಗಾಯಗೊಂಡೆ. ದೂರದಿಂದಲೇ ಇದನ್ನು ನೋಡಿದ ಅವಳಿಗಳು ವಿನೋದಿಸಿದರು. ದುಃಖಪಟ್ಟ ಅವರಿಬ್ಬರೂ ಬಾಹುಗಳಿಂದ ನನ್ನನ್ನು ಹಿಡಿದರು. ಆಗ ಸಹದೇವನು ವಿಸ್ಮಯದಿಂದಲೋ ಎನ್ನುವಂತೆ "ರಾಜ! ಇದು ದ್ವಾರವು. ಇಲ್ಲಿ ಹೋಗು" ಎಂದು ಪುನಃ ಪುನಃ ಹೇಳಿದನು. ಅಲ್ಲಿ ನಾನು ಹೆಸರೇ ತಿಳಿಯದಿದ್ದ ಮತ್ತು ಕೇಳದೇ ಇದ್ದ ರತ್ನಗಳ ರಾಶಿಯನ್ನು ಕಂಡೆ. ಇವುಗಳಿಂದ ನನ್ನ ಮನಸ್ಸು ಸುಡುತ್ತಿದೆ. ಭಾರತ! ಪಾಂಡವರಲ್ಲಿ ನಾನು ಕಂಡ ಭೂಮಿಪಾಲರು ತಂದ ಮುಖ್ಯ ಐಶ್ವರ್ಯಗಳನ್ನು ಹೇಳುತ್ತೇನೆ. ಕೇಳು. ನನ್ನ ಶತ್ರುಗಳ ಬೆಳೆದ ಅಥವಾ ಅಗೆದ ಆ ಧನವನ್ನು ನೋಡಿದ ನನ್ನ ಮನಸ್ಸನ್ನು ಧೃಢವಾಗಿರಿಸಲು ತಿಳಿದಿಲ್ಲ. ಭಾರತ! ಕೇಳು."

ಆಗ ದುರ್ಯೋಧನನು ಧೃತರಾಷ್ಟ್ರನಿಗೆ ಯುಧಿಷ್ಠಿರನಿಗೆ

ಕಾಣಿಕೆಯಾಗಿ ಬಂದಿದ್ದ ಅಪಾರ ಧನ-ಕನಕಾದಿ ಸಂಪತ್ತುಗಳ ಕುರಿತು, ಒಂದನ್ನೂ ಬಿಡದೇ ವರ್ಣಿಸಿದನು.

ದುರ್ಯೋಧನನು ಹೇಳಿದನು:

> “ಈಗ ಹೇಳಿದ್ದ ಮತ್ತು ಹೇಳದೇ ಇದ್ದ ಬಹಳಷ್ಟು ಉಡುಗೊರೆಗಳನ್ನು ರಾಜರುಗಳು ನನ್ನ ಶತ್ರುವಿಗೆ ನೀಡಿದುದನ್ನು ನೋಡಿ ದುಃಖದಿಂದ ಇಂದೇ ಮರಣಬರಲಿ ಎಂದೆನಿಸುತ್ತಿದೆ. ಪಾಂಡವ ಯುಧಿಷ್ಠಿರನ ಪಕ್ವ ಮತ್ತು ತರಕಾರಿಗಳನ್ನೇ ಅವಲಂಬಿಸಿ ಎಷ್ಟು ಜನರಿದ್ದರು ಎನ್ನುವುದನ್ನು ಹೇಳುತ್ತೇನೆ: ಲೆಕ್ಕಕ್ಕೇ ಸಿಗದ ಮೂರು ಪದ್ಮಗಳಷ್ಟು ಗಜಾರೋಹರು ಮತ್ತು ಮಾವುತರು, ತಿಳಿಯುವುದಕ್ಕೇ ಸಾಧ್ಯವಾಗದಷ್ಟು ಸಂಖ್ಯೆಯಲ್ಲಿನ ಬಹಳಾರು ಕಾಲ್ದಾಳುಗಳು. ಆಹಾರಸಾಮಾಗ್ರಿಗಳನ್ನು ಒಂದುಕಡೆ ಅಳೆಯುತ್ತಿದ್ದರೆ ಇನ್ನೊಂದೆಡೆ ಅಡುಗೆಯಾಗುತ್ತಿತ್ತು. ಮತ್ತೊಂದೆಡೆ ನೀಡಲಾಗುತ್ತಿದ್ದರೆ ಮೊಗದೊಂದೆಡೆ ಪುಣ್ಯಾಹವಾಚನವು ಕೇಳಿಬರುತ್ತಿತ್ತು. ಯುಧಿಷ್ಠಿರನ ಮನೆಯಲ್ಲಿ ಊಟ ನೀಡಿಸಲ್ಪಟ್ಟಿರದ, ಅಸಂತುಷ್ಟ, ಅಸುಭಿಕ್ಷ ಯಾರನ್ನೂ ಯಾವ ವರ್ಣದವರಲ್ಲಿಯೂ ಕಾಣಲಿಲ್ಲ. ಅಲ್ಲಿ ಯುಧಿಷ್ಠಿರನು ಪೊರೆಯುತ್ತಿರುವ ಎಂಭತ್ತೆಂಟು ಸಾವಿರ ಸ್ನಾತಕ

ಕುಟುಂಬಗಳಿವೆ. ಈ ಕುಟುಂಬಗಳಿಗೆ ಒಂದೊಂದರಲ್ಲಿ ಮೂವತ್ತು ಆಳುಗಳಿದ್ದರು. ಸುಪ್ರೀತ ಪರಿತುಷ್ಟರಾದ ಇವರು ಅವನ ಶತ್ರುಗಳ ಅಂತ್ಯಕ್ಕಾಗಿ ಆಶಿಸುತ್ತಿರುತ್ತಾರೆ. ಇನ್ನೂ ದಶಸಹಸ್ರ ಯತಿಗಳು, ಊರ್ಧ್ವರೇತಸರು ಯುಧಿಷ್ಠಿರನ ಮನೆಯಲ್ಲಿ ಚಿನ್ನದ ತಟ್ಟೆಗಳಲ್ಲಿ ಭೋಜಿಸುತ್ತಿದ್ದರು. ಕುಬ್ಜ ವಾಮನರವರೆಗೆ ಸರ್ವರೂ ಊಟಮಾಡಿ ತೃಪ್ತಿಹೊಂದಿದ್ದಾರೆಂದು ನೋಡಿಕೊಳ್ಳುವುದರೊಳಗೆ ಯಾಜ್ಞಸೇನಿಯು ಊಟ ಮಾಡಲಿಲ್ಲ! ವಿವಾಹ ಸಂಬಂಧಿಕರಾದ ಪಾಂಚಾಲರು ಮತ್ತು ಸಖ್ಯರಾದ ಅಂಧಕ-ವೃಷ್ಣಿಯವರು ಇವರಿಬ್ಬರು ಮಾತ್ರ ಕುಂತೀಪುತ್ರನಿಗೆ ಕಾಣಿಕೆಯನ್ನು ತಂದಿರಲಿಲ್ಲ. ಮೂರ್ಧಾಭಿಷಿಕ್ತ ರಾಜನನ್ನು ಅವಭೃತಸ್ನಾನದಿಂದ ಶುಚಿರ್ಭೂತರಾದ ಆರ್ಯ ಸತ್ಯಸಂಧ ಮಹಾವ್ರತ ವೇದಾಂತ ವಿದ್ಯಪರ್ಯಾಪ್ತ ವಕ್ತಾರ ಧೃತಿಮಂತ ವಿನಯವಂತ ಧರ್ಮಾತ್ಮ ಯಶಸ್ವಿ ರಾಜರು ಉಪಾಸಿಸಿದರು. ಸೇರಿದ್ದ ರಾಜರು ಆರಣ್ಯರಿಗೆ ದಕ್ಷಿಣಾರ್ಥವಾಗಿ ತಂದಿದ್ದ ಹಾಲುಕರೆಯುವ ಪಾತ್ರೆಗಳೊಂದಿಗೆ ಗೋವುಗಳ ಸಾವಿರಾರು ಗುಂಪುಗಳು ಅಲ್ಲಲ್ಲಿ ಕಂಡುಬರುತ್ತಿದ್ದವು. ಅಭಿಷೇಕಾರ್ಥವಾಗಿ ಎಲ್ಲಾತರಹದ ಸಾಮಗ್ರಿಗಳನ್ನು ನೃಪರು ಸ್ವಇಚ್ಛೆಯಿಂದ

ಸತ್ಕರಿಸಿ ತಂದಿದ್ದರು. ಬಾಹ್ಲೀಕನು ಬಂಗಾರದಿಂದ ಪರಿಷ್ಕೃತ ರಥವನ್ನು ತಂದನು ಮತ್ತು ಕಟ್ಟಲು ಸುದಕ್ಷಿಣನು ಕಾಂಬೋಜದಲ್ಲಿ ಹುಟ್ಟಿದ್ದ ಶ್ವೇತಾಶ್ವಗಳನ್ನು ತಂದನು. ಚೇದಿಪತಿ ಸುನೀಥನು ಅವನಿಗೆ ಮಹಾಯಶಸ್ಸನ್ನು ನೀಡುವ ಅಪ್ರತಿಮ ಧ್ವಜವನ್ನು ತಾನೇ ಕ್ಷಿಪ್ರವಾಗಿ ತಯಾರಿಸಿ ತಂದನು. ದಕ್ಷಿಣಾತ್ಯನು ಕವಚವನ್ನು, ಮಾಗಧನು ಹಾರ ಮತ್ತು ಶಿರವಸ್ತ್ರಗಳನ್ನು, ಮತ್ತು ಮಹೇಷ್ವಾಸ ವಸುದಾನನು ಅರವತ್ತು ವರ್ಷದ ಅರಸಾನೆಯನ್ನು ತಂದರು. ಮತ್ಸ್ಯನು ಗಾಳವನ್ನು ಕಟ್ಟಿದನು. ಏಕಲವ್ಯನು ಕಾಲ್ಮಣೆಗಳನ್ನು ತಂದನು. ಆವಂತಿ ಮತ್ತು ಬಹುವಿಧಾನರು ಅಭಿಷೇಕಕ್ಕಾಗಿ ನೀರನ್ನೂ ತಂದರು. ಚೇಕಿತಾನನು ಭತ್ತಳಿಕೆಯನ್ನು ಬಿಗಿದನು ಮತ್ತು ಕಾಶ್ಯನು ಬಿಲ್ಲನ್ನು ನೀಡಿದನು. ಚಿನ್ನದ ಹಿಡಿಯಿದ್ದ ಖಡ್ಗ ಮತ್ತು ಕಾಂಚನಭೂಷಿತ ಗುರಾಣಿಯನ್ನು ಶಲ್ಯನು ನೀಡಿದನು. ನಾರದ, ದೇವಲ, ಮತ್ತು ಮುನಿ ಅಸಿತರನ್ನು ಮುಂದಿರಿಸಿಕೊಂಡು ಸುಮಹಾತಪ ಧೌಮ್ಯ ಮತ್ತು ವ್ಯಾಸರು ಅಭಿಷೇಕ ಮಾಡಿದರು. ಮಹರ್ಷಿಗಳು ಸಂತೋಷದಿಂದ ಅಭಿಷೇಕದಲ್ಲಿದ್ದರು. ವೇದಪಾರಗ ಅನ್ಯರು ಜಾಮದಗ್ನಿಯ ಸಹಿತ ಬಂದು ದಿವಿಯಲ್ಲಿ ದೇವೇಂದ್ರನಿಗೆ ಸಪ್ತರ್ಷಿಗಳು ಹೇಗೋ ಹಾಗೆ ಭೂರಿದಕ್ಷಿಣ ಮಹೇಂದ್ರನಿಗೆ ಮಂತ್ರೋಚ್ಛಾರಣೆ ಮಾಡಿದರು.

ಸತ್ಯವಿಕ್ರಮಿ ಸಾತ್ಯಕಿಯು ಛತ್ರವನ್ನು, ಪಾಂಡವ ಧನಂಜಯ ಮತ್ತು ಭೀಮಸೇನರು ಚಾಮರಗಳನ್ನು ಹಿಡಿದಿದ್ದರು. ಹಿಂದಿನ ಕಲ್ಪದಲ್ಲಿ ಪ್ರಜಾಪತಿಯು ಇಂದ್ರನಿಗೆ ನೀಡಿದ್ದ ಶಂಖವನ್ನು ಕಲಶೋದಧಿ ವರುಣನು ಅವನಿಗಾಗಿ ತಂದಿದ್ದನು. ವಿಶ್ವಕರ್ಮನಿಂದ ಸಾವಿರಾರು ಚಿನ್ನಗಳನ್ನು ಕೂಡಿಸಿ ಚೆನ್ನಾಗಿ ಮಾಡಲ್ಪಟ್ಟಿದ್ದ ತೂಗುಮಣೆಯ ಮೇಲೆ ಕೃಷ್ಣನಿಂದ ಅವನು ಅಭಿಷಿಕ್ತನಾದನು. ಪೂರ್ವಕ್ಕೆ ಹೋಗುತ್ತಾರೆ. ಹಾಗೆಯೇ ಪಶ್ಚಿಮ ಮತ್ತು ದಕ್ಷಿಣದ ಸಾಗರದವರೆಗೆ ಹೋಗುತ್ತಾರೆ. ಆದರೆ ಪಕ್ಷಿಗಳ ಹೊರತು ಯಾರೂ ಉತ್ತರದ ಕಡೆ ಹೋಗುವುದಿಲ್ಲ. ಮಂಗಲವನ್ನುಂಟುಮಾಡಲು ಅವರು ನೂರಾರು ಶಂಖಗಳನ್ನು ಊದಿದರು. ಅವರು ಊದಿ ಮೊಳಗಲು ನನ್ನ ರೋಮಗಳು ಎದ್ದು ನಿಂತವು. ತಮ್ಮ ತೇಜಸ್ಸನ್ನು ಕಳೆದುಕೊಂಡ ಭೂಮಿಪರು ಸಾಷ್ಟಾಂಗ ಬಿದ್ದರು. ಅನ್ಯೋನ್ಯ ಮಿತ್ರರಾದ ಸತ್ವಸ್ತ ಶೌರ್ಯಸಂಪನ್ನ ದೃಷ್ಟಧ್ಯುಮ್ನ, ಪಾಂಡವರು, ಸಾತ್ಯಕಿ ಮತ್ತು ಎಂಟನೆಯವನಾಗಿ ಕೇಶವ ಇವರು ಮೂರ್ಛೆತಪ್ಪಿ ಬಿದ್ದಿದ್ದ ಭೂಮಿಪರನ್ನು ಮತ್ತು ನನ್ನನ್ನು ನೋಡಿ ಜೋರಾಗಿ ನಕ್ಕರು. ನಂತರ ಪ್ರಹೃಷ್ಟ ಬೀಭತ್ಸುವು ದ್ವಿಜಪ್ರಮುಖರಿಗೆ ಕೊಂಬುಗಳಿಗೆ ಚಿನ್ನದ ತಗಡುಗಳಿಂದ ಅಲಂಕೃತಗೊಂಡ

ಐದುನೂರು ಎತ್ತುಗಳನ್ನು ನೀಡಿದನು. ಪ್ರಭು ಹರಿಶ್ಚಂದ್ರನಂತೆ ರಾಜಸೂಯವನ್ನು ಪೂರೈಸಿದ ಕೌಂತೇಯನಲ್ಲಿದ್ದಷ್ಟು ಪರಮ ಸಂಪತ್ತನ್ನು ಶಂಬರಹಂತಕ (ದಶರಥ) ನಾಗಲೀ, ಮನು ಯೌವನಾಶ್ವನಾಗಲೀ, ರಾಜ ಪೃಥು ವೈನ್ಯನಾಗಲೀ, ಭಗೀರಥನಾಗಲೀ ಹೊಂದಿರಲಿಲ್ಲ. ಹರಿಶ್ಚಂದ್ರನಲ್ಲಿದ್ದಂಥಹ ಶ್ರಿಯು ಪಾರ್ಥನಲ್ಲಿರುವುದನ್ನು ನೋಡಿದ ನಾನು ಜೀವಂತವಿರುವುದು ಶ್ರೇಯ ಎಂದು ನಿನಗೆ ಹೇಗೆ ಅನ್ನಿಸುತ್ತಿದೆ? ಅಂಧನಿಗೆ ಕಟ್ಟಿದ ರಥದಂತೆ ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದೇವೆ. ಕಿರಿಯ ವಂಶವು ವರ್ಧಿಸುತ್ತಿರಲು ಜ್ಯೇಷ್ಠ ವಂಶವು ನಶಿಸುತ್ತಿದೆ. ಇದನ್ನು ನೋಡಿದ ನನಗೆ ಎಲ್ಲೆಡೆಯೂ ಕುರುಪ್ರವೀರರೇ ಕಾಣುತ್ತಿದ್ದಾರೆ. ತಾಣವೇ ಇಲ್ಲದಂಥಾಗಿದೆ. ಇದರಿಂದಾಗಿಯೇ ನಾನು ಕೃಶನಾಗಿದ್ದೇನೆ, ವಿವರ್ಣನಾಗಿದ್ದೇನೆ ಮತ್ತು ಶೋಕಿತನಾಗಿದ್ದೇನೆ.”

ಧೃತರಾಷ್ಟ್ರನು ಹೇಳಿದನು:

“ನನ್ನ ಜ್ಯೈಷ್ಠಿನಿಯ ಜ್ಯೇಷ್ಠ ಪುತ್ರ ನೀನು. ಪಾಂಡವರನ್ನು ದ್ವೇಷಿಸಬೇಡ. ದ್ವೇಷಿಸುವವನು ಸಾವಿನಲ್ಲಿ ಎಷ್ಟು ನೋವಿದೆಯೋ ಅಷ್ಟೇ ನೋವನ್ನು ಅನುಭವಿಸುತ್ತಾನೆ. ನಿನ್ನಂಥವರು ಯಾಕೆತಾನೆ ನಿನ್ನ ಗುರಿಗಳನ್ನೇ ತಾನೂ

ಇಟ್ಟುಕೊಂಡಿರುವ, ನಿನ್ನ ಮಿತ್ರರನ್ನೇ ಮಿತ್ರರನ್ನಾಗಿ ಪಡೆದಿರುವ ಮತ್ತು ನಿನ್ನನ್ನು ದ್ವೇಷಿಸದೇ ಇರುವ ಸರಳ ಯುಧಿಷ್ಠಿರನನ್ನು ದ್ವೇಷಿಸುತ್ತಾರೆ? ಜನನ ಮತ್ತು ವೀರ್ಯದಲ್ಲಿ ನಿನ್ನ ಸಮನಾಗಿರುವ ನಿನ್ನ ಭ್ರಾತುವಿನ ಸಂಪತ್ತನ್ನು ಮೋಹದಿಂದ ಏಕೆ ಬಯಸುತ್ತಿರುವೆ? ಹಾಗಾಗಬೇಡ! ನಿನ್ನನ್ನು ನೀನು ಶಾಂತಗೊಳಿಸಿಕೋ! ಆ ಯಜ್ಞದ ವೈಭವವನ್ನು ಬಯಸುವುದಾದರೆ ನಿನ್ನ ಋತ್ವಿಜರಿಂದ ಏಳು ಎಳೆಗಳಿರುವ ಮಹಾಧ್ವರವನ್ನು ಆಯೋಜಿಸು. ಆಗ ನಿನಗಾಗಿ ರಾಜರುಗಳು ಪ್ರೀತಿಯಿಂದ ಮತ್ತು ಗೌರವದಿಂದ ರತ್ನಾಭರಣಗಳನ್ನೂ ವಿಪುಲ ಧನವನ್ನೂ ತರುತ್ತಾರೆ. ಪರರು ಸಂಪಾದಿಸಿದ ಧನವನ್ನು ಬಯಸುವುದು ಸ್ವಲ್ಪವೂ ಸರಿಯಲ್ಲ. ನಿನಗಿದ್ದುದರಲ್ಲಿ ತೃಪ್ತನಾಗು. ಸ್ವಧರ್ಮದಲ್ಲಿ ನಿರತನಾಗಿರು. ಅದರಲ್ಲಿ ಸುಖವಿದೆ. ಬೇರೆಯವರ ಸಂಪತ್ತನ್ನು ಗಮನಿಸದೇ ಇರುವುದು, ನಿತ್ಯವೂ ಸ್ವಕರ್ಮದಲ್ಲಿ ನಿರತನಾಗಿರುವುದು ಮತ್ತು ತನ್ನ ಉದ್ಯಮವನ್ನು ರಕ್ಷಿಸಿಕೊಂಡು ಬರುವುದು ಇವೇ ವೈಭವದ ಲಕ್ಷಣಗಳು. ವಿಪತ್ತು ಬಂದಾಗ ವ್ಯಥಿಸಲು ನಿರಾಕರಿಸುವ ದಕ್ಷ ನರನು ನಿತ್ಯವೂ ಏಳಿಗೆಯನ್ನು ಹೊಂದುತ್ತಾನೆ. ಅಪ್ರಮತ್ತ ವಿನೀತನು ನಿತ್ಯವೂ ಒಳ್ಳೆಯದನ್ನು ಕಾಣುತ್ತಾನೆ. ವೇದಿಕೆಗಳಲ್ಲಿ ವಿತ್ತವನ್ನು

ದಾನಮಾಡುತ್ತಾ, ಪ್ರೀತಿಯ ಬಯಕೆಗಳನ್ನೆಲ್ಲಾ ಅನುಭವಿಸುತ್ತಾ, ಆರೋಗ್ಯ ಸ್ತ್ರೀಯರೊಂದಿಗೆ ಕ್ರೀಡಿಸುತ್ತಾ, ನೆಮ್ಮದಿಯಿಂದಿರು."

ದುರ್ಯೋಧನನು ಹೇಳಿದನು:

"ನಾವೆಗೆ ಕಟ್ಟಲ್ಪಟ್ಟ ನಾವೆಯಂತೆ ನೀನು ತಿಳಿದವನಾಗಿದ್ದರೂ ನನ್ನಲ್ಲಿ ಗೊಂದಲವನ್ನುಂಟುಮಾಡುತ್ತಿದ್ದೀಯೆ! ಸ್ವಾರ್ಥದ ಕುರಿತು ನಿನಗೆ ಸ್ವಲ್ಪವೂ ಚಿಂತೆಯಿಲ್ಲವೇ? ನೀನು ನನ್ನನ್ನು ದ್ವೇಷಿಸುತ್ತೀಯಾ? ನಿನ್ನ ಅನುಶಾಸನದಲ್ಲಿರುವ ಧಾರ್ತರಾಷ್ಟ್ರರು ನನ್ನ ಸಂಗಡವಿದ್ದಾರೆಯೇ? ಭವಿಷ್ಯದ ವಿಚಾರಗಳ ಕುರಿತು ಮಾಡಬೇಕಾದುದು ಬಹಳವಿದೆ ಎಂದು ಸದಾ ನೀನು ಯೋಚಿಸುತ್ತಿರುವೆ. ಪ್ರೇರಿತ ಮಾರ್ಗದರ್ಶಿಗೆ ವೈರಿಗಳಿಂದ ಪ್ರಭಾವಿತನಾಗಿ ಯಾವ ಮಾರ್ಗವನ್ನು ತೆಗೆದುಕೊಳ್ಳಬೇಕು ಎನ್ನುವುದೇ ಗೊಂದಲಮಯವಾಗಿದೆಯಾದರೆ ಅವನನ್ನು ಅನುಸರಿಸುವವರು ಹೇಗೆ ತಾನೆ ಅವನ ಮಾರ್ಗದಲ್ಲಿ ನಡೆಯಬಲ್ಲರು? ವೃದ್ಧರನ್ನೇ ಸೇವೆಗೈಯುತ್ತಿರುವ ನಿನ್ನ ಬುದ್ಧಿಯು ಹಳತಾಗಿ ಹೋಗಿದೆ. ಜಿತೇಂದ್ರಿಯನಾಗಿದ್ದರೂ ನೀನು ನಮ್ಮ ಕಾರ್ಯಗಳಿಗೆ ಸಂಬಂಧಿಸಿದಂತೆ ಬಹಳಷ್ಟು

ಗೊಂದಲಗಳನ್ನುಂಟುಮಾಡುತ್ತಿದ್ದೀಯೆ. ಬೃಹಸ್ಪತಿಯು ಹೇಳಿದಂತೆ ರಾಜನ ನಡತೆಯು ಇತರ ಜನರ ನಡತೆಗಿಂಥ ಭಿನ್ನವಾಗಿರಬೇಕು. ಆದುದರಿಂದ ರಾಜನು ಸದಾ ತನ್ನ ಸ್ವಾರ್ಥ್ಯವನ್ನು ಚಿಂತಿಸುತ್ತಿರಬೇಕು ಮತ್ತು ಅದಕ್ಕಾಗಿ ಪ್ರಯತ್ನಿಸುತ್ತಿರಬೇಕು. ಕ್ಷತ್ರಿಯನ ನಡವಳಿಕೆಯು ಜಯವನ್ನು ಪಡೆಯುವುದಕ್ಕಾಗಿಯೇ ಇರಬೇಕು. ಅದು ಧರ್ಮವಾಗಿರಲಿ ಅಥವಾ ಅಧರ್ಮವಾಗಿರಲಿ, ಅದೇ ಅವನ ನಡತೆಯಾಗಿರಬೇಕು. ವೈರಿಗಳ ಸಂಪತ್ತನ್ನು ಪಡೆಯುವ ಆಸೆಯಿಂದ ಸಾರಥಿಯು ತನ್ನ ಚಾಟಿಯನ್ನು ಎಲ್ಲೆಡೆಯಲ್ಲಿಯೂ ಬೀಸಬೇಕಾಗುತ್ತದೆ. ಶಸ್ತ್ರವನ್ನು ತಿಳಿದವನು ಕತ್ತರಿಸುವ ಖಡ್ಗದ ಕುರಿತಲ್ಲದೇ ಅದು ಬಹಿರಂಗವಾಗಲೀ ಅಥವಾ ಮುಚ್ಚುಮರೆಯಲ್ಲಿಯಾಗಲೀ ಶತ್ರುವನ್ನು ಕೆಳಗುರುಳಿಸುವುದಕ್ಕೆ ಮಾತ್ರ ಇದೆ ಎಂದು ತಿಳಿದಿರುತ್ತಾನೆ. ಅಸಂತೋಷವೇ ಸಂಪತ್ತಿನ ಮೂಲ. ಆದುದರಿಂದಲೇ ನಾನು ಅಸಂತುಷ್ಟನಾಗಿರಲು ಬಯಸುತ್ತೇನೆ. ಅತ್ಯುತ್ತಮ ಏಳಿಗೆಯನ್ನು ಹೊಂದಿದವನೇ ಪರಮ ರಾಜಕಾರಣಿ. ಐಶ್ವರ್ಯ ಅಥವಾ ಧನವಿರುವಾಗ ಮಮತ್ವವನ್ನು ಸಾಧಿಸುವುದು ಸರಿಯಲ್ಲವೇ? ಹಿಂದೆ ಗಳಿಸಿದ್ದುದನ್ನು ಕಸಿದುಕೊಳ್ಳುವುದೇ ರಾಜಧರ್ಮವೆಂದು ತಿಳಿಯುತ್ತಾರೆ. ದ್ರೋಹಬೇಡವೆಂದು

ಒಪ್ಪಂದಮಾಡಿಕೊಂಡ ಶಕ್ರನು ನಮೂಚಿಯ ಶಿರವನ್ನು ಕತ್ತರಿಸಿದನು. ಅವನು ಮಾಡಿದ್ದುದು ಶತ್ರುವಿನೊಂದಿಗೆ ನಡೆದುಕೊಳ್ಳುವ ಒಂದು ಸನಾತನ ನಡತೆ. ಸರ್ಪವು ಇಲಿಯನ್ನು ಹೇಗೆ ನುಂಗುತ್ತದೆಯೋ ಹಾಗೆ ಭೂಮಿಯು ವಿರೋಧಿಸದಿರುವ ರಾಜನನ್ನು ಮತ್ತು ಪ್ರವಾಸವನ್ನೇ ಮಾಡದಿರುವ ಬ್ರಾಹ್ಮಣನನ್ನು ನುಂಗುತ್ತದೆ. ಹುಟ್ಟಿನಿಂದಲೇ ಯಾರೂ ಇನ್ನೊಬ್ಬ ಪುರುಷನ ಶತ್ರುವಾಗಿರುವುದಿಲ್ಲ. ತನ್ನ ಹಾಗೆ ನಡೆದುಕೊಳ್ಳುವ ಯಾರೂ ಅವನಿಗೆ ಶತ್ರುವಾಗುವುದಿಲ್ಲ. ಶತ್ರುಪಕ್ಷವು ವೃದ್ಧಿಸುತ್ತಿರುವುದನ್ನು ಮೋಹದಿಂದ ನೋಡಿದವನು ಹರಡುತ್ತಿರುವ ವ್ಯಾಧಿಯನ್ನು ಹೇಗೋ ಹಾಗೆ ಅದರ ಬುಡವನ್ನೇ ಕತ್ತರಿಸುತ್ತಾನೆ. ಎಷ್ಟೇ ಸಣ್ಣದಿರಲಿ, ಪರಾಕ್ರಮದಲ್ಲಿ ವೃದ್ಧಿಸುತ್ತಿರುವ ಶತ್ರುವು ಖಂಡಿತವಾಗಿಯೂ ವೃಕ್ಷದ ಬುಡದಲ್ಲಿ ಬೆಳೆಯುತ್ತಿರುವ ಹುತ್ತವು ವೃಕ್ಷವನ್ನು ಹೇಗೋ ಹಾಗೆ ನುಂಗಿಬಿಡುತ್ತದೆ. ಶತ್ರುವಿನ ಅಭಿವೃದ್ಧಿಯು ನಿನ್ನನ್ನು ಸಂತೋಷಗೊಳಿಸದಿರಲಿ! ಸತ್ಯವಂತರ ಶಿರದ ಮೇಲಿರುವ ಈ ನ್ಯಾಯವು ಒಂದು ಭಾರವೇ ಸರಿ. ಹುಟ್ಟಿದಾಗಿನಿಂದ ಹೇಗೆ ಬೆಳೆಯುತ್ತಾ ಬಂದಿದ್ದೀವೋ ಹಾಗೆ ನಮ್ಮ ಸಂಪತ್ತೂ ಕೂಡ ಬೆಳೆಯುತ್ತದೆ ಎಂದು ಬಯಸುವವನು ತನ್ನ ಬಂಧುಬಾಂಧವರೊಡನೆ ಹೇಗೆ ತಾನೇ ಅಭಿವೃದ್ಧಿಯನ್ನು

ಹೊಂದಬಲ್ಲ? ವಿಕ್ರಮವೇ ಶೀಘ್ರ ಅಭಿವೃದ್ಧಿ. ಪಾಂಡವರ ಐಶ್ವರ್ಯವನ್ನು ಪಡೆಯುವವರೆಗೆ ನಾನು ಅಪಾಯದಲ್ಲಿದ್ದೇನೆ. ನಾನು ಆ ಶ್ರೀಯನ್ನು ಪಡೆಯುತ್ತೇನೆ ಅಥವಾ ಯುದ್ಧದಲ್ಲಿ ಮರಣಹೊಂದುತ್ತೇನೆ. ಅವನಿಗೆ ಸದೃಶನಾಗಿರದಿದ್ದರೆ ನಾನು ಏಕೆ ತಾನೆ ಜೀವಿಸಬೇಕು? ಪಾಂಡವರು ದಿನ ನಿತ್ಯವೂ ವರ್ಧಿಸುತ್ತಿದ್ದಾರೆ. ನಾವು ಮಾತ್ರ ನಿಂತಲ್ಲಿಯೇ ನಿಂತಿದ್ದೇವೆ."

## ದ್ಯೂತಕ್ಕೆ ಯುಧಿಷ್ಠಿರನನ್ನು ಕರೆಯಿಸಿದುದು

ಶಕುನಿಯು ಹೇಳಿದನು:

"ಪಾಂಡುಪುತ್ರ ಯುಧಿಷ್ಠಿರನಲ್ಲಿ ನೀನು ಯಾವ ಸಂಪತ್ತನ್ನು ನೋಡಿ ತಪಿಸುತ್ತಿರುವೆಯೋ ಅದನ್ನು ನಾನು ಅಪಹರಿಸುತ್ತೇನೆ. ಶತ್ರುವಿಗೆ ದ್ಯೂತದ ಆಹ್ವಾನವನ್ನು ಕಳುಹಿಸು. ನಾನು ಸಂಶಯ ಬರುವಂಥಹುದೇನನ್ನೂ ಮಾಡುವುದಿಲ್ಲ. ಸೇನೆಗಳನ್ನು ಎದುರಿಟ್ಟು ಯುದ್ಧ ಮಾಡುವುದೂ ಇಲ್ಲ. ದಾಳಗಳನ್ನು ಮಾತ್ರ ಎಸೆದು ಆ ವಿದ್ವಾನ್ ವಿದುಷಿಯನ್ನು ಜಯಿಸುತ್ತೇನೆ. ದಾಳಗಳೇ ನನ್ನ ಬಿಲ್ಲು ಬಾಣಗಳೆಂದು ತಿಳಿ. ದಾಳಗಳ ಹೃದಯವು ಧನುಸ್ಸಿನ ದಾರ ಮತ್ತು ದಾಳಗಳನ್ನು ಎಸೆಯುವ ಚಾಪೆಯು ರಥವೆಂದು ತಿಳಿ."

ದುರ್ಯೋಧನನು ಹೇಳಿದನು:

> “ರಾಜನ್! ಈ ಅಕ್ಷವಿದನು ದ್ಯೂತದಲ್ಲಿ ಪಾಂಡುಪುತ್ರನಿಂದ ಅವನ ಸಂಪತ್ತನ್ನು ಕಸಿದುಕೊಳ್ಳಲು ಉತ್ಸುಕನಾಗಿದ್ದಾನೆ. ತಂದೇ! ಇದು ನಿನಗೆ ಸಂತಸವನ್ನುಂಟುಮಾಡಬೇಕು.”

ಧೃತರಾಷ್ಟ್ರನು ಹೇಳಿದನು:

> “ನನ್ನ ತಮ್ಮ ಮಹಾತ್ಮ ವಿದುರನ ಶಾಸನದಂತೆ ನಡೆಯುತ್ತಿದ್ದೇನೆ. ಅವನೊಂದಿಗೆ ವಿಚಾರಮಾಡಿ ಮುಂದಿನ ಕಾರ್ಯದ ಕುರಿತು ನಿಶ್ಚಯಿಸುತ್ತೇನೆ.”

ದುರ್ಯೋಧನನು ಹೇಳಿದನು:

> “ಕೌರವ! ವಿದುರನು ನಿನ್ನ ಬುದ್ಧಿಯನ್ನು ನಾಶಪಡಿಸುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಅವನು ಪಾಂಡವರ ಹಿತದಲ್ಲಿ ಎಷ್ಟು ನಿರತನಾಗಿದ್ದಾನೋ ಅಷ್ಟು ನನ್ನ ಕುರಿತು ಇಲ್ಲ. ಪುರುಷನು ತನ್ನ ಕೆಲಸವನ್ನು ಇನ್ನೊಬ್ಬರ ಅಧಿಕಾರಕ್ಕೊಳಪಟ್ಟು ಮಾಡಬಾರದು. ಯಾವುದೇ ಕಾರ್ಯದಲ್ಲಿ ಇಬ್ಬರ ಅಭಿಪ್ರಾಯಗಳೂ ಒಂದೇ ಆಗಿರುವುದಿಲ್ಲ. ಭಯದಿಂದ ತನ್ನ ರಕ್ಷಣೆಯನ್ನು ಮಾಡಿಕೊಳ್ಳದಿದ್ದ ಮೂಢನು ಮಳೆಯಲ್ಲಿ ನಿಂತ ಒಂಟಿ

ಕಡ್ಡಿಯಂತೆ ನಾಶಹೊಂದುತ್ತಾನೆ. ವ್ಯಾಧಿಯಾಗಲೀ ಯಮನಾಗಲೀ ಒಳ್ಳೆಯ ಗಳಿಗೆಯನ್ನು ನೋಡಿ ಬರುವುದಿಲ್ಲ. ಸಮಯ ದೊರಕಿದಾಗಲೇ ನಮ್ಮ ಶ್ರೇಯಸ್ಸಿಗಾಗಿ ನಡೆದುಕೊಳ್ಳಬೇಕು."

ಧೃತರಾಷ್ಟ್ರನು ಹೇಳಿದನು:

"ಆದರೂ ಪುತ್ರ! ನಮಗಿಂಥಲೂ ಬಲಶಾಲಿಯಾಗಿರುವವರನ್ನು ವಿರೋಧಿಸಲು ಮನಸ್ಸು ಬರುತ್ತಿಲ್ಲ. ಶಸ್ತ್ರದಂತೆ ವೈರವು ವಿಕಾರಗಳನ್ನು ಸೃಷ್ಟಿಸುತ್ತದೆ. ಯಾವ ಅನರ್ಥವನ್ನು ಅರ್ಥವೆಂದು ತಿಳಿದಿದ್ದೀಯೋ ಅದು ಅತಿ ಘೋರ ಕಲಹವನ್ನು ತಂದೊಡ್ಡುತ್ತದೆ. ಯಾವುದೇ ರೀತಿಯಲ್ಲಿ ಅದು ಒಮ್ಮೆ ಪ್ರಾರಂಭವಾಯಿತೆಂದರೆ ಅದು ಖಡ್ಗ ಬಾಣಗಳನ್ನು ಬಿಟ್ಟೇ ಬಿಡುತ್ತದೆ."

ದುರ್ಯೋಧನನು ಹೇಳಿದನು:

"ಪುರಾಣಗಳಲ್ಲಿ ದ್ಯೂತವು ಒಂದು ವ್ಯವಹಾರವೆಂದು ಪ್ರಣೀತವಾಗಿದೆ. ಅದರಲ್ಲಿ ಕೆಟ್ಟದ್ದೇನೂ ಇಲ್ಲ. ಸಂಪ್ರಹಾರಗಳೇನೂ ಇಲ್ಲ. ಇಂದು ಶಕುನಿಯ ಮಾತುಗಳನ್ನು ಒಪ್ಪು. ಕ್ಷಿಪ್ರವಾಗಿ ಒಂದು ಸಭೆಯನ್ನು ಕಟ್ಟಲು ಆಜ್ಞಾಪಿಸು. ಜೂಜಾಡಿದರೆ ಸ್ವರ್ಗದ ಬಾಗಿಲು ನಮಗೆ ಹತ್ತಿರವಾಗುತ್ತದೆ. ಹಾಗೆ ಮಾಡುವುದೇ ನಮಗೆ

ಸೂಕ್ತ. ನಾವಿಬ್ಬರೂ ಒಂದೇ ಸ್ತರದಲ್ಲಿ ನಿಲ್ಲುವ ಹಾಗಾಗುತ್ತದೆ. ಪಾಂಡವರೊಂದಿಗೆ ಆಡಲು ಒಪ್ಪಿಗೆ ನೀಡು.”

ಧೃತರಾಷ್ಟ್ರನು ಹೇಳಿದನು:

“ನೀನು ಆಡುವ ಮಾತುಗಳು ನನಗೆ ಹಿಡಿಸುತ್ತಿಲ್ಲ. ಆದರೆ, ನಿನಗೆ ಇಷ್ಟವಾದುದನ್ನು ಮಾಡು. ನನ್ನ ಮಾತುಗಳನ್ನು ಉಲ್ಲಂಘಿಸಿದ ನೀನು ನಂತರ ಪಶ್ಚಾತ್ತಾಪ ಪಡುತ್ತೀಯೆ. ಏಕೆಂದರೆ ಇಂಥಹ ಮಾತುಗಳು ಧರ್ಮವನ್ನು ಅನುಸರಿಸಿಲ್ಲ. ತನ್ನ ಬುದ್ಧಿ-ವಿದ್ಯೆಗಳ ಸಹಾಯದಿಂದ ವಿದುರನು ಹಿಂದೆಯೇ ಈ ಎಲ್ಲವನ್ನೂ ಕಂಡಿದ್ದನು. ಕ್ಷತ್ರಿಯರ ಬೀಜವನ್ನೇ ನಾಶಪಡಿಸುವ ಆ ಮಹಾ ಭಯವೇ ಇಂದು ಅಸಹಾಯಕ ನರನ ಎದಿರಾಗಿ ನಿಂತಿದೆ.”

ದೈವವು ಪರಮ ದುಸ್ತರವಾದುದೆಂದು ತಿಳಿದು ದೈವಸಮ್ಮೂಢಚೇತಸ ಮನೀಷಿ ರಾಜ ಧೃತರಾಷ್ಟ್ರನು ಹೀಗೆ ಹೇಳಿ ಪುರುಷರಿಗೆ ತನ್ನ ಪುತ್ರನ ವಾಕ್ಯಗಳನ್ನು ಪರಿಪಾಲಿಸುವಂತೆ ಆಜ್ಞೆಯನ್ನಿತ್ತನು:

“ಹೇಮವೈಡೂರ್ಯಗಳಿಂದ ಅಲಂಕರಿಸಿದ ಸಾವಿರ ಸ್ತಂಭಗಳ ಮತ್ತು ಸ್ಫಟಿಕದ ತೋರಣ ಕಮಾನುಗಳನ್ನುಳ್ಳ ನೂರು ದ್ವಾರಗಳ, ಒಂದು ಕ್ರೋಶ ಚೌಕದ ವಿಸ್ತಾರ

> ಸುಂದರ ಸಭಾಗೃಹವನ್ನು ನಿರ್ಮಾಣಮಾಡಿ."

ಅವನನ್ನು ಕೇಳಿದ ನಿರ್ವಿಶಂಕ ಪ್ರಾಜ್ಞ ಮತ್ತು ದಕ್ಷರು ಸರ್ವವಸ್ತು ಸಾಮಾಗ್ರಿಗಳನ್ನೂ ಸಹಸ್ರಾರು ಯುಕ್ತಶಿಲ್ಪಿಗಳನ್ನೂ ತರಿಸಿ ಸಭೆಯನ್ನು ಕಟ್ಟಿಸಿದರು. ಸ್ವಲ್ಪವೇ ಸಮಯದಲ್ಲಿ ನಿಷ್ಠರಾಗಿದ್ದ ಅವರು ಬಹುರತ್ನಗಳಿಂದ ಅಲಂಕೃತ, ಚಿನ್ನದ ಸುಂದರ ಆಸನಗಳಿಂದ ಕೂಡಿದ ರಮ್ಯ ಸಭೆಯು ಸಿದ್ಧವಾಗಿದೆಯೆಂದು ರಾಜನಿಗೆ ವರದಿಮಾಡಿದರು. ನಂತರ ನರೇಂದ್ರ ಧೃತರಾಷ್ಟ್ರನು ಮಂತ್ರಿ ಮುಖ್ಯ ವಿದ್ವಾನ್ ವಿದುರನನ್ನು ಕರೆಯಿಸಿ ಹೇಳಿದನು:

> "ರಾಜಪುತ್ರ ಯುಧಿಷ್ಠಿರನಲ್ಲಿಗೆ ಹೋಗಿ ನನ್ನ ಕರೆಯಂತೆ ಅವನನ್ನು ತಕ್ಷಣವೇ ಇಲ್ಲಿಗೆ ಕರೆದುಕೊಂಡು ಬಾ. "ಬಹುರತ್ನಗಳಿಂದ ಅಲಂಕೃತಗೊಂಡ, ಬೆಲೆಬಾಳುವ ಮಂಚ ಆಸನಗಳಿಂದ ಸಜ್ಜಿತವಾದ ಈ ನನ್ನ ಸಭೆಯನ್ನು ನಿನ್ನ ಸಹೋದರರೊಂದಿಗೆ ಬಂದು ನೋಡು. ಅಲ್ಲಿ ಸ್ನೇಹಪರ ದ್ಯೂತವನ್ನು ಆಡೋಣ!" ಎಂದು ಹೇಳು."

ಪುತ್ರನ ಮನಸ್ಸನ್ನು ಅರಿತಿದ್ದ ನರಾಧಿಪ ರಾಜ ಧೃತರಾಷ್ಟ್ರನು ಇದೊಂದು ದುಸ್ತರ ದೈವವೆಂದು ತಿಳಿದು ಹಾಗೆ ಮಾಡಿದನು. ವಿದ್ವಾಂಸರಲ್ಲಿಯೇ ಶ್ರೇಷ್ಠ ವಿದುರನು ತನ್ನ ಅಣ್ಣನ ಈ ಅನ್ಯಾಯದ ಮಾತುಗಳನ್ನು ಒಪ್ಪಿಕೊಳ್ಳದೇ ಹೀಗೆ ಹೇಳಿದನು:

> "ನೃಪತೇ! ಈ ಕೆಲಸವನ್ನು ನಾನು ಸ್ವಾಗತಿಸುವುದಿಲ್ಲ.

ಇದನ್ನು ಮಾಡಬೇಡ! ನಮ್ಮ ಕುಲದ ನಾಶದ ಕುರಿತು ಭಯಪಡುತ್ತೇನೆ. ಪುತ್ರರಲ್ಲಿ ಭಿನ್ನತೆಯನ್ನು ತರುವುದರಿಂದ ಕಲಹವಾಗುತ್ತದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ದ್ಯೂತವನ್ನಾಡುವುದರ ಕುರಿತು ಇದೇ ನನ್ನ ಭಯ."

ಧೃತರಾಷ್ಟ್ರನು ಹೇಳಿದನು:

"ಕ್ಷತ್ತ! ಇದರಲ್ಲಿ ಯಾವುದೇ ಕಲಹದ ಚಿಂತೆ ನನಗಿಲ್ಲ. ದೈವದ ವಿರುದ್ಧವೂ ಇದು ಆಗುವುದಿಲ್ಲ. ಇವೆಲ್ಲವೂ ಧಾತಾರನ ಕಲ್ಪನೆಯ ವಶ. ಸರ್ವ ಜಗತ್ತೂ ಸ್ವತಂತ್ರವಾಗಿ ನಡೆಯುತ್ತಿಲ್ಲ. ಆದುದರಿಂದ ಇಂದು ನನ್ನ ಶಾಸನದಂತೆ ರಾಜನಲ್ಲಿಗೆ ತಲುಪಿ ಕ್ಷಿಪ್ರವಾಗಿ ಆ ದುರ್ಧರ್ಷ ಕುಂತೀಪುತ್ರ ಯುಧಿಷ್ಠಿರನನ್ನು ಕರೆದುಕೊಂಡು ಬಾ!"

## ದ್ಯೂತಕ್ಕೆ ಯುಧಿಷ್ಠಿರನ ಆಗಮನ

ರಾಜ ಧೃತರಾಷ್ಟ್ರನಿಂದ ಬಲವಂತವಾಗಿ ನಿಯುಕ್ತನಾದ ವಿದುರನು ಮನೀಷಿ ಪಾಂಡವರ ವಾಸಸ್ಥಳಕ್ಕೆ ಮಹಾವೇಗವನ್ನುಳ್ಳ ಚೆನ್ನಾಗಿ ಪಳಗಿದ ಬಲಶಾಲಿ ಉದಾರ ಅಶ್ವಗಳೊಂದಿಗೆ ಹೊರಟನು. ದಾರಿಯನ್ನು ಜಿಗಿದು ದಾಟಿ ನೃಪತಿಯ ಪುರವನ್ನು ತಲುಪಿ ಆ ಮಹಾಬುದ್ಧಿಯು ದ್ವಿಜರನ್ನು ಗೌರವಿಸುತ್ತಾ ಪ್ರವೇಶಿಸಿದನು. ಕುಬೇರನ ಭವನದಂತಿದ್ದ ರಾಜಗೃಹವನ್ನು ಸೇರಿ ಆ ಧರ್ಮಾತ್ಮನು

ಧರ್ಮಪುತ್ರ ಯುಧಿಷ್ಠಿರನ ಬಳಿಸಾರಿದನು. ಸತ್ಯಧೃತಿ ಮಹಾತ್ಮ ರಾಜ ಅಜಾತಶತ್ರುವು ವಿದುರನನ್ನು ಯಥಾವತ್ತಾಗಿ ಪೂಜಾಪೂರ್ವಕವಾಗಿ ಸ್ವಾಗತಿಸಿದನು. ನಂತರ ಆಜಮೀಢನು ಪುತ್ರಸಮೇತ ಧೃತರಾಷ್ಟ್ರನ ಕುರಿತು ಪ್ರಶ್ನಿಸಿದನು. ಯುಧಿಷ್ಠಿರನು ಹೇಳಿದನು:

> “ಕ್ಷತ್ತ! ನಿನ್ನ ಮನಸ್ಸಿನಲ್ಲಿ ಸಂತೋಷವನ್ನು ಕಾಣುತ್ತಿಲ್ಲ. ನೀನು ಕುಶಲವಾಗಿ ಬಂದಿದ್ದೀಯಾ? ಮಕ್ಕಳು ತಮ್ಮ ಹಿರಿಯರನ್ನು ಅನುಸರಿಸುತ್ತಿದ್ದಾರೆಯೇ? ಪ್ರಜೆಗಳು ಅವನ ಆಡಳಿತವನ್ನು ಅನುಸರಿಸುತ್ತಿದ್ದಾರೆಯೇ?”

ವಿದುರನು ಹೇಳಿದನು:

> “ಮಹಾತ್ಮ ರಾಜನು ತನ್ನ ಪುತ್ರರೊಂದಿಗೆ ಕುಶಲನಾಗಿದ್ದಾನೆ. ತನ್ನ ಇಂದ್ರಸಮಾನ ಕುಟುಂಬದವರಿಂದ ಸುತ್ತುವರೆಯಲ್ಪಟ್ಟಿದ್ದಾನೆ. ರಾಜನ್! ತನ್ನ ವಿನೀತ ಪುತ್ರಗಣಗಳಿಂದ ಪ್ರೀತನಾಗಿ ವಿಶೋಕನಾಗಿ ದೃಢಾತ್ಮನಾಗಿ ಸಂತೋಷದಿಂದಿದ್ದಾನೆ. ಆದರೆ ಕುರುರಾಜನು ನಿನ್ನ ಕುಶಲ ಮತ್ತು ಅಭಿವೃದ್ಧಿಯನ್ನು ಕೇಳಿದ ನಂತರ ನಿನಗೆ ಈ ರೀತಿ ಹೇಳಿದ್ದಾನೆ: “ಪುತ್ರ! ನಿನ್ನಲ್ಲಿರುವುದರ ಹಾಗೇ ತೋರುತ್ತಿರುವ ಈ ಸಭೆಯನ್ನು ನಿನ್ನ ಸಹೋದರರ ಸಹಿತ ಬಂದು ನೋಡು. ನಿನ್ನ

ಭ್ರಾತೃಗಳ ಸಹಿತ ಇಲ್ಲಿಗೆ ಬಂದು ಸೇರು. ಸ್ನೇಹಪರ ಜೂಜಾಡೋಣ! ರಮಿಸೋಣ. ಸರ್ವ ಕುರುಗಳೂ ಇಲ್ಲಿಗೆ ಬಂದು ಸೇರಿದ್ದಾರೆ. ನೀನೂ ಕೂಡ ಬಂದು ಸೇರಿದರೆ ನನಗೆ ಸಂತೋಷವಾಗುತ್ತದೆ." ಮಹಾತ್ಮ ರಾಜ ಧೃತರಾಷ್ಟ್ರನು ಆಟಗಾರರನ್ನು ನೇಮಿಸಿದ್ದಾನೆ. ಆಟಗಾರರೆಲ್ಲ ಸೇರಿರುವುದನ್ನು ನೀನು ಅಲ್ಲಿ ನೋಡಬಹುದು. ನೃಪತೇ! ಈ ಸಂದೇಶವನ್ನು ತಂದು ಬಂದಿದ್ದೇನೆ. ಅದನ್ನು ಸ್ವೀಕರಿಸು."

ಯುಧಿಷ್ಠಿರನು ಹೇಳಿದನು:

"ಕ್ಷತ್ತ! ದ್ಯೂತದಲ್ಲಿ ಕಲಹವಾಗುತ್ತದೆ ಎನ್ನುವುದು ತಿಳಿದಿಲ್ಲವೇ? ಇದನ್ನು ತಿಳಿದ ಯಾರುತಾನೆ ದ್ಯೂತವನ್ನು ಇಷ್ಟಪಡುತ್ತಾನೆ? ನೀನಾದರೂ ಸರಿಯಾದುದೇನೆಂದು ಅಭಿಪ್ರಾಯಪಡುತ್ತೀಯೆ? ನಾವೆಲ್ಲರೂ ನಿನ್ನ ಮಾತುಗಳಂತೆಯೇ ನಡೆದುಕೊಳ್ಳುತ್ತೇವೆ."

ವಿದುರನು ಹೇಳಿದನು:

"ದ್ಯೂತವು ಅನರ್ಥದ ಮೂಲ ಎನ್ನುವುದನ್ನು ನಾನು ತಿಳಿದಿದ್ದೇನೆ. ಇದನ್ನು ತಡೆಯಲು ನಾನು ಪ್ರಯತ್ನವನ್ನೂ ಮಾಡಿರುತ್ತೇನೆ. ಆದರೆ ರಾಜನು ನನ್ನನ್ನು ನಿನ್ನ ಸಮಕ್ಷಮದಲ್ಲಿ ಕಳುಹಿಸಿದ್ದಾನೆ. ಇದನ್ನು ಕೇಳಿ ತಿಳಿದ ನೀನು

ಶ್ರೇಯಸ್ಸು ಯಾವುದರಲ್ಲಿಯೋ ಅದನ್ನು ಮಾಡು."

ಯುಧಿಷ್ಠಿರನು ಹೇಳಿದನು:

"ರಾಜ ಧೃತರಾಷ್ಟ್ರನ ಪುತ್ರರ ಹೊರತಾಗಿ ಇನ್ನು ಯಾರು ಯಾರು ಅಲ್ಲಿ ಜೂಜಾಡುತ್ತಾರೆ? ವಿದುರ! ನಿನ್ನಲ್ಲಿ ಕೇಳುತ್ತಿದ್ದೇನೆ ಹೇಳು. ಅಲ್ಲಿ ಸೇರಿರುವ ನೂರರಲ್ಲಿ ನಾವು ಯಾರೊಂದಿಗೆ ಜೂಜಾಡುತ್ತೇವೆ?"

ವಿದುರನು ಹೇಳಿದನು:

"ವಿಶಾಂಪತೇ! ಅಕ್ಷವನ್ನು ತಿಳಿದ ಕೈಕುಶಲತೆಯಿರುವ ಅತಿಯಾಗಿ ಜೂಜಾಡುವ ಗಾಂಧಾರರಾಜ ಶಕುನಿ, ವಿವಿಂಶತಿ, ಚಿತ್ರಸೇನ, ಸತ್ಯವ್ರತ, ಪುರುಮಿತ್ರ ಮತ್ತು ಜಯ."

ಯುಧಿಷ್ಠಿರನು ಹೇಳಿದನು:

"ಮಹಾ ಭಯಂಕರ ಆಟಗಾರರು ಮತ್ತು ಮಾಯೆಯನ್ನು ಬಳಸಿ ದ್ಯೂತವಾಡುವವರೆಲ್ಲ ಅಲ್ಲಿ ಸೇರಿದ್ದಾರೆ. ಆದರೆ ಇವೆಲ್ಲವೂ ದಾತಾರನ ಕಲ್ಪನೆಯ ವಶದಲ್ಲಿವೆ. ಆದುದರಿಂದ ನಾನು ಈ ಜೂಜುಕೋರರೊಂದಿಗೆ ಆಡುವುದನ್ನು ನಿರಾಕರಿಸುವುದಿಲ್ಲ. ನನಗಿಷ್ಟವಿದೆ ಎಂದು ನಾನು ಹೋಗಲು ಬಯಸುತ್ತಿಲ್ಲ. ಆದರೆ ಇದು ರಾಜ

ಧೃತರಾಷ್ಟ್ರನ ಶಾಸನವೆಂದು ಜೂಜಾಡಲು ಹೋಗುತ್ತೇನೆ. ಪುತ್ರನು ಸದಾ ತಂದೆಯ ಇಷ್ಟದಂತೆ ನಡೆದುಕೊಳ್ಳುತ್ತಾನೆ. ಆದುದರಿಂದ ವಿದುರ! ನೀನು ನನಗೆ ಹೇಳಿದ ಹಾಗೆ ಮಾಡುತ್ತೇನೆ. ಶಕುನಿಯೊಡನೆ ಜೂಜಾಡಲೂ ನಾನು ತಿರಸ್ಕರಿಸುವುದಿಲ್ಲ. ಇಲ್ಲದಿದ್ದರೆ ಅವನು ನನ್ನನ್ನು ಸಭೆಯಲ್ಲಿ ಕ್ರೂರವಾಗಿ ದ್ಯೂತಕ್ಕೆ ಆಹ್ವಾನಿಸುತ್ತಾನೆ. ಒಮ್ಮೆ ಆಹ್ವಾನಿತನಾದರೆ ನಾನು ಎಂದೂ ಹಿಂಜರಿಯಲಾರೆ. ಯಾಕೆಂದರೆ ಇದು ನನ್ನ ಶಾಶ್ವತ ವ್ರತವಾಗಿದೆ."

ಈ ರೀತಿ ವಿದುರನಿಗೆ ಹೇಳಿದ ಧರ್ಮರಾಜನು ಸರ್ವರಿಗೂ ಬೇಗನೆ ಹೊರಡುವಂತೆ ಆಜ್ಞಾಪಿಸಿ, ಕುದುರೆಗಳನ್ನೇರಿ ಸೇನೆ ಮತ್ತು ಅನುಯಾಯಿಗಳೊಂದಿಗೆ, ದ್ರೌಪದಿಯ ಮುಂದಾಳತ್ವದಲ್ಲಿ ಸ್ತ್ರೀಯರೊಂದಿಗೆ ಹೊರಟನು.

"ತೀಕ್ಷ್ಣ ಪ್ರಕಾಶವು ಕಣ್ಣಿನ ದೃಷ್ಟಿಯನ್ನು ಹೇಗೋ ಹಾಗೆ ದೈವವು ಪ್ರಜ್ಞೆಯನ್ನು ಕಸಿದುಕೊಳ್ಳುತ್ತದೆ. ಧಾತುಪಾಶಗಳ ವಶದಲ್ಲಿ ಸಿಲುಕಿದ ನರನು ಅದರಂತೆಯೇ ನಡೆದುಕೊಳ್ಳುತ್ತಾನೆ."

ಹೀಗೆ ಹೇಳುತ್ತಾ ಅಹ್ವಾನವನ್ನು ಸಹಿಸಲಾರದೇ ಕ್ಷತ್ತನ ಸಹಿತ ಅರಿಂದಮ ಪಾರ್ಥ ರಾಜ ಯುಧಿಷ್ಠಿರನು ಹೊರಟನು. ಬಾಹ್ಲೀಕನು ನೀಡಿದ್ದ ರಥವನ್ನು ಏರಿ ಪರಿಚಾರಕರಿಂದ ಸುತ್ತುವರೆಯಲ್ಪಟ್ಟು

ಭ್ರಾತೃಗಳ ಸಹಿತ ಪಾಂಡವ ಪಾರ್ಥನು ಪ್ರಯಾಣಿಸಿದನು. ಬ್ರಾಹ್ಮಣರನ್ನು ಮುಂದಿರಿಸಿಕೊಂಡು, ರಾಜಶ್ರೀಯಿಂದ ಬೆಳಗುತ್ತಾ ಧೃತರಾಷ್ಟ್ರನ ಆಮಂತ್ರಣ ಮತ್ತು ಕಾಲ ಪ್ರಚೋದನೆಗೆ ಸಿಲುಕಿ ಪ್ರಯಾಣಿಸಿದನು.

ಅವನು ಹಸ್ತಿನಾಪುರಕ್ಕೆ ಹೋಗಿ ಧೃತರಾಷ್ಟ್ರನ ಮನೆಯನ್ನು ತಲುಪಿದನು ಮತ್ತು ಧರ್ಮಾತ್ಮ ಪಾಂಡವನು ಧೃತರಾಷ್ಟ್ರನನ್ನು ಭೇಟಿ ಮಾಡಿದನು. ಹಾಗೆಯೇ ಆ ವಿಭುವು ದ್ರೋಣ, ಭೀಷ್ಮ, ಕರ್ಣ, ಕೃಪ, ಮತ್ತು ದ್ರೌಣಿಯೊಂದಿಗೆ ಯಥಾವತ್ತಾಗಿ ಭೇಟಿಯಾದನು. ವೀರ್ಯವಂತ ಆ ಮಹಾಬಾಹುವು ಸೋಮದತ್ತನನ್ನೂ, ದುರ್ಯೋಧನನನ್ನೂ, ಶಲ್ಯನನ್ನೂ, ಸೌಬಲನನ್ನೂ ಮತ್ತು ಮೊದಲೇ ಅಲ್ಲಿಗೆ ಬಂದು ಸೇರಿದ್ದ ಇತರ ರಾಜರನ್ನೂ, ಜಯದ್ರಥನನ್ನೂ, ಮತ್ತು ಸರ್ವ ಕುರುಗಳನ್ನೂ ಬೇಟಿಯಾದನು. ಸರ್ವ ಮಹಾಬಾಹು ಭ್ರಾತೃಗಳಿಂದ ಪರಿವೃತನಾಗಿ ಅವನು ಧೀಮಂತ ರಾಜ ಧೃತರಾಷ್ಟ್ರನ ಮನೆಯನ್ನು ಪ್ರವೇಶಿಸಿದನು. ಅಲ್ಲಿ ಅವನು ತಾರೆಗಳಿಂದ ಶಾಶ್ವತವಾಗಿ ಸುತ್ತುವರೆಯಲ್ಪಟ್ಟ ರೋಹಿಣಿಯಂತೆ ತನ್ನ ಅತ್ತಿಗೆಯವರಿಂದ ಸುತ್ತುವರೆಯಲ್ಪಟ್ಟ ಪತಿಯ ಅನುವ್ರತೆ ದೇವಿ ಗಾಂಧಾರಿಯನ್ನು ಕಂಡನು.  ಗಾಂಧಾರಿಯನ್ನು ಅಭಿವಂದಿಸಿ, ಅವಳಿಂದ ಪ್ರತಿನಂದಿತರಾಗಿ ಅವರು ಪ್ರಜ್ಞಾಚಕ್ಷು ಈಶ್ವರ ವೃದ್ಧ ತಂದೆಯನ್ನು ಕಂಡರು. ರಾಜನು ಬೀಮಸೇನನನ್ನು ಮೊದಲು ಮಾಡಿ

ಆ ನಾಲ್ಕು ಕೌರವನಂದನರ ನೆತ್ತಿಯನ್ನು ಆಘ್ರಾಣಿಸಿದನು. ಪ್ರಿಯದರ್ಶನ ಪುರುಷವ್ಯಾಘ್ರ ಪಾಂಡವರನ್ನು ನೋಡಿದ ಕೌರವರನ್ನು ಹರ್ಷವೇ ಆವರಿಸಿತು. ಅವನಿಂದ ಅನುಜ್ಞೆಯನ್ನು ಪಡೆದು ರತ್ನಗಳಿಂದ ಅಲಂಕೃತವಾದ ತಮ್ಮ ಮನೆಯನ್ನು ಪ್ರವೇಶಿಸಿದಾಗ ಪ್ರಮುಖ ಸ್ತ್ರೀಯರು ದ್ರೌಪದಿಯನ್ನು ಕಾಣಲು ಬಂದರು. ಪ್ರಜ್ವಲಿಸುತ್ತಿರುವ ಯಾಜ್ಞಸೇನೆಯ ಸಂಪತ್ತನ್ನು ನೋಡಿ ಧೃತರಾಷ್ಟ್ರನ ಸೊಸೆಯರು ಅಷ್ಟೊಂದು ಸಂತೋಷ ಪಡಲಿಲ್ಲ. ಅನಂತರ ಆ ಪುರುಷವ್ಯಾಘ್ರ ಕುರುನಂದನರು ಸ್ತ್ರೀಯರೊಂದಿಗೆ ಮಾತನಾಡಿ ವ್ಯಾಯಾಮದಿಂದ ಹಿಡಿದು ಪ್ರತಿಯೊಂದು ದಿನಕಾರ್ಯಗಳನ್ನೂ ಮಾಡಿ ಸ್ನಾನಮಾಡಿ, ದಿವ್ಯಚಂದನವನ್ನು ಎಲ್ಲೆಡೆ ಲೇಪಿಸಿಕೊಂಡು, ಕಲ್ಯಾಣಮನಸ್ಕರಾದ ಬ್ರಾಹ್ಮಣರಿಂದ ಸ್ವಸ್ತಿವಾಚನಗಳನ್ನು ಕೇಳಿ, ಮನಸ್ಸು ತೃಪ್ತಿಯಾಗುವ ಭೋಜನವನ್ನು ಮಾಡಿ, ತಾವು ಉಳಿಯುವ ಸ್ಥಳಕ್ಕೆ ಹಿಂದಿರುಗಿ, ನಾರಿಯರಿಂದ ಗೀತೆಗಳನ್ನು ಕೇಳಿ, ಮಲಗಿದರು. ರತಿಕ್ರೀಡೆಗೈದು ರಾತ್ರಿಯ ನಿದ್ದೆಯನ್ನು ಮಾಡಿ ವಿಶ್ರಾಂತಿಗೊಂಡ ಅವರನ್ನು ಸ್ತುತಿಗಳಿಂದ ಎಬ್ಬಿಸಲಾಯಿತು. ಸುಖವಾಗಿ ರಾತ್ರಿಯನ್ನು ಕಳೆದ ಅವರೆಲ್ಲರೂ ಆಹ್ನೀಕವನ್ನು ಮುಗಿಸಿ ಜೂಜಾಡುವವರಿಂದ ತುಂಬಿದ್ದ ರಮ್ಯ ಸಭೆಯನ್ನು ಪ್ರವೇಶಿಸಿದರು.

# ದ್ಯೂತ: ದ್ರೌಪದೀ ವಸ್ತ್ರಾಪಹರಣ

## ದ್ಯೂತಾರಂಭ

ಪಾಂಡವರು ಜೂಜಾಡುವವರಿಂದ ತುಂಬಿದ್ದ ರಮ್ಯ ಸಭೆಯನ್ನು ಪ್ರವೇಶಿಸಲು ಶಕುನಿಯು ಹೇಳಿದನು:

> "ರಾಜನ್! ಸಭೆಯಲ್ಲಿ ಕಂಬಳಿಯನ್ನು ಹಾಸಿಯಾಗಿದೆ ಮತ್ತು ಇಲ್ಲಿರುವವರು ಸಂತೋಷಪಡಲು ಸಮಯವನ್ನು ತೆಗೆದಿಟ್ಟಿದ್ದಾರೆ. ನಾವು ದಾಳಗಳನ್ನು ಉರುಳಿಸುವಾಗ ಪಣದ ಕುರಿತು ಪರಸ್ಪರರಲ್ಲಿ ಒಪ್ಪಂದವಿರಲಿ."

ಯುಧಿಷ್ಠಿರನು ಹೇಳಿದನು:

> "ರಾಜನ್! ಪಣವಿಟ್ಟು ಜೂಜಾಡುವುದು ಮೋಸ ಮತ್ತು ಪಾಪದ ಕೆಲಸ. ಅದರಲ್ಲಿ ಕ್ಷತ್ರಿಯ ಪರಾಕ್ರಮವೇನೂ ಇಲ್ಲ ಮತ್ತು ಶಾಶ್ವತ ನೀತಿಯೂ ಇಲ್ಲ. ನೀನು ಏಕೆ ದ್ಯೂತವನ್ನು ಪ್ರಶಂಸಿಸುತ್ತಿದ್ದೀಯೆ? ಶಕುನಿ! ಜೂಜಾಡುವವನ ಕಪಟವನ್ನು ಯಾರೂ ಪ್ರಶಂಸಿಸುವುದಿಲ್ಲ, ಗೌರವಿಸುವುದಿಲ್ಲ. ನಮ್ಮನ್ನು ಕಪಟಮಾರ್ಗದಿಂದ ಕ್ರೂರವಾಗಿ ಸೋಲಿಸಬೇಡ."

ಶಕುನಿಯು ಹೇಳಿದನು:



“ಸಂಖ್ಯೆಗಳನ್ನು ಅನುಸರಿಸುವ, ಮೋಸವನ್ನು ಗುರುತಿಸುವ, ದಾಳಗಳನ್ನು ಉರುಳಿಸುವುದರಲ್ಲಿ ನಿರಾಯಾಸನಾದ, ಮತ್ತು ದ್ಯೂತವನ್ನು ತಿಳಿದ ಮಹಾಮತಿಯು ದ್ಯೂತದ ಎಲ್ಲ ಪ್ರಕ್ರಿಯೆಗಳನ್ನೂ ಸಹಿಸಬಲ್ಲ. ಜೂಜಿನಲ್ಲಿ ಇಡುವ ಪಣವನ್ನು ಕಳೆದುಕೊಳ್ಳುವುದರಿಂದ ನಮಗೆ ಪರಮ ಕಷ್ಟವೆನಿಸಬಹುದು. ಆದುದರಿಂದ ಜೂಜಾಡುವುದು ಕೆಟ್ಟದೆಂದು ಹೇಳುತ್ತಾರೆ. ಪಾರ್ಥಿವ! ಜೂಜಾಡೋಣ.

ಅನುಮಾನಪಡಬೇಡ. ಈಗಲೇ ಪಣವನ್ನು ಇಡು. ತಡಮಾಡಬೇಡ.”

ಯುಧಿಷ್ಠಿರನು ಹೇಳಿದನು:

“ಸದಾ ಲೋಕದ್ವಾರಗಳಿಗೆ ಸಂಚರಿಸುವ ಮುನಿಸತ್ತಮ ಅಸಿತ ದೇವಲರು ಈ ರೀತಿ ಹೇಳಿದ್ದಾರೆ: “ಮಾಯೆಯಿಂದ ಜೂಜಾಡುವವರೊಂದಿಗೆ ಪಣವಿಡುವುದು ಪಾಪ. ಧರ್ಮವನ್ನು ಪಣವಿಟ್ಟು ಯುದ್ಧದಲ್ಲಿ ಜಯಗಳಿಸುವುದು ಇದಕ್ಕಿಂತಲೂ ಉತ್ತಮವಾದುದು. ಯಾವ ಆರ್ಯನೂ ಮ್ಲೇಚ್ಛಭಾಷೆಯಲ್ಲಿ ಮಾತನಾಡುವುದಿಲ್ಲ ಮತ್ತು ಮಾಯೆಯಿಂದ ನಡೆದುಕೊಳ್ಳುವುದಿಲ್ಲ. ಓರೆ ಕೋರೆಗಳಿಲ್ಲದ ನೇರ ಯುದ್ಧವೇ ಸತ್ಪುರುಷನ ವ್ರತ.” ನಮ್ಮ ಶಕ್ತಿಗನುಗುಣವಾಗಿ ಅರ್ಹ ಬ್ರಾಹ್ಮಣರನ್ನು ಪೂಜಿಸಲು ಪ್ರಯತ್ನಿಸುತ್ತೇವೆ. ಶಕುನಿ! ಆ ವಿತ್ತವನ್ನು ಮೀರಿ ಪಣವಿಟ್ಟು ಆಡಬೇಡ. ಅದಕ್ಕಿಂತಲೂ ಹೆಚ್ಚಿನದನ್ನು ಗೆಲ್ಲಬೇಡ. ನಾನು ಮೋಸದಿಂದ ಸುಖವನ್ನಾಗಲೀ ಧನವನ್ನಾಗಲೀ ಬಯಸುವುದಿಲ್ಲ. ಆದರೆ, ಮೋಸವಿಲ್ಲದ ಜೂಜಿಗೆ ಮಾನ್ಯತೆಯಿಲ್ಲ.”

ಶಕುನಿಯು ಹೇಳಿದನು:

“ಯುಧಿಷ್ಠಿರ! ಶ್ರೋತ್ರಿಯನ್ನು ಅಶ್ರೋತ್ರಿಯು ಕೇವಲ

ಮೋಸದಿಂದಲೇ ಗೆಲ್ಲಬಹುದು. ವಿದ್ವಾನನು ಅವಿದುಷಿಯನ್ನೂ ಕೂಡ ಮೋಸದಿಂದಲೇ ಹಿಂದೆಮಾಡುತ್ತಾನೆ. ಆದರೆ ಜನರು ಅದನ್ನು ಮೋಸವೆಂದು ಕರೆಯುವುದಿಲ್ಲ. ನೀನು ನನ್ನಲ್ಲಿಗೆ ಬಂದಿದ್ದೀಯೆ. ಒಮ್ಮೆ ನಾನು ಮೋಸಗಾರನೆಂದು ನಿನಗನ್ನಿಸಿದರೆ ಮತ್ತು ಇದರಲ್ಲಿ ನಿನಗೆ ಭಯವೆನಿಸಿದರೆ ಜೂಜಿನಿಂದ ದೂರವಿರು."

ಯುಧಿಷ್ಠಿರನು ಹೇಳಿದನು:

"ಎದುರಾಳಿಯು ಕರೆದಾಗ ನಾನು ಹಿಂಜರಿಯುವುದಿಲ್ಲ. ಇದು ನಾನು ನಡೆಸುತ್ತಿರುವ ವ್ರತ. ರಾಜನ್! ವಿಧಿಯು ಬಲಶಾಲಿಯು. ನಾನು ದೈವದ ವಶನಾಗಿದ್ದೇನೆ. ಈ ಸಮಾಗಮದಲ್ಲಿ ಯಾರೊಡನೆ ನಾನು ಜೂಜಾಡಬೇಕಾಗುತ್ತದೆ? ಎದುರು ಪಣವೇನಿದೆ? ದ್ಯೂತವನ್ನು ಆರಂಭಿಸೋಣ."

ದುರ್ಯೋಧನನು ಹೇಳಿದನು:

"ವಿಶಾಂಪತೇ! ನಾನು ರತ್ನಗಳನ್ನು ಧನವನ್ನು ನೀಡುತ್ತೇನೆ. ನನ್ನ ಪರವಾಗಿ ನನ್ನ ಮಾತುಲ ಶಕುನಿಯು ದಾಳಗಳನ್ನೆಸೆಯುತ್ತಾನೆ."

ಯುಧಿಷ್ಠಿರನು ಹೇಳಿದನು:

“ಒಬ್ಬನ ಪರವಾಗಿ ಇನ್ನೊಬ್ಬನು ಜೂಜಾಡುವುದು ನನಗೆ ಸರಿಯೆನ್ನಿಸುವುದಿಲ್ಲ. ನಿನಗೆ ಇದು ತಿಳಿದಿದೆ. ಇದನ್ನು ತಿಳಿದುಕೊಂಡು ನಿನಗಿಷ್ಟವಿದ್ದಂತೆ ಆಟವು ಪ್ರಾರಂಭವಾಗಲಿ.”

ದ್ಯೂತವು ಪ್ರಾರಂಭವಾದ ಹಾಗೆಯೇ ಧೃತರಾಷ್ಟ್ರನ ಮುಂದಾಳುತ್ವದಲ್ಲಿ ಸರ್ವ ರಾಜರು - ಇದರಿಂದ ಅತೀವ ಪ್ರೀತಮನಸ್ಕರಾಗಿರದ ಭೀಷ್ಮ, ದ್ರೋಣ, ಕೃಪ, ಮಹಾಮತಿ ವಿದುರ, ಮತ್ತು ಅನ್ಯರು - ಸಭೆಯನ್ನು ಪ್ರವೇಶಿಸಿದರು. ಆ ಸಿಂಹಗ್ರೀವ ಮಹೌಜಸರು ಜೋಡಿಗಳಲ್ಲಿ ಅಥವಾ ಒಬ್ಬಂಟಿಗರಾಗಿ ಸುಂದರ ವಿಶಾಲ ಸಿಂಹಾಸನಗಳಲ್ಲಿ ಆಸೀನರಾದರು. ಆ ಸಭೆಯು ಮಹಾಭಾಗ ದೇವತೆಗಳ ಸಮಾಗಮದಿಂದ ಶೋಭಿಸುವ ದಿವಿಯಂತೆ ಸಮಾಗತ ರಾಜರಿಂದ ಶೋಭಿಸುತ್ತಿತ್ತು. ಎಲ್ಲರೂ ವೇದವಿದರೂ, ಶೂರರೂ ಆಗಿದ್ದು ಸರ್ವರೂ ಭಾಸ್ಕರಮೂರ್ತಿಗಳಾಗಿದ್ದರು. ನಂತರ ಆ ಸುಹೃದಯಕರ ದ್ಯೂತವು ಪ್ರಾರಂಭವಾಯಿತು.

## ಯುಧಿಷ್ಠಿರನು ಪಣಗಳನ್ನು ಸೋತುದು

ಯುಧಿಷ್ಠಿರನು ಹೇಳಿದನು:

“ರಾಜನ್! ಇಗೋ. ಸಾಗರಾವರ್ತಸಂಭವ ಮಣಿಹಾರಗಳು ಮತ್ತು ಶ್ರೀಮಾನ ಕನಕ ಉತ್ತಮ

ಭೂಷಣಗಳ ಬಹುಧನ. ಇದು ನನ್ನ ಪಣ. ಇದಕ್ಕೆ ಪ್ರತಿಯಾದ ನಿನ್ನ ಪಣವೇನು? ನೀನು ಕ್ರಮದಿಂದಿರು. ಈ ಪಣವನ್ನು ನಾನೇ ಗೆಲ್ಲುತ್ತೇನೆ.”

ದುರ್ಯೋಧನನು ಹೇಳಿದನು:

“ನನ್ನಲ್ಲಿಯೂ ಮಣಿಗಳಿವೆ. ವಿವಿಧ ಧನಗಳಿವೆ. ಅರ್ಥದಲ್ಲಿ ನನಗೆ ಮತ್ಸರವಿಲ್ಲ. ಈ ಪಣವನ್ನು ನಾನೇ ಗೆಲ್ಲುತ್ತೇನೆ.”

ಆಗ ಅಕ್ಷತತ್ವವನ್ನು ತಿಳಿದಿದ್ದ ಶಕುನಿಯು ದಾಳಗಳನ್ನು ಹಿಡಿದನು. ಶಕುನಿಯು ಯುಧಿಷ್ಠಿರನಿಗೆ “ಗೆದ್ದೆ!” ಎಂದು ಹೇಳಿದನು.

ಯುಧಿಷ್ಠಿರನು ಹೇಳಿದನು:

“ನಿನ್ನ ಚಾಕಚಕ್ಯತೆಯಿಂದ ನನ್ನನ್ನು ಮೋಹಗೊಳಿಸಿ ನೀನು ಈ ಆಟವನ್ನು ಗೆದ್ದಿದ್ದೀಯೆ ಶಕುನಿ! ಆಗಲಿ. ಈಗ ಜೂಜಾಡೋಣ. ಸಾವಿರಾರು ಬಾರಿ ದಾಳಗಳನ್ನು ಹಿಡಿಯೋಣ. ಪ್ರತಿಯೊಂದರಲ್ಲಿಯೂ ಒಂದೊಂದು ಸಾವಿರ ಚಿನ್ನದ ನಾಣ್ಯಗಳಿಂದ ತುಂಬಿರುವ ನೂರು ಕುಂಡಿಗಳಿವೆ. ನನ್ನ ಕೋಶವು ಅಕ್ಷಯ ಹಿರಣ್ಯವನ್ನೂ ಅನೇಕ ಚಿನ್ನವನ್ನೂ ಹೊಂದಿದೆ. ನನ್ನ ಈ ಧನವನ್ನು ನಿನಗಾಗಿ ಪಣವನ್ನಿಟ್ಟು ಆಡುತ್ತೇನೆ.”

ಅವನು ಹೀಗೆ ಹೇಳಲು ಶಕುನಿಯು ನೃಪನಿಗೆ “ಇದನ್ನೂ ಗೆದ್ದೆ!”

ಎಂದು ಕೂಗಿ ಹೇಳಿದನು. ಯುಧಿಷ್ಠಿರನು ಹೇಳಿದನು:

> "ಇದೋ ನನ್ನ ಸಹಸ್ರ ಸಮಿತ, ವೈಯಾಗ್ರ, ಸುಪ್ರವರ್ತಿತ, ಸುಂದರ ಚಕ್ರಗಳಿಂದ ನಡೆಯುವ, ಪ್ರಸಿದ್ಧ, ಗಂಟೆಗಳ ಮಾಲೆಗಳಿಂದ ಅಲಂಕೃತ, ನಮ್ಮನ್ನು ಇಲ್ಲಿಗೆ ಕರೆದುತಂದ ಗುಡುಗಿನ ಧ್ವನಿಯ ವಿಜಯಶಾಲಿ, ಪುಣ್ಯ, ಮೇಘಸಾಗರಗಳಂತೆ ಘರ್ಜಿಸುವ, ಬೂದುಬಣ್ಣದ ರಾಷ್ಟ್ರದಲ್ಲಿಯೇ ಪ್ರಶಂಸೆಗೊಂಡ ಭೂಮಿಯ ಮೇಲೆ ನಡೆಯುವ ಯಾರೂ ಇವರಿಂದ ತಪ್ಪಿಸಿಕೊಳ್ಳದ, ಒಳ್ಳೆಯ ಎಂಟು ಅಶ್ವಗಳಿಂದ ಎಳೆಯಲ್ಪಡುವ, ರಾಜರಥ. ನನ್ನ ಈ ಧನವನ್ನು ನಾನು ನಿನಗೆ ಕೊಡುತ್ತಿದ್ದೇನೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು "ಇದನ್ನೂ ಗೆದ್ದೆ!" ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

> "ಸೌಬಲ! ನನ್ನಲ್ಲಿ ಮದಿಸಿದ ಆನೆಗಳು ಸಹಸ್ರಸಂಖ್ಯೆಯಲ್ಲಿವೆ. ಇವುಗಳು ಬಂಗಾರದ ಫಲಕಗಳನ್ನು ಬಂಗಾರದ ಮಾಲೆಗಳನ್ನು ಮತ್ತು ಅಲ್ಲಲ್ಲಿ ಕಮಲಗಳನ್ನು ಧರಿಸಿವೆ. ರಾಜವಾಹನಗಳಾದ ಅವು ಚೆನ್ನಾಗಿ ಪಳಗಿಸಲ್ಪಟ್ಟಿವೆ ಮತ್ತು ರಣರಂಗದಲ್ಲಿ ಸರ್ವ ಶಬ್ಧಗಳನ್ನೂ ಸಹಿಸಬಲ್ಲವು. ಆ ಮಹಾಕಾಯಗಳ ದಂತಗಳು ಕಬ್ಬಿನಷ್ಟು

ಉದ್ದಗಿವೆ, ಮತ್ತು ಪ್ರತಿಯೊಂದಕ್ಕೂ ಎಂಟು ಹೆಣ್ಣಾನೆಗಳ ಹಿಂಡಿವೆ. ಅವೆಲ್ಲವೂ ಮುಂದಿರುವುದನ್ನು ಉರುಳಿಸಬಲ್ಲ ಪರ್ವತ ಮತ್ತು ಮೋಡಗಳಿಂತಿರುವ ಆನೆಗಳು. ನನ್ನ ಈ ಧನವನ್ನು ನಾನು ನಿನಗೆ ಕೊಡುತ್ತಿದ್ದೇನೆ."

ಪಾರ್ಥನ ಈ ಮಾತಿಗೆ ಶಕುನಿ ಸೌಬಲನು ನಕ್ಕು "ಇದನ್ನೂ ಗೆದ್ದೆ !" ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

"ನನ್ನಲ್ಲಿ ನೂರು ಸಾವಿರ ಬಳೆ ಮತ್ತು ತೋಳುಬಂದಿಗಳನ್ನು ಧರಿಸಿದ, ಬಂಗಾರದ ಹಾರಗಳಿಂದ ಅಲಂಕೃತಗೊಂಡ ಅತಿಸುಂದರ ತರುಣಿ ದಾಸಿಯರಿದ್ದಾರೆ. ಅವರೆಲ್ಲರೂ ಬೆಲೆಬಾಳುವ ಮಾಲ್ಯಾಭರಣಗಳನ್ನೂ, ಸುಂದರ ವಸ್ತ್ರಗಳನ್ನೂ, ಚಂದನಲೇಪನಗಳನ್ನೂ, ಹೇಮ ಮಣಿಗಳನ್ನೂ, ಮತ್ತು ಸೂಕ್ಷ್ಮ ವಸ್ತ್ರಗಳನ್ನೂ ಧರಿಸಿದ್ದಾರೆ. ನೃತ್ಯಗಾನದಲ್ಲಿ ಕುಶಲರಾದ ಇವರು ನನ್ನ ಶಾಸನದಂತೆ ಸ್ನಾತಕರು, ಅಮಾತ್ಯರು ಮತ್ತು ರಾಜರುಗಳ ಸೇವೆಯಲ್ಲಿ ನಿರತರಾಗಿರುತ್ತಾರೆ. ನನ್ನ ಈ ಧನವನ್ನು ನಾನು ನಿನಗೆ ಕೊಡುತ್ತಿದ್ದೇನೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು "ಇದನ್ನೂ ಗೆದ್ದೆ !" ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

“ನನ್ನಲ್ಲಿ ಅಷ್ಟೇ ಸಹಸ್ರ ಸಂಖ್ಯೆಯಲ್ಲಿ ದಾಸರಿದ್ದಾರೆ. ಇವರು ಕುಶಲರು ಮತ್ತು ಹೇಳಿದ ಹಾಗೆ ನಡೆದುಕೊಳ್ಳುವವರು. ಸದಾ ಸುಂದರ ವಸ್ತ್ರಗಳನ್ನು ಧರಿಸಿರುತ್ತಾರೆ. ಪ್ರಜ್ಞಾವಂತರು, ಮೇಧಾವಿಗಳು, ದಕ್ಷರೂ ಆದ ಈ ಯುವಕರು ನುಣುಪಾದ ಕುಂಡಲಗಳನ್ನು ಧರಿಸಿರುತ್ತಾರೆ. ಇವರು ಪಾತ್ರೆಗಳನ್ನು ಹಿಡಿದು ದಿನರಾತ್ರಿಯೂ ಅತಿಥಿಗಳಿಗೆ ಭೋಜನವನ್ನು ನೀಡುತ್ತಾರೆ. ಈ ನನ್ನ ಧನವನ್ನು ನಿನಗೆ ನಾನು ಕೊಡುತ್ತಿದ್ದೇನೆ.”

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು “ಇದನ್ನೂ ಗೆದ್ದೆ!” ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

“ಅಷ್ಟೇ ಸಂಖ್ಯೆಯ ಬಂಗಾರದಿಂದ ಮಾಡಲ್ಪಟ್ಟ, ಧ್ವಜಗಳನ್ನು ಹೊಂದಿದ, ವಿನೀತ ಹಯ, ಸಾರಥಿ ಮತ್ತು ಯೋಧರಿಂದ ಸಂಪನ್ನ ರಥಗಳು ನನ್ನಲ್ಲಿವೆ. ಒಬ್ಬೊಬ್ಬ ಯೋಧನಿಗೂ ಯುದ್ಧವಿರಲಿ ಯುದ್ಧವಿಲ್ಲದಿರಲಿ ಒಂದು ತಿಂಗಳಿಗೆ ಸಾವಿರಕ್ಕೂ ಹೆಚ್ಚು ಸಂಬಳವು ದೊರೆಯುತ್ತದೆ. ಈ ನನ್ನ ಧನವನ್ನು ನಾನು ನಿನಗೆ ಪಣವಾಗಿ ಇಡುತ್ತಿದ್ದೇನೆ.”

ಪಾರ್ಥನ ಈ ಮಾತುಗಳಿಗೆ ಕೃತವೈರಿ ದುರಾತ್ಮ ಶಕುನಿಯು

ಯುಧಿಷ್ಠಿರನಿಗೆ “ಇದನ್ನೂ ಗೆದ್ದೆ!” ಎಂದು ಹೇಳಿದನು. ಯುಧಿಷ್ಠಿರನು ಹೇಳಿದನು:

> “ಗಾಂಡೀವಧನ್ವನಿಗೆ ಸಂತುಷ್ಟನಾದ ಚಿತ್ರರಥನು ನೀಡಿದ ತ್ರಿತ್ತಿರಿ ಬಣ್ಣದ ಹೇಮಮಾಲಿನಿ ಗಂಧರ್ವ ಅಶ್ವಗಳಿವೆ. ನನ್ನ ಈ ಧನವನ್ನು ನಾನು ನಿನಗೆ ಪಣವಾಗಿ ನೀಡುತ್ತಿದ್ದೇನೆ.”

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು “ಇದನ್ನೂ ಗೆದ್ದೆ!” ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

> “ನನ್ನಲ್ಲಿ ಲೆಖ್ಖವಿಲ್ಲದಷ್ಟು ರಥಗಳು, ಬಂಡಿಗಳು ಮತ್ತು ನನಗಾಗಿ ಕಟ್ಟಿದ ಕುದುರೆಗಳಿವೆ. ಇವುಗಳ ಸುತ್ತಲೂ ಬೇರೆ ಬೇರೆ ರೀತಿಯ ಪಶುಪ್ರಾಣಿಗಳಿವೆ. ಇವುಗಳೊಂದಿಗೆ ನನ್ನಲ್ಲಿ ಹಾಲುಕುಡಿದು ಪಾಯಸವನ್ನು ತಿಂದು ವಿಶಾಲ ವಕ್ಷಸ್ಥರಾದ ಬೇರೆ ಬೇರೆ ವರ್ಣಗಳಿಂದ ಸಾವಿರ ಸಾವಿರ ಆರಿಸಿದ ಅರವತ್ತು ಸಾವಿರ ಪುರುಷರಿದ್ದಾರೆ. ನನ್ನ ಈ ಧನವನ್ನು ನಿನಗೆ ನಾನು ಕೊಡುತ್ತಿದ್ದೇನೆ.”

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು “ಇದನ್ನೂ ಗೆದ್ದೆ!” ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

“ನನ್ನಲ್ಲಿ ತಾಮ್ರ ಮತ್ತು ಕಬ್ಬಿಣಗಳಿಂದ ಮಾಡಿದ ನಾಲ್ಕು ನೂರು ನಿಧಿಗಳಿವೆ. ಇವುಗಳೊಂದೊಂದರಲ್ಲಿಯೂ ಐದು ದ್ರೌಣಿ ಗಟ್ಟಿ ಬಂಗಾರವಿದೆ. ನನ್ನ ಈ ಧನವನ್ನು ನಾನು ನಿನಗೆ ಪಣವಾಗಿ ಇಡುತ್ತಿದ್ದೇನೆ.”

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು “ಇದನ್ನೂ ಗೆದ್ದೆ!” ಎಂದು ಯುಧಿಷ್ಠಿರನಿಗೆ ಹೇಳಿದನು.

## ವಿದುರನ ಹಿತವಚನ

ಆಗ ಧೃತರಾಷ್ಟ್ರನನ್ನುದ್ದೇಶಿಸಿ ವಿದುರನು ಹೇಳಿದನು:

“ಮಹಾರಾಜ! ಸಾಯುತ್ತಿರುವವನಿಗೆ ಔಷಧಿಯು ಹೇಗೆ ಹಿಡಿಸುವುದಿಲ್ಲವೋ ಹಾಗೆ ನಿನಗೆ ಇದನ್ನು ಕೇಳಲು ಇಷ್ಟವಿಲ್ಲದಿದ್ದರೂ ನಾನು ಈಗ ಏನು ಹೇಳುವೆನೋ ಅದನ್ನು ಕೇಳು. ಹುಟ್ಟಿದಾಕ್ಷಣವೇ ಯಾರು ನರಿಯ ಹಾಗೆ ವಿಸ್ವರವಾಗಿ ಕೂಗಿದನೋ ಆ ಪಾಪಚೇತಸ ದುರ್ಯೋಧನನೇ ಭಾರತರ ಕುಲಘ್ನ! ಅವನೇ ನಮ್ಮ ಸಾವಿಗೆ ಕಾರಣನಾಗುತ್ತಾನೆ. ದುರ್ಯೋಧನನ ರೂಪದಲ್ಲಿ ಮನೆಯಲ್ಲಿಯೇ ನರಿಯೊಂದು ವಾಸಿಸುತ್ತಿದೆ ಎಂದು ತಿಳಿದೂ ನೀನು ಜಾಗರೂಕತೆಯನ್ನು ವಹಿಸಲಿಲ್ಲ. ಕಾವ್ಯನ ಮಾತನ್ನು ನನ್ನಿಂದ ಕೇಳು. ಸರಾಯಿಯನ್ನು ಕುಡಿಯುವವನು ಕೆಳಗೆ

ಬೀಳುತ್ತಾನೆ ಎನ್ನುವುದನ್ನು ತಿಳಿದಿರುವುದಿಲ್ಲ. ಮೇಲೇರಿದ ಅವನಿಗೆ ಕೆಳಗೆ ಬೀಳುತ್ತೇನೆ ಎನ್ನುವುದರ ಅರಿವು ಇರುವುದಿಲ್ಲ. ಇವನು, ಜೂಜಾಟದ ಸರಾಯಿಯಿಂದ ಮತ್ತನಾಗಿ ಸುತ್ತ ಮುತ್ತ ಏನನ್ನೂ ನೋಡುತ್ತಿಲ್ಲ. ಈ ಮಹಾರಥಿಗಳೊಂದಿಗೆ ವೈರವನ್ನು ಸಾಧಿಸಿ ಪ್ರಪ್ರಾತವನ್ನು ಕಾಣುತ್ತಾನೆ ಎನ್ನುವ ತಿಳುವಳಿಕೆ ಅವನಿಗಿಲ್ಲ. ರಾಜರಿಗೆ ಯಾವುದು ಅಸಮಂಜಸ ಎನ್ನುವುದು ನಿನಗೆ ತಿಳಿದೇ ಇದೆ. ಅಂಧಕರು, ಯಾದವರು ಮತ್ತು ಭೋಜರು ಸಮೇತರಾಗಿ ಕಂಸನನ್ನು ತಿರಸ್ಕರಿಸಿದರು. ಅವರ ಇಚ್ಛೆಯಂತೆ ಅಮಿತ್ರಘಾತಿ ಕೃಷ್ಣನು ಅವನನ್ನು ಸಂಹರಿಸಿದಾಗ, ಅವನ ಕುಲದವರು ಎಲ್ಲರೂ ನೂರು ವರ್ಷಗಳ ಪರ್ಯಂತ ಸಂತೋಷವನ್ನಾಚರಿಸಿದರು. ನಿನ್ನ ನಿಯುಕ್ತಿಯಂತೆ ಸವ್ಯಸಾಚಿಯು ಸುಯೋಧನನನ್ನು ನಿಗ್ರಹಿಸಲಿ ಮತ್ತು ಈ ಪಾಪಿಯ ನಿಗ್ರಹದಿಂದಾಗಿ ಕುರುಗಳು ಸುಖ ಸಂತೋಷವನ್ನು ಹೊಂದಲಿ. ಈ ಕಾಗೆಯಿಂದ ನವಿಲುಗಳನ್ನು ಪಡೆ. ಈ ನರಿಯಿಂದ ಹುಲಿಗಳನ್ನು ಹೊಂದು. ಪಾಂಡವರನ್ನು ಕೊಂಡುಕೋ. ಶೋಕಸಾಗರದಲ್ಲಿ ಮುಳುಗಬೇಡ. ಕುಲವನ್ನುಳಿಸಲು ಪುರುಷನನ್ನು ತ್ಯಜಿಸು. ಗ್ರಾಮವನ್ನುಳಿಸಲು ಕುಲವನ್ನು ತ್ಯಜಿಸು. ರಾಷ್ಟ್ರವನ್ನುಳಿಸಲು ಗ್ರಾಮವನ್ನು ತ್ಯಜಿಸು. ಮತ್ತು ಆತ್ಮವನ್ನು ಉಳಿಸಿಕೊಳ್ಳಲು

ಪೃಥ್ವಿಯನ್ನೇ ತ್ಯಜಿಸು. ಹೀಗೆ ಸರ್ವಜ್ಞ ಸರ್ವಭಾವಜ್ಞ ಸರ್ವಶತ್ರುಭಯಂಕರ ಕಾವ್ಯನು ಜಂಬನನ್ನು ತ್ಯಜಿಸುವಂತೆ ಮಹಾ ಅಸುರರಿಗೆ ಹೇಳಿದ್ದನು. ವನದಲ್ಲಿ ಸಂಚರಿಸುತ್ತಿದ್ದ ಬಂಗಾರದ ಮೊಟ್ಟೆಗಳನ್ನು ಇಡುತ್ತಿದ್ದ ಯಾವುದೋ ಪಕ್ಷಿಯನ್ನು ಓರ್ವನು ಮನೆಗೆ ತೆಗೆದುಕೊಂಡು ಹೋಗಿ ಲೋಭದಿಂದ ಅದನ್ನು ಕೊಂದ ಎನ್ನುವುದನ್ನು ಕೇಳಿದ್ದೇವೆ. ಈ ಮನುಷ್ಯನು ಹಿರಣ್ಯದ ಆಸೆಯಿಂದ ಕುರುಡನಾಗಿ ಯಾವುದನ್ನು ಅವಲಂಬಿಸಿ ಸದಾ ವಾಸಿಸಬಹುದಾದೋ ಆ ಪಕ್ಷಿಯನ್ನೇ ಕೊಂದು ಒಂದೇ ಏಟಿನಲ್ಲಿ ಏನೆಲ್ಲ ಹೊಂದಿದ್ದನೋ ಮತ್ತು ಮುಂದೆ ಹೊಂದಬಹುದಾಗಿತ್ತೋ ಅವೆಲ್ಲವನ್ನೂ ನಾಶಪಡಿಸಿದನು. ತಕ್ಷಣ ದೊರೆಯುವ ಲಾಭಕ್ಕಾಗಿ ಪಾಂಡವರನ್ನು ದ್ವೇಷಿಸಬೇಡ. ಪಕ್ಷಿಯನ್ನು ಕೊಂದವನಂತೆ ನೀನೂ ಕೂಡ ನಂತರ ನೊಂದುತ್ತೀಯೆ. ಮಾಲಾಕಾರನಂತೆ ಪಾಂಡವರೆನ್ನುವ ಹೂವಿನ ತೋಟದಲ್ಲಿ ಪುನಃ ಪುನಃ ಅವರೊಂದಿಗೆ ಸ್ನೇಹದಿಂದಿದ್ದು, ಪುಷ್ಪಗಳು ಹುಟ್ಟುತ್ತಿದ್ದ ಹಾಗೆ ಒಂದೊಂದಾಗಿ ಅವನ್ನು ತೆಗೆದುಕೋ. ಇದ್ದಲು ಸುಡುವವನು ಮರವನ್ನು ಬೇರಿನ ಸಹಿತ ಸುಡುವಹಾಗೆ ಇವರನ್ನು ಸುಡಬೇಡ. ಮಕ್ಕಳು, ಅಮಾತ್ಯರು ಮತ್ತು ಸೇನೆಯೊಂದಿಗೆ ಪರಾಭವದೆಡೆಗೆ ಹೋಗಬೇಡ. ಒಂದಾಗಿರುವ ಪಾರ್ಥರನ್ನು ಯಾರುತಾನೆ ಯುದ್ಧದಲ್ಲಿ

ಜಯಿಸಬಲ್ಲರು? ಸಾಕ್ಷಾತ್ ಮರುತ್ಪತಿಯು ಮರುತ್ತುಗಳ ಸಮೇತ ಬಂದರೂ ಸಾಧ್ಯವಿಲ್ಲ.

ಎಲ್ಲ ಕಲಹಗಳಿಗೆ, ಸುಳ್ಳು ಬೇಧಗಳಿಗೆ ಮತ್ತು ಮಹಾ ಯುದ್ಧಕ್ಕೆ ದ್ಯೂತವೇ ಕಾರಣವಾಗುತ್ತದೆ. ಇದಕ್ಕೆ ತೊಡಗಿರುವ ಧೃತರಾಷ್ಟ್ರ ಪುತ್ರ ದುರ್ಯೋಧನನು ಉಗ್ರ ವೈರತ್ವವನ್ನು ಸೃಷ್ಟಿಸುತ್ತಿದ್ದಾನೆ. ದುರ್ಯೋಧನನ ಅಪರಾದದಿಂದ ಪ್ರತೀಪನ ಕುಲದವರು, ಶಾಂತನವರು, ಭೀಮಸೇನನ ಕುಲದವರು, ಮತ್ತು ಬಾಹ್ಲೀಕರು ಎಲ್ಲರೂ ಶೋಕವನ್ನು ಹೊಂದುತ್ತಾರೆ. ಬರಿಯ ಮದದಿಂದ ದುರ್ಯೋಧನನು ಮದದಲ್ಲಿರುವ ಹೋರಿಯು ಹೇಗೆ ತನ್ನ ಕೋಡನ್ನೇ ತೀವಿ ತುಂಡುಮಾಡಿಕೊಳ್ಳುತ್ತದೆಯೋ ಹಾಗೆ ಇಡೀ ರಾಷ್ಟ್ರದ ಸುರಕ್ಷತೆಯನ್ನು ಅಪಹರಿಸಿದ್ದಾನೆ. ವೀರನಾಗಿರಲಿ ಕವಿಯಾಗಿರಲಿ ಯಾರು ತನ್ನ ದೃಷ್ಟಿಕೋಣವನ್ನು ಬಿಟ್ಟು ಇನ್ನೊಬ್ಬರ ಮನಸ್ಸಿನಂತೆ ನಡೆದುಕೊಳ್ಳುತ್ತಾನೋ ಅವನು ಬಾಲಕನಿಂದ ನಡೆಸಲ್ಪಡುವ ದೋಣಿಯನ್ನು ಏರಿ ಸಮುದ್ರವನ್ನು ದಾಟಲು ಹೋಗಿ ಘೋರವಾದ ವ್ಯಸನದಲ್ಲಿ ಮುಳುಗುತ್ತಾನೆ. ದುರ್ಯೋಧನನು ಪಾಂಡವರೊಂದಿಗೆ ಆಡುತ್ತಿದ್ದಾನೆ, ಮತ್ತು ಅವನು ಗೆಲ್ಲುತ್ತಿದ್ದಾನೆ ಎಂದು ನೀನು

ಸಂತೋಷಪಡುತ್ತಿದ್ದೀಯೆ. ಈ ಒಂದು ಆಟದಿಂದ ಯುದ್ಧವು ಹುಟ್ಟುತ್ತದೆ, ಮತ್ತು ಅದರಿಂದ ಎಲ್ಲರ ವಿನಾಶವು ಉಂಟಾಗುತ್ತದೆ. ಈ ಕುಪ್ರಣೀತ ಆಟವು ಇದನ್ನು ಆಯೋಜಿಸಿದ ಪ್ರೌಢನ ಹೃದಯದ ಅಂತರಾಳದಲ್ಲಿ ಅಧೋಗತಿಯಲ್ಲಿರುವ ಫಲವನ್ನು ಆಕರ್ಷಿಸುತ್ತದೆ. ಯುಧಿಷ್ಠಿರನೊಂದಿಗೆ ಇದು ಸಫಲವಾದರೆ ಸುಧನ್ವಿಯಲ್ಲಿ ವೈರತ್ವವನ್ನು ಉಂಟುಮಾಡುತ್ತದೆ. ಪ್ರತೀಪನ ಮತ್ತು ಶಾಂತನವನ ಕುಲದವರೇ! ಕಾವ್ಯನ ಮಾತುಗಳನ್ನು ಕೇಳಿ. ಕಿಚ್ಚೇಳುತ್ತಿರುವ ಈ ಕೆಟ್ಟ ಬೆಂಕಿಯು ನಿಮ್ಮನ್ನು ಆವರಿಸದಿರಲಿ. ಯುದ್ಧದ ಮೊದಲೇ ಇದನ್ನು ಶಾಂತಗೊಳಿಸಿ. ದ್ಯೂತದಿಂದ ಪಾಂಡವ ಅಜಾತಶತ್ರುವಿಗೆ ಅಥವಾ ವೃಕೋದರ, ಸವ್ಯಸಾಚೀ ಅಥವಾ ಯಮಳರಿಗೆ ಉಂಟಾದ ಸಿಟ್ಟು ತಣಿಯದಿದ್ದರೆ ಅದರಿಂದ ಉಂಟಾಗುವ ತುಮುಲದಲ್ಲಿ ಯಾವ ದ್ವೀಪವು ದೊರೆಯಬಲ್ಲದು? ಈ ದ್ಯೂತದ ಮೊದಲೂ ನೀನು ನಿನ್ನ ಮನಸ್ಸಿನಲ್ಲಿ ಬಯಸಿದಷ್ಟು ಸಂಪತ್ತಿನ ಒಡೆಯನಾಗಿರುವೆ. ಪಾಂಡವರಿಂದ ಇನ್ನೂ ಹೆಚ್ಚಿನ ಸಂಪತ್ತನ್ನು ಪಡೆದರೆ ಅದು ಯಾರಿಗೆ ಬೇಕು? ಪಾರ್ಥರೇ ನಿನ್ನ ಸಂಪತ್ತಲ್ಲವೇ? ಸೌಬಲನಾಡುವ ದ್ಯೂತವು ನಮಗೆಲ್ಲ ಗೊತ್ತೇ ಇದೆ. ಆ ಪಾರ್ವತೀಯನು ದ್ಯೂತದಲ್ಲಿ ಕೈಚಳಕವನ್ನು ತಿಳಿದಿದ್ದಾನೆ.

ಆದುದರಿಂದ ಮಾಯೆಯಿಂದ ಆಡುವ ಈ ಪಾರ್ವತೀಯ ಶಕುನಿಯು ಎಲ್ಲಿಂದ ಬಂದಿದ್ದಾನೋ ಅಲ್ಲಿಗೇ ಹೋಗಲಿ."

ದುರ್ಯೋಧನನು ಹೇಳಿದನು:

"ವಿದುರ! ನೀನು ಯಾವಾಗಲೂ ಪರರ ಯಶಸ್ಸನ್ನು ಶ್ಲಾಘಿಸುತ್ತೀಯೆ ಮತ್ತು ಧಾರ್ತರಾಷ್ಟ್ರರನ್ನು ಒಳಗಿಂದೊಳಗೇ ಹೀಯಾಳಿಸುತ್ತೀಯೆ. ನಿನಗೆ ಯಾರಲ್ಲಿ ಪ್ರೀತಿಯಿದೆ ಎನ್ನುವುದನ್ನು ತಿಳಿದಿದ್ದೇವೆ. ಬಾಲಕರೆಂದು ತಿಳಿದು ನಮ್ಮನ್ನು ನೀನು ಮನ್ನಿಸುವುದಿಲ್ಲ. ಅವನ ನಿಂದನೆ ಪ್ರಶಂಸೆಯಲ್ಲಿಯೇ ಒಬ್ಬ ಪುರುಷನ ಪ್ರೀತಿ ಯಾರಲ್ಲಿದೆ ಎನ್ನುವುದನ್ನು ಚೆನ್ನಾಗಿ ತಿಳಿಯಬಹುದು. ನಿನ್ನ ನಾಲಗೆಯು ಹೃದಯ ಮತ್ತು ಮನಸ್ಸನ್ನು ತೆರೆಯುತ್ತದೆ. ಮನಸ್ಸಿನಲ್ಲಿರುವ ದ್ವಂದ್ವಗಳನ್ನೂ ಅದು ಪ್ರಕಟಿಸುತ್ತದೆ. ಅಪ್ಪಿಕೊಂಡ ಹಾವಿನಂತೆ ಇದ್ದೀಯೆ. ಪೋಷಕನನ್ನೇ ಕಾಡಿಸುವ ಬೆಕ್ಕಿನಂತಿದ್ದೀಯೆ. ಸಹೋದರನಿಗೆ ಕೇಡನ್ನು ಬಯಸುವುದು ಪಾಪವೆಂದು ಹೇಳುತ್ತಾರೆ. ನಿನಗೆ ಪಾಪದ ಭಯ ಸ್ವಲ್ಪವೂ ಇಲ್ಲವೇ? ಶತ್ರುಗಳನ್ನು ಗೆದ್ದು ಮಹಾ ಫಲವನ್ನು ಗಳಿಸುತ್ತೇವೆ. ನಮ್ಮೊಡನೆ ಅಷ್ಟೊಂದು ನಿಷ್ಠೂರವಾಗಿ ಮಾತನಾಡಬೇಡ. ನಮ್ಮ ದ್ವೇಷಿಗಳೊಂದಿಗೆ ನೀನು ಸೇರಿಕೊಂಡು ಸಂತೋಷದಿಂದಿರುವೆ ಮತ್ತು ಇನ್ನೂ

ಕೆಟ್ಟದ್ದೆಂದರೆ ನಮ್ಮೊಡನೆಯೇ ದ್ವೇಷವನ್ನು ಸಾಧಿಸುತ್ತಿರುವೆ. ಅಕ್ಷಮವಾಗಿ ಮಾತನಾಡಿದವನು ಅಮಿತ್ರನಾಗುತ್ತಾನೆ ಮತ್ತು ಅಮಿತ್ರರನ್ನು ಪ್ರಶಂಸಿಸುವುದರ ಮೂಲಕ ತನ್ನ ಗುಟ್ಟನ್ನು ಅಡಗಿಸಿಟ್ಟುಕೊಳ್ಳುತ್ತಾನೆ. ನಾಚಿಕೆಯಿಂದಲಾದರೂ ಅವನ ಬಾಯಿಯು ಏಕೆ ಮುಚ್ಚುವುದಿಲ್ಲ? ನೀನು ಏನನ್ನು ಬಯಸಿದ್ದೆಯೋ ಅದನ್ನು ಇಂದು ಮಾತನಾಡುತ್ತಿದ್ದೀಯೆ. ನಮ್ಮನ್ನು ಅಪಮಾನಿಸಬೇಡ. ನಿನ್ನ ಮನಸ್ಸಿನಲ್ಲೇನಿದೆ ಎನ್ನುವುದನ್ನು ನಾವು ತಿಳಿದಿದ್ದೇವೆ. ಇದೂವರೆಗೆ ಗಳಿಸಿರುವ ಗೌರವವನ್ನು ಉಳಿಸಿಕೋ. ಇನ್ನೊಬ್ಬರ ವ್ಯವಹಾರದಲ್ಲಿ ಹೆಚ್ಚು ತಲೆಹಾಕಬೇಡ. ನಾನೇ ಮಾಡುತ್ತಿದ್ದೇನೆ ಎಂದು ನನ್ನನ್ನು ದೂರಬೇಡ. ಅಂಥಹ ಕಠೋರ ಮಾತುಗಳಿಂದ ಸದಾ ನಮ್ಮನ್ನು ಹೀಯಾಳಿಸಬೇಡ. ನೀನು ಏನನ್ನು ಯೋಚಿಸುತ್ತಿದ್ದೀಯೆ ಎಂದು ನಾನು ಎಂದೂ ನಿನ್ನನ್ನು ಕೇಳಲಿಲ್ಲ. ನಿನ್ನನ್ನು ಬೀಳ್ಕೊಡುತ್ತೇನೆ. ನಮ್ಮ ತಾಳ್ಮೆಯು ಕಡಿಮೆಯಾಗುತ್ತಿದೆ. ಗುರುವು ಒಬ್ಬನೇ. ಎರಡನೆಯ ಗುರುವೇ ಇಲ್ಲ. ಆ ಗುರುವು ಗರ್ಭದಲ್ಲಿ ಮಲಗಿರುವ ಪುರುಷನಿಗೆ ಹೇಳಿಕೊಡುತ್ತಾನೆ. ಅವನ ಹೇಳಿಕೆಯಂತೆಯೇ, ನೀರು ಹೇಗೆ ಹರಿಯುತ್ತದೆಯೋ ಹಾಗೆ, ನಾನೂ ಕೂಡ ಹರಿಯುತ್ತೇನೆ. ತಲೆಯಿಂದ ಕಲ್ಲನ್ನು

ತುಂಡುಮಾಡುವವನಾಗಲೀ, ಅಥವಾ ಹಾವಿಗೆ ತಿನ್ನಿಸುವವನಾಗಲೀ ಏನು ಮಾಡಬೇಕೆಂದು ಅವನ ಅನುಶಾಸನವಿರುತ್ತದೆಯೋ ಅದರಂತೆಯೇ ಮಾಡುತ್ತಾನೆ. ಯಾರು ಬಲವಂತವಾಗಿ ಆಜ್ಞೆಯನ್ನು ನೀಡುತ್ತಾನೋ ಅವನನ್ನು ಅಮಿತ್ರನೆಂದು ತಿಳಿಯುತ್ತಾರೆ. ಪಂಡಿತನು ಮಿತ್ರನಂತೆ ವರ್ತಿಸುವವನ ಸಾಂಗತ್ಯವನ್ನು ಬಯಸುತ್ತಾನೆ. ಉರಿಯುತ್ತಿರುವ ಬೆಂಕಿಯನ್ನು ಹಚ್ಚಿದವನು ಮೊದಲೇ ಓಡಿ ಹೋಗದಿದ್ದರೆ ಉಳಿದಿರುವ ಭಸ್ಮವೂ ಅವನಿಗೆ ಕಾಣಲಿಕ್ಕೆ ಸಿಗುವುದಿಲ್ಲ. ದ್ವೇಷಿಸುವ ಶತ್ರುವಿನ ವರ್ಗದವನನ್ನು, ಅದರಲ್ಲೂ ವಿಶೇಷವಾಗಿ ಕೆಟ್ಟದ್ದನ್ನು ಬಯಸುವ ಮನುಷ್ಯನನ್ನು, ಎಂದೂ ಇಟ್ಟುಕೊಳ್ಳಬಾರದು. ನಿನಗಿಷ್ಟವಿದ್ದ ಕಡೆ ಹೋಗು. ಯಾಕೆಂದರೆ ಕೆಟ್ಟ ಹೆಂಡತಿಯು ಎಷ್ಟು ಒತ್ತಾಯಮಾಡಿದರೂ ಬಿಟ್ಟೇ ಹೋಗುತ್ತಾಳೆ."

ವಿದುರನು ಹೇಳಿದನು:

"ಇಷ್ಟು ಮಾತ್ರಕ್ಕೆ ಯಾರನ್ನು ತ್ಯಜಿಸುತ್ತಾರೋ ಅವರ ಸಖ್ಯವು ಅಂತ್ಯವಾಯಿತೆಂದು ಇವನಿಗೆ ಹೇಳು ರಾಜನ್! ರಾಜರ ಬುದ್ಧಿಯು ತಿರುಗುತ್ತಿರುತ್ತದೆ. ಸಂತವಿಸುತ್ತಾ ಮುಸಲದಿಂದ ಹೊಡೆಯುತ್ತಾರೆ. ರಾಜಪುತ್ರ! ನೀನು ಇನ್ನೂ ಬಾಲಕನೆಂದು ತಿಳಿದಿದ್ದೀಯೆ. ಬಾಲಕನಾದ ನೀನು

ನಾನೊಬ್ಬ ಮಂದಬುದ್ಧಿಯೆಂದು ತಿಳಿದಿದ್ದೀಯೆ. ಮೊದಲು ಒಬ್ಬನನ್ನು ಸ್ನೇಹಿತನನ್ನಾಗಿ ಮಾಡಿಕೊಂಡು ನಂತರ ಅವನನ್ನೇ ದೂಷಿಸುವವನು ಬಾಲಕನೇ ಸರಿ. ಶ್ರೋತ್ರಿಯ ಮನೆಯಲ್ಲಿ ದುಷ್ಟ ಸ್ತ್ರೀಯಿದ್ದರೆ ಹೇಗೋ ಹಾಗೆ ಮಂದಬುದ್ಧಿಯು ಯಾವ ಶ್ರೇಯಸ್ಸಿನೆಡೆಯೂ ಕೊಂಡೊಯ್ಯುವುದಿಲ್ಲ. ಆದರೆ ಅರುವತ್ತು ವರ್ಷದ ಪತಿಯು ಕುಮಾರಿಯೋರ್ವಳಿಗೆ ಹೇಗೋ ಹಾಗೆ ಇದು ಈ ಭರತರ್ಷಭನಿಗೆ ಇಷ್ಟವಾಗುವುದಿಲ್ಲ. ನೀನು ಮಾಡುವ ಎಲ್ಲ ಕಾರ್ಯಗಳ, ಅವು ಎಷ್ಟೇ ಹಿತವಾಗಿರಲಿ ಅಥವಾ ಅಹಿತವಾಗಿರಲಿ, ಪ್ರಿಯವಾದುದನ್ನು ಮಾತ್ರ ಕೇಳಲು ಬಯಸುತ್ತೀಯಾದರೆ ಸ್ತ್ರೀಯರಲ್ಲಿ, ಜಡರಲ್ಲಿ, ಪಂಗುಕರಲ್ಲಿ ಅಥವಾ ಅವರಂತೆ ಮೂಢರಾಗಿರುವವರಲ್ಲಿ ಹೋಗಿ ಕೇಳು. ನಿನಗೆ ಇಲ್ಲಿ ಅನುಪ್ರಿಯವಾಗಿ ಮಾತನಾಡುವ ಜನರು ಖಂಡಿತವಾಗಿಯೂ ದೊರೆಯುತ್ತಾರೆ. ಆದರೆ ಅಪ್ರಿಯವಾಗಿದ್ದರೂ ಒಳ್ಳೆಯ ಸಲಹೆಯನ್ನು ನೀಡುವವರು ದುರ್ಲಭ ಎಂದು ತಿಳಿದವರು ಹೇಳುತ್ತಾರೆ. ಒಡೆಯನಿಗೆ ಯಾವುದು ಇಷ್ಟ ಯಾವುದು ಇಷ್ಟವಿಲ್ಲ ಎನ್ನುವುದನ್ನು ಮರೆತು ತಾನು ಧರ್ಮದಲ್ಲಿದ್ದುಕೊಂಡು ಅಪ್ರಿಯವಾದರೂ ಉತ್ತಮ ಸಲಹೆಗಳನ್ನು ನೀಡುವವನಲ್ಲಿಯೇ ರಾಜನು ಸಹಾಯಕನನ್ನು ಕಾಣುತ್ತಾನೆ. ಆರೋಗ್ಯದಿಂದಿರಲು

ಕಟುಕಾದ, ತೀಕ್ಷ್ಣವಾದ, ಸುಡುತ್ತಿರುವ, ಕೆಟ್ಟವಾಸನೆಯ ದ್ರವವನ್ನು ಸಾತ್ವಿಕರು ಕುಡಿಯುತ್ತಾರೆ. ಆದರೆ ಕೆಟ್ಟವರು ಅದನ್ನೇ ನಿರಾಕರಿಸುತ್ತಾರೆ. ಇದನ್ನು ಕುಡಿದು ನಿನ್ನ ಸಿಟ್ಟನ್ನು ಶಾಂತಗೊಳಿಸು. ವೈಚಿತ್ರವೀರ್ಯನಿಗೆ ಮತ್ತು ಅವನ ಮಗನಿಗೆ ಶಾಶ್ವತ ಯಶಸ್ಸು ಮತ್ತು ಸಂಪತ್ತನ್ನು ಬಯಸುತ್ತೇನೆ. ಇದು ಹೀಗಿರುವಾಗ ನಾನು ನಿನಗೆ ನಮಸ್ಕರಿಸಿ ಬೀಳ್ಕೊಳ್ಳುತ್ತೇನೆ. ನನಗೂ ಕೂಡ ವಿಪ್ರರು ಅವರ ಅಶೀರ್ವದಗಳನ್ನು ನೀಡಲಿ. ಕಣ್ಣಿನಲ್ಲಿ ವಿಷಕಾರುವ ಹಾವುಗಳನ್ನು ಸಿಟ್ಟಿಗೆಬ್ಬಿಸಬಾರದು ಎಂದು ಪಂಡಿತರು ಹೇಳುತ್ತಾರೆ. ಅದನ್ನೇ ನಾನು ನಿನಗೆ ಹೇಳಲು ಪ್ರಯತ್ನಿಸಿದೆ."

## ದ್ರೌಪದಿಯನ್ನು ಸೋತುದು

ಶಕುನಿಯು ಹೇಳಿದನು:

"ಯುಧಿಷ್ಠಿರ! ಪಾಂಡವರ ಬಹಳಷ್ಟು ಸಂಪತ್ತನ್ನು ಸೋತಿದ್ದೀಯೆ. ಇನ್ನೂ ಸೋಲದೇ ಇದ್ದ ಸಂಪತ್ತು ಇದ್ದರೆ ಹೇಳು."

ಯುಧಿಷ್ಠಿರನು ಹೇಳಿದನು:

"ಸೌಬಲ! ನನ್ನಲ್ಲಿ ಅಸಂಖ್ಯ ಸಂಪತ್ತಿದೆ ಎಂದು ತಿಳಿ. ಶಕುನಿ! ನನ್ನ ಸಂಪತ್ತಿನ ಕುರಿತು ನೀನೇಕೆ ಕೇಳುತ್ತಿದ್ದೀಯೆ?

ಪಣವಿಡಲು ಲೆಕ್ಕ ಮಾಡಲಾಗದಷ್ಟು, ತೂಕಮಾಡಲಾಗದಷ್ಟು, ಕೋಟಿಗಟ್ಟಲೆ, ಪದ್ಮಗಟ್ಟಲೆ, ಅರ್ಬುದಗಟ್ಟಲೆ, ಸಮುದ್ರದ ನೀರಿನ ಹನಿಗಳನ್ನು ಹೇಗೆ ಲೆಖ್ಕಮಾಡಲು ಅಸಾಧ್ಯವೋ ಅಷ್ಟು ಧನ ನನ್ನಲ್ಲಿದೆ.! ಈ ನನ್ನ ಧನವನ್ನು ನಾನು ನಿನಗೆ ಕೊಡುತ್ತಿದ್ದೇನೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು "ಇದನ್ನೂ ಗೆದ್ದೆ!" ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

"ನನ್ನಲ್ಲಿ ಅಸಂಖ್ಯ ಹೆಚ್ಚು ಹಾಲನ್ನೀಯುವ ಗೋವುಗಳು, ಕುದುರೆಗಳು ಇವೆ. ಸಿಂಧುವಿನ ಪೂರ್ವಕ್ಕೆ ನಮ್ಮ ಬಣ್ಣದ ಜನರಲ್ಲಿರುವ ಎಲ್ಲವೂ ನನ್ನವೇ. ನನ್ನ ಈ ಧನವನ್ನೇ ನಿನಗೆ ನಾನು ನೀಡುತ್ತಿದ್ದೇನೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು "ಇದನ್ನೂ ಗೆದ್ದೆ!" ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

"ರಾಜನ್! ಇನ್ನು ನನ್ನಲ್ಲಿ ಉಳಿದಿರುವ ಧನವೆಂದರೆ ನನ್ನ ನಗರ, ಜನಪದ, ಬ್ರಾಹ್ಮಣರದ್ದನ್ನು ಬಿಟ್ಟು ಉಳಿದ ಭೂಮಿ, ಬ್ರಾಹ್ಮಣರನ್ನು ಬಿಟ್ಟು ಉಳಿದ ನಾಗರೀಕರು. ನನ್ನ ಇವೆಲ್ಲವನ್ನೂ ನಿನಗೆ ನಾನು ಕೊಡುತ್ತಿದ್ದೇನೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು "ಇದನ್ನೂ ಗೆದ್ದೆ!" ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

> "ರಾಜನ್! ಇಗೋ ರಾಜಪುತ್ರರು ಧರಿಸಿ ಶೋಭಿಸುತ್ತಿರುವ ಎಲ್ಲ ಕುಂಡಲಗಳು, ಎದೆ ಕವಚಗಳು, ಅಂಗವಿಭೂಷಣಗಳು. ಈ ನನ್ನ ಧನವನ್ನು ನಿನಗೆ ನಾನು ಕೊಡುತ್ತಿದ್ದೇನೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು "ಇದನ್ನೂ ಗೆದ್ದೆ!" ಎಂದು ಯುಧಿಷ್ಠಿರನಿಗೆ ಹೇಳಿದನು. ಯುಧಿಷ್ಠಿರನು ಹೇಳಿದನು:

> "ಶ್ಯಾಮವರ್ಣಿ ಲೋಹಿತಾಕ್ಷ ಸಿಂಹಸ್ಕಂಧ ಮಹಾಭುಜ ಯುವಕ ನಕುಲ ಮತ್ತು ಅವನ ಒಡೆತನದಲ್ಲಿರುವ ಎಲ್ಲ ಧನವೂ ನನ್ನ ಈ ಒಂದು ಕೈಗೆ."

ಶಕುನಿಯು ಹೇಳಿದನು:

> "ರಾಜನ್! ಆದರೆ ರಾಜಪುತ್ರ ನಕುಲನು ನಿನ್ನ ಪ್ರಿಯಕರನು. ಈ ಪಣವನ್ನೂ ನಾವು ಗೆದ್ದರೆ ನಿನ್ನಲ್ಲಿ ಪಣವಿಡಲು ಬೇರೆ ಏನಿದೆ?"

ಇದನ್ನು ಕೇಳಿದ ಶಕುನಿಯು ದಾಳಗಳೊಂದಿಗೆ ಮಾತನಾಡಿದನು.

ನಂತರ ಶಕುನಿಯು ಯುಧಿಷ್ಠಿರನಿಗೆ "ಇದನ್ನೂ ಗೆದ್ದೆ!" ಎಂದು ಕೂಗಿ ಹೇಳಿದನು. ಯುಧಿಷ್ಠಿರನು ಹೇಳಿದನು:

"ಈ ಸಹದೇವನು ಧರ್ಮವನ್ನು ಹೇಳಿಕೊಡುತ್ತಾನೆ. ಇವನು ಲೋಕದಲ್ಲಿ ಪಂಡಿತನೆಂದು ಕರೆಯಲ್ಪಟ್ಟಿದ್ದಾನೆ. ಇದಕ್ಕೆ ಅನರ್ಹನಾದ ಈ ಪ್ರಿಯ ರಾಜಪುತ್ರನನ್ನು ಅಪ್ರಿಯನ ಹಾಗೆ ನಾನು ನಿನಗೆ ಕೊಡುತ್ತಿದ್ದೇನೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು "ಇದನ್ನೂ ಗೆದ್ದೆ!" ಎಂದು ಯುಧಿಷ್ಠಿರನಿಗೆ ಹೇಳಿದನು. ಶಕುನಿಯು ಹೇಳಿದನು:

"ರಾಜನ್! ನಿನಗೆ ಪ್ರಿಯರಾದ ಮಾದ್ರೀಪುತ್ರರೀರ್ವರನ್ನೂ ನಾನು ಗೆದ್ದೆ. ಆದರೂ ಭೀಮಸೇನ ಮತ್ತು ಧನಂಜಯರಲ್ಲಿ ನಿನಗೆ ಹೆಚ್ಚಿನ ಪ್ರೀತಿಯಿದೆ ಎಂದು ನನಗನ್ನಿಸುತ್ತದೆ."

ಯುಧಿಷ್ಠಿರನು ಹೇಳಿದನು:

"ನ್ಯಾಯವಾದುದನ್ನು ನೋಡದೇ ಅಧರ್ಮದಲ್ಲಿ ನಡೆದುಕೊಳ್ಳುತ್ತಿದ್ದೀಯೆ. ಮೂಢ! ಸುಮನಸ್ಕರಾದ ನಮ್ಮಲ್ಲಿ ಭೇದವನ್ನು ಉಂಟುಮಾಡಲು ಬಯಸುತ್ತಿದ್ದೀಯೆ."

ಶಕುನಿಯು ಹೇಳಿದನು:

"ಮತ್ತನಾದವನು ಹಳ್ಳದಲ್ಲಿ ಬೀಳುತ್ತಾನೆ.

ಪ್ರಮತ್ತನಾದವನು ಮರಕ್ಕೇ ಎಡವುತ್ತಾನೆ. ರಾಜನ್! ನೀನು ಜ್ಯೇಷ್ಠ. ಹಿರಿಯವನು. ನಿನಗೆ ನನ್ನ ವಂದನೆಗಳು. ಜೂಜಾಡುವವರು ಹುಚ್ಚರಂತೆ ಮಾತನಾಡುತ್ತಾರೆ ಮತ್ತು ಕನಸಿನಲ್ಲಿಯೂ ನನಸಿನಲ್ಲಿಯೂ ಕಂಡಿರದಂಥಹ ದೃಶ್ಯಗಳನ್ನು ಕಾಣುತ್ತಾರೆ."

ಯುಧಿಷ್ಠಿರನು ಹೇಳಿದನು:

"ಶಕುನಿ! ಯುದ್ಧದಲ್ಲಿ ನಮ್ಮನ್ನು ನಾವೆಯಂತೆ ಪಾರುಮಾಡಿ ರಿಪುಗಳನ್ನು ಜಯಿಸಿದ ತರಸ್ವೀ ಲೋಕವೀರ ಮತ್ತು ಇದಕ್ಕೆ ಅನರ್ಹನಾದ ಫಲ್ಗುನನನ್ನು ನಿನಗೆ ಕೊಡುತ್ತಿದ್ದೇನೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು "ಇದನ್ನೂ ಗೆದ್ದೆ!" ಎಂದು ಯುಧಿಷ್ಠಿರನಿಗೆ ಹೇಳಿದನು. ಶಕುನಿಯು ಹೇಳಿದನು:

"ಇಗೋ! ಈ ಪಾಂಡವ ಧನುರ್ಧರ, ಪಾಂಡವ ಸವ್ಯಸಾಚಿಯನ್ನು ನಾನು ಪರಾಜಿತಗೊಳಿಸಿದ್ದೇನೆ. ರಾಜನ್! ಇನ್ನು ಪಣವನ್ನಿಡಲು ನಿನ್ನಲ್ಲಿ ಉಳಿದಿರುವವನು ನಿನ್ನ ಪ್ರೀತಿಯ ಪಾಂಡವ ಭೀಮ."

ಯುಧಿಷ್ಠಿರನು ಹೇಳಿದನು:

"ವಜ್ರಿ ದಾನವಶತ್ರುವಿನಂತೆ ಒಬ್ಬನೇ ಯುದ್ಧದಲ್ಲಿ ನಮ್ಮ

ನಾಯಕನಾಗಿ ನಮಗೆ ಮಾರ್ಗದರ್ಶನ ನೀಡಿದ,
ಹುಬ್ಬುಗಳನ್ನು ಬಿಗಿಮಾಡಿ ಕೆಳಗೇ ದಿಟ್ಟಿಟ್ಟು
ನೋಡುತ್ತಿರುವ, ಸದಾ ಸಿಟ್ಟಿನಲ್ಲಿರುವ ಆ ಸಿಂಹಸ್ಕಂಧ
ಬಲದಲ್ಲಿ ಯಾರೂ ಸರಿಸಾಟಿಯನ್ನು ಹೊಂದದಿದ್ದ
ಗದಾಯೋದ್ಧರಲ್ಲಿಯೇ ಶ್ರೇಷ್ಠ ಅರಿಮರ್ದನ ರಾಜಪುತ್ರ
ಭೀಮಸೇನನನ್ನು, ಅವನು ಇದಕ್ಕೆ ಅನರ್ಹನಾದರೂ,
ರಾಜನ್! ನಾನು ನಿನಗೆ ನೀಡುತ್ತಿದ್ದೇನೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ ಆಟವಾಡಿದ ಶಕುನಿಯು "ಇದನ್ನೂ ಗೆದ್ದೆ!" ಎಂದು ಯುಧಿಷ್ಠಿರನಿಗೆ ಹೇಳಿದನು. ಶಕುನಿಯು ಹೇಳಿದನು:

"ಕೌಂತೇಯ! ನೀನು ಬಹಳ ಸಂಪತ್ತನ್ನೂ, ಭ್ರಾತೃಗಳನ್ನೂ,
ಆನೆ ಕುದುರೆಗಳನ್ನೂ ಸೋತಿದ್ದೀಯೆ. ಇನ್ನು
ಸೋತುಕೊಳ್ಳಲು ಬೇರೆ ಏನಾದರೂ ಇದ್ದರೆ ಹೇಳು."

ಯುಧಿಷ್ಠಿರನು ಹೇಳಿದನು:

"ನನ್ನ ಎಲ್ಲ ಭ್ರಾತೃಗಳಿಂದ ಗಾಢವಾಗಿ ಪ್ರೀತಿಸಲ್ಪಟ್ಟ
ನಾನೇ ಉಳಿದಿದ್ದೇನೆ. ಗೆದ್ದನಂತರ ನಾವು
ನಾಶವಾಗುವವರೆಗೆ ನಿನ್ನ ಸೇವೆ ದಾಸರಾಗಿರುತ್ತೇವೆ."

ಇದನ್ನು ಕೇಳಿ ಮೊದಲೇ ನಿಶ್ಚಯಿಸಿದಂತೆ ಮೋಸದಿಂದ

ಆಟವಾಡಿದ ಶಕುನಿಯು “ಇದನ್ನೂ ಗೆದ್ದೆ!” ಎಂದು ಯುಧಿಷ್ಠಿರನಿಗೆ ಹೇಳಿದನು. ಶಕುನಿಯು ಹೇಳಿದನು:

> “ನಿನ್ನನ್ನು ನೀನೇ ಸೋಲಿಸಿಕೊಂಡು ನೀನು ಒಂದು ಪಾಪಿಷ್ಟ ಕಾರ್ಯವನ್ನೇ ಎಸೆಗಿದ್ದೀಯೆ. ರಾಜನ್! ಇನ್ನೂ ಧನವು ಉಳಿದಿರುವಾಗ ತನ್ನನ್ನು ತಾನು ಸೋಲಿಸಿಕೊಳ್ಳುವುದು ಪಾಪ.”

ಅಲ್ಲಿ ಕುಳಿತಿದ್ದ ಸರ್ವ ಲೋಕವೀರರನ್ನೂ ಒಂದೊಂದೇ ಎಸೆತದಲ್ಲಿ ಗೆದ್ದಿದ್ದ ಆ ಅಕ್ಷಜ್ಞಾನಿ, ಜೂಜಿನಲ್ಲಿ ಚಾಕಚಕ್ಯತೆಯನ್ನು ಹೊಂದಿದ್ದ ಶಕುನಿಯು ಈ ರೀತಿ ಹೇಳಿದನು:

> “ಇನ್ನೂ ಒಂದು ಎಸೆತವನ್ನು ಗೆಲ್ಲಲು ನಿನ್ನ ಪ್ರಿಯ ದೇವಿಯಿದ್ದಾಳೆ. ಕೃಷ್ಣಾ ಪಾಂಚಾಲಿಯನ್ನು ಪಣವನ್ನಾಗಿಟ್ಟು ನಿನ್ನನ್ನು ಪುನಃ ಗೆಲ್ಲು.”

ಯುಧಿಷ್ಠಿರನು ಹೇಳಿದನು:

> “ಗಾತ್ರದಲ್ಲಿ ಅತಿ ಸಣ್ಣವಳೂ ಅತಿ ದೊಡ್ಡವಳೂ ಆಗಿಲ್ಲದ, ಅತಿ ಕಪ್ಪೂ ಅಥವಾ ಅತಿ ಕೆಂಪೂ ಅಲ್ಲದ, ಪ್ರೇಮದಿಂದ ಕಣ್ಣುಗಳು ಕೆಂಪಾಗಿರುವ ಅವಳನ್ನು ನಾನು ನಿನಗೆ ಪಣವನ್ನಾಗಿ ಇಡುತ್ತಿದ್ದೇನೆ. ರೂಪದಲ್ಲಿ ಶ್ರೀಯ ಸಮಾನ ಅವಳಿಗೆ ಶರತ್ಕಾಲ ಕಮಲದ ಎಸಳುಗಳಂಥಹ

ಕಣ್ಣುಗಳಿವೆ. ಅವಳು ಶರತ್ಕಾಲ ಕಮಲದ ಸುಗಂಧವನ್ನು ಸೂಸುತ್ತಾಳೆ, ಶರತ್ಕಾಲ ಕಮಲಗಳನ್ನು ಸೇವಿಸುತ್ತಾಳೆ. ಕ್ರೂರತ್ವವೆನ್ನುವುದೇ ಇಲ್ಲದ ಅವಳು ಪುರುಷರು ಇಚ್ಛಿಸುವ ಸ್ತ್ರೀಯಂತೆ ರೂಪಸಂಪದಳು ಮತ್ತು ಶೀಲಸಂಪದಳು. ಕೊನೆಯಲ್ಲಿ ಮಲಗಿ ಮೊದಲೇ ಏಳುವ ಅವಳು ಗೋಪಾಲಕರು ಮತ್ತು ಆಡು ಮೇಯಿಸುವ ಯಾರಿಗೆ ಏನನ್ನು ಮಾಡಬೇಕು ಏನನ್ನು ಮಾಡಬಾರದು ಎನ್ನುವುದನ್ನು ತಿಳಿದಿದ್ದಾಳೆ. ಬೆವರಿದ ಅವಳ ಪದ್ಮವಕ್ತ್ರವು ಮಲ್ಲಿಕದಂತೆ ಬೆಳಗುತ್ತದೆ, ವೇದಿಯಂಥಹ ನಡುವಿರುವ ಅವಳು ದೀರ್ಘಕೇಶೀ ಮತ್ತು ತಾಮ್ರಾಕ್ಷೀ. ಅವಳ ದೇಹದಮೇಲೆ ಸ್ವಲ್ಪವೂ ರೋಮಗಳಿಲ್ಲ. ಸೌಬಲ! ಈ ಎಲ್ಲ ವಿವಿಧ ಗುಣಗಳನ್ನು ಹೊಂದಿದ ಸುಮಧ್ಯಮೆ ಚಾರ್ವಾಂಗಿ ದ್ರೌಪದಿ ಪಾಂಚಾಲಿಯನ್ನು ನಾನು ಪಣವಾಗಿ ಇಡುತ್ತಿದ್ದೇನೆ.”

ಧರ್ಮರಾಜನು ಈ ರೀತಿ ಮಾತನ್ನಾಡಲು ಸಭೆಯಲ್ಲಿರುವ ಹಿರಿಯರೆಲ್ಲರೂ “ಧಿಕ್ಕಾರ! ಧಿಕ್ಕಾರ!” ಎಂದು ಕೂಗಿದರು. ಆ ಸಭೆಯೇ ಕಂಪಿಸಿತು. ರಾಜರುಗಳು ತಮ್ಮ ತಮ್ಮೊಳಗೇ ಮಾತನಾಡಿಕೊಳ್ಳತೊಡಗಿದರು. ಭೀಷ್ಮ, ದ್ರೋಣ ಕೃಪ ಮೊದಲಾದವರು ಬೆವರಿನಲ್ಲಿ ಮುಳುಗಿದರು. ವಿದುರನು ಶಕ್ತಿಯನ್ನು

ಕಳೆದುಕೊಂಡವನಂತೆ ತಲೆಯನ್ನು ಹಿಡಿದುಕೊಂಡು, ಕೆಳಗೆ ನೋಡುತ್ತಾ, ಸರ್ಪದಂತೆ ನಿಟ್ಟಿಸುರು ಬಿಡುತ್ತಾ ಯೋಚನೆಯಲ್ಲಿ ತೊಡಗಿದನು. ಆದರೆ ಸಂಹೃಷ್ಟ ಧೃತರಾಷ್ಟ್ರನು ತನ್ನ ಆಕಾರವನ್ನು ರಕ್ಷಿಸಲು ಅಸಮರ್ಥನಾಗಿ ಪುನಃ ಪುನಃ

"ಅವನು ಗೆದ್ದನೇ? ಅವನು ಗೆದ್ದನೇ?"

ಎಂದು ಕೇಳುತ್ತಿದ್ದನು. ಕರ್ಣ, ದುಃಶಾಸನ ಮೊದಲಾದವರು ಅತ್ಯಂತ ಹರ್ಷಿತರಾದರು. ಆದರೆ ಸಭೆಯಲ್ಲಿರುವ ಇತರರ ಕಣ್ಣುಗಳಲ್ಲಿ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ಸೌಬಲನು ಏನೂ ವಿಚಾರಮಾಡದೇ ಗೆಲುವಿನ ಮದೋತ್ಕಟನಾಗಿ, "ನಾನು ಗೆದ್ದೆ!" ಎಂದು ಹೇಳುತ್ತಾ ದಾಳಗಳನ್ನು ಉರುಳಿಸಿದನು.

ದುರ್ಯೋಧನನು ಹೇಳಿದನು:

"ಕ್ಷತ್ತ! ಇಲ್ಲಿ ಬಾ! ಪಾಂಡವರು ಗೌರವಿಸುವ ಪ್ರಿಯ ಭಾರ್ಯೆ ದ್ರೌಪದಿಯನ್ನು ಕರೆದುಕೊಂಡು ಬಾ! ತಕ್ಷಣವೇ ಅವಳು ನಮ್ಮ ಇತರ ದಾಸಿಯರೊಂದಿಗೆ ಮನೆಯನ್ನು ಗುಡಿಸಲಿ ಮತ್ತು ಇತರ ಕೆಲಸಗಳನ್ನು ಮಾಡಲಿ. ಅದನ್ನು ನೋಡಲು ಏನು ಸಂತೋಷ!"

ವಿದುರನು ಹೇಳಿದನು:

"ನಿನ್ನಂಥವರಿಂದ ನಡೆಯಬಾರದ್ದುದು

ನಡೆದುಹೋಗುತ್ತದೆ. ಮೂಢ! ಪಾಶವನ್ನು ಸುತ್ತಿಹಾಕಿಕೊಳ್ಳುತ್ತಿದ್ದೀಯೆ ಎನ್ನುವುದು ನಿನಗೆ ತಿಳಿಯುತ್ತಿಲ್ಲ. ಸಿಟ್ಟಾದ ಹುಲಿಯ ಮೇಲೆ ಬೀಳುವ ಜಿಂಕೆಯಂತೆ ನೀನು ತಿಳಿಯದೇ ಪ್ರಪಾತದಲ್ಲಿ ನೇತಾಡುತ್ತಿದ್ದೀಯೆ. ಮಹಾವಿಷದಿಂದ ತುಂಬಿದ ವಿಷಸರ್ಪಗಳನ್ನು ತಲೆಯಮೇಲೆ ಹೊತ್ತಿದ್ದೀಯೆ. ಮಂದಾತ್ಮ! ಅವರನ್ನು ಇನ್ನೂ ಸಿಟ್ಟಿಗೆಬ್ಬಿಸಬೇಡ. ನೀನು ಯಮಕ್ಷಯಕ್ಕೆ ಹೋಗುತ್ತೀಯೆ. ತನ್ನ ಮೇಲಿನ ಒಡೆತನವನ್ನು ಕಳೆದುಕೊಂಡ ನಂತರವೇ ರಾಜನು ಅವಳನ್ನು ಪಣವಾಗಿಟ್ಟಿದುದರಿಂದ ಕೃಷ್ಣೆಯು ಇನ್ನೂ ದಾಸಿಯಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ತನ್ನನ್ನೇ ನಾಶಪಡಿಸುವ ಬಿದಿರು ಹೇಗೆ ಹೂವನ್ನು ನೀಡುತ್ತದೆಯೋ ಹಾಗೆ ರಾಜ ಧೃತರಾಷ್ಟ್ರ ಪುತ್ರನು ಫಲವನ್ನು ನೀಡುತ್ತಿದ್ದಾನೆ. ಯಮಾಂತಕಾಲವನ್ನು ಪ್ರಾಪ್ತಿ ಹೊಂದಿದ ಇವನಿಗೆ ದ್ಯೂತವು ಮಹಾಭಯಂಕರ ವೈರಕ್ಕೆ ದಾರಿಮಾಡಿಕೊಡುತ್ತದೆ ಎನ್ನುವುದನ್ನು ತಿಳಿದಿಲ್ಲ. ಕೆಟ್ಟದ್ದನ್ನು ಮಾಡಬೇಡ, ಕೆಟ್ಟದ್ದನ್ನು ಮಾತನಾಡಬೇಡ. ಏನೂ ಇಲ್ಲದವನಿಂದ ಎಲ್ಲವನ್ನೂ ಕಸಿಯಬೇಡ. ಘಾಯಗೊಂಡಿರುವವನಿಗೆ ಏನನ್ನು ಹೇಳಿದರೆ ಇನ್ನೊಬ್ಬರಿಗೆ ದುಃಖವನ್ನುಂಟುಮಾಡುತ್ತದೆಯೋ ಅಂಥಹ

ಮಾತುಗಳನ್ನಾಡಬೇಡ. ಬಾಯಿಂದ ಹೊರಬರುವ ಮಾತುಗಳು ಯಾರನ್ನು ತಲುಪುತ್ತದೆಯೋ ಅವನು ಹಗಲು ರಾತ್ರಿ ಶೋಕಿಸುತ್ತಾನೆ. ಇನ್ನೊಬ್ಬರಿಗೆ ನೋವನ್ನುಂಟುಮಾಡುವ ಮಾತುಗಳನ್ನು ಪಂಡಿತರು ಆಡುವುದೇ ಇಲ್ಲ. ಕಳೆದು ಹೋದ ಖಡ್ಗವನ್ನು ಒಂದು ಆಡು ಭೂಮಿಯನ್ನು ಪರಚಿ ಅಗೆದು ತೆಗೆಯಿತಂತೆ. ಆದರೆ ಮುಂದೆ ಅದೇ ಖಡ್ಗವು ಅದರ ಕುತ್ತಿಗೆಯನ್ನು ಕಡಿಯುವ ಘೋರ ಸಾಧನವಾಯಿತಂತೆ. ಆದುದರಿಂದ ಪಾಂಡುಪುತ್ರರೊಂದಿಗೆ ವೈರವನ್ನು ಬಗೆಯಬೇಡ. ಅಂಥವರು ವನೇಚರರ ಮೇಲೆ ಅಥವಾ ಗೃಹಸ್ಥರ ಮೇಲೆ ಅಥವಾ ಪರಿಪೂರ್ಣ ವಿಧ್ಯಾವಂತರಾದ ತಪಸ್ವಿಗಳ ಮೇಲೆ ಒಳ್ಳೆಯದನ್ನಾಗಲೀ ಕೆಟ್ಟದ್ದನ್ನಾಗಲೀ ಮಾತನಾಡುವುದಿಲ್ಲ. ಆದರೆ ಅವರು ನಾಯಿಗಳಂತೆ ಸದಾ ಬೊಗಳುತ್ತಿರುತ್ತಾರೆ. ಇದೊಂದು ಘೋರ ನರಕದ ಕಡೆ ತೆರೆಯುವ ದ್ವಾರ ಎಂದು ನಿನಗೆ ತಿಳಿದಿಲ್ಲ. ಈ ದ್ಯೂತದೊಂದಿಗೆ ಅಲ್ಲಿಗೆ ನಿನ್ನನ್ನು ದುಃಶಾಸನನ ಸಹಿತ ಅಲ್ಲಿ ಇನ್ನೂ ಬಹಳಷ್ಟು ಕುರುಗಳು ಹಿಂಬಾಲಿಸುವರು. ಮೂಢ ರಾಜ ಧೃತರಾಷ್ಟ್ರನ ಪುತ್ರನು ಪದ್ಯರೂಪದ ನನ್ನ ಈ ಮಾತುಗಳನ್ನು ಕೇಳದಿದ್ದರೆ ಹಲಗೆಗಳು ಮುಳುಗುತ್ತವೆ ಮತ್ತು ಕಲ್ಲುಗಳು ತೇಲುತ್ತವೆ. ಹಡಗುಗಳು ಸಮುದ್ರದಲ್ಲಿ ಶಾಶ್ವತವಾಗಿ ದಾರಿತಪ್ಪುತ್ತವೆ.

> ತಿಳಿದಿರುವವರ ಮತ್ತು ಸುಹೃದಯರ ಪದ್ಯರೂಪದ ಮಾತುಗಳನ್ನು ಕೇಳದ ಮತ್ತು ಲೋಭವನ್ನು ವೃದ್ಧಿಸುತ್ತಿರುವ ಇದು ಕುರುಗಳ ಸುದಾರುಣ, ಸರ್ವಹರ ವಿನಾಶವನ್ನು ತರುತ್ತದೆ.”

“ಕ್ಷತ್ತನಿಗೆ ಧಿಕ್ಕಾರ!” ಎಂದು ಹೇಳಿ, ದರ್ಪಮತ್ತ ಧೃತರಾಷ್ಟ್ರ ಪುತ್ರನು ಸಭೆಯಲ್ಲಿರುವ ಪ್ರತಿಕಾಮಿಯನ್ನು ನೋಡಿ, ಆ ಪರಮ ಆರ್ಯರ ಮಧ್ಯದಲ್ಲಿ ಹೇಳಿದನು:

> “ಪ್ರತಿಕಾಮಿ! ನೀನು ಹೋಗಿ ದ್ರೌಪದಿಯನ್ನು ಕರೆದು ತಾ. ಪಾಂಡವರಿಂದ ನಿನಗೆ ಏನೂ ಭಯವಿಲ್ಲ. ಈ ಕ್ಷತ್ತನು ತುಂಬಾ ಮೃದು ಮತ್ತು ಇದರ ವಿರುದ್ಧ ಮಾತನಾಡುತ್ತಾನೆ. ನಮ್ಮ ವೃದ್ಧಿಯನ್ನು ಇವನು ಎಂದೂ ಬಯಸಲಿಲ್ಲ.”

ರಾಜವಚನವನ್ನು ಕೇಳಿದ ಶೀಘ್ರವೇ ಆ ಸೂತ ಪ್ರತಿಕಾಮಿಯು ಹೊರಗೆ ಹೋದನು. ಅವನು ಸಿಂಹದ ಗುಹೆಯನ್ನು ಒಂದು ನಾಯಿಯು ಹೊಗುವಂತೆ ಪಾಂಡವರ ಮಹಿಷಿಯ ಮನೆಯನ್ನು ಪ್ರವೇಶಿಸಿದನು.

## ದ್ರೌಪದಿಯ ಪ್ರಶ್ನೆಗಳು

ಪ್ರತಿಕಾಮಿಯು ಹೇಳಿದನು:

> “ದ್ರೌಪದೀ! ದ್ಯೂತಮದಮತ್ತ ಯುಧಿಷ್ಠಿರನು ನಿನ್ನನ್ನು

ದುರ್ಯೋಧನನಿಗೆ ಸೋತನು. ಬಂದು ಧೃತರಾಷ್ಟ್ರನ ಮನೆಯನ್ನು ಪ್ರವೇಶಿಸು. ಅಲ್ಲಿ ನಿನಗೆ ನಿನ್ನ ಕೆಲಸಗಳ ಕುರಿತು ಹೇಳುತ್ತೇನೆ."

ದ್ರೌಪದಿಯು ಹೇಳಿದಳು:

"ಪ್ರತಿಕಾಮಿ! ನನ್ನಲ್ಲಿ ಈ ರೀತಿ ಹೇಗೆ ಮಾತನಾಡುತ್ತಿದ್ದೀಯೆ? ಯಾವ ರಾಜಪುತ್ರನು ತನ್ನ ಪತ್ನಿಯನ್ನು ಪಣವಾಗಿ ಇಡುತ್ತಾನೆ? ಮೂಢ ರಾಜನು ದ್ಯೂತಮದದಲ್ಲಿ ಮತ್ತನಾಗಿದ್ದಿರಬಹುದು. ಅವನಿಗೆ ಪಣವಿಡಲು ಬೇರೆ ಏನೂ ಉಳಿದಿರಲಿಲ್ಲವೇ?"

ಪ್ರತಿಕಾಮಿಯು ಹೇಳಿದನು:

"ಬೇರೆ ಏನೂ ಪಣವನ್ನಾಗಿಡಲು ಇಲ್ಲದಿದ್ದಾಗಲೇ ಅಜಾತಶತ್ರು ಪಾಂಡವನು ನಿನ್ನನ್ನು ಪಣವಾಗಿಟ್ಟನು. ಇದಕ್ಕೆ ಮೊದಲು ರಾಜನು ತನ್ನ ಸಹೋದರರನ್ನು ಮತ್ತು ನಂತರ ಸ್ವಯಂ ತನ್ನನ್ನೇ ಕಳೆದುಕೊಂಡು ರಾಜಪುತ್ರಿ ನಿನ್ನನ್ನು ಪಣವನ್ನಾಗಿಟ್ಟನು."

ದ್ರೌಪದಿಯು ಹೇಳಿದಳು:

"ಸೂತಜ! ಹಾಗಾದರೆ ನೀನು ಜೂಜಾಡುವ ಸಭೆಗೆ ಹೋಗಿ ಕೇಳು: "ಭಾರತ! ಮೊದಲು ನೀನು ಯಾರನ್ನು ಸೋತೆ?

ನಿನ್ನನ್ನೋ ಅಥವಾ ನನ್ನನ್ನೋ?" ಇದನ್ನು ತಿಳಿದು ನಂತರ ಬಂದು ನನ್ನನ್ನು ಕರೆದುಕೊಂಡು ಹೋಗು."

ಸಭೆಗೆ ಹೋಗಿ ಅವನು ದ್ರೌಪದಿಯ ಪ್ರಶ್ನೆಯನ್ನು ಕೇಳಿದನು:

""ಯಾರ ಒಡೆಯನೆಂದು ನೀನು ನನ್ನನ್ನು ಸೋತೆ?" ಎಂದು ದ್ರೌಪದಿಯು ಕೇಳುತ್ತಾಳೆ. "ಮೊದಲು ಯಾರನ್ನು ಸೋತೆ? ನಿನ್ನನ್ನೋ ಅಥವಾ ನನ್ನನ್ನೋ?""

ಆದರೆ ಯುಧಿಷ್ಠಿರನು ಜೀವಹೋದವನಂತೆ ಹಂದಾಡದೇ ಕುಳಿತಿದ್ದನು. ಅವನು ಸೂತನಿಗೆ ಒಳ್ಳೆಯ ಅಥವಾ ಕೆಟ್ಟ ಯಾವುದೇ ಮಾತನ್ನೂ ಹೇಳಲಿಲ್ಲ.

ದುರ್ಯೋಧನನು ಹೇಳಿದನು:

"ಕೃಷ್ಣೆ ಪಾಂಚಾಲಿಯು ಇಲ್ಲಿಗೇ ಬಂದು ಅವಳೇ ಈ ಪ್ರಶ್ನೆಯನ್ನು ಕೇಳಲಿ. ಅವಳು ಏನು ಹೇಳುವವಳಿದ್ದಾಳೆ ಮತ್ತು ಇವನು ಏನು ಹೇಳುವವನಿದ್ದಾನೆ ಎನ್ನುವುದನ್ನು ಇಡೀ ಸಭೆಯೇ ಕೇಳಲಿ."

ದುರ್ಯೋಧನನ ವಶಾನುಗ ಆ ಸೂತ ಪ್ರತಿಕಾಮಿಯು ರಾಜಭವನಕ್ಕೆ ಹೋಗಿ ನಡುಗುತ್ತಾ ದ್ರೌಪದಿಗೆ ಹೇಳಿದನು:

"ರಾಜಪುತ್ರಿ! ಸಭೆಯಲ್ಲಿರುವವರು ನಿನ್ನನ್ನು ಕರೆಯುತ್ತಿದ್ದಾರೆ. ಕೌರವರ ನಾಶವು ಪ್ರಾಪ್ತವಾಗಿದೆ ಎಂದು

ನನಗನ್ನಿಸುತ್ತದೆ. ರಾಜಪುತ್ರಿ! ನೀನು ಸಭೆಗೆ ಬರಬೇಕು ಎನ್ನುವ ಅವನು ನಮ್ಮ ಸಮೃದ್ಧಿಯನ್ನು ಪಾಲಿಸುವವನಲ್ಲ."

ದ್ರೌಪದಿಯು ಹೇಳಿದಳು:

"ಇದು ಸಂವಿಧಾತನು ನಿಶ್ಚಯಿಸಿದುದಲ್ಲವೇ! ಎರಡೂ ಸ್ಪರ್ಷಗಳು ಧೀರ-ಬಾಲಕರಿಬ್ಬರನ್ನೂ ಮುಟ್ಟುತ್ತವೆ. ಅವನು ಹೇಳಿದಂತೆ ಲೋಕದಲ್ಲಿ ಧರ್ಮವೊಂದೇ ಶ್ರೇಷ್ಠವಾದುದು. ಧರ್ಮವನ್ನು ಕಾಪಾಡಿದರೆ ಮಾತ್ರ ನಮಗೆ ಶಾಂತಿಯು ದೊರೆಯುತ್ತದೆ."

ಯುಧಿಷ್ಠಿರನಾದರೋ ದುರ್ಯೋದನನು ಏನು ಮಾಡಬೇಕೆಂದಿದ್ದಾನೆ ಎನ್ನುವುದನ್ನು ಕೇಳಿ, ಓರ್ವ ಸಮ್ಮತ ದೂತನನ್ನು ದ್ರೌಪದಿಯ ಕಡೆ ಕಳುಹಿಸಿದನು. ರಜಸ್ವಲೆಯಾದ ಏಕವಸ್ತ್ರದಲ್ಲಿದ್ದ ಪಾಂಚಾಲಿಯು ರೋದಿಸುತ್ತಾ ಸಭೆಗೆ ಆಗಮಿಸಿ ತನ್ನ ಮಾವನ ಎದುರು ನಿಂತುಕೊಂಡಳು. ಅವರ ಮುಖವನ್ನು ನೋಡಿದ ರಾಜ ದುರ್ಯೋಧನನು ಹೃಷ್ಟನಾಗಿ ಸೂತನಿಗೆ ಹೇಳಿದನು:

"ಪ್ರತಿಕಾಮಿ! ಅವಳನ್ನು ಇಲ್ಲಿಗೆ ಕರೆದುಕೊಂಡು ಬಾ. ಕುರುಗಳು ಅವಳೊಡನೆ ಪ್ರತ್ಯಕ್ಷವಾಗಿ ಮಾತನಾಡುತ್ತಾರೆ."

ಅವನ ವಶಾನುಗಾಮಿ ಸೂತನು ದ್ರುಪದಾತ್ಮಜರ ಕೋಪದಿಂದ ಭಯಭೀತನಾಗಿ ತನ್ನ ಮಾನವನ್ನು ತೊರೆದು ಪುನಃ ಸಭೆಗೆ

ಹೇಳಿದನು:

> “ಕೃಷ್ಣೆಯೊಂದಿಗೆ ಮಾತನಾಡಲು ನಾನು ಯಾರು?”

ದುರ್ಯೋಧನನು ಹೇಳಿದನು:

> “ದುಃಶಾಸನ! ಈ ದಡ್ಡ ಸೂತಪುತ್ರನು ವೃಕೋದರನಿಗೆ ಹೆದರಿದ್ದಾನೆ. ನೀನೇ ಹೋಗಿ ಯಾಜ್ಞಸೇನಿಯನ್ನು ಎಳೆದು ತಾ. ಅಧಿಕಾರವನ್ನು ಕಳೆದುಕೊಂಡವರು ನಿನ್ನನ್ನು ಹೇಗೆ ತಡೆದಾರು?”

ಅಣ್ಣನನ್ನು ಕೇಳಿದ ರಾಜಪುತ್ರನು ಮೇಲೆದ್ದು ಕೋಪದಿಂದ ಕಣ್ಣುಕೆಂಪು ಮಾಡಿಕೊಂಡು ಆ ಮಹಾರಥಿಗಳ ಅರಮನೆಯನ್ನು ಪ್ರವೇಶಿಸಿ ರಾಜಪುತ್ರಿ ದ್ರೌಪದಿಗೆ ಹೇಳಿದನು:

> “ಪಾಂಚಾಲಿ ಕೃಷ್ಣೇ! ನಿನ್ನನ್ನು ಗೆದ್ದಾಗಿದೆ. ಬಾ. ಲಜ್ಜೆಯನ್ನು ತೊರೆದು ದುರ್ಯೋಧನನ್ನು ನೋಡು. ಇನ್ನು ನೀನು ಕುರುಗಳ ಸೇವೆ ಮಾಡುವೆ. ನಿನ್ನನ್ನು ಧರ್ಮಪೂರ್ವಕವಾಗಿಯೇ ಪಡೆದಿದ್ದಾಗಿದೆ. ನನ್ನೊಂದಿಗೆ ಸಭೆಗೆ ಬಾ.”

ಅವಳು ಮನಸ್ಸಿಲ್ಲದೇ ಎದ್ದು ಕೈಗಳಿಂದ ವಿವರ್ಣ ಮುಖವನ್ನು ಉಜ್ಜಿಕೊಂಡು ಆರ್ತಳಾಗಿ ರೋದಿಸುತ್ತಾ ಕುರುಪುಂಗವ ವೃದ್ಧ ರಾಜನ ಸ್ತ್ರೀಯರು ಇರುವ ಕಡೆ ಓಡಿದಳು. ಆಗ ತಕ್ಷಣವೇ




ರೋಷದಿಂದ ಗರ್ಜಿಸುತ್ತಾ ದುಃಶಾಸನನು ಅವಳ ಬಿಚ್ಚಿದ ದೀರ್ಘ ನೀಲ ಕೇಶದ ಮೂಲಕ ಆ ನರೇಂದ್ರಪತ್ನಿಯನ್ನು ಹಿಡಿದನು. ಮಹಾಕ್ರತು ರಾಜಸೂಯದ ಅವಭೃಥ ಜಲದಿಂದ ಮಂತ್ರೋಕ್ತವಾಗಿ ತೊಳೆಯಲ್ಪಟ್ಟ ಕೇಶವನ್ನು ಧೃತರಾಷ್ಟ್ರಜನು ಬಲವಂತವಾಗಿ ಎಳೆದು ಪಾಂಡವರ ವೀರ್ಯವನ್ನು ಅಲ್ಲಗಳೆದನು. ದುಃಶಾಸನನು ಅತಿಕೃಷ್ಣಕೇಶಿನಿ ಕೃಷ್ಣೆಯನ್ನು ಎಳೆದು ಸಭಾಸಮೀಪಕ್ಕೆ ತಂದು ನಾಥವತಿಯಾಗಿದ್ದರೂ ಅನಾಥೆಯಂತೆ ಅವಳನ್ನು ವಾಯುವು ಬಾಳೆಯ ಮರವನ್ನು ತಳ್ಳಿ ಉರುಳಿಸುವಂತೆ ತಳ್ಳಿದನು. ಅವಳನ್ನು

ಎಳೆದುಕೊಂಡು ಹೋಗುತ್ತಿರುವಾಗ ಅವಳು ತನ್ನ ದೇಹವನ್ನು ಬಗ್ಗಿಸಿಕೊಂಡು ಸಣ್ಣ ಸ್ವರದಲ್ಲಿ ಹೇಳಿದಳು:

> “ಇಂದು ನಾನು ರಜಸ್ವಲೆಯಾಗಿದ್ದೇನೆ. ಮೂಢ! ಒಂದೇ ಒಂದು ವಸ್ತ್ರದಲ್ಲಿದ್ದೇನೆ. ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಬೇಡ.”

ಆದರೆ ತನ್ನ ಶಕ್ತಿಯಿಂದ ಕಪ್ಪು ಕೇಶವನ್ನು ಹಿಡಿದು ಕೃಷ್ಣೆಯನ್ನು ಕೆಳಗೆ ತಳ್ಳಿದ ಅವನು

> “ಪಾರುಮಾಡಲು ಕೃಷ್ಣ, ಜಿಷ್ಣು, ಹರಿ ಮತ್ತು ನರ ಯಾರನ್ನಾದರೂ ಕೂಗಿ ಕರೆ. ಆದರೂ ನಾನು ನಿನ್ನನ್ನು ಎಳೆದೊಯ್ಯುತ್ತೇನೆ”

ಎಂದನು.

> “ಯಾಜ್ಞಸೇನಿ! ನೀನು ರಜಸ್ವಲೆಯಾಗಿರಬಹುದು, ಏಕಾಂಬರಿಯಾಗಿರಬದುದು ಅಥವಾ ವಿವಸ್ತ್ರಳಾಗಿರಬಹುದು. ದ್ಯೂತದಲ್ಲಿ ನಿನ್ನನ್ನು ಗೆದ್ದು ದಾಸಿಯನ್ನಾಗಿ ಮಾಡಿದ್ದೇವೆ. ಮತ್ತು ದಾಸಿಯರೊಂದಿಗೆ ನಮಗಿಷ್ಟಬಂದಂತೆ ವರ್ತಿಸುತ್ತೇವೆ.”

ಕೂದಲು ಕೆದರಿಹೋಗಿರಲು ವಸ್ತ್ರವು ಬೀಳುತ್ತಿರಲು ದುಃಶಾಸನನಿಂದ ಎಳೆದುಕೊಂಡು ಹೋಗಲ್ಪಟ್ಟ ಕೃಷ್ಣೆಯು ನಾಚಿಕೆ ಮತ್ತು ಸಿಟ್ಟಿನಿಂದ

ಸಣ್ಣಧ್ವನಿಯಲ್ಲಿ ಪುನಃ ಹೇಳಿದಳು:

“ಸಭೆಯಲ್ಲಿ ಸರ್ವರೂ ಇಂದ್ರ ಸಮಾನರು, ಶಾಸ್ತ್ರಗಳನ್ನು ಓದಿದವರು ಮತ್ತು ಕ್ರಿಯಾವಂತರಿದ್ದಾರೆ. ಸರ್ವರೂ ಹಿರಿಯರಾಗಿದ್ದು ನನ್ನ ಗುರುಸ್ಥಾನದಲ್ಲಿದ್ದಾರೆ. ಅವರ ಕಣ್ಣೆದುರು ನಾನು ಈ ರೀತಿ ನಿಲ್ಲಲಾರೆ! ಅನಾರ್ಯನಂತೆ ನಡೆದುಕೊಳ್ಳುತ್ತಿರುವವನೇ! ನನ್ನನ್ನು ಈ ರೀತಿ ವಿವಸ್ತ್ರಳನ್ನಾಗಿ ಮಾಡಿ ಅಪಮಾನಗೊಳಿಸಬೇಡ! ನಿನ್ನ ಸಹಾಯಕ್ಕೆಂದು ಇಂದ್ರನೊಂದಿಗೆ ದೇವತೆಗಳು ಬಂದರೂ ಈ ರಾಜಪುತ್ರರು ನಿನ್ನನ್ನು ಬಿಡಲಾರರು. ರಾಜ ಧರ್ಮಸುತನು ಧರ್ಮದಲ್ಲಿ ನಿರತನಾದವನು ಮತ್ತು ಧರ್ಮವು ನಿಪುಣರಿಗೂ ತಿಳಿಯದೇ ಸೂಕ್ಷ್ಮವಾದದ್ದು. ನನ್ನ ಪತಿಯ ಮಾತೂ ಕೂಡ ನನ್ನ ಸ್ವಗುಣಗಳನ್ನು ತೊರೆದು ಪರಮಾಣುಮಾತ್ರದ ದೋಷವನ್ನೂ ಕೂಡ ಬಯಸುವುದಿಲ್ಲ. ರಜಸ್ವಲೆಯಾಗಿರುವ ನನ್ನನ್ನು ಕುರುವೀರರ ಮಧ್ಯದಲ್ಲಿ ನೀನು ಈ ರೀತಿ ಎಳೆದುಕೊಂಡು ಹೋಗುವುದು ಅನಾರ್ಯವಾದುದು. ಇದಕ್ಕಾಗಿ ನಿನ್ನನ್ನು ಇಲ್ಲಿರುವ ಯಾರೂ ಗೌರವಿಸುವುದಿಲ್ಲ. ನಿಶ್ಚಯವಾಗಿಯೂ ನಿನ್ನ ಮನಸ್ಸಿನಲ್ಲಿರುವುದು ಅವರಿಗೆ ತಿಳಿದಿಲ್ಲ. ನಿನಗೆ ಧಿಕ್ಕಾರ! ಸಭೆಯಲ್ಲಿರುವ ಸರ್ವ ಕುರುಗಳೂ ಕುರುಧರ್ಮವನ್ನು

> ಉಲ್ಲಂಘಿಸುತ್ತಿರುವುದನ್ನು ನೋಡುತ್ತಿರುವರಲ್ಲಾ! ಭಾರತರ ಧರ್ಮ ಮತ್ತು ಕ್ಷತ್ರಿಯರಿಗಿರುವ ನಡವಳಿಕೆ ನಷ್ಟವಾಗಿ ಹೋಯಿತೇ! ದ್ರೋಣ ಮತ್ತು ಭೀಷ್ಮರಲ್ಲಿ ಸತ್ವವು ಉಳಿದಿಲ್ಲ ಎನ್ನುವುದು ನಿಶ್ಚಯ. ಹಾಗೆಯೇ ಮಹಾತ್ಮ ರಾಜನನ್ನೂ ಸೇರಿ ಕುರುವೃದ್ಧಮುಖ್ಯರು ಈ ಉಗ್ರ ಅಧರ್ಮವನ್ನು ಗಮನಿಸುತ್ತಿಲ್ಲವಲ್ಲಾ!”

ಹೀಗೆ ಕರುಣಾಜನಕವಾಗಿ ಮಾತನಾಡುತ್ತಿದ್ದ ಆ ಸುಮಧ್ಯಮೆಯು ತನ್ನ ಪತಿಯರನ್ನು ಹೀನ ಕೋಪ ದೃಷ್ಟಿಯಿಂದ ನೋಡಿದಳು ಮತ್ತು ಅವಳ ತುದಿಗಣ್ಣಿನ ಕುಪಿತ ದೃಷ್ಟಿಯು ಅವರ ಮೇಲೆ ಬೀಳಲು ಪಾಂಡವರ ಅಂಗಾಂಗಗಳು ಕೋಪಪರಿವೃತವಾದವು. ಕೃಷ್ಣೆಯ ಆರ್ತ ಮತ್ತು ಕೋಪಗಳಿಂದ ಕೂಡಿದ ತುದಿಗಣ್ಣಿನ ದೃಷ್ಟಿಯಷ್ಟು ಅವರಿಗೆ ರಾಜ್ಯ, ಧನ ಅಥವಾ ಪ್ರಮುಖ ರತ್ನಗಳನ್ನಾಗಲೀ ಕಳೆದುಕೊಂಡಿದ್ದುದು ದುಃಖವನ್ನು ಕೊಟ್ಟಿರಲಿಲ್ಲ. ಕೃಪಣರಾದ ತನ್ನ ಆ ಪತಿಗಳ ಮೇಲೆ ದೃಷ್ಟಿಹಾಯಿಸುತ್ತಿದ್ದ ಕೃಷ್ಣೆಯನ್ನು ನೋಡಿದ ದುಃಶಾಸನನು ಅವಳು ಮೂರ್ಛೆಹೋಗುವಷ್ಟು ವೇಗದಿಂದ ಅವಳನ್ನು ಹಿಡಿದು ಅಲ್ಲಾಡಿಸುತ್ತಾ ಉಗ್ರವಾಗಿ ನಗುತ್ತಾ ದಾಸಿ ಎಂದು ಕರೆದನು. ಅತೀವ ಹೃಷ್ಟನಾದ ಕರ್ಣನು ನಗುತ್ತಾ ಅದೇ ಶಬ್ಧವನ್ನು ಬಳಸಿ ಅವನ ಆ ಮಾತನ್ನು ಗೌರವಿಸಿದನು. ಗಾಂಧಾರರಾಜ ಸುಬಲನ ಪುತ್ರನೂ ಕೂಡ ಹಾಗೆಯೇ


Krishna.com
Copyright © The Bhaktivedanta Book Trust International, Inc. · www.Krishna.com

ದುಃಶಾಸನನನ್ನು ಅಭಿನಂದಿಸಿದನು. ಇವರಿಬ್ಬರು ಮತ್ತು ಧಾರ್ತರಾಷ್ಟ್ರನನ್ನು ಬಿಟ್ಟು ಸಭೆಯಲ್ಲಿ ಕುಳಿತಿದ್ದ ಎಲ್ಲರೂ ಕೃಷ್ಣೆಯನ್ನು ಈ ರೀತಿ ಸಭೆಗೆ ಎಳೆದು ತಂದಿದ್ದನ್ನು ನೋಡಿ ಅತೀವ ದುಃಖಿತರಾದರು.

ಭೀಷ್ಮನು ಹೇಳಿದನುಃ

> "ಸುಭಗೇ! ಧರ್ಮವು ಸೂಕ್ಷ್ಮವಾದುದು. ನಿನ್ನ ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳಲು ನಾನು ಅಸಮರ್ಥನಾಗಿದ್ದೇನೆ. ತನ್ನದಲ್ಲದ ಇನ್ನೊಬ್ಬರನ್ನು ಪಣವಾಗಿಡುವುದು ಸರಿಯಲ್ಲ. ಆದರೆ ಸ್ತ್ರೀಯು ಭರ್ತೃವಿನ ವಶವೆಂದು ಕಾಣುತ್ತಾರೆ. ಯುಧಿಷ್ಠಿರನು ಸತ್ಯವನ್ನು ತ್ಯಜಿಸುವ ಮೊದಲು ಸರ್ವ ಸಮೃದ್ಧ ಪೃಥಿವಿಯನ್ನೇ ತ್ಯಜಿಸುವವನು. ಆ ಪಾಂಡವನು ನನ್ನನ್ನು ಗೆದ್ದಿದ್ದಾರೆ ಎಂದು ಹೇಳಿದ. ಆದುದರಿಂದ ನಾನು ಈ ಗೊಂದಲವನ್ನು ಬಿಡಿಸಲಾರೆ. ದ್ಯೂತದಲ್ಲಿ ಶಕುನಿಯ ಅದ್ವಿತೀಯರಾದವರು ಯಾರೂ ಇಲ್ಲ. ಅವನು ಕುಂತೀಸುತನಿಗೆ ಅವನಿಗಿಷ್ಟ ಬಂದಹಾಗೆ ಮಾಡಲು ಅವಕಾಶಕೊಟ್ಟಿದ್ದಾನೆ. ಆ ಮಹಾತ್ಮನು ತನಗೆ ಮೋಸವಾಗಿದೆ ಎಂದು ತಿಳಿದಿಲ್ಲ. ಆದುದರಿಂದ ನಾನು ನಿನ್ನ ಈ ಪ್ರಶ್ನೆಗೆ ಉತ್ತರಿಸಲಾರೆ."

ದ್ರೌಪದಿಯು ಹೇಳಿದಳುಃ

> “ಅನಾರ್ಯ ದುಷ್ಟಾತ್ಮ ಮೋಸಗಾರ ಕುಶಲ ದ್ಯೂತಪ್ರಿಯರು ಇದರಲ್ಲಿ ಪಳಗಿಲ್ಲದ ರಾಜನನ್ನು ಸಭೆಗೆ ಆಹ್ವಾನಿಸಿದರು. ಹಾಗಿದ್ದಾಗ ಅವನಿಗೆ ಇಷ್ಟಬಂದಹಾಗೆ ಮಾಡಲು ಅವಕಾಶವಿತ್ತು ಎಂದು ಹೇಗೆ ಹೇಳಬಹುದು? ಈ ಶುದ್ಧಭಾವ ಕುರುಪಾಂಡವಾಗ್ರನು ಮೋಸಪ್ರವೃತ್ತಿಯನ್ನು ತಿಳಿಯಲಿಲ್ಲ. ಆಟವಾಡಲು ತೊಡಗಿದ ಅವನು ಸರ್ವವನ್ನೂ ಕಳೆದುಕೊಂಡ ನಂತರವೇ ನನ್ನನ್ನು ಪಣವನ್ನಾಗಿಡಲು ಒಪ್ಪಿಕೊಂಡನು. ಮಕ್ಕಳು ಮತ್ತು ಸೊಸೆಯುಂದಿರ ಈಶರಾದ ಕುರುಗಳು ಇಲ್ಲಿ ಈ ಸಭೆಯಲ್ಲಿ ಇದ್ದಾರೆ. ಎಲ್ಲರೂ ನನ್ನ ಈ ಮಾತನ್ನು ಸಮೀಕ್ಷಿಸಿ ಮತ್ತು ನನ್ನ ಈ ಪ್ರಶ್ನೆಗೆ ಯಥಾವತ್ತಾಗಿ ಉತ್ತರಿಸಿ.”

ಈ ರೀತಿ ಕರುಣಾಜನಕವಾಗಿ ರೋದಿಸುತ್ತಾ ಹೇಳಿದ ಅವಳು ತನ್ನ ಆ ಪತಿಯಂದಿರನ್ನು ನೋಡುತ್ತಿರಲು ದುಃಶಾಸನನು ಪೌರುಷದಿಂದ ಅಪ್ರಿಯ ಅಮಧುರ ಮಾತುಗಳನ್ನಾಡಿದನು. ಉತ್ತರೀಯವನ್ನು ಹಿಡಿದೆಳೆಯುವಂತೆ ಆ ಅನರ್ಹ ರಜಸ್ವಲೆಯನ್ನು ಎಳೆದು ತಂದುದ್ದನ್ನು ನೋಡಿದ ವೃಕೋದರನು ಕೋಪದಿಂದ ಯುಧಿಷ್ಠಿರನನ್ನು ನೋಡಿ ಪರಮಾರ್ತರೂಪನಾದನು. ಭೀಮನು ಹೇಳಿದನು:

> “ಯುಧಿಷ್ಠಿರ! ಜೂಜುಗಾರರ ದೇಶದಲ್ಲಿ ವೈಶ್ಯೆಯರು

ಬಹಳಷ್ಟು ಇರುತ್ತಾರೆ. ಆದರೆ ಅವರನ್ನು ಎಂದೂ ಪಣವಾಗಿ ಇಡುವುದಿಲ್ಲ. ಯಾಕೆಂದರೆ ಅಂಥವರ ಮೇಲೂ ಅವರಿಗೆ ದಯವಿರುತ್ತದೆ. ಕಾಶಿರಾಜನು ತಂದ ಕಪ್ಪ, ಮತ್ತು ನಮ್ಮ ಎಲ್ಲ ವಿಶಾಲ ಸಂಪತ್ತು, ಅನ್ಯ ಪೃಥಿವೀಪಾಲಕರು ಉಡುಗೊರೆಯಾಗಿ ತಂದಿದ್ದ ರತ್ನಗಳು, ವಾಹನಗಳು, ಧನ, ಕವಚಗಳು, ಆಯುಧಗಳು, ರಾಜ್ಯ ಮತ್ತು ಸ್ವಯಂ ನಮ್ಮನ್ನು ಜೂಜಿನಲ್ಲಿ ಇತರರಿಗೆ ಸೋತಿದ್ದೇವೆ. ಆದರೆ ಇದರಲ್ಲಿ ನನಗೆ ಕೋಪ ಬರಲಿಲ್ಲ. ಯಾಕೆಂದರೆ ನೀನು ಇವೆಲ್ಲವುಗಳ ಒಡೆಯ. ಆದರೆ ದ್ರೌಪದಿಯನ್ನು ಪಣವಿಟ್ಟು ನೀನು ಅತಿಕ್ರಮಿಸಿದೆ ಎಂದು ನನ್ನ ಅಭಿಪ್ರಾಯ. ಇದಕ್ಕೆ ಅವಳು ಅರ್ಹಳಲ್ಲ. ಬಾಲಕಿಯಾದಾಗ ಪಾಂಡವರನ್ನು ಪಡೆದ ಅವಳು ನೀನು ಮಾಡಿದ ಕೆಲಸದಿಂದಾಗಿ ಈಗ ಕ್ಷುದ್ರ, ಅಸತ್ಯ, ಮೋಸಮಾಡುವುದರಲ್ಲಿ ಆನಂದಹೊಂದುವ ಕೌರವರಿಗೆ ಸಿಕ್ಕಿ ಬಿದ್ದಿದ್ದಾಳೆ. ಇವಳಿಂದಾಗಿ ನಾನು ನನ್ನ ಸಿಟ್ಟನ್ನು ನಿನ್ನ ಮೇಲೆ ಉರುಳಿಸುತ್ತಿದ್ದೇನೆ. ನಿನ್ನ ಕೈಗಳನ್ನು ಸುಡುತ್ತೇನೆ. ಸಹದೇವ! ಅಗ್ನಿಯನ್ನು ತೆಗೆದುಕೊಂಡು ಬಾ!”

ಅರ್ಜುನನು ಹೇಳಿದನು:

“ಭೀಮಸೇನ! ಇದಕ್ಕೆ ಮೊದಲು ನೀನು ಈ ರೀತಿಯ ಮಾತುಗಳನ್ನಾಡಿರಲಿಲ್ಲ. ನಿನ್ನಲ್ಲಿರುವ ಧರ್ಮಗೌರವವನ್ನು

ನಿನ್ನ ವೈರಿಗಳು ಖಂಡಿತವಾಗಿಯೂ ನಾಶಪಡಿಸಿದಂತಿದೆ. ವೈರಿಗಳ ಯೋಜನೆಯಲ್ಲಿ ಬೀಳಬೇಡ. ಉತ್ತಮ ಧರ್ಮದಂತೆ ನಡೆದುಕೋ. ಜ್ಯೇಷ್ಠ ಭ್ರಾತ ಧಾರ್ಮಿಕನನ್ನು ಅತಿಕ್ರಮಿಸುವ ಅರ್ಹತೆ ಯಾರಿಗೂ ಇಲ್ಲ. ಶತ್ರು ಆಹ್ವಾನಿತ ರಾಜನು ಕ್ಷಾತ್ರಧರ್ಮವನ್ನು ತಿಳಿದು ಶತ್ರುಗಳ ಇಚ್ಛೆಯಂತೆ ಜೂಜಾಡಿದನು. ಅದೇ ಮಹಾ ಕೀರ್ತಿಕರವಾದುದು."

ಭೀಮಸೇನನು ಹೇಳಿದನು:

"ಧನಂಜಯ! ತನಗಾಗಿ ಇದನ್ನೆಲ್ಲ ಮಾಡಿದನೆಂದು ನಾನು ಯೋಚಿಸಿದ್ದರೆ ಇವನ ಎರಡೂ ಕೈಗಳನ್ನು ಬಲವಂತವಾಗಿ ಬಿಗಿದು ಉರಿಯುತ್ತಿರುವ ಬೆಂಕಿಯಲ್ಲಿ ಸುಡುತ್ತಿದ್ದೆ!"

ಆಗ ದುಃಖಿತ ಪಾಂಡವರನ್ನೂ ಮತ್ತು ಕಷ್ಟದಲ್ಲಿರುವ ಪಾಂಚಾಲಿಯನ್ನೂ ನೋಡಿದ ಧೃತರಾಷ್ಟ್ರಜ ವಿಕರ್ಣನು ಈ ರೀತಿ ಹೇಳಿದನು:

"ಪಾರ್ಥಿವರೇ! ಯಾಜ್ಞಸೇನಿಯು ಕೇಳಿದ ಪ್ರಶ್ನೆಗೆ ಉತ್ತರಿಸಿ. ನಾವು ಆ ಮಾತನ್ನು ನಿರ್ಧರಿಸಬೇಕು. ಇಲ್ಲದಿದ್ದರೆ ನರಕಕ್ಕೆ ಹೋಗುವುದಿಲ್ಲವೇ? ಭೀಷ್ಮ ಮತ್ತು ಧೃತರಾಷ್ಟ್ರರು ಕುರುವೃದ್ಧರು. ಅವರು ಮತ್ತು ಮಹಾಮತಿ ವಿದುರ ಇಲ್ಲಿ ಇದ್ದೂ ಮಾತನಾಡುತ್ತಿಲ್ಲವಲ್ಲ? ನಮ್ಮೆಲ್ಲರ ಆಚಾರ್ಯ ಭಾರದ್ವಾಜ ದ್ರೋಣನೂ ಕೃಪನೂ ಇಲ್ಲಿದ್ದಾರೆ. ಆದರೂ ಆ

ದ್ವಿಜಸತ್ತಮರು ಈ ಪ್ರಶ್ನೆಯ ಕುರಿತು ಮಾತನಾಡುತ್ತಿಲ್ಲವಲ್ಲ! ಸರ್ವದಿಕ್ಕುಗಳಿಂದ ಬಂದು ಇಲ್ಲಿ ನೆರೆದಿರುವ ಅನ್ಯ ಪೃಥಿವೀಪಾಲಕರೂ ಕೂಡ ಕಾಮಕ್ರೋಧಗಳನ್ನು ತೊರೆದು ಅವರಿಗೆ ತಿಳಿದಂತೆ ಮಾತನಾಡಬೇಕು! ಪಾರ್ಥಿವರೇ! ಅತ್ಯಂತ ಸುಂದರಿ ದ್ರೌಪದಿಯು ಪುನಃ ಪುನಃ ಕೇಳಿದ ಪ್ರಶ್ನೆಯನ್ನು ಗಮನಿಸಿ. ಅದನ್ನು ವಿಮರ್ಶಿಸಿ, ಪರವಾಗಿರಲಿ ವಿರುದ್ಧವಾಗಿರಲಿ, ಅದಕ್ಕೆ ಉತ್ತರವನ್ನು ನೀಡಿ!”

ಈ ರೀತಿ ಅವನು ಸರ್ವ ಸಭಾಸದರಲ್ಲಿ ಅನೇಕಬಾರಿ ಕೇಳಿಕೊಂಡನು. ಆದರೂ ಅಲ್ಲಿದ್ದ ಪೃಥಿವೀಪಾಲಕರು ಒಳ್ಳೆಯದಾದ ಅಥವಾ ಕೆಟ್ಟದಾದ ಏನನ್ನೂ ಹೇಳಲಿಲ್ಲ. ವಿಕರ್ಣನು ಸರ್ವ ಪೃಥಿವೀಪಾಲಕರಲ್ಲಿ ಪುನಃ ಪುನಃ ಕೇಳಿಕೊಂಡನಂತರ, ಕೈ ಕೈ ತಿವಿಯುತ್ತಾ ನಿಟ್ಟಿಸುರು ಬಿಡುತ್ತಾ ಹೇಳಿದನು:

“ಪೃಥಿವೀಪಾಲಕರೇ! ನಿಮ್ಮ ಉತ್ತರವನ್ನು ಹೇಳಿ ಅಥವಾ ಹೇಳದೇ ಇರಿ. ಆದರೆ ನಾನು ಮಾತ್ರ ಈ ವಿಷಯದಲ್ಲಿ ನ್ಯಾಯವೆಂದು ತಿಳಿದುದನ್ನು ಹೇಳುತ್ತೇನೆ. ಮಹೀಕ್ಷಿತರ ನಾಲ್ಕು ವ್ಯಸನಗಳ ಕುರಿತು ಹೇಳುತ್ತಾರೆ: ಬೇಟೆಯಾಡುವುದು, ಮದಿರ ಸೇವನೆ, ಜೂಜಾಡುವುದು ಮತ್ತು ದ್ವಂದ್ವಯುದ್ಧ ಮಾಡುವುದು. ಇವುಗಳಲ್ಲಿ

ನಿರತನಾದ ನರನು ಧರ್ಮವನ್ನು ತೊರೆದು ನಡೆದುಕೊಳ್ಳುತ್ತಾನೆ, ಮತ್ತು ಯಥಾಯುಕ್ತವಾಗಿ ಮಾಡಿದ ಕ್ರಿಯೆಗಳನ್ನು ಲೋಕವು ಪರಿಗಣಿಸುವುದಿಲ್ಲ. ವ್ಯಸನದಲ್ಲಿ ನಿರತನಾಗಿದ್ದ ಪಾಂಡುಪುತ್ರನು ಭಾವುಕತೆಯಿಂದ ವರ್ತಿಸಿ ಜೂಜುಕೋರರು ಜೂಜಿಗೆಂದು ಕರೆದಾಗ ದ್ರೌಪದಿಯನ್ನು ಪಣವನ್ನಾಗಿಟ್ಟನು. ಈ ಅನಿಂದಿತೆಯು ಸರ್ವ ಪಾಂಡವರ ಸಾಧಾರಣ ಪತ್ನಿ. ಇವಳನ್ನು ಪಣವಾಗಿಡುವ ಮೊದಲೇ ಪಾಂಡವನು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದನು. ಪಣವು ಬೇಕಿದ್ದಾಗ ಸೌಬಲನು ಕೃಷ್ಣೆಯ ಕುರಿತು ಹೇಳಿದನು. ಇವೆಲ್ಲವನ್ನೂ ವಿಚಾರಿಸಿದರೆ ಅವಳನ್ನು ಗೆದ್ದಾಯಿತು ಎಂದು ನನಗೆ ಅನ್ನಿಸುವುದಿಲ್ಲ."

## ದ್ರೌಪದೀ ವಸ್ತ್ರಾಪಹರಣ

ಇದನ್ನು ಕೇಳಿದ ಕೂಡಲೇ ಆ ಸಭೆಯಿಂದ ಮಹಾ ಕೋಲಾಹಲವು ಕೇಳಿ ಬಂದಿತು. ವಿಕರ್ಣನನ್ನು ಪ್ರಶಂಸಿಸಲಾಯಿತು ಮತ್ತು ಸೌಬಲನನ್ನು ನಿಂದಿಸಲಾಯಿತು. ಆ ಶಬ್ಧವು ಕಡಿಮೆಯಾದಾಗ ಕ್ರೋಧಮೂರ್ಛಿತ ರಾಧೇಯನು ತನ್ನ ಸುಂದರ ಬಾಹುವನ್ನು ಹಿಡಿದು ಈ ಮಾತುಗಳನ್ನಾಡಿದನು:

"ಅರಣಿಯಿಂದ ಉತ್ಪನ್ನ ಬೆಂಕಿಯು ಹೇಗೆ ಕಟ್ಟಿಗೆಯನ್ನೇ ಸುಡುತ್ತದೆಯೋ ಹಾಗೆ ವಿಕರ್ಣನ ಮಾತುಗಳಲ್ಲಿ ಬಹಳಷ್ಟು

ವೈಕೃತಗಳು ಕಂಡುಬರುತ್ತವೆ. ಕೃಷ್ಣೆಯು ಬಹಳಷ್ಟು ಒತ್ತಾಯಿಸಿದರೂ ಇಲ್ಲಿರುವವರು ಅವಳಿಗೆ ಉತ್ತರಿಸಲಿಲ್ಲ. ಏಕೆಂದರೆ, ದ್ರುಪದಾತ್ಮಜೆಯನ್ನು ಧರ್ಮಪೂರಕವಾಗಿಯೇ ಗೆದ್ದಿದ್ದೇವೆ ಎಂದು ನನಗೆ ಮತ್ತು ಅವರಿಗೆ ಅನ್ನಿಸುತ್ತದೆ. ಧಾರ್ತರಾಷ್ಟ್ರ ! ನೀನು ನಿನ್ನ ಕೇವಲ ಬಾಲ್ಯತನವನ್ನು ತೋರಿಸಿಕೊಳ್ಳುತ್ತಿದ್ದೀಯೆ. ಸಭಾಮಧ್ಯದಲ್ಲಿ ನಿನ್ನ ಹಿರಿಯರು ಹೇಳಬಹುದಾಗಿದ್ದುದನ್ನು ಇನ್ನೂ ಬಾಲಕನಾದ ನೀನು ಹೇಳುತ್ತಿದ್ದೀಯೆ. ದುರ್ಯೋಧನನ ಕಿರಿಯ ತಮ್ಮನಾದ ನಿನಗೆ ಧರ್ಮವೇನೆಂದು ತಿಳಿದಿಲ್ಲ. ಆದುದರಿಂದಲೇ ಅಲ್ಪಬುದ್ಧಿಯ ನೀನು ಕೃಷ್ಣೆಯನ್ನು ಗೆದ್ದಿದ್ದರೂ ಗೆಲ್ಲಲಿಲ್ಲವೆಂದು ಹೇಳುತ್ತಿದ್ದೀಯೆ. ಪಾಂಡವಾಗ್ರಜನು ಸಭೆಯಲ್ಲಿ ಸರ್ವಸ್ವವನ್ನೂ ಕಳೆದುಕೊಂಡಾಗ ಕೃಷ್ಣೆಯನ್ನು ಗೆಲ್ಲಲಿಲ್ಲ ಎಂದು ಹೇಗೆ ಹೇಳುತ್ತೀಯೆ? ದ್ರೌಪದಿಯು ಅವನ ಸರ್ವಸ್ವದ ಒಂದು ಭಾಗವಲ್ಲವೇ? ಹಾಗಿರುವಾಗ ಕೃಷ್ಣೆಯನ್ನು ಧರ್ಮಪೂರ್ವಕವಾಗಿ ಗೆಲ್ಲಲಿಲ್ಲ ಎಂದು ನೀನು ಹೇಗೆ ಅಭಿಪ್ರಾಯ ಪಡುತ್ತೀಯೆ? ತನ್ನ ತಿಳುವಳಿಕೆಯಲ್ಲಿದ್ದು ಪಾಂಡವನು ದ್ರೌಪದಿಯ ಹೆಸರು ಹೇಳಿ ಪಣವನ್ನಿಟ್ಟಿದ್ದಾನೆ. ಹಾಗಿರುವಾಗ ನೀನು ಹೇಗೆ ಅವಳನ್ನು ಗೆಲ್ಲಲಿಲ್ಲ ಎಂದು ಹೇಳುತ್ತೀಯೆ? ಒಂದು ವೇಳೆ ನಿನ್ನ ಅಭಿಪ್ರಾಯದಲ್ಲಿ ಏಕವಸ್ತ್ರಳಾದವಳನ್ನು ಸಭೆಗೆ ಎಳೆದು

ತಂದಿದ್ದುದು ಅಧರ್ಮ ಎಂದಾದರೆ ಅದರ ಕುರಿತು ನಾನು ಹೇಳುವ ಮಾತನ್ನು ಕೇಳು. ಸ್ತ್ರೀಗೆ ಒಬ್ಬನೇ ಪತಿ ಎಂದು ದೈವವಿಹಿತವಾಗಿದ್ದುದು. ಅನೇಕರ ವಶಳಾಗಿರುವ ಇವಳು ಬಂಧಕಿ ಎನ್ನುವುದು ವಿನಿಶ್ಚಿತ. ನನ್ನ ಅಭಿಪ್ರಾಯದಲ್ಲಿ ಅಂಥವಳನ್ನು ಸಭೆಗೆ ಕರೆತರುವುದರಲ್ಲಿ ಅಥವಾ ಏಕವಸ್ತ್ರದಲ್ಲಿರುವುದಾಗಲೀ ಅಥವಾ ಆ ವಿಷಯದಲ್ಲಿ ವಿವಸ್ತ್ರಳಾಗಿದ್ದರೂ ಏನೂ ತಪ್ಪಿಲ್ಲ. ಇವಳು ಪಾಂಡವರ ಸ್ವತ್ತು ಮತ್ತು ಅವರೆಲ್ಲರನ್ನೂ ಧರ್ಮಪ್ರಕಾರವಾಗಿ ಸಂಪತ್ತಿನ ಸಮೇತ ಸೌಬಲನು ಗೆದ್ದಿರುವನು. ದುಃಶಾಸನ! ಈ ವಿಕರ್ಣನು ಬಾಲಕನಂತೆ ತಿಳಿಯದೇ ಮಾತನಾಡುತ್ತಿದ್ದಾನೆ. ಪಾಂಡವರ ಮತ್ತು ದ್ರೌಪದಿಯ ಬಟ್ಟೆಗಳನ್ನು ಕಳಚು!”

ಇದನ್ನು ಕೇಳಿದ ಸರ್ವ ಪಾಂಡವರೂ ತಮ್ಮ ತಮ್ಮ ವಸ್ತ್ರಗಳನ್ನು ಉತ್ತರೀಯಗಳನ್ನು ತೆಗೆದು ಸಭೆಯಲ್ಲಿ ಕುಳಿತುಕೊಂಡರು. ಆಗ ದುಃಶಾಸನನು ಸಭಾಮಧ್ಯದಲ್ಲಿ ದ್ರೌಪದಿಯ ಬಟ್ಟೆಯನ್ನು ಬಲವಂತವಾಗಿ ಏಳೆಯಲು ಪ್ರಾರಂಭಿಸಿದನು. ಆದರೆ ದ್ರೌಪದಿಯ ವಸ್ತ್ರವನ್ನು ಎಳೆಯುತ್ತಿದ್ದ ಹಾಗೆ ಪ್ರತೀಸಾರಿ ಅದೇ ರೀತಿಯ ವಸ್ತ್ರವು ಪುನಃ ಕಂಡು ಬರುತ್ತಿತ್ತು. ಆ ಅದ್ಭುತವನ್ನು ನೋಡಿದ ಲೋಕದ ಸರ್ವ ಮಹೀಕ್ಷಿತರಲ್ಲಿ ಘೋರ ಧ್ವನಿಯಲ್ಲಿ ಹಲಹಲ ಶಬ್ದ ಉಂಟಾಯಿತು. ಅಗ ಆ ರಾಜಮಧ್ಯದಲ್ಲಿ ಕ್ರೋಧದಿಂದ ತುಟಿಗಳು

ಕಂಪಿಸುತ್ತಿರಲು ಭೀಮನು ಕೈ ಕೈ ತಿರುವುತ್ತಾ ಮಹಾ ಧ್ವನಿಯಲ್ಲಿ ಶಾಪವನ್ನಿತ್ತನು.

> "ಈ ಲೋಕದಲ್ಲಿ ವಾಸಿಸುವ ಕ್ಷತ್ರಿಯರೇ! ಇದರ ಮೊದಲು ಯಾರೂ ಹೇಳಿರದ ಮತ್ತು ಇದರ ನಂತರ ಯಾರೂ ಹೇಳಲಾರದ ನನ್ನ ಈ ಮಾತುಗಳನ್ನು ಹೃದಯಪೂರ್ವಕವಾಗಿ ಕೇಳಿ. ಇಂದು ನಾನು ಹೇಳುವ ಹಾಗೆ ಮಾಡದೇ ಯುದ್ಧದಲ್ಲಿ ಪಾಪಿ ದುರ್ಜಾತಿ ಭಾರತರಿಗೆ ಹೊರತಾದ ಇವನ ಎದೆಯನ್ನು ಬಲವಂತವಾಗಿ ಸೀಳಿ ರಕ್ತವನ್ನು ಕುಡಿಯದೇ ಇದ್ದರೆ ನನ್ನ ಸರ್ವ ಪಿತಾಮಹರ ಗತಿಯನ್ನು ಪಡೆಯದೇ ಇರಲಿ!"

ಅವನ ಈ ವಚನವನ್ನು ಕೇಳಿದ ಸರ್ವಲೋಕಗಳೂ ಹರ್ಷಿತಗೊಂಡವು. ಅವನನ್ನು ಬಹಳಷ್ಟು ಗೌರವಿಸಿದರು ಮತ್ತು ಧೃತರಾಷ್ಟ್ರಜನನ್ನು ಜರೆದರು. ಸಭಾಮಧ್ಯದಲ್ಲಿ ಬಟ್ಟೆಗಳ ರಾಶಿಯೇ ಆಗಿತ್ತು. ಆಗ ದುಃಶಾಸನನು ಆಯಾಸಗೊಂಡು ನಾಚಿಕೆಯಿಂದ ಕೆಳಗೆ ಕುಳಿತುಕೊಂಡನು. ಆಗ ಆ ಸಭೆಯಲ್ಲಿದ್ದ ನರದೇವತೆಗಳು ಕುಂತೀಸುತರನ್ನು ನೋಡಿ ರೋಮಾಂಚನ ಧ್ವನಿಯಲ್ಲಿ ಧಿಕ್ಕಾರ ಎಂದು ಕೂಗಿದರು. ಕೌರವರು ಅವಳ ಪ್ರಶ್ನೆಗೆ ಉತ್ತರಿಸುತ್ತಿಲ್ಲ ಎಂದು ಜನರು ಧೃತರಾಷ್ಟ್ರನನ್ನು ಜರಿದರು. ಆಗ ತನ್ನ ಕೈ ಎತ್ತಿ ಸಭಾಸದರನ್ನು ಸುಮ್ಮನಿಸಿರಿದ ಸರ್ವಧರ್ಮಜ್ಞ ವಿದುರನು ಈ

ಮಾತುಗಳನ್ನಾಡಿದನು:

"ಪ್ರಶ್ನೆಯನ್ನು ಕೇಳಿದ ದ್ರೌಪದಿಯು ಅನಾಥೆಯಂತೆ ರೋದಿಸುತ್ತಿದ್ದಾಳೆ. ಸಭ್ಯರೇ! ಅವಳ ಪ್ರಶ್ನೆಯನ್ನು ಬಿಡಿಸದೇ ಇದ್ದರೆ ಧರ್ಮ ಪೀಡನವಾಗುತ್ತದೆ. ಆರ್ತನಾಗಿ ಸಭೆಗೆ ಬರುವವನು ಪ್ರಜ್ವಲಿಸುವ ಹವ್ಯವಾಹನನ ಹಾಗೆ. ಸಭಿಕರು ಸತ್ಯ ಮತ್ತು ಧರ್ಮದಿಂದ ಅವನನ್ನು ಪ್ರಶಾಂತಗೊಳಿಸಬೇಕು. ಆರ್ತ ಮಾನವನು ಸಭೆಯಲ್ಲಿ ಧರ್ಮಪ್ರಶ್ನೆಯನ್ನು ಕೇಳಿದಾಗ ಕಾಮಕ್ರೋಧಗಳ ವಶಹೋಗದೇ ಆ ಪ್ರಶ್ನೆಯನ್ನು ಅಲ್ಲಿಯೇ ಉತ್ತರಿಸಬೇಕು. ವಿಕರ್ಣನು ತನಗೆ ತಿಳಿದ ಪ್ರಮಾಣದಲ್ಲಿ ಪ್ರಶ್ನೆಯನ್ನು ಉತ್ತರಿಸಿದ್ದಾನೆ. ನೀವು ಕೂಡ ನಿಮಗೆ ತಿಳಿದ ಹಾಗೆ ಈ ಪ್ರಶ್ನೆಯ ಕುರಿತು ಮಾತನಾಡಬೇಕು. ಸಭೆಯಲ್ಲಿ ಕುಳಿತುಕೊಂಡು ಪ್ರಶ್ನೆಗೆ ಉತ್ತರವನ್ನು ನೀಡದೇ ಇದ್ದರೆ ಅವನು ಧರ್ಮದರ್ಶಿಯಾಗಿದ್ದರೂ ಸುಳ್ಳನ್ನು ಹೇಳುವುದರ ಅರ್ಧದಷ್ಟು ಫಲವನ್ನು ಅನುಭವಿಸುತ್ತಾನೆ. ಮತ್ತು ಸಭೆಯಲ್ಲಿದ್ದುಕೊಂಡು ಧರ್ಮದರ್ಶಿಯು ಪ್ರಶ್ನೆಯನ್ನು ಅಧರ್ಮ ರೀತಿಯಲ್ಲಿ ಉತ್ತರಿಸಿದರೆ ಸುಳ್ಳುಹೇಳುವುದರ ಪೂರ್ಣಫಲವನ್ನು ಅನುಭವಿಸಬೇಕಾಗುತ್ತದೆ. ಇದಕ್ಕೆ ಪುರಾತನ ಇತಿಹಾಸ ಪ್ರಹ್ಲಾದ ಮತ್ತು ಮುನಿ ಆಂಗಿರಸರ

ನಡುವಿನ ಸಂವಾದವನ್ನು ಉದಾಹರಣೆಯಾಗಿ ಕೊಡುತ್ತಾರೆ.

ಪ್ರಹ್ಲಾದನೆಂಬ ಹೆಸರಿನ ದೈತ್ಯೇಂದ್ರನ ಪುತ್ರ ವಿರೋಚನನು ಓರ್ವ ಕನ್ಯೆಗೋಸ್ಕರ ಆಂಗಿರಸ ಸುಧನ್ವನ ಎದುರಾದನು. ಕನ್ಯೆಯನ್ನು ಬಯಸಿದ ಅವರಿಬ್ಬರೂ ನಾನು ಉತ್ತಮ ನಾನು ಉತ್ತಮ ಎಂದು ತಮ್ಮ ಪ್ರಾಣವನ್ನೇ ಪಣವಿಟ್ಟು ಹೋರಾಡಿದರು ಎಂದು ಕೇಳಿಲ್ಲವೇ? ಅವರಿಬ್ಬರೂ ಆ ಪ್ರಶ್ನೆಯನ್ನು ವಿವಾದಿಸಿ ಪ್ರಹ್ಲಾದನಲ್ಲಿ ಕೇಳಿದರು: "ನಮ್ಮಿಬ್ಬರಲ್ಲಿ ಯಾರು ಶ್ರೇಷ್ಠ ಎನ್ನುವ ಪ್ರಶ್ನೆಯನ್ನು ಉತ್ತರಿಸು. ಆದರೆ ಸುಳ್ಳನ್ನು ಹೇಳಬೇಡ." ಈ ವಿವಾದದಿಂದ ಭೀತನಾಗಿ ಅವನು ಸುಧನ್ವನನ್ನು ನೋಡಿದನು. ಆಗ ಸುಧನ್ವನು ಕೃದ್ಧನಾಗಿ ಬ್ರಹ್ಮದಂಡತಂತೆ ಪ್ರಜ್ವಲಿಸುತ್ತಾ ಇಂತೆಂದನು: "ಪ್ರಹ್ಲಾದ! ಒಂದು ವೇಳೆ ನೀನು ಸುಳ್ಳನ್ನು ಹೇಳಿದರೆ ಅಥವಾ ಏನನ್ನೂ ಹೇಳದೇ ಇದ್ದರೆ ವಜ್ರಿಯು ತನ್ನ ವಜ್ರದಿಂದ ನಿನ್ನ ಶಿರವನ್ನು ನೂರು ತುಂಡುಗಳನ್ನಾಗಿ ಒಡೆಯುತ್ತಾನೆ." ಸುಧನ್ವನ ಆ ಮಾತಿಗೆ ದೈತ್ಯ ಪ್ರಹ್ಲಾದನು ವ್ಯತಿಥನಾಗಿ ಅಶ್ವತ್ಥ ಎಲೆಯಂತೆ ತತ್ತರಿಸಿದನು ಮತ್ತು ಸಮಾಲೋಚಿಸಲು ಮಹೌಜಸ ಕಶ್ಯಪನಲ್ಲಿಗೆ ಹೋಗಿ ಹೇಳಿದನು: "ನೀನು ದೇವತೆಗಳ

ಮತ್ತು ಅಸುರರ ಧರ್ಮವನ್ನು ತಿಳಿದಿದ್ದೀಯೆ. ಈಗ ಓರ್ವ ಬ್ರಾಹ್ಮಣನ ಧರ್ಮಪ್ರಶ್ನೆಯನ್ನು ಕೇಳು. ನನ್ನ ಕೇಳಿಕೆಯಂತೆ ಒಂದು ಪ್ರಶ್ನೆಗೆ ನಿರ್ದಿಷ್ಠ ಉತ್ತರವನ್ನು ನೀಡದಿರುವ ಅಥವಾ ಸುಳ್ಳು ಉತ್ತರವನ್ನು ನೀಡುವವನಿಗೆ ಪರ ಲೋಕದಲ್ಲಿ ಯಾವ ಸ್ಥಾನವು ದೊರೆಯುತ್ತದೆ ಎನ್ನುವುದನ್ನು ಹೇಳು." ಕಶ್ಯಪನು ಹೇಳಿದನು: "ಪ್ರಶ್ನೆಗೆ ಉತ್ತರವನ್ನು ತಿಳಿದೂ ಕಾಮ, ಕ್ರೋಧ ಅಥವಾ ಭಯದಿಂದ ಉತ್ತರಿಸದೇ ಇರುವವನು ತನ್ನ ಮೇಲೆಯೇ ಸಹಸ್ರ ವರುಣ ಪಾಶಗಳನ್ನು ಬಿಡುಗಡೆಮಾಡಿಕೊಳ್ಳುತ್ತಾನೆ. ಅಂಥಹ ಒಂದು ಪಾಶವನ್ನು ಬಿಡಿಸಿಕೊಳ್ಳಲೂ ಅವನಿಗೆ ಒಂದು ವರ್ಷ ಬೇಕಾಗುತ್ತದೆ. ಆದುದರಿಂದ ನಿನಗೆ ಸತ್ಯವು ತಿಳಿದಿದ್ದರೆ ಸತ್ಯವನ್ನು ನೇರವಾಗಿ ಹೇಳಿಬಿಡು. ಅಧರ್ಮದಿಂದ ಇರಿತಗೊಂಡ ಧರ್ಮನು ಸಭೆಗೆ ಬಂದಾಗ ಸಭಾಸದರು ಆ ಈಟಿಯನ್ನು ಕಿತ್ತೊಗೆಯದಿದ್ದರೆ ಅದು ಅಲ್ಲಿರುವವರನ್ನು ಇರಿಯುತ್ತದೆ. ಅವರಲ್ಲಿ ಶ್ರೇಷ್ಠನು ಅರ್ಧವನ್ನು ಪಡೆಯುತ್ತಾನೆ, ಕರ್ತೃವು ಕಾಲುಭಾಗವನ್ನು ಪಡೆಯುತ್ತಾನೆ, ಮತ್ತು ನಿಂದಿಸಬೇಕಾದವರನ್ನು ನಿಂದಿಸದೇ ಇದ್ದ ಸಭಾಸದರು ಕಾಲುಭಾಗವನ್ನು ಪಡೆಯುತ್ತಾರೆ. ನಿಂದಾರ್ಹನನ್ನು ನಿಂದಿಸುವುದರಿಂದ ಶ್ರೇಷ್ಠನು ತಪ್ಪಿಲ್ಲದವನಾಗುತ್ತಾನೆ ಮತ್ತು ಸಭಾಸದರು ಮುಕ್ತರಾಗುತ್ತಾರೆ. ಆಗ ಪಾಪವು

ಕರ್ತಾರನಿಗೆ ಹೋಗುತ್ತದೆ. ಪ್ರಹ್ಲಾದ! ಆದರೆ ಪ್ರಶ್ನೆಯನ್ನು ತಂದವನಿಗೆ ಧರ್ಮದ ವಿರುದ್ಧವನ್ನು ಹೇಳುವವನು ಹಿಂದಿನ ಮತ್ತು ಮುಂದಿನ ಏಳು ಪೀಳಿಗೆಗಳವರೆಗೆ ದಾನ-ಆಹುತಿಗಳ ಫಲವನ್ನು ನಾಶಗೊಳಿಸುತ್ತಾನೆ. ಸಂಪತ್ತನ್ನು ಅಪಹರಿಸಿಕೊಂಡವನ ದುಃಖ, ಪುತ್ರನ ಕೊಲೆಯಾದವನ ದುಃಖ, ಸಾಲಗಾರನ ಪ್ರತಿಯಾದ ದುಃಖ, ರಾಜನ ಬಂಧಿಯಾದವನ ದುಃಖ, ಪತಿವಿಹೀನ ಸ್ತ್ರೀಯ ದುಃಖ, ದಂಡಿನಿಂದ ತೊರೆಯಲ್ಪಟ್ಟವನ ದುಃಖ, ಇಬ್ಬರು ಹೆಂಡಿರಿರುವವನ ಪತ್ನಿಯ ದುಃಖ, ಮತ್ತು ಸಾಕ್ಷಿಗಳ ಎದುರು ಹೊಡೆತತಿಂದವನ ದುಃಖ ಇವೆಲ್ಲವೂ ದುಃಖಗಳೂ ಒಂದೇ ಎಂದು ತ್ರಿದಶೇಶ್ವರರು ಹೇಳುತ್ತಾರೆ. ಈ ಎಲ್ಲ ದುಃಖಗಳಿಗೂ ತಪ್ಪು ಉತ್ತರವನ್ನು ನೀಡಿದವನು ಇದೇ ದುಃಖವನ್ನು ಅನುಭವಿಸಿತ್ತಾನೆ. ತನ್ನ ಸಮಕ್ಷಮದಲ್ಲಿ ಯಾರು ನೋಡುತ್ತಾನೋ ಅಥವಾ ಕೇಳುತ್ತಾನೋ ಅವನನ್ನು ಸಾಕ್ಷಿ ಎಂದು ಕರೆಯುವುದರಿಂದ ಅವನು ಸತ್ಯವನ್ನು ನುಡಿದನಾದರೆ ಅವನ ಧರ್ಮ ಮತ್ತು ಅರ್ಥಗಳು ನಾಶವಾಗುವುದಿಲ್ಲ.” ಕಶ್ಯಪನ ಮಾತನ್ನು ಕೇಳಿದ ಪ್ರಹ್ಲಾದನು ಪುತ್ರನಿಗೆ “ನಿನಗಿಂಥ ಸುಧನ್ವನು ಶ್ರೇಷ್ಠನು. ಏಕೆಂದರೆ ನನಗಿಂಥ ಅಂಗಿರಸನು ಶ್ರೇಷ್ಠ” ಎಂದನು. “ಸುಧನ್ವನ ತಾಯಿಯೂ ನಿನ್ನ ತಾಯಿಗಿಂಥ ಶ್ರೇಷ್ಠಳು.

ವಿರೋಚನ! ಆದುದರಿಂದ ಸುಧನ್ವನು ನಿನ್ನ ಪ್ರಾಣದ ಈಶ್ವರನಾಗುತ್ತಾನೆ.” ಆಗ ಸುಧನ್ವನು ಹೇಳಿದನು: “ಪುತ್ರಸ್ನೇಹವನ್ನು ಪರಿತ್ಯಜಿಸಿ ನೀನು ಧರ್ಮದಲ್ಲಿ ಗಟ್ಟಿಯಾಗಿ ನಿಂತಿದ್ದೀಯೆ. ನಿನ್ನ ಪುತ್ರನನ್ನು ಬಿಡುಗಡೆಮಾಡುತ್ತೇನೆ. ಅವನು ನೂರು ವರ್ಷಗಳು ಜೀವಿಸಲಿ.” ಸರ್ವ ಸಭಾಸದರೂ ಈ ಪರಮ ಧರ್ಮವನ್ನು ಕೇಳಿದ್ದೀರಿ. ಈಗ ಕೃಷ್ಣೆಯ ಪ್ರಶ್ನೆಯ ಕುರಿತು ಏನು ಉತ್ತರವನ್ನು ನೀಡಬೇಕೆಂದು ಯೋಚಿಸಿರಿ.”

ವಿದುರನ ಈ ಮಾತುಗಳನ್ನು ಕೇಳಿಯೂ ಪಾರ್ಥಿವರು ಏನನ್ನೂ ಮಾತನ್ನಾಡಲಿಲ್ಲ. ಆಗ ಕರ್ಣನು ದಾಸಿ ಕೃಷ್ಣೆಯನ್ನು ಮನೆಗೆ ಕರೆದುಕೊಂಡು ಹೋಗು ಎಂದು ದುಃಶಾಸನನಿಗೆ ಕೂಗಿ ಹೇಳಿದನು. ನಾಚಿ ಕಂಪಿಸುತ್ತಾ ಪಾಂಡವರನ್ನು ನೋಡಿ ಪ್ರಲಪಿಸುತ್ತಿದ್ದ ಆ ತಪಸ್ವಿನಿಯನ್ನು ದುಃಶಾಸನನು ಸಭಾಮದ್ಯದಲ್ಲಿ ಎಳೆದನು. ದ್ರೌಪದಿಯು ಹೇಳಿದಳು:

“ಬಲಶಾಲಿಯು ಬಲಾತ್ಕಾರವಾಗಿ ಎಳೆದು ತರುವಾಗ ವಿಹ್ವಲಳಾದ ನಾನು ಮೊದಲೇ ಮಾಡಬೇಕಾಗಿದ್ದ ಒಂದು ಮಹೋತ್ತರ ಕಾರ್ಯವು ಉಳಿದುಬಿಟ್ಟಿದೆ. ಕುರುಸಂಸದಿಯಲ್ಲಿರುವ ಈ ಗುರುಗಳ ಅಭಿವಂದನೆಯನ್ನು ಮಾಡಬೇಕಾಗಿತ್ತು. ಇದು ನನ್ನ ಅಪರಾಧ ಎಂದು

ತಿಳಿಯಬೇಡಿ. ಇದನ್ನು ಮೊದಲೇ ನಾನು ಮಾಡಲಿಲ್ಲ!"

ಅವನಿಂದ ಸಭೆಗೆ ಎಳೆದು ತರಲ್ಪಟ್ಟ ಆ ತಪಸ್ವಿನಿಯು ಉಚಿತವಾಗಿರದ ಆ ಅನುಭವದಿಂದ ದುಃಖಿತಳಾಗಿ ಬಿದ್ದು ವಿಲಪಿಸಿದಳು:

"ಸ್ವಯಂವರ ರಂಗದಲ್ಲಿ ಸಮಾಗಮಿಸಿದ್ದ ನೃಪರು ನೋಡಿದ ಮೊದಲು ಅಥವಾ ನಂತರ ನೋಡದೇ ಇದ್ದ ನನ್ನನ್ನು ಇಂದು ಸಭೆಗೆ ಎಳೆದು ತರಲಾಯಿತು. ಇದಕ್ಕೆ ಮೊದಲು ನನ್ನ ಮನೆಯಲ್ಲಿ ವಾಯುವಾಗಲೀ ಆದಿತ್ಯನಾಗಲೀ ನೋಡದೇ ಇದ್ದ ನನ್ನನ್ನು ಕುರುಸಂಸದಿಯಲ್ಲಿ ಸಭಾಮಧ್ಯದಲ್ಲಿ ಎಳೆದು ತಂದು ಪ್ರದರ್ಶಿಸಲಾಗಿದೆ. ಇದಕ್ಕೆ ಮೊದಲು ನನ್ನ ಮನೆಯಲ್ಲಿ ವಾಯು ಸ್ಪರ್ಷವನ್ನೂ ಸಹಿಸಲಾರದ ಪಾಂಡವರು ಇಂದು ಈ ದುರಾತ್ಮನು ನನ್ನನ್ನು ಸ್ಪರ್ಷಿಸುವುದನ್ನು ಸಹಿಸಿಕೊಂಡಿದ್ದಾರೆ. ಕೌರವರ ಕಾಲವು ಮುಗಿಯಲು ಬಂದಿದೆಯೆಂದು ನನಗನ್ನಿಸುತ್ತದೆ. ತಮ್ಮ ಅನರ್ಹ ಸೊಸೆ ಮತ್ತು ಹೆಣ್ಣುಮಕ್ಕಳಿಗೆ ಕಷ್ಟಕೊಡುತ್ತಿದ್ದಾರೆ. ಇಲ್ಲವಾದರೆ ಏಕೆ ಸತಿ ಮತ್ತು ಶುಭೆಯಾದ ನನ್ನನ್ನು ಈ ಸಭಾಮಧ್ಯದಲ್ಲಿ ಎಳೆದು ತಂದಿದ್ದಾರೆ? ಮಹೀಕ್ಷಿತರ ಧರ್ಮವೇ ಇಲ್ಲವಾಯಿತೆ? ಹಿಂದೆ ಎಂದೂ ಧಾರ್ಮಿಕ ಸ್ತ್ರೀಯರನ್ನು

ಸಭೆಗೆ ಕರೆತಂದಿದ್ದುದನ್ನು ಕೇಳಿಲ್ಲ. ಈ ಸನಾತನ ಧರ್ಮವು ಕೌರವರಲ್ಲಿ ನಶಿಸಿಹೋದಂತಿದೆ. ಪಾಂಡವರ ಭಾರ್ಯೆ, ಪಾರ್ಷತನ ತಂಗಿ, ವಾಸುದೇವನ ಸಖಿ ಸತಿಯನ್ನು ಪಾರ್ಥಿವರ ಸಭೆಯಲ್ಲಿ ಏಕೆ ಎಳೆದು ತರಲಾಯಿತು? ಧರ್ಮರಾಜನ ಭಾರ್ಯೆ ಸದೃಶವರ್ಣಜಳಾದ ಇವಳು ದಾಸಿಯೋ ಅಥವಾ ದಾಸಿಯಲ್ಲವೋ ಹೇಳಿ ಕೌರವರೇ! ನಿಮ್ಮ ಹೇಳಿಕೆಯಂತೆ ನಡೆದುಕೊಳ್ಳುತ್ತೇನೆ. ಈ ಕೌರವರ ಯಶೋಹರ ಕ್ಷುದ್ರನು ನನ್ನ ಮಾನಕಳೆಯುತ್ತಿದ್ದಾನೆ. ಇನ್ನು ಇದನ್ನು ನಾನು ಸಹಿಸಲಾರೆ. ನಿಮ್ಮ ಅಭಿಪ್ರಾಯದಲ್ಲಿ ನನ್ನನ್ನು ಗೆದ್ದಿದ್ದಾರೆಯೋ ಇಲ್ಲವೋ ಎನ್ನುವುದನ್ನು ಹೇಳಿ. ನನ್ನ ಪ್ರಶ್ನೆಗೆ ಉತ್ತರವನ್ನು ಬಯಸುತ್ತೇನೆ ಮತ್ತು ಅದರಂತೆ ಮಾಡುತ್ತೇನೆ."

ಭೀಷ್ಮನು ಹೇಳಿದನು:

"ಕಲ್ಯಾಣಿ! ಧರ್ಮದ ನಡೆಯನ್ನು ತಿಳಿಯಲಸಾಧ್ಯ ಎಂದು ಕೇಳಿದ್ದೇನೆ. ಲೋಕದ ಮಹಾತ್ಮ ವಿಪ್ರರೂ ಅದನ್ನು ಹಿಂಬಾಲಿಸಲು ಶಕ್ಯರಿಲ್ಲ. ಲೋಕದಲ್ಲಿ ಧರ್ಮವು ಪ್ರಶ್ನೆಯಲ್ಲಿದ್ದಾಗಲೆಲ್ಲಾ ಬಲಶಾಲಿ ಪುರುಷರು ಏನನ್ನು ಧರ್ಮವೆಂದು ಕಾಣುತ್ತಾರೋ ಅದನ್ನೇ ಇತರರೂ ಕೂಡ ಧರ್ಮವೆಂದು ಸ್ವೀಕರಿಸುತ್ತಾರೆ. ನಾನು ಈ ಪ್ರಶ್ನೆಯನ್ನು

ನಿಶ್ಚಯವಾಗಿ ಉತ್ತರಿಸಲು ಶಕ್ತನಾಗಿಲ್ಲ. ಯಾಕೆಂದರೆ ಇದು ಸೂಕ್ಷ್ಮವಾದುದು, ಗಹನವಾದುದು ಮತ್ತು ಇದೊಂದು ದೊಡ್ಡ ಸಾಹಸವು. ಈ ಕುಲದ ಅಂತ್ಯಕ್ಕೆ ತಡವಿಲ್ಲವೆಂದು ತೋರುತ್ತದೆ. ಸರ್ವ ಕುರುಗಳೂ ಲೋಭ-ಮೋಹಪರಾಯಣರಾಗಿದ್ದಾರೆ. ಕುಲವಧು ನಿನ್ನನ್ನು ಇಲ್ಲಿ ಕರೆತಂದಂತೆ ಉತ್ತಮ ಕುಲಗಳಲ್ಲಿ ಜನಿಸಿದವರು ವ್ಯಸನಪೀಡಿತರಾಗಿ ಧರ್ಮಮಾರ್ಗವನ್ನು ತೊರೆಯುವುದಿಲ್ಲ. ಕಷ್ಟಶೋಕವನ್ನು ಹೊಂದಿದ್ದರೂ ನೀನು ನಡೆದುಕೊಂಡ ರೀತಿಯು ಅಂಥಹುದು. ಈಗಲೂ ನೀನು ಧರ್ಮವನ್ನು ಹುಡುಕುತ್ತಿದ್ದೀಯೆ. ಇಲ್ಲಿರುವ ದ್ರೋಣ ಮೊದಲಾದ ಧರ್ಮವಿದ ವೃದ್ಧ ಜನರು ಸತ್ವವನ್ನು ಕಳೆದುಕೊಂಡು ಶೂನ್ಯ ದೇಹದಲ್ಲಿರುವವರಂತೆ ಮುಖವನ್ನು ಕೆಳಮಾಡಿ ಕುಳಿತಿದ್ದಾರೆ. ನನ್ನ ಪ್ರಕಾರ ಯುಧಿಷ್ಠಿರನು ಮಾತ್ರ ಈ ಪ್ರಶ್ನೆಗೆ ಪ್ರಮಾಣ. ನಿನ್ನನ್ನು ಗೆದ್ದಿದ್ದಾರೆಯೋ ಅಥವಾ ಇಲ್ಲವೋ ಎನ್ನುವುದನ್ನು ಸ್ವಯಂ ಅವನೇ ಹೇಳಬೇಕು.”

ಬಹಳಷ್ಟು ನಡೆದುಹೋದವುಗಳನ್ನು ಮತ್ತು ಕುರರೀ ಪಕ್ಷಿಯಂತೆ ಆರ್ತಳಾಗಿ ರೋಧಿಸುತ್ತಿದ್ದ ಅವಳನ್ನು ನೋಡಿದ ಮಹೀಕ್ಷಿತರು ಧಾರ್ತರಾಷ್ಟ್ರನ ಭೀತಿಯಿಂದ ಒಳ್ಳೆಯ ಅಥವಾ ಕೆಟ್ಟ ಯಾವ ಮಾತುಗಳನ್ನೂ ಆಡಲಿಲ್ಲ. ಪಾರ್ಥಿವ ಪುತ್ರಪೌತ್ರರೆಲ್ಲರೂ

ಸುಮ್ಮನಿದ್ದುದನ್ನು ನೋಡಿದ ಧೃತರಾಷ್ಟ್ರಪುತ್ರನು ಮುಗುಳ್ನಗುತ್ತಾ ಪಾಂಚಾಲರಾಜ ಸುತೆಗೆ ಹೇಳಿದನು:

> "ಯಾಜ್ಞಸೇನಿ! ನಿನ್ನ ಈ ಪ್ರಶ್ನೆಯನ್ನು ನಿನ್ನ ಸತ್ವಶಾಲಿ ಪತಿಗಳು - ಭೀಮ, ಅರ್ಜುನ, ಸಹದೇವ ಮತ್ತು ನಕುಲರಲ್ಲಿ ಇಡು. ನೀನು ಕೇಳಿದುದರ ಉತ್ತರ ಅವರಿಂದ ಬರಲಿ. ಯುಧಿಷ್ಠಿರನು ನಿನ್ನ ಒಡೆಯನಲ್ಲ ಎಂದು ಇವರೆಲ್ಲರೂ ಈ ಆರ್ಯರ ಮಧ್ಯದಲ್ಲಿ ಹೇಳಲಿ. ಆಗ ನೀನು ಧರ್ಮರಾಜನನ್ನು ದಾಸಭಾವದಿಂದ ಮುಕ್ತನನ್ನಾಗಿಸಬಲ್ಲೆ. ಅವನು ನಿನ್ನ ಒಡೆಯ ಅಥವಾ ಒಡೆಯನಲ್ಲವೆಂದು ಸ್ವಯಂ ಧರ್ಮಸ್ಥಿತ ಇಂದ್ರಸಮಾನ ಮಹಾತ್ಮ ಧರ್ಮರಾಜನು ಹೇಳಲಿ. ಅವನ ಮಾತಿನ ಪ್ರಕಾರ ನೀನು ಯಾವುದಾದರೂ ಒಂದರಂತೆ ಮಾಡು. ಈ ಸಭೆಯಲ್ಲಿರುವ ಸರ್ವ ಕೌರವರೂ ವರ್ತಮಾನದಲ್ಲಿ ನಿನ್ನ ದುಃಖದಲ್ಲಿ ಮುಳುಗಿಹೋಗಿದ್ದಾರೆ. ಆ ಆರ್ಯಸತ್ವರು ಯಥಾವತ್ತಾಗಿ ಉತ್ತರಿಸಲಾಗದೇ ನಿನ್ನ ಅಲ್ಪ ಭಾಗ್ಯ ಪತಿಗಳ ಕಡೆ ನೋಡುತ್ತಿದ್ದಾರೆ."

ಆಗ ಸಭೆಯಲ್ಲಿದ್ದ ಸರ್ವರೂ ಕುರುರಾಜನ ಆ ಮಾತನ್ನು ಉಚ್ಛ ಸ್ವರಗಳಲ್ಲಿ ಪ್ರಶಂಸಿಸಿದರು. ಕೆಲವರು ಸಂತೋಷದಿಂದ ಕರವಸ್ತ್ರಗಳನ್ನು ಮೇಲೆ ಹಾರಿಸಿದರೆ ಇನ್ನು ಕೆಲವರು "ಹಾ! ಹಾ!" ಎಂದು ಜೋರಾಗಿ ಕೂಗಿದರು. ಅಲ್ಲಿದ್ದ ಸರ್ವ ಪಾರ್ಥಿವರೂ

ಸಂತೋಷದಿಂದ ಧಾರ್ಮಿಕ ಕುರುಶ್ರೇಷ್ಠನನ್ನು ಗೌರವಿಸಿದರು. ಸರ್ವ ಪಾರ್ಥಿವರೂ ಧರ್ಮಜ್ಞನು ಏನು ಹೇಳುತ್ತಾನೆ ಎಂದು ಮುಖ ತಿರುಗಿಸಿ ಯುಧಿಷ್ಠಿರನೆಡೆಗೆ ನೋಡಿದರು. ಯುದ್ಧದಲ್ಲಿ ಗೆಲ್ಲಲಾರದ ಪಾಂಡವ ಬೀಭತ್ಸುವು ಏನು ಹೇಳುತ್ತಾನೆ? ಭೀಮಸೇನ ಮತ್ತು ಯಮಳರು ಏನು ಹೇಳುತ್ತಾರೆ? ಎಂದು ತುಂಬಾ ಕುತೂಹಲಗೊಂಡರು.

## ಭೀಮನ ಮಾತು

ಆ ಶಬ್ಧವು ಕಡಿಮೆಯಾಗಲು ಭೀಮಸೇನನು ಚಂದನಲೇಪಿತ ವಿಪುಲ ಭುಜವನ್ನು ಹಿಡಿದು ಹೇಳಿದನು:

> “ಧರ್ಮರಾಜ ಯುಧಿಷ್ಠಿರನು ನಮ್ಮ ಗುರು ಮತ್ತು ಈ ಕುಲದ ಪ್ರಭುವಾಗಿರದಿದ್ದರೆ ನಾವು ಈ ರೀತಿ ನೋವನ್ನನುಭವಿಸುತ್ತಿರಲಿಲ್ಲ. ಅವನು ನಮ್ಮ ಪುಣ್ಯ ಮತ್ತು ತಪಸ್ಸಿನ ಈಶ್ವರ ಮಾತ್ರ ಅಲ್ಲ ಪ್ರಾಣಗಳ ಈಶ್ವರನೂ ಹೌದು. ಅವನು ತನ್ನನ್ನು ತಾನು ಸೋತೆನೆಂದು ತಿಳಿದರೆ ನಾವೂ ಕೂಡ ಸೋತೆವೆಂದೇ ತಿಳಿಯುತ್ತೇವೆ. ಪಾಂಚಾಲಿಯ ಕೂದಲನ್ನು ಸ್ಪರ್ಷಿಸಿದ ಈ ಭೂಮಿಯ ಮೇಲಿನ ಯಾವ ನರನೂ ಜೀವ ಸಹಿತ ನನ್ನಿಂದ ಉಳಿಯುತ್ತಿರಲಿಲ್ಲ. ಪರಿಘದಂತೆ ಉರುಟಾದ ನನ್ನ ಈ ಭುಜಗಳನ್ನು ನೋಡಿ. ಇವುಗಳಲ್ಲಿ ಸಿಲುಕಿಕೊಂಡ ಶತಕ್ರತುವೂ ಕೂಡ ಬಿಡುಗಡೆ

ಹೊಂದಲು ಸಾಧ್ಯವಿಲ್ಲ. ಆದರೆ ಈಗ ಧರ್ಮಪಾಶದಲ್ಲಿ ಸಿಲುಕಿದ ನಾನು ಗೌರವ ಮತ್ತು ಅರ್ಜುನನ ನಿಗ್ರಹದಿಂದ ಸಂಕಟವನ್ನು ತರುತ್ತಿಲ್ಲ. ಧರ್ಮರಾಜನು ನನ್ನನ್ನು ಬಿಡುಗಡೆಮಾಡಿದರೆ ಸಿಂಹವು ಕ್ಷುದ್ರಮೃಗಗಳನ್ನು ಹೇಗೋ ಹಾಗೆ ಈ ಪಾಪಿ ಧಾರ್ತರಾಷ್ಟ್ರರನ್ನು ನಿಶ್ಶೇಷವಾಗಿ ಸಮಮಾಡುತ್ತಿದ್ದೆ!”

ಆಗ ಭೀಷ್ಮ, ದ್ರೋಣ ಮತ್ತು ವಿದುರರು

“ಶಾಂತನಾಗು! ನಿನ್ನಿಂದ ಸರ್ವವೂ ಸಂಭವವಿದೆ!”

ಎಂದರು. ಕರ್ಣನು ಹೇಳಿದನು:

“ದಾಸ, ಶಿಷ್ಯ ಮತ್ತು ಅಸ್ವತಂತ್ರ ನಾರಿ - ಈ ಮೂವರು ಅಧನರು. ಭದ್ರೇ! ದಾಸನ ಪತ್ನಿಯಾದ ನೀನು ಇವನ ಧನ. ಹೀನೇಶ್ವರಳಾದ ದಾಸಿಯೇ! ನೀನು ದಾಸಧನ. ಇವನ ಮನೆಯನ್ನು ಪ್ರವೇಶಿಸಿ ಪರಿಚಾರ ಸೇವೆಗಳನ್ನು ಮಾಡು. ಅದೊಂದು ಕಾರ್ಯವು ಉಳಿದುಕೊಂಡಿದೆ. ಈಗ ಈ ಎಲ್ಲ ಧಾರ್ತರಾಷ್ಟ್ರರೂ ನಿನ್ನ ಒಡೆಯರು. ಪಾರ್ಥರಲ್ಲ. ನಿನ್ನ ಸ್ವಾತಂತ್ರ್ಯವನ್ನು ಪಣವನ್ನಾಗಿಡದಂಥಹ ಬೇರೆ ಯಾರನ್ನಾದರೂ ನಿನ್ನ ಪತಿಯನ್ನಾಗಿ ಆರಿಸಿಕೋ. ಪತಿಯ ಸೇವೆ ಮಾಡುವುದು ಅನವದ್ಯವಲ್ಲ. ನಿನ್ನನ್ನು ನಿತ್ಯ ದಾಸಿಯಾಗಿ ತಿಳಿಯುತ್ತೇವೆ. ನಕುಲ, ಭೀಮಸೇನ,

ಯುಧಿಷ್ಠಿರ, ಸಹದೇವ ಮತ್ತು ಅರ್ಜುನರು ಪರಾಜಿತರಾಗಿದ್ದಾರೆ. ದಾಸಿಯಾಗಿ ಒಳಗೆ ಬಾ. ಪರಾಜಿತರಾದವರು ನಿನ್ನ ಪತಿಗಳಾಗಿ ಉಳಿದಿಲ್ಲ. ಪಾರ್ಥನ ಪರಾಕ್ರಮ-ಪೌರುಷವೆಲ್ಲ ಅವನ ಸ್ವಂತ ಪ್ರಯೋಜನಕ್ಕೇ ಬರುತ್ತಿಲ್ಲ. ಪಾಂಚಾಲ ದ್ರುಪದನ ಈ ಮಗಳನ್ನು ಸಭಾಮಧ್ಯದಲ್ಲಿ ಜೂಜಿನ ಪಣವನ್ನಾಗಿಟ್ಟು ಕಳೆದುಕೊಂಡ!”

ಇದನ್ನು ಕೇಳಿ ಅತಿಕುಪಿತನಾದ ಭೀಮಸೇನನು ಸಹಿಸಲಾಗದೇ ನಿಟ್ಟುಸಿರು ಬಿಡುತ್ತಾ ಆರ್ತರೂಪಿ ಧರ್ಮಪಾಶಗಳಿಂದ ಬದ್ಧ ರಾಜನನ್ನು ಸುಡುತ್ತಿರುವನೋ ಎನ್ನುವಂತೆ ಕೋಪವಿರಕ್ತ ದೃಷ್ಟಿಯಿಂದ ನೋಡಿ ಹೇಳಿದನು:

“ರಾಜನ್! ನಾನು ಸೂತಪುತ್ರನ ಮೇಲೆ ಕುಪಿತನಾಗಿಲ್ಲ. ಯಾಕೆಂದರೆ ನಾವು ದಾಸಧರ್ಮವನ್ನು ಪಡೆದಿರುವುದು ಸತ್ಯ. ನರೇಂದ್ರ! ಆದರೆ ನೀನು ಅವಳನ್ನು ಪಣವಾಗಿ ಎಸೆಯದಿದ್ದರೆ ನನ್ನನ್ನು ಈ ರೀತಿ ಇವರು ಬಂಧನದಲ್ಲಿಡಲು ಸಾಧ್ಯವಾಗುತ್ತಿತ್ತೇ?”

ರಾಧೇಯನ ಮಾತುಗಳನ್ನು ಕೇಳಿದ ರಾಜ ದುರ್ಯೋಧನನು ಜೀವವಿಲ್ಲದವನಂತೆ ಸುಮ್ಮನೆ ಕುಳಿತಿದ್ದ ಯುಧಿಷ್ಠಿರನಿಗೆ ಹೇಳಿದನು:

“ನೃಪ! ಭೀಮಾರ್ಜುನರು ಮತ್ತು ಯಮಳರು ನಿನ್ನ

> ಶಾಸನವನ್ನು ಅನುಸರಿಸುತ್ತಾರೆ. ಪ್ರಶ್ನೆಗೆ ಉತ್ತರಿಸು. ನಾವು ಕೃಷ್ಣೆಯನ್ನು ಗೆದ್ದಿದ್ದೇವೆ ಎಂದು ನಿನಗನಿಸುತ್ತದೆಯೇ?"

ಈ ರೀತಿ ಕೌಂತೇಯನಿಗೆ ಹೇಳಿ ಆ ಐಶ್ವರ್ಯಮದಮೋಹಿತನು ತನ್ನ ವಸ್ತ್ರವನ್ನು ಮೇಲೆತ್ತಿ ಕರೆಯುವ ದೃಷ್ಟಿಯಿಂದ ದ್ರೌಪದಿಯತ್ತ ನೋಡಿದನು. ರಾಧೇಯನೊಂದಿಗೆ ಚೇಷ್ಟೆಯಾಡುತ್ತಾ ಭೀಮಸೇನನನ್ನು ಸಿಟ್ಟಿಗೇಳಿಸಲು, ಅವನು ಬಾಳೆಯದಿಂಡಿನಂತಿದ್ದ, ಸರ್ವಲಕ್ಷಣಪೂಜಿತ, ಆನೆಯ ಸೊಂಡಿಲಿನಂತಿದ್ದ, ವಜ್ರಪ್ರತಿಮ, ಗೌರವಯುಕ್ತ ತನ್ನ ಎಡ ತೊಡೆಯನ್ನು ದ್ರೌಪದಿಗೆ ತೋರಿಸಿದನು. ಅದನ್ನು ನೋಡಿದ ವೃಕೋದರನು ತನ್ನ ಕೆಂಪು ಕಣ್ಣುಗಳನ್ನು ಅರಳಿಸಿ ಸಭೆಯಲ್ಲಿದ್ದ ರಾಜರೆಲ್ಲರಿಗೂ ಕೇಳುವ ಹಾಗೆ ಕೂಗಿ ಹೇಳಿದನು:

> "ಮಹಾಯುದ್ಧದಲ್ಲಿ ನಾನು ಇವನ ಆ ತೊಡೆಯನ್ನು ಗದೆಯಿಂದ ಹೊಡೆದು ತುಂಡುಮಾಡದಿದ್ದರೆ ಈ ವೃಕೋದರನು ತನ್ನ ಪಿತೃಗಳ ಲೋಕವನ್ನು ಸೇರದಿರಲಿ!"

ಅವನು ಈ ರೀತಿ ಹೇಳುತ್ತಿದ್ದಂತೆ ಪೊಳ್ಳು ಮರದ ಕೊಟರೆಯಿಂದ ಹೇಗೋ ಹಾಗೆ ಆ ಕೃದ್ಧನ ದೇಹದ ಎಲ್ಲ ರಂಧ್ರಗಳಿಂದ ಬೆಂಕಿಯು ಹೊರಬಿದ್ದಿತು. ವಿದುರನು ಹೇಳಿದನು:

> "ರಾಜರೇ! ಈ ಮಹಾ ಭಯಂಕರ ಭೀಮಸೇನನನ್ನು ನೋಡಿ! ಇವನು ವರುಣನ ಪಾಶದಂತೆಯೇ

ತೋರುತ್ತಿದ್ದಾನೆ. ಇದು ಈ ಪುರಾತನ ಭರತವಂಶಕ್ಕೆ ದೈವವು ಮೊದಲೇ ನೀಡಿದ ಒಂದು ದುರ್ಭಾಗ್ಯವಾಗಿರಬಹುದು. ಸಭೆಯಲ್ಲಿ ಈ ಸ್ತ್ರೀಗಾಗಿ ನಡೆಸಿದ ನಿಮ್ಮ ಅತಿದ್ಯೂತವನ್ನು ಸಾಕುಮಾಡಿ. ಪಾಪವನ್ನು ಯೋಜಿಸಿ ಕಾರ್ಯಗತಗೊಳಿಸಿದ ನಿಮ್ಮ ಯೋಗಕ್ಷೇಮಕ್ಕೆ ಮಹಾಭಯವೊಂದು ಗೋಚರವಾಗುತ್ತಿದೆ. ಬೇಗನೆ ಇದರ ಕುರಿತು ಧರ್ಮವು ಏನು ಹೇಳುತ್ತದೆ ಎನ್ನುವುದನ್ನು ನಿರ್ಧಾರಮಾಡಿ. ಆ ನಿರ್ಧಾರವು ಸರಿಯಾಗಿರದಿದ್ದರೆ ಈ ಸಭೆಯು ಅನುಭವಿಸುತ್ತದೆ. ಈ ಜೂಜುಗಾರನು ತಾನು ಪರಾಜಿತನಾಗುವುದರ ಮೊದಲೇ ಇವಳನ್ನು ಪಣವನ್ನಾಗಿಟ್ಟಿದ್ದರೆ ಅವನು ಅವಳ ಒಡೆಯನಾಗಿರುತ್ತಿದ್ದನು. ಯಾವುದರ ಮೇಲೆ ತನಗೆ ಒಡೆತನವೇ ಇಲ್ಲವೋ ಅದನ್ನು ಪಣವಾಗಿಟ್ಟು ಗೆದ್ದೆನೆಂದರೆ ಕನಸಿನಲ್ಲಿ ಗೆದ್ದ ಪಣವೂ ಧನವಾಗಿರುತ್ತಿತ್ತು. ಗಾಂಧಾರಿಪುತ್ರನ ಮಾತುಗಳನ್ನು ಕೇಳಿದ ನೀವು ಇದರ ಕುರಿತಾದ ಧರ್ಮನಿರ್ಣಯವನ್ನು ಹೇಳಿ.”

ದುರ್ಯೋಧನನು ಹೇಳಿದನು:

“ಭೀಮನ ವಾಕ್ಯ, ಹಾಗೆಯೇ ಅರ್ಜುನನ ಮತ್ತು ಯಮಳರ ಮಾತಿನಂತೆ ನಾವು ನಡೆದುಕೊಳ್ಳೋಣ. ಒಂದು ವೇಳೆ

> ಯುಧಿಷ್ಠಿರನು ಅವರ ಒಡೆಯನಾಗಿರಲಿಲ್ಲ ಎಂದು ಅವರು ಹೇಳಿದರೆ, ಯಾಜ್ಞಸೇನಿ! ನೀನು ದಾಸತ್ವದಿಂದ ಮುಕ್ತಳಾಗುತ್ತೀಯೆ.”

ಅರ್ಜುನನು ಹೇಳಿದನು:

> “ನಮ್ಮನ್ನು ಪಣವನ್ನಾಗಿ ಇಡುವುದಕ್ಕೆ ಮೊದಲು ರಾಜ ಮಹಾತ್ಮ ಕುಂತೀಪುತ್ರ ಧರ್ಮರಾಜನು ನಮ್ಮ ಒಡೆಯನಾಗಿದ್ದನು. ಆದರೆ ತನ್ನನ್ನು ತಾನೇ ಕಳೆದುಕೊಂಡವನು ಯಾರ ಒಡೆಯ? ಇದನ್ನೇ ನೀವು ಸರ್ವ ಕುರುಗಳೂ ನಿರ್ಧಾರ ಮಾಡಬೇಕು.”

## ದ್ರೌಪದೀ ವರಲಾಭ

ಆಗ ಅಲ್ಲಿ ರಾಜ ಧೃತರಾಷ್ಟ್ರನ ಗೃಹದ ಅಗ್ನಿಹೋತ್ರದ ಬಳಿ ನರಿಯೊಂದು ಕೂಗಿತು. ಅದಕ್ಕೆ ಪ್ರತ್ಯುತ್ತರವಾಗಿ ಕತ್ತೆಗಳು ಒದರಿದವು. ಅದೇ ಸಮಯದಲ್ಲಿ ಎಲ್ಲಕಡೆಗಳಿಂದ ಪಕ್ಷಿಗಳ ರೋದನವು ಕೇಳಿಬಂದಿತು. ಆ ಘೋರ ಶಬ್ಧವನ್ನು ತತ್ವವಾದಿ ವಿದುರನು ಕೇಳಿದನು. ಹಾಗೆಯೇ ಸುಬಲಾತ್ಮಜನೂ, ಭೀಷ್ಮ-ದ್ರೋಣರೂ, ಮತ್ತು ವಿದ್ವಾನ್ ಗೌತಮನೂ ಕೇಳಿದರು. ಅವರು ಜೋರಾಗಿ “ಸ್ವಸ್ತಿ! ಸ್ವಸ್ತಿ!” ಎಂದು ಕೂಗಿದರು. ವಿದ್ವಾಂಸ ವಿದುರ ಮತ್ತು ಗಾಂಧಾರಿ ಇಬ್ಬರೂ ಆ ಘೋರ ಉತ್ಪಾತಗಳು

ತೋರಿದುದನ್ನು ತಕ್ಷಣವೇ ರಾಜನಿಗೆ ಹೇಳಿದ ನಂತರ ರಾಜನು ಈ ಮಾತುಗಳನ್ನಾಡಿದನು:

> "ಮಂದಬುದ್ಧಿ! ದುರ್ಯೋಧನ! ಕುರುಪುಂಗವರ ಈ ಸಭೆಯಲ್ಲಿ ಸರಿಯಾಗಿಯೇ ಮಾತನಾಡುತ್ತಿರುವ ಸ್ತ್ರೀಯೊಂದಿಗೆ ಅದರಲ್ಲೂ ವಿಶೇಷವಾಗಿ ಧರ್ಮನ ಪತ್ನಿ ದ್ರೌಪದಿಯೊಂದಿಗೆ ಕೆಟ್ಟದ್ದಾಗಿ ವರ್ತಿಸಿದ್ದುದರಿಂದ ಸೋತವನು ನೀನೇ!"

ಹೀಗೆ ಹೇಳಿದ ಮನೀಷಿ ಧೃತರಾಷ್ಟ್ರನು ಬಾಂಧವ ಪತ್ನಿ ಕೃಷ್ಣಾ ಪಾಂಚಾಲಿಯನ್ನು ಸಂತವಿಸುವ ಉದ್ದೇಶದಿಂದ ಪ್ರಜ್ಞೆಯ ತತ್ವಬುದ್ಧಿಯನ್ನು ಸೂಚಿಸುವ ಮಾತುಗಳನ್ನಾಡಿದನು:

> "ಪಾಂಚಾಲಿ! ಪರಮ ಧಾರ್ಮಿಕ ಸತಿಯಾದ ನೀನು ನನ್ನ ಸೊಸೆಯಂದಿರಲ್ಲಿಯೇ ವಿಶಿಷ್ಠಳಾಗಿದ್ದೀಯೆ. ನನ್ನಿಂದ ನೀನು ಬಯಸುವ ವರವನ್ನು ಪಡೆ."

ದ್ರೌಪದಿಯು ಹೇಳಿದಳು:

> "ಭರತರ್ಷಭ! ವರವೊಂದನ್ನು ನನಗೆ ಕೊಡುವುದಾದರೆ ಸರ್ವಧರ್ಮಾನುಗ ಶ್ರೀಮಾನ್ ಯುಧಿಷ್ಠಿರನು ಅದಾಸನಾಗಲಿ. ತಿಳಿಯದವರು ಮನಸ್ವಿ ಪ್ರತಿವಿಂಧ್ಯನನ್ನು "ಇಗೋ ಇವನು ದಾಸಪುತ್ರ!" ಎಂದು ಕರೆಯದಂತಾಗದಿರಲಿ! ಈ ವರೆಗೆ ಬೇರೆ ಯಾವ

ಪುರುಷನೂ ಅವನಂತೆ ಲಾಲಿತನಾಗಿಲ್ಲ. ಅವನು ತನ್ನ ದಾಸಪುತ್ರತ್ವವನ್ನು ನೋಡಿ ಸತ್ತೇಹೋಗುತ್ತಾನೆ!"

ಧೃತರಾಷ್ಟ್ರನು ಹೇಳಿದನು:

"ಭದ್ರೇ! ನಾನು ನಿನಗೆ ಎರಡನೇ ವರವನ್ನು ಕೊಡುತ್ತೇನೆ. ಕೇಳಿಕೋ. ನೀನು ಒಂದೇ ಒಂದು ವರಕ್ಕೆ ಅರ್ಹಳಲ್ಲ ಎಂದು ನನ್ನ ಮನಸ್ಸು ಹೇಳುತ್ತಿದೆ."

ದ್ರೌಪದಿಯು ಹೇಳಿದಳು:

"ನನ್ನ ಎರಡನೆಯ ವರವಾಗಿ ನಾನು ರಥ-ಧನುಸ್ಸುಗಳೊಂದಿಗೆ ಭೀಮಸೇನ, ಧನಂಜಯ ಮತ್ತು ನಕುಲ ಸಹದೇವರನ್ನು ಕೇಳಿಕೊಳ್ಳುತ್ತೇನೆ."

ಧೃತರಾಷ್ಟ್ರನು ಹೇಳಿದನು:

"ಮೂರನೆಯ ವರವನ್ನೂ ಕೇಳು. ನೀನು ಎರಡೇ ಎರಡು ವರಗಳಿಂದ ಸುಸತ್ಕೃತಳಾದೆಯೆಂದು ಅನಿಸುವುದಿಲ್ಲ. ಧರ್ಮಚಾರಿಣಿಯಾದ ನೀನು ನನ್ನ ಎಲ್ಲ ಸೊಸೆಯಂದಿರಲ್ಲಿ ಶ್ರೇಯಸಿ."

ದ್ರೌಪದಿಯು ಹೇಳಿದಳು:

"ಭಗವನ್! ಲೋಭವು ಧರ್ಮವನ್ನು ನಾಶಪಡಿಸುತ್ತದೆ.

ನಾನು ಮೂರನೆಯ ವರವನ್ನು ಪಡೆಯಲು ಅನರ್ಹಳು. ವೈಶ್ಯೆಯ ಪತ್ನಿಗೆ ಒಂದೇ ವರ, ಕ್ಷತ್ರಿಯನ ಪತ್ನಿಗೆ ಎರಡು ವರಗಳು, ರಾಜನ ಪತ್ನಿಗೆ ಮೂರು ವರಗಳು ಮತ್ತು ಬ್ರಾಹ್ಮಣನ ಪತ್ನಿಗೆ ನೂರು ವರಗಳೆಂದು ಹೇಳುತ್ತಾರೆ. ಪಾಪೀಯಸರಾಗಿದ್ದ ನನ್ನ ಪತಿಗಳು ಈಗ ಪಾರಾಗಿದ್ದಾರೆ. ಇನ್ನು ಮುಂದೆ ಅವರೇ ತಮ್ಮ ಪುಣ್ಯ ಕರ್ಮಗಳಿಂದ ಒಳ್ಳೆಯದನ್ನು ಹೊಂದುತ್ತಾರೆ!"

ಕರ್ಣನು ಹೇಳಿದನು:

"ಇದೂವರೆಗೆ ಕೇಳಿದ್ದ ರೂಪಸಮನ್ವಿತ ಯಾವ ಮನುಷ್ಯ ಸ್ತ್ರೀಯೂ ಇಂಥಹ ಕರ್ಮವನ್ನು ಸಾಧಿಸಿದುದನ್ನು ಕೇಳಿಲ್ಲ. ಪಾರ್ಥರು ಮತ್ತು ಧಾರ್ತರಾಷ್ಟ್ರರು ಕ್ರೋಧಾವಿಷ್ಟರಾಗುತ್ತಿರಲು ಈ ದ್ರೌಪದಿ ಕೃಷ್ಣೆಯು ಪಾಂಡುಪುತ್ರರರಿಗೆ ಶಾಂತಿಯನ್ನು ತಂದಿಟ್ಟಹಾಗಾಯಿತು. ಮುಳುಗುತ್ತಿದ್ದ ದೋಣಿಯಿಂದ ತಳವಿಲ್ಲದ ಸಾಗರದಲ್ಲಿ ಮುಳುಗಿ ಹೋಗುತ್ತಿದ್ದ ಈ ಪಾಂಡುಪುತ್ರರಿಗೆ ಪಾಂಚಾಲಿಯು ಪಾರುಮಾಡುವ ದೋಣಿಯಂತಾದಳು."

## ಭೀಮನ ಕ್ರೋಧ

ಪಾಂಡುಪುತ್ರರಿಗೆ ಸ್ತ್ರೀಯೇ ಗತಿಯಾದಳು ಎಂದು ಕುರುಮಧ್ಯದಲ್ಲಿ

ಹೇಳಿದ್ದುದನ್ನು ಕೇಳಿದ ಭೀಮಸೇನನು ಅತಿ ಕೋಪಗೊಂಡು ಮನನೊಂದು ಹೇಳಿದನು:

> “ಪುರುಶನಿಗೆ ಮೂರು ಜ್ಯೋತಿಗಳಿವೆ ಎಂದು ದೇವಲನು ಹೇಳಿದ್ದಾನೆ: ಸಂತಾನ, ಕರ್ಮ ಮತ್ತು ವಿದ್ಯೆ. ಇವುಗಳಿಂದಲೇ ಸೃಷ್ಟಿಯಾದವುಗಳು ಬಾಳುತ್ತವೆ. ಬಾಂಧವರು ಬಿಸಾಡಿದ ಪುರುಷನ ಮಾಂಸವಿಲ್ಲದ ಪ್ರಾಣಗತ ಶೂನ್ಯ ದೇಹದ ನಂತರ ಉಳಿಯುವುದೆಂದರೆ ಇವು ಮೂರೇ. ಧನಂಜಯ! ನಮ್ಮ ಪತ್ನಿಯನ್ನು ಇವರು ಉಲ್ಲಂಘಿಸಿ ಒಂದು ಜ್ಯೋತಿಯನ್ನು ಆರಿಸಿದ್ದಾರೆ. ಉಲ್ಲಂಘನೆಗೊಂಡ ಪತ್ನಿಯಿಂದ ಸಂತಾನವನ್ನು ಹೇಗೆ ಪಡೆಯಬಹುದು?”

ಅರ್ಜುನನು ಹೇಳಿದನು:

> “ಹೀನಪುರುಷರು ಆಡಿದ ಅಥವಾ ಆಡದೇ ಇದ್ದ ಮಾತುಗಳಿಗೆ ಭಾರತರು ಪ್ರತಿಕ್ರಿಯೆಯನ್ನು ನೀಡುವುದಿಲ್ಲ. ಉತ್ತಮ ಪುರುಷರು ಸದಾ ಸುಕೃತಗಳನ್ನೇ ನೆನಪಿಟ್ಟುಕೊಳ್ಳುತ್ತಾರೆ. ವೈರತ್ವದಿಂದ ಮಾಡಿದ ಕರ್ಮಗಳನ್ನಲ್ಲ. ತಮ್ಮ ಮೇಲೆಯೇ ವಿಶ್ವಾಸವಿರುವ ಸಂತರು ಒಳ್ಳೆಯದನ್ನು ಗುರುತಿಸುತ್ತಾರೆ.”

ಭೀಮನು ಹೇಳಿದನು:

> “ಸಮಾಗತ ಎಲ್ಲ ಶತ್ರುಗಳನ್ನೂ ಇಲ್ಲಿಯೇ ಕೊಂದುಬಿಡುತ್ತೇನೆ. ಆದುದರಿಂದ ರಾಜೇಂದ್ರ! ಹೊರಗೆ ಹೋಗು. ಇವರನ್ನು ಸಮೂಲವಾಗಿ ಸಂಹರಿಸುತ್ತೇನೆ. ಇಲ್ಲಿ ಇನ್ನೂ ಏಕೆ ವಿವಾದದಲ್ಲಿ ತೊಡಗಿ ಕ್ಲೇಶವನ್ನು ಅನುಭವಿಸಬೇಕು? ಇಂದೇ ಇಲ್ಲಿಯೇ ಇವರನ್ನು ವಧಿಸುತ್ತೇನೆ. ನೀನು ಈ ವಸುಧೆಯನ್ನು ಆಳು.”

ಹೀಗೆ ಹೇಳಿದ ಭೀಮಸೇನನು ತನ್ನ ಕಿರಿಯ ತಮ್ಮಂದಿರುಗಳಿಂದ ಆವೃತನಾಗಿ ಮೃಗಮಧ್ಯದಲ್ಲಿದ್ದ ಸಿಂಹನಂತೆ ಕಾಣುತ್ತಿದ್ದನು ಮತ್ತು ಆಗಾಗ ಪರಿಘವನ್ನು ನೋಡುತ್ತಿದ್ದನು. ಅಕ್ಲಿಷ್ಟಕರ್ಮಿ ಪಾರ್ಥರು ಅವನನ್ನು ಒಳ್ಳೆಯ ರೀತಿಯಲ್ಲಿ ಸಂತವಿಸುತ್ತಿರಲು ವೀರ್ಯವಾನ್ ಮಹಾಬಾಹುವು ಒಳಗಿಂದೊಳಗೇ ಬೇಯತೊಡಗಿದನು. ಅವನ ಕಿವಿ ಮತ್ತು ಇತರ ರಂಧ್ರಗಳಿಂದ ಧೂಮದೊಂದಿಗೆ ನಿಧಾನವಾಗಿ ಉರಿಯುತ್ತಿರುವ ಕೆಂಡದಂತೆ ಬೆಂಕಿಯು ಹೊರಬಂದಿತು. ಅವನ ಮುಖವು ಯುಗಾಂತಕಾಲವು ಪ್ರಾಪ್ತವಾದಾಗ ಸ್ವಯಂ ಕೃತಾಂತನ ರೂಪವು ಹೇಗೋ ಹಾಗೆ ನೋಡಿದವರಿಗೆ ಭಯವನ್ನುಂಟುಮಾಡುವಂಥಾಯಿತು. ಯುಧಿಷ್ಠಿರನು ಆ ಬಾಹುಬಲಶಾಲಿಯ ಬಾಹುಗಳನ್ನು ಹಿಡಿದು “ಭಾರತ! ಬೇಡ! ಸುಮ್ಮನಿರು!” ಎಂದು ಕೂರಿಸಿದನು. ಆ ಕೋಪಸಂರಕ್ತಲೋಚನ ಮಹಾಬಾಹುವನ್ನು ತಡೆಹಿಡಿದ ಯುಧಿಷ್ಠಿರನು ಅಂಜಲೀ ಬದ್ಧನಾಗಿ

ತನ್ನ ಪಿತ ಧೃತರಾಷ್ಟ್ರನ ಸಮುಪಸ್ಥಿತಿಯಲ್ಲಿ ಬಂದನು.

## ಇಂದ್ರಪ್ರಸ್ಥಕ್ಕೆ ಯುಧಿಷ್ಠಿರನ ಪ್ರಯಾಣ

ಯುಧಿಷ್ಠಿರನು ಹೇಳಿದನು:

“ರಾಜನ್! ಈಗ ನಾವು ಏನು ಮಾಡಬೇಕು? ನಮಗೆ ಆಜ್ಞಾಪಿಸು. ನೀನು ನಮ್ಮ ಒಡೆಯ. ನಿತ್ಯವೂ ನಾವು ನಿನ್ನ ಶಾಸನದಂತೆ ನಡೆದುಕೊಳ್ಳಲು ಬಯಸುತ್ತೇವೆ.”

ಧೃತರಾಷ್ಟ್ರನು ಹೇಳಿದನು:

“ಅಜಾತಶತ್ರು! ನಿನಗೆ ಮಂಗಳವಾಗಲಿ! ಶಾಂತಿ ಮತ್ತು ಸುಖದಿಂದ ಹೋಗು. ನಿನಗೆ ಅನುಜ್ಞೆಯಿದೆ. ನಿನ್ನ ರಾಜ್ಯವನ್ನು ಧನದೊಂದಿಗೆ ಆಳು. ಆದರೆ ಈ ವೃದ್ಧನು ನಿನಗೆ ನೀಡುವ ಸಲಹೆಯನ್ನು ಹೃದಯಕ್ಕೆ ತೆಗೆದುಕೋ. ಏಕೆಂದರೆ ಇದು ನಿಶ್ಚಯವಾಗಿಯೂ ಪರಮ ಶ್ರೇಯಸ್ಸಿಗೆ ಪಥ್ಯ. ನಿನಗೆ ಧರ್ಮಗಳ ಸೂಕ್ಷ್ಮ ಗತಿಯು ತಿಳಿದಿದೆ. ವಿನೀತನಾಗಿರುವೆ ಮತ್ತು ವೃದ್ಧರ ಸೇವೆ ಮಾಡುತ್ತೀಯೆ. ಎಲ್ಲಿ ಬುದ್ಧಿಯಿದೆಯೋ ಅಲ್ಲಿ ಶಾಂತಿಯಿರುತ್ತದೆ. ಶಾಂತನಾಗಿ ಹೋಗು. ಕಟ್ಟಿಗೆಯಲ್ಲದುದನ್ನು ಶಸ್ತ್ರವು ಕಡಿಯುವುದಿಲ್ಲ. ಕಟ್ಟಿಗೆಯ ಮೇಲೆ ಮಾತ್ರ ಶಸ್ತ್ರವನ್ನು ಪ್ರಯೋಗಿಸಬಹುದು. ಉತ್ತಮ ಪುರುಷನು ವೈರತ್ವವನ್ನು

ತಿಳಿದಿರುವುದಿಲ್ಲ. ಗುಣಗಳನ್ನು ನೋಡುತ್ತಾನೆ, ಅವಗುಣಗಳನ್ನಲ್ಲ ಮತ್ತು ವಿರೋಧವನ್ನು ಸಾಧಿಸುವುದಿಲ್ಲ. ನರಾಧಮರು ಮಾತ್ರ ಮಾತನಾಡುವಾಗ ಅಪಮಾನ ಮಾಡುತ್ತಾರೆ. ಆದರೆ ಉತ್ತಮ ಪುರುಷರು ಹೇಳದೇ ಇದ್ದ ಅಥವಾ ಹೇಳಿದ ಯಾವುದೇ ಅಹಿತ ಮಾತುಗಳಿಗೆ ಪ್ರತಿಕ್ರಿಯೆ ತೋರಿಸದೇ ಸಹಿಸಿಕೊಳ್ಳುತ್ತಾರೆ. ಸಂತರು ಸುಕೃತಗಳನ್ನು ಮಾತ್ರ ನೆನಪಿನಲ್ಲಿಟ್ಟುಕೊಳ್ಳುತ್ತಾರೆ ಮತ್ತು ಗುರುತಿಸುತ್ತಾರೆ. ದ್ವೇಷದಲ್ಲಿ ಮಾಡಿದವುಗಳನ್ನಲ್ಲ. ಏಕೆಂದರೆ ಅವರಿಗೆ ತಮ್ಮ ಮೇಲೆಯೇ ವಿಶ್ವಾಸವಿರುತ್ತದೆ. ಈ ಸತ್ಸಮಾಗಮದಲ್ಲಿ ನೀನು ಗೌರವಯುತವಾಗಿ ನಡೆದುಕೊಂಡಿದ್ದೀಯೆ. ದುರ್ಯೋಧನನ ಕೆಟ್ಟ ವರ್ತನೆಗಳನ್ನು ಹೃದಯಕ್ಕೆ ತೆಗೆದುಕೊಳ್ಳಬೇಡ. ನಿನ್ನ ಋಣಾಕಾಂಕ್ಷಿಗಳಾಗಿ ಉಪಸ್ಥಿತರಿರುವ ಈ ವೃದ್ಧರೂ ಅಂಧರೂ ಆದ ನಿನ್ನ ತಾಯಿ ಗಾಂಧಾರಿ ಮತ್ತು ತಂದೆ ನನ್ನನ್ನು ನೋಡು. ಮಿತ್ರರನ್ನು ಮತ್ತು ಪುತ್ರರ ಬಲಾಬಲವನ್ನು ನೋಡುವುದಕ್ಕೋಸ್ಕರ ನಾನು ಈ ದ್ಯೂತವನ್ನು ಏರ್ಪಡಿಸಿದ್ದೆ. ನಿನ್ನ ಅನುಶಾಸನದಲ್ಲಿರುವ ಕುರುಗಳ ಮತ್ತು ಧೀಮಂತ ಸರ್ವಶಾಸ್ತ್ರವಿಶಾರದ ಮಂತ್ರಿ ವಿದುರನ ಕುರಿತು ಶೋಕಿಸಬೇಡ. ನಿನ್ನಲ್ಲಿ ಧರ್ಮವಿದೆ. ಅರ್ಜುನನಲ್ಲಿ ವೀರ್ಯವಿದೆ. ಭೀಮಸೇನನಲ್ಲಿ

> ಪರಾಕ್ರಮವಿದೆ ಮತ್ತು ಯಮಳರಲ್ಲಿ ಶ್ರದ್ಧೆ, ಗುರು-ಹಿರಿಯರ ಶುಶ್ರೂಷೆಯಿದೆ. ನಿನಗೆ ಮಂಗಳವಾಗಲಿ!
>
> ಖಾಂಡವಪ್ರಸ್ಥವನ್ನು ಸೇರು. ನಿನ್ನ ಭ್ರಾತೃಗಳಲ್ಲಿ ನಿನಗೆ ಸೌಹಾರ್ದತ್ವ ಇರಲಿ ಮತ್ತು ನಿನ್ನ ಮನಸ್ಸು ಧರ್ಮದಲ್ಲಿ ನೆಲೆಸಿರಲಿ.”

ಭರತಶ್ರೇಷ್ಠ ಧರ್ಮರಾಜ ಯುಧಿಷ್ಠಿರನು ಈ ಮಾತುಗಳೆಲ್ಲವನ್ನೂ ಗೌರವಾನ್ವಿತವಾಗಿ ಒಪ್ಪಿಕೊಂಡು ಭ್ರಾತೃಗಳ ಸಹಿತ ಹೊರಟನು. ಅವರು ಮೇಘದಂತೆ ಗರ್ಜಿಸುವ ರಥಗಳನ್ನೇರಿ ಕೃಷ್ಣೆಯ ಸಹಿತ ಹೃಷ್ಟಮನಸ್ಕರಾಗಿ ಉತ್ತಮ ಪುರ ಇಂದ್ರಪ್ರಸ್ಥದ ಕಡೆ ಹೊರಟರು.

# ಅನುದ್ಯೂತ; ಪಾಂಡವರಿಗೆ ವನವಾಸ

## ಯುಧಿಷ್ಠಿರನನ್ನು ಪುನಃ ದ್ಯೂತಕ್ಕೆ ಕರೆದುದು

ಧೀಮತ ಧೃತರಾಷ್ಟ್ರನು ಅವರಿಗೆ ಹೋಗಲು ಅನುಮತಿಯನ್ನು ಕೊಟ್ಟ ಎಂದು ತಿಳಿದಾಕ್ಷಣವೇ ದುಃಶಾಸನನು ಅಣ್ಣನ ಬಳಿ ಹೋದನು. ಅಲ್ಲಿ ಅಮಾತ್ಯರ ಜೊತೆಗಿದ್ದ ದುರ್ಯೋಧನನ್ನು ಭೆಟ್ಟಿಯಾಗಿ ದುಃಖಾರ್ತನಾಗಿ ಹೇಳಿದನು:

> “ಕಷ್ಟಪಟ್ಟು ಗಳಿಸಿದ ಎಲ್ಲವನ್ನೂ ಆ ಮುದುಕನು ನಾಶಮಾಡಿಬಿಟ್ಟನಲ್ಲ! ಎಲ್ಲ ಸಂಪತ್ತನ್ನೂ ಶತ್ರುಗಳಿಗೆ

ಹೋಗುವ ಹಾಗೆ ಮಾಡಿದ್ದಾನೆ. ಮಹಾರಥಿಗಳೇ! ಇದನ್ನು ಯೋಚಿಸಿ.”

ಆಗ ಮಾನಿನ ದುರ್ಯೋಧನನು ಕರ್ಣ ಮತ್ತು ಸೌಬಲ ಶಕುನಿಯರೊಡಗೂಡಿ ಒಟ್ಟಿಗೇ ಪಾಂಡವರ ಪ್ರತಿ ಸಂಚು ಹೂಡಿದನು. ಅವರು ಅವಸರ ಮಾಡಿ ವೈಚಿತ್ರವೀರ್ಯ ಮನೀಷಿಣಿ ರಾಜ ಧೃತರಾಷ್ಟ್ರನಲ್ಲಿಗೆ ಹೋಗಿ ಮೃದು ಮಾತುಗಳಿಂದ ಹೇಳಿದರು:

“ರಾಜನ್! ದೇವಪುರೋಹಿತ ವಿದ್ವಾನ್ ಬೃಹಸ್ಪತಿಯು ಶಕ್ರ ನೀತಿಯನ್ನು ಪ್ರತಿಪಾದಿಸುತ್ತಾ ಏನು ಹೇಳಿದನೆಂದು ನೀನು ಕೇಳಿಲ್ಲವೇ? ಶತ್ರುಗಳು ಯುದ್ಧ ಅಥವಾ ಬಲವನ್ನುಪಯೋಗಿಸಿ ನಿನಗೆ ಹಾನಿಯನ್ನುಂಟುಮಾಡುವ ಮೊದಲೇ ಎಲ್ಲ ಉಪಾಯಗಳನ್ನೂ ಬಳಸಿ ಅವರನ್ನು ಬಗ್ಗಿಸಬೇಕು. ಪಾಂಡವರ ಧನದಿಂದ ನಾವು ಸರ್ವ ಪಾರ್ಥಿವರನ್ನೂ ಮೆಚ್ಚಿಸಿ ನಂತರ ನಾವು ಅವರ ಮೇಲೆ ಆಕ್ರಮಣ ಮಾಡಿದರೆ ನಾವು ಸೋಲುವುದೇ ಇಲ್ಲ. ಆದರೆ ಸಿಟ್ಟಿಗೆದ್ದು ಕಚ್ಚಲು ಸಿದ್ಧವಿದ್ದ ವಿಷಭರಿತ ಸರ್ಪವನ್ನು ತನ್ನ ಬೆನ್ನಮೇಲೆ ಹಾಕಿಕೊಂಡು ಕುತ್ತಿಗೆಗೆ ಸುತ್ತಿಕೊಂಡರೆ ಅದರಿಂದ ಬಿಡುಗಡೆ ಹೊಂದುವುದಾದರೂ ಹೇಗೆ? ಕುಪಿತ ಪಾಂಡವರು ಶಸ್ತ್ರಗಳನ್ನು ಪಡೆದು ರಥವನ್ನೇರಿದ್ದಾರೆ. ಕೃದ್ಧ ವಿಷಸರ್ಪದಂತೆ ಅವರು ನಮ್ಮನ್ನು ನಿಶ್ಯೇಷ

ನಾಶಪಡಿಸುತ್ತಾರೆ. ಅರ್ಜುನನು ತನ್ನ ಎರಡು ಭತ್ತಳಿಕೆಗಳನ್ನು ತೆರೆದು ಮತ್ತೆ ಮತ್ತೆ ಗಾಂಡೀವವನ್ನೆತ್ತಿಕೊಂಡು ನಿಟ್ಟಿಸುರು ಬಿಡುತ್ತಾ ಸುತ್ತಲೂ ನೋಡುತ್ತಿದ್ದಾನೆ. ವೃಕೋದರನು ಭಾರೀ ಗದೆಯನ್ನು ವೇಗವಾಗಿ ಮೇಲೆತ್ತಿ ಕಟ್ಟಿದ ಸ್ವರಥದಲ್ಲಿ ಹೊರಡುತ್ತಿದ್ದಾನೆ ಎಂದು ಕೇಳಿದೆವು. ನಕುಲನು ಅಷ್ಟಚಂದ್ರಕ ಗುರಾಣಿ ಮತ್ತು ಖಡ್ಗವನ್ನು ಹಿಡಿದಿದ್ದಾನೆ. ರಾಜ ಮತ್ತು ಸಹದೇವರು ತಮ್ಮ ಇಂಗಿತಗಳನ್ನು ಬಹಿರಂಗಪಡಿಸುತ್ತಿದ್ದಾರೆ. ಬಹಳಷ್ಟು ಶಸ್ತ್ರಸಮೇತರಾಗಿ ಅವರೆಲ್ಲರೂ ರಥಗಳನ್ನೇರಿ ರಥಗಳಿಗೆ ಕಟ್ಟಿದ ಕುದುರೆಗಳನ್ನು ಹೊಡೆಯುತ್ತಾ ಸೇನೆಗಳನ್ನು ಒಟ್ಟುಗೂಡಿಸಲು ಹೊರಟಿದ್ದಾರೆ. ನಾವು ಅವರನ್ನು ಅವಮಾನಿಸಿದ್ದೇವೆ. ಅವರು ನಮ್ಮನ್ನು ಎಂದೂ ಕ್ಷಮಿಸುವುದಿಲ್ಲ. ಅವರಲ್ಲಿ ಯಾರುತಾನೆ ದ್ರೌಪದಿಯ ಅಪಮಾನವನ್ನು ಕ್ಷಮಿಸಿಯಾರು? ನಿನಗೆ ಮಂಗಳವಾಗಲಿ! ಪಾಂಡವರ ವನವಾಸಕ್ಕಾಗಿ ಇನ್ನೊಮ್ಮೆ ಜೂಜಾಡಬೇಕು. ಹೀಗೆ ಮಾತ್ರ ನಾವು ಅವರನ್ನು ವಶಪಡಿಸಿಕೊಳ್ಳಲು ಸಾಧ್ಯ. ಅವರಾಗಲೀ ನಾವಾಗಲೀ ಯಾರು ದ್ಯೂತದಲ್ಲಿ ಸೋಲುತ್ತಾರೋ ಅವರು ಹನ್ನೆರಡು ವರ್ಷಗಳು ಮಹಾರಣ್ಯವನ್ನು ಪ್ರವೇಶಿಸಿ ಜಿನಧಾರಿಗಳಾಗಿ ವಾಸಿಸಬೇಕು. ಹದಿಮೂರನೆಯ ವರ್ಷ ಜನಮದ್ಯದಲ್ಲಿ

ಅಜ್ಞಾತರಾಗಿ ಇರಬೇಕು. ಒಂದುವೇಳೆ ಕಂಡುಹಿಡಿಯಲ್ಪಟ್ಟರೆ, ವನದಲ್ಲಿ ಪುನಃ ಹನ್ನೆರಡು ವರ್ಷಗಳನ್ನು ಕಳೆಯಬೇಕು. ನಾವು ಅಥವಾ ಅವರು ಉಳಿದುಕೊಳ್ಳಬೇಕು. ಹಾಗೆ ದ್ಯೂತವು ನಡೆಯಲಿ. ಇದನ್ನು ಪಣವಾಗಿಟ್ಟು ಪಾಂಡವರು ದಾಳಗಳನ್ನು ಎಸೆದು ಜೂಜಾಡಲಿ. ಇದು ನಾವು ಮುಖ್ಯವಾಗಿ ಮಾಡಬೇಕಾಗಿರುವ ಕೆಲಸ. ಅಕ್ಷವಿದ್ಯೆಯನ್ನು ತಿಳಿದಿರುವ ಈ ಶಕುನಿಯು ನಮ್ಮ ಸಂಪನ್ಮೂಲ ವ್ಯಕ್ತಿ. ಮಿತ್ರರನ್ನು ಸಂಪಾದಿಸಿ, ದುರಾಸದ, ಶಕ್ತಿಯುತ ಸೈನ್ಯವನ್ನು ಬೆಳೆಸಿ ನಾವು ನಮ್ಮ ರಾಜ್ಯದಲ್ಲಿ ದೃಢ ನೆಲೆಯನ್ನು ಸಾಧಿಸಬಲ್ಲೆವು. ಒಂದುವೇಳೆ ಅವರು ಈ ಹದಿಮೂರು ವರ್ಷಗಳ ವ್ರತವನ್ನು ಮಾಡಿ ಜೀವಂತ ಉಳಿದರೆ ಅವರನ್ನು ನಾವು ಜಯಿಸಬಹುದು. ಇದಕ್ಕೆ ಅನುಮತಿಯನ್ನು ನೀಡು."

ಧೃತರಾಷ್ಟ್ರನು ಹೇಳಿದನುಃ

"ಅವರು ತಮ್ಮ ದಾರಿಯಲ್ಲಿ ದೂರ ಹೋಗಿದ್ದರೂ ಕೂಡ ಅವರನ್ನು ಕೂಡಲೆ ಹಿಂದಕ್ಕೆ ಕರೆಯಿರಿ. ಪಾಂಡವರು ಹಿಂದುರಿಗಿ ಬಂದು ಇನ್ನೊಮ್ಮೆ ದ್ಯೂತವನ್ನು ಆಡಬೇಕು !"

ಆಗ ದ್ರೋಣ, ಸೋಮದತ್ತ, ಮಹಾರಥಿ ಬಾಹ್ಲೀಕ, ವಿದುರ,

ದ್ರೋಣಪುತ್ರ, ವೈಶ್ಯಾಪುತ್ರ, ವೀರ್ಯವಾನ್ ಭೂರಿಶ್ರವ, ಶಾಂತನವ, ಮಹಾರಥಿ ವಿಕರ್ಣ ಎಲ್ಲರೂ "ದ್ಯೂತವು ಬೇಡ! ಶಾಂತತೆಯನ್ನು ಕಾಪಾಡಿರಿ!" ಎಂದು ಹೇಳಿದರು. ಅದರ ಪರಿಣಾಮಗಳನ್ನು ಕಂಡ ಸರ್ವ ಸುಹೃದಯರೂ ಇಷ್ಟಪಡದೇ ಇದ್ದರೂ ಸುತಪ್ರಿಯ ಧೃತರಾಷ್ಟ್ರನು ಪಾಂಡವರಿಗೆ ಆಹ್ವಾನವನ್ನು ಕಳುಹಿಸಿದನು. ಆಗ ಪುತ್ರನ ಮೇಲೆ ಪ್ರೀತಿಯಿದ್ದರೂ ಧರ್ಮನಿರತೆ ಗಾಂಧಾರಿಯು ಶೋಕಾರ್ತಳಾಗಿ ಜನೇಶ್ವರ ಮಹಾರಾಜ ಧೃತರಾಷ್ಟ್ರನಿಗೆ ಹೇಳಿದಳು:

> "ದುರ್ಯೋಧನನು ಹುಟ್ಟಿದಾಗ ಮಹಾಮತಿ ಕ್ಷತ್ತನು ಈ ಕುಲಪಾಂಸನನನ್ನು ಪರಲೋಕಕ್ಕೆ ಕಳುಹಿಸುವುದೇ ಲೇಸು ಎಂದು ಹೇಳಿದ್ದನು. ಭಾರತ! ಹುಟ್ಟುತ್ತಿರುವಾಗಲೇ ಇವನು ನರಿಯಂತೆ ಕೂಗಿದನು. ಕುರುಗಳೇ! ನೋಡುತ್ತಿರಿ! ಇವನು ಈ ಕುಲದ ಅಂತ್ಯಕ್ಕೆ ಕಾರಣನಾಗುತ್ತಾನೆ. ಶಿಷ್ಟರಲ್ಲದ ಬಾಲಕರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಡ. ಕುಲದ ಘೋರ ಕ್ಷಯಕ್ಕೆ ನೀನು ಕಾರಣನಾಗಬೇಡ. ಕಟ್ಟಿದ ಸೇತುವೆಯನ್ನು ಯಾರು ಒಡೆಯುತ್ತಾರೆ? ಆರಿಹೋಗುತ್ತಿರುವ ಬೆಂಕಿಯನ್ನು ಯಾರು ಗಾಳಿ ಹಾಕಿ ಉರಿಸುತ್ತಾರೆ? ಶಾಂತರಾಗಿರುವ ಪಾರ್ಥರನ್ನು ಪುನಃ ಯಾರುತಾನೆ ಸಿಟ್ಟಿಗೇಳಿಸುತ್ತಾರೆ? ನಿನಗೆ ನೆನಪಿರಬಹುದು.

ಆದರೂ ನಿನಗೆ ಪುನಃ ನೆನಪಿಸಿಕೊಡುತ್ತೇನೆ. ಶಾಸ್ತ್ರವು ದುರ್ಬುದ್ಧಿಗೆ ಒಳ್ಳೆಯದನ್ನಲ್ಲದೇ ಬೇರೆಯದನ್ನು ಕಲಿಸಲಾರದು. ಹಾಗೆಯೇ ಬಾಲಮತಿಯು ಎಂದೂ ವೃದ್ಧನೆನಿಸಲಾರ. ನೀನೇ ನಿನ್ನ ಪುತ್ರರಿಗೆ ದಾರಿತೋರಿಸಬೇಕು. ಇಲ್ಲವಾದರೆ ಸೋತ ಅವರು ನಿನ್ನನ್ನು ದೂರಮಾಡುತ್ತಾರೆ. ಇತರರ ಬುದ್ಧಿಯಿಂದ ಹುಟ್ಟಿದ ನಿನ್ನ ಬುದ್ಧಿಯು ಶಮ ಧರ್ಮಗಳಿಗೆ ಹೊರತಾಗಿರದಿರಲಿ. ಕ್ರೂರಕರ್ಮಗಳಿಂದ ಸಂಪಾದಿಸಿದ ಐಶ್ವರ್ಯವು ನಾಶವಾಗಿ ಹೋಗುತ್ತದೆ. ಆದರೆ ಸೌಮ್ಯಕರ್ಮಗಳಿಂದ ಹೆಚ್ಚಿಸಿದ ಧನವು ಪುತ್ರಪೌತ್ರರಿಗೂ ಸಂದುತ್ತದೆ."

ಆಗ ಮಹಾರಾಜನು ಧರ್ಮದರ್ಶಿನೀ ಗಾಂಧಾರಿಗೆ ಹೇಳಿದನು:

"ನಮ್ಮ ಕುಲವು ಅಂತ್ಯಗೊಳ್ಳುವುದೇ ಆದರೆ ಅದನ್ನು ತಡೆಯಲು ನಾನು ಶಕ್ಯನಿಲ್ಲ. ಅವರು ಏನನ್ನು ಬಯಸುತ್ತಾರೋ ಹಾಗೆಯೇ ಆಗಲಿ. ಪಾಂಡವರು ಹಿಂದಿರುಗಬೇಕು. ನನ್ನವರು ಪಾಂಡವರೊಂದಿಗೆ ಪುನಃ ದ್ಯೂತವನ್ನು ನಡೆಸಲಿ!"

ಧೀಮಂತ ರಾಜ ಧೃತರಾಷ್ಟ್ರನ ವಚನದಂತೆ ಪ್ರತಿಕಾಮಿಯೋರ್ವನು ಬಹಳಷ್ಟು ದೂರ ಪ್ರಯಾಣಿಸಿದ್ದ ಯುಧಿಷ್ಠಿರನಿಗೆ ಹೇಳಿದನು:

"ರಾಜನ್! ಯುಧಿಷ್ಠಿರ! ಸಭೆಯು ಹಾಸಿ ತಯಾರಾಗಿದೆ.

ದಾಳಗಳನ್ನು ಎಸೆಯಲಾಗಿದೆ. ಭಾರತ! ಪಾಂಡವ! ಬಂದು ಆಡು! ಎಂದು ನಿನ್ನ ತಂದೆಯು ನಿನಗೆ ಹೇಳಿದ್ದಾನೆ.”

ಯುಧಿಷ್ಠಿರನು ಹೇಳಿದನು:

“ಧಾತುವಿನ ನಿಯೋಗದಿಂದಲೇ ಜೀವಿಗಳು ಶುಭಾಶುಭಗಳನ್ನು ಹೊಂದುತ್ತವೆ. ನಾವು ಪುನಃ ದ್ಯೂತವನ್ನಾಡಬೇಕೆಂದಿದ್ದರೆ ಅದನ್ನು ತಡೆಯಲು ಸಾಧ್ಯವಿಲ್ಲ! ವಯೋವೃದ್ಧನ ನಿಯೋಗದಂತೆ ಅಕ್ಷದ್ಯೂತದ ಆಹ್ವಾನವನ್ನು ಸ್ವೀಕರಿಸುವುದು ಕ್ಷಯಕರ ಎಂದು ತಿಳಿದಿದ್ದರೂ ಅವನ ಮಾತುಗಳನ್ನು ಅತಿಕ್ರಮಿಸಲಾರೆ.”

ಹೀಗೆ ಹೇಳಿ ಪಾರ್ಥ ಪಾಂಡವನು ಶಕುನಿಯ ಮಾಯೆಯನ್ನು ತಿಳಿದಿದ್ದರೂ ದ್ಯೂತಕ್ಕೆ ತನ್ನ ತಮ್ಮಂದಿರೊಡನೆ ಹಿಂದಿರುಗಿದನು. ಪುನಃ ಆ ಮಹಾರಥಿ ಭರತರ್ಷಭರು ತಮ್ಮ ಸುಹೃದಯರ ಮನಸ್ಸನ್ನು ಚಿಂತೆಗೊಳಪಡಿಸುತ್ತಾ ಆ ಸಭೆಯನ್ನು ಪ್ರವೇಶಿಸಿದರು. ಸರ್ವಲೋಕವಿನಾಶದ ದೈವ ನಿಶ್ಚಯದಿಂದ ಪೀಡಿತರಾದ ಅವರು ಕುಳಿತುಕೊಂಡು ಪುನಃ ದ್ಯೂತವನ್ನು ಪ್ರಾರಂಭಿಸಿದರು.

## ಯುಧಿಷ್ಠಿರನ ಪುನಃ ಪರಾಜಯ

ಶಕುನಿಯು ಹೇಳಿದನು:

“ಭರತರ್ಷಭ! ಈ ವಯೋವೃದ್ಧನು ನಿನ್ನ ಧನವನ್ನು ನಿನಗೆ

ಬಿಡುಗಡೆ ಮಾಡಿದನು. ಅದಕ್ಕೆ ಅವನನ್ನು ಗೌರವಿಸುತ್ತೇನೆ. ಆದರೆ ಈ ಮಹಾಧನಕ್ಕಾಗಿ ಒಂದೇ ಒಂದು ಆಟವಿದೆ. ಕೇಳು. ನಿಮ್ಮಿಂದ ನಾವು ದ್ಯೂತದಲ್ಲಿ ಸೋತರೆ ರುರು ಮತ್ತು ಜಿಂಕೆಯ ಚರ್ಮಗಳ ವಸ್ತ್ರಧಾರಣೆ ಮಾಡಿ ಹನ್ನೆರಡು ವರ್ಷ ಮಹಾರಣ್ಯವನ್ನು ಪ್ರವೇಶಿಸುತ್ತೇವೆ. ಮತ್ತು ಹದಿಮೂರನೆಯ ವರ್ಷ ಜನರ ಮಧ್ಯದಲ್ಲಿ ಅಜ್ಞಾತವಾಸ ಮಾಡುತ್ತೇವೆ, ಆ ಒಂದು ವರ್ಷದಲ್ಲಿ ಗುರುತಿಸಲ್ಪಟ್ಟರೆ ಪುನಃ ಹನ್ನೆರಡು ವರ್ಷಗಳ ವನವಾಸವನ್ನು ಮುಗಿಸುತ್ತೇವೆ. ಅಥವಾ ನಾವು ನಿಮ್ಮನ್ನು ಸೋಲಿಸಿದರೆ ನೀವು ಕೃಷ್ಣೆಯೊಡನೆ ಹನ್ನೆರಡು ವರ್ಷಗಳು ಜಿನವನ್ನು ಧರಿಸಿ ವನದಲ್ಲಿ ವಾಸಿಸಬೇಕು. ಹದಿಮೂರನೆಯ ವರ್ಷವು ಮುಗಿದ ನಂತರ ಪುನಃ ಯಥೋಚಿತವಾಗಿ ತಮ್ಮ ರಾಜ್ಯವನ್ನು ಒಬ್ಬರು ಇನ್ನೊಬ್ಬರಿಂದ ಹಿಂದೆ ತೆಗೆದುಕೊಳ್ಳಬೇಕು. ಈ ಒಪ್ಪಂದದೊಂದಿಗೆ ಪುನಃ ನಮ್ಮೊಂದಿಗೆ ದಾಳವನ್ನೆಸೆದು ಪಣವನ್ನಿಟ್ಟು ದ್ಯೂತವನ್ನಾಡು."

ಸಭಾಸದರು ಹೇಳಿದರು:

"ಅಹೋ! ಧಿಕ್ಕಾರ! ಈ ಬಾಂಧವನು ಮಹಾ ಭಯವನ್ನು ತಿಳಿದಿಲ್ಲ! ಯಾರೂ ಕೂಡ ಇದನ್ನು ತಿಳಿಯಬಹುದು. ಆದರೆ

> ಸ್ವಯಂ ಭರತರ್ಷಭರೇ ಇದನ್ನು
> ಅರ್ಥಮಾಡಿಕೊಳ್ಳುತ್ತಿಲ್ಲ!"

ನರಾಧಿಪ ಪಾರ್ಥನು ಜನರ ಕೂಗನ್ನು ಕೇಳಿಸಿಕೊಂಡರೂ ತನಗಾದ ನಾಚಿಕೆಯಿಂದ ಮತ್ತು ಧರ್ಮದೊಂದಿಗಿರಬೇಕೆಂಬ ಇಚ್ಛೆಯಿಂದ ಪುನಃ ದ್ಯೂತಕ್ಕೆ ಒಪ್ಪಿಕೊಂಡನು. ಆ ಮಹಾಬುದ್ಧಿಯು ತಿಳಿದಿದ್ದರೂ "ಇದು ಕುರುಗಳ ವಿನಾಶವನ್ನು ತರುವುದಿಲ್ಲವೇ?" ಎಂದು ಚಿಂತಿಸಿ ಪುನಃ ದ್ಯೂತಕ್ಕೆ ಮರಳಿ ಹೇಳಿದನು:

> "ಸ್ವಧರ್ಮವನ್ನು ಅನುಸರಿಸುವ ನನ್ನಂಥಹ ರಾಜನು ಆಹ್ವಾನಿಸಲ್ಪಟ್ಟಾಗ ಹಿಂದಿರುಗಿ ಬರದೇ ಇರಲು ಹೇಗೆ ಸಾಧ್ಯ? ಶಕುನಿ! ನಿನ್ನೊಂದಿಗೆ ಆಡುತ್ತೇನೆ!"

ಶಕುನಿಯು ಹೇಳಿದನು:

> "ಗೋವುಗಳು, ಕುದುರೆಗಳು, ಹಾಲುಕೊಡುವ ಹಸುಗಳು, ಲೆಕ್ಕವಿಲ್ಲದಷ್ಟು ಕುರಿಗಳು ಮತ್ತು ಆಡುಗಳು, ಆನೆಗಳು, ಕೋಶ, ಹಿರಣ್ಯ ಮತ್ತು ದಾಸಿಯರು ಎಲ್ಲವೂ ಪಣವಾಗಿರಲಿ. ಪಾಂಡವರೇ! ಇದು ನನ್ನ ಒಂದೇ ಒಂದು ಎಸೆತ! ಇದರಲ್ಲಿ ಸೋತ ನೀವು ಅಥವಾ ನಾವು ವನವನ್ನು ಸೇರಿ ವಾಸಿಸೋಣ. ಈ ಒಪ್ಪಂದದೊಂದಿಗೆ ಆಡೋಣ. ಒಂದೇ ಒಂದು ದಾಳದಿಂದ ವನವಾಸ!"

ಪಾರ್ಥನು ಅದಕ್ಕೆ ಒಪ್ಪಿಕೊಳ್ಳಲು ಸೌಬಲ ಶಕುನಿಯು ದಾಳಗಳನ್ನು ಹಿಡಿದು ಯುಧಿಷ್ಠಿರನಿಗೆ “ಗೆದ್ದೆ!” ಎಂದು ಕೂಗಿ ಹೇಳಿದನು.

## ಪಾಂಡವರ ಪ್ರತಿಜ್ಞೆಗಳು

ಪರಾಜಿತ ಪಾರ್ಥರು ವನವಾಸಕ್ಕೆ ಮನಸ್ಸುಮಾಡಿ, ಒಬ್ಬೊಬ್ಬರಾಗಿ ಜಿನ ವಸ್ತ್ರ ಉತ್ತರೀಯಗಳನ್ನು ತೊಟ್ಟರು. ರಾಜ್ಯವನ್ನು ಕಳೆದುಕೊಂಡು ಜಿನವಸ್ತ್ರಗಳನ್ನು ಸುತ್ತಿಕೊಂಡು ವನವಾಸಕ್ಕೆ ಹೊರಡುತ್ತಿರುವ ಆ ಅರಿಂದಮರನ್ನು ನೋಡಿ ದುಃಶಾಸನನು ಹೇಳಿದನು:

> “ಮಹಾತ್ಮ ರಾಜ ಧಾರ್ತರಾಷ್ಟ್ರನ ಚಕ್ರವು ತಿರುಗಲು ಪ್ರಾರಂಬಿಸಿದೆ. ಸೋತ ಪಾಂಡುಪತ್ರರು ಪರಮ ವಿಪತ್ತನ್ನು ಹೊಂದಿದ್ದಾರೆ. ಇಂದು ದೇವತೆಗಳು ತಮ್ಮ ಸುಲಭ ಆಕಾಶಮಾರ್ಗಗಳಲ್ಲಿ ಬಂದಿದ್ದಾರೆ. ಯಾಕೆಂದರೆ ನಾವು ಗುಣದಲ್ಲಿ ಅವರಿಗಿಂತಲೂ ಶ್ರೇಷ್ಠರು ಮತ್ತು ಸಂಖ್ಯೆಯಲ್ಲಿಯೂ ಅವರಿಗಿಂತ ಹೆಚ್ಚಾಗಿದ್ದೇವೆ. ಪಾರ್ಥರು ಸುಖವನ್ನು ಕಳೆದುಕೊಂಡು, ರಾಜ್ಯಭ್ರಷ್ಟರಾಗಿ ಬಹು ವರ್ಷಗಳ ದೀರ್ಘಕಾಲದ ಕೊನೆಯೇ ಇಲ್ಲದ ನರಕದಲ್ಲಿ ಬಿದ್ದಿದ್ದಾರೆ! ಬಲಮತ್ತರಾಗಿ ಧಾರ್ತರಾಷ್ಟ್ರರನ್ನು ಗೇಲಿಮಾಡುತ್ತಿದ್ದ ಪಾಂಡವರು ಈಗ ಸೋತು ಸಂಪತ್ತನ್ನು ಕಳೆದುಕೊಂಡು ವನವನ್ನು ಸೇರುತ್ತಿದ್ದಾರೆ! ಸೌಬಲನ

ದಾಳವನ್ನು ಒಪ್ಪಿಕೊಂಡ ಅವರೆಲ್ಲರೂ ತಮ್ಮ ಹೊಳೆಯುವ ಬಣ್ಣದ ದಿವ್ಯ ಅಂಗಿ-ಮೇಲಂಗಿಗಳನ್ನು ಕಳಚಿ ರುರು ಚರ್ಮಗಳನ್ನು ಧರಿಸಬೇಕಾಗಿದೆ! ತಮ್ಮಂಥಹ ಪುರುಷರು ಲೋಕದಲ್ಲಿಯೇ ಇಲ್ಲ ಎಂದು ತಿಳಿದು ಸದಾ ಅಭಿಮಾನಿಗಳಾಗಿದ್ದ ಪಾಂಡವರು ಇಂದು ಕಷ್ಟದಲ್ಲಿ ಷಂಡತಿಲದಂತೆ ನಿಷ್ಫಲರು ಎಂದು ತಮ್ಮ ಕುರಿತು ಸರಿಯಾಗಿ ತಿಳಿದುಕೊಳ್ಳಲಿ! ನಿನ್ನ ವನವಾಸವು ಮನಸ್ವಿಗಳ ವನವಾಸದಂತೆ ಇಲ್ಲ. ಇವುಗಳು ಸಂಸ್ಕರಿಸದೇ ಇದ್ದ ಜಿನಗಳು. ಇವು ಬಲಶಾಲಿ ಪಾಂಡವರದ್ದು! ಮಹಾಪ್ರಾಜ್ಞ ಸೋಮಕ ಯಜ್ಞಸೇನನು ಕನ್ಯೆ ಪಾಂಚಾಲಿಯನ್ನು ಪಾಂಡವರಿಗೆ ನೀಡಿ ತಪ್ಪು ಮಾಡಿದನು. ಯಾಕೆಂದರೆ ನಪುಂಸಕ ಪಾರ್ಥರು ಯಾಜ್ಞಸೇನೆಗೆ ಪತಿಗಳಾಗಿ ಉಳಿದಿಲ್ಲ! ಯಾಜ್ಞಸೇನಿ! ಸೂಕ್ಷ್ಮ ವಸ್ತ್ರಗಳನ್ನು ಧರಿಸಿದ್ದವರು ಈಗ ಜಿನವನ್ನು ಧರಿಸಿ, ನಿರ್ಧನರಾಗಿ, ಅಪ್ರತಿಷ್ಠರಾಗಿ ವನವಾಸಿಗಳಾದುದನ್ನು ನೋಡಿ ನೀನು ಏನು ಸುಖವನ್ನು ಅನುಭವಿಸಬಲ್ಲೆ? ಇಲ್ಲಿರುವ ಬೇರೆ ಯಾರನ್ನಾದರನ್ನು ನಿನ್ನ ಪತಿಯನ್ನಾಗಿ ವರಿಸು. ಇಲ್ಲಿ ಸೇರಿರುವ ಸರ್ವ ಕುರುಗಳೂ ಗಂಭೀರರೂ, ಅಧಿಕಾರವುಳ್ಳವರೂ, ಉತ್ತಮ ಧನವಂತರೂ ಆಗಿದ್ದಾರೆ. ಈ ಕಾಲ ವಿಪರ್ಯಾಸವು ನಿನಗೆ ಕಷ್ಟವಾಗಬಾರದೆಂದು

ಇವರಲ್ಲಿ ಯಾರನ್ನಾದರನ್ನೂ ನಿನ್ನ ಪತಿಯನ್ನಾಗಿ ಆರಿಸಿಕೋ. ಪೊಳ್ಳು ಎಳ್ಳಿನಂತೆ, ಕೇವಲ ಚರ್ಮಮಾತ್ರವಿರುವ ಜಿಂಕೆಯಂತೆ ಮತ್ತು ಪೊಳ್ಳು ಕಾಕಯದಂತೆ ಪಾಂಡವರೆಲ್ಲರೂ ಅಫಲರಾಗಿದ್ದಾರೆ! ಪತಿತ ಪಾಂಡವರನ್ನು ನೀನು ಏಕೆ ಉಪಾಸಿಸುತ್ತೀಯೆ? ಪೊಳ್ಳು ಎಳ್ಳನ್ನು ಉಪಾಸಿಸಿ ಶ್ರಮಿಸುವುದು ವ್ಯರ್ಥ !"

ಈ ರೀತಿ ಧೃತರಾಷ್ಟ್ರನ ಕ್ರೂರ ಪುತ್ರನು ತನ್ನ ಚುಚ್ಚುಮಾತುಗಳನ್ನು ಪಾರ್ಥರಿಗೆ ಕೇಳಿಸಿದನು.

ಇದನ್ನು ಕೇಳಿ ಅತಿ ಕುಪಿತನಾದ ಭೀಮಸೇನನು ಅವನನ್ನು ಮೂದಲಿಸುತ್ತಾ ತನ್ನ ಕೋಪವನ್ನು ತಡೆಹಿಡಿಯುತ್ತಾ ಹಿಮಾಲಯದ ಸಿಂಹವು ನರಿಗೆ ಹೇಳುವಂತೆ ಜೋರಾಗಿ ಕೂಗಿ ಹೇಳಿದನು:

"ಕ್ರೂರ! ಪಾಪಿ! ದುಷ್ಟನಂತೆ ಹುರುಳಿಲ್ಲದ ಮಾತನ್ನಾಡುತ್ತಿದ್ದೀಯೆ. ರಾಜರ ಮಧ್ಯದಲ್ಲಿ ಗಾಂಧಾರರ ಕೌಶಲ್ಯವನ್ನು ಪ್ರಶಂಸಿಸುತ್ತಿದ್ದೀಯೆ! ನಮ್ಮ ಮರ್ಮಸ್ಥಾನಗಳನ್ನು ನಿನ್ನ ತೀಕ್ಷ್ಣ ಮಾತುಗಳಿಂದ ಹೇಗೆ ಚುಚ್ಚುತ್ತಿರುವೆಯೋ ಹಾಗೆ ಯುದ್ಧದಲ್ಲಿ ನಿನಗೂ ಮಾಡಿ ನೆನಪಿಸಿಕೊಡುತ್ತೇನೆ. ಕಾಮಲೋಭವಶರಾಗಿ ಯಾರು ನಿನ್ನನ್ನು ಹಿಂಬಾಲಿಸಿ ಪ್ರೋತ್ಸಾಹಿಸಿ ರಕ್ಷಿಸುವರೋ ಅವರನ್ನೂ ಕೂಡ ಅವರ ಸಂಬಂಧಿಗಳೊಂದಿಗೆ

ಯಮಸಾದನಕ್ಕೆ ಕಳುಹಿಸುತ್ತೇನೆ."

ಜಿನವಸ್ತ್ರವನ್ನು ಧರಿಸಿ ದುಃಖ ಪೀಡಿತನಾಗಿ ಹೀಗೆ ಹೇಳಿ ಕುರುಗಳ ಮಧ್ಯೆ ಧರ್ಮಮಾರ್ಗದಲ್ಲಿ ನಡೆಯುತ್ತಿದ್ದ ಅವನನ್ನು ದುಃಶಾಸನನು ಸುತ್ತುವರೆದು ನಾಚಿಕೆಯನ್ನು ಬಿಟ್ಟು "ಹಸು ! ಹಸು !"ಎಂದು ಕುಣಿದಾಡಿದರು. ಆಗ ಭೀಮಸೇನನು ಹೇಳಿದನು:

"ದುಃಶಾಸನ ! ಈ ರೀತಿ ಒರಟು ಕ್ರೂರ ಪೌರುಷದ ಮಾತನಾಡಲು ನಿನಗೆ ಮಾತ್ರ ಸಾಧ್ಯ. ಯಾಕೆಂದರೆ, ವಂಚನೆಯಿಂದ ಧನವನ್ನು ತೆಗೆದುಕೊಂಡ ಯಾರು ತಾನೆ ಈ ರೀತಿ ಕೊಚ್ಚಿಕೊಳ್ಳುತ್ತಾರೆ. ರಣದಲ್ಲಿ ನಿನ್ನ ಎದೆಯನ್ನು ಸೀಳಿ ರಕ್ತವನ್ನು ಕುಡಿಯದೇ ಇದ್ದರೆ ಈ ಪಾರ್ಥ ವೃಕೋದರನು ಸುಕೃತಲೋಕಗಳಿಗೆ ಹೋಗದಿರಲಿ ! ಧಾರ್ತರಾಷ್ಟ್ರರನ್ನು ರಣದಲ್ಲಿ ಸರ್ವ ಧನ್ವಿಗಳ ಎದಿರು ಕೊಂದ ಕೂಡಲೇ ಶಾಂತನಾಗುತ್ತೇನೆ. ಸತ್ಯವನ್ನೇ ನಾನು ಹೇಳುತ್ತಿದ್ದೇನೆ."

ಪಾಂಡವರು ಸಭೆಯಿಂದ ಹೊರಡುತ್ತಿರುವಾಗ ಮಂದಬುದ್ಧಿ ರಾಜ ದುರ್ಯೋಧನನು ಹರ್ಷದಿಂದ ಆಟವಾಡುತ್ತಾ ಭೀಮಸೇನನ ಸಿಂಹ ನಡುಗೆಯನ್ನು ತಾನೇ ನಡೆದು ಅಣಕಿಸಿದನು. ತನ್ನ ಅರ್ಧದೇಹವನ್ನು ದುರ್ಯೋಧನನ ಕಡೆ ತಿರುಗಿಸಿ ವೃಕೋದರನು ಹೇಳಿದನು:

"ಆಟದಲ್ಲಿ ಇದು ಗೆಲ್ಲಲು ಸಹಾಯ ಮಾಡುವುದಿಲ್ಲ !

ಮೂಢ! ನಿನ್ನನ್ನು ಮತ್ತು ನಿನ್ನ ಅನುಯಾಯಿಗಳನ್ನು ಶೀಘ್ರವೇ ಕೊಲ್ಲುವಾಗ ನಿನಗೆ ಇದನ್ನು ನೆನಪಿಸಿಕೊಟ್ಟು ಉತ್ತರ ನೀಡುತ್ತೇನೆ!"

ತನಗಾದ ಈ ಅವಮಾನವನ್ನು ತಾನೇ ವೀಕ್ಷಿಸಿ ತನ್ನ ಸಿಟ್ಟನ್ನು ತಡೆಹಿಡಿದುಕೊಂಡು, ಆ ಮಾನಿನಿ ಬಲವಾನ್ ಭೀಮನು ರಾಜನನ್ನು ಅನುಸರಿಸಿ ಕೌರವರ ಸಂಸದಿಯಿಂದ ಹೊರ ಹೋಗುವಾಗ ಈ ಮಾತನ್ನಾಡಿದನು:

"ನಾನು ದುರ್ಯೋಧನನನ್ನು ಕೊಲ್ಲುತ್ತೇನೆ. ಧನಂಜಯನು ಕರ್ಣನನ್ನು ಕೊಲ್ಲುತ್ತಾನೆ. ಮೋಸದ ಜೂಜುಗಾರ ಶಕುನಿಯನ್ನು ಸಹದೇವನು ಕೊಲ್ಲುತ್ತಾನೆ. ಈ ಸಭಾಮಧ್ಯದಲ್ಲಿ ಇನ್ನೊಮ್ಮೆ ಮುಂದಾಗುವ ಈ ಮಹಾ ವಚನವನ್ನು ಹೇಳುತ್ತಿದ್ದೇನೆ: ನಮ್ಮ ನಡುವೆ ಯುದ್ಧವಾದಾಗ ದೇವತೆಗಳು ಇದನ್ನು ಸತ್ಯಮಾಡುತ್ತಾರೆ - ಈ ಪಾಪಿ ಸುಯೋಧನನನ್ನು ಯುದ್ಧದಲ್ಲಿ ಗದೆಯಿಂದ ಕೊಲ್ಲುತ್ತೇನೆ ಮತ್ತು ಇವನ ಶಿರವನ್ನು ಭೂಮಿಯಮೇಲೆ ಉರುಳಿಸಿ ಕಾಲಿನಿಂದ ತುಳಿಯುತ್ತೇನೆ. ಮತ್ತು ಈ ಮಾತಿನ ಮಲ್ಲ ಪೌರುಷದ ದುರಾತ್ಮ ದುಃಶಾಸನನ ರಕ್ತವನ್ನು ಸಿಂಹದಂತೆ ಕುಡಿಯುತ್ತೇನೆ."

ಅರ್ಜುನನು ಹೇಳಿದನು:

“ಭೀಮನ ಈ ನಿರ್ಧಾರಿತ ಮಾತುಗಳು ಕೇವಲ ಮಾತುಗಳೆಂದು ತಿಳಿಯಬೇಡಿ. ಇಂದಿನಿಂದ ಹದಿಮೂರನೆಯ ವರ್ಷದಲ್ಲಿ ಇದು ನಡೆಯುವುದನ್ನು ನೋಡುವಿರಿ! ಭೂಮಿಯು ದುರ್ಯೋಧನ, ಕರ್ಣ, ದುರಾತ್ಮ ಶಕುನಿ, ಮತ್ತು ದುಃಶಾಸನ ಈ ನಾಲ್ವರ ರಕ್ತವನ್ನು ಕುಡಿಯುತ್ತದೆ! ಭೀಮಸೇನ! ನಿನ್ನ ಆಜ್ಞೆಯಂತೆ ನಾನು ದುರಾತ್ಮರನ್ನು ಜೋರಾಗಿ ಹೊಗಳುವ ಹೊಗಳುಭಟ್ಟ ಈ ಕರ್ಣನನ್ನು ಕೊಲ್ಲುತ್ತೇನೆ. ಭೀಮನಿಗೆ ಸಂತೋಷವನ್ನುಂಟುಮಾಡಲು ಈ ಅರ್ಜುನನು ಕರ್ಣನನ್ನು ಮತ್ತು ಕರ್ಣನ ಅನುಯಾಯಿಗಳನ್ನು ಗರಿಯುಕ್ತ ಬಾಣಗಳಿಂದ ಕೊಲ್ಲುತ್ತೇನೆ ಎಂದು ಭರವಸೆಯನ್ನು ನೀಡುತ್ತೇನೆ. ಬುದ್ಧಿಗೆಟ್ಟು ನನ್ನೊಡನೆ ಹೋರಾಡುವ ಅನ್ಯ ಸರ್ವ ನೃಪರನ್ನೂ ಕೂಡ ತೀಕ್ಷ್ಣ ಬಾಣಗಳಿಂದ ಯಮಸಾದನಕ್ಕೆ ಕಳುಹಿಸುತ್ತೇನೆ. ಒಂದು ವೇಳೆ ನಾನು ಈ ಸತ್ಯದಿಂದ ದೂರಾದೆನೆಂದರೆ ಹಿಮಾಲಯವು ತನ್ನ ಸ್ಥಾನದಿಂದ ಚಲಿಸಲಿ, ದಿವಾಕರನು ತನ್ನ ಪ್ರಭೆಯನ್ನು ಕಳೆದುಕೊಳ್ಳಲಿ, ಮತ್ತು ಚಂದ್ರನು ತನ್ನ ಶೀತಲವನ್ನು ಕಳೆದುಕೊಳ್ಳಲಿ! ಇಂದಿನಿಂದ ಹದಿನಾಲ್ಕನೆಯ ವರ್ಷದಲ್ಲಿ ದುರ್ಯೋಧನನು ಗೌರವದಿಂದ ರಾಜ್ಯವನ್ನು ಹಿಂದೆ ಕೊಡದಿದ್ದರೆ ಇದು ಸತ್ಯವಾಗುತ್ತದೆ!”

ಈ ರೀತಿ ಪಾರ್ಥನು ಮಾತನಾಡಲು ಶ್ರೀಮಾನ್ ಮಾದ್ರವತೀ ಸುತ ಪ್ರತಾಪವಾನ್ ಸಹದೇವನು ತನ್ನ ವಿಪುಲ ಬಾಹುವನ್ನು ಹಿಡಿದು ಸೌಬಲನ ವಧೆಯನ್ನು ಬಯಸುತ್ತಾ ಸರ್ಪದಂತೆ ಭುಸುಗುಟ್ಟುತ್ತಾ ಕ್ರೋಧದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ಈ ಮಾತುಗಳನ್ನಾಡಿದನು:

> "ಗಾಂಧಾರರ ಯಶೋಹರ! ಮೂಢ! ದಾಳಗಳೆಂದು ತಿಳಿದು ಎಸೆದ ದಾಳಗಳು ದಾಳಗಳಲ್ಲ! ಸಮರದಲ್ಲಿ ನೀನೇ ಆರಿಸಿಕೊಂಡ ತೀಕ್ಷ್ಣ ಬಾಣಗಳು! ನೀನು ಮತ್ತು ನಿನ್ನ ಸಂಬಂಧಿಕರ ಕುರಿತು ಭೀಮನು ಹೇಳಿದ ಎಲ್ಲವನ್ನೂ ನಾನು ಮಾಡಿ ಮುಗಿಸುತ್ತೇನೆ. ನೀನು ನಿನ್ನ ಎಲ್ಲ ಕಾರ್ಯಗಳನ್ನೂ ಮಾಡಿ ಮುಗಿಸು! ಕ್ಷತ್ರಧರ್ಮಾನುಸಾರವಾಗಿ ಸಂಗ್ರಾಮದಲ್ಲಿ ನಿಲ್ಲುವೆಯಾದರೆ ನಿನ್ನನ್ನು ನಿನ್ನ ಬಾಂಧವರೊಡನೆ ವಿಕ್ರಮದಿಂದ ಯುದ್ಧದಲ್ಲಿ ಅಲ್ಪವೇ ಸಮಯದಲ್ಲಿ ಕೊಲ್ಲುತ್ತೇನೆ."

ಸಹದೇವನ ಮಾತುಗಳನ್ನು ಕೇಳಿ ಮನುಷ್ಯರಲ್ಲೆಲ್ಲ ಅತಿ ಸುಂದರ ನಕುಲನೂ ಕೂಡ ಈ ಮಾತನ್ನಾಡಿದನು.

> "ಈ ದ್ಯೂತದಲ್ಲಿ ದುರ್ಯೋಧನನ ಪ್ರಿಯರಾಗಿ ಉಳಿದುಕೊಳ್ಳಲು ಈ ಯಜ್ಞಸೇನ ಸುತೆಗೆ ಕ್ರೂರ ಮಾತುಗಳನ್ನು ಕೇಳಿಸಿ ಅಪಮಾನ ಮಾಡಿದ ಕಾಲಚೋದಿತ

ಈ ದುರ್ವೃತ್ತ ಧಾರ್ತರಾಷ್ಟ್ರರ ಬೀಡಿಗೆ ಅವರಿಗಿಷ್ಟವಾದ ವೈವಸ್ವತಕ್ಷಯದ ದಾರಿಯನ್ನು ತೋರಿಸಿಕೊಡುತ್ತೇನೆ. ಧರ್ಮರಾಜನ ಆದೇಶದಂತೆ ದ್ರೌಪದಿಯ ಹೆಜ್ಜೆಗಳಲ್ಲಿ ನಡೆದು ಬೇಗನೇ ಈ ಪೃಥ್ವಿಯಲ್ಲಿ ಧಾರ್ತರಾಷ್ಟ್ರರಿಲ್ಲದಂತೆ ಮಾಡುತ್ತೇನೆ!"

ಹೀಗೆ ಪುರಷವ್ಯಾಘ್ರರೆಲ್ಲರೂ ತಮ್ಮ ಬಾಹುಗಳನ್ನು ಮುಂದೆ ಚಾಚಿ ಬಹಳ ಪ್ರತಿಜ್ಞೆಗಳನ್ನು ಮಾಡಿ ಧೃತರಾಷ್ಟ್ರನ ಎದಿರು ಹೋದರು.

## ಯುಧಿಷ್ಠಿರನ ವನಪ್ರಸ್ಥಾನ

ಯುಧಿಷ್ಠಿರನು ಹೇಳಿದನು:

"ಭಾರತರೇ! ವೃದ್ಧ ಪಿತಾಮಹನೇ! ರಾಜ ಸೋಮದತ್ತ! ಮಹಾರಾಜ ಬಾಹ್ಲೀಕ! ನಿಮ್ಮಿಂದ ಬೀಳ್ಕೊಳ್ಳುತ್ತಿದ್ದೇನೆ. ದ್ರೋಣ, ಕೃಪ, ಅನ್ಯ ನೃಪರು, ಅಶ್ವತ್ಥಾಮ, ವಿದುರ, ಧೃತರಾಷ್ಟ್ರ, ಸರ್ವ ಧಾರ್ತರಾಷ್ಟ್ರರು, ಯುಯುತ್ಸು, ಸಂಜಯ, ಮತ್ತು ಸರ್ವ ಸಭಾಸದರಿಂದ ಬೀಳ್ಕೊಂಡು ಹೋಗುತ್ತಿದ್ದೇನೆ. ಪುನಃ ನಿಮ್ಮನ್ನು ಕಾಣುತ್ತೇನೆ."

ನಾಚಿಕೆಯಿಂದ ಆ ಸಂತರು ಯುಧಿಷ್ಠಿರನಿಗೆ ಏನನ್ನೂ ಹೇಳಲಿಲ್ಲ. ಮನಸ್ಸಿನಲ್ಲಿಯೇ ಅವರು ಆ ಧೀಮಂತನಿಗೆ ಕಲ್ಯಾಣವನ್ನು ಬಯಸಿದರು.

ವಿದುರನು ಹೇಳಿದನು:

“ಆರ್ಯೆ ರಾಜಪುತ್ರಿ ಸುಕುಮಾರಿ, ವೃದ್ಧೆ, ನಿತ್ಯವೂ ಸುಖವನ್ನೇ ಹೊಂದಿದ್ದ ಪೃಥೆಯು ಅರಣ್ಯಕ್ಕೆ ಹೋಗಬಾರದು. ಅವಳು ಇಲ್ಲಿ ನನ್ನ ಮನೆಯಲ್ಲಿ ಸತ್ಕೃತಳಾಗಿ ವಾಸಿಸುತ್ತಾಳೆ. ಪಾರ್ಥರೇ! ಇದನ್ನು ತಿಳಿದು ಎಲ್ಲ ರೀತಿಯಲ್ಲಿಯೂ ಸುರಕ್ಷಿತರಾಗಿರಿ. ನನ್ನಿಂದ ಇದನ್ನು ತಿಳಿದುಕೋ. ಅಧರ್ಮದಿಂದ ಗೆಲ್ಲಲ್ಪಟ್ಟವರು ಎಂದೂ ಸೋಲಿನಿಂದ ವ್ಯಥಿತರಾಗುವುದಿಲ್ಲ. ನೀನು ಧರ್ಮವನ್ನು ತಿಳಿದಿದ್ದೀಯೆ. ಧನಂಜಯನು ಯೋದ್ಧರಲ್ಲಿ ತಿಳಿದವನು. ಅರಿಗಳನ್ನು ಕೊಲ್ಲುವುದರಲ್ಲಿ ಭೀಮಸೇನನಿದ್ದಾನೆ. ನಕುಲನು ಸಂಪತ್ತನ್ನು ಕೂಡಿಸುವವನು. ಸಹದೇವನು ಸದೆಬಡಿಯುವವನು. ಧೌಮ್ಯನು ಬ್ರಹ್ಮವಿದರಲ್ಲಿ ಉತ್ತಮನು. ದ್ರೌಪದಿಯು ಧರ್ಮ-ಅರ್ಥಗಳಲ್ಲಿ ಕುಶಲಳೂ ಧರ್ಮಚಾರಿಣಿಯೂ ಆಗಿದ್ದಾಳೆ. ನೀವು ಎಲ್ಲರೂ ಅನ್ಯೋನ್ಯರನ್ನು ಪ್ರೀತಿಸುತ್ತೀರಿ ಮತ್ತು ಅನ್ಯೋನ್ಯರಲ್ಲಿ ಪ್ರೀತಿಯಿಂದ ಮಾತನಾಡುತ್ತೀರಿ. ಸಂತುಷ್ಟರಾದ ನಿಮ್ಮನ್ನು ಇತರರು ಬೇರೆ ಮಾಡಲು ಸಾಧ್ಯವಿಲ್ಲ. ನಿಮ್ಮನ್ನು ಯಾರು ತಾನೇ ದ್ವೇಷಿಸುವುದಿಲ್ಲ? ಈ ಎಲ್ಲ ಒಳ್ಳೆಯವೂ ನಿನ್ನಲ್ಲಿ ಒಂದಾಗಿವೆ. ಯಾವ ಶತ್ರುವೂ, ಶಕ್ರನ ಸಮನಾಗಿದ್ದರೂ

ಅದನ್ನು ಕೊಲ್ಲಲು ಸಾಧ್ಯವಿಲ್ಲ. ಹಿಂದೆ ಹಿಮಾಲಯದಲ್ಲಿರುವಾಗ ಮೇರು ಪರ್ವತದ ಸಾವರ್ಣಿಯಿಂದ, ವಾರಣಾವತ ನಗರಿಯಲ್ಲಿ ದ್ವೈಪಾಯನ ಕೃಷ್ಣನಿಂದ, ಭೃಗುತುಂಗದಲ್ಲಿ ರಾಮನಿಂದ, ದೃಷದ್ವತೀ ತೀರದಲ್ಲಿ ಶಂಭುವಿನಿಂದ ಉಪದೇಶವನ್ನು ಪಡೆದಿದ್ದೀಯೆ. ಅಂಜನದ ಬಳಿ ಮಹರ್ಷಿ ಅಸಿತನನ್ನೂ ಕೇಳಿದ್ದೀಯೆ. ನಿನ್ನ ಈ ಪುರೋಹಿತ ಧೌಮ್ಯನು ಋಷಿಪೂಜಿತ ಬುದ್ಧಿಯನ್ನು ನೀನು ಕಳೆದುಕೊಳ್ಳಬಾರದೆಂದು ಸದಾ ನಾರದನನ್ನು ಕಾಣುತ್ತಿರುತ್ತಾನೆ. ಬುದ್ಧಿಯಲ್ಲಿ ನೀನು ಪುರೂರವ ಐಲನನ್ನೂ ಗೆಲ್ಲುತ್ತೀಯೆ! ಶಕ್ತಿಯಲ್ಲಿ ಅನ್ಯ ರಾಜರನ್ನು ಮತ್ತು ಧರ್ಮದ ಉಪಸೇವೆಯಲ್ಲಿ ಋಷಿಗಳನ್ನೂ ಗೆಲ್ಲುತ್ತೀಯೆ. ಜಯದಲ್ಲಿ ಇಂದ್ರನಂತೆ, ಕೋಪವನ್ನು ತಡೆಹಿಡಿದುಕೊಳ್ಳುವುದರಲ್ಲಿ ಯಮನಂತೆ, ಉದಾರತೆಯಲ್ಲಿ ಕುಬೇರನಂತೆ, ಸಂಯಮದಲ್ಲಿ ವರುಣನಂತೆ ಮನಸ್ಸನ್ನಿಡು. ಚಂದ್ರನಿಂದ ಆತ್ಮವನ್ನು, ನೀರಿನಿಂದ ಉಪಜೀವನವನ್ನು, ಭೂಮಿಯಿಂದ ಕ್ಷಮೆಯನ್ನು, ಸಮಗ್ರ ತೇಜಸ್ಸನ್ನೂ ಸೂರ್ಯಮಂಡಲದಿಂದ ಪಡೆದುಕೋ. ನಿನ್ನ ಬಲವು ವಾಯುವಿನಿಂದ ಮತ್ತು ಆತ್ಮವು ಭೂತಗಳಿಂದ ಹುಟ್ಟಿದೆ ಎಂದು ತಿಳಿ. ಆರೋಗ್ಯವಾಗಿರು ಮತ್ತು ನಿನಗೆ ಮಂಗಳವಾಗಲಿ. ಹಿಂದಿರುಗಿದಾಗ ಪುನಃ ನೋಡುತ್ತೇನೆ.

ಆಪತ್ತಿನಲ್ಲಿ ಧರ್ಮವನ್ನು, ಅಪಾಯದಲ್ಲಿ ಅರ್ಥವನ್ನು ಅನುಸರಿಸಿ ಕಾಲ ಕಾಲದಲ್ಲಿ ಸರ್ವ ಕಾರ್ಯದಲ್ಲಿ ಯಥಾವತ್ತಾಗಿ ನಡೆದುಕೋ. ಬೀಳ್ಕೊಡುತ್ತಿದ್ದೇನೆ. ಸುಖವನ್ನು ಹೊಂದು. ನೀನು ಕೃತಾರ್ಥನಾಗಿ ಸುಖದಿಂದ ಹಿಂದಿರುಗುವುದನ್ನು ಕಾಯುತ್ತಿರುತ್ತೇನೆ."

ಇದನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿ ಸತ್ಯವಿಕ್ರಮ ಪಾಂಡವ ಯುಧಿಷ್ಠಿರನು ಭೀಷ್ಮ ದ್ರೋಣರನ್ನು ನಮಸ್ಕರಿಸಿ ಮುಂದುವರೆದನು.

## ದ್ರೌಪದೀ-ಕುಂತಿ ಸಂವಾದ

ಅವನು ಹೊರಡುತ್ತಿರುವಾಗ ಕೃಷ್ಣೆಯು ಯಶಸ್ವಿನೀ ಪೃಥಾಳಲ್ಲಿಗೆ ಹೋದಳು. ಅಲ್ಲಿ ಅತ್ಯಂತ ದುಃಖಾರ್ತಳಾಗಿ ಅವಳಿಂದ ಮತ್ತು ಇತರರಿಂದ ಬೀಳ್ಕೊಂಡಳು. ಅವರವರಿಗೆ ತಕ್ಕಂತೆ ನಮಸ್ಕರಿಸಿ ಅಥವಾ ಆಲಂಗಿಸಿ ಅವಳು ಹೋಗಲು ಸಿದ್ಧವಾಗಿರಲು ಪಾಂಡವರ ಅಂತಃಪುರದಲ್ಲಿ ಜೋರಾಗಿ ರೋದನವು ಕೇಳಿಬಂದಿತು. ದುಃಖಸಂತಪ್ತೆ ಕುಂತಿಯು ಹೊರಡುತ್ತಿರುವ ದ್ರೌಪದಿಯನ್ನು ನೋಡಿ ಶೋಕವಿಹ್ವಲಳಾಗಿ ಕಷ್ಟದಿಂದ ಈ ಮಾತುಗಳನ್ನಾಡಿದಳು:

"ವತ್ಸೇ! ಈ ಮಹಾ ವ್ಯಸನವನ್ನು ಪಡೆದುದಕ್ಕೆ ಶೋಕಿಸಬೇಡ. ಸ್ತ್ರೀಧರ್ಮಗಳನ್ನು ಅರಿತಿದ್ದೀಯೆ ಮತ್ತು ಶೀಲಾಚಾರವತಿಯೂ ಆಗಿದ್ದೀಯೆ. ನಿನ್ನ ಪತಿಗಳ ಕುರಿತು ನಾನು ಏನನ್ನೂ ಹೇಳಬೇಕಾದ್ದಿಲ್ಲ. ನೀನು ನಿನ್ನ ಸಾಧ್ವೀಗುಣ

ಸಮಾಧಾನಗಳಿಂದ ಎರಡೂ ಕುಲಗಳನ್ನು ಸಿಂಗರಿಸಿದ್ದೀಯೆ. ನಿನ್ನಿಂದ ಸುಟ್ಟುಹೋಗದೇ ಇದ್ದ ಕುರುಗಳು ಭಾಗ್ಯವಂತರು. ನನ್ನ ಧ್ಯಾನದಿಂದ ಶಕ್ತಿಯನ್ನು ಪಡೆದು ಅರಿಷ್ಟ ಮಾರ್ಗವನ್ನು ನಿನ್ನದಾಗಿಸಿಕೋ. ಆಗಲೇ ಬೇಕಾದುದಕ್ಕೆ ಸತ್ಸ್ತ್ರೀಯರು ಹಿಂಜರಿಯುವುದಿಲ್ಲ. ನಿನ್ನ ಹಿರಿಯರ ಧರ್ಮದ ರಕ್ಷಣೆಯಿರುವ ನೀನು ಅಲ್ಪ ಸಮಯದಲ್ಲಿಯೇ ಶ್ರೇಯಸ್ಸನ್ನು ಹೊಂದುತ್ತೀಯೆ! ವನದಲ್ಲಿ ವಾಸಿಸುವಾಗ ನನ್ನ ಪುತ್ರ ಸಹದೇವನನ್ನು ಸದಾ ನೋಡಿಕೋ! ಈ ವ್ಯಸನವನ್ನು ಹೊಂದಿದ ಅವನ ಮಹಾಮನಸ್ಸು ದುಃಖಿಸಬಾರದು.”

ಹಾಗೆಯೇ ಅಗಲೆಂದು ಹೇಳಿ ಸುರಿಯುವ ಕಣ್ಣೀರಿನಿಂದ ಮುಖವು ಕಲೆಯಾಗಿರಲು, ರಜಸ್ವಲೆಯಾದ ಏಕವಸ್ತ್ರದಲ್ಲಿದ್ದ ಆ ದೇವಿಯು ತಲೆಕೂದಲನ್ನು ಕಟ್ಟದೆಯೇ ಹೊರಟಳು. ಅಳುತ್ತಾ ಹೋಗುತ್ತಿದ್ದ ಅವಳನ್ನು ಪೃಥೆಯು ದುಃಖದಿಂದ ಹಿಂಬಾಲಿಸಿ ಬಂದು ವಸ್ತ್ರಾಭರಣಗಳನ್ನು ಕಳಚಿಕೊಂಡು, ದೇಹಕ್ಕೆ ರುರುಚರ್ಮವನ್ನು ಸುತ್ತಿಕೊಂಡು, ಕೇಳಿ ಹಾಕುತ್ತಿದ್ದ ತಮ್ಮ ಶತ್ರುಗಳ ಮಧ್ಯದಲ್ಲಿ ನಾಚಿಕೆಯಿಂದ ತಲೆತಗ್ಗಿಸಿದ್ದ, ಆದರೆ ಸುಹೃದಯರ ಶೋಕದ ವಿಷಯರಾದ ಸರ್ವ ಸುತರನ್ನೂ ನೋಡಿದಳು. ಅತಿಪ್ರೀತಿಯಿಂದ ಬೇಗನೇ ಅದೇ ಅವಸ್ಥೆಯಲ್ಲಿ ಅವರ ಹತ್ತಿರ ಹೋಗಿ ಶೋಕದಿಂದ

ವಿಲಪಿಸುತ್ತಾ ಅವರಿಗೆ ಮತ್ತು ಅವರ ಜನರಿಗೆ ಹೇಳಿದಳು:

> “ಸದ್ಧರ್ಮ-ಚಾರಿತ್ರ್ಯಗಳನ್ನು ಸುತ್ತಿಕೊಂಡು ವಿಭೂಷಿತರಾದ, ಎಂದೂ ಕೆಳಮಟ್ಟಕ್ಕಿಳಿಯದೇ, ದೃಢಭಕ್ತರಾಗಿದ್ದ, ಸದಾ ದೇವತೆಗಳ ಪೂಜೆಯಲ್ಲಿ ನಿರತರಾದ ನಿಮಗೆ ಹೇಗೆ ಈ ವ್ಯಸನವು ಬಂದು ಸೇರಿಕೊಂಡಿತು? ಅಥವಾ ಇದು ಯಾವ ವಿಧಿವಿಪರ್ಯಾಸ? ಯಾರ ಶತ್ರುತ್ವ-ತಪ್ಪಿನಿಂದಾಗಿ ನಿಮ್ಮನ್ನು ಈ ಪರಿಸ್ಥಿತಿಯಲ್ಲಿ ಕಾಣುತ್ತಿದ್ದೇನೆ? ಬಹುಷಃ ನಿಮಗೆ ಜನ್ಮವಿತ್ತ ನನ್ನದೇ ದುರ್ಭಾಗ್ಯದಿಂದ, ಎಷ್ಟೇ ಉತ್ತಮ ಗುಣಾನ್ವಿತರಾಗಿದ್ದರೂ ನೀವು ಈ ಮಹಾ ದುಃಖಾಯಾಸಗಳನ್ನು ಅನುಭವಿಸುತ್ತಿರುವಿರಿ. ಸಂಪತ್ತು ಇಲ್ಲದವರಾಗಿ, ವೀರ್ಯ, ಸತ್ವ, ಬಲ, ಉತ್ಸಾಹ, ತೇಜಸ್ಸನ್ನು ಕಳೆದುಕೊಳ್ಳದಿದ್ದರೂ ಕೃಶರಾಗಿ ಹೇಗೆ ಆ ವನದುರ್ಗಗಳಲ್ಲಿ ವಾಸಿಸುವಿರಿ? ವನವಾಸವೇ ನಿಮಗೆ ನಿಶ್ಚಿತವಾದುದು ಎಂದು ನಾನು ತಿಳಿದಿದ್ದರೆ ಪಾಂಡುವಿನ ಮರಣದ ನಂತರ ಶತಶೃಂಗದಿಂದ ಗಜಾಹ್ವಯಕ್ಕೆ ಬರುತ್ತಲೇ ಇರಲಿಲ್ಲ. ಪ್ರಿಯ ಪುತ್ರರಿಗಾಗಿ ಶೋಕಿಸುವ ಮೊದಲೇ ಸ್ವರ್ಗಕ್ಕೆ ಹೋಗಲು ಬಯಸಿದ ತಪೋಮೇಧಾನ್ವಿತ ನಿಮ್ಮ ತಂದೆಯೇ ಧನ್ಯ ಎಂದು ತಿಳಿಯುತ್ತೇನೆ. ಸರ್ವಥಾ ಧರ್ಮಜ್ಞೆಯೂ, ಕಲ್ಯಾಣಿಯೂ,

ಅತೀಂದ್ರಿಯಜ್ಞಾನಿಯೂ ಆದ ಮಾದ್ರಿಯೂ ಕೂಡ ಪರಮ ಗತಿಯನ್ನು ಹೊಂದಿ ಧನ್ಯಳಾದಳು ಎಂದು ತಿಳಿಯುತ್ತೇನೆ. ಪ್ರೀತಿ, ಚಿಂತೆ ಮತ್ತು ಗತಿಯು ನನ್ನನ್ನು ಇನ್ನೂ ಜೀವವನ್ನು ಹಿಡಿದಿಟ್ಟುಕೊಂಡಿರುವಂತೆ ಮಾಡಿವೆ. ಈ ಅಪ್ರಿಯ, ಕ್ಲೇಶವನ್ನೇ ಕೊಟ್ಟಿರುವ ನನ್ನ ಈ ಜೀವಿತಕ್ಕೆ ಧಿಕ್ಕಾರ!"

ಈ ರೀತಿ ವಿಲಪಿಸುತ್ತಿರುವ ಕುಂತಿಯನ್ನು ಸಂತವಿಸಿ, ನಮಸ್ಕರಿಸಿ, ಬೀಳ್ಕೊಂಡು ಪಾಂಡವರು ವನದಕಡೆ ಮುಂದುವರೆದರು. ವಿದುರ ಮೊದಲಾದವರು ಸ್ವಯಂ ತಾವೇ ದುಃಖಿತರಾಗಿದ್ದರೂ ಆರ್ತೆ ಕುಂತಿಯನ್ನು ಕಾರಣಗಳನ್ನಿತ್ತು ಸಮಾಧಾನ ಪಡೆಸಿ ನಿಧಾನವಾಗಿ ಕ್ಷತ್ತನ ಮನೆಗೆ ಕರೆದೊಯ್ದರು.

## ಧೃತರಾಷ್ಟ್ರ-ವಿದುರ-ದ್ರೋಣ ಸಂವಾದ

ಶೋಕಾಕುಲಿತಚೇತನ ರಾಜಾ ಧೃತರಾಷ್ಟ್ರನು "ಶೀಘ್ರವೇ ಬಾ!" ಎಂದು ಕ್ಷತ್ತನಿಗೆ ಹೇಳಿ ಕಳುಹಿಸಿದನು. ಆಗ ವಿದುರನು ಧೃತರಾಷ್ಟ್ರನ ಮನೆಗೆ ಹೋದನು. ಅಲ್ಲಿ ಸಂವಿಗ್ನ ನರಾಧಿಪ ಧೃತರಾಷ್ಟ್ರನು ಅವನನ್ನು ಪ್ರಶ್ನಿಸಿದನು:

"ಕೌಂತೇಯ ಧರ್ಮರಾಜ ಯುಧಿಷ್ಠಿರ, ಭೀಮಸೇನ, ಸವ್ಯಸಾಚಿ ಮತ್ತು ಆ ಇಬ್ಬರು ಮಾದ್ರೀಪುತ್ರರು ಹೇಗೆ ಹೋದರು? ಕ್ಷತ್ತ! ಧೌಮ್ಯ ಮತ್ತು ತಪಸ್ವಿನೀ ದ್ರೌಪದಿಯು ಹೇಗೆ ಹೋದರು? ಅವರ ಎಲ್ಲ ಅಂಗವಿಚೇಷ್ಟಗಳನ್ನು ಕೇಳ

ಬಯಸುತ್ತೇನೆ."

ವಿದುರನು ಹೇಳಿದನು:

"ಕುಂತೀಪುತ್ರ ಯುದಿಷ್ಠಿರನು ಮುಖವನ್ನು ವಸ್ತ್ರದಿಂದ ಮುಚ್ಚಿಕೊಂಡಿದ್ದನು ಮತ್ತು ಪಾಂಡವ ಭೀಮಸೇನನು ತನ್ನ ಎರಡೂ ಬಾಹುಗಳನ್ನು ಹೊರಚಾಚಿಕೊಂಡು ಹೋದನು. ಸವ್ಯಸಾಚಿಯು ಮರಳನ್ನು ಚೆಲ್ಲುತ್ತಾ ರಾಜನನ್ನು ಹಿಂಬಾಲಿಸಿದನು. ಮಾದ್ರೀಪುತ್ರ ಸಹದೇವನು ಮುಖಕ್ಕೆ ಬಣ್ಣವನ್ನು ಬಳಿದುಕೊಂಡು ಹೋದನು. ಲೋಕದಲ್ಲಿಯೇ ಅತೀವ ಸುಂದರ ನಕುಲನು ತನ್ನ ಇಡೀ ದೇಹಕ್ಕೆ ಧೂಳನ್ನು ಬಳಿದುಕೊಂಡು ಚಿತ್ತವಿಹ್ವಲನಾಗಿ ರಾಜನನ್ನು ಅನುಸರಿಸಿದನು. ಸುಂದರಿ ಆಯತಲೋಚನೆ ಕೃಷ್ಣೆಯು ತಲೆಗೂದಲಿನಿಂದ ಮುಖವನ್ನು ಮುಚ್ಚಿಕೊಂಡು ರೋದಿಸುತ್ತಾ ರಾಜನನ್ನು ಹಿಂಬಾಲಿಸಿದಳು. ಧೌಮ್ಯನು ರೌದ್ರ ಯಮಸಾಮವನ್ನು ಹೇಳುತ್ತಾ ಕೈಗಳಲ್ಲಿ ದರ್ಬೆಗಳನ್ನು ಹಿಡಿದು ಮಾರ್ಗಕೂಡಿ ಹೋದನು."

ಧೃತರಾಷ್ಟ್ರನು ಹೇಳಿದನು:

"ವಿವಿಧರೂಪಗಳನ್ನು ಮಾಡಿಕೊಂಡು ಪಾಂಡವರು ಹೋಗುತ್ತಿದ್ದಾರೆ. ವಿದುರ! ಈ ರೀತಿ ಅವರು ಏಕೆ ಹೋಗುತ್ತಿದ್ದಾರೆ ಎನ್ನುವುದನ್ನು ಹೇಳು."

ವಿದುರನು ಹೇಳಿದನು:

“ನಿನ್ನ ಪುತ್ರರು ವಂಚನೆಯಿಂದ ಅವರ ರಾಜ್ಯ ಮತ್ತು ಧನವನ್ನು ಅಪಹರಿಸಿದರೂ ಧೀಮಂತ ಧರ್ಮರಾಜನ ಬುದ್ಧಿಯು ಧರ್ಮದಿಂದ ವಿಚಲಿತವಾಗುವುದಿಲ್ಲ. ನಿತ್ಯವೂ ಧಾರ್ತರಾಷ್ಟ್ರರ ಮೇಲೆ ಕರುಣೆತೋರುವ ಈ ರಾಜನು ಮೋಸದಿಂದ ಕ್ರೋಧಸಂತಪ್ತ ತನ್ನ ಕೆಟ್ಟ ದೃಷ್ಟಿಯನ್ನು ಎಲ್ಲಿ ಹಾಯಿಸಲೂ ನಿರಾಕರಿಸುತ್ತಾನೆ. ಈ ಕಾರಣದಿಂದಲೇ ರಾಜ ಪಾಂಡವನು “ನಾನು ನೋಡಿ ಜನರನ್ನು ಸುಡಬಾರದು!” ಎಂದು ತನ್ನ ಘೋರ ದೃಷ್ಟಿಯನ್ನು ಮುಚ್ಚಿಕೊಂಡು ಹೋಗುತ್ತಾನೆ. ಭೀಮನು ಏಕೆ ಹಾಗೆ ಹೋಗುತ್ತಿದ್ದಾನೆ ಎಂದು ಹೇಳುತ್ತೇನೆ ಕೇಳು. “ನನ್ನ ಸಮನಾದ ಬಾಹುಬಲಿಯು ಇಲ್ಲ!” ಎಂದು ತನ್ನ ದಪ್ಪ ಬಾಹುಗಳಿಂದ ದರ್ಪಿತ ಭೀಮನು ತನ್ನ ಬಾಹುಗಳನ್ನು ಚಾಚಿ, ತನ್ನ ಬಾಹುಬಲದ ಅನುರೂಪ ಶತ್ರುಗಳ ವಿರುದ್ಧ ಬಳಸುವ ಬಾಹುಗಳನ್ನು ತೋರಿಸುತ್ತಾ ಹೋಗುತ್ತಾನೆ. ಕುಂತೀಪುತ್ರ ಅರ್ಜುನ ಸವ್ಯಸಾಚಿಯು ತನ್ನ ಬಾಣಗಳಿಂದ ಘಾತಿಗೊಳ್ಳುವವರ ಸಂಖ್ಯೆಯನ್ನು ಸೂಚಿಸಲು ಮರಳನ್ನು ಚೆಲ್ಲುತ್ತಾ ರಾಜನನ್ನು ಅನುಸರಿಸುತ್ತಾನೆ. ಬಿಡಿಬಿಡಿಯಾದ ಮರಳುಗಳಷ್ಟೇ ಬಾಣಗಳ ಮಳೆಯನ್ನು ಶತ್ರುಗಳ ಮೇಲೆ

ಸುರಿಸುತ್ತಾನೆ. ಇಂದು ಯಾರೂ ತನ್ನ ಮುಖವನ್ನು ಗುರುತಿಸಬಾರದು ಎಂದು ಸಹದೇವನು ಮುಖಕ್ಕೆ ಬಳಿದುಕೊಂಡು ಹೋಗುತ್ತಿದ್ದಾನೆ. ಮಾರ್ಗದಲ್ಲಿ ಸ್ತ್ರೀಯರ ಹೃದಯವನ್ನು ಅಪಹರಿಸಬಾರದೆಂದು ನಕುಲನು ತನ್ನ ಸರ್ವಾಂಗಗಳನ್ನು ಧೂಳಿನಿಂದ ಬಳಿದುಕೊಂಡು ಹೋಗುತ್ತಿದ್ದಾನೆ. ಏಕವಸ್ತ್ರಾ, ಮುಕ್ತಕೇಶೀ, ರಜಸ್ವಲೆ, ರಕ್ತದ ಕಲೆಯುಳ್ಳ ವಸ್ತ್ರವನ್ನು ಧರಿಸಿ ರೋದಿಸುತ್ತಿರುವ ದ್ರೌಪದಿಯು ಈ ಮಾತುಗಳನ್ನು ಹೇಳಿದಳು: “ಇಂದಿನಿಂದ ಹದಿನಾಲ್ಕನೆಯ ವರ್ಷದಲ್ಲಿ ಯಾರ ಕಾರಣದಿಂದ ನಾನು ಈ ಅವಸ್ಥೆಯನ್ನು ಪಡೆದೆನೋ ಅವರ ಪತ್ನಿಯರು ತಮ್ಮ ಪತಿ, ಮಕ್ಕಳು, ಬಾಂಧವರು ಮತ್ತು ಮಿತ್ರರನ್ನು ಕಳೆದುಕೊಳ್ಳುತ್ತಾರೆ. ಬಂಧುಗಳ ರಕ್ತದಿಂದ ಲೇಪಿತರಾಗಿ ತಲೆಗೂದಲನ್ನು ಬಿಚ್ಚಿಕೊಂಡು ಹೀಗೆಯೇ ರಜಸ್ವಲೆಯರಾಗಿ ನಾರಿಯರು ತರ್ಪಣಗಳನ್ನು ನೀಡುತ್ತಿರುವುದು ಗಜಸಾಹ್ವಯದಲ್ಲಿ ಕಂಡುಬರುತ್ತದೆ!” ಅವರ ಪುರೋಹಿತ ಧೀರ ಧೌಮ್ಯನು ನೈಋತ ದರ್ಭೆಗಳನ್ನು ನೈರುತ್ಯದ ಕಡೆ ಮಾಡಿ ಹಾಕುತ್ತಾ ಯಮಸಾಮವನ್ನು ಹಾಡುತ್ತಾ ಮುಂದೆ ಹೋಗುತ್ತಿದ್ದಾನೆ. “ಯುದ್ಧದಲ್ಲಿ ಭಾರತರು ಹತರಾಗಲು ಕುರು ಪುರೋಹಿತರು ಹೀಗೆ ಯಮಸಾಮವನ್ನು ಹಾಡುತ್ತಾರೆ!” ಎಂದು ಹೇಳಿ ಧೌಮ್ಯನೂ ಹೋಗುತ್ತಾನೆ.

"ಹಾ! ಹಾ! ನಮ್ಮ ನಾಥರು ಹೋಗುತ್ತಿದ್ದಾರೆ! ಈ ದೃಶ್ಯವನ್ನು ನೋಡಿ!" ಎಂದು ಬಹಳ ದುಃಖಾರ್ತ ಪೌರರು ಸುತ್ತುವರೆದು ಆಕ್ರಂದಿಸುತ್ತಿದ್ದಾರೆ. ಈ ರೀತಿಯ ಆಕಾರ ಚಿಹ್ನೆಗಳೊಂದಿಗೆ ತಮ್ಮ ನಿರ್ಧಾರ ಮನೋಗತವನ್ನು ಹೇಳುತ್ತಾ ಮನಸ್ವಿ ಕೌಂತೇಯರು ವನಕ್ಕೆ ಹೋದರು. ಹೀಗೆ ಈ ನರಾಗ್ರರು ಗಜಸಾಹ್ವಯದಿಂದ ಹೋಗುವಾಗ ಮೋಡವಿಲ್ಲದ ಆಕಾಶದಲ್ಲಿ ಮಿಂಚು ಕಂಡುಬಂದಿತು ಮತ್ತು ಭೂಮಿಯು ನಡುಗಿತು. ಗ್ರಹಣದ ಕಾಲವಲ್ಲದಿದ್ದರೂ ರಾಹುವು ಆದಿತ್ಯನಿಗೆ ಗ್ರಹಣವನ್ನುಂಟು ಮಾಡಿದನು. ಪುರವನ್ನು ನಡುಗಿಸುವಂಥ ಉಲ್ಕಾಪಾತವಾಯಿತು. ದೇವಾಲಯಗಳ ಹತ್ತಿರ ಮತ್ತು ಅರಮನೆಯ ಕಾವಲು ಗೋಪುರಗಳ ಮೇಲೆ ಹದ್ದು, ನರಿಗಳು ಮತ್ತು ಕಾಗೆಗಳು ಕೂಗಿದವು. ನಿನ್ನ ದುಷ್ಟ ಸಲಹೆಯಂತೆ ಪಾಂಡವರು ವನಕ್ಕೆ ತೆರಳುವಾಗ ಆದ ಈ ಮಹೋತ್ಪಾತಗಳು ಭಾರತರ ಅಂತ್ಯವನ್ನು ಸೂಚಿಸುತ್ತವೆ."

ಆಗ ಸಭಾಮಧ್ಯದಲ್ಲಿ ಕುರುಗಳ ಎದುರಿಗೆ ಮಹರ್ಷಿಗಳಿಂದ ಸುತ್ತುವರೆದ ನಾರದನು ಬಂದು ನಿಂತು ಈ ರೀತಿಯ ರೌದ್ರ ಮಾತುಗಳನ್ನಾಡಿದನು:

"ಇಂದಿನಿಂದ ಹದಿಮೂರನೆಯ ವರ್ಷದಲ್ಲಿ ಇಲ್ಲಿರುವ

> ಕೌರವರು ದುರ್ಯೋಧನನ ಅಪರಾಧದಿಂದ ಮತ್ತು ಭೀಮಾರ್ಜುನರ ಬಲದಿಂದ ವಿನಾಶವನ್ನು ಹೊಂದುತ್ತಾರೆ!”

ಹೀಗೆ ಹೇಳಿ ತಕ್ಷಣವೇ ವಿಪುಲ ಬ್ರಹ್ಮಕಾಂತಿಯ ಆ ದೇವರ್ಷಿಸತ್ತಮನು ಆಕಾಶವನ್ನೇರಿ ಅಂತರ್ಧಾನನಾದನು.

ಆಗ ದುರ್ಯೋಧನ, ಕರ್ಣ ಮತ್ತು ಸೌಬಲ ಶಕುನಿಯೂ ಕೂಡ “ದ್ರೋಣನೇ ನಮ್ಮನ್ನು ಉಳಿಸಬಲ್ಲ!” ಎಂದು ತಿಳಿದು ರಾಜ್ಯವನ್ನು ಅವನಿಗೆ ಒಪ್ಪಿಸಿದರು. ಅದಕ್ಕೆ ದ್ರೋಣನು ಅಮರ್ಷಣ ದುರ್ಯೋದನ, ದುಃಶಾಸನ, ಕರ್ಣ ಮತ್ತು ಸರ್ವ ಭಾರತರನ್ನೂ ಉದ್ದೇಶಿಸಿ ಹೇಳಿದನು:

> “ದೇವಪುತ್ರ ಪಾಂಡವರು ಅವಧ್ಯರು ಎಂದು ದ್ವಿಜರು ಹೇಳಿದ್ದಾರೆ. ಆದರೂ ನನ್ನಲ್ಲಿ ಶರಣುಬಂದವರಿಗೆ ಯಥಾಶಕ್ತಿ ಮಾಡುತ್ತೇನೆ. ತಾವಾಗಿಯೇ ಭಕ್ತಿಯಿಂದ ನನ್ನ ಬಳಿ ಶರಣುಬಂದಿರುವ ಧಾರ್ತರಾಷ್ಟ್ರರನ್ನೂ ರಾಜನನ್ನೂ ದೂರವಿಡಲು ಸಾಧ್ಯವಿಲ್ಲ. ಇನ್ನು ಉಳಿದದ್ದು ದೈವಕ್ಕಿರುವಂತೆ ನಡೆಯುತ್ತದೆ! ಸೋತ ಪಾಂಡುಪುತ್ರರು ಧರ್ಮಕ್ಕನುಸಾರ ವನಕ್ಕೆ ಹೋಗಿದ್ದಾರೆ. ಆ ಕೌರವರು ಹನ್ನೆರಡು ವರ್ಷಗಳು ವನದಲ್ಲಿ ವಾಸಿಸುತ್ತಾರೆ. ಬ್ರಹ್ಮಚರ್ಯವನ್ನು ಅನುಸರಿಸಿ, ಕ್ರೋಧ ಮತ್ತು

ಅಸಹನೆಗಳಿಂದೊಡಗೂಡಿ ಪಾಂಡವರು ನನ್ನ ದುಃಖಕ್ಕೋಸ್ಕರ ವೈರವನ್ನು ತೆಗೆದುಕೊಂಡು ಬರುತ್ತಾರೆ. ಸಖ್ಯವನ್ನು ಪುನಃ ಪಡೆಯುವುದಕ್ಕೋಸ್ಕರ ನನ್ನಿಂದ ರಾಜ್ಯವನ್ನು ಕಳೆದುಕೊಂಡ ದ್ರುಪದನು ಕ್ರೋಧದಿಂದ ನನ್ನ ವಧೆಗೆಂದು ಪುತ್ರನಿಗಾಗಿ ಯಜ್ಞ ಮಾಡಿದ್ದನು. ಯಾಜ ಉಪಯಾಜರ ತಪಸ್ಸಿನಿಂದ ಅವನು ವೇದಿಮಧ್ಯದಲ್ಲಿ ಪಾವಕನಿಂದ ಪುತ್ರ ಧೃಷ್ಟದ್ಯುಮ್ನನನ್ನು ಮತ್ತು ಸುಮಧ್ಯಮೆ ದ್ರೌಪದಿಯನ್ನೂ ಪಡೆದನು. ಮರ್ತ್ಯರ ಧರ್ಮಕ್ಕೊಳಗಾದ ನನಗೆ ಕವಚ-ಧನುರ್ಬಾಣಗಳೊಂದಿಗೇ ಹುಟ್ಟಿದ ಆ ಜ್ವಾಲವರ್ಣಿ ದೇವದತ್ತನ ಭಯವು ಆವರಿಸಿದೆ. ಈ ಪುರುಷರ್ಷಭ ಪಾರ್ಷತನು ಅವರ ಪಕ್ಷಕ್ಕೆ ಹೋಗಿದ್ದುದರಿಂದ ಬದುಕಿನಲ್ಲಿ ಅತ್ಯಂತ ನಿರಾಸೆಯುಳ್ಳ ನಾನು ನಿಮ್ಮ ಅರಿಗಳ ವಿರುದ್ಧ ಯುದ್ಧ ಮಾಡುತ್ತೇನೆ. ಈ ಅತಿವಿಶ್ರುತನು ನನ್ನ ವಧೆಗಾಗಿಯೇ ಇದ್ದಾನೆ ಎಂದು ಲೋಕವೇ ತಿಳಿದಿದೆ. ನೀವೇ ಕಾಲವನ್ನು ಬದಲಾಯಿಸಿದ್ದೀರಿ! ಆದುದರಿಂದ ಶ್ರೇಯವಾದುದ್ದನ್ನು ಬೇಗ ಮಾಡಿ. ಇದೂವರೆಗೆ ಮಾಡಿದ್ದುದು ಸಾಕಾಗಲಿಲ್ಲ. ಛಳಿಗಾಲದಲ್ಲಿ ತಾಳೆಯಮರದ ನೆರಳು ಹೇಗೋ ಹಾಗೆ ಈ ಸುಖವು ಸ್ವಲ್ಪವೇ ಸಮಯವಿರುವಂತಹುದು. ಮಹಾ ಯಜ್ಞಗಳನ್ನು ಯಾಜಿಸಿ. ಭೋಗಿಸುವುದರ ಜೊತೆಗೆ

ದಾನವನ್ನೂ ನೀಡಿ. ಇಂದಿನಿಂದ ಹದಿನಾಲ್ಕನೆಯ ವರ್ಷದಲ್ಲಿ ಮಹಾ ವಿನಾಶವನ್ನು ಹೊಂದುತ್ತೀರಿ! ದುರ್ಯೋಧನ! ನಿನಗಿಷ್ಟವಾದುದನ್ನು ಕೇಳಿಸಿಕೊಂಡಿದ್ದೀಯೆ ಮತ್ತು ಅರ್ಥಮಾಡಿಕೊಂಡಿದ್ದೀಯೆ. ಒಂದುವೇಳೆ ಒಪ್ಪಿಕೊಂಡರೆ ಪಾಂಡವೇಯರನ್ನು ಸಾಮದಿಂದ ಸಂತೋಷಗೊಳಿಸು."

ದ್ರೋಣನ ಮಾತುಗಳನ್ನು ಕೇಳಿದ ಧೃತರಾಷ್ಟ್ರನು ಹೇಳಿದನು:

"ಈ ಗುರುವು ಸರಿಯಾಗಿಯೇ ಹೇಳಿದ್ದಾನೆ. ಕ್ಷತ್ತ! ಪಾಂಡವರನ್ನು ಹಿಂದೆ ಕರೆದುಕೊಂಡು ಬಾ! ಮರಳಿ ಬರದಿದ್ದರೆ, ಪಾಂಡವರು ಶಸ್ತ್ರ, ರಥ, ಸೇವಕರು, ಮತ್ತು ಮಕ್ಕಳೊಂದಿಗೆ ಸುಖವಾಗಿ ಸತ್ಕೃತರಾಗಿ ಹೋಗಲಿ."

## ಧೃತರಾಷ್ಟ್ರ-ಸಂಜಯ ಸಂವಾದ

ದ್ಯೂತದಲ್ಲಿ ಸೋತ ಪಾರ್ಥರು ವನಕ್ಕೆ ಹೋಗಲು ಧೃತರಾಷ್ಟ್ರನನ್ನು ಚಿಂತೆಯು ಸಮಾವೇಶಗೊಂಡಿತು. ಆ ಜನೇಶ್ವರ ಧೃತರಾಷ್ಟ್ರನು ಚಿಂತೆಯಲ್ಲಿ ನಿಟ್ಟುಸಿರು ಬಿಡುತ್ತಾ ಏಕಾಗ್ರಚಿತ್ತನಾಗಿರದೇ ಕುಳಿತುಕೊಂಡಿರಲು ಸಂಜಯನು ಹೇಳಿದನು:

"ವಸುಧಾಧಿಪ! ಸಂಪತ್ತಿನೊಂದಿಗೆ ಸಂಪೂರ್ಣ ವಸುಧೆಯನ್ನು ಪಡೆದು, ಪಾಂಡವರನ್ನು ಅವರ ರಾಜ್ಯದಿಂದ

ಹೊರಹಾಕಿ, ಯಾಕೆ ಶೋಕಿಸುತ್ತಿದ್ದೀಯೆ?”

ಧೃತರಾಷ್ಟ್ರನು ಹೇಳಿದನು:

“ಯುದ್ಧಶೌಂಡರನ್ನು ಮಿತ್ರರನ್ನಾಗಿ ಪಡೆದಿರುವ ಆ ಮಹಾರಥಿ ಪಾಂಡವರೊಂದಿಗೆ ವೈರವಾಗಿರುವವರಿಗೆ ಚಿಂತೆ ಮಾಡಲು ಏನೂ ಇಲ್ಲವೇ?”

ಸಂಜಯನು ಹೇಳಿದನು:

“ರಾಜನ್! ಇದು ನೀನೇ ಮಾಡಿಕೊಂಡ ಸುಕೃತ. ಅತಿದೊಡ್ಡ ವೈರವು ಉಂಟಾಗುತ್ತದೆ. ಅನುಯಾಯಿಗಳೊಂದಿಗೆ ಸರ್ವಲೋಕದ ವಿನಾಶವಾಗುತ್ತದೆ. ಭೀಷ್ಮ, ದ್ರೋಣ ಮತ್ತು ವಿದುರರು ಬೇಡವೆಂದರೂ ಅತ್ಯಂತ ದಡ್ಡನೂ ನಿರ್ಲಜ್ಜನೂ ಆದ ನಿನ್ನ ಪುತ್ರ ದುರ್ಯೋಧನನು ಪಾಂಡವರ ಪ್ರಿಯ ಭಾರ್ಯೆ ಧರ್ಮಚಾರಿಣಿ ದ್ರೌಪದಿಯನ್ನು ಕರೆತರಲು ಸೂತಪುತ್ರ ಪ್ರತಿಕಾಮಿಯನ್ನು ಕಳುಹಿಸಿದನು.”

ಧೃತರಾಷ್ಟ್ರನು ಹೇಳಿದನು:

“ಯಾರ ಪರಾಭವವನ್ನು ದೇವತೆಗಳೇ ನಿಶ್ಚಯಿಸಿದ್ದಾರೋ ಅವನು ವಿಷಯವನ್ನು ಸರಿಯಾಗಿ ಕಾಣದೇ ಇರಲಿ ಎಂದು ಮೊದಲು ಅವನ ಬುದ್ಧಿಯನ್ನು ಕಿತ್ತುಕೊಳ್ಳುತ್ತಾರೆ. ವಿನಾಶವು

ನಿಶ್ಚಿತವಾದಾಗ ಮತ್ತು ಬುದ್ಧಿಯು ಕಲುಷಿತವಾದಾಗ ಅನ್ಯಾಯವೂ ನ್ಯಾಯವೆಂದೇ ತೋರುತ್ತದೆ ಮತ್ತು ಅದನ್ನಲ್ಲದೇ ಬೇರೆ ಏನನ್ನೂ ಹೃದಯವು ಬಯಸುವುದಿಲ್ಲ. ವಿನಾಶವು ಹತ್ತಿರವಾದಾಗ ಕೆಟ್ಟದ್ದು ಒಳ್ಳೆಯದಾಗಿಯೂ ಒಳ್ಳೆಯದು ಕೆಟ್ಟದ್ದಾಗಿಯೂ ತೋರುತ್ತದೆ ಮತ್ತು ಮನುಷ್ಯನು ತನಗೆ ಕಂಡದ್ದನ್ನೇ ಸ್ವೀಕರಿಸುತ್ತಾನೆ. ಕಾಲವು ದಂಡವನ್ನೆತ್ತಿ ಶಿರವನ್ನೆಂದೂ ಒಡೆಯುವುದಿಲ್ಲ. ಈ ರೀತಿಯ ವಿಪರೀತ ಅರ್ಥಗಳನ್ನು ತೋರಿಸುವುದೇ ಕಾಲದ ಬಲ. ಮೈನವಿರೇಳಿಸುವ ಈ ಘೋರ ತುಮುಲವು ತಪಸ್ವಿನೀ ಪಾಂಚಾಲಿಯನ್ನು ಸಭಾಮಧ್ಯದಲ್ಲಿ ಎಳೆದು ತಂದಿರುವುದರಿಂದ ಆಗಿದ್ದುದು. ಕೆಟ್ಟ ಜೂಜಾಡುವವನಲ್ಲದೇ ಬೇರೆ ಯಾರು ತಾನೆ ಆ ಅಯೋನಿಜೆ, ರೂಪವತಿ, ಉತ್ತಮ ಕುಲದಲ್ಲಿ ಹುಟ್ಟಿದ, ವಿಭಾವರೀ, ಸರ್ವಧರ್ಮಜ್ಞೆ, ಯಶಸ್ವಿನಿಯನ್ನು ಬಲವಂತವಾಗಿ ಸಭಾಮಧ್ಯದಲ್ಲಿ ಎಳೆದು ತಂದಾರು? ಆ ಸ್ತ್ರೀಧರ್ಮಿಣೀ, ವರಾರೋಹೆ, ರಕ್ತದಿಂದ ತೋಯ್ದ ಏಕ ವಸ್ತ್ರಧಾರಿಣಿ ಪಾಂಚಾಲಿಯು ಸೋತ, ಭ್ರಷ್ಟಚಿತ್ತ, ಪತ್ನಿಯನ್ನು ಕಳೆದುಕೊಂಡ, ಸಂಪತ್ತನ್ನು ಕಳೆದುಕೊಂಡ, ಸರ್ವಕಾಮಗಳಿಂದ ವಂಚಿತರಾದ, ದಾಸಭಾವವನ್ನು ಹೊಂದಿದ, ಧರ್ಮಪಾಶದಲ್ಲಿ ಸಿಲುಕಿಕೊಂಡ, ವಿಕ್ರಮದಲ್ಲಿ

ಅಶಕ್ತರಂತಿರುವ ಪಾಂಡವರನ್ನು ನೋಡಿದಳು. ಕೃದ್ಧಳೂ, ಅಸಹಾಯಕಳೂ. ದುಃಖಿತಳೂ ಆಗಿದ್ದ ಕೃಷ್ಣೆಯನ್ನು ದುರ್ಯೋಧನ ಕರ್ಣರು ಕಟು ಮಾತುಗಳಿಂದ ಅವಮಾನಿಸಿದರು. ಅವಳ ದೀನ ಕಣ್ಣುಗಳಿಂದ ಇಡೀ ಭೂಮಿಯೇ ಸುಟ್ಟುಹೋಗಬಹುದಾಗಿತ್ತು. ಇನ್ನು ನನ್ನ ಪುತ್ರರು ಉಳಿಯುವರೇ? ಅಲ್ಲಿ ಸೇರಿದ್ದ ಗಾಂಧಾರಿಯೂ ಸೇರಿ ಸರ್ವ ಭಾರತ ಸ್ತ್ರೀಯರು ಕೃಷ್ಣೆಯನ್ನು ಸಭೆಗೆ ಕರಿಸಿದ್ದುದನ್ನು ನೋಡಿ ಭೈರವವಾಗಿ ಕೂಗಿಕೊಂಡರು. ಸರ್ವ ಬ್ರಾಹ್ಮಣರೂ ದ್ರೌಪದಿಯ ಬಲಾತ್ಕಾರದಿಂದ ಕುಪಿತರಾಗಿ ಅಂದಿನ ಸಂಜೆ ಅಗ್ನಿಹೋತ್ರಗಳು ಉರಿಯಲಿಲ್ಲ. ಅನಿಷ್ಟ ಘೋರ ಭೂಕಂಪನದ ಧ್ವನಿಯು ಕೇಳಿಬಂದಿತು. ಆಕಾಶದಿಂದ ಘೋರ ಉಲ್ಕೆಗಳು ಬಿದ್ದವು. ಗ್ರಹಣ ಕಾಲವಲ್ಲದಿದ್ದರೂ ಮಹಾಘೋರ ರಾಹುವು ಸೂರ್ಯಗ್ರಹಣ ಮಾಡಿ ಪ್ರಜೆಗಳಲ್ಲಿ ಭಯವನ್ನುಂಟು ಮಾಡಿದನು. ಹಾಗೆಯೇ ಭಾರತರ ವಿನಾಶವನ್ನು ಸೂಚಿಸುವಂತೆ ರಥಶಾಲೆಗಳಲ್ಲಿ ಬೆಂಕಿಯು ಕಾಣಿಸಿಕೊಂಡಿತು ಮತ್ತು ಧ್ವಜಸ್ಥಂಭಗಳು ತಾವಾಗಿಯೇ ಮುರಿದು ಬಿದ್ದವು. ದುರ್ಯೋಧನನ ಅಗ್ನಿಹೋತ್ರದಲ್ಲಿ ನರಿಗಳು ಭೈರವವಾಗಿ ಕೂಗಿದವು, ಅದಕ್ಕೆ ಪ್ರತ್ಯುತ್ತರವಾಗಿ ಎಲ್ಲ ದಿಕ್ಕುಗಳಿಂದಲೂ ಕತ್ತೆಗಳು ಕೂಗಿದವು. ಆಗ ಭೀಷ್ಮನು

ದ್ರೋಣ, ಕೃಪ, ಸೋಮದತ್ತ, ಮಹಾರಥಿ ಬಾಹ್ಲೀಕರೊಂದಿಗೆ ಸಭೆಯನ್ನು ಬಿಟ್ಟು ಹೊರಟು ಹೋದನು. ಆಗ ನಾನು ವಿದುರನಿಂದ ಪ್ರಚೋದಿತನಾಗಿ ಬೇಡಿದ ವರವನ್ನು ಕೊಡುತ್ತೇನೆ ಎಂದು ಕೃಷ್ಣೆಗೆ ಹೇಳಿದೆನು. ಆಗ ಪಾಂಚಾಲಿಯು ಅಮಿತೌಜಸ ಪಾಂಡವರನ್ನು ಕೇಳಿಕೊಂಡಳು. ನಾನು ರಥ, ಧನುಸ್ಸುಗಳೊಂದಿಗೆ ಅವರಿಗೆ ಹೋಗಲು ಅನುಮತಿಯನ್ನಿತ್ತೆನು. ಆಗ ಮಹಾಪ್ರಾಜ್ಞ, ಸರ್ವಧರ್ಮವಿದು ವಿದುರನು ಹೇಳಿದನು: “ಭಾರತರೇ! ಕೃಷ್ಣೆಯು ಸಭೆಗೆ ಬಂದಿರುವುದು ನಿಮ್ಮ ಅಂತ್ಯವನ್ನು ಸೂಚಿಸುತ್ತದೆ. ಈ ಪಾಂಚಾಲರಾಜನ ಸುತೆ ಪಾಂಚಾಲಿಯು ಪಾಂಡವರಿಗಾಗಿಯೇ ದೇವತೆಗಳು ಸೃಷ್ಟಿಸಿದ ಉತ್ತಮ ಶ್ರೀ. ಅವಳ ಅಪಮಾನವನ್ನು ಸಿಟ್ಟಿಗೆದ್ದ ಪಾಂಡವರಾಗಲೀ, ಮಹೇಷ್ವಾಸ ವೃಷ್ಣಿಗಳಾಗಲೀ, ಅಥವಾ ಮಹೌಜಸ ಪಾಂಚಾಲರಾಗಲೀ ಸಹಿಸುವುದಿಲ್ಲ. ಅವರು ಸತ್ಯಾಭಿಸಂಧ ವಾಸುದೇವನ ರಕ್ಷಣೆಯಲ್ಲಿದ್ದಾರೆ. ಪಾಂಚಾಲರಿಂದ ರಕ್ಷಿತನಾದ ಬೀಭತ್ಸುವು ಬರುತ್ತಾನೆ. ಅವರ ಮಧ್ಯದಲ್ಲಿ ಮಹೇಷ್ವಾಸ ಮಹಾಬಲ ಭೀಮಸೇನನು ಅಂತಕನ ದಂಡದಂತಿರುವ ಗದೆಯನ್ನು ಬೀಸುತ್ತಾ ಬರುತ್ತಾನೆ. ಧೀಮತ ಪಾರ್ಥನ ಗಾಂಡೀವದ ಘೋಷವನ್ನಾಗಲೀ, ಭೀಮನ ಗದಾಪ್ರಹಾರದ ರಭಸವನ್ನಾಗಲೀ ಕೇಳಲು

ನರಾಧಿಪರಿಗಾಗಲಿಕ್ಕಿಲ್ಲ. ಆದುದರಿಂದ ಪಾರ್ಥರೊಂದಿಗೆ ಎಂದೂ ಯುದ್ಧವನ್ನು ಬಯಸಬಾರದು ಎಂದು ನನಗನ್ನಿಸುತ್ತದೆ. ಕುರುಗಳಿಗಿಂತ ಪಾಂಡವರೇ ಹೆಚ್ಚು ಶಕ್ತಿವಂತರು ಎಂದು ಸದಾ ನನ್ನ ಅಭಿಪ್ರಾಯ. ಮಹಾಧ್ಯುತಿ ರಾಜ ಜರಾಸಂಧನು ಬಲಶಾಲಿಯಾಗಿದ್ದರೂ ಅವನನ್ನು ಭೀಮನು ಕೇವಲ ಬಾಹುಪ್ರಹಾರದಿಂದಲೇ ಕೊಂದನು. ಪಾಂಡವರೊಂದಿಗೆ ಶಾಂತಿಯಿಂದಿರು ಮತ್ತು ಎರಡೂ ಪಕ್ಷಗಳಿಗೂ ಯುಕ್ತವಾಗಿರುವ ಕಾರ್ಯವನ್ನು ಶೀಘ್ರವೇ ಕೈಗೊಳ್ಳು!" ಗಾವಲ್ಗಣಿ! ಪುತ್ರನಿಗೆ ಹಿತವನ್ನುಂಟುಮಾಡಲು ಬಯಸಿದ ನಾನು ಕ್ಷತ್ತನು ಈ ರೀತಿ ಧರ್ಮಾರ್ಥಸಂಹಿತ ಮಾತುಗಳನ್ನು ಹೇಳಿದರೂ ಸ್ವೀಕರಿಸಲಿಲ್ಲ!"